ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್

ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಶರಣಬಸವೇಶ್ವರ ವೀರಭದ್ರಪ್ಪ ಡಾಣಿ

ಮಾರ್ಗದರ್ಶಕರು
ಡಾ.ಎನ್.ಚಿನ್ನಸ್ವಾಮಿ ಸೋಸಲೆ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ
೨೦೦೭

ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್

ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಶರಣಬಸವೇಶ್ವರ ವೀರಭದ್ರಪ್ಪ ಡಾಣಿ

ಮಾರ್ಗದರ್ಶಕರು
ಡಾ.ಎನ್.ಚಿನ್ನಸ್ವಾಮಿ ಸೋಸಲೆ

ಚರಿತ್ರೆ, ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ
೨೦೦೭

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಶರಣಬಸವೇಶ್ವರ ವೀರಭದ್ರಪ್ಪ ಡಾಣಿ ಇವರು "ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್" ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 20.03.07
ಸ್ಥಳ : ವಿದ್ಯಾರಣ್ಯ

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಮಾರ್ಗದರ್ಶಕರು.

Dr. N. CHINNASWAMY SOSALE
Senior Grade Lecturer
Department of History
Kannada University, Hampi
Vidyaranya - 583 276.

ಕೃತಜ್ಞತೆಗಳು

"ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್" ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ಅವಕಾಶ ನೀಡಿದ ಕನ್ನಡ ವಿಶ್ವ ವಿದ್ಯಾಲಯ, ಹಂಪಿಯ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕರೈ, ಕುಲಸಚಿವರಾದ ಡಾ.ಕರೀಗೌಡ ಬೀಚನಳ್ಳಿ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ.ಟಿ.ಆರ್.ಚಂದ್ರಶೇಖರ ಅವರಿಗೆ ಪ್ರಥಮದಲ್ಲಿ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಆಸಕ್ತಿಯ ಮಹಾಪುರುಷರಾದ ಬುದ್ಧ, ಬಸವ, ಡಾ.ಅಂಬೇಡ್ಕರ್‌ರವರ ಕುರಿತು ಅಧ್ಯಯನ ಕ್ಷೇತ್ರಕ್ಕೆ ಸೂಕ್ತಶೀರ್ಷಿಕೆ ನೀಡಿ, ಉತ್ತಮಸಲಹೆ ಸೂಚನೆಗಳನ್ನು ಕೊಟ್ಟು ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಕಾರಣರಾದ, ಮಾರ್ಗದರ್ಶಕರಾದ ಚರಿತ್ರೆ ವಿಭಾಗದ ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಮೋಹನಕೃಷ್ಣರೈ. ಹಾಗೂ ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ಟಿ.ಪಿ. ವಿಜಯ್, ಡಾ.ಸಿ.ಆರ್. ಗೋವಿಂದರಾಜು, ಡಾ.ವಿರೂಪಾಕ್ಷ ಪೂಜಾರಹಳ್ಳಿ ಮತ್ತು ಚರಿತ್ರೆ ವಿಭಾಗದ ಸಿಬ್ಬಂದಿ ವರ್ಗಕ್ಕೂ ಹಾಗೂ ಕನ್ನಡ ವಿಶ್ವವಿದ್ಯಾಲಯದ ಸರ್ವಸಿಬ್ಬಂದಿ ವರ್ಗಕ್ಕೂ ನನ್ನ ತುಂಬು ಹೃದಯದ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ಸಾಹಿತ್ಯದ ಅನ್ವೇಷಣೆಯಲ್ಲಿ ನೆರವಾದ ಎಲ್ಲ ಗ್ರಂಥಾಲಯಗಳ ಮುಖ್ಯಸ್ಥರುಗಳಿಗೆ, ವಿಶೇಷವಾಗಿ ಕನ್ನಡ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕುಷ್ಟಗಿ, ಸಾರ್ವಜನಿಕ ಗ್ರಂಥಾಲಯ, ಕುಷ್ಟಗಿ, ಗುಲ್ಬರ್ಗಾ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳ ಸರ್ವ ಸಿಬ್ಬಂದಿವರ್ಗಕ್ಕೆ ನನ್ನ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ. ಹಲವು ಸ್ನೇಹಿತರು ತಮ್ಮಲ್ಲಿರುವ ಗ್ರಂಥಗಳ ನೆರವು ನೀಡಿದ್ದಾರೆ. ಅವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ಪ್ರಸ್ತುತ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ಅನುಮತಿಸಿದ ಕಾಲೇಜು ಶಿಕ್ಷಣ ಇಲಾಖೆಯ ಮಾನ್ಯ ಆಯುಕ್ತರು ಹಾಗೂ ಸರ್ವಸಿಬ್ಬಂದಿ ವರ್ಗಕ್ಕೂ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ. ಕುಷ್ಟಗಿಯ ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿದ್ದ ಶ್ರೀ.ಆರ್.ಜಿ. ಹೂಲಗೇರಿ ಹಾಗೂ ಪ್ರಸ್ತುತ ಪ್ರಾಂಶುಪಾಲರು ಮತ್ತು ನನ್ನ ಗುರುಗಳು ಆಗಿರುವ ಶ್ರೀ.ಹೆಚ್.ಎಂ.ಭೂತನಾಳರವರು ಸದಾ ನನಗೆ ಪ್ರೇರಣೆ ನೀಡಿ, ನನ್ನ ಸೃಜನಶೀಲತೆಗೆ ಸದಾ ಪ್ರೋತ್ಸಾಹ ನೀಡುತ್ತಿರುವುದರಿಂದ ಅವರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಗುರುಗಳಾದ ಡಾ.ಎಸ್.ಜಿ.ಘಟಪಣದಿ ನಿವೃತ್ತ ಮುಖ್ಯಸ್ಥರು ಚರಿತ್ರೆ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ ಇವರಿಗೂ ನನ್ನ ಅನಂತ ವಂದನೆಗಳು. ನನ್ನ ಸಹ ಅಧ್ಯಾಪಕರಾದ ಮಿತ್ರರಾದ ಶ್ರೀ.ಬಿ.ಎಂ.ಕಂಬಳಿ ಹಾಗೂ ಶ್ರೀ.ದೊಡ್ಡಪ್ಪ, ಶ್ರೀ.ಅಮರೇಗೌಡ, ಶ್ರೀ.ಶಿವರುದ್ರಯ್ಯ, ಶ್ರೀತಿಪ್ಪೇಶಪ್ಪ, ಶ್ರೀಐ.ಎಂ. ದಾವಣಗೇರಿ, ಶ್ರೀ.ಡಿ.ಎಸ್.ಕಂದಗಲ್, ಡಾ.ಶ್ರೀಮಂತತಂಗಡೆ, ಶ್ರೀ.ಯಂಕಯ್ಯ, ಶ್ರೀ.ಅಜಾಜ್ ಅಹ್ಮದ್, ಶ್ರೀ.ಯಲ್ಲಪ್ಪ, ಶ್ರೀ.ಸಂಜಯಕುಮರ ಪಟ್ಟಣಕರ್, ಡಾ.ಎಸ್.ಎಂ.ಕುರಿ ಹಾಗೂ ಡಾ.ಯಲ್ಲಪ್ಪ ನಾಯಕವಾಡಿ ಮೈಸೂರು ವಿಶ್ವವಿದ್ಯಾಲಯ, ಶ್ರೀ.ಶಿವಶರಣಪ್ಪ ಬಿರಾದಾರ ಉಪನ್ಯಾಸಕರು ಗುಲಬರ್ಗಾ ಹಾಗು ನನ್ನ ಸಂಸ್ಥೆಯ ಸಿಬ್ಬಂದಿ ಮಿತ್ರರಾದ, ಶ್ರೀ.ಶಿವಮೂರ್ತಿ, ಶ್ರೀ.ಮಹಿಬೂಬ, ಶ್ರೀ.ಅಮರಪ್ಪ ವೈ. ಶ್ರೀ.ಎ.ಎಸ್. ವೀರಾಪೂರ ಇವರೆಲ್ಲರಿಗೂ ಹಾಗೂ ನನ್ನ ವಿದ್ಯಾರ್ಥಿ ಮಿತ್ರರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಮಿತ್ರರಾದ ಶ್ರೀ.ಶಿವಕುಮಾರ ತೊಂಟಾಪೂರ, ಶ್ರೀ.ರಾಮಣ್ಣ ಬಂಡಿಹಾಳ, ಶ್ರೀ.ಶರಣಪ್ಪ ವಡಿಗೇರೆ, ಶ್ರೀ.ರವಿ ಪತ್ತಾರ, ಶ್ರೀ.ಮಂಜುನಾಥ ಮಾಹಾಲಿಂಗಪೂರ, ಶ್ರೀ.ವೀರಭದ್ರಗೌಡ ಶ್ರೀ.ವೈ.ಡಿ.ಜಂಗ್ಲರ್, ಗುಲ್ಬರ್ಗಾ ವಿ.ವಿ. ಹಾಗೂ ನನ್ನ ಹಿತೈಷಿಗಳಾದ ಶ್ರೀ.ಶೇಖರಗೌಡ ಮಾಲೀಪಾಟೀಲ, ಅಧ್ಯಕ್ಷರು, ಜಿಲ್ಲಾ ಸಾಹಿತ್ಯ ಪರಿಷತ್, ಕೊಪ್ಪಳ. ಶ್ರೀ.ವಸಂತಪ್ಪ ಮಟ್ಟೂರು ಕುಷ್ಟಗಿ, ಶ್ರೀ.ಹೆಚ್.ಸಿ.ನೀರಾವರಿ ಮುಖ್ಯ ಸಚೇತಕರು ಕರ್ನಾಟಕ ಸರಕಾರ ಬೆಂಗಳೂರು, ಶ್ರೀ.ಡಿ.ಎಂ. ಮಂಟೂರು ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ನನ್ನ ಪೂಜ್ಯ ತಂದೆ-ತಾಯಿಗಳಾದ ಶ್ರೀ.ವೀರಭದ್ರಪ್ಪ ಡಾಣಿ ಹಾಗೂ ಶ್ರೀಮತಿ ಪಾರ್ವತಮ್ಮ ಇವರಿಗೆ ಪ್ರೀತಿಪೂರ್ವಕ ನಮನಗಳನು ಸಲ್ಲಿಸುತ್ತೇನೆ. ಮಾವನವರಾದ ಶ್ರೀ.ಸೋಮನಗೌಡ್ರ ಹಾಗೂ ಅತ್ತೆ ಶ್ರೀಮತಿ ಮಲ್ಲಮ್ಮ, ಸಹೋದರಿ ಶ್ರೀಮತಿ ಗೋದಾವರಿ ಹಾಗೂ ಶ್ರೀ.ದೊಡ್ಡಪ್ಪ ಎಸ್., ಸಹೋದರ ಶ್ರೀ.ರಾಮೇಶ್ವರ ಡಾಣಿ, ಸೊಸೆ ಶ್ರೀಮತಿ ಮಂಗಳಗೌರಿ ಇವರೆಲ್ಲರಿಗೂ ನಮನಗಳು. ನನ್ನ ಬದುಕಿನ ಸ್ಪೂರ್ತಿ ಮಡದಿ ಶ್ರೀಮತಿ ದಾಕ್ಷಾಯಣಿ, ಮಕ್ಕಳಾದ ಅಲ್ಲಮಪ್ರಭು, ಅಪೂರ್ವ ಹಾಗೂ ವಿದ್ಯಾಸಾಗರ, ಮಯೂರ ಇವರುಗಳಿಗೂ ನನ್ನ ಪ್ರೀತಿಯ ಸ್ಮರಣೆಗಳು. ಅತ್ತಿಗೆ ಶ್ರೀಮತಿ ಶಕುಂತಲಾ, ಸೊಸೆಯಂದಿರಾದ ಉಮಾ, ಮಹಾಂತಮ್ಮ, ಪ್ರಿಯಾ, ಪ್ರೇಮಾ, ಅಳಿಯಂದಿರಾದ ಶಶಿ, ಚಂದ್ರು, ವಿಜಯ್, ಆಕರ್ಷ ಇವರೆಲ್ಲರನ್ನೂ ನೆನೆಯದೇ ಇರಲಾರೆ. ಸಹೋದರಿ ಶ್ರೀಮತಿ ಬಿ.ವಿ.ನಾಗವೇಣಿ. ಎನ್.ಚಿನ್ನಸ್ವಾಮಿ ಸೋಸಲೆಯವರಿಗೂ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ಈ ಸಂಶೋಧನಾ ಅಧ್ಯಯನದ ಹಸ್ತಪ್ರತಿಯನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ಶ್ರೀ ಸಿದ್ಧಿವಿನಾಯಕ ಟೈಪಿಂಗ್, ಝುರಾಕ್ಸ ಮತ್ತು ಕಂಪ್ಯೂಟರ್ಸ್‌ನ ಮಾಲೀಕರಾದ ಶ್ರೀಮತಿ ಮತ್ತು ಶ್ರೀ. ಮಾಲತೇಶ ನಾಡಿಗೇರ ದಂಪತಿಗಳು, ಕುಷ್ಟಗಿ, ಶ್ರೀ.ರಮೇಶ ಮಹಾಲಿಂಗಪೂರ ಬನಶ್ರೀ ಕಂಪ್ಯೂಟರ್ಸ್ ಕುಷ್ಟಗಿ, ತಿದ್ದುಪಡಿಗೆ ಸಹಕರಿಸಿದ ಮಿತ್ರ ಶ್ರೀ.ಬಿ.ಎಲ್.ಶಿವಮೂರ್ತಿ ಇವರುಗಳಿಗೆ ನನ್ನ ವಂದನೆಗಳು ಸಲ್ಲುತ್ತವೆ. ಒಟ್ಟಾರೆ ಈ ಅಧ್ಯಯನವನ್ನು ಯಶಸ್ವಿಯಾಗಿ ಕೈಗೊಳ್ಳಲು ಸಹಾಯ ಮಾಡಿದ ಸರ್ವರಿಗೂ, ಹಿರಿಯರಿಗೂ, ಮಿತ್ರಬಾಂಧವರಿಗೂ ಹಾಗೂ ನನ್ನ ಇಲಾಖೆಯ ಸಹೋದ್ಯೋಗಿಗಳಿಗೂ ಮತ್ತೊಮ್ಮೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ದಿನಾಂಕ: 20-03-2007

ಸ್ಥಳ : ವಿದ್ಯಾರಣ್ಯ

(ಶರಣಬಸವೇಶ್ವರ ವೀರಭದ್ರಪ್ಪ ಡಾಣಿ)

ಅನುಬಂಧ - 1

ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್

ಪರಿವಿಡಿ

ಅಧ್ಯಾಯಗಳು

ಅಧ್ಯಾಯ - 1

ಪ್ರಸ್ತಾವನೆ

1. ಪ್ರಸ್ತಾವನೆ

1.1 ಪ್ರಸ್ತುತ ಅಧ್ಯಯನದ ಉದ್ದೇಶಗಳು

1.2 ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ.

1.3 ಅಧ್ಯಯನದ ವಿಧಾನಗಳು.

1.4 ಅಧ್ಯಯನದ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ ಆಕರಗಳ ಸಮೀಕ್ಷೆ.

1. ಪ್ರಸ್ತಾವನೆ :.

ಇತಿಹಾಸದಲ್ಲಿ ಸೇರಿ ಹೋಗಿರುವ ಯಾವುದೇ ಘಟನೆಯ ಕುರಿತ, ವ್ಯಕ್ತಿಯ ಕುರಿತ, ವಿಶ್ಲೇಷಣೆ ವಿಮರ್ಶೆಯು ಆ ಘಟನೆಯ ವ್ಯಕ್ತಿಯ ಸಮಕಾಲೀನ ಮಹತ್ವದ ಬಗ್ಗೆ ಕಾಳಜಿ ಹೊಂದಿರಬೇಕಾಗುತ್ತದೆ. ಇತಿಹಾಸವೆಂಬುದು ನಾವು ನಡೆದುಬಂದ ಬದುಕಿನ ವಿಧಾನದ ವಿವರಗಳ ದಾಖಲೆಯೇ ಆಗಿರುವುದರಿಂದ ಅಲ್ಲಿನ ಘಟನೆಗಳು, ವ್ಯಕ್ತಿಗಳು ಇವತ್ತಿನ ಬದುಕಿಗೆ ಅಪ್ರಸ್ತುತ ಎಂದರೆ ತಪ್ಪಾಗುತ್ತದೆ. ಆದರೆ ಆ ಘಟನೆಗಳ, ವ್ಯಕ್ತಿಗಳ ಬಗೆಗಿನ ನಿಷ್ಪಕ್ಷಪಾತವಾದ ಮತ್ತು ಪಾರದರ್ಶಕವಾದ ವೈಜ್ಞಾನಿಕ ವಿಶ್ಲೇಷಣೆ, ವಿಮರ್ಶೆಗಳು ಸಮಕಾಲೀನ ಬದುಕನ್ನು ಸಹ್ಯವಾಗಿಸುವ ಒಳನೋಟಗಳನ್ನು ನೀಡುತ್ತವೆ. ಅಸಮಾನತೆ ಮತ್ತು ಶೋಷಣೆಗಳನ್ನು ಅನಿರ್ಬಂಧಿತ ಹಕ್ಕನ್ನಾಗಿಸಿಕೊಂಡ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧದ ಆಲೋಚನೆಗಳು ಸಿದ್ಧಾಂತಗಳಾಗಿ ರೂಪಗೊಂಡು ಸಂಘಟನಾತ್ಮಕ ಶಕ್ತಿಯನ್ನು ಪಡೆದುಕೊಂಡು ಹೋರಾಟ ಮತ್ತು ಚಳುವಳಿಗಳ ಮೂಲಕ ಜನಸಾಮಾನ್ಯರ ಬದುಕನ್ನು ಸುಧಾರಿಸಲು ಪ್ರಯತ್ನಿಸಿ, ಹೊಸ ಸಂಸ್ಕೃತಿಯ ಹುಟ್ಟಿಗೆ ಕಾರಣವಾಗಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಇಂಥ ಜನಪರ ಸಿದ್ಧಾಂತಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಸಿದ್ಧಾಂತಗಳು ಮಹತ್ವದ್ದಾಗಿವೆ.ಅವರು ತಮ್ಮ ಜೀವನದುದ್ದಕ್ಕೂ ಜನಪರ ಕಾಳಜಿಯಿಂದ ಹೋರಾಡಿದರು. ಅಸಮಾನತೆ ಮತ್ತು ಶೋಷಣೆ ಮುಕ್ತ ಸಮಾಜಕ್ಕಾಗಿ ಶ್ರಮಿಸಿದರು. ಅವರ ವಿಚಾರ, ಚಿಂತನೆ, ಸಿದ್ಧಾಂತಗಳು ಇವತ್ತಿನ ಸಂದರ್ಭಕ್ಕೂ ಪ್ರಸ್ತುತವೆನಿಸುತ್ತವೆ. ಏಕೆಂದರೆ ಇಂದಿನ ಸಮಾಜದಲ್ಲಿಯೂ ಕೂಡ ಕೆಲವು ಪ್ರಶ್ನೆಗಳಿವೆ. ನಮ್ಮ ಸಮಾಜದ ಕೆಲವು ಆಚರಣೆಗಳು ಎಷ್ಟರ ಮಟ್ಟಿಗೆ ವೈಜ್ಞಾನಿಕ ತಳಹದಿಯನ್ನು ಹೊಂದಿವೆ? ಅವು ಬರೀ ಅರ್ಥಹೀನ ಆಚರಣೆಗಳಾಗಿವೆಯೇ? ನಮ್ಮ ಸಮಾಜದಲ್ಲಿ ವೈಯಕ್ತಿಕ ನೆಲೆಯಲ್ಲಿ ಬೌದ್ಧಿಕ ವಿಕಾಸಕ್ಕೆ, ಸ್ವಾತಂತ್ರ್ಯಕ್ಕೆ ಎಷ್ಟರ ಮಟ್ಟಿಗೆ ಅವಕಾಶವಿದೆ? ಸಾಮೂಹಿಕ ಬದುಕಿನ ಬಗ್ಗೆ ಮಾನವೀಯ ಕಾಳಜಿಯನ್ನು ಹೊಂದಿದೆಯೇ? ಸಮಾನತೆ ಇದೆಯೇ? ಸಾಮಾಜಿಕ ನ್ಯಾಯ ಇದೆಯೇ? ಇವೆಲ್ಲ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳಲು ಬುದ್ಧ, ಬಸವ, ಅಂಬೇಡ್ಕರ್‌ರವರ ವಿಚಾರಗಳು, ಸಿದ್ಧಾಂತಗಳ ವಿಶ್ಲೇಷಣೆಯಿಂದ ಸಾಧ್ಯವೆಂದೆನಿಸುತ್ತದೆ.

ಮಾನವನು ಸದಾ ಪರಿವರ್ತನಶೀಲ ಸಮಾಜದಲ್ಲಿ ಹೊಂದಾಣಿಕೆ ಮಾಡಿಕೊಂಡು ಪ್ರಗತಿಯನ್ನು ಹೊಂದಬೇಕಾಗುತ್ತದೆ. ಯಾವುದೇ ಸಮಾಜವು ಪ್ರಗತಿಯನ್ನು ಸಾಧಿಸಬೇಕಾದರೆ ವ್ಯಕ್ತಿಗಳ ಪ್ರಗತಿಯೂ ಅವಶ್ಯ. ತಜ್ಞರು, ವ್ಯಕ್ತಿಯ ಹಾಗೂ ಸಮಾಜದ ಪ್ರಗತಿಯನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. ಯಾವ ವ್ಯಕ್ತಿಯು ಆತ್ಮ ವಿಶ್ವಾಸವುಳ್ಳವನಾಗಿ, ಸೃಜನಶೀಲ ಮತ್ತು ಸ್ನೇಹಪರನಾಗಿರುತ್ತಾನೋ ಆ ವ್ಯಕ್ತಿ ಪ್ರಗತಿ ಅಥವಾ ಅಭಿವೃದ್ಧಿ ಹೊಂದಿದ ವ್ಯಕ್ತಿ ಎಂದು ವ್ಯಾಖ್ಯಾನಿಸಲ್ಪಡುತ್ತಾನೆ. ಅದರಂತೆ ಯಾವ ಸಮಾಜವು ತನ್ನ ವ್ಯಕ್ತಿಗಳಿಗೆ ಅಥವಾ ಸದಸ್ಯರಿಗೆ ಅವಕಾಶಗಳನ್ನು ಆಯ್ದುಕೊಳ್ಳಲಿಕ್ಕೆ ಮತ್ತು ಮಾಡಬೇಕಾದ ಕಾರ್ಯಗಳಿಗೆ ಸ್ವಾತಂತ್ರ್ಯ, ಸಮಾನ ಅವಕಾಶ ಒದಗಿಸುತ್ತದೆಯೋ, ಆ ಸಮಾಜವು ಪ್ರಗತಿ ಹೊಂದಿದ ಸಮಾಜ ವೆನಿಸಿಕೊಳ್ಳುತ್ತದೆ. (A developed Society is one which provides its members with freedom of choice action, equality of opportunity and the scope to mix freely with one another) ಮೆಕೈವರ್ ಹಾಗೂ ಪೇಜ್ ಅವರು ಹೇಳುವ ಹಾಗೆ ಧರ್ಮವು ಬರಿಯ ಮಾನವ ಮತ್ತು ದೇವರ ಮಧ್ಯೆ ತೋರುವ ಸಂಬಂಧವಷ್ಟೇ ಆಗಿರದೆ ಆ ಸಂಬಂಧವು ಮಾನವ ಹಾಗೂ ಮಾನವರ ಮಧ್ಯೆ ತೋರಬೇಕಾಗಿರುತ್ತದೆ.

ಅಂದರೆ ಮಾನವನು ದೇವರ ಮುಂದೆ ವಿಧೇಯತೆ, ಭಕ್ತಿ, ನಂಬಿಕೆ, ನೀತಿ, ನಡೆ-ನುಡಿಗಳನ್ನು ತೋರುತ್ತಾನೆ.ಅದೇ ನಡೆ-ನುಡಿ ಮುಂತಾದವುಗಳನ್ನು ಮತ್ತೊಬ್ಬ ಮಾನವನ ಮಧ್ಯೆಯೂ ತೋರಬೇಕಾಗುತ್ತದೆ. ಅಂದರೆ, ವ್ಯಕ್ತಿಗಳು ಸತ್ಯ, ಧರ್ಮ, ಪ್ರಾಮಾಣಿಕತೆ, ನಂಬಿಕೆ, ರೀತಿ, ನೀತಿ, ನಡೆ, ನುಡಿ ಮಾನವೀಯತೆಗಳ ಆಧಾರದ ಮೇಲೆ ತಮ್ಮ ವ್ಯವಹಾರಗಳನ್ನು ನಡೆಸಬೇಕಾಗುತ್ತದೆ; ಆದರೆ ಪ್ರಸ್ತುತ ಸಂದರ್ಭದಲ್ಲಿ ಧರ್ಮ ಮಾನವ ಮಾನವರ ಮಧ್ಯೆ ಸ್ನೇಹದ ಸೇತುವೆಯಾಗುವ ಬದಲು ದೊಡ್ಡ ಕಂದಕವನ್ನೇ ನಿರ್ಮಿಸಿದೆ. ಮೇಲು-ಕೀಳು, ತಾರತಮ್ಯ ಬಲಗೊಳ್ಳುತ್ತಿದೆ. ಮನುಷ್ಯನ ಏಳ್ಗೆ ಬಯಸಬೇಕಾದ ಧರ್ಮ ಮಾನವನ ವಿನಾಶಕ್ಕೆ ಕಾರಣವಾಗುತ್ತಿದೆ. ಹೀಗಾಗಿ ಧರ್ಮವನ್ನು ಕೂಡಾ ಅನುಮಾನದಿಂದ ನೋಡುವಂತಾಗಿದೆ. ಆದರಲ್ಲೂ ಭಾರತದಲ್ಲಿ ಅಸ್ತಿತ್ವದಲ್ಲಿರುವ ಧರ್ಮ ಮಾನವ ಜನಾಂಗದ ಸಮಾನತೆ, ಪ್ರಗತಿಯನ್ನು ಬಯಸುತ್ತಿದೆಯೇ? ಎಂಬುದು ಬಹುಮುಖ್ಯ ಪ್ರಶ್ನೆ.

ನಾವು ಮಾತನಾಡುತ್ತೇವೆ, ನಮ್ಮನ್ನು ಎಲ್ಲರೂ ಕೇಳಿಸಿಕೊಳ್ಳಲಿ ಇದರಿಂದ ಪ್ರಪಂಚದ ವ್ಯವಸ್ಥೆ ಬಿರುಕು ಬಿಟ್ಟರೂ ಬಿಡಲಿ, ನಾವು ಒಂದು ಶಬ್ದವನ್ನೂ ಬಚ್ಚಿಡುವುದಿಲ್ಲ, ಆಡಿದ ಒಂದು ಅಕ್ಷರನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.ಅಂಜುಬುರುಕರು ಅಂಜುತ್ತಿರಲಿ, ಹೇಡಿಗಳು ಹಿಂಜರಿಯಲಿ, ಸಂಪ್ರದಾಯ ವಾದಿಗಳು ಎದುರಾಗಿ ನಿಲ್ಲಲಿ ನಾವು ಯಾವುದನ್ನು ಧೈರ್ಯದಿಂದ ವಿಚಾರಿಸಿದ್ದೇವೆಯೋ, ಅದನ್ನು ಹೇಳುವ ಧೈರ್ಯ ನಮಗಿದೆ ಜೆ.ಆರ್.ಲಾವೆಲ್ ಅವರು ಆಡಿದ ಈ ಮಾತು ಶತಮಾನಗಳಿಂದ ಸಾಮಾಜಿಕ, ಧಾರ್ಮಿಕವಾಗಿ ಉಳ್ಳವರ ಮೋಸಕ್ಕೆ, ವಂಚನೆಗೆ ಬಲಿಯಾದ ವಿಶ್ವದ ಶೋಷಿತ ಸಮುದಾಯದ ಘೋಷ ವಾಕ್ಯದಂತಿದೆ. ಮೇಲು-ಕೀಳಿನ ಸಮಸ್ಯೆ ಇಡೀ ವಿಶ್ವಕ್ಕೆ ಅಂಟಿಕೊಂಡಿರುವ ಸಾಮಾಜಿಕ ಪಿಡುಗಾಗಿದೆ. ಬಡವ-ಬಲ್ಲಿದ,ಕರಿಯ-ಬಿಳಿಯ, ಹೆಣ್ಣು-ಗಂಡು ಈ ಬಗೆಯ ತಾರತಮ್ಯಗಳು ಮಾನವ ಸಂಸ್ಕೃತಿಯೊಂದಿಗೆ ಹುಟ್ಟಿಕೊಂಡು ಬಂದಿವೆ. ಇದರೊಂದಿಗೆ ಜಾತಿ ವ್ಯವಸ್ಥೆ ಕೈಗೂಡಿಸಿದ ಕಾರಣ, ಭಾರತದಂತಹ ದೇಶದಲ್ಲಿ ಈ ಪಿಡುಗು ಇನ್ನಷ್ಟು ಭಯಾನಕವಾಗಿ ಕಾಡುತ್ತಾ ಬಂದಿದೆ. ನೈಸರ್ಗಿಕವಾಗಿ ಹುಟ್ಟಿಗೆ ಅನ್ನೈಸರ್ಗಿಕವಾದ ಜಾತಿಯ ಹಣೆಪಟ್ಟಿಯನ್ನು ಕಟ್ಟುತ್ತ ಬಂದಿರುವುದು ಭಾರತದ ಬೌದ್ಧಿಕತೆಯ ಒಂದು ದುರಂತ ಮುಖವಾಗಿದೆ. ಮನುಷ್ಯನ ವಿದ್ಯಾ ಬುದ್ಧಿ ಬೆಳೆದಂತೆಲ್ಲಾ ಈ ಬಗೆಯ ಕಂದರಗಳು ತಾರತಮ್ಯಗಳು ಕಡಿಮೆಯಾಗಬೇಕಿತ್ತು. ಆದರೆ ವಿಪರ್ಯಾಸವೆಂದರೆ, ಇಪ್ಪತ್ತೊಂದನೆಯ ಶತಮಾನದಲ್ಲೂ ಕೂಡ ಇಂತಹ ತಾರತಮ್ಯಗಳು ಪ್ರಚಲಿತದಲ್ಲಿರುವುದು ಆಚರಣೆಯಲ್ಲಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಭಾರತೀಯ ಸಮಾಜದಲ್ಲಿಯ ಈ ತಾರತಮ್ಯಗಳನ್ನು ಪ್ರಖರ ವಿಚಾರವಾದಿಗಳಾದ ಅನೇಕ ಜನ ಸಂತರು ಇದನ್ನು ಖಂಡಿಸುತ್ತಲೇ ಬಂದಿದ್ದಾರೆ. ಜನ್ಮಕ್ಕೆ ಆರೋಪಿತವಾದ ಪುರೋಹಿತಶಾಹಿತ್ವವನ್ನು ಮೆರೆಯುತ್ತ ಕೀಳು ಜಾತಿಯವರನ್ನು ತುಳಿಯುತ್ತ ಬಂದ ಪ್ರಾಚೀನ ಸಾಮಾಜಿಕ ವ್ಯವಸ್ಥೆಯನ್ನು ಬುದ್ಧ, ಮಹಾವೀರರು ಪ್ರಬಲವಾಗಿ ವಿರೋಧಿಸುತ್ತ ಬಂದಿದ್ದಾರೆ. ಅವರು ವರ್ಗ, ವರ್ಣ, ಲಿಂಗ, ಜಾತಿಯ ತಾರತಮ್ಯಗಳನ್ನು ಕಟುವಾಗಿ ಖಂಡಿಸಿ, ಸರ್ವ ಸಮಾನತೆಯನ್ನು ಬೋಧಿಸಿದರು. ಆದರಂತೆ ಮಧ್ಯಕಾಲೀನ ಸಂದರ್ಭದಲ್ಲಿ ಬಸವಣ್ಣ ಸಮಾನತೆ ಸಾಧಿಸಲು ಪ್ರತಿಭಟನಾತ್ಮಕ ಹೋರಾಟವನ್ನೇ ಕೈಗೊಂಡರು. ಈ ಪರಂಪರೆ ಮುಂದುವರಿದಿರುವುದು ಭಾರತದ ಚರಿತ್ರೆಯ ವಿಶೇಷ. ಇಪ್ಪತ್ತನೇ ಶತಮಾನದಲ್ಲಿ ಇಂತಹ ಜೀವಪರ ಹೋರಾಟ ನಡೆಸಿದ ಮಹಾನ್ ವ್ಯಕ್ತಿ ಡಾ. ಬಿ.ಆರ್. ಅಂಬೇಡ್ಕರ್. ತುಳಿತಕ್ಕೆ ಒಳಗಾಗದವರು ನೊಂದವರ ಬಾಳಿಗೆ ಈ ಮಹನೀಯರು ಬೆಳಕಾದರು. ಬುದ್ಧ, ಬಸವ,

ಅಂಬೇಡ್ಕರ್, ತಮ್ಮ ತಮ್ಮ ಕಾಲಾವಧಿಯಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಲು ಪ್ರತಿಭಟನಾತ್ಮಕ ಹೋರಾಟ ಕೈಗೊಂಡರು. ಭಾರತದ ಚರಿತ್ರೆಯ ದಿಶೆಯನ್ನೇ ಬದಲಿಸಿದರು. ಅವರುಗಳ ಹೋರಾಟ, ಹೋರಾಟದ ಮಾದರಿಗಳು ಇಂದಿನ ಚಳುವಳಿಗಳಿಗೆ, ಸಮಾನತೆಯ ಪರಿಕಲ್ಪನೆಯ ಸಮಾಜಕ್ಕೆ ಸ್ಫೂರ್ತಿಯಾಗಿವೆ. ಭಾರತದ ಬೌದ್ಧಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪ್ರಗತಿಗೆ ಇವರುಗಳ ಕೊಡುಗೆ ಅಪಾರ.

ಬುದ್ಧ ಹಾಗೂ ಬೌದ್ಧ ಧರ್ಮ ಏಕೆ? ಶೋಷಿತರಿಗೆ ದಲಿತರಿಗೆ ಬಿಡುಗಡೆಯ ಮಾರ್ಗವಾಗಿ ಕಂಡಿತು. ದಲಿತರು ಯಾವ ಕಾರಣಗಳಿಗಾಗಿ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ? ಪ್ರಸ್ತುತ ಬೌದ್ಧ ಧರ್ಮದ ಸ್ಥಿತಿ-ಗತಿಗಳೇನು? ಹಾಗೆಯೇ ಕರ್ನಾಟಕದ ಸಂದರ್ಭದಲ್ಲಿ ಬಸವಣ್ಣ ಹಾಗೂ ಲಿಂಗಾಯತ ಧರ್ಮ ಏಕೆ? ದಲಿತರಿಗೆ ಹತ್ತಿರವಾಗಿದೆ? ಪ್ರಸ್ತುತ ಲಿಂಗಾಯತ ಧರ್ಮ ಏನಾಗಿದೆ? ಪ್ರತಿಭಟನಾ ರೂಪದಲ್ಲಿ ಬೆಳೆದುಬಂದ ಬೌದ್ಧ ಮತ್ತು ವೀರಶೈವ ಧರ್ಮಗಳು ಪ್ರಸ್ತುತ ಸಂದರ್ಭದಲ್ಲಿ ಹೇಗೆ? ಕಾರ್ಯ ನಿರ್ವಹಿಸುತ್ತಿವೆ. ಡಾ.ಬಿ.ಆರ್.ಅಂಬೇಡ್ಕರ್ ಬೌದ್ಧಧರ್ಮದೆಡೆಗೆ ಒಲವು ಬೆಳೆಸಿಕೊಂಡು ಮತಾಂತರದಿಂದ ದಲಿತರು ವಿಮೋಚನೆಗೊಳ್ಳಬಲ್ಲರೆಂಬ ಸಂದೇಶ ಸಾರಿ ಹೇಳಿದ್ದು, ಪ್ರಸ್ತುತ ಸಂದರ್ಭದಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಮಾದರಿಗಳು ಈ ದೇಶದ ಸಮಸ್ಯೆಗಳಿಗೆ ಉತ್ತರವಾಗಬಲ್ಲವೇ? ಎಂಬುದನ್ನು ನನ್ನ ಪ್ರಬಂಧದುದ್ದಕ್ಕೂ ವಿಶ್ಲೇಷಿಸಲು ಯತ್ನಿಸಿರುವೆ. ನಮ್ಮೆಲ್ಲ ಸಮಸ್ಯೆಗಳ ಪರಿಹಾರಕ್ಕೆ ಪಶ್ಚಿಮದ ವಿಚಾರಗಳನ್ನು ಅನುಸರಿಸಬೇಕೆ? ಅಥವಾ ನಮ್ಮ ಚರಿತ್ರೆಯಲ್ಲಿ ಅಂತಹ ಮಹಾನ್ ವ್ಯಕ್ತಿಗಳು ಇದ್ದು, ಅವರ ವಿಚಾರಗಳನ್ನು ನಾವು ಎಷ್ಟರ ಮಟ್ಟಿಗೆ ಪ್ರಾಯೋಗಿಕವಾಗಿ ಅಳವಡಿಸಿಕೊಂಡಿದ್ದೇವೆ ಎನ್ನುವ ಮಹತ್ವದ ವಿಷಯವನ್ನು ಆಯಾ ಕಾಲದ ಚಾರಿತ್ರಿಕ ಪುರುಷರಾದ ಬುದ್ಧ, ಬಸವ, ಅಂಬೇಡ್ಕರ್‌ರವರ ವಿಚಾರಗಳ ಅನುಸಂಧಾನ, ತೌಲನಿಕತೆ, ಸಾಮ್ಯಗಳನ್ನು ಅರಿಯುವುದರೊಂದಿಗೆ, ನಮ್ಮ ಇಂದಿನ ಸಂಕೀರ್ಣ ಬದುಕಿಗೆ ಅವರ ವಿಚಾರಗಳು ಎಷ್ಟರ ಮಟ್ಟಿಗೆ ಪರಿಹಾರವಾಗಬಲ್ಲವು? ಎಂಬುದನ್ನು ಅರಿಯುವ ಪ್ರಯತ್ನ ಮಾಡಲು ಯತ್ನಿಸಿರುವೆ.

ನಾವೆಲ್ಲರೂ ಒಂದೇ, ನಾವು ಮನುಜರು. ಆದರೂ ಎಲ್ಲಾ ಕಾಲದಲ್ಲೂ ನಮ್ಮನ್ನು ವಿಭಜಿಸಿ ಆಳುವುದರಲ್ಲೇ ತಮ್ಮ ಗೆಲುವನ್ನು ನಾಯಕರು ಕಂಡುಕೊಂಡಿದ್ದಾರೆ. ಇದನ್ನು ನಮ್ಮ ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಬ್ರಿಟಿಷರ Divide & Rule ಅವರ ಆವಿಷ್ಕಾರವೇನಲ್ಲ, ನಮ್ಮ ಚರಿತ್ರೆಯಲ್ಲಿ, ನಮ್ಮ ಸಮಾಜದಲ್ಲಿ ಒಡೆದು ಆಳುವ ನೀತಿ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಆ ದಿಶೆಯಲ್ಲಿ ಧರ್ಮವೂ ಹೊರತಾಗಿಲ್ಲ. ಅದನ್ನು ಮನುಷ್ಯ ತನ್ನ ಸ್ವಾರ್ಥಕ್ಕಾಗಿ, ನಾಯಕತ್ವಕ್ಕಾಗಿ ಸದಾ ಬಳಸುತ್ತಲೇ ಬಂದಿದ್ದಾನೆ. ಇದರಿಂದಾಗಿ ಸಮಾಜ, ಕುಟುಂಬ ಪ್ರತಿಯೊಂದು ಒಡೆದು ಹೋದದ್ದು ಇದೇ ತಂತ್ರದಿಂದ ಹೀಗಾಗಿ ಇಂದಿನ ಕಾರ್ಪೋರೇಟ್ ನಾಯಕರು ಜಯ ಸಾಧಿಸುವುದೂ ಅದೇ ತಂತ್ರದ ಬಳಕೆಯಿಂದ. ಈ ಕಾರಣಕ್ಕಾಗಿ ಎಚ್ಚರವಾಗಿರಬೇಕಾದ ಅಗತ್ಯ ಎಲ್ಲರಿಗೂ ಇದೆ.

ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ತತ್ವ ಸಿದ್ಧಾಂತಗಳಿರುತ್ತವೆ. ಧರ್ಮ ಪ್ರಾಚೀನವಾಗಿರಲಿ, ಪ್ರಗತಿಪರವಾಗಿರಲಿ, ಮನುಷ್ಯನ ಮನಸ್ಸಿನಲ್ಲಿರುವ ಸ್ವಾರ್ಥ ಮತ್ತು ಅಜ್ಞಾನವನ್ನು ನಿವಾರಿಸಿ, ಅವನಿಗೆ ಸನ್ಮಾರ್ಗವನ್ನು ಸೂಚಿಸುವ ಹೊಣೆ ಹೊತ್ತಿರುತ್ತದೆ. ಆ ಕಾರಣಕ್ಕಾಗಿ ಒಂದು ವಿಚಾರವಾದ, ಕೇವಲ ಪಂಥವಾಗಿ ಹೋಗದೆ ಧರ್ಮದ ರೂಪವನ್ನು ತಾಳಿ ಸಹಸ್ರಾರು ಜನರನ್ನು ಆಕರ್ಷಿಸುತ್ತದೆ. ಆ ದಿಶೆಯಲ್ಲಿ ಬೌದ್ಧಧರ್ಮ ಹಾಗೂ ವೀರಶೈವ ಧರ್ಮಗಳು ಗಮನಾರ್ಹ. ಆದರೆ ಭಾರತದ ಪುರೋಹಿತರ ಕ್ಷುದ್ರಾಗ್ನಿ

ಭಯಂಕರವಾದದ್ದು. ಏಕೆಂದರೆ ಇದು ತನ್ನ ವಿರುದ್ಧವೇ ಎದ್ದ ವಾದಗಳನ್ನು ಸಹ ಕಾಲ ಕಳೆದಂತೆ ತನ್ನ ಪರವಾಗಿಯೇ ಜೀರ್ಣಿಸಿಕೊಳ್ಳುವ ಶಕ್ತಿ ಹೊಂದಿದೆ. ವೈದಿಕ ವರ್ಣಾಶ್ರಮ ಧರ್ಮದ ವಿರುದ್ಧ ಬಂಡೆದ್ದು ತಥಾಗತ ಬುದ್ಧನನ್ನೇ ವಿಷ್ಣುವಿನ ಅವತಾರವಾಗಿಸಿಕೊಂಡು ಕುತಂತ್ರ ಮೆರೆದಿದೆ. ಹಾಗೆಯೇ ಬಸವಣ್ಣನನ್ನು ನಂದಿಯ ಅವತಾರವೆಂದು ಎತ್ತಿನ ಬಸವನನ್ನಾಗಿ ಮಾಡಿದೆ. ಯಾವ ಧರ್ಮದ ಹಾಗೂ ಆ ಧರ್ಮದ ಸಂಸ್ಕೃತಿಯನ್ನು ಸೃಷ್ಟಿಸಿದ ಮನುವಿನ ವಿರುದ್ಧ ಹೋರಾಡಿ ಮನುಸ್ಮೃತಿಯನ್ನು ಲೋಕಸಭೆಯಲ್ಲಿ ಬಹಿರಂಗವಾಗಿ ಸುಟ್ಟಂತಹ ಡಾ:ಅಂಬೇಡ್ಕರ್‌ರವರನ್ನು ಆಧುನಿಕಮನು ಎಂದು ಕರೆಯಲಾಗಿದೆ. ಇಂತಹ ಹುನ್ನಾರಗಳು ಇಂದಿಗೂ ನಡೆಯುತ್ತಲೇ ಇವೆ. ಆ ಕಾಲದ ಭಿನ್ನ ಪರಂಪರೆಗಳನ್ನು ಏಕಾಕಾರಗೊಳಿಸಿ ಮತ್ತೆ ಮತ್ತೆ ನಿಗೂಢಗೊಳಿಸುವ ಪ್ರಯತ್ನ ನಡೆಯುತ್ತಲೇ ಇದೆ. ಆ ಕಾರಣಕ್ಕಾಗಿಯೇ ಅಲ್ಲಮ, ಬಸವಣ್ಣನಂಥ ಅವೈದಿಕ ಧಾರೆಯ ದಾರ್ಶನಿಕರು ಎಲ್ಲೆಲ್ಲೂ ಅವಕಾಶ ಕೊಡದಂತೆ ವೇದಾಂತಿಕ ನೆಲೆಗಳನ್ನು ಒಡೆಯುವ ಪ್ರಯತ್ನ ಮಾಡಿರುವದು, ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ದಿ; ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೊರಟೆ, ಭಕ್ತಿ ಎಂಬುದು ತೋರಿ ಉಂಬ ಲಾಭ, ಗುಹೇಶ್ವರನೆಂಬುದು ಮೀರಿದ ಘನವು. ಈ ರೀತಿ ವೈದಿಕ ಸಾಹಿತ್ಯವನ್ನು ಮತ್ತು ಸಂಸ್ಕೃತಿಯನ್ನು ಎಲ್ಲಾ ಆಯಾಮಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದೇ ವಚನಕಾರರ, ಬಸವಣ್ಣನವರ ದಿಗ್ವಿಜಯವಾಗಿದೆ. ಆ ಕಾರಣಕ್ಕಾಗಿ ಬೌದ್ಧಧರ್ಮ ಹಾಗೂ ವೀರಶೈವಧರ್ಮಗಳು ಅವೈದಿಕ ಧಾರೆಯ ತಾತ್ವಿಕ ಪರಂಪರೆಯನ್ನೇ ಕಟ್ಟಿಕೊಟ್ಟಿವೆ. ಅವುಗಳನ್ನು ವ್ಯಾಪಕಗೊಳಿಸುವ ಮೂಲಕ ಬುದ್ಧ, ಬಸವ, ಅಂಬೇಡ್ಕರ್‌ರಂತಹ ಮಾನವತಾವಾದಿಗಳನ್ನು ಬಿಡುಗಡೆಗೊಳಿಸಿ, ಅವರ ತತ್ವ ಸಿದ್ಧಾಂತಗಳನ್ನು ಅವರ ಕೃತಿಗಳನ್ನು ಅಧ್ಯಯನ ಮಾಡುವುದರೊಂದಿಗೆ ಅರ್ಥೈಸಿಕೊಳ್ಳಬೇಕು. ಕೋಮುವಾದಿಗಳ ಕರೀನೆರಳು ಅವರ ತತ್ವ ಸಿದ್ಧಾಂತಗಳ ಮೇಲೆ ಬೀಳದಂತೆ ಎಚ್ಚರ ವಹಿಸುವ ಸಂದರ್ಭ ಇಂದು ಬಂದೊದಗಿದೆ. ಅಷ್ಟೇ ಅಲ್ಲ, ಕೆಲವರು ಈ ಮಹನೀಯರನ್ನು, ಇವರ ವಿಚಾರಗಳನ್ನು ತಪ್ಪಾಗಿ ಅರ್ಥೈಸಿ ಒಂದು ವರ್ಗಕ್ಕೆ ಒಂದು ಜಾತಿಗೆ ಸೀಮಿತಗೊಳಿಸುವ ಪ್ರಯತ್ನಗಳು ನಡೆದಿವೆ. ಇದಕ್ಕೆ ವಿದ್ಯಾವಂತರನ್ನು ಬಿಡದೆ ಕಾಡುತ್ತಿರುವ ಮೌಢ್ಯವೆಂದರೆ ತಪ್ಪಾಗಲಾರದು.

ಪ್ರತಿಭಟನೆ ಪದದ ಅರ್ಥ ವಿರೋಧ, ವಿರೋಧಿಸು, ಎದುರು ನಿಲ್ಲು: ಇನ್ನು ಸಿದ್ಧಾಂತವೆಂದರೆ ನಿರ್ಣಯ, ಸ್ಥಾಪಿತವಾದ ತತ್ವ ಎಂದು ಅರ್ಥೈಸಬಹುದಾಗಿದೆ. ಪ್ರತಿಭಟನಾ ಸಿದ್ಧಾಂತದ ನೆಲೆಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರು ಆಯಾ ಕಾಲಘಟ್ಟದಲ್ಲಿ ಹೋರಾಟ ಮಾಡುವುದರೊಂದಿಗೆ ವೈಚಾರಿಕ ಚಿಂತನೆಗಳನ್ನು ಮಂಡಿಸಿ ಪರಿವರ್ತನೆ ತರಬಯಸಿದರು. ಯಾವುದಕ್ಕಾಗಿ ಆ ಮಹನೀಯರು ಹೋರಾಟ ಮಾಡಿದರೋ ಅಂತಹ ಹೋರಾಟದ ಅಗತ್ಯ ಇಂದಿಗೂ ಇದೆ. ಏಕೆಂದರೆ ಭಾರತದ ಸಾಮಾಜಿಕ ವ್ಯವಸ್ಥೆಯ ಪರಿವರ್ತನೆಗೆ ಇಂತಹ ಪ್ರತಿಭಟನಾತ್ಮಕ ಹೋರಾಟದ ಅಗತ್ಯ ಇದ್ದೇ ಇದೆ. ಮನುಷ್ಯ ಏನನ್ನು ಪ್ರತಿಭಟಿಸುತ್ತಾನೆ? ಎನ್ನುವುದಕ್ಕೆ ಸಾಮ್ರಾಜ್ಯವನ್ನೇ ಮುಷ್ಟಿಯಲ್ಲಿಟ್ಟುಕೊಂಡ ಕ್ರೂರಿಯನ್ನು ಪ್ರತಿಭಟಿಸುತ್ತಾನೆ. ತನ್ನ ಮತವೇ ದೊಡ್ಡದು ಎಂದು ಬೀರುವ ಅಹಂಕಾರಿಯನ್ನು ಪ್ರತಿಭಟಿಸುತ್ತಾನೆ. ಹೀಗಾಗಿ ಎಲ್ಲಾ ದೇಶಗಳಲ್ಲಿ ಮತಕ್ಕೆ ವಿರೋಧಿಗಳಾದವರನ್ನು ಕಾಣಬಹುದು. ಪ್ರಾಚೀನ ಭಾರತದಲ್ಲಿ ಚಾರ್ವಾಕ ಪಂಥದವರು, ಬುದ್ಧ, ಮಹಾವೀರ, ಬಸವೇಶ್ವರ ಇವರೆಲ್ಲರೂ ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯ-ಅಸಮಾನತೆ, ಮೋಸಗಳನ್ನು ಖಂಡಿಸಿದರು. ಆಧುನಿಕ ಭಾರತದ ಸಂದರ್ಭದಲ್ಲಿ ಅಂಬೇಡ್ಕರ್ ತಮ್ಮ

ಆಳವಾದ ಅಧ್ಯಯನ ಹಾಗೂ ಸಂಶೋಧನೆಗಳಿಂದ ಪ್ರತಿಭಟನಾತ್ಮಕ ಹೋರಾಟವನ್ನು ಮುಂದುವರೆಸಿ ಕಪ್ಪು ಜನತೆಯ ಸೂರ್ಯರಾದರು.

ಪ್ರತಿಭಟನಾತ್ಮಕ ಚಳುವಳಿಯ ಪರಿಕಲ್ಪನೆಯನ್ನು ಅದರ ಈ ಕೆಳಗಿನ ಲಕ್ಷಣಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಅ) ಐತಿಹಾಸಿಕ ಸಂದರ್ಭ: ಯಾವುದೇ ಪ್ರತಿಭಟನಾತ್ಮಕ ಚಳುವಳಿಗೆ ತಳಹದಿಯಾಗಿ ಒಂದು ರಾಜಕೀಯ, ಆರ್ಥಿಕ, ಸಾಮಾಜಿಕ ಸಂದರ್ಭ ಒದಗಿ ಬರುತ್ತದೆ. ಈ ಸಂದರ್ಭದಲ್ಲಿ ಶೋಷಿತರ ಪಾಲಿಗೆ ಸುಧಾರಣೆಯ ಎಲ್ಲ ದಾರಿಗಳೂ ಮುಚ್ಚಿದ್ದು, ಅವರು ಮೇಲೇಳಲಾಗದ ದುಸ್ಥಿತಿಗೆ ತಳ್ಳಲ್ಪಟ್ಟು ಪ್ರತಿಭಟನೆಯನ್ನೇ ಬಿಡುಗಡೆಯ ಅಸ್ತ್ರವಾಗಿ ಸ್ವೀಕರಿಸುತ್ತಾರೆ.

ಆ) ರಾಜಕೀಯ ಶಕ್ತಿಗಳ ಧ್ರುವೀಕರಣ: ಶೋಷಿತರಲ್ಲಿ ಪ್ರತಿಭಟನೆಯ ಸಾಧ್ಯತೆಯನ್ನ ನಿರ್ಲಕ್ಷಿಸಿದ ಆಡಳಿತ ವರ್ಗವೂ ಬಲ ಪ್ರಯೋಗವನ್ನೇ ತಮ್ಮ ಅಸ್ತಿತ್ವದ ಸಾಧನವಾಗಿ ಬಳಸುತ್ತಾರೆ. ಪ್ರತಿಭಟನೆಯ ಸೂಚನೆಗಳು ರಾಜಕೀಯ ಶಕ್ತಿಗಳ ಧ್ರುವೀಕರಣವಾಗಿ ಚಳುವಳಿಯ ನಾಯಕರ ಹುಟ್ಟಡಗಿಸುವ ಯತ್ನ ನಡೆಯುತ್ತಿದೆ.

ಇ) ನಾಯಕತ್ವ :ಮೇಲೆ ಹೇಳಿದ ಐತಿಹಾಸಿಕ ಸಂದರ್ಭದಲ್ಲಿ ಬಹುಜನ ಹಿತಾಯ-ಸುಖಾಯದ ಉದ್ದೇಶವುಳ್ಳ ನಾಯಕನೊಬ್ಬ ಒದಗಿ ಬರುತ್ತಾನೆ. ಈತ ಸಮುದಾಯದೊಳಗಿನಿಂದಲೂ ಬರಬಹುದು ಅಥವಾ ಹೊರಗಿನಿಂದಲೂ ಬರಬಹುದು. ಹೊರಗಿನ ನಾಯಕತ್ವ ಲಭಿಸಿದರೂ ಸಾಕಷ್ಟು ಶೀಘ್ರವಾಗಿ ಒಳಗಿನ ನಾಯಕರೂ ಬೆಳೆದು ಬರುತ್ತಾರೆ.

ಈ) ಪರಿಣಾಮ: ಶೋಷಣೆಗೊಳಗಾದವರ ಪೂರ್ಣ ಸಮುದಾಯವು ಚಳುವಳಿಯಲ್ಲಿ ನೇರವಾಗಿ ಪಾಲ್ಗೊಳ್ಳದಿದ್ದರೂ ಅದರಲ್ಲಿ ಪಾಲ್ಗೊಂಡವರಿಂದಾಗಿ ಇನ್ನುಳಿದವರ ಬದುಕು ಕೂಡ ಗುಣಾತ್ಮಕ ಅಥವಾ ಋಣಾತ್ಮಕ ಪರಿಣಾಮಗಳನ್ನೆದುರಿಸಬೇಕಾಗುತ್ತದೆ.

ಉ) ಪರಿವರ್ತನೆ: ಪ್ರತಿಯೊಂದು ಪ್ರತಿಭಟನಾತ್ಮಕ ಚಳುವಳಿಯೂ ತತ್‌ಕಾಲೀನ ಮತ್ತು ತತ್‌ಪ್ರದೇಶದ ಸಾಮಾಜಿಕ, ಆರ್ಥಿಕ ಪರಿವರ್ತನೆಗೆ ನಾಂದಿ ಹಾಡುತ್ತದೆ. ಇದು ರಾಜಕೀಯದ ಮೇಲೂ ಪರಿಣಾಮಗಳನ್ನುಂಟು ಮಾಡಿ ಹೊಸ ಆಡಳಿತ ವ್ಯವಸ್ಥೆ ರೂಪುಗೊಳ್ಳುತ್ತದೆ. ಉದಾಹರಣೆಗೆ ಎಲ್ಲಾ ಪ್ರಜಾಪ್ರಭುತ್ವದ ಸರಕಾರಗಳ ಸ್ಥಾಪನೆಯ ಹಿಂದೆ ಪ್ರತಿಭಟನಾತ್ಮಕ ಕ್ರಾಂತಿ ನಡೆದ ಇತಿಹಾಸವಿದೆ.

ಊ) ಹೊಸ ಮೌಲ್ಯಗಳ ಪ್ರತಿಷ್ಠಾಪನೆ : ಪ್ರತಿಭಟನಾತ್ಮಕ ಚಳುವಳಿಯ ಒಂದು ಉದ್ದೇಶವು ಇನ್ನೊಂದು ಪ್ರತಿಭಟನೆಗೆ ಎಡೆ ಮಾಡಿ ಕೊಡದಿರುವುದು ಅಂದರೆ ಸಮಾಜದಲ್ಲಿ ಶೋಷಣೆಗೆ ಪೋಷಣೆ ನೀಡುವ ಎಲ್ಲಾ ಮೌಲ್ಯಗಳನ್ನು ನಿವಾರಿಸಿ ಸಮಾನತೆಯ ಮೌಲ್ಯಗಳನ್ನು ಅಂಗೀಕರಿಸುವುದು.

ಪ್ರತಿಭಟನಾತ್ಮಕ ಚಳುವಳಿಯ ಲಕ್ಷಣಗಳೆಂದು ಮೇಲೆ ಹೇಳಿದ ಅಂಶಗಳ ಆಧಾರದಲ್ಲಿ ನಾವು ಯಾವುದೇ ಕ್ರಾಂತಿಯ ಸ್ವರೂಪವನ್ನು ಅಭ್ಯಸಿಸಲು ಸಾಧ್ಯವಿದೆ.[1] ಬುದ್ಧ, ಬಸವ, ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಹೋರಾಟವನ್ನು ಇದೇ ದೃಷ್ಟಿಕೋನದಿಂದ ವಿವೇಚಿಸಬಹುದಾಗಿದೆ, ವಿಶ್ಲೇಷಿಸಬಹುದಾಗಿದೆ. ಈ ಮೂವರು ಎದುರುಗೊಂಡದ್ದು ಒಂದೇ ಸಮಾಜವನ್ನು, ಆದರೆ ಸಂದರ್ಭ ಭಿನ್ನ ಆದಾಗ್ಯೂ ಆಯಾ ಕಾಲಘಟ್ಟದಲ್ಲಿ ಪ್ರತಿಭಟನಾತ್ಮಕ ಹೋರಾಟ ಪ್ರಾರಂಭಿಸಿ, ಈ ಚಳುವಳಿಗೆ ನಿರಂತರತೆಯನ್ನು ಈ ದೇಶದ ಚರಿತ್ರೆಯ ವಿಶೇಷವೆಂದೇ ಗ್ರಹಿಸಬಹುದಾಗಿದೆ. 15ನೇ ಶತಮಾನದಲ್ಲಿ ಯುರೋಪಿನ ಚರಿತ್ರೆಯಲ್ಲಿ

ಹುಟ್ಟಿಕೊಂಡು, ಪ್ರೊಟೆಸ್ಟಂಟ್ (ಪ್ರತಿಭಟನಾ ಧರ್ಮ) ಮಾದರಿಯಲ್ಲಿ ಭಾರತದಲ್ಲೂ ಬುದ್ಧ, ಬಸವ, ಅಂಬೇಡ್ಕರ್ ಆಯಾ ಕಾಲದಲ್ಲಿ ಸುಧಾರಣಾ ಕಾರ್ಯ ಪ್ರಾರಂಭಿಸಿದರು.

ಬುದ್ಧ ಈ ನೆಲದ ಸರ್ವಶ್ರೇಷ್ಠ ಶಾಂತಿದೂತ. ವೈಚಾರಿಕ ಪಥವನ್ನು ತುಳಿಯುವುದರ ಮೂಲಕ ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿದ ಮಹಾಚೇತನ. ಬೌದ್ಧ ಧರ್ಮ ವೈಚಾರಿಕ ಆಲೋಚನೆಗಳಿಂದ ಕೂಡಿದ ಧರ್ಮ. ಬುದ್ಧ ಕರ್ಮಠರ ಯಜ್ಞ, ಯಾಗ, ಕಂದಾಚಾರಗಳನ್ನು ವಿರೋಧಿಸಿದ. ಬಸವಣ್ಣ ಪ್ರತಿಪಾದಿಸಿದ ಧರ್ಮ ತತ್ವವು ಮಾರ್ಟಿನ್ ಲೂಥರ್‌ನು ಪ್ರತಿಪಾದಿಸಿದ (ಪ್ರೊಟೆಸ್ಟಂಟ್) ಪ್ರತಿಭಟನಾ ಧರ್ಮಕ್ಕೆ ಸಂವಾದಿಯಾಗಿದೆ. ಬಸವಣ್ಣ ಸಮಾಜವನ್ನು ಎಲ್ಲ ರೀತಿಯಿಂದಲೂ ಮಾನವೀಯಗೊಳಿಸಲು ಪ್ರಯತ್ನಿಸಿದೆ. ಬುದ್ಧ ಸಂಘ ಸ್ಥಾಪಿಸಿದ. ಬಸವಣ್ಣ ಅನುಭವ ಮಂಟಪ ಸ್ಥಾಪಿಸಿದ. ಬುದ್ಧನ ಪ್ರಕಾರ ಧರ್ಮವು ಮಾನವನ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು ಹೊರತು ದೇವರು, ಆತ್ಮ, ನರಕ, ಸ್ವರ್ಗ, ಭೂಮಿ, ಆದಿ, ಅಂತ್ಯ ಅಂತಾ ಇತರೆ ವಾದ ವಿವಾದಗಳಿಗಲ್ಲ. ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು ಎಂದು ಸಾರಿದ. ಬುದ್ಧ-ಬಸವ ಇವರಿಬ್ಬರ ಕಾರ್ಯತಂತ್ರ ಒಂದೇ ಆಗಿತ್ತು. ಇವರಿಬ್ಬರ ತತ್ವಗಳಲ್ಲಿ ಸಾಮ್ಯತೆಗಳು ಹೆಚ್ಚಾಗಿವೆ. ಆದರಂತೆ ಅವು ಜೀವಪರವಾಗಿವೆ, ಸಮಾಜಮುಖಿಯಾಗಿವೆ. ಇವರ ಕಾರ್ಯವನ್ನು ಬೌದ್ಧ ಧರ್ಮಕ್ಕೆ ಮತಾಂತರ ಗೊಳ್ಳುವುದರೊಂದಿಗೆ ಅಂಬೇಡ್ಕರ್ ಮುಂದುವರಿಸಿದರು. ಇವರು ಜನಸಾಮಾನ್ಯರ ಬದುಕನ್ನು ಹಸನಾಗಿಸಲು ಬುದ್ಧನನ್ನು ಅವನ ಧರ್ಮವನ್ನು ಅಪ್ಪಿಕೊಂಡು ಸಮಾನತೆ ತರಲೆತ್ನಿಸಿದರು. ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದುದರ ಹಿನ್ನೆಲೆಯಲ್ಲಿ ಈ ಪ್ರತಿಭಟನಾ ಚಳುವಳಿಯ ದೀರ್ಘ ಪರಂಪರೆಯ ಅರಿವು ಇದೆ. ದಲಿತರಿಗೆ ತಮ್ಮ ಅವಮಾನದ ಸಂಸ್ಕೃತಿಗೆ ಎದುರಾಗಿ ಸಂಘರ್ಷಾತ್ಮಕ ಸಂಸ್ಕೃತಿಗೆ ಅಧ್ಯಾತ್ಮ ಪರಂಪರೆಯೊಂದನ್ನು ಒದಗಿಸಿಕೊಡುವ ಪ್ರಯತ್ನದಂಗವಾಗಿಯೇ ಅವರು ಬೌದ್ಧ ಧರ್ಮ ಮತ್ತು ತತ್ವವನ್ನು ಅಂಗೀಕರಿಸಿದ್ದು ಕೂಡ ಪ್ರತಿಭಟನೆಯ ದ್ಯೋತಕವಾಗಿತ್ತು. ಜಡಗೊಂಡಿರುವ ಹೊಸದನ್ನು ಸೃಷ್ಟಿಸಲು ಸಾಧ್ಯವಲ್ಲದ, ಸಂಪ್ರದಾಯವನ್ನು ಪೋಷಿಸುವ, ಪ್ರಗತಿಯನ್ನು ನಿರಾಕರಿಸುವ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯೇ ಬಂಡಾಯವಾಗುತ್ತದೆಂದೂ, ಅದು ಗೌರವದಿಂದ, ಸ್ವಾಭಿಮಾನಿ ಬಳಸಬಹುದಾದ ಪದವೆಂದು ಖಚಿತವಾಗಿ ಹೇಳಬಹುದೆಂದು[2] ಸರಜೂ ಕಾಟ್ಕರ್ ವಿವರಿಸುತ್ತಾರೆ. ಸಾಮಾಜಿಕ ಅಸಮಾನತೆಯ ಎಲ್ಲ ವ್ಯವಸ್ಥೆಯ ಪೂರ್ಣ ಅರಿವಿದ್ದು, ಅದನ್ನು ಬದಲಾಯಿಸಿ, ಜನಪರವಾದ ವ್ಯವಸ್ಥೆಯನ್ನು ಕಟ್ಟಲು ನಡೆಯುವ ವೈಜ್ಞಾನಿಕ ಚಿಂತನೆಯ ಅರಿವುಳ್ಳವನೇ ನಿಜವಾದ ಬಂಡಾಯಗಾರ. ಪ್ರತಿಭಟಿಸುವುದು, ಸಿಡಿದೇಳುವುದಷ್ಟೇ ಬಂಡಾಯವಲ್ಲ. ಅದನ್ನು ಬದಲಾಯಿಸಲು ಪ್ರಯತ್ನಿಸಿದಾಗಲೇ ಬಂಡಾಯ ಪೂರ್ಣವಾಗುತ್ತದೆ. ಅಂಥವರ ಬಂಡಾಯ, ಪ್ರತಿಭಟನೆ ನವ ಸಮಾಜ ನಿರ್ಮಾಣದ ಕನಸನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಪ್ರತಿಭಟಿಸಿ ಜನಪರವಾದ ವ್ಯವಸ್ಥೆ ನಿರ್ಮಿಸಲು ಯತ್ನಿಸಿದರು.

ಪ್ರತಿಭಟನೆ ಮನುಷ್ಯ ಸಹಜ ಮನೋಧರ್ಮ. ಮನುಷ್ಯನು ತನಗಾದ ಅನ್ಯಾಯವನ್ನು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರತಿಭಟಿಸುತ್ತಲೇ ಬಂದಿದ್ದಾನೆ. ಸಾಮಾಜಿಕ ಅನ್ಯಾಯ, ಅಸಮಾನತೆಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದಾನೆ. ಯಾವುದೇ ಚರಿತ್ರೆಯನ್ನು ಅವಲೋಕಿಸಿದರು

ಪ್ರತಿಭಟನೆ ಆಯಾ ಕಾಲದ ಅಸಮಾನತೆಯನ್ನೇ ಮುಖ್ಯವಾಗಿ ಅವಲಂಬಿಸಿದೆ. ಇಂತಹ ಪ್ರತಿಭಟನೆಗೆ ಸಾಮೂಹಿಕವಾದ ನಾಯಕತ್ವವನ್ನು ನೀಡಿದವರು ಸಮಾನತೆ, ಮಾನವೀಯತೆಯನ್ನು ಸಾಧಿಸಲು ಪ್ರಯತ್ನಿಸಿದವರು ಈ ಮೂರು ಜನ ಮಹನೀಯರು. ಅಂಬೇಡ್ಕರ್, ಲೋಹಿಯಾ, ಪೆರಿಯಾರ್ ಇವರೆಲ್ಲರಿಗೂ ಬುದ್ಧನೇ ಆದರ್ಶ. ಬಸವಣ್ಣ ಮಾರ್ಕ್ಸ್‌ಗೆ ಸಮೀಪವಿರುವ ಫಿಲಾಸಫಿಯ ಹೇಳಿದ. ಮಾರ್ಕ್ಸ್, ಬುದ್ಧ, ಬಸವಣ್ಣ, ಲೋಹಿಯಾ, ಅಂಬೇಡ್ಕರ್, ಗಾಂಧೀ ಇವರೆಲ್ಲರ ಮಾರ್ಗ ಸತ್ಯದ ಮಾರ್ಗವಾಗಿತ್ತು. ಹಲವರು ಇವರನ್ನು ವಿರೋಧಿಸಿದವರು ಇವರಾರೂ ಸತ್ಯದ ಮಾರ್ಗವನ್ನು ಬಿಡಲಿಲ್ಲ. ಆದಕ್ಕಾಗಿ ಜೀವನದುದ್ದಕ್ಕೂ ಹೋರಾಡಿದರು. ಇವರೆಲ್ಲರ ದಾರಿ ಬೆಳಕಿನ ಹಾಗೂ ಜ್ಞಾನದ ದಾರಿಯಾಗಿತ್ತು.

ಕ್ರಿ.ಪೂ. ಆರನೆಯ ಶತಮಾನದಲ್ಲಿ ಉದಯವಾದ ಬೌದ್ಧಧರ್ಮ ಮಹಾತ್ಮ ಬುದ್ಧ ಕಂಡ ಸತ್ಯದರ್ಶನ, ವೈದಿಕಧರ್ಮದಲ್ಲಿಯ ಕರ್ಮಾಚರಣೆ, ವರ್ಗಾಚರಣೆ, ಯಜ್ಞ ಯಾಗಾದಿಗಳ ಪ್ರಾಬಲ್ಯ, ಮೂಢನಂಬಿಕೆಗಳು ಹಿಂದೂಧರ್ಮದ ಶಿಥಿಲತೆಗೆ ಕಾರಣವಾದ ಅಂಶಗಳು. ಆಗ ಬೌದ್ಧಧರ್ಮ ಬೆಳೆದು ಬಂದಿತು. ಬೌದ್ಧಧರ್ಮದ ಜಾತಕಕಥೆಗಳು ಧರ್ಮದಸಾರ, ತತ್ವಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತಾನೆ. ಬುದ್ಧನ ಬಗ್ಗೆ ಮಹಾಕಾವ್ಯಗಳು ಪಾಲಿ, ಸಂಸ್ಕೃತ ಭಾಷೆಗಳಲ್ಲಿವೆ. ಸಂಸ್ಕೃತದಲ್ಲಿ ಅಶ್ವಘೋಷ ಬುದ್ಧ ಚರಿತ್ರ ಬರೆದಿದ್ದಾನೆ. ಲಲಿತ ವಿಸ್ತಾರ ಇನ್ನೊಂದು ಮಹಾಕಾವ್ಯ. ಇದೇ ಕಾವ್ಯವೇ Edwin Arrold ನ 'Light of Asia ಗ್ರಂಥಕ್ಕೆ ಕಾರಣವಾಯಿತು. ಬೌದ್ಧಧರ್ಮ ಸಾಹಿತ್ಯ ದರ್ಶನ ತತ್ವಶಾಸ್ತ್ರಕ್ಕೆ ಪ್ರಾಧಾನ್ಯತೆ ಕೊಟ್ಟಿದೆ. ಡಾ.ಎಸ್.ರಾಧಾಕೃಷ್ಣನ್‌ರ ಪ್ರಕಾರ ಮಾನವ ಕುಲದ ಮನಸ್ಸು ಮತ್ತು ವಿಚಾರಗಳ ಮೇಲೆ ಪ್ರಭಾವ ಬೀರಿದವನು ಬುದ್ಧ. ಬೌದ್ಧಿಕ ಅನುಬಂಧ ನೈತಿಕತೆ ಶ್ರೇಷ್ಠತೆ ಮತ್ತು ಆಧ್ಯಾತ್ಮಿಕ ಒಳನೋಟ ಇವುಗಳಿಂದ ನಿರ್ಧರಿಸುವುದಾದರೆ ಅವನು ಇತಿಹಾಸದಲ್ಲಿ ಘನತೆ ಹೊಂದಿದ ವ್ಯಕ್ತಿ.

ಹನ್ನೆರಡನೆಯ ಶತಮಾನದಲ್ಲಿ ಪುರೋಹಿತಶಾಹಿಗಳ ಕರ್ಮಜಡತೆಯಿಂದ ನಲುಗಿ ಹೋಗಿದ್ದ ಸಮಾಜವನ್ನು ಸಮಾನತೆಯ ತಳಹದಿಯ ಮೇಲೆ ಪುನಃ ಕಟ್ಟಲು ಪ್ರಯತ್ನಿಸಿದ. ಮಾನವತಾವಾದಿ ಬಸವಣ್ಣ, ಮಹಾದಾರ್ಶನಿಕ, ಚಿಂತಕ ಬಸವಣ್ಣನನ್ನು ಕುರಿತಂತೆ ಸಂಸ್ಕೃತ, ತೆಲುಗು, ಕನ್ನಡದಲ್ಲಿ ಹಲವಾರು ಪುರಾಣ ಚರಿತ್ರೆ ರಗಳೆಯೆಂಬ ಪ್ರಕಾರದ ಕೃತಿಗಳು ಹುಟ್ಟಿಕೊಂಡಿವೆ. ಹಿರಿಯೂರ ಶಾಸನ (ಕ್ರಿ.ಶ.1256),ಅರ್ಜುನವಾಡದ ಶಾಸನ (ಕ್ರಿ.ಶ.ಸು.1260), ಚೌಡದಾನಪುರದ ಶಾಸನ (ಕ್ರಿ.ಶ.ಸು.1260), ಕಲ್ಲೇದೇವರಪುರ ಶಾಸನ (ಕ್ರಿ.ಶ.ಸು.1279), ಮರಡಿಪುರ ಶಾಸನ (ಕ್ರಿ.ಶ.ಸು.1280) ಗುಡಿಹಾಳ-ಕುಂಟೋಜಿಶಾಸನ(14ನೇಶತಮಾನ) ಆನಂದಪೂರ ಮಠದ ಶಾಸನ(ಕ್ರಿ.ಶ.ಸು.1660), ಜೋಡಿದಾಸೇನಹಳ್ಳಿ ಶಾಸನ (ಕ್ರಿ.ಶ.ಸು.1686) ಕಾನಕಾನಹಳ್ಳಿ ಶಾಸನ (ಕ್ರಿ.ಶ.ಸು.1700) ಈ ಮುಂತಾದ ಶಾಸನಗಳಲ್ಲಿ ಬಸವನ ವ್ಯಕ್ತಿತ್ವ ವಿವರಗಳು ಉಲ್ಲೇಖಿತವಾಗಿವೆ. ಕೂಡಲಸಂಗಮದೇವ ಅಂಕಿತದಲ್ಲಿ ರಚಿತವಾದ ಬಸವಣ್ಣನವರ ಒಟ್ಟು 1426 ವಚನಗಳು ಉಪಲಬ್ಧವಾಗಿವೆ. ಅಂದು ಬಸವಣ್ಣ ನಡೆಸಿದ ಸಮಾಜೋಧಾರ್ಮಿಕ ಕ್ರಾಂತಿ ಮಹತ್ವದ್ದು.

20ನೇ ಶತಮಾನದಲ್ಲಿ ಅಂಬೇಡ್ಕರ್ ಉದಯ ಭಾರತೀಯ ಚರಿತ್ರೆಯಲ್ಲಿ ವಿಶಿಷ್ಟವಾದದ್ದು. ಭಾರತದಂತಹ ಮೌಢ್ಯ ತುಂಬಿದ ದೇಶಕ್ಕೆ ಮಾರ್ಗದರ್ಶಿಯಾಗಿ ಬೆಳೆದು ಬಂದರು. ಒಬ್ಬ ವ್ಯಕ್ತಿಗೆ ಎಲ್ಲಕ್ಕಿಂತ ಮುಖ್ಯವಾದುದು ಸ್ವಾಭಿಮಾನದ ಬದುಕು. ಆದ್ದರಿಂದ ಜಾತಿ ಎಂಬ ಅವಮಾನದ ಕವಚವನ್ನು

ಕಿತ್ತೊಗೆಯಬೇಕು. ಅದಕ್ಕಾಗಿ ಧರ್ಮಾಂತರವೊಂದೇ ದಾರಿ ಎಂದು ಅಂಬೇಡ್ಕರ್ ಹೇಳಿ 1956 ಅಕ್ಟೋಬರ್ 14ರಂದು ಲಕ್ಷಾಂತರ ದಲಿತರೊಂದಿಗೆ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಅಸಮಾನತೆ ಹೊಡೆದೋಡಿಸಿ ಹೊಸ ಬದುಕು ರೂಪಿಸಲು ಶ್ರಮಿಸಿದರು. ಡಾ।ಅಂಬೇಡ್ಕರ್‌ರವರ ಬದುಕಿನ ಅಧ್ಯಯನಕ್ಕೆ ಅವರೇ ರಚಿಸಿದ ಅಪಾರ ಸಾಹಿತ್ಯ ನಮ್ಮ ಮುಂದಿದೆ. ಡಾ। ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸುಮಾರು 14 ಸಂಪುಟಗಳು ಅವರ ವಿಚಾರಗಳ ಮೇಲೆ ಬೆಳಕು ಬೀರುತ್ತವೆ. ಅಲ್ಲದೇ ಹಲವಾರು ಜನ ರಚಿಸಿದ ಅವರ ಜೀವನ ಚರಿತ್ರೆಗಳು ವಿಚಾರಗಳ ಕುರಿತ ಅನೇಕ ಗ್ರಂಥಗಳು ನಮ್ಮೆದುರಿಗಿವೆ.

ಬುದ್ಧ, ಬಸವ, ಅಂಬೇಡ್ಕರ್‌ರವರು ಯಾವುದಕ್ಕಾಗಿ ಹೋರಾಟ ಮಾಡಿದರೋ ಅದು ಇನ್ನು ನಮ್ಮ ದೇಶದಲ್ಲಿ ಫಲ ನೀಡಲಿಲ್ಲ. ಭಾರತ ದೇಶ ಸ್ವತಂತ್ರಗೊಂಡು 60 ವರ್ಷ ಗತಿಸಿದರೂ ಜಾತಿ ಪದ್ಧತಿ ಬೇರೆಬೇರೆ ಸ್ವರೂಪದಲ್ಲಿ ತನ್ನ ವಿಕಾರದರ್ಶನ ಮಾಡಿಸುತ್ತಿದೆ. ಹುಟ್ಟಿನ ಆಕಸ್ಮಿಕದಿಂದಲೇ ಬಲಿಪಶುವಾದ ಒಂದು ವರ್ಗ ಕೀಳರಿಮೆಯಿಂದ ನರಳುತ್ತಲೇ ಇರುತ್ತದೆ. ಅಸ್ಪೃಶ್ಯತೆ, ಅಸ್ಪೃಶ್ಯರ ವಿಮೋಚನೆ ಕೇವಲ ಕನಸಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ನಮ್ಮ ಮುಂದಿರುವ ಆಶಾಕಿರಣ ಈ ಮಹನೀಯರ ತತ್ವಸಿದ್ಧಾಂತಗಳು. ಪ್ರಸ್ತುತ ಸಂದರ್ಭಕ್ಕೆ ಅಳವಡಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

ಬುದ್ಧ, ಬಸವ, ಅಂಬೇಡ್ಕರ್‌ರು ಅನೇಕ ಶತಮಾನಗಳ ಅಂತರ ಇವರ ಮಧ್ಯೆ ಇದೆ. ಈ ಮೂವರು ಕ್ರಾಂತಿಪುರುಷರು ಅವರ ವಿಚಾರಗಳಲ್ಲಿ ಸಾಮ್ಯಗಳೂ ಇವೆ. ವ್ಯತ್ಯಾಸಗಳೂ ಇವೆ. ಒಂದು ವಿಚಾರಧಾರೆಯ ಮುಂದುವರಿಕೆಯೂ ಇದೆ. ಈ ಮೂವರೂ ಸಂಪ್ರದಾಯ ವಿರೋಧಿಗಳು, ಜಾತಿ ಮತ್ತು ವರ್ಣ ವ್ಯವಸ್ಥೆಯನ್ನು ಖಂಡಿಸಿದವರು, ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯತೆ ಕೊಟ್ಟವರು, ಸಾಮಾನ್ಯ ಜನರ ದುಃಖವನ್ನು ನಿವಾರಿಸಲು ಪಣ ತೊಟ್ಟವರು. ಅವರಲ್ಲಿ ಕೆಲವಾರು ವ್ಯತ್ಯಾಸಗಳೂ ಇರಬಹುದು. ಆದರೆ ಅವು ಒಂದಕ್ಕೊಂದು ಪೂರಕವಾಗಿವೆ. ವೈರುಧ್ಯಗಳಿಲ್ಲ. ಭಾರತದ ಚರಿತ್ರೆಯಲ್ಲಿ ಮಹಾನ್ ಕ್ರಾಂತಿಕಾರಕ ತತ್ವವೇತ್ತರಲ್ಲಿ ಬುದ್ಧ ಮೊದಲಿಗ. ವೇದಗಳನ್ನು ತಿರಸ್ಕರಿದ, ವರ್ಣ ವ್ಯವಸ್ಥೆಯನ್ನು ಖಂಡಿಸಿದ. ಪವಿತ್ರ ಗ್ರಂಥಗಳಿಗಿಂತಲೂ ತರ್ಕಬದ್ಧ ವಿಚಾರದಿಂದ ಸತ್ಯಾನ್ವೇಷಣೆ ಸಾಧ್ಯವೆಂದು ಸಾರಿ ಹೇಳಿದ. ಬುದ್ಧನ ಈ ಸತ್ಯ ಶೋಧನೆಯ ರೀತಿ ಭಾರತೀಯ ತರ್ಕ ಶಾಸ್ತ್ರದ ಉಗಮಕ್ಕೆ ಕಾರಣವಾಯಿತು. ಬುದ್ಧ ದೇವರ ಅಸ್ತಿತ್ವದ ಗೊಡವೆಗೆ ಹೋಗಲಿಲ್ಲ. ಹೆಚ್ಚು ಮಹತ್ವ ಕೊಟ್ಟದ್ದು ಮನುಷ್ಯನ ನೀತಿಮತ್ತೆಗೆ, ಸೌಹಾರ್ದಭಾವಕ್ಕೆ, ಪರಸ್ಪರ ಪ್ರೇಮಕ್ಕೆ ಹಾಗೂ ಅಹಿಂಸೆಯ ಸಂದೇಶವನ್ನು ಸಾರಿ ಹೇಳಿದರು. ಮನುಷ್ಯರ ಬಗ್ಗೆ ಅಷ್ಟೇ ಅಲ್ಲ. ಸಕಲ ಪ್ರಾಣಿಗಳಲ್ಲಿಯೂ ದಯೆ ಅನುಕಂಪವಿರಬೇಕೆಂದು ಉಪದೇಶ ಮಾಡಿದರು. 12ನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣ ಬುದ್ಧನಂತೆ ದಯವೇ ಧರ್ಮದ ಮೂಲವೆಂದು ಸಾರಿದರು. ಪ್ರಗತಿಪರ ವಿಚಾರ ಸಾರಿದರು. ಸ್ತ್ರೀಯರಿಗೆ ಗೌರವ - ಸಮಾನ ಹಕ್ಕು ಇದೆ ಎಂದು ಸಾರಿ ಹೇಳಿದರು. ಹಾಗೂ ದೈಹಿಕ ಶ್ರಮಕ್ಕೆ, ದುಡಿಮೆಗೆ ಪ್ರಾಮುಖ್ಯತೆ ನೀಡಿದರು. ಇದರಿಂದಾಗಿ ದುಡಿಯುವ ಜನ ಕೀಳು ವರ್ಗದವರಲ್ಲ, ದುಡಿಯದೇ ಪಡೆಯುವ ವರ್ಗಗಳಿಗಿಂತ ಶ್ರೇಷ್ಠರು ಎಂಬ ಕ್ರಾಂತಿಕಾರಕ ವಿಚಾರಗಳು ಮಹತ್ವ ಪಡೆದುಕೊಂಡವು. ಬಸವಣ್ಣ ದೈಹಿಕ ಶ್ರಮಕ್ಕೆ ಗೌರವ ನೀಡಿದ್ದು, ಈ ಜಗತ್ತಿನ ಅಸ್ತಿತ್ವವನ್ನು ನಿಜ ಎಂದು ಒಪ್ಪಿಕೊಂಡಿದ್ದರು. ಕೆಲ ಶತಮಾನಗಳ ನಂತರ ಯುರೋಪಿನಲ್ಲಿ ಪ್ರೊಟೆಸ್ಟಂಟ್ ಪಂಥ ಇಂತಹದೇ

ವಿಚಾರಧಾರೆಯನ್ನು ಹೊಂದಿತ್ತು. ಪರಲೋಕಕ್ಕಿಂತ ಇಹಲೋಕಕ್ಕೆ ಹೆಚ್ಚು ಮಹತ್ವ ಕೊಟ್ಟಿತ್ತು. ಅದರಿಂದಲೇ ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿಯಾಯಿತೆಂದು ಮ್ಯಾಕ್ಸ್‌ವೆಬರ್ ಪ್ರತಿಪಾದಿಸಿದ್ದಾರೆ.

ಬುದ್ಧ ಮತ್ತು ಬಸವಣ್ಣರಲ್ಲಿ ಒಂದು ಮಹತ್ವದ ವ್ಯತ್ಯಾಸವಿದೆ. ದೇವರ ಅಸ್ತಿತ್ವದ ಗೊಡವೆಗೇ ಬುದ್ಧ ಹೋಗಲಿಲ್ಲ. ಮನುಷ್ಯನಿಗೆ ನೀತಿಮತ್ತೆ, ತರ್ಕಶುದ್ಧ ವಿಚಾರ, ಪ್ರೇಮ, ಅನುಕಂಪ ಇವಿಷ್ಟಿದ್ದರೆ ಸಾಕಿತ್ತು. ಆದರೆ ಬಸವಣ್ಣ ಭಕ್ತಿಗೆ ಪ್ರಾಶಸ್ತ್ಯ ಕೊಟ್ಟು ಭಕ್ತಿ, ಶ್ರದ್ಧೆ, ವಿಶ್ವಾಸಗಳು ಮನುಷ್ಯನ ನೀತಿಮತ್ತೆಗೆ ಅಗತ್ಯವೆಂದು ಸಾರಿ ಹೇಳಿದ ಮಹಾನ್ ಭಕ್ತನಾಗಿದ್ದ. ಈ ವ್ಯತ್ಯಾಸವಿದ್ದರೂ ಇವರಿಬ್ಬರೂ ಮಾನವೀಯ ಮೌಲ್ಯಗಳಿಗೆ ಒತ್ತು ಕೊಟ್ಟವರು. ದಯೆ, ಪ್ರೀತಿ, ನಡತೆಗಳು ಒಳ್ಳೆಯವಾಗಿರಬೇಕೆಂದು ಉಪದೇಶಿಸಿದರು. ಇನ್ನೊಂದು ವ್ಯತ್ಯಾಸ ಬುದ್ಧ ಸನ್ಯಾಸಕ್ಕೆ ಪ್ರಾಶಸ್ತ್ಯ ಕೊಟ್ಟರೆ ಬಸವಣ್ಣನವರು ಸಂಸಾರಕ್ಕೆ ಮಹತ್ವ ನೀಡಿದರು. ಸಂಸಾರದಲ್ಲಿದ್ದು ದೇವರನ್ನು ಕಾಣಲು ಪ್ರಯತ್ನಿಸಿದರು. ಹೀಗಾಗಿ ಸನ್ಯಾಸಿಯಾಗುವುದು ಅವರಿಗೆ ಸಮ್ಮತವಾಗಿರಲಿಲ್ಲ. ಆದರೆ ಇವರಿಬ್ಬರೂ ಸಮಾನತೆಯನ್ನು ಉಂಟು ಮಾಡಲು, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು. ಇಷ್ಟೆಲ್ಲ ತತ್ವವೇತ್ತರೂ, ಸಂತರೂ ಈ ದೇಶದಲ್ಲಿ ಜನಿಸಿ ಬಂದರೂ ಅಸ್ಪೃಶ್ಯತೆ ತೊಲಗಲಿಲ್ಲ. ಜಾತಿಯ ಕಟ್ಟಳೆಗಳು ಹೋಗಲಿಲ್ಲ. ಅಂಧಕಾರ ಅಳಿಯಲಿಲ್ಲ. ಈ ಕಾರಣಕ್ಕಾಗಿಯೇ ಬುದ್ಧ, ಬಸವರ ನಂತರ ಡಾ। ಅಂಬೇಡ್ಕರ್ ಉದಯಿಸಿ ಬಂದರು. ಅವರು ಹಿಂದೂ ಸಮಾಜದ ಕಳಂಕವನ್ನು ಹೋಗಲಾಡಿಸಲು-ಸುಧಾರಿಸಲು ಶ್ರಮಿಸಿದರು. ಅಂಬೇಡ್ಕರ್ ವಿಚಾರಗಳಲ್ಲಿಯೂ ಬುದ್ಧ-ಬಸವರ ವಿಚಾರಗಳಲ್ಲಿಯೂ ಅನೇಕ ಸಾಮ್ಯಗಳಿವೆ. ಸಾಮಾಜಿಕ ನ್ಯಾಯದ ಮೇಲೆ ಅವರು ಕೊಟ್ಟ ಮಹತ್ವ, ವರ್ಣ-ಜಾತಿ ವ್ಯವಸ್ಥೆ ತಿರಸ್ಕರಿಸಿದ್ದು, ಸ್ತ್ರೀಯರ ಹಕ್ಕುಗಳಿಗೆ ಕೊಟ್ಟ ಗೌರವ, ದೈಹಿಕ ಶ್ರಮಕ್ಕೆ ಮತ್ತು ದುಡಿಯುವ ಜನತೆಗೆ ಕೊಟ್ಟ ಪ್ರಾಶಸ್ತ್ಯ ಇವೆಲ್ಲ ಬುದ್ಧ ಬಸವರಿಬ್ಬರೂ ಪ್ರತಿಪಾದಿಸಿದ್ದರು. ಸಂಘಟನೆಗೂ ಮೂವರು ಪ್ರಾಮುಖ್ಯತೆ ಕೊಟ್ಟರು. ಅಂಬೇಡ್ಕರ್ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಅಸ್ಪೃಶ್ಯರಿಗೆ ಬಿಡುಗಡೆಯ ದಾರಿ ತೋರಿದರು. ಭಾರತಕ್ಕೆ ಮತ್ತು ಹಿಂದೂ ಧರ್ಮದ ಪುರಾತನ ಕಳಂಕವನ್ನು ಹೋಗಲಾಡಿಸಲು ಶ್ರಮಿಸಿದರು. ದಲಿತರಾಗಿ ಜನಿಸಿದ ಅಂಬೇಡ್ಕರ್ ಭಾರತಕ್ಕೆ ಹಿಂದೂ ಕೋಡ್ ಮತ್ತು ಸಂವಿಧಾನವನ್ನೇ ರಚಿಸಿಕೊಟ್ಟರು.

ಬುದ್ಧ, ಬಸವ, ಅಂಬೇಡ್ಕರ್ ಇಷ್ಟೆಲ್ಲ ಹೋರಾಟ ಮಾಡಿದರೂ ದಲಿತರನ್ನು ಗ್ರಾಮಗಳಲ್ಲಿ ಹೀನಾಯವಾಗಿ ನಡೆಸಿಕೊಳ್ಳುವುದು, ಅವರ ಮೇಲೆ ದೌರ್ಜನ್ಯ ನಡೆಯುವುದು ಖಂಡನೀಯ ಹಾಗೂ ಈ ದೇಶಕ್ಕೆ ಸಮಾಜಕ್ಕೆ ಅವಮಾನ ಮತ್ತು ಕಳಂಕ. ಇದನ್ನು ತೊಡೆಯಲು ಇನ್ನೂ ಎಷ್ಟು ಜನ ಬುದ್ಧ, ಬಸವ, ಅಂಬೇಡ್ಕರ್‌ರು ಹುಟ್ಟಿ ಬರಬೇಕು? ಇಂದು ಈ ಜಟಿಲ ಸಮಸ್ಯೆ ಸಂಪೂರ್ಣ ನಿವಾರಣೆಯಾಗಿದೆಯೇ? ದಲಿತರ ಬದುಕು ಹಸನಾಗಿದೆಯೇ? ಎಂದು ಪ್ರಶ್ನಿಸಿಕೊಂಡರೆ ಉತ್ತರ ಶೂನ್ಯ. ಭಾರತದಲ್ಲಿ ಬಡತನವೂ ಶ್ರೇಣೀಕರಣಕ್ಕೆ ಒಳಗಾಗಿದೆ. ಅಸಮಾನವಾಗಿ ಹಂಚಿಕೆಯಾಗಿದೆ. ಅಂಕಿ ಅಂಶಗಳ ಪ್ರಕಾರ ಬಡತನ ದಲಿತರಲ್ಲಿ ಶೇ. 55 ರಷ್ಟಿದ್ದರೆ ಉಳಿದೆಲ್ಲ ವರ್ಗಗಳ ಬಡತನ ಶೇ. 37 ರಷ್ಟಿದೆ. ಅಂದರೆ, ಹೆಚ್ಚು ಬಡವರು ಹೆಚ್ಚು ಅವಮಾನಿತರೇ ಆಗಿದ್ದಾರೆ. ಈ ಕಾರಣಕ್ಕಾಗಿ ಬುದ್ಧ ಬಸವ ಅಂಬೇಡ್ಕರ್ ಇಂದು ಈ ದೇಶದ ಸಮಸ್ಯೆಗಳಿಗೆ ಪರಿಹಾರವಾಗಬಲ್ಲರೇ? ಎಂಬುದನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ.

ಮನುಷ್ಯ ಮನುಷ್ಯರ ನಡುವೆ ಜಾತಿಗೋಡೆಗಳನ್ನು ನಿರ್ಮಿಸಿ ಮಾನವೀಯ ಸಂಬಂಧ ಕಂದರವುಂಟು ಮಾಡಿದ ಹೇಯವಾದ ಹಿಂದೂ ಧರ್ಮ ಜಾತಿ ಪದ್ಧತಿ, ಅಸ್ಪೃಶ್ಯತೆಯಂತ ಅನಿಷ್ಟಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಪುರೋಹಿತಶಾಹಿ ಸಮಾಜದ ಎಲ್ಲಾ ಸಂಪತ್ತು ಸೌಲಭ್ಯಗಳನ್ನು ಅವಕಾಶಗಳನ್ನು ಬಳಸಲು ಕ್ರೂರವಾದ ಕಟ್ಟುಪಾಡಗಳನು ವಿಧಿಸಿ, ಮನು ಮಾಡಿದ ಶಾಸನಗಳ ಆಧಾರದ ಮೇಲೆ ಸವರ್ಣೀಯರು ಉನ್ನತಸ್ಥಾನಮಾನವನ್ನು ಪಡೆದು ಅಸ್ಪೃಶ್ಯರನ್ನು ಪಶುಗಳಂತೆ ನಡೆಸಿಕೊಳ್ಳುತ್ತ ಬಂದರು. ಇಂಥ ಅಮಾನವೀಯ ಕ್ರೂರ ಜಾತಿಪದ್ಧತಿ ವಿರುದ್ಧ ಸಿಡಿದೆದ್ದ ಮಹಾಪುರುಷ ಡಾ। ಅಂಬೇಡ್ಕರ್. ಅಂಬೇಡ್ಕರ್‌ರವರನ್ನು ಜಾತಿಯ ಕಾರಣಕ್ಕೆ ಹಿಂದೂಧರ್ಮದ ಸವರ್ಣೀಯರು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಾರೆ. ಅಂಬೇಡ್ಕರ್‌ರವರನ್ನು ಕುರಿತು ತಿರಸ್ಕಾರದಿಂದ ಮಾತನಾಡುತ್ತಾರೆ. ಕಾರಣ ಅಂಬೇಡ್ಕರ್‌ರವರು ಜಾತಿಪದ್ಧತಿ ವಿರುದ್ಧ ತೀವ್ರ ಪ್ರತಿಭಟನೆ, ದಲಿತರ ವಿಮೋಚನೆಗಾಗಿ ನಡೆಸಿದ ನಿರಂತರ ಹೋರಾಟ ಅವಿಸ್ಮರಣೀಯ. ಐದುಸಾವಿರ ವರ್ಷಗಳಿಂದ ಈ ದೇಶದ ಸಂಪತ್ತನ್ನು ಸೌಲಭ್ಯಗಳನ್ನು, ಅವಕಾಶಗಳನ್ನು ಅನುಭವಿಸುತ್ತ ಬಂದವರನ್ನು ಪ್ರಶ್ನಿಸಿ, ಪ್ರತಿಭಟಿಸಿದವರು, ಅಂಬೇಡ್ಕರ್ ಈದೇಶದ ಅಸ್ಪೃಶ್ಯರ, ಶೂದ್ರರ ಮೇಲೆ ಬಲಾತ್ಕಾರವಾಗಿ ಹೇರಲ್ಪಟ್ಟು, ಅವರನ್ನು ಕೀಳಾಗಿ ಕಾಣುತ್ತದೆಯೋ, ಯಾರು ಸಮಾಜದಿಂದ ಬಹಿಷ್ಕರಿಸಲ್ಪಟ್ಟರೋ, ಆರ್ಥಿಕವಾಗಿ, ರಾಜಕೀಯವಾಗಿ ಶೋಷಣೆಗೊಳಪಟ್ಟರೋ ಅಂತಹ ದಲಿತರಿಗೆ ನ್ಯಾಯವಾದ ಸ್ಥಾನವನ್ನು ಕಲ್ಪಿಸುವುದು ಅಂದರೆ ಶಾಸನ ಸಭೆಗಳಲ್ಲಿ ಭಾರತದ ಆಡಳಿತದಲ್ಲಿ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಜನಸಂಖ್ಯಾನುಸಾರ ಸ್ಥಾನಗಳನ್ನು ಮೀಸಲಿಡುವುದು. ಡಾ।ಅಂಬೇಡ್ಕರ್‌ರವರು ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸುವುರ ಮೂಲಕ ಭಾರತ ಬಹಿಷ್ಕೃತ ಹಿತಕಾರಿಣಿ ಸಭೆ ಸಂಘಸಂಸ್ಥೆಯ ಮೂಲಕ ಹೋರಾಟ ಕಣಕ್ಕೆ ಇಳಿದರು. ಮುಂದೆ 1930 ನವೆಂಬರ್‌ನಲ್ಲಿ ಲಂಡನ್‌ನಲ್ಲಿ ನಡೆದ ಪ್ರಥಮ ದುಂಡು ಮೇಜಿನ ಪರಷತ್ತಿನಲ್ಲಿ ಭಾರತದ ದಲಿತರಿಗೆ ಕಲ್ಪಿಸಿ ಕೊಡಬೇಕಾದ ರಾಜಕೀಯ ರಕ್ಷಣೆಗಳು ಎಂಬ ಬೇಡಿಕೆ ಪತ್ರವನ್ನು ಬ್ರಿಟಿಷ ಸರ್ಕಾರಕ್ಕೆ ಮಂಡಿಸಿದರು. ಮುಂದೆ ಸಂವಿಧಾನದಲ್ಲಿ ಡಾ। ಅಂಬೇಡ್ಕರ್ ಮೀಸಲಾತಿ ಸೌಲಭ್ಯವನ್ನು ಅಳವಡಿಸಿ ದಲಿತರಿಗೆ ಅನುಕೂಲ ಮಾಡಿಕೊಟ್ಟರು. ಆದರೆ, ಭಾರತದಲ್ಲಿ ಮೀಸಲಾತಿಪರ ವಿರುದ್ಧ ಚಳುವಳಿಗಳು ನಡೆದು ಸಾರ್ವಜನಿಕರಲ್ಲಿ ಗೊಂದಲ ಉಂಟಾಗಿರುವುದು ಸತ್ಯ.ಸಾಮಾಜಿಕ ನ್ಯಾಯಕ್ಕಾಗಿ ನಡೆದಿರುವ ಹೋರಾಟಕ್ಕೆ ಅಪಚಾರ ಮಾಡುವಂತಹದು. ಅಲ್ಲದೇ ಸಂವಿಧಾನ ಕೊಟಿರುವ ಅಗತ್ಯ ಸೌಲಭ್ಯಗಳನ್ನು ಕಸಿದುಕೊಳ್ಳುವ ತಂತ್ರಗಳು ನಡೆಯುತ್ತಲೇ ಇವೆ.

ಯಾವುದೇ ಧರ್ಮ ಮಾನವೀಯ ಮೌಲ್ಯಗಳನ್ನು ಒಪ್ಪಿಕೊಂಡು ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವ ಧರ್ಮದ ಅಗತ್ಯವಿದೆ. ಬೌದ್ಧಧರ್ಮಕ್ಕೆ ಮತಾಂತರಗೊಂಡವರು ಜಾತಿ, ಪುರೋಹಿತಶಾಹಿ ಪದ್ಧತಿಗೆ ಒಳಗಾಗಬಾರದು. ಬುದ್ಧನ ವೈಚಾರಿಕ ನೆಲೆಯಲ್ಲಿ ನಿಂತು ಚಿಂತಿಸಬೇಕು. ಆಗ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬೆಳವಣಿಗೆ ಸಾಧ್ಯವಾಗಬಲ್ಲದು. ಬುದ್ಧ, ಬಸವ, ಅಂಬೇಡ್ಕರ್‌ರವರನ್ನು ಆದರ್ಶ ಪುರುಷರನ್ನಾಗಿ ನೋಡದೇ ಅವರ ತತ್ವ ಚಿಂತನೆಗಳಿಗೆ ಮರು ಹುಟ್ಟು ನೀಡಿ ನಮ್ಮ ವಾಸ್ತವ ಬದುಕಿಗೆ ಅಳವಡಿಸಿಕೊಂಡಾಗ ಮಾತ್ರ ಆ ಮಹನೀಯರ ಪ್ರತಿಭಟನಾತ್ಮಕ ಹೋರಾಟ ಸಾರ್ಥಕವಾಗಬಲ್ಲದು.

ಬುದ್ಧ, ಬಸವ, ಅಂಬೇಡ್ಕರ್‌ನ್ನು ತೌಲನಿಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ ಪ್ರಸ್ತುತ ಸಂದರ್ಭಕ್ಕೆ ಎಂದರೆ ತಪ್ಪಾಗಲಾರದು. ದಲಿತರು ಕೀಳರಿಮೆಯನ್ನು ತೊರೆಯಲು ಮತಾಂತರದ ಕಡೆಗೆ ಗಮನ ಹರಿಸಿದ್ದಾರೆ. ಮಾನವ ಹಕ್ಕುಗಳಿಗೆ ಹೋರಾಟ ನಡೆದಿದೆ, ಗುಲಾಮಗಿರಿಯನ್ನು ತೊಡೆಯಲು

ದಲಿತರು ಸಂಘಟನಾತ್ಮಕ ಪ್ರಯತ್ನ ಹಾಗೂ ಹೋರಾಟ ಸಾಗಿರುವುದನ್ನು ದೇಶಾದ್ಯಂತ ನಾವಿಂದು ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ಬೌದ್ಧಧರ್ಮದ ಅಷ್ಟಾಂಗಮಾರ್ಗ ಹಾಗೂ ಬಸವತತ್ವದ ಅಷ್ಟಾವರಣಗಳು ಸಮಾನತೆಯ ಪ್ರತಿಪಾದನೆಗೆ ಸಹಕಾರಿಯಾಗಬಲ್ಲವು. ಹಾಗೆಯೇ ಬುದ್ಧನ ಶ್ರಮಣ ಸಂಸ್ಕೃತಿ, ಬಸವನ ಕಾಯಕ ತತ್ವದ ಶರಣಸಂಸ್ಕೃತಿ, ಅಂಬೇಡ್ಕರ್‌ರವರ ಸ್ವಾಭಿಮಾನಿ ಸಂಸ್ಕೃತಿ ಇವುಗಳ ಸಮನ್ವಯದೊಂದಿಗೆ ದಲಿತರ ಬಿಡುಗಡೆ ಹಾಗೂ ಸ್ವಯಂ ಬೆಳವಣಿಗೆಗೆ ಸಹಾಯಕವಾಗಬಲ್ಲವು. ದಲಿತರು ಬಸವಣ್ಣನೆಡೆಗೆ ಗಮನ ಹರಿಸಿದಾಗ ಲಿಂಗಾಯತರು ಸಹಮತ ವ್ಯಕ್ತಪಡಿಸಿರುವುದನ್ನು ಚರಿತ್ರೆಯಲ್ಲಿ ಕಾಣಬಹುದಾಗಿದೆ. ದಲಿತರಿಗೆ ಬೌದ್ಧಧರ್ಮ ವೀರಶೈವಧರ್ಮಗಳೆರಡು ಸಮಾನತೆಯ ಪರಿಕಲ್ಪನೆಯನ್ನು ಕಲ್ಪಿಸಿ ಕೊಟ್ಟಿರುವುದನ್ನು ಚರಿತ್ರೆಯಲ್ಲಿ ಕಾಣಬಹುದಾಗಿದೆ. ಆದರೆ ಇಂದು ಏಕೆ ವೀರಶೈವ ಅಥವಾ ಲಿಂಗಾಯತಧರ್ಮ ದಲಿತರಿಂದ ದೂರ ಸರಿಯುತ್ತಿದೆ? ಅದರ ಕಾರಣಗಳೇನು? ಬೌದ್ಧಧರ್ಮದ ಕಡೆಗೆ ಹೆಚ್ಚು ಒಲವು ತೋರುತ್ತಿರುವುದೇಕೆ? ಈ ಎಲ್ಲ ಪ್ರಶ್ನೆಗಳಿಗೆ ಪ್ರಸ್ತುತ ಕಾಲವೇ ಉತ್ತರಿಸಬೇಕಾಗಿದೆ.

ಶ್ರಮ ಸಂಸ್ಕೃತಿ, ಶರಣರ ಕಾಯಕ ಸಂಸ್ಕೃತಿ, ಸ್ವಾಭಿಮಾನಿ ಸಂಸ್ಕೃತಿ ಇವು ಅನನ್ಯತೆಯನ್ನು ಅನುಸಂಧಾನವನ್ನು ಕಟ್ಟಿ ಕೊಟ್ಟಿವೆ. ಈ ಮೂವರು ಮಹನೀಯರು ಧರ್ಮವನ್ನೂ ಸಾಮಾನ್ಯರ ಮಟ್ಟಕ್ಕೆ ತಂದವರು, ಈ ಮೂವರು ಮಹನೀಯರು ಪಾಲಿ, ಕನ್ನಡ, ಮರಾಠಿ ಭಾಷೆಗಳಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ತತ್ವಗಳನ್ನು ಸಾರಿದ್ದು, ವಿಶಿಷ್ಟವಾದದ್ದು. ಅಂಬೇಡ್ಕರ್‌ರವರು ಮಾತೃಭಾಷೆ ಮರಾಠಿಯಲ್ಲಿ ಭಾಷಣ, ಬರಹಗಳನ್ನು ಮಾಡಿದರು ಕೂಡ ವ್ಯವಹಾರಿಕೆ ಭಾಷೆ ಇಂಗ್ಲೀಷನಲ್ಲಿ ರಚಿಸಿದ ಬರವಣಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದೆ. ಜನಸಾಮಾನ್ಯರ ಭಾಷೆಯಲ್ಲಿ ಇವರು ವಿಚಾರಗಳನ್ನು ಮಂಡಿಸಿದ್ದು, ಸಾಮಾಜಿಕ ಪರಿವರ್ತನೆಗೆ, ಚಳುವಳಿ ಬೆಳೆಯಲು ಸಹಕಾರಿಯಾಯಿತು.

ಭಾರತದ ಸಾಮಾಜಿಕ ಚಳುವಳಿಯ ಪರಂಪರೆಯ ಬಹುಮುಖ್ಯ ಅಂಶವೆಂದರೆ, ಬುದ್ಧ, ಬಸವ, ಅಂಬೇಡ್ಕರ್ ಕ್ರಮವಾಗಿ ಉದಯಿಸಿ ಬಂದಿರುವುದು ಭಾರತದ ಸಂದರ್ಭದಲ್ಲಿ ಚರಿತ್ರೆಯಲ್ಲಿಯೇ ಒಂದು ಪರಂಪರೆಯ ಮುಂದುವರಿಕೆಯಾಗಿರುವುದೊಂದು ವಿಶಿಷ್ಟವಾದದ್ದು. 6ನೇ ಶತಮಾನದಲ್ಲಿ ಬುದ್ಧ, 12ನೇ ಶತಮಾನದಲ್ಲಿ ಬಸವಣ್ಣ ನಂತರ 19ನೇ ಶತಮಾನದಲ್ಲಿ ಅಂಬೇಡ್ಕರ್ ಈ ಪರಿವರ್ತನೆಯ ಚಳುವಳಿಯನ್ನು ರೂಪಿಸಿದರು. ಮೂವರು ಮಹನೀಯರು: ಧರ್ಮವನ್ನು ಸರಳೀಕರಿಸಿದ್ದು, ಸಮಾನತೆ ಸಾಧಿಸಲು ಪ್ರಯತ್ನಿಸಿದ್ದು, ಜನ ಭಾಷೆಗಳನ್ನು ಬಳಸಿ ಬೋಧಿಸಿದ್ದು, ಸಂಘಟನೆಗಳ ಮೂಲಕ ಚಳುವಳಿ ರೂಪಿಸಿದ್ದು ಅನನ್ಯವಾದುದಾಗಿತ್ತು. ಬುದ್ಧ ಸಂಘಗಳನ್ನು ಕಟ್ಟಿದ, ಬಸವಣ್ಣ ಅನುಭವ ಮಂಟಪ ಸ್ಥಾಪಿಸಿದ, ಅಂಬೇಡ್ಕರ್‌ರು ಸಂಘಟನೆ ಮಾಡಿದ್ದು, ಬೌದ್ಧ ಜನ ಪಂಚಾಯತ್, ಅಖಿಲ ಭಾರತ ಬೌದ್ಧಪರಿಷತ್, ಜಾಗತಿಕ ಬೌದ್ಧಪರಿಷತ್ ಸ್ಥಾಪಿಸಿದ್ದು, ಸಂಘಟನೆಯೊಂದಿಗೆ ಜನಜಾಗೃತಿ ಹಾಗೂ ಚಳುವಳಿಗಳನ್ನು ರೂಪಿಸಿದ್ದು, ಆಯಾ ಕಾಲಘಟ್ಟದ ಐತಿಹಾಸಿಕ ಅಗತ್ಯಗಳನ್ನು ಪೂರೈಸಿ ಜನ ಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದರೆ, ಬುದ್ಧ-ಬಸವ-ಅಂಬೇಡ್ಕರ್ ದಲಿತರಲ್ಲಿ ಸಾಮಾಜಿಕ ಅನುಸಂಧಾನಕ್ಕಾಗಿ ಮಾಡಿದ ಪ್ರಯತ್ನ, ಸಮಾನತೆ ತರಲು ಮಾಡಿದ ಚಳುಳಿಯ ಪ್ರಯತ್ನ, ಇಂತಹ ಸಮನ್ವಯ ಪ್ರಯತ್ನ ಬೇರೆ ಯಾವುದೇ ದೇಶದಲ್ಲಿ ಕಾಣಲು ಸಾಧ್ಯವಿಲ್ಲ. ಏಕೆಂದರೆ ಮಾನವೀಯ ಸಿದ್ಧಾಂತದಡಿಯಲ್ಲಿ ಇವರು ಮಾಡಿದ ಪ್ರಯತ್ನ ಹಾಗೂ ಉತ್ತಮ ಸಿದ್ಧಾಂತವೊಂದನ್ನು ರೂಪಿಸಿ, ಸಿದ್ಧಾಂತದ ಸಾಮಾನ್ಯೀಕರಣಮಾಡಿ ಜನ ಸಾಮಾನ್ಯರನ್ನು ತಲುಪಲು ಪ್ರಯತ್ನಿಸಿದ್ದು ಅತ್ಯಂತ ಮಹತ್ವದ್ದಾಗಿದೆ. ಅಷ್ಟೇ ಅಲ್ಲ, ಅವರ ತತ್ವಗಳು ವಾಸ್ತವ

ಆಚರಣೆಗೆ ಪೂರಕವಾಗಿವೆ, ಅಳವಡಿಕೆಗೆ ಅನುಕೂಲಕರವಾಗಿವೆ. ಅವುಗಳನ್ನು ಅಳವಡಿಸಿಕೊಳ್ಳುವ ವಿಶಾಲ ಹೃದಯ ನಮ್ಮದಾಗಬೇಕಾಗಿದೆ. ಈ ಮಹನೀಯರು ಸಾರಿದ ಸಿದ್ಧಾಂತಗಳಿಗೆ ಸಾವಿಲ್ಲ, ಅವು ಜನಮಾನಸಕ್ಕೆ ದಾರಿದೀಪವಾಗಿರುತ್ತವೆ. ಸಮಾನತೆ, ಪ್ರಜಾಪ್ರಭುತ್ವ, ಸಂವಿಧಾನ ನಮ್ಮ ದೇಶದಲ್ಲಿ ಬೆಳವಣಿಗೆಯಾಗಿರುವುದಕ್ಕೆ ಸಾಕ್ಷಿಯಾಗಿವೆ. ಆದರೆ ಅವುಗಳ ಸಾಫಲ್ಯ ಜನರ ಕೈಯಲ್ಲಿದೆ ಎಂಬುದನ್ನು ಮರೆಯದಿರೋಣ.

1.1) ಅಧ್ಯಯನದ ಉದ್ದೇಶಗಳು :

ಸಮಾಜ ಸುಧಾರಕರು ಏನೆಲ್ಲಾ ತತ್ವ ಸಿದ್ಧಾಂತಗಳನ್ನು ಹೇಳಿದರೂ, ಕುಟುಂಬ, ಸಮಾಜ, ಸಮೃದ್ಧ ವಾತ್ಸಲ್ಯದ ತಳಹದಿಯ ಜೀವನ ದೃಷ್ಟಿಗಳು ಪಂಗರ ಪಟ್ಟಾಗಿ ಹೋದವು.[3] ಈ ಮಾತು ಭಾರತೀಯ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಸೂಕ್ತವೆನಿಸುತ್ತದೆ. ನಾವಿಂದು ಲಿಖಿತ ಸಂವಿಧಾನದ ಅಡಿಯಲ್ಲಿದ್ದು, ವಾಸ್ತವವಾಗಿ ಅಲಿಖಿತ ಶಾಸನಗಳನ್ನು ಅನುಸರಿಸಿ ಸಂಪ್ರದಾಯದ ಕರಿನೆರಳಿನಲ್ಲಿ ಬದುಕುತ್ತಿದ್ದೇವೆ. ನೂರಾರು ಜನ ಸುಧಾರಕರು ಬಂದು ಪರಿವರ್ತನೆ ತರಬಯಸಿದರು. ಆದರೆ ಸಮಾಜದಲ್ಲಿಯ ಕೆಲ ಆಚರಣೆಗಳು, ದೋಷಗಳು ಏಕೆ ಬದಲಾಗಲಿಲ್ಲ ಎಂಬುದೇ ಯಕ್ಷ ಪ್ರಶ್ನೆ.

ಪ್ರಸ್ತುತ ಸಾಮಾಜಿಕ ಸಂದರ್ಭ ಸಮಸ್ಯೆಗಳ ಸುಳಿಯಲ್ಲಿ ಮುಳುಗಿ ಹೋಗಿದೆ. ಜಾತಿ ಜಗಳ, ಅಸಮಾನತೆ, ಪ್ರತ್ಯೇಕತೆ, ಸ್ತ್ರೀ ಶೋಷಣೆ, ಅಂದಾಭಿಮಾನದಂತಹ ಜ್ವಲಂತ ಸಮಸ್ಯೆಗಳು ಈಗ ಮತ್ತಷ್ಟು ಉರಿಯತೊಡಗಿವೆ. ಧರ್ಮವನ್ನು, ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ಅನೇಕರು ಜ್ವಲಂತ ಸಮಸ್ಯೆಗಳ ಮರುಹುಟ್ಟಿಗೆ ಕಾರಣರಾಗಿದ್ದಾರೆ. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಅನೇಕ ಚಿಂತಕರ ಸಿದ್ಧಾಂತಗಳ ಮೂಲಕ ಇತಿಹಾಸದ ಗತಿಯನ್ನು ಬದಲಿಸುವುದರಲ್ಲಿ ಯಶಸ್ವಿಯಾದರು. ಅಂತಹವರಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಪೆರಿಯಾರ್ ಇವರೆಲ್ಲರೂ ಇತಿಹಾಸದ ಗತಿಯನ್ನು ಬದಲಿಸಲು ಹೆಣಗಿದ ಚೇತನಗಳು ತಮ್ಮ ಇಡೀ ವೈಯಕ್ತಿಕ ಬದುಕನ್ನು ಅದಕ್ಕಾಗಿ ಸಮರ್ಪಿಸಿಕೊಂಡರು. ಅವರ ಕಾರ್ಯ ಮತ್ತು ವಿಚಾರಗಳು ಇಂದಿಗೂ ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ಬುದ್ಧನ ಜೀವನ ಪ್ರೀತಿ, ಬಸವಣ್ಣನ ನಿಷ್ಠುರತೆ ಮತ್ತೆಮತ್ತೆ ನಮ್ಮ ಚಿಂತನೆಯ ಮೂಸೆಯಲ್ಲಿ ಮೂಡಿ ಬಂದಾಗ ಹೊಸ ಬೆಳಕು ಕಾಣಬಹುದಾಗಿದೆ.

ಬುದ್ಧ, ಬಸವ, ಅಂಬೇಡ್ಕರ್ ಒಂದು ಸುಂದರ ಸಮಾಜ ನಿರ್ಮಿಸಲು ತಮ್ಮ ಇಡೀ ಬದುಕನ್ನು ಸಮರ್ಪಣ ಮಾಡಿದ ಮಹಾತ್ಮರು. ಈ ಚರಿತ್ರೆ ಪುರುಷರ ಜೀವನ, ಸಿದ್ಧಾಂತ, ಸಾಧನೆ -ಸಿದ್ಧಿಗಳತ್ತ ಗಮನಹರಿಸಿ, ನಿರಂತರ ಪರಿವರ್ತನಾಶೀಲ ಸಮಾಜದ ಅಭ್ಯುದಯಕ್ಕೆ ಅವರು ನೀಡಿದ ಕೊಡುಗೆಯನ್ನು ಅಧ್ಯಯನ ಮಾಡುತ್ತ ಸಮಕಾಲೀನ ಜನರ ಗಮನ ಸೆಳೆದು, ಚಿಂತನೆಗೆ ಹಚ್ಚುವುದು ಈ ಅಧ್ಯಯನದ ಉದ್ದೇಶ.

ಬುದ್ಧ ರಾಜಮನೆತನದಲ್ಲಿ ಹುಟ್ಟಿ ರಾಜವೈಭವವನ್ನು ತಿರಸ್ಕರಿಸಿದರೆ, ಬಸವಣ್ಣ ರಾಜಸತ್ತೆಯಲ್ಲಿದ್ದುಕೊಂಡೇ ಅದನ್ನು ನಿರ್ಲಕ್ಷಿಸಿದ. ಬುದ್ಧನ ದಯೆ, ಬಸವಣ್ಣನಲ್ಲಿ ಧರ್ಮವಾಗಿ ಪಲ್ಲವಿಸಿದರೆ, ಬಸವಣ್ಣನ ದಲಿತ ವಿಮೋಚನಾ ಚಳುವಳಿ ಅಂಬೇಡ್ಕರ್‌ರಲ್ಲಿ ಚಿಗುರೊಡೆದು ನಿಲ್ಲುತ್ತದೆ. ಈ ದೇಶದಲ್ಲಿ ಬುದ್ಧ-ಬಸವ-ಅಂಬೇಡ್ಕರ್ ಇವರೆಲ್ಲ ಹೊಸ ವ್ಯವಸ್ಥೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಿದವರಾಗಿದ್ದಾರೆ.[4] ಸರ್ವ

ಸಮಾನತೆ ಹಾಗೂ ಸುಭದ್ರ ಸಮಾಜವನ್ನು ಸೃಷ್ಟಿಸಲು ಹೋರಾಡಿದ ಮಾನವತಾವಾದಿಗಳು ಎನಿಸಿಕೊಂಡಿದ್ದಾನೆ. ಹಾಗೆಯೇ ಆಯಾ ಕಾಲದ ಜನ ವರ್ಗದ ಸಮಸ್ತ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬದುಕಿನ ಮೌಲ್ಯಗಳು ಯಾವ ರೀತಿಯಲ್ಲಿದ್ದವು. ಇವರ ವಿಚಾರಗಳು ಆಯಾ ಕಾಲದ ಜನ ವರ್ಗದ ಜೀವನವನ್ನು ಉತ್ಕರ್ಷಕ್ಕೆ ಕೊಂಡ್ಯೊಯಲು ಬುದ್ಧ-ಬಸವ-ಅಂಬೇಡ್ಕರ್ ಹೇಗೆ ಹೋರಾಡಿದರು ಎಂಬುದನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ, ಹೊಸ ತತ್ವ ಚಿಂತನೆಗಳನ್ನು ಮಂಡಿಸಿ ಜನರ ಬಾಳಿಗೆ ಬೆಳಕಾದ ಬುದ್ಧನನ್ನು ವಿಷ್ಣುವಿನ ಅವತಾರವೆಂದು, ಬಸವಣ್ಣನವರನ್ನು ನಂದಿಯ ಅವತಾರವೆಂದು ಮನುಸ್ಮೃತಿ ವಿರೋಧಿಸಿದ ಅಂಬೇಡ್ಕರ್‌ರವರನ್ನು ಆಧುನಿಕ ಮನು ಎಂದು ಕರೆದರು. ಪುನಃ ಇವರನ್ನು ವೈದಿಕಶಾಹಿಗೆ ಬಿಗಿಯಲು ಇಂದು ಪ್ರಯತ್ನಿಸಲಾಗುತ್ತಿದೆ. ಅಲ್ಲದೇ ವ್ಯಕ್ತಿ ಪೂಜೆ, ಮೂರ್ತಿ ಪೂಜೆ, ಮೌಢ್ಯಗಳನ್ನು ವಿರೋಧಿಸಿದ ಈ ಮಾನವತಾವಾದಿಗಳ ಮೂರ್ತಿಗಳನ್ನು ನಿರ್ಮಿಸಿ ರಸ್ತೆಯಲ್ಲಿ ನಿಲ್ಲಿಸಿ, ಅವರ ತತ್ವ ಚಿಂತನೆಗಳನ್ನೇ ಗಾಳಿಗೆ ತೂರಿ, ಕೇವಲ ಪೂಜೆ, ಪುರಸ್ಕಾರ, ಜಯಂತಿ, ಮೆರವಣಿಗೆಗಳ ಮೂಲಕ ವೈದಿಕ ಪರಂಪರೆಯನ್ನು ಮುಂದುವರೆಸುವ ಪ್ರಯತ್ನ ಇಂದು ನಡೆಯುತ್ತಲಿದೆ. ಇದು ಸಮಾಜದ ದ್ವಂದ್ವ ನೀತಿಯ ಅಂಧಾನುಕರಣೆಯ ದ್ಯೋತಕವಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಈ ಮಾನವತಾವಾದಿ ಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡಿರುವ ಕೆಲವರು ಜನರ ದಾರಿ ತಪ್ಪಿಸುತ್ತಿದ್ದಾರೆ. ಈ ಪ್ರಯತ್ನಗಳು ಪ್ರಜ್ಞಾಪೂರ್ವಕ ಹುನ್ನಾರವೋ ಎಂಬುದನ್ನು ಎಚ್ಚರದಿಂದ ಗಮನಿಸಬೇಕಾಗಿದೆ. ನಮ್ಮ ಪರಂಪರೆಯ ಕಂದಾಚಾರಗಳನ್ನು ಪ್ರತಿಭಟಿಸಿ ನಿಂತು ತಮ್ಮ ಯುಗ ಧರ್ಮಕ್ಕನುಗುಣವಾದ ಹೊಸವಿಚಾರ ಪ್ರಣಾಳಿಯನ್ನು ನಿರೂಪಿಸಿದವರಲ್ಲಿ ಬುದ್ಧ-ಬಸವ-ಅಂಬೇಡ್ಕರ್ ಪ್ರಮುಖರಾಗಿದ್ದಾರೆ.

ಬುದ್ಧ-ಬಸವ-ಅಂಬೇಡ್ಕರ್ ಇವರನ್ನು ಕುರಿತು ಅಧ್ಯಯನ ಸಮಾಜದ ಪುನರ್‌ರಚನೆಯ ದೃಷ್ಟಿಯಿಂದ, ಇತಿಹಾಸ ಮರೆತು ಬದುಕುತ್ತಿರುವ ಸಮಾಜಕ್ಕೆ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸಲು, ಆ ಕುರಿತು ಚಿಂತಿಸಲು, ಸೂಕ್ತವಾದದ್ದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು, ಹಲವು ದೃಷ್ಟಿಯಿಂದ ಈ ಅಧ್ಯಯನ ಅವಶ್ಯವೆನಿಸುತ್ತದೆ. ಅಲ್ಲದೇ ಬುದ್ಧ-ಬಸವ-ಅಂಬೇಡ್ಕರ್‌ರವರು ನಡೆಸಿದ ಸಾಮಾಜಿಕ, ಧಾರ್ಮಿಕ, ರಾಜಕೀಯ-ಸಾಂಸ್ಕೃತಿಕ-ಸಂಘರ್ಷದ ತಾತ್ವಿಕ ಧೋರಣೆಗಳನ್ನು ಆ ಕುರಿತು ಚಿಂತನ-ಮಂಥನಗಳ ಮೂಲಕ ಅವರ ಪ್ರತಿಭಟನಾ ಧೋರಣೆ ಹಾಗೂ ಬೌದ್ಧಿಕ ಉನ್ನತಿಯನ್ನು ಅರಿತುಕೊಂಡು, ಅಂತಹ ಹೋರಾಟದ ಅಗತ್ಯ ಸಮಕಾಲೀನ ಸಂದರ್ಭದಲ್ಲಿ ಅತ್ಯಂತ ಅವಶ್ಯಕವೆಂಬ ಆಶಯವನ್ನು ಈ ಅಧ್ಯಯನದಲ್ಲಿ ಆಶಿಸಲಾಗಿದೆ.

1.2) ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ :

ಜನ ವಿರೋಧಿಯಾಗಿದ್ದು, ವೈದಿಕ ಪರಂಪರೆಯನ್ನು, ಅದರ ಮೌಲ್ಯಗಳನ್ನು ಪ್ರತಿಭಟಿಸಿ, ಜನರ ಪರವಾದ ಸಾಮಾಜಿಕ-ಸಾಂಸ್ಕೃತಿಕ ಪರಿವರ್ತನೆಗೆ ಕಾರಣರಾದ ಬುದ್ಧ-ಬಸವ-ಅಂಬೇಡ್ಕರ್‌ರವರನ್ನು ಕುರಿತಂತೆ ಅಧ್ಯಯನ ಮಾಡುವುದು ಹಾಗೂ ತೌಲನಿಕವಾಗಿ ನೋಡುವುದು ತುಂಬಾ ಕುತೂಹಲ ಪೂರ್ಣವಾದ ವಿಷಯವಾಗಿ ಗಮನ ಸೆಳೆಯುತ್ತದೆ. ಚಾರಿತ್ರಿಕವಾಗಿ ಅಂದಂದಿನ ಕಾಲಘಟ್ಟದಲ್ಲಿ ಈ ಮಹನೀಯರು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಇತ್ಯಾದಿ ಕ್ಷೇತ್ರಗಳಲ್ಲಿ ಸಂಘಟನಾತ್ಮಕವಾಗಿ ಕಾರ್ಯ ನಿರ್ವಹಿಸದಿದ್ದಲ್ಲಿ,

ಇಂದು ವೈದಿಕ ಪುರೋಹಿತಶಾಹಿ ವರ್ಗವನ್ನು ತಾತ್ವಿಕವಾಗಿ ಎದುರಿಸಲು, ಅದರೊಂದಿಗೆ ಸೆಣಸುವುದು ಸುಲಭವಾಗಿರಲಿಲ್ಲ. ಬುದ್ಧ-ಬಸವ-ಅಂಬೇಡ್ಕರ್‌ರವರು ಕೇವಲ ಸಾಧಕರು, ಹೋರಾಟಗಾರರು ಅಷ್ಟೇ ಆಗಿರಲಿಲ್ಲ, ಅವರು ಮಾನವೀಯ ಹಿತಚಿಂತಕರು, ಪ್ರಜ್ಞಾವಂತರೂ, ಸಮ ಸಮಾಜದ ಕನಸು ಕಂಡವರು. ಅವರ ಸಾಧನೆ-ಹೋರಾಟ ಇವೆಲ್ಲವುಗಳನ್ನು ಗುರುತಿಸುತ್ತ ಚಾರಿತ್ರಿಕವಾಗಿ ಅರಿಯುವ ಉದ್ದೇಶ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ ;

1. ಬುದ್ಧ ಪೂರ್ವದ ಸ್ಥಿತಿಗತಿ. ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಬೌದ್ಧಧರ್ಮದ ಪ್ರಸಾರ, ಅದರ ಪ್ರಭಾವ ಕುರಿತು ಈ ಅಧ್ಯಯನ ವಿಶ್ಲೇಷಿಸುತ್ತದೆ.
2. ಪ್ರತಿಭಟನಾ ಧರ್ಮವಾಗಿ ಬೆಳೆದು ಬಂದ ಬೌದ್ಧಧರ್ಮದ ತತ್ವ, ಸಿದ್ಧಾಂತ, ಕಾರ್ಯತಂತ್ರ, ಸಮಾನತೆ ಸಾಧಿಸಲು ನಡೆಸಿದ ಪ್ರಯತ್ನ ಕುರಿತು ವಿಶ್ಲೇಷಿಸುತ್ತದೆ.
3. ಕರ್ನಾಟಕದ ಮಧ್ಯಕಾಲೀನ ಸ್ಥಿತಿಗತಿಗಳ ಅಧ್ಯಯನ, ಬಸವಪೂರ್ವ ಯುಗದ ಸ್ಥಿತಿಗತಿ ಕುರಿತು, ಬಸವ ತತ್ವಗಳನ್ನು ಕುರಿತು ಈ ಅಧ್ಯಯನ ವಿಶ್ಲೇಷಿಸುತ್ತದೆ.
4. ಬಸವಣ್ಣನವರ ಪ್ರತಿಭಟನಾತ್ಮಕ ಹೋರಾಟದ ಪ್ರಭಾವ, ಪರಿಣಾಮ, ಕೆಳವರ್ಗದ ಮೇಲೆ ಬೀರಿದ ಪ್ರಭಾವಗಳನ್ನು ಕುರಿತು ವಿಶ್ಲೇಷಿಸುತ್ತದೆ.
5. ಅಂಬೇಡ್ಕರ್ ಪೂರ್ವದ ಸ್ಥಿತಿಗತಿ ಹಾಗೂ ಭಾರತದಲ್ಲಿ ಆರಂಭಗೊಂಡ ಸಾಮಾಜಿಕ ಸುಧಾರಣೆಯ ಪ್ರಯತ್ನ. ಅಂಬೇಡ್ಕರ್ ಜೀವನ ಸಾಧನೆಗಳ ಕುರಿತು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.
6. ಅಂಬೇಡ್ಕರ್ ಸಮಕಾಲೀನ ಸಂದರ್ಭ ಮತ್ತು ಅವರು ಬೌದ್ಧಧರ್ಮದೆಡೆಗೆ ಗಮನ ಹರಿಸಿ ಮತಾಂತರಗೊಂಡ ಸಂದರ್ಭವನ್ನು ಕುರಿತು ವಿಶ್ಲೇಷಿಸುತ್ತದೆ.
7. ಅಂಬೇಡ್ಕರ್‌ರವರ ಹೋರಾಟದ ವಿವಿಧ ಮಜಲುಗಳು ಹಾಗೂ ಸಾಮಾಜಿಕ ನ್ಯಾಯ, ಸಾಮಾಜಿಕ ಸಮಾನತೆಗಾಗಿ ಅವರು ರೂಪಿಸಿದ ಕಾರ್ಯ ತಂತ್ರ ಕುರಿತು ವಿಶ್ಲೇಷಿಸಲಾಗಿದೆ.
8. ಬೌದ್ಧಧರ್ಮ ಹಾಗೂ ವೀರಶೈವಧರ್ಮಗಳು ದಲಿತರ ಬದುಕಿನಲ್ಲಿ ಮಾಡಿದ ಸಾಮಾಜಿಕ, ಸಾಂಸ್ಕೃತಿಕ ಪರಿವರ್ತನೆಗಳ ಕುರಿತು ವಿಶ್ಲೇಷಿಸಲಾಗಿದೆ.
9. ಬುದ್ಧ, ಬಸವ, ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ನೆಲೆಗಳು, ಅವುಗಳ ಪ್ರಭಾವ ಇವುಗಳಿಗೆ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಇಂದು ಬುದ್ಧ, ಬಸವ, ಅಂಬೇಡ್ಕರ್ ಜೀವನ, ಅವರ ವಿಚಾರಧಾರೆ ಸಮಾಜದ ಎಲ್ಲಾ ವರ್ಗದ ಜನರ ಮೇಲೆ ಪ್ರಭಾವ ಬೀರಿದ್ದನ್ನು ಕಾಣಬಹುದಾಗಿದೆ. ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅವರ ವಿಚಾರಗಳನ್ನು, ದಲಿತ ವಿಮೋಚನಾ ಮಾದರಿಗಳನ್ನು, ಕಾರ್ಯತಂತ್ರಗಳನ್ನು ವ್ಯಾಪಕವಾಗಿ ಅಧ್ಯಯನ ಮಾಡಲಾಗುತ್ತಿದೆ. ಅನೇಕ ವಿಶ್ವವಿದ್ಯಾಲಯಗಳ ಬೌದ್ಧ ಅಧ್ಯಯನ ಪೀಠ, ಬಸವ ಅಧ್ಯಯನ ಪೀಠ, ಅಂಬೇಡ್ಕರ್ ಅಧ್ಯಯನ ಪೀಠಗಳನ್ನು ಪ್ರಾರಂಭಿಸಿ, ಬೌದ್ಧಿಕ ಸಂವಾದ, ಚಿಂತನಗೋಷ್ಠಿ, ವಿಚಾರ ಸಂಕೀರಣಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿಶ್ವದಲ್ಲಿ ಇಂದು ಬೌದ್ಧಧರ್ಮದ ಕುರಿತು ಅಧ್ಯಯನಗಳು ತುಂಬ ವ್ಯಾಪಕವಾದ ವಿಶಾಲತೆಯನ್ನು ಪಡೆದುಕೊಳ್ಳುತ್ತಿವೆ. ಸ್ವಂತಃ ಅಂಬೇಡ್ಕರ್‌ರವರೇ ತಾವು ಅನುಸರಿಸುವ, ಒಪ್ಪುವ ಬೌದ್ಧಧರ್ಮ ಹೀನಾಯಾನವೂ ಅಲ್ಲದ ಮಹಾಯಾನವೂ ಅಲ್ಲ. ಆದರೆ ಬುದ್ಧನ ಬೋಧನೆಗಳೇ ಕೇಂದ್ರವಾಗಿರುವ ನವಯಾನ (ಧನಂಜಯ ಕೀರ್, 1971) ಎಂದು ಹೇಳುತ್ತಾರೆ. ಅಂಬೇಡ್ಕರ್,

ಬೌದ್ಧಧರ್ಮ, ದಲಿತ ಚಳುವಳಿ ಕುರಿತು ವ್ಯಾಪಕವಾಗಿ ಅಧ್ಯಯನ ಮಾಡುತ್ತಿರುವ ಸಮಾಜ ವಿಜ್ಞಾನಿಗಳು ಸಹಿತ ಅಂಬೇಡ್ಕರ್ ಅವರ ಬೌದ್ಧಧರ್ಮವನ್ನು ನವಯಾನವೆಂದೇ ಗುರುತಿಸುತ್ತಾರೆ. ಮಹಾಯಾನಿಗಳು ಅರ್ಥೈಸುವ ಕರ್ಮಸಿದ್ಧಾಂತ, ಪುನರ್ಜನ್ಮ ಕಲ್ಪನೆಗಳಲ್ಲಿ ಅಂಬೇಡ್ಕರ್‌ರವರಿಗೆ ಸಮ್ಮತಿ ಇರಲಿಲ್ಲ. ಆದ್ದರಿಂದ ಅವರದು ಖಂಡಿತವಾಗಿ ಹೊಸ ಬೌದ್ಧಧರ್ಮ ಎಂದೇ ಇತ್ತೀಚಿನ ಅಧ್ಯಯನಗಳಲ್ಲಿ ಬಳಕೆ ಮಾಡುತ್ತಿದ್ದಾರೆ. (ರೋಡ್ರಿಗ್ಸ್‌ವಲೇರಿಯನ್: 2000, ಗೇಲ್‌ಪೊಂವೆಡ್ತ :2003, ಕ್ರಿಸ್ಟೋಫರ್ ಕ್ವೀನ್ :2000, ನೀರಾ ಬುರ್ರಾ :2004) ಅಂಬೇಡ್ಕರ್‌ರವರು ಬೌದ್ಧಧರ್ಮವನ್ನು ಶೋಷಿತ ವ್ಯಕ್ತಿಯ ಹಾಗೂ ಸಮುದಾಯಗಳ ವಿಮೋಚನೆಯ ಮಾರ್ಗವಾಗಿ ಗ್ರಹಿಸಿದರು. ಗೇಲ್ ಓಂವೆಡ್ತ್ ಅವರು ಗುರುತಿಸುವಂತೆ ಬೌದ್ಧಧರ್ಮವನ್ನು ವ್ಯಕ್ತಿಯ ಮತ್ತು ಜಗತ್ತಿನ ಪುನರ್ ನಿರ್ಮಾಣದ ತಳಹದಿಯಾಗಿ ಗ್ರಹಿಸಿದರು. ಬೌದ್ಧಧರ್ಮ ಹೆಚ್ಚಾಗಿ ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ ಬದಲಾವಣೆಯನ್ನು ತರುವಲ್ಲಿ ಹೆಚ್ಚು ಸಾಧ್ಯತೆಗಳನ್ನು ಹೊಂದಿದೆ. (ಗೇಲ್ ಓಂವೆಡ್ತ್2003) ಎಂದು ಅಭಿಪ್ರಾಯ ಪಡುತ್ತಾರೆ.

ಹೀಗೆ ವ್ಯಕ್ತಿ ಪ್ರಾಥಮಿಕ ಘಟಕವಾಗಿ ವ್ಯಕ್ತಿಗೆ ಘನತೆಯನ್ನು ಕೊಟ್ಟು ಆ ಮೂಲಕ ವ್ಯಕ್ತಿ ಸಾಮಾಜಿಕವಾಗಿ, ಜಾಗತಿಕವಾಗಿ ಪ್ರಸ್ತುತವಾಗುವ ವಿಶಿಷ್ಟ ಕಲ್ಪನೆಗಳನ್ನು ಬುದ್ಧ ಹಾಗೂ ಬಸವನ ಬೋಧನೆಗಳು ಒಳಗೊಂಡಿವೆ. ಈ ಹಿನ್ನೆಲೆಯಲ್ಲಿಯೇ ಬೌದ್ಧಧರ್ಮ ಹಾಗೂ ಬುದ್ಧ ಹಾಗೂ ಬಸವನ ಬೋಧನೆಗಳು ಒಳಗೊಂಡಿವೆ. ಈ ಹಿನ್ನೆಲೆಯಲ್ಲಿಯೇ ಬೌದ್ಧಧರ್ಮ ಹಾಗೂ ವೀರಶೈವಧರ್ಮಗಳು ಬೆಳೆದು ಬಂದಿವೆ. ಅಂಬೇಡ್ಕರ್‌ರವರು ಬೌದ್ಧಧರ್ಮದ ನವಯಾನ ಮಾರ್ಗಗಳನ್ನು ಆಯ್ದುಕೊಂಡರು. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಜಗತ್ತಿಗೆ ಬುದ್ಧ, ಬಸವ, ಅಂಬೇಡ್ಕರ್‌ರವರ ಕರುಣೆ, ಸಮತೆ, ಶಾಂತಿಯ ಸೂತ್ರಗಳು ಪ್ರಚಾರಗೊಳ್ಳಬೇಕಾದುದರ ಹಿನ್ನೆಲೆಯನ್ನು ಈ ಅಧ್ಯಯನ ಒಳಗೊಂಡಿದೆ. ಹೀಗಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ವ್ಯಕ್ತಿಯನ್ನು ಬೌದ್ಧಸಂಸ್ಕೃತಿ ಹಾಗೂ ಬಸವಸಂಸ್ಕೃತಿ ಮೂಲ ಘಟಕವಾಗಿ ವಿಶ್ಲೇಷಿಸುತ್ತಲೇ ಒಟ್ಟು ದಲಿತವಿಮೋಚನೆಯ ಸಂಕೀರ್ಣತೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಬಳಕೆಯಾಗಿರುವ ಪ್ರತಿಭನಾತ್ಮಕ ನೆಲೆ ಎಂಬ ಪದದ ಬಳಕೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವಿಮೋಚನೆಯ ಪ್ರಕ್ರಿಯೆಯ ಒಂದು ಭಾಗವಾಗಿ ಈ ಅಧ್ಯಯನದಲ್ಲಿ ಬಳಕೆಯಾಗಿರುತ್ತವೆ ಎಂಬುದು ಈ ಅಧ್ಯಯನದ ಒಂದು ಮಿತಿಯಾಗಿ, ವ್ಯಾಪ್ತಿಯಾಗಿ ಪ್ರಸ್ತುತ ಪಡಿಸಲಾಗಿದೆ.

ಈ ನಾಡಿನ ಪ್ರಗತಿ ಪರ ಶಕ್ತಿಗಳಿಗೆ, ವ್ಯಕ್ತಿಗಳಿಗೆ ಬಸವಣ್ಣ ಒಂದು ಮಾರ್ಗಸೂಚಿ ಸಂಕೇತ. ಈ ಮಾರ್ಗಕ್ಕೆ ಕೊನೆ ಎಂಬುದಿಲ್ಲ. ಬಸವಣ್ಣನ ಹೊಟ್ಟೆಯಲ್ಲಿ ಬುದ್ಧನಿದ್ದ ಹಾಗೆ ಬುದ್ಧ ಬಸವಣ್ಣ ಇಬ್ಬರೂ ಅಂಬೇಡ್ಕರರ ಹೊಟ್ಟೆಯಲ್ಲಿದ್ದಾರೆ. ಕ್ರಾಂತೀಯ ಈ ಪ್ರಕ್ರಿಯೆಯನ್ನು ನಾವು ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕು.[5] ಇಂತಹ ಗಂಭೀರ ಆಲೋಚನೆಯೊಂದಿಗೆ ಬುದ್ಧ-ಬಸವ-ಅಂಬೇಡ್ಕರ್‌ರವರನ್ನು ಅಧ್ಯಯನ ಮಾಡುತ್ತ ನಮ್ಮ ವರ್ತಮಾನದ ವಾಸ್ತವಗಳಿಗೆ ಅವರ ಚಿಂತನೆಗಳನ್ನು ಅಳವಡಿಸಿ ಕೊಳ್ಳಬೇಕಾಗಿದೆ. ಪ್ರತಿಭಟನಾ ಸಿದ್ಧಾಂತದ ನೆಲೆಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಹೋರಾಟದ ನಿಲುವುಗಳನ್ನು ಹಾಗೂ ವೈಚಾರಿಕ ತತ್ವ ಚಿಂತನೆಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡಿ, ವ್ಯವಸ್ಥೆಯ ಪರಿವರ್ತನೆಗಾಗಿ ನಡೆದಿರುವ ಪ್ರಯತ್ನ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಪ್ರತಿಭಟನೆಯ ನಿರಂತರತೆಯನ್ನು ಕುರಿತು ವಿಶ್ಲೇಷಣಾತ್ಮಕ ವಿವರಣೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ.

ಥಾಮಸ್ ಕಾರ್ಲೈಲ್‌ರ ಪ್ರಕಾರ "ಇತಿಹಾಸವು ಮಹಾನ್‌ವ್ಯಕ್ತಿಗಳ ಒಂದು ಜೀವನ ಚರಿತ್ರೆಯಾಗಿದೆ" ಈ ಹೇಳಿಕೆ ಅಕ್ಷರಷಃ ಬುದ್ಧ, ಬಸವ, ಅಂಬೇಡ್ಕರ್‌ರವರಿಗೆ ಅನ್ವಯವಾಗುತ್ತದೆ. ಏಕೆಂದರೆ ಈ ಮೂವರು ಆಯಾ ಕಾಲಘಟ್ಟದಲ್ಲಿ ಭಾರತದ ಚರಿತ್ರೆಯ ದಿಕ್ಕನ್ನೇ ಬದಲಿಸಲು ಯತ್ನಿಸಿದರು. ಅಂಬೇಡ್ಕರ್ ಈ ನಾಡಿನ ಶೋಷಿತರ ಧ್ವನಿ, ಬುದ್ಧ-ಬಸವಣ್ಣನವರ ಸಾಮಾಜಿಕ ಚಳುವಳಿ ಮತ್ತು ಸಮಾನತೆಯ ಪರಿಕಲ್ಪನೆಯನ್ನು ಸಂವಿಧಾನ ರಚನೆಯ ಮೂಲಕ ಸಾಕಾರಗೊಳಿಸಿದ ಅಪ್ರತಿಮ ಸಾಧಕ ಅವರಾಗಿದ್ದಾರೆ. ಬುದ್ಧ-ಬಸವ-ಅಂಬೇಡ್ಕರ್ ಧರ್ಮನಿರಪೇಕ್ಷ ಸಮಾಜ ಸ್ಥಾಪನೆಗೆ ಹಾಗೂ ಜಾತ್ಯಾತೀತತೆಯನ್ನು ಬಿತ್ತಿಬೆಳೆಯಲು ಶ್ರಮಿಸಿದರು. ಭ್ರಷ್ಟಾಚಾರ, ಮತಾಂಧತೆ, ಜಾತೀಯತೆಗಳೇ ತಲೆ ಎತ್ತಿ ನಿಂತಿರುವ ಈ ಹೊತ್ತಿನಲ್ಲಿ ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಹಾಗೂ ಜನಪರ ಶಕ್ತಿಗಳಿಗೆ ಹಿನ್ನಡೆ ಉಂಟಾಗಿದೆ. ಇಂಥ ಹೊತ್ತಿನಲ್ಲಿ ನಮ್ಮನ್ನು ಮುನ್ನಡೆಸುವ ತತ್ವಗಳೆಂದರೆ, ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತತೆ, ಸಮಾಜವಾದ ಮುಂತಾದವುಗಳು ನಮಗೆ ಸ್ಫೂರ್ತಿದಾತರಾಗಬಲ್ಲವರೆಂದರೆ, ಬುದ್ಧ, ಬಸವ, ಕಬೀರ್, ಫುಲೇ, ಗಾಂಧೀ, ಜೆ.ಪಿ. ಪೆರಿಯಾರ್, ಅಂಬೇಡ್ಕರ್, ಲೋಹಿಯಾ ಮುಂತಾದ ಅದಮ್ಯ ಚೇತನಗಳು.

ಬುದ್ಧ-ಬಸವ-ಅಂಬೇಡ್ಕರ್ ಇವರು ಯಾವ ವೇದಶಾಸ್ತ್ರ-ಆಗಮಗಳು ಈ ದೇಶವನ್ನು ದಿಕ್ಕು ತಪ್ಪಿಸಿದ್ದವೋ ಅವುಗಳನ್ನು ಪ್ರತಿಭಟಿಸಿದರು. ವರ್ಣ, ವರ್ಗ- ಜಾತಿಗಳನ್ನು ಸೈದ್ಧಾಂತಿಕವಾಗಿ ತಿರಸ್ಕರಿಸಿದರು. ಅಸ್ಪೃಶ್ಯತೆ ಈ ದೇಶದ ಒಂದು ಜ್ವಲಂತ ಸಮಸ್ಯೆ. ಪಶು-ಪಕ್ಷಿ-ಪ್ರಾಣಿಗಳೊಂದಿಗೆ ಮುದ್ದಾಡುವ ಮನುಷ್ಯ ತನ್ನಂತೆಯೇ ಇರುವ ಮನುಷ್ಯನ್ನನು "ಅಸ್ಪೃಶ್ಯ" ನನ್ನಾಗಿ ದೂರ ಇಟ್ಟಿದ್ದು, ಈ ವ್ಯವಸ್ಥೆಯ ದೊಡ್ಡ ದುರಂತ. ಈ ನಾಡಿನಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಎಲ್ಲರೂ ಮನುಷ್ಯರಂತೆ ಬಾಳಲು ಸೈದ್ಧಾಂತಿಕ ನೆಲೆಯಲ್ಲಿ ಹೋರಾಟ ಮಾಡಿದವರು ಬುದ್ಧ-ಬಸವ-ಅಂಬೇಡ್ಕರ್. ಇಂದಿಗೂ ಅಸ್ಪೃಶ್ಯತೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಅಂತೆಯೇ ಅಂದು ಅವರು ಆಲೋಚಿಸಿದ ವಿಚಾರಗಳೆಲ್ಲ ಇಂದಿಗೂ ಪ್ರಸ್ತುತ ಎನಿಸುತ್ತವೆ. ಮೂಲಭೂತ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಉಂಟಾದಾಗ ಪ್ರತಿಭಟನೆಯ ಅಲೆ ಸಹಜವಾಗಿಯೇ ಏಳುತ್ತವೆ. ನಮ್ಮವರೆಗೆ ಹರಿದು ಬಂದಿರುವ ಚರಿತ್ರೆ ಪ್ರಧಾನವಾಗಿ ಸೂಚಿಸುವುದು ಇದನ್ನೇ. ದಮನಿಸುವ ಶಕ್ತಿಗಳೊಡನೆ ಶಾಮೀಲಾಗಿರುವವರು ದಮನಕ್ಕೊಳಗಾದವರು ಎಚ್ಚೆತ್ತುಕೊಳ್ಳುವತನಕ ನಿರಾತಂಕವಿರಬಹುದು. ಈಗಿನ ಪರಿಸ್ಥಿತಿಯನ್ನು ಇಂಥಾ ನೆಲೆಯಲ್ಲೇ ವಿಶ್ಲೇಷಿಸಬೇಕಾಗುತ್ತದೆ.[8]

ಯಾವ ಸಮಾಜದಲ್ಲಿ ಅಸಮಾನತೆ ಇರುತ್ತದೆಯೋ ಅಲ್ಲಿ ಶೋಷಣೆ ಇರುತ್ತದೆ. ಶೋಷಣೆ, ವೇದನೆ, ಯಾತನೆಗೀಡು ಮಾಡಿ ಕೊನೆಗೆ ಅದು ದುಃಖಕ್ಕೆ ಕಾರಣವಾಗುತ್ತದೆ. ಇಂತಹ ಅಸಮಾನತೆ ಹೋಗಲಾಡಿಸಲು ಅವಮಾನ, ಹೋರಾಟ, ಅನಿವಾರ್ಯ. ಬುದ್ಧ-ಬಸವ-ಅಂಬೇಡ್ಕರ್ ಅವರು ಶೋಷಣೆಯ ವಿರುದ್ಧ ಧ್ವನಿ ಎತ್ತಿದಾಗಲೆಲ್ಲ ಅವಮಾನಕ್ಕೆ ಒಳಗಾಗಿದ್ದಾರೆ. ಮೊದಲ ಸಾಮಾಜಿಕ ಕ್ರಾಂತಿ ಸಿಂಧೂ ನಾಗರೀಕತೆ ಅವಧಿಯಲ್ಲೇ ಹುಟ್ಟಿಕೊಂಡಿತೆಂಬುದು: ದಸ್ಯು ಅಥವಾ ದಾಸರಂಥಾ ಬುಡುಕಟ್ಟುಗಳ ಜನಾಂಗಗಳು ಜೀತಪದ್ಧತಿಯ ಪ್ರತಿಭಟನೆ ಮತ್ತು ರಕ್ತಪಾತದ ನಂತರ ನಾಶಗೊಂಡುದು ಚರಿತ್ರೆಯಲ್ಲಿ ದಾಖಲಾಗಿದೆ. ಮುಖ್ಯವಾಗಿ ಮಹಿಳೆಯರು ಮತ್ತು ಶೂದ್ರರು ಇಂಥಾ ಹೋರಾಟಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರಿಂದಲೇ, ಚಾತುರ್ವರ್ಣದ ಚರಿತ್ರೆಯೆಂದರೆ ಮಹಿಳೆಯ ಮತ್ತು ಶೂದ್ರರ ಹೋರಾಟದ ಚರಿತ್ರೆಯೇ ಆಗಿದೆ ಎಂಬ ವ್ಯಾಪಕ ಅಭಿಪ್ರಾಯ ವ್ಯಕ್ತಪಟ್ಟಿದೆ. ಬುದ್ಧಪೂರ್ವದ ಯುಗವೆನಿಸಿದ ವೈದಿಕ ಯುಗದಿಂದ ಬ್ರಿಟಿಷ ಪೂರ್ವ ಯುಗದವರೆಗಿನ ಕಥೆಯಾದರೂ ಇದೇ ಜಾತಿವ್ಯವಸ್ಥೆಯನ್ನು

ನಿರಂತರಗೊಳಿಸಲೆತ್ನಿಸಿದ ವೈದಿಕ ಮತ್ತು ಜಾತಿವಿನಾಶವನ್ನು ಸಾಧಿಸಲು ಸತತ ಪ್ರಯತ್ನದಲ್ಲಿ ತೊಡಗಿದ ಅವೈದಿಕ ವರ್ಗಗಳ ನಡುವಣ ಹೋರಾಟಗಾಥೆ.[7] ಈ ನೆಲೆಯಲ್ಲಿ ಅಧ್ಯಯನ ಮಾಡುತ್ತ ಒಂದು ಸಮಾಜದ ಅವನತಿಗೆ ಅಂಧಾನುಕರಣೆ, ಆಡಂಬರ, ಆಲಸ್ಯತನ, ವರ್ಗಭೇದ, ವರ್ಣಭೇದ, ಲಿಂಗಭೇದಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಏರು-ಪೇರುಗಳಿಂದ ಒಂದು ಸಮಾಜದ ವ್ಯವಸ್ಥೆ ಶಿಥಿಲಗೊಂಡು ಅದರ ಬೇರುಗಳು ಸಡಿಲಗೊಳ್ಳುತ್ತವೆ. ಇವಕ್ಕೆಲ್ಲ ಸ್ಪಂದಿಸಿ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಒಂದು ಬಂಡಾಯದ ಮನೋವೃತ್ತಿ ಆಸ್ಫೋಟಗೊಂಡು ವ್ಯಕ್ತಿಯಲ್ಲಿ ಸಾಮಾಜಿಕ ಕಾಳಜಿಯನ್ನುಂಟು ಮಾಡುತ್ತದೆ. ಹೀಗಾಗಿ ಒಂದು ವ್ಯವಸ್ಥಿತ ಸಮಸಮಾಜವನ್ನು ನಿರ್ಮಿಸುವ ಹಂತದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ತಾಳಿದ ವೈಚಾರಿಕ ನಿಲುವು ಅನನ್ಯ.

ದುರ್ಬಲರು, ದಮನಿತರು ಅವಕಾಶ ವಂಚಿತರು, ಅಸಂಘಟಿತರು ಎಲ್ಲರನ್ನೂ ತಬ್ಬಿಕೊಳ್ಳುತ್ತ, ಮಾನವೀಯತೆಯ ಜೀವಜಲದ ಸಿಂಚನಗೈಯ್ಯುತ್ತ ಶ್ರಮಿಸಿದ ಬುದ್ಧ, ಬಸವ, ಅಂಬೇಡ್ಕರ್‌ರವರ ತತ್ವ ಚಿಂತನೆ, ಆದರ್ಶಗಳು ಪ್ರತಿ ಕಾಲಕ್ಕೂ ಅನುಕರಣೀಯ ಹಾಗೂ ಆದರಣೀಯ. ಇಂದಿನ ಭಾರತದ ಸಾಮಾಜಿಕ ವ್ಯವಸ್ಥೆ ಅಖಂಡವಾದುದಲ್ಲ. ಲಿಂಗಭೇದ, ಜಾತಿಭೇದ, ಮತಭೇದ ಹೀಗೆ ಛಿದ್ರವಾಗಿ ಒಡೆದು ಹೋಗಿದೆ. ಇವುಗಳ ನಿವಾರಣೆಗೆ ಈ ಮಹನೀಯರ ತತ್ವಗಳು ಪರಿಹಾರವಾಗಬಲ್ಲವು. ಕ್ರೂರ ವ್ಯವಸ್ಥೆಯನ್ನು ಬುಡಸಮೇತ ಅಲ್ಲಾಡಿಸುವ ಗಟ್ಟಿ ಪ್ರಯತ್ನಗಳು ನಮ್ಮ ಇತಿಹಾಸದುದ್ದಕ್ಕೂ ಕಾಣುತ್ತಿದೆ. ಬುದ್ಧ-ಬಸವ-ಪೆರಿಯಾರ್-ಲೋಹಿಯಾ-ಅಂಬೇಡ್ಕರ್ ಇವರೆಲ್ಲ ಮಾನವೀಯ ಹೋರಾಟದ ಮೂಲಕ ಶೂದ್ರರ, ಅಸ್ಪೃಶ್ಯರೆನಿಸಿಕೊಂಡವರ ಮೂಲಕ್ಕೆ ಸುತ್ತುವರಿದ ರಹಸ್ಯದ ಸಿಕ್ಕು ಬಿಡಿಸಿದವರು. ಆದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ನಮ್ಮ ಸಮಾಜದ ಜಾತಿ ವ್ಯವಸ್ಥೆ ಇನ್ನೂ ಬದಲಾಗಿಲ್ಲ ಜೀವಂತವಾಗಿರಿಸಿಕೊಂಡಿದೆ. ಯಾರು ಜಾತಿವ್ಯವಸ್ಥೆಯ ನಿರ್ಮೂಲನೆಗಾಗಿ ಕಟಿಬದ್ಧರಾಗಿ ಹೋರಾಟ ಮಾಡಿದ್ದಾರೋ ಅವರನ್ನೇ ಜಾತಿ ಸಂಘಟನೆಗಳಿಗೆ ಆದರ್ಶವಾಗಿರಿಸಿಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಅವೈಯಕ್ತಿಕ ದೇವರ ಬಗೆಗಿನ ಈ ಉಪನಿಷತ್ ಸಿದ್ಧಾಂತ ಮತ್ತು ವೈಯಕ್ತಿಕ ದೇವರನ್ನು ಭಕ್ತಿಯಿಂದ ಆರಾಧಿಸುವ ಪದ್ಧತಿಗಳು ಒಟ್ಟನಲ್ಲಿ ಗೊಂದಲಕ್ಕೆ ಕಾರಣವಾಗಿವೆ. ಹೀಗೆ ಪ್ರಾರಂಭವಾದ ಚಿಂತನೆಯೇ ಬಹುಮಟ್ಟಿಗೆ ಕ್ರಾಂತಿಕಾರಕ ಬದಲಾವಣೆಗೆ ಕಾರಣವಾಯಿತು. ಈ ಎಲ್ಲ ಬದಲಾವಣೆಗೆ ಕಾರಣರಾದವರು ಭಾಗವತ ಪಂಥದವರು, ಬೌದ್ಧರು ಹಾಗೂ ಜೈನರು. ಇವರು ಮೊತ್ತ ಮೊದಲಿಗೆ ಗಮನಕ್ಕೆ ಬಂದದ್ದು ಸುಮಾರು ಕ್ರಿ.ಪೂ. ಆರನೇಯ ಶತಮಾನದಲ್ಲಿ. ಪ್ರಾರಂಭದ ಅಭಿಪ್ರಾಯಗಳೆಲ್ಲ ಪರಸ್ಪರ ವಿರೋಧವಾಗಿದ್ದರೂ ಈ ಎಲ್ಲ ಧರ್ಮಗಳ ಸಿದ್ಧಾಂತಗಳೂ ಈ ಅವಧಿಯಲ್ಲಿಯೇ ಅಥವಾ ಹತ್ತಿರ ಹತ್ತಿರ ಈ ವೇಳೆಯಲ್ಲಿಯೇ ಸ್ವತಂತ್ರವಾಗಿ ಬೆಳೆದವು ಹಾಗೂ ಇವುಗಳ ಪ್ರವರ್ತಕರು ನಿಜವಾದ ಚಾರಿತ್ರಿಕ ವ್ಯಕ್ತಿಗಳಾಗಿದ್ದಾರೆಂಬುದನ್ನು ಈಗ ಎಲ್ಲ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಗೌತಮಬುದ್ಧ ಈಗ ಕಾಲ್ಪನಿಕ ಕಥೆಯ ನಾಯಕನಾಗಿ ಉಳಿದಿಲ್ಲ. ಈ ಬುದ್ಧನನ್ನು ಪ್ರಜಾಪ್ರಭುತ್ವವಾದೀ ಶಾಕ್ಯವಂಶದಲ್ಲಿ ಜನಿಸಿದ ಐತಿಹಾಸಿಕ ವ್ಯಕ್ತಿಯಾಗಿ ಭಾವಿಸಲಾಗಿದೆ. ಈ ಕ್ರಾಂತಿಕಾರಕ ಧಾರ್ಮಿಕಪಂಥಗಳ ಉದಯ ಸಂಪ್ರದಾಯಬದ್ಧ ವ್ಯವಸ್ಥೆಯ ಮೇಲೆ ತನ್ನ ಪ್ರತಿಕ್ರಿಯೆ ತೋರಿಸಿ, ಅದರ ಸೂತ್ರಗಳು ಹೆಚ್ಚು ಸಂಘಟಿತವಾದ ಹಾಗೂ ತಾರ್ಕಿಕವಾದ ಸ್ವರೂಪದಲ್ಲಿ ಸೂತ್ರೀಕರಣಗೊಳ್ಳುವಂತೆ ಮಾಡಿತು.[8] ಅಂತಹ ಪ್ರಯತ್ನಗಳೇ ಪ್ರತಿಭಟನೆಯ ರೂಪತಳೆದು, ಜೈನ-ಬೌದ್ಧಧರ್ಮಗಳು ಉದಯವಾದವು. ಬುದ್ಧ ಸಮಾನತೆಯ ತತ್ವಕ್ಕೆ ಪ್ರಾಮುಖ್ಯತೆನೀಡಿ ವರ್ಗ, ವರ್ಣ,

ಜಾತಿಗಳನ್ನು ಕಿತ್ತೆಸೆಯಲು ಪ್ರಯತ್ನಿಸಿದ. ಇಂತಹದೊಂದು ಪ್ರತಿಭಟನೆ 12ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ಕರ್ನಾಟಕದಲ್ಲಿ ಆಸ್ಫೋಟಗೊಂಡು ವೀರಶೈವಧರ್ಮ ಬೆಳೆದು ಬಂದಿತು. ಇಂತಹ ಪ್ರತಿಭಟನೆ ಮುಂದುವರಿದ ಹಂತವಾಗಿ 20ನೇ ಶತಮಾನದಲ್ಲಿ ಅಂಬೇಡ್ಕರ್‌ರವರ ಪ್ರಯತ್ನ ಸಮಾಜ ಪರಿವರ್ತನೆಗಾಗಿ ಪ್ರತಿಭಟಿಸಿ ದಲಿತ ಸೂರ್ಯನೆನಿಸಿಕೊಂಡರು. ಚರಿತ್ರೆಯಲ್ಲಿ ಇವರುಗಳ ಕಾಲ ಬೇರೆ ಬೇರೆ ಸಂದರ್ಭವಾಗಿದ್ದರೂ ಇವರು ಎದುರಿಸಿದ ಸಮಾಜ ಮತ್ತು ಸಮಸ್ಯೆಗಳು ಒಂದೇ ತೆರನಾಗಿದ್ದು, ಆಯಾ ಕಾಲ ಘಟ್ಟದಲ್ಲಿ ಇವರು ಪ್ರತಿಭಟನೆ ಮಾಡಿ ಪರಿವರ್ತನೆ ತರಬಯಸಿದ್ದರಿಂದ ತೌಲನಿಕ, ಚಾರಿತ್ರಿಕ ಅಧ್ಯಯನಕ್ಕೆ ವಿಪುಲ ಅವಕಾಶಗಳಿವೆ.

ಭಾರತೀಯ ವೈದಿಕ ಪರಂಪರೆಯ ತತ್ವಗಳ ವ್ಯಾಖ್ಯಾನವು ಆಳುವವರ ಮತ್ತು ಹೇಳುವವರ (ಬ್ರಾಹ್ಮಣರ) ಅನುಕೂಲ ಸಿಂಧುವಾಗಿ, ಅರ್ಥಕ್ಕಿಂತ ಅಪಾರ್ಥವೇ ಹೆಚ್ಚಾಗಿ, ಬಿಡುಗಡೆಗಿಂತ ಬಂಧನದ ಮಾರ್ಗದರ್ಶನವೇ ಅತಿಯಾಗಿ ಜನಸಾಮಾನ್ಯರ ಸೌಲಭ್ಯಕ್ಕಿಂತ-ಶೋಷಣೆಯೇ ಗುರಿಯಾಗಿದ್ದ ಸಾಮಾಜಿಕ, ರಾಜಕೀಯ, ಆರ್ಥಿಕ ಸಂದರ್ಭಗಳು ನಮ್ಮ ಇತಿಹಾಸದಲ್ಲಿ ಆಗಾಗ ಕಂಡು ಬಂದಿವೆ. ಇಂತಹ ಸಂದರ್ಭದಲ್ಲಿ ಭಾರತೀಯ ಅಧ್ಯಾತ್ಮದ "ಮೂಲ ದರ್ಶನಕ್ಕೆ" ಜನರನ್ನು ಹಚ್ಚುವ ಪ್ರಯತ್ನಕ್ಕೆ ಹೊರಟವರು. ಪ್ರತಿಭಟನೆಯ ಮಾರ್ಗವನ್ನೆ ಹಿಡಿಯಬೇಕಾಗಿತ್ತು. ಈ ಪ್ರತಿಭಟನೆಯ ದಾರಿಯು ಪ್ರತಿ ಬಾರಿಯೂ ಹೊಸ ಧರ್ಮದ ಉದಯಕ್ಕೆ ಹೇತುವಾಯಿತು. ಹೀಗೆ ಸನಾತನಧರ್ಮದ ಗರ್ಭದಿಂದಲೇ ಉದಿಸಿ ಬಂದ ಜೈನ ಮತ್ತು ಬೌದ್ಧಧರ್ಮಗಳು ಸುಮಾರು ಕ್ರಿ.ಪೂ. ಆರನೇ ಶತಮಾನದ ಸಾಮಾಜಿಕ, ಧಾರ್ಮಿಕ ಕ್ರಾಂತಿಗಳಾಗಿ ಉತ್ತರ ಭಾರತದಲ್ಲಿ ಗೋಚರಿಸಿದವು. ವೈದಿಕ ಕರ್ಮಕಾಂಡ ಮತ್ತು ಯಜ್ಞ ಯಾಗಾದಿಗಳೇ ಮೋಕ್ಷಕ್ಕೆ ದಾರಿ ಎಂಬ ಮೂಢನಂಬಿಕೆಗಳಿಂದ ಜನರನ್ನು ಹೊರಗೆಳೆದು ಅಹಿಂಸೆ, ಸಮಾನತೆ, ಚಾರಿತ್ರ್ಯ ಶುದ್ಧಿ ಮುಂತಾದ ಗುಣಗಳ ಮಹತ್ವವನ್ನು ತಿಳಿಸಿ ಸಾಕಷ್ಟು ಜನರ ಬೆಂಬಲ ಪಡೆದು ಸಾಮಾಜಿಕ ಸುಧಾರಣೆಗಳನ್ನು ಮಾಡಿದರು. ಈ ಮತ ಸ್ಥಾಪಕರಾದ ಮಹಾವೀರ ಮತ್ತು ಬುದ್ಧರು ಯುಗಪುರುಷರೆನ್ನಿಸಿದರು.[9]

ಉತ್ತರ ಭಾರತದಲ್ಲಿ ಕಂಡು ಬಂದ ಈ ಬಗೆಯ ಪ್ರಗತಿಶೀಲಕ್ರಾಂತಿಗಳಿಗೆ ಸಂವಾದಿಯಾಗಿ ದಕ್ಷಿಣಭಾರತದಲ್ಲಿ ಮೂಡಿ ಬಂದದ್ದು ಬಸವಯುಗ. ಭಕ್ತಿಭಂಡಾರಿ ಬಸವಣ್ಣನವರು ರಾಜಕೀಯ ವಾಗಿಯೂ, ಸಾಮಾಜಿಕವಾಗಿಯೂ ವರ್ಗೋನ್ನತ ಸ್ಥಾನದಲ್ಲಿದ್ದು, ಕ್ರಾಂತಿಗೆ ಕಾರಣರಾದದ್ದು ವಿಶೇಷವೇ ಸರಿ. ಅನೇಕ ಸಂದರ್ಭದಲ್ಲಿ ಧಾರ್ಮಿಕ, ಅಧ್ಯಾತ್ಮಿಕ ಕ್ರಾಂತಿಯೊಂದಷ್ಟೇ ವಿಶ್ಲೇಷಿಸಲ್ಪಟ್ಟಿರುವ ಬಸವಣ್ಣನವರ ಅಭಿಮಾನವು ನಿಜ ಅರ್ಥದಲ್ಲಿ ಸಾಮಾಜಿಕ-ರಾಜಕೀಯ ಪ್ರತಿಭಟನೆಯ ಮಾರ್ಗವಾಗಿತ್ತೆನ್ನುವುದರಲ್ಲಿ ಅನುಮಾನವಿಲ್ಲ. ಅವರಿಗೆ ಸರ್ವ ಸಮಾನತೆಯ ಹೊಸ ಸಮಾಜವನ್ನು ಕಟ್ಟುವ ಗುರಿಯಿತ್ತು. ಅದಕ್ಕಾಗಿ ಜನರಲ್ಲಿ ಎಚ್ಚರ ಮೂಡಿಸಿ ಸಂಘಟಿಸುವುದು ಅಗತ್ಯವಿತ್ತು.

ಬುದ್ಧ, ಬಸವನ ನಂತರ ದಲಿತರಿಗೆ ಸಾಮಾಜಿಕ ಸ್ಥಾನಮಾನ ತೀರ ನೇರವಾಗಿ ದೊರಕಿಸಿಕೊಡುವಲ್ಲಿ ದುಡಿದ ಅಂಬೇಡ್ಕರ್ ಅವರ ಹೋರಾಟ ಅವಿಸ್ಮರಣೀಯವಾದದ್ದು. ಸಮಗ್ರ ಭಾರತದ ಸನಾತನೀಯವಾದ ವ್ಯವಸ್ಥೆಯ ಬುಡವನ್ನು ನಲುಗಿಸಿದ ವ್ಯಕ್ತಿ ಮಹಾನ್ ಶಕ್ತಿ. ಇವರು ಜಾತಿ ವ್ಯವಸ್ಥೆಯ ವಿರುದ್ಧ ಗಂಭೀರವಾಗಿಯೇ ಪ್ರತಿಭಟಿಸಿದ್ದಾರೆ. ಅಂಬೇಡ್ಕರ್ ಮಹಾಮಾನವತಾವಾದಿ, ಸಮಾಜ ಸುಧಾರಕ, ಸಂವಿಧಾನ ಶಿಲ್ಪಿ, ದಲಿತ ಸೂರ್ಯ ಎಂದು ಈ ಮುಂತಾದ ಮನ್ನಣೆಗಳನ್ನು ಪಡೆದ ಭಾರತ ರತ್ನ ಡಾ|ಅಂಬೇಡ್ಕರ್ ಅವರು ಜನಸಾಮಾನ್ಯರ ಪ್ರೀತಿಗೆ ಪಾತ್ರರಾಗಿದ್ದಾರೆ. ಅವರ ಬದುಕಿನ ಪ್ರತಿಯೊಂದು

ಕ್ಷಣವೂ ಹೋರಾಟದಿಂದ ಕೂಡಿದ್ದಾಗಿದೆ. ಸತತ ಪರಿಶ್ರಮ, ಹೋರಾಟ, ಸಂಘಟನೆ ಶಕ್ತಿಯಿಂದ ಸಾಮಾನ್ಯರನ್ನು ಆದರಲ್ಲಿ ಕೆಳವರ್ಗದಿಂದ ಬಂದ ದಲಿತರನ್ನು ಒಗ್ಗೂಡಿಸಿ ಅವರಲ್ಲಿ ಶಿಕ್ಷಣದ ಮಹತ್ವ, ಅಂಧ ಶ್ರದ್ಧೆಗೆ ಸತ್ಯಾಸತ್ಯತೆಗಳನ್ನು ತಿಳಿಯಪಡಿಸಿ, ಶೋಷಣೆಯಿಂದ ಮುಕ್ತರಾಗುವಂತೆ ಜೀವನವಿಡೀ ದುಡಿದ ಮಹಾನ್ ವ್ಯಕ್ತಿ ಅವರು.

ಪ್ರಸ್ತುತ ಅಧ್ಯಯನವು ವ್ಯವಸ್ಥೆಯ ವಿರುದ್ಧ ಬುದ್ಧ, ಬಸವ, ಅಂಬೇಡ್ಕರ್ ಆಯಾ ಕಾಲಘಟ್ಟದಲ್ಲಿ ಪ್ರತಿಭಟನೆ ಪರಿವರ್ತನೆ ತರಬಯಸಿದ ಹೋರಾಟದ ಚಾರಿತ್ರಿಕ ಅಧ್ಯಯನವಾಗಿದೆ. ಬುದ್ಧಕರ್ಮಠರ ಯಜ್ಞ-ಯಾಗ, ಕಂದಾಚಾರಗಳನ್ನು ವಿರೋಧಿಸಿದ. ಹಿಂದೂದರ್ಮದ ವೇದಶಾಸ್ತ್ರಗಳನ್ನು, ವರ್ಣ ವ್ಯವಸ್ಥೆಯನ್ನು ಆಧಾರಸಹಿತ ತಿರಸ್ಕರಿಸಿದ. ವೈಚಾರಿಕ ಪಥವನ್ನು ತುಳಿಯುವುದರ ಮೂಲಕ ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿದ ಮಹಾಚೇತನ, ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿ ಕಾಯಕ ಸಿದ್ಧಾಂತದೆಡೆಗೆ ನಡೆದ ಬಸವ ಏಕತೆಯನ್ನು ಹುಡುಕುವ ಪ್ರಜಾಪ್ರಭುತ್ವವಾದಿ ನೆಲೆಯಲ್ಲಿ ಆಲೋಚಿಸಿದ. ಹಿಂದೂ ಧರ್ಮದಲ್ಲಿರುವ ಜಾತಿವ್ಯವಸ್ಥೆಯಲ್ಲಿ ಕೆಟ್ಟ ಸಂಪ್ರದಾಯಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ವಿರೋಧಿಸಿದ ಅಂಬೇಡ್ಕರ್" ಧರ್ಮ ಮನುಷ್ಯನಿಗಾಗಿ, ಮನುಷ್ಯ ಧರ್ಮಕ್ಕಾಗಿ ಅಲ್ಲ" ಎಂದು ಹೇಳಿದರು. ಇವರುಗಳ ಪ್ರತಿಭಟನೆಯ ಸೈದ್ಧಾಂತಿಕ ನಿಲುವುಗಳನ್ನು ಚಾರಿತ್ರಿಕವಾಗಿ ಅರಿಯುವ ಪ್ರಯತ್ನ. ಇದು ವರ್ತಮಾನವನ್ನು ಅರ್ಥ ಮಾಡಿಕೊಳ್ಳಲು ಹಾಗೂ ಭವಿಷ್ಯವನ್ನು ನಿರ್ಮಾಣ ಮಾಡಲು ಇಂತಹ ಅಧ್ಯಯನ ಪೂರಕವಾಗುತ್ತದೆ ಎಂಬ ಉದ್ದೇಶ ಹೊಂದಿದೆ. ಆಯಾ ಕಾಲದ ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ, ಆ ವ್ಯವಸ್ಥೆಯ ಕ್ರೂರತೆಯನ್ನು, ಶೋಷಣೆಯನ್ನು ಧಿಕ್ಕರಿಸುತ್ತ ಹೊಸ ಸಮಾಜ ಕಟ್ಟಲು ಯತ್ನಿಸಿದ್ದರು, ಇವರ ಪ್ರತಿಭಟನೆಯ ಸೈದ್ಧಾಂತಿಕ ನೆಲೆಗಳನ್ನು ಗುರುತಿಸುತ್ತ ತೌಲನಿಕ ಅಧ್ಯಯನದೊಂದಿಗೆ ಪ್ರಸ್ತುತ ಸಂದರ್ಭವನ್ನು ವಿಶ್ಲೇಷಿಸುವುದಾಗಿದೆ.

ಈ ಮೂರು ಜನರು ಶೋಷಿತರ, ದಲಿತರ, ಸ್ತ್ರೀಯರ ಪರವಾದ ತತ್ವಸಿದ್ಧಾಂತಗಳನ್ನು ಮಂಡಿಸುತ್ತ ಒಟ್ಟು ವ್ಯವಸ್ಥೆಯ ಆಮೂಲಾಗ್ರ ಪರಿವರ್ತನೆಗಾಗಿ ಪ್ರತಿಭಟಿಸಿದರು. ಅದಕ್ಕೊಂದು ತಾತ್ವಿಕ ನೆಲೆಯೊಂದನ್ನು ರೂಪಿಸಲು ಪ್ರಯತ್ನಿಸಿದರು. ನಮ್ಮ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಂದರ್ಭದಲ್ಲಿ ವೈಚಾರಿಕ ನೆಲೆಯಲ್ಲಿ ಸ್ಥಾಪಿತವಾದ ಎರಡು ಪ್ರಮುಖ ಧರ್ಮಗಳೆಂದರೆ ಬೌದ್ಧಧರ್ಮ ಮತ್ತು ವೀರಶೈವ ಧರ್ಮ. ಹೀಗಾಗಿ ಬುದ್ಧ, ಅಂಬೇಡ್ಕರ್ ಮೇಲೆ ಪ್ರಭಾವ ಬೀರಿದ ಹಾಗೆಯೇ ಬಸವಣ್ಣ ಸಹಿತ ಬುದ್ಧನ ವಿಚಾರಗಳಿಂದ ಪ್ರಭಾವಿತನಾಗಿರುವಂತೆ ಅವರ ವಚನಗಳಲ್ಲಿಯ ವಿಚಾರದಲ್ಲಿ ವ್ಯಕ್ತವಾಗಿದೆ. ಹೀಗಾಗಿ ಈ ಎರಡು ಧರ್ಮಗಳು ಮೂರು ಜನ ಚಿಂತಕರ ಅವರ ಚಾರಿತ್ರಿಕ ಅಧ್ಯಯನ ವಿಪುಲ ವಿಶ್ಲೇಷಣೆಗೆ ಅವಕಾಶ ಒದಗಿಸಿದೆ. ಅಧ್ಯಯನದ ವ್ಯಾಪ್ತಿ ವಿಸ್ತಾರವೆನಿಸಿದರೂ ತೌಲನಿಕ ಅಧ್ಯಯನದೊಂದಿಗೆ ಪ್ರತಿಭಟನಾ ನೆಲೆಗಳಿಗೆ ಸೀಮಿತಗೊಳಿಸಿಕೊಂಡು ಬೌದ್ಧಧರ್ಮ, ವೀರಶೈವಧರ್ಮಗಳ ಸ್ಥಾಪನೆ, ತತ್ವ, ಬೋಧನೆ ಅವುಗಳ ಚಾರಿತ್ರಿಕ ಅಧ್ಯಯನದೊಂದಿಗೆ ಬುದ್ಧ-ಬಸವ-ಅಂಬೇಡ್ಕರ್‌ರವರ ವ್ಯಕ್ತಿತ್ವದ ಸಾಮ್ಯತೆಗಳನ್ನು ಗುರುತಿಸುತ್ತ, ಭಾರತೀಯ ಚರಿತ್ರೆಗೆ ಅವರ ಕೊಡುಗೆಯನ್ನು ಅರಿಯುತ್ತ ಪ್ರಸ್ತುತ ಸಂದರ್ಭದಲ್ಲಿ ಅವರ ವಿಚಾರಗಳು ಎತ್ತ ಸಾಗಿವೆ ಎಂಬ ವಿಶ್ಲೇಷಣೆಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ.

ಬುದ್ಧ-ಬಸವ-ಅಂಬೇಡ್ಕರ್‌ರವರು ಜಟಿಲವಾದ ವೈದಿಕಧರ್ಮಕ್ಕೆ ಸವಾಲಾಗಿ ತಮ್ಮ ಚಿಂತನೆಗಳನ್ನು ಸಾಕಾರಗೊಳಿಸಲೆತ್ನಿಸಿದರು. ಬುದ್ಧ ಹಲವು ಪರಿಕಲ್ಪನೆಗಳ ಮೂಲಕ ಜೀವರಾಶಿಗಳ ದುಃಖವನ್ನು ವಿಶ್ಲೇಷಿಸಿ,

ಪರಿಹರಿಸುವ ಪ್ರಯತ್ನ ಮಾಡಿದರೆ, ಬಸವಣ್ಣನವರು ತಮ್ಮ ಭಕ್ತಿಯೋಗವನ್ನು ಹಿಗ್ಗಿಸಿ ಉಳಿದೆಲ್ಲವನ್ನು ಆದರ ತೆಕ್ಕೆಯೊಳಗೆ ಅಳವಡಿಸಿದರು.[10] ಇದರಂತೆ ಅಂಬೇಡ್ಕರ್‌ರವರು ಜನಸಾಮಾನ್ಯರ ಅದರಲ್ಲೂ ಅಸ್ಪೃಶ್ಯರ ಬದುಕು ಹಸನಾಗಲು ಬುದ್ಧನನ್ನು ಹಾಗೂ ಅವನ ಧರ್ಮವನ್ನು ಅಪ್ಪಿಕೊಂಡು ಸಮಾನತೆ ತರಲು ಜೀವನದುದ್ದಕ್ಕೂ ಹೋರಾಡಿದರು. ಬಸವಣ್ಣನವರು ಎದುರುಗೊಂಡದ್ದು ದೊರೆಮಾನ್ಯ ಶ್ರೇಣಿಕೃತ ವ್ಯವಸ್ಥೆ. ಆದರೆ ಅಂಬೇಡ್ಕರ್ ಎದುರುಗೊಂಡದ್ದು ವಸಾಹತುಶಾಹಿ ಯುಗದ ಆದರೆ ಅದೇ ಶ್ರೇಣಿಕೃತ ವ್ಯವಸ್ಥೆ - ಭಾರತೀಯ ಸಾಮಾಜಿಕ ಮೌಲ್ಯ ಪರಂಪರೆಯ ಪಥಕ್ರಮಕ್ಕೆ ದೊರೆತ ಚಾಲನಶಕ್ತಿಯ ಸಂಚಯ ಮಾತ್ರ ಒಂದೇ ತೆರನಾಗಿತ್ತೆಂಬುದನ್ನು ಬಸವಣ್ಣ ಮತ್ತು ಅಂಬೇಡ್ಕರ್‌ರ ಎರಡು ಯುಗಧರ್ಮದ ಚರಿತ್ರೆಯಿಂದಲೂ ತಿಳಿಯಬಹುದಾಗಿದೆ.[11]

ಈ ರೀತಿಯ ಹಲವಾರು ಉದ್ದೇಶಗಳೊಂದಿಗೆ ಬುದ್ಧ, ಬಸವ, ಅಂಬೇಡ್ಕರ್ ಇವರ ಜೀವನದ ವಿವಿಧ ಮಜಲುಗಳ ಅಧ್ಯಯನ ಕೈಗೊಳ್ಳುತ್ತ ವಿಶೇಷವಾಗಿ ಪ್ರತಿಭಟನಾ ನೆಲೆಗಳನ್ನೇ ಮುಖ್ಯವಾಗಿ ಚರ್ಚಿಸಲಾಗಿದೆ. ಚಾರಿತ್ರಿಕ ಅಧ್ಯಯನವಾಗಿದ್ದರೂ ವಿಚಾರಗಳ ವಿಶ್ಲೇಷಣೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಈ ಮಹಾ ಪ್ರಬಂಧವನ್ನು ಸಮಗ್ರ ವಿಷಯದ ನಿರೂಪಣೆ ಹಾಗೂ ಪ್ರತಿಪಾದನೆಯಲ್ಲಿ ಅಂತರ್‌ಶಿಸ್ತೀಯ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಸಂಪೂರ್ಣವಾಗಿ ಅನುಸರಿಸಲು ಪ್ರಯತ್ನಿಸಲಾಗಿದೆ.

1.3 ಪ್ರಸ್ತುತ ಅಧ್ಯಯನದ ವಿಧಾನಗಳು :

ಪ್ರತಿಭಟನಾ ಸಿದ್ಧಾಂತಗಳ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಅಧ್ಯಯನ'ವು ಮುಖ್ಯವಾಗಿ ಅಂತರ್‌ಶಿಸ್ತೀಯ ಹಾಗೂ ವಿಶ್ಲೇಷಣಾತ್ಮಕ ಸ್ವರೂಪದ ಅಧ್ಯಯನವಾಗಿದೆ.

ಇತ್ತೀಚಿನ ಸಾಂಸ್ಕೃತಿಕ ಅಧ್ಯಯನಗಳು ಹೆಚ್ಚಾಗಿ ಅನುಸರಿಸುವ ಸಬಾಲ್ಟನ್ ಪರಿಕಲ್ಪನೆಗಳನ್ನು ಆಧರಿಸಿ ಕೆಳಗಿನಿಂದ ಮೇಲಕ್ಕೆ ಚರಿತ್ರೆಯನ್ನು ಗ್ರಹಿಸುವ ವಿಧಾನಗಳನ್ನು ಅವಶ್ಯಕತೆಯನ್ನು ಪ್ರಸ್ತುತಪಡಿಸುತ್ತವೆ. ಸಾಮಾಜಿಕ ಪರಿವರ್ತನೆ ಶೋಷಿತರ ವಿಮೋಚನೆಗಳು, ಶೋಷಿತರ ಮಾನವ ಹಕ್ಕುಗಳಿಗೆ ಪ್ರಸ್ತುತವಾಗುವ ಬೌದ್ಧಿಕ ತೀರ್ಮಾನಗಳನ್ನು, ಸಿದ್ಧಾಂತಗಳನ್ನು ಸಮಸ್ಯೆಗಳಿಗೆ ಪರಿಹಾರವಾಗಬಲ್ಲ ಮಾದರಿಗಳನ್ನು ನಿರೀಕ್ಷಿಸುತ್ತದೆ. ಈ ನಿರೀಕ್ಷೆಯನ್ನು ಅಲ್ಪಮಟ್ಟಿಗಾದರೂ ಸ್ಪಂದಿಸಲು ಸಮಾಜ ವಿಜ್ಞಾನಗಳ ಸಂಶೋಧನೆಗಳು ಗಮನಾರ್ಹ ಪ್ರಯತ್ನ ಮಾಡಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಹೋರಾಟ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಜನಸಮುದಾಯದ ಬದುಕಿನಲ್ಲಿ ಅವರ ವಿಚಾರಗಳು ಬೀರಿದ ಪ್ರಭಾವವನ್ನು ವಿಶ್ಲೇಷಿಸಬೇಕಾಗುತ್ತದೆ.

ಇವತ್ತು ಕರ್ನಾಟಕದಲ್ಲಿ ಬುದ್ಧ, ಬಸವ ಮತ್ತು ಅಂಬೇಡ್ಕರ್ ಈ ಮೂರು ಜನರ ವಿಚಾರಗಳನ್ನೇ ಆಧರಿಸಿ ಹಲವಾರು ಜನಪ್ರಗತಿಪರ ಲೇಖಕರು ಲೇಖನಗಳನ್ನು ಬರೆಯುತ್ತಿದ್ದಾರೆ. ವಿಚಾರ ಸಂಕೀರಣ, ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಮನ್ವಯ ಪ್ರಯತ್ನಗಳು ನಮ್ಮ ರಾಜ್ಯದಲ್ಲಿ ವಿಭಿನ್ನವಾದ ಅಧ್ಯಯನದ ಆಯಾಮವನ್ನು ಸೂಚಿಸುತ್ತದೆ. 12ನೇ ಶತಮಾನದಲ್ಲಿ ದೇಶದ ಬೇರೆ ಯಾವ ಭಾಗದಲ್ಲೂ ನಡೆಯದ ಸಮಾಜೋ-ಧಾರ್ಮಿಕ ಚಳುವಳಿ ನಮ್ಮ ರಾಜ್ಯದಲ್ಲಿ ನಡೆದಿರುವುದು ಕೂಡ ಪ್ರಸ್ತುತ

ಅಧ್ಯಯನದ ಹಿನ್ನೆಲೆಯಲ್ಲಿ ಮಹತ್ವದ ನೆಲೆಯಾಗಿದೆ. ಆದ್ದರಿಂದ ಅಧ್ಯಯನದಲ್ಲಿ ಬೌದ್ಧ ಸಂಸ್ಕೃತಿಯೊಂದಿಗೆ ಬಸವತತ್ತ್ವವನ್ನು, ಶರಣರ ಕಾಯಕ ಸಂಸ್ಕೃತಿ'ಯನ್ನು ತೌಲನಿಕವಾಗಿ ಒಂದು ಮಿತಿಯಲ್ಲಿ ವಿಶ್ಲೇಷಿಸಲಾಗಿದೆ.

ಚರಿತ್ರೆಯ ಅಧ್ಯಯನದಲ್ಲಿ ಪ್ರತಿವ್ಯಾಖ್ಯಾನವೂ ಆಯಾ ವ್ಯಾಖ್ಯಾನಕಾರರು ನಂಬಿರುವ ಸಿದ್ಧಾಂತ, ವರ್ಗ, ವರ್ಣ, ಕಾಲ, ದೇಶಗಳನ್ನು ಆಧರಿಸುತ್ತದೆ. ಹೀಗೆ ಬರೆದಿರುವ ಭಾರತದ ಚರಿತ್ರೆಯ ಮಾದರಿಗಳನ್ನು ಎಸ್.ಸುಗತ ಅವರು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸುತ್ತಾರೆ. ಪಾಶ್ಚಾತ್ಯ ಅಥವಾ ಸಾಮ್ರಾಜ್ಯಶಾಹಿ ಸಾಂಪ್ರದಾಯಿಕ ಮಾದರಿ, ಮಾರ್ಕ್ಸಿಸ್ಟ್ ಮಾದರಿ, ಸ್ವ-ಅನ್ವೇಷಣೆಯ ಮಾದರಿ: ಸಬಾಲ್ಟನ್ ಅಧ್ಯಯನ:(ಪ್ರಜಾವಾಣಿ ಸಾಪ್ತಾಹಿಕ ಪುರವಣಿ 28-03-93 ಮತ್ತು 4-4-93) ಇಷ್ಟಾದರೂ ಇವೆಲ್ಲ ಮಾದರಿಗಳು ಯಾರ ಚರಿತ್ರೆ? ಯಾರು ಯಾರಿಗಾಗಿ ಬರೆದ ಚರಿತ್ರೆ? ಎಂಬ ಪ್ರಶ್ನೆಗಳು ಸಹಜ ಹುಟ್ಟುತ್ತವೆ. ಇದಕ್ಕೆ ಉತ್ತರ ರೂಪವಾಗಿ ಮತ್ತೊಂದು ಚರಿತ್ರೆ ಮಾದರಿ ಸಬಾಲ್ಟನ್ ಚರಿತ್ರೆ ಎಂಬುದು 'ಸಬಾಲ್ಟನ್' ಎಂದರೆ 'ಕೆಳವರ್ಗ' ಎಂದೂ ಕೆಳವರ್ಗ ಎಂದರೆ 'ತುಳಿತಕ್ಕೊಳಗಾದ ವರ್ಗ' ಎಂದೂ ಅರ್ಥೈಸಲಾಗುತ್ತದೆ. ಸಬಾಲ್ಟನ್ ಚರಿತ್ರೆ ಎಂದರೆ ಶೋಷಿತರು ಕಟ್ಟಿಕೊಡುವ ಚರಿತ್ರೆಯೇ ಆಗಿದೆ. ಈ ಸಂದರ್ಭದಲ್ಲಿಯೇ ಅಲಕ್ಷಿತ ವಿಷಯಗಳ ಅಧ್ಯಯನವು ಮುಖ್ಯವಾಗುವುದು. ಆ ಅಧ್ಯಯನಗಳು ಚಾರಿತ್ರಿಕ ಆಸ್ಫೋಟದ ಕ್ಷಣವೊಂದನ್ನು ಆಯ್ದುಕೊಂಡು ಆ ಕ್ಷಣದಲ್ಲಿ ಅಲಕ್ಷಿತರಾದ ಜನರು ಹೇಗೆ ತಮ್ಮ ಚ್ಚರಿತ್ರೆಯನ್ನು ತಾವೇ ನಿರ್ಣಯಿಸುವ ಜೀವಂತ ವ್ಯಕ್ತಿಗಳಾಗುತ್ತಾರೆ ಎಂಬುದನ್ನು ತೋರಿಸಿಕೊಡುತ್ತದೆ" ಸಬಾಲ್ಟನ್ ಚರಿತ್ರೆಯನ್ನು ಬರೆಯುವವರು ಒಂದು ವೃತ್ತಿಪರ ಗುಂಪು (Professional) ಎಂದರೆ ಜನರು ಹೇಳಿದ್ದನ್ನು ಸಂಗ್ರಹಿಸಿ, ಜೋಡಿಸಿ ಅದನ್ನು ಅಚ್ಚುಮಾಡಿ ಪ್ರಕಾಶಪಡಿಸುವ ಒಂದು ಗುಂಪು, ಜನರಿಂದ ಜನರಿಗಾಗಿ, ಜನರೇ ಇಲ್ಲಿ ಚರಿತ್ರೆಯ ನಿರ್ಮಾಣದಲ್ಲಿ ತೊಡಗುತ್ತಾರೆ ಜನರಲ್ಲಿ ಅಂತರ್ಗತವಾಗಿರುವ ಚರಿತ್ರೆಯನ್ನು ಹೊರಗೆಳೆಯುವುದೇ ಇವರ ಮುಖ್ಯೋದ್ದೇಶ. (ಸಬಾಲ್ಟನ್ ಚರಿತ್ರೆಯ ಹರಿಕಾರ ಶ್ರೀ ರಣಜಿತ ಗುಹಾ ಈತನ ಈವಿಷಯಕ್ಕೆ ಸಂಬಂಧಿಸಿದ 9 ಸಂಪುಟಗಳು ಹೊರಬಿದ್ದಿವೆ) ಈ ದಿಶೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದಾಗ ಆಯಾ ಕಾಲಘಟ್ಟದಲ್ಲಿ ಬುದ್ಧ, ಬಸವ ಅಂಬೇಡ್ಕರ್ ಅಲಕ್ಷಿತರ ಪರವಾಗಿ,ಕೆಳವರ್ಗದ ಪರವಾಗಿ ಧ್ವನಿ ಎತ್ತಿದ್ದರು. ಡಾ: ಅಂಬೇಡ್ಕರ್ ಹಿಂದುಳಿದ ಜನವರ್ಗಗಳ ಫೆಡರೇಶನ್ ಸ್ಥಾಪಿಸಿದರು. ಮತ್ತು ಸ್ವಾತಂತ್ರ್ಯದೊಂದಿಗೆ ದಲಿತರಿಗಾಗಿ ಮೀಸಲಾತಿಯ ರಿಯಾಯಿತಿಗಳನ್ನು ಕೊಡಿಸಲು ಅವಕಾಶವಾಗುವಂತೆ, ರಾಜ್ಯಾಂಗ ರಚನೆಯ ಸಂದರ್ಭದಲ್ಲಿ ನೋಡಿಕೊಂಡರು. ಹೀಗಾಗಿ ಕೆಳವರ್ಗದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಸಬಾಲ್ಟನ್ ಚರಿತ್ರೆ ಒಂದು ಸಾಧನವಾಗಬಹುದು.

ಸಾಂಸ್ಕೃತಿಕ ಅಧ್ಯಯನಗಳ ಸಂದರ್ಭಗಳಲ್ಲಿ ವಿಭಿನ್ನ ಸಾಮಾಜಿಕ ಗುಂಪುಗಳು, ವ್ಯಕ್ತಿಗಳು ಒಳಗೊಳ್ಳುವುದರಿಂದ ಬೌದ್ಧಧರ್ಮ ಹಾಗೂ ವೀರಶೈವಧರ್ಮಗಳನ್ನು ಅವುಗಳ ವೈಚಾರಿಕ ನೆಲೆಗಳನ್ನು, ಬೌದ್ಧಧರ್ಮವನ್ನು ಅಂಬೇಡ್ಕರ್‌ರವರ ವಿಚಾರಧಾರೆಯ ನೆಲೆಗಳನ್ನು ತಾತ್ವಿಕ ಚರ್ಚೆಗೊಳಪಡಿಸಿ ವಾಸ್ತವ ಸ್ಥಿತಿಗಳನ್ನು ಅರಿಯಲು ಚರ್ಚಾವಿಧಾನವನ್ನು (Discussion method) ಕೆಲಬಾರಿ ಅಳವಡಿಸಿಕೊಳ್ಳಲಾಗಿದೆ. ಹಾಗೆಯೇ ಬುದ್ಧ, ಬಸವರ ಬೋಧನೆಗಳ, ತತ್ವಗಳ ಹಿನ್ನೆಲೆಯಲ್ಲಿ ವ್ಯಕ್ತಿಯ ಸ್ಥಾನಮಾನ ವಿಮೋಚನೆ ಹಾಗೂ ವ್ಯಕ್ತಿತ್ವ ನಿರ್ಮಾಣ ಕುರಿತು ವಿಶ್ಲೇಷಿಸುವುದರಿಂದ ಪ್ರಸ್ತುತ ಅಧ್ಯಾಯ ಅಂತರ್‌ಶಿಸ್ತೀಯ ಅಂತರ್‌ಶಾಸ್ತ್ರೀಯ ಸ್ವರೂಪವೆಂದು ಈ ಮೊದಲೇ ನಿವೇದಿಸಲಾಗಿದೆ. ಈ ರೀತಿಯ ಅಧ್ಯಯನದ ಸ್ವರೂಪ,

ತೌಲನಿಕ ಅಧ್ಯಯನದ ವಿನ್ಯಾಸ ವಿವಿಧ ಆಯಾಮಗಳಲ್ಲಿ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಆಳವಾದ ಅಧ್ಯಯನಗಳಾಗಬೇಕಾದ ಸುಳಿವುಗಳನ್ನು ಕೂಡ ನೀಡುತ್ತದೆ. ಇನ್ನೂ ಕೈಗೊಳ್ಳಬೇಕಾದ ಅಧ್ಯಯನಗಳ ಅವಶ್ಯಕತೆಗಳನ್ನು ತೆರೆದಿಡುವ ಪ್ರಯತ್ನ ಮಾಡುತ್ತದೆ.

ಈ ಅಧ್ಯಯನಕ್ಕೆ ಈ ಕ್ಷೇತ್ರಕ್ಕೆ ಸಂಬಂಧಿಸಿದ ಚಾರಿತ್ರಿಕ, ಸಮಕಾಲೀನ ಗ್ರಂಥಗಳಲ್ಲಿ ಆಕರಗಳಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಅಧ್ಯಯನದ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಂಥಗಳ ವರದಿಗಳ ಗ್ರಂಥಸ್ಥ ಸಮೀಕ್ಷೆಯನ್ನಾಧರಿಸಿ, ಸಕಾಲಿಕವಾದ ಸಾಂದರ್ಭಿಕ ಅಂಶಗಳನ್ನು ಅಧ್ಯಯನದ ವಿಶ್ಲೇಷಣೆಗೆ ಬಳಸುತ್ತಾ ಬರವಣಿಗೆ ಕೈಗೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವನ್ನು ಸಾಹಿತ್ಯಸಮೀಕ್ಷೆ, ಚಾರಿತ್ರಿಕ ಸಂಶೋಧನಾ ಪ್ರಬಂಧಗಳು, ಮಾಹಿತಿಗಳ ಸಂಗ್ರಹ ವಿಧಾನ, ಸಾಮಾಜಿಕ-ಆರ್ಥಿಕ ಬದಲಾವಣೆಯ ಅಧ್ಯಯನದ ಸ್ವರೂಪದ ವಿಧಾನಗಳನ್ನು ಅಳವಡಿಸಿಕೊಂಡು ಒಂದು ವ್ಯಾಪಕವಾದ ಸಾಂಸ್ಕೃತಿಕ ಪರಿಕಲ್ಪನೆಯ ದೃಷ್ಟಿಕೋನಗಳನ್ನು ಬಿಂಬಿಸಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

1.4 ಪ್ರಸ್ತುತ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ ಸಾಹಿತ್ಯ ಸಮೀಕ್ಷೆ :

ತಳಸಮುದಾಯಗಳ ಚಾರಿತ್ರಿಕ ಅಧ್ಯಯನಗಳು ತೀರಾ ಇತ್ತೀಚೆಗೆ ಪ್ರಾರಂಭವಾಗಿ ಹಿಂದೂ ಧಾರ್ಮಿಕ ವ್ಯವಸ್ಥೆ, ಜಾತೀಯತೆಯ ಕ್ರೌರ್ಯಗಳಿಗೆ ಸಾಂಸ್ಕೃತಿಕ ದಬ್ಬಾಳಿಕೆಗೆ ಒಳಗಾದ ಜನ ಸಮುದಾಯಗಳು ಅಖಿಲ ಭಾರತದಾದಿಯಾಗಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಗಾಗಿ ಹಂಬಲಿಸುವ ಪ್ರಕ್ರಿಯೆಗಳ ಕುರಿತು ಹೊಸ ಅರ್ಥ ವಿವರಣೆಗಳು ಇದೀಗ ಸೃಷ್ಟಿಯಾಗುತ್ತಿವೆ. ಇಂತಹ ವೈಚಾರಿಕ ನೆಲೆಯ, ಲೌಕಿಕ ಪ್ರಗತಿ ಮತ್ತು ವಾಸ್ತವವಾದೀ ಧೋರಣೆಯ ಅರ್ಥ ವಿವರಣೆಗಳಿಗೆ ಸ್ವತಃ ಅಂಬೇಡ್ಕರ್‌ರವರೇ ಒಂದು ಅಧ್ಯಯನ ಪರಂಪರೆಯನ್ನು ನಿರ್ಮಿಸಿರುವುದರಿಂದ ಪ್ರಸ್ತುತ ಅಧ್ಯಯನ ಅವರ ಬರಹ ಮತ್ತು ಭಾಷಣಗಳನ್ನೇ ಮೂಲ ಆಕರಗಳೆಂದು ಸ್ವೀಕರಿಸಿದೆ. ಅಲ್ಲದೇ ಬೌದ್ಧ ಚಾರಿತ್ರಿಕ ಕೃತಿಗಳು, ಬಸವಣ್ಣನನ್ನು ಕುರಿತು ರಚಿತವಾದ ವೈಚಾರಿಕ ಬರಹಗಳನ್ನು ಹೆಚ್ಚು ಬಳಸಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಬೌದ್ಧ ಧರ್ಮದ ಅಧ್ಯಯನಗಳನ್ನು ಒಳಗೊಂಡ ಪ್ರೊ. ಬಿ.ಶೇಕ ಅಲಿಯವರ ಕರ್ನಾಟಕ ಚರಿತ್ರೆ ಸಂಪುಟ-2 ಡಾ.ಚಿದಾನಂದಮೂರ್ತಿಯವರ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯದ ವಿಶಿಷ್ಠ ಪ್ರಯತ್ನವಾದ ಧರ್ಮ ಕುರಿತು ವಿಶ್ವಕೋಶ, ಡಾ.ಚಿದಾನಂದ ಮೂರ್ತಿಯವರ ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ ಗ್ಯಾಝೆಟಿಯರ್‌ಗಳು, ಆರ್.ಸಿ. ಹಿರೇಮಠ ಇವರ ಬುದ್ಧಿಸಂ ಇನ್ ಕರ್ನಾಟಕ ಧರ್ಮಾನಂದ ಕೋಸಂಬಿ (1956) ಅವರ ಭಗವಾನ್ ಬುದ್ಧ ಕೆ.ಎಸ್. ಭಗವಾನ್ ಅವರು ಅನುವಾದಿಸಿದ ಸ್ವಾಮಿ ಧರ್ಮತೀರ್ಥರ ಹಿಂದೂ ಸಾಮ್ರಾಜ್ಯಷಾಹಿಯ ಇತಿಹಾಸ, ಡಿ.ಆರ್.ನಾಗರಾಜ್ ರವರ ಸಂಸ್ಕೃತಿ ಕಥನ ಮ.ನ.ಜ. ರವರ ಅಂಬೇಡ್ಕರ್ ವಿಚಾರ ಸಾಹಿತ್ಯ. ಇನ್ನೂ ಮುಂತಾದ ಆಕರಗಳಲ್ಲಿ ಬೌದ್ಧ ಧರ್ಮದ ಕುರಿತು ವಿಶ್ಲೇಷಣೆಗಳನ್ನು ಸಮೀಕ್ಷಿಸಿದೆ. ಈ ಎಲ್ಲ ಗ್ರಂಥಗಳಲ್ಲಿ ಪ್ರಮುಖವಾಗಿ ಪ್ರಾಚೀನ ಕಾಲದಿಂದ ಹಿಡಿದು ಕರ್ನಾಟಕದಲ್ಲಿ 12ನೇ ಶತಮಾನದವರೆಗೆ ಬೌದ್ಧ ಸಂಸ್ಕೃತಿ ಕುರಿತು ಸಂಶೋಧನೆ ಮಾಡಿರುವ ಡಾ.ತಾಳ್ತಜೆ ವಸಂತ ಕುಮಾರ ಇವರ ಮಹತ್ವದ ಕರ್ನಾಟಕದಲ್ಲಿ ಬೌದ್ಧಸಂಸ್ಕೃತಿ ಸಂಶೋಧನಾ ಅಧ್ಯಯನವನ್ನು ಸಮೀಕ್ಷಿಸುವುದರ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಚಾರಿತ್ರಿಕ ದೃಷ್ಟಿಕೋನ ಮತ್ತು ಪ್ರೇರಣೆಯನ್ನು ಪಡೆಯಲಾಗಿದೆ.

ಜಾತಿ, ಅಸ್ಪೃಶ್ಯತೆ, ಸಾಮಾಜಿಕ-ಧಾರ್ಮಿಕ ಶೋಷಣೆಯ ಖಚಿತ ಅಧ್ಯಯನಗಳು ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರ ಸಂಶೋಧನಾ ಅಧ್ಯಯನಗಳಿಂದಲೇ ಪ್ರಾರಂಭವಾಗಿರುವುದರಿಂದ ಕರ್ನಾಟಕ ಸರಕಾರ ಪ್ರಕಟಿಸಿರುವ ಸಂಪುಟ 1 ರಿಂದ 14 ರ ವರೆಗೆ ಎಲ್ಲಾ ಸಂಪುಟಗಳಲ್ಲಿ ಬೌದ್ಧಧರ್ಮ ಕುರಿತಂತೆ ವಿವರಗಳನ್ನು, ವಿಶ್ಲೇಷಣೆಗಳನ್ನು ಸಮೀಕ್ಷಿಸಲಾಗಿದೆ. ಇವುಗಳೇ ಪ್ರಸ್ತುತ ಅಧ್ಯಯನ ಪ್ರಾಥಮಿಕ ಆಕರಗಳೆಂದರೆ ತಪ್ಪಾಗಲಾರದು. ಅಲ್ಲದೇ ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿರುವ ಸಂಪುಟ 1 ರಿಂದ 17 ರವರೆಗಿನ ಎಲ್ಲ ಸಂಪುಟಗಳನ್ನು ಸಮೀಕ್ಷಿಸಲಾಗಿದೆ. ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ Annihilation of Caste ನಿಂದ ಹಿಡಿದು 17ನೇ ಸಂಪುಟದಲ್ಲಿನ Buddhist Movement in India –A Blue Print " ವರೆಗೆ " Why I like Buddhism ವರೆಗಿನ ಎಲ್ಲಾ ವಿವರಗಳನ್ನು ಸಮೀಕ್ಷಿಸಲಾಗಿದೆ. ಅದೇ ರೀತಿ ಕರ್ನಾಟಕದ ಸಂದರ್ಭದಲ್ಲಿ ಡಾ.ಅಂಬೇಡ್ಕರ್‌ರವರ ವಿಚಾರಧಾರೆ, ಮಹಾರಾಷ್ಟ್ರ ದಲಿತ ಚಳುವಳಿ, ಕರ್ನಾಟಕದ ದಲಿತ ಚಳುವಳಿಯ ಪರಿಕಲ್ಪನೆಗಳನ್ನು ಬೌದ್ಧಧರ್ಮ ಮತ್ತು ಅಂಬೇಡ್ಕರ್‌ರವರ ಮತಾಂತರ ಚಳುವಳಿಯ ಬಗ್ಗೆ ಹೊಂದಿದ ಧೋರಣೆಗಳನ್ನು ವ್ಯಾಪಕವಾಗಿ ಸಮೀಕ್ಷಿಸಲಾಗಿದೆ. ಅಂತಹ ಹಲವಾರು ಅರ್ಥ ವಿವರಣೆಗಳನ್ನು ಪ್ರಸ್ತುತ ಅಧ್ಯಯನದ ಅರ್ಥೈಸುವಿಕೆಗೆ ಆಕರವಾಗಿ ಬಳಸಿಕೊಳ್ಳಲಾಗಿದೆ. ಸಂಬಂಧಿಸಿದ ಅಧ್ಯಾಯಗಳ ಕೊನೆಯಲ್ಲಿ ಈ ಆಕರಗಳನ್ನು ಪಟ್ಟಿ ಮಾಡಲಾಗಿದೆ. ಅಂತಹ ಅಧ್ಯಯನಗಳಲ್ಲಿ ಡಾ.ಮ.ನ.ಜವರಯ್ಯನವರ ಅಂಬೇಡ್ಕರ್ ವಿಚಾರ ಸಾಹಿತ್ಯ, ಡಾ. ರಹಮತ್ ತರೀಕೆರೆಯವರ ಮರದೊಳಗಣ ಕಿಚ್ಚು (1996) ಡಾ. ಅರವಿಂದ ಮಾಲಗಿತ್ತಿಯವರು ಸಂಪಾದಿಸಿದ ದಲಿತ ಮಾರ್ಗ(2002) ಮೊಗಳ್ಳಿ ಗಣೇಶ್‌ರವರು ಸಂಪಾದಿಸಿದ ದಲಿತ ಚಿಂತನೆ(2002) ಮುಂತಾದ ಗ್ರಂಥಗಳನ್ನು ಸಮೀಕ್ಷಿಸಿ ದಲಿತರ ಸಾಂಸ್ಕೃತಿಕ ಶೋಷಣೆಯ ಪರಿಕಲ್ಪನೆಗಳನ್ನು ಗ್ರಹಿಸಿ ಅಧ್ಯಯನದ ತಾತ್ವಿಕರಣಕ್ಕೆ ಒಳಗು ಮಾಡಲಾಗಿದೆ. ಕರ್ನಾಟಕದಲ್ಲಿ ಲಭ್ಯವಿರುವ ಬೌದ್ಧಸಾಹಿತ್ಯವನ್ನು ವಿಶೇಷವಾಗಿ ಅವಲೋಕಿಸಲಾಗಿದೆ. ವೈ.ಬಿ.ನಂದರವರ ನಾವೇಕೆ ಬೌದ್ಧರಾಗಬೇಕು ಬುದ್ಧಸಾಸನ ಹಾಗೂ ಬೌದ್ಧ ನಿತ್ಯಾಚರಣೆಗಳು ಇಂತಹ ಮಹತ್ವದ ಕೃತಿಗಳನ್ನು ವಿಶ್ಲೇಷಿಸಲಾಗಿದೆ. ಕನ್ನಡ ಮತ್ತು ಆಂಗ್ಲಭಾಷೆಗಳೆರಡರಲ್ಲೂ ಬಂದಿರುವ ಮಹತ್ವದ ಗ್ರಂಥಗಳನ್ನು ಸಮೀಕ್ಷಿಸುವುದರ ಜೊತೆಗೆ ಸಾಮಾಜಿಕ ಪರಿವರ್ತನೆಯ ಆಶಯವುಳ್ಳ, ಬೌದ್ಧ ಧರ್ಮದ ಬಗ್ಗೆ ಅಧಿಕೃತ ಮಾಹಿತಿಗಳನ್ನು ನೀಡುವ ಮಾಸಿಕಗಳನ್ನು ಜರ್ನಲ್‌ಗಳನ್ನು ವಾರ್ಷಿಕ ವರದಿಗಳನ್ನು ಸಮೀಕ್ಷಿಸಲಾಗಿದೆ. ಅದರಲ್ಲಿ ಮುಖ್ಯವಾಗಿ ಕನ್ನಡದ ಸಂಕ್ರಮಣ, ಸಂವಾದ, ಹೊಸತು, ಬುದ್ಧ ಧರ್ಮ, ಸಂಬುದ್ಧ, ಸಂಘರ್ಷ, ಅಂಬೇಡ್ಕರ್‌ವಾದ, ಅಂಬೇಡ್ಕರ್‌ವಾಹಿನಿ, ಸುಧಾ, ಅಗ್ನಿ, ಆಂಗ್ಲ ಭಾಷೆಯ ಧಮ್ಮ, ದಲಿತವಾಯ್ಸ್ ಮುಂತಾದ ಮಾಸಿಕಗಳು, ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭ, ಹಿಂದೂ ಮುಂತಾದ ದಿನಪತ್ರಿಕೆಗಳಲ್ಲಿನ ಬೌದ್ಧಧರ್ಮ ಕುರಿತು, ವೀರಶೈವ ಧರ್ಮ ಕುರಿತ ವಿವರಣೆಗಳನ್ನು, ವರದಿಗಳನ್ನು ಸಮೀಕ್ಷಿಸಲಾಗಿದೆ. ಇವುಗಳೆಲ್ಲವುಗಳ ವಿವರಗಳನ್ನು ಆಕರಗ್ರಂಥ ಸೂಚಿಯಲ್ಲಿ ಪಟ್ಟಿ ಮಾಡಿ ಪ್ರಸ್ತುತಪಡಿಸಲಾಗಿದೆ.

ಬುದ್ಧ, ಬಸವ, ಅಂಬೇಡ್ಕರ್ ಇವರನ್ನು ಕುರಿತು ಅಧ್ಯಯನ ಮಾಡುವಾಗ ಇತಿಹಾಸ ಗ್ರಂಥಗಳು ಹಾಗೂ ಇಲ್ಲಿಯವರೆಗೂ ಬಂದಿರುವ ವೈಚಾರಿಕ ಲೇಖನಗಳು, ಸಂಶೋಧನಾ ಪ್ರಬಂಧಗಳನ್ನು ಅವಲಂಬಿಸಲಾಗಿದೆ. ಜೊತೆಗೆ ಕಾವ್ಯ, ವಚನಗಳು, ಚರಿತ್ರೆಯ ಪುರಾವೆಗಳು ಮುಖ್ಯವಾಗಿ ಆಧುನಿಕ

ಬರಹಗಳು ಹಾಗೂ ವೈಚಾರಿಕ ಸಂಶೋಧನಾತ್ಮಕ ಬಿಡಿ ಲೇಖನಗಳನ್ನು ಅಧ್ಯಯನಕ್ಕೆ ಆಕರಗಳಾಗಿ ಬಳಕೆ ಮಾಡಿಕೊಳ್ಳಲಾಗಿದೆ.

ಬುದ್ಧನಿಗೆ ಹಾಗೂ ಆತನ ಧರ್ಮಕ್ಕೆ ಸಂಬಂಧಿಸಿದಂತೆ ಸಂಶೋಧನೆಗೆ ಹೊರಟಾಗ ಅನೇಕ ಕೊರತೆಗಳು ಎದ್ದು ಕಾಣುತ್ತವೆ. ಸ್ವತಃ ಬುದ್ಧನೇ ಯಾವುದೇ ಕೃತಿಯನ್ನು ರಚಿಸಿಲ್ಲ. ಹೀಗಾಗಿ ಮೂಲ ಸಾಮಗ್ರಿ ದೊರಕಲಾರದು. ಭಾರತದಲ್ಲಿ ಹುಟ್ಟಿದ ಬೌದ್ಧಧರ್ಮ ಭಾರತದಿಂದ ಕಣ್ಮರೆಯಾಗಿ ಹೊರ ನಾಡಿನಲ್ಲಿ ಪ್ರಸಿದ್ಧಿಗೆ ಬಂದಿತು. ಹೀಗಾಗಿ ಸ್ವಾಭಾವಿಕವಾಗಿ ಆಕರಗಳು ವಿಷಯಗಳು ನಾಶ ಹೊಂದುತ್ತ ಸಾಗಿರಬೇಕು. ಈವರೆಗೆ ಆತನ ಅನುಯಾಯಿಗಳು, ಭಿಕ್ಷುಗಳು ಸಂಗ್ರಹಿಸಿಟ್ಟ ಆತನ ಉಪದೇಶಗಳು ಕಾಲದಿಂದ ಕಾಲಕ್ಕೆ ಪರಿಪೂರ್ಣವಾಗಿ ಮೂಲರೂಪದಲ್ಲಿಯಲ್ಲದಿದ್ದರೂ ದೊರಕುತ್ತಿರುವುದು ಅವುಗಳನ್ನು ಆವಲಂಬಿಸಿ ಆಧುನಿಕ ಕಾಲದಲ್ಲಿ ಕೆಲಕೃತಿಗಳು ರಚನೆಯಾಗಿರುವುದು ಸಂತಸದ ಸಂಗತಿಯಾಗಿದೆ.

ಬುದ್ಧನನ್ನು ಕುರಿತು ಆಧ್ಯಯನ ಮಾಡುವಾಗ ಪ್ರಾಚೀನ ಭಾರತವನ್ನು ಕುರಿತು ಬರೆದಿರುವ ಕೆಲವು ಇತಿಹಾಸ ಕೃತಿಗಳನ್ನು ಅವಲಂಬಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು. "ಭಾರತೀಯ ಇತಿಹಾಸ-ಸಮಾಜ ಮತ್ತು ಸಂಸ್ಕೃತಿ" ಸಂ:ಡಾ।ರಾಜಾರಾಮ ಹೆಗಡೆ, "ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ವೇದಯುಗ"-ಸಂ:2- ಆರ್.ಸಿ.ಮುಜಂದಾರ್ ಅನು: ಎ.ವಿ.ನರಸಿಂಹಮೂರ್ತಿ, "ಪ್ರಾಚಿನ ಭಾರತ" -ಅನವಟ್ಟಿ (ಅನು)., "ಭಾರತದ ಪ್ರೌಢ ಇತಿಹಾಸ" -ಮುಜುಮ್‌ದಾರ ರಾಯಚೌಧರಿ ಅನು :ಎನ್.ಎಸ್.ಶಾರದಾಪ್ರಸಾದ್, "ಪ್ರಾಚೀನಭಾರತ"-ಆರ್.ಎಸ್.ಶರ್ಮಾ ಅನು:ಎನ್.ಪಿ.ಶಂಕರ ನಾರಾಯಣರಾವ್, "ಪ್ರಾಚೀನ ಭಾರತದಲ್ಲಿ ಜನಜೀವನ" -ಎಸ್.ಆರ್. ಭಟ್," ಭಾರತದ ಇತಿಹಾಸ-ಸಂ.1-ರೊಮಿಲಾಥಾಪರ್ ಅನು:ಸದಾನಂದ ಕನವಳ್ಳಿ," ಪ್ರಾಚೀನ ಭಾರತದ ಚರಿತ್ರೆ" ಡಿ.ಡಿ. ಕೋಸಾಂಬಿಯವರ ಚಿಂತನೆಗಳು, ಮೂಲ:ಬಾರಾ ಗೋಪಾಲ್ ಅನು: ಎಚ್.ಎಸ್. ಶ್ರೀಮತಿ, "ಬುದ್ಧ ಮತ್ತು ಆತನ ಧಮ್ಮ" ಮೂಲ ಬಿ.ಆರ್.ಅಂಬೇಡ್ಕರ್ ಅನು:ಎ.ಡಿ. ಕೃಷ್ಣಯ್ಯ," ಭಾರತದ ಗ್ಯಾಜಿಟೀಯರ್ ಸಂ -2 ಇತಿಹಾಸ ಮತ್ತು ಸಂಸ್ಕೃತಿ" "ವಿಶ್ವಕೋಶ-3 ಧರ್ಮ ಸಂ.:ರಹಮತ್ ತರಿಕೆರೆ," ವಿಶ್ವಕೋಶ -4 ಚರಿತ್ರೆ ಸಂ : ಟಿ. ವಿಜಯಪೊಣಚ್ಚ ಇವುಗಳಲ್ಲದೇ ಬುದ್ಧ ವಚನ ಟ್ರಸ್ಟ್ ಬೆಂಗಳೂರು ಇವರು ಪಾಲಿ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಬುದ್ಧರಕ್ಕೀತರು ಸಂಪಾದಿಸಿದ "ದೀಘ ನಿಕಾಯ" ಸಂಪುಟ-1, 2, 3 ಮತ್ತು ಮಜ್ಜೀಮನಿಕಾಯ ಸಂಪುಟ-1, 2, 3 ಬುದ್ಧಕ-ನಿಕಾಯ ಸಂಪುಟ-1,2,3 ಜಾತಕಥೆಗಳು ಸಂಪುಟ-1, 2, 3 ಕೃತಿಗಳನ್ನು ಹಾಗೂ "ಧಮ್ಮಪದ" ಎಂಬ ಕೃತಿಯನ್ನು ಈ ಅಧ್ಯಯನಕ್ಕೆ ಆಕರವೆಂದು ಆಯ್ದುಕೊಳ್ಳಲಾಗಿದೆ. ಸಂಶೋಧನಾತ್ಮಕ ಅಂಶಗಳನ್ನು ಒಳಗೊಂಡಿರುವ ಧರ್ಮಾನಂದ ಕೋಸಂಬಿಯವರ "ಭಗವಾನ್ ಬುದ್ಧ" (ಅನು: ಆದ್ಯರಂಗಾಚಾರ್) ಡಾ:ತಾಳ್ತಜೆ ವಸಂತಕುಮಾರ ಅವರ "ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ" ಇವುಗಳು ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ವಿಷಯಗಳಿಗೆ ಆಕರಗಳನ್ನೊದಗಿಸುವ ಕೃತಿಯೆಂದು ಆಯ್ದುಕೊಳ್ಳಲಾಗಿದೆ.

"ಭೌದ್ಧಿಯತೆ- ಎ.ಡಿ.ಕೃಷ್ಣಯ್ಯ" "ಬುದ್ಧಶಾಸನ" -ವೈ.ಬಿ.ನಂದನ, "ಬುದ್ಧ ಚರಿತೆ" -ಡಾ. ಎಲ್. ಬಸವರಾಜು, "Buddha and Basava - Kumarswamiji" ಎಂಬ ಕೃತಿಯನ್ನು ಅದರ ಕನ್ನಡ ಅನುವಾದ ("ಬುದ್ಧ ಮತ್ತು ಬಸವ ಅನು:ಆರ್. ಮಹದೇವಯ್ಯ) ಕೃತಿಯನ್ನು ಅಧ್ಯಯನಕ್ಕೆ ಆಕರವನ್ನಾಗಿ

ಆಯ್ದುಕೊಳ್ಳಲಾಗಿದೆ. ಹಾಗೆಯೇ ಜಿ.ಪಿ.ರಾಜರತ್ನಂ ಅವರು ಪಾಲಿಭಾಷೆಯಿಂದ ಕನ್ನಡಕ್ಕೆ ಅನುವಾದಗೊಳಿಸಿರುವ ಬೌದ್ಧಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಕೃತಿಗಳನ್ನು ಇಲ್ಲಿ ಆಕರಗಳನ್ನಾಗಿ ಸ್ವೀಕರಿಸಲಾಗಿದೆ.

ಡಾ।ಅಂಬೇಡ್ಕರ್ ಅವರು ಬರೆದಿರುವ ಇಂಗ್ಲೀಷ ಕೃತಿಯಾದ "Buddha and his Dhamma" ಎಂಬುದನ್ನು ಆದರ ಕನ್ನಡ ಅನುವಾದ ಎ.ಡಿ.ಕೃಷ್ಣಯ್ಯನವರ "ಬುದ್ಧ ಮತ್ತು ಆತನ ಧಮ್ಮ " ಕೃತಿಯನ್ನು ಅಂದಿನ ಸ್ಥಿತಿಗತಿ ಅಧ್ಯಯನಕ್ಕೆ ಸೂಕ್ತ ಆಕರವೆಂದು ಪರಿಗಣಿಸಿ ಬಳಸಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಬಂದಿರುವ ಕೆಲವು ಕೃತಿಗಳನ್ನು ಅಧ್ಯಯನ ಮಾಡುವಾಗ ಕೆಲವು ಐತಿಹಾಸಿಕತೆಯನ್ನು ಬಿಂಬಿಸುತ್ತವೆ ಎಂಬ ನಂಬಿಕೆಯಿಂದ ಅವಲೋಕಿಸಲಾಗಿದೆ. ಅವುಗಳಲ್ಲಿ ಕುವೆಂಪು - "ಮಹಾರಾತ್ರಿ", ಮಾಸ್ತಿಯವರ-"ಯಶೋಧರಾ", ಶಿವರಾಂ ಕಾರಂತರ "ಕಿಸಾಗೋತಮಿ" "ಬುದ್ಧೋದಯ", ಪುಟ್ಟಸ್ವಾಮಯ್ಯನವರ "ಗೌತಮಬುದ್ಧ", ಪ್ರಭುಶಶಂಕರರ "ಆಮ್ರಪಾಲಿ", "ಅಂಗಲಿಮಾಲ" ಎಂಬ ನಾಟಕಗಳ ಆಕರಗಳೆಂದುಕೊಳ್ಳಲಾಗಿದೆ. ಇವುಗಳಲ್ಲಿ ಅತಿಶಯೋಕ್ತಿ, ಭಾವುಕತೆ, ಕಾಲ್ಪನಿಕತೆಗಳಿದ್ದರೂ ಅನವಶ್ಯಕಕವೆನಿಸುವ ಪ್ರಕ್ಷೇಪ ಭಾಗಗಳನ್ನು ಹೊರತುಪಡಿಸಿ ಐತಿಹಾಸಿಕ ಅಂಶಗಳನ್ನು ಕಂಡುಕೊಳ್ಳಲು ಇತಿಹಾಸವನ್ನು ಸೃಷ್ಟಿಸಲು ಆಧಾರಗಳ ಕೊರತೆಯ ಸಂದರ್ಭದಲ್ಲಿ ಆಕರಗಳಾಗಿ ನಿಲ್ಲಬಲ್ಲವು ಎಂದು ಭಾವಿಸಲಾಗಿದೆ. ಕೆಲವು ಬಿಡಿ ಲೇಖನಗಳನ್ನು ಕೂಡಾ ಅಧ್ಯಯನಕ್ಕೆ ಬಳಕೆ ಮಾಡಿಕೊಳ್ಳಲಾಗಿದೆ.

"ಬಸವಣ್ಣನವರ ಕುರಿತು ಅಧ್ಯಯನ ಮಾಡುವಾಗ ಅವರ ವಚನಗಳನ್ನು ಆಕರಗಳಾಗಿ ಆಯ್ದುಕೊಳ್ಳಲಾಗಿದೆ. ಸಮಕಾಲೀನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕತಿಕ ಸ್ಥಿತಿಗತಿ ಮೇಲೆ ಸ್ಪಷ್ಟವಾದ ಬೆಳಕನ್ನು ಬೀರಬಲ್ಲವು. ಹೀಗಾಗಿ ಪ್ರಥಮ ಆಕರಗಳೆಂದು ಆಯ್ದುಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಡಾ।ಆರ್.ಸಿ.ಹಿರೇಮಠ ಅವರು ಸಂಪಾದಿಸಿರುವ" ಬಸವಣ್ಣನವರ ವಚನಗಳು", ಶಿ.ಶಿ. ಬಸವನಾಳ ಅವರ "ಬಸವಣ್ಣನವರ ಷಟ್‌ಸ್ಥಲದ ವಚನಗಳು", ಡಾ।ಎಂ.ಎಂ.ಕಲಬುರ್ಗಿಯವರ ಸಂಪಾದಕತ್ವದಲ್ಲಿ ಹೊರಬಂದಿರುವ" ಬಸವಣ್ಣನವರ ವಚನ ಸಂಪುಟ-1" ಇವುಗಳನ್ನು ಪ್ರಥಮ ಆಕರಗಳಾಗಿ ಪರಿಗಣಿಸಲಾಗಿದೆ. ಡಾ।ಎಂ.ಎಂ. ಕಲಬುರ್ಗಿಯವರ ಮಾರ್ಗ ಸಂಪುಟ -1,2" ಹಾಗೂ ಬಸವಣ್ಣನವರ ಟೀಕಿನ ವಚನಗಳು ಸಂಪುಟ 1-2" ಇವುಗಳನ್ನು ಅವಲೋಕಿಸಲಾಗಿದೆ.

"ಕರ್ನಾಟಕ ಚರಿತ್ರೆ" ಸಂ. ಡಾ.ಬಿ.ಷೇಕ್ ಅಲಿ ಕೃತಿಯನ್ನು ಹಾಗೂ" ಚರಿತ್ರೆ -ವಿಶ್ವಕೋಶ " ಕೃತಿಯನ್ನು ಆಕರವೆಂದು ಆಯ್ದುಕೊಳ್ಳಲಾಗಿದೆ. ಅಲ್ಲದೇ ಹಲವಾರು ಬಸವಣ್ಣನ ಕುರಿತು ರಚಿತವಾದ ಕೃತಿಗಳು ಐತಿಹಾಸಿಕ ಮಹತ್ವ ಹೊಂದಿರುವುದರಿಂದ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಪಿ.ಬಿ. ದೇಸಾಯಿ ಯವರ "Basaveshwara and his times" ಎಂಬ ಇಂಗ್ಲೀಷ ಕೃತಿಯನ್ನು ಉತ್ತಂಗಿ ಚನ್ನಪ್ಪನವರ "ಅನುಭವಮಂಟಪದ ಐತಿಹಾಸಿಕತೆ", ಚಿದಾನಂದ ಮೂರ್ತಿಯವರ "ವಚನ ಸಾಹಿತ್ಯ", ಹಾ.ಮಾ. ನಾಯಕರ ಸಂಪಾದಿತ ಕೃತಿ "ಬಸವ ಪರುಷ" ಕೃತಿಯನ್ನು ಆಕರಗಳೆಂದು ಪರಿಗಣಿಸಲಾಗಿದೆ.

"ವಚನ ಚಳುವಳಿ"-ಡಾ.ಹೆಚ್.ತಿಪ್ಪೇರುದ್ರಸ್ವಾಮಿ, "ಬಸವೇಶ್ವರ ಸಮಕಾಲೀನರು"-ಸಂ.ಬಿ.ಡಿ.ಜತ್ತಿ, "ಬಸವಣ್ಣ ಹಾಗೂ ಲಿಂಗಾಯತ ಧರ್ಮ"-ಡಾ।ಹಿರೇಮಲ್ಲೂರು ಈಶ್ವರನ್, "ಬಸವತತ್ವ : ಸಾಮಾಜಿಕ ಬದಲಾವಣೆ"-ಸಂ. ಮಹೇಶ ತಿಪ್ಪಶೆಟ್ಟಿ, "ಬಸವೇಶ್ವರ" -ಡಾ।ಬಿ.ಬಿ.ಹೆಂಡಿ, "ಬಸವ ಧರ್ಮ ಯಾರ ಸೊತ್ತು?" ಕುಮಾರಕಕ್ಕಯ್ಯಪೋಳ್ ಹಾಗೂ "ವಚನ ನಿರ್ವಚನ"-ಡಾ.ಪಿ.ವಿ.ನಾರಾಯಣ" ವಚನಚಳುವಳಿ" ಡಾ।ಬಸವರಾಜ ಸಬರದ, "ಬಸವ ಪ್ರಜ್ಞೆ"-ರಂಜಾನ್‌ದರ್ಗಾ, "ಬಸವಣ್ಣನವರು"-ಎಂ. ಚಿದಾನಂದಮೂರ್ತಿ ಅನು: ಶಂಸಐತಾಳ ಕೃತಿಗಳನ್ನು ಅಧ್ಯಯನಕ್ಕೆ ಆಕರಗಳೆಂದು ಆಯ್ದುಕೊಳ್ಳಲಾಗಿದೆ.

ದೇ.ಜವರೇಗೌಡರ "ಬಸವೇಶ್ವರ-ಕಾರ್ಲ್‌ಮಾರ್ಕ್ಸ್" ಮತ್ತು "ಬಸವೇಶ್ವರ-ಅಂಬೇಡ್ಕರ್" ಶ್ರೀ ಕುಮಾರಸ್ವಾಮಿಯವರ "ಬುದ್ಧ ಮತ್ತು ಬಸವ" ಕೃತಿಗಳನ್ನು ಬುದ್ಧ, ಬಸವ, ಅಂಬೇಡ್ಕರ್ ರವರ ತೌಲನಿಕ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಡಾ।ಅಂಬೇಡ್ಕರ್ ರವರನ್ನು ಕುರಿತು ಅಧ್ಯಯನ ಮಾಡುವಾಗ ವಿಪುಲ ಕೃತಿಗಳು ಲಭ್ಯವಿದ್ದು, ಅವುಗಳಲ್ಲಿ ಬಹುಮುಖ್ಯವಾಗಿ "ಡಾ।ಬಾಬಾಸಾಹೇಬ ಅಂಬೇಡ್ಕರ್ ಬರಹ ಮತ್ತು ಭಾಷಣಗಳು" ಸಂಪುಟ-1 ರಿಂದ 14 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಪ್ರಕಟಿಸಿರುವ ಕೃತಿಗಳನ್ನು ಮೂಲ ಆಕರಗಳೆಂದು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಅಲ್ಲದೇ ಡಾ। ಬಾಬಾ ಸಾಹೇಬ್ ಅಂಬೇಡ್ಕರ್-ವಸಂತಮೂನ್" ಅನು :ಬಿ.ಎ.ಸನದಿ ಮತ್ತು ಡಾ। ಅಂಬೇಡ್ಕರ್ ವಿಚಾರಧಾರೆ -ಡಾ। ಅರವಿಂದ ಮಾಲಗಿತ್ತಿಯವರ ಸಂಪಾದನೆ ಕೃತಿಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಡಾ। ಮ.ನ.ಜವರಯ್ಯನವರ ಸಮಗ್ರ ಕೃತಿಗಳನ್ನು ಅವಲೋಕಿಸಿ ಪ್ರಮುಖ ಕೃತಿಗಳಾದ- ಡಾ।ಅಂಬೇಡ್ಕರ್ ಸಮಗ್ರ ಚಿಂತನ-ಸಂ.1, "ಭಾರತ ಸ್ವಾತಂತ್ರ್ಯಸಂಗ್ರಾಮದಲ್ಲಿ ಅಂಬೇಡ್ಕರ್", ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ","ಬುದ್ಧ-ಮಾರ್ಕ್ಸ್-ಗಾಂಧಿ" ಮ.ನ.ಜ.ಕೃತಿಗಳನ್ನು ವಿಶೇಷವಾಗಿ ಆಕರಗಳೆಂದು ಆಯ್ದುಕೊಳ್ಳಲಾಗಿದೆ. "ವಿಚಾರವಾದಿ ಕ್ರಾಂತಿಕಾರ ಡಾ।ಅಂಬೇಡ್ಕರ್" -ದೇ.ಜ.ಗೌ., "ದಲಿತ ಸೂರ್ಯ" - ಎಚ್. ಜೆ. ಲಕ್ಕಪ್ಪಗೌಡ ಇವುಗಳನ್ನು ಆಯ್ದುಕೊಳ್ಳಲಾಗಿದೆ. "ಭಾರತರತ್ನ ಡಾ।ಬಿ.ಆರ್.ಅಂಬೇಡ್ಕರ್ ಅವರ ಸಾವಿರದ ಸ್ಲೋಗನ್ಸ್ - ಸಂ.ಡಾ.ಟಿ.ಎಂ.ಭಾಸ್ಕರ್‌ರವರ ಕೃತಿಯೂ ಅಧ್ಯಯನಕ್ಕೊಳಪಟ್ಟಿದೆ.

ಬುದ್ಧ, ಬಸವ, ಅಂಬೇಡ್ಕರ್ ಇವರುಗಳನ್ನು ಕುರಿತು ಚಾರಿತ್ರಿಕ-ತೌಲನಿಕ ಅಧ್ಯಯನ ತುಂಬ ಅಪರೂಪವೆನ್ನಬಹುದು. ಅಲ್ಲಲ್ಲಿ ಬಿಡಿ ಲೇಖನಗಳು ಕೆಲವು ವಿಷಯಗಳನ್ನು ಒಳಗೊಂಡಿರುವುದನ್ನು ಬಿಟ್ಟರೆ ಸಮಗ್ರವಾಗಿ ಈ ಮೂವರನ್ನು ಒಳಗೊಂಡ ಕೃತಿ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಹೀಗಾಗಿ ಇವರ ಜೀವನ, ಸಾಧನೆ, ತತ್ವ, ವಿಚಾರಗಳ ಕಡೆಗೆ ಗಮನಹರಿಸಿ ಅದರಲ್ಲೂ ಆಯಾ ಕಾಲಘಟ್ಟದಲ್ಲಿ ಇವರು ಮಾಡಿರುವ ಪ್ರತಿಭಟನೆಯ ನೆಲೆಯಲ್ಲಿ ಅಧ್ಯಯನ ಮಾಡುತ್ತಿರುವುದು ವಿಶೇಷ.

ಈ ಅಧ್ಯಯನವು ಮೂರು ಜನರ ಜೀವನ, ತತ್ವ, ಸಿದ್ಧಾಂತಗಳ ಅಧ್ಯಯನವಷ್ಟೇ ಆಗಿರದೇ ಅವರ ಪೂರ್ವದ ಸ್ಥಿತಿಗತಿ, ಮತ್ತು ಅಂದು ಅವರು ಮಾಡಿದ ಪ್ರತಿಭಟನಾತ್ಮಕ ಹೋರಾಟ, ಅದರ ಪ್ರಭಾವಗಳನ್ನು ಕಂಡುಕೊಳ್ಳುವುದು ಮುಖ್ಯವಾಗಿದೆ. ಅಲ್ಲದೇ ಈ ಮೂವರು ಎದುರಿಸಿದ ಸಮಾಜ ಒಂದೇ, ಕಾಲ ಬೇರೆಯಾಗಿದ್ದರೂ ಇವರಲ್ಲಿಯ ಸಾಮಾನ್ಯತೆ, ತತ್ವ, ಚಿಂತನೆ ಆದರ್ಶಗಳನ್ನು ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಇಲ್ಲಿ ಬಹು ಮುಖ್ಯವಾಗಿ ಬುದ್ಧ-ಬಸವ-ಅಂಬೇಡ್ಕರ್‌ರವರ ಪ್ರತಿಭಟನಾನೆಲೆಗಳಿಗೆ ಹೆಚ್ಚು

ಒತ್ತುಕೊಟ್ಟು, ಮೂವರಲ್ಲಿ ಹೋರಾಟ ಸಾಮ್ಯಗಳ ಕಡೆಗೆ ಗಮನ ಕೇಂದ್ರೀಕರಿಸಿರುವುದು ಇದು ನನ್ನ ಅಧ್ಯಯನದ ಒಂದು ಮಿತಿಯೂ ಆಗಬಹುದೆಂದು ಒಪ್ಪಿಕೊಂಡಿದ್ದೇನೆ.

ಈ ಅಧ್ಯಯನದಲ್ಲಿ ಸಂಶೋಧನಾತ್ಮಕ ದೃಷ್ಟಿಯಿದ್ದರೂ ಚಾರಿತ್ರಿಕ ಅಧ್ಯಯನವಾಗಿರುವುದರಿಂದ ಐತಿಹಾಸಿಕ ಅಂಶಗಳ ಕಡೆಗೆ ಹೆಚ್ಚು ಒತ್ತು ನೀಡಿ-ಅಂದಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ವಿಷಯಗಳತ್ತ ಗಮನ ಕೊಟ್ಟಿರುವುದರಿಂದ-ಪುನರಾವರ್ತನೆಯಾದಂತೆ ಕಂಡುಬರುತ್ತವೆ. ಏಕೆಂದರೆ ಈ ಮೂವರು ಎದುರಿಸಿದ ಸಮಾಜಿಕವ್ಯವಸ್ಥೆ ಒಂದೇಯಾದ್ದರಿಂದ ಈ ರೀತಿ ಭಾಸವಾಗುವುದು ಸಹಜ. ಇದು ಕೂಡಾ ನನ್ನ ಅಧ್ಯಯನದ ಮಿತಿ ಎಂದು ನಮ್ರವಾಗಿ ಒಪ್ಪಿಕೊಳ್ಳುತ್ತೇನೆ. ಕೆಲವು ಅಂಶಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸುವಾಗ ಆಧಾರಗಳ ಕೊರತೆಯೂ ಕಾರಣವಾಗುತ್ತದೆ. ಇಲ್ಲಿಯ ಕೆಲವಾರು ಅಭಿಪ್ರಾಯಗಳು, ಅನಿಸಿಕೆಗಳು ತದನಂತರ ವಿದ್ವತ್‌ಜನರಲ್ಲಿ ಚರ್ಚೆಗೆ ಒಳಪಡುತ್ತವೆ. ವೈಚಾರಿಕ ಲೇಖನಗಳು ಹಾಗೂ ಸಂಶೋಧನಾ ಬರಹಗಳನ್ನು ಆಧರಿಸಿರುವುದರಿಂದ ಸ್ಪಷ್ಟತೆ, ನಿಖರತೆ ಕಂಡು ಬರುವ ಸಾಧ್ಯತೆ ಇದೆ. ನನ್ನ ಈ ಮಹಾಪ್ರಬಂಧದಲ್ಲಿ ಸಮಗ್ರ ವಿಷಯದ ನಿರೂಪಣೆ ಹಾಗೂ ಪ್ರತಿಪಾದನೆಯಲ್ಲಿ ಅಂತರ್‌ಶಿಸ್ತೀಯ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಸಂಪೂರ್ಣವಾಗಿ ಅನುಸರಿಸಲು ಯತ್ನಿಸಲಾಗಿದೆ.

* * * * *

: ಅಡಿ ಟಿಪ್ಪಣಿಗಳು :

1	ಡಾ:ಚಂದ್ರಶೇಖರ್ ದಾಮ್ಲೆ: ಬಸವಯುಗ: ಕರ್ನಾಟಕದಲ್ಲಿ ಪ್ರತಿಭಟನೆಯ ಪೀಠಿಕೆ ಲೇಖನ: ಬಸವತತ್ವ, ಸಾಮಾಜಿಕ ಬದಲಾವಣೆ, ಸಂ: ಮಹೇಶ ತಿಪ್ಪಶೆಟ್ಟಿ	ಪುಟ 35-36
2	ಸರಜೂ ಕಾಟ್ಕರ್: :ಮಹಾವೃಕ್ಷ- ಬಂಡಾಯ ಸಾಹಿತ್ಯ ಪ್ರಸ್ತಾವನೆ	ಪುಟ 41-42
3	ಡಾ.ಎನ್. ಚಿನ್ನಸ್ವಾಮಿ ಸೋಸಲೆ: ನಮ್ಮ ಗ್ರಾಮಗಳು ಅಂದು ಇಂದು	ಪುಟ 3
4	ಡಾ. ಬಸವರಾಜ ಸಬರದ: ಬಸವಣ್ಣ ಮತ್ತು ಪ್ರಸ್ತುತ ಸಾಮಾಜಿಕ ಸಂದರ್ಭ	ಪುಟ 1,2
5	ಚಂದ್ರಶೇಖರ ಪಾಟೀಲರ ಲೇಖನ: ಬಸವಣ್ಣ ನನ್ನ ಪಾಲಿಗೊಂದು ಸಾಕ್ಷಿ ಪ್ರಜ್ಞೆ' ಬಸವಮಾರ್ಗ ಮಾಸಿಕ ಜೂನ್ - ಜುಲೈ 2004	ಪುಟ 24
6	ಪ್ರೊ. ಲಕ್ಷ್ಮಣ ತೆಲಗಾವಿ: ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು	ಪುಟ 7
7	ಅದೇ ಗ್ರಂಥ	ಪುಟ 12
8	ಆರ್. ಸಿ. ಮುಜಂದಾರ್ ಲೇಖನ: ಭಾರತದಲ್ಲಿ ಧರ್ಮ, ತಾತ್ವಿಕ - ಸಂಸ್ಕೃತಿಯ ವಿಕಸನ - ಯುಗಯಾತ್ರೀ ಭಾರತೀಯ ಸಂಸ್ಕೃತಿ - ಸಂ.4	ಪುಟ 27
9	ಮಹೇಶ ತಿಪ್ಪಶೆಟ್ಟಿ(ಸಂ):ಬಸವ ತತ್ವ : ಸಾಮಾಜಿಕ ಬದಲಾವಣೆ	ಪುಟ 34
10	ಮುತ್ತಿನ ಸತ್ತಿಗೆ- ಡಾ.ತಾಳ್ತಂಜೆ ವಸಂತಕುಮಾರ	ಪುಟ 31
11	ಡಾ. ಮ.ನ.ಜವರಯ್ಯ: ಕನ್ನಡ ಸಾಹಿತ್ಯದಲ್ಲಿ ಶಿವರಾಮ ಕೃಷ್ಣ ಅಂಬೇಡ್ಕರ್	ಪುಟ 424

ಅಧ್ಯಾಯ - 2

ಬುದ್ಧ

2.1 ಬುದ್ಧನ ಬದುಕು ಹಾಗೂ ಬೋಧನೆಗಳು.

2.2 ಬುದ್ಧನ ಪ್ರತಿಭಟನಾ ನೆಲೆಗಳು.-ಬುದ್ಧ ಚಿಂತನೆಗಳು.

2.3 ವರ್ಣ ವ್ಯವಸ್ಥೆಯ ವಿರೋಧ.

2.4 ವರ್ಗ ಜಾತಿಯ ವಿರುದ್ಧ ಪ್ರತಿಭಟನೆ.

2.5 ಯಜ್ಞ ಯಾಗ, ವೇದಗಳ ವಿರುದ್ಧ ಪ್ರತಿಭಟನೆ.

2.6 ಕರ್ಮ ಸಿದ್ಧಾಂತದ ವಿರುದ್ಧ ಪ್ರತಿಭಟನೆ.

2.7 ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಪ್ರತಿಭಟನೆ.

2.8 ಲಿಂಗ ತಾರತಮ್ಯ ವಿರೋಧಿಸಿದ.

2.9 ಮೌಢ್ಯತೆ, ಅನಿಷ್ಟಗಳು ಅನೀತಿಯ ಖಂಡನೆ.

ಅಧ್ಯಾಯ - ಎರಡು.

ಬುದ್ಧ

ನಮ್ಮ ಪರಂಪರೆಯ ಕಂದಾಚಾರವನ್ನು ಪ್ರತಿಭಟಿಸಿ ನಿಂತು, ತಮ್ಮ ಯುಗ, ಧರ್ಮಕ್ಕನುಗುಣವಾದ ಹೊಸ ವಿಚಾರ ಪ್ರಣಾಳಿಕೆಯನ್ನು ನಿರೂಪಿಸಿದವರಲ್ಲಿ ಬೌದ್ಧ ಧರ್ಮದ ಪ್ರವರ್ತಕ ಬುದ್ಧ ಪ್ರಮುಖ. ಪರಂಪರೆ ಆವನ ಕಾಲದಲ್ಲಿ ಸಕಾಲಿಕ ವಿಚಾರಗಳ ಪ್ರವಾಹವಾಗಿರದೆ ಹಳೆಯ ವಿಚಾರಗಳ ನಿಂತ ನೀರಾಗಿತ್ತು. ಹೀಗಾಗಿ ಅದು ಪ್ರಯೋಜನ ದೂರವಾಗಿತ್ತು. ಇಂತಹ ಕಾಲದಲ್ಲಿ ವೈದಿಕ ಧರ್ಮದ ಕಂದಾಚಾರಗಳನ್ನು ಬಯಲಿಗೆಳೆದು, ಅವುಗಳ ಅಪ್ರಯೋಜಕತೆಯನ್ನು ಬಿಂಬಿಸಿ, ಅವುಗಳ ಸ್ಥಳದಲ್ಲಿ ಹೊಸ ವಿಚಾರಗಳನ್ನು ವ್ಯಕ್ತಪಡಿಸಿ ಜನ ಬದುಕಲು ಹೊಸ ಧರ್ಮವನ್ನು ನೀಡಿದ್ದು, ಜಗತ್ತಿನ ಜನತೆಯ ಪುಣ್ಯ. ಬುದ್ಧ ಸ್ವತಂತ್ರ ವಿಚಾರವಾದಿ. ಬೌದ್ಧ ಧರ್ಮ ಪ್ರಮುಖವಾಗಿ ವೈಚಾರಿಕ-ನೈತಿಕ ಧರ್ಮ, ವೈಚಾರಿಕತೆ, ಬೌದ್ಧ ಧರ್ಮದ ನೆಲೆಗಟ್ಟು, ನೈತಿಕತೆ ಸೋಪನ. ವೈಚಾರಿಕತೆಯನ್ನನುಸರಿಸಿ, ವ್ಯಕ್ತಿ ಪ್ರಯತ್ನವನ್ನು ಪ್ರತಿಪಾದಿಸಿದ ಬೌದ್ಧ ಧರ್ಮದಲ್ಲಿ ವಿಚಾರ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯಗಳಿವೆ. ಈ ವ್ಯಕ್ತಿ ಪ್ರಯತ್ನ ಪ್ರತಿಪಾದನೆ ಅತಿ ಮಾನುಷ ದೈವವನ್ನು ಪ್ರತಿಷ್ಠಾಪಿಸಲು ಎಡೆಗೊಡಲಿಲ್ಲ. ದುಃಖದಿಂದ ದೂರವಾದ ಪರಮ ಸುಖಸ್ಥಿತಿ ಅದರ ಗಮ್ಯ. ಅದರ ಗುರಿ ಸ್ವರ್ಗವಾಗಲಿ, ದೇವರೊಡನೆ ಐಕ್ಯವಾಗಲಿ ಅಲ್ಲ. ಮಾನವರನ್ನು ಆವರಿಸುವ ದುಃಖವನ್ನು ದೂರ ಮಾಡುವುದು ಮಾತ್ರ. ಇದಕ್ಕೆ ಕಾರಣ, ಜೀವನ ಬರಿ ದುಃಖದ ಆಗರ, ರೋಗ ರುಜಿನುಗಳ ಬೀಡು ಎಂದು ಅದರ ನಂಬಿಕೆ. ಕಷ್ಟ ಪರಿಹಾರಕ್ಕೆ ಆತ್ಮ ನಿಗ್ರಹ ಮಾರ್ಗವಾಯಿತು. ಮನಃಶುದ್ಧಿ ತಾರಕ ಮಂತ್ರವಾಯಿತು. ನೈತಿಕಾಚರಣೆಯೇ ಕೇಂದ್ರಬಿಂದುವಾದ ಈ ಧರ್ಮ ಸ್ವಾಭಾವಿಕವಾಗಿಯೇ ಬೌದ್ಧಿಕ ಕಸರತ್ತಿನ ಸೂಕ್ಷ್ಮ ಸೈದ್ಧಾಂತಿಕ ವಿಚಾರಣೆಗಳಿಗೆ ಮಹತ್ವ ಕೊಡಲಿಲ್ಲ. ನಿಜದುಃಖ, ಪರದುಃಖಗಳನ್ನು ನಿವಾರಿಸುವ ನೈತಿಕ ಆಚರಣೆ ಅದರ ಅವಶ್ಯಕ ಅಂಗವಾಯಿತು.

ವೈದಿಕಧರ್ಮ ದರ್ಶನದ ಪ್ರತಿಭಟನಾ ರೂಪದಲ್ಲಿ ಬೌದ್ಧಧರ್ಮ ಉದಯವಾಯಿತು. ಇದರ ಪರಿಣಾಮವೇನೆಂದರೆ, ವೈದಿಕಧರ್ಮದಲ್ಲಿ ಕಂಡು ಬರುವ ಯಜ್ಞ-ಯಾಗಾದಿ ಕ್ರಿಯೆಗಳಿಗೆ ಇಲ್ಲಿ ಸ್ಥಾನವಿಲ್ಲ. ಪುರೋಹಿತರ ಶೋಷಣೆ ಇಲ್ಲ. ಪ್ರಾಣಿ ಹಿಂಸಾರೂಪದ ಯಜ್ಞಗಳ ಸ್ಥಾನದಲ್ಲಿ ಬೌದ್ಧಧರ್ಮದಲ್ಲಿ ಅಹಿಂಸೆ ಪರಮಧರ್ಮವಾಯಿತು. ಧರ್ಮ ಕೆಲವರ ಸ್ವತ್ತಲ್ಲ, ಸಕಲ ಜೀವಿಗಳ ಜೀವಾಳವೆಂದು ನಂಬಿ, ಜನಸಾಮಾನ್ಯರನ್ನೆಲ್ಲ ತನ್ನ ಗುರಿಯಾಗಿಸಿತು. ಇದುವರೆಗೆ ಧರ್ಮ ನಿರೂಪಣೆಯ ಪಂಡಿತ ಭಾಷೆಯಾದ ಸಂಸ್ಕೃತದ ಬದಲು ಜನರ ಬಳಕೆಯ ಭಾಷೆಯಾದ ಪಾಲಿಯಲ್ಲಿ ಧರ್ಮಬೋಧನೆ ಪ್ರಾರಂಭವಾಯಿತು. ಇದು ಬೌದ್ಧಧರ್ಮದಷ್ಟೇ ವಿಶಿಷ್ಟವಾದ ಇನ್ನೊಂದು ಕ್ರಾಂತಿ. ಈ ಕಾರಣದ ಮೂಲಕ ಜನರಿಗೆ ತಮ್ಮ ಭಾಷೆಯಲ್ಲಿ ಧರ್ಮವನ್ನು ತಿಳಿಯುವ ಸೌಲಭ್ಯ ಒದಗಿ, ಆ ಧರ್ಮ ಭರದಿಂದ ಪ್ರಸಾರವಾಯಿತು. ಪ್ರಸಿದ್ಧ ವಿದ್ವಾಂಸ ರೈಸ್‌ಡೆವಿಡ್ಸ್‌ರ ಪ್ರಕಾರ "ಅವರೆಲ್ಲರಲ್ಲಿ (ಧಾರ್ಮಿಕ ಮಹಾಪುರುಷರಲ್ಲಿ) ಬುದ್ಧ ಶ್ರೇಷ್ಠನೆಂಬುದರಲ್ಲಿ ಸಂದೇಹವಿಲ್ಲ. ಬಹುಶಃ ಅನೇಕ ಅಂಶಗಳಲ್ಲಿ, ಅವನು ಪ್ರಪಂಚದ ಅತ್ಯಂತ ಮೇಧಾವಿ

ಧರ್ಮಬೋಧಕನೆಂಬುದನ್ನು ಇಡೀ ಪ್ರಪಂಚವೇ ಒಪ್ಪಿಕೊಳ್ಳಬೇಕಾಗುತ್ತದೆ". ಸಾಮಾನ್ಯ ತಾತ್ವಿಕ ಹಾಗೂ ಧಾರ್ಮಿಕ ಸಾಮರ್ಥ್ಯ ಇಲ್ಲಿಯವರೆಗೆ ಏನನ್ನು ಸಾಧಿಸಿದೆ ಮತ್ತು ಏನನ್ನು ಸಾಧಿಸಲು ಹೆಣಗುತ್ತಿದೆ, ಅವೆಲ್ಲವನ್ನು ಅನೇಕ ಅಂಶಗಳಲ್ಲಿ ಬೌದ್ಧ ಧರ್ಮ ಬಹು ಹಿಂದೆಯೇ ಸಾಧಿಸಿದೆ ಎನ್ನುವ ವಿದ್ವಾಂಸರ ಹೊಗಳಿಕೆ ಬೌದ್ಧ ಧರ್ಮದ ಮಹತ್ವವನ್ನು ಸಾರುತ್ತಿದೆ. ಬುದ್ಧ "ಆಸೆಯೇ ದುಃಖಕ್ಕೆ ಕಾರಣ" ಎಂದ್ಹೇಳಿ ದುಃಖಕ್ಕೆ ಕಾರಣವನ್ನು ತಿಳಿಸಿ, ದುಃಖ ನಿವಾರಣೆಯ ಮಾರ್ಗ ಬೋಧಿಸಿದ. ಬುದ್ಧ ಸಂದೇಶದ ಸಾರವೇ ಇಷ್ಟು ಆಸೆಯನ್ನು ಹತ್ತಿಕ್ಕಿ ಪ್ರಜ್ಞೆಯನ್ನು ಒಪ್ಪಿಕೊಳ್ಳುವುದು ಹೀಗೆ ಒಪ್ಪಿಕೊಂಡಾಗ ಸ್ವಸ್ಥ ಸಮಾಜದ ನಿರ್ಮಾಣವಾಗುತ್ತದೆ. ಅಲ್ಲಿ ಭ್ರಾತೃತ್ವವಿದೆ, ಸಮಾನತೆಯಿದೆ, ಪ್ರೀತಿ ಕರುಣೆಗಳಿವೆ, ದಯೆ-ಕ್ಷಮೆ ಇದೆ. ಪ್ರಶ್ನಿಸಲು ಕಲಿಸಿದ ಪ್ರಶ್ನಾತೀತವಾದದ್ದನ್ನು ಒಪ್ಪಿಕೊಳ್ಳದ ಪ್ರಜ್ಞೆಯನ್ನು ಜಾಗೃತಗೊಳಿಸಿದ ಬುದ್ಧ ಮಾನವ ಕುಲದ ಉದ್ಧಾರಕ್ಕೆ ಭಾರತ ಕೊಟ್ಟ ಅತೀ ದೊಡ್ಡ ಕೊಡುಗೆ"[1.] ಆದರೆ ಭಾರತೀಯರಿಗೆ ಬುದ್ಧನು ಕೊಟ್ಟ ಅನುಕಂಪ, ಭ್ರಾತೃತ್ವ ಸಂದೇಶ ಇಂದು ಈ ನಾಡಿನ ಸ್ವತ್ತಾಗಿರದೆ ಪರದೇಶಗಳಲ್ಲಿ ನೆಲಸಿವೆ. ಇದು ಅಂಧಶ್ರದ್ಧೆಯ ಧರ್ಮಧುರಂದರರು ಮಾಡಿದ ಕುತಂತ್ರ ಈ ಮಾತು ಕೆಲವರಿಗೆ ಕಹಿಯಾಗಿ ಕಾಣಬಹುದು. ಆದರೆ ಸತ್ಯಾಂಶವನ್ನು ಪ್ರಾಮಾಣಿಕನಾದವನು ಬಚ್ಚಿಡಲು ಸಾಧ್ಯವಿಲ್ಲ. ಬುದ್ಧನಂಥ ಮಹಾವ್ಯಕ್ತಿಗಳು ಎಂದೋ ಆಗಿ ಹೋದ ಇತಿಹಾಸದ ಪುಟಗಳಲ್ಲಿ ಸೇರಿ ಹೋದ ವ್ಯಕ್ತಿಗಳಲ್ಲ. ಈ ಭೂಮಿಯ ಮೇಲೆ ಎಲ್ಲಿಯವರೆಗೆ ಮಾನವ ಜೀವಿಸಿರುತ್ತಾನೆಯೋ ಅಲ್ಲಿಯವರೆಗೆ ಬುದ್ಧ ಪ್ರಸ್ತುತನಾಗುತ್ತಾನೆ.

ಬುದ್ಧ ಪೂರ್ವದ ಸ್ಥಿತಿ-ಗತಿ

ಬೌದ್ಧ ಪೂರ್ವ ಕಾಲವು ಸಂಪೂರ್ಣವಾಗಿ ಶ್ರೇಣಿಕೃತವಾಗಿತ್ತು. ಋಗ್ವೇದದ ಪುರುಷ ಸೂಕ್ತದ ಪ್ರಕಾರ, ಬ್ರಹ್ಮನ ಮುಖದಿಂದ ಬ್ರಾಹ್ಮಣರು, ತೋಳುಗಳಿಂಧ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು ಹಾಗೂ ಪಾದಗಳಿಂದ ಶೂದ್ರರು ಜನಿಸಿದರು ಎಂಬ ನಂಬಿಕೆಯನ್ನು ಮೂಡಿಸಲಾಗಿತ್ತು. ಚಾತುರ್ವರ್ಣ ಪದ್ಧತಿಯಲ್ಲಿ ಪ್ರತಿಯೊಬ್ಬರೂ ಶ್ರದ್ಧೆ ಹೊಂದಿದ್ದರು. ಇದು ಅಸಮಾನತೆಯನ್ನಷ್ಟೇ ನಿರ್ಮಾಣ ಮಾಡಿರದೇ ತಾರತಮ್ಯದ ಅಸಮಾನತೆಯನ್ನು ರೂಪಿಸಿತ್ತು. ಈ ಪದ್ಧತಿಯು ಪ್ರತಿಯೊಂದು ವರ್ಣದ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ನಿಖರಗೊಳಿಸಿಟ್ಟಿತ್ತು. ಅಂದಿನ ಸಮಾಜವ್ಯವಸ್ಥೆ ಅಸಮಾನತೆಯ ಕೂಪವಾಗಿತ್ತು. ಬುದ್ಧ ಪೂರ್ವದ ಇತಿಹಾಸವೆಂದರೆ ಉತ್ತರ ವೈದಿಕ ಕಾಲವೆಂದು ಗುರುತಿಸಿಕೊಳ್ಳಬೇಕಾಗುತ್ತದೆ. ಯಜುರ್ವೇದ ಹಾಗೂ ಇನ್ನಿತರ ವೈದಿಕ ಸಾಹಿತ್ಯಗಳನ್ನು ಕ್ರಿ.ಪೂ. 1000 ರಿಂದ 600 ವರೆಗಿನ ಕಾಲಾವಧಿಗೆ ಸೇರಿಸಬಹುದು. ಇವುಗಳಲ್ಲಿ ಕ್ರಿ.ಪೂ. 600 ರ ನಂತರ ಪ್ರಕ್ಷಪ್ತ ಭಾಗಗಳೂ ಇದ್ದಿರಬಹುದಾದರೂ ವೈದಿಕ ಇತಿಹಾಸದ ರಚನೆಯನ್ನು ಮಾಡುವಾಗ ಇತಿಹಾಸಕಾರರು ಕ್ರಿ..ಪೂ. 600ಕ್ಕೂ ಹಿಂದಿನವುಗಳನ್ನು ಮಾತ್ರ ಪರಿಗಣಿಸುತ್ತಾರೆ. ವೈದಿಕ ಸಾಹಿತ್ಯವು ಒಂದು ಮೌಖಿಕ ಸಂಪ್ರದಾಯವಾಗಿದ್ದು, ಸಾವಿರಾರು ವರ್ಷಗಳವರೆಗೆ ಕೇಳಿ ಕಲಿತು ಬಂದದ್ದಾಗಿದೆ. 19ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರು ಇಂಥ ಸಂಪ್ರದಾಯಗಳನ್ನು ಸಂಗ್ರಹಿಸಿ, ಭಾಷಾಂತರಿಸುವ ಪ್ರಯತ್ನ ನಡೆಸಿದರು.[2] ಬುದ್ಧನಿಗಿಂತ ಮೊದಲಿನ ಚರಿತ್ರೆ ಅಧ್ಯಯನವೆಂದರೆ ಉತ್ತರ ವೈದಿಕ ಕಾಲದ ಸ್ಥಿತಿ-ಗತಿಯ ಅಧ್ಯಯನವೇ ಆಗಿದೆ. ಬುದ್ಧನ ಜನನ ಪೂರ್ವದ ಸ್ಥಿತಿ ಗತಿಯನ್ನು ಅರಿಯಲು ಉತ್ತರ ವೈದಿಕ ಕಾಲದ ವೈದಿಕ ಸಾಹಿತ್ಯವನ್ನು ಅವಲಂಬಿಸಿ ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಸ್ಥಿತಿ-ಗತಿಯನ್ನು ನಿರೂಪಿಸಲು ಸಾಧ್ಯ. ಅಷ್ಟೇ ಅಲ್ಲ. ಬುದ್ಧನ ಪ್ರತಿಭಟನಾತ್ಮಕ

ನೆಲೆಗಳನ್ನು ಗುರುತಿಸಲು ಕೂಡಾ ಅಂದಿನ ಇತಿಹಾಸದ ಅರಿವು ಅಗತ್ಯವೆನಿಸುತ್ತದೆ. ಯಾಕೆಂದರೆ ವಾಸ್ತವವಾಗಿ ಪ್ರಾಚೀನ ಭಾರತದಲ್ಲಿ ಸಾಮಾನ್ಯ ಜನರ ಬಾಳು ಅತ್ಯಂತ ಶೋಚನೀಯವಾಗಿತ್ತು. ಅವರನ್ನು ನಿರ್ದಯವಾಗಿ ಶೋಷಣೆ ಮಾಡಲಾಗುತ್ತಿತ್ತು. ಅವರ ಉತ್ಪಾದನೆಯ ಹೆಚ್ಚಿನ ಅಂಶ ಆಳುವ ವರ್ಗಗಳ ಬೊಕ್ಕಸವನ್ನು ಸೇರುತ್ತಿತ್ತು. ದುಃಖ-ದಾರಿದ್ರ್ಯಗಳೇ ಅವರ ಪಾಲಿಗೆ ದೊರೆಯುತ್ತಿದ್ದು ಬಳುವಳಿಯಾಗಿತ್ತು. ಈ ಸಮಗ್ರ ಆರ್ಥಿಕ-ಸಾಮಾಜಿಕ-ರಾಜಕೀಯ ವ್ಯವಸ್ಥೆಯ ವಿರುದ್ಧ ಕ್ರಿಸ್ತ ಪೂರ್ವ 6ನೇ ಶತಮಾನದ ಮಧ್ಯಭಾಗದಲ್ಲಿ ಬುದ್ಧ ಮತ್ತು ಮಹಾವೀರರು ಬಂಡೆದ್ದರು. ಚಾತುರ್ವರ್ಣ ಪದ್ಧತಿ ವೈದಿಕಧರ್ಮದೊಂದಿಗೆ ಹಾಸುಹೊಕ್ಕಾಗಿದ್ದು ಕಾರಣ, ಅವರ ಪ್ರತಿಭಟನೆ ಸ್ವಾಭಾವಿಕವಾಗಿಯೇ ಧಾರ್ಮಿಕ ಸ್ವರೂಪ ತಳೆದು, ವೈದಿಕ ಧರ್ಮಕ್ಕೆದುರಾಗಿ ಬೌದ್ಧ-ಜೈನ ಧರ್ಮಗಳು ಉದಯವಾದವು. ಇವರಿಬ್ಬರೂ ಯಜ್ಞಕ್ರಿಯೆ, ಚಾತುರ್ವರ್ಣ ವ್ಯವಸ್ಥೆ, ಪಶುಹತ್ಯೆ, ಹಿಂಸೆಗಳನ್ನು ತೀವ್ರವಾಗಿ ವಿರೋಧಿಸಿದರು.

ಜಗತ್ತಿನ ಇತಿಹಾಸದಲ್ಲಿ ಹಾಗೂ ಭಾರತದಲ್ಲಿ ಕ್ರಿ.ಪೂ. 6ನೇ ಶತಮಾನ ಬಹು ಮಹತ್ವಪೂರ್ಣವಾದ ಕಾಲ. ಏಕೆಂದರೆ ಆ ಕಾಲದಲ್ಲಿ ವಿಚಾರಶಕ್ತಿ, ಆಧ್ಯಾತ್ಮಿಕ, ಧಾರ್ಮಿಕ ವಲಯಗಳಲ್ಲಿ ಮಹತ್ತರ ಆಂದೋಲನವೇ ಆಯಿತು. ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಸುಧಾರಣೆಗಳಾದವು. ಜನರ ವಿಚಾರ ಪ್ರಜ್ಞೆಯಲ್ಲಿ ಹೊಸದೊಂದು ಚೇತನ ಮೂಡಿತು. ವೈಚಾರಿಕ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಕಾಲ. ಈ ಶತಮಾನವನ್ನು "ಆಶ್ಚರ್ಯಕರವಾದ ಶತಕ" ಬೌದ್ಧಿಕ ಬೆಳವಣಿಗೆಯ ಕಾಲ ಎಂದು ಕರೆಯಲಾಗಿದೆ. ಈ ಕಾಲದಲ್ಲಿ ಕೆಲವು ಮಹಾನ್ ವ್ಯಕ್ತಿಗಳು ಜನಿಸಿ, ಮನುಕುಲದ ಇಹ-ಪರ ಜೀವನದ ಉನ್ನತಿಗೆ ಪೋಷಕವಾಗುವಂತಹ ಸದ್ವಿಚಾರಗಳನ್ನು ಪ್ರತಿಪಾದಿಸಿದರು. ಪರ್ಶಿಯಾದಲ್ಲಿ ಜೊರಾಸ್ಟರ್, ಚೀನಾದಲ್ಲಿ ಲವೊತ್ಸೆ ಮತ್ತು ಕನ್‌ಫ್ಯೂಷಿಯಸ್, ಇಸ್ರೇಲ್‌ನಲ್ಲಿ ಈಸಾಯಿ, ಭಾರತದಲ್ಲಿ ಮಹಾವೀರ-ಬುದ್ಧರು ಜನ್ಮತಾಳಿ ಜನರ ಬಾಳಿಗೆ ದಾರಿದೀಪವಾದರು. ಇದೇ ಶತಮಾನದಲ್ಲಿ "ಮಾನವ ಜನಾಂಗವು ಶೈಶವಾವಸ್ಥೆಯನ್ನು ಕಳೆದು ತಾರುಣ್ಯಾವಸ್ಥೆಯಲ್ಲಿ ಕಾಲಿಡಲು ಪ್ರಾರಂಭಿಸಿತು. ಈ ಕಾಲದಲ್ಲಿ ಜರುಗಿದ ಧಾರ್ಮಿಕ, ಸಾಮಾಜಿಕ, ರಾಜಕೀಯ ಘಟನೆಗಳು ಬಹುತೇಕವಾಗಿ ಶಾಶ್ವತ ಪರಿಣಾಮನ್ನುಂಟು ಮಾಡಿದವು. ಭಾರತದಲ್ಲಿ ಶತಮಾನಗಳಿಂದ ಬೇರು ಬಿಟ್ಟಿದ್ದ ವೈದಿಕಧರ್ಮಗಳು ದೃಢವಾದ ಪ್ರತಿಭಟನೆಯನ್ನು ನಡೆಸುವುದರ ಮೂಲಕ ಜನರಲ್ಲಿ ವೈಚಾರಿಕ ಮನೋಭಾವನೆ ಬೆಳೆಸಿದವು. ಹೀಗಾಗಿ ಈ ಕಾಲ ಧಾರ್ಮಿಕ, ರಾಜಕೀಯ ಸಾಮಾಜಿಕ ಸ್ಥಿತ್ಯಂತರಗಳನ್ನು ಕಂಡ ಕಾಲ. ಬೌದ್ಧಿಕ, ನೈತಿಕ ಜ್ಞಾನಕ್ಕೆ ತೀವ್ರತರವಾದ ಪ್ರಯತ್ನಗಳು ವೈಶಿಷ್ಟ್ಯ ಪೂರ್ಣವಾಗಿ ನಡೆದವು.

ಇತ್ತೀಚಿನ ವಿದ್ವಾಂಸರ ಸಂಶೋಧನೆಯಿಂಧ ಸಿದ್ಧವಾದಂತೆ ಪ್ರಾಚೀನ ಕಾಲದ ಭಾರತದಲ್ಲಿ ಬ್ರಾಹ್ಮಣ ಸಂಸ್ಕೃತಿ ಮತ್ತು ಶ್ರಮಣ ಸಂಸ್ಕೃತಿಗಳೆಂದು ಎರಡು ಸಮಾನಾಂತರ ವಿಭಾಗಗಳನ್ನು ವಿದ್ವಾಂಸರು ಗುರುತಿಸುತ್ತಾರೆ.[3] ಅಂದಿನ ಆ ಬ್ರಾಹ್ಮಣ ಸಂಸ್ಕೃತಿಯೆನ್ನುವುದು ಜನ್ಮಜಾತವಾಗಿರಲಿಲ್ಲ. ಸನ್ನಡತೆ, ಸಚ್ಚಾರಿತ್ರ್ಯದಿಂದ ಯಾವ ಜಾತಿಯವನಾದರೂ ಬ್ರಾಹ್ಮಣ್ಯವನ್ನು ಪಡೆಯಬಹುದಿತ್ತು. ಪ್ರತಿಯೊಬ್ಬ ಪ್ರಯತ್ನವಾದಿ ಅದನ್ನು ಸಾಧಿಸಬಹುದಿತ್ತು. ಶ್ರಮಣ ಸಂಸ್ಕೃತಿಯು ಬ್ರಾಹ್ಮಣ ಸಂಸ್ಕೃತಿಗಿಂತಲೂ ಬೇರೆಯಾಗಿ ನಿಲ್ಲುವಂತಹದ್ದು. ಶ್ರಮಣರನ್ನು "ಸವಣ" "ಯತಿ" ಎಂತಲೂ ಕರೆಯಲಾಗುತ್ತಿತ್ತು. ಬುದ್ಧನ ಸಮಕಾಲೀನ ಆರು ಜನರ ಶ್ರಮಣರ ಉಲ್ಲೇಖ ಬೌದ್ಧ ಸಾಹಿತ್ಯದಲ್ಲಿ ಉಲ್ಲೇಖಗೊಂಡಿದೆ. ಅವರ ಉಪದೇಶ ಸಾರಾಂಶವೂ

ದೀಘನಿಕಾಯದ "ಸಾಮಜ್ಞ ಫಲಿಸುತ್ತ"ದಲ್ಲಿ ಈ ಆರೂ ಶ್ರಮಣರ ಉಪದೇಶ ಸಾರವನ್ನು ಕೊಡಲಾಗಿದೆ. ಬೌದ್ಧಿಕ ಕ್ಷೋಭೆಯ ಈ ಕಾಲದಲ್ಲಿ ಅಧಿಕ ಸಂಖ್ಯೆಯ ಹೊಸ ಬೋಧೆಗಳೂ ಪ್ರವೃತ್ತಿಗಳೂ ಕಾಣಿಸಿಕೊಂಡವು. ಇವುಗಳ ಅನೇಕ ವಿಚಾರಗಳನ್ನು ಅನಂತರ ಪ್ರಧಾನ ಸ್ಮಧಾರಣಾ ಸಿದ್ಧಾಂತಗಳ ಸಂಸ್ಥಾಪಕರು ಎತ್ತಿಕೊಂಡು ವಿಶದಗೊಳಿಸಿದರು. ಆರಂಭದ ಎಲ್ಲ ಶ್ರವಣ ಪಂಥಗಳೂ ವೇದಗಳ ಅಧಿಕಾರವನ್ನು ವೇದಗಳ ಮೇಲೆ ಆಧರಿಸಿದ ಸೈದ್ಧಾಂತಿಕ ಹಾಗೂ ಸಾಮಾಜಿಕ ಕಟ್ಟಳೆಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದವು. ("ಶ್ರಮಣರು" - ಶ್ರವಣ ಎಂಬ ಪದ ಸಂಪ್ರದಾಯ ವಿರೋಧಿ ಚಳುವಳಿಗಳ ಅಥವಾ ಪಂಥಗಳ ಅನುಯಾಯಿಗಳಾದ ಸನ್ಯಾಸಿಗಳನ್ನು ಸೂಚಿಸುವಂತಾಯಿತು) ವೇದ ಸಾಹಿತ್ಯದಲ್ಲಿ ಘೋಷಿಸಿ ವಿಷದಗೊಳಿಸಲ್ಪಟ್ಟಿದ್ದ ವರ್ಣ ವ್ಯವಸ್ಥೆಯ ಮೇಲೆ ಆಧರಿಸಿದ ಪಾರಂಪರಿಕ, ಸಾಮಾಜಿಕ ವ್ಯವಸ್ಥೆಯನ್ನು ತಿರಸ್ಕರಿಸಿ ಅವರು ಪ್ರಕೃತಿಯಲ್ಲಿ, ಸಮಾಜದಲ್ಲಿ ಮಾನವನ ಸ್ಥಾನದ ಪ್ರಶ್ನೆಯನ್ನು ಹೊಸ ರೀತಿಯಲ್ಲಿ ಪರಿಶೀಲಿಸಬೇಕಿದ್ದಿತು. ಈ ನಿಟ್ಟಿನಲ್ಲಿ ನಡೆಸಿದ ಸೈದ್ಧಾಂತಿಕ ಚಟುವಟಿಕೆಯ ತೀವ್ರತೆಯು ಒಂದೊಂದು ಪಂಥದಲ್ಲಿ ಒಂದೊಂದು ಪ್ರಮಾಣದಲ್ಲಿದ್ದಿತ್ತು. ಪ್ರಾಚೀನ ಭಾರತದಲ್ಲಿ ಉಪನಿಷತ್‌ಗಳೊಂದಿಗೆ ಪ್ರತಿರೋಧ ಆರಂಭವಾಯಿತು. ಚಾರ್ವಾಕರು ಲೋಕಾಯತರ ಏಳಿಗೆ-ಚಾರ್ವಾಕರು ಜ್ಞಾನ ಮತ್ತು ಮತಧರ್ಮದಲ್ಲಿ ಎಲ್ಲ ಸ್ವಾರ್ಥವನ್ನು ವಿರೋಧಿಸಿದರು. ವೇದಗಳು, ಪುರೋಹಿತ ವರ್ಗ ಮತ್ತು ಶಿಷ್ಟಾಚಾರಗಳನ್ನು ಅಲ್ಲಗಳೆದರು. ಭಾವನೆ ಸ್ವತಂತ್ರವಿರಬೇಕು ಎಂದು ಸಾರಿದರು. ವಾಸ್ತವಿಕತೆ ಮತ್ತು ವಿಚಾರ ದೃಷ್ಟಿಗೆ ಪ್ರಾಮುಖ್ಯತೆ. ಬುದ್ಧನ ಕಾಲ ಒಂದು ಧಾರ್ಮಿಕ ಜಾಗೃತಿಯ ಕಾಲವಾಗಿತ್ತು. ವೇದಗಳ ಪ್ರಾಮಣ್ಯವನ್ನು ಬ್ರಾಹ್ಮಣ ತತ್ವ ಸಿದ್ಧಾಂತಗಳನ್ನು ಪ್ರಶ್ನಿಸುವ, ವಿರೋಧಿಸುವ ಹಾಗೂ ಧಿಕ್ಕರಿಸುವ ಅನೇಕ ಧಾರ್ಮಿಕ ಪಂಗಡಗಳು ಹುಟ್ಟಿಕೊಂಡಿದ್ದವು. ಇಂತಹ ಧಾರ್ಮಿಕ ಪಂಗಡಗಳು ಹೆಚ್ಚಾಗಿ ಆತ್ಮ, ಸ್ವರ್ಗ, ನರಕ, ಕರ್ಮಫಲ, ಪುನರ್ಜನ್ಮ, ಹುಟ್ಟು, ಸಾವು, ತಪಶ್ಚರ್ಯ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸುತ್ತ ಕಟುವಾಗಿ ವಿಮರ್ಶಿಸುತ್ತ ಇದ್ದುವೇ ಹೊರತು ಮಾನವನ ಉನ್ನತಿಗಾಗಿ ಯಾವೊಂದು ಚಿಂತನೆಯನ್ನು ಮಾಡುವ ಗೋಜಿಗೆ ಹೋಗದೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಚರ್ಚಿಸುತ್ತ, ಮಂಡಿಸುತ್ತ ಶಿಷ್ಯರುಗಳೊಂದಿಗೆ ವಿವಿಧ ಪಂಗಡಗಳನ್ನು ಮಾಡಿಕೊಂಡಿದ್ದರು. ಅಂತಹ ಧಾರ್ಮಿಕ ಪಂಗಡಗಳು ಅರವತ್ತು ಇದ್ದವು ಎನ್ನಲಾಗಿದೆ. ಅವುಗಳಲ್ಲಿ ಮುಖ್ಯವಾದ ಆರು ಪಂಗಡಗಳ ಅಭಿಪ್ರಾಯಗಳನ್ನು ಇಲ್ಲಿ ಅವಲೋಕಿಸಲಾಗಿದೆ.

1) ಪುರಾಣ ಕಸ್ಸಪರ ಅಕ್ರೀಯವಾದ
2) ಮುಖಲಿ ಘೋಷಲ್‌ರ ನಿಯತಿವಾದ
3) ಅಜಿತ್‌ಕೇಶ ಕಂಬಲ್‌ರ ಉಚ್ಛೇದವಾದ
4) ಪಕದ ಕಚ್ಚಾನರ ಅನೋನ್ಯವಾದ
5) ಸಂಜಯ ಬೆಲಪುಟ್ಟರ ವಿಕ್ಷೇಪವಾದ
6) ಮಹಾವೀರ ನಿಗಂತ-ಪುಟ್ಟರ ಚತುರ್ಯಾಮ ಸಂವರವಾದ

ಪುರಾಣ ಕಸ್ಸಪರ "ಅಕ್ರಿಯವಾದ"ವು ಹೀಗೆನ್ನುತ್ತದೆ. ಅನೀತಿಯುತವಾದ ವಿಷಘಾತ್ಮಕವಾದ ಕಾರ್ಯಗಳಾಗಲೀ, ಉತ್ತಮ ಕಾರ್ಯಗಳಾಲೀ, ಆತ್ಮಕ್ಕೆ ಯಾವ ಬಗೆಯ ಪರಿಣಾಮವನ್ನು ತಾರವು. ಪ್ರತಿಫಲವನ್ನು ತರವು. ಒಬ್ಬ ಜೀವಿ ಮರಣಿಸಿದರೆ ಯಾವ ಮೂಲಧಾತುಗಳಿಂದ ಮಾಡಲ್ಪಟ್ಟಿರುವನೋ ಅವುಗಳು ಬಿಡುಗಡೆಯಾಗಿ ಮೂಲವನ್ನು ಸೇರುವವು. ಶರೀರವಾಗಲೀ, ಆತ್ಮವಾಗಲೀ ಮರಣಾನಂತರ ಅಸ್ತಿತ್ವದಲ್ಲಿರುವುದಿಲ್ಲ. ಮುಖಲೀ ಘೋಷಲ್‌ರ "ನಿಯತಿವಾದವು" ಎಲ್ಲವೂ ಪೂರ್ವ ನಿರ್ಧಾರಿತ, ವಿಧಿವಶ.

ಪ್ರತಿಯೊಬ್ಬನೂ ತನಗೆ ದೊರೆಯುವ ಜೀವನಾನುಭವಗಳನ್ನು ಅನುಭವಿಸಿಯೇ ತೀರಬೇಕು ಎನ್ನುತ್ತದೆ. ಅಜಿತಕೇಶಕಂಬಲ್‌ರ "ಉಚ್ಛೇದವಾದ" ಹೋಮಗಳಲ್ಲಿ ನಂಬಿಕೆಯಿಡುವುದಿಲ್ಲ. ಸ್ವರ್ಗ ನರಕಗಳೆರಡೂ ಇಲ್ಲ. ಯಾವ ಬಗೆಯ ಸಂಕಟಗಳಿಂದಲೂ ಆತ್ಮವೂ ತಪ್ಪಿಸಿಕೊಳ್ಳುವುದಿಲ್ಲ. ಈ ಆತ್ಮವೆಂಬುದು ಮಹಾಕಲ್ಪಗಳೆಂಬ ಎಂಭತ್ನಾಲ್ಕು ಲಕ್ಷ ಬಾರಿ ಆವೃತ್ತ ಸುತ್ತಗಳ ಮರು ಜನ್ಮಗಳನ್ನು ಹೊಂದಿದ ನಂತರವೇ ಆತ್ಮದ ವಿಮೋಚನೆ. ಆದಕ್ಕೆ ಮುಂಚೆಯಾಗಲೀ ಅಥವಾ ಬೇರಾವ ಮಾರ್ಗದಿಂದಾಗಲೀ ವಿಮೋಚನೆ ಎಂಬುದೇ ಇಲ್ಲ ಎನ್ನುತ್ತದೆ. ಪಕದಕಜ್ಯಾನರ "ಅನೋನ್ಯವಾದ" ಹೀಗಿದೆ: ಒಂದು ಜೀವಿಯು ಉತ್ಪನ್ನವಾಗಬೇಕಾದರೆ ಏಳು ಮೂಲಧಾತುಗಳಾದ ಪೃಥ್ವಿ, ಆಪ್, ತೇಜಸ್, ವಾಯು, ಸುಖ-ದುಃಖ ಮತ್ತು ಆತ್ಮಗಳ ಸಂಯೋಗವಾಗಬೇಕು. ಇವು ಪ್ರತಿಯೊಂದು ಸರ್ವ ಸ್ವತಂತ್ರವಾದ, ಸ್ವಯ ಅಸ್ತಿತ್ವವನ್ನು ಹೊಂದಿರತಕ್ಕಂತಹ, ಶಾಶ್ವತವಾದಂತಹ ಧಾತುಗಳು, ಇವುಗಳನ್ನು ನಾಶಗೊಳಿಸಲಾಗದು. ಈ ವಾದವು ಎಲ್ಲಿಯವರೆಗೆ ಮಂಡಿಸಲ್ಪಟಿತೆಂದರೆ ಯಾರಾದರೂ ಒಬ್ಬನ ತಲೆಯನ್ನು ಕತ್ತರಿಸಿದರೆ ಒಬ್ಬನ ಮೇಲಿನ ಏಳು ಮೂಲಧಾತುಗಳನ್ನು ಹೊಕ್ಕಿದೆ ಎಂದು ಅರ್ಥ ಎನ್ನುವವರೆಗೆ. ಸಂಜಯ ಬೆಲಪುಟ್ಟರ "ವಿಕ್ಷೇಪವಾದ"ವು ಸ್ವರ್ಗ-ನರಕಗಳು ಇಲ್ಲವೆನ್ನುತ್ತದೆ. ಮಾನವನ ಕರ್ಮಫಲಗಳನ್ನು ಅನುಭವಿಸಬೇಕೇ? ಮರಣಾ ನಂತರ ಆತ್ಮವು ಜೀವಿಸಿರುವುದೇ? ಎಂಬ ಪ್ರಶ್ನೆಗಳಿಗೂ ವಿಕ್ಷೇಪವಾದವು ಇಲ್ಲವೆಂದೇ ಉತ್ತರಿಸುವುದು. ಇವು ಯಾವವೂ (ಸ್ವರ್ಗ, ನರಕ, ಕರ್ಮಫಲ, ಆತ್ಮ) ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ ಎಂದು ವಿಕ್ಷೇಪವಾದ ಸರಣಿಯಾಗಿತ್ತು. ನಿಗಂತಪುಟ್ಟ (ಮಹಾವೀರ)ರ "ಚತುರ್ಯಾಮ ಸಂವಾರವಾದ" ಈ ಸಿದ್ಧಾಂತವು ಆತ್ಮದ ಹಾಗೂ ದುಷ್ಕೃತ್ಯಗಳ ಫಲವಾಗಿ ಮರು ಜನ್ಮಗಳನ್ನು ಅನುಭವಿಸಬೇಕೆಂದೂ, ದುಷ್ಕೃತ್ಯಗಳ ಫಲವನ್ನು ಆತ್ಮವು ಅನುಭವಿಸಬೇಕೆಂದೂ ಮಂಡಿಸಿತಲ್ಲದೇ ದುಷ್ಕೃತ್ಯಗಳ ನಿವಾರಣೆಗಾಗಿ ತಪಶ್ಚಯವನ್ನು ಸೂಚಿಸಿತು. ಅದೇ ಚತುರ್ಯಾಮ, ನಾಲ್ಕು ನಿಯಮಗಳ ಅನುಷ್ಠಾನ:ಅವು ಕೊಲ್ಲದಿರುವುದು, ಕದಿಯದಿರುವುದು, ಸುಳ್ಳು ಹೇಳದಿರುವುದು, ಐಶ್ವರ್ಯವನ್ನು ಹೊಂದದಿರುವುದು ಮತ್ತು ಬ್ರಹ್ಮಚರ್ಯವನ್ನು ಅನುಸರಿಸುವುದು. ಈ ರೀತಿಯಲ್ಲಿ ಆರು ಜನ ಆಚಾರ್ಯರು ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದರು. ಬುದ್ಧನ ತತ್ವಗಳಿಗೂ ಈ ಆರೂ ಜನರ ಸಿದ್ಧಾಂತಗಳಿಗೂ ತುಂಬಾ ಅಂತರವಿರುವುದು ಕಂಡು ಬರುತ್ತದೆ. ಅವರು ಬ್ರಾಹ್ಮಣ ಧರ್ಮದ ತತ್ವ ಸಿದ್ಧಾಂತಗಳಿಂದ ಅಸಮಾಧನಗೊಂಡಿದ್ದವರು.

ಇಲ್ಲಿಯ ಉಲ್ಲೇಖಿತ ಆರು ಜನ ಗುರುಗಳ ಸಿದ್ಧಾಂತಗಳಿಂದ ತಿಳಿಯುವುದೇನೆಂದರೆ, ಅವರ ಒಟ್ಟು ತತ್ವಗಳಲ್ಲಿಯ ಮತಭೇದ. ಅಲ್ಲದೇ ತಮ್ಮ ತಮ್ಮ ಸಿದ್ಧಾಂತಗಳಲ್ಲಿಯೂ ಅವರಿಗೆ ಅವರದೇ ಆದ ನಿರ್ದಿಷ್ಟ, ಸ್ಪಷ್ಟ ನಿಲುವು ಇಲ್ಲದಿರುವುದು ಕಂಡು ಬರುತ್ತದೆ. ಆದರೆ ಬುದ್ಧನು ಪ್ರಪಂಚಕ್ಕೆ ಒಂದು ಹೊಸ ರೀತಿಯ ಬದುಕಿನ ಸತ್ವ ಹಾಗೂ ತತ್ವಗಳನ್ನು ನೀಡಿದನು. ಆತನ ಸಮಕಾಲೀನ ಸಂದರ್ಭದಲ್ಲಿದ್ದ ಈ ಮೇಲೆ ಉಲ್ಲೇಖಿಸಲಾದ ಆರು ಜನರಂತೆ ಇನ್ನೂ ಅನೇಕ ಸ್ವಯಂಕೃತ ಗುರುಗಳೆನಿಸಿಕೊಂಡವರು ತಮ್ಮದೇ ಆದ ತತ್ವಗಳನ್ನು, ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಅವರ ಬದುಕಿನ ತತ್ವಗಳೆಲ್ಲವೂ, ಅವುಗಳ ಘನತೆಯೂ ಕಣ್ಮರೆಯಾಗಿ ಬರಿಯ ಬಾಹ್ಯ ಆಡಂಬರವೇ ಕಂಡುಬರುತ್ತಿತ್ತು. ಅಂತಹ ಸಂದರ್ಭದಲ್ಲಿ ಅರಿವಿನ ದಾರಿ ತೋರಲು ಬುದ್ಧನ ಅರುಣೋದಯವಾಯಿತು. ಸಿದ್ಧಾರ್ಥನು ಮೇಲೆ ಉಲ್ಲೇಖಿಸಿದ ಮತ ಸಿದ್ಧಾಂತಗಳ ನಡುವೆ ಇದ್ದನು. ನಿಗಂಥನಾಥಪುಟ್ಟರ ಸಿದ್ಧಾಂತವೊಂದನ್ನುಳಿದು ಮಿಕ್ಕ ಐದು ಸಿದ್ಧಾಂತಗಳ ವಿರುದ್ಧ ಹಾಗೂ ಬ್ರಾಹ್ಮಣ ತತ್ವ ಸಿದ್ಧಾಂತಗಳ ವಿರುದ್ಧ ಹೋರಾಡಬೇಕಾಗಿದ್ದಿತು. ವೇದ ಪ್ರಾಮಣ್ಯವನ್ನು ಮೋಕ್ಷ ಸಾಧನೆಗೆ

ಬಲಿದಾನಗಳನ್ನು ನೀಡುವುದನ್ನು ಚತುರ್ವರ್ಣ ಸಿದ್ಧಾಂತವನ್ನು ಬ್ರಹ್ಮಾಂಡದ ಸೃಷ್ಟಿಕರ್ತ ಈಶ್ವರನೆಂಬುದನ್ನು, ಆತ್ಮವನ್ನು, ಜನ್ಮಾಂತರ ಭಾವನೆಗಳನ್ನು, ಕರ್ಮಫಲವನ್ನು ಬುದ್ಧನು ಪೂರ್ಣವಾಗಿ ನಿರಾಕರಿಸಿದನು.

ಬುದ್ಧನು 'ಮನುಷ್ಯನು ಯಾವಾಗ, ಎಲ್ಲಿಂದ ಬಂದನು ಮತ್ತು ಈಗ ಏನಾಗಿರುವನು ಎಂಬ ಬಗೆಗೆ ಅಂದಿನವರೆಗೆ ಇದ್ದ ಊಹಾಪೋಹಗಳನ್ನು ತಿರಸ್ಕರಿಸಿದನು. ಆತ್ಮದ ಅಸ್ತಿತ್ವವನ್ನು ಇಚ್ಛಾಶಕ್ತಿ ಮತ್ತು ಪ್ರಜ್ಞಾವಸ್ಥೆಗಳೊಡನೆ ಸಂಯಮಗೊಳ್ಳುತ್ತದೆ ಎಂಬ ಸಿದ್ಧಾಂತವನ್ನು ತಿರಸ್ಕರಿಸಿದನು. ಶೂನ್ಯವಾದಿಗಳ ಪಾಖಂಡಿಗಳ ಅಭಿಪ್ರಾಯಗಳನ್ನು ವಿಶ್ವದ ಆರಂಭದ ಬಗ್ಗೆ ತಳೆದ ಊಹೆಗಳನ್ನು ದೇವರು ಮಾನವನನ್ನು ಸೃಷ್ಟಿಸಿದನು. ಮಾನವನು ಬ್ರಹ್ಮನ ಶರೀರ ಭಾಗಗಳಿಂದ ಹೊರಬಂದನೆಂಬ ಅಭಿಪ್ರಾಯಗಳನ್ನು, ಆತ್ಮದ ಆಸ್ತಿತ್ವವನ್ನು ಬುದ್ಧನು ತಿರಸ್ಕರಿಸಿದನು. ಕಾರಣ ಮತ್ತು ಪ್ರತಿಫಲ ಹಾಗೂ ಅವುಗಳ ವಿಲೋಮ ನಿಯಮಗಳನ್ನು ಒಪ್ಪಿದನು. ಕರ್ಮಫಲಾನುಭವ ಜೀವನವನ್ನು ತಿರಸ್ಕರಿಸಿ, ಕರ್ಮ ಎಂಬುದರ ವೈಜ್ಞಾನಿಕ ವಿಶ್ಲೇಷಣೆಯಿಂದ ನೂತನ ಕರ್ಮ ಸಿದ್ಧಾಂತವನ್ನು ನಿರೂಪಿಸಿದನು. ಮೋಕ್ಷ ಸಾಧನೆ, ಆತ್ಮ ನಿವೇದನೆಯನ್ನು ನಿರಾಕರಿಸಿ ನಿರ್ವಾಣ ಸಿದ್ಧಾಂತವನ್ನು ಮಂಡಿಸಿದನು. ಹೀಗೆ ಬುದ್ಧನು ಹಳೆಯ ಸಿದ್ಧಾಂತವನ್ನು ತಿದ್ದುಪಡಿ ಮಾಡಿ ನಿರೂಪಿಸಿದನು. ಬುದ್ಧನು ವಿಧಿ, ದೇವರಾಟ, ಕರ್ಮಫಲಗಳನ್ನು ತಿರಸ್ಕರಿಸಿ, ಎಲ್ಲದಕ್ಕೂ ಮಾನವನ ಮನಸ್ಸೇ ಮುಖ್ಯ ಕಾರಣ ಎಂಬುದನ್ನು ಒತ್ತಿ ಹೇಳಿದನು. ಉತ್ತಮ ಮತ ಸಿದ್ಧಾಂತ ನಿಯಮಗಳನ್ನು ತಿರಸ್ಕರಿಸದೇ ಒಪ್ಪಿದನಲ್ಲದೇ ಅಂತಹ ನಿಯಮಗಳನ್ನು ಗ್ರಂಥಸ್ಥವಾಗಿರಿಸದೇ ಆಚರಣೆಯಲ್ಲಿಡಬೇಕಾಗಿ ಹೇಳಿದನು. ಹಿಂದಿನ ಮತ ಸಿದ್ಧಾಂತಳ ಪರಿಶೀಲನೆ, ಹಲವು ಸಿದ್ಧಾಂತಗಳ ನಿರಾಕರಣೆ, ಕೆಲವು ಸಿದ್ಧಾಂತಗಳ ತಿದ್ದುಪಡಿ, ಅನುಮೋದನೆಗಳನ್ನು ಪರಿಶೀಲಿಸಿದರೆ ಬುದ್ಧನ ಆಲೋಚನಾ ವಿಧಾನ, ಸರ್ವ ಮಾನವರಿಗಾಗಿ ಅವನ ಕಳಕಳಿ ಮುಂತಾದವು ಗೋಚರಿಸುತ್ತವೆ. ಇಲ್ಲಿ ಮುಖ್ಯವಾಗಿ ಬುದ್ಧನು ಪ್ರಯತ್ನಿಸಿದ್ದು ಮಾನವನ ಉನ್ನತಿಗಾಗಿ, ಶ್ರೇಯಸ್ಸಿಗಾಗಿ, ಮಾನವನ ದುಃಖರಹಿತ ಜೀವನ ಸ್ಥಾಪನೆಗಾಗಿ ಅದನ್ನು ಕಂಡುಕೊಳ್ಳುವ ಒಂದು ಸ್ಥಿತಿಗಾಗಿ, ಅಸಮಾನತೆಯ ನಿವಾರಣೆಗಾಗಿ ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ಎಂಬುದು ವೇದ್ಯವಾಗುತ್ತದೆ.

ಬುದ್ಧನು ವಿಚಾರವಾದಿ, ತರ್ಕವಾದಿ, ಮಾನವರ ಒಳಿತಿಗೆ ಸಂಬಂಧಿಸಿದ್ದಲ್ಲದ ಯಾವ ವಿಷಯವನ್ನೇ ಕುರಿತು ವ್ಯರ್ಥ ಚರ್ಚೆಗೆ ಇಳಿದವನಲ್ಲ. ಸರ್ವ ವಸ್ತು ವಿಚಾರಗಳಲ್ಲಿಯೂ ಬುದ್ಧನ ಖಚಿತವಾದ ನಿರ್ದಿಷ್ಟವಾದ ಪ್ರಾಯೋಗಿಕ ದೃಷ್ಟಿಯುಳ್ಳವನಾಗಿದ್ದನು. "ತತ್ವ ಧ್ಯೇಯಗಳು ತಮ್ಮಷ್ಟಕ್ಕೇ ತಾವೇ ಜೀವಿಸಿರಬೇಕು. ಅವು ಎಂದಿಗೂ ಮಾನವನ ಅಧಿಕಾರ ಚಲಾವಣೆಯಿಂದಾಗಬಾರದು" ಎಂಬುದು ಬುದ್ಧನ ಧ್ಯೇಯವಾಗಿದ್ದಿತು. ಬುದ್ಧ ತನ್ನನ್ನಾಗಲೀ ತನ್ನ ಬೋಧನೆಗಳಿಗಾಗಲೀ ದೈವತ್ವವನ್ನು ಆರೋಪಿಸಿಕೊಳ್ಳದೇ, ಮಾನವ ಕೋಟಿಯಲ್ಲಿ ತಾನೊಬ್ಬ ಮಾನವನೆಂದು ಹೇಳಿಕೊಂಡಿದ್ದಾನೆ. ತನ್ನ ಸಂದೇಶಗಳು ಎಲ್ಲಾ ಬಗೆಯ ತಪ್ಪುಗಳಿಂದ ಸಂಪೂರ್ಣ ವಿಮುಕ್ತವೆಂದು ಹೇಳಿಕೊಳ್ಳಲಿಲ್ಲ, ಸಮರ್ಥಿಸಿಲ್ಲ. ವಿಮೋಚನೆಗೆ ಸಾಧನವಾದ ತನ್ನ ಧರ್ಮ ಸಂದೇಶವನ್ನು ಯಾರಾದರೂ ಪರೀಕ್ಷಿಸಬಹುದು, ಪ್ರಶ್ನಿಸಬಹುದು, ಪ್ರಯೋಗಕ್ಕೆ ಒಳಪಡಿಸಬಹುದು ಎಂದೂ ಸಂದೇಶವಿತ್ತಿದ್ದಾನೆ.[4] ಬುದ್ಧ ರೂಢ ಮೂಲವಾದ ಮಠಾಚಾರ, ಮೂಢನಂಬಿಕೆ, ಕರ್ಮಕಾಂಡ, ಪೌರೋಹಿತ್ಯ ಅದರ ಎಲ್ಲ ಹಕ್ಕುದಾರಿಕೆಗಳನ್ನು ಧೈರ್ಯದಿಂದ ಪ್ರತಿಭಟಿಸಿದನು.

2.1 ಬುದ್ಧನ ಬದುಕು ಹಾಗೂ ಬೋಧನೆಗಳು :

ಬುದ್ಧನಂಥ ಮಹಾವ್ಯಕ್ತಿಗಳು ಎಂದೋ ಆಗಿ ಹೋದ ಇತಿಹಾಸದ ಪುಟಗಳಲ್ಲಿ ಸೇರಿ ಹೋದ ವ್ಯಕ್ತಿಗಳಲ್ಲ. ಈ ಭೂಮಿಯ ಮೇಲೆ ಎಲ್ಲಿಯವರೆಗೆ ಮಾನವ ಜೀವಿಸಿರುತ್ತಾನೆಯೋ ಅಲ್ಲಿಯವರೆಗೂ ಬುದ್ಧ ಪ್ರಸ್ತುತನಾಗುತ್ತಾನೆ. ಮಾತ್ರವಲ್ಲ, ನಮ್ಮೊಂದಿಗೆ ಇರುತ್ತಾನೆ. ನಮ್ಮೊಳಗೆ ಇರುತ್ತಾನೆ. ಬುದ್ಧನ ತ್ಯಾಗ, ವೈರಾಗ್ಯ ಚಿಂತನೆ, ಬೋಧನೆಗಳು ವಿಕಾಸ ಶೀಲತೆಯನ್ನು ಬಯಸುವ ಚೇತನಗಳಿಗೆ ಅನಂತತೆಯನ್ನು ನೀಡುವ ಆಶಾಕಿರಣಗಳು. ಮನುಷ್ಯನ ಬದುಕನ್ನು ಹಸನುಗೊಳಿಸಿದ ಹಲವು ಜನ ಮಹಾನುಭಾವರಲ್ಲಿ ಬುದ್ಧನು ಒಬ್ಬ. ಸುಮಾರು ಕ್ರಿ.ಪೂ. 563 ಅಥವಾ ಕ್ರಿ.ಪೂ. 566 ರಲ್ಲಿ ಜನಿಸಿ ಸುಮಾರು ಕ್ರಿ.ಪೂ. 483 ಅಥವಾ ಕ್ರಿ.ಪೂ. 486 ರವರೆಗೆ ಬದುಕಿದ್ದನೆಂದು, ಕಾಲದ ಬಗೆಗಿನ ತೀವ್ರ ಭಿನ್ನಾಭಿಪ್ರಾಯದ ನಡುವೆಯೂ ಇಟ್ಟುಕೊಳ್ಳಬಹುದಾದ ಬುದ್ಧನ ಬದುಕಿನ ಈ ಅವಧಿ ಚರಿತ್ರೆಯ ಒಂದು ಮಹಾಯುಗವೆಂಬುದರಲ್ಲಿ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. 2500 ವರ್ಷಗಳ ಇತಿಹಾಸವುಳ್ಳ ಬೌದ್ಧಧರ್ಮ ತರ್ಕಬದ್ಧವಾಗಿದೆ. ಮಾನವೀಯವಾಗಿದೆ. ವೈಜ್ಞಾನಿಕ ಮನೋಭಾವ ದಿಂದಾಗಿ ಅತ್ಯಾಧುನಿಕವಾಗಿದೆ. "ಯಾವುದೇ ಮತ ಅಥವಾ ಧರ್ಮ ಇನ್ನೊಂದು ಮತ ಅಥವಾ ಧರ್ಮಕ್ಕಿಂತ ಕೀಳೂ ಅಲ್ಲ, ಮೇಲೂ ಅಲ್ಲ ಎಂಬುದನ್ನು ಸಾರಿದೆ. ತನ್ನ ಮಾತಿನಿಂದ, ನಡತೆಯಿಂದ ವಿಶ್ವ ಮಾನವ ಧರ್ಮವನ್ನು ಹುಟ್ಟು ಹಾಕಿದ ಗೌತಮಬುದ್ಧ."[5]

ವೈದಿಕಧರ್ಮದ ವಿಧಿ, ವಿಧಾನ, ಅಂಧಾನುಕರಣೆಗಳ ವಿರುದ್ಧ ಸಿಡಿದೆದ್ದ ಧರ್ಮವಾದುದರಿಂದ ಬೌದ್ಧಧರ್ಮ ಅವೈದಿಕ ಧರ್ಮವೆನಿಸಿಕೊಂಡಿದೆ. ಬುದ್ಧನ ಬೋಧನೆಯಲ್ಲಿ, ಧರ್ಮದಲ್ಲಿ ಹಿಂಸಾತ್ಮಕವಾದ, ಯಜ್ಞ -ಯಾಗಗಳಿಗೆ ಸ್ಥಾನವಿಲ್ಲ. ಯಾವುದನ್ನೇ ಆಗಲಿ, ಸ್ವಾನುಭವ, ಸ್ವಚಿಂತನೆ, ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿ ನೋಡಬೇಕೆಂಬ ಆಧುನಿಕ ವೈಚಾರಿಕ ಮನೋಭಾವವಿದೆ. ಭಾರತದ ಧಾರ್ಮಿಕ ರಂಗದಲ್ಲಿ ವಿಚಾರ ಯುಗಕ್ಕೆ ಆದ್ಯತೆಯನ್ನು ನೀಡಿದ ಬುದ್ಧನು "ನಿದ್ರೆಯಲ್ಲಿ ಮಗ್ನವಾಗಿರುವ ಜಗತ್ತಿನಲ್ಲಿ ಜಾಗೃತನಾಗಿರುವವನು ಬುದ್ಧನೊಬ್ಬನೇ" ಎಂಬ ಪ್ರಶಂಸಾ ವಾಕ್ಯಕ್ಕೆ ಪಾತ್ರನಾಗಿದ್ದಾನೆ. ಬುದ್ಧನ ಅನುಕಂಪ, ಮಾನವ ಪ್ರೇಮ, ಅವನ ಸರಳವಾದ, ತತ್ವಗಳು ಬಹುಬೇಗನೇ ಜನರನ್ನು ಆಕರ್ಷಿಸಿದವು. ಬೌದ್ಧಧರ್ಮಕ್ಕೆ ಹಲವರು ಒಲಿದು ಬಂದರು. ಈ ಕಾಲವನ್ನು ಮಾನವ ಪ್ರಗತಿಯ ಒಂದು ಮೈಲಿಗಲ್ಲೆಂದು ಇತಿಹಾಸಕಾರರು ನಿರ್ಣಯಿಸಿದ್ದಾರೆ. ವಿಶ್ವದ ಶ್ರೇಷ್ಠ ಧರ್ಮಗಳಲ್ಲಿ ಒಂದಾದ, ಕ್ರಿ.ಪೂ.600 ವರ್ಷಗಳ ಹಿಂದೆ ಇದ್ದ ಬೌದ್ಧಧರ್ಮವು ಒಂದು. ಭಾರತ ದೇಶವು ಇಡೀ ವಿಶ್ವಕ್ಕೆ ನೀಡಿರುವ ಅತ್ಯಮೂಲ್ಯ ಕೊಡುಗೆ ಎಂದೆನಿಸಿದೆ. ಮನುಷ್ಯನನ್ನು, ಮನಸ್ಸನ್ನು ಕುರಿತು ಹೇಳುವುದು ಬುದ್ಧಧರ್ಮ, ಆದುದರಿಂದಲೇ ಆಲ್ಬರ್ಟ್ ಐನ್‌ಸ್ಟೀನ್ ಎಂಬ ವಿಜ್ಞಾನಿ ಮತ್ತು ಬರ್ಟೆಂಡ್ ರಸಲ್ ಎಂಬ ತತ್ವಜ್ಞಾನಿ ಇವರುಗಳು ಬುದ್ಧಧರ್ಮವೇ ನಾಳಿನ ಮಾನವ ಜನಾಂಗದ ಧರ್ಮವಾಗುತ್ತದೆಂದು ಹೇಳಿದ್ದಾರೆ. "ಮನ ಮುಟ್ಟಿ ಬಾಳ್ವೆ ನಡೆಸುವುದು ಎಂದರೆ ಬುದ್ಧ ಮಾರ್ಗದಲ್ಲಿ ನಡೆಯುವುದು ಅಲ್ಲ. ಭ್ರಾತೃತ್ವವಿದೆ, ಸಮಾನತೆಯಿದೆ, ಪ್ರೀತಿ ಕರುಣೆಗಳಿವೆ, ದಯೆ ಇದೆ, ಕ್ಷಮೆ ಇದೆ. ಪ್ರಶ್ನಿಸಲು ಕಲಿಸಿದ, ಪ್ರಶ್ನಾತೀತವಾದದ್ದನ್ನು ಒಪ್ಪಿಕೊಳ್ಳದ, ಪ್ರಜ್ಞೆಯನ್ನು ಜಾಗೃತಗೊಳಿಸಿದ, ಬುದ್ಧ ಮಾನವ ಕುಲದ ಉದ್ಧಾರಕ್ಕೆ ಭಾರತ ಕೊಟ್ಟ ಅತಿ ದೊಡ್ಡ ಕೊಡುಗೆ."[6] ವೈಚಾರಿಕತೆಯ ಹಿನ್ನೆಲೆಯಲ್ಲಿ ಬುದ್ಧ ವೈದಿಕಧರ್ಮದ ಹಿಂಸೆ, ವರ್ಗ ವರ್ಣಾಶ್ರಮ ಪದ್ಧತಿ, ಮೌಢ್ಯಗಳಿಗೆ ಕೊಡಲಿ ಪೆಟ್ಟು ಹಾಕುತ್ತಾನೆ. ಜಾತಿ ನಾಶಕ್ಕೆ, ಸಮಾನತೆಗಾಗಿ ಶ್ರಮಿಸುತ್ತಾನೆ. ತನ್ನ ಧರ್ಮದ ಬಗ್ಗೆ ಅವನ ಹೇಳಿಕೆಯಿದು "ಎಲ್ಲ ನಾಡುಗಳಿಗೂ ಹೋಗಿ, ಇದನ್ನು ಸಾರಿ-ಬಡವ ಬಲ್ಲಿದರೆಲ್ಲ ಒಂದು. ಎಲ್ಲ ಜಾತಿಗಳೂ ಈ

ಧರ್ಮದಲ್ಲಿ ಒಂದಾಗುತ್ತವೆ. ನದಿಗಳು ಸಮುದ್ರದಲ್ಲಿ ಹೇಗೋ ಹಾಗೆ!" ಅವನು ಉಪದೇಶಿಸಿದ್ದು ತನ್ನ ಕಾಲದ ಜನ ಭಾಷೆಯಾಗಿದ್ದ ಪಾಳಿಯಲ್ಲಿ.

ಏನು ಅರಿಯದ ಜನಸಾಮಾನ್ಯರು ಒಂದು ಕಡೆ, ಸಾಮಾಜಿಕ-ಧಾರ್ಮಿಕ ಸ್ವಾಮ್ಯವನ್ನು ಹೊಂದಿದ ಪ್ರತಿಷ್ಠಿತ ಜನ ಮತ್ತೊಂದು ಕಡೆ. ಈ ಸನ್ನಿವೇಶದಲ್ಲಿ ಸಮಾಜದಲ್ಲಿ ಶಾಂತಿ, ಸಮಾಧಾನ, ಸಮಾನತೆಗಳು ಕಣ್ಮರೆಯಾಗಿದ್ದವು. ಅಸಮಾನತೆ, ದುರಾಚಾರ, ಶೋಷಣೆ. ರಾಜಕೀಯ ದಬ್ಬಾಳಿಕೆ, ಶೋಷಣೆಗಳು ನೆಲೆಗೊಂಡಿದ್ದವು. ಕ್ರಿಸ್ತಪೂರ್ವ ಆರುನೂರು ವರ್ಷಗಳ ಹಿಂದೆ ಇಂತಹ ಸ್ಥಿತಿ ಭರತ ಖಂಡದಲ್ಲಿ ತಲೆದೋರಿತ್ತು. "ಕರ್ಮಕಾಂಡ ಅತಿಯಾಗಿ ಬೆಳೆದಿತ್ತು. ಧರ್ಮದ ತಿರುಳನ್ನು ಕಡೆಗಣಿಸಿದ ವ್ರತ ನಿಯಮಗಳಿಗೆ ಅನುಚಿತ ಮಹತ್ವ ದೊರೆತಿತ್ತು. ಧರ್ಮದ ಹೆಸರಿನಲ್ಲಿ ಅಧರ್ಮ ನಡೆದಿತ್ತು. ಧರ್ಮವೆಂಬುದು ಒಂದು ಸಣ್ಣ ವರ್ಗದ ಅಧಿಕಾರಕ್ಕೆ ಸೇರಿದಂತಾಗಿದ್ದು, ಸಾಮಾನ್ಯ ಜನತೆಯು ಅದರಿಂದ ವಂಚಿತವಾಗಿತ್ತು. ಇದರಿಂದ ಸಮಾಜ ಅಧೋಗತಿಗೆ ಇಳಿದಿತ್ತು. ಯಜ್ಞ ಯಾಗಾದಿಗಳ ಹೆಸರಿನಲ್ಲಿ ಹಿಂಸೆ ನಡೆದಿತ್ತು. ಅಂತಹ ಕಾಲದಲ್ಲಿ ಉದಯವಾದ ವಿಶ್ವ ವಿಭೂತಿ ಬುದ್ಧದೇವ. ಅಂದಿನ ಜನಸಾಮಾನ್ಯರ ಹೀನ ಸ್ಥಿತಿಯನ್ನು ಕಂಡು ಕನಿಕರಪಟ್ಟುಕೊಂಡ ಬುದ್ಧದೇವ. ಅಂದಿನ ಹಿಂಸಾವೃತ್ತಿ ಬುದ್ಧನ ಕರುಣೆಯನ್ನು ಕೆರಳಿಸಿತು. ಮಾನವನ ದುಃಖದ ಮೂಲವನ್ನೇ ಶೋಧಿಸಿ, ಅದನ್ನು ತೊಡೆದು ಹಾಕುವ ಹಾದಿಯನ್ನು ಕಂಡುಕೊಳ್ಳಲು ಆತನು ನಿರ್ಧರಿಸಿದ"[7] ಬುದ್ಧ ತನ್ನ ಸಮಕಾಲೀನ ಸಮಾಜದ ಸ್ಥಿತಿಗತಿ ಕಂಡು ವಿಚಾರಶೀಲನಾದನು. ಅಂದಿನ ಯಜ್ಞ, ಯಾಗ, ಹಿಂಸೆ, ಶೋಷಣೆಗಳನ್ನು ಕಂಡು ಬುದ್ಧ ಕರುಣಾ ಮೂರ್ತಿಯಾದ. ಅಂದಿನ ಸ್ಥಿತಿಯನ್ನು ಹೋಗಲಾಡಿಸಲು ಮಾನವತೆ ಮೂಡಿಸಲು ಹಾತೊರೆದನು. ಹೊಸ ಬೆಳಕನ್ನು ತಾನು ಕಂಡುಕೊಂಡು ಅದನ್ನು ಜನರಿಗೆ ಉಪದೇಶಿಸಿದ. ಹೊಸದೊಂದು ವೈಚಾರಿಕ ಯುಗಕ್ಕೆ ನಾಂದಿ ಹಾಡಿದ. ಪ್ರಚಲಿತ ಪರಿಸ್ಥಿತಿಯ ಬಗೆಗೆ ಬೇಸರಪಟ್ಟುಕೊಂಡು ಹೊಸಬೆಳಕನ್ನು ಅರಸಲೆಂದೇ ಸಿದ್ಧಾರ್ಥ ಅರಮನೆಯನ್ನು ತೊರೆದ, ಕಾನನ ಸೇರಿದ, ತೊಳಲಿ ಬಳಲಿದ. ಬೋಧಿ ವೃಕ್ಷದ ಬಳಿ ನೆಲೆಸಿ ಹೊಸ ಬೆಳಕನ್ನು ಕಂಡು ಬುದ್ಧ ದೇವನಾದ. "ಆ ಕಾಲದಲ್ಲಿ ರೂಢವಾಗಿದ್ದ ಅವಿರತವಾದ ಅಲೌಕಿಕ ಚರ್ಚೆಗಳಿಂದ, ಜಟಿಲವಾದ ವ್ರತ-ನಿಯಮಗಳಿಂದ, ಇವೆಲ್ಲಕ್ಕಿಂತ ಹೆಚ್ಚಾಗಿ ಜಾತಿ ಭೇದದಿಂದ ಗೌತಮನು ತಿರಸ್ಕಾರಪಟ್ಟುಕೊಂಡನು."[8] ಅಂದು ರೂಢವಾಗಿದ್ದು ಹೀನಾಯವಾದ ರೀತಿ ನೀತಿ, ಆಚರಣೆಗಳನ್ನು ಕಂಡು ಕೊರಗಿದವನು ಬುದ್ಧ. ಮಾನವರಲ್ಲಿಯ ವಿಷಮತೆ ಕಂಡು ಮರುಗಿದ. ಅದರ ಫಲವೇ ಬೌದ್ಧ ಧರ್ಮ ಸ್ಥಾಪನೆ.

"ಈ ಪೃಥ್ವಿಯ ಮೇಲೆ ಯಾವಾಗ ಬುದ್ಧನ ಜನನವಾಗಿತ್ತೋ ಆ ಕಾಲದಲ್ಲಿ ದೇಶದಲ್ಲಿ ಅನೇಕ ಮತವಾದಗಳು ಪ್ರಚಾರದಲ್ಲಿದ್ದವು. ಜನರಲ್ಲಿ ತಾತ್ವಿಕ-ಜಿಜ್ಞಾಸೆ ಪ್ರಾರಂಭವಾಗಿತ್ತು ಹಾಗೂ ವೈಚಾರಿಕತೆಯು ತುಂಬಿ ತುಳುಕುತ್ತಿತ್ತು. ಪರಲೋಕವಿದೆಯೋ ಇಲ್ಲವೋ, ಕರ್ಮವೆಂಬುದು ಇದೆಯೋ ಇಲ್ಲವೋ, ಕರ್ಮಗಳಿಗೆ ಪ್ರತಿಫಲವಿದೆಯೋ ಇಲ್ಲವೋ ಎಂಬಿತ್ಯಾದಿ ಪ್ರಶ್ನೆಗಳು ಪ್ರತಿಯೊಬ್ಬರ ಮನಸ್ಸಿನಲ್ಲಿ ತುಂಬ ಕುತೂಹಲವನ್ನುಂಟು ಮಾಡಿದ್ದವು."[9] ಈ ರೀತಿಯ ಪರಿಸರದಲ್ಲಿ ಜನಿಸಿದ ಬುದ್ಧನ ಜನನ ಕಾಲದ ಕುರಿತಂತೆ-ಖಚಿತವಾದ ನಿಲುವಿಗೆ ಬರುವಲ್ಲಿ ಹಲವರು ಪ್ರಯತ್ನ ಮಾಡಿದ್ದಾರೆ. ಬುದ್ಧ ಸ್ವತಃ ಯಾವುದೇ ಕೃತಿ ಬರೆದಿಟ್ಟಿಲ್ಲ. ಸಮಕಾಲೀನ ಕೃತಿಗಳಲ್ಲೂ ಮಾಹಿತಿ ಹೆಚ್ಚಿಗೆ ದೊರೆಯಲಾರದು. ಆದರೆ ಆತನನ್ನು

ಕುರಿತಂತೆ ಸೃಷ್ಟಿಯಾಗಿರುವ ಐತಿಹ್ಯಗಳು, ಶಾಸನಗಳು, ಚಾರಿತ್ರಿಕ ಕೃತಿಗಳು, ಆತನ ಶಿಷ್ಯರು ಸಂಗ್ರಹಿಸಿಟ್ಟಿರುವ ಬರಹಗಳು, ಇಲ್ಲಿಯವರೆಗೆ ಬಂದ ಸಂಶೋಧನಾತ್ಮಕ ಕೃತಿಗಳನ್ನು ಆಧರಿಸಿ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. "ಬುದ್ಧನ ಜನನ ಕಾಲವನ್ನು ಇಂದಿಗೂ ಖಚಿತವಾಗಿ ನಿರ್ಧಾರಿತವಾಗಿಲ್ಲವಾದರೂ ಅವನು ಸುಮಾರು ಕ್ರಿ.ಪೂ. 567 ರಲ್ಲಿ ಜನಿಸಿದನೆಂದು ಹೇಳುವುದು ಸತ್ಯಕ್ಕೆ ಹತ್ತಿರವಾದುದೆಂದು ತೋರುತ್ತದೆ" ಎಂದು ಟಿ.ಎಸ್. ರಾಜಗೋಪಾಲ್‌ರವರು ಹೇಳುತ್ತಾರೆ.[10] ಬುದ್ಧನ ಕಾಲ (ಕ್ರಿ.ಶ.ಪೂ. 567-ಕ್ರಿ.ಪೂ. 487)" ಬುದ್ಧ 80 ವರ್ಷಗಳವರೆಗೆ ಜೀವಿಸಿದ್ದನೆಂಬುದನ್ನು ಬೌದ್ಧ ಸಂಪ್ರದಾಯದ ಆಧಾರದ ಮೇಲೆ ನಿರ್ಣಯಿಸುವುದಾದರೆ ಬುದ್ಧನ ಜನನದ ಇಸವಿಯನ್ನು ಸುಲಭವಾಗಿ ಪಡೆಯಬಹುದು. 487+80 =567 ಆದ್ದರಿಂದ ಬುದ್ಧನ ಜನ್ಮದ ಇಸವಿ ಕ್ರಿ.ಶ.ಪೂ. 567.[11] ಮತ್ತೊಬ್ಬ ಪ್ರಸಿದ್ಧ ಇತಿಹಾಸಕಾರ ರಮಾಕಾಂತ ತ್ರಿಪಾಠಿಯವರು ತಮ್ಮ ಕೃತಿ "History of Ancient india" ದಲ್ಲಿ It is difficult to determine exactly the date of this event, which may be regarded as one of the most important points in our system of cronology. Vencent Smith placed it in 486-87 B.C. but the year 483 BC as proposed by Fleet and Gaigar on a through examination of the available date may be accepted as very near the truth. Some scholars on the other hand, take 543 B.C. to be the date of Buddhas Parinibbana:[12] ಇಲ್ಲಿ ಪರಿನಿರ್ವಾಣವನ್ನು ಕುರಿತಂತೆ ಹೇಳಿರುವಂತಿದೆ. ವಿನಹಃ ಜನನದ ಬಗ್ಗೆ ಖಚಿತವಾದ ಉಲ್ಲೇಖವಿಲ್ಲ.

"ಬುದ್ಧನ ಜನನ ಕಾಲ ಕ್ರಿ.ಪೂ. 560, ಅವನು ಸಂಸಾರ ತ್ಯಾಗ ಮಾಡಿದುದು ತನ್ನ 28ನೆಯ ವಯಸ್ಸಿನಲ್ಲಿ. ಅಂದರೆ ಕ್ರಿ.ಪೂ. 532 ರಲ್ಲಿ. ಅವನು ಬುದ್ಧನಾದುದು 7 ವರ್ಷಗಳ ನಂತರ ಸುಮಾರು 45 ವರ್ಷಗಳ ಕಾಲ ಅಖಂಡವಾಗಿ ಧರ್ಮ ಬೋಧೆ ಮಾಡಿ ಮಹಾ ನಿರ್ವಾಣ ಹೊಂದಿದ್ದು, ಕ್ರಿ.ಪೂ. 480 ರಲ್ಲಿ ಕೊನೆಗೆ 80 ವರ್ಷಗಳ ಕಾಲ ಜಗತ್ತನ್ನು ಜಾಜ್ವಲ್ಯಮಾನ್ಯವಾಗಿ ಬೆಳಗಿದ ಜ್ಯೋತಿ ನಂದಿತು"[13] ಎಂದು ಜೆ.ಎಸ್. ಕುಳ್ಳಿ ಅವರು ಸಂಕ್ಷಿಪ್ತವಾಗಿ ಬುದ್ಧನ ಜೀವನದ ಪ್ರಮುಖ ಘಟನೆಗಳನ್ನು ಕ್ರೋಢೀಕರಿಸಿದ್ದಾರೆ. ಇನ್ನೂ ಕೆಲವರು ಕ್ರಿ.ಪೂ. 563 ಅಥವಾ ಕ್ರಿ.ಪೂ. 566 ರಲ್ಲಿ ಬುದ್ಧ ಜನಿಸಿರಬೇಕೆಂದು ಜನನ ಕಾಲವನ್ನು ಕ್ರಿ.ಪೂ. 563 ಎಂದು ಗುರುತಿಸಿದ್ದಾರೆ. ಡಾ.ಆರ್.ಸಿ. ಹಿರೇಮಠರವರು ತಮ್ಮ ಕೃತಿ "Buddhism in Karnataka" ದಲ್ಲಿ ಬುದ್ಧನ ಜನನ ಕಾಲವನ್ನು ಕುರಿತು "He ws born in the Lumbini Gardens, when his mother was on her way to her father's place in 567 B.C. Birth, he was a Saky and by Gotra as Adity" ಮುಂದುವರಿದು "The Buddha died in 487 B.C. at the age of 80 on Vaishakha Purnima. The fullmoon day, in the month at Vaishakha which is observed now as Buddhas Purnima Day, ಮುಂದುವರಿದು " Gautama Buddha lived for 80 years from 567 B.C. to 487 B.C."[14] ಎಂದು ವಿವರಿಸಿದ್ದಾರೆ. "ಗೌತಮ ಬುದ್ಧ ಅಥವಾ ಸಿದ್ಧಾರ್ಥನು ಮಹಾವೀರನ ಸಮಕಾಲೀನ. ಅವನು ನೇಪಾಳ ಬೆಟ್ಟಗಳ ತಪ್ಪಲಿನಲ್ಲಿರುವ ಕಪಿಲ

ವಸ್ತುವಿನ ಒಂದು ಶಾಕ್ಯ ಕ್ಷತ್ರಿಯ ಕುಟುಂಬದಲ್ಲಿ ಕ್ರಿ.ಪೂ. 563 ರಲ್ಲಿ ಹುಟ್ಟಿದನು. ಕ್ರಿ.ಪೂ. 483 ರಲ್ಲಿ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಪೂರ್ವ ಉತ್ತರ ಪ್ರದೇಶದ ದಿಯೋರಿಯಾ ಜಿಲ್ಲೆಯ ಕಾಸಿಯ ಎಂಬ ಹಳ್ಳಿ ಎಂದು ಗುರುತಿಸಲ್ಪಟ್ಟಿರುವ ಕುಶೀನಗರದಲ್ಲಿ (ಕುಶೀನಾರ) ನಿರ್ವಾಣವನ್ನೇರಿದನು"[15] ಎಂದು ಆರ್.ಎಸ್. ಶರ್ಮಾರವರ ಅಭಿಪ್ರಾಯ. ಗೌತಮ ಬುದ್ಧನ ಕಾಲ (ಕ್ರಿ.ಪೂ.563-473)[16] ಇದು ಕ.ವಿ.ಹಂಪಿ ವಿಶ್ವಕೋಶ:3 ಧರ್ಮ ಗ್ರಂಥದಲ್ಲಿ ಉಲ್ಲೇಖಿಸಿರುವರು.

"ಬೌದ್ಧಧರ್ಮದ ಸಂಸ್ಥಾಪಕರು ಗೌತಮ ಬುದ್ಧನೆಂಬುದರಲ್ಲಿ ಯಾವುದೇ ಸಂದೇಹವೂ ಇಲ್ಲ. ಇತಿಹಾಸಕಾರರು ಇವನು ಹುಟ್ಟಿದ ವರ್ಷವನ್ನು ಬೇರೆ ಬೇರೆಯಾಗಿ ಗುರುತಿಸಿದ್ದರೂ ಸಾಮಾನ್ಯವಾಗಿ ಕ್ರಿ.ಪೂ. 566 ನ್ನು ಬುದ್ಧನು ಹುಟ್ಟಿದ ವರ್ಷವೆಂದು ಚರಿತ್ರೆಯಲ್ಲಿ ದಾಖಲಿಸಲಾಗಿದೆ"[17]. ಹೀಗೆ ಹಲವಾರು ವಿದ್ವಾಂಸರು ಬುದ್ಧನ ಜನನ ಕಾಲದ ಬಗ್ಗೆ ಭಿನ್ನ ಅಭಿಪ್ರಾಯ ಇರುವುದರಿಂದ ಕ.ವಿ.ಹಂಪಿ. ಚರಿತ್ರೆ ವಿಶ್ವ ಕೋಶದಲ್ಲಿ ನಮೂದಿಸಿದ ಕ್ರಿ.ಪೂ. 566 ರಲ್ಲಿ ಬುದ್ಧ ಜನಿಸಿದ ಎಂಬುದನ್ನು ನಿರ್ಧರಿಸಲಾಗಿದೆ. ಗೌತಮ ಬುದ್ಧನ ಪೂರ್ವಾಶ್ರಮದ ಹೆಸರು ಸಿದ್ಧಾರ್ಥ. ಇವನು ಕ್ಷತ್ರಿಯ ವಂಶಜನಾದ "ಕಪಿಲ ವಸ್ತು" ರಾಜ್ಯದ ರಾಜನಾಗಿದ್ದ ಶುದ್ಧೋದನ ಹಾಗೂ ಮಾಯಾದೇವಿಯ ಪುತ್ರ ಅಲ್ಲದೇ ಕ್ರಿ.ಪೂ.563 ನೇ ವೈಶಾಖ ಪೂರ್ಣಿಮೆಯಂದು ಲುಂಬಿಣಿಯಲ್ಲಿ (ಉತ್ತರ ಪ್ರದೇಶದ ಬಸ್ತಿ ಜಿಲ್ಲೆ, ನೇಪಾಳದ ಗಡಿ, ನೇಪಾಳದಲ್ಲಿರುವ ಪಹಾರಿಯಾದ ಪಶ್ಚಿಮಕ್ಕೆ) ಜನಿಸಿದ್ದಾನೆಂದು ನಂಬಲಾಗಿದೆ. ಶುದ್ಧೋದನ ಶಾಕ್ಯ ವಂಶದ ರಾಜನಾಗಿದ್ದರಿಂದ ಗೌತಮನಿಗೆ ಶಾಕ್ಯ ಸಿಂಹ ಮತ್ತು ಶಾಕ್ಯಮುನಿಯೆಂಬ ಹೆಸರುಗಳಿವೆ. ಶುದ್ಧೋದನ ಶಾಕ್ಯ ಗಣರಾಜ್ಯದ ಮುಖ್ಯಸ್ಥನಾಗಿದ್ದನು. ಗೌತಮನು ಹುಟ್ಟಿದ ಏಳು ದಿನಗಳ ನಂತರ ತನ್ನ ತಾಯಿಯನ್ನು ಕಳೆದುಕೊಂಡನು. ಆಗ ಮಹಾಪ್ರಜಾಪತಿ ಎಂಬುವವಳು ಅವನ ಮಲತಾಯಿಯಾದಳು. ಅವರು ಮಾಯಾದೇವಿಯ ತಂಗಿಯಾಗಿದ್ದಳು. ಸಿದ್ಧಾರ್ಥ ಎಂದು ಮಗುವಿಗೆ ನಾಮಕರಣ ಮಾಡಲಾಯಿತು. ಅರಮನೆಗೆ ಆಗಮಿಸಿದ ಅಸಿತ ಎಂಬ ಮುನಿಗಳು ಸಿದ್ಧಾರ್ಥನ ಲಕ್ಷಣಗಳನ್ನು ಕಂಡು" ಇವನು ಮನುಷ್ಯ ಪ್ರಾಣಿಗಳಲ್ಲಿ ಸರ್ವ ಶ್ರೇಷ್ಠನಾಗುವವನು"[18] ಎಂಬ ಉಧ್ಗಾರತೆಗೆದು ಅಲ್ಲದೇ ಮುನಿಗಳು ಕಣ್ಣೀರು ಸುರಿಸಿದರು. ನನ್ನ ಆಯುಷ್ಯವು ಸ್ವಲ್ಪವೇ ಉಳಿದುದರಿಂದ ಅವನ ಧರ್ಮ ಶ್ರವಣವನ್ನು ಕೇಳುವ ಅವಕಾಶ ನನಗೆ ದೊರೆಯುವುದಿಲ್ಲವಲ್ಲ ಎಂದು ದುಃಖಿಸಿದರು. ಶುದ್ಧೋದನನಿಗೆ ಸಮಾಧಾನ ಹೇಳಿ ತೆರಳಿದರು. ಬುದ್ಧನ ಮೂಲ ಕುಟುಂಬದ ಹೆಸರು ಗೌತಮನೆಂಬುದಾಗಿದ್ದು, "ಕೋಲಿ ರಾಜ್ಯ" ದ ರಾಜನ ಪುತ್ರಿ ಯಶೋಧರೆ ಅವನ ಪತ್ನಿಯಾಗಿದ್ದಳು. ಇವಳನ್ನು ಗೋಪಾ ಎಂತಲೂ ಕರೆಯಲಾಗುತ್ತಿತ್ತು. ಸಿದ್ಧಾರ್ಥ ಸಂಸಾರಿಯಾದರೂ ಅದರಿಂದ ಬಿಡುಗಡೆ ಹೊಂದಲು ಬಯಸುತ್ತಿದ್ದನು. ಮಾನಸಿಕ ನೆಮ್ಮದಿಗಾಗಿ ಮನೆಯನ್ನು ತೊರೆಯಲು ವಿಚಾರಮಗ್ನನಾಗುತ್ತಿದ್ದನು. ಈ ಮನಸ್ಥಿತಿಯಲ್ಲಿ ಇರುವಾಗಲೇ ಅವನಿಗೆ ಒಬ್ಬ ಮಗು ಜನಿಸಿದ. ಅವನಿಗೆ "ರಾಹುಲ" ಎಂಧು ನಾಮಕರಣ ಮಾಡಲಾಯಿತು. "ಸುಖ ಸಂಪತ್ತಿನಲ್ಲಿ ತೇಲಾಡುತ್ತಿರುವ ಕಾಲದಲ್ಲಿ ನಾಲ್ಕು ಚಿಹ್ನೆಗಳಾದ ಮುದುಕ, ರೋಗಿ, ಶವ ಹಾಗೂ ಸನ್ಯಾಸಿಗಳನ್ನು ನೋಡುತ್ತಾನೆ. ಈ ದೃಶ್ಯಗಳಿಂದ ಸಿದ್ಧಾರ್ಥನಿಗೆ ಜೀವನದ ಕಟು ಸತ್ಯಗಳಾದ ವೃದ್ಧಾಪ್ಯ, ರೋಗ, ಹಾಗೂ ಸಾವುಗಳು ಗೋಚರಿಸಿ ಸಂಪತ್ತಿನ ನಿರುಪಯುಕ್ತತೆ ಮನದಟ್ಟಾಗುತ್ತದೆ. ಹಾಗೂ ಇವುಗಳನ್ನು ಪರಿತ್ಯಜಿಸಿದ ಸನ್ಯಾಸಿ ಜೀವನವು ಅತ್ಯಂತ ಅರ್ಥಪೂರ್ಣವಾಗಿ ಕಂಡು ಬರುತ್ತದೆ. ಮಾನವ ಜೀವನದ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ರಾಜಕುಮಾರ ಸಿದ್ಧಾರ್ಥನು ಮಡದಿ ಯಶೋಧರೆ ಹಾಗೂ ಮಗ ರಾಹುಲನನ್ನು ತೊರೆದು"[19] ಸನ್ಯಾಸಿಯಾಗುತ್ತಾನೆ.

ಸಿದ್ಧಾರ್ಥ ಮನೆಯನ್ನು ತೊರೆದ ವಿಷಯದಲ್ಲಿ ಹಲವಾರು ಜನ ಹಲವು ಕಾರಣಗಳನ್ನು ವಿವರಿಸಿದ್ದಾರೆ. ಗೌತಮ ಬುದ್ಧನಿಗೆ ವೈರಾಗ್ಯ ಉಂಟಾದುದಕ್ಕೆ ಮೂರು ಕಾರಣಗಳನ್ನು ಸರ್ವೇ ಸಾಮಾನ್ಯವಾಗಿ ಪ್ರಶ್ನಾತೀತವಾಗಿಯೂ ಪ್ರಚಾರಪಡಿಸಿಕೊಂಡು ಬರಲಾಗಿದೆ. ಈ ಮೂರು ಕಾರಣಗಳೆಂದರೆ-ಸಾವು, ವೃದ್ಧಾಪ್ಯ ರೋಗ, ಮಾನವ ಜನಾಂಗದ ನಡುವೆ ಈ ಮೂರು ಸ್ಥಿತಿಗಳನ್ನು ಕಂಡು ಸಿದ್ಧಾರ್ಥ ಗೌತಮನಲ್ಲಿ ವೈರಾಗ್ಯ ಉಂಟಾಗಿ ಸತಿ-ಸುತರನ್ನೂ, ಸಕಲ ಸಾಮ್ರಾಜ್ಯವನ್ನು ತೊರೆದು ಅವನು ತಪಸ್ಸಿಗಾಗಿ ಕಾಡಿಗೆ ಹೋದನೆಂಬ ಕಥೆಯನ್ನು ಪ್ರಚಾರಪಡಿಸಲಾಗಿದೆ. ಮೇಲೆ ಸೂಚಿಸಿದ ಮೂರು ಕಾರಣಗಳಿಗಾಗಿಯೇ ಸಿದ್ಧಾರ್ಥ ಗೌತಮನಲ್ಲಿ ವೈರಾಗ್ಯ ಉಂಟಾಗಿ ತಪಸ್ಸಿಗೆ ಹೋದನೆಂಬ ಕಥೆಯನ್ನು ಅಂಬೇಡ್ಕರರಂತೂ ಖಡಾಖಂಡಿತವಾಗಿ ತಿರಸ್ಕರಿಸುತ್ತಾರೆ. "ಸಿದ್ಧಾರ್ಥನು ಒಬ್ಬ ಮೃತ ವ್ಯಕ್ತಿಯನ್ನು ಒಬ್ಬ ರೋಗಿಷ್ಟನನ್ನು ಮತ್ತೊಬ್ಬ ಅತೀ ವೃದ್ಧನನ್ನು ನೋಡಿದ್ದರಿಂದಲೇ ಲೌಕಿಕ ಜೀವನದ ಬಗ್ಗೆ ಅವನಲ್ಲಿ ವೈರಾಗ್ಯ ಉಂಟಾಯಿತೆಂದು ಸಾಂಪ್ರಾದಾಯಿಕ ಚರಿತ್ರೆಯ ಉದ್ದಕ್ಕೂ ಹೇಳಿಕೊಂಡು ಬರಲಾಗಿದೆ. ಆದರೆ, ಅವನು ಪರಿವ್ರಾಜಕ ದೀಕ್ಷೆ ತೆಗೆದುಕೊಂಡ ತನ್ನ ಇಪ್ಪತ್ತೊಂದನೆಯ ವಯಸ್ಸಿನವರೆಗೂ ಸತ್ತವರನ್ನು, ರೋಗಿಗಳನ್ನು, ವೃದ್ಧರನ್ನು ಅವನು ಎಲ್ಲೂ ನೋಡಿಯೇ ಇರಲಿಲ್ಲವೆನ್ನುವ ಈ ಚರಿತ್ರೆಯನ್ನು ನಂಬುವುದಾದರೂ ಹೇಗೆ"?[20] ಎಂಬುದಾಗಿ ಪ್ರಶ್ನಿಸುತ್ತಾರೆ. ಸಿದ್ಧಾರ್ಥನು ಮನೆಯಲ್ಲಿ ಯಾರಿಗೂ ತಿಳಿಯದಂತೆ ಮಧ್ಯ ರಾತ್ರಿಯಲ್ಲಿ ಮನೆಯನ್ನು ತೊರೆದನು ಎಂಬ ಸಾಂಪ್ರಾದಾಯಿಕ ನಂಬಿಕೆ ಸುಳ್ಳಾಗಿ ಕಾಣುತ್ತದೆ. ಇದಕ್ಕೆ ಇನ್ನೊಂದು ಕಾರಣವೂ ಬಹು ಪುಷ್ಠಿಯನ್ನು ಕೊಡುತ್ತದೆ. ಇಪ್ಪತ್ತು ವರ್ಷ ತುಂಬಿದ ಪ್ರತಿಯೊಬ್ಬ ತರುಣನಿಗೆ ಶಾಕ್ಯ ಸಂಘದಲ್ಲಿ ದೀಕ್ಷೆ ಕೊಡಲು 'ಸಂತಾಗಾರ' ಎಂಬ ಸಭಾಭವನಯಿತ್ತು. ಅದು ಕಪಿಲ ವಸ್ತುವಿನಲ್ಲಿಯೇ ಇದ್ದು ಶುದ್ಧೋದನ ತನ್ನ ಮಗನಿಗೂ ದೀಕ್ಷೆಯನ್ನು ಕೊಡಿಸಲು ಸಂಘದ ಸದಸ್ಯನನ್ನಾಗಿ ಮಾಡಿದನು. ಎಂಟು ವರ್ಷ ಸಂಘದಲ್ಲಿ ಕಳೆಯುತ್ತ ಬಂದ ಸಿದ್ಧಾರ್ಥನು ಎಲ್ಲ ಜನರ ಪ್ರೀತಿಗೆ ಪಾತ್ರನಾದನು.

"ದೊರೆ ಶುದ್ಧೋದನ ರಾಜ್ಯ ಶಾಕ್ಯ ಸಾಮ್ರಾಜ್ಯ ಮತ್ತು ಅವನ ನೆರೆ ರಾಜ್ಯ ಕೋಲಿಯ ಸಾಮ್ರಾಜ್ಯ ಈ ಎರಡೂ ಸಾಮ್ರಾಜ್ಯಗಳ ಗಡೀ ಪ್ರಾಂತದಲ್ಲಿ ಹರಿಯುವ ರೋಹಿಣಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಈ ಎರಡೂ ಸಾಮ್ರಾಜ್ಯಗಳ ನಡುವೆ, ಆವರೆಗೂ ನಡೆದಿದ್ದ ಹಲವಾರು ಭೀಕರ ಯುದ್ಧಗಳಿಂದಾಗಿ, ಸಹಸ್ರ ಸಹಸ್ರ ಮಾನವ ನರಮೇಧವೇ ಆಗಿರುತ್ತದೆ. ಹೀಗಿರುವಲ್ಲಿ ಈ ಅಮಾಯಕರ ಹತ್ಯಾಕಾಂಡದ ಘೋರ ಇತಿಹಾಸವನ್ನು ಬಲ್ಲವನೂ ಕಂಡವನೂ ಆದ ಸಿದ್ಧಾರ್ಥ ಗೌತಮನು, ತನ್ನ ಇಪ್ಪತ್ತೊಂದನೆಯ ವಯಸ್ಸಿಗೆ, ಶಾಕ್ಯರ ಸಂಪ್ರದಾಯದ ಪ್ರಕಾರ ಶಾಕ್ಯ ಸಂಘದ ಸದಸ್ಯತ್ವದ ದೀಕ್ಷಾ ಬೋಧನೆಯಾಗುತ್ತದೆ. ಅದಾದ ಕೇವಲ ಅನತಿ ಕಾಲದಲ್ಲೇ ಈ ಮಾನವ ಹತ್ಯಾಕಾಂಡ-ಮೂಲವಾದ ಜಲವಿವಾದ ಯುದ್ಧ ಇನ್ನೆಂದೂ ನಡೆಯದಂತೆ ತಡೆಯಲೇಬೇಕೆಂದು ಸಿದ್ಧಾರ್ಥನು ಧೀರ ಸಂಕಲ್ಪವನ್ನೇ ಮಾಡುತ್ತಾನೆ. ಕಾಕತಾಳಿಯವೋ ಎಂಬಂತೆ ಇದಾದ ಕೇವಲ ಅನತಿ ಕಾಲದಲ್ಲೇ ಕೋಲಿಯಾ ಸಾಮ್ರಾಜ್ಯದ ಸೈನಿಕರಿಂದ ಶಾಕ್ಯ ಸಾಮ್ರಾಜ್ಯದ ಗಡಿಯಲ್ಲಿ ಯುದ್ಧ ಪ್ರಚೋದನೆಯಾಗಿ ಬಿಡುತ್ತದೆ.[21] ಈ ಸಂದರ್ಭದಲ್ಲಿ ಶಾಕ್ಯ ಮತ್ತು ಕೋಲಿಯಾ ರಾಜ್ಯಗಳ ನಡುವೆ ಹರಿಯು ರೋಹಿಣಿ ನದಿಯ ನೀರಿನ ಹಂಚಿಕೆಯ ಸಂಬಂಧ ಈ ಎರಡು ರಾಜ್ಯಗಳಲ್ಲಿ ವಿವಾದವೆದ್ದು ಯುದ್ಧ ಮಾಡುವ ನಿರ್ಧಾರವನ್ನು ಸಂಘ ಕೈಗೊಂಡಿತ್ತು. ಸಿದ್ಧಾರ್ಥ ಅದನ್ನು ವಿರೋಧಿಸಿದನು. ಪರಸ್ಪರ ಮಾತುಕತೆಯ ಮೂಲಕ ಐವರು ಪರಿಣಿತರ ಒಂದು ಸಮಿತಿಯ

ಮೂಲಕ ಅವರ ಬಹುಮತ ನಿರ್ಧಾರದಂತೆ ಎರಡು ರಾಜ್ಯಗಳು ನಡೆದುಕೊಳ್ಳುವುದು ಎಂಬುದಾಗಿ ಸಿದ್ಧಾರ್ಥ ಸಲಹೆ ಮಾಡುತ್ತಾನೆ. ಯುದ್ಧವನ್ನೊಪ್ಪದ ಸಿದ್ಧಾರ್ಥನನ್ನು ಧರ್ಮದ್ರೋಹಿ ಎಂದು ದೇಶದ್ರೋಹದ ಆರೋಪ, ಸ್ವಜನ ಪಕ್ಷದ ಆರೋಪವನ್ನು ಆರೋಪಿಸಲಾಯಿತು. ಶಾಕ್ಯರ ನೀತಿಸಂಹಿತೆಯ ಪ್ರಕಾರ ಜೀವ, ಜಲ ಮತ್ತು ನೆಲ ರಕ್ಷಣೆ ಪ್ರತಿಯೊಬ್ಬ ಶಾಕ್ಯನ ಪ್ರಥಮ ಕರ್ತವ್ಯ ಎಂಬುದಾಗಿ ಶಾಕ್ಯ ಸಂಘದ ಪ್ರತಿಯೊಬ್ಬ ಸದಸ್ಯನಿಗೂ ವಸುಮಂಗಳೆಯ ಹೆಸರಿನಲ್ಲಿ ಪ್ರಮಾಣವಚನ ನೀಡಲಾಗುತ್ತದೆ.- ಯುದ್ಧವನ್ನು ವಿರೋಧಿಸುವ ಮತ್ತು ಶಾಂತಿಯನ್ನು ಬಯಸುವ ಸಿದ್ಧಾರ್ಥನ ಸಲಹೆಯನ್ನು ಶಾಕ್ಯ ಸಂಘ ತಿರಸ್ಕರಿಸಿತು. ಯುದ್ಧ ಮಾಡಬೇಕೆಂಬ ಸಂಘದ ನಿಯಮವನ್ನು ಉಲ್ಲಂಘಿಸಿದ್ದಕ್ಕಾಗಿ ಗೌತಮನಿಗೆ ಮತ್ತು ಅವನ ಪರಿವಾರಕ್ಕೆ 'ಗಡಿಪಾರು' ಶಿಕ್ಷೆಯನ್ನು ವಿಧಿಸಲು ಮುಂದಾಯಿತು.- "ಯುದ್ಧವನ್ನು ವಿರೋಧಿಸುವುದು ನನ್ನ ಧರ್ಮ. ಇದರಿಂದ ಸಂಘದ ದೃಷ್ಟಿಯಲ್ಲಿ ತಪ್ಪಿತಸ್ಥನು ನಾನು ಆಗಿರುವುದರಿಂದ, ಶಿಕ್ಷೆಯನ್ನು ನನಗೆ ಕೊಡಬೇಕೇ ವಿನಾಃ ನನ್ನ ಪರಿಹಾರಕ್ಕಲ್ಲ" ಎಂದು ಸಿದ್ಧಾರ್ಥ ಸ್ಪಷ್ಟಪಡಿಸಿದನು. ಸಂಘ ಈ ಮನವಿಗೆ ಮನ್ನಿಸಿ ಯುದ್ಧವನ್ನು ವಿರೋಧಿಸಿ ರಾಜಕುಮಾರನಿಗೆ ಗಡಿಪಾರು ಶಿಕ್ಷೆ ವಿಧಿಸಿತು. "ಗಡಿಪಾರು ಶಿಕ್ಷೆಯನ್ನು ಸಿದ್ಧಾರ್ಥ ಒಪ್ಪಿಕೊಂಡನು. ತನ್ನ ತಂದೆ ಶುದ್ಧೋದನ, ತಾಯಿ ಪ್ರಜಾಪತಿಯವರಿಗೆ ತಾನು ತ್ಯಾಗಿಯಾಗಿರುವುದನ್ನು ತಿಳಿಸಿದನು. ಶುದ್ಧೋದನನಿಗೆ ಮುಗಿಲು ಕಳಚಿ ತನ್ನ ಮೇಲೆ ಬಿದ್ದಂತಾಯಿತು. ಮಹಾಪ್ರಜಾಪತಿಯು ದುಃಖದಿಂದ ಮೂರ್ಛೆ ಹೋದಳು. ಮಾತಾ-ಪಿತರನ್ನು ಸಿದ್ಧಾರ್ಥ ಸಮಾಧಾನಗೊಳಿಸಲು ಪ್ರಯತ್ನಿಸಿದನು.[22] ಇದರಿಂದ ತಿಳಿದು ಬರುವುದೇನೆಂದರೆ ಸಿದ್ಧಾರ್ಥ ಮಧ್ಯರಾತ್ರಿಯಲ್ಲಿ ಗೃಹವನ್ನು ತ್ಯಜಿಸಿ ಕಾಡಿಗೆ ಹೋದ ಎಂಬುದರಲ್ಲಿ ಸತ್ಯವಿಲ್ಲವೆನಿಸುತ್ತದೆ. ಯುದ್ಧವನ್ನು ತೊರೆದು ಶಾಂತಿಯನ್ನು ಅರಸುತ್ತ ಎಲ್ಲರಿಗೂ ತಿಳಿಸಿಯೇ ಕಾಡಿಗೆ ತೆರಳಿದನು.

ಗೌತಮನ ಜೀವನದಲ್ಲಿ ಮಹತ್ವದ ಪ್ರಸಂಗವೆಂದರೆ ಅರಮನೆಯನ್ನು ತೊರೆಯುವುದು, ಇದಕ್ಕೆ ಪ್ರಬಲವಾದ ಮೂರು ಕಾರಣಗಳಿದ್ದವು ಎಂಬುದನ್ನು ಅತ್ತ ದಂಡ ಸುತ್ತದಲ್ಲಿ ಭಗವಾನ್ ಬುದ್ಧನೇ ಇದಕ್ಕೆ ಉತ್ತರವನ್ನು ಕೊಟ್ಟಿದ್ದಾನೆ.

ಅತ್ತ ದಂಡಾ ಭಯಂ ಜಾತಂ ಜನಂ ಪಸ್ಸಥ ಮೋದಕಂ ।
ಸಂವೇಗಂ ಕಿತ್ತಯಿಸ್ಸಾಮಿ ಯಥಾ ಸಂವಿಜಿತಂ ಮಯಾ ॥1॥
ಫಂದಮವಂ ಪಜಂ ದಿಸ್ವಾ ಮಚ್ಛೇ ಅಪ್ಪೋದಕೇ ಯಥಾ ।
ಅಞ್ಞಮಞ್ಞೇಹಿ ವ್ಯಾರುದ್ಧೇ ದಿಸ್ವಾಮಂ ಭಯ ಮಾವಿಸಿ ॥2॥
ಸುಮಂತ ಮಪರೋ ಲೋಕೋ, ದಿಸಾ ಸಬ್ಯಾ ಸಮೇರಿತಾ ।
ಇಚ್ಛಲ ಭವಾನ ಮತ್ತನೋ ನಾದ್ದಸಾಸಿಂ ಅನೋಸಿತಂ ।
ಓಸಾವೇತ್ವೇವ ವ್ಯಾರುದ್ಧೇ ದಿಸ್ವಾ ಮೇ ಅರತೀ ಅಹು ॥3॥

॥1॥ ಶಸ್ತ್ರಾಧಾರಣವು ಭಯಾವಹವೆನ್ನಿಸಿತು. (ಆದಕ್ಕಾಗಿ) ಈ ಜನತೆ ಹೇಗೆ ಜಗಳವಾಡುತ್ತಿದೆ. ನೋಡಿರಿ. ನನ್ನಲ್ಲಿ ಸಂವೇಗ (ವೈರಾಗ್ಯ) ಹೇಗೆ ಹುಟಿತ್ತೆಂಬುದನ್ನು ಹೇಳುತ್ತೇನೆ ॥2॥ ಸ್ವಲ್ಪ ನೀರಿನಲ್ಲಿ ಮೀನುಗಳು ಒದ್ದಾಡುವಂತೆ ಪರಸ್ಪರರಲ್ಲಿ ವಿರೋಧ ಕಟ್ಟಿ ಚಡಪಡಿಸುವ ಪ್ರಜೆಗಳನ್ನು ನೋಡಿ ನನ್ನ ಅಂತಃಕರಣದಲ್ಲಿ ಭಯ ಹೊಕ್ಕಿತು॥3॥ ನಾಲ್ಕೂ (ಎಲ್ಲ) ಕಡೆಗಳಿಂದ ಜಗತ್ತು ಅಸಾರವೆಂದು ಕಂಡು ಬಂದಿತು, ಎಲ್ಲ ದಿಕ್ಕುಗಳು ನಡುಗುತ್ತಿವೆ ಎಂದೆನಿಸಿತು ಮತ್ತು ಆಶ್ರಯಕ್ಕಾಗಿ ಅಲ್ಲಿ ಜಾಗೆಯನ್ನು ಹುಡುಕುವಾಗ ನಿರ್ಭಯ ಸ್ಥಾನವು ದೊರೆಯದಾಯ್ತು. ಕಟ್ಟಿದುದನ್ನು ನೋಡಿ ನನಗೆ ಹೇಸಿಕೆಯಾಯಿತು.[23]

ಯುದ್ಧ ಮಾಡುವುದಕ್ಕೆ ಮನಸ್ಸು ಒಪ್ಪಲಿಲ್ಲ. ಯೋಗ ಧ್ಯಾನ್ಯ, ಏಕಾಗ್ರತೆಗೆ ಅರಮನೆ ಸೂಕ್ತ ಸ್ಥಳವಲ್ಲ. ಜನ್ಮ ಜರಾಮರಣಗಳಿಗೆ ತಾನೂ ಸಂಬಂಧವಾಗಿರುವುದರಿಂದ ಅವುಗಳಿಂದ ಬಿಡುಗಡೆ ಹೊಂದಬೇಕು ಎಂಬ ಪ್ರಜಲ ಮೂರು ಕಾರಣಗಳು ಸಿದ್ಧಾರ್ಥ ಗೃಹ ತ್ಯಜಿಸಿ ಕಾಡಿಗೆ ತೆರಳಲು ಕಾರಣಗಳಾದವು. ಕಪಿಲವಸ್ತುವಿನಲ್ಲಿರುವ ಭಾರದ್ವಾಜರ ಆಶ್ರಮದಲ್ಲಿ ಸಿದ್ಧಾರ್ಥ ಪ್ರವಜ್ಯವನ್ನು ಸ್ವೀಕರಿಸಿ ಸರಳಜೀವನ ನಡೆಸಲು ಪ್ರಾರಂಭಿಸಿದನು. ಭಾರದ್ವಾಜರ ಮಾರ್ಗದರ್ಶನದಲ್ಲಿ ಚಿತ್ತ ಎಂದರೇನು? ಅದನ್ನು ಏಕಾಗ್ರತೆಗೆ ತರುವುದು ಹೇಗೆ? ಎಂಬುದನ್ನು ತಿಳಿದುಕೊಂಡನು. ಯೋಗ ಮತ್ತು ಧ್ಯಾನಗಳನ್ನು ಅರಿತುಕೊಂಡು ಗುರುವಿನ ಅಪ್ಪಣೆಯೊಂದಿಗೆ ಮತ್ತೋರ್ವ ಗುರುವನ್ನು ಅರಸುತ್ತ ನಡೆದನು. ಮೊದಲು ಭೃಗು ಋಷಿ ನಂತರ ಆಲಾರಕರಾಮರನ್ನು ಕಂಡು ತನ್ನ ಜ್ಞಾನದಾಹ ತೋಡಿಕೊಂಡನು. ಅಲಾರಕಲಾಮರಲ್ಲಿ ಬಹು ಕಾಲ ಇದ್ದು ಸಾಂಖ್ಯ ದರ್ಶನವನ್ನು ಕರಗತ ಮಾಡಿಕೊಂಡನು. ಅವರ ಮಾರ್ಗದರ್ಶನದಂತೆ ದುಃಖದ ಮೂಲ, ಕಾರಣ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲು ಯೋಗ ಸಮಾಧಿಮಾರ್ಗವನ್ನು ಆಯ್ದುಕೊಂಡನು. ಸಾಧನೆ ಮಾಡುತ್ತ ನಂತರ ಉದ್ದಕರಾಮಪೊತ್ತಾ ಎಂಬ ಗುರುವಿನಲ್ಲಿಗೆ ಬಂದನು. ಯೋಗ ಸಮಾಧಿ ಅಭ್ಯಾಸವನ್ನು ಮುಗಿಸಿದನು. ನಿರ್ವಿಕಲ್ಪ ಸಮಾಧಿಯನ್ನು ಹೊಂದಲು ಹಂಬಲವುಳ್ಳ ಸಿದ್ಧಾರ್ಥ 'ಗಯಾ'ಕ್ಕೆ ಬಂದು ನೇರಂಜರಾ ನದಿಯ ದಡದಲ್ಲಿ ಏಕಾಂತ ಸ್ಥಳದಲ್ಲಿ ಧ್ಯಾನಸ್ಥನಾಗಲು, ಅಲ್ಲಿ ಆತನಿಗೆ ಐದು ಜನ ಪ್ರವುಜರು ಪರಿಚಯವಾದರು. ತಪಸ್ಸಿನಲ್ಲಿ ತೊಡಗಿದ ಸಿದ್ಧಾರ್ಥನ ದೇಹ ನಿರಾಹಾರವಾದ್ದರಿಂದ ಕೃಶವಾಯಿತು. ಹೀಗಾಗಿ ಪುನಃ ಆಹಾರ ಸೇವನೆ ಪ್ರಾರಂಭಿಸಿದ. ಸತತವಾಗಿ ತಪ್ಪಸ್ಸನ್ನಾಚರಿಸಿ ಅಥವಾ ಧ್ಯಾನ ಸಮಾಧಿಯನ್ನಾಚರಿಸಿದರೂ ಸಿದ್ಧಾರ್ಥನಿಗೆ ಸಮಾಧಾನವಾಗಲಿಲ್ಲ. ಸಮಸ್ಯೆಗೆ ಪರಿಹಾರ ದೊರಕಲಿಲ್ಲ. ಆದರೆ ಚಿತ್ತದ ಏಕಾಗ್ರತೆ ವಶವಾಯಿತು.

ದೇಹವೆಲ್ಲ ಕುಸಿದು ಹೋಗುವಂತಹ ಸ್ಥಿತಿಯಲ್ಲಿ ಸಿದ್ಧಾರ್ಥನಿಗೆ ಸುಜಾತ ಎಂಬ ಸ್ತ್ರೀಯಿಂದ ಕೊಡ ಮಾಡಿದ ಪಾಯಸವನ್ನು ಕುಡಿದನು. ಜ್ಞಾನ ಸಂಪಾದನೆಗೆ ಬೇಕಾಗುವಷ್ಟು ಶಕ್ತಿಯನ್ನು ಪಡೆದುಕೊಂಡನು. ಆಲೋಚನಾ ಕ್ರಮವನ್ನು ವೃದ್ಧಿಸಿಕೊಂಡನು. ಒಂದು ಅಶ್ವತ್ಥ ಮರದಡಿಯಲ್ಲಿ ಕುಳಿತುಕೊಂಡು ತತ್ವ ಸಾಕ್ಷಾರವಾಗದೆ ಇಲ್ಲಿಂದ ಕದಲಲಾರನೆಂದು ಸಂಕಲ್ಪ ಮಾಡಿ ಧ್ಯಾನಸ್ಥನಾದನು. ಸತತ ಪರಿಶ್ರಮದಿಂದ, ಧ್ಯಾನದಿಂದ ಸಿದ್ಧಾರ್ಥನಿಗೆ ಜ್ಞಾನೋದಯವಾಗಿ "ಬುದ್ಧ"ನಾದನು. ಆಗ ಆತನಿಗೆ 35 ವರ್ಷ ವಯಸ್ಸು. ತಾನು ಕಂಡ ಸತ್ಯವನ್ನು, ತತ್ವವನ್ನು ಲೋಕದ ಜನಕ್ಕೆಲ್ಲ ಬೋಧಿಸಲು ಮುಂದಾದನು. ಸಿದ್ಧಾರ್ಥನಿಗೆ ಜ್ಞಾನಪ್ರಾಪ್ತಿಯಾದದ್ದು ವೈಶಾಖ ಪೌರ್ಣಿಮೆಯಂದೇ. ಆಗ ಆತನಿಗೆ ಹೊಳೆದ ತತ್ವಗಳೆಂದರೆ, 4 ಆರ್ಯ ಸತ್ಯಗಳು ಹಾಗೂ ಅಷ್ಟಾಂಗಿಕ ಮಾರ್ಗ. ಬುದ್ಧನು ಮೊದಲು ತನ್ನ ಜೊತೆಯಲ್ಲಿದ್ದ ಐವರು ಸಂಗಡಿಗರಿಗೆ ತನ್ನ ಉಪದೇಶವನ್ನು ಬೋಧಿಸಿದನು. ದೇಹವನ್ನು ದಂಡಿಸುವುದು, ಕಾಣದ ಸ್ವರ್ಗ ಸುಖವನ್ನು ಬಯಸುವುದು, ಅದಕ್ಕಾಗಿ ಒಣ ಚರ್ಚೆ ಮಾಡುವುದು, ಸರಿಯಾದುದಲ್ಲವೆಂದು ತಿಳಿಯಹೇಳಿದನು. ನಿಜ ಸಂಗತಿಯನ್ನು ಅರಿತು ಸನ್ಮಾರ್ಗದಲ್ಲಿ ನಡೆಯಬೇಕು. ಶುಚಿ ಜೀವನ ನಡೆಸಲು ಆರ್ಯ ಸತ್ಯಗಳ ಸಹಾಯವನ್ನು ಪಡೆಯಬೇಕೆಂದನು. ಅದಕ್ಕೂ ಮುಂಚಿತವಾಗಿ, ಧರ್ಮದ ದಾರಿಯಲ್ಲಿ ನಡೆಯುವುದಕ್ಕಿಂತ ಮೊದಲು ಆಗಬೇಕಾದ ಮನಸ್ಸಿನ ಸಿದ್ಧತೆಯನ್ನು ಮಾಡಿಕೊಳ್ಳುವುದು ಅಷ್ಟೇ ಅವಶ್ಯ ಎಂಬುದನ್ನು ತಿಳಿಸಿದನು.

"ಯಸ್ಸ ದಾನೇನ ನೇತೀನ ಸಂಯಮಮೇನ ದಮೇನ ಚ
ನಿಧೀ ಸುನಿ ಹಿತೊ ಹೋತಿ ಇಚ್ಚಯಾ ಪುರಿಸಸ್ಸವಾ
ಏಸೋ ನಿಧಿ ಸುನಿಹಿತೊ ಅಜೆಯ್ಯೊ ಅನುಗಾಮಿಕೊ"

"ಸ್ತ್ರೀಯಾಗಲಿ-ಪುರುಷನಾಗಲಿ ದಾನದಿಂದ, ಶೀಲದಿಂದ ಸಂಯಮದಿಂದ ಯಾರ ನಿಧಿಯು ಚೆನ್ನಾಗಿ ಕೂಡಿಸಲ್ಪಟ್ಟಿದ್ದು, ಅಜೇಯವಾದದ್ದು, ಹೋಗುವಾಗ ಅನುಸರಿಸಿ ಬರತಕ್ಕದ್ದು.[24] ಬುದ್ಧ ತಾನು ಪಡೆದು ಜ್ಞಾನದ ಬೆಳಕಿನಲ್ಲಿ ನಾಲ್ಕು ಸತ್ಯಗಳನ್ನು ಕಂಡುಕೊಂಡ. ಇವುಗಳನ್ನು ಬೌದ್ಧ ಸಿದ್ಧಾಂತದಲ್ಲಿ "ಆರ್ಯ ಸತ್ಯ" ಎಂದು ಕರೆಯುತ್ತಾರೆ. ಇವುಗಳ ಅಂತರ್ಯದಲ್ಲಿ ಅಷ್ಟಾಂಗಿಕ ಮಾರ್ಗಗಳನ್ನು ಬೋಧಿಸಿದನು. ಬುದ್ಧನು ಬೋಧಿಸಿದ ಮಾರ್ಗ "ಮಧ್ಯಮ ಮಾರ್ಗ" ಎಂದು ಪ್ರಸಿದ್ಧವಾಗಿದೆ. ತನ್ನ ಜೊತೆಯಲ್ಲಿದ್ದ ಐದು ಜನರಿಗೆ ಉಪದೇಶ ಮಾಡಿದನು. "ಜೀವನವು ದುಃಖಮಯವಾಗಿದೆ. ಆತ್ಮದ ನಿಜವಾದ ಸ್ವರೂಪವನ್ನು ಅರಿಯದಿರುವುದೇ ಅವಿದ್ಯೆ. ಈ ಅವಿದ್ಯೆಯೇ ಎಲ್ಲಾ ದುಃಖಗಳಿಗೆ ಮೂಲ. ದೇಹ ಮತ್ತು ಮನಸ್ಸುಗಳಿಂದ ಭಿನ್ನವಾದ ಆತ್ಮವೆಂಬ ವಸ್ತುವಿಲ್ಲ. ದುಃಖದ ನಿವಾರಣೆಗೆ ಸರಿಯಾದ ಜ್ಞಾನವೊಂದೇ ಮಾರ್ಗ". ಬುದ್ಧನ ನಾಲ್ಕು ಆರ್ಯ ಸತ್ಯಗಳು ಹೀಗಿವೆ. (1)ಪ್ರತಿಯೊಂದು ದುಃಖಮಯ (2)ದುಃಖಕ್ಕೆ ಕಾರಣವಿರುತ್ತದೆ. (3)ದುಃಖವನ್ನು ನಿರ್ಮೂಲನ ಮಾಡಲು ಸಾಧ್ಯವಿದೆ. (4)ದುಃಖ ನಿರ್ಮೂಲನಕ್ಕೆ ಒಂದು ಮಾರ್ಗವಿದೆ. ಸುಪ್ರಸಿದ್ಧವಾದ ವಾರಣಾಸಿ ಉದ್ಘೋಷದಲ್ಲಿ ಬುದ್ಧ ಈ ವಿಚಾರಗಳನ್ನು ನಿರೂಪಣೆ ಮಾಡಿದ".[25] ಇದನ್ನೇ ದುಃಖ, ದುಃಖ ಸಮುದಾಯ, ದುಃಖ ನಿರೋಧ, ದುಃಖನಿರೋಧಗಾಮಿನೀ ಪ್ರತಿಪದಾ- ಅಂದರೆ ಅಷ್ಟಾಂಗ ಮಾರ್ಗದ ಆಚರಣೆಯಿಂದ ಆಶೆಗಳನ್ನು ನಿರೋಧಿಸುವ, ಜನನ ಮರಣ ಚಕ್ರದಿಂದ ಮುಕ್ತಗೊಳಿಸುವ ಸಾಧನವೆಂದು ಉಪದೇಶಿಸಿದನು.

ನಾಲ್ಕು ಉದಾತ್ತ ಸತ್ಯಗಳನ್ನು ಬುದ್ಧ ತನ್ನ ಮೊದಲ ತತ್ವೋಪದೇಶದಲ್ಲಿ ವಿವರಿಸಿದ. ಈ ಸತ್ಯಗಳನ್ನು ವಿವರಿಸುತ್ತ ಬುದ್ಧನು ಮಾನವ ಅಸ್ತಿತ್ವದ ಸ್ವರೂಪವನ್ನು ಮಾನವ ಸಂಕಷ್ಟಗಳಿಗೆ ಕಾರಣಗಳನ್ನು ನಿರೂಪಿಸುತ್ತಾನೆ. ಮತ್ತು ಮುಕ್ತಿಮಾರ್ಗವನ್ನು ತೋರಿಸಿಕೊಡುತ್ತಾನೆ. ಅದೇ ಅಷ್ಟಾಂಗಮಾರ್ಗ. "ಮಾನವ ದುಃಖದ ನಿವಾರಣೆಗಾಗಿ ಅಷ್ಟಾಂಗಮಾರ್ಗ ಎಂಬ ಎಂಟು ಹಾದಿಗಳನ್ನು ಸೂಚಿಸಿದನು. ಸುಮಾರು ಕ್ರಿ.ಪೂ. ಮೂರನೆಯ ಶತಮಾನದ ಒಂದು ಗ್ರಂಥದಲ್ಲಿ ಇದು ಆತ ತೋರಿದ ದಾರಿ ಎಂದು ಹೇಳಲಾಗಿದೆ. ಅವು ಯುಕ್ತ ವೀಕ್ಷಣೆ, ಯುಕ್ತ ಸಂಕಲ್ಪ, ಯುಕ್ತ ಮಾತು, ಯುಕ್ತ ಕಾರ್ಯ, ಯುಕ್ತ ಜೀವನೋಪಾಯ, ಯುಕ್ತ ಸಾಧನೆ, ಯುಕ್ತ ಜ್ಞಾಪಕ ಮತ್ತು ಯುಕ್ತ ಧ್ಯಾನ ಈ ಅಷ್ಟಾಂಗ ಮಾರ್ಗವನ್ನು ಅನುಸರಿಸುವವನು ಯಾವ ಪುರೋಹಿತನ ನೆರವಿಲ್ಲದೆ ಮುಕ್ತಿ ಸಾಧಿಸಬಲ್ಲನು.[26] ಬುದ್ಧನು ಅತಿಯಾದ ವೈಭೋಗ, ಅತಿಯಾದ ವೈರಾಗ್ಯ ಇವರೆಡರಿಂದಲೂ ಪಾರಾದ ಮಧ್ಯಮ ಮಾರ್ಗವನ್ನು ಪ್ರತಿಪಾದಿಸಿದನು. ಇದರಿಂದ ಮಾನವ ದುಃಖದಿಂದ ಪಾರಾಗಬಹುದೆಂದು ಬೋಧಿಸಿದನು." ಬುದ್ಧನೂ ಸಹ ತನ್ನ ಅನುಯಾಯಿಗಳಿಗೆ ಒಂದು ಆಚಾರಸಂಹಿತೆಯನ್ನು ನಿಯಮಿಸಿದನು. ಅವು (1)ಪರರ ಆಸ್ತಿಯ ಮೇಲೆ ಮನವಿಡಬೇದ, (2)ಹಿಂಸೆ ಮಾಡಬೇಡ (3)ಮದ್ಯಪಾನ ಮಾಡಬೇಡ (4)ಸುಳ್ಳು ಹೇಳಬೇಡ ಮತ್ತು (5)ಭ್ರಷ್ಟಾಚಾರಕ್ಕಿಳಿಯಬೇಡ[27] ಇವು ಸಾಮಾನ್ಯವಾಗಿ ಎಲ್ಲ ಮತಧರ್ಮಗಳಿಗೂ ಸಹ ವಿಧಿಸುವ ಆಚಾರ ನಿಯಮಗಳು. ನಾಲ್ಕು ಸತ್ಯಗಳು, ಅಷ್ಟಾಂಗ ಮಾರ್ಗ, ಪಂಚಶೀಲ ಇವುಗಳನ್ನು ಬೋಧಿಸುತ್ತ ಜನರಲ್ಲಿ ಜ್ಞಾನ ಪ್ರಸಾರ ಮಾಡಿದ.

ಬುದ್ಧ ತನ್ನ ಮೊದಲ ಪ್ರವಚನಗಳನ್ನು ವಾರಣಾಸಿಯಲ್ಲಿರುವ ಸಾರನಾಥದಲ್ಲಿ ನೀಡಿದನು. ಅವನು ದೀರ್ಘ ಪ್ರವಾಸಗಳನ್ನು ಕೈಗೊಂಡು ತನ್ನ ಸಂದೇಶಗಳನ್ನು ದೂರದೂರ ಸಾರಿದನು. ಅಹಿಂಸಾ ತತ್ವ ಪ್ರತಿಪಾದಿಸಿದ. ಹಲವರು ಅನುಯಾಯಿಗಳಾದರು. ಹಲವು ಅರಸರು ಈತನ ತತ್ವಗಳನ್ನು ಅವಲಂಬಿಸಿದರು. ಬ್ರಾಹ್ಮಣರು ಸಹಿತ ಬುದ್ಧನ ಉಪದೇಶಕ್ಕೆ ಮಾರು ಹೋಗಿದ್ದರು. ಸ್ವತಃ ಬಿಂಬಸಾರನು ಬುದ್ಧನಿಂದ ಧರ್ಮೋಪದೇಶ ಪಡೆದುಕೊಂಡು "ವೇಣುವನವೆಂಬ ಉದ್ಯಾನವನವನ್ನು ಬುದ್ಧನ ಭಿಕ್ಷುಸಂಘಕ್ಕೆ ಕೊಡಮಾಡಿದ. ಅಲ್ಲಿ ಬುದ್ಧ ಇರಲು ಒಪ್ಪಿದ್ದರಿಂದ ಅಲ್ಲಿ ಮಹಾವಿಹಾರವನ್ನೇ ರಾಜ ಬುದ್ಧನಿಗೆ ಕಟ್ಟಿಸಿದ್ದ"[28] ರಾಜಗೃಹದಲ್ಲಿದ್ದಾಗ ಬುದ್ಧನ ಮಹತಿಯನ್ನು ಮನದಟ್ಟು ಮಾಡಿಕೊಂಡ ಸಾರಿಪುತ್ರನೆಂಬ ಬ್ರಾಹ್ಮಣ ಪಂಡಿತನೂ, ಅವನ ಗೆಳೆಯ ಮಾದ್ಗಲ್ಯಾಯನನೂ, ಅವನ ಶಿಷ್ಯರಾದರು. ಅಂಗುಲಿಮಾಲನಂತಹ ಕ್ರೂರಿಯೂ, ಬುದ್ಧನ ಕಾರುಣ್ಯಕ್ಕೆ ಮಾರುಹೋಗಿ ಬೌದ್ಧಧರ್ಮ ಸ್ವೀಕರಿಸಿದ-ಸನ್ನಿವೇಶ ಬೌದ್ಧ ಸಾಹಿತ್ಯದಲ್ಲಿ ವರ್ಣಿಸಲಾಗಿದೆ. ಬೌದ್ಧ ಮತಾನುಯಾಯಿಗಳ ಸಂಖ್ಯೆ ದಿನ ದಿನಕ್ಕೆ ಹೆಚ್ಚಾಯಿತು. ಬೌದ್ಧ ಮತವು ದೇವರು ಮತ್ತು ಆತ್ಮಗಳ ಅಸ್ತಿತ್ವವನ್ನು ಒಪ್ಪಿಕೊಳ್ಳಲಿಲ್ಲ. ತಾತ್ವಿಕ ವಿವಾದಗಳ ಸುಳಿಗಳಿಗೆ ಸಿಕ್ಕಿ ಬೀಳಲಿಲ್ಲವಾದ್ದರಿಂದ ಅದು ಸಾಮಾನ್ಯ ಜನರಿಗೆ ಹಿಡಿಸಿತು. ಬುದ್ಧ ಜನಭಾಷೆ "ಪಾಲಿ" ಭಾಷೆಯಲ್ಲಿ ಧರ್ಮ ಬೋಧನೆ ಮಾಡಿದ. ಇದು ಜನಸಾಮಾನ್ಯರಿಗೆ ಅನುಕೂಲವಾಯಿತು". ಬೌದ್ಧಧರ್ಮ ವರ್ಣವ್ಯವಸ್ಥೆಯನ್ನು ಎದುರಿಸಿದ ಕಾರಣ ಕೆಳಹಂತಗಳ ಜನರ ಬೆಂಬಲವನ್ನು ಗಳಿಸಿತು. ಜಾತಿಗಳ ಬಗ್ಗೆ ಯಾವುದೇ ತಾರತಮ್ಯ ತೋರದೇ ಎಲ್ಲಾ ಜನರೂ ಬೌದ್ಧ ಪಂಥಕ್ಕೆ ಸೇರಬಹುದಾಗಿತ್ತು."[29] ಸ್ತ್ರೀಯರೂ ಸಂಘಕ್ಕೆ ಸೇರಬಹುದಾಗಿತ್ತು. ಬ್ರಾಹ್ಮಣೀಯ ಮತಕ್ಕೆ ಹೋಲಿಸಿದರೆ ಬೌದ್ಧಮತವು ಉದಾರಿಯಾಗಿ ಪ್ರಜಾಸತ್ತಾತ್ಮಕವಾಗಿ ಇತ್ತು. ಹೀಗಾಗಿ ಸರ್ವರೂ ಬೌದ್ಧಧರ್ಮದೆಡೆಗೆ ಆಕರ್ಷಿತರಾದರು. ಎಲ್ಲರಿಗೂ ಮುಕ್ತ ಅವಕಾಶವಿತ್ತು. ಭಾರತದಲ್ಲಿ ಬೃಹತ್ತಾಗಿ ಬೆಳೆದುದಲ್ಲದೇ ಬೌದ್ಧ ಧರ್ಮ ವಿದೇಶಗಳಿಗೂ ಪಸರಿಸಿತು. ಬುದ್ಧನ ವ್ಯಕ್ತಿತ್ವ, ಆತನು ತನ್ನ ಸಂದೇಶವನ್ನು ಸಾರಲು ಅನುಸರಿಸಿದ ವಿಧಾನಗಳು ಬೌದ್ಧಮತ ಪ್ರಚಾರಕ್ಕೆ ಬಹಳ ಅನುಕೂಲಕರವಾದವು. ಅವನು ಕೇಡನ್ನು ಒಳಿತಿನಿಂದ, ದ್ವೇಷವನ್ನು ಪ್ರೇಮದಿಂದ ಗೆಲ್ಲಲು ಶ್ರಮಿಸಿದನು. ಜನಭಾಷೆ ಪಾಲಿಯ ಬಳಕೆ, ಬೌದ್ಧಮತ ಪ್ರಸಾರಕ್ಕೆ ನೆರವಾಯಿತು. ಬುದ್ಧ ಸಂಘದಲ್ಲಿ ಜಾತಿ, ಲಿಂಗ ಭೇದವಿಲ್ಲದೆ ಪ್ರವೇಶ ಪಡೆಯಲು ಅವಕಾಶ ನೀಡಿದವು. ಸಂಘಕ್ಕೆ ಸೇರುವವರು ನೀತಿ-ನಿಯಮಗಳನ್ನು ಪಾಲಿಸಬೇಕಾಗಿತ್ತು. ನಿಷ್ಠೆಗಳಿಗೆ ಬದ್ಧರಾಗುವುದಾಗಿ ವಚನ ನೀಡಬೇಕಾಗಿತ್ತು. ಹೀಗಾಗಿ ಬೌದ್ಧಮತದಲ್ಲಿ ಬುದ್ಧ, ಸಂಘ, ಧಮ್ಮ ಈ ಮೂರು ಅಂಶಗಳು ಕೂಡಿದವು. ಸಂಘದ ಆಶ್ರಯದಲ್ಲಿ ಬೌದ್ಧಮತ ಬಿರುಸಾಗಿ ಹರಡಿತು. ಮಗಧ, ಕೋಸಲ, ಮತ್ತು ಕೌಶಂಬಿಗಳ ರಾಜಸತ್ತೆಗಳು ಹಲವಾರು ಗಣರಾಜ್ಯಗಳ ಜನರು ಬೌದ್ಧ ಮತಾನುಯಾಯಿಗಳಾದರು.

ಬುದ್ಧ ಜ್ಞಾನೋದಯದ ನಂತರ ಸುಮಾರು 40 ವರ್ಷಗಳ ಕಾಲ ಸತತವಾಗಿ ಧರ್ಮಬೋಧನೆಯನ್ನು ಮಾಡಿದನು. ಪರ್ಯಟನೆ, ಪ್ರವಚನ ಹಾಗೂ ಧ್ಯಾನಗಳಲ್ಲಿ ನಿರತನಾಗಿದ್ದನು. ಮಳೆಗಾಲದಲ್ಲಿ ಮಾತ್ರ ಒಂದೆಡೆ ತಂಗುತ್ತಿದ್ದನು. ವಯಸ್ಸಾದಂತೆ ದೇಹಶಕ್ತಿ ಕುಗ್ಗಿತು. ಇಳಿವಯಸ್ಸಿನಲ್ಲಿ ಧರ್ಮೋಪದೇಶವನ್ನು ನೀಡುತ್ತಿದ್ದನು. ವೈಶಾಲಿಯಿಂದ ಹೊರಟು ಬುದ್ಧನು ಪಾವಾ ಎಂಬಲ್ಲಿಗೆ ತಲುಪಿದನು. ಅಲ್ಲಿಯ ಕಮ್ಮಾರ ಚುಂದನೆಂಬುವವನು ಬುದ್ಧನ್ನು ತನ್ನ ಮನೆಗೆ ಭೋಜನ ಸ್ವೀಕರಿಸಲು ಬರಬೇಕೆಂದು ಕೇಳಿಕೊಂಡನು. ಅಲ್ಲಿ ಆತ ಬುದ್ಧನಿಗೆ "ಸೂಕರ ಮದ್ದವ" (ಹಂದಿಯ ಮಾಂಸ ಅಥವಾ ಒಂದು ಪ್ರಕಾರದ ಅಣಬೆ ಎಂದು ವಿದ್ವಾಂಸರ ವಾದ) ಊಟಕ್ಕೆ ಬಡಿಸಲಾಯಿತು. ಅದನ್ನು ಊಟ

ಮಾಡಿದ ಬುದ್ಧನು ಅಸ್ವಸ್ಥನಾದನು. ಅತಿಸಾರ ಪ್ರಾರಂಭವಾಯಿತು. ಅಲ್ಲಿಂದ ಆತ ಕುಶೀನಾರವನ್ನು ತಲುಪಿದನು. ಅಲ್ಲಿಯ ಮಲ್ಲರ ಶಾಲವೃಕ್ಷದಡಿ ವಿಶ್ರಾಂತಿಗಾಗಿ ತಂಗಿದ್ದನು. ಕ್ರಿ.ಪೂ. 483 ರಲ್ಲಿ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಪೂರ್ವಉತ್ತರ ಪ್ರದೇಶದ ದಿಯೋರಿಯಾ ಜಿಲ್ಲೆಯ ಕಾಸಿಯ ಎಂಬ ಹಳ್ಳಿ ಎಂದು ಗುರುತಿಸಲ್ಪಟ್ಟಿರುವ ಕುಶೀನಗರದಲ್ಲಿ (ಕುಶೀನಾರ) ನಿರ್ವಾಣವನ್ನೇರಿದನು.[30] ಅಂದು ಕೂಡ ವೈಶಾಖ ಪೂರ್ಣಿಮೆಯಾಗಿತ್ತು. ಬುದ್ಧನ ಜನನ, ಜ್ಞಾನೋದಯ, ಮರಣ, ಹುಣ್ಣಿಮೆ ದಿನವೇ ಆಗಿರುವುದು ವಿಶೇಷ.

2.2 ಬುದ್ಧನ ಪ್ರತಿಭಟನಾ ನೆಲೆಗಳು : ಬುದ್ಧನ ಚಿಂತನೆಗಳು :

"ಬುದ್ಧನೆಂದರೆ ಜ್ಞಾನಿಯು ಮನುಷ್ಯ ಸಾಧ್ಯವಾದ ಉಚ್ಚ ಜ್ಞಾನವನ್ನು ಶೀಲದ ಸಂಪೂರ್ಣತೆಯನ್ನು ಹೊಂದಿದವನೇ ಬುದ್ಧನು. ಬುದ್ಧನು ಲೋಕಕಲ್ಯಾಣಕ್ಕಾಗಿ ಭುವಿಗಿಳಿದು ಬಂದ ದೇವನಲ್ಲ. ಅವನು ಎಲ್ಲರಂತೆಯೇ ಮನುಷ್ಯ ಮಾತ್ರನು. ಆದರೆ ಅಂತಹ ಮನುಷ್ಯರು ವಿರಳರು. ಅಂಥವರು ಕಲ್ಪಗಳಿಗೊಮ್ಮೆ ಜನಿಸಿಯಾರು. ತಮ್ಮೊಂದು ಶೀಲ ಸ್ವಭಾವ ದೌನ್ನತ್ಯದಿಂದ ಅವರು ಸಾಮಾನ್ಯ ಕಂಗಳಿಗೆ ದೇವನಂತೆ ಕಾಣುವರು. ಬುದ್ಧನು ದೇವನಲ್ಲ, ಸ್ವಶಕ್ತಿಯಿಂದ, ಸ್ವಪ್ರಯತ್ನದಿಂದ ಇಹದಲ್ಲಿ ಪೂರ್ಣತೆ ಪಡೆದು, ಜ್ಞಾನವನ್ನು ಸಂಪಾದಿಸಿ, ಮುಕ್ತಿಯನ್ನು ಸಾಧಿಸಿದವನು ಬುದ್ಧನು. ಸತ್ಯವನ್ನು ಸಾರಿದವನು. ಧರ್ಮವನ್ನು ದಾನ ಮಾಡಿದವನು"[31] ಬುದ್ಧತತ್ವ ಹಳೆಯ ಕೊಳೆಯನ್ನು ತೊಳೆಯುವ ಸತ್ವವನ್ನೊಳಗೊಂಡಿದೆ. ಬುದ್ಧನು ಆತ್ಮ ಪರಮಾತ್ಮನಿಗೆ ಸಂಬಂಧಿಸಿದ ಅವಾಸ್ತವಿಕ ಸಿದ್ಧಾಂತಗಳನ್ನು ಬೋಧಿಸಿಲ್ಲ. ಅವನ ಬೋಧನೆಗಳೆಲ್ಲಾ ನಿಸರ್ಗಸತ್ಯ ಮತ್ತು ಜೀವನಸತ್ಯಕ್ಕೆ ಸಂಬಂಧಿಸಿವೆ. ಬುದ್ಧನು ವಾಸ್ತವವಾಗಿ ವೈಚಾರಿಕತೆಯ ಹಾದಿಯಲ್ಲಿ ನಡೆದ ಹಿರಿಯಣ್ಣನೇ ಸರಿ. ಬುದ್ಧ ರೂಢಮೂಲವಾದ ಮತಾಚಾರ, ಮೂಢನಂಬಿಕೆ, ಕರ್ಮಕಾಂಡ ಮತ್ತು ಪೌರೋಹಿತ್ಯ ಮತ್ತು ಅದರ ಪರಿವಾರಕ್ಕೆ ಅಂಟಿಕೊಂಡಿದ್ದ ಎಲ್ಲ ಹಕ್ಕು ದಾರಿಗಳನ್ನು ಧೈರ್ಯದಿಂದ ವಿರೋಧಿಸಿದ." ತತ್ವಶಾಸ್ತ್ರದ ಮತ್ತು ಮತೀಯ ದೃಷ್ಟಿ ಪವಾಡಗಳನ್ನು ಅಪೌರುಷೇಯ ವೇದಗಳನ್ನು, ಅಲೌಕಿಕ ವ್ಯಾಪಾರಗಳನ್ನು ಖಂಡಿಸಿದ. ತರ್ಕ, ವಿಚಾರ ಮತ್ತು ಅನುಭವದ ಅಡಿಗಲ್ಲಿನ ಮೇಲೆ ತನ್ನ ಸಂದೇಶವನ್ನು ನಿರ್ಮಿಸಿದ. ನೀತಿ ಧರ್ಮಕ್ಕೆ ಪ್ರಾಮುಖ್ಯತೆ ಕೊಟ್ಟ. ಮನಶ್ಶಾಸ್ತ್ರದ ವಿಶ್ಲೇಷಣಾ ಪದ್ಧತಿಯ ರೀತ್ಯ, ಆತ್ಮಕ್ಕೆ ಎಡೆಗೊಡದ ಮನಶ್ಶಾಸ್ತ್ರದ ರೀತ್ಯ ತನ್ನ ಧರ್ಮವನ್ನು ರಚಿಸಿದ".[32] ಬುದ್ಧ ವಿಚಾರವಾದಿ, ತರ್ಕವಾದಿ ಮಾನವರ ಒಳಿತಿಗೆ ಸಂಬಂಧಿಸಿದ್ದಲ್ಲದ ಯಾವ ವಿಷಯವನ್ನೇ ಕುರಿತು ವ್ಯರ್ಥ ಚರ್ಚೆಗೆ ಇಳಿದವನಲ್ಲ. ಸರ್ವ ವಸ್ತು ವಿಚಾರಗಳಲ್ಲಿಯೂ ಬುದ್ಧನು ಖಚಿತವಾದ, ನಿರ್ದಿಷ್ಟವಾದ, ಪ್ರಾಯೋಗಿಕ ದೃಷ್ಟಿಯುಳ್ಳವನಾಗಿದ್ದನು. ವೇದ ಪ್ರಾಮಣ್ಯವನ್ನು ಮೋಕ್ಷ ಸಾಧನೆಗೆ ಬಲಿದಾನಗಳನ್ನು ನೀಡುವುದನ್ನು, ಚತುರ್ವರ್ಣ ಸಿದ್ಧಾಂತವನ್ನು, ಬ್ರಹ್ಮಾಂಡದ ಸೃಷ್ಟಿಕರ್ತ ಈಶ್ವರನೆಂಬುದನ್ನು, ಆತ್ಮವನ್ನು ಜನ್ಮಾಂತರದ ಭವಣೆಗಳನ್ನು, ಕರ್ಮಫಲವನ್ನು ಬುದ್ಧನು ಪೂರ್ಣವಾಗಿ ನಿರಾಕರಿಸಿದನು. ಎಲ್ಲದಕ್ಕೂ ಮಾನವನ ಮನಸ್ಸೇ ಮುಖ್ಯ ಕಾರಣ ಎಂಬುದನ್ನು ಒತ್ತಿ ಹೇಳಿದನು. "ಬೌದ್ಧ ಮತವು ದೇವರು ಮತ್ತು ಆತ್ಮಗಳ ಅಸ್ತಿತ್ವವನ್ನು ಒಪ್ಪಿಕೊಳ್ಳಲಿಲ್ಲ. ಇದು ಭಾರತೀಯ ಮತ ಧರ್ಮಗಳ ಇತಿಹಾಸದಲ್ಲಿ ಒಂದು ಬಗೆಯ ಕ್ರಾಂತಿ. ಆರಂಭಿಕ ಬೌದ್ಧಮತವು ತಾತ್ವಿಕ ವಿವಾದಗಳ ಸುಳಿಗಳಿಗೆ ಸಿಕ್ಕಿಬೀಳಲಿಲ್ಲವಾದ್ದರಿಂದ ಅದು ಸಾಮಾನ್ಯ ಜನರಿಗೆ ಹಿಡಿಸಿತು. ಅದು ವರ್ಣವ್ಯವಸ್ಥೆಯನ್ನು ಎದುರಿಸಿದ ಕಾರಣ ಕೆಳಹಂತಗಳ ಜನರ ಬೆಂಬಲವನ್ನು ಗಳಿಸಿತು. ಜಾತಿಗಳ

ಬಗ್ಗೆ ಯಾವುದೇ ತಾರತಮ್ಯ ತೋರದೇ ಎಲ್ಲ ಜನರೂ ಬೌದ್ಧ ಪಂಥಕ್ಕೆ ಸೇರಬಹುದಾಗಿತ್ತು" [33] ಹೀಗೆ ಬೌದ್ಧ ಮತ ಉದಾರಿಯಾಗಿ, ಪ್ರಜಾಸತ್ತಾತ್ಮಕವಾಗಿ ಇತ್ತು.

ಬುದ್ಧನ ತತ್ವದ ಸ್ಥೂಲ ಪರಿಚಯ :

- ಮುಕ್ತ ಸಮಾಜಕ್ಕೆ ಧರ್ಮ ಬೇಕು.
- ಎಲ್ಲಾ ಧರ್ಮಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ.
- ಧರ್ಮವೆಂದರೆ ಜೀವನ, ಸಂಗತಿಗಳು. ದೇವರು, ಆತ್ಮ, ಸ್ವರ್ಗ, ಭೂಮಿ ಬಗೆಗಿನ ಕಲ್ಪನೆ ಅಲ್ಲ.
- ಧರ್ಮವೆಂದರೆ ಸಮಾಜವನ್ನು ಪುನರ್ರಚನೆ ಮಾಡುವುದು.
- ದುಃಖವನ್ನು ಹೋಗಲಾಡಿಸುವ ಮಾರ್ಗ ಒಂದೇ ಅದು ಅಷ್ಟಾಂಗ ಮಾರ್ಗ.
- ಎಲ್ಲ ಮಾನವರು ಸಮಾನರು.
- ನಿನ್ನ ಏಳ್ಗೆ ನಿನ್ನ ಕೈಯಲ್ಲಿದೆ.
- ದೇವರು ಇಲ್ಲವೋ-ಇದ್ದಾನೋ ಗೊತ್ತಿಲ್ಲ. ಆದರೆ ದುಃಖಿತವಾದ ಮಾನವ ಮಾತ್ರ ಎಲ್ಲೆಲ್ಲಿ ಇದ್ದಾನೆ.
- ಶೀಲವಿಲ್ಲದ ಜ್ಞಾನ ಅಪಾಯಕಾರಿ.
- ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕು, ಅಧಿಕಾರದಿಂದಲ್ಲ, ಹುಟ್ಟಿನಿಂದಲ್ಲ.
- ಶೋಷಣೆಯಿಂದ ದರಿದ್ರವು ಹುಟ್ಟುತ್ತದೆ.
- ಇರುವುದನ್ನು ಎಲ್ಲರೂ ಹಂಚಿ ತಿನ್ನುವುದು.
- ಎಲ್ಲಾ ಜೀವಿಗಳನ್ನು ಪ್ರೀತಿಯಿಂದ ಕಾಣಿ.
- ನಿರ್ಗತಿಕರಿಗೆ ಜೀವನಾಂಶಗಳನ್ನು ಕೊಡಿ.
- ಸಂಪತ್ತು, ನ್ಯಾಯವಾಗಿ ಗಳಿಸುವುದು ತಪ್ಪಲ್ಲ. [34]

ಬುದ್ಧ ಅಹಿಂಸೆ, ಶಾಂತಿ, ನ್ಯಾಯ, ಪ್ರೀತಿ, ಸ್ವಾತಂತ್ರ್ಯ ಸಮಾನತೆ, ಸಹೋದರತ್ವಗಳನ್ನು ಬೋಧಿಸಿದ. ಬುದ್ಧನ ಧಮ್ಮದಲ್ಲಿ ದೇವರು, ಪೂಜೆ, ಯಾತ್ರೆ, ಕೈಂಕರ್ಯ, ಸಮಾರಂಭಗಳು, ಬಲಿದಾನಗಳಿಗೆ ಯಾವ ಸ್ಥಾನವೂ ಇಲ್ಲ. ವೈದಿಕಧರ್ಮದ ವಿದಿ-ವಿಧಾನ, ಅಂಧಾನುಕರಣೆಗಳ ವಿರುದ್ಧ ಸಿಡಿದೆದ್ದ ಬುದ್ಧ ಪ್ರತಿಭಟನೆಯ ಮೂಲಕ ಪರಿವರ್ತನೆ ತರಬಯಸಿದ.

2.3 ವರ್ಣ ವ್ಯವಸ್ಥೆಯ ವಿರೋಧ :

ನಮ್ಮ ಪರಂಪರೆಯ ಕಂದಾಚಾರವನ್ನು ಪ್ರತಿಭಟಿಸಿ ನಿಂತು, ತಮ್ಮ ಯುಗಧರ್ಮಕ್ಕನುಗುಣವಾದ ಹೊಸ ವಿಚಾರ ಪ್ರಣಾಲಿಯನ್ನು ನಿರೂಪಿಸಿದವನು ಬುದ್ಧ. ವೈದಿಕಧರ್ಮದ ಕಂದಾಚಾರಗಳನ್ನು ಬಯಲಿಗೆಳೆದು ಅವುಗಳ ಅಪ್ರಯೋಜಕತೆ ತೋರಿಸಿ ಕೊಟ್ಟು ಅವುಗಳ ಸ್ಥಳದಲ್ಲಿ ಹೊಸ ವಿಚಾರಗಳನ್ನು

ವ್ಯಕ್ತಪಡಿಸಿ, ಜನರಿಗೆ ಹೊಸ ದಾರಿ ತೋರಿಸಿದನು. ಬೌದ್ಧಧರ್ಮದಲ್ಲಿ ಜಾತಿ ಭೇದವಿಲ್ಲ. ಬೌದ್ಧಧರ್ಮ ಅನುಸರಿಸಿದವರಲ್ಲಿ ವರ್ತಕರಿದ್ದಾರೆ. ಉರುವೇಲದಲ್ಲಿ ಶಿಷ್ಯರಾದ ಸಾರಿಪುತ್ರ, ಮಾದ್ಗಲ್ಯಾಯನ ಬ್ರಾಹ್ಮಣರು, ಬಿಂಬಸಾರ ಮುಂತಾದವರು ಕ್ಷತ್ರಿಯ ರಾಜರು. ಸಿಂಹಜೈನ, ಪೂರ್ಣ ಪೂರ್ಣಿಕಾ ಎಂಬುವವರು ಗುಲಾಮರ ಹೆಂಗಸರು. ಬುದ್ಧನಿಗೆ ಕೊನೆಯ ಊಟವಿಕ್ಕಿದ ಚುಂದಕಮ್ಮಾರ. ಆಮ್ರಪಾಲಿ ವೇಶ್ಯೆ. ಅಂಗುಲಿಮಾಲ ಕೊಲೆಗಾರ, ಕಪಿಲವಸ್ತುವಿನ ಕ್ಷೌರಿಕ ಉಪಾಲಿ ಬುದ್ಧನ ಪರಮಶಿಷ್ಯ. ಸುನೀತ ಎಂಬವ ಜಲಗಾರ. ಹೀಗೆ ಯಾವ ಜಾತಿ, ಗೋತ್ರ, ವರ್ಣ ಭೇದವಿಲ್ಲದೆ ಬೌದ್ಧ ಧರ್ಮವನ್ನು ಸೇರಿದ ಜನ ಅದರ ಜಾತ್ಯಾತೀತತೆಗೆ ಸಾಕ್ಷಿ. ಜಾತಿಭೇದವೇ ಇಲ್ಲವೆಂದ ಮೇಲೆ ಅಸ್ಪೃಶ್ಯತೆಗೆ ಸ್ಥಾನವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ". ಬೌದ್ಧ ಧರ್ಮದ ಈ ನಂಬಿಕೆಗೆ ಕಾರಣ ಯಾರೂ ಹುಟ್ಟನಿಂದಲೇ ಶ್ರೇಷ್ಠರಾಗಲಿ, ಕನಿಷ್ಠರಾಗಲಿ ಇರುವುದಿಲ್ಲ. ಆಕಸ್ಮಿಕವಾಗಿ ಒಂದು ಸ್ಥಾನದಲ್ಲಿ ಹುಟ್ಟಿದ ಮಾತ್ರಕ್ಕೆ ಆ ವೃತ್ತಿಗೆ ಅಂಟಿಕೊಳ್ಳಬೇಕಾಗಿಲ್ಲ. ತನಗೆ ಸರಿ ಕಂಡ ವೃತ್ತಿಯನ್ನು ಅನುಸರಿಸಬಹುದು. ಪರಂಪರೆಯ ದೃಷ್ಟಿಯಲ್ಲಿ ಮೇಲು ಎನ್ನುವ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಅಯೋಗ್ಯನಿದ್ದರೂ ಗೌರವಾರ್ಹನಾಗಬೇಕಿಲ್ಲ. ವ್ಯಕ್ತಿಗೆ ಗೌರವವೇ ಹೊರತು ಅವನು ಹುಟ್ಟಿದ ಸ್ಥಾನಕ್ಕಲ್ಲ"[35] ಹೀಗೆ ವರ್ಣ ವ್ಯವಸ್ಥೆಯಲ್ಲಿರುವ ಹುಟ್ಟಿಗೆ ಶ್ರೇಷ್ಠತೆ ಎಂಬ ಕಲ್ಪನೆಯನ್ನು ಬುದ್ಧ ವಿರೋಧಿಸಿದ. ಬುದ್ಧನ ವೈಚಾರಿಕ ಧರ್ಮಕ್ಕೆ ಸಂಕುಚಿತ ಜಾತಿ ಗುರಿಯಾಗಿರದೆ ವಿಶಾಲ ಮಾನವತೆಯೇ ಗುರಿಯಾಗಿತ್ತು.

ವೈದಿಕಧರ್ಮದಲ್ಲಿಯ ಜೀವ ವಿರೋಧ ಮೌಲ್ಯಗಳ ವಿರುದ್ಧ ಯುದ್ಧ ಸಾರಿದ. ವರ್ಣ ಮತ್ತು ಜಾತಿ ಪದ್ಧತಿಯು ಸಮಾಜಕ್ಕೆ ಅಂಟಿದ ರೋಗ. ಶೋಷಣೆಗಾಗಿ ಸೃಷ್ಟಿಸಿದ ಈ ಪದ್ಧತಿಯನ್ನು ಬುದ್ಧ ಕಟುವಾಗಿ ಟೀಕಿಸಿದನು. "ಶ್ರಮವನ್ನು ಶ್ರಮಿಕರಲ್ಲಿ ವಿಂಗಡಿಸುವ ಬದಲು ಈ ಪದ್ಧತಿ ಶ್ರಮಿಕರನ್ನೇ ವಿವಿಧ ಗುಂಪುಗಳಾಗಿ ವಿಂಗಡಿಸಿದೆ" ಓದುವವರು ಸದಾ-ಓದುವಂತೆಯೋ, ಕೆಲಸ ಮಾಡುವವರು ಸದಾ ಕೆಲಸ ಮಾಡುವಂತೆಯೋ ಇದು ಕಡ್ಡಾಯಗೊಳಿಸಲಾಗಿದೆ.[36] ಬುದ್ಧನ ಕಾಲದಲ್ಲಿ ಇಂತಹ ವ್ಯವಸ್ಥೆ ಕಂಡು ಬರುತ್ತಿತ್ತು. ಆಯಾ ವರ್ಗದಲ್ಲಿ ಜನಿಸಿದವರು ಆಯಾ ಕೆಲಸಗಳನ್ನೇ ಮಾಡಬೇಕೆಂಬ ಕಟ್ಟುಪಾಡು ವೈದಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರುತ್ತಿತ್ತು. "ವರ್ಣಾಶ್ರಮ ವ್ಯವಸ್ಥೆಯಲ್ಲಿ ಉಚ್ಚ ವರ್ಣದವರು ಉಚ್ಚ ಕೆಲಸಗಳನ್ನು, ನೀಚ ವರ್ಣೀಯ ನೀಚ ಕೆಲಸವನ್ನು ನಿರ್ವಹಿಸುವಂತೆ ಆಜ್ಞಾಪಿಸಿದೆ"[37] ಇಂತಹ ಆಜ್ಞೆಯನ್ನು ನೇರವಾಗಿ ಖಂಡಿಸಿದನು. ಬುದ್ಧ, ವ್ಯಕ್ತಿಯ ಶುದ್ಧತೆ-ಅಶುದ್ಧತೆಗೆ, ಶ್ರೇಷ್ಠತೆ-ಯೋಗ್ಯತೆಗಳಿಗೆ ಆಯಾ ವ್ಯಕ್ತಿಗಳ ನಡತೆ ಮತ್ತು ಶೀಲಗಳು ಮುಖ್ಯವೆಂದು ಬುದ್ಧ ಸಾರಿದ. ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲು-ಕೀಳು ತಾರತಮ್ಯ ಭಾವವು ಮಾನವ ನಿರ್ಮಿತವೇ ಹೊರತು ವಾಸ್ತವಿಕ ಸತ್ಯವಲ್ಲ. ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿಯೂ ಹುಟ್ಟನಿಂದಲೇ ವ್ಯಕ್ತಿಯ ಅರ್ಹತೆಯನ್ನು ನಿರ್ಧರಿಸುವುದನ್ನು ಬುದ್ಧ ಪ್ರಬಲವಾಗಿ ವಿರೋಧಿಸಿದನು. ವ್ಯಕ್ತಿಯು ತನ್ನ ಗುಣದಿಂದ ಶ್ರೇಷ್ಠ- ಕನಿಷ್ಠನಾಗುವನೇ ಹೊರತು ಹುಟ್ಟನಿಂದಲ್ಲ.

ಧಮ್ಮ ಪದದಲ್ಲಿ ಬುದ್ಧನು:

"ನ ಜಟಾಹಿ ನ ಗೊತ್ತೇನ, ನಜಜ್ಜಾ ಹೋತಿ ಬ್ರಾಹ್ಮಣೋ
ಯಮಿ ಸ ಧಮ್ಮೋಚ, ಸೋ ಸುಚೀ ಸೋ ಚ ಬ್ರಾಹ್ಮಣೋ "(ಧಮ್ಮ ಪದ : 393)

ಅಂದರೆ: ಜಟೆಯಿಂದಾಗಲಿ, ಗೋತ್ರದಿಂದಾಗಲಿ, ಹುಟ್ಟಿನಿಂದಾಗಲಿ ಒಬ್ಬನು ಬ್ರಾಹ್ಮಣನಾಗುವುದಿಲ್ಲ. ಆದರೆ ಯಾರಲ್ಲಿ ಸತ್ಯ ಮತ್ತು ಧರ್ಮಗಳು ನೆಲೆಗೊಂಡಿವೆಯೋ ಅವನೇ ಪರಿಶುದ್ಧ, ಅವನೇ ಬ್ರಾಹ್ಮಣ"[38] ಎಂದು ಬುದ್ಧ ಸಾರಿದ್ದಾನೆ. ಬುದ್ಧನು, ಒಬ್ಬ ಮನುಷ್ಯನು ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ. ಜಾತಿಯಿಂದ

ಅಬ್ರಾಹ್ಮಣ ನಾಗುವುದಿಲ್ಲ. ಕರ್ಮದಿಂದ ಬ್ರಾಹ್ಮಣನಾಗುತ್ತಾನೆ. ಕರ್ಮದಿಂದ ಅಬ್ರಾಹ್ಮಣನಾಗುವನು ಎಂಬುದನ್ನು ಈ ಕೆಳಗಿನ ನುಡಿಯಲ್ಲಿ ಬಿಂಬಿಸಿದ್ದಾನೆ :

"ನ ಜಚ್ಚಾ ಬ್ರಾಹ್ಮಣೋ ಹೋತಿ
ನ ಜಚ್ಚಾ ಹೋತಿ ಅಬ್ರಾಹ್ಮಣೋ
ಕಮ್ಮನಾ ಬ್ರಾಹ್ಮಣೋ ಹೋತಿ
ಕಮ್ಮನಾ ಹೋತಿ ಅಬ್ರಾಹ್ಮಣೋ" [39]

ಮನುಷ್ಯ ತಾನು ಮಾಡುವ ಕರ್ಮದಿಂದ ಬ್ರಾಹ್ಮಣ ಅಥವಾ ಅಬ್ರಾಹ್ಮಣನಾಗುತ್ತಾನೆ ಎಂದು ಬುದ್ಧ ವಿವರಿಸಿದ್ದಾನೆ. ಹುಟ್ಟಿನ ಶ್ರೇಷ್ಠತೆ ವ್ಯಕ್ತಿಗೆ ಸಮಾಜದಲ್ಲಿ ಘನತೆ, ಗೌರವ, ಸ್ಥಾನ-ಮಾನಗಳನ್ನು ತಂದು ಕೊಡಬಲ್ಲದು ಎನ್ನುವ ವಾದವು ಸುಳ್ಳು. ಆತನ ಶೀಲ, ನಡತೆ, ನೈತಿಕತೆ ಇಂತಹ ಕ್ರಿಯೆಗಳಿಂದ ಮಾತ್ರ ವ್ಯಕ್ತಿಗೆ ಸಾಮಾಜಿಕ ಸ್ಥಾನಮಾನಗಳನ್ನು ದೊರಕಿಸಿ ಕೊಡಬಲ್ಲದೆಂಬುದು ಬುದ್ಧನ ಉಪದೇಶಗಳಿಂದ ತಿಳಿದು ಬರುತ್ತದೆ.

ಸಿದ್ಧಾರ್ಥನ ಜಾತ್ಯಾತೀತತೆಯನ್ನು ಪ್ರಚುರಪಡಿಸುವ ಒಂದು ಘಟನೆ ನಡೆಯಿತು. ನಿರಸನ ವ್ರತದಿಂದ ಅಶಕ್ತನಾದ ಸಿದ್ಧಾರ್ಥ ಸ್ಮೃತಿ ತಪ್ಪಿ ಬಿದ್ದ. ಅದನ್ನು ಕುರಿ ಕಾಯುವ ಹುಡುಗನೊಬ್ಬ ನೋಡಿ ಅಂಜುತ್ತ ಅವನ ಸಮೀಪ ಬಂದು ಕುರಿಯ ಮೊಲೆಯನ್ನು ಸಿದ್ಧಾರ್ಥನ ಬಾಯಿ ಸಮೀಪಕ್ಕೆ ಒಯ್ದು, ಅವನನ್ನು ಮುಟ್ಟದಂತೆ, ಅವನ ಹಾಲನ್ನು ಗುಟುಕರಿಸಿ, ಸಿದ್ಧಾರ್ಥ ಸ್ವಲ್ಪ ಚೇತರಿಸಿಕೊಂಡು ಕಣ್ತೆರೆದ. ಪಕ್ಕದಲ್ಲಿ ನಿಂತಿದ್ದ ಆ ಹುಡುಗನ ಕೈಯಲ್ಲಿ ಹಾಲಿನ ಬಟ್ಟಲಿರುವದನ್ನು ನೋಡಿ, ಹಾಲನ್ನು ಬೇಡಿದ. ಆದರೆ ಹುಡುಗ ತಾನು ಕೀಳು ಜಾತಿಯವನಾದ ಕಾರಣ ಹಾಲು ಕೊಡಲೊಪ್ಪಲಿಲ್ಲ. ಆಗ ಸಿದ್ಧಾರ್ಥ ಆಡಿದ ಮಾತು ಜಾತಿಯ ಎಲ್ಲೆಯನ್ನು ಮೀರಿದ ವಿಶ್ವಬಂಧುತ್ವಕ್ಕೆ ಸಾಕ್ಷಿ ಅವನ ಮಾತು. "ಮಗು ದಯೆ ಹಾಗೂ ಅವಶ್ಯಕತೆಗಳ ಮೂಲಕ ಎಲ್ಲ ದೇಹಗಳಲ್ಲಿ ಸಂಬಂಧ ಏರ್ಪಡಿಸುವದು. ಬೇರೆ ಬೇರೆ ಜಾತಿಯವರ ದೇಹದಲ್ಲಿ ಹರಿಯುತ್ತಿರುವ ರಕ್ತ ಬೇರೆ ಅಲ್ಲ. ಅವರ ಕಣ್ಣಿನಿಂದ ಹರಿಯುವ ನೀರು ಬೇರೆ ಅಲ್ಲ. ಯಾವನೂ ಹುಟ್ಟುವಾಗಲೇ ತಿಲಕ, ಮುದ್ರೆ, ಧರಿಸಿಕೊಂಡು ಬಂದಿಲ್ಲ. ಈ ಜಾತಿಗಳು ಮಾನವ ನಿರ್ಮಿಸಿಕೊಂಡಂಥವು. ಅದಕ್ಕಾಗಿ ಅವುಗಳನ್ನು ಮನ್ನಿಸಿಬೇಕಾಗಿಲ್ಲ. ಒಳ್ಳೆಯ ಕಾರ್ಯಗಳನ್ನು ಮಾಡುವವ ಬ್ರಾಹ್ಮಣ, ಅಧಮ ಕಾರ್ಯಗಳನ್ನು ಮಾಡುವವ ಅಧಮ"[40] ಇಂತಹ ಹಲವು ಉದಾಹರಣೆಗಳ ಮೂಲಕ ಬುದ್ಧ ವರ್ಣ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆ ಲೋಪ ದೋಷಗಳನ್ನು ಖಂಡಿಸುತ್ತ ಸರಿ ದಾರಿ ತೋರುವ ಉಪದೇಶಗಳನ್ನು ನೀಡುತ್ತ ವ್ಯವಸ್ಥೆಯ ಪರಿವರ್ತನೆಗೆ ಪ್ರಯತ್ನಿಸಿದನು.

"ಬ್ರಾಹ್ಮಣರು ಪ್ರತಿಪಾದಿಸಿದ ಆದರ್ಶ ಸಮಾಜದ ಪರಿಕಲ್ಪನೆಯನ್ನು ಚಾತುರ್ವರ್ಣ ಎಂದು ಅವರು ಕರೆದರು. ನಿರ್ದೋಷವೆನಿಸಿದ ವೇದಗಳಲ್ಲಿ ಪ್ರತಿಪಾದಿತವಾಗಿರುವ ಚಾತುರ್ವರ್ಣ ಸಿದ್ಧಾಂತವನ್ನು ಯಾವ ಪ್ರತಿಭಟನೆಯೂ ಇಲ್ಲದೇ ಒಪ್ಪಿಕೊಳ್ಳಬೇಕು ಎಂಬುದು ಇವುಗಳ ವಾದ"[41] "ಈ ರೀತಿಯ ಚಾತುರ್ವರ್ಣ ವ್ಯವಸ್ಥೆಯು ಕೆಲವು ನಿರ್ದಿಷ್ಟ ನಿಯಮಗಳನ್ನು ಆಧರಿಸಿ ರೂಪಗೊಂಡಿದೆ. ಅದರ ಮೊದಲನೆಯ ನಿಯಮವೆಂದರೆ, ಒಟ್ಟು ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಗಗಳಾಗಿ ವಿಂಗಡಿಸಬೇಕು. ಈ ನಾಲ್ಕು ವರ್ಗಗಳ ನಡುವೆ ಸಾಮಾಜಿಕ ಸಮಾನತೆ ಇರಬಾರದು. ಅವುಗಳ ನಡುವೆ

ಅಸಮತೆಯಿಂದ ಕೂಡಿದ ತಾರತಮ್ಯವಿರಬೇಕು. ಬ್ರಾಹ್ಮಣರು ಅತಿ ಎತ್ತರದಲ್ಲಿದ್ದು, ನಂತರ ಕ್ಷತ್ರಿಯ, ವೈಶ್ಯ, ಶೂದ್ರರು 4ನೇ ವರ್ಗದವರು ಎಲ್ಲರಿಗಿಂತಲೂ ಕೀಳಾಗಿರಬೇಕು" ಈ ನಾಲ್ಕು ವರ್ಣದವರನ್ನು ಅವರ ಹಕ್ಕು ಬಾಧ್ಯತೆಗಳ ವಿಚಾರದಲ್ಲಿ ಎಂದಿಗೂ ಸರಿಸಮಾನರಂತೆ ಪರಿಗಣಿಸಬಾರದು. ಅವರ ಹಕ್ಕು ಮತ್ತು ಬಾಧ್ಯತೆಗಳ ವಿಚಾರದಲ್ಲಿ ಅಸಮತೆಯ ತಾರತಮ್ಯ ಇರಲೇಬೇಕು. ಶೂದ್ರನಿಗೆ ಯಾವ ರೀತಿಯ ಹಕ್ಕೂ ಇಲ್ಲ. ಅವನಿಗೆ ಇರುವುದೆಲ್ಲ ಬಾಧ್ಯತೆ ಮಾತ್ರ. ಅವನ ಮುಖ್ಯವಾದ ಬಾಧ್ಯತೆಯೇನೆಂದರೆ, ಅವನು ತನ್ನ ಜೀವನಕ್ರಮದಿಂದ ಮೇಲಿನ ಮೂರು ವರ್ಣದವರಿಗೂ ಯಾವರೀತಿಯಿಂದಲೂ ನೋವಾಗದಂತೆ ಬದುಕಬೇಕು.[42] "ಚಾತುರ್ವರ್ಣದ ಮೂರನೇ ನಿಯಮವು ಅವರ ಉದ್ಯೋಗ ಅಥವಾ ವೃತ್ತಿಯ ವಿಭಜನೆಗೆ ಸಂಬಂಧಿಸಿದ್ದು. ಬ್ರಾಹ್ಮಣನ ವೃತ್ತಿಯೇನೆಂದರೆ: ಅಧ್ಯಯನ, ಅಧ್ಯಾಪನ ಮತ್ತು ಧಾರ್ಮಿಕ ವಿಧಿವಿಧಾನಗಳ ಆಚರಣೆ ಕ್ಷತ್ರಿಯನ ವೃತ್ತಿಯೇನೆಂದರೆ ಯುದ್ಧದಲ್ಲಿ ಹೋರಾಡುವುದು ಮತ್ತು ದೇಶದ ರಕ್ಷಣೆ. ಇನ್ನು ವೈಶ್ಯನಾದವನು ವ್ಯಾಪಾರದ ವೃತ್ತಿಯಲ್ಲಿ ತೊಡಗಬೇಕು. ಶೂದ್ರನಾದವನು ಮೇಲಿನ ಮೂರು ಕುಲದವರ ಸೇವೆಯನ್ನು ಮಾಡಬೇಕು. ಮತ್ತು ಅದೇ ಅವನ ವೃತ್ತಿ. ಒಂದು ವರ್ಗದವರು ಮತ್ತೊಂದು ವರ್ಗದ ವೃತ್ತಿಗೆ ಅತಿಕ್ರಮಿಸಬಾರದು. ಚಾತುರ್ವರ್ಣದ ನಾಲ್ಕನೇ ನಿಬಂಧನೆ ಈ ನಾಲ್ಕು ವರ್ಣಗಳ ಜನರಿಗೆ ಇರುವ ಶಿಕ್ಷಣದ ಹಕ್ಕುಗಳನ್ನು ಕುರಿತದ್ದು. ಈ ನಾಲ್ಕು ವರ್ಣಗಳಲ್ಲಿ ಮೊದಲಿನ ಮೂರು ವರ್ಣದವರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿತು. ಶೂದ್ರರಾದವರಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದ್ದಿತು. ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ ಕೇವಲ ಶೂದ್ರರಿಗೆ ಮಾತ್ರ ಶಿಕ್ಷಣದ ಹಕ್ಕನ್ನು ನಿರಾಕರಿಸಲಿಲ್ಲ. ಹೆಂಗಸರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಕ್ಕೆ ಸೇರಿದ ಎಲ್ಲ ಹೆಂಗಸರಿಗೂ ಶೂದ್ರರಿಗೆ ಸರಿಸಮನಾಗಿ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದ್ದಿತು"[43] ಹೀಗಾಗಿ ಈ ವ್ಯವಸ್ಥೆಯನ್ನು ಬುದ್ಧ ವಿರೋಧಿಸಿದನು.

"ಬ್ರಾಹ್ಮಣ ಧರ್ಮದಲ್ಲಿ ಒಪ್ಪಲಾದ ಚಾತುರ್ವರ್ಣ ವ್ಯವಸ್ಥೆಯನ್ನು ಬುದ್ಧನು ಅಸಹಜವಾದ ಸಾಮಾಜಿಕ ಸಿದ್ಧಾಂತ ಎಂದು ನಿರಾಕರಿಸಿದನು. ಅದರಲ್ಲಿ ಕಾಣುವ ನಾಲ್ಕು ರೀತಿಯ ವರ್ಗೀಕರಣವು ಕೇವಲ ಸ್ವೇಚ್ಛೆಯಿಂದ ಬಲವಂತವಾಗಿ ಮಾಡಿರುವ ವಿಭಜನೆ ಎಂದು ಅವನು ಗುರುತಿಸಿದನು. ಅದು ಒಂದು ರೀತಿಯ ಅಧಿಕಾರಶಾಹಿಯ ವ್ಯವಸ್ಥೆಯೆನಿಸಿತು. ಬಿಚ್ಚು ಮನಸ್ಸಿನ ಸ್ವತಂತ್ರವಾದ ಸಾಮಾಜಿಕ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿದ್ದ ಬುದ್ಧನಿಗೆ ಚಾತುರ್ವರ್ಣ ವ್ಯವಸ್ಥೆ ಅವೈಜ್ಞಾನಿಕವೆನಿಸಿತು.[44] ಈ ವ್ಯವಸ್ಥೆಯಲ್ಲಿ ಕೇವಲ ಹುಟ್ಟಿನಿಂದಾದ ಆಕಸ್ಮಿಕ ಕಾರಣಕ್ಕಾಗಿ ಆ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳು ನಿರ್ಣಯಗೊಳ್ಳುತ್ತವೆ. ಒಬ್ಬ ವ್ಯಕ್ತಿಯ ಹೀನ ಕೃತ್ಯಗಳು ಮತ್ತು ಕೆಟ್ಟ ಚಾರಿತ್ರ್ಯ ಅದೆಷ್ಟೇ ಕೀಳುಮಟ್ಟದ್ದಾಗಿದ್ದರೂ ಅದರಿಂದಾಗಿ ಅವನ ಸಾಮಾಜಿಕ ಸ್ಥಾನ ಕೀಳಾಗುವುದಿಲ್ಲ. ಒಬ್ಬ ವ್ಯಕ್ತಿ ಅದೆಷ್ಟೇ ಒಳ್ಳೆಯ ಕಾರ್ಯಗಳನ್ನು ಮಾಡಿದರೂ ಸಹ, ಅವನು ಹುಟ್ಟಿನಿಂದ ಕೀಳು ವರ್ಣದವನಾದರೆ ಅವನಿಗೆ ಯಾವ ಸಾಮಾಜಿಕ ಉನ್ನತಿಯೂ ದೊರೆಯಲಾರದು. ಹೀಗಾಗಿ ವರ್ಣ ಧರ್ಮದ ಈ ವ್ಯವಸ್ಥೆಯಲ್ಲಿ ವ್ಯಕ್ತಿಯ ಮೌಲ್ಯ ಮತ್ತು ವಿಕಾಸಕ್ಕೆ ಅದರಲ್ಲಿ ಅವಕಾಶವಿರುವುದಿಲ್ಲ. ಸಾಮಾಜಿಕ ಅಸಮತೆಯೆಂಬುದು ಎಲ್ಲ ಸಮಾಜದಲ್ಲಿಯೂ ಇರುತ್ತದೆ ನಿಜ, ಆದರೆ ಬ್ರಾಹ್ಮಣ ಸಮಾಜದಲ್ಲಿ ಅದರ ಸ್ವರೂಪವೇ ಬೇರೆ. ಬ್ರಾಹ್ಮಣ ಸಮಾಜವು ಪ್ರತಿಪಾದಿಸಿದ ಅಸಮತೆಯು ಅಧಿಕಾರಶಾಯಿಯ ಮನ್ನಣೆ ಗಳಿಸಿದ ಒಂದು ಧಾರ್ಮಿಕ ಸಿದ್ಧಾಂತ. ಇದು ಒಂದು ಆಕಸ್ಮಿಕವಾಗಿ ರೂಪಗೊಂಡ ಸಿದ್ಧಾಂತವಲ್ಲ. ಇದು ಸಮಾನತೆಯನ್ನು ವಿರೋಧಿಸುವುದಕ್ಕಾಗಿಯೇ ಮೂಡಿ

ಬಂದ ಒಂದು ವ್ಯವಸ್ಥಿತ ಸಿದ್ಧಾಂತ. ವಾಸ್ತವವಾಗಿ ಇದು ಸಮಾನತೆಯನ್ನು ಯಾವ ಹಂತದಲ್ಲಿಯೂ ಒಪ್ಪಲಿಲ್ಲ.

"ಬ್ರಾಹ್ಮಣ ಧರ್ಮವು ಕೇವಲ ಅಸಮತೆಯನ್ನು ಒಪ್ಪಿ ಸುಮ್ಮನಾಗಲಿಲ್ಲ. ಅದರ ಹೃದಯವಿರುವುದು ವರ್ಗೀಕೃತ ಅಸಮತೆಯಲ್ಲಿ ಎಂಬುದು ಕಾರ್ಯರೂಪಕ್ಕೆ ಇಳಿಸಿ ತೋರಿಸಿತು. ಈ ರೀತಿಯ ವರ್ಗೀಕೃತ ಅಸಮತೆಯಿಂದ ಸಾಮಾಜಿಕ ಸಾಮರಸ್ಯಕ್ಕೆ ಬದಲಾಗಿ ವರ್ಗವರ್ಗಗಳ ನಡುವಿನ ದ್ವೇಷ ಏರುತ್ತಾ ಹೋಗುತ್ತದೆ ಎಂದು ಬುದ್ಧನು ಗ್ರಹಿಸಿದನು. ಉನ್ನತ ವರ್ಗದವರು ಕೆಳವರ್ಗದವರನ್ನು ತಾತ್ಸಾರಭಾವದಿಂದ ನೋಡುವುದರಿಂದ ಇದರ ಫಲವಾಗಿ ಸಾಮಾಜಿಕ ವಿರಸ ಶಾಶ್ವತವಾಗುತ್ತದೆ ಎಂದು ಅವನು ತಿಳಿದನು.

ಚಾತುರ್ವರ್ಣ ಸಿದ್ಧಾಂತದಲ್ಲಿ ಈ ನಾಲ್ಕು ವರ್ಣಗಳ ಕಸುಬು ಅಥವಾ ವೃತ್ತಿಗಳು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿದ್ದವು. ತಮಗೆ ಬೇಕಾದ ವೃತ್ತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಯಾವ ವ್ಯಕ್ತಿಗೂ ಇರಲಿಲ್ಲ. ಈ ರೀತಿ ವೃತ್ತಿಯನ್ನು ನಿರ್ದಿಷ್ಟಗೊಳಿಸುವಾಗ ವ್ಯಕ್ತಿಯ ಕುಶಲತೆ ಮತ್ತು ಪರಿಣತಿಯನ್ನು ಗಮನಿಸದೆ ಕೇವಲ ಅವನ ಹುಟ್ಟಿನಿಂದಲೇ ನಿರ್ಣಯಿಸಲಾಗಿದ್ದಿತು. ಈ ಚಾತುರ್ವರ್ಣ ಸಿದ್ಧಾಂತವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಬುದ್ಧನು ಬ್ರಾಹ್ಮಣರಲ್ಲಿ ಪ್ರತಿಪಾದಿತವಾದ ಈ ಸಾಮಾಜಿಕ ವ್ಯವಸ್ಥೆಗೆ ಆಧಾರವಾದ ದಾರ್ಶನಿಕ ತತ್ವಗಳು ಸ್ವಾರ್ಥದಿಂದಲ್ಲದಿದ್ದರೂ ತಪ್ಪು ತಿಳುವಳಿಕೆಯಿಂದ ಕೂಡಿವೆ ಎಂಬುದನ್ನು ಬಹುಬೇಗ ಕಂಡುಕೊಂಡನು.

ಈ ಸಿದ್ಧಾಂತದಲ್ಲಿ ಸರ್ವರ ಹಿತ ಮತ್ತು ಸರ್ವರ ಸುಖವನ್ನು ಕಾಪಾಡುವ ಪ್ರಯತ್ನ ಇಲ್ಲ ಎಂಬುದು ಬುದ್ಧನಿಗೆ ಸ್ಪಷ್ಟವಾಯಿತು. ಕೆಲವೇ ಜನರ ಸುಖಕ್ಕಾಗಿ ಬಹು ಜನರು ಶ್ರಮಿಸಬೇಕು ಎಂಬುದು ಈ ಸಿದ್ಧಾಂತದ ಮೂಲ ಉದ್ದೇಶ. ಅತಿಮಾನವರೆನಿಸಿದ ಒಂದು ವರ್ಗದ ಜನರ ಸೇವೆಗಾಗಿ ರೂಪಗೊಂಡ ಒಂದು ಸಾಮಾಜಿಕ ವ್ಯವಸ್ಥೆ ಇದು ಎಂದು ಅವನು ಮನಗಂಡನು. ಇದು ದುರ್ಬಲರನ್ನು ಶೋಷಣೆ ಮಾಡಿ ಅವರನ್ನು ತುಳಿದು, ಸದಾ ಧ್ಯಾನದಲ್ಲಿಡಲು ಮಾಡಿದ ಒಂದು ಪ್ರಯತ್ನ ಎಂದು ಬುದ್ಧನು ತಿಳಿದನು"[45] ಈ ವರ್ಣ ವ್ಯವಸ್ಥೆಯ ಫಲವಾಗಿ ಶೂದ್ರರಾದ ಜನ ಸ್ವಾರ್ಥಿಗಳಾದ ಬ್ರಾಹ್ಮಣರ ಕುತಂತ್ರ (ಪಿತೂರಿ, ಒಳಸಂಚು) ಪ್ರಬಲರಾದ ಕ್ಷತ್ರಿಯರ ಕ್ರೌರ್ಯ (ವಿನಾಶಕಾರಕ) ಮತ್ತು ಶ್ರೀಮಂತರಾದ ವೈಶ್ಯರ ಲಾಭಬಡುಕತನಕ್ಕೆ ಸಿಕ್ಕಿ ಬಲಿಪಶುಗಳಾದರು. ಇಂತಹ ವ್ಯವಸ್ಥೆಗೆ ಸಿಕ್ಕಿದ ದುರ್ಬಲರಿಗೆ ಪರಿಹಾರವೇನು? ಇದು ದೈವದತ್ತವಾಗಿ ಬಂದ ಒಂದು ಸಾಮಾಜಿಕ ವ್ಯವಸ್ಥೆ ಎಂದಾದ ಮೇಲೆ, ಇದನ್ನು ಸುಧಾರಿಸುವುದು ಅಸಾಧ್ಯ ಎಂದು ಅವರು ತಿಳಿಸಿದರು. ಆದ್ದರಿಂದ ಇದನ್ನು ಕೊನೆಗಾಣಿಸುವುದೊಂದೇ ಇದಕ್ಕೆ ಪರಿಹಾರ ಎಂದಾಯಿತು. ಈಎಲ್ಲ ಅಂಶಗಳನ್ನು ಪರೀಕ್ಷಿಸಿದ ಬುದ್ಧನು ಈ ವರ್ಣಧರ್ಮವು ಮಾನವ ಸಹಜ ಬದುಕಿಗೆ ವಿರುದ್ಧವಾದ ಒಂದು ಸಾಮಾಜಿಕ ವ್ಯವಸ್ಥೆ ಎಂದು ತಿಳಿದು ಅದನ್ನು ನಿರಾಕರಿಸಿದರು.[46] ಬೌದ್ಧಧರ್ಮವು ಸಮಾನತೆಯ ಸದಾಚಾರದಿಂದ ಕೂಡಿದ್ದು ಚಾತುರ್ವರ್ಣ ಧರ್ಮ ಸಿದ್ಧಾಂತವನ್ನು ಕಠೋರವಾಗಿ ವಿರೋಧಿಸುತ್ತದೆ. ಬುದ್ಧನು ಚಾತುರ್ವರ್ಣನೀತಿಯನ್ನು ಬುಡಸಮೇತ ಕಿತ್ತು ತೆಗೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಿದ. ಬುದ್ಧನು ಶೂದ್ರರನ್ನು ಭಿಕ್ಕು ಸಂಘಗಳಿಗೆ ಸೇರಲು ಅವಕಾಶ ನೀಡಿದ ಮತ್ತು ಸ್ತ್ರೀಯರಿಗೂ ಭಿಕ್ಷುಣಿಯಾಗಲು ಅನುಮತಿ ನೀಡಿದ. ಬುದ್ಧ ಚಾತುರ್ವರ್ಣದ ಬಗ್ಗೆ ಒಂದು ಹೊಸ ದಾರ್ಶನಿಕ ತರ್ಕ ಒದಗಿಸಿದ್ದರಿಂದ ಹಿಂದೂಗಳು ಬೌದ್ಧಧರ್ಮದ ಕಡೆ ಒಳ್ಳೆಯ ದೃಷ್ಟಿಯಿಂದ

ನೋಡುವಂತಾಯಿತು. ಸಾಮಾಜಿಕ ವ್ಯವಸ್ಥೆ ವಿಚಾರದಲ್ಲಿ ಚತುರ್ವರ್ಣವೇ ಆದರ್ಶ ಎಂಬ ನಂಬಿಕೆ ತಿರಸ್ಕರಿಸಿದ.

ಬುದ್ಧನ ಉಪದೇಶಗಳನ್ನೊಳಗೊಂಡ "ತ್ರಿಪಿಟಿಕ" ದಲ್ಲಿಯ ಒಂದು ಸುತ್ತದಲ್ಲಿ (ಅಗ್ಗಿಕ ಸುತ್ತ) ಬರುವ ಸಂವಾದದಿಂದ, ಮನುಷ್ಯನ ಹುಟ್ಟಿಗಿಂತಲೂ ಆತನ ನಡತೆ, ಶೀಲಗಳು ಆತನನ್ನು ಶುದ್ಧ-ಅಶುದ್ಧನನ್ನಾಗಿ ನಿರ್ಮಿಸುತ್ತವೆ ಎಂಬುದು ತಿಳಿದು ಬರುತ್ತದೆ. "ಒಮ್ಮೆ ಬುದ್ಧ ಶ್ರವಸ್ತಿ ನಗರದ ಅನಂತ ಪಿಂಡಕನ ಆಶ್ರಯದಲ್ಲಿ ತಂಗಿದ್ದನು. ಭಿಕ್ಷಾಟನೆಗಾಗಿ ನಗರಕ್ಕೆ ಮಧ್ಯಾಹ್ನ ಭಿಕ್ಷಾಪಾತ್ರೆಯ ಹಿಡಿದು ನಡೆದನು. ಆ ಸಮಯದಲ್ಲಿ ನಗರದ ಒಂದು ಭಾಗದಲ್ಲಿ ಯಜ್ಞ ನಡೆಯುತ್ತಿರುವಾಗ ಯಜ್ಞಕುಂಡದಿಂದ ಅಗ್ನಿ ಹೊರಚಿಮ್ಮುವುದನ್ನು ಮತ್ತು ಯಜ್ಞದ ಬಲಿಯನ್ನು ಒಂದೆಡೆ ಕಟ್ಟಿರುವುದನ್ನು ವೀಕ್ಷಿಸುತ್ತ ಅಗ್ಗಿಕ ಎಂಬ ಬ್ರಾಹ್ಮಣನ ಮನೆಯ ಒಳಗೆ ಸಾಗಿದನು. ದೂರದಿಂದಲೇ ಬುದ್ಧನನ್ನು ನೋಡಿದ ಅಗ್ಗಿಕ ಸಿಟ್ಟಿನಲ್ಲಿ ಬುದ್ಧನು ಮನೆಯ ಒಳಗೆ ಬರುವುದನ್ನು ಕಾಯುತ್ತಿದ್ದನು. ಬುದ್ಧನು ಮನೆಯ ಒಳಗೆ ಬಂದಾಕ್ಷಣವೇ ಅಗ್ಗಿಕನು ಕೋಪಿಷ್ಟನಾಗಿ ಹೀಗೆ ಹೇಳಿದನು.

"ಎಲವೋ ಕೊಳಕ ಭಿಕ್ಕುವೇ, ಕುಲಹೀನ ಬಿಕ್ಕುವೇ ನೀನು ಅಲ್ಲಿ ದೂರದಲ್ಲಿ ನಿಲ್ಲು. ನೀನೊಬ್ಬ ಅಶುದ್ಧ ಎಂಬುದಾಗಿ ಗದರಿಸಿದನು. ಆತನ ಮಾತುಗಳನ್ನು ಕೇಳಿದ ಬುದ್ಧ ಧೈರ್ಯಗೆಡದೆ ಮುಂದೆ ಸಾಗಿ ಶಾಂತ ಚಿತ್ತದಿಂದ ಆತನಿಗೆ ಕೆಲವು ಪ್ರಶ್ನೆಗಳನ್ನು ಕೇಳಿದನು. "ಓ...ಬ್ರಾಹ್ಮಣಾ ಕುಲಹೀನ ಯಾರು? ಕೆಲಸ ಯಾವುದು? ಅರಿಯದ ಅಗ್ಗಿಕ ಮೌನ ಧರಿಸಿದನು. ತನ್ನ ಅಜ್ಞಾನದ ಅರಿವಾಗಿ ಕುಲಹೀನ ಯಾರು? ಮತ್ತು ಯಾವುದು? ಎಂಬುದನ್ನು ಬುದ್ಧನಿಂದ ಅರಿಯಲು ಬಯಸಿದನು. ಆಗ ಬುದ್ಧನು :

"ಹುಟ್ಟಿನಿಂದ ಯಾರೂ ಕುಲಹೀನರಲ್ಲ, ನಡತೆಯಿಂದ ಕುಲಹೀನತೆ ತಟ್ಟುವುದು. ಅವನು ದ್ವಿಜನಾಗಿರಬಹುದು, ಅಥವಾ ದ್ವಿಜನಲ್ಲದಿರಬಹುದು, ಜೀವಗಳ ಬಗೆಗೆ ಯಾರಲ್ಲಿ ಕರುಣೆ ಇಲ್ಲವೋ ಅಂಥವನು ಹೀನ ಕುಲದವನು. ಗ್ರಾಮಗಳನ್ನು ಪ್ರತಿಬಂಧಿಸಿ ಅವುಗಳನ್ನು ವಿನಾಶ ಮಾಡುವವನು ಹೀನ ಕುಲದವ, ಬೇರೆಯವರಿಗೆ ಸೇರಿದ ವಸ್ತುಗಳನ್ನು ಕದಿಯುವವನು ಹೀನ ಕುಲದವನು. ಸಂಪತ್ತಿನ ಆಸೆಗಾಗಿ ಸುಳ್ಳು ಸಾಕ್ಷಿ ನುಡಿಯುವವನು ಹೀನ ಕುಲದವ"[47] ಎನ್ನುವ ಬುದ್ಧನ ಮಾತುಗಳಿಂದ ಅಗ್ಗಿಕನು ನಾಚಿ ತಲೆ ತಗ್ಗಿಸಿದನು. ಹೀಗೆ ಬುದ್ಧನು ಶುಷ್ಕ ಬ್ರಾಹ್ಮಣ್ಯದ ನಿಸ್ಸಾರತೆಯನ್ನು ಬಯಲುಗೊಳಿಸಿದ್ದಾನೆ. ಅಲ್ಲದೇ ಬುದ್ಧನು ಗುಣವಂತನನ್ನು ಮೇಧಾವಿಯನ್ನು ಆತನ ಜಾತಿ ಕುಲಗಳನ್ನು ಗಣಿಸದೇ ಪ್ರಜ್ಞಾವಂತರು ಪೂಜಿಸುತ್ತಾರೆ.

"ಇಸತ್ತಂ ಬಲವಿರಿಯ ಞಾಯಸ್ಮಿಂ ವಿಜ್ಜೇಥ ಮಾಣವೇ ।
ತಂ ಯುದ್ಧೋತ್ಥೋ ಭರೇ ರಾಜಾ ನಾಸೂರಂ ಜಾತಿ ಪಚ್ಚಯಾ ॥
ತಥೇವ ಖನ್ತಿ ಸೂರಚ್ಚ ಧಮ್ಮಾ ಯಸ್ಮಿಂ ಪತಿಟ್ಠಿತಾ ತಂ
ಅರಿಯುತ್ತಿಂ ಮೇಧಾವೀ ಹೀನ ಜಚ್ಚಮ್ಮಿ ಪೂಜಯೇ "

ಅಂದರೆ "ಬಿಲ್ಲುಗಾರಿಕೆಯೂ ಬಲವೀರ್ಯಗಳೂ ಯಾವ ಮನುಷ್ಯನಲ್ಲಿ ಕಾಣುವವೋ ಅವನನ್ನು ದೊರೆಯು ಯುದ್ಧಕ್ಕಾಗಿ ಪೋಷಿಸುವನು, ಜಾತಿಯ ಕಾರಣದಿಂದ ಹೇಡಿಯನ್ನಲ್ಲ. ಆದರಂತೆಯೇ ಕ್ಷಮೆ, ನಮ್ರತೆ, ಮೊದಲಾದ ಗುಣಗಳು ಯಾರಲ್ಲಿ ಚೆನ್ನಾಗಿ ನಿಂತಿವೆಯೇ ಆ ಆರ್ಯ ವೃತ್ತಿಯವನನ್ನು ಮೇಧಾವಿಗಳು ಅವನು ಹೀನಜಾತಿಯವನಾದರೂ ಪೂಜಿಸುವರು" ಎಂದು ಸಾರಿದ್ದಾನೆ.[48] ಬುದ್ಧನ

ವಿಚಾರದಲ್ಲಿ ವ್ಯಕ್ತಿಯು ಸೂಕ್ತ ಗುಣಗಳನ್ನು ಹೊಂದಿದ್ದರೆ ಆತನು ಯೋಗ್ಯನೂ, ಪೂಜ್ಯನೂ ಆಗಲು ಸಾಧ್ಯ ಎಂದು ತಿಳಿಸಿದ್ದಾನೆ. ಬುದ್ಧನು, ವ್ಯಕ್ತಿಯ ಜಾತಿಯನ್ನು ಕೇಳುವುದಕ್ಕಿಂತ ಅವನ ನಡತೆಯನ್ನು ಕೇಳು ಎಂದು ಹೇಳಿರುವ ಈ ಮಾತುಗಳು :

' ಮಾ ಜಾತಿಂ ಪುಚ್ಛ ಚರಣಞ್ಚ ಪುಚ್ಛ । ಕಟಾ ಹವೇ ಜಾಯತಿ ಜಾತವೇದೋ ।
ನೀಚಾಕುಲೀನೋ ಪಿ ಮುನೀ ಧಿತೀಯಾ । ಆಜಾನಿಯೋ ಹೋತಿ ಹಿರೀನಿಸೇಧೋ ।
ಸಚ್ಚೇನ ದಸ್ತೋ ದಮಸಾ ಉಪೇತೋ । ವೇದಸ್ತಗೂ ವುಸಿತ ಬ್ರಹ್ಮ ಚರಿಯೋ ॥

ಇದರ ಅರ್ಥ ಜಾತಿಯನ್ನು ಕೇಳಬೇಡ। ನಡತೆಯನ್ನು ಕೇಳು, ಕಟ್ಟಿಗೆಯಿಂದ ಬೆಂಕಿ ಹುಟ್ಟುವುದಿಲ್ಲವೆ, ನೀಚಕುಲದಲ್ಲಿ ಹುಟ್ಟಿದವನಾದರೂ ಧೃತಿಮಂತನಾದ ಮುನಿಯು ಲಜ್ಜೆಯಿಂದ ತಡೆಯಲ್ಪಟ್ಟು, ಸತ್ಯದಿಂದ ದಾಂತನಾಗಿ, ದಯೆಯಿಂದ ಕೂಡಿದ, ವೇದಾಂತವನ್ನು ತಿಳಿದು, ಬ್ರಹ್ಮ ಭಯವನ್ನು ಪೂರೈಸಿ, ಸದ್ವಂಶದಲ್ಲಿ ಹುಟ್ಟಿದವನಾಗುವನು ಎನ್ನುತ್ತಾನೆ. ಒಬ್ಬ ಕೆಳಜಾತಿಯಲ್ಲಿ ಜನಿಸಿದ ವ್ಯಕ್ತಿಯಾಗಿದ್ದರೂ 'ಬ್ರಹ್ಮ' ದ ಕಡೆಗೆ,ನಿರ್ವಾಣದ ಕಡೆಗೆ ಹೋಗಲು ತನ್ನ ಸಾಧನೆಯಿಂದ ಅರ್ಹನಾಗಬಲ್ಲ ಎನ್ನುವುದು ಇಲ್ಲಿ ವಿವರಿಸಲಾಗಿದೆ. ಜಾತಿ ವ್ಯವಸ್ಥೆಯನ್ನು ಬುದ್ಧ ತೀವ್ರವಾಗಿ ಖಂಡಿಸುತ್ತಿದ್ದನು.[49] ಹೀಗೆ ಬುದ್ಧನು ಮೊಟ್ಟ ಮೊದಲು ಭಾರತದಲ್ಲಿ, ಅಸ್ಪೃಶ್ಯತೆಯನ್ನು, ಜಾತಿ ಭೇದವನ್ನು, ಲಿಂಗಭೇದವನ್ನು, ವರ್ಣವ್ಯವಸ್ಥೆಯನ್ನು ಧಿಕ್ಕರಿಸಿದನು. "ಎಲ್ಲ ಮಾನವರೂ ಸಮಾನರು. ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕೇ ಹೊರತು ಹುಟ್ಟಿನಿಂದಲ್ಲ. ಉನ್ನತ ಆದರ್ಶಗಳು ಮುಖ್ಯವಾಗಬೇಕು, ಶ್ರೇಷ್ಠ ಹುಟ್ಟಲ್ಲ. ಎಲ್ಲರ ಬಗ್ಗೆಯೂ ಮೈತ್ರಿ ಇರಬೇಕು. ಶತ್ರುವಿನ ಬಗ್ಗೆಯೂ ಆ ಭಾವನೆ ಇರಬೇಕು. ಎಲ್ಲರಿಗೂ ಕಲಿಯುವ ಹಕ್ಕಿದೆ. ಮನುಷ್ಯ ಜೀವಿಸಲು ಆಹಾರ ಎಷ್ಟು ಅಗತ್ಯವೋ, ವಿದ್ಯೆಯೂ ಅಷ್ಟೇ ಅಗತ್ಯ. ಶೀಲವಿಲ್ಲದ ಜ್ಞಾನ ಅಪಾಯಕಾರಿ"[50] ಬುದ್ಧ ಈ ವಿಚಾರಗಳು ಎಲ್ಲ ಕಾಲಕ್ಕೂ ಅನುಕರಣೀಯ. ಹೀಗಾಗಿ ಬುದ್ಧನನ್ನು ಶುದ್ಧಾಂಗವಾಗಿ ಸಮಾನತವಾದಿಯಾಗಿದ್ದನು ಎಂದು ಡಾ.ಬಿ.ಆರ್.ಅಂಬೇಡ್ಕರ್‌ರವರು ಅಭಿಪ್ರಾಯಪಡುತ್ತಾರೆ.

2.4 ವರ್ಗ ಜಾತಿಯ ವಿರುದ್ಧ ಪ್ರತಿಭಟನೆ :

ಪ್ರಾಚೀನ ಭಾರತದಲ್ಲಿ ಜಾತಿಭೇದದ ಮೂಲವನ್ನು "ಪುರುಷಸೂಕ್ತ"ದ ಋಗ್ವೇದದ 10-90-12 ರಲ್ಲಿ ಕಂಡು ಬರುತ್ತದೆ.

ಬ್ರಾಹ್ಮಣೋಸ್ಯ ಮುಖ ಮಾಸೀದ್ ಬಾಹೋ ರಾಜನ್ಯ : ಕೃತ : ।
ಊರೂ ತದಸ್ಯ ಯದ್‌ವೈಶ : ಪದ್ ಭ್ಯಾಂ ಶೂದ್ರೋ ಅಜಾಯತ್ ॥

ಈ ಹೇಳಿಕೆಯಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ವಿವರವಿದೆ. ವೇದಕ್ಕಿಂತಲೂ ಮೊದಲೇ ಭಾರತದಲ್ಲಿ ಜಾತಿ ಭೇದವು ಆಚರಣೆಯಲ್ಲಿತ್ತು. ತಾರತಮ್ಯ ಹಾಗೆಯೇ ಬೆಳೆದು ಬಂದಿತು. ಬುದ್ಧನ ಕಾಲದಲ್ಲಿ ಭಾರತದಲ್ಲಿ ಜಾತಿ ವ್ಯವಸ್ಥೆ ಆಳವಾಗಿ ಬೇರು ಬಿಟ್ಟಿತು. ಜಾತಿ-ಭೇದವು ಸಮಾಜದಲ್ಲಿ ಮೇಲು ಕೀಳು ಎಂಬ ತಾರತಮ್ಯ ಉಂಟು ಮಾಡಿತು. ಬ್ರಹ್ಮನ ಪಾದಗಳಿಂದ ಜನಿಸಿದವರು ಎಂದು ಹಣೆಪಟ್ಟಿ ಕಟ್ಟಿಕೊಂಡ ಶೂದ್ರರ ಸ್ಥಿತಿ ಶೋಚನೀಯವಾಗಿತ್ತು. ಅವರು ನಿಸ್ಸಾಯಕರಾಗಿದ್ದರು. ಹೀಗಾಗಿ ಬುದ್ಧ ಜಾತಿಭೇದವನ್ನು ಪ್ರಬಲವಾಗಿ ಖಂಡಿಸಿ, ಪ್ರತಿಭಟಿಸಿದನು.

ಬುದ್ಧನು ಜಾತಿ ಭೇದದ ವಿರುದ್ಧ ಖಂಡಿಸಿ ಉಪದೇಶಿಸಿದ ಸಂದರ್ಭವನ್ನು "ಅಗ್ಗಜ್ಞ ಸುತ್ತ"[51] ದಲ್ಲಿ ಕಾಣುತ್ತೇವೆ. ಬುದ್ಧನು ಮಿಗಾರ ಮಾತೆ (ವಿಶಾಖಾ)ಯು ಕಟ್ಟಿಸಿದ್ದ ಪ್ರಾಸಾದದಲ್ಲಿ ತಂಗಿರಲು ಭಿಕ್ಷುಗಳಾಗಬೇಕೆಂದು ವಿಚಾರಿಸಿದ್ದ. ಬ್ರಾಹ್ಮಣರಾದ ವಾಸೆಟ್ಟ ಮತ್ತು ಭಾರದ್ವಾಜರು ಅಲ್ಲಿಗೆ ಬರುತ್ತಾರೆ. ಆಗ ಬುದ್ಧನು ಅವರಿಗೆ "ಬ್ರಾಹ್ಮಣರಾದ ನೀವು ಬ್ರಾಹ್ಮಣ ಕುಲಕ್ಕೆ ಸೇರಿದ ನೀವು ಮನೆಯನ್ನು ತೊರೆದು ಅನಾಗರೀಕರಾಗಿ ಪಬ್ಬಜಿತರಾಗಲು ಕಾರಣವೇನು? ಬ್ರಾಹ್ಮಣರು ನಿಮ್ಮನ್ನು ಕುಚೋದ್ಯ ಮಾಡುವುದಿಲ್ಲವೇ, ಮೂದಲಿಸುವುದಿಲ್ಲವೇ? ಎಂದು ಪ್ರಶ್ನಿಸುತ್ತಾನೆ. ಆಗ ವಾಸೆಟ್ಟನು "ಭಂತೆ, ಬ್ರಾಹ್ಮಣರು ಹೀಗೆ ಹೇಳುತ್ತಾರೆ ಬ್ರಾಹ್ಮಣರೇ ಶ್ರೇಷ್ಠ ವರ್ಣಕ್ಕೆ ಸೇರಿದವರು, ಇತರರೆಲ್ಲ ಹೀನ ವರ್ಣದವರು, ಬ್ರಾಹ್ಮಣರು ಬೆಳ್ಳಗಿದ್ದಾರೆ, ಇತರರು ಕಪ್ಪು ಜನರು, ಬ್ರಾಹ್ಮಣರು ಮಾತ್ರ ಶುದ್ಧ ವಂಶದಲ್ಲಿ ಹುಟ್ಟಿದ್ದಾರೆ. ಇತರರು ಅಲ್ಲ. ಬ್ರಾಹ್ಮಣರು ಬ್ರಹ್ಮನ ಮುಖದಿಂದ ಹುಟ್ಟಿರುವುದಾಗಿ ಬ್ರಹ್ಮನಿಂದಲೇ ಹುಟ್ಟಿದವರಾಗಿ, ಬ್ರಹ್ಮನಿಂದಲೇ ಸೃಷ್ಟಿಸಿದವರಾಗಿ, ಬ್ರಹ್ಮನಿಗೆ ಉತ್ತರಾಧಿಕಾರಿಗಳಾಗಿದ್ದಾರೆ. ನೀನು ಶ್ರೇಷ್ಠವರ್ಣದವನಾಗಿದ್ದರೂ ಹೀನವರ್ಣದವರ ಜೊತೆಯಲ್ಲಿ ಸೇರಿಕೊಂಡು ತಲೆಯನ್ನು ಬೋಳಿಸಿಕೊಂಡು, ಸಮನಾಗಿ ಕಪ್ಪು ಬಣ್ಣದ ಶೂದ್ರರಂತೆ ಸೇವಕರಂತೆ ಆಗಿದ್ದೇಯೆ. ಇದು ನಿನಗೆ ಸಾಧುವಾದುದಲ್ಲ. ನಿನಗೆ ತಕ್ಕುದಾದುದಲ್ಲ. ಹೀಗೆ ಭಂತೆ, ಬ್ರಾಹ್ಮಣರು ಪರಿಹಾಸ್ಯ ಮಾಡುತ್ತಾರೆ. ಅವಹೇಳನ ಮಾಡುತ್ತಾರೆ. ಸಾಕಷ್ಟು ನಿಂದಿಸುತ್ತಾರೆ. ಕುಚೋದ್ಯ ಮಾಡುತ್ತಾರೆ"- ಎಂದು ಹೇಳಿದ.

ಆಗ ಬುದ್ಧನು, ವಾಸೆಟ್ಟ, ಬ್ರಾಹ್ಮಣರು ಹಾಗೆ ಹೇಳುವಾಗ ಹಿಂದಿನ ಸಂಗತಿಗಳನ್ನು ನೆನಪು ಮಾಡಿಕೊಳ್ಳಲಾರರು. ವಾಸೆಟ್ಟ, ಬ್ರಾಹ್ಮಣ ಪತ್ನಿಯರು ಅಂದರೆ ಬ್ರಾಹ್ಮಣಿಯರು ಗರ್ಭವತಿಯರಾಗಿ ಮಕ್ಕಳನ್ನು ಹೆರುವುದೂ, ಪೋಷಿಸುವುದೂ ಎಲ್ಲರಿಗೂ ಗೊತ್ತು. ಹೀಗಿದ್ದರೂ ಯೋನಿಜರಾದ ಬ್ರಾಹ್ಮಣರು " ಬ್ರಾಹ್ಮಣರೇ ಶ್ರೇಷ್ಠ ವರ್ಣದವರು, ಉಳಿದವರೆಲ್ಲರೂ ಹೀನ ವರ್ಣದವರು ಬ್ರಾಹ್ಮಣರು ಬಿಳಿಯ ಬಣ್ಣದವರು, ಉಳಿದವರು ಕಪ್ಪು ಬಣ್ಣದವರು, ಬ್ರಾಹ್ಮಣರು ಮಾತ್ರ ಶುದ್ಧವಂಶದಲ್ಲಿ ಹುಟ್ಟಿದ್ದಾರೆ. ಬೇರೆಯವರು ಅಲ್ಲ. ಬ್ರಾಹ್ಮಣರು ಬ್ರಹ್ಮನ ಮುಖದಿಂದ ಹುಟ್ಟಿದ ಬ್ರಹ್ಮನ ಮಕ್ಕಳು, ಅವರು ಮಾತ್ರ ಬ್ರಹ್ಮನಿಂದ ನಿರ್ಮಾಣರಾದವರು, ಬ್ರಹ್ಮನ ಉತ್ತರಾಧಿಕಾರಿಗಳು ಎಂದುಕೊಳ್ಳುತ್ತಾರೆ. ಬ್ರಹ್ಮರನ್ನೇ ಅವರು ತಪ್ಪು ತಪ್ಪಾಗಿ ವಿವರಿಸಿ ಸುಳ್ಳು ಹೇಳುತ್ತಾರೆ. ಪುಣ್ಯವಲ್ಲದ್ದನ್ನು ಮಾಡುತ್ತಾರೆ ಎಂದು ನುಡಿಯುತ್ತಾನೆ. ಮುಂದುವರಿದು ಬುದ್ಧ "ವಾಸೆಟ್ಟ, ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳಿವೆ. ಕ್ಷತ್ರಿಯರು ಆಗಾಗ ಪ್ರಾಣಿ ಹಿಂಸೆ ಮಾಡುತ್ತಾರೆ. ಕಳ್ಳತನ ಮಾಡುತ್ತಾರೆ. ವ್ಯಭಿಚಾರದಲ್ಲಿ ತೊಡಗುತ್ತಾರೆ. ಸುಳ್ಳು, ಚಾಡಿ, ನಿಂದೆಗಳಲ್ಲಿ ನಿರತರಾಗಿರುತ್ತಾರೆ. ಕಾಡು ಹರಟೆಯಲ್ಲಿ ಕಾಲ ವ್ಯರ್ಥ ಮಾಡುತ್ತಾರೆ. ದುರಾಸೆ, ಹಿಂಸಾ ಬುದ್ಧಿಗಳಿಂದ ಕೂಡಿ ಮಿಥ್ಯಾ ದೃಷ್ಟಿಯುಳ್ಳವರಾಗಿರುತ್ತಾರೆ. ಈ ರೀತಿಯಲ್ಲಿ ಅಕುಶಲವಾದ, ಅಕುಶಲವೆನಿಸಿಕೊಳ್ಳುವ, ವರ್ಜಿಸಬೇಕಾದುದು ಎನ್ನಿಸಿಕೊಳ್ಳುವ ಪೋಷಿಸಬಾರದ, ಪೋಷಿಸಬಾರದು, ಎನ್ನಿಸಿಕೊಳ್ಳುವ ಅಸಾಧ್ಯವಾದ, ಆರ್ಯರಿಗೆ ತಕ್ಕದಲ್ಲ ಎನ್ನಿಸಿಕೊಳ್ಳುವ ತಿಳಿದವರು ಖಂಡಿಸುವ ಗುಣಗಳು ಕೆಲವು ಕ್ಷತ್ರಿಯರಲ್ಲಿವೆ..... ಕೆಲವು ಬ್ರಾಹ್ಮಣರಲ್ಲಿವೆ..... ಕೆಲವು ವೈಶ್ಯರಲ್ಲಿವೆ...... ವಾಸೆಟ್ಟ, ಪ್ರಾಣಿ ಹಿಂಸೆ ಮಾಡುವ, ಕಳ್ಳತನ ಮಾಡುವ, ವ್ಯಭಿಚಾರದಲ್ಲಿ ತೊಡಗುವ, ಸುಳ್ಳು-ಚಾಡಿ ನಿಂದೆಗಳಲ್ಲಿ ನಿರತರಾಗುವ, ಕಾಡು ಹರಟೆಯಲ್ಲಿ ಕಾಲ ವ್ಯರ್ಥ ಮಾಡುವ ಶೂದ್ರರೂ ಇದ್ದಾರೆ. ಅವರು ದುರಾಸೆ ಹಿಂಸಾಬುದ್ಧಿ ಮಿಥ್ಯಾ ದೃಷ್ಟಿಗಳಿಂದ ಕೂಡಿರುತ್ತಾರೆ. ತಿಳಿದವರು ಖಂಡಿಸುವ ಗುಣಗಳು ಕೆಲವು ಶೂದ್ರರಲ್ಲಿವೆ.

"ಪ್ರಾಣ್ ಹಿಂಸೆಯನ್ನು ತೊರೆದು ಕಳ್ಳತನವನ್ನು ಬಿಟ್ಟು ವ್ಯಭಿಚಾರದಲ್ಲಿ ತೊಡಗದೆ ಸುಳ್ಳು, ಚಾಡಿ ಹೇಳುವುದನ್ನು ವರ್ಜಿಸಿ ಕಠಿಣವಾದ ಮಾತುಗಳನ್ನಾಗಲೀ, ಕೆಲಸಕ್ಕೆ ಬಾರದ ಮಾತುಗಳನ್ನಾಗಲೀ ಆಡದೆ ದುರಾಶೆ, ಹಿಂಸಾಬುದ್ಧಿಗಳನ್ನು ತೊರೆದು, ಸಮ್ಯಕ್‌ದೃಷ್ಟಿಯನ್ನು ಹೊಂದಿರುವ ಕೆಲವು ಕ್ಷತ್ರಿಯರಿದ್ದಾರೆ. ಕುಶಲವಾದ ಕುಶಲವೆನ್ನಿಸಿಕೊಂಡಿರುವ ವರ್ಜಿಸಬಾರದ್ದೆನ್ನಿಸಿಕೊಂಡಿರುವ ಪೋಷಿಸಬೇಕಾದದ್ದೆಂದು ಗಣಿಸಲಾದ ಆರ್ಯರಿಂದ ಮಾಡಬೇಕಾದ,ಆರ್ಯರು ಮಾಡಬೇಕಾದ್ದೆಂದು ಅಂಗೀಕೃತವಾಗಿರುವ ಶುದ್ಧವಾದ ಶುದ್ಧವೆನಿಸಿಕೊಂಡಿರುವವರು ಅನುಸರಿಸುವ ಧರ್ಮಗಳಲ್ಲಿ ನಿರತರಾದ ಕ್ಷತ್ರಿಯರಿದ್ದಾರೆ.... ಬ್ರಾಹ್ಮಣರಿದ್ದಾರೆ.... ವೈಶ್ಯರಿದ್ದಾರೆ.... ಪ್ರಾಣಿಹತ್ಯೆಯಲ್ಲಿ ತೊಡಗಿದ ಶೂದ್ರರಿದ್ದಾರೆ. ಕುಶಲವಾದ ಕೆಲಸವೆನಿಸಿಕೊಂಡಿರುವ ವರ್ಜಿಸಬಾರದ್ದೆನ್ನಿಸಿಕೊಂಡಿರುವ, ಪೋಷಿಸಬೇಕಾದ ಪೋಷಿಸಬೇಕಾದದ್ದೆಂದು ಗಣಿಸಲಾದ ಆರ್ಯರು ಮಾಡಬೇಕಾದ, ಆರ್ಯರು ಮಾಡಬೇಕಾದದ್ದು ಎನ್ನಿಸಿಕೊಂಡಿರುವ ಶುದ್ಧವಾದ ಶುದ್ಧವೆನ್ನಿಸಿಕೊಂಡಿರುವ ತಿಳಿದವರು ಅನುಸರಿಸುವ ಧರ್ಮದಲ್ಲಿ ನಿರತರಾದ ಶೂದ್ರರಿದ್ದಾರೆ.

"ವಾಸೆಟ್ಟ ಹೀಗೆ ಚಾತುರ್ವರ್ಣದವರಲ್ಲಿ ಎರಡೂ ಬಗೆಯ ಒಳ್ಳೆಯ ಮತ್ತು ಕೆಟ್ಟ ಧರ್ಮಗಳಲ್ಲಿ ನಿರತರಾಗಿರುವ ಜನರಿರುವಾಗ ತಿಳಿದವರು ಬ್ರಾಹ್ಮಣರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಬ್ರಾಹ್ಮಣನೇ ಶ್ರೇಷ್ಠ ವರ್ಣದವನು, ಬೇರೆಯವರು ಹೀನವರ್ಣದವರು, ಬ್ರಾಹ್ಮಣರು ಬಿಳಿಯ ಬಣ್ಣದವರು, ಬೇರೆಯವರು ಕಪ್ಪು ಜನರು. ಬ್ರಾಹ್ಮಣರು ಮಾತ್ರ ಶುದ್ಧವಂಶದಲ್ಲಿ ಹುಟ್ಟಿದ್ದಾರೆ. ಬೇರೆಯವರು ಅಲ್ಲ. ಬ್ರಾಹ್ಮಣರು ಬ್ರಹ್ಮನ ಪುತ್ರರು, ಅವನ ಮುಖದಲ್ಲಿ ಹುಟ್ಟಿದವರು ಬ್ರಹ್ಮನಿಂದಲೇ ಸೃಷ್ಟಿಯಾದವರು ಎಂಬ ಬ್ರಾಹ್ಮಣರ ಮಾತುಗಳನ್ನು ತಿಳಿದವರು ಒಪ್ಪುವುದಿಲ್ಲ. ಇದಕ್ಕೆ ಕಾರಣಗಳೇನು? ವಾಸೆಟ್ಟ ಈ ರೀತಿಯಲ್ಲಿ ಚತುರ್ವರ್ಣಗಳಲ್ಲಿ ಯಾವುದರಲ್ಲೇ ಹುಟ್ಟಿರಲಿ, ಭಿಕ್ಷುವಾದವನು, ಅರಹಂತನಾದವನು ಆಸವಗಳೆಲ್ಲವನ್ನೂ ಕಳೆದುಕೊಂಡಿರುವನು, ಮಾಡಬೇಕಾದುದೆಲ್ಲವನ್ನೂ ಮಾಡಿರುವನು, ತನ್ನ ಮೇಲಿರುವ ಭಾರವನ್ನು ನೀಗಿಸಿಕೊಂಡಿರುವವನು. ಶ್ರೇಷ್ಠವಾದುದನ್ನು ಸಾಧಿಸಿರುವವನು ಭವಗಳ ಸಂಕೋಲೆಯನ್ನು ಕತ್ತರಿಸಿ ಹಾಕಿರುವವನು ಸಮ್ಯಕ್ ಜ್ಞಾನದ ಫಲವಾಗಿ ಮುಕ್ತಿಯನ್ನು ಸಾಧಿಸಿರುವವನು ಅಗ್ರನೆಂದೆನಿಸಿಕೊಳ್ಳುತ್ತಾನೆ. ಅವನನ್ನು ಧರ್ಮವು ಹಾಗೆಯೇ ಪರಿಗಣಿಸುತ್ತದೆ. ಅಧರ್ಮವು ಅವನ ಶ್ರೇಷ್ಠತೆಗೆ ಕಾರಣವಲ್ಲ. ಧರ್ಮವೇ ಈ ಲೋಕದಲ್ಲಿ ಶ್ರೇಷ್ಠವಾದದು " ಎಂದು ಶುದ್ಧವಾದ ಧರ್ಮೋಪದೇಶವನ್ನು ಮಾಡಿ, ಇನ್ನೂ ಅನೇಕ ಉದಾಹರಣೆಗಳನ್ನು ನೀಡಿ ಬುದ್ಧನು ಆವರೆಗೆ ಬ್ರಾಹ್ಮಣರು ಇಟ್ಟುಕೊಂಡಿದ್ದ, ಆಚರಿಸುತ್ತ ಬಂದಿದ್ದ ಧರ್ಮದ ಪರಿಕಲ್ಪನೆಯ ಅರಿವನ್ನು ಮೂಡಿಸಿ, ವಾಸೆಟ್ಟ ಮತ್ತು ಭಾರದ್ವಜರಲ್ಲಿದ್ದ ಸಂಶಯವನ್ನು ಪರಿಹರಿಸಿದನು. ಬುದ್ಧನ ಮಾತುಗಳಿಂದ ಪ್ರಭಾವಿತರಾದ ವಾಸೆಟ್ಟ, ಭಾರದ್ವಾಜರು ಸಂತೋಷಪಟ್ಟು ಉಪಾಸಕರಾದರು.

ಬುದ್ಧನು ಎಂತಹ ವ್ಯಕ್ತಿಗೆ ಬ್ರಾಹ್ಮಣ ಎಂದು ಕರೆಯಬೇಕು, ಆತನಲ್ಲಿರಬೇಕಾದ ಯೋಗ್ಯತೆಗಳೇನು ಎಂಬುದನ್ನು ತುಂಬ ಮಾರ್ಮಿಕವಾಗಿ ತನ್ನ ಉಪದೇಶಗಳಲ್ಲಿ ಪ್ರತಿಪಾದಿಸಿದ್ದಾನೆ. ಬ್ರಾಹ್ಮಣನೆನಿಸಿಕೊಳ್ಳುವವ ಲಕ್ಷಣಗಳನ್ನು ಕುರಿತು ವಿವೇಚನೆಯನ್ನು "ಧರ್ಮಪದ" ದಲ್ಲಿಯ "ಬ್ರಾಹ್ಮಣ ವರ್ಗ" ಎಂಬ ಅಧ್ಯಾಯದಲ್ಲಿ ವಿವರಿಸಿದ್ದಾನೆ. ಪ್ರಪ್ರಥಮವಾಗಿ ಭಾರತದಲ್ಲಿ ಐತಿಹಾಸಿಕವಾಗಿ ಜನ್ಮ ಜಾತಿಗಳ ಪಾರಂಪರಿಕ ನಿಲುವನ್ನು ಕಠೋರವಾಗಿ ವಿರೋಧಿಸಿದ ಹಾಗೂ ಚಾರಿತ್ರ್ಯ, ಕರ್ಮ ಮತ್ತು ಗುಣಕ್ಕೆ, ಶೀಲಕ್ಕೆ ಮಹತ್ವವನ್ನು ನೀಡಿದ ಕೀರ್ತಿ ಬುದ್ಧನಿಗೆ ಸಲ್ಲುತ್ತದೆ.

"ಯಾರು ಧ್ಯಾನಿಯೋ, ಕೊಳೆಯಿಲ್ಲದವನೋ ಮತ್ತು
ನೆಲೆಯಾಗಿರುವನೋ,ಯಾರ ಕಾರ್ಯಗಳು ಮುಗಿದು
ಮತ್ತೆ ಅವನು ಆಸನಗಳಿಂದ ಮುಕ್ತನೋ,
ಉತ್ತಮೋತ್ತಮವಾದ ಗುರಿಯನ್ನು ಸಾಧಿಸಿರುವನೋ
ಅವನನ್ನು ಬ್ರಾಹ್ಮಣ (ಪರಿಶುದ್ಧ ಮಾನವ)ಎಂದು ಕರೆಯುತ್ತೇನೆ " [52]

"ಬ್ರಾಹ್ಮಣ ಎನ್ನುವುದು ಜಾತಿ ಸೂಚಕವಲ್ಲ, ಶ್ರೇಷ್ಠ ಎಂಬ ಮನೋಭಾವನೆಯನ್ನು ಹೊಂದಲು, ಮನುಷ್ಯ ಶ್ರೇಷ್ಠನೆನಿಸಿಕೊಳ್ಳಲು ಎಂತಹ ಅರ್ಹತೆಗಳು ಮುಖ್ಯ ಎಂಬುದನ್ನು ಬುದ್ಧ ತನ್ನ ಈ ಮಾತುಗಳಲ್ಲಿ ತಿಳಿಸಿದ್ದಾನೆ. ಸರ್ವ ಕಾಮಗಳನ್ನು, ಪಾಪಗಳನ್ನು, ಅಹಂಕಾರ, ಮಮಕಾರಗಳನ್ನು ತ್ಯಜಿಸಿದವನು, ಶಾಂತ ಮನಸ್ಸನ್ನು ಹೊಂದಿದವನು, ನಿಷ್ಕಲ್ಮಷನು, ಸಚ್ಚಾರಿತ್ರ್ಯನೂ, ಸದ್ಧರ್ಮಾವಲಂಬಿಯೂ ಆದವನು ನಿಜವಾದ ಬ್ರಾಹ್ಮಣನೆನಿಸಿಕೊಳ್ಳುತ್ತಾನೆ ಎಂಬುದು ಬುದ್ಧನ ಅಭಿಮತ:[53] ಜಾತಿಯಾಧಾರಿತ ಮೇಲು-ಕೀಳು ತಾರತಮ್ಯಗಳನ್ನು ನಿರ್ಧರಿಸುವುದು ಬುದ್ಧನಿಗೆ ಸರಿ ಕಾಣಿಸಲಿಲ್ಲ. ಆತನ ದೃಷ್ಟಿಯಲ್ಲಿ

"ಬಾಹಿತಪಾಪೋ ತಿ ಬ್ರಾಹ್ಮಣೋ,
ಸಮಚರಿಯಾ ಸಮಣೋ ತಿ ವುಚ್ಚತಿ,
ಪಬ್ಬಾಜಯ ಮತ್ತನೋ ಮಲಂ ತಸ್ಮಾ ಪಬ್ಬಜಿತೋತಿ ವುಚ್ಚತಿ[54]

"ಪಾಪಗಳನ್ನು ಕಳೆದುಕೊಂಡಿರುವುದರಿಂದಾಗಿ ಅವನನ್ನು ಬ್ರಾಹ್ಮಣ (ಪರಿಶುದ್ಧ ಮಾನವ) ಎಂದು ಕರೆಯುತ್ತಾರೆ. ಅವನು ಶೀಲ ಸಂಪನ್ನನಾಗಿರುವುದರಿಂದಾಗಿ ಅವನನ್ನು ಸಮಣ ಎಂದು ಕರೆಯುತ್ತಾರೆ. ಅವನು ತನ್ನಲ್ಲಿರುವ ಮಲಗಳನ್ನು ನೀಗಿಸಿಕೊಂಡಿರುವುದರಿಂದಾಗಿ ಅವನನ್ನು ಪಬ್ಬಜೀಕ ಎಂದು ಕರೆಯುತ್ತಾರೆ. ವ್ಯಕ್ತಿಯ ಕಾಯಾ-ವಾಚಾ-ಮನಸಾ ಬೇರೆಯವರಿಗೆ ಕೆಟ್ಟದ್ದನ್ನು ಬಗೆಯದವನು ಅಸತ್ಯ, ಅಧರ್ಮಗಳನ್ನು ತ್ಯಜಿಸಿದವನು ಬ್ರಾಹ್ಮಣನೆನಿಸಿಕೊಳ್ಳುವನೆ ವಿನಃ ವರ್ಣ, ಜಾತಿ, ಗೋತ್ರ, ಜಟೆಗಳಿಂದ ಬ್ರಾಹ್ಮಣರಾಗಲು ಸಾಧ್ಯವಿಲ್ಲ. ರಾಗ-ದ್ವೇಷ ರಹಿತನಾಗಿ, ಕಪಟ ಮೋಸ ಹಿಂಸೆ ತ್ಯಜಿಸಿದವನಾಗಿ, ಸ್ತುತಿ-ನಿಂದೆಗಳಿಗೆ ಹೆದರದೆ, ಆಶೆಗಳಿಗೆ ದಾಸನಾಗದೇ ಶ್ರೇಷ್ಠನಾಗಿ, ಪರಿಶುದ್ಧನಾಗಿ, ಪೂರ್ಣ ಜ್ಞಾನಿಯಾದವನೇ ಬ್ರಾಹ್ಮಣ ಎಂದು ಕರೆಯಬೇಕೆಂದು ಬುದ್ಧ ಉಪದೇಶಿಸಿದ್ದಾನೆ.

ಶ್ರೇಷ್ಠನೆನಿಸಿಕೊಳ್ಳಲು ವ್ಯಕ್ತಿಯ ಹುಟ್ಟಿದ ಜಾತಿ ಮುಖ್ಯವಲ್ಲ, ಆತನ ನಡತೆ, ಯೋಗ್ಯತೆ ಮುಖ್ಯ ಎನ್ನುವುದನ್ನು ಬುದ್ಧ ಧಮ್ಮ ಪದದ ಬ್ರಾಹ್ಮಣ ವರ್ಗದಲ್ಲಿ ವಿವರಿಸಿರುವುದನ್ನು ಅರಿಯಬಹುದಾಗಿದೆ. ಯಾವುದೇ ಯೋಗ್ಯ ವ್ಯಕ್ತಿಯನ್ನು ಆತನ ಜಾತಿ ಕೀಳಾಗಿಸಲಾರದು. ಆತನ ಯೋಗ್ಯತೆಯನ್ನು ಅಳೆಯುವಾಗ ಆತನಲ್ಲಿಯ ಪಾಂಡಿತ್ಯವನ್ನು ಜಾಣ್ಮೆಯನ್ನು ನೋಡಬೇಕೇ ಹೊರತು ಆತನ ಜಾತಿಯನ್ನಲ್ಲ.

" ಜಾತಿಯನ್ನು ಕೇಳಬೇಡ, ನಡೆಯನ್ನು ಕೇಳು,
ಕಟ್ಟಿಗೆಯಿಂದ ಬೆಂಕಿ ಹುಟ್ಟುವುದಲ್ಲದೇ!
ನೀಚ ಕುಲದಲ್ಲಿ ಹುಟ್ಟಿದವನಾದರೂ ದೃತಿಮಂತನಾದ ಮುನಿಯು
ಲಜ್ಜೆಯಿಂದ ತಡೆಯಲ್ಪಟ್ಟು, ಸತ್ಯದಿಂತ - ದಾಂತನಾಗಿ,
ದಮೆಯಿಂದ ಕೂಡಿ, ವೇದಾಂತವನ್ನು ತಿಳಿದು,
ಬ್ರಹ್ಮಚರ್ಯವನ್ನು ಪೂರೈಸಿ, ಸದ್ವಂಶದಲ್ಲಿ ಹುಟ್ಟಿದವನಾಗುವನು " [55]

ಬುದ್ಧ ಹೇಳುವಂತೆ ಮನುಷ್ಯ ಯಾವ ಜಾತಿಯಲ್ಲಿ ಹುಟ್ಟಿದರೂ ತನ್ನ ಪ್ರಯತ್ನದಿಂದ,ಸನ್ನಡತೆಯಿಂದ, ಎಂತಹ ಶ್ರೇಷ್ಠ ಮಟ್ಟಕ್ಕೂ ಏರಲು ಸಾಧ್ಯ. ಮನುಷ್ಯನ ಸನ್ನಡತೆಯನ್ನು ಗುರುತಿಸುವುದನ್ನು ಮೊದಲು ಕಲಿಯಬೇಕೆಂದು ಹೇಳುತ್ತಾನೆ. "ಅದರಂತೆಯೇ ಕ್ಷಮೆ - ನಮ್ರತೆ ಮೊದಲಾದ ಗುಣಗಳು ಯಾರಲ್ಲಿ ಚೆನ್ನಾಗಿ ನಿಂತಿವೆಯೋ ಆ ಆರ್ಯ ವ್ಯಕ್ತಿಯವನನ್ನು ಮೇಧಾವಿಗಳು ಅವನು ಹೀನ ಜಾತಿಯವನಾದರೂ ಪೂಜಿಸುವವರು ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ. ಜಾತಿಯಿಂದ ಅಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದ ಬ್ರಾಹ್ಮಣನಾಗುವನು, ಕರ್ಮದಿಂದ ಅಬ್ರಾಹ್ಮಣನಾಗುವನು.[56]

ಬುದ್ಧನಿಗೆ ಕ್ಷಮೆ, ನಮ್ರತೆ, ಶೀಲ, ಚಾರಿತ್ರ ತುಂಬ ಮುಖ್ಯವೆನಿಸಿದ್ದವು. ಹೀಗಾಗಿ ಬುದ್ಧಿವಂತ, ಪರಿಪೂರ್ಣ ಪ್ರಜ್ಞಾವಂತ ಆದವನು ಒಳ್ಳೆಯ ಅರ್ಹ ವ್ಯಕ್ತಿಯಲ್ಲಿ ಕುಲ ಜಾತಿಗಳನ್ನು ಹುಡುಕುವುದಿಲ್ಲವೆಂದಿದ್ದಾನೆ. ಮನುಷ್ಯ ಮಾಡುವ ಕೆಲಸಗಳಿಂದ ಅವನ ವ್ಯಕ್ತಿತ್ವ ನಿರ್ಧರಿತವಾಗುತ್ತದೆ. ಹುಟ್ಟಿನಿಂದ, ಜಾತಿಯಿಂದ ಅಲ್ಲ ಎಂದು ಹೇಳುತ್ತ ನಿಸರ್ಗದ ಮುಂದೆ ಮಾನವರೆಲ್ಲರೂ ಸಮಾನರು ಎಂದು ಹೇಳಿದ ಮೊದಲಿಗ ಬುದ್ಧ. ಯಾರೂ ಹುಟ್ಟಿನಿಂದಲೇ ಶ್ರೇಷ್ಠರಾಗಲಿ, ಕನಿಷ್ಠರಾಗಲಿ ಇರುವುದಿಲ್ಲ. ಆಕಸ್ಮಿಕವಾಗಿ ಹುಟ್ಟಿದ ಮಾತ್ರ ಆ ವೃತ್ತಿಗೆ ಅಂಟಿಕೊಳ್ಳಬೇಕಾಗಿಲ್ಲ. ತನಗೆ ಸರಿ ಕಂಡ ವೃತ್ತಿ ಅನುಸರಿಸಬಹುದು. ವ್ಯಕ್ತಿಯ ಜಾತಿಗಿಂತ ಯೋಗ್ಯತೆ ಮುಖ್ಯ ಎಂಬುದನ್ನು ಬುದ್ಧ ಬೋಧಿಸಿದ.

ಬುದ್ಧನು ಮೊದಲು ಭಾರತದಲ್ಲಿ, ಅಸ್ಪೃಶ್ಯತೆಯನ್ನು, ಜಾತಿ ಭೇದವನ್ನು, ಲಿಂಗ ಭೇದವನ್ನು, ವರ್ಣ ವ್ಯವಸ್ಥೆಯನ್ನು ಧಿಕ್ಕರಿಸಿದನು. "ನ ಜಚ್ಚ ವಾಸಲೋ ಹೋತಿ, ನ ಜಚ್ಚ ಹೋತಿ ಬ್ರಾಹ್ಮಣೋ । ಕಮ್ಮೇನ ವಾಸಲೋ ಹೋತಿ, ಕಮ್ಮೇನ ಹೋತಿ, ಬ್ರಾಹ್ಮಣೋ" ಎಂದು ಬೋಧಿಸಿದನು. ಅಂದರೆ ಹುಟ್ಟಿನಿಂದ ಯಾರೂ ಶ್ರೇಷ್ಠರಾಗುವುದಿಲ್ಲ. ಅಥವಾ ಯಾರೂ ಅಧಮರಾಗುವುದಿಲ್ಲ. ಅವರವರ ಕರ್ಮ, ಗುಣ, ಸ್ವಭಾವಗಳಿಂದ ಕೆಲವರು ಶ್ರೇಷ್ಠರಾಗುತ್ತಾರೆ. ಕೆಲವರು ಅಧಮರಾಗುತ್ತಾರೆ ಎಂದನು. ಯಾವ ಯೋಗ್ಯತೆಯಲ್ಲಿದಿದ್ದರೂ ಒಬ್ಬನನ್ನು ಬ್ರಾಹ್ಮಣನೆಂದು ಮೇಲು ಜಾತಿಯವನೆಂದು ಗೌರವಿಸುವುದು, ಎಲ್ಲಾ ಯೋಗ್ಯತೆಗಳಿದ್ದರೂ ಒಬ್ಬನನ್ನು ಅಸ್ಪೃಶ್ಯನೆಂದೂ ಕೀಳು ಜಾತಿಯವನೆಂದೂ ಅಪಮಾನ ಮಾಡುವುದು, ಶುದ್ಧ ತಪ್ಪು ಎಂದರ್ಥ. ಯಾರು ಬೇಕಾದರೂ ಅವನ ಧರ್ಮವನ್ನು ಸ್ವೀಕರಿಸಿ, ಪುನೀತರಾಗಬಹುದಿತ್ತು. ಧರ್ಮವನ್ನು ಸ್ವೀಕರಿಸಿದ ಜೇಷ್ಠತೆಯ ಆಧಾರದ ಮೇಲೆ ಭಿಕ್ಷುಗಳು ಗೌರವಕ್ಕೆ ಅರ್ಹರಾಗುತ್ತಿದ್ದರು.[57] ಸಮುದ್ರವನ್ನು ಸೇರಿದ ನದಿ ಹೇಗೆ ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು, ಸಮುದ್ರವೇ ಆಗುತ್ತದೋ, ಅದೇ ರೀತಿ ಬುದ್ಧನ ಧರ್ಮವನ್ನು ಸ್ವೀಕರಿಸಿದವರು ತಮ್ಮ ಪೂರ್ವದ ಕುಲ, ಜಾತಿಗಳನ್ನು, ವರ್ಗಗಳನ್ನು ಕಳೆದುಕೊಂಡು ಸಮಾನ ಮಾನವರಾಗುತ್ತಿದ್ದರು. ಸರ್ವರನ್ನು ಸಮತಾಭಾವದಿಂದ ಕಾಣಬೇಕು ಎಂಬುದು ಬುದ್ಧತತ್ವ.

2.5 ಯಜ್ಞ-ಯಾಗ ವೇದಗಳ ವಿರುದ್ಧ ಪ್ರತಿಭಟನೆ :

ಬುದ್ಧನ ಕಾಲಕ್ಕೆ ಮೊದಲು ವರ್ಣಾಶ್ರಮ ಧರ್ಮ ಪಾಲನೆಯೇ ಮೋಕ್ಷ ಸಾಧನ ಕ್ರಮವೆಂಬ ನಂಬಿಕೆ ಇತ್ತು. ಯೋಗ ಮಾರ್ಗಾವಲಂಬನೆ ಮಾಡಿ ರಾಜಯೋಗ, ಹಠಯೋಗಕ್ಕೆ ಪ್ರಾಧಾನ್ಯತೆ ಕೊಟ್ಟ ಕಾಲ. ಅದನ್ನುಳಿದು ಯಾವ ಮಾರ್ಗದಿಂದಲೂ ಸಾಕ್ಷಾತ್ಕಾರವಾಗದೆಂದು ಜನರು ನಂಬಿದ್ದರು. ಆ ವಿಷಯದಲ್ಲಿ ಬುದ್ಧನ ಶಿಷ್ಯರಿಗೆ ಸಂಶಯ ಮೂಡಿದಾಗ ಬುದ್ಧ ತಮ್ಮ ವಿಚಾರವನ್ನು ಅವರ ಮುಂದಿಟ್ಟ.

"ಕೇವಲ ಸಂಸಾರತ್ಯಾಗಿಯಾಗಿ ಅರಣ್ಯ ಸೇರುವುದರಿಂದ ಮೋಕ್ಷವಿಲ್ಲ. ಅಥವಾ ಪ್ರಾಪಂಚಿಕ ಭೋಗದಲ್ಲಿ ಮಗ್ನನಾಗಿರುವದರಿಂದಲೂ ಮೋಕ್ಷವಿಲ್ಲ. ಭೋಗ ಮಗ್ನನಾಗಿರಲೂಬಾರದು. ಅಥವಾ ಇಂದ್ರೀಯಗಳನ್ನು ದಂಡಿಸಿದರೂ ಫಲವಿಲ್ಲ. ಅರಿದ ಚಿಂದಿಯುಟ್ಟು ಕೇಶವಪನ ಮಾಡಿಸಿಕೊಂಡು ಅಸಹ್ಯ ವರ್ತನೆಯ ಜೀವನ ನಡೆಸಬೇಕಾಗಿಲ್ಲ. ಕೇವಲ ಅಧ್ಯಯನ ಯಜ್ಞ ಯಾಗಾದಿ ಮಾರ್ಗಾನುಸರಣೆ ಇವುಗಳಿಂದ ಮಾನವತೆಯನ್ನು ಸಾಧಿಸಲಾಗುವುದಿಲ್ಲ. ಆದುದರಿಂದ ಈ ಎರಡು ಅತಿಕ್ರಮಗಳನ್ನು ಬಿಟ್ಟು ಮಧ್ಯಮ ಮಾರ್ಗಾವಲಂಬನದಿಂದಲೇ ಸಾಕ್ಷಾತ್ಕಾರ ಸಾಧ್ಯ ಎಂದು ಮಧ್ಯಮ ಮಾರ್ಗವನ್ನು ಬೋಧಿಸಿದರು. ಮಾನವನ ಬದುಕಿನ ಅವಶ್ಯಕತೆಗಳನ್ನು ಪೂರೈಸುವುದು ಅವಹೇಳನವಲ್ಲ. ಶರೀರದಾರೋಗ್ಯ ರಕ್ಷಣೆ ಮಾಡಿಕೊಳ್ಳುವುದು ಕರ್ತವ್ಯ. ಆದ್ದರಿಂದ ಉತ್ತಮ ಧೀಶಕ್ತಿ ಬೆಳೆದು ಜ್ಞಾನ ಪ್ರಾಪ್ತಿಯಾಗುತ್ತದೆ. ಪ್ರಾಪಂಚಿಕ ಸುಖದ ಅಥವಾ ಸ್ವರ್ಗ ಸುಖದ ಪ್ರಾಪ್ತಿಗಾಗಿ ಯಾವುದೇ ಅತಿ ಮಾರ್ಗವನ್ನು ಅನುಸರಿಸುವುದು ಯುಕ್ತವಲ್ಲ. ತಾವರೆಯು ನೀರಿನಲ್ಲಿದ್ದರೂ ನೀರಿಗೆ ಅಂಟಿಕೊಂಡಿರುವುದಿಲ್ಲ. ಇದೇ ತಾನು ಬೋಧಿಸುವ ಮಧ್ಯಮ ಮಾರ್ಗ[58] ಎಂದು ಬುದ್ಧ ಮಹಾ ವಗ್ಗದಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿ ಬುದ್ಧ ಯಜ್ಞ- ಯಾಗಾದಿ ನಿರುಪಯುಕ್ತತೆಯನ್ನು ಸಾರಿ ಖಂಡಿಸಿದ್ದಾರೆ.

ವೈದಿಕ ಧರ್ಮ ದರ್ಶನದ ಪ್ರತಿಭಟನಾ ರೂಪದಲ್ಲಿ ಬೌದ್ಧ ಧರ್ಮ ಉದಯವಾಯಿತು. ಇದರ ಪರಿಣಾಮವೆಂದರೆ ವೈದಿಕ ಧರ್ಮದಲ್ಲಿ ಕಂಡು ಬರುವ ಯಜ್ಞ -ಯಾಗಾದಿ ಕ್ರಿಯೆಗಳಿಗೆ ಇಲ್ಲಿ ಸ್ಥಾನವಿಲ್ಲ. ಪ್ರಾಣಿ ಹಿಂಸಾ ರೂಪದ ಯಜ್ಞಗಳ ಸ್ಥಾನದಲ್ಲಿ ಬೌದ್ಧ ಧರ್ಮದಲ್ಲಿ ಅಹಿಂಸೆ ಪರಮ ಧರ್ಮವಾಯಿತು. " ಸಾಮಾನ್ಯ ತಾತ್ವಿಕ ಹಾಗೂ ಧಾರ್ಮಿಕ ಸಾಮರ್ಥ್ಯ ಇಲ್ಲಿಯವರೆಗೆ ಏನನ್ನು ಸಾಧಿಸಿದೆ ಮತ್ತು ಏನನ್ನು ಸಾಧಿಸಲು ಹೆಣಗುತ್ತಿದೆ - ಅದೆಲ್ಲವನ್ನೂ ಅನೇಕ ಅಂಶಗಳಲ್ಲಿ ಬೌದ್ಧ ಧರ್ಮ ಬಹು ಹಿಂದೆಯೇ ಸಾಧಿಸಿದೆ " . ಎಂಬ ವಿದ್ವಾಂಸರ ಮಾತು ಬುದ್ಧನ ಹಿರಿಮೆಯನ್ನು ಸಾರಿ ಹೇಳುತ್ತದೆ. ಹುರುಳಿಲ್ಲದ ಕರ್ಮಸಿದ್ಧಾಂತ ಮತ್ತು ಅದರ ಹೆಸರಿನಲ್ಲಿ ನಡೆಯುವ ಸಾಂಪ್ರದಾಯಿಕ ಆಚರಣೆಗಳನ್ನು ಬುದ್ಧ ಮೊದಲ ಬಾರಿಗೆ ಖಂಡಿಸಿದನು. ಅಂದಿನ ಸಾಮಾಜಿಕ ಅವ್ಯವಸ್ಥೆ ಸರಿಪಡಿಸಲು ಯತ್ನಿಸಿದ. ಯಾವುದೇ ಸತ್ಯ ಯಾವುದೇ ಮಿಥ್ಯ ಎಂಬುದನ್ನು ಕುರಿತು ತಿಳಿಸಿ ಜನತೆಯಲ್ಲಿ ವೈಚಾರಿಕತೆಯನ್ನು ಬೆಳೆಸಿದ.

"ಬ್ರಾಹ್ಮಣರಲ್ಲಿ ಪ್ರತಿಪಾದಿತವಾದ ಎರಡನೆಯೂ ಸಹ ಅಷ್ಟೇ ಅಸಮ್ಮತವೆನಿಸಿತು. ಯಜ್ಞದಿಂದ ಒಳಿತಾಗುತ್ತದೆ ಎಂಬ ಮಾತನ್ನು ಬುದ್ಧನು ಒಪ್ಪಿದ್ದನು. ಆದರೆ ಯಜ್ಞವನ್ನು ನಿಜವಾದ ಯಜ್ಞ ಯಾವುದು ಮತ್ತು ಮೋಸದ ಅಥವಾ ಹೇರಿಕೆಯ ಯಜ್ಞ ಯಾವುದು ಎಂಬುದರ ಅರಿವಿರಬೇಕು ಎಂದು ಅವನು ಬಯಸಿದನು".

ಯಜ್ಞ ಎಂದರೆ ತ್ಯಾಗ ಮತ್ತು ತ್ಯಾಗ ಮಾಡುವುದು ನಿಜವಾದ ಯಜ್ಞ. ಕೇವಲ ತನ್ನ ಸ್ವಹಿತಕ್ಕಾಗಿ ಪ್ರಾಣಿ ವಧೆಯನ್ನು ಮಾಡಿ ದೇವರನ್ನು ಮೆಚ್ಚಿಸುವ ಯಜ್ಞವನ್ನು ಬುದ್ಧನು ಮೋಸದ ಯಜ್ಞ ಎಂದು ಕರೆದನು. ಬ್ರಾಹ್ಮಣರು ನಡೆಸುತ್ತಿದ್ದ ಬಹುಪಾಲು ಯಜ್ಞಗಳಲ್ಲಿ ದೇವರ ಒಲುಮೆಗಾಗಿ ಪ್ರಾಣಿವಧೆ ನಡೆಯುತ್ತಿದ್ದಿತು. ಅಂತಹ ಯಜ್ಞಗಳನ್ನು ಮೋಸದ ಯಜ್ಞಗಳು ಎಂದು ಕರೆದು ಅವುಗಳನ್ನು ಬುದ್ಧನು ನಿರಾಕರಿಸಿದನು. ಆತ್ಮೋನ್ನತಿಗಾಗಿ ಅಥವಾ ಮೋಕ್ಷ ಸಾಧನೆಗಾಗಿ ಈ ಯಜ್ಞಗಳನ್ನು ಮಾಡುವುದನ್ನು

ಬುದ್ಧನು ಒಪ್ಪಲಿಲ್ಲ.[59] ಯಜ್ಞಯಾಗಗಳಿಂದ ಜನಸಾಮಾನ್ಯರೂ ನೊಂದಿದ್ದರು. ಯಜ್ಞದ ನಿಷ್ಪ್ರಯೋಜಕತೆ ಹಾಗೂ ಅವುಗಳ ದುಂದುವೆಚ್ಚ, ಹಿಂಸೆ, ಇವುಗಳೆಲ್ಲವೂ ಬುದ್ಧನಿಂದ ಖಂಡಿಸಲ್ಪಟ್ಟವು. ಅವುಗಳ ಬದಲು ಜ್ಞಾನ ಯಜ್ಞಕ್ಕೆ ಬುದ್ಧ ಪ್ರಾಶಸ್ತ್ಯ ಕೊಟ್ಟನು. ಅಹಿಂಸೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟನು. ಬುದ್ಧ ದಯಾಮೂರ್ತಿಯಾಗಿದ್ದನು. ಅಹಿಂಸಾ ತತ್ವ, ಬುದ್ಧ ತತ್ವದ ಬುನಾದಿ. ಪ್ರತಿ ಜೀವಿಯ ಜೀವ ಅಮುಖ್ಯ. ಮನುಷ್ಯ ಇನ್ನೊಂದು ಜೀವಿಯನ್ನು ಹಿಂಸೆಗೆ ಗುರಿ ಮಾಡುವುದು ಅಧರ್ಮ. ಒಂದು ಜೀವಿಗೆ ಜೀವ ಕೊಡುವ ಶಕ್ತಿ ಮನುಷ್ಯನಿಗಿಲ್ಲ. ಹೀಗಾಗಿ ಜೀವ ತೆಗೆಯುವ ಹಕ್ಕೂ ಇಲ್ಲವೆಂದು ಬುದ್ಧ ಪ್ರತಿಪಾದಿಸಿ ಅಹಿಂಸಾ ತತ್ವ ಬೋಧಿಸಿದ. ಹಾಗೆಯೇ ಯಜ್ಞ ಯಾಗದಿಂದಾಗು ಪ್ರಾಣಿ ಹಿಂಸೆಯನ್ನು ಖಂಡಿಸಿದ. ಬುದ್ಧನು ಬೋಧಿಸಿರುವಂತೆ :

" ಸಬ್ಬೇ ತಸಂತಿ ದಂಡಸ್ಸು, ಸಬ್ಬೇಸಂ ಜೀವತಂ ಪಿಯಂ
ಅತ್ತಾನಂ ಉಪಮಂ ಕತ್ವಾ, ನ ಹ ನೆಯ್ಯನ ಘಾತಯೇ"[60]

ಎಂದು ಹೇಳುವಲ್ಲಿ " ಹಿಂಸೆಗೆ ಎಲ್ಲರೂ ನಡುಗುವರು, ಜೀವದಿಂದಿರಲು ಎಲ್ಲರೂ ಬಯಸುವರು, ತನ್ನ ಹಾಗೆಯೇ ಇತರರು ಎಂದು ಯೋಚಿಸಿ, ಯಾರೂ ಇತರರನ್ನು ಕೊಲ್ಲಬಾರದು ಮತ್ತು ಕೊಲ್ಲಿಸಬಾರದು ಎಂದು ಬುದ್ಧ ಹೇಳಿದ್ದಾನೆ.

"ಯಜ್ಞದಲ್ಲಿ ನಿರತನಾದ ಒಬ್ಬ ರಾಜನಿಗೆ ಬುದ್ಧದೇವ ಹೀಗೆ ಹೇಳಿದ್ದುಂಟು: ಒಂದು ಕುರಿಯನ್ನು ಬಲಿ ಕೊಡುವುದರಿಂದ ನೀವು ಸ್ವರ್ಗಕ್ಕೆ ಹೋಗುವುದಾದರೆ, ನರಬಲಿಯು ಇನ್ನೂ ಹೆಚ್ಚು ಸಹಾಯಕವಾಗಬಲ್ಲದು, ಅಲ್ಲವೇ? ಆದ್ದರಿಂದ ನನ್ನನ್ನೇ ಬಲಿ ಕೊಡಿರಿ. ಆಗ ಆ ರಾಜ ದಿಗ್ಭ್ರಾಂತನಾಗಿ, ಆತನಿಗೆ ಶರಣು ಹೋದ. ಬೌದ್ಧ ಧರ್ಮ ಸ್ವೀಕರಿಸಿದ. ಪ್ರಾಣಿ ಹಿಂಸೆ ನಿಲ್ಲುವುದಕ್ಕಾಗಿ, ಬುದ್ಧನ ತ್ಯಾಗದ ನಿದರ್ಶನ. ಅವನೊಬ್ಬ ದಯಾಮೂರ್ತಿ. ಅದ್ಭುತ ಮಾನವತಾವಾದಿ"[61] ಬುದ್ಧ ಅಹಿಂಸೆ ಬೆಳೆಸಲು ಎಂತಹ ದೃಢ ಸಂಕಲ್ಪವನ್ನು ಮಾಡಿದ್ದನು ಎನ್ನುವುದಕ್ಕೆ ಈ ಘಟನೆಯೇ ಸಾಕ್ಷಿ.

"ಬ್ರಾಹ್ಮಣರ ಮೊದಲನೇ ನಿಬಂಧನೆಯೇನೆಂದರೆ, ವೇದಗಳು ಪವಿತ್ರ ಗ್ರಂಥಗಳು ಮಾತ್ರವಲ್ಲದೇ, ಅವು ನಿರ್ದೋಷವಾಗಿದ್ದು, ಅವುಗಳಲ್ಲಿ ಪ್ರತಿಪಾದಿತವಾಗಿರುವ ಸಿದ್ಧಾಂತವನ್ನು ಯಾರೂ ಪ್ರತಿಭಟಿಸಬಾರದು.[62] "ಈ ಬ್ರಾಹ್ಮಣರಲ್ಲಿ ಪ್ರತಿಪಾದಿಸಿದ ಮೊದಲನೆಯ ನಿಬಂಧನೆಯನ್ನು ಬುದ್ಧನು ಬಹಳ ಪ್ರಬಲವಾಗಿ ವಿರೋಧಿಸಿದನು. ಅಲ್ಲಿ ಹೇಳಿದಂತೆ ವೇದಗಳು ನಿರ್ದೋಷಗಳಾದ್ದರಿಂದ ಅವುಗಳ ಸತ್ಯತೆಯನ್ನು ಪ್ರಶ್ನಿಸಬಾರದು ಎಂಬ ಅನುಶಾಸನವನ್ನು ಬುದ್ಧನು ನಿರಾಕರಿಸಿದನು. ಅವನ ಪ್ರಕಾರ ಯಾವ ಒಂದು ಸತ್ಯವೂ ಪೂರ್ತಿ ದೋಷರಹಿತವಾಗಿದ್ದು, ಅದೇ ಅಂತಿಮ ಸತ್ಯ ಎಂದೆನಿಸಲಾರದು. ಮನುಷ್ಯನು ನಿಜವಾದ ಸತ್ಯ ಯಾವುದು ಎಂಬುದನ್ನು ತಿಳಿಯಲು ಸದಾ ಪ್ರಯತ್ನಿಸಬೇಕು. ಮನುಷ್ಯನ ಬದುಕಿನಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಬಹಳ ಮಹತ್ವವಿದೆ. ವಿಚಾರ ಸ್ವಾತಂತ್ರ್ಯವು ಸತ್ಯಾನ್ವೇಷಣೆಯ ನಿಜವಾದ ಸಾಧನ ಎಂಬ ಅರಿವು ಮನುಷ್ಯನಿಗಿರಬೇಕು. ವೇದಗಳು ನಿರ್ದೋಷವಾದವು ಎಂಬ ಮಾತು ಮನುಷ್ಯನ ವಿಚಾರ ಸ್ವಾತಂತ್ರ್ಯವನ್ನು ಪೂರ್ಣವಾಗಿ ಹರಣ ಮಾಡುತ್ತದೆ. ಈ ಕಾರಣದಿಂದ ಬ್ರಾಹ್ಮಣರಲ್ಲಿ ಪ್ರತಿಪಾದಿಸಿದ ಈ ನಿಬಂಧನೆ ಬುದ್ಧನಿಗೆ ಅಸಮ್ಮತವೆನಿಸಿತು.[63] ಬುದ್ಧ ಸ್ವತಂತ್ರ ವಿಚಾರವಾದಿ, ಪರಂಪರೆಯಿಂದ ಬಂದುದೆಂದೋ ಶಾಸ್ತ್ರ ಪ್ರಮಾಣವೆಂದೋ ವೃದ್ಧರ ಹೇಳಿಕೆಯೆಂದೋ ಒಂದು ವಿಷಯವನ್ನು ನಂಬಬೇಕೆಂದು

ಆವನು ಪ್ರತಿಪಾದಿಸಲಿಲ್ಲ. ತರ್ಕ ಸಮ್ಮತವಾದುದು, ವಿಚಾರಗಮ್ಯವಾದುದು, ಅನುಭವ ವೇದ್ಯವಾದುದು ಮಾತ್ರ ಆವನಿಗೆ ಸಮ್ಮತ." ಬುದ್ಧನು ಹೇಳಿದ್ದಾನೆಂದು ಸ್ವೀಕರಿಸುವ ಅಗತ್ಯವಿಲ್ಲ" ಎಂದು ಆತ ಹೇಳುತ್ತಿದ್ದ. ಪ್ರಶ್ನಿಸದೇ ಯಾವುದನ್ನು ಒಪ್ಪಿಕೊಳ್ಳಬೇಡಿ ಎಂಬುದು ಆತನ ವಾದ. ವೈದಿಕಧರ್ಮದರ್ಶನದ ಪ್ರತಿಭಟನಾ ರೂಪದಲ್ಲಿ ಬೌದ್ಧಧರ್ಮ ಉದಯವಾಯಿತು. ಹೀಗಾಗಿ ಬುದ್ಧ ವೈದಿಕಧರ್ಮದಲ್ಲಿ ಕಂಡು ಬರುವ ಯಜ್ಞ-ಯಾಗ, ಪ್ರಾಣಿಹಿಂಸೆ, ವೇದ-ಶಾಸ್ತ್ರ ಸೂತ್ರಗಳನ್ನು ಕಟುವಾಗಿ ತಿರಸ್ಕರಿಸಿದನು. ಬದಲಾಗಿ ಅಹಿಂಸಾ ಧರ್ಮ ಬೋಧಿಸಿದನು.

2.6 ಕರ್ಮ ಸಿದ್ಧಾಂತದ ವಿರುದ್ಧ ಪ್ರತಿಭಟನೆ :

ವೈದಿಕಧರ್ಮದಲ್ಲಿ ಅಸ್ತಿತ್ವದಲ್ಲಿರುವ ಕರ್ಮ, ಪುನರ್‌ಜನ್ಮ, ಮೋಕ್ಷ ಸಿದ್ಧಾಂತಗಳು ಇಂದಿಗೂ ಬದಲಾವಣೆಯಲ್ಲಿವೆ. ಅವುಗಳಿಗೆ ಆಗಾಗ ಪ್ರತಿಭಟನಾ ಧ್ವನಿ ಎದ್ದರೂ ಕೂಡ ಇಂದಿಗೂ ಅವು ಹಾಗೆಯೇ ಮುಂದುವರೆಯುತ್ತವೆ. ವೈದಿಕಧರ್ಮದಲ್ಲಿ ಚಾತುರ್ವರ್ಣ ಆಚರಣೆಯಲ್ಲಿದ್ದು, ನಂತರ ಪಂಚಮವರ್ಗ ಸೃಷ್ಟಿಯಾಯಿತು. ಜೊತೆಗೆ ಹಲವಾರು ಜಾತಿ-ಉಪ ಜಾತಿಗಳು ಸಮಾಜದಲ್ಲಿ ಬೆಳೆದು ಬಂದು ಶ್ರೇಣಿಕೃತ ವ್ಯವಸ್ಥೆಯಿಂದ ಮೇಲುಕೀಳು ತಾರತಮ್ಯ ಬೆಳೆದು ಬಂದವು. ಇದಕ್ಕೆಲ್ಲ ಕಾರಣ ವೈದಿಕಧರ್ಮದ ಕರ್ಮ ಸಿದ್ಧಾಂತದ ಪ್ರತಿಪಾದನೆ. ಕರ್ಮಸಿದ್ಧಾಂತ ಬ್ರಾಹ್ಮಣಕದಲ್ಲಿ ಸ್ಪಷ್ಟಪಡಿಸಲಾಗಿದೆ.

"ಬ್ರಾಹ್ಮಣಕದಲ್ಲಿ ಪ್ರತಿಪಾದಿತವಾಗಿರುವ ನಾಲ್ಕನೇ ನಿಬಂಧನೆಯೇನೆಂದರೆ ಅದು ಕರ್ಮ ಸಿದ್ಧಾಂತ ಪುನರ್ ಜನ್ಮ ಅಥವಾ ಜನ್ಮಾಂತರ ತತ್ವದ ಒಂದು ಅಂಗವೇ ಈ ಕರ್ಮ ಸಿದ್ಧಾಂತ. ಮನುಷ್ಯನ ಆತ್ಮವು ಮತ್ತೊಂದು ಜನ್ಮವನ್ನು ಹೊತ್ತು ಹೊಸ ಕರ್ಮಸಿದ್ದಾಂತದಲ್ಲಿ ಸೂಕ್ತವಾದ ವಿವರಣೆ ದೊರೆಯುತ್ತದೆ. ಈ ಸಿದ್ಧಾಂತದ ಪ್ರಕಾರ ಹಿಂದಿನ ಜನ್ಮದಲ್ಲಿ ಒಬ್ಬ ವ್ಯಕ್ತಿಯು ಮಾಡಿದ ಪಾಪ ಪುಣ್ಯಗಳಿಗನುಗುಣವಾಗಿ ಆವನಿಗೆ ಮುಂದಿನ ಜನ್ಮವು ಲಭಿಸುತ್ತದೆ. ಈ ತತ್ವವನ್ನು ಸುಲಭವಾಗಿ ಹೇಳುವುದಾದರೆ, ಜನ್ಮಾಂತರ ಎಂಬುದು ಹಿಂದಿನ ಜನ್ಮದ ಕರ್ಮವನ್ನು ಆಧರಿಸಿ ನಡೆಯುತ್ತದೆ.[64] ಭಾರತೀಯ ಸಂಪ್ರದಾಯವಾದಿಗಳು ಗಟ್ಟಿಯಾಗಿ ನಂಬಿಕೊಂಡು ಬಂದಿರುವುದು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಪುಣ್ಯಗಳಿಂದಲೇ ಇಂದಿನ ಜನ್ಮ ನಿರ್ಧಾರವಾಗುತ್ತದೆ ಎಂಬ ನಂಬಿಕೆ. ಕರ್ಮ ಹಾಗೂ ಪುನರ್‌ಜನ್ಮಕ್ಕೆ ಇದೇ ಕಾರಣ ಎಂದು ತಿಳಿದು ಆಚರಿಸುತ್ತಿದ್ದಾರೆ. ಹುರುಳಿಲ್ಲದ ಕರ್ಮ ಸಿದ್ಧಾಂತ ಮತ್ತು ಅದರ ಹೆಸರಿನಲ್ಲಿ ನಡೆಯುವ ಸಂಪ್ರದಾಯ ಆಚರಣೆಗಳನ್ನು ಮೊದಲ ಬಾರಿಗೆ ಖಂಡಿಸಿದವನು ಬುದ್ಧ. ಶೂದ್ರನಿಗೆ ವಿದ್ಯೆ, ಬುದ್ಧಿ, ಅನ್ನ, ಹವಿಸ್ಸು, ವ್ರತ, ನೇಮ, ಧರ್ಮ ಇವುಗಳನ್ನು ಎಂದಿಗೂ ಹೇಳಬಾರದು ಮತ್ತು ಕೊಡಬಾರದು ಎಂಬಂತಹ ನಿಯಮಗಳನ್ನು ಮನುವು ತನ್ನ ಸ್ಮೃತಿಯ ಮೂಲಕ ಸಾರಿದನು. ಹೀಗಾಗಿ ಈ ಕರ್ಮ ಸಿದ್ಧಾಂತದ ಫಲದಿಂದ ವ್ಯಕ್ತಿಯ ದೈಹಿಕ, ಭೌತಿಕ ಜೀವನದಲ್ಲಿ ಕುತ್ತು ಒದಗಿತು"[65] "ಕರ್ಮತತ್ವವು ಜೀವ ಮತ್ತು ಜೀವನ ಸ್ಥಿತಿಯನ್ನು ರೂಪಿಸುವ, ಬದಲಿಸುವ ಮತ್ತು ಪುನರ್‌ರಚಿಸುವ ನಿಯಮವೇ ಆಗಿದೆ[66] ಎಂದು ಹಿರೇಮಲ್ಲೂರು ಈಶ್ವರನ್ ಎಂದಿದ್ದಾರೆ. ಹಾಗೆಯೇ ಪ್ರತಿಯೊಂದು ಬಗೆಯ ಬಾಹ್ಯ ಮತ್ತು ಆಂತರಿಕ ಚಲನ-ವಲನಕ್ಕೆ ಅಥವಾ ಬಾಹ್ಯ ಮತ್ತು ಆಂತರಿಕ ಶಕ್ತಿಯ ಉಪಯೋಗಕ್ಕೆ ಕರ್ಮವೆನ್ನಬಹುದು.[67] ಎಂದು ಹೇಳಲಾಗಿದೆ. ಇಲ್ಲಿ ಕ್ರಮವಾಗಿ ಕರ್ಮ ಸಿದ್ಧಾಂತವು ವಿಭಿನ್ನ ಅರ್ಥವನ್ನು ಪಡೆದುಕೊಳ್ಳುತ್ತದೆ. ಒಂದು

ಕರ್ಮತತ್ವವು ಸೃಷ್ಟಿಸುವ ಅಳಿಸಿ ಹಾಕುವ ಹಾಗೂ ಮತ್ತೆ ರಚಿಸುವುದು ಎಂದರೆ ಒಂದು ಚಕ್ರದಾಕಾರದಲ್ಲಿ ತಿರುಗುತ್ತ ಇರುವುದೇ ಕರ್ಮದ ಅರ್ಥ: ಇನ್ನೊಂದು ಆಂತರಿಕ, ಬಾಹ್ಯ ಶಕ್ತಿಗಳ ಉಪಯೋಗ.

"ಕರ್ಮಸಿದ್ಧಾಂತಿಗಳು ಪ್ರತಿಪಾದಿಸುವ ಧರ್ಮ ಮತ್ತು ಅಧರ್ಮ ವಿಚಾರಗಳು ಏಕ ಪಕ್ಷೀಯವೂ, ಪೂರ್ವ ಗ್ರಹಿತವೂ ಆಗಿವೆ. ಒಳ್ಳೆಯ ಕೃತಿಯನ್ನು ಮಾಡಿದವನು ಒಳ್ಳೆಯ ಫಲವನ್ನು ಅನುಭವಿಸುತ್ತಾನೆ ಎಂದು ಹೇಳುವ ಅವರ ಮಾತು ಸಹಜವೂ, ಸರಳವೂ ಎಂದೆನ್ನಿಸುವಂತಿದೆ. ಆದರೆ ಅಷ್ಟು ಸರಳವಲ್ಲದ ಪ್ರಮೇಯ ಅದು. ಅವರು ವಿವರಿಸುವ ಧರ್ಮ ಮತ್ತು ಅಧರ್ಮದ ಬಗೆಗಿನ ವ್ಯಾಖ್ಯೆಗಳು ಹಿಂದೂ ಬ್ರಾಹ್ಮಣ ಸಮಾಜ ವ್ಯವಸ್ಥೆಯ ಪರವಾಗಿವೆ ಮತ್ತು ಶ್ರೇಣಿ ಪದ್ಧತಿಯಲ್ಲಿ ತಮಗಿಂತಲೂ ಕೆಳಗಿನಂತಸ್ತುಗಳಲ್ಲಿ ಇರುವ ಜನ ಸಮುದಾಯವನ್ನು ನಿಯಂತ್ರಿಸುವ ಮತ್ತು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಸಾಧನಗಳೂ ಆಗಿವೆ. ಉದಾಹರಣೆಗೆ: ಬ್ರಾಹ್ಮಣನ ಕೆಲಸವನ್ನು ಬ್ರಾಹ್ಮಣನೆ ಮಾಡುವುದು ಧರ್ಮ. ಶೂದ್ರರು ಮಾಡಿದರೆ ಅಧರ್ಮ, ಆದರಿಂದಾಗಿ ವರ್ಣಸಂಕರವುಂಟಾಗಿ, ಪಾಪ ಹೆಚ್ಚುತ್ತದೆ. ಪಾಪ ಹೆಚ್ಚಾದರೆ ಹಾಳಾಗುತ್ತದೆಯೆನ್ನುವುದು ಕರ್ಮ ಸಿದ್ಧಾಂತದ ಒಂದು ಪ್ರಮೇಯ. ಮೊದಲು ವರ್ಣಾಶ್ರಮ ಪದ್ಧತಿಯನ್ನು ನಂತರ ಜಾತಿ ಪದ್ಧತಿಯನ್ನು ಸಮರ್ಥಿಸಿಕೊಂಡು ಬಂದು ಈ ಕರ್ಮಸಿದ್ಧಾಂತ ಹಿಂದೂ-ಬ್ರಾಹ್ಮಣ ವ್ಯವಸೆಗೆ ಸೇರಿದ ಒಂದು ವಿಶಿಷ್ಟ ಹಾಗೂ ಪ್ರತ್ಯೇಕ ವಿಚಾರವಾಗಿದೆ. ಪ್ರಪಂಚದ ತತ್ವವೇತ್ತರಿಗೆ ಊಹಿಸಲು ಆಗದ ಈ ವಿಶಿಷ್ಟ ಸಿದ್ಧಾಂತವನ್ನು ಹಿಂದೂ ಧರ್ಮಕ್ಕೆ ಬಳುವಳಿಯಾಗಿ ಕೊಟ್ಟವರು, ಬ್ರಾಹ್ಮಣರು[68] ದುರ್ಬಲರನ್ನು ಶೋಷಣೆಗೆ ದೂಡಿದ ವ್ಯವಸ್ಥೆ ಇದಾಗಿತ್ತು. "ಬ್ರಾಹ್ಮಣರಲ್ಲಿ ಪ್ರತಿಪಾದಿಸಿದ ಕರ್ಮಸಿದ್ಧಾಂತವು ದುರ್ಬಲರಲ್ಲಿ ಕಾಣಬಹುದಾದ ಬಂಡಾಯ ಪ್ರವೃತ್ತಿಯನ್ನು ಪೂರ್ಣವಾಗಿ ಹೀರಿಬಿಡಲು ಮಾಡಿದ ಒಂದು ಲೆಕ್ಕಾಚಾರ ಎಂದು ಬುದ್ಧನಿಗೆ ಅನಿಸಿತು. ಮನುಷ್ಯನು ಅನುಭವಿಸುತ್ತಿರುವ ದುಃಖಕ್ಕೆ ಅವನಲ್ಲದೇ ಬೇರೆ ಯಾರೂ ಕಾರಣರಲ್ಲ. ಬಂಡಾಯ ಪ್ರವೃತ್ತಿಯಿಂದ ಮನುಷ್ಯನು ತಾನು ಅನುಭವಿಸಲೇಬೇಕಾದ ನೋವಿನ ಸ್ವರೂಪವನ್ನು ಎಂದಿಗೂ ಬದಲಾಯಿಸಲಾರನು. ಏಕೆಂದರೆ ಈ ಜನ್ಮದ ಪಾಪದ ಫಲ ಎಂಬುದು ಕರ್ಮಸಿದ್ಧಾಂತದ ಪೂರ್ಣ ಪಾಠ. ಬ್ರಾಹ್ಮಣರ ಈ ಸಾಮಾಜಿಕ ಸಿದ್ಧಾಂತದಿಂದ ಹೆಚ್ಚು ಆಘಾತವನ್ನು ಅನುಭವಿಸಿದ ಎರಡು ವರ್ಗದ ಜನರೆಂದರೆ ಶೂದ್ರರು ಮತ್ತು ಎಲ್ಲಾ ವರ್ಗದ ಸ್ತ್ರೀಯರು. ಆದರೆ ಈ ಎರಡೂ ವರ್ಗದ ಜನ ವರ್ಣ ಸಿದ್ಧಾಂತದ ವಿರುದ್ಧ ಬಂಡಾಯವೇಳಲು ಶಕ್ತರಾಗಿರಲಿಲ್ಲ. ವಿದ್ಯಾಭ್ಯಾಸದಿಂದ ಅವಕಾಶದಿಂದ ವಂಚಿತರಾಗಿದ್ದ ಈ ವರ್ಗದ ಜನ ತಮ್ಮ ಈ ದುರ್ಗತಿಗೆ ಕಾರಣವೇನೆಂಬುದನ್ನು ತಿಳಿಯದಷ್ಟು ಮೂಢರಾಗಿದ್ದರು. ಬ್ರಾಹ್ಮಣ ಧರ್ಮವು ತಮ್ಮ ಬದುಕಿನ ಮಹತ್ವವನ್ನೇ ತಮ್ಮಿಂದ ದೋಚಿಬಿಟ್ಟಿದೆ ಎಂಬುದನ್ನು ಅವರು ತಿಳಿಯಲಾರದವರಾಗಿದ್ದರು. ಇಂತಹ ದೌರ್ಭಾಗ್ಯದ ಜನ ಬ್ರಾಹ್ಮಣ ಧರ್ಮದ ವಿರುದ್ಧ ತಿರುಗಿ ಬೀಳುವ ಬದಲು ಆ ಧರ್ಮದ ವಿರುದ್ಧ ತಿರುಗಿ ಬೀಳುವ ಬದಲು ಆ ಧರ್ಮದ ನಮ್ರ ಪ್ರತಿಪಾದಕರಾದರು. ಈ ಎಲ್ಲ ಅಂಶಗಳನ್ನು ಪರೀಕ್ಷಿಸಿದ ಬುದ್ಧನು ಈ ವರ್ಣ ಧರ್ಮವು ಮಾನವನ ಸಹಜ ಬದುಕಿಗೆ ವಿರುದ್ಧವಾದ ಒಂದು ಸಾಮಾಜಿಕ ವ್ಯವಸ್ಥೆ ಎಂದು ತಿಳಿದು ಅದನ್ನು ನಿರಾಕರಿಸಿದನು"[69] ಕರ್ಮಸಿದ್ಧಾಂತ ಮನುಷ್ಯನ ಈಗಿನ ಸ್ಥಿತಿಗೆ ಹಿಂದಿನ ಜನ್ಮದಲ್ಲಿ ಮಾಡಿದ ಕೆಲಸಗಳಿಂದ ನಿರ್ಧರಿಸಲ್ಪಟ್ಟಿದೆ ಎಂಬ ನಂಬಿಕೆಯನ್ನು ಬುದ್ಧ ನಿರಾಕರಿಸಿದನು. ಬುದ್ಧನ ಪ್ರಕಾರ ಹಿಂದೂ ವೈದಿಕ ಕರ್ಮಸಿದ್ಧಾಂತದಲ್ಲಿ ಮನುಷ್ಯನಿಗೆ ಸ್ವಾತಂತ್ರ್ಯವೇ ಇಲ್ಲ. ಮನುಷ್ಯನ ಪ್ರಯತ್ನಕ್ಕೆ ಅವಕಾಶವೇ ಇಲ್ಲ. ಪ್ರಸ್ತುತ ಜೀವನವನ್ನೆಲ್ಲ ಹಿಂದಿನ ಜನ್ಮವೇ ನಿರ್ಧರಿಸಿ ಬಿಡುತ್ತದೆಂದು ಹೇಳುವ ಕರ್ಮಸಿದ್ಧಾಂತ ದಲ್ಲಿ ಹುರುಳಿಲ್ಲವೆಂದು ಬುದ್ಧ

ವಿರೋಧಿಸಿದನು. ಬುದ್ಧನ ಕರ್ಮಸಿದ್ಧಾಂತವು ಜೈವಿಕ ವಿಜ್ಞಾನದ ತಳಹದಿಯ ಮೇಲೆ ಸೃಷ್ಟಿಯಾಗಿದ್ದರೆ ವೈದಿಕ ಹಿಂದೂ ಕರ್ಮಸಿದ್ಧಾಂತ ದೈವದ ಮೇಲೆ ಸೃಷ್ಟಿಯಾದದ್ದೇ ಆಗಿದ್ದರಿಂದ ಈ ಎರಡೂ ಸಿದ್ಧಾಂತಗಳೂ ಒಂದೇ ಅಲ್ಲ.

ಸಮ್ಮಾಕಮ್ಮಾಂತ, ಅಂದರೆ ಸರಿಯಾದ ಕೆಲಸ, ಸೂಕ್ತ ಕಾರ್ಯ. (Right action) ಒಳ್ಳೆಯ ಕ್ರಿಯೆ ಎಂದರ್ಥ. ಕಮ್ಮ ಎಂದರೆ ಕೆಲಸ. ನಾವು ಮಾಡುವ ಶಾರೀರಿಕ ಕೆಲಸ, ಆಡುವ ವಚನ ಕ್ರಿಯೆ, ಚಿಂತಿಸುವ ಮಾನಸಿಕ ಕ್ರಿಯೆಗಳನ್ನು ಕರ್ಮವೆನ್ನುತ್ತೇವೆ. ನಾವು ಮಾಡುವ ಈ ಮೂರು ವಿಧವಾದ ಕರ್ಮಗಳನ್ನು ಉದ್ದೇಶಪೂರ್ವಕ ಮಾಡಿದರೆ ಅವು ಕರ್ಮವಾಗುತ್ತವೆ. ಉದ್ದೇಶವಿಟ್ಟು ಮಾಡುವ ಕರ್ಮಕ್ಕೆ ಪ್ರತಿಫಲವುಂಟು. ಉದ್ದೇಶವಿಲ್ಲದೆ ಮಾಡುವ ಕ್ರಿಯೆಗಳಿಗೆ ಪ್ರತಿಫಲವಿರುವುದಿಲ್ಲ. ಆದುದರಿಂದ ಒಳ್ಳೆಯ ಉದ್ದೇಶದಿಂದ, ಒಳ್ಳೆಯ ಸಂಕಲ್ಪದಿಂದ ಮಾಡುವ ಕೆಲಸಗಳು ಸಮ್ಮಾಕಮ್ಮಾಂತವಾಗುತ್ತವೆ. ಕೆಟ್ಟ ಆಲೋಚನೆ, ಕೆಟ್ಟ ಉದ್ದೇಶದಿಂದ, ಕೆಟ್ಟ ಸಂಕಲ್ಪದಿಂದ ಮಾಡುವ ಕೆಲಸಗಳು ಸಮ್ಮಕಮ್ಮಾಂತವಲ್ಲ. ಅವು ಅಕುಶಲಕರ್ಮಿಗಳು. ಅವುಗಳಿಂದ ಕೆಟ್ಟ ಫಲಗಳು ಬರುತ್ತವೆ. ಆದುದರಿಂದ ಬುದ್ಧನು ಕೆಟ್ಟ ಕೆಲಸಗಳನ್ನು ಮಾಡಬೇಡ, ಒಳ್ಳೆಯ ಕೆಲಸಗಳನ್ನು ಮಾತ್ರ ಮಾಡು, ಮನಸನ್ನು ಸದಾ ಪರಿಶುದ್ಧವಾಗಿಟ್ಟುಕೋ ಎಂದು ಬೋಧಿಸಿದನು.

ನಮ್ಮ ಹಿಂದಿನ ಜೀವನದ ಕರ್ಮಫಲದಂತೆ ಈಗಿನ ಜೀವನವಿದೆ. ಈಗಿನ ಜೀವನದಂತೆ, ಭವಿಷ್ಯ ಜೀವನವಿರುತ್ತದೆ. ಹಾಗಿದ್ದರೆ ಕರ್ಮಫಲವನ್ನು ಬದಲಾಯಿಸಲು ಸಾಧ್ಯವಿಲ್ಲವೆಂಬ ಅರ್ಥ ಬರುತ್ತದೆ. ಅದು ತಪ್ಪು; ಕರ್ಮಫಲವನ್ನು ಬದಲಾಯಿಸಲು ಸಾಧ್ಯ. ನಮ್ಮ ಮನಸ್ಸಿಗೆ ಬದಲಾಯಿಸಿಕೊಳ್ಳುವ ಚೇತನ ಸಹ ಇರುತ್ತದೆ. ಇದನ್ನು ಸಂಕಲ್ಪಶಕ್ತಿ ಎನ್ನುತ್ತೇವೆ. ಮಹಾದರೋಡೆಕೋರನಾಗಿದ್ದ ಅಂಗುಲಿಮಾಲ ಮತ್ತು ವೇಶ್ಯೆಯಾಗಿದ್ದ ಆಮ್ರಪಾಲಿ ದೃಢಸಂಕಲ್ಪದಿಂದ ಅರಹಂತರಾಗಿ ಬದಲಾವಣೆ ಹೊಂದಿದರು. ನಮ್ಮ ಪರಿವರ್ತನೆಗೆ ನಾವೇ ಪೂರ್ಣ ಸಂಕಲ್ಪ ಮಾಡಬೇಕು. ಬೇರೆ ಧರ್ಮಗಳು ನಮ್ಮ ಹಿಂದಿನ ಪಾಪವನ್ನು ತೊಳೆಯಲು ಸಾಧ್ಯವಿಲ್ಲ. ನಮ್ಮ ಹಣೆಬರಹವನ್ನು ತಿದ್ದಲು ಹರಿ-ಹರ ಇಬ್ಬರಿಂದಲೂ ಸಾಧ್ಯವಿಲ್ಲವೆಂಬ ಜಡವಾದವನ್ನು ಬೋಧಿಸುತ್ತವೆ. ಆದರೆ ಬೌದ್ಧಧರ್ಮ ಮಾತ್ರ ಸ್ವಾವಲಂಬನೆಯನ್ನು ಸರ್ವ ಸ್ವತಂತ್ರ ಚಿಂತನೆಯನ್ನು ಮತ್ತು ಸ್ವಪರಿವರ್ತನೆಯ ಮಾರ್ಗವನ್ನು ಬೋಧಿಸುತ್ತದೆ. "ಮಾನವ ಅಗೋಚರ ಶಕ್ತಿಯ ಕೈಗೊಂಬೆಯಲ್ಲ, ಅವನೇ ಸ್ವಯಂಬು "ಅತ್ತಾರಿಂ ಅತ್ತಾನೋ ನಾಥ, ಅತ್ತಾಹಿ ಅತ್ತನೋ ಗತಿ" ಧರ್ಮ ದೀಪೋ ವಿಹರಥ, ಧರ್ಮ ಸರಣ ಅನನ್ನ ಸರಣ" "ಉ ಮ್ಹೇಹಿ ಕಿಚ್ಚ ಆತಪ್ಪ ಅಕ್ಖತಾರೋ ತಥಾಗತ"[70] ಎಂಬುದಾಗಿ ವ್ಯಕ್ತಿಯಲ್ಲಿರುವ ಅನಂತ ಶಕ್ತಿಯನ್ನು ಪ್ರಚೋದಿಸುತ್ತಾನೆ. ಅಂದರೆ ನಿನಗೆ ನೀನೇ ಬೆಳಕು; ನಿನ್ನ ಸ್ವ ಶಕ್ತಿಯಲ್ಲಿ ವಿಶ್ವಾಸವಿಡು. ನಾನು ಮಾರ್ಗದಾತನೇ ಹೊರತು ಮುಕ್ತಿದಾತನಲ್ಲ. ನೀನು ಸರಿ ದಾರಿಯಲ್ಲಿ ಸರಿಯಾಗಿ ಪ್ರಯತ್ನ ಪಟ್ಟರೆ ಬುದ್ಧನೇ ಆಗುವ ಚೇತನ ನಿನ್ನಲ್ಲಿ ಸುಪ್ತವಾಗಿದೆ. ಪ್ರಯತ್ನ ಪಟ್ಟು ಶಾರೀರಿಕವಾದ,ವಾಚಿಕವಾದ, ಮಾನಸಿಕವಾದ ಪರಿಶುದ್ಧಿಯನ್ನು ಸಾಧಿಸಿ, ಪ್ರಬುದ್ಧ ಮಾನವನಾಗು ಎಂದು ಬೋಧಿಸಿದ್ದಾನೆ. ಬುದ್ಧಧರ್ಮ ಮಾನವರಲ್ಲಿ ಅದಮ್ಯ ಚೇತನವನ್ನು ತುಂಬುವ ಮಾನವ ಧರ್ಮವಾಗಿದೆ. ವ್ಯಕ್ತಿಯ ಸುಖಕ್ಕೆ-ದುಃಖಕ್ಕೆ, ಸ್ವರ್ಗಕ್ಕೆ-ನರಕಕ್ಕೆ ಬೇರೆ ಯಾವ ಅಗೋಚರ ಶಕ್ತಿಯೂ ಕಾರಣವಲ್ಲ. ಕೆಟ್ಟ ಕರ್ಮವನ್ನು ಮಾಡಿ ಕೆಟ್ಟ ಫಲವನ್ನು, ಒಳ್ಳೆಯ ಕರ್ಮವನ್ನು ಮಾಡಿ ಒಳ್ಳೆಯ ಫಲವನ್ನು ಅನುಭವಿಸುತ್ತೇವೆ. "ಬಿತ್ತಿದಂತೆ ಬೆಳೆ, ಬೀಜದಂತೆ ಫಲ" ಎಂಬಂತೆ ಬೇವನ್ನು ಬಿತ್ತಿ ಮಾವನ್ನು, ಮಾವನ್ನು ಬಿತ್ತಿ ಹಲಸನ್ನು ಪಡೆಯಲು ಸಾಧ್ಯವಿಲ್ಲ. ಆದುದರಿಂದ

"ಸಬ್ಬ ಪಾಪಸ್ಸ ಅಕರಣಂ ಕುಸಲಸ್ಸ ಉಪ ಸಂಪದಾ ।
ಸಚಿತ್ತ ಪರಿಯೋದಪನಂ ಏತತಾಂ ಬುದ್ಧಾನ ಸಾಸನಂ ॥

ಎಂದು ಬುದ್ಧನು ಧಮ್ಮಪದದಲ್ಲಿ ಹೇಳಿದ್ದಾನೆ.[71] ಇದರ ತಾತ್ಪರ್ಯ ಏನೆಂದರೆ, ಎಲ್ಲಾ ರೀತಿಯ ಕೆಟ್ಟ ಕರ್ಮಗಳನ್ನು ತೊರೆದು ಬಿಡು. ಒಳ್ಳೆಯ ಕರ್ಮಗಳನ್ನು ಮಾತ್ರ ಮಾಡು. ಮನಸನ್ನು ಪರಿಶುದ್ಧವಾಗಿ ಕಾಪಾಡಿಕೊ. ಇದಿಷ್ಟೇ ಬುದ್ಧರು ಬೋಧಿಸುವ ಧಮ್ಮ. ಅಹಿಂಸಾ ಕರ್ಮಸಿದ್ಧಾಂತವನ್ನಷ್ಟೇ ಪ್ರತಿಪಾದಿಸಿದ ಸಾಧನೆಯಿಂದಲೂ, ನಮ್ಮ ದೇಶದ ಚರಿತ್ರೆಯಲ್ಲಿ ಬುದ್ಧನ ಪಾತ್ರ ಅತ್ಯಂತ ಮಹತ್ವವಾದುದು. ಆದರೆ ಬುದ್ಧನ ಸಾಧನೆ ಇದಿಷ್ಟಕ್ಕೆ ಸೀಮಿತವಾದುದಲ್ಲ. ಪಶುಪಾಲನೆಯಿಂದ ಕೃಷಿಗೆ ಮಾರ್ಪಡುತ್ತಿದ್ದ ಅಂದಿನ ಚಾರಿತ್ರಿಕ ಪ್ರಕ್ರಿಯೆಯನ್ನು ಎಲ್ಲ ದೃಷ್ಟಿಕೋನದಿಂದಲೂ ಬುದ್ಧ ಬಿಂಬಿಸಿದ್ದಾನೆ. (ಪ್ರಾಚೀನ ಭಾರತದ ಚರಿತ್ರೆ- ಡಿ.ಡಿ. ಕೊಸಾಂಬಿ ಅನು: ಎಚ್.ಎಸ್.ಶ್ರೀಮತಿ : ಪುಟ- 135, 1997)

2.7 ಅಸ್ಪೃಶ್ಯತೆ ಆಚರಣೆಯ ವಿರುದ್ಧ ಪ್ರತಿಭಟನೆ :

ನಮ್ಮ ಪರಂಪರೆಯ ಕಂದಾಚಾರವನ್ನು ಪ್ರತಿಭಟಿಸಿ ನಿಂತು, ತಮ್ಮ ಯುಗ ಧರ್ಮಕ್ಕನುಗುಣವಾದ ಹೊಸ ವಿಚಾರ ಪ್ರಣಾಲಿಯನ್ನು ನಿರೂಪಿಸಿದವರಲ್ಲಿ ಬೌದ್ಧಧರ್ಮದ ಪ್ರವರ್ತಕ ಬುದ್ಧ ಪ್ರಮುಖ. ಪರಂಪರೆ ಅವನ ಕಾಲದಲ್ಲಿ ಸಕಾಲಿಕ ವಿಚಾರಗಳ ಪ್ರವಾಹವಾಗಿರದೆ ಹಳೆಯ ವಿಚಾರಗಳ, ಆಚರಣೆಗಳ ನಿಂತ ಮಲೀನ ನೀರಿನಂತಾಗಿತ್ತು. ಇಂತಹ ಕಾಲದಲ್ಲಿ ವೈದಿಕಧರ್ಮದ ಕಂದಾಚಾರಗಳನ್ನೂ, ಕೆಲ ದುಷ್ಟ ಆಚರಣೆಗಳನ್ನೂ ವಿರೋಧಿಸಿ, ಹೊಸ ವಿಚಾರ, ಹೊಸ ತತ್ವಗಳನ್ನು ಜನತೆಗೆ ಬೋಧಿಸಿದನು. ಬುದ್ಧನು ಮೊಟ್ಟ ಮೊದಲು ಭಾರತ ದೇಶದಲ್ಲಿ ಅಸ್ಪೃಶ್ಯತೆಯನ್ನು, ಜಾತಿಭೇದವನ್ನು, ಲಿಂಗಭೇದವನ್ನು, ವರ್ಣವ್ಯವಸ್ಥೆಯನ್ನು ಧಿಕ್ಕರಿಸಿದನು. ಅಷ್ಟೇ ಅಲ್ಲ. ಕಟುವಾಗಿ ಖಂಡಿಸಿದನು. "ನ ಜಚ್ಚ ವಾಸಲೋ ಹೋತಿ, ನಜಚ್ಚ ಹೋತಿ ಬ್ರಾಹ್ಮಣೋ। ಕಮ್ಮೇನ ವಾಸಲೋ ಹೋತಿ ಕಮ್ಮೇನ ಹೋತಿ ಬ್ರಾಹ್ಮಣೋ"॥[72] ಎಂದು ಬೋಧಿಸಿದನು. ಅಂದರೆ ಹುಟ್ಟಿನಿಂದ ಯಾರೂ ಶ್ರೇಷ್ಟರಾಗುವುದಿಲ್ಲ. ಅಥವಾ ಯಾರೂ ಅಧಮರಾಗುವುದಿಲ್ಲ. ಅವರವರ ಕರ್ಮ, ಗುಣ, ಸ್ವಭಾವಗಳಿಂದ ಕೆಲವರು ಶ್ರೇಷ್ಠರಾಗುತ್ತಾರೆ, ಕೆಲವರು ಅಧಮರಾಗುತ್ತಾರೆ ಎಂದನು. ಯಾವ ಯೋಗ್ಯತೆಯಿಲ್ಲದಿದ್ದರೂ ಒಬ್ಬನನ್ನು ಬ್ರಾಹ್ಮಣನೆಂದು, ಮೇಲುಜಾತಿಯವನೆಂದು ಗೌರವಿಸುವುದು, ಎಲ್ಲಾ ಯೋಗ್ಯತೆಗಳಿದ್ದರೂ ಒಬ್ಬನನ್ನು ಅಸ್ಪೃಶ್ಯನೆಂದೂ, ಕೀಳುಜಾತಿಯವನೆಂದೂ ಅಪಮಾನ ಮಾಡುವುದು ಶುದ್ಧ ತಪ್ಪು ಎಂದರ್ಥ.

ಬುದ್ಧನ ಕಾಲದಲ್ಲಿ ಭಾರತದಲ್ಲಿ ಜಾತಿವಾದ ಬಹಳ ಪ್ರಬಲವಾಗಿತ್ತು. ವ್ಯಕ್ತಿಯ ಅಂತಸ್ತು ಹುಟ್ಟಿನಿಂದ ನಿರ್ಧರಿತವಾಗುತ್ತಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಅಥವಾ ಅಂತ್ಯಜ. ಅಸ್ಪೃಶ್ಯರು ನೀಚ ಜಾತಿಯವರು. ಅವರು ಮೇಲಿನ ಜಾತಿಯವರ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಅವರನ್ನು ಬಹು ಕೀಳಾಗಿ ಕಾಣಲಾಗುತ್ತಿತ್ತು. ಶತ ಶತಮಾನಗಳಿಂದ ಶೋಷಣೆಗೆ ಈ ವರ್ಗ ಒಳಗಾಗಿದೆ. ಅಂತ್ಯಜರನ್ನು ಪ್ರಾಣಿಗಿಂತ ಕೀಳಾಗಿ ಕಾಣುತ್ತಾರೆ. ಮುಟ್ಟಿಸಿಕೊಳ್ಳುವುದಿಲ್ಲ. ಇಂದಿಗೂ ಈ ಕ್ರೂರ ಅಮಾನವೀಯ ಪದ್ಧತಿ ಜಾರಿಯಲ್ಲಿದ್ದು, ಸ್ವತಂತ್ರ ಭಾರತದಲ್ಲಿ ಗಣತಂತ್ರ ವ್ಯವಸ್ಥೆಯ ಸಂವಿಧಾನಕ್ಕೊಂದು ಸವಾಲಾಗಿಯೇ ನಿಂತಿದೆ. ಮೇಲ್ಜಾತಿಯವರ ಕುತಂತ್ರದಿಂದ ದಬ್ಬಾಳಿಕೆಯಿಂದ ಕೀಳೆಂದು ಪರಿಗಣಿಸಲ್ಪಡುವ ಅಸಹಾಯಕರು ಈ ಅಸ್ಪ್ರಶ್ಯರು, ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಕಡೆಯವರ ಈ ಅಂತ್ಯಜರು. ಜಾತಿಯ ಆಧಾರದಿಂದ

ಕೀಳೆಂದು ಪರಿಗಣಿಸಿ ವಿದ್ಯೆ, ವಿವೇಕ, ಜ್ಞಾನ, ಸಿರಿ, ಸಂಪತ್ತು, ಸುಖ-ಸ್ವಾತಂತ್ರ್ಯ ಮುಂತಾದ ಸೌಲಭ್ಯಗಳಿಂದ ವಂಚಿಸಿ ಶತಶತಮಾನಗಳಿಂದ ಅನಕ್ಷರತೆ, ಅಜ್ಞಾನ, ಬಡತನ, ಅಸಹಾಯಕತೆ, ಅಶಾಂತಿಯೆಂಬ ಆಳವಾದ ಕಮರಿಯಲ್ಲಿ ತಳ್ಳಿ ಮೇಲ್ಜಾತಿಯವರು ನಲಿಯುತ್ತಿರುವವರ ಬೌದ್ಧಿಕ ದಿವಾಳಿತನ ಹೃದಯಹೀನತೆಗೆ ಕನ್ನಡಿ ಬೇಕಾಗಿಲ್ಲ.

ಭಾರತ ದೇಶದ ಇತಿಹಾಸದಲ್ಲಿ ಬಂದು ಹೋದ ರಾಜ ಮಹಾರಾಜರು, ಸಾಮ್ರಾಟರು, ಸಂತ-ಮಹಾಂತರು ಅನಂತ. ವೀರ-ಶೂರ, ಪರಾಕ್ರಮಿಗಳು ಪಂಡಿತರೂ ಅನಂತ. ಮಾನವೀಯ ಮೌಲ್ಯಗಳನ್ನು ಬೋಧಿಸಿದ ಮಹಾತ್ಮರೂ ಅನೇಕರು ಆಗಿ ಹೋಗಿದ್ದಾರೆ; ಆದರೆ? ಜಾತಿ ಪದ್ಧತಿಯೆಂಬ ಬಲವಾದ ಬೇಡಿಯಲ್ಲಿ ಬಂಧಿತರಾದ ಅಸ್ಪೃಶ್ಯರ ಬಂಧನ ಬಿಡಿಸುವುದು ಯಾರಿಂದಲೂ ಸಾಧ್ಯವಾಗಿಲ್ಲ. ಬುದ್ಧ, ಬಸವ, ಅಂಬೇಡ್ಕರ್‌ರನ್ನು ಬಿಟ್ಟರೆ ಜಾತಿ ಪದ್ಧತಿಯನ್ನಳಿಸುವತ್ತ ಮುಖ್ಯ ಗಮನಹರಿಸಿ, ಆಸಕ್ತರಾದವರೂ ತೀರಾ ಕಡಿಮೆ. ಜಾತಿ, ಅಸ್ಪೃಶ್ಯತೆ ಮತ್ತು ಸಾಮಾಜಿಕ, ಅಸಮಾನತೆಗಳ ವಿರುದ್ಧ ಕಾಲದಿಂದ ಕಾಲಕ್ಕೆ ಎಷ್ಟೋ ಮಹನೀಯರು ವಿರೋಧವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಇವರಲ್ಲಿ ಲೋಕಾಯತರು, ಚಾರ್ವಾಕರು, ಬುದ್ಧ, ಬಸವಣ್ಣ, ಅಂಬೇಡ್ಕರ್‌ರವರನ್ನು ವಿಶೇಷವಾಗಿ ಹೆಸರಿಸಬಹುದಾಗಿದೆ. ಜಾತಿಮತವೆನ್ನದೆ ಎಲ್ಲರಿಗೂ ತಮ್ಮ ಧರ್ಮದ ಬಾಗಿಲು ಮುಕ್ತ ವಾಗಿರಿಸಿದವನು ಬುದ್ಧ ಜಾತಿ, ವರ್ಣ, ವರ್ಗವೆಂಬ ಭೇದವಿಲ್ಲದೆ ಮೊಟ್ಟ ಮೊದಲು ಸಮಾನತೆ ಶಾಂತಿಯ ಗಾಳಿ ಭಾರತದಲ್ಲಿ ಬೀಸಿದ್ದು ಬುದ್ಧನಿಂದ. ಬುದ್ಧನು ಇಂತಹ ಜಾತಿ ಪದ್ಧತಿಯನ್ನು ಹೇಯವೆಂದನು. ಅದು ಅನ್ಯಾಯವಾದುದೆಂದನು. ಪ್ರತಿಯೊಂದು ಜಾತಿಯಲ್ಲಿಯೂ ಅತಿ ಕೆಟ್ಟವರೂ, ಕ್ರೂರಿಗಳೂ ಇರುವಂತೆಯೇ ಸಭ್ಯರೂ ಇರುತ್ತಾರೆ. ಮತ್ತು ದಯಾಳುಗಳು ಇರುತ್ತಾರೆಂಬುದನ್ನು ಬುದ್ಧ ತೋರಿಸಿ ಕೊಟ್ಟನು. ಮನುಷ್ಯನ ಇತಿಹಾಸದಲ್ಲಿ ದೃಢ ನಿರ್ಧಾರವನ್ನು ತೆಗೆದುಕೊಂಡು ಜಾತಿ ಪದ್ಧತಿಯನ್ನು ತೊಡೆದು ಹಾಕುವುದಕ್ಕೆ ಪ್ರಯತ್ನಿಸಿದ ಮೊದಲಿಗ ಬುದ್ಧ.

ಬುದ್ಧನು ಹೀಗೆ ತೀರ್ಮಾನಿಸಿದನು. "ಹುಟ್ಟಿನಿಂದ ಯಾರೂ ಅಸ್ಪೃಶ್ಯರಾಗುವುದಿಲ್ಲ ಹುಟ್ಟಿನಿಂದ ಅವನು ಬ್ರಾಹ್ಮಣನಾಗಲಾರ ಅವನು ಮಾಡುವ ಕೆಲಸಗಳಿಂದ ಒಬ್ಬನು ಕೀಳು ಜಾತಿಯವನಾಗುತ್ತಾನೆ ಮತ್ತು ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ಅವನು ಬ್ರಾಹ್ಮಣನೆನಿಸುತ್ತಾನೆ"[73]

ಸ್ಪೃಶ್ಯ-ಅಸ್ಪೃಶ, ಶುದ್ಧ-ಅಶುದ್ಧ, ಮೇಲು-ಕೀಳೆಂಬ ತಾರತಮ್ಯ ಇಂದು ಕೂಡ ನಮ್ಮನ್ನು ಕಾಡುತ್ತಿವೆ." ತನ್ನಂತೆಯೇ ಇರುವ, ಮತ್ತೊಬ್ಬ ಮನುಷ್ಯನನ್ನು ಅಸ್ಪೃಶ್ಯ ಎಂದು ಮುಟ್ಟಿಸಿಕೊಳ್ಳದೇ ದೂರ ಇಟ್ಟಿರುವುದು ನಮ್ಮ ವ್ಯವಸ್ಥೆಯ ಮಹಾನ್ ದುರಂತ. ಈ ದೇಶದಲ್ಲಿ ಮನುಷ್ಯರನ್ನು ಮನುಷ್ಯರಂತೆ ಸರಿಸಮನಾಗಿ ಕಾಣುವ ಹಾಗೂ ಅವರನ್ನು ಸಮಾನತೆಯಿಂದ ಪರಿಗಣಿಸಲು ಸೈದ್ಧಾಂತಿಕವಾಗಿ ಹೋರಾಟ ಮಾಡಿದವನು ಬುದ್ಧ. ಅಸ್ಪೃಶ್ಯತೆ ಅಲ್ಪಸ್ವಲ್ಪ ಕಣ್ಮರೆಯಾಗುತ್ತಿದೆ ಎನ್ನುವಾಗಲೇ ನಮ್ಮ ಸಮಾಜದಲ್ಲಿ ಅದನ್ನು ಉಳಿಸಿಕೊಂಡು, ಆಚರಿಸುವ ಪ್ರಯತ್ನ ನಡೆಯುತ್ತಲೇ ಇವೆ. ಭಾರತದ ಇಂದಿನ ಸಾಮಾಜಿಕ ಸ್ಥಿತಿ ಅಧ್ಯಯನ ಮಾಡುವುದರಿಂದ ಇನ್ನೂ ಅಸ್ಪೃಶ್ಯತೆ ಜೀವಂತವಾಗಿದ್ದು, ಆ ವರ್ಗದ ಜನ ಶೋಷಣೆ, ದಬ್ಬಾಳಿಕೆ, ಮಾರಕ ಹಲ್ಲೆಗಳಿಗೆ ಅನ್ಯಾಯ, ಅತ್ಯಾಚಾರಗಳಿಗೆ ಬಲಿಯಾಗುತ್ತಿರುವದನ್ನು ಮನಗಾಣಬಹುದಾಗಿದೆ. ಈ ನೀಚ ಪದ್ಧತಿಯ ನಿವಾರಣೆಗೆ ಇಂದೂ ಸಹಿತ ಬುದ್ಧನ ಉಪದೇಶ, ತತ್ವಗಳು ಅವಶ್ಯವೆನಿಸುತ್ತಿವೆ.

ಅಸ್ಪೃಶ್ಯ ಅಥವಾ ದಲಿತನಾಗಿ ಹುಟ್ಟಿ ದಲಿತರಿಗಾಗಿ ಹೋರಾಟ ನಡೆಸುವುದೇ ಇಂದು ದುಸ್ತರವಾದಾಗ ದಲಿತೇತರನಾದ ಬುದ್ಧ ಅಂದು ನಡೆಸಿದ ಹೋರಾಟ ತುಂಬಾ ಶ್ರೇಷ್ಠವಾದದ್ದು. ಕ್ಷತ್ರಿಯನಾದ ಬುದ್ಧ ಅಧಿಕಾರ, ಅಂತಸ್ತು, ಅರಮನೆ, ತಂದೆ-ತಾಯಿ, ಹೆಂಡತಿ-ಮಗು ಅಪಾರ ಬಂಧು-ಬಳಗವನ್ನು ತ್ಯಜಿಸಿ ಭಿಕ್ಷುವಾಗಿ ಸಾಧನೆಗೈದು ಬೋಧಿಸತ್ವನಾದನು. ತಥಾಗತನಾದನು, ತಾನು ಕಂಡ ಸತ್ಯವನ್ನು ಸರ್ವರಿಗೂ ಉಪದೇಶಿಸಿದನು. ಸರ್ವರನ್ನೂ ಸಮನಾಗಿ ಕಂಡು, ಸಮಾಜದ ತಾರತಮ್ಯ ಜಾತೀಯತೆ, ಅಸ್ಪೃಶ್ಯತೆಯ ಆಚರಣೆಗಳನ್ನು ಮೊದಲ ಬಾರಿಗೆ ಭಾರತದಲ್ಲಿ ಖಂಡಿಸಿದ ಮಹಾನುಭಾವ ಬುದ್ಧ ಜನರಲ್ಲಿ ವೈಚಾರಿಕತೆ ಮೂಡಿಸಿ ಸಮಾನತೆಯನ್ನು ಬೋಧಿಸಿದ.

ಜಾತೀಯತೆಯನ್ನು ಖಂಡಿಸುವಾಗ ಬುದ್ಧನು ಎಷ್ಟೊಂದು ನೇರವಾಗಿ, ವೈಚಾರಿಕವಾಗಿ ಹಾಗೂ ವೈಜ್ಞಾನಿಕ ತಳಹದಿಯನ್ನಾಧರಿಸಿ ತೀರ್ಮಾನಿಸುತ್ತಿದ್ದನೆಂಬುದನ್ನು " ಅಸ್ವಲಾಯನ ಸುತ್ತ " ದಲ್ಲಿ ಕಾಣುತ್ತೇವೆ. ಅಸ್ವಲಾಯನ ಪ್ರಶ್ನೆಗಳಿಗೆ ಬುದ್ಧ ಉತ್ತರಿಸಿ ಅವನನ್ನು ತೃಪ್ತಿಪಡಿಸುತ್ತಾನೆ. ಬುದ್ಧನು ಇಲ್ಲಿಯ ಸರ್ವರೂ ಯೋನಿಜರು, ಅಂದಾಗ ಜನನದಿಂದ ಎಲ್ಲರೂ ಸಮಾನರು ಎಂಬುದನ್ನು ತೋರಿಸಿಕೊಟ್ಟಿದ್ದಾನೆ.[74] ಇಂದು ವೈಜ್ಞಾನಿಕ ಯುಗದಲ್ಲಿರುವ ಪ್ರಸ್ತುತ ಸಮಾಜದಲ್ಲಿಯೂ ಇನ್ನೂ ಜಾತೀಯತೆ, ಮೇಲು-ಕೀಳು ಸ್ಪೃಶ್ಯ-ಅಸ್ಪೃಶ್ಯ ಎನ್ನುವುದು ತಾಂಡವ ವಾಡುತ್ತಿರುವಾಗ, ಬುದ್ಧನ ವೈಜ್ಞಾನಿಕ, ವೈಚಾರಿಕ ವಿಚಾರಗಳು ಈ ಸಮಸ್ಯೆಗಳಿಗೆ ಪರಿಹಾರವಾಗಬಲ್ಲವು. ಬುದ್ಧ ಅಂದು ಹೇಳಿದ ಉಪದೇಶಾತ್ಮಕ ನುಡಿಗಳು ಇಂದು ನಮಗೆ ದಾರಿದೀಪ.

"ನ ಚಾಹಂ ಬ್ರಾಹ್ಮಣಂ ಬ್ರೂಮಿ,
ಯೋನಿಜಂ ಮತ್ತಿ ಸಂಭವಂ,
ಭೋವಾದಿ ನಾಮ ಸೋ ಹೋತಿ
ಸಚೇ ಹೋತಿ ಸಕಿಂಚನೋ;
ಅಕಿಂಚನಂ ಅನಾದಾನಂ
ತಮಹಂ ಬ್ರೂಮಿ ಬ್ರಾಹ್ಮಣಂ" (ಧಮ್ಮಪದ- 396)[75]

ಅವನ ಗೋತ್ರದಿಂದಾಗಿ ಅಥವಾ ಅವನ ಹುಟ್ಟು ಒಬ್ಬ ಬ್ರಾಹ್ಮಣ ತಾಯಿಯಲ್ಲಾದ ಮಾತ್ರಕ್ಕೆ ಅವನನ್ನು ಬ್ರಾಹ್ಮಣನೆಂದು ಕರೆಯುವುದಿಲ್ಲ. ಅವನು ಅಡ್ಡಿ ಉಂಟು ಮಾಡುವ ವ್ಯಾಮೋಹದ ತಡೆಗಳಿಂದ ತುಂಬಿದ್ದರೆ, ಆಗ ಅವನನ್ನು ಗರ್ವದಿಂದ ತುಂಬಿರುವವನು ಎಂದು ಮಾತ್ರ ಹೇಳುತ್ತೇವೆ. ಆದರೆ ಯಾರು ಅಡೆತಡೆಗಳಿಂದ ಮತ್ತು ಅಂಟಿಕೊಳ್ಳುವಿಕೆಯಿಂದ ಬಿಡುಗಡೆ ಹೊಂದಿರುವನೇ ಅವನನ್ನು ಬ್ರಾಹ್ಮಣನೆಂದು ಕರೆಯುತ್ತೇನೆ ಎಂದು ಬುದ್ಧ ಖಡಾಖಂಡಿತವಾಗಿ ಜಾತೀಯತೆಯನ್ನು ವಿರೋಧಿಸಿರುವನು. ಸಮಾಜವನ್ನು ವರ್ಗ, ವರ್ಣ, ಜಾತಿಗಳಿಂದ ಛಿದ್ರೀಕರಣ ಉಂಟು ಮಾಡುತ್ತಿರುವ ಸಂದರ್ಭದಲ್ಲಿ ಬುದ್ಧ ಸಮಾಜವನ್ನು ಸರ್ವ ಸಮಾನತೆಯ ಕಡೆಗೆ ಸಾಗಿಸಲು ಪ್ರಯತ್ನಿಸಿದ. ಬೌದ್ಧಧರ್ಮದಲ್ಲಿ ಜಾತಿ ಭೇದವಿಲ್ಲ. ಎಲ್ಲರಿಗೂ ಪ್ರವೇಶವಿದೆ. ಬುದ್ಧನ ಅನುಯಾಯಿಗಳು ಬೇರೆಬೇರೆ ವರ್ಗ ಜಾತಿಗಳಿಂದ ಬಂದವರಾಗಿದ್ದು, ಅವರೆಲ್ಲ ಜಾತ್ಯಾತೀತಗೆ ಸಾಕ್ಷಿ. ಶಿಷ್ಯರಾದ ಸಾರಿಪುತ್ರ, ಮಾದ್ಗಾಲಯನ ಬ್ರಾಹ್ಮಣರು, ಬಿಂಬಸಾರ ಕ್ಷತ್ರಿಯ, ಸಿಂಹ ಚೈನ, ಪೂರ್ಣ-ಪೂರ್ಣಿಕಾ ಗುಲಾಮ ಸ್ತ್ರೀಯರು, ಚುಂದ ಕಮ್ಮಾರ, ಆಮ್ರಪಾಲಿ ವೇಶ್ಯೆ, ಅಂಗುಲಿಮಾಲ ಕೊಲೆಗಾರ, ಉಪಾಲಿ ಕ್ಷೌರಿಕ, ಸುನೀತ ಜಲಗಾರ, ಹೀಗೆ ಯಾವ ಜಾತಿ, ಗೋತ್ರ, ವರ್ಗಭೇದವಿಲ್ಲದೇ ಬೌದ್ಧಧರ್ಮವನ್ನು ಸೇರಿದ ಜನ ಆ ಧರ್ಮದ ಜಾತ್ಯಾತೀತತೆಗೆ ಸಾಕ್ಷಿ. ಬುದ್ಧಧರ್ಮದಲ್ಲಿ ಜಾತಿ ಭೇದವೇ

ಇಲ್ಲವೆಂದ ಮೇಲೆ ಅಸ್ಪೃಶ್ಯತೆಗೆ ಸ್ಥಾನವೇ ಇಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಈ ವೈಚಾರಿಕ ಧರ್ಮಕ್ಕೆ ಸಂಕುಚಿತ ಜಾತಿ ಗುರಿಯಾಗಿರದೇ ವಿಶಾಲ ಮಾನವತೆಯೇ ಗುರಿಯಾಗಿತ್ತು. "ಸರ್ವ ಮಾನವರೆಲ್ಲರೂ ಪ್ರಬುದ್ಧತೆಯುಳ್ಳ ಬುದ್ಧರೇ" ಎಂದು ಬುದ್ಧ ಸಾರಿದ. ಅಧ್ಯಾಪಕ ನಟರಾಜ್ ಹುಳಿಯಾರ್ ಭಾಷಣ ಒಂದರಲ್ಲಿ ಹೇಳಿದ ಮಾತು" ಜಾತ್ಯಾತೀತತೆ ಅನ್ನುವುದು ಬರಿ ಪರಿಕಲ್ಪನೆ ಅಲ್ಲ. ಅದು ನಿತ್ಯ ಬದುಕಿನ ಅನಿವಾರ್ಯತೆ" ಎಂದರು. ಅಲ್ಲದೇ ಮುಂದುವರಿದು "ಶಾಸ್ತ್ರದ ಬದ್ಧತೆಯನ್ನು ಪ್ರಶ್ನಿಸದೇ ಧರ್ಮ ಪುರಾಣಗಳ ಮುಖಾಮುಖಿಯಾಗಲು ಸಾಧ್ಯವಿಲ್ಲ. ಬುದ್ಧ ಮತ್ತು ಬಸವಣ್ಣ ಜಾತಿಗೆ ಮೂಲವಾಗಿರುವ ಶಾಸ್ತ್ರದ ಕೇಂದ್ರಗಳನ್ನು ಒಡೆದು ಹಾಕುವ ನಿಟ್ಟನಲ್ಲಿ ಕೆಲಸ ಮಾಡಿದರು" ಎಂದರು. ಇದೇ ಸಂದರ್ಭದಲ್ಲಿ ಮೊಗಳ್ಳಿ ಗಣೇಶ್‌ರವರು "ಬೌದ್ಧಧರ್ಮ ಕೇವಲ ಧರ್ಮ ಮಾತ್ರ ಅಲ್ಲ, ಅದೊಂದು ಮಾನವೀಯ ವಿವೇಕದ ಸಂಕೇತ" ಎಂದು ವ್ಯಾಖ್ಯಾನಿಸಿದರು. ಅಲ್ಲದೇ ಮುಂದುವರಿದು "ಬಹು ಸಂಖ್ಯಾತರಿಗೆ ದೀಪದ ಬೆಳಕಾದ ಬೌದ್ಧಧರ್ಮದ ಆಶಯಗಳನ್ನು ನೊಂದವರ ಬಿಡುಗಡೆಯ ರಾಜಕಾರಣವಾಗಿ ಅಂಬೇಡ್ಕರ್ ರೂಪಿಸಿದರು.[76] ಈ ಮಾತುಗಳು ಬುದ್ಧ ತತ್ವ ಹಾಗೂ ಅದರ ಮೌಲ್ಯ ಸದಾ ಕಾಲ ಇರುವಂತಹದ್ದು ಎಂದು ಧ್ವನಿಸುತ್ತದೆ.

"ನೀರಗಂಟಿಯು ನೀರನ್ನು ನಿಯಂತ್ರಿಸುವನು, ಬಿಲ್ಲುಗಾರನು ಬಾಣದ ಮೊನೆಯನ್ನು ಮೊನಚುಗೊಳಿಸುವನು, ಬಡಗಿಯು ಮರದ ತುಂಡಿಗೆ ಆಕಾರ ಕೊಡುವನು, ಒಳ್ಳೆಯವರು ತಮ್ಮನ್ನು ದಮಿಸಿಕೊಳ್ಳುವರು. (ಉದಕಂ ಹಿ ನಯಂತಿ ನೇತ್ತಿಕಾ, ಉಸುಕಾರಾ ನಯಂತಿ ತೇಜನಂ, ದಾರುಂ ನಮಯಂತಿ ತಚ್ಚಕಾ, ಅತ್ತಾನಂ ದಮಯಂತಿ ಸುಬ್ಬತಾ) ಎಂದು ಭಗವಾನ್ ಬುದ್ಧ ಹೇಳಿದ್ದು, " ಧಮ್ಮಪದ " ದಲ್ಲಿ ದಾಖಲಾಗಿದೆ"[77] ಈ ಗಾಥೆ ಆಧುನಿಕ ಮಾನವನಿಗಾಗಿಯೇ ಸೃಷ್ಟಿಯಾದಂತಿದೆ. ಆಧುನಿಕ ಮಾನವ ನೈಸರ್ಗಿಕ ಸಂಪನ್ಮೂಲಗಳನ್ನು ದೋಚುವುದಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದ್ದಾನೆ. ಜನಾಂಗವಾದಿಯಾಗಿ ಬೇರೆ ಜನಾಂಗಗಳನ್ನು ನಿಯಂತ್ರಿಸಲು ಹೆಣಗುತ್ತಿದ್ದಾನೆ. ಕೋಮುವಾದಿಯಾಗಿ ಬೇರೆ ಕೋಮುಗಳ ವಿರುದ್ಧ ಗಲಭೆಗಳನ್ನು ಸೃಷ್ಟಿಸುತ್ತಿದ್ದಾನೆ. ಭಯೋತ್ಪಾದಕನಾಗಿ ಮನ ಬಂದಂತೆ ಗುಂಡು ಹಾರಿಸುತ್ತಿದ್ದಾನೆ. ಸಂಪನ್ಮೂಲಗಳನ್ನು ಲೂಟಿ ಹೊಡೆಯುವುದಕ್ಕಾಗಿ ಬಡದೇಶಗಳ ಮೇಲೆ ಬಾಂಬ್ ಹಾಕುತ್ತಿದ್ದಾನೆ. ಆಕರ್ಷಕ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತ, ಆ ಉತ್ಪಾದನೆಗಳ ಮಾರಾಟಕ್ಕಾಗಿ ಇತರ ಮಾನವರೆಲ್ಲ ಗ್ರಾಹಕರಾಗುವಂಥ ವಾತಾವರಣದ ನಿರ್ಮಾಣದಲ್ಲಿ ತಲ್ಲೀನನಾಗಿದ್ದಾನೆ. ಹೀಗೆ ಆಧುನಿಕ ಮಾನವ ತನ್ನನ್ನು ಬಿಟ್ಟು ಉಳಿದೆಲ್ಲದರ ಮೇಲೆ ಮತ್ತು ಎಲ್ಲರ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸುತ್ತಿದ್ದಾನೆ. ಹೀಗಾಗಿ ತನ್ನ ಮೇಲೆ ಹಿಡಿತ ಸಾಧಿಸುವುದನ್ನೇ ಮರೆತಿದ್ದಾನೆ. ಈ ರೀತಿ ದಾರಿತಪ್ಪಿದ ಮಾನವನಿಗೆ ಬುದ್ಧ ದಾರಿ ತೋರಿಸಿದ್ದಾನೆ. ಧ್ಯಾನ ಮತ್ತು ಪ್ರಜ್ಞೆಯಿಂದ ಮಾತ್ರ ಮಾನವ ತನ್ನನ್ನು ತಾನು ನಿಯಂತ್ರಿಸಬಲ್ಲ. ಮಾನವ ಎಲ್ಲ ದುಃಖಗಳಿಂದ ಮುಕ್ತನಾಗಬಲ್ಲ ಎಂದು ಬುದ್ಧ ಸಾರಿದ್ದಾನೆ. "ಎಚ್ಚರಿಕೆಯನ್ನು ಸಂಪಾದಿಸಿ" (ಅಪ್ಪ ಮಾದೇನ ಸಂಪಾದೇಥ) ಎಂಬುದು ಬುದ್ಧನ ಕೊನೆಯ ಸಂದೇಶವಾಗಿದೆ.

ಈ ಎಚ್ಚರಿಕೆಯೊಂದಿಗೆ ಪ್ರತಿಯೊಬ್ಬರು ಬೇರೆಯವರನ್ನು ಆಳುವ ದಾಹದಿಂದ ಹೊರಬಂದು ತಮ್ಮನ್ನು ತಾವು ಆಳುವುದನ್ನು ಕಲಿಯಬೇಕು. ತಮ್ಮ ಒಳಜಗತ್ತಿನ ಚಕ್ರವರ್ತಿಗಳಾಗಬೇಕು. ಆಗ ಭೂಮಿಯ ಮೇಲೆ ಶಾಂತಿ ಆವರಿಸುವುದು. "ಬಹುಜನ ಹಿತಾಯ, ಬಹುಜನ ಸುಖಾಯ, ಲೋಕಾನುಕಂಪಾಯ" ಎಂಬ ಉನ್ನತಭಾವ ಮೂಡುವುದು. 1953 ರಲ್ಲೇ ಅಂಬೇಡ್ಕರ್‌ರವರು

ಹಿಂದೂಧರ್ಮವನ್ನು ತ್ಯಜಿಸಬೇಕೆಂದು ತೀರ್ಮಾನಿಸುತ್ತಾರೆ. ಹಿಂದೂಧರ್ಮದಲ್ಲಿನ ಅತ್ಯಂತ ಕ್ರೂರವಾದ ಜಾತಿಪದ್ಧತಿ, ಅಸ್ಪೃಶ್ಯತೆ, ಅಸಮಾನತೆ, ಬ್ರಾಹ್ಮಣ್ಯದ ಕೊಳಕು, ದೇವರು-ದಿಂಡಿರು, ಅವೈಚಾರಿಕತೆ, ಅಮಾನವೀಯತೆ, ಹುಟ್ಟಿನಿಂದಲೇ ಬರುವ ಅಹಂಕಾರ, ಮೇಲು-ಕೀಳು, ಆಡಂಬರಿಕೆ ಮುಂತಾದ ಅಮಾನವೀಯವಾದ ಮೌಲ್ಯಗಳು ಅಂಬೇಡ್ಕರ್‌ರವರನ್ನು ಹಿಂದೂಧರ್ಮ ತ್ಯಜಿಸುವಂತೆ ಪ್ರೇರೆಪಿಸುತ್ತವೆ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಒಮ್ಮೆ ಹೇಳುತ್ತಾರೆ. "ಹಿಂದೂವಾಗಿ ಹುಟ್ಟಿರುವ ನಾನು ಹಿಂದೂವಾಗಿ ಸಾಯಲಾರೆ" ಎಂದು. ಇದಾದ ನಂತರ ಸುಮಾರು ಇಪ್ಪತ್ತು ವರ್ಷಗಳ ಕಾಲ ಹಿಂದೂ ಧರ್ಮ ಬಿಟ್ಟು ಯಾವ ಧರ್ಮ ಸ್ವೀಕರಿಸಬೇಕೆಂದು ಸಂಶೋಧನೆ ಕೈಗೊಳ್ಳುತ್ತಾರೆ. ಕೊನೆಗೆ ಬೌದ್ಧಧರ್ಮವು ವೈಜ್ಞಾನಿಕ-ವೈಚಾರಿಕ ತಳಹದಿಯ ಮೇಲೆ ನಿಂತಿರುವ ಜಗತ್ತಿನ ಶ್ರೇಷ್ಠವಾದ ಮಾನವಧರ್ಮ ಅತ್ಯಂತ ಪ್ರಾಚೀನದರ್ಮ, ಪ್ರೀತಿ, ಕರುಣೆ, ವಿಚಾರಗಳ ತಳಹದಿಯ ಮೇಲೆ ನಿಂತ ಜಾತಿರಹಿತವಾದ ಧರ್ಮ ಭಾರತದಲ್ಲೇ ಹುಟ್ಟಿದ ಅಪ್ಪಟ ಭಾರತೀಯ ನೆಲದ ಧರ್ಮವಿದಾಗಿದೆ. ಈ ಕಾರಣದಿಂದಲೇ ಭಾರತದ ಮೂಲ ನಿವಾಸಿಗಳಾದ ದಲಿತರಿಗೆ ಬೌದ್ಧಧರ್ಮ ಅವರ ಮೂಲ ಧರ್ಮವೆಂಬ ಸತ್ಯಸಂಗತಿ ಬಾಬಾಸಾಹೇಬರ ಸಂಶೋಧನೆಯಿಂದ ತಿಳಿದುಬಂದಿದೆ. ಮನುಷ್ಯನಿಗೆ ಅನ್ನಕ್ಕಿಂತಲೂ ಮುಖ್ಯವಾದುದು ಆತ್ಮಗೌರವ. ಹಿಂದೂ ಧರ್ಮದಲ್ಲಿ ದಲಿತರಿಗೆ, ಗಿರಿಜನರಿಗೆ, ಶೂದ್ರರಿಗೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಗೌರವ ಘನತೆಗಳಿಲ್ಲ. ಈ ಕಾರಣದಿಂದಾಗಿ ಹಿಂದೂ ಧರ್ಮದ ಕರಾಳ ಸಂಕೋಲೆಯಿಂದ ಬಿಡುಗಡೆ ಪಡೆದು, ದಲಿತರು ತಮ್ಮ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬೇಕಾದರೆ ಬೌದ್ಧಧಮ್ಮವನ್ನು ಸ್ವೀಕರಿಸದೇ ಅನ್ಯ ಮಾರ್ಗವಿಲ್ಲ ಎಂಬುದು ಅಂಬೇಡ್ಕರ್ ವಿಚಾರಗಳಿಂದಾಗಿ ಇಂದು ಎಲ್ಲರಿಗೂ ಮನದಟ್ಟಾಗಿದೆ"[78]

"ಬುದ್ದೀಸಂ ಈ ದೇಶದ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ, ಭಾರತೀಯತೆಯಲ್ಲಿ ಬುದ್ಧೀಸಂ ಇದೆ. ಎಂದ ಬಾಬಾಸಾಹೇಬರು, 1956, ಅಕ್ಟೋಬರ್ 14 ರಂದು ನುಡಿದಿದ್ದರು..... "I want to whole of India to be converted to Buddhism. It should not become only Harijan religion.. It is after all an universal faith" "ಎಲ್ಲಾ ಮನುಷ್ಯರು ಸಮಾನರು; ಪ್ರತಿಯೊಬ್ಬರಲ್ಲಿ ವಿಶಿಷ್ಟವಾದ ಶಕ್ತಿ ಇದೆ. ದೃಢನಿರ್ಧಾರ, ನಿರಂತರ ಪರಿಶ್ರಮ, ಏಕ ಚಿತ್ತ ಮುಂತಾದ ಗುಣಗಳಿಂದ ಪ್ರತಿಯೊಬ್ಬರೂ ಜ್ಞಾನವನ್ನು ಪಡೆಯಬಲ್ಲರು. ಇದಕ್ಕೆ ವರ್ಣದ ಪುಷ್ಟಿಯೇನೂ ಬೇಕಾಗಿಲ್ಲ. ಆದ್ದರಿಂದ ವ್ಯಕ್ತಿಗೆ ಅವರ ಗುಣ ಸ್ವಭಾವದ ಆಧಾರದಲ್ಲಿ ಮನ್ನಣೆ ದೊರೆಯಬೇಕೇ ಹೊರತು, ಅವರ ಹುಟ್ಟಿನ ಆಧಾರದ ಮೇಲಲ್ಲ" ಎಂದು ಬುದ್ಧ ಘೋಷಿಸಿದ.

ಇಷ್ಟನ್ನು ನಿರ್ಧರಿಸಿದ ಬಳಿಕ ತನ್ನ ಅಭಿಪ್ರಾಯದಲ್ಲಿ ಅಸಂಗತ ಎನಿಸಿದ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡುವ ದಿಕ್ಕಿನಲ್ಲಿ ಬುದ್ಧನು ತನ್ನ ಚಿಂತನೆಯನ್ನು ಸಮಾಜದ ಮುಂದಿಟ್ಟ. ಜಾತಿ ಪದ್ಧತಿ ಹೇಗೆ ನಿರಾಧಾರವಾದುದು ಎಂಬುದನ್ನು ಬ್ರಾಹ್ಮಣರೇ ಮೊದಲಾಗಿ ಹಲವು ಜನರಿಗೆ ತಿಳಿಸಿ ಹೇಳಿದ. ತನ್ನ ಅನಿಸಿಕೆ ಹೇಗೆ ಗ್ರಾಹ್ಯ ಎಂಬುದನ್ನು ಒರೆಗೆ ಹಚ್ಚಲು ಬ್ರಾಹ್ಮಣರನ್ನು ಕೇಳಿಕೊಂಡ. ಇತರ ವರ್ಣಗಳವರಲ್ಲಿ ಮೂಡಿದ ಕೀಳರಿಮೆಯನ್ನು ತೊಡೆಯಲೂ ಬುದ್ಧ ಮುಂದಾದ. ಅವರೊಂದಿಗೆ ಸಹಜವಾಗಿ ಬೆರೆತ, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿದ. ತನ್ನ ಬೋಧನೆಗೆ ಕಿವಿಗೊಡುವವರೆಲ್ಲಾ ಸರಿಸಮಾನರೆಂದು ಭರವಸೆ ನೀಡಿದ. "ನಿಜ ಮೋಕ್ಷ ಪ್ರಾಪ್ತಿಯು ಸಹ ಮಾನವರ ಸುಖ, ದುಃಖಗಳಿಗೆ ಸ್ಪಂದಿಸುವುದರಿಂದಲೇ ದೊರಕುತ್ತದೆ. ಈ ಮಾರ್ಗವಾಗಿ ಸಂಸಾರವನ್ನು ದಾಟಿರಿ"[79] ಎಂದು ಕರೆ ನೀಡಿದ. 1)ಮನಸ್ಸಿನಿಂದ

ವಿಕಾರಗಳನ್ನು ಹೊರ ಹಾಕುವುದು, ತನ್ನ ಬುದ್ಧಿ ಮತ್ತು ಕ್ರಿಯೆಗಳ ಮೇಲೆ ಹಿಡಿತ ಹೊಂದುವುದು. ಹಾಗೂ ಸಮಾಧಾನದಿಂದ ವರ್ತಿಸುವುದು. 2)ಪಶು, ಪಕ್ಷಿ, ಸಸ್ಯ, ಮನುಷ್ಯ ಸೇರಿದಂತೆ ಎಲ್ಲಾ ಜೀವಿಗಳ ಬಗ್ಗೆ ದಯೆ, ಅನುಕಂಪ, ಪ್ರೀತಿ ಹೊಂದುವುದು. 3)ಅಶಕ್ತರ ಮತ್ತು ಬಡವರ ನೆರವಿಗೆ ಧಾವಿಸುವುದು ಎಂಬ ಮೂರು ಮಾರ್ಗಗಳನ್ನು ಆತ ಜನತೆಯ ಮುಂದಿಟ್ಟ, ಇವುಗಳ ಜೊತೆಗೆ 1)ಎಲ್ಲರಿಗೂ ಸಮಾನ ಅವಕಾಶ 2)ಎಲ್ಲರಿಗೂ ಸಮಾನ ಸ್ಥಾನಮಾನ 3)ವಿಚಾರ ಸ್ವಾತಂತ್ರ್ಯ 4) ವಿಶ್ವ ಸೋದರತೆ ಎಂಬ ಇನ್ನೂ ನಾಲ್ಕು ಅಂಶಗಳನ್ನು ಒತ್ತಿ ಹೇಳಿದ. ಬುದ್ಧನ ಬೋಧನೆ ಆ ಕಾಲದಲ್ಲಿ ಹೊಸದಾಗಿತ್ತು. ಕ್ರಾಂತಿಕಾರಿಯಾಗಿತ್ತು ಹಾಗೂ ಆಕರ್ಷಕವಾಗಿತ್ತು. ಹಾಗಾಗಿ ಶ್ರೀಮಂತರು-ಬಡವರು, ಉತ್ತಮರು- ಕೆಳದರ್ಜೆಯವರು, ರಾಜ, ಮಹಾರಾಜರು-ಪ್ರಜೆಗಳು, ಪಂಡಿತರು-ಪಾಮರರು ಎಲ್ಲರೂ ಬುದ್ಧನ ಬೋಧನೆಗೆ ಕಿವಿಗೊಟ್ಟರು. ಅವರಲ್ಲಿ ಹಲವರಿಗೆ ಈ ಬೋಧನೆ ಹೊಸ ಬೆಳಕನ್ನು ನೀಡಿತು.

"ಬುದ್ಧನ ಮಹಾನ್ ಕ್ರಾಂತಿಕಾರಿ ಸಂದೇಶ ಮೂಲೆ-ಮೂಲೆಗಳಿಗೆ ವ್ಯಾಪಿಸಿತು. ಸಮಚಿತ್ತವುಳ್ಳ ಹಲವಾರು ಬ್ರಾಹ್ಮಣರೂ ಆ ಚಿಂತನೆಗೆ ಮಾರು ಹೋದರು. ಬ್ರಾಹ್ಮಣೇತರರು ವರ್ಣಗಳವರಂತೂ ಸಹಜವಾಗಿಯೇ ಬುದ್ಧನ ಬೋಧನೆಗೆ ತಮ್ಮ ಮನಸ್ಸು ಅರ್ಪಿಸಿದರು. ಇದರ ಪರಿಣಾಮವಾಗಿ, ಆ ಕಾಲದಲ್ಲಿ ಅಂದಿನ ಸ್ಥಾಪಿತ ಸಮಾಜ ವ್ಯವಸ್ಥೆಯ ಅಡಿಪಾಯ ಅಲುಗಾಡಲಾರಂಭಿಸಿತು. ಬುದ್ಧನ ಬೋಧನೆಯು ಬ್ರಾಹ್ಮಣಧರ್ಮದ ಮೂಲ ಆಧಾರವಾಗಿದ್ದ ಅಸಮಾನತೆಯ ಮೇಲೆಯೇ ಪ್ರಹಾರ ಮಾಡಿತ್ತು. ಇದರಿಂದ ಸ್ಫೂರ್ತಿ ಪಡೆದ ಶೋಷಿತರು ಹೆಚ್ಚಿನ ಹರ್ಷೋಲ್ಲಾಸದಿಂದ ಆವೇಶಭರಿತರಾಗಿ ತಮ್ಮ ಹಕ್ಕುಗಳಿಗಾಗಿ ದನಿ ಎತ್ತಿದರು."[80] ಸುತ್ತ ಪೀಟಕದಲ್ಲಿ ಮೊದಲನೆಯವರಾದ " ದೀಘನಿಕಾಯ" ದಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ಟೀಕಿಸುವ ವಿಚಾರಗಳಿವೆ. ಬುದ್ಧ ವರ್ಣವ್ಯವಸ್ಥೆಯನ್ನು ನಿರಾಕರಿಸಿದ್ದ. ಪ್ರಸಿದ್ಧ ಬೌದ್ಧ ಕವಿ ಅಶ್ವಘೋಷನ ರಚನೆಯೆಂದು ಹೇಳಲಾಗುವ "ವಜ್ರ ಸೂಚಿ" ಎಂಬ ಉಪನಿಷತ್ ಗ್ರಂಥದಲ್ಲಿ ಪ್ರಾಚೀನ ವರ್ಣಾಶ್ರಮ ಧರ್ಮದ ಉಗ್ರ ಖಂಡನೆಯಿದೆ. ಪರಿತ್ಯಕ್ತರಿಗೆ, ದಲಿತರಿಗೆ ಬುದ್ಧನು ವಿಶೇಷ ಕರುಣೆ ತೋರಿಸುತ್ತಿದ್ದ. ತನ್ನ ಶಿಷ್ಯ ಸಾರಿಪುತ್ರನ ಮೂಲಕ ಪರಿತ್ಯಕ್ತ ವ್ಯಕ್ತಿಯನ್ನು ಪರಿವರ್ತಿಸಿ ದೀಕ್ಷೆ ಕೊಟ್ಟು ಬುದ್ಧ ಅವನನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳುತ್ತಾನೆ. ಈ ವಿಷಯ ಅಶ್ವಘೋಷನ "ಸಾರಿಪುತ್ರ ಪ್ರಕರಣ" ಎಂಬ ನಾಟಕದಲ್ಲಿದೆ. ರಾಕ್ಷಸ ಪ್ರವೃತ್ತಿಯ ಅಂಗುಲಿಮಾಲನ ಮನಃ ಪರಿವರ್ತನೆ ಮಾಡಿದ ಬುದ್ಧನ ಪ್ರಸಂಗವಂತೂ ಜನಜನಿತ. ದುಷ್ಟ ಪ್ರವೃತ್ತಿಯವರನ್ನು ಕ್ಷಮಿಸುವ ಅದ್ಭುತ ಕ್ಷಮಾಗುಣ ಯೇಸು, ಬುದ್ಧ, ಬಸವ, ಗಾಂಧಿ ಮೊದಲಾದವರಲ್ಲಿ ಇದ್ದಿತೆಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು. ದೊಡ್ಡವರು ಕೇವಲ ತಾವೊಬ್ಬರೇ ದೊಡ್ಡವರಾದರೆ ಸಾಲದು, ಇಡೀ ಸಮಷ್ಟಿಯ ಬದಲಾವಣೆಗೆ ಕಾರಣರಾಗಬೇಕು. ಸಮಷ್ಟಿಯ ಮನಸ್ಸನ್ನು, ಸಮಾಜವನ್ನು ರೂಪಿಸಬೇಕು. ಈ ದೃಷ್ಟಿಯಿಂದ ತನಗೆ ತೊಂದರೆ ಕೊಟ್ಟ ಅನೇಕರನ್ನು ಕ್ಷಮಿಸಿದುದಲ್ಲದೇ ಉತ್ತಮ ಸಂಸ್ಕಾರದ ಸಮಾಜಗಳನ್ನು ನಿರ್ಮಿಸಿದ. ಬುದ್ಧ ನಿಜಕ್ಕೂ ದೊಡ್ಡವರಲ್ಲ. ಮಹಾನ್ ವ್ಯಕ್ತಿಗಳಲ್ಲಿ ಒಬ್ಬ.

ಅಸಮಾನತೆಯ ಭಯಾನಕ ವಾತಾವರಣವೊಂದು ಭಾರತೀಯ ಸಾಮಾಜಿಕ-ಧಾರ್ಮಿಕ ಕ್ಷೇತ್ರದಲ್ಲಿ ಹೊತ್ತಿ ಹೊಗೆಯಾಡುತ್ತಿರುವುದನ್ನು ಕಂಡು ಮಹಾ ಮಾವನತಾವಾದಿ, ಬುದ್ಧನು ಇಂತಹ ಅಮಾನವೀಯ ವ್ಯವಸ್ಥೆಯ ವಿರುದ್ಧ ವೈಚಾರಿಕ ಮತ್ತು ವೈಜ್ಞಾನಿಕ ಕ್ರಾಂತಿಯನ್ನು ಮಾಡಿದ ಭಾರತದ ಮೊದಲ ಮಹಾ ಪುರುಷ. ತಾನು ಜೀವಿಸಿದ ಕಾಲದಲ್ಲಿ ಯಾರಿಗೂ ಕಾಣದ ಕನಸುಗಳಿಗೂ ಗೋಚರವಾಗದ ಕಾರ್ಯ

ಸಾಧನೆಗಳನ್ನು ಮಾಡಿ ತೋರಿಸಿದ ಆದರ್ಶ ಪುರುಷ. ಅವನಾಡಿದ ಮಾತುಗಳು ಈ ದೇಶಕ್ಕೆ ದಾರಿದೀಪ, ಮಾನವ ಸಮಾಜಕ್ಕೆ ದಿಕ್ಸೂಚಿ. ಸಮತೆಯ ಸಮಾಜವನ್ನು ಕಟ್ಟಿದ ಬುದ್ಧನ ಮಾತುಗಳು ಯಾವ ಕಾಲಕ್ಕೂ, ಎಂತಹ ಪರಿಸ್ಥಿತಿಯಲ್ಲಿಯೂ ಪ್ರಸ್ತುತ. ಸಮಾಜಕ್ಕಂಟಿದ್ದ ಜಾತಿ ಎಂಬ ಮುಸುಕನ್ನು ಸರಿಸಿದನು. ಪ್ರತಿಯೊಬ್ಬರೂ ಸಮಾನವಾಗಿ ಬದುಕುವುದನ್ನು ಕಲಿತುಕೊಳ್ಳಬೇಕು. ಮಾನವ ಮಾನವರಲ್ಲಿಯ ಜಾತೀಯತೆ ಎಂಬ ಹೊಲಸು ವಿಚಾರ ಮತ್ತು ಪದ್ಧತಿಯು ಮಾಯವಾಗಬೇಕೆನ್ನುತ್ತಾನೆ. "ಪಶು ಪಕ್ಷಿ ಮೊದಲಾದವುಗಳಲ್ಲಿ ಅವುಗಳ ಆಕಾರಾದಿಗಳಿಂದ ಭಿನ್ನಭಿನ್ನ ಜಾತಿಗಳು ದೊರೆಯುವಂತೆ ಮನುಷ್ಯರಲ್ಲಿ ದೊರೆಯುವುದಿಲ್ಲ. ಎಲ್ಲಾ ಮನುಷ್ಯರೂ ಒಬ್ಬರಂತೆಯೇ ಇರುವುದರಿಂದ ಮನುಷ್ಯರಲ್ಲಿ ಜಾತಿಭೇದ ಮಾಡಲು ಬರುವುದಿಲ್ಲ ಎಂದು ಬುದ್ಧ ಸ್ಪಷ್ಟಪಡಿಸಿದ್ದಾನೆ.

ಚಾತುರ್ವರ್ಣ ಸಮಾಜ ವ್ಯವಸ್ಥೆಯನ್ನು ಮೊದಲು ವಿರೋಧಿಸಿದವನು ಬುದ್ಧ. "ಬ್ರಾಹ್ಮಣ ತತ್ವದರ್ಶನಗಳಾದ ಅವರ ಧರ್ಮ ಅವರು ಸೃಷ್ಟಿಸಿದ ಚಾತುರ್ವರ್ಣದ ಸಮಾಜ ವ್ಯವಸ್ಥೆ ಎಲ್ಲವೂ ನಿಷೇಧಿಸಲ್ಪಡತಕ್ಕವುಗಳಾಗಿವೆ. ಅವನ್ನೆಲ್ಲ ತಿರಸ್ಕರಿಸಬೇಕು. ಚಾತುರ್ವರ್ಣಕ್ಕೂ ಜಾತಿ ಭೇದಕ್ಕೂ ಖಾಸಗಿ ಆಸ್ತಿ ಪಾಸ್ತಿಗಳಿಗೂ ಎಳ್ಳಷ್ಟು ಕೂಡ ಸ್ಥಾನಮಾನ ಇಲ್ಲದಂಥ ಸಂಘವನ್ನು ಸ್ಥಾಪಿಸಿ ಆದರ್ಶಪ್ರಾಯವಾಗಿ ಬೆಳೆಸಬೇಕು". (ಭಾರತೀಯ ತತ್ವಜ್ಞಾನ ಪೂರ್ವೋಕ್ತ) ಹೀಗೆ ಜಾತಿ ಭೇದ ರಹಿತವಾದ ಸಂಘವನ್ನು ಬುದ್ಧ ಸ್ಥಾಪಿಸಿದ. ಆತನ ಸಂಘದ ಅತ್ಯುಚ್ಚ ಭಿಕ್ಕು ಒಬ್ಬ ದಲಿತನೇ ಆಗಿದ್ದ ಭಿಕ್ಕುಗಳೆಲ್ಲ ಮೈಗೆಲಸವನ್ನು ನಿರಾಕರಿಸಲಿಲ್ಲ. ಆ ಧರ್ಮಕ್ಕೆ ದಲಿತರು-ಕೆಳಜಾತಿಯವರು ಬಹು ಸಂಖ್ಯೆಯಲ್ಲಿ ಸೇರಿದ ಕಾರಣ ಬಹಳ ಸ್ಪಷ್ಟವಿದೆ. ಬೌದ್ಧಧರ್ಮ ತೋರಿದ ನ್ಯಾಯ "ಸಾಮಾಜಿಕ ನ್ಯಾಯ"; ಸಮಾನತೆ ಮತ್ತು ಪ್ರೀತಿ-ದಯೆಯನ್ನು ಅವಲಂಬಿಸಿದ್ದು.

2.8 ಲಿಂಗ ತಾರತಮ್ಯ ವಿರೋಧಿಸಿದನು :

ಬೌದ್ಧಪೂರ್ವ ಕಾಲವು ಶ್ರೇಣೀಕೃತವಾಗಿತ್ತು ಹಾಗೂ ತಾರತಮ್ಯದ ಅಸಮಾನತೆಯನ್ನು ರೂಪಿಸಿತ್ತು. ಅಂದಿನ ಸಮಾಜ ವ್ಯವಸ್ಥೆ ಅಸಮಾನತೆಯ ಕೂಪವಾಗಿತ್ತು. ಬುದ್ಧನು ತಾರತಮ್ಯದ ಅಸಮಾನತೆಯನ್ನು ಪ್ರಶ್ನಿಸಿ, ತರ್ಕ-ನ್ಯಾಯದ ಒರೆಗೆ ಹಚ್ಚಿ ಸ್ಪಷ್ಟನೆ ಮತ್ತು ಉತ್ತರಗಳನ್ನು ಸಮಾಜದಿಂದ ಕೇಳಿ, ತನ್ನ ವಾದವನ್ನು ಮುಂದಿಟ್ಟ. ಅಂದಿನ ಸಮಾಜದಲ್ಲಿದ್ದ ಕಾನೂನುಗಳನ್ನು, ನಿಯಮಗಳನ್ನು ಹಾಗೂ ಇವುಗಳನ್ನು ರೂಪಿಸಲು ಬಳಸಿದ ನೀತಿಯನ್ನು ಖಂಡಿಸಿದ. ವರ್ಣ ವ್ಯವಸ್ಥೆಗೆ ನೀಡಲಾಗಿದ್ದು, ದೈವೀ ಆಧಾರವನ್ನು ಪ್ರಶ್ನಿಸಿದ. ಆರೋಪಿಸಿದ್ದ ಪಾವಿತ್ರ್ಯವನ್ನು ತಿರಸ್ಕರಿಸಿದ. ಯಾವ ಮನುಷ್ಯರೂ ಬ್ರಹ್ಮನ ಮುಖದಿಂದ, ತೋಳುಗಳಿಂದ, ತೊಡೆಗಳಿಂದ ಅಥವಾ ಪಾದಗಳಿಂದ ಹುಟ್ಟಲು ಸಾಧ್ಯವಿಲ್ಲ. ಎಲ್ಲಾ ಮನುಷ್ಯರೂ ತಾಯಿ ಗರ್ಭದಿಂದಲೇ ಜನಿಸುತ್ತಾರೆ ಎಂಬುದನ್ನು ಸಾರಿ ಹೇಳಿದ. ವರ್ಣಗಳ ಆಧಾರದಲ್ಲಿ ನೀಡಲಾಗಿದ್ದ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಬುದ್ಧನು ಪ್ರಶ್ನಿಸಿದ. ಬ್ರಾಹ್ಮಣರಿಗೆ ಹೆಚ್ಚಿನ ಹಕ್ಕುಗಳನ್ನು ಹಾಗೂ ಶೂದ್ರರಿಗೆ ಕನಿಷ್ಠ ಹಕ್ಕುಗಳನ್ನು ನೀಡಿದ್ದನ್ನು ಖಂಡಿಸಿದ. "ಸದ್ಗುಣಗಳು ಬ್ರಾಹ್ಮಣರ ಸೊತ್ತಲ್ಲ. ಅವು ಎಲ್ಲರಲ್ಲೂ ಇರಲು ಸಾಧ್ಯ. ಯಾವುದೇ ವರ್ಣದ ಪುರುಷ ಅಥವಾ ಮಹಿಳೆ ಸದ್ಗುಣಿಯಾಗಿ, ಸಮಾಜಕ್ಕೆ ಹಿತವನ್ನು ಉಂಟು ಮಾಡಬಲ್ಲರು"[81] ಎಂದು ಬುದ್ಧ ಸಾರಿ ಹೇಳಿದ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಹಾಗೂ ಪುರುಷರು ಮತ್ತು ಸ್ತ್ರೀಯರು ಎಲ್ಲರಿಗೂ ವಿದ್ಯೆ ಅಗತ್ಯ. ಇದನ್ನು ಎಲ್ಲರಿಗೂ ತೆರೆದಿಡಬೇಕು.

ಶೂದ್ರರಿಗೆ ಹಾಗೂ ಮೂರು ವರ್ಣಗಳ ಸ್ತ್ರೀಯರಿಗೆ ವಿದ್ಯೆಯನ್ನು ನಿಷೇಧಿಸಿದ ಅನ್ಯಾಯವನ್ನು ಎಸಗಿದ್ದ ವೈದಿಕಸಿದ್ಧಾಂತವನ್ನು ಬುದ್ಧ ಖಂಡಿಸಿದ.

ಬೌದ್ಧಧರ್ಮದಲ್ಲಿ ಸ್ತ್ರೀಯರು ಅಧಮರಲ್ಲ. ಅವರಿಗೂ ಪುರುಷರಷ್ಟೇ ಧರ್ಮಾಚರಣೆಯ ಅಧಿಕಾರವಿದೆ. ಮೊದಮೊದಲು ಬುದ್ಧ ಸ್ತ್ರೀಯರನ್ನು ಭಿಕ್ಷುಣಿಯರನ್ನಾಗಿ ಸ್ವೀಕರಿಸಲು ಸಿದ್ಧನಿರಲಿಲ್ಲ. ಸ್ತ್ರೀಯರು ಕಷ್ಟ ಸಹಿಷ್ಣುಗಳಲ್ಲ. ಸಂಘದಲ್ಲಿ ತೊಂದರೆಯಾಗಬಹುದೆಂದು ನಿರಾಕರಿಸಿದ. ಆದರೆ ಚಿಕ್ಕಮ್ಮ ಮಹಾಪ್ರಜಾಪತಿ ಗೌತಮಿ ಹಾಗೂ ಯಶೋಧರೆಯರ ಒತ್ತಾಯ ಅತಿಯಾದ್ದರಿಂದ ಸಮ್ಮತಿಸಿದ. ಸ್ತ್ರೀಯರು ಪುರುಷರಂತೆಯೇ ಧರ್ಮಾಚರಣೆ, ಧರ್ಮ ಬೋಧೆಗಳಲ್ಲಿ ನಿರತರಾಗಿದ್ದರು. ಅಂದಿನ ವೈದಿಕಧರ್ಮದ ಪ್ರಾಬಲ್ಯವಿದ್ದ ಕಾಲದಲ್ಲಿ ಇದು ಅತ್ಯಂತ ಕ್ರಾಂತಿಕಾರಕ ಎನ್ನಿಸುತ್ತಿತ್ತು. "ಜಗತ್ತಿನಲ್ಲಿ ಮೊಟ್ಟ ಮೊದಲು ವರ್ಣ ವ್ಯವಸ್ಥೆಯನ್ನೂ, ಜಾತಿ ಭೇದವನ್ನೂ ಮತ್ತು ಲಿಂಗ ಭೇದವನ್ನೂ ವಿರೋಧಿಸಿದವನು ಭಗವಾನ್ ಬುದ್ಧ" ಎಂದು ಅಂಬೇಡ್ಕರ್ ಹೇಳಿದ್ದಾರೆ[82] ಬುದ್ಧ ಧರ್ಮದಲ್ಲಿ ಸ್ತ್ರೀಯರೂ ಕೂಡ ಸಮಾನ ಸ್ಥಾನಮಾನಗಳನ್ನು ಪಡೆಯುತ್ತಿದ್ದರು.

ಬುದ್ಧಪೂರ್ವ ಭಾರತದಲ್ಲಿ ಸ್ತ್ರೀಯರ ಸ್ಥಾನ ಉತ್ತಮವಾಗಿರಲಿಲ್ಲ. ಸ್ತ್ರೀಯರಿಗೆ ಸಮಾಜದಲ್ಲಿ, ಧಾರ್ಮಿಕ ರಂಗದಲ್ಲಿ ಪುರುಷರ ಸರಿಸಮನಾಗಿ ಬದುಕಲು ಅವಕಾಶವಿರಲಿಲ್ಲ. ಸ್ತ್ರೀಯರಿಗೆ ಯಾವ ವಿಧವಾದ ಸ್ವಾತಂತ್ರ್ಯವು ಇರಲಿಲ್ಲ. ಮೂಲಭೂತವಾಗಿ ಸ್ತ್ರೀಯರ ಬಗೆಗಿನ ಈ ತಿರಸ್ಕಾರ ಧೋರಣೆಗೆ ವೈದಿಕಧರ್ಮ ಗ್ರಂಥಗಳೇ ಕಾರಣವಾಗಿವೆ. ಸ್ತ್ರೀಯನ್ನು ಕುರಿತು ಅವಹೇಳನಕರ ಭಾಗಗಳು ವೇದಗಳ ಅವಿಭಾಜ್ಯ ಅಂಗಗಳಾಗಿವೆ. ನಂತರ ಧಾರ್ಮಿಕ ಕೃತಿಕಾರರು ನಿಂದಾತ್ಮಕ ಭಾಷೆಯಲ್ಲಿ ಮಹಿಳೆಯನ್ನು ಕುರಿತು ಬರೆದಿದ್ದಾರೆ. ವೈದಿಕ ಕಾಲದಲ್ಲಿ ಹೆಣ್ಣು ಮಗು ಯಾರಿಗೂ ಬೇಡವಾಗಿತ್ತು. ಪ್ರತಿಯೊಬ್ಬರೂ ಪುತ್ರ ಸಂತಾನಕ್ಕಾಗಿ ಪ್ರಾರ್ಥಿಸುತ್ತಿದ್ದರು, ಯಜ್ಞ- ಯಾಗಾದಿಗಳನ್ನು ಆಚರಿಸುತ್ತಿದ್ದರು. ಹೆಣ್ಣು ಶಿಶುವಿನ ಹತ್ಯೆ, ಬಾಲ್ಯ ವಿವಾಹ, ವರದಕ್ಷಿಣೆ, ಬಹುಪತ್ನಿತ್ವ ಬೆಳೆದು ಬಂದು ದುಷ್ಟ ಸಂಪ್ರದಾಯದ ನೆರಳಿನಲ್ಲಿ ಸ್ತ್ರೀ ನರಳುವಂತಾಯಿತು. ಮಹಿಳೆಯರನ್ನು ಅಸ್ಪೃಶ್ಯರಂತೆ ಕಂಡು ಅವಳು ಕೇವಲ ಹೆರಿಗೆಯ ಯಂತ್ರ, ಅವಳ ಕಾರ್ಯಕ್ಷೇತ್ರ ಗೃಹ ಕೃತ್ಯಗಳಿಗೆ ಸೀಮಿತಗೊಳಿಸಿ, ಅವಹೇಳನಕ್ಕೆ ಗುರಿ ಮಾಡಲಾಯಿತು. ವೈದಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರನ್ನು ಮತ್ತು ಸ್ತ್ರೀಯರನ್ನು ಬಳಸಿ, ಬಿಸಾಡು ಎನ್ನುವ ಅರ್ಥದಲ್ಲಿ ವ್ಯವಸ್ಥೆಯನ್ನು ನಿರ್ಮಿಸಿ ಅವರನ್ನು ಇಂದಿಗೂ ಹೀನಾಯವಾಗಿ ಕಾಣಲಾಗುತ್ತಿದೆ. ದೈವಿಕ ಮೌಢ್ಯತೆಯ ಹಿನ್ನೆಲೆಯಲ್ಲಿ ಭಾವುಕತೆಯನ್ನು ಹುಟ್ಟು ಹಾಕಿ ಸ್ತ್ರೀಯರನ್ನು ಕೀಳಾಗಿ ಕಂಡು ಅವಳನ್ನು ಭೋಗದ ವಸ್ತುವನ್ನಾಗಿ ಪರಿಗಣಿಸಿದರು. ಸ್ತ್ರೀ ಅಬಲೆ ಎಂದು ಲಿಂಗ ತಾರತಮ್ಯ ಹುಟ್ಟು ಹಾಕಿದವರು ವೈದಿಕರು. ಆರ್ಯ ಸಂಸ್ಕೃತಿಯ ಕುತಂತ್ರದಿಂದಾಗಿ ಮಹಿಳೆ, ಕೀಳಾದಳು, ಅಬಲೆಯಾದಳು. "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂಬ ಮನುವಿನ ವಿಚಾರದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವೇ ಇಲ್ಲ.

"ಸ್ತ್ರೀ ಪುರುಷರಲ್ಲಿ ನಿಸರ್ಗ ಸಹಜವಾಗಿ ಇದ್ದ ಲಿಂಗಭೇದ ವೈಶಿಷ್ಟ್ಯಗಳೇ ಸಮಾಜ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ನೀತಿಯ ಕಾರಣಗಳಾಗಿ ಬಿಟ್ಟವು ಎಂಬುದು ಹೆಣ್ಣಿನ ಬದುಕಿನ ದುರಂತ. ಸಮಾಜ ವ್ಯವಸ್ಥೆಯಲ್ಲಿ ಮೊತ್ತ ಮೊದಲಿಗೆ ಉಂಟಾದ ಶ್ರೇಣೀಕರಣವೆಂದರೆ ಸ್ತ್ರೀ ಪುರುಷ ತಾರತಮ್ಮವೇ? ಇಬ್ಬರಲ್ಲೂ ನಿಸರ್ಗ ಸಹಜ ಸಮಾನ ವೈಶಿಷ್ಟ್ಯ ಸಾಮರ್ಥ್ಯಗಳೇ ಇರುವ ಸಂದರ್ಭದಲ್ಲೂ ಈ ಲಿಂಗ ತಾರತಮ್ಯದ

ಕುತೂಹಲಕಾರಿಯಾದ ಸಂಗತಿ. ಸಮಾಜ ವ್ಯವಸ್ಥೆಯ ಯಾವ ಹಂತದಲ್ಲಿ ಪುರುಷನು ಮೇಲುಗೈ ಪಡೆಯುವಂತಾಯಿತು. ಆದಾವ ಕಾರಣದಿಂದ ಸ್ತ್ರೀಯು ಅಬಲೆ, ಪರಾಧೀನೆಯಾದಳು ಎಂಬ ಪ್ರಶ್ನೆಗಳಿಗೆ ಮಾನವ ಸಮಾಜದ ಚರಿತ್ರೆಯನ್ನೇ ಶೋಧಿಸಬೇಕಾಗುತ್ತದೆ.[83] ನಮ್ಮ ದೇಶದ ಚರಿತ್ರೆಯನ್ನು ಅವಲೋಕನ ಮಾಡಿದಾಗ- "ವೇದೋಪನಿಷತ್ತುಗ ಕಾಲದಲ್ಲಿ ಸ್ತ್ರೀಯರಿಗಿದ್ದ ಸ್ವಲ್ಪ ಸ್ವಾತಂತ್ರ್ಯವೂ ಅನಂತರ ಮಾಯವಾಗಿತ್ತು. ಸ್ತ್ರೀಯು ಸಂಪೂರ್ಣ ಪುರುಷನ ಸೊತ್ತಾಗಿ, ಆತನ ಭೋಗ ಸಾಮಗ್ರಿಯಾಗಿ ಪರಿಣಮಿಸಿದ್ದಳು. ಆಸ್ತಿಯ ಹಕ್ಕಿಲ್ಲವಾದ್ದರಿಂದ ಆಕೆ ಪುರುಷನನ್ನೇ ಅವಲಂಬಿಸಬೇಕಾಗಿತ್ತು. ಉಚ್ಚ ವರ್ಣೀಯರಲ್ಲಿ ಬಹು ಪತ್ನಿತ್ವ ವ್ಯಾಪಕವಾಗಿತ್ತು. ಉಚ್ಚವರ್ಣಗಳ, ಅದರಲ್ಲೂ ಕ್ಷತ್ರಿಯ ವರ್ಣದ ಕೆಲವು ಸ್ತ್ರೀಯರಿಗೆ ಸ್ವಲ್ಪಮಟ್ಟಿನ ವಿದ್ಯೆ ಮತ್ತು ಲಲಿತ ಕಲೆಗಳನ್ನು ಕಲಿಯುವ ಅವಕಾಶವಿದ್ದರೂ, ವಿಶಾಲ ಸ್ತ್ರೀ ಸಮುದಾಯ ಅವುಗಳಿಂದ ವಂಚಿತವಾಗಿತ್ತು. ವಿಧವೆಯರ ಬಾಳು, ಕಣ್ಣೀರಿನ ಕಾಲುವೆಯಾಗಿತ್ತು. ಇದನ್ನೆಲ್ಲ ಸಮರ್ಧಿಸಲು ಹೆಣ್ಣೆಂದರೆ ಮಾಯೆ, ಆಕೆ ಪಾಪದ ಮೂಲ, ಪರಮಾರ್ಥ ಸಾಧನೆಗೆ ಅಡ್ಡಿ"[84] ಇವೇ ಮೊದಲಾದ ಗೊಡ್ಡು ಧಾರ್ಮಿಕಸಿದ್ಧಾಂತಗಳೂ ಹುಟ್ಟಿ ಬೆಳೆಯಲಾರಂಭಿಸಿದವು. ಹೆಣ್ಣೆಲ್ಲದಿದ್ದರೆ ಈ ಸಿದ್ಧಾಂತಕರ್ತರು ಹೇಗೆ ಹುಟ್ಟಿಕೊಳ್ಳುತ್ತಿದ್ದರೋ ಅವರಿಗೆ ಗೊತ್ತು. ಸ್ತ್ರೀ ಪುರುಷರಲ್ಲಿ ಮೇಲು ಕೀಳಿನ ತಾರತಮ್ಯ ಪರಿಗಣಿಸುವುದೇ ಲಿಂಗ ಭೇದವೆನಿಸುತ್ತದೆ. ಪುರುಷ ಪ್ರಧಾನ ಜಗತ್ತಿನಲ್ಲಿ ಸ್ತ್ರೀಯರನ್ನು ಅಬಲೆ, ಪುರುಷನಿಗೆ ಸಮಾನಳಲ್ಲವೆಂದು ಭಾವಿಸಿ, ಕೀಳಾಗಿ ಕಾಣಲಾಗುತ್ತಿದೆ ಎಂಬುದನ್ನು ಇಂದಿನವರೆಗಿನ ಇತಿಹಾಸ ಹಾಗೂ ಪ್ರಸ್ತುತ ಸ್ಥಿತಿಯಿಂದರಲು ತಿಳಿದು ಬರುತ್ತದೆ. ಸರ್ವ ಪುರುಷರ ಜನನಕ್ಕೆ ಜನನಿ ಮಹಿಳೆ. ಮಹಿಳೆ ಇಲ್ಲದಿದ್ದರೆ, ಮಾನವನ ಉಗಮವೇ ಇಲ್ಲದಂತಾಗುತ್ತಿತ್ತು. ಆದರೆ ಈ ಮಹಿಳೆಯನ್ನೇ ಲಿಂಗಭೇದದಿಂದ ಕೀಳೆಂದು ಪರಿಗಣಿಸಿ ಜೀವನದ ಹಲವು ಸಂದರ್ಭದಲ್ಲಿ ಅವಳು ಬೆಳೆಯಲು ಅವಕಾಶವನ್ನೇ ಕೊಡಲಿಲ್ಲ. ಆಕೆಗೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಆರ್ಧಿಕ, ರಾಜಕೀಯ ಹಕ್ಕುಗಳಿಂದ ವಂಚಿತಗೊಳಿಸಿದ, ಆಕೆಯನ್ನು ಗೃಹಕೃತ್ಯಗಳಿಗೆ ಸೀಮಿತಗೊಳಿಸಿ, ಭೋಗವಿಲಾಸದ ಸಾಮಗ್ರಿ ಮಾಡಿ, ಹೆರುವ ಯಂತ್ರವೆಂದು ಪರಿಗಣಿಸಲಾಗಿದೆ.

"ವೈದಿಕ ದೇವತಾ ಸಮೂಹದಲ್ಲಿ ಸ್ತ್ರೀ ಅಂಶ ನಿಸ್ಸಂಶಯವಾಗಿ ಗೌಣವಾದುದು. ಆರಂಭದ ವೇದಗಳಲ್ಲಿ ಶಿವಶಕ್ತಿಗಳಿಲ್ಲ. ಹಿಂದೂ ಸಂಸ್ಕೃತಿಯಲ್ಲಿ ಶಿವಶಕ್ತಿಯರಂಥ ದೇವತೆಗಳ ಪಾತ್ರ ಅತ್ಯುನ್ನತ ಸ್ಥಾನ ವಹಿಸಿದೆ. ಅವರ ಧಾರ್ಮಿಕ ಭಾವನೆಗಳಲ್ಲಿ ಸ್ತ್ರೀತ್ವ ಪುರುಷತ್ವಕ್ಕಿಂತಲೂ ಮಿಗಿಲು ಎನಿಸದಿದ್ದರೂ ಸಮಾನವಾಗಿದ್ದ ಅಂಶ ಅಲ್ಲಿ ವ್ಯಕ್ತವಾಗುತ್ತದೆ.[85] ಜಾನ್‌ಮಾರ್ಷಲ್ಲರ ಮೇಲಿನ ಮಾತಿನಲ್ಲಿ ದ್ರಾವಿಡ ಸಂಪ್ರದಾಯದಲ್ಲಿ ಶಿವಶಕ್ತಿಯರನ್ನು ಸಮಾನ ಸ್ಥಾನದಲ್ಲಿಟ್ಟು ಆರಾಧಿಸುತ್ತಿದ್ದರಿಂದ ಅದು ಸ್ತ್ರೀ-ಪುರುಷ ಸಮಾನ ಸ್ಥಾನ ಭಾವನೆಯ ಬೆಳಕು ಸಮಾಜದ ಮೇಲೆ ಬೀರುತ್ತಿತ್ತೆಂದು ಅಭಿಪ್ರಾಯವಾಗಿದೆ. ಋಗ್ವೇದ ಕಾಲದಲ್ಲಿಯೆ ಸ್ತ್ರೀಯರ ಸ್ಥಾನಮಾನ ಇಳಿಮುಖವಾಗುತ್ತ ಬಂದಿದೆ. ಮುಂದೆ ಉಪನಿಷತ್ ಕಾಲದಲ್ಲಿ ಬೆಳಗಿದ ಗಾರ್ಗಿ, ಮೈತ್ರೇಯ, ಕಾತ್ಯಾಯನಿ, ಸುಲಭ, ವಡಬಾ ಇವರುಗಳು ಅದ್ವಿತೀಯ ವಿದ್ವಾಂಸ ಸ್ತ್ರೀಯರಾಗಿದ್ದರು. ಗಾರ್ಗಿ ಜನಕನ ಸಭೆಯಲ್ಲಿ ಪುರುಷರಂತೆ ಸಮರ್ಥ ರೀತಿಯಲ್ಲಿ ಯಾಜ್ಞವಲ್ಕನಿಗೆ ಪ್ರಶ್ನೆಗಳನ್ನು ಹಾಕುತ್ತಾಳೆ. ಅವಳ ಪಾಂಡಿತ್ಯ ಅಪಾರವಾಗಿದ್ದರೂ ಪುರುಷ ಸಮಾನಸ್ಥಾನ ಅವಳಿಗೆ ಲಭ್ಯವಿರಲಿಲ್ಲ. ಮೈತ್ರೆಯಿ ಯಾಜ್ಞವಲ್ಕನ ಪತ್ನಿ. ಅವಳು ಅಧ್ಯಾತ್ಮಿಕ ಜ್ಞಾನ ಸಂಪಾದಿಸಿ ಬ್ರಹ್ಮವಾದಿನಿಯವೆನಿಸಿದಳು. ಬೃಹದಾರಣ್ಯ ಕೋಪ ನಿಷತ್ತಿನಲ್ಲಿ ಈ ವಿವರಗಳಿವೆ. -ರಾಮಾಯಣದಲ್ಲಿ ಸೀತೆಯನ್ನು ಅಡವಿಗಟ್ಟಿದ್ದು, ಮಹಾಭಾರತದಲ್ಲಿ

ದ್ರೌಪದಿಯನ್ನು ಜೂಜಾಟಕ್ಕೆ ಹಚ್ಚಿ ಆಕೆಯನ್ನು ಸಭೆಯಲ್ಲಿ ಮಾನಹರಣಗೊಳಿಸಿದ್ದು, ಲಿಂಗಭೇದದಿಂದ ಸ್ತ್ರೀ ಶೋಷಣೆಗೆ ನಿದರ್ಶನಗಳಾಗಿವೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಅತ್ಯಂತ ಹೀನಾಯವಾಗಿ ಪುರುಷ ಸಮಾಜ ಕಾಣುತ್ತ ಬಂದಿದೆ "ಆರ್ಯರು ಭಾರತವನ್ನು ಆತಿಕ್ರಮಣ ಮಾಡಿದ ನಂತರ ಮಹಿಳೆಯರ ವಿರುದ್ಧ ಕೀಳರಿಮೆ ಮತ್ತು ತಾರತಮ್ಯದ ಧೋರಣೆಗಳು ಪ್ರಾರಂಭವಾದವು.[86] ಋಗ್ವೇದದಲ್ಲಿ ಸ್ತ್ರೀ ಕಿರುಬನ ಹೃದಯದವಳು ಎಂದು ಹೇಳಿದರೆ, ಮಹಾಭಾರತದಲ್ಲಿ ಅವಳು ಎಲ್ಲ ಕೆಡುಕಿನ ಬೇರು ಎನ್ನಲಾಗಿದೆ. ರಾಮಾಯಣದ ಪ್ರಕಾರ ಅವಳು ಚಂಚಲೆ, ಖಡ್ಗದಂತೆ ಹರಿತವಾದವಳು, ಬಿರುಗಾಳಿಯಂತೆ ಅಸ್ಥಿರಳು, ಶಾಕ್ತದಲ್ಲಿ ಸ್ತ್ರೀ ಒಂದು ವಸ್ತು ಪದಾರ್ಥ, ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪರಿಕಲ್ಪನೆಯಂತೆ ಹೆರುವವಳು ಸೂತ್ರಿ, ಹೆರುವ ಪ್ರಾಣಿ, ಸ್ತ್ರೀಗೆ ವ್ಯಕ್ತಿತ್ವವೆನ್ನುವುದೇ ಇಲ್ಲ. ಗರ್ಭದ ಅಸ್ತಿತ್ವದಿಂದಲೇ ಪ್ರಾಣಿ ಎನ್ನುವ ಅರ್ಥದಲ್ಲಿ ವ್ಯಕ್ತಿತ್ವವನ್ನು ಪಡೆದುಕೊಂಡವಳು ಎಂದು ಹೇಳುತ್ತಲೇ ಇನ್ನೊಂದೆಡೆ ದೇವತೆಯನ್ನಾಗಿಸಿ ಹೊಗಳುವ, ಸ್ತ್ರೀ ಪೂಜ್ಯನೀಯಳಾದಲ್ಲಿ ದೇವತೆಗಳು ನೆಲೆಸುತ್ತಾರೆಂದು ವರ್ಣಿಸಿ ಹಿಂದೂಧರ್ಮ ಹೇಳುತ್ತದೆ.

"ಪುರುಷ ಬೆಟ್ಟದಷ್ಟು ಕಷ್ಟ ಕೊಟ್ಟರೂ ಕೊಲ್ಲುವಷ್ಟು ಕ್ರೂರಿಯಾದರೂ ತಾಳಬೇಕೆಂಬ ಮನೋಭಾವ ಹಿನ್ನೆಲೆಯಲ್ಲಿ ಹೆಣ್ಣು ಮಹಾ+ಇಳೆ ಎಂಬುದನ್ನು ನೆನಪಿಡಬೇಕಾಗುತ್ತದೆ. ಹೀಗೆ ಕಾಲಾನು ಕಾಲದಿಂದ ಅಸ್ಪೃಶ್ಯಳಾಗಿ, ಮಹಾಸತಿಯಾಗಿ ಬೋಗದ ವಸ್ತುವಾಗಿ ಸಾಲದೆಂಬಂತೆ ಸೂಳೆಯಾಗಿ ಶೋಷಣೆಗೊಳಗಾಗಿದ್ದನ್ನು ಸ್ಪಷ್ಟವಾಗಿ ಕಾಣುತ್ತೇವೆ.[87] (ವೆ.ಬಿ. ಹಿಮ್ಮಡಿ-ಗರತಿಯ ಜೀವನ ಮೌಲ್ಯ) - ಇತಿಹಾಸ ಪರಂಪರೆಯಲ್ಲಿ ಲಿಂಗ ಭೇದ ಮಾಡಿ ಸ್ತ್ರೀ ನಿಂದೆ, ಶೋಷಣೆಗಳು ಒಂದು ಸಹಜ ಪದ್ಧತಿಯಾಗಿ ಬೆಳೆದು ಬಂದಿದೆ. ಕೆಲವು ಧಾರ್ಮಿಕ ಪುರುಷರು ಹೆಣ್ಣನ್ನು ಆಧ್ಯಾತ್ಮ ಪಥದಲ್ಲಿ ಅಡ್ಡಿಯನ್ನೊಡ್ಡುವ ತೊಡಕು; ಆದ್ದರಿಂದ ಆಕೆಯನ್ನು ಮಾಯೆಯಂದು ಆರೋಪಿಸಿದರು. ಮೋಕ್ಷಕ್ಕೆ ಅಡ್ಡಿ ಎಂದು ಜರೆದರು. ಲಿಂಗಭೇದದ ಆಧಾರದಿಂದ ಸ್ತ್ರೀ ಪುರುಷರಲ್ಲಿ ಮೇಲು ಕೀಳೆಂದು ಭಾವಿಸಿ ಸ್ತ್ರೀಯರನ್ನು ಶತಶತಮಾನಗಳಿಂದ ಕ್ರೂರ ಹಿಂಸೆಗೆ ಗುರಿಪಡಿಸಿ, ಸಕಲ ಸೌಲಭ್ಯಗಳಿಂದ ವಂಚಿಸಿ, ಪುರುಷನ ಗುಲಾಮಗಳಾಗಿ, ಆತನ ಇಚ್ಛೆಯ ಭೋಗ ವಸ್ತುವಾಗಿ ಬೆಳೆಸಲಾಗಿದೆ. ಆಕೆಗೆ ವಿದ್ಯೆ, ಜ್ಞಾನ, ಆಧ್ಯಾತ್ಮ, ಧಾರ್ಮಿಕ ಸಂಸ್ಕಾರ, ಆಸ್ತಿ ಮುಂತಾದವುಗಳಲ್ಲಿ ಯಾವ ಅಧಿಕಾರವಿಲ್ಲದಂತೆ ಪುರುಷ ವರ್ಗ ನಡೆಸಿಕೊಂಡಿದೆ.

"ಚಾತುರ್ವರ್ಣದ ನಾಲ್ಕನೇ ನಿಬಂಧನೆ ಈ ನಾಲ್ಕು ವರ್ಣಗಳ ಜನರಿಗೆ ಇರುವ ಶಿಕ್ಷಣದ ಹಕ್ಕುಗಳನ್ನು ಕುರಿತದ್ದು. ಈ ನಾಲ್ಕು ವರ್ಣಗಳಲ್ಲಿ ಮೊದಲಿನ ಮೂರು ವರ್ಣದವರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿತು. ಶೂದ್ರರಾದವರಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದ್ದಿತು. ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ ಕೇವಲ ಶೂದ್ರರಿಗೆ ಮಾತ್ರ ಶಿಕ್ಷಣದ ಹಕ್ಕನ್ನು ನಿರಾಕರಿಸಿರಲಿಲ್ಲ. ಹೆಂಗಸರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಕ್ಕೆ ಸೇರಿದ ಎಲ್ಲ ಹೆಂಗಸರಿಗೂ ಶೂದ್ರರಿಗೂ ಸರಿಸಮನಾತ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದ್ದಿತು "ಚಾತುರ್ವರ್ಣದ ಆಶ್ರಮ ಧರ್ಮದ ಸಾಧನೆ ಕೇವಲ ಮೊದಲಿನ ಮೂರು ವರ್ಗಕ್ಕೆ ಸೇರಿದ ಗಂಡಸರಿಗೆ ಮಾತ್ರ ಲಭಿಸುವಂತಹುದು. ಮೊದಲಿನ ಹಂತವಾದ ಬ್ರಹ್ಮಚರ್ಯಾಶ್ರಮದಲ್ಲಿ ದೊರೆಯಬಹುದಾದ ಶಿಕ್ಷಣವು ಶೂದ್ರರಿಗೆ ಮತ್ತ ಹೆಂಗಸರಿಗೆ (ಎಲ್ಲ ವರ್ಣದ) ಸಾಧ್ಯವಿಲ್ಲ. ಅಂತೆಯೇ ಆಶ್ರಮ ಧರ್ಮದ ಕೊನೆಯ ಹಂತದಲ್ಲಿ ಬರುವ ಸನ್ಯಾಸಕ್ಕೆ ಶೂದ್ರರು ಮತ್ತು ಹೆಂಗಸರು (ಎಲ್ಲ ವರ್ಣದ) ಅನರ್ಹರೆನಿಸುತ್ತಾರೆ"[88] ಈ ಎಲ್ಲ ಅಂಶಗಳನ್ನು ಪರೀಕ್ಷಿಸಿದ

ಬುದ್ಧನು ಈ ವರ್ಣಧರ್ಮವು ಮಾನವನ ಸಹಜ ಬದುಕಿಗೆ ವಿರುದ್ಧವಾದ ಒಂದು ಸಾಮಾಜಿಕ ವ್ಯವಸ್ಥೆ ಎಂದು ತಿಳಿದು ಅದನ್ನು ನಿರಾಕರಿಸಿದನು.

ಭೂಮಿಯ ಮೇಲೆ ಜೀವಿಸುವ ಪ್ರತಿಯೊಬ್ಬರೂ ಸರಿಸಮನಾಗಿ ಜೀವನ ಕಳೆಯಬೇಕು ಎಂಬುದು ಬುದ್ಧನ ವಿಚಾರ ಸರಣಿಯಾಗಿತ್ತು. ಸನಾತನ ಕಾಲದಿಂದಲೂ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಶೋಷಣೆಗೆ ಒಳಗಾದವಳು ಎಂದರೆ ಮಹಿಳೆ. ಪುರುಷ ಸಮಾಜ ಅವಳನ್ನು ಅತಿಯಾಗಿ ಶೋಷಿಸುವುದನ್ನು ಕಂಡ ಬುದ್ಧ ಅವಳಿಗೂ ಸಮಾನಾವಕಾಶಗಳನ್ನು ಕೊಡಬೇಕೆಂದು ಹೇಳಿದ. ಧಾರ್ಮಿಕ, ಸಾಮಾಜಿಕ, ಕ್ರಿಯಾ ವಿಧಿ-ವಿಧಾನಗಳಲ್ಲಿ ಅವಳು ಭಾಗಿಯಾಗುವುದರಿಂದ ಅವಳಿಗೂ ಸ್ವಾತಂತ್ರ್ಯವನ್ನು ಕೊಡಬೇಕಾದುದು ಪುರುಷನ ಆದ್ಯ ಕರ್ತವ್ಯವಾಗಿದೆ ಎಂದು ಬುದ್ಧ ಬೋಧಿಸಿದ. ಸ್ತ್ರೀ ಸಮಾನತೆ ಕುರಿತು ಸುದೀರ್ಘವಾಗಿ ಚರ್ಚಿಸುತ್ತಿದ್ದನು. ಆನಂದ, ಉಪಾಲಿಯವರೊಂದಿಗೆ ಸಮಾಲೋಚಿಸಿ, ಸ್ತ್ರೀಯರು ಶಿಕ್ಷಣ ಪಡೆಯಬೇಕು. ಆದರಿಂದ ಜಗತ್ತಿನ ಘಟನೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು ಬುದ್ಧ ಹೇಳಿದನು. ಶತಮಾನಗಳ ಕಾಲ ಶೋಷಿತಳಾದ ಮಹಿಳೆ ಬುದ್ಧನ ವೈಚಾರಿಕ-ವೈಜ್ಞಾನಿಕ ಕ್ರಾಂತಿಯಿಂದ ತಾನು ಸಬಲಳು ಎಂದು ಅರಿತುಕೊಂಡಳು. ಪುರುಷನಷ್ಟೇ ತಾನು ಜವಾಬ್ದಾರಳು, ಜೀವನದಲ್ಲಿ ಎಲ್ಲವನ್ನು ನೋಡುವ, ಚರ್ಚಿಸುವ, ಧಾರ್ಮಿಕ-ಆಚರಣೆಗಳನ್ನು ಕುರಿತು ಚರ್ಚಿಸುವ ಹಕ್ಕು ಪಡೆದು ಬುದ್ಧನ ಕಾಲದ ಸ್ತ್ರೀ ಸಮಾನವಾಗಿ ಬೆಳೆದು ನಿಂತಳು. ಹಿಂದೂ ಸಾಮಾಜಿಕ ವ್ಯವಸ್ಥೆಯ ಕ್ರಿಯಾ ವಿಧಿಗಳ ಸರಿ ತಪ್ಪುಗಳ ಗುರುತಿಸಿ ಸ್ತ್ರೀ ಶೋಷಣೆಯ ವಿರುದ್ಧ ಪ್ರತಿಭಟಿಸುವ ಹಂತ ತಲುಪಿದಳು.

ಬುದ್ಧನು ತುಳಿತಕ್ಕೊಳಗಾದ ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸಿದನು. ಸಮಾಜದಲ್ಲಿ ಅವರ ಪ್ರಾಮುಖ್ಯತೆ ಏನು ಎಂಬುದನ್ನು ಅವರಿಗೆ ತಿಳಿಸಿದನು. ಅಲ್ಲದೇ ಭಿಕ್ಷುಣಿಯರ ಸಂಘವನ್ನು ನೀತಿ ನಿಯಮಗಳೊಂದಿಗೆ ಸ್ಥಾಪಿಸಿದನು. ಬುದ್ಧನು ಸ್ತ್ರೀಯರನ್ನು ಹೀಗೆಳೆಯಲಿಲ್ಲ. ಆದರೆ ಅವರು ಸ್ವಾಭಾವಿಕವಾಗಿ ಮೃದು ಎಂದು ಪರಿಗಣಿಸಿದ್ದನು. ಸನ್ಯಾಸಿಗಳಾಗಲು ಲಿಂಗವು ಅಡಚಣೆಯಲ್ಲ. ಪಾಲಿಯಲ್ಲಿ ಹಲವಾರು ಕಡೆ ಸ್ತ್ರೀಯರನ್ನು "ಮಾತಾಗವ" ಎಂದರೆ ತಾಯಿ ಸಮೂಹ ಅಥವಾ ತಾಯಿಗಳ ಸಂಘವೆಂದು ಉಲ್ಲೇಖಿಸಲಾಗಿದೆ. ತಾಯಿಯಾಗಿ ಸ್ತ್ರೀ ಬೌದ್ಧ ಧರ್ಮದಲ್ಲಿ ಗೌರವಾನ್ವಿತ ಸ್ಥಾನವನ್ನು ಹೊಂದಿದ್ದಾಳೆ. ಹೆಂಡತಿಯನ್ನು ಗಂಡನ ಅತ್ಯುತ್ತಮ ಸ್ನೇಹಿತೆ ಎಂದು ಪರಿಗಣಿಸಲಾಗಿದೆ. "ದುಡುಕಿನ ವಿಮರ್ಶಕರು ಬೌದ್ಧಧರ್ಮವು ಸ್ತ್ರೀ ವಿರೋಧಿಯೆಂದು ಏಕಪಕ್ಷೀಯವಾದ ಹೇಳಿಕೆ ನೀಡುತ್ತಿದ್ದಾರೆ. ಪ್ರಾರಂಭದಲ್ಲಿ ಬುದ್ಧನು ವಿವೇಚನ ಪೂರ್ಣವಾಗಿ ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳಲು ತಿರಸ್ಕರಿಸಿದನು. ಆದರೆ ಕೊನೆಗೆ ತನ್ನ ಸಾಕಿದ ತಾಯಿ ಪ್ರಜಾಪತಿ ಗೌತಮಿಯ ಬೇಡಿಕೆಗೆ ಓಗೊಟ್ಟು ಭಿಕ್ಷುಣಿಗಳ ಸಂಘವನ್ನು ಸ್ಥಾಪಿಸುತ್ತಾನೆ. ಯಾವ ರೀತಿ ಅರ್ಹಂತ ಸಾರಿಪುತ್ರ ಮತ್ತು ಮೊಗ್ಗಲಾಯನರವರನ್ನು ಭಿಕ್ಷುಗಳ ಸಂಘಕ್ಕೆ ಪ್ರಮುಖ ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು ಅದೇ ರೀತಿ ಅರ್ಹಂತ ಖೇಮ ಮತ್ತು ಉಪ್ಪಲವನ್ನರವರನ್ನು ಭಿಕ್ಕುನಿಯರ ಸಂಘದ ಪ್ರಮುಖ ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು.[89]

ಅನೇಕ ಸ್ತ್ರೀಯರು ಬಿಕ್ಕುನಿ ಸಂಘವನ್ನು ಸೇರಿ ವಿಮೋಚನೆ ಹೊಂದಿ ಹಲವಾರು ವಿಧಗಳಲ್ಲಿ ಪ್ರಸಿದ್ಧರಾದರು. ಅಂತಸ್ತು ಮತ್ತು ಜಾತಿ ಹೊರತುಪಡಿಸಿ ಎಲ್ಲರೂ ಸರ್ವಸಮವಾದ ವೇದಿಕೆಯ ಮೇಲೆ ಕಲೆತರು. ಸಂಪೂರ್ಣ ಶಾಂತಿ ಅನುಭವಿಸಿದರು. ಮತ್ತು ಸ್ವತಂತ್ರವಾಗಿ ಉಸಿರಾಡಿದರು. ಧಾರ್ಮಿಕ

ಕ್ರಿಯೆಗಳಲ್ಲಿ ಸ್ತ್ರೀಯರಿಗೆ ದ್ವಿತೀಯ ಸ್ಥಾನ, ವಿಧವೆ-ಬಂಜೆಯರಿಗೆ ಸ್ಥಾನವೇ ಇಲ್ಲವೆಂಬ ವೈದಿಕ ಧರ್ಮದ ಧೋರಣೆಯನ್ನು ಬುದ್ಧ ತಿರಸ್ಕರಿಸಿದ. ಇದು ಸ್ತ್ರೀ ಬಗೆಗಿದ್ದ ಕೀಳು ಭಾವನೆಯನ್ನು ತೊಡೆದು ಹಾಕಲು ಸಹಾಯಕವಾಯಿತು. ಬೌದ್ಧ ಧರ್ಮದಲ್ಲಿ ಅನೇಕ ಮಹಿಳೆಯರು ಬಿಕ್ಕುನಿಯರಾಗಿ ನಿರ್ವಾಣ ಪಡೆದಿದ್ದೇ ಇದಕ್ಕೆ ಸಾಕ್ಷಿ. ಥೇರೀ ಗಾಥಾ ಇಂಥ ಮಹಿಳೆಯರದೇ ಹಾಡುಗಳ ಸಂಗ್ರಹ ಸಂಘದಲ್ಲಿ ಗೃಹಿಣಿ, ವಿಧವೆ, ಬಂಜೆ,ಎಲ್ಲರಿಗೂ ಸ್ಥಾನ ನೀಡಿದ. ಅಮ್ರಪಾಲಿ ಪ್ರಜಾಪತಿ, ಗೌತಮಿ, ಶುಭ, ಅನುಪಮ, ಸುಮೇಧ, ಖೇಮಾ, ಉಪ್ಪಲವಣ್ಣಾ ಪಟಾಚಾರ, ಧಮ್ಮದಿನ್ನಾ, ನಂದಾ, ಸೋನಾ ಬದ್ಧ ಕುಂಡ ಕೇಸಾ, ಕಪಿಲಬದ್ಧ, ಕಿಸಾಗೌತಮಿ,ಸುಕಲಾ ಹೀಗೆ ಮುಂತಾದ ಸ್ತ್ರೀಯರಿಗೆ ಕೌಟುಂಬಿಕ, ಸಾಮಾಜಿಕ ಸ್ಥಾನಮಾನಗಳನ್ನು ಕಲ್ಪಿಸಿ ಕೊಟ್ಟಿರುವುದು ಬೌದ್ಧ ಧರ್ಮದಲ್ಲಿ ಕಾಣಬಹುದು. ಆಧ್ಯಾತ್ಮಿಕ ಜೀವನದಲ್ಲಿ ಸ್ತ್ರೀಯರೂ ಪುರುಷರ ಸರಿಸಮಾನರೇ ಎಂದು ಬುದ್ಧನು ಅವರಿಗೆ ಉತ್ತೇಜನ ಕೊಟ್ಟನು. 23ಜನ ಸನ್ಯಾಸಿನಿಯರ ಕವನ ಸಂಗ್ರಹವಾದ ಥೇರಿ ಗಾಥಾ ಅಥವಾ ಸೋದರಿಯರ ಕವನಗಳಲ್ಲಿ ಸ್ತ್ರೀಯರು ಸನ್ಯಾಸಿನಿಯರಾಗುವುದಕ್ಕೆ ಅನೇಕ ಕಾರಣಗಳು ಕಂಡು ಬರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸ್ವಗೃಹ ಸಂಬಂಧಿ ಅಸಂತೋಷಗಳಿಂದ ಬಿಡುಗಡೆ ಹೊಂದಬೇಕೆಂಬ ಬಯಕೆ, ಮಕ್ಕಳನ್ನು ಕಳೆದುಕೊಂಡ ದುಃಖದಿಂದ ಬಿಡುಗಡೆ, ವೈಧವ್ಯ, ಸಾಮಾಜಿಕ ಅಪಕೀರ್ತಿ, ಬಡತನ, ಸಂಸಾರ ತಾಪತ್ರಯ, ಬಗ್ಗದಂತಹ ಗಂಡಂದಿರು, ಇತ್ಯಾದಿ ಮುತ್ತು ಎಂಬುವವಳು ಬೀಸುವ ಕಲ್ಲು, ಒರಳು ಮುಂತಾದ ಆರು ಕುಟಿಲ ವಸ್ತುಗಳಿಂದ ಬಿಡುಗಡೆ ಹೊಂದಿರುವುದಾಗಿ ಹೇಳುತ್ತಾಳೆ. ಖೇಮ, ಉಪ್ಪಾಲವನ್ನು, ಪಟಚಾರ, ಬದ್ಧ-ಕುಂಡಲ ಕೇಶ, ಕಿಸಾಗೋತಮಿ, ಧಮ್ಮದಿನ್ನ ಮತ್ತ ವಿಶಾಕ- ಈ ಏಳೂ ಜನ ಮೊದಲಿನ ಬೌದ್ಧಧಮ್ಮದ ಪ್ರಸಿದ್ಧ ಸಪ್ತ ಸ್ತ್ರೀಯರಾಗಿದ್ದರು. ಮೊದಲಿನ ಆರು ಜನ ಸನ್ಯಾಸಿಗಳು, ಕೊನೆಯವಳು ಸಾಮಾನ್ಯ ಸ್ತ್ರೀಯಾಗಿದ್ದಳು.

ಆಮ್ರಪಾಲಿ ಎಂಬ ವೈಶಾಲಿ ವೇಶ್ಯೆ ಸನ್ಯಾಸಿನಿಯಾಗಿದ್ದಳು. ಬುದ್ಧನ ಇನ್ನೊಬ್ಬ ಪ್ರಸಿದ್ಧ ಶಿಷ್ಯೆಯೆಂದರೆ ವಿಶಾಖಾ. ಶ್ರಾವಸ್ತಿಯಲ್ಲಿದ್ದ ಇವಳು ತನ್ನ ಮಾವನಾದ ಮಿಗಾರನನ್ನು ಬೌದ್ಧ ಧರ್ಮಕ್ಕೆ ಮತಾಂತರಗೊಳಿಸಿದ್ದಳು. ಈ ರೀತಿಯಾಗಿ ಸ್ತ್ರೀ ಸಮಾಜದಲ್ಲಿ ಅದ್ಭುತ ಕ್ರಾಂತಿಯುಂಟಾಗಿತ್ತು ಎಂಬುದು "ಥೇರಿಗಾಥಾ" ದಿಂದ ತಿಳಿದು ಬರುತ್ತದೆ. ಥೇರಿಗಾಥಾದಲ್ಲಿ ಹೆಚ್ಚು ಕಡಿಮೆ 70 ಭಿಕ್ಷುಣಿಯರ ಗಾಥೆಗಳು ತುಂಬಿವೆ. ಬುದ್ಧನು ಸ್ತ್ರೀಯರಿಗೆ ಕೊಟ್ಟಿದ್ದ -ಧಾರ್ಮಿಕ, ಸಾಮಾಜಿಕ, ಸಾಂಘಿಕ ಸ್ವಾತಂತ್ರ್ಯ ಎಂತಹುದು ಎಂಬುದು ತಿಳಿದು ಬರುತ್ತದೆ. ಪ್ರಪಂಚದ ಇತಿಹಾಸದಲ್ಲಿ ಸ್ತ್ರೀಯರ ಆಧ್ಯಾತ್ಮಿಕ ವಿಕಾಸಕ್ಕಾಗಿ, ಅವರಿಗಾಗಿಯೇ ಸ್ವತಂತ್ರ ಸಂಘವೊಂದು ಸೃಷ್ಟಿಯಾದದ್ದನ್ನು ಪ್ರಥಮವಾಗಿ ಭಾರತದಲ್ಲಿ ಜೈನ ಪರಂಪರೆಯಲ್ಲಿ ಕಾಣುತ್ತೇವೆ. ಮುಂದೆ ಬುದ್ಧನು ಕೂಡಾ ಅನಿವಾರ್ಯ ಸಂದರ್ಭದಲ್ಲಿ ಆನಂದನ ಒತ್ತಾಯಕ್ಕೆ ಮಣಿದು, ಸ್ತ್ರೀಯರಿಗೂ, ಸಂಘದಲ್ಲಿ ಪ್ರವೇಶ ನೀಡಿದ. ಇದು ಮಹಿಳಾ ಜಗತ್ತಿಗೆ ಸಂದ ವಿಶಿಷ್ಟ ಪ್ರಗತಿಪರ ಕಾಣಿಕೆಯಾಗಿತ್ತು. ಬುದ್ಧನ ಕೃಪೆಯಿಂದ ಅನೇಕ ಶತಮಾನಗಳಿಂದ ಬಂಧನಕ್ಕೊಳಪಟ್ಟಿದ್ದು, ಸ್ತ್ರೀಯರು ಬಿಡುಗಡೆ ಹೊಂದಿ ಸ್ವಾತಂತ್ರ್ಯವನ್ನು ಅನುಭವಿಸಿದರು. ಸ್ತ್ರೀ-ಪುರುಷರ ಮಧ್ಯದ ಅಂತಸ್ತಿನ ತಾರತಮ್ಯ ಇಂದು ಇದ್ದು, ಬುದ್ಧನ ಕಾಲದ ಥೇರ-ಥೇರಿಯರ ಸ್ವಾತಂತ್ರ್ಯ ಸ್ವಾನುಭವದ ನುಡಿಗಳು, ನಿಜ ಬದುಕಿನ ದಾರಿ ತೋರಿಸುತ್ತಿವೆ. ಬುದ್ಧ ಸ್ತ್ರೀ ಸ್ವಾತಂತ್ರ್ಯಕ್ಕೆ ನಾಂದಿ ಹಾಡಿದನು.

"ಮಹಿಳೆಯರ ಸ್ಥಿತಿ-ಗತಿಗಳನ್ನು ವಾಸ್ತವತೆಗಳ ನೆಲೆಗಟ್ಟಿನಲ್ಲಿ ನೇರವಾದ, ವೈಜ್ಞಾನಿಕವಾದ ದೂರದೃಷ್ಟಿ ಯನ್ನೊಳಗೊಂಡ ಸೂತ್ರಗಳಲ್ಲಿ ವಿಶ್ಲೇಷಿಸಿದ ಬುದ್ಧ ಸೈದ್ಧಾಂತಿಕವಾಗಿ ಸ್ಫಟಿಕದಂತೆ ಈ ಸಮಾಜದ

ಕಣ್ತೆರಿಸಿದ್ದಾನೆ. ಅಷ್ಟೇ ಅಲ್ಲ, ಮಹಿಳಾ ಸ್ವಾತಂತ್ರ್ಯ, ಸಮಾನತೆ, ಸಬಲೀಕರಣದ ಪ್ರಯತ್ನ ಮಾಡುವ ಎಲ್ಲರಿಗೂ ಬುದ್ಧ ಮಾದರಿಯಾಗಿ ನಿಲ್ಲುತ್ತಾನೆ.[90] ಕ್ರಿ.ಪೂ. 6ನೆಯ ಶತಮಾನದಲ್ಲಿನ ಸಾಮಾಜಿಕ ಸ್ಥಿತಿಗತಿಗಳು ಬಹಳ ಅರಾಜಕವಾಗಿದ್ದವು. ರಾಜಪ್ರಭುತ್ವ ತನ್ನ ಅಟ್ಟಹಾಸ ಮೆರೆಯುವದರೊಂದಿಗೆ ನೂರಾರು ಬುಡಕಟ್ಟುಗಳು ಕ್ಷೀಣವಾಗಿದ್ದವು. ರಾಜಪ್ರಭುತ್ವವು ತಮ್ಮ ರಾಜ್ಯ ವಿಸ್ತರಣೆಗಾಗಿ ನಿರ್ದಾಕ್ಷಿಣ್ಯವಾಗಿ ಬುಡಕಟ್ಟುಗಳ ಮೇಲೆ ಎರಗಿದವು. ಇದರಿಂದಾಗಿ ಜನಸಾಮಾನ್ಯರ ಬದುಕು ಅಶಾಂತಿಯಿಂದ ದುಸ್ತರವಾದವು. ಹಿಂಸೆ, ಕ್ರೌರ್ಯ, ಲೈಂಗಿಕ ಅತ್ಯಾಚಾರಗಳು, ಪರಸ್ಪರ ದ್ವೇಷಾಸೂಯೆಗಳು ತಾಂಡವಾಡಿದವು. ಸರಳತೆ ಮತ್ತು ಜೀವನ ಪ್ರೀತಿಯನ್ನು ತಮ್ಮ ಶಕ್ತಿಯನ್ನಾಗಿಸಿಕೊಂಡು ಬದುಕುತ್ತಿದ್ದ ಜನರು ಅರಾಜಕ ಪರಿಸ್ಥಿತಿಯಿಂದ ತತ್ತರಿಸಿದರು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬೌದ್ಧ ಧರ್ಮ ಉದಯವಾಯಿತು. ಈ ಧರ್ಮದ ಆಗಮನ ಜನರಲ್ಲಿ ಚೈತನ್ಯ ತುಂಬುವುದರೊಂದಿಗೆ ಆಕರ್ಷಣೀಯವೂ ಆಯಿತು. ಅಂದಿನ ಸಮಾಜವನ್ನು ತನ್ನ ಕಪಿ ಮುಷ್ಠಿಯಲ್ಲಿಟ್ಟುಕೊಂಡಿದ್ದ ವೈದಿಕಧರ್ಮ ಮತ್ತು ಸಂಸ್ಕೃತಿಯನ್ನು ಮೊದಲು ಬೌದ್ಧಧರ್ಮ ಪ್ರತಿಭಟಿಸಿತು. ಬೌದ್ಧಸಂಘಗಳು ದಿನದಿಂದ ದಿನಕ್ಕೆ ಗಟ್ಟಿಯಾಗ ತೊಡಗಿದವು. ಸಮಾಜದ ಎಲ್ಲ ವರ್ಗಗಳಿಂದ, ಜಾತಿಗಳಿಂದ ಬಂದವರು ಬೌದ್ಧಸಂಘ ಸೇರತೊಡಗಿದರು. ಅಲ್ಲಿ ಅಸ್ಪೃಶ್ಯತೆ, ಜಾತೀಯತೆಯ ಸುಳಿವೂ ಇರದಂತೆ ಬೌದ್ಧಸಂಘವನ್ನು ಬೆಳೆಸಲಾಯಿತು. ಆಗ ಬೌದ್ಧ ಸಂಘಗಳಿಗೆ ಸೇರಲು ಉತ್ಸುಹಕರಾಗಿ ಬಂದ ಮಹಿಳೆಯರಿಗೇನೂ ಆದರದ ಸ್ವಾಗತ ಸಿಗಲಿಲ್ಲ. "ಸಾಕಷ್ಟು ಮಹಿಳೆಯರು ಸಂಘ ಸೇರಲು ಬರುತ್ತಿದ್ದಾರೆ. ಅವರನ್ನು ಸೇರಿಸಿಕೊಳ್ಳುವ ಬಗ್ಗೆ ನಿನ್ನ ಅಭಿಪ್ರಾಯವೇನು? ಎಂದು ಬುದ್ಧನ ಶಿಷ್ಯ ಆನಂದ ಪ್ರಶ್ನಿಸಿದ. "ಮಹಿಳೆಯರೊಂದಿಗೆ ಬಹಳ ಜಾಗ್ರತೆಯಿಂದಿರಬೇಕು. ಮತ್ತು ಮಹಿಳೆಯರು ಸಂಘಕ್ಕೆ ಸೇರುತ್ತಾರೆಂದರೆ, ಆ ಸಂಘದ ಆಯುಷ್ಯ ಅರ್ಧಕ್ಕೆ ಮುಗಿಯುವುದು"[91] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಬುದ್ಧ.

ನಂತರ ಬುದ್ಧ ಆಲೋಚಿಸಿದ, ಈ ಸಮಾಜದ ಎಲ್ಲ ದೌರ್ಜನ್ಯ-ಶೋಷಣೆಗೆ ಮೊದಲು ಬಲಿಯಾಗುವವಳು ಮಹಿಳೆ. ಅವರನ್ನು ಸಮಾನವಾಗಿ ಕಂಡು ಸ್ವಾತಂತ್ರ್ಯ ನೀಡಿ, ಸಬಲೀಕರಿಸುವ ಮಹಿಳೆ ತನ್ನ ಸಾಮರ್ಥ್ಯದೊಂದಿಗೆ ಬದುಕುವ ಪರಿ ಕಂಡುಕೊಳ್ಳಬೇಕೆನ್ನುವ ಉತ್ಕಟತೆ ಅವನಲ್ಲಿ ಬಂದಿತು. ಬುದ್ಧ ತನ್ನ ನಿಲುವನ್ನು ಬದಲಿಸಿಕೊಂಡ. ತನ್ನ ಸಂಘದಲ್ಲಿ ಸ್ತ್ರೀಯರಿಗೂ ಪ್ರವೇಶ ನೀಡಿದ. ನೂರಾರು ಮಹಿಳೆಯರು ಬೌದ್ಧ ಸಂಘ ಸೇರಿದರು. ಗೌತಮಿ ಥೇರಿಗಳ ಸಂಘದ ಸಂಸ್ಥಾಪಕಿಯಾದಳು. ಅನೇಕರು ಸಂಘ ಸೇರಿದರು. ಅವರನ್ನು ಸಹಿಷ್ಣುತೆಯಿಂದ ಕಂಡಿದ್ದರಿಂದ ಅವರ ಬದುಕೇ ಬದಲಾಯಿತು. ಪ್ರಸಿದ್ಧ ನೃತ್ಯಗಾತಿ-ಆಮ್ರಪಾಲಿ ಸಂಘ ಸೇರಿದಳು. ಜಾತಕ ಕಥೆಗಳಲ್ಲಿ ಈ ವರ್ಗದ ಮಹಿಳೆಯರ ಬಗ್ಗೆ ಮಾಹಿತಿ ಇದೆ." ಪದ್ಮಾವತಿ, ರುಕ್ಷಿದಾಸಿ, ಸಾರ್ಥಕ, ಭಿಕ್ಷುಣಿ ಶುಭಾ, ಬುದ್ಧ ಕುಂಡಲ, ಕೇಶ ಮುಂತಾದ ಭಿಕ್ಷುಣಿಯರು ಹಾಡುಗಳನ್ನು ರಚಿಸಿದರು. ಅಂಬಪಾಲಿ, ಪದುಮಾವತಿ, ವಿಮಲಾ, ಅರ್ಧಕಾಶಿ ಮೊದಲಾದ ವೇಶ್ಯೆಯರು ಬೌದ್ಧ ಧರ್ಮ ಸ್ವೀಕರಿಸಿ ಭಿಕ್ಷುಣಿಯರಾಗಿ ಬದುಕು ಬದಲಿಸಿ ನಡೆದರು.[92]- ಹೀಗೆ ವೃತ್ತಿ, ವರ್ಗ, ಜಾತಿ, ಅಂತಸ್ತು ಯಾವ ಭೇದಗಳಿಲ್ಲದೆ ಬೌದ್ಧ ಸಂಘಗಳಲ್ಲಿ ಮಹಿಳೆಯರು ಸ್ವತಂತ್ರವನ್ನು ಅನುಭವಿಸಿದರು. ಇದು ಅವರ ಬದುಕಿಗೆ ಒಂದು ಹೊಸ ಚಾಲನೆಯನ್ನು ತಂದು ಕೊಟ್ಟಿತು. ಬುದ್ಧನಿಗಿದ್ದ ಮಾನವ ಪ್ರೀತಿ, ಗೌರವ ಸ್ತ್ರೀಯರ ಘನತೆಯನ್ನು ಎತ್ತರಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿತು.

ಐತಿಹಾಸಿಕ ಅನಿವಾರ್ಯವೆನ್ನುವಂತೆ ಬೌದ್ಧಧರ್ಮದ ಉಗಮಕ್ಕೆ ಕಾರಣನೆನಿಸಿದ ಬುದ್ಧ ತನ್ನ ಕಾಲದ ಸಮಾಜ ರಚನೆಯಲ್ಲಿ ತರಲೆತ್ನಿಸಿದ ಬದಲಾವಣೆಗಳಲ್ಲಿ ಜಾತಿವ್ಯವಸ್ಥೆಯ ನಿರ್ಮೂಲನೆ ಹಾಗೂ ಸ್ತ್ರೀ ವಿಮೋಚನೆಯ ಕಾರ್ಯಗಳು ಪ್ರಧಾನವಾದವು. ಬುದ್ಧನ ಪ್ರಥಮ ಪ್ರಾಶಸ್ತ್ಯ ಎಲ್ಲ ಸ್ತ್ರೀ ಪುರುಷರ ನೈತಿಕ ಹಾಗೂ ಅಧ್ಯಾತ್ಮಿಕ ಉನ್ನತಿಯಾಗಿತ್ತು. ಕೊನೆಯಿಲ್ಲದ ಹುಟ್ಟು ಸಾವುಗಳ ಚಕ್ರದಿಂದ ಬಿಡುಗಡೆಗೊಳಿಸಿ ನಿರ್ವಾಣದ ಅನಂತ ಶಾಂತಿಯೆಡೆಗೆ ಅವರನ್ನು ಕೊಂಡೊಯ್ಯುವುದಾಗಿತ್ತು. ಗೌತಮಬುದ್ಧ ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರಗತಿಪರ ನಿಲುವು ತಾಳಿದವನಾಗಿದ್ದ. ಪುರುಷರಂತೆ ಮಹಿಳೆಯೂ ಆಧ್ಯಾತ್ಮಿಕ ಸಾಧನೆಯ ಉನ್ನತ ಶಿಖರವನ್ನೇರ ಬಲ್ಲಳೆಂಬುದರಲ್ಲಿ ವಿಶ್ವಾಸವಿರಿಸಿದ. ಆತ ತನ್ನ ಸಾಕು ತಾಯಿ ಗೌತಮಿಯನ್ನು ಭಿಕ್ಷುಣಿಯಾಗುವುದಕ್ಕೆ ಅನುಮತಿಸುವುದರ ಮೂಲಕ ಮಹಿಳೆಗೆ ಅತ್ಯುನ್ನತ ಸ್ಥಾನ ನೀಡಿದ. ನಂತರ ಅನೇಕ ಸ್ತ್ರೀಯರು ಸಂಘ ಸೇರಿದರ. ಸಾಧನೆಗೈದ ಭಿಕ್ಷುಣಿಯರಲ್ಲಿ ಕ್ರಮೇಣ ಹೊಸ ಶಕ್ತಿ ಮೂಡಿತು. ಸಿದ್ಧಿಯ ಹಂತವೇರಿದ ಅವರ ಸ್ಫರ್ತಿದಾಯಕ ಅಭಿವ್ಯಕ್ತಿಯೇ "ಥೇರಿ ಗಾಥಾ" ಎಂಬ ಗೀತ-ಗುಚ್ಛವಾಗ ಸಂಕಲಿತಗೊಂಡಿದೆ.

"ಪಾಲಿಭಾಷೆಯ ಬೌದ್ಧ ವಿಚಾರಗಳು ತ್ರಿಪಿಟಕಗಳಲ್ಲಿ ದೊರೆಯುತ್ತಿದ್ದ "ಸುತ್ತಪಿಟಕ" ದ ಭಾಗವಾದ ಖುದ್ಧಕನಿಕಾಯವು ಸಂಕೀರ್ಣ ಸಂಗ್ರಹವಾಗಿದ್ದು, ಅದರಲ್ಲಿ ಬೌದ್ಧಸನ್ಯಾಸಿನಿಯರ ಅಧ್ಯಾತ್ಮಿಕ ಉನ್ನತಿಯನ್ನು ಕುರಿತು ಬೆಳಕು ಚೆಲ್ಲುವ ಏಕೈಕ ಕೃತಿ" ಥೇರಿಗಾಥಾ ಎನಿಸಿದೆ. ಒಟ್ಟು 73 ಭಿಕ್ಷುಣಿಯರು ತಮ್ಮ ಕೌಟುಂಬಿಕ, ಅಧ್ಯಾತ್ಮಿಕ ಬದುಕಿನ ಅನುಭವಗಳನ್ನು, ಅನಿಸಿಕೆಗಳನ್ನು 522 ಪದ್ಯಗಳಲ್ಲಿ ಹೇಳಿಕೊಂಡಿದ್ದಾರೆ. ಇವರ ವೈಯಕ್ತಿಕ ಬದುಕಿನ ಹೋರಾಟ, ವೈರಾಗ್ಯ ಪೂರ್ವದ ಭೋಗ ಜೀವನ, ಬದುಕಿನ ನಶ್ವರತೆಯ ಅರಿವಾದಾಗ ಮಾರ್ಪಾಟಾದ ಬಗೆ ಹೀಗೆ ಅವರ ವೇದನೆ-ಸಂವೇದನೆಗಳು ಒಟ್ಟು ಹದಿನಾರು ಸರ್ಗಗಳಲ್ಲಿ ವ್ಯವಸ್ಥಿತವಾಗಿ ವಿಂಗಡಿಸಲ್ಪಟ್ಟಿವೆ.[93] ಬೇರೆ ಹಿನ್ನೆಲೆಯಿಂದ ಬಂದ ಭಿಕ್ಷುಣಿಯರು ಬುದ್ಧನ ಉಪದೇಶಗಳಿಂದ ಪ್ರಭಾವಿತರಾಗಿ, ಧರ್ಮದ ಸಂಪೂರ್ಣ ಅರ್ಥಗ್ರಹಣ, ಆಚರಣೆಗೆ ಕಾರಣವಾಗಿ ಅರಹಂತ ಪದವನ್ನು ಗಳಿಸಿಕೊಂಡವರಾಗಿದ್ದಾರೆ. ಅಂಥ ಸ್ಥಿತಿ ತಲುಪಿದಾಗ ಬಿಡುಗಡೆ ಸಾಧಿಸಿದ್ದನ್ನು ಶಾಂತಿ-ಸಮಾಧಾನಗಳನ್ನು ಆನಂದವನ್ನು ತಾಳಿದವರಾಗಿದ್ದಾರೆ. ಅವರ ಹಾಡುಗಳ ಕೊನೆಯ ಸಾಲುಗಳಲ್ಲಿ ಈ ಬಗೆಯ ಹರ್ಷೋದ್ಗಾರ ಪ್ರಕಟಗೊಂಡಿವೆ. ಅಭಿರೂಪನಂದಾ, ಅನೋಪಮ, ಆಮ್ರಪಾಲಿ, ನಂದುತ್ತರಾ, ಸುಮೇಧಾ ತಥಾ....ಬೌದ್ಧ ಭಿಕ್ಷುಣಿಯರಲ್ಲಿ ಹಲವರು ಗೃಹಿಣಿಯರಾಗಿದ್ದುಕೊಂಡು, ಕಾರಣಾಂತರಗಳಿಂದ ಜಿಗುಪ್ಸೆಗೊಂಡವರಾಗಿ ಸಂಘ ಸೇರಿದ್ದಾನೆ. ಬಾಳಿನ ಕಷ್ಟ ಸಂಕಷ್ಟಗಳಿಂದ ದುಃಖ ತಪ್ತೆಯರಾಗಿ ನಿಜ ಮಾರ್ಗ ಕಂಡುಕೊಂಡಿದ್ದಾರೆ. ರೂಪಸಿಯಾಗಿ, ವೇಶ್ಯೆಯರಾಗಿದ್ದವರು ಭೋಗ ಜೀವನಕ್ಕೆ ಬೇಸತ್ತು ಅಂತಿಮ ನಿರ್ಧಾರ ಕೈಗೊಂಡಿದ್ದಾರೆ. ಬೌದ್ಧಭಿಕ್ಷುಣಿಯರಿಗೆ ಪ್ರಯತ್ನ ಪೂರ್ವಕವಾಗಿ ಹೊಸ ಬದುಕು ಲಭಿಸಿದೆ. ಬಿಡುಗಡೆ ಹೊಂದಿದ ಇವರು ಕೊನೆಯಲ್ಲಿ ಸ್ವಾತಂತ್ರ್ಯದ ಸಮಾಧಾನವನ್ನು ಅನುಭವಿಸಿದ್ದಾರೆ.

ಸತಿ, ಬಾಲ್ಯ ವಿವಾಹ ಅಲ್ಲಿ ತ್ಯಾಜ್ಯವಾದವು ವೈಯಕ್ತಿಕ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಾದ ಬೌದ್ಧ ಸಂಘದ ಮಹಿಳೆ ಅಂದಿನ ಸಾಮಾಜಿಕ ದುಃಸ್ಥಿತಿಯಿಂದ ಹೊರಬಂದು ಉಸಿರಾಡುವಂತಾಯಿತು. ವಿವಾಹದ ಬಗ್ಗೆಯೂ ಬೌದ್ಧಧರ್ಮ ಬಹಳ ಸ್ಪಷ್ಟವಾದ ಕ್ರಾಂತಿಕಾರಿಯಾದ ನಿಲುವನ್ನು ಹೊಂದಿತ್ತು. ವಿವಾಹವೆಂಬುದು ನಿರ್ಬಂಧವೇನೂ ಅಲ್ಲ. ಬಲವಂತದ ಪ್ರಯೋಗವೂ ಅಲ್ಲ. ಪರಸ್ಪರ ಹೆಣ್ಣು-ಗಂಡು ಸಮಾನವಾದ, ಸ್ಪಷ್ಟ ಹಕ್ಕು-ಕರ್ತವ್ಯಗಳನ್ನು ಹೊಂದಿ ಅರ್ಥ ಮಾಡಿಕೊಂಡು ಸ್ವೀಕರಿಸುವ ನಿರ್ಧಾರವೇ

"ವಿವಾಹ" ಎಂದು. ವಿವಾಹಕ್ಕೆ ಒಂದು ಹೊಸ ಆಯಾಮವನ್ನೇ ನೀಡಲಾಯಿತು. ಶತಶತಮಾನಗಳ ಹಿಂದೆಯೇ ಬುದ್ಧ ಮಹಿಳೆಯ ಸಬಲೀಕರಣದ ಬಗ್ಗೆ ಆರೋಗ್ಯಕರವಾದ ಬದ್ಧತೆಯ ಅಭಿಪ್ರಾಯಗಳನ್ನು ಹೊಂದಿದ್ದ. ಸಬಲೀಕರಣದ ಬಗ್ಗೆ ನಾವು ಮಾತನಾಡುವುದಕ್ಕೂ ಮತ್ತು ವಾಸ್ತವ ಸಬಲೀಕರಣಕ್ಕೂ ನಡುವೆ ಒಂದು ದೊಡ್ಡ ಕಂದಕವಿದೆ ಎಂದು ವಿಶ್ಲೇಷಿಸಿದ ಬುದ್ಧನ ವಿಶ್ಲೇಷಣೆ ಇಂದಿಗೂ ಅಕ್ಷರಶಃ ನಿಜವಾಗಿದೆ.

ಗೌತಮಿಯ ಜೊತೆಗೆ ಸುಮಾರು 500 ಜನ ಮಹಿಳೆಯರು ಬುದ್ಧನ ಸಂಘವನ್ನು ಪ್ರವೇಶಿಸಿ ಬುದ್ಧನು ಪ್ರತಿಪಾದಿಸಿದ ತ್ರಿಸರಣ ಪಂಚಶೀಲ ಅಷ್ಟಾಂಗ ಮಾರ್ಗಗಳ ದಾರಿಯಲ್ಲ ನಡೆದು ನಾಲ್ಕು ಸತ್ಯಗಳನ್ನು ತಿಳಿದುಕೊಂಡರು. ಧಮ್ಮವನ್ನು ಪ್ರಸಾರ ಮಾಡುವಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ಅವರಿಗೂ ಎಂಟು ನಿಯಮಗಳನ್ನು ಬುದ್ಧ ವಿಧಿಸಿದ್ದ. ಸಮಾನತೆ, ಸ್ವಾತಂತ್ರ್ಯ, ಸ್ವಪ್ರಯತ್ನದಿಂದ ನಿರ್ವಾಣ ಪಡೆಯಬಹುದು ಎಂದು ಬುದ್ಧ ಧರ್ಮವು ಪ್ರತಿಪಾದಿಸುತ್ತದೆ. ಜೊತೆಗೆ ಆಸ್ತಿಯ ಹಕ್ಕನ್ನೂ ಸಮರ್ಥಿಸುತ್ತದೆ. "ಬೌದ್ಧರಲ್ಲಿ' ಥೇರಿಗಾಥಾ' ಎನ್ನುವ ಧಾರ್ಮಿಕ ಹಾಡುಗಳನ್ನು ಕುರಿತ ಗ್ರಂಥವು ಪ್ರಾಕೃತದಲ್ಲಿದೆ. ಇದನ್ನು ರಚಿಸಿದವರು ಸುಮಾರು ಎಪ್ಪತ್ತೂರು ಜನ ಸ್ತ್ರೀ ಸನ್ಯಾಸಿನಿಯರು ಎಂದು ಹೇಳಲಾಗುತ್ತದೆ.[94] ಇವರು ಬಹುತೇಕ ವಿದ್ಯಾವತಿಯರು, ಅವರು ಯಾವ ಜಾತಿಯಿಂದಲೇ ಬಂದಿರಲಿ ಒಮ್ಮೆ ಧರ್ಮವನ್ನು ಸ್ವೀಕರಿಸಿದರೆ ಅವರೆಲ್ಲರನ್ನೂ ಥೇರಿಯರೆಂದು ಗುರುತಿಸಲಾಗುತ್ತಿತ್ತೇ ವಿನಃ ಮೊದಲಿನ ಕುಲ ಜಾತಿಗಳನ್ನಾಧರಿಸಿ ಅಲ್ಲ. ಬೌದ್ಧಧರ್ಮವನ್ನು ಸ್ವೀಕರಿಸಿದ ಎಲ್ಲ ಸ್ತ್ರೀಯರೂ ಭಿಕ್ಷುಣಿಯರಾಗಬೇಕೆಂದು ಬುದ್ಧ ಎಲ್ಲಿಯೂ ಹೇಳಿಲ್ಲದಿರುವುದು ಗಮನಾರ್ಹ. ನಿರ್ವಾಣ ಹೊಂದುವುದು ಎಲ್ಲರಿಂದ ಸಾಧ್ಯವಿಲ್ಲ. ಕಠಿಣ ಪರಿಶ್ರಮದಿಂದ ಮಾತ್ರ ಅದನ್ನು ಸಾಧಿಸಬಹುದು. ಸಂಸಾರದಲ್ಲಿದ್ದುಕೊಂಡು ಈ ಧರ್ಮದೆಡೆಗೆ ಒಲವನ್ನು ತೋರಿಸಬಹುದು ಎಂಬ ಮನೋಭಾವವು ಬುದ್ಧನಲ್ಲಿತ್ತೆಂಬುದು ಆತನ ಉಪದೇಶ ಸಾರದಿಂದ ತಿಳಿದು ಬರುತ್ತದೆ. ಜನಸಾಮಾನ್ಯರಿಗೆ ಅರ್ಥವಾಗಲೆಂದೇ ಬುದ್ಧ ಅವರಾಡುವ ಭಾಷೆ "ಪಾಳೀ"ಯಲ್ಲಿಯೇ ಅವರಿಗೆ ಅರ್ಥವಾಗುವಂತೆ ಉಪಮೆಗಳ ಮೂಲಕ, ಉದಾಹರಣೆಗಳ ಮೂಲಕ ಬೋಧಿಸುತ್ತಿದ್ದ.

ಹೊಸ ಧಮ್ಮವನ್ನು ಅಭಿವೃದ್ಧಿಪಡಿಸಲು ಸ್ತ್ರೀಯರು ವಹಿಸಿದ ಕ್ರಿಯಾಶೀಲ ಪಾತ್ರದಿಂದ ಅದರ ಸಂಸ್ಥಾಪಕನ ಜೀವಮಾನದಲ್ಲಿಯೇ ಅದು ಸಾಧಿಸಿದ ಸಾರ್ವತ್ರಿಕ ಜನಪ್ರಿಯತೆಯನ್ನು ತಿಳಿಯಬಹುದು. "ಪ್ರತಿ ಹಂತದಲ್ಲಿಯೂ ಬುದ್ಧ ಧಮ್ಮಕ್ಕೆ ಅಭೂತ ಪೂರ್ವ ಕೊಡುಗೈ ದಾನ ದೊರಕಿತು. ಅದು ಮಹಾಪ್ರಮಾಣದಲ್ಲಿ ಬಹುಷಃ ಮಹತ್ತಮ ಪ್ರಮಾಣದಲ್ಲಿ ಸ್ತ್ರೀಯರಿಂದ ಲಭಿಸಿತು. ಅವರ ವಿಶಿಷ್ಟ ಪ್ರತಿನಿಧಿಯೆಂದರೆ ಗೌರವಾನ್ವಿತ ಗೃಹಸ್ಥೆಯಾದ ಸಾವತ್ತಿಯ ಕೆಳವರ್ಗದ ಶ್ರೀಮಂತ ಪ್ರಜೆಯಾದ ವಿಶಾಖಾ: ಬುದ್ಧನ ಶಿಷ್ಯರು ಸಾವತ್ತಿಗೆ ಬಂದಾಗ ಅವರಿಗೆ ಬೃಹತ್ ಪ್ರಮಾಣದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಒದಗಿಸಲು ವ್ಯಾಪಕ ಸಿದ್ಧತೆಗಳನ್ನು ಮಾಡಿದವಳು. ಅನುಮತಿ ಪಡೆಯಲು ಅವಳು ಹೀಗೆ ಬುದ್ಧನಿಗೆ ಭಿನ್ನವಿಸಿದಳು: "ನಾನು ಬದುಕಿರುವ ತನಕ ಇದು ನನ್ನ ಆಶೆ, ತಂದೆ: ಭ್ರಾತೃ ವರ್ಗಕ್ಕೆ ಮಳೆಗಾಲದಲ್ಲಿ ಉಡುಪುಗಳನ್ನು ಪೂರೈಸುತ್ತೇನೆ. ಇಲ್ಲಿಗೆ ಬರುವ ಅಪರಿಚಿತ ಭಿಕ್ಕುಗಳಿಗೆ ಆಹಾರ ನೀಡುತ್ತೇನೆ. ಈ ಮಾರ್ಗವಾಗಿ ಹೋಗುವ ಭಿಕ್ಕುಗಳಿಗೆ ಆಹಾರ ನೀಡುತ್ತೇನೆ. ಕಾಯಿಲೆಯಾದ ಸೋದರರಿಗೆ ಆಹಾರ ನೀಡುತ್ತೇನೆ. ರೋಗಗ್ರಸ್ತರನ್ನು ಸೇವೆ ಮಾಡುವವರಿಗೆ ಆಹಾರ ನೀಡುತ್ತೇನೆ. ರೋಗಿಗಳಿಗೆ ಔಷಧಿ ಕೊಡುತ್ತೇನೆ. ಪ್ರತಿದಿನ ಅನ್ನದಾನ ಮಾಡುತ್ತೇನೆ, ಸನ್ಯಾಸಿನಿಯಾದ ಸೋದರಿ ಸಮೂಹಕ್ಕೆ ಸ್ನಾನದ ವಸನ

ಕೊಡುತ್ತೇನೆ. ಇದು ನನ್ನ ಆಶೆ, ತಂದೆ, ಕೃಪೆ ಮಾಡಬೇಕು.[95] (Prof. H. Oldenburg, : Buddha P. 169)

ಬುದ್ಧ ಸ್ಥಾಪಿಸಿದ ಸಂಘವೇ ಪ್ರಪಂಚಕ್ಕೆ ಗೊತ್ತಿರುವ ಪ್ರಪ್ರಥಮ ಸನ್ಯಾಸಿಸಂಘ, ಬೇರಾವ ಧರ್ಮ ಪ್ರಚಾರಕರೂ ಎಲ್ಲೆಡೆ ಧರ್ಮವನ್ನು ಹರಡುವ, ಮಾನವ ಜನಾಂಗವನ್ನು ಸೇವೆ ಮಾಡುವ ಇಂಥ ಪವಿತ್ರಕರ ಉತ್ಸಾಹ ತೋರಿಲ್ಲ. ಬೌದ್ಧ ಭಿಕ್ಕುಗಳು ಸತ್ಯ ಮತ್ತು ಸಹೋದರತ್ವದ, ಜ್ಞಾನ ಮತ್ತು ವಿಜ್ಞಾನದ ಜ್ಯೋತಿಯನ್ನು ದೂರ ದೇಶಗಳಿಗೆ ಕೊಂಡೊಯ್ದರು. ಅದು ಹೋದ ಕಡೆಯೆಲ್ಲ ಧಾರ್ಮಿಕ ಸ್ಫೂರ್ತಿ ಮತ್ತು ವಿವೇಕದ ಹೊಸ ಬೆಳಕನ್ನು ಹಚ್ಚಿತು. ಭಾರತವನ್ನು ಮನುಕುಲದ ಆಧ್ಯಾತ್ಮ ಜನನಿಯನ್ನಾಗಿ ಮಾಡಿತು.

2.9 ಮೌಢ್ಯತೆ, ಅನಿಷ್ಟಗಳು ಅನೀತಿಗಳ ಖಂಡನೆ :

ಮೌಢ್ಯತೆ ಅಥವಾ ಮೂಢ ನಂಬಿಕೆಗಳು ಇಂದು ಕೂಡ ನಮ್ಮ ಸಮಾಜವನ್ನು ಬಾಧಿಸುತ್ತಿವೆ. ಬುದ್ಧನ ಕಾಲದ ಮೌಢ್ಯತೆಗೂ ಪ್ರಸ್ತುತ ಸಂದರ್ಭದ ಮೌಢ್ಯತೆಗೂ ಅಷ್ಟೇನೂ ವ್ಯತ್ಯಾಸವಿಲ್ಲ. ಇಂದು ಕೂಡ ನಮ್ಮ ದೇಶದಲ್ಲಿ ಹಳೆಯ ಕಂದಾಚಾರಗಳು, ಮತ ಧರ್ಮಗಳು, ಆಚರಣೆಗಳು, ಕೆಲ ಸಂಪ್ರದಾಯಗಳು, ಸಾಮಾಜಿಕ ಅನಿಷ್ಟಗಳು ಇಂದು ಕೂಡ ನಮ್ಮ ಸಮಾಜವನ್ನು, ಧರ್ಮವನ್ನು, ಮಾನವ ಬದುಕನ್ನು ಆವರಿಸಿ ಸಮಸ್ಯೆಗಳಾಗಿ ಕಾಡುತ್ತಿವೆ. ಇಂತಹ ಮೌಢ್ಯತೆಯನ್ನು ಪ್ರತಿಭಟಿಸಿ ಬುದ್ಧ ಹೊಸ ತತ್ವಗಳನ್ನು ಉಪದೇಶಿಸಿದ. ನಮ್ಮ ಪರಂಪರೆಯ ಮೌಢ್ಯತೆಯನ್ನು ಕಂದಾಚಾರವನ್ನು ಪ್ರತಿಭಟಿಸಿ ನಿಂತು, ಹೊಸ ವಿಚಾರ ಪ್ರಣಾಳಿಯನ್ನು ರೂಪಿಸಿದವರಲ್ಲಿ ಬುದ್ಧ ಮೊದಲಿಗ. ದೈವಿಕ ಧರ್ಮದ ಕಂದಾಚಾರಗಳನ್ನು, ಅವುಗಳ ಪ್ರಯೋಜಕತೆಯನ್ನು ವಿರೋಧಿಸಿ, ಹೊಸ ವಿಚಾರಗಳನ್ನು ವ್ಯಕ್ತಪಡಿಸಿ ಹೊಸ ಧರ್ಮ ಸ್ಥಾಪಿಸಿದ. ಬುದ್ಧ ಸ್ವತಂತ್ರ ವಿಚಾರವಾದಿ, ಪರಂಪರೆಯಿಂದ ಬಂದುದೆಂದೋ, ಶಾಸ್ತ್ರ ಪ್ರಮಾಣವೆಂದೋ, ವೃದ್ಧರ ಹೇಳಿಕೆಯೆಂದೋ ಒಂದು ವಿಷಯವನ್ನು ನಂಬಬೇಕೆಂದು ಹೇಳಲಿಲ್ಲ. ತರ್ಕಸಮ್ಮತವಾದ, ವಿಚಾರಗಮ್ಯವಾದ, ಅನುಭವವೇದ್ಯವಾದುದನ್ನು ಮಾತ್ರ ಅವನಿಗೆ ಸಮ್ಮತು" ಬುದ್ಧನು ಹೇಳಿದ್ದಾನೆಂದು ಸ್ವೀಕರಿಸುವ ಆಗತ್ಯವಿಲ್ಲ." ಎಂದಾತ ಹೇಳಿದ. ಬುದ್ಧ ಧರ್ಮ ವೈಚಾರಿಕ, ನೈತಿಕ ಧರ್ಮ ಹೀಗಾಗಿ ವೈದಿಕ ಧರ್ಮ ದರ್ಶನದ ಪ್ರತಿಭಟನಾ ರೂಪದಲ್ಲಿ ಇದು ಉದಯವಾಯಿತು. ಬುದ್ಧನ ವಿಚಾರಗಳು ಇಂದಿಗೂ ಪ್ರಸ್ತುತ. ಮನುಷ್ಯ ಹಿಂದಿನಿಂದ ಹಲವಾರು ಭಯ, ಭ್ರಮೆ, ಕಾತರತೆಗಳಿಂದ ಬದುಕಿದ್ದು, ಕೆಲ ದುಷ್ಟ ಸಂಪ್ರದಾಯಗಳು ಮೂಢನಂಬಿಕೆಗಳು, ಆಚರಣೆಗಳು, ಅವನ ಬದುಕಿನಲ್ಲಿ ಸೇರಿಕೊಂಡಿವೆ. ಕೆಲವು ಮನುಷ್ಯನಿಗೆ ಮೌಢ್ಯವನ್ನು ತರುತ್ತವೆ. ಮಾನಸಿಕಕ್ಲೇಶಕ್ಕೂ ಕಾರಣವಾಗುತ್ತವೆ. ಅಂತಹ ಅರ್ಥರಹಿತ, ವ್ಯರ್ಥ ಸಂಪ್ರದಾಯಗಳನ್ನು, ಮೂಢ ನಂಬಿಕೆಗಳನ್ನು ಬುದ್ಧ ಖಂಡಿಸುತ್ತಿದ್ದನು. ಅಂತಹ ಹಲವಾರು ಅನಿಷ್ಟಗಳನ್ನು ಬುದ್ಧನು ಖಂಡಿಸಿದನು.

ಒಮ್ಮೆ ಬುದ್ಧ ಪ್ರವಚನ ಮಾಡುವಾಗ, ಅವರಿಗೆ ಸೀನು ಬಂತು. ಆಗ ಪ್ರಚಲಿತ ವಾಡಿಕೆಯಂತೆ ಭಿಕ್ಷುಗಳು ಭಗವಾನರನ್ನು ಕುರಿತು 'ವಜ್ರಾಯಸ್ಸು' ಎಂದರು. ಭಿಕ್ಷಗಳ ಸದ್ದು ಪ್ರವಚನಕ್ಕೆ ಅಡ್ಡ ಬಂದಿತು. ಬುದ್ಧರಿಗೆ ಅಸಮಾಧಾನವಾಯಿತು. "ಭಿಕ್ಷುಗಳೇ, ನೀವು ಹೀಗೆ ಹರಸುವುದರಿಂದ ಒಬ್ಬನ ಆಯಸ್ಸು ವೃದ್ಧಿಸುತ್ತದೆ ಅಥವಾ ಕ್ಷೀಣಿಸುತ್ತದೆಯೆಕ? ಎಂದು ಕೇಳಿದರು. ಆಗ ಭಿಕ್ಷುಗಳು "ಏನೂ ಆಗುವುದಿಲ್ಲ, ಭಂತೆ" ಎಂದರು ಹಾಗಾದರೆ ಬಿಟ್ಟು ಬಿಡಿ" ಎಂಬ ಬುದ್ಧನ ಮಾತನ್ನು ಅರ್ಥ ಮಾಡಿಕೊಂಡು

ಯಾರಾದರೂ ಸೀನಿದರೆ 'ವಜ್ರಾಯಸ್ಸು' ಎಂಬುದನ್ನು ಬಿಟ್ಟು ಬಿಟ್ಟರು. ಆದರೆ ಜನ ಅಸಮಾಧಾನಗೊಂಡರು. ಆಗ ಬುದ್ಧ, ಭಿಕ್ಷುಗಳೇ ಇನ್ನು ಮುಂದೆ ಗೃಹಸ್ಥರಾದವರು 'ವಜ್ರಾಯಸ್ಸು' ಎಂದು ನಿಮಗೆ ಹೇಳಿದರೆ ನೀವು ಅವರಿಗೆ "ದೀರ್ಘಾಯುಗಳಾಗಿ" ಎಂದು ಹರಸಿ, ಗೃಹಸ್ಥರ ಜೀವನದಲ್ಲಿ ಇಂತಹ ಮೂಢ ನಂಬಿಕೆಗಳು ಬೆಳೆದು ಹೋಗಿವೆ. (ಶ್ರೀ ರಂಗರಾಜ್,1980: 191-192) ಎಂದು ಸ್ವತಃ ಬುದ್ಧನೇ ನುಡಿದಿರಬೇಕಾರೆ,ಅಂದು ಆ ರೀತಿಯ ಸಂಪ್ರದಾಯ, ಮೂಢ ನಂಬಿಕೆಗಳು ಸಮಾಜದಲ್ಲಿ ಎಷ್ಟು ಆಳವಾಗಿ ಬೇರುರಿದ್ದವು ಎನ್ನುದು ವಿದಿತವಾಗುತ್ತದೆ[36] ಇಂದೂ ಕೂಡ ಇಂತಹ ಹಲವಾರು ಸಾಮಾಜಿಕ ಅನಿಷ್ಟಗಳನ್ನು ಮೌಢ್ಯತೆಗಳನ್ನು ನಮ್ಮ ಸಮಾಜದಲ್ಲಿ ಕಂಡು ಬರುತ್ತವೆ. ಅಂತಹ ಸಂದರ್ಭದಲ್ಲಿ ಬುದ್ಧನ ಉಪದೇಶ ಇಂದಿಗೂ ಪ್ರಸ್ತುತವೆನಿಸುತ್ತವೆ. ಹಾಗೆಯೇ ಬುದ್ಧ ಪವಾಡಗಳನ್ನು ಕೂಡ ನಿರ್ಭಿಡೆಯಿಂದ ಖಂಡಿಸುತ್ತಿದ್ದ.

ವಿಧಿವಾದವನ್ನು ಯಾರೋ ಒಬ್ಬ ದೇವರು ಮನುಷ್ಯನಿಗೂ ಪ್ರಪಂಚಕ್ಕೂ ಏನಾಗಬೇಕೆಂಬುದನ್ನು ಪೂರ್ವ ನಿರ್ಧಾರ ಮಾಡುತ್ತಾನೆಂಬ, ಅಷ್ಟೇ ಬಾಲಿಷ ಸಿದ್ಧಾಂತವನ್ನು ಬುದ್ಧ ಅಲ್ಲಗಳೆದನು. ಬುದ್ಧನು ಧರ್ಮದಲ್ಲಿನ ಕೆಲ ಅನಿಷ್ಟಗಳು ಇದ್ದು, ಅವುಗಳನ್ನು ತಿರಸ್ಕರಿಸಿದ. ಕರ್ಮಸಿದ್ಧಾಂತದಲ್ಲಿ ಇರುವ ನಂಬಿಕೆ ತಿರಸ್ಕರಿಸಿದ. ಚಾತುರ್ವರ್ಣ್ ಆದರ್ಶ ಎಂಬ ಕಲ್ಪನೆ ತಿರಸ್ಕರಿಸಿದ. ವೇದಗಳು, ದೇವರು, ಆತ್ಮ, ಮೋಕ್ಷ, ಇವುಗಳನ್ನು ತಿರಸ್ಕರಿಸಿದ. ಧಾರ್ಮಿಕ ವ್ರತಗಳು, ಬಲಿ, ಯಜ್ಞಗಳು, ದೇವರು ಮನುಷ್ಯನ್ನು ಸೃಷ್ಟಿಸಿದ ಎಂಬ ನಂಬಿಕೆ ತಿರಸ್ಕರಿಸಿದ. ವಿಧಿಲಿಖಿತ, ಪುನರ್ ಜನ್ಮ, ಮುಂದೇನು? ಎಂಬ ಊಹಾತ್ಮಕ ಕಲ್ಪನೆಗಳನ್ನು ಬುದ್ಧ ತಿರಸ್ಕರಿಸಿದನು. ವೈದಿಕ ವ್ಯವಸ್ಥೆಯ ಕೆಲ ಕಾಲ್ಪನಿಕ ಸಂಪ್ರದಾಯಗಳನ್ನು, ಮೌಢ್ಯತೆಗಳೆಲ್ಲವನ್ನೂ ಬುದ್ಧ ಖಂಡಿಸಿದನು.

ಬೌದ್ಧಧರ್ಮ ಅನೀತಿಯನ್ನು ತಿರಸ್ಕರಿಸಿ ನೈತಿಕತೆಗೆ ಪ್ರಾಮುಖ್ಯತೆ ನೀಡುತ್ತದೆ. ನೀತಿಯು ಮನುಷ್ಯನನ್ನು ಧರ್ಮದ ನಿಯಮಕ್ಕೆ ಒಳಪಡಿಸಿ ಪ್ರಜ್ಞಾಪೂರ್ವಕವಾದ, ನ್ಯಾಯಸಮ್ಮತವಾದ ದಾರಿಯತ್ತ ಕರೆದೊಯ್ಯುತ್ತದೆ. ಮನುಷ್ಯ ಬದುಕಿನಲ್ಲಿ ನೀತಿ ಬಹು ಮುಖ್ಯ ಪ್ರಾಮುಖ್ಯತೆಯನ್ನು ಹೊಂದಿದೆ. ಮಾನವ ನೀತಿ ಮಾರ್ಗದಲ್ಲಿ ನಡೆದರೆ ಬದುಕಿನಲ್ಲಿ ಏನನ್ನಾದರೂ ಸಾಧಿಸಬಹುದು. ಸಮಾಜವನ್ನು ನೀತಿಯ ನೆಲೆಗಟ್ಟಿನ ಮೇಲೆ ಕಟ್ಟಲು ಬುದ್ಧ ಪ್ರಯತ್ನಿಸಿದ. ವೈಚಾರಿಕ ನೆಲೆಯಿಂದ ನೀತಿ ತತ್ವ ಪ್ರತಿಪಾದಿಸಿದ. ಬೌದ್ಧ ಧರ್ಮ ವೈಚಾರಿಕ, ನೈತಿಕ ಧರ್ಮ, ಬೌದ್ಧ ಧರ್ಮದ ನೆಲೆಗಟ್ಟು ನೈತಿಕತೆಯ ಸೋಪಾನ. ನೈತಿಕಚರಣಯೇ ಕೇಂದ್ರಬಿಂದುವಾದ ಈ ಧರ್ಮ ಸ್ವಾಭಾವಿಕವಾಗಿಯೇ ಬೌದ್ಧಿಕ ಕಸರತ್ತಿನ ಸೂಕ್ಷ್ಮ ಸೈದ್ಧಾಂತಿಕ ವಿಚಾರಗಳಿಗೆ ಮಹತ್ವ ಕೊಡಲಿಲ್ಲ. ನಿಜ ದುಃಖ, ಪರ ದುಃಖಗಳನ್ನು ನಿವಾರಿಸುವ ನೈತಿಕ ಆಚರಣೆ ಅದರ ಅವಶ್ಯ ಅಂಗವಾಯಿತು. ಉಪಾಸಕರು ಪಂಚಶೀಲಗಳನ್ನು ಆಚರಿಸಬೇಕು. ಹಿಂಸೆ, ಚೌರ್ಯ, ವ್ಯಭಿಚಾರ, ಅನೃತ, ಸುರಾಪಾನ ಈ ಐದನ್ನು ತ್ಯಜಿಸುವುದೇ ಪಂಚಶೀಲ. ಇದಲ್ಲದೇ ರಾತ್ರಿ ಅಶುದ್ಧ ಭಿಕ್ಷಣ ತ್ಯಾಗ ಸುಗಂಧ ದ್ರವ್ಯ ಲೇಪ ಮಾಡದಿರುವುದು, ನೆಲದ ಮೇಲೆ ಚಾಪೆಯ ಮೇಲೆ ಮಲಗುವುದು, ಗಾನ ನಾಟ್ಯಗಳಲ್ಲಿ ಮನಸ್ಸು ಹಾಕದಿರುವುದು, ಬೆಳ್ಳಿ ಬಂಗಾರ ಮುಟ್ಟದಿರುವುದು, ಈ ಐದು ಸೇರಿ ದಶಶೀಲಗಳಾಗುತ್ತವೆ. ಭಿಕ್ಷುಗಳು ದಶಶೀಲ ಆಚರಿಸುತ್ತಾರೆ.

ನೈತಿಕತೆ ಧಮ್ಮದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ನೈತಿಕತೆ ಬೋಧಿಸಿದವರಲ್ಲಿ ಬುದ್ಧನು ಪ್ರಥಮ ದಾರ್ಶನಿಕನೆನಿಸಿದ್ದಾನೆ. ನೀತಿಗಿಂತ ಮುಖ್ಯವಾದದ್ದು ಮತ್ತೊಂದಿಲ್ಲ. ಮೂಢ ನಂಬಿಕೆ, ದೇವರು, ದೆವ್ವದ ಕಲ್ಪನೆ, ಸ್ವರ್ಗ-ನರಕಗಳ ಕಲ್ಪನೆ ಎಲ್ಲವನ್ನೂ ತಿರಸ್ಕರಿಸಿದ. "ಸಾಮಾನ್ಯ ಮಾನವರನ್ನು ಪ್ರಬುದ್ಧ ಮಾನವರಾಗಿ ಪರಿವರ್ತಿಸುವ ವಿಧಾನವೇ ಬುದ್ಧ ಧರ್ಮ". "ಪ್ರಪಂಚ ದಯಪಾಲಿಸಿರುವ ಅತ್ಯಂತ ಸಹನಶೀಲ ಗುರುಗಳಲ್ಲಿ ಬುದ್ಧ ಒಬ್ಬ. ಆವನು ಪುರೋಹಿತ ಬದ್ಧ ಬದುಕಿನ ಸುಳ್ಳುಗಳಿಂದ ರಾಷ್ಟ್ರವನ್ನು ಉಳಿಸಬೇಕೆಂಬ ತನ್ನ ಆಸೆಯನ್ನು ಸ್ಪಷ್ಟಪಡಿಸಲು ಸಂಕೋಚ ಪಡಲಿಲ್ಲ. ಜಾತಿಗಳೂ ಕಂಚಾಚಾರಗಳೂ ಉಳ್ಳ ಬ್ರಾಹ್ಮಣ ಧರ್ಮದ ಸಾಮ್ರಾಜ್ಯಶಾಹಿ ಸುಲಿಗೆಯನ್ನು ಅವನ ಧರ್ಮ ವಿಶಿಷ್ಟವಾಗಿ ಪ್ರತಿಭಟಿಸಿತು. (1)ವೇದಗಳು ಮತ್ತು ವೈದಿಕ ಆಚರಣೆಗಳ ಬಗ್ಗೆ ತಿರಸ್ಕಾರ (2)ದುಷ್ಟ ಜಾತಿವ್ಯವಸ್ಥೆಯ ಬಗ್ಗೆ ತಿರಸ್ಕಾರ ಮತ್ತು (3)ಜನ ಸಾಮಾನ್ಯರ ಭಾಷೆ ಪಾಳಿಯ ಪರ ಒಲವು, ಉಚ್ಚ ವರ್ಗದ ಭಾಷೆ ಸಂಸ್ಕೃತದ ಬಗ್ಗೆ ತಿರಸ್ಕಾರ ಹೀಗೆ ಆ ಪ್ರತಿಭಟನೆ ವ್ಯಕ್ತವಾಯಿತು. ಅವನ ಸರಳ ಬೋಧನೆಯಲ್ಲಿ ಯಾವುದೇ ಕ್ರಾಂತಿಕಾರಕ ಗುಣವಿರಲಿಲ್ಲ. ಆದರೆ ಉತ್ತಮವೂ, ಉದಾತ್ತವೂ ಆದ ವ್ಯವಸ್ಥೆಯನ್ನು ಕಾಣಲು ಸಾಧ್ಯವಾಗುವಂತೆ ಜನರ ಕುತ್ತಿಗೆಗೆ ನೇತು ಹಾಕಿದ್ದ ಕೀಳು ಭಾವನೆಯ ಬೀಸುಕಲ್ಲನ್ನು ಅವನು ಚೂರು ಚೂರು ಮಾಡಿದನು.[97]

ಬುದ್ಧನ ನೀತಿಸೂಕ್ತಿಗಳು ಮಾನವನ ಅತ್ಯುಚ್ಚ ಭಾವನೆಗಳಿಗೆ ತುಂಬ ಪ್ರಿಯವಾಗಿವೆ." ದ್ವೇಷದಿಂದ ದ್ವೇಷಎಂದೂ ಆರುವುದಿಲ್ಲ, ಪ್ರೀತಿಯಿಂದ ದ್ವೇಷ ಆರುತ್ತದೆ ; ಇದೇ ಅದರ ಸ್ವಭಾವ." "ನಾವು ಸಂತೋಷದಿಂದ ಬಾಳೋಣ, ನಮ್ಮನ್ನು ದ್ವೇಷಿಸುವವರನ್ನು ನಾವು ದ್ವೇಷಿಸದೇ ಇರೋಣ, ನಾವು ದ್ವೇಷ ಮುಕ್ತರಾಗಿ ಬಾಳೋಣ". "ಕೋಪವನ್ನು ಪ್ರೀತಿಯಿಂದ ಗೆಲ್ಲಬೇಕು, ಕೆಡಕನ್ನು ಒಳಿತಿನಿಂದ ಗೆಲ್ಲಬೇಕು, ದುರಾಸೆಯನ್ನು ಔದಾರ್ಯದಿಂದ ಗೆಲ್ಲಬೇಕು. ಸುಳ್ಳನ್ನು ಸತ್ಯದಿಂದ ಗೆಲ್ಲಬೇಕು" (ಧಮ್ಮಪದ)" ಪಾಪ ಮಾಡಬಾರದು, ಒಳ್ಳೆಯದನ್ನೇ ಮಾಡಬೇಕು, ಮನಸ್ಸನ್ನು ಪರಿಶುದ್ಧಗೊಳಿಸಬೇಕು "ಇದೇ ಬುದ್ಧನ ಉಪದೇಶ." ಅವನು ಒಡೆದವರನ್ನು ಕೂಡಿಸುತ್ತಾನೆ. ಸ್ನೇಹಿತರನ್ನು ಪ್ರೋತ್ಸಾಹಿಸುತ್ತಾನೆ. ಶಾಂತಿ ಕರ್ತ, ಶಾಂತಿ ಪ್ರೇಮಿ, ಶಾಂತಿಗಾಗಿ ಆವೇಶ ಭರಿತನಾಗುತ್ತಾನೆ. ಶಾಂತಿ ಮೂಡಿಸುವ ಪುಣ್ಯ ಕಾರ್ಯಗಳ ಬಗ್ಗೆ ಮಾತನಾಡುತ್ತಾನೆ. ಹೀಗವನು ಬಾಳುವೆ ಮಾಡುತ್ತಾನೆ." ಈ ಎಲ್ಲ ಉದ್ಧರಣೆಗಳನ್ನು ಆರ್.ಸಿ.ದತ್ತ ಅವರ " ಬೌದ್ಧಯುಗದ ನಾಗರೀಕತೆ (Civilisation of the Buddhist Age) ಎಂಬ ಗ್ರಂಥದಿಂದ ತೆಗೆದುಕೊಳ್ಳಲಾಗಿದೆ.

"ಯಾವುದೇ ಕಾಲದಲ್ಲಿಯೂ ದ್ವೇಷ ದ್ವೇಷವನ್ನು ಕಡಿಮೆ ಮಾಡುವುದಿಲ್ಲ. ಪ್ರೀತಿ ದ್ವೇಷವನ್ನು ಕಡಿಮೆ ಮಾಡುತ್ತದೆ. ಇದೇ ಧರ್ಮ"-ಗೌತಮಬುದ್ಧ. "ಬುದ್ಧನ ತತ್ವಗಳು ಪ್ರಸಾರವಾದ ಎಲ್ಲಕಡೆ ಜನರ ಮನೋಭಾವದಲ್ಲಿ ಕ್ರಾಂತಿ ಉಂಟಾಯಿತು. ಜಾತಿಯ ಕೃತಕಕಟ್ಟು ಕಟ್ಟಳೆಗಳಿಂದ ಅವರು ಮುಕ್ತರಾಗಿ ತಮ್ಮ ಚಿಂತನೆ ಚಟುವಟಿಕೆ ಮತ್ತು ಅದೃಷ್ಟವನ್ನು ಮಾನವಿಯ ಮೈತ್ರಿ, ಪ್ರೀತಿ ಮತ್ತು ಮಮತೆಯ ಮುಕ್ತ ಹೊಳೆಯಲ್ಲಿ ಹರಿಯ ಬಿಡಲು ತುಂಬ ಆನಂದಿಸಿದರು"[98] ಸ್ವತಂತ್ರ ವಿಚಾರಧಾರೆ, ಧರ್ಮಜಿಜ್ಞಾಸೆ, ಸ್ವಚ್ಛಂಧ ದಾರ್ಶನಿಕ ವಿಚಾರಧಾರೆ ಬುದ್ಧನ ವಿಶೇಷಗಳಾಗಿದ್ದವು. ಯಜ್ಞ ಯಾಗ, ಚಾತುರ್ವರ್ಣ ವ್ಯವಸ್ಥೆ, ಪಶುಹತ್ಯೆ ಹಿಂಸೆಗಳನ್ನು ತೀವ್ರವಾಗಿ ಬುದ್ಧ ಪ್ರತಿಭಟಿಸಿದನು. ಧರ್ಮ ಮತ್ತು ಸಮಾಜವನ್ನು ಕುರಿತಂತೆ ತುಂಬಾ ಪ್ರಗತಿಪರವಾದ ವೈಜ್ಞಾನಿಕ ವಿಚಾರಗಳನ್ನು ಮಂಡಿಸಿದ್ದಾನೆ. ಇರುವ ವ್ಯವಸ್ಥೆಯನ್ನು ಪ್ರತಿಭಟಿಸಿ ಹೊಸದನ್ನು ನಿರ್ಮಿಸಲು ಯತ್ನಿಸಿದನು.

* * * * *

: ಅಡಿ ಟಿಪ್ಪಣಿಗಳು :

1	ಮೂಡ್ನಾಕೂಡು ಚಿನ್ನಸ್ವಾಮಿ :ಮಾತು ಮಂಥನ	ಪುಟ 67
2	ಡಾ: ಟಿ. ವಿಜಯ್(ಸಂಪಾದನೆ) : ಚರಿತ್ರೆ ವಿಶ್ವಕೋಶ-4	ಪುಟ 528
3	ತಾಳ್ತಜೆ ವಸಂತಕುಮಾರ : ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ	ಪುಟ 13
4	ಡಾ:ಬಿ.ಆರ್.ಅಂಬೇಡ್ಕರ್ ಅನು: ಎ.ಡಿ.ಕೃಷ್ಣಯ್ಯ :ಬುದ್ಧ ಮತ್ತು ಬೌದ್ಧಧರ್ಮ	ಪುಟ 245, 246, 247
5	ಜಿ. ವೆಂಕಟಯ್ಯ : ಬುದ್ಧ ದೇವ	-ಪುಟ 67
6	ಮೂಡ್ನಾಕೂಡು ಚಿನ್ನಸ್ವಾಮಿ :ಮಾತು ಮಂಥನ	ಪುಟ 67
7	ಶ್ರೀ ಬಿ.ಡಿ.ಜತ್ತಿ (ಸಂ) : ಶ್ರೀ ಬಸವೇಶ್ವರರು	ಪುಟ 200
8	ಆದೇ ಗ್ರಂಥ	ಪುಟ 207
9	ಬುದ್ಧರಕ್ಕಿತ : ದೀಘನಿಕಾಯ	ಪುಟ 3
10	ಟಿ.ಎಸ್. ರಾಜಗೋಪಾಲ್ : ಕನ್ನಡ ನಾಡು ಕಂಡ ಬೌದ್ಧಯುಗ	ಪುಟ 7
11	ಆರ್. ಸತ್ಯನಾಥ ಅಯ್ಯರ್ : ಪ್ರಾಚೀನ ಭಾರತ	ಪುಟ 65
12	Tripathi : History of Ancient India	Page 101
13	ಜೆ.ಎಸ್.ಕುಳ್ಳಿ : ಬುದ್ಧ, ಬಸವ, ಗಾಂಧಿ	ಪುಟ 8
14	R.C. Hiremath: Buddhism in Karnataka	Page 6,7,8
15	ಆರ್.ಎಸ್. ಶರ್ಮಾ : ಪ್ರಾಚೀನ ಭಾರತ	ಪುಟ 98-99
16	ಡಾ:ರಹಮತ್ ತರಿಕೆರಿ(ಸಂ): ಧರ್ಮ - ವಿಶ್ವಕೋಶ 3	ಪುಟ 230
17	ಡಾ.ಟಿ.ಪಿ.ವಿಜಯ್(ಸಂ): ಚರಿತ್ರೆ - ವಿಶ್ವಕೋಶ 4	ಪುಟ 123
18	ಧರ್ಮಾನಂದ ಕೋಸಂಬಿ : ಭಗವಾನ್ ಬುದ್ಧ	ಪುಟ 111
19	ಡಾ.ಟಿ.ಪಿ.ವಿಜಯ್(ಸಂ): ಚರಿತ್ರೆ - ವಿಶ್ವಕೋಶ 4	ಪುಟ 123
20	ಡಾ.ಮ.ನ.ಜವರಯ್ಯ: ಕನ್ನಡ ಸಾಹಿತ್ಯದಲ್ಲಿ ಶಿವರಾಮಕೃಷ್ಣ ಮತ್ತು ಅಂಬೇಡ್ಕರ್	ಪುಟ 257
21	ಆದೇ ಗ್ರಂಥ	ಪುಟ 258
22	ಶ್ರೀ ಸಿದ್ಧರಾಮೇಶ್ವರ ಶರಣರು : ಭಗವಾನ್ ಬುದ್ಧ	ಪುಟ 12-25
23	ಧರ್ಮಾನಂದ ಕೋಸಂಬಿ: ಭಗವಾನ್ ಬುದ್ಧ	ಪುಟ 120
24	ಬಿ.ವಿ. ರಾಜಾರಾಯ: ಧರ್ಮಪದ	ಪುಟ 17
25	ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ: ಭಾರತೀಯ ದರ್ಶನಗಳು	ಪುಟ 158
26	ಆರ್.ಎಸ್. ಶರ್ಮಾ: ಪ್ರಾಚೀನ ಭಾರತ	ಪುಟ 99
27	ಆದೇ ಗ್ರಂಥ	ಪುಟ 99
28	ಜೆ.ಎಸ್.ಕುಳ್ಳಿ : ಬುದ್ಧ, ಬಸವ, ಗಾಂಧಿ	ಪುಟ 22
29	ಆರ್.ಎಸ್.ಶರ್ಮಾ : ಪ್ರಾಚೀನ ಭಾರತ	ಪುಟ 99
30	ಆದೇ ಗ್ರಂಥ	ಪುಟ 99

31 ಜಿ.ಪಿ. ರಾಜರತ್ನಂ: ಧರ್ಮದಾನಿ ಬುದ್ಧ ಪುಟ 6

32 ಜವಾಹರಲಾಲ್ ನೆಹರೂ : ಭಾರತ ದರ್ಶನ ಪುಟ 153

33 ಆರ್.ಎಸ್. ಶರ್ಮಾ: ಪ್ರಾಚೀನ ಭಾರತ ಪುಟ 99

34 ಸಂವಾದ - ಪತ್ರಿಕೆ ಜನೇವರಿ 2005 ಪುಟ 7

35 ಲೇ. ಕುಳ್ಳಿ ಜೆ.ಎಸ್: ಬುದ್ಧ-ಬಸವ-ಗಾಂಧೀ ಪುಟ 35

36 ಸಿ.ಎಂ. ಮಹದೇವ: ಸಾಹಿತ್ಯ ಮತ್ತು ಸಮೂಹ ಪ್ರಜ್ಞೆ ಪುಟ 62, 63

37 ಆದೇ ಗ್ರಂಥ ಪುಟ 63

38 ಬಿ.ವಿ. ರಾಜಾರಾಂ (ಅನು) : ಧಮ್ಮಪದ ಪುಟ 108, 109

39 ಜಿ.ಪಿ. ರಾಜರತ್ನಂ(ಅನು) : ಪಾಲಿಪಬ್ಬ ಪುಷ್ಪಾಂಜಲಿ ಪುಟ 24

40 ಕುಳ್ಳಿ ಜೆ.ಎಸ್.: ಬುದ್ಧ-ಬಸವ-ಗಾಂಧಿ ಪುಟ 18

41 ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ.11 ಭಾಗ 1 ಪುಟ 135

42 ಆದೇ ಗ್ರಂಥ ಪುಟ 136

43 ಆದೇ ಗ್ರಂಥ ಪುಟ 137

44 ಆದೇ ಗ್ರಂಥ ಪುಟ 140

45 ಆದೇ ಗ್ರಂಥ ಪುಟ 141-142

46 ಆದೇ ಗ್ರಂಥ ಪುಟ 143

47 ಸಿ.ಎಂ.ಮಹದೇವ: ಸಾಹಿತ್ಯ ಮತ್ತು ಸಮೂಹ ಪ್ರಜ್ಞೆ ಪುಟ 64-65

48 ಜಿ.ಪಿ.ರಾಜರತ್ನಂ(ಅನು): ಪಾಲಿಪಬ್ಬ ಪುಷ್ಪಾಂಜಲಿ ಪುಟ 24

49 ಆದೇ ಗ್ರಂಥ ಪುಟ 24

50 ಡಾ. ಬಿ.ಆರ್. ಅಂಬೇಡ್ಕರ : ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್ ಪುಟ 3

51 ಪೂಜ್ಯ ಶ್ರೀ ಆಚಾರ್ಯಬುದ್ಧರಕ್ಕಿತ : ದೀಘನಿಕಾಯ ಸಂ. 3. ಪುಟ 183-185 187-189

52 ಬಿ.ವಿ. ರಾಜಾರಾಂ(ಅನು) : ಧಮ್ಮಪದ - 386 ಪುಟ 107

53 ಡಾ. ಸುಜ್ಞಾತ ಸೂರ್ಯಕಾಂತರವರ ಸಂಶೋಧನಾ ಪ್ರಬಂಧ : ಕನ್ನಡದಲ್ಲಿ ಬುದ್ಧ-ಬಸವ ತೌಲನಿಕ ಅಧ್ಯಯನ ಪುಟ 154

54 ಬಿ.ವಿ. ರಾಜಾರಾಂ (ಅನು) : ಧಮ್ಮಪದ (388) ಪುಟ 106

55 ಜಿ.ಪಿ. ರಾಜಾರಾಂ : ಪಾಲಿಪಬ್ಬ ಪುಷ್ಪಾಂಜಲಿ- ಪುಟ 25

56 ಆದೇ ಗ್ರಂಥ ಪುಟ 25

57 ಪ್ರೋ. ಎಂ. ಮರಿಸ್ವಾಮಿ : ಬೆಳಕಿನ ಧಮ್ಮ- ಪುಟ 8

58 ಎಚ್. ಗಂಗಾಧರನ್ : ಬುದ್ಧ ಭಗವಾನ್ ಪುಟ 59

59 ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ. 11 ಭಾಗ 1 ಪುಟ 139

60 ಬಿ.ವಿ. ರಾಜಾರಾಂ : ಧಮ್ಮಪದ (130) - ಪುಟ 38

61 ವಿಶ್ವದ ಪ್ರಮುಖ ಧರ್ಮಗಳು ಮತ್ತು ಧರ್ಮಗಳು ಸಮನ್ವಯ ಪುಟ 126

62 ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ. 11 ಭಾಗ 1 ಪುಟ 135

63 ಅದೇ ಗ್ರಂಥ ಪುಟ 139

64 ಅದೇ ಗ್ರಂಥ ಪುಟ 138

65 ಡಾ. ಸುಜ್ಞಾತ ಸೂರ್ಯಕಾಂತ :ಕನ್ನಡದಲ್ಲಿ ಬುದ್ಧ- ಬಸವ ತೌಲನಿಕ ಅಧ್ಯಯನ ಪುಟ 179

66 ಹಿರೇಮಲ್ಲೂರು ಈಶ್ವರನ್ ಭಾಗ 2: ಬಸವಣ್ಣ ಮತ್ತು ಲಿಂಗಾಯತಧರ್ಮ ಪುಟ 115

67 ರಂ.ರಾ. ದಿವಾಕರ: ವಚನ ಶಾಸ್ತ್ರ ರಹಸ್ಯ ಪುಟ 118

68 ಹಿರೇಮಲ್ಲೂರು ಈಶ್ವರನ್ ಭಾಗ 2: ಬಸವಣ್ಣ ಮತ್ತು ಲಿಂಗಾಯತ ಧರ್ಮ ಪುಟ 116

69 ಡಾ. ಬಾಬಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ. 11 ಭಾಗ 1 ಪುಟ 142-143

70 ಪ್ರೊ. ಎಂ. ಮರಿಸ್ವಾಮಿ : ಬೆಳಕಿನ ಧಮ್ಮ ಪುಟ 53

71 ಅದೇ ಗ್ರಂಥ ಪುಟ 118

72 ಜಿ.ಪಿ. ರಾಜರತ್ನಂ (ಅನು): ಪಾಲಿಪಬ್ಬ ಪುಷ್ಪಂಜಲಿ ಪುಟ 24

73 ರುಕ್ಮಿಣಿ ಗಿರಿಮಾಜಿ(ಅನು) : ಗೌತಮ ಬುದ್ಧ ಪುಟ 97

74 ವಿಜ್ಜಾಚರಣ ಸಂಪನ್ನ ಗೋತಮ ಬುದ್ಧ ಪುಟ 193-200

75 ಬಿ.ವಿ. ರಾಜಾರಾಂ(ಅನು): ಧಮ್ಮಪದ ಪುಟ 108-109

76 ಪ್ರಜಾವಾಣಿ ಪತ್ರಿಕೆ 25-09-2003 ಕಾಲಂ 3-4 ಪುಟ 5

77 ಅದೇ 29-03-2004 ಕಾಲಂ 6-7 ಪುಟ 9

78 ಅಗ್ನಿ ಪತ್ರಿಕೆ - ಐತಿಹಾಸಿಕ ಧರ್ಮಾಂತರ ಲೇಖನ ಸಿ.ಎಸ್. ದ್ವಾರಕಾನಾಥ ಅಕ್ಟೋಬರ್ 16, 2003 ಪುಟ 10-11

79 ಮುಕ್ತ ಸಮಾಜವಾದಿ ಮಾತುಕತೆ : ನವೆಂಬರ್ - ಡಿಸೆಂಬರ್ 2003 ಪುಟ 9

80 ಅದೇ ಲೇಖನ ಪುಟ 9-10

81 ಅದೇ ಲೇಖನ ಪುಟ 9

82 ಪ್ರೋ.ಎಂ.ಮರಿಸ್ವಾಮಿ - ಬೆಳಕಿನ ಧಮ್ಮ ಪುಟ 96

83 ಡಾ.ಎಚ್. ಎಸ್. ಶ್ರೀಮತಿ : ಸ್ತ್ರೀವಾದ ಪುಟ 6

84 ಎಸ್.ಆರ್.ಭಟ್ : ಪ್ರಾಚೀನ ಭಾರತದಲ್ಲಿ ಜನಜೀವನ ಪುಟ 46

85 ಶ್ರೀ ಸಿದ್ಧರಾಮಶರಣರು ಬೆಲ್ದಾಳ (ಸಂ) - ನಿರ್ಮಿತಿ. ಪುಟ 77

86 ಡಾ. ಟಿ.ಎಂ.ಭಾಸ್ಕರ : ಮಹಿಳೆ ಮತ್ತು ಅಂಬೇಡ್ಕರ್ ಪುಟ 20

87 ಡಾ.ಎಚ್.ಟಿ.ಪೋತೆ : ಫುಲೆ-ಶಾಹು -ಅಂಬೇಡ್ಕರ್ ಪುಟ 87

88 ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ. 11 ಭಾಗ 1 ಪುಟ 137-138

89 ಎಸ್. ನರಸಿಂಹಯ್ಯ : ಬೋಧಿ ಪೂರ್ಣಿಮಾ ಪುಟ 26

90 ಡಾ. ಲೀಲಾ ಸಂಪಿಗೆಯರ ಲೇಖನ: ತೊರೆದ ಯಶೋಧರೆಯ ಜಗತ್ತು ತೆರೆದ ಮಾನಿನಿಯರ ಬದುಕು-ಸುಧಾ ಪತ್ರಿಕೆ 26 ಮೆ. 2005 ಪುಟ 34

91 ಅದೇ ಲೇಖನ ಪುಟ 35

92 ಅದೇ ಲೇಖನ ಪುಟ 35

93 ಡಾ.ಮಧುವೆಂಕಾರೆಡ್ಡಿ :ಬೌದ್ಧ ಭಿಕ್ಷುಣಿಯರ ಬಿಡುಗಡೆಯ ಗಾಥೆ ಲೇಖನ - ಪುಟ 8
ವಿಜಯಕರ್ನಾಟಕ ಪತ್ರಿಕೆ 13 ಜೂನ್, 2004

94 ಕಲ್ಲುಡಿ ಬಸವರಾಜ - ಮಹಾಸತಿ ಆಚರಣೆ ಪುಟ 20

95 ಕೆ.ಎಸ್.ಭಗವಾನ್ : ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ ಪುಟ 105-106

96 ಡಾ.ಸುಜ್ಯಾತ ಸೂರ್ಯಕಾಂತ :ಕನ್ನಡದಲ್ಲಿ ಬುದ್ಧ-ಬಸವ ತೌಲನಿಕ ಅಧ್ಯಯನ ಪುಟ 256

97 ಕೆ.ಎಸ್.ಭಗವಾನ್ : ಹಿಂದೂ ಸಾಮ್ರುಜ್ಯಶಾಹಿಯ ಇತಿಹಾಸ ಪುಟ 95

98 ಆದೇ ಗ್ರಂಥ ಪುಟ 104

# # # # #

ಅಧ್ಯಾಯ - 3

ಬಸವಣ್ಣ

3.1 ಬಸವನ ಬದುಕು ಹಾಗೂ ವಿಚಾರಗಳು.

3.2 ಬಸವಣ್ಣನ ಪ್ರತಿಭಟನಾ ನೆಲೆಗಳು. -ಬಸವತತ್ವ.

3.3 ವರ್ಣವ್ಯವಸ್ಥೆಯ ವಿರುದ್ಧ ಪ್ರತಿಭಟನೆ.

3.4 ವರ್ಗ-ಜಾತಿಯ ವಿರುದ್ಧ ಪ್ರತಿಭಟನೆ.

3.5 ವೇದಗಳು ಯಜ್ಞ ಯಾಗಗಳ ವಿರುದ್ಧ ಪ್ರತಿಭಟನೆ.

3.6 ಕರ್ಮಸಿದ್ಧಾಂತದ ವಿರುದ್ಧ ಪ್ರತಿಭಟನೆ.

3.7 ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಪ್ರತಿಭಟನೆ.

3.8 ಲಿಂಗ ತಾರತಮ್ಯದ ವಿರುದ್ಧ ಪ್ರತಿಭಟನೆ.

3.9 ಮೌಢ್ಯತೆ, ಅನಿಷ್ಟಗಳ ವಿರುದ್ಧ ಪ್ರತಿಭಟನೆ.

ಅಧ್ಯಾಯ - ಮೂರು.

ಬಸವಣ್ಣ

ಬಸವ ಎಚ್ಚತ್ತಮಾನವ, ಕ್ರಾಂತಿಪುರುಷ, ಜನನಾಯಕ, ಪರಂಪರೆಯಿಂದ ಬಂದ ಸಮಾಜದ ತಾರತಮ್ಯ ಬದಲಾಗಬೇಕೆಂಬ ಕ್ರಾಂತಿಯ ಕೇಂದ್ರ ಬಿಂದು, ಬಸವ. ಏಕದೇವೋಪಾಸನೆ, ಶುದ್ಧ ಭಕ್ತಿ, ಕಾಯಕ, ಸ್ತ್ರೀ ಸ್ವಾತಂತ್ರ್ಯ, ದಾಸೋಹ, ವ್ಯಕ್ತಿ ಸ್ವಾತಂತ್ರ್ಯ, ಪರಂಪರೆಯ ಪ್ರತಿಭಟನೆ, ಹೊಸ ಸಮಾಜ ನಿರ್ಮಾಣ- ಇವು ಬಸವನ ವಿಶೇಷ ಸಾಧನೆಗಳು, ಬುದ್ಧನ ನಂತರ ಕಾಣಿಸಿದ ಭಾರತೀಯ ಕ್ರಾಂತಿ ಪುರುಷ ಬಸವ. ವಿಶಾಲ ವಿಶ್ವವನ್ನೇ ಚಿಕ್ಕ ಮನೆಯನ್ನಾಗಿಸಿರುವ ಇಂದಿನ ಸಾವಿರಾರು ಸಾಹಸ ಸಾಧನೆಗಳ ಮಧ್ಯದಲ್ಲಿಯೂ ಮಾನವ - ಮಾನವನ ಅಂತರ ದೂರ ದೂರಾಗಿ, ಅಶಾಂತಿಯೇ ತಾಂಡವಾಡುತ್ತಿದೆ. 'ಮಾನವ ಆಕಾಶದಲ್ಲಿ ಹಕ್ಕಿಯಂತೆ ಹಾರಾಡುವುದನ್ನು ಕಲಿತಿದ್ದಾನೆ. ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆದರೆ ಭೂಮಿಯ ಮೇಲೆ ಮಾನವನಂತೆ ಬದುಕುವುದನ್ನು ಮಾತ್ರ ಇನ್ನೂ ಕಲಿತಿಲ್ಲ' ಎಂಬ ನುಡಿ ಸತ್ಯ. ಇಂದಿನ ಇಂಥ ಮಾನವ ಬಸವನ ಬೋಧೆಯಿಂದ ಶಾಂತಿ ಮೈತ್ರಿ - ಸಮಾನತೆಗಳನ್ನು ಸಾಧಿಸಿ, ನಿಜ ಮಾನವರಾಗಿ ಬಾಳಲು ಸಾಧ್ಯವಿದೆ. ಬಸವ ಜನತೆಯ ಮನುಷ್ಯ, ಆದ್ದರಿಂದಲೇ ಹಲವು ಅರ್ಥಗಳಲ್ಲಿ ಈತ ಕನ್ನಡ ನಾಡಿನ ಮೊದಲಸೋಷಲಿಸ್ಟ್ ಮತ್ತು ಕ್ರಾಂತಿಕಾರ. ಬಸವನ ಬದುಕೇ ಒಂದು ಪ್ರತಿಭಟನೆಯಾಗಿದೆ. ಪ್ರತಿಭಟನೆಯ ಹಲವು ನೆಲೆಗಳು ಬಸವಣ್ಣನ ಬಾಳಿನಲ್ಲಿ ಸಿಗುತ್ತವೆ. ವೈದಿಕಧರ್ಮವನ್ನು ತೊರೆದು ಜನಿವಾರವನ್ನು ಹರಿದು ಬರುವುದೇ ಬಸವಣ್ಣನ ಮೊದಲ ಪ್ರತಿಭಟನೆಯಾಗಿದೆ. ಅಲ್ಲಿಂದ ಆತ ಸಾಂಪ್ರದಾಯಿಕವಾದದ್ದನ್ನೆಲ್ಲ ಪ್ರಶ್ನಿಸುತ್ತ ಪ್ರತಿಭಟಿಸುತ್ತ ಮುಂದೆ ಸಾಗುವ ಕ್ರಿಯೆ ನಿಜವಾದ ಜನಪರ ಮೌಲ್ಯಗಳ ಹುಡುಕಾಟವಾಗುತ್ತದೆ. ಬಸವ ಬ್ರಾಹ್ಮಣನಾಗಿ ಜನಿಸಿದರೂ ಅಂಧಕಾರದ ಗವಿಯ ಬಾಗಿಲು ತೆರೆದರು. ಅರಿವಿನ ಕಿರಣಗಳನ್ನು ಹರಿಸಿ, ವಿಚಾರಶಕ್ತಿ ಪ್ರಚೋದಿಸಿದರು. ಶತಶತಮಾನಗಳಿಂದ ಮಂಕಾಗಿ ಜಂಗು ಹಿಡಿದಿದ್ದ ಮಾನವರ ಬುದ್ಧಿಯನ್ನು ವಿಚಾರದ ಅಲಗನ್ನು ತಮ್ಮ ವಚನಶಕ್ತಿಗಳಿಂದ ಸಾಣೆ ಹಿಡಿದರು. ಆಗ ಅಲಗು ಹರಿತವಾಯಿತು. ಮೌಢ್ಯ ವಿಚಾರಗಳನ್ನು ತುಂಡರಿಸಿ, ಸಂಪ್ರದಾಯವನ್ನು ಪ್ರತಿಭಟಿಸಿದರು.

ಸುಪ್ರಸಿದ್ಧ ಸಂಶೋಧಕರು, ಇತಿಹಾಸಕಾರರು ಆದ ಡಾ.ಪಿ.ಬಿ.ದೇಸಾಯಿಯವರು ತಮ್ಮ "ಶ್ರೀ ಬಸವೇಶ್ವರ ಮತ್ತು ಅವರ ಕಾಲ" (Sri Basaveshwar and his times) ಎಂಬ ಮಹತ್ವ ಪೂರ್ಣವಾದ ಐತಿಹಾಸಿಕ ಗ್ರಂಥದಲ್ಲಿ ಬಸವಣ್ಣನವರ ಘನ ವ್ಯಕ್ತಿತ್ವವನ್ನು ಕುರಿತು ಹೇಳಿದ ಉಕ್ತಿಗಳು ಉಲ್ಲೇಖನೀಯವಾಗಿವೆ. "ಮಗು ಬಸವಣ್ಣನು ಅಸಾಧಾರಣ ಗ್ರಹಣ ಶಕ್ತಿಯುಳ್ಳವನು, ಬಾಲಕ ಬಸವಣ್ಣನು ಅಸಾಮಾನ್ಯ ಬುದ್ಧಿ ಸಾಮರ್ಥ್ಯವುಳ್ಳವನು, ಹದಿವಯದ ಬಸವಣ್ಣನು ಕ್ರಾಂತಿಕಾರಕ ವಿಚಾರಯುಳ್ಳವನು ಮತ್ತು ಕ್ರಿಯಾಶೀಲನು, ರಾಜಕೀಯದಲ್ಲಿ ಉನ್ನತ ಹುದ್ದೆಯಲ್ಲಿದ್ದವನು, ಆಡಳಿತ ಚತುರನು, ಹೊಸಧಾರ್ಮಿಕ ಚಳುವಳಿಯ ಶೂರ ನೇತಾರನು, ಯಾರಿಗೂ ಮಣಿಯದ ಸಮಾಜ ಸುಧಾರಣೆಯ ಪ್ರತಿಪಾದಕನು, ಧಾರ್ಮಿಕ (ಗೊಡ್ಡು) ಸಂಪ್ರದಾಯ, ಅಜ್ಞಾನ ಮತ್ತು ಮೂಢ ನಂಬಿಕೆಗಳ ವಿರುದ್ಧ ಉಗ್ರವಾಗಿ

ಹೋರಾಡಿದವನು, ಮಾನವನ ಗೌರವವನ್ನು ಎತ್ತಿ ಹಿಡಿದವನು, ಸದ್‌ಭಕ್ತಿ, ಸಚ್ಚಾರಿತ್ರ್ಯವುಳ್ಳವರ ಪಕ್ಷಪಾತಿಯು, ಹೊಸಧರ್ಮದ ಮತ್ತು ಹೊಸ ಸಮಾಜ ವ್ಯವಸ್ಥೆಯ ಸಂಸ್ಥಾಪಕನು, ಉತ್ಕೃಷ್ಟ ಸಾಹಿತಿಯು, ಅನುಭಾವಿ ಮತ್ತು ಶರಣನು, ತನ್ನ ಜೀವನದ ಘನೋದ್ದೇಶವನ್ನು ಸಾಧಿಸಿದವನು, ಮುಂದಿನ ಪೀಳಿಗೆಯ ಜ್ಞಾನೋದಯಕ್ಕಾಗಿ ಅವರ ಬೆಳಕಿನ ದಾರಿಯನ್ನು ತೋರಿ ಹೋದವನು ಆಗಿದ್ದನು.[1] ವರ್ಣಾಶ್ರಮ ಧರ್ಮ ಪ್ರತಿಪಾದಿಸಿದ ಗೊಡ್ಡು ಹಾಗೂ ಅಮಾನವೀಯ ಸಂಪ್ರದಾಯದ ವಿರುದ್ಧ ಸಿಡಿದೆದ್ದು, ಆಧ್ಯಾತ್ಮಿಕ, ವೈಚಾರಿಕ ತಳಹದಿಯ ಮೇಲೆ ವರ್ಗರಹಿತ, ವರ್ಣರಹಿತ, ಸರ್ವ ಸಮಾನತೆಯ ಸಮಾಜವನ್ನು ಸ್ಥಾಪಿಸಿದ ಮಹಾ ಮಾನವತಾವಾದಿ ಬಸವಣ್ಣ ಅವರು ಭಾರತದ ಪ್ರಥಮ ವಿಚಾರವಾದಿ ಎಂಬ ಪಾಶ್ಚಾತ್ಯ ಖ್ಯಾತ ಚಿಂತಕರಾದ ಆರ್ಥರ ಮೈಲ್ಸ್ ಹೇಳುವ ಮಾತು ಗಮನಾರ್ಹವಾಗಿದೆ.

"ಬೇರೆಯವರಿಗಿಂತ ಮಿಗಿಲಾಗಿ ಕರ್ನಾಟಕದಲ್ಲಿ ಒಂದು ಸಾಮಾಜಿಕ-ಧಾರ್ಮಿಕ ಆಂದೋಲನದ ನೇತೃತ್ವ ವಹಿಸಿ ನಡೆಸಿದವನು ಬಸವ. ಸತ್ಯ-ಮಿಥ್ಯಗಳ ತಾತ್ವಿಕ ಚರ್ಚೆಯಿಂದ ಮೇಲೇರಿ ತಾನು ಎಲ್ಲಿಂದ ಉದಿಸಿ ಬಂದನೋ ಆ ಸಮಾಜದ ವಿಷಯವಾಗಿ ವ್ಯವಹರಿಸಿದವನು. ಅದರಲ್ಲಿ ವ್ಯಕ್ತವಾಗುತ್ತಿದ್ದ ಅಸಮಾನತೆ ಮತ್ತು ಭ್ರಷ್ಟಾಚಾರಗಳನ್ನು ಪ್ರತಿಭಟಿಸಿದನು. ಇಹದಲ್ಲಿ ಮನ್ನಣೆ ಮತ್ತು ಗೌರವಗಳನ್ನು ಪರದಲ್ಲಿ ಮೋಕ್ಷವನ್ನು ಪಡೆಯಲು ಎಲ್ಲರಿಗೂ ಸಮಾನವಾಗಿ ಹಕ್ಕಿದೆ ಎಂದು ಸಾರಿದನು. ಅವನು ಒಂದು ಸಂಸ್ಥೆಯನ್ನು ಕಟ್ಟಿದನು. ಅವನ ಅನುಯಾಯಿಗಳು ಮುಂದೆ ಅವನ ವಿಚಾರಗಳನ್ನು ಒಂದು ಆಂದೋಲನವಾಗಿ ಬೆಳೆಸಿದರು. ಬಸವನದು ಉತ್ತರ ಕರ್ನಾಟಕದ ಪರಿವರ್ತನಾಶೀಲ ಸಾಮಾಜಿಕ, ಆರ್ಥಿಕ ಸ್ಥಿತಿಯೊಳಗಿಂದ ಮೂಡಿ ಬಂದ ಒಂದು ಸುಧಾರಕ ಹಾಗೂ ಪ್ರತಿಭಟನಾಶೀಲ (ಪ್ರೋಟೆಸ್ಟಂಟ್) ಆಂದೋಲನ"[2] ಬಸವಣ್ಣನವರ ಪ್ರತಿಭಟನೆ ಯೊಂದಿಗೆ ಆರಂಭವಾದ ಸಮಜೋಧಾರ್ಮಿಕ ಆಂಧೋಳನದಲ್ಲಿ ಕಡೆಗಣಿಸಲ್ಪಟ್ಟ ಶೂದ್ರರು, ಪಂಚಮರು ಮತ್ತು ಮಹಿಳೆಯರು ಮೊಟ್ಟ ಮೊದಲ ಬಾರಿಗೆ ಸಕ್ರೀಯವಾಗಿ ಭಾಗವಹಿಸಿದ ಕಾರಣದಿಂದಾಗಿ ಆ ಆಂದೋಲನ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ತನ್ನ ಕಾಲದ ಆಶೋತ್ತರಗಳಿಗೆ ಬಹುಗಟ್ಟಿಯಾದ ಪ್ರತಿಭಟನೆಯನ್ನು ಕೊಟ್ಟ ಬಸವಣ್ಣನವರು ಎಂದೆಂದಿಗೂ ಪ್ರಸ್ತುತ ವೆನಿಸುತ್ತಾರೆ. ವೈದಿಕ ಧರ್ಮದ ಅರ್ಥಹೀನ ಆಚರಣೆಗಳ ಮತ್ತು ಜಾತಿ, ಮತ, ವಿಷಯಕವಾಗಿದ್ದ ತೀರಾ ಸಂಕುಚಿತ ಮನೋಭಾವ ವಿರುದ್ಧ ಹುಟ್ಟಿಕೊಂಡ ವೀರಶೈವ ಧರ್ಮದ ಪರಿಕಲ್ಪನೆ, ಚಿಂತನೆ ಕೇವಲ ಧರ್ಮಕ್ಕಷ್ಟೇ ಸೀಮಿತವಾಗದೆ, ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳನ್ನು ಒಳಗೊಂಡು, ಅತ್ಯಂತ ಪ್ರಗತಿಪರ ವಿಚಾರಧಾರೆಯನ್ನು ರೂಪಿಸಿಕೊಂಡು, ಆ ಕಾಲಕ್ಕೆ ಕಲ್ಪನಗೂ ಸಾಧ್ಯವಾಗದ ಕ್ರಾಂತಿಕಾರಕ ಸ್ವರೂಪ ಪಡೆದುಕೊಂಡದ್ದೇ, ಜಗತ್ತಿನಲ್ಲಿ ಅನನ್ಯ. ಜಾತಿ, ವರ್ಗ, ಲಿಂಗಭೇದಗಳನ್ನು ತೊಡೆದು ಹಾಕಿ ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆ, ಲಿಂಗ ಸಮಾನತೆಗಳ ಅಡಿಪಾಯದ ಮೇಲೆ ಒಂದು ಆದರ್ಶ ಸಮಾಜ, ಸುಖೀ ಸಮಾಜವನ್ನು ಸಮಾನತೆಯ ನೆಲೆಗಟ್ಟಿನ ಮೇಲೆ ಕಟ್ಟುವ ಕನಸಿನೊಂದಿಗೆ, ಕಾರ್ಯಾರಂಭಕ್ಕೆ ಇಳಿದ ಬಸವಣ್ಣ, ಮನು ಕುಲಕ್ಕೇ ಒಂದು "ದಿಗ್ಗಮೆ"ಯಾಗಿದ್ದ. ಧರ್ಮ, ಸಮಾಜ, ಭಕ್ತಿ, ಅಧ್ಯಾತ್ಮ, ಅನುಭಾವ ಎಲ್ಲ ನೆಲೆಗಳಲ್ಲೂ ಜಾತಿ, ಲಿಂಗ ಮೀರಿದ ಮುಕ್ತ ಅವಕಾಶಗಳನ್ನು ಕಲ್ಪಿಸಿ, ಮೂಲಭೂತವಾದಿಗಳ ಆಗ್ರಹಕ್ಕೆ ಒಳಗಾಗಿ ಅನೇಕ ಅಡಚಣೆಗಳ ನಡುವೆಯೂ ತನ್ನ ಉದಾರ ಮತ್ತು ಉದಾತ್ತ ಆಶಯಗಳಿಂದಾಗಿ ಅಪಾರ ಸಂಖ್ಯೆಯಲ್ಲಿ ತಾನು ಹುಟ್ಟುಹಾಕಿದ ಧಾರ್ಮಿಕ,

ಸಾಮಾಜಿಕ ಚಳುವಳಿಗಳಲ್ಲಿ ಭಾಗವಹಿಸಲು ಪ್ರಚೋದನೆಯಾದ. ಮೊದಲ ಬಾರಿಗೆ ಕೆಳಜಾತಿ ವರ್ಗದವರಲ್ಲಿ ತಾವೂ ಮನುಷ್ಯರೆಂಬ ಗೌರವದ ಭಾವನೆ ಮೂಡಿಸುವಲ್ಲಿ ಯಶಸ್ವಿಯಾದರು.

ಬಸವ ಪೂರ್ವದ ಸ್ಥಿತಿ-ಗತಿ :

ಬಸವಪೂರ್ವ ಯುಗದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿಗಳು ಚಿಂತಾಜನಕವಾಗಿದ್ದವು. ವೈದಿಕಧರ್ಮ ಹುಟ್ಟು ಹಾಕಿದ ವರ್ಣಾಶ್ರಮ ಪದ್ಧತಿಯಿಂದಾಗಿ ಅಂದಿನ ಸಮಾಜ ಒಡೆದು ಹೋಳು ಹೋಳಾಗಿತ್ತು. ಸಾಮಾಜಿಕ ಸಮಾನತೆ, ರಾಜಕೀಯ ಸ್ವಾತಂತ್ರ್ಯ, ಶೈಕ್ಷಣಿಕ ಸವಲತ್ತುಗಳು, ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದವು. ಇವುಗಳನ್ನು ವಿರೋಧಿಸಿ, ಬಸವಣ್ಣ ಪ್ರತಿಭಟನೆ ಪ್ರಾರಂಭಿಸಿದ. ಬಸವಣ್ಣನ ಪ್ರತಿಭಟನೆಯನ್ನು ಗೆರೆಕೊರೆದಂತೆ ಸಾಮಾಜಿಕ ಪ್ರತಿಭಟನೆ, ಧಾರ್ಮಿಕ ಪ್ರತಿಭಟನೆ, ಆರ್ಥಿಕ ಪ್ರತಿಭಟನೆ ಎಂದು ವಿಂಗಡಿಸುವುದು ಕಷ್ಟ ಸಾಧ್ಯ. ಅವು ಒಂದರನೊಡನೊಂದು ಬೆರೆತು ಹೋಗಿವೆ. ಬಸವಪೂರ್ವ ಕಾಲವನ್ನು ಅವಲೋಕನ ಮಾಡುವಾಗ ಕ್ರಿ.ಶ. 8-9 ನೇ ಶತಮಾನದಲ್ಲಿ ಕಾಪಾಲಿಕ, ಕಾಳಾಮುಖಗಳು ಮಹತ್ವದ ಪಾತ್ರ ನಿರ್ವಹಿಸಿವೆ. ಇವರು ವೈದಿಕ ವ್ಯವಸ್ಥೆ, ವರ್ಣಾಶ್ರಮ ವ್ಯವಸ್ಥೆಯನ್ನು ಕರ್ಮ ಸಿದ್ಧಾಂತಗಳ ವಿರುದ್ಧ ಪ್ರತಿಭಟನೆ ಪ್ರಾರಂಭಿಸಿದ್ದರು. "ವೈದಿಕ ನಿಯಮಗಳಲ್ಲಿ ವರ್ಣಾಶ್ರಮ ಧರ್ಮದಲ್ಲಿ ಜಾತಿ ಕಟ್ಟಳೆಗಳಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ವರ್ಣಾಶ್ರಮದ ಬಗ್ಗೆ ಕಾಪಾಲಿಕರಿಗಿದ್ದ ಅನಾದರಣೆಯೇ ರಾಮಾನುಜಾಚಾರ್ಯರು ಇವರನ್ನು ತಿರಸ್ಕರಿಸಲು ಒಂದು ಕಾರಣವಾದಂತಿದೆ"[3] ಎಂಬ ಮಾತು ಅಂದಿನ ಕರ್ನಾಟಕದ ಸಾಮಾಜಿಕ-ಧಾರ್ಮಿಕ ಜೀವನದ ಚಿತ್ರಣವನ್ನು ನೀಡುತ್ತದೆ. ಆದರೆ ಸಂಪ್ರದಾಯವಾದಿಗಳು ಇವರನ್ನು ರಾಕ್ಷಸ ಪ್ರವೃತ್ತಿಯವರು, ವೇದ ವಿರೋಧಿಗಳೆಂದು ಟೀಕಿಸಿದ್ದಾರೆ. ಆದರೆ ಕಾಪಾಲಿಕ-ಕಾಳಾಮುಖರು ವೇದಾಧ್ಯಯನ ಮಾಡಿದ ಪಂಡಿತರಾಗಿದ್ದರು ವೈದಿಕ ಸಂಸ್ಕಾರ ಆಚರಣೆಗಳನ್ನು ಕಟುವಾಗಿ ಖಂಡಿಸುತ್ತಿದ್ದರು. ಹೀಗಾಗಿ ಸಂಪ್ರದಾಯವಾದಿಗಳ ಕುತಂತ್ರದಿಂದ ಅವರ ತತ್ವಗಳು ಕಣ್ಮರೆಯಾಗಿ ಮೊದಲಿನಂತೆ ಕರ್ಮಾಚರಣೆ ಪ್ರಧಾನ ಸ್ಥಾನ ಪಡೆದು ವಿಜೃಂಭಿಸಿತು. ಧರ್ಮದ ಹೆಸರಿನಲ್ಲಿ ಶೋಷಣೆ, ಹಿಂಸೆ, ಜಾತೀಯ, ಮತೀಯ ಭಾವನೆಗಳು ಬೆಳೆದು, ಸಾಮಾಜಿಕ-ಧಾರ್ಮಿಕ ಸ್ಥಿತಿ-ಗತಿ ತುಂಬಾ ಹದಗೆಟ್ಟಿತ್ತು.

ಬಸವ ಪೂರ್ವದಲ್ಲಿ ಶೈವಸಿದ್ಧಾಂತ ಆಚರಣೆಯಲ್ಲಿ ಇದ್ದಿತೆಂದು ತಮಿಳು ಗ್ರಂಥಗಳಿಂದ ತಿಳಿದು ಬರುತ್ತದೆ. ಅದರಂತೆ ವೀರಶೈವ ಧರ್ಮವೂ ಬಸವಪೂರ್ವದಲ್ಲಿಯೇ ಇದ್ದಿತೆಂದು "The Karnel of Veershaiva thought is almost as early as the Upanishads and it may be found in more or less systematic manner by way of suggestion in the writings of Kalidasa who lived in early centuries of Christian era[4] ಎನ್ನುವ ದಾಸಗುಪ್ತಾ ಅವರ ಅಭಿಪ್ರಾಯದಿಂದ ಅರಿಯಬಹುದಾಗಿದೆ. ಇನ್ನೂ ಬಸವಣ್ಣನ ಕಾಲದಲ್ಲಿ ಕರ್ನಾಟಕದಲ್ಲಿ ಅನೇಕ ಧರ್ಮಗಳು ಆಚರಣೆಯಲ್ಲಿದ್ದವು, ಹಲವು ಜಾತಿಗಳು ಉದಯಿಸಿದವು. ಅಂಧ ಸಂಪ್ರದಾಯಗಳು ಬೆಳೆದು ಬಂದು ಧರ್ಮ ಕೆಲವರ ಸ್ವಾರ್ಥ ಸಾಧನೆಯ ಅಸ್ತ್ರವಾಯಿತು. ಬಸವ ಪೂರ್ವದ ಕಾಲದಲ್ಲಿ ವೀರಶೈವ ಧರ್ಮವು ಅನೇಕ ಸಂಪ್ರದಾಯ, ಅಂಧ ಶ್ರದ್ಧೆಗಳನ್ನು ಒಳಗೊಂಡಿತ್ತು. "ಲಿಂಗ ದೀಕ್ಷೆ ಕೊಡುವ ಅಧಿಕಾರವು ಕೇವಲ ಸಾಂಪ್ರದಾಯಿಕ ಜಾತಿ ಜಂಗಮರಿಗೆ ಸೇರಿತ್ತು. ಅಂದಿನ ವೀರಶೈವದಲ್ಲಿ ಅದರೊಳಗಡೆಯೇ ವರ್ಣಾಶ್ರಮ ಪದ್ಧತಿ ಹುತ್ತಗಟ್ಟಿತ್ತು. ಸಾಂಪ್ರದಾಯಿಕ ಜಂಗಮರು ಮಡಿ ಮೈಲಿಗೆಗಳನ್ನುಳಿಸಿಕೊಂಡು ಸಾಂಪ್ರದಾಯಿಕ ವೈದಿಕರಂತೆ ಧರ್ಮದ

ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದರು"[5] ಎಂಬ ಡಾ.ಬಸವರಾಜ ಸಬರದರವರ ಅಭಿಪ್ರಾಯ ಅಂದಿನ ಧಾರ್ಮಿಕ ಹಾಗೂ ಸಾಮಾಜಿಕ ಶೈಥಿಲ್ಯವನ್ನು ಕುರಿತು ವರ್ಣಿಸುತ್ತದೆ. ಈ ರೀತಿಯ ಸಾಮಾಜಿಕ, ಧಾರ್ಮಿಕ ಸ್ಥಿತಿಯನ್ನು ಬಸವಣ್ಣ ವಿರೋಧಿಸಿ "ದಯವೇ ಧರ್ಮದ ಮೂಲವಯ್ಯ" ಎಂದೇಳುತ್ತ ಬಾಹ್ಯ ಆಡಂಬರ, ಆಚರಣೆ ವಾಮ ಮಾರ್ಗಗಳನ್ನು ಖಂಡಿಸಿದನು. ಅಲ್ಲದೇ ಸಮಾಜದಲ್ಲಿ ಲಿಂಗ ತಾರತಮ್ಯವಿದ್ದು, ಸ್ತ್ರೀಯನ್ನು ಕೀಳಾಗಿ ಕಾಣಲಾಗುತ್ತಿತ್ತು. "ಸ್ತ್ರೀ ಒಟ್ಟಾರೆ ಗಂಡಿಗಿಂತ ಕೀಳು ಎಂಬ ಸಾರ್ವತ್ರಿಕ ಭಾವನೆ ಎಲ್ಲ ಜಾತಿಗಳಿಗೂ ಸಮಾನವಾದುದಾಗಿತ್ತು[6] ಇಂತಹ ವ್ಯವಸ್ಥೆಯನ್ನು ಬಸವ ಪೂರ್ವದಲ್ಲಿಯೂ ಪ್ರತಿಭಟಿಸಿದ್ದನ್ನು ತಮಿಳು ನಾಯರ್‌ರವರ ಭಕ್ತಿ ಚಳುವಳಿಯಲ್ಲಿ ಕಾಣುತ್ತೇವೆ. 12ನೆಯ ಶತಮಾನದ ವೀರಶೈವ ಆಂದೋಲನವು ಕರ್ನಾಟಕದಲ್ಲಿ ನಡೆದ ಅಧಿಕೃತ, ಸುವ್ಯಸ್ಥಿತ ಸಾಮಾಜಿಕ-ಧಾರ್ಮಿಕ ಆಂದೋಲನವಾಗಿದೆ. ಸಾಮಾಜಿಕವಾಗಿ ಹಿಂದುಳಿದವರಿಗೆ ಉನ್ನತವಾದ ಧರ್ಮವು ನಿಲುಕುತ್ತಿರದ ಪರಿಸ್ಥಿತಿಯನ್ನು ಅದು ಪ್ರತಿಭಟಿಸಿತು.

3.1 ಬಸವನ ಬದುಕು ಹಾಗೂ ವಿಚಾರಗಳು:

ಬಸವ-ಗೌರವಪೂರ್ವಕವಾಗಿ ಬಸವಣ್ಣ ಅಥವಾ ಬಸವೇಶ್ವರ ಎಂದು ಕರೆಯುತ್ತಾರೆ. ವೀರಶೈವ ಮತದ ರೂವಾರಿ. ಅವನು ಭಾರತದ ಮಾರ್ಟಿನ್ ಲೂಥರ್ ಎಂದು ಕೆಲವರು ಬಣ್ಣಿಸಿದ್ದಾರೆ. ಇನ್ನೂ ಕೆಲವರು ಬುದ್ಧನು ಪೂರೈಸಲಾಗದೆ ಬಿಟ್ಟ ಕೆಲಸವನ್ನು ಕೈಗೆತ್ತಿಕೊಂಡು ಜಾತಿ ಭೇದವನ್ನು ತೊಡೆದುಹಾಕಿ, ಕ್ಷುಲ್ಲಕವಾದ ಆಚರಣೆಗಳ ಹುಳುಕನ್ನು ಬಯಲು ಮಾಡಿದ ಮಹಾಪುರುಷ ಎನ್ನುತ್ತಾರೆ. ಶಿವಶರಣ, ವಚನಕಾರ, ಸಮಾಜಸುಧಾರಕ ಅಂದು ಕರ್ನಾಟಕದಲ್ಲಿ ನಡೆದ ಧಾರ್ಮಿಕ-ಸಾಮಾಜಿಕ ಮಹಾ ಕ್ರಾಂತಿಯೊಂದರ ನೇತಾರ. "12ನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಶರಣರ ಚಳುವಳಿ ಧಾರ್ಮಿಕ ಮತ್ತು ವೈಚಾರಿಕತೆಯ ಸಮನ್ವಯವನ್ನು ಸಾಧಿಸಿದ ಒಂದು ಅಪೂರ್ವ ಆಂದೋಲನ. ಯಜ್ಞ ಯಾಗಾದಿಗಳ ಹಾಗೂ ದೇವಾಲಯಗಳ ಮೂಲಕ ಮೇಲಿನ ಜಾತಿಯವರು ಕೆಳಜಾತಿಯವರನ್ನು ವ್ಯವಸ್ಥಿತ ಶೋಷಣೆಗೆ ಗುರಿಪಡಿಸಿದ್ದ ಕಾಲದಲ್ಲಿ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಬಸವಣ್ಣ ಜಾತಿ ವ್ಯವಸ್ಥೆಯ ವಿರುದ್ಧ ಬಂಡೆದ್ದು, ಲಿಂಗಾಯತ ಅಥವಾ ವೀರಶೈವ ಧರ್ಮವನ್ನು ಸ್ಥಾಪಿಸಿದ. ಅವನು ಬ್ರಾಹ್ಮಣರಿಂದ ಹಿಡಿದು ಚಮ್ಮಾರರವರೆಗೆ ಶ್ರೇಣಿಕೃತವಾಗಿದ್ದ ಹಲವು ಹನ್ನೊಂದು ಜಾತಿಗಳವರನ್ನು ಹೊಸ ಧರ್ಮ ಸೇರಲು ಆಹ್ವಾನಿಸಿದ ಮತ್ತು ಪ್ರೇರೆಪಿಸಿದ. ಶರಣರ ಚಳುವಳಿಯಲ್ಲಿ ಸ್ತ್ರೀಯರಿಗೂ ಪುರುಷರೊಡನೆ ಸಮಾನ ಸ್ಥಾನಮಾನಗಳಿದ್ದವು. ಶರಣರು ಪುರೋಹಿತ ಶಾಹಿಯ ಮೂಲಕ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸಲು ಕಾಯಕ-ಮತ್ತು ದಾಸೋಹ ತತ್ವಗಳನ್ನು ರೂಢಿಯಲ್ಲಿ ತಂದರು. ಕಾಯಕವೇ ಕೈಲಾಸವೆಂದು ಸಾರಿದ ಅವರು ತಮ್ಮ ಕಾಯಕದ ಫಲವನ್ನು ದಾಸೋಹದ ಮೂಲಕ ಸಮುದಾಯದ ಇತರರೊಡನೆ ಸೇವಿಸಿ ಸುಖಿ ಪಡುತ್ತಿದ್ದರು.[7] ಹಾಗೂ ದೇವಾಲಯ, ಅರ್ಚಕರ ಶೋಷಣೆ ತಪ್ಪಿಸಿ ಎಲ್ಲರಿಗೂ ಇಷ್ಟಲಿಂಗಾರ್ಚನೆಯ ಮಹತ್ವ ಬೋಧಿಸಿದರು. ತಮ್ಮ ಬೋಧನೆಗಳನ್ನು ಧಾರ್ಮಿಕ ಭಾಷೆಯಾದ ಸಂಸ್ಕೃತವನ್ನು ತ್ಯಜಿಸಿ, ಆಡು ಭಾಷೆಯಾದ ಕನ್ನಡದಲ್ಲಿ ವಚನ ಸಾಹಿತ್ಯ ಸುಲಲಿತ ಸಾಹಿತ್ಯವನ್ನು ಸಾಮಾನ್ಯರಿಗಾಗಿ ನಿರ್ಮಾಣ ಮಾಡಿದರು.

ಬಸವಣ್ಣನವರಿಗೆ ಸಂಬಂಧಿಸಿದಂತೆ ಹಿರಿಯೂರು ಶಾಸನ, ಅರ್ಜುನವಾಡ ಶಾಸನ(260) ಚೌಡದಾನಪುರ ಶಾಸನ, ಕಲ್ಲೇದೇವರಪುರ ಶಾಸನ, ಮರಡಿಪುರಶಾಸನ, ಹೊಯ್ಸಳ ಸೋಮೇಶ್ವರನ ಕಣ್ಣಾನೂರು ಶಾಸನ, ಇವುಗಳಲ್ಲಿ ಮಾಹಿತಿ ದೊರೆಯುತ್ತದೆ. ಆದರೆ ಈ ಶಾಸನಗಳೆಲ್ಲ ಬಸವಣ್ಣನವರ

ಕಾಲಕ್ಕಿಂತ ಸುಮಾರು ಶತಮಾನದಷ್ಟು ಈಚಿನವು. ಬಸವಣ್ಣನವರನ್ನು ಕುರಿತಂತೆ ಕನ್ನಡದಲ್ಲಿ ಬಸವರಾಜ ದೇವರ ರಗಳೆ, ಅಮಲ ಬಸವ ಚಾರಿತ್ರ, ಬಸವಪುರಾಣ, ವೃಷಭೇಂದ್ರವಿಜಯ ಮುಂತಾದ ಅನೇಕ ಕಾವ್ಯಗಳು ರಚಿತವಾಗಿವೆ. ತೆಲುಗಿನಲ್ಲಿ ಸಹ ಒಂದು ಬಸವಪುರಾಣವಿದೆ. ಆದರೆ ಇವುಗಳಲ್ಲಿ ಬಸವಣ್ಣನವರ ಸಮಗ್ರ ಚಿತ್ರ ಸಿಗುವುದಿಲ್ಲ. ಪವಾಡಗಳಲ್ಲಿ ಮುಳುಗಿ ಬಿಟ್ಟಿವೆ. ಆದರೆ ಇವರ ವಚನಗಳಲ್ಲಿ ಇವರ ವ್ಯಕ್ತಿತ್ವದ ಜೀವಂತ ಚಿತ್ರ ಮೂಡಿ ನಿಂತಿದೆ. ಆ ಹಿನ್ನೆಲೆಯಲ್ಲಿ ಪುರಾಣಗಳಲ್ಲಿ ಸೂಚಿತವಾಗಿರುವ ಚಾರಿತ್ರಿಕ ಆಂಶಗಳನ್ನು ಜಾಲಾಡಿ, ಆದರಿಂದ ಇವರ ಜೀವನದ ಕಥಾ ಚಿತ್ರವನ್ನು ಸಾಧನೆಗಳನ್ನು ಸ್ಥೂಲವಾಗಿ ಕಂಡುಕೊಳ್ಳಬಹುದು.

ಭಾರತ ಅನೇಕ ಅಸಾಧಾರಣ ಪುರುಷರ ಜನ್ಮ ಸ್ಥಳ. ಸಂತರು, ತತ್ವಜ್ಞಾನಿಗಳು, ಚಕ್ರವರ್ತಿಗಳು, ಸಮಾಜ ಸುಧಾರಕರು ಹಾಗೂ ಕ್ರಾಂತಿಕಾರರು ಇಲ್ಲಿ ಜನಿಸಿ ಜಗತ್ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅಂತಹ ಸಮಾಜ ಸುಧಾರಕರಲ್ಲಿ ಪ್ರಸಿದ್ಧರು ಬಸವೇಶ್ವರರು. ಸಂತನೂ, ಸಮಾಜ ಸುಧಾರಕನೂ, ಕವಿಯೂ, ತತ್ವಜ್ಞಾನಿಯೂ ಹಾಗೂ ಕ್ರಾಂತಿಕಾರಿ ಧರ್ಮಗುರುವೂ ಹೌದು. "ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುತ್ತ ಸ್ವತಃ ನುಡಿದಂತೆ ನಡೆದು ತೋರಿಸಿ ದುರ್ಬಲರ ಹಾಗೂ ದೀನದಲಿತರ ಉದ್ಧಾರಕ್ಕಾಗಿ ಪಣತೊಟ್ಟರು. ಈ ಕಾರಣಗಳಿಂದಾಗಿಯೇ ಬಸವೇಶ್ವರರ ತತ್ವಗಳು ಜನಸಾಮಾನ್ಯರ ಮನವನ್ನು ಗೆದ್ದು, ಎಲ್ಲ ಸಾಮಾಜಿಕ ವರ್ಗಗಳನ್ನು ಮೀರಿ ನಿಂತು ಜಗತ್ತಿನ ಉದ್ದಗಲಕ್ಕೂ ಪಸರಿಸಿವೆ.[8] ಹಾಗೂ ಬಸವೇಶ್ವರರ ಕಾರ್ಯ ಸಿದ್ಧಿ, ಅವರ ತತ್ವ ಚಿಂತನೆಗಳಿಂದಾಗಿ "ವಿಶ್ವಮಾನವ"ರೆಂತಲೂ ಪ್ರಸಿದ್ಧರು. ಕ್ರಿ.ಶ.12ನೇ ಶತಮಾನದಲ್ಲಿ ಆದ ಬಸವೇಶ್ವರರ ಜನ್ಮವು ಭಾರತದ ಇತಿಹಾಸದಲ್ಲಿ ಒಂದು ಹೊಸ ಯುಗದ ಆರಂಭವನ್ನು ಘೋಷಿಸಿತು. ಕ್ರಿ.ಶ.15ನೇ ಶತಮಾನದಲ್ಲಿ ಯುರೋಪಿನ ಇತಿಹಾಸದಲ್ಲಿ ಹುಟ್ಟಿಕೊಂಡ "ಪ್ರೊಟೆಸ್ಟಂಟ್" (ಪ್ರತಿಭಟನಾ ಧರ್ಮ) ಎಂಬ ಧರ್ಮವು ಹುಟ್ಟು ಹಾಕಿದ "ಸುಧಾರಣೆಯ ಯುಗ" ದಂತೆ ನಾಲ್ಕು ಶತಮಾನಗಳ ಕೆಳಗೆ ಪ್ರತಿಪಾದಿಸಿದ ಬಸವೇಶ್ವರರ ಧರ್ಮ ತತ್ವಗಳನ್ನು ಕ್ರಾಂತಿಕಾರಿ ಎಂದಷ್ಟೇ ಅನ್ನದೇ ಅದೊಂದು ವೈದಿಕ ಗತಕಾಲದ ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಭಾರತೀಯ ಸಮಾಜದ ಸಾಂಪ್ರದಾಯಿಕತೆಯ ಸುಧಾರಣೆಯ ಯುಗವೆಂದು ಕರೆಯಬಹುದು ಎಂದು ಡಾ.ಎ.ಜಿ.ಮುಡಬಿದ್ರಿ ಅಭಿಪ್ರಾಯಪಟ್ಟಿದ್ದಾರೆ. ಮಹಾನ್ ಕ್ರಾಂತಿ ಪುರುಷನಾದ ಬಸವಣ್ಣನವರು ವ್ಯಕ್ತಿ -ಸಂಸಾರ ಸಮಾಜಗಳಿಗಿರುವ ಅವಿನಾಭಾವ ಸಂಬಂಧವನ್ನು ಗುರುತಿಸಿ, ಪರಸ್ಪರ ಸುಪುಷ್ಟವಾಗಿ ಬೆಳೆದು ಜನಪರವಾದ, ಲೌಕಿಕ ಮೂಲವಾದ, ವ್ಯವಹಾರ ಯೋಗ್ಯವಾದ ಮಾನವೀಯತೆಯೇ ಮೂಲವಾದ, ಜಾತ್ಯಾತೀತವಾದ, ಪ್ರಗತಿಪರವಾದ, ವೈಚಾರಿಕವಾದ ಸಮಾಜವೊಂದನ್ನು ರಚಿಸಿದರು. ಇದು ವರ್ಣ, ವರ್ಗ, ಲಿಂಗ, ಅಂತಸ್ತು ಎಂದು ಮುಂತಾಗಿ ಇವನಾರವ ಇವನಾರವ ಎಂದು ಭೇದವೆಣಿಸದೇ ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನು ಆಧರಿಸಿ ಇಂಬಿಟ್ಟುಕೊಳ್ಳುವ ಸಾಮಾಜಿಕ ಸಂಸ್ಕೃತಿಯಾಗಿದೆ.

12ನೇ ಶತಮಾನದಲ್ಲಿ ಸ್ಫೋಟಗೊಂಡ ಆಂದೋಲನದ ಕೇಂದ್ರ ವ್ಯಕ್ತಿ - ಶಕ್ತಿ ಬಸವಣ್ಣ. ಈ ಆಂದೋಲನ ಆರಂಭಗೊಳ್ಳುವ ಸಂದರ್ಭದಲ್ಲಿ ಚಾಲುಕ್ಯ ಚಕ್ರವರ್ತಿಗಳು ಕರ್ನಾಟಕದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಅವರ ಹಲವು ಮಾಂಡಲೀಕರಲ್ಲಿ ಕಲಚೂರಿಗಳೂ ಒಬ್ಬರು. ಆಗ "ಚಾರುಲತೆಯ ಸಹಜಸಾರತೆ" ಎನಿಸಿದ ತರ್ದವಾಡಿ ಸಾಸಿರ ಅಂದರೆ, ಈಗಿನ ಸೊಲ್ಲಾಪೂರ ಜಿಲ್ಲೆಯ ದಕ್ಷಿಣ ಭಾಗ ಮತ್ತು ವಿಜಾಪೂರ ಜಿಲ್ಲೆಯ ಉತ್ತರ ಭಾಗಗಳನ್ನೊಳಗೊಂಡ ಭೂಪ್ರದೇಶ ಅವರ ಆಳ್ವಿಕೆಗೆ ಒಳಪಟ್ಟಿತ್ತು[9]

ಸೊಲ್ಲಾಪೂರ ಮತ್ತು ಬಿಜಾಪೂರ ಜಿಲ್ಲೆಗಳೆರಡರ ಮಧ್ಯದಲ್ಲಿರುವ "ತರ್ದವಾಡಿ-ಮಧ್ಯ ಗ್ರಾಮ "ಉಲ್ಲೇಖಿತ ಬಾಗೇವಾಡಿ ಪ್ರಸಿದ್ಧ ಅಗ್ರಹಾರ ವಾಗಿದ್ದಿತು. ಇದು ಇಂಗಳೇಶ್ವರ, ಮನಗೊಳಿ ಮತ್ತು ಮುತ್ತಗಿ ಇವುಗಳ ಮಧ್ಯದಲ್ಲಿಯ ಅಗ್ರಹಾರವಾಗಿತ್ತು. ಆಗ ಕರ್ನಾಟಕದಲ್ಲಿ ವೈದಿಕ, ಜೈನ, ಬೌದ್ಧ, ಶೈವ ಮತಗಳು ಪ್ರಚಲಿತದಲ್ಲಿದ್ದವು. ಇವುಗಳಲ್ಲಿ ಪೈಪೋಟಿ ಸ್ಪರ್ಧೆ ಕಂಡು ಬಂದು ಇವು ತರ್ದವಾಡಿಯನ್ನು ಆವರಿಸಿದ್ದವು. ವ್ಯಾಖ್ಯಾನದೇವ, ಲಕುಲೀಶ್ರುತಿ, ಸದ್ಯೋಜಾತ ಪಂಡಿತರಂಥ ಶೈವಗುರುಗಳು ಇಂಗುಳೇಶ್ವರ, ಮುತ್ತಗಿ, ಮನಗೊಳಿ ಗ್ರಾಮಗಳಲ್ಲಿ ವಾಸವಾಗಿದ್ದ ಪ್ರಸಿದ್ಧರಾಗಿದ್ದರು.

ಬಸವನ ಜನ್ಮಸ್ಥಳ ಬಾಗೇವಾಡಿ. ಈಗ ಬಿಜಾಪೂರ ಜಿಲ್ಲೆಯ ಒಂದು ತಾಲೂಕಾ ಕೇಂದ್ರ " ಬಸವನ ಬಾಗೇವಾಡಿ".ಹಿಂದೆ ಇದು ಪ್ರಸಿದ್ಧ ಅಗ್ರಹಾರವಾಗಿತ್ತು. ಆ "ಅಗ್ರಹಾರದ ಅಧಿಪತಿ ಮಾದಿರಾಜ. ಆವನ ಪತ್ನಿ ಮಾದಲಾಂಬೆ-ಇವರು ಬಸವಣ್ಣನವರ ತಂದೆ-ತಾಯಿಗಳು ಬಸವಣ್ಣನವರಿಗೆ ದೇವರಾಜ ಎಂಬ ಅಣ್ಣ, ನಾಗಮ್ಮ ಎಂಬ ಅಕ್ಕ ಇದ್ದರು".[10] ಬಸವಣ್ಣನವರ ಜನನದ ಕಾಲದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಇವರ ಜೀವನವನ್ನು ಕುರಿತು ರಚಿತವಾಗಿರುವ ಗ್ರಂಥಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಮ್ಮತಾಭಿಪ್ರಾಯ ಕಂಡು ಬರುವುದಿಲ್ಲ. ಆದರೆ ಶಿವತತ್ವ ಚಿಂತಾಮಣಿ ಮತ್ತು ಕಾಲಜ್ಞಾನದ ವಚನಗಳು ನೀಡುವ ಮಾಹಿತಿಗಳು ಒಂದೇ ಆಗಿದ್ದು, 1131 ರಲ್ಲಿ ಇವರು ಜನಿಸಿರಬೇಕೆಂಬ ಅಭಿಪ್ರಾಯವನ್ನು ವಿದ್ವಾಂಸರು ಹೊಂದಿದ್ದಾರೆ. ಅವರ ಜೀವನ, ಕಾಲ, ಐತಿಹಾಸಿಕ ಅಂಶ ತಿಳಿಯಲು ಶಾಸನಗಳನ್ನು ಆಧರಿಸಿ ಬಸವಣ್ಣನ ಜೀವನ ಚರಿತ್ರೆಯನ್ನು ಸಂಶೋಧಕರು ಖಚಿತವಾಗಿ ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಒಟ್ಟು ದೊರೆತ 18 ಶಾಸನಗಳಲ್ಲಿ 11 ಶಾಸನಗಳು ಬಸವಣ್ಣನ ಬದುಕನ್ನು ಅರಿಯಲು ಸಹಾಯಕವಾಗಬಲ್ಲವು. ಇದರಿಂದ ನಮಗೆ ಆತನ ಐತಿಹಾಸಿಕತೆ, ಜೀವನಚಿತ್ರಣ, ಸಂದರ್ಭಗಳನ್ನು ಕುರಿತು ಅರಿಯಲು ಸಾಧ್ಯವಿದೆ. ಇವುಗಳಲ್ಲಿ ಮುಖ್ಯವಾದ ಶಾಸನಗಳು ಈ ಕೆಳಗಿನಂತಿವೆ:[11]

ಶಾಸನಗಳು

ಕ್ರ .ಸಂ	ಶಾಸನಗಳ ಹೆಸರು	ಕಾಲಮಿತಿ	ಆಕರ	ವಿವಿಧ ಹೆಸರುಗಳು
1	ಹಿರಿಯೂರು ಶಾಸನ	1259	ಇ.ಸಿ. 7 ಅರಿಸಿಕೆರೆ	ಬಸವಯ್ಯ
2	ಅರ್ಜುನವಾಡ ಶಾಸನ	1260	ಇ.ಪಿ.	ಬಸವರಾಜ,
3	ಚೌಡದಾನಾಪೂರ ಶಾಸನ	1263	ಶಿವದೇವ ವಿಜಯಂ	ಸಂಗಮೇಶ್ವರನ ಪುತ್ರ ಬಸವಯ್ಯ
4	ಚೌಡದಾನಾಪೂರ ಶಾಸನ	1263	ಶಿವದೇವ ವಿಜಯಂ	ಸಂಗನಬಸವ
5	ಕಲ್ಲೇದೇವರಪುರ ಶಾಸನ	1279	ಇ.ಸಿ. 30 ಜಗಳೂರು	ಬಸವರಾಜ
6	ಮರಡಿಪುರ ಶಾಸನ	1280	ಇ.ಸಿ. 83 ಮಂಡ್ಯ	ಸಣಗನಬಸವಯ್ಯ
7	ಗುಡಿಹಾಳ ಕುಂಟೋಜಿ ಶಾಸನ	14 ನೇ ಶತಮಾನ	ಎಸ್. 658	ಬಸವರಾಜ ದೇವರು
8	ಆನಂದಪುರಮಠದ ತಾಮ್ರಶಾಸನ	1640	ಶ್ರೀ ಬಸವೇಶ್ವರರ ಕಾಲ	ಬಸವರಾಜ
9	ಜೋಡಿ ದಾಸೇನ ಹಳ್ಳಿ ಶಾಸನ	1686	ಇ.ಸಿ. 8 ಮದಗಿರಿ	ಬಸವರಾಜೇಂದ್ರ
10	ಕಾನಕಾನಹಳ್ಳಿ ತಾಮ್ರಶಾಸನ	1700	ಇ.ಸಿ. 89 ಕಾನಕಾನಹಳ್ಳಿ	ಬಸವೇಶ್ವರ ಸ್ವಾಮುಲು
11	ಕಾನಕಾನಹಳ್ಳಿ ತಾಮ್ರಶಾಸನ	1700	ಇ.ಸಿ. 90 ಕಾನಕಾನಹಳ್ಳಿ	ಕಲ್ಯಾಣದ ಬಸವಪ್ಪನವರು

ಹೀಗೆ ಹಲವು ಶಾಸನಗಳಲ್ಲಿ ಬಸವಣ್ಣನ ಜೀವನಕ್ಕೆ ಸಂಬಂಧಿಸಿದ ಐತಿಹಾಸಿಕ ಅಂಶಗಳನ್ನು ಹುಡುಕಲು ವಿದ್ವಾಂಸರು ಯತ್ನಿಸಿದ್ದಾರೆ. ಫ್ಲೀಟ್‌ರವರ ಮನಗೋಳಿ ಶಾಸನ, ಗೋವಿಂದ ಪೈಯವರ ಸೊರಟೂರು ಶಾಸನ, ಶ್ರೀಕಂಠಶಾಸ್ತ್ರೀಯವರ ರಾಯಶೆಟ್ಟಿಪುರ ಶಾಸನ, ಸಿ.ನಾರಾಯಣರಾಯರ ಕಸಪಯ್ಯನ ಶಾಸನ, ಜರುವಾಯ ಶಾಸನ, ಅಬ್ಬಲೂರು ಶಾಸನ, ಚನ್ನಮಲ್ಲಿಕಾರ್ಜುನ ಗುರುತಿಸಿದನೆನ್ನಲಾದ ಬಳ್ಳಿಗಾವಿಯ ಶಾಸನ ಇವುಗಳನ್ನು ಹೆಸರಿಸಬಹುದಾಗಿದೆ. ಇದುವರೆಗೆ ದೊರೆತ ಶಾಸನಗಳಲ್ಲಿ ಮೇಲೆ ಹೇಳಲಾಗಿರುವ 11 ಶಾಸನಗಳು ಮಾತ್ರ ಸರ್ವ ಸಮ್ಮತಿಯನ್ನು ಪಡೆದವುಗಳು. ಉಳಿದವುಗಳು ಅಸಮ್ಮತ ಶಾಸನಗಳೆಂದೂ ಇವುಗಳಿಗೂ ಬಸವೇಶ್ವರನಿಗೂ ಯಾವುದೇ ಸಂಬಂಧವಿಲ್ಲವೆಂದು ಎಂ.ಎಂ.ಕಲಬುರ್ಗಿಯವರು ತಮ್ಮ "ಬಸವಣ್ಣನವರು ಕುರಿತು ಶಾಸನಗಳು" ಎಂಬ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಸವಣ್ಣನ ಐತಿಹಾಸಿಕತೆಗೆ ಸಾಕ್ಷಿಯಾಗಿರುವ "ಅರ್ಜುನವಾಡದ ಶಿಲಾಶಾಸನ" -ನಾ. ಶ್ರೀ. ರಾಜಪುರೋಹಿತರು ಕಂಡು ಹಿಡಿದ, ಮಧುರ ಚೆನ್ನರು ಮತ್ತು ನಂದಿಮಠರು ಅಚ್ಚು ತೆಗೆದುಕೊಂಡು ಬಂದ, ಬಹುಷಃ ಮಧುರ ಚೆನ್ನರು ಶ್ರಮಪಟ್ಟು ಓದಿ ಪಾಠ ಸಿದ್ಧ ಮಾಡಿಕೊಟ್ಟು ಈ ಅರ್ಜುನವಾಡ ಶಾಸನ, ಹಳಕಟ್ಟಿಯವರ ಮೂಲಕ 1928 ರಲ್ಲಿ (ಶಿವಾನುಭವ 3-9) ಪ್ರಥಮ ಸಲ ಬೆಳಕಿಗೆ ಬಂದಿತು. ಕನ್ನಡದ ಅಪೂರ್ವ ಶೋಧನೆಗಳಲ್ಲೊಂದಾದ ಈ ಶಾಸನದಿಂದಾಗಿ ಬಸವಣ್ಣನವರ ಚರಿತ್ರೆಯು ಮುಚ್ಚಿದ ಬಾಗಿಲೊಂದು ತೆರೆದಂತಾಗಿದೆ ಎಂದು ಎಂ.ಎಂ. ಕಲಬುರ್ಗಿಯವರು ಮಾರ್ಗ ಸಂಪುಟ 2 ರಲ್ಲಿ ಉಲ್ಲೇಖಿಸಿದ್ದಾರೆ. ಈ ಶಾಸನ 1260 ರಲ್ಲಿ ರಚನೆಯಾಗಿದ್ದು, ಬಸವಣ್ಣನ ವಂಶದ ಮೂರು ತಲೆಮಾರುಗಳ ಮೇಲೆ ಬೆಳಕು ಬೀರುತ್ತದೆ. ಮಂಡಗೆಯ ಮಾದಿರಾಜನು ಬಸವಣ್ಣನ ತಂದೆ, ದೇವರಾಜ ಬಸವಣ್ಣನ ಸಹೋದರ ಎಂಬ ಅಂಶಗಳನ್ನು ಈ ಶಾಸನವು ತಿಳಿಸುತ್ತದೆ.

ಬಸವಣ್ಣನ ಜನನ ಕಾಲ ಕುರಿತು, ಗೋವಿಂದ ಪೈ, ಹರ್ಡೇಕರ ಮಂಜಪ್ಪ, ಶ್ರೀಕಂಠಶಾಸ್ತ್ರೀ, ಎಲ್. ಬಸವರಾಜು, ಎಂ.ಎಂ. ಕಲಬುರ್ಗಿ, ಎಂ. ಚಿದಾನಂದಮೂರ್ತಿ, ತಿಪ್ಪೇರುದ್ರಸ್ವಾಮಿ, ಪಿ.ಬಿ. ದೇಸಾಯಿ ಹಲವು ವಿದ್ವಾಂಸರು ಪಾಲ್ಕುರಿಕೆ -ಸೋಮನಾಥನ - ಬಸವಪುರಾಣಮು, ವ್ಯಾಸೋಕ್ತ -ಬಸವಪುರಾಣ, ಲಕ್ಕಣ್ಣ ದಂಡೇಶನ - ಶಿವತತ್ವ ಚಿಂತಾಮಣಿ ಹಾಗೂ ಹಲವು ಕೃತಿಗಳಿಂದ ಅರಿಯಲು ಯತ್ನಿಸಿದ್ದಾರೆ. ಬಹು ಜನ ವಿದ್ವಾಂಸರು " ಬಸವಣ್ಣನವರ ಜನನ ಕಾಲವನ್ನು ಕ್ರಿ.ಶ.1131 ರ ವೈಶಾಖ ಶುದ್ಧ ಅಕ್ಷಯ ತೃತೀಯಾ ರೋಹಿಣಿ ನಕ್ಷತ್ರವೆಂದು ಸಾಮಾನ್ಯವಾಗಿ ನಂಬಿದ್ದಾರೆ".[12] ಈ ಅಭಿಪ್ರಾಯವೇ ಸತ್ಯಕ್ಕೆ ಹತ್ತಿರವೆನಿಸುತ್ತದೆ.

ಇದುವರೆಗೆ ಒದಗಿರುವ ಚಾರಿತ್ರಿಕ ಅಂಶಗಳನ್ನು ಅನುಸರಿಸಿ ಬಸವಣ್ಣನವರ ಜೀವಿತ ಕಾಲವನ್ನು ಹೀಗೆ ವಿಭಾಗಿಸಬಹುದಾಗಿದೆ.

ಜನನ	:	1130-31 ರಲ್ಲಿ ಬಾಗೇವಾಡಿಯಲ್ಲಿ
ಉಪನಯ್ನ	:	1138-39 ರಲ್ಲಿ ಬಾಗೇವಾಡಿಯಲ್ಲಿ
ವಿಪ್ರಕರ್ಮಾಚರಣೆ	:	ವಿದ್ಯಾಭ್ಯಾಸ 1146-47 ರವರೆಗೆ ಬಾಗೇವಾಡಿ ಇಂಗಳೇಶ್ವರಗಳಲ್ಲಿ
ಕೂಡಲಸಂಗಮಕ್ಕೆ ಪ್ರಯಾಣ	:	1146-47 ರಲ್ಲಿ

ಮಂಗಳವಾಡಕ್ಕೆ ಪ್ರಯಾಣ	:	1154 ರಲ್ಲಿ
ಮಂಗಳವಾಡದಲ್ಲಿ ಕರಣಿಕ ವೃತ್ತಿ		
ದಂಡನಾಥ ಪದವಿ, ಅನುಭವ	:	1154-55 ರಲ್ಲಿ
ಮಂಟಪ ಆರಂಭ		
ಕಲ್ಯಾಣಕ್ಕೆ ಪ್ರಯಾಣ	:	1156
ಕೂಡಲಸಂಗಮಕ್ಕೆ ನಿರ್ಗಮನ		1167 ರ ಕೊನೆಗೆ ಅಥವಾ
ಅಲ್ಲಿಯೇ ಬಯಲಾದುದು :		1168 ಕ್ಕೆ- ಇದರಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಸಾಧ್ಯ.[13]

ಹುಟ್ಟಿದ ಮಗು ನಂದಿಯ ಮಹಾಪ್ರಸಾದವೆಂದು, ಬಾಗೇವಾಡಿಯ ಸಂಗಮನಾಥ ದೇವಸ್ಥಾನಕ್ಕೆ ಕೂಡಲ ಸಂಗಮದಿಂದ ಬಂದಿದ್ದ ಜಾತವೇದ ಮುನಿಗಳಿಂದ ಮಗುವನ್ನು ಆಶೀರ್ವದಿಸಲು ಮಾದರಸ - ಮಾದಲಾಂಬಿಕೆ ಕೇಳಿಕೊಂಡರು. ಬಸವ ಬೆಳೆಯುತ್ತ ಕರ್ಮ ಭಕ್ತಿಗಳು ಬೆಳಗತೊಡಗಿದವು. ಸಾಂಪ್ರದಾಯಿಕವಾದ ಕರ್ಮ ಮಾರ್ಗಕ್ಕಿಂತ ಸರಳ ಭಕ್ತಿ ಮಾರ್ಗ ಶ್ರೇಷ್ಠವೆಂದು ಅರಿತಿದ್ದನು. ನಂದಿ ಅಥವಾ ವೃಷಭನ ವರಪ್ರಸಾದದಿಂದ ಜನಿಸಿದವನಾದ್ದರಿಂದ ಈತನಿಗೆ ಬಸವನೆಂದು ನಾಮಕರಣ ಮಾಡಲಾಗಿತ್ತು. ಬಾಲ್ಯದಿಂದಲೇ ಗಣಿತ, ಸಾಹಿತ್ಯ, ಸಂಗೀತ, ವೇದಾಗಮಗಳ ವಿದ್ಯೆಯನ್ನು ಬಸವ ಕಲಿತನು.

ಈ ಸಂದರ್ಭದಲ್ಲಿ ಅಂದೂ ಬಹುಜನ ಸಮಾಜವು ಆರ್ಥಿಕವಾಗಿ ಅನುತ್ಪಾದಕ ಸೇವಾ ವೃತ್ತಿಗೆ ಸಹಜವಾದ ದಾರಿದ್ರ್ಯದಿಂದ ಸಾಮಾಜಿಕವಾಗಿ ವರ್ಣ-ಜಾತಿ-ಕುಲ ಗೋತ್ರಾದಿಗಳ ಶೃಂಖಲೆಗಳಿಂದ ಧಾರ್ಮಿಕವಾಗಿ ಬಹುದೇವತಾರಾಧನೆ, ಅಂಧಾಚರಣೆ, ದೇವರು-ದೇಗುಲ, ಧರ್ಮ-ಕರ್ಮಗಳ ಹೆಸರಿನಲ್ಲಿ ಹಬ್ಬಿದ್ದ ಶೋಷಣೆಗಳಿಂದ, ಹುಟ್ಟಿನಿಂದ ಸಾಯುವವರೆಗೆ ಬೆನ್ನು ಹತ್ತಿದ್ದ ಕೆಳ ಕುಲದವರೆಂಬ ಕೀಳರಿಮೆ, ದೈವವಾದ ಹಾಗೂ ಕರ್ಮವಾದ, ಪಾಪ-ಪುಣ್ಯ, ಸ್ವರ್ಗ-ನರಕ, ಪೂರ್ವಜನ್ಮ-ಪುನರ್ಜನ್ಮ ಇತ್ಯಾದಿಗಳ ಜಟಿಲ ಜಾಲ, ಯಜ್ಞ ಯಾಗ, ಮಂತ್ರ-ತಂತ್ರ ಶಾಸ್ತ್ರ-ಪುರಾಣ, ತೀರ್ಥಕ್ಷೇತ್ರ-ಜೋತಿಷ್ಯ, ರಮಲ, ಶಕುನ ಮುಂತಾದ ಶಕುನಿ ತಂತ್ರಗಳಿಂದ, ರಾಜಕೀಯವಾಗಿ ನಿರಂಕುಶ ಪ್ರಭುತ್ವ, ಅರಾಜಕತೆ, ಅಸಹಾಯಕತೆ, ಅತಂತ್ರತೆ, ಅಮಾನವೀಯತೆ ಯಿಂದೊಡಗೂಡಿದ ಈ ದಾರುಣ ಪರಿಸ್ಥಿತಿ ಅಂದಿನದಾಗಿತ್ತು.

ಬಸವನ ಜೀವನದಲ್ಲಿ ಎಂಟು ವರ್ಷಗಳು ಮಾತ್ರ ತೊಡಕಿಲ್ಲದ, ಹೋರಾಟವಿಲ್ಲದ ವರ್ಷಗಳೆಂದು ತೋರುತ್ತದೆ. ಎಂಟನೆಯ ವರ್ಷದಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಉಪನಯನ ನಡೆಸಲು ಮುಂದಾದರು. ಆಗಲೇ ಬಸವನಲ್ಲಿ ಸಂಪ್ರದಾಯ ವಿರೋಧಿ ಭಾವನೆಗಳು ಬಲಿತಿದ್ದವು. ಯಜ್ಞೋಪವೀತವೊಂದು ಜಾತಿಯ ಸಂಕೋಲೆಯೆಂದು ಭಾವಿಸಿ, ಅದನ್ನು ತಿರಸ್ಕರಿಸಿದನು." ವೈದಿಕ ಧರ್ಮವನ್ನು ತೊರೆದು ಜನಿವಾರವನ್ನು ಹರಿದು ಬರುವುದೇ ಬಸವಣ್ಣನ ಮೊದಲ ಪ್ರತಿಟನೆಯಾಗಿದೆ. ಅಲ್ಲಿಂದ ಆತ ಸಾಂಪ್ರದಾಯಕವಾದದನ್ನೆಲ್ಲ ಪ್ರಶ್ನಿಸುತ್ತ, ಪ್ರತಿಭಟಿಸುತ್ತ ಮುಂದೆ ಸಾಗುವ ಕ್ರಿಯೆ ನಿಜವಾದ ಜನಪರ ಮೌಲ್ಯಗಳ ಹುಡುಕಾಟವಾಗುತ್ತದೆ.[14] ಹೀಗಾಗಿ ಬಸವಣ್ಣನ ಬದುಕೇ ಒಂದು ಪ್ರತಿಭಟನೆಯಾಗಿದೆ, ಪ್ರತಿಭಟನೆಯ ಹಲವು ನೆಲೆಗಳು ಬಸವಣ್ಣನ ಬಾಳಿನಲ್ಲಿ ಸಿಗುತ್ತವೆ. ಪ್ರಾಮಾಣಿಕವಾಗಿ ಆತ್ಮಶೋಧನೆ ನಡೆಸಿಕೊಳ್ಳುವುದು ಬಸವಣ್ಣನ ಆಂತರಿಕ

ಪ್ರತಿಭಟನೆಯಾದರೆ, ಸಾಮಾಜಿಕ ಅಸಮಾನತೆಯ ವಿರುದ್ಧ ಜಾತೀಯತೆಯ ವಿರುದ್ಧ ಮೌಢ್ಯತೆಯ ವಿರುದ್ಧ ಹೋರಾಡುವುದು ಬಾಹ್ಯ ರೀತಿಯ ಪ್ರತಿಭಟನೆಯ ಪ್ರಯತ್ನಗಳನ್ನು ಕಾಣಬಹುದಾಗಿದೆ.

ಬಸವಣ್ಣ ತನ್ನ ಬಗ್ಗೆ ಹೇಳುವ ಈ ವಚನ :

ಹೊನ್ನು-ಹೆಣ್ಣು-ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ
ವೃಥಾ ಬರುದೊರೆ ಹೋಹ ಕೆಡುಕ-ಹಾರುವ ನಾನಲ್ಲ
ಹಾರುವೆನಯ್ಯ ಭಕ್ತರ ಬರವ ಗುಡಿಕಟ್ಟಿ
ಹಾರುವೆನಯ್ಯ ಶರಣರ ಬರವ ಗುಡಿಕಟ್ಟಿ
ಕೂಡಲ ಸಂಗಮದೇವ ವಿಪ್ರಕರ್ಮವ ಬಿಡಿಸಿ
ಅಶುದ್ಧವ ಶುದ್ಧನ ಮಾಡಿದನಾಗಿ

ಬಸವಣ್ಣನವರ ಸ್ವಂತ ಜೀವನದ ಇತಿಹಾಸ ಇಲ್ಲಿದೆ. ಕೂಡಲಸಂಗಮದೇವ ಬಸವಣ್ಣನವರನ್ನು ವಿಪ್ರಕರ್ಮದಿಂದ ಬಿಡಿಸಿದ್ದು ಇತಿಹಾಸ, ಅಶುದ್ಧನಾದವನನ್ನು ಶುದ್ಧನನ್ನಾಗಿ ಮಾಡಿದ ಎಂದು ಹೇಳುವುದು ಮಾತ್ರ ಇತಿಹಾಸದ ವಿವರಣೆಯಾಗಿದೆ. ವಿಪ್ರರೆಲ್ಲರು ಹೊನ್ನು-ಹೆಣ್ಣು-ಮಣ್ಣೆಂದು ಕರ್ಮದ ಬಲೆಯಲ್ಲಿ ಸಿಲುಕಿ ಕೆಟ್ಟು ಹೋದವರು. ಬಸವಣ್ಣನವರು ಕೂಡಲ ಸಂಗನ ಕರುಣೆಯಿಂದ ವಿಪ್ರರ ಕರ್ಮದ ಬಲೆಯಿಂದ ಪಾರಾಗಿ ಬಂದವರು"[15] ಜ್ಞಾನದ ಅವನತಿ ಕರ್ಮಕಾಂಡದಲ್ಲಿ, ಉದ್ಧಾರ ಭಕ್ತಿಯಲ್ಲಿ ಎಂಬುದು ಬಸವನ ಇತಿಹಾಸ. ಹೀಗಾಗಿ ಬಸವಣ್ಣನ ವ್ಯಕ್ತಿತ್ವ ಆಧ್ಯಾತ್ಮಿಕವೂ ಹೌದು, ಇತಿಹಾಸಕವು ಹೌದು. "ಬಾಗೇವಾಡಿಯಲ್ಲಿ ಹುಟ್ಟಿ, ಜಾತಿಯ ಸಂಸ್ಕಾರಗಳನ್ನೆಲ್ಲ ತ್ಯಜಿಸಿ, ಬಿಜ್ಜಳನಲ್ಲಿ ಕರಣಿಕನಾಗಿ, ಭಂಡಾರಿಯಾಗಿ, ದಂಡನಾಯಕನಾಗಿ, ಅನುಭವ ಮಂಟಪವನ್ನು ನಿರ್ಮಿಸಿ, ಕೊನೆಗೆ ಕಪ್ಪಡಿ - ಸಂಗಮನಲ್ಲಿ ಐಕ್ಯ ಹೊಂದಿದ ಬಸವಣ್ಣನವರ ಜೀವನ ಮತ್ತು ಆ ಕಾಲದ ಇತಿಹಾಸ ಒಂದಕ್ಕೊಂದು ಸಮ್ಮುಖವಾದವು.[16] ಈ ಎಲ್ಲ ಅಂಶಗಳನ್ನು ಅವಲೋಕನದಿಂದ ಬಸವನ ಬದುಕನ್ನು ಗುರುತಿಸಬಹುದಾಗಿದೆ. ಸಂಪ್ರದಾಯ ಬಂಧನದ ಸಂಕೇತವಾದ ಜನಿವಾರ ತೊರೆದು ಕೂಡಲಸಂಗಮಕ್ಕೆ ತೆರಳಿ ಜಾತವೇದ ಮುನಿಗಳ ಮಾರ್ಗದರ್ಶನದಲ್ಲಿ ತಮ್ಮ ಶಿಕ್ಷಣ ಮುಂದುವರಿಸಿದರು. ಆಗಲೇ ವಯಸ್ಸನ್ನು ಮೀರಿದ ಪ್ರೌಢ ವ್ಯಕ್ತಿತ್ವ ರೂಪುಗೊಳ್ಳುತ್ತಲಿತ್ತು.

ಕೂಡಲ ಸಂಗಮದಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ, ಕೂಡಲಸಂಗಮದೇವನಲ್ಲಿ ಭಕ್ತಿಯೂ ಬೆಳೆಯಿತು. ಬಸವ ಕೂಡಲಸಂಗಮಕ್ಕೆ ಬರುವಾಗ ಅಕ್ಕ ನಾಗಮ್ಮನೂ ಜೊತೆಗೆ ಇದ್ದಳೆಂದು ಹಲವರ ವಾದ. ಕೂಡಲಸಂಗಮವು ಅಕ್ಕನಾಗಮ್ಮನ ಪತಿಯ ಊರಾಗಿದ್ದಿರಬೇಕೆಂದೂ ಎಂ.ಎಂ.ಕಲಬುರ್ಗಿಯವರು ಊಹಿಸಿದ್ದಾರೆ. ಬಾಲ್ಯದಲ್ಲಿಯೇ ವೇದಾಗಮ, ಪುರಾಣ, ಇತಿಹಾಸಗಳನ್ನು ಅಧ್ಯಯನ ಮಾಡಿ ಉಪನಯನವನ್ನು ನಿರಾಕರಿಸಿ, ಕಪ್ಪಡಿ ಸಂಗಮ (ಕೂಡಲಸಂಗಮ) ಕ್ಕೆ ಹೋಗಿ ಅಲ್ಲಿ ಜಾತವೇದ ಮುನಿ (ಈಶಾನ್ಯ ಗುರು)ಗಳ ಶಿಷ್ಯನಾಗಿ, ಸಾಧನೆ ಮುಂದುವರೆಸಿದ. ಗುರುಗಳ ಆಶೆ, ಆದೇಶಗಳಂತೆ "ಶಿವ ಭಕ್ತ ಸಂತತಿಗೆ" ನೆರವಾಗಲೆಂದು ಮಂಗಳವಾಡಕ್ಕೆ ತೆರಳಿ ಬಿಜ್ಜಳನ ಆಸ್ಥಾನದಲ್ಲಿ ಕರಣಿಕನ ವೃತ್ತಿಯನ್ನು ಕೈಗೊಂಡನು. ಅರಸನ ಬೊಕ್ಕಸದ ಸೋರಿಕೆಯನ್ನು ಕಂಡು ಹಿಡಿದು, ಪರಿಹಾರ ಸೂಚಿಸಿದ. ಗುಪ್ತಲಿಪಿಯನ್ನು ಓದಿ, ಬಿಜ್ಜಳನ ಭಂಡಾರಕ್ಕೆ ಅಪಾರ ದ್ರವ್ಯವನ್ನು ಒದಗಿಸಿದನು. ಮುಂದೆ ಬಿಜ್ಜಳ ಕಲ್ಯಾಣದಲ್ಲಿ ಚಕ್ರವರ್ತಿಯಾದಾಗ ಬಸವಣ್ಣ ಮಹಾಮಂತ್ರಿಗಳಾದರು. ಬಲದೇವನ ಮಗಳು ಗಂಗಾಂಬೆ, ಬಿಜ್ಜಳನ ಸಾಕು ಸಹೋದರಿ ನೀಲಲೋಚನೆಯರನ್ನು ವಿವಾಹವಾದನು. ಕಲ್ಯಾಣದ ರಾಜ್ಯ

ಕಲ್ಯಾಣರಾಜ್ಯವಾಗುವಂತೆ ಮಾಡಿರುವರು. ಇಂದಿಗೂ ಕಲ್ಯಾಣ ನಗರ ಬಸವ ಕಲ್ಯಾಣವೆಂದು ಪ್ರಸಿದ್ಧವಾಗಿದೆ. ತನ್ನ ಬಹುಮುಖ ವ್ಯಕ್ತಿತ್ವದಿಂದಾಗಿ ಬಸವೇಶ್ವರರು ಒಂದು ಹೊಸಯುಗದ ಪ್ರಾರಂಭಕ್ಕೆ ಕಾರಣೀಭೂತರಾದರು. ಪ್ರೊಫೆಸರ್ ಕೆ.ಎಸ್. ಶ್ರೀಕಂಠನ್ (ಶ್ರೀ ಎಸ್.ಎಸ್.ಒಡೆಯರ್ ಉಲ್ಲೇಖಿಸಿರುವಂತೆ) ಅವರ ಅಭಿಪ್ರಾಯದಂತೆ "ಬಸವೇಶ್ವರರು ಗೌತಮ ಬುದ್ಧನಂತೆ ಮೃದು ಸ್ವಭಾವದವರೂ, ಮಹಾವೀರನಂತೆ ಸರಳ ಮನಸ್ಕರೂ, ಯೇಸು ಕ್ರಿಸ್ತನಂತೆ ಕೋಮಲ ಹೃದಯಿಯೂ, ಮಹ್ಮದ್ ಪೈಗಂಬರನಂತೆ ಧೈರ್ಯಶಾಲಿಯೂ ಹೀಗೆ ಬಸವೇಶ್ವರರನ್ನು ಯಾವ ಆಯಾಮದಿಂದ ನೋಡಿದರೂ ಅವರೊಬ್ಬ ಪ್ರಕೃತಿಯ ಅತ್ಯಂತ ವಿಸ್ಮಯಕರ ಪ್ರತಿಭಾ ಸೃಷ್ಟಿಯಾಗಿದ್ದಾರೆ".

ಸುಪ್ರಸಿದ್ಧ ಇತಿಹಾಸಕಾರರಾದ ಡಾ.ಪಿ.ಬಿ.ದೇಸಾಯಿಯವರು ಹೇಳುವಂತೆ" ನಾವು ಬಸವೇಶ್ವರರನ್ನು ಹಾಗು ಅವರ ಕೊಡುಗೆಗಳನ್ನು ಒಂದು ದಂತಕಥೆ ಅಥವಾ ಒಂದು ಕಾಲ್ಪನಿಕ ಕಥೆಯೆಂದು ತಿಳಿದುಕೊಳ್ಳದೇ ಅವರನ್ನು ಐತಿಹಾಸಿಕ ಗಣ್ಯ ಪುರುಷರೆಂದು ಪರಿಗಣಿಸಬೇಕು. ಡಾ. ದೇಸಾಯಿಯವರ ಪ್ರಕಾರ ಬಸವೇಶ್ವರರ ಜೀವನದ ಗುರಿ ಕೇವಲ ದೇವರ ಸಂದೇಶಗಳನ್ನು ಪ್ರಚಾರ ಮಾಡಲು ಧಾರ್ಮಿಕ ಆಚರಣೆಗಳನ್ನು ಪಾಲಿಸುವುದಷ್ಟೇ ಅಲ್ಲ, ಜೊತೆಗೆ ಸ್ವತಃ ಅವರೊಬ್ಬ ತತ್ವಜ್ಞಾನಿಯಾಗಿದ್ದು, ಸಮಾಜದ ಎಲ್ಲ ವರ್ಗಗಳ ಸೇವೆ ಹಾಗೂ ಉದ್ಧಾರಕ್ಕಾಗಿ ಶ್ರಮಿಸಿದರು. ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಆಚರಣೆಗೆ ತಂದ ಕ್ರಿಯಾಶೀಲ ನಾಯಕರಾಗಿದ್ದರು. ಬಸವೇಶ್ವರರೊಬ್ಬ ದೂರದೃಷ್ಟಿಯುಳ್ಳ ವ್ಯಕ್ತಿಯಷ್ಟೇ ಆಗಿರದೇ ತಮ್ಮ ಸಮಕಾಲೀನರಿಗಿಂತ ತಮ್ಮ ವಿಚಾರ ಹಾಗೂ ಧ್ಯೇಯಗಳಲ್ಲಿ ಎಷ್ಟೋ ಪಟ್ಟು ಮುಂದಿದ್ದರು.[17] ಈ ನಿಟ್ಟಿನಲ್ಲಿ ಸಮಾಜದಲ್ಲಿ ಅವರು ಸಾಗಿದ ಮಾರ್ಗ ನಿಜವಾಗಿಯೂ ಆಧುನಿಕತೆಯಿಂದ ಕೂಡಿತ್ತು.

ಕೂಡಲಸಂಗಮದಲ್ಲಿ ಬಸವಣ್ಣ ಸುಮಾರು 12 ವರ್ಷಗಳಿದ್ದಿರಬೇಕು. ನಂತರ ಸಂಸಾರಿಕನಾದ ಬಸವಣ್ಣ ತನ್ನ 20ನೆಯ ವಯಸ್ಸಿನಲ್ಲಿ ಗುರುಗಳ ಆದೇಶದಂತೆ ಮಂಗಳವೇಡಕ್ಕೆ ಹೋದನು. ಅದು ತರ್ದವಾಡಿ ನಾಡಿನ ರಾಜಧಾನಿಯಾಗಿತ್ತು. ಚಾಲುಕ್ಯರ ಸಾಮಂತರಾಗಿದ್ದ ಕಲಚೂರಿಗಳು ಆಳ್ವಿಕೆ ಮಾಡುತ್ತಿದ್ದರು. ಬಿಜ್ಜಳ ಪ್ರಾಬಲ್ಯಕ್ಕೆ ಬರುವ ಸಂದರ್ಭದಲ್ಲಿ ಬಸವಣ್ಣ ಕ್ರಿ.ಶ1150-51 ರಲ್ಲಿ ಬಿಜ್ಜಳನ ಭಂಡಾರದ ಕರಣೀಕನಾದ. ಭಂಡಾರಿ ಸಿದ್ಧರಸ ತೀರಿಕೊಂಡ ಮೇಲೆ ಭಂಡಾರಿಯಾದ ತೈಲಪನನ್ನು ಸೋಲಿಸಿ ಬಿಜ್ಜಳ ಕ್ರಿ.ಶ. 1152-53 ರಲ್ಲಿ ಮಂಗಳವಾಡದ ಮಾಂಡಲೀಕನಾದನು. ಬಿಜ್ಜಳನ ರಾಜಧಾನಿ ಕಲ್ಯಾಣ. ಬಸವಣ್ಣನ ಕಾರ್ಯಕ್ಷೇತ್ರವಾಗಿ ಕಲ್ಯಾಣ ಪ್ರಸಿದ್ಧಿ ಪಡೆಯಿತು. ಬಸವಣ್ಣನ ಭಕ್ತಿ, ಕಾಯಕತತ್ವ, ಸಮಾನತೆಗಳು ಪ್ರಸಿದ್ಧಿಗೆ ಬಂದವು. ಕಲ್ಯಾಣದಲ್ಲಿಯೇ ಬಹು ಜನರ ವೈಚಾರಿಕ-ಚರ್ಚೆಗೆ ವೇದಿಕೆಯಾಗಿ "ಅನುಭವ ಮಂಟಪ" ರೂಪ ತಳೆಯಿತು. ಚರ್ಚೆ ಗೋಷ್ಠಿಯಲ್ಲಿ ಹಲವು ಶಿವಶರಣರು ಪಾಲ್ಗೊಂಡು ತಮ್ಮ ಅನುಭಳ-ಅನುಭಾವಗಳನ್ನು ವಚನ ರೂಪಕ್ಕಿಳಿಸಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದರು. ಬಸವಣ್ಣನ ಖ್ಯಾತಿ ಎಲ್ಲ ದಿಕ್ಕುಗಳಿಗೂ ಪಸರಿಸಿತು. ಬಳ್ಳಿಗಾವಿಯ ಅಲ್ಲಮಪ್ರಭು, ಸೊನ್ನಲಿಗೆಯ ಸಿದ್ಧರಾಮ ಕಲ್ಯಾಣಕ್ಕೆ ಆಗಮಿಸಿದರು. ಶರಣರ ವಿಚಾರ ಮಂಥನದಿಂದ ವೀರಶೈವ ಧರ್ಮ ಪ್ರಸಿದ್ಧಿಗೆ ಬಂದಿತು. ಈ ಕಾಲ ಘಟ್ಟದಲ್ಲಿಯೇ ಬಸವಣ್ಣನ ಬಿಜ್ಜಳನ ಮಂತ್ರಿ ಹಾಗೂ ದಂಡಾಧಿಪತಿಯೂ ಆಗಿ ನೇಮಕಗೊಂಡನು. ಭಕ್ತಿ-ಜ್ಞಾನ-ಕಾಯಕ-ಸಮಾನತೆಯ ಪರಿಕಲ್ಪನೆಯ ಅಮೃತಧಾರೆಯನ್ನು ಬಸವಣ್ಣ ಕಲ್ಯಾಣದಲ್ಲಿ ಪಸರಿಸಿದ. ಬಸವಣ್ಣನಿಗೆ ಆಗ ಬಾಲ ಸಂಗಯ್ಯ ಮತ್ತು ಸಿದ್ಧರಸರೆಂಬ ಮಕ್ಕಳು ಹುಟ್ಟಿದ್ದರೆಂದು, ಒಬ್ಬನು ಎಳೆತನದಲ್ಲಿಯೇ ತೀರಿಕೊಂಡನೆಂದೂ, ಇನ್ನೊಬ್ಬನು ಕೆಲ ಕಾಲ ಬದುಕಿದ್ದನೆಂದು ಕೆಲವು ಪುರಾಣಗಳಲ್ಲಿ

ವರ್ಣಿಸಲಾಗಿದೆ. ನಾಡಿನಲ್ಲಿ ವೈಚಾರಿಕತೆ ಹೆಚ್ಚಿದಂತೆಲ್ಲ, ಸಂಪ್ರದಾಯ ವಾದಿಗಳು ಬಸವಣ್ಣನನ್ನು ಕಂಡು ಸಹಿಸದಾದರು. ಬಿಜ್ಜಳ-ಬಸವಣ್ಣರಲ್ಲಿ ಬಿರುಕನ್ನುಂಟು ಮಾಡಲು ಯತ್ನಿಸಿದರು. ಬಸವಣ್ಣನ ಪ್ರಗತಿಪರ ವಿಚಾರಗಳು ಕೆಲವರಿಗೆ ರುಚಿಸಲಿಲ್ಲ. ಹೀಗಾಗಿ ಸ್ವಾರ್ಥ ಸನಾತನವಾದಿಗಳು ಸಂಚು ನಡೆಸಿ ಬಸವಣ್ಣನ ಮೇಲೆ ಹಗೆಸಾಧಿಸಲು ಪ್ರಾರಂಭಿಸಿದರು. ಅವರಲ್ಲಿ ಪ್ರಮುಖರೆಂದರೆ ಬಿಜ್ಜಳನ ಅಳಿಯ ಬರ್ಮರಸ, ಕರಿಯಕೇಶಿಮಯ್ಯ, ಕೊಂಡೆಮಂಜಣ್ಣ, ಕಸಪಯ್ಯ ಹಾಗೂ ಇನ್ನಿತರರು ಇದೇ ಸಂದರ್ಭದಲ್ಲಿ ಕ್ರಾಂತಿಯ ಲಕ್ಷಣಗಳು ಕಲ್ಯಾಣದಲ್ಲಿ ಗೋಚರಿಸಿದವು.

ಬಸವಣ್ಣನವರ ವಿಚಾರಗಳು ಅಂದು ಕ್ರಾಂತಿಕಾರಕವಾಗಿದ್ದವು. ಕರ್ಮಕಾಂಡದಲ್ಲಿ ಬೆಳೆದು ಬಂದ ಸಾಮಾಜಿಕ ಪರಂಪರೆಗೆ ಬಸವಣ್ಣನವರ ಕಾರ್ಯ ವಿರೋಧವಾಗಿ ಪರಿಣಮಿಸಿತು. ಸಮಾನತೆ ಸಾಧಿಸಲು ಚಾತುರ್ವರ್ಣಕ್ಕೆ ಕೊಡಲಿ ಏಟನ್ನು ಹಾಕಿದರು. ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಕಂಕಣ ಕಟ್ಟಿದರು. ಅನುಭವ ಮಂಟಪದಲ್ಲಿ ಬ್ರಾಹ್ಮಣರಿಂದ ಅಸ್ಪೃಶ್ಯರವರೆಗೂ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿ ಹೊಸ ಸಮಾಜ ನಿರ್ಮಿಸಲು ಹೆಣಗಿದರು. ಅಂದಿನ ಸಂಪ್ರದಾಯವಾದಿಗಳಿಗೆ ಇದು ಧರ್ಮ ದ್ರೋಹವಾಗಿ ಕಂಡಿತು. ಹರಳಯ್ಯ ಮಧುವರಸರ ಮಧ್ಯೆ ಸಂಬಂಧ ಬೆಳೆಸಲು ಹೋದಾಗ ಅದು ತುತ್ತತುದಿ ತಲುಪಿತು. ಹರಳಯ್ಯ ಅಸ್ಪೃಶ್ಯನಾಗಿದ್ದ. ಅವರ ಮಗ ಶೀಲವಂತ, ಬ್ರಾಹ್ಮಣನಾದ ಮಧುವರಸ ಅಥವಾ ಮಧುವಯ್ಯನವರ ಮಗಳು ಲಾವಣ್ಯವತಿ ಇವರ ನಡುವೆ ಅಂತರ್ಜಾತೀಯ ವಿವಾಹವನ್ನು ಬಸವಣ್ಣನ ನೇತೃತ್ವದಲ್ಲಿ ಶರಣ ಸಹಮತಿಯೊಂದಿಗೆ ನೆರವೇರಿಸಲಾಯಿತು. ಇಂತಹ ಮದುವೆಯನ್ನು ಅಂದಿನ ಸಮಾಜದಲ್ಲಿ ಊಹಿಸುವುದೂ ಸಾಧ್ಯವಿರಲಿಲ್ಲ. ಆದರೆ ಬಸವಣ್ಣನವರ ದಿಟ್ಟ ನಿಲುವಿನಿಂದ ಈ ಮದುವೆ ಸಂಭವಿಸಿತು. ಅಂದಿನ ಸಮಾಜ ಅದನ್ನು ಅರಗಿಸಿಕೊಳ್ಳಲಾರದೇ ಹೋಯಿತು. ವರ್ಣಸಂಕರದಂತಹ ಅಕಾರ್ಯಕ್ಕೆ ತಕ್ಕ ಶಿಕ್ಷೆಯನ್ನು" ವರ್ಣಪರಿಪಾಲಕನಾದ ಬಿಜ್ಜಳನು ಕೊಡಬೇಕಾಯಿತು. ಮಂತ್ರಿಗಳ, ಅಧಿಕಾರಿಗಳ, ಧರ್ಮಪ್ರಮುಖರ, ಸಂಪ್ರದಾಯವಾದಿಗಳ ಪ್ರಬಲ ಒತ್ತಡ ಆತನ ಮೇಲೆ ಬಂದಂತೆ ತೋರುತ್ತದೆ. ಆದರಿಂದಾಗಿ ಹರಳಯ್ಯ - ಮಧುವರಸರನ್ನು ಎಡೆಊಟೆ ಶಿಕ್ಷೆ ನೀಡಿ ಆತ ಕೊಲ್ಲಿಸಿದ. ಆ ಘಟನೆಯಿಂದ ರೊಚ್ಚಿಗೆದ್ದ ಶರಣರಾದ ಜಗದೇವ ಮಲ್ಲಿಬೊಮ್ಮರಿಂದ ಆತ ಹತನಾದನೆಂಬ ವಿವರ ಪುರಾಣಗಳಲ್ಲಿ ವ್ಯಕ್ತವಾಗಿದೆ. ಈ ವಿಷಯ ಹಲವು ಸಾಹಿತ್ಯಕ ಕೃತಿಗಳಲ್ಲಿ ನಮೂದಾಗಿದೆ. ಅಸ್ಪೃಶ್ಯತೆಯ ನಿವಾರಣೆಗಾಗಿ ಬಸವಣ್ಣ ಕೈಕೊಂಡ ಅತ್ಯಂತ ಕ್ರಾಂತಿಕಾರಕವಾದ ನಿರ್ಧಾರ. ಇದರ ಪರಿಣಾಮ ಘೋರವಾಗಿತ್ತು. ಶಿವಭಕ್ತರ ಕೊಲೆ, ಆದಾದ ನಂತರ ಬಿಜ್ಜಳನ ಹತ್ಯೆಯಲ್ಲಿ ಅದು ಪರ್ಯಾವಸಾನವಾಯಿತು. ಬಿಜ್ಜಳನ ಅಂತ್ಯ ಕ್ರಿ.ಶ.1167ರ ಕೊನೆಯ ವೇಳೆಗೆ ಸಂಭವಿಸಿರಬಹುದೆಂದು ಶಾಸನಗಳ ಆಧಾರದಿಮದ ನಿರ್ಧರಿಸಬಹುದಾಗಿದೆ. ನಂತರ ಆತನ ಶಾಸನಗಳು ಲಭ್ಯವಿಲ್ಲ. ಕ್ರಿ.ಶ.1168 ರಿಂದ ಬಿಜ್ಜಳನ ಮಗ ಸೋವಿದೇವನ ಶಾಸನಗಳು ಲಭ್ಯವಿವೆ. ಕ್ರಿ.ಶ.1168 ರ ವೇಳೆಗೆ ಬಸವಣ್ಣ ಕಲ್ಯಾಣವನ್ನು ತೊರೆದು ಹೋಗಿದ್ದರೆಂಬುದಂತೂ ಸ್ಪಷ್ಟ. ಈ ಎಲ್ಲ ಕ್ಷೋಬೆ-ಗೊಂದಲಗಳಿಂದ ಬೇಸರಪಟ್ಟುಕೊಂಡ ಬಸವಣ್ಣನು ಮನ ನೊಂದು ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಕೂಡಲ ಸಂಗಮದೆಡೆಗೆ ಹೊರಟನೆಂದು ತಿಳಿದು ಬರುತ್ತದೆ. ಕಲ್ಯಾಣದ ಕ್ರಾಂತಿಯಿಂದ ರಾಜಕೀಯಸ್ಥಿತಿಯಲ್ಲಿ, ಪ್ರಕ್ಷುಬ್ಧತೆ ತಲೆದೋರಿ ಹಿಂಸೆ ತಾಂಡವವಾಡಲಾರಂಭಿಸಿತು. ಮನನೊಂದ ಬಸವಣ್ಣ ಕೂಡಲಸಂಗಮದಲ್ಲಿಯೇ ಕ್ರಿ.ಶ.1168 ರಲ್ಲಿ ಐಕ್ಯವಾಗಿರಬಹುದೆಂದು ತಿಳಿಯಬಹುದಾಗಿದೆ[18] ಎಂದು ಡಾ. ಬಸವರಾಜ ಸಬರದರವರು ಅಭಿಪ್ರಾಯಪಟ್ಟಿರುವರು.

ಇನ್ನು ಅವರು ಐಕ್ಯವಾದುದು ಕೂಡಲಸಂಗಮದಲ್ಲಲ್ಲ! ಅಲ್ಲಿಗೆ ಸುಮಾರು 30-40 ಮೈಲಿ ದೂರದಲ್ಲಿ ಕೊಡೆಯ ಕಲ್ಲಿನಲ್ಲಿ ಎಂದು ಹೇಳುವ ಒಂದು ಅಭಿಪ್ರಾಯವೂ ಇದೆ. ಆದರೆ ತಕ್ಕಷ್ಟು ಆಧಾರಗಳಿಲ್ಲ. ಹೀಗಾಗಿ ತಾನು ಮೊದಲು ಇದ್ದು ಸಾಧನೆ ಮಾಡಿ ಹೋಗಿದ್ದ ಸಂಗಮಕ್ಕೆ ಬಂದು ಐಕ್ಯರಾದರೆಂದು ಹೇಳಿರುವ ಕಾವ್ಯಗಳ ಕಥನವೇ ಸತ್ಯವೆಂಬಂತೆ ತೋರುತ್ತದೆ. ಬಸವನ ಜೀವನ ವೃತ್ತಾಂತವನ್ನು, ಇದುವರೆಗಿನ ವಿವೇಚನೆಯಿಂದ ಸಮರ್ಥಿತವಾದ ಅವರ ಜೀವನದ ಪ್ರಮುಖ ಘಟನಾವಳಿಗಳನ್ನು ಸಂಕ್ಷಿಪ್ತವಾಗಿ ಈ ರೀತಿ ನಿರೂಪಿಸಬಹುದು. ಮಾದರಸ ಮಾದಲಾಂಬೆಯರಿಗೆ ಮಗನಾಗಿ ಕ್ರಿ.ಶ.1131 ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನ್ಮವೆತ್ತಿದ. ಆತನು ಜನಿಸಿದ್ದು, ಬ್ರಾಹ್ಮಣಕುಟುಂಬದಲ್ಲಿ. ಬ್ರಾಹ್ಮಣ ಆಚಾರ-ವಿಚಾರಗಳು ಮತ್ತು ಧಾರ್ಮಿಕ ನಡಾವಳಿಗಳಿಗೆ ಜಿಗುಪ್ಸೆಪಟ್ಟು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿ, ಚಿಕ್ಕವನಿರುವಾಗಲೇ ಪ್ರತಿಭಟಿಸಿದನು. ಯಜ್ಞೋಪವೀತವನ್ನು ಕಿತ್ತು ಹಾಕಿ ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಈಶಾನ್ಯ ಗುರುಗಳ ಬಳಿ ದೀಕ್ಷೆಯನ್ನು ಶೈವಸಿದ್ಧಾಂತಗಳ ಪರಿಜ್ಞಾನವನ್ನು ಪಡೆದನು. ಈಶಾನ್ಯರು ಬಹುಶಃ ಪಾಶುಪತಿ ಪಂಥಕ್ಕೆ ಸೇರಿದವರು. ಬಸವ ತನ್ನ ಪ್ರೌಢಿಮೆ, ವಿದ್ಯೆ, ಸಾಮರ್ಥ್ಯಗಳಿಂದಾಗ ಮಂಗಳವಾಡದ ಬಲಿಷ್ಠ ಅರಸನಾಗಿದ್ದ ಕಲಚೂರಿ ಬಿಜ್ಜಳನ ಬಳಿ ಕರಣಿಕನಾಗಿ ಕೆಲಸಕ್ಕೆ ಸೇರಿದನು. ಅವನ ಸೇವೆ ಕೋಶಾಧಿಕಾರಿ ಸಿದ್ಧದಂಡಾಧಿಪನ ಗಮನ ಸೆಳೆಯಿತು. ಸಿದ್ಧದಂಡಾಧಿಪನು ಮೃತನಾದ ನಂತರ ಅವನ ಪದವಿ ಮತ್ತು ಆಸ್ತಿ-ಪಾಸ್ತಿಗಳೆಲ್ಲವೂ ಬಸವನಿಗೆ ಸೇರಿದವು. ಬಿಜ್ಜಳ ಕೋಶಾಧ್ಯಕ್ಷನನ್ನಾಗಿ ನೇಮಕ ಮಾಡಿಕೊಂಡನು. ಬಿಜ್ಜಳನೊಂದಿಗೆ ಬಸವನಿಗೆ ಅಪಾರವಾದ ನಂಬಿಕೆ-ವಿಶ್ವಾಸ ಬೆಳೆದವು. ಆದರೆ ಬಸವನ ವಿರೋಧಿಗಳು ರಾಜನ ಮನಸ್ಸು ಕೆಡಿಸಲು ಅವರಿಬ್ಬರ ನಡುವೆ ವಿಶ್ವಾಸ ಕ್ರಮೇಣ ಕ್ಷಯಿಸಿತು. ಬಸವನ ಧಾರ್ಮಿಕತೆ, ವೈಚಾರಿಕತೆ, ಬ್ರಾಹ್ಮಣ ವ್ಯವಸ್ಥೆಗಳ ಬಗೆಗೆ ಅಸಮಾಧಾನ, ಅವನೊಂದಿಗಿದ್ದ ಶಿವಶರಣರು, ಜನಪ್ರಿಯತೆ-ಇವು ಅವನ ಶತ್ರುಗಳಿಗೆ ಅಹಿತವಾಗಿ ಕಂಡವು. ಬಿಜ್ಜಳನು ಚಾಲುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡು ಕಲ್ಯಾಣದ ಚಕ್ರವರ್ತಿಯಾಗಲು ಬಸವನೂ ತನ್ನ ಪ್ರಭುವಿನೊಂದಿಗೆ ನೂತನ ರಾಜಧಾನಿಗೆ ತೆರಳಿದನು. ಈ ಕಲ್ಯಾಣವೂ ವೀರಶೈವ ಆಂದೋಲನದ ಮುಖ್ಯ ಕೇಂದ್ರವಾಯಿತು. ಬಿಜ್ಜಳನಿಗೂ ಬಸವನಿಗೂ ನಡುವೆ ಭಿನ್ನಾಭಿಪ್ರಾಯ ಬೆಳೆದುದು ಇಲ್ಲಿ. "ಅಸ್ಪೃಶ್ಯತೆಯನ್ನು ಬಸವನು ನಿರಾಕರಿಸಿದ್ದು, ಕಂಬಳಿಯ ನಾಗಿದೇವನ ಮನೆಯಲ್ಲಿ ಊಟ ಮಾಡಿದುದು ಅರಸನಿಂದ ತೀವ್ರ ಖಂಡನೆಗೆ ಎಡೆಗೊಟ್ಟಿತು. ಸ್ಥಾಪಿತವಾಗಿರುವ ವ್ಯವಸ್ಥೆಯನ್ನು ಮುರಿಯುವುದರಿಂದ ಜನರಲ್ಲಿ ತೀವ್ರ ಅಶಾಂತಿಯುಂಟಾಗಿ ಅದನ್ನೂ ಹತೋಟಿಯಲ್ಲಿಡುವುದು ಬಹಳ ಕಷ್ಟವಾಗುತ್ತದೆಂದು ಬಿಜ್ಜಳನು ಹೆದರಿದನು. ಬಸವನೂ ಹೇಗೋ ವಾದ ಮಾಡಿ ರಾಜನನ್ನು ಒಪ್ಪಿಸಿ ಆಗಿನ ಬಿಕ್ಕಟ್ಟನ್ನು ನಿವಾರಿಸಿದನು. ಆದರೆ ಮುಂದಿನ ಒಂದು ಘಟನೆಯು ಕಲ್ಯಾಣದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಮಧುವಯ್ಯ ಎಂಬ ಒಬ್ಬ ಬ್ರಾಹ್ಮಣನ ಮಗಳಿಗೂ ಅಸ್ಪೃಶ್ಯನಾಗಿದ್ದ ಹರಳಯ್ಯನ ಮಗನಿಗೂ ನಡುವೆ ಅಂತರ್ಜಾತೀಯ ವಿವಾಹವು ನಡೆಯಿತು. ಇದಕ್ಕೆ ಬಸವನ ಹಾಗೂ ಅವನ ಅನುಯಾಯಿಗಳ ಆಶೀರ್ವಾದವಿತ್ತು. ಇದು ಧರ್ಮಶಾಸ್ತ್ರಕಾರರು ನಿಷೇಧಿಸಿದ್ದ ಪ್ರತಿಲೋಮ ವಿವಾಹ"[19]

ಕ್ರೋಧತಪ್ತನಾದ ಬಿಜ್ಜಳನು ಹರಳಯ್ಯ ಮತ್ತು ಮಧುವಯ್ಯರನ್ನು ಹಿಡಿತರಿಸಿ ಅವರ ಕಣ್ಣುಗಳನ್ನು ಕೀಳಿಸಿ ಅವರನ್ನು ಶೂಲಕ್ಕೇರಿಸಿದನು. ಈ ಘಟನೆ ಇಡೀ ಜಂಗಮ ಸಮುದಾಯವನ್ನು ಸೀಳುವಂತೆ ಮಾಡಿತು. ಅವರಲ್ಲಿ ಹೆಚ್ಚು ತೀವ್ರಗಾಮಿಗಳಾಗಿದ್ದವರು ಜಗದೇವನ ಮುಖಂಡತ್ವದಲ್ಲಿ ಬಿಜ್ಜಳನನ್ನು ಕೊಲೆ

ಮಾಡಿ ಸೇಡು ತೀರಿಸಿಕೊಂಡರು. ಈ ಘಟನೆಯು ಪ್ರಚೋದಿಸಿದ ಪ್ರತೀಕಾರಗಳಿಂದಾಗಿ ಆಂದೋಲನವು ವಿಸರ್ಜನೆಗೊಂಡಿತು. ಬಸವನು ಕಲ್ಯಾಣವನ್ನು ತೊರೆದು ಕೂಡಲ ಸಂಗಮಕ್ಕೆ ಹೋಗಿ ಅಲ್ಲಿ ಶಿವನಲ್ಲಿ ಐಕ್ಯವಾದನು ಎಂದು ಹೇಳಲಾಗಿದೆ. ಸಕ್ರೀಯ ರಾಜಕಾರಣಿಯಾಗಿದ್ದರೂ ಬಿಜ್ಜಳನ ಕೊಲೆಯ ಹಿಂದೆ ಅವರ ವೈಯಕ್ತಿಕ ಕೈವಾಡವಿತ್ತೆಂಬುದನ್ನು ವಿದ್ವಾಂಸರು ನಿರಾಕರಿಸುತ್ತಾರೆ. ಏಕೆಂದರೆ ಅದು ಅವರ ತತ್ವಗಳಿಗೂ, ನಡುವಳಿಕೆಗೂ ಅವರು ಪಡೆದಿದ್ದ ಸ್ಥಾನಮಾನಕ್ಕೂ ಹೊಂದಿಕೆಯಾಗುವುದಿಲ್ಲ".[20] ಬಸವನ ಚಾರಿತ್ರಿಕ ಹಿನ್ನೆಲೆ, ಐತಿಹಾಸಿಕತೆ 12ನೇಯ ಶತಮಾನವನ್ನೇ ಚರಿತ್ರೆಯಲ್ಲಿ ಮಹತ್ವದ ಕಾಲವೆಂದು ಪ್ರಸಿದ್ಧವಾಗಲು ಬಸವ ಕಾರಣೀಕರ್ತನಾದನು ಎಂದು ಗುರುತಿಸಬಹುದಾಗಿದೆ. "ಧರ್ಮದಲ್ಲಿ ಮತ್ತು ಸಮಾಜದಲ್ಲಿ ಬ್ರಾಹ್ಮಣ ಏಕಸ್ವಾಮ್ಯವನ್ನು ಪ್ರತಿಭಟಿಸಿದ್ದು, ಹೆಚ್ಚುತ್ತಿದ್ದ ಜಾತಿಪಕ್ಷ-ಪಾತ ಭೇದ ಮತ್ತು ಭ್ರಷ್ಟಾಚಾರಗಳನ್ನು ಅತ್ಯಂತ ಕಟುವಾಗಿ ಟೀಕಿಸಿದ್ದು, 12ನೇಯ ಶತಮಾನದಲ್ಲಿ ಎದ್ದ ವೀರಶೈವ ಆಂದೋಲನದ ಮುಖ್ಯಾಂಶಗಳು ಅದರ ಸರಳತೆ ಮತ್ತು ಎಲ್ಲರಿಗೂ ಅವಕಾಶಗಳಿಂದಾಗಿ ಸಮಾಜದ ತಳ ವರ್ಗಗಳಲ್ಲೂ ಮನ್ನಣೆಗೆ ಪಾತ್ರವಾಯಿತು.[21] ಬಸವನು ಎಬ್ಬಿಸಿದ ಈ ಪ್ರತಿಭಟನಾ ಆಂದೋಲನವು ಸಮಕಾಲೀನ ಸಾಮಾಜಿಕ ಪ್ರಜ್ಞೆ ಬದಲಾವಣೆಗೆ ನಾಂದಿಹಾಡಿ ಹೊಸ ಸಿದ್ಧಾಂತವೊಂದನ್ನು ಒದಗಿಸಿ ಕೊಟ್ಟಿತು. ವರ್ಣಾಶ್ರಮಧರ್ಮ ಪ್ರತಿಪಾದಿಸಿದ ಗೊಡ್ಡು ಹಾಗೂ ಅಮಾನವೀಯ ಸಂಪ್ರದಾಯದ ವಿರುದ್ಧ ಸಿಡಿದೆದ್ದು ಆಧ್ಯಾತ್ಮಿಕ, ವೈಚಾರಿಕ ತಳಹದಿಯ ಮೇಲೆ ವರ್ಗರಹಿತ, ವರ್ಣರಹಿತ, ಸರ್ವಸಮಾನತೆಯ ಸಮಾಜವನ್ನು ಸ್ಥಾಪಿಸಿದ ಮಹಾ ಮಾನವತಾವಾದಿ ಬಸವಣ್ಣ ಅವರು ಭಾರತದ ಪ್ರಥಮ ವಿಚಾರವಾದಿ ಎಂಬ ಪಾಶ್ಚಾತ್ಯ ಖ್ಯಾತ ಚಿಂತಕರಾದ ಆರ್ಥರ್ ಮೈಲ್ಸ್ ಹೇಳುವ ಮಾತು ಗಮನಾರ್ಹವಾಗಿದೆ.

ಸುಪ್ರಸಿದ್ಧ ಸಂಶೋಧಕರು, ಇತಿಹಾಸಕಾರರು ಆದ ಡಾ.ಪಿ.ಬಿ. ದೇಸಾಯಿಯವರು ತಮ್ಮ "ಶ್ರೀ ಬಸವೇಶ್ವರ ಮತ್ತು ಅವರ ಕಾಲ" ಎಂಬ ಮಹತ್ವಪೂರ್ಣವಾದ ಐತಿಹಾಸಿಕ ಗ್ರಂಥದಲ್ಲಿ ಬಸವಣ್ಣನವರ ಘನ ವ್ಯಕ್ತಿತ್ವವನ್ನು ಕುರಿತು ಹೇಳಿದ ಉಕ್ತಿಗಳು ಉಲ್ಲೇಖನೀಯವಾಗಿವೆ. "ಮಗು ವಸವಣ್ಣನು ಅಸಾಧಾರಣ ಗ್ರಹಣ ಶಕ್ತಿಯುಳ್ಳವನು, ಬಾಲಕ ಬಸವಣ್ಣನು ಅಸಾಮಾನ್ಯ ಬುದ್ಧಿ ಸಾಮರ್ಥ್ಯವುಳ್ಳವನು, ಹದಿವಯದ ಬಸವಣ್ಣನು ಕ್ರಾಂತಿಕಾರಕ ವಿಚಾರವುಳ್ಳವನೂ ಮತ್ತು ಆದರ್ಶಗಳನ್ನು ಹೊಂದಿದವನು, ಯುವಕ ಬಸವಣ್ಣನು ಅಚಲವಾದ ಶ್ರದ್ದೆಯುಳ್ಳವನು ಮತ್ತು ಕ್ರಿಯಾಶೀಲನೂ, ರಾಜಕೀಯದಲ್ಲಿ ಉನ್ನತ ಹುದ್ದೆಯಲ್ಲಿದ್ದವನು, ಆಡಳಿತ ಚತುರನು, ಹೊಸ ಧಾರ್ಮಿಕ ಚಳುವಳಿಯ ಶೂರ ನೇತಾರನು, ಯಾರಿಗೂ ಮಣಿಯದ ಸಮಾಜ ಸುಧಾರಣೆಯ ಪ್ರತಿಪಾದಕನು ಧಾರ್ಮಿಕ(ಗೊಡ್ಡು) ಸಂಪ್ರದಾಯ, ಅಜ್ಞಾನ ಮತ್ತು ಮೂಢನಂಬಿಕೆಗಳ ವಿರುದ್ಧ ಉಗ್ರವಾಗಿ ಹೋರಾಡಿದವನು ಮಾನವನ ಗೌರವವನ್ನು ಎತ್ತಿ ಹಿಡಿದವನು, ಸದ್‌ಭಕ್ತಿ ಸಚ್ಚಾರಿತ್ರ್ಯವುಳ್ಳವರ ಪಕ್ಷಪಾತಿಯು, ಹೊಸ ಧರ್ಮದ ಮತ್ತು ಹೊಸ ಸಮಾಜ ವ್ಯವಸ್ಥೆಯ ಸಂಸ್ಥಾಪಕನು, ಉತ್ಕೃಷ್ಟ ಸಾಹಿತಿಯು, ಅನುಭಾವಿ ಮತ್ತು ಶರಣನು, ತನ್ನ ಜೀವನದ ಘನೋದ್ದೇಶವನ್ನು ಸಾಧಿಸಿದವನು, ಮುಂದಿನ ಪೀಳಿಗೆಯ ಜ್ಞಾನೋದಯಕ್ಕಾಗಿ ಅವರ ಬೆಳಕಿನ ದಾರಿಯನ್ನು ತೋರಿ ಹೋದವನು ಆಗಿದ್ದನು.

<u>ಬಸವ ತತ್ವ ಅಥವಾ ಬಸವನ ವಿಚಾರಗಳು :</u>

ಬಸವಣ್ಣ ಎಚ್ಚೆತ್ತ ಮಾನವ, ಕ್ರಾಂತಿ ಮೂರ್ತಿ, ಜನನಾಯಕ, ಪರಂಪರೆಯಿಂದ ಬಂದ ಪಾಪ-ಪುಣ್ಯದೃಷ್ಟಿ, ಸ್ವರ್ಗ-ನರಕಗಳ ಕಲ್ಪನೆ, ಲೌಕಿಕ-ಆಧ್ಯಾತ್ಮಿಕತೆಗಳ ಒಡಕು, ಸಮಾಜದ ತಾರತಮ್ಯ........ ಬದಲಾಗಲೇಬೇಕೆಂದು ಕ್ರಾಂತಿ ಮಾಡಿದರು. 12ನೇ ಶತಮಾನದಲ್ಲಿ ಪರಂಪರೆಯ ವಿರುದ್ಧ ಪ್ರತಿಭಟನೆ

ಮಾಡಿ ಪರಿವರ್ತನೆ ತರಲು ಬಸವ ಪ್ರಯತ್ನಿಸಿದ. ಬಸವಣ್ಣ ವಚನಗಳಲ್ಲಿ ಅವರ ವಿಚಾರ ಹಾಗೂ ತತ್ವಗಳು ಅಡಕವಾಗಿವೆ. ಏಕದೇವೋಪಾಸನೆ, ಶುದ್ಧ ಭಕ್ತಿ, ಕಾಯಕ, ಸ್ತ್ರೀ ಸ್ವಾತಂತ್ರ್ಯ, ದಾಸೋಹ, ಸಂಸಾರ ಮಾನ್ಯತೆ, ವ್ಯಕ್ತಿ ಸ್ವಾತಂತ್ರ್ಯ ಪರಂಪರೆಯ ಪ್ರತಿಭಟನೆ, ನೂತನ ಸಮಾಜ ನಿರ್ಮಾಣ, ಬಸವಣ್ಣನ ವಿಶಿಷ್ಟ ಸಾಧನೆಗಳಿವು. ಸಾವಿರಾರು ವಚನಗಳಲ್ಲಿ ವಿಸ್ತರಿಸುವ ವಿಚಾರಗಳು ಈ ಕೆಳಗಿನಂತಿವೆ.

ದೇವನೊಬ್ಬ ನಾಮ ಹಲವು, ಅವನು ವೇದಪ್ರಿಯನೂ ಅಲ್ಲ, ನಾದಪ್ರಿಯನೂ ಅಲ್ಲ. ಭಕ್ತಿ ಪ್ರಿಯ, ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ, ಸತ್ಯವ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ, ಅರಿದಡೆ ಶರಣ, ಮರೆದಡೆ ಮಾನವ, ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ; ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ, ಸಂಗ್ರಹ ಬುದ್ಧಿಯಿಂದ ಬದುಕು ಅಸಹನೀಯವಾಗುತ್ತದೆ, ನುಡಿದಂತೆ ನಡೆಯಬೇಕು, ಅಹಂಕಾರದಿಂದ ಅಧೋಗತಿ, ಭೇದ ಭಾವದಿಂದ ದುರ್ಗತಿ, ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಪ್ರತಿಯಾಗಿ ಹಳಿಯಬೇಡ, ಮಹಿಳೆ (ಸ್ತ್ರೀ) ನಮ್ಮ ಸಮಾನ, ದಲಿತ ನಮ್ಮ ಸಮಾನ, ಬಡವರು ನಮ್ಮ ಸಮಾನ, ಮಾನವ ಪವಿತ್ರನಾಗಿರಬೇಕು, ಕಾಯಕ ದಾಸೋಹಿಯಾಗಿರಬೇಕು, ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ, ಜಾತಿ, ಮತ, ಗೋತ್ರಗಳು ದೈವ ನಿರ್ಮಿತವಾದುಗಳಲ್ಲ, ಮಾನವನ ಕೃತಕ, ಅಸತ್ಯ ಸೃಷ್ಟಿಗೆ ಸೇರಿದವುಗಳು.

ಸಾಧಕ ಬಸವಣ್ಣ ನಾಲ್ಕು ಮಾತುಗಳಲ್ಲಿ ತಮ್ಮ ಸಂದೇಶವನ್ನು ಸಾರಿದ್ದಾರೆ. ದಯೆಯನ್ನು ಧರ್ಮವನ್ನಾಗಿ ಪರಿಗ್ರಹಿಸಿ, ಅದಕ್ಕಿಂತ ಹಿರಿದಾದುದು ಯಾವುದೂ ಇಲ್ಲ. ವಿನಯ, ಸದ್ವರ್ತನೆ, ಸದಾಚಾರಗಳ ಕಡೆಗೆ ಲಕ್ಷ್ಯವಿಡಿ. ಕಳ್ಳತನ, ಕೊಲೆ, ವ್ಯಭಿಚಾರ, ಪರ ನಿಂದೆಗಳನ್ನು ದೂರೀಕರಿಸಿ. ಸ್ವರ್ಗ ನರಕಗಳು ಬೇರೆ ಎರಡು ಲೋಕಗಳೆಂಬುದನ್ನು ಮರೆತು ಮನುಷ್ಯ ತನ್ನ ವರ್ತನೆ, ವಿಚಾರಗಳಿಂದ ಇಹಲೋಕವನ್ನೇ ಸ್ವರ್ಗವನ್ನಾಗಿಯೂ ಮಾಡಬಹುದು, ನರಕವನ್ನಾಗಿಯೂ ಮಾಡಬಹುದೆನ್ನುವುದನ್ನು ಸದಾಸ್ಮರಣೆಯಲ್ಲಿರಲಿ ಎಂದಿದ್ದಾರೆ.

- ಲೋಕದ ನಡತೆಯನ್ನು ತಿದ್ದಹೋಗುವ ಮುನ್ನ ವ್ಯಕ್ತಿ. ತನ್ನ ತಾನರಿಯಬೇಕು, ತನ್ನ ಡೊಂಕನ್ನು ತಿದ್ದಿಕೊಳ್ಳಬೇಕು.
- ವರ್ಗ, ವರ್ಣ, ಜಾತಿ, ಕುಲ, ಕಾಯಕ ಮತ್ತು ಲಿಂಗಭೇದಗಳಿಲ್ಲದೇ ಸಮಾನತೆ ಸಾರಿದರು.
- ಕರ್ಮ ಸಿದ್ಧಾಂತವನ್ನು ಬಿಟ್ಟು ಕಾಯಕ ಸಿದ್ಧಾಂತವನ್ನು ಹಿಡಿಯುವುದು.
- ಜೀವ ವಿರೋಧಿ ಶಸ್ತ್ರ, ಶಾಸ್ತ್ರ, ಮೂರ್ತಿ ಪೂಜೆ ತ್ಯಜಿಸುವುದು.
- ಸಕಲ ಜೀವಾತ್ಮಂಗೆ ಲೇಸನೇ ಬಯಸುವವ ಕುಲಜ.
- ಶ್ರಮದಷ್ಟು ಕೆಲಸ ಮಾಡಿ, ಅಗತ್ಯವಿರುವಷ್ಟು ಪ್ರತಿಫಲ ಪಡೆಯುವುದು.
- ಅಂತರಂಗ ಬಹಿರಂಗ ಶುದ್ಧಿಗಳಿಂದಲೇ ಸದ್ಗತಿ.

ಬಸವ ಒಬ್ಬ ಮುಕ್ತ ಚಿಂತಕನಾಗಿದ್ದನು ಎಂಬುದು ನಿಸ್ಸಂದೇಹ. ಚಿಂತನೆಯ ಚಿಲುಮೆಯನ್ನು ವಚನಗಳ ಮೂಲಕ ಹೊರಹೊಮ್ಮಿಸಿ ಧಾರ್ಮಿಕ ನೆಲೆಯ ಮೇಲೆ ನಿಂತು ಸಾಮಾಜಿಕ, ಆರ್ಥಿಕ, ಧಾರ್ಮಿಕ ಪ್ರತಿಭಟನೆಯನ್ನು ಮಾಡಿದ್ದು, ಚರಿತ್ರೆಯ ಮಹತ್ವದ ಸಂಗತಿ.

3.2 ಬಸವಣ್ಣನ ಪ್ರತಿಭಟನಾ ನೆಲೆಗಳು : ಬಸವತತ್ವ.

ಬಸವಣ್ಣನವರ ಪ್ರತಿಭಟನೆಯನ್ನು ಗೆರೆ ಕೊರೆದಂತೆ ಸಾಮಾಜಿಕ ಪ್ರತಿಭಟನೆ, ಧಾರ್ಮಿಕ ಪ್ರತಿಭಟನೆ, ಆರ್ಥಿಕ ಪ್ರತಿಭಟನೆ ಎಂದು ವಿಂಗಡಿಸುವುದು ಕಷ್ಟ ಸಾಧ್ಯ. ಏಕೆಂದರೆ ಅವು ಒಂದರೊಡನೊಂದು ಬೆರೆತು ಹೋಗಿವೆ. ಬಸವಣ್ಣನ ನೇತೃತ್ವದಲ್ಲಿ ಶರಣರು ವಿವಿಧ ಸಾಮಾಜಿಕ ಸ್ತರಗಳನ್ನು, ವಿವಿಧ ಕಾಯಕಗಳನ್ನು ಪ್ರತಿನಿಧಿಸುವವರಾಗಿದ್ದಾರೆ. ಅತ್ಯಂತ ಮೇಲ್ವರ್ಗ-ಅತ್ಯಂತ ಕೆಳ ವರ್ಗದ ವರೆಗಿನ ಚಿಂತಕರೆಲ್ಲ ಕೂಡಿ ಕಲ್ಯಾಣದಲ್ಲಿ "ಅನುಭವ ಮಂಟಪ" ವನ್ನು ನಿರ್ಮಿಸಿಕೊಂಡು ಸಾಮೂಹಿಕವಾಗಿ ಹೊಸ ವಿಚಾರ ಪ್ರಣಾಳಿಯೊಂದನ್ನು ಹುಟ್ಟು ಹಾಕಿದರು. ಅದನ್ನು ಧರ್ಮವೆನ್ನದೆ "ಮಾರ್ಗ"ವೆಂದು ಕರೆದು ಆ ಮಾರ್ಗದಲ್ಲಿ ಸಾಗಲು ಮುಕ್ತ ಕರೆಯನ್ನು ನೀಡಿ ಲಿಂಗವನ್ನು ಸಮಾನತೆಯ ಕುರುಹಾಗಿ ಬಳಸಿ ತಮ್ಮ ಚಿಂತನೆಯ ಚಿಲುಮೆಯನ್ನು ವಚನಗಳ ಮೂಲಕ ಹೊರ ಹೊಮ್ಮಿಸಿ ಧಾರ್ಮಿಕ ನೆಲೆಯ ಮೇಲೆ ನಿಂತು ಧಾರ್ಮಿಕ, ಆರ್ಥಿಕ, ಸಾಮಾಜಿಕ ಪ್ರತಿಭಟನೆಯನ್ನು ಮಾಡಿದ್ದು, ಚರಿತ್ರೆಯ ಮಹತ್ವದ ಸಂಗತಿ"[22] ಬಸವಣ್ಣ ಭಕ್ತನಾಗಿದ್ದಂತೆ ಬಂಡಾಯಗಾರನೂ, ಪ್ರತಿಭಟನಾಕಾರನೂ ಆಗಿದ್ದ, ಮನದೊಳಗಿನ ಸ್ವಾರ್ಥದ ವಿರುದ್ಧ, ತಮ್ಮಲ್ಲಿರಬಹುದಾದ ಸಾಂಪ್ರದಾಯಿಕ ನೆಲೆಗಳ ವಿರುದ್ಧ ಬಂಡಾಯವೆದ್ದರು. ಅಂತೆಯೇ ಅವರಿಗೆ ಸಮಾಜದ ಸ್ಥಾಪಿತ ನಿಲವುಗಳ ವಿರುದ್ಧ ಪ್ರತಿಭಟಿಸಲು ಸಾಧ್ಯವಾಯಿತು. ಬಸವಣ್ಣನ ಬದುಕೇ ಒಂದು ಪ್ರತಿಭಟನೆಯಾಗಿದೆ. ಪ್ರತಿಭಟನೆಯ ಹಲವು ನೆಲೆಗಳು ಬಸವಣ್ಣನ ಬದುಕಿನಲ್ಲಿ ಕಾಣಲು ಸಿಗುತ್ತವೆ, ವೈದಿಕ ಧರ್ಮವನ್ನು ತೊರೆದು ಜನಿವಾರವನ್ನು ಹರಿದು ಬರುವುದೇ ಬಸವಣ್ಣನ ಮೊದಲ ಪ್ರತಿಭಟನೆಯಾಗಿದೆ. ಅಲ್ಲಿಂದ ಸಾಂಪ್ರದಾಯಿಕವಾದದ್ದನ್ನೆಲ್ಲ ಪ್ರಶ್ನಿಸುತ್ತ, ಪ್ರತಿಭಟಿಸುತ್ತ ಮುಂದೆ ಸಾಗುವ ಕ್ರಿಯೆ ನಿಜವಾದ ಜನಪರ ಮೌಲ್ಯಗಳ ಹುಡುಕಾಟವಾಗುತ್ತದೆ. ತನ್ನ ಮನಸನ್ನೇ ತಾನು ಒರೆಗೆ ಹಚ್ಚಿಕೊಳ್ಳುವುದು, ತನ್ನನ್ನು ತಾನೇ ಪರೀಕ್ಷೆಗೊಡ್ಡಿಕೊಳ್ಳುವುದು ಪ್ರಾಮಾಣಿಕವಾಗಿ ಆತ್ಮಶೋಧನೆ ನಡೆಸಿಕೊಳ್ಳುವುದು ಬಸವಣ್ಣನ ಆಂತರಿಕ ಪ್ರತಿಭಟನೆಯ ಮಗ್ಗಲುಗಳಾದರೆ, ಸಾಮಾಜಿಕ ಅಸಮಾನತೆಯ ವಿರುದ್ಧ, ಜಾತೀಯತೆಯ ವಿರುದ್ಧ, ಮೌಢ್ಯತೆಯ ವಿರುದ್ಧ ಹೋರಾಡುವುದು ಬಾಹ್ಯ ರೀತಿಯ ಪ್ರತಿಭಟನೆಯ ಪ್ರಯತ್ನಗಳಾಗಿವೆ. ಬಸವಣ್ಣ ವಿಮರ್ಶೆ, ಸ್ವ-ವಿಮರ್ಶೆ ಮೂಲಕ ಪ್ರತಿಭಟನೆಯ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ಬಸವಣ್ಣನವರ ಪ್ರತಿಭಟನೆಯ ಉದ್ದೇಶ ಈ ಸಮಾಜ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಹೊಡೆದೋಡಿಸುವದಾಗಿದ್ದರಿಂದ ಇಲ್ಲಿ ಯಾರಿಗೂ ಅಹಿತವಾಗುವಂತಹ ನುಡಿಯಿರಲು ಸಾಧ್ಯವಿಲ್ಲ. ಬಸವಣ್ಣನ ಸಿಟ್ಟು-ಸೆಡವು ಇರುವುದು ಮೊದಲು ತನ್ನ ಮೇಲೆ ನಂತರ ಸಮಾಜಿಕ ವ್ಯವಸ್ಥೆಯ ಮೇಲೆ. ಇಂತಹ ಮಾನವೀಯ ಹೋರಾಟಗಾರನ ಪ್ರತಿಭಟನೆಯ ಗುಣ ಪ್ರಸ್ತುತ ಸಂದರ್ಭಕ್ಕೆ ಅಗತ್ಯವಾಗಿದೆ. ಏಕೆಂದರೆ ಇಂದಿನ ಸಂದರ್ಭದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿಯುಂಟಾಗಿದೆ. ಆದರೆ ಮಾನವೀಯ ಮೌಲ್ಯಗಳು ನಿರೀಕ್ಷಿಸಿದಂತೆ ಬೆಳೆದು ಬರಲಿಲ್ಲ. ಮನುಷ್ಯ ಏನೆಲ್ಲಾ ಆಗಬಹುದು. ಆದರೆ ಮನುಷ್ಯನಾಗಿ ಬದುಕುವುದು ಕಷ್ಟ. ಇಂದಿನ ಸಮಾಜದಲ್ಲಿ ಈರ್ಷೆ-ವೈಷಮ್ಯ ಪ್ರತ್ಯೇಕತೆ, ತಾರತಮ್ಯ, ಅಸಮಾನತೆ, ಶೋಷಣೆ,

ದಬ್ಬಾಳಿಕೆಗಳು ತಾಂಡವವಾಡುತ್ತಲಿವೆ. ಮನುಷ್ಯ ತನ್ನನ್ನು ತಾನರಿತು ಬಾಳಿದರೆ ಸಮಾಜ ಸಮಸ್ಯೆಯಿಂದ ಮುಕ್ತವಾಗಬಲ್ಲದು. ಇಂದು ದೇಶವೇ ಉರಿಯತೊಡಗಿದೆ. ಇದರ ಶಮನಕ್ಕೆ ವಿಚಾರವಾದಿಗಳ, ಚಿಂತಕರ ಆಲೋಚನೆಗಳು ನಮಗೆ ಮಾರ್ಗದರ್ಶಕವಾಗಬೇಕಾಗಿದೆ. "ದಯವೇ ಧರ್ಮದ ಮೂಲ" ವೆಂದು ಹೇಳಿದ ಬಸವಣ್ಣ ಮಾನವೀಯತೆಯನ್ನು ವಿಸ್ತರಿಸಿದ. ಮಾನವರ ನೋವನ್ನು ಮಾನವರೇ ಅರ್ಥೈಸಿಕೊಳ್ಳಬೇಕಾದ ಸತ್ಯವನ್ನು ಸಾರಿದ. ಜಾತಿ, ವರ್ಗ, ಅಂತಸ್ತು, ದೇಶ, ಭಾಷೆ, ಲಿಂಗ, ವಯಸ್ಸು ಈ ಮುಂತಾದ ಭಿನ್ನತೆಯ ಗೋಡೆಗಳನ್ನು ಕಟ್ಟಿ ಮನುಷ್ಯ-ಮನುಷ್ಯನನ್ನು ದ್ವೇಷಿಸುವುದು, ಸೇಡು ತೀರಿಸಿಕೊಳ್ಳುವುದು ಇತಿಹಾಸದುದ್ದಕ್ಕೂ ಕಂಡು ಬರುತ್ತದೆ. ಆದರೆ ಮನುಷ್ಯನಲ್ಲಿ ಮಾನವೀಯ ಮೌಲ್ಯಗಳು, ಚಿಂತನೆಗಳು ಬೆಳೆದು ಬಂದರೆ ಸೇಡು, ಅಹಂಕಾರ, ಅಸಮಾನತೆಗಳು ಅಳಿದು ಹೋಗುತ್ತವೆ. ಈ ಸತ್ಯವನ್ನು ಬಸವಣ್ಣ ಸ್ಪಷ್ಟಪಡಿಸಿದ, ಮನುಷ್ಯ ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುವ ಸ್ಥಿತಿಯನ್ನು ವಿಡಂಬಿಸಿದ. ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಪರಿಯನ್ನು ವಿವರಿಸಿ, ಸಮಾನತೆಯನ್ನು ಬಿತ್ತರಿಸಲು ಪ್ರಯತ್ನಿಸಿದ.

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ"[23]

ವಚನ 62

"ಕಾಗೆ ಒಂದಗುಳ ಕಂಡಡೆ ಕರೆಯದೇ ತನ್ನ ಬಳಗವನು?
ಕೋಳಿ ಒಂದು ಕುಟುಕು ಕಂಡಡೆ ಕೂಗಿ ಕರೆಯದೇ ತನ್ನ ಕುಲವನೆಲ್ಲವ?:[24]

ವಚನ 437

ಇಂತಹ ಅನೇಕ ವಚನಗಳ ಮೂಲಕ ಬಸವಣ್ಣ ಮನುಷ್ಯರಲ್ಲಿ ಮಾನವೀಯ ಪ್ರಜ್ಞೆಯನ್ನು ಮೂಡಿಸಿದ. ಕೂಡಿ ಬದುಕುವ, ಹಂಚಿಕೊಂಡು ತಿನ್ನುವ ಕಾಗೆ ಕೋಳಿಗಳ ಉದಾಹರಣೆಯನ್ನು ಕೊಟ್ಟು ಮನುಷ್ಯನಾದವ ಕಾಗೆ-ಕೋಳಿಗಳಿಗಿಂತಲೂ ಕಡೆಯಾದರೆ ಹೇಗೆ? ಎಂದು ಪ್ರಶ್ನಿಸುವುದರ ಮೂಲಕ ಮನುಷ್ಯನ ಮಾನವೀಯತೆಯನ್ನು ಎಚ್ಚರಿಸಿದ. ಮನುಷ್ಯತ್ವವನ್ನು ಮರೆತು ಅಹಂಕಾರದಿಂದ ಮೆರೆವಂತವರನ್ನು ಕಂಡು ತೀವ್ರವಾಗಿ ವಿಡಂಬಿಸಿದ. ಕೇವಲ ಆರ್ಥಿಕ-ಸಾಮಾಜಿಕ ಸಮಾನತೆ ಬಂದಾಕ್ಷಣ ಮನುಷ್ಯ ಮೇಲೆಕ್ಕೇರಲಾರ, ಮಾನವೀಯತೆ ಬೆಳೆದಾಗ ಮಾತ್ರ ಇದು ಸಾಧ್ಯ. ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿ ಮನುಷ್ಯನಿಗೆ ಬೆಲೆ ಕೊಟ್ಟ ಬಸವಣ್ಣನ ವಿಚಾರಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಬಸವಣ್ಣ ಪ್ರಮುಖವಾಗಿ ಮನಸ್ಸು ಕಟ್ಟುವ ಕೆಲಸವನ್ನು ಮಾಡಿದ. ಮಾನವೀಯತೆಯನ್ನು ಬೆಳೆಸುವುದೇ ನಿಜವಾದ ಪ್ರತಿಭಟನೆ ಎಂದು ತಿಳಿದುಕೊಂಡ. ಅಧಿಕಾರ ಅಂತಸ್ತುಗಳಿಗಿಂತ ಸಾಂಸ್ಕೃತಿಕ ಸಾಮಾಜಿಕವಾದ ಸಮಾನತೆ ಬಹು ದೊಡ್ಡದೆಂದು ಭಾವಿಸಿದ." ಬೇರೆಯವರಿಗಿಂತ ಮಿಗಿಲಾಗಿ ಕರ್ನಾಟಕದಲ್ಲಿ ಒಂದು ಸಾಮಾಜಿಕ-ಧಾರ್ಮಿಕ ಆಂದೋಲನದ ನೇತೃತ್ವ ವಹಿಸಿ ನಡೆಸಿದವನು ಬಸವ, ಸತ್ಯ, ಮಿಥ್ಯಗಳ ತಾತ್ವಿಕ ಚರ್ಚೆಯಿಂದ ಮೇಲೇರಿ, ತಾನು ಎಲ್ಲಿಂದ ಉದಿಸಿ ಬಂದನೋ ಆ ಸಮಾಜದ ವಿಷಯವಾಗಿ ವ್ಯವಹರಿಸಿದವನು. ಅದರಲ್ಲಿ ವ್ಯಕ್ತವಾಗುತ್ತಿದ್ದ ಅಸಮಾನತೆ ಮತ್ತು ಭ್ರಷ್ಟಾಚಾರಗಳನ್ನು ಪ್ರತಿಭಟಿಸಿದನು"[25] ಹೀಗೆ ಸಮಾನತೆಯ ಹಕ್ಕಿಗಾಗಿ ಬಸವ ಪ್ರಯತ್ನಿಸಿದ. ಪರಿವರ್ತನೆ ತರಬಯಸಿದ. ಸಾಮಾಜಿಕ-ಆರ್ಥಿಕ-ಧಾರ್ಮಿಕ ಸಮಾನತೆಗಾಗಿ ಸುಧಾರಕ ಹಾಗೂ ಪ್ರತಿಭಟನಾಶೀಲ ಆಂದೋಲನದ ನಾಯಕನಾಗಿ ಕರ್ನಾಟಕದ ಚರಿತ್ರೆಯಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿದನು. ಅನ್ಯಾಯ - ಅಸಮಾನತೆ ತುಂಬಿದ ಸಮಾಜ ವ್ಯವಸ್ಥೆಗೆ ಭಾರೀ ಪೆಟ್ಟುಗಳನ್ನಂತೂ ಕೊಟ್ಟರು. ಆ ಅನ್ಯಾಯ, ಅಸಮತೆಗಳಿಗೆ ತುತ್ತಾಗಿದ್ದವರಿಗೆ ಹೊಸ ಆಸೆ ನೀಡಿದರು.

ಜನರಲ್ಲಿ ಪ್ರತಿಭಟನೆಯ ಕಿಡಿ ಹೊತ್ತಿಸಿ ಭೇದಭಾವಗಳನ್ನು ಸುಟ್ಟು ಸಮಾನತೆಯ ಮತ್ತು ಬಿಡುಗಡೆಯ ಹೊಸ್ತಿಲಲ್ಲಿ ತಂದು ನಿಲ್ಲಿಸಿದವರು ಬಸವಣ್ಣ. ಈ ಅರ್ಥದಲ್ಲಿ ಕರ್ನಾಟಕದಲ್ಲಿ ಸಾಮಾಜಿಕ ಸುಧಾರಣೆಯ ಪ್ರಯತ್ನಕ್ಕೆ ಪ್ರತಿಭಟನಾತ್ಮಕ ಚಳುವಳಿ ಆರಂಭಿಸಿದರು.

ಬಸವ ಹುಟ್ಟಿನಿಂದ ಬ್ರಾಹ್ಮಣ; ಆದರೆ ತಾನು ಬ್ರಾಹ್ಮಣ ತಂದೆ-ತಾಯಿಗಳಿಗೆ ಹುಟ್ಟಿದವನಲ್ಲವೆಂದೂ ತಾನು ಡೋಹರಕಕ್ಕಯ್ಯ ಮಾದರಚೆನ್ನಯ್ಯರ ದಾಸ-ದಾಸಿಯರ ಅಕ್ರಮ ಸಂಬಂಧದಿಂದ ಜನಿಸಿದವನೆಂದೂ ಹೇಳಿಕೊಂಡು ಸಮಾಜದ ತೀರ ಕೆಳಸ್ತರದ ಜೊತೆ ತನ್ನನ್ನು ತಾನು ಸಮೀಕರಿಸಿಕೊಂಡ. ಆ ಮೂಲಕ ತನ್ನನ್ನು ಅಬ್ರಾಹ್ಮಣೀಕರಿಸಿಕೊಳ್ಳಲು ಯತ್ನಿಸಿದ. (ಇಂತಹದೊಂದು ಉದಾಹರಣೆ: ಆಧುನಿಕ ಕಾಲವೂ ಸೇರಿದಂತೆ ಭಾರತದ ಚರಿತ್ರೆಯಲ್ಲಿ ದೊರಕುವುದು ಅಸಂಭವ)[26] ಅಸ್ಪೃಶ್ಯತೆ ಈ ದೇಶದ ಜ್ವಲಂತ ಸಮಸ್ಯೆ. ಇದರ ನಿವಾರಣೆಗೆ ಸೈದ್ಧಾಂತಿಕವಾಗಿ ಹೋರಾಡಿದ ವ್ಯಕ್ತಿ ಬಸವಣ್ಣ. ಇಂದಿಗೂ ಅಸ್ಪೃಶ್ಯತೆ ಅಳಿದಿಲ್ಲ, ಹೀಗಾಗಿ ಈ ಸಮಸ್ಯೆಯ ನಿವಾರಣೆಗೆ ಬಸವಣ್ಣ ಅಂದು ಆಲೋಚಿಸಿದ ವಿಚಾರಗಳೆಲ್ಲ ಇಂದಿಗೂ ಪ್ರಸ್ತುತವೆನಿಸುತ್ತದೆ.

"ಬಸವಣ್ಣನ ಪ್ರತಿಭಟನಾತ್ಮಕ(ಹೋರಾಟ) ಆಂದೋಲನ ಇದ್ದಕ್ಕಿದ್ದಂತೆ ಆರಂಭವಾಗುವುದಿಲ್ಲ. ಒಂದು ಆಕಸ್ಮಿಕ ಘಟನೆಯೆಂಬಂತೆ ಇದ್ದಕ್ಕಿದ್ದಂತೆ ಸ್ಫೋಟಿಸುವುದಿಲ್ಲ. ಅದರ ಉಗಮಕ್ಕೆ ಒಂದು ಕಾರಣ, ಒಂದು ಗುಪ್ತ ಬೆಳವಣಿಗೆಯ ಚರಿತ್ರೆ ಇರುತ್ತದೆ. ಸಾಮಾನ್ಯವಾಗಿ ಒಂದು ಜನತೆಯ ಅನೇಕ ವರ್ಷಗಳ ಅದುಮಿಟ್ಟ ತೀವ್ರ ಅತೃಪ್ತಿ ಹಾಗೇ ಒಳಗೆ ಬೆಳೆದು ಎಂದೋ ಒಂದು ದಿನ ಆ ಅತೃಪ್ತಿಯು ಪ್ರತಿಭಟನೆಯ ರೂಪದಲ್ಲಿ ವ್ಯವಸ್ಥಿತವಾಗಿ ವ್ಯಕ್ತವಾದಾಗ ಅದು ಒಂದು ಆಂದೋಲನದ ಬೀಜಗಳು ಬಹು ಹಿಂದೆಯೇ ಬಿತ್ತಲ್ಪಟ್ಟಿರುತ್ತವೆ. ಹದಿಮೂರನೇ ಶತಮಾನದಲ್ಲಿ ದಾಖಲಾದ ಬಸವ ಪೂರ್ವಯುಗದ ಒಂದು ಘಟನೆಯು ಇಲ್ಲಿ ಉಲ್ಲೇಖಾರ್ಹ. ಆರನೇಯ ವಿಕ್ರಮಾದಿತ್ಯನು (1077-1127) ಕಲ್ಯಾಣ ಚಾಲುಕ್ಯರಲ್ಲಿ ಅತ್ಯಂತ ಪ್ರಖ್ಯಾತ ಮತ್ತು ಪ್ರಬಲ ಚಕ್ರವರ್ತಿ ಎನಿಸಿಕೊಂಡಿದ್ದ. ಯಾಜ್ಞವಲ್ಕ್ಯ ಸ್ಮೃತಿಯ ವ್ಯಾಖ್ಯಾತ ವಿಜ್ಞಾನೇಶ್ವರನು ತನ್ನ "ಮಿತಾಕ್ಷರಸಂಹಿತೆ"ಯಲ್ಲಿ ಈ ಹಿಂದೆ ವಿಶ್ವವು ವಿಕ್ರಮಾದಿತ್ಯನಂತಹ ಚಕ್ರವರ್ತಿಯನ್ನು ಕಲ್ಯಾಣದಂತಹ ನಗರವನ್ನು ಕಂಡಿರಲಿಲ್ಲವೆಂದು ಉದ್ಧರಿಸಿದ್ದಾನೆ. ಅವರು ಬಿಲ್ಹಣನಂತಹ ಬ್ರಾಹ್ಮಣ ವಿದ್ವಾಂಸರನ್ನು ಕಾಶ್ಮೀರದಿಂದ ಆಹ್ವಾನಿಸಿ, ತನ್ನ ಆಸ್ಥಾನದಲ್ಲಿ ಆಶ್ರಯವನ್ನು ನೀಡಿದ್ದ. ವಿಕ್ರಮಾದಿತ್ಯನ ಕಾಲದ ಒಂದು ಘಟನೆ ಹೀಗಿದೆ : ಅವನ ಮಂತ್ರಿ ಕೊಂಡಗುಳಿ ಕೇಶಿರಾಜನು ಒಬ್ಬ ನಿಷ್ಠಾವಂತ ಶಿವಭಕ್ತನಾಗಿದ್ದು, ಅವನು ಶಿವನಿಗಲ್ಲದೆ ಬೇರೆ ಯಾರಿಗೂ, ಚಕ್ರವರ್ತಿಗೂ ಬಾಗಿ ನಮಸ್ಕರಿಸುತ್ತಿರಲಿಲ್ಲ. ಅವನು ಆಸ್ಥಾನದಲ್ಲಿ ಬಾಗಿ ನಮಸ್ಕರಿಸುತ್ತಿದ್ದುದು ಚಕ್ರವರ್ತಿಗೆಂಬಂತೆ ಕಂಡರೂ ಅವನು ಹಾಗೆ ಬಾಗುತ್ತಿದ್ದುದು ತನ್ನ ಬೆರಳುಂಗುರದ ನಂದಿಗೆ, ಶಿವನ ವಾಹನಕ್ಕೆ. ಅದು ತಿಳಿದ ಚಕ್ರವರ್ತಿಯು ಆ ಬೆರಳುಂಗುರವನ್ನು ಅವನ ಕೈಯಿಂದ ತೆಗೆಯಿಸಿ, ತನಗೆ ಬಾಗಲು ಒತ್ತಾಯಿಸಿದಾಗ ಕೇಶಿರಾಜನು ತನ್ನ ಮಂತ್ರಿಪದವಿಗೇ ರಾಜೀನಾಮೆ ನೀಡಿ ರಾಜಧಾನಿಯ ಹೊರಗೆ ಒಬ್ಬ ಶಿವಭಕ್ತ ದಲಿತನ ಜೊತೆ ವಾಸಿಸಲು ಮುಂದಾಗುತ್ತಾನೆ. ಎಂದರೆ ಹನ್ನೆರಡನೆಯ ಶತಮಾನದ ಆರಂಭದ ಹೊತ್ತಿಗೆ ಮನುಷ್ಯರ ಭೋಗ ಅಧಿಕಾರಗಳ ಬಗ್ಗೆ ತಿರಸ್ಕಾರವೂ, ದಲಿತರಾಗಿದ್ದರೂ ಶಿವಭಕ್ತರ ವಿಷಯದಲ್ಲಿ ಗೌರವ ಭಾವನೆಯೂ, ಸಮಯ ಬಂದರೆ ರಾಜನನ್ನೂ ಧಿಕ್ಕರಿಸುವ ಮನೋಭಾವವೂ ಸಮಾಜದಲ್ಲಿ ಕಾಣಿಸಿಕೊಂಡಿದ್ದವು. ಅದೇ ಕಾಲದ ತೆಲುಗು ಬೊಮ್ಮಣ್ಣ ಎಂಬಾತ ಕೇಶಿರಾಜನಂತೆಯೇ ಚಕ್ರವರ್ತಿಗೆ ಬಾಗಲು ನಿರಾಕರಿಸಿದ. ಅದೇ ಕಾಲದ ಕೆಂಭಾವಿ ಭೋಗಣ್ಣನು

ಅಸ್ಪೃಶ್ಯ ಶಿವಭಕ್ತನೊಬ್ಬನ ಮನೆಯಲ್ಲಿ ಊಟ ಮಾಡಿ ಇದೇ ಊರಿನ ಬ್ರಾಹ್ಮಣ ಸಮೂಹದ ವಿರೋಧ ಕಟ್ಟಿಕೊಂಡಿದ್ದ.[27]

ಮೇಲಿನ ಸಂಗತಿಗಳು ಒಂದು ಅಂಶವನ್ನು ಸ್ಪಷ್ಟಪಡಿಸುತ್ತವೆ ಬಸವನು ನಾಯಕತ್ವ ವಹಿಸಿದ ಆಂದೋಲನದ ಬೇರುಗಳು ಅವನ ಹಿಂದಿನ ಕಾಲದ ಸಮಾಜದಲ್ಲಿ ದುರ್ಬಲ ಪ್ರಮಾಣದಲ್ಲಿಯಾದರೂ ಕಾಣಿಸಿಕೊಂಡಿದ್ದವು. ಬಸವ ಪೂರ್ವಯುಗದಲ್ಲಾಗಲೇ ಜಾತಿ ವ್ಯವಸ್ಥೆಯ ಅನ್ಯಾಯಗಳ ವಿರುದ್ಧ ರಾಜಪ್ರಭುತ್ವದ ವಿರುದ್ಧ ಬಹಿರಂಗ ಪ್ರತಿಭಟನೆಗಳು ಅಲ್ಲಲ್ಲಿ ಕಾಣಿಸಿದ್ದವು. ಆ ಪ್ರತಿಭಟನೆಗಳು ಅವ್ಯವಸ್ಥಿತವೂ, ದುರ್ಬಲವೂ ಆಗಿದ್ದವು. ಮತ್ತು ಅವು ವ್ಯಕ್ತಿಗತ ನೆಲೆಯಲ್ಲಿ ನಡೆದಿದ್ದವು. ಬಸವನ ಆಂದೋಲನ ಮುಖ್ಯವಾಗಿ ಬ್ರಾಹ್ಮಣೇತರ ವರ್ಗದ್ದು, ಅದರಲ್ಲೂ ಶೂದ್ರ ಮತ್ತು ದಲಿತ ವರ್ಗದ್ದು ಎಂಬುದು ಎದ್ದು ಕಾಣುವ ಸಂಗತಿ. ಆ ಆಂದೋಲನ ವ್ಯಕ್ತಿ ಕೇಂದ್ರಿತವಾದುದಲ್ಲ, ಒಂದು ಸಮೂಹ ಕೇಂದ್ರಿತವಾದುದು -ಆ ಸಮೂಹದ ಬಹುಮುಖ್ಯ ಭಾಗ ಸಾಮಾನ್ಯರು[28] ಬಸವ ಆ ಯುಗದ "ಉತ್ಸಾಹ" ವೆಂಬ ಅಲ್ಲಮನ ಮಾತು ಬಸವನ ಬಗ್ಗೆ ಎಲ್ಲವನ್ನೂ ಹೇಳಿದಂತೆ ಸಂಪ್ರದಾಯ ಜಡತೆಯಿಂದ ನಿಶ್ಚೇಷ್ಟಿತವಾಗಿದ್ದ ಒಂದು ಇಡೀ ಯುಗಕ್ಕೆ ಉತ್ಸಾಹ ರೂಪವಾಗಿ ಬಸವ ಕಾಣಿಸಿಕೊಂಡನೆಂಬಲ್ಲಿ ಉತ್ಪ್ರೇಕ್ಷೆಯಿಲ್ಲ. ಎಂದು ಎಂ. ಚಿದಾನಂದಮೂರ್ತಿಯವರು ವರ್ಣಿಸಿದ್ದಾರೆ.

"ಭಾರತೀಯ ಸಮಾಜದಲ್ಲಿ ಶತಮಾನಗಳಿಂದ ನಡೆದು ಬಂದ ಧರ್ಮದ ಹೆಸರಿನಲ್ಲಿ ಪವಿತ್ರತೆಯನ್ನು ಪಡೆದ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಬಸವೇಶ್ವರರ ತತ್ವಗಳ ಶ್ರಮಿಸಿದವು. ಅವರು ದೀನದಲಿತರ ಉದ್ಧಾರಕ್ಕಾಗಿ ಸಾಮಾಜಿಕ ಕ್ರಾಂತಿಯನ್ನು ತಂದರು. ಅವರು ಶ್ರೇಣೀಕೃತ ಜಾತಿ ಪದ್ಧತಿಯನ್ನು ವಿರೋಧಿಸಿದರು. ಧರ್ಮದ ಹೆಸರಿನಲ್ಲಿ ಮನುಷ್ಯನ ಶೋಷಣೆಯಾಗುವುದನ್ನು ಅವರು ವಿರೋಧಿಸಿದರು. ಅವರು ಪೊಳ್ಳು ಹಾಗೂ ಅರ್ಥವಿಲ್ಲದ ಸಂಸ್ಕಾರಗಳ ವಿರುದ್ಧ ಪ್ರತಿಭಟಿಸಿದರು. ಪಿತೃಪ್ರಧಾನ ಸಮಾಜದಲ್ಲಿ ಗುಲಾಮತನದಷ್ಟು ಕೀಲುಮಟ್ಟಕ್ಕಿಳಿದ ಮಹಿಳೆಯರ ಸ್ಥಿತಿಯನ್ನು ಸುಧಾರಿಸಲು ಹಾಗೂ ಅವರಿಗೆ ಸಿಗಬೇಕಾದ ಸ್ಥಾನಮಾನಗಳನ್ನು ದೊರಕಿಸಲು ಪ್ರಾಮಾಣಿಕವಾಗಿ ಪ್ರಯತ್ನಪಟ್ಟರು. ಇದಕ್ಕಿಂತ ಹೆಚ್ಚಾಗಿ ತಮ್ಮ ತತ್ವ ವಿಚಾರದ ಬಹುಮುಖ್ಯವಾದ ಮೈಲಿಗಲ್ಲಾದ "ಪರಿಶ್ರಮ ಘನತೆಯ ಸಂದೇಶವನ್ನು ಎಲ್ಲೆಡೆ ಸಾರಲು ಪ್ರಯತ್ನಿಸಿದರು. ಆದ್ದರಿಂದ ಯಾವುದೇ ವ್ಯಕ್ತಿಗೆ ಬಸವೇಶ್ವರರ ತತ್ವಗಳ ಆಧಾರ ಸ್ತಂಭಗಳಾಗಿರುವ ಸಾಮಾಜಿಕ ಸಮಾನತೆ ಹಾಗೂ ಭ್ರಾತೃತ್ವವನ್ನು ಅರ್ಥ ಮಾಡಿಕೊಳ್ಳದೇ ಅವರ ಧರ್ಮತತ್ವಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಅವರ ತತ್ವಗಳಿಗೆ ಮಾನವೀಯ ಸಮಾನತೆ, ವೃತ್ತಿಯಲ್ಲಿ ಸಮಾನತೆ, ಧಾರ್ಮಿಕ ಸಮಾನತೆ ಹಾಗೂ ಲಿಂಗ ಸಮಾನತೆಯೇ ಆಧಾರಗಳಾಗಿವೆ"[29] ಇಂತಹ ಉನ್ನತ ವಿಚಾರಗಳ ಅಡಿಯಲ್ಲಿ ಬಸವನ ಆಂದೋಲನ 12 ನೇಯ ಶತಮಾನದಲ್ಲಿ ಕ್ರಾಂತಿಕಾರಿ ಎನಿಸಿತ್ತು. ಇಂದಿಗೂ ಬಸವನ ಕೆಲ ವಿಚಾರಗಳು ಪ್ರಶ್ನಾತೀತ ಹಾಗೂ ಅನನ್ಯವೆನಿಸುತ್ತವೆ. ವೀರಶೈವಧರ್ಮದಲ್ಲಿ ಆತ್ಮ ಸಾಧನೆಯ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಾಗೂ ಐಕ್ಯಗಳೆಂಬ ಆರು ಹಂತಗಳಿಗೆ ಷಟ್ಸ್ಥಲವೆನ್ನುವರು. ವಾಸ್ತವಿಕವಾಗಿ ಈ ತತ್ವಗಳು ಸರಳವಾಗಿದ್ದು, ಸರ್ವರೂ ಆಚರಿಸಲು ಅವಕಾಶವಿರುವಂತಹ, ಸಾಮಾನ್ಯರ ಕೈಗೆ ಬಸವತತ್ವ ಎಟಕುವಂತಿದ್ದವು. ಜನರ ಆಡು ಭಾಷೆಯಲ್ಲಿಯೇ ತಮ್ಮ ವಿಚಾರಗಳನ್ನು ಬಸವ ಬೋಧಿಸಿದರು. ಹೀಗಾಗಿ ಜನರಲ್ಲಿ ಸ್ವಾಭಿಮಾನ, ಸ್ಥೈರ್ಯ, ಸ್ವಾತಂತ್ರ್ಯದ ಅರಿವನ್ನು ಮೂಡಿಸಿದರು. ಹೀಗಾಗಿ ಬಸವನ ಕ್ರಾಂತಿ ಜನಕ್ರಾಂತಿಯಾಗಿತ್ತು. ಹಾಗೂ ಜ್ಞಾನ ಕೆಲವರ

ಸ್ವತ್ತಾಗಿದ್ದ ಸಂದರ್ಭದಲ್ಲಿ ಸಾರ್ವತ್ರಿಕರಿಸಲಾಯಿತು. ಉದಾರತೆ, ಪ್ರಜಾಸತ್ತಾತ್ಮಕತೆ, ಮಾನವೀಯತೆಯಿಂದ ಕೂಡಿದ್ದಾಗಿದ್ದಿತು.

"ಬಸವಣ್ಣನವರು ಪ್ರತಿಪಾದಿಸಿದ ಧರ್ಮತತ್ವವು ಮಾರ್ಟಿನ್ ಲೂಥರ್‌ನು ಪ್ರತಿಪಾದಿಸಿದ (ಪ್ರೊಟೆಸ್ಟಂಟ್) ಪ್ರತಿಭಟನಾ ಧರ್ಮಕ್ಕೆ ಸಂವಾದಿಯಾಗಿದೆ. ಲೂಥರನು ಇಹವನ್ನು ನಿರಾಕರಿಸುವ ದೃಷ್ಟಿಯನ್ನು ಬಿಟ್ಟು ಲೋಕ ದೃಷ್ಟಿಯನ್ನು ಪುರಸ್ಕರಿಸಿದಂತೆಯೇ ಬಸವೇಶ್ವರರು "ಇಲ್ಲಿಗೆ ಸಲ್ಲುವ" ಲೋಕ ದೃಷ್ಟಿಯನ್ನು ಪುರಸ್ಕರಿಸಿದರು. ಬಸವೇಶ್ವರರ ಹೆಚ್ಚುಗಾರಿಕೆ ಎಂದರೆ ಸಾಮಾಜಿಕ ಸಮಾನತೆ ಮತ್ತು ಭ್ರಾತೃತ್ವವನ್ನು ಸಾರುವ ಈ ಹೊಸ ತತ್ವ ಪ್ರೊಟೆಸ್ಟಂಟ್ ಧರ್ಮಕ್ಕಿಂತ ಸುಮಾರು ಮುನ್ನೂರು ವರ್ಷಗಳಷ್ಟು ಮೊದಲೇ ಹುಟ್ಟಿಕೊಂಡಿತ್ತು"[30]. 12ನೇ ಶತಮಾನದ ಜಡ್ಡುಗಟ್ಟಿದ ಸಮಾಜದಲ್ಲಿ ಇಂತಹ ಒಂದು ಪ್ರತಿಭಟನಾತ್ಮಕ ಚಳುವಳಿ ನಡೆಯಿತೆಂಬುದೇ ಒಂದು ವಿಸ್ಮಯ, ಹೀಗಾಗಿ ಬಸವಣ್ಣನವರು ಕರ್ನಾಟಕದಲ್ಲಿ ಪ್ರತಿಭಟನೆಯ ಪೀಠಿಕೆ ಹಾಕಿದರು. ಸಮಸಮಾಜದ ಕನಸು ಕಂಡರು.

ಬಸವಣ್ಣ ತನ್ನ ಕಾಲಕ್ಕಿಂತ ಎಂಟು ನೂರು ವರ್ಷ ಮುಂದಿದ್ದರೆಂದು ಹಲವು ವಿದ್ವಾಂಸರ ಅನಿಸಿಕೆ. ಆದರೆ ನಾವಿಂದು 21ನೇ ಶತಮಾನದಲ್ಲಿದ್ದೇವೆ. ಇಂದು ಕೂಡ ಜಾಗಿ-ಮತ- ಧರ್ಮ-ಜನಾಂಗೀಯ ದ್ವೇಷ ಮತ್ತು ಸಂಘರ್ಷಗಳಲ್ಲಿ ತೊಡಗಿದ್ದು, ಮೇಲು-ಕೀಳು, ದಲಿತ-ಬಲಿತ, ಸಬಲ-ದುರ್ಬಲರೆಂದುಕೊಂಡು 12ನೇ ಶತಮಾನಕ್ಕಿಂತ ಹಿಂದೆ ನಡೆದಿದ್ದೇವೆ."ಬ್ರಾಹ್ಮಣ ಪಾರಮ್ಯದ ಮೇಲೆ ಆಧಾರಗೊಂಡ ಸಮಾಜಿಕ ವ್ಯವಸ್ಥೆಯನ್ನು ಅದು ಬುದ್ಧಿಪೂರ್ವಕವಾಗಿ ಪ್ರಶ್ನಿಸಿದಾಗ ಅಥವಾ ಪ್ರತಿಭಟಿಸಿದಾಗ ಮಾತ್ರವೇ ಅರ್ಥಪೂರ್ಣವಾದೊಂದು ಸಾಮಾಜಿಕ ಆಂದೋಲನವು ಒಡಮೂಡಿದುದು. ಬೇರೆ ಯಾವುದಕ್ಕಿಂತ ಮಿಗಿಲಾಗಿ 12ನೇಯ ಶತಮಾನದ ವೀರಶೈವ ಆಂದೋಲನವು ಕರ್ನಾಟಕದಲ್ಲಿ ನಡೆದ ಅಧಿಕೃತ, ಸುವ್ಯವಸ್ಥಿತ ಸಾಮಾಜಿಕ-ಧಾರ್ಮಿಕ ಆಂದೋಲನವಾಗಿದೆ. ಸಾಮಾಜಿಕವಾಗಿ ಹಿಂದುಳಿದ ಧರ್ಮದವರಿಗೆ ಉನ್ನತವಾದ ಧರ್ಮವು ನಿಲುಕುತ್ತಿರದ ಪರಿಸ್ಥಿತಿಯನ್ನು ಅದು ಪ್ರತಿಭಟಿಸಿತು. ಭಕ್ತಿಯನ್ನು ಅವರ ವಾಹಕವನ್ನಾಗಿ ಮಾಡಿತು".[31] ಬ್ರಾಹ್ಮಣ ಏಕಸ್ವಾಮ್ಯವು ಕಲ್ಪಿಸಿದ ಅನೇಕಾನೇಕ ಜಾತಿಯ ಕಟ್ಟುಪಾಡುಗಳ ಅನರ್ಹತೆಗಳನ್ನು ತಿರಸ್ಕರಿಸಿ ಧರ್ಮವನ್ನು ಎಲ್ಲ ಜನರಿಗೂ ಸಮಾನವಾಗಿ ತೆರೆದಿಡುವ ಕೆಲಸವನ್ನು ಬಹು ದೊಡ್ಡ ಪ್ರಮಾಣದಲ್ಲಿ ಬಸವೇಶ್ವರರು ಮಾಡಿದರು.

<u>ಬಸವ ತತ್ವ :</u>

"ದಯೆ, ಕಾಯಕ, ಸಮಾನತೆ, ಅರಿವು, ಶಿವಯೋಗ, ದಾಸೋಹ' ಎಂದರ್ಥ.ಸೂತ್ರ ರೂಪದಲ್ಲಿ ಬಸವತತ್ವ ಎಂದರೇನು? ಎಂದು ಕೇಳಿದರೆ, " ಅಧಿಕಾರಸ್ಥ ಶಕ್ತಿಗಳ ವಿರುದ್ಧ, ಅಧಿಕಾರ ರಹಿತರ ಪರವಾಗಿ ಮಾಡಿದ ಚಿಂತನೆ ಮತ್ತು ಸಾಮೂಹಿಕ ಹೋರಾಟ"[32] ಎಂದು ಸರಳವಾಗಿ ಹೇಳಬಹುದು ಎಂದು ಡಾ. ರಹಮತ್ ತರೀಕೆರೆಯವರು ವ್ಯಾಖ್ಯಾನಿಸಿದ್ದಾರೆ. ಈ ಹೋರಾಟ ಮತ್ತು ಚಿಂತನೆ ಕರ್ನಾಟಕದ ಚಾರಿತ್ರಿಕ ಸಂದರ್ಭದಲ್ಲಿ ಅತ್ಯಂತ ಕ್ರಾಂತಿಕಾರಿಯಾಗಿತ್ತು. ಮಾನವೀಯವಾಗಿತ್ತು. ಅಭೂತಪೂರ್ವ ಪ್ರಯೋಗವಾಗಿತ್ತು. ತನ್ನ ಎಲ್ಲ ಮಿತಿಗಳೊಂದಿಗೆ ಅವರಲ್ಲಿ ಸಮಾಜವನ್ನು ಮುಂದಕ್ಕೆ ಒಯ್ಯುವ ಆದರ್ಶಗಳಿದ್ದವು ಎಂದು ವಿವರಿಸಿದ್ದಾರೆ. ಇದನ್ನು ನಾವು ಕಾರ್ಲ್‌ಮಾರ್ಕ್ಸ್‌ರವರ ಚರಿತ್ರೆಯ ವ್ಯಾಖ್ಯೆಗೂ ಹೋಲಿಸಬಹುದಾಗಿದೆ ".ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸನ". 12ನೇ ಶತಮಾನದ ಬಸವಣ್ಣನ

ಹೋರಾಟವು ಕೂಡ ಇಲ್ಲದವರ ಪರವಾದ ಧ್ವನಿಯಾಗಿತ್ತು, ಬಸವತತ್ವ ಎನ್ನುವುದು ಹೋರಾಟದ ಸಂಕೇತವಾಗಿತ್ತು. ಆದರೆ ಬಸವ ತತ್ವವು ವಿಮರ್ಶೆಗೆ ಹೊರತಾದುದಲ್ಲ. ಏಕೆಂದರೆ ವರ್ತಮಾನಕ್ಕೆ ಒಗ್ಗಿಸಿಕೊಳ್ಳಲು ಬರುವಂತದ್ದಾಗಿದೆ. ಮುಂದುವರೆದು, ಡಾ. ರಹಮತ್ ತರಿಕೆರೆಯವರು." ಬಸವತತ್ವದಲ್ಲಿ ಎರಡು ಮುಖ್ಯ ದನಿಗಳಿವೆ, ಇವನ್ನು ವೈದಿಕ ಯಜಮಾನಿಕೆಯ ವಿರುದ್ಧದ ಬಂಡಾಯ ಹಾಗೂ ಕೆಳಜಾತಿ ಹಾಗೂ ಕಸುಬುಗಳ ಪರವಾದ ತಾಯ್ತನ " ಎಂದು ಕರೆಯಬಹುದು. ಹಾಗೆಯೇ ಬಸವ ತತ್ವ ಎನ್ನುವುದು ಬಸವನ ವಿಚಾರ ಧಾರೆಯಷ್ಟೇ ಅಲ್ಲ. ಒಟ್ಟು ಚಳುವಳಿಯ ಫಲಿತವೇ ಬಸವತತ್ವವೆನಿಸುತ್ತದೆ." ಅಂದರೆ ಮೂಢ ನಂಬಿಕೆಗಳಿಂದ, ಎಲ್ಲ ಜನಾಂಗಗಳೂ ಸ್ವೀಕರಿಸಲು ಯೋಗ್ಯವಾದ ಸಮಾನತಾ ಧರ್ಮ; ಎಲ್ಲರಿಗೂ ನಿಲುಕುವ ಕ್ಲಿಷ್ಟವಲ್ಲದ ಪೂಜಾ ಪದ್ಧತಿಯಿಂದ ಕೂಡಿದ ಏಕ ದೇವತಾರಾಧನೆ; ಜಾತಿ ವರ್ಗ ಮತ್ತು ಲಿಂಗಭೇದವಲ್ಲದ ಸಾಮರಸ್ಯ ಸಾಂಘಿಕ ಜೀವನ; ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸಲು ಕಾಯಕ ಪ್ರಜ್ಞೆ ; ಸಾಮೂಹಿಕ ಚರ್ಚೆಯಲ್ಲಿ ಪಾಲ್ಗೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯ; ಮೇಲಾಗಿ "ಎನಗಿಂತ ಕಿರಿಯರಿಲ್ಲ" ಎನ್ನುವ ವಿಶಾಲಮನೋಭಾವದ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಅದು ಚಲನಶೀಲಗೊಂಡಿರುವಿಕೆಯೋ ಅದರ ಒಟ್ಟು ಸ್ವರೂಪ"[32] ಬಸವತತ್ವ ಅರಿಯಲು ಇರುವ ಮೂಲಭೂತ ಸಾಮಗ್ರಿ ಎಂದರೆ ಆತನ ವಚನಗಳೇ. ಬಸವ ತಮ್ಮ ಸಾಮಾಜಿಕ ಹೋರಾಟದಲ್ಲಿ ಜಾತಿಪದ್ಧತಿಯ ನಿರ್ಮೂಲನ, ಕಾಯಕದ ಮಹತ್ವ, ಅಸಮತೆಯನ್ನು ಹೋಗಲಾಡಿಸಿ ಮಹಿಳೆಯನ್ನು ಪುರುಷನಿಗೆ ಸಮನಾಗಿ ಕಾಣುವ ದೃಷ್ಟಿ ಇವುಗಳನ್ನು ಪ್ರತಿಪಾದಿಸಿದ್ದಾರೆ. ಬಸವನ ತತ್ವ, ವಿಚಾರ, ಸಿದ್ಧಾಂತಗಳನ್ನು ಅವರ ವಚನಗಳಲ್ಲಿಯೇ ಕಾಣಬಹುದಾಗಿದೆ. ಬಸವಣ್ಣನವರ ವಚನಗಳ ಸಂಖ್ಯೆಯ ಮೊತ್ತ ಸುಮಾರು ಏಳು ನೂರು. ವಚನ ಎಂದರೆ ಮಾತು, ನುಡಿ ಎಂದು ಸಾಮಾನ್ಯ ಅರ್ಥವಿದೆ. ವಚನಗಳನ್ನು ಪರಿಶೀಲಿಸಿ ನೋಡಿದರೆ, ಅದು ಸಹಜವಾದ ಸಾರವತ್ತಾದ ಜೀವನ ಶೋಧನೆ. ಚಿಂತನೆಗಳ ಆಗರ; ಬಸವಣ್ಣನವರ ವಚನಗಳ ಅಂಕಿತ, ಅವರ ಆರಾಧ್ಯದೈವ "ಕೂಡಲಸಂಗಮ". ಬುದ್ಧನ ತರುವಾಯ ಕಾಣಿಸುವ ಸಾಮಾಜಿಕ ಚಳುವಳಿ ಬಸವ ಚಳುವಳಿ. ಅದು ಕರ್ನಾಟಕದ ಮಟ್ಟಿಗೆ ಸೀಮಿತವಾಗಿದ್ದರೂ ಅಷ್ಟೇ ಬೃಹತ್ತಾದ ಮತ್ತು ಹಿಂದೂ ಸಾಂಸ್ಥಿಕ ಬೇರುಗಳನ್ನು ಅಲುಗಾಡಿಸಲು ಯತ್ನಿಸಿದ ಚಳುವಳಿಯಾಗಿದ್ದರಿಂದ ಮಹತ್ವ ಪಡೆದುಕೊಂಡಿವೆ. ಏಕದೇವೋಪಾಸನೆ, ಕರ್ಮಸಿದ್ಧಾಂತದ ಮರುಚಿಂತನೆ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ನಿವಾರಣೆ, ಸಮಾನತೆ ಮತ್ತು ದಯೆಯ ಮೂಲಕ್ಕೆ ಪ್ರಾಶಸ್ತ್ಯ ಕೊಟ್ಟರು. ದಯೆ ಅನಂತ ಧರ್ಮಗಳಲ್ಲಿ ಒಂದು. ಸರ್ವಸಮತೆಯಾಗಲೀ, ಅಹಿಂಸೆಯಾಗಲೀ, ಸತ್ಯ ವಚನವಾಗಲೀ, ಪರಸಹಿಷ್ಣುತೆ ಯಾಗಲೀ ದಯೆ ಇಲ್ಲದೇ ಪ್ರವರ್ತಿಸುವುದೇ ಇಲ್ಲ. ದಯೆಯ ಅಡಿಪಾಯದ ಮೇಲೆ ಇತರ ಮೌಲ್ಯಗಳೂ, ನೀತಿಗಳೂ ನಿಂತಿವೆ. ಆದ್ದರಿಂದಲೇ ದಯೆ ಎಲ್ಲ ಧರ್ಮ ಮೌಲ್ಯಗಳಿಗೆ ಮೂಲ. ಸಾಮಾಜಿಕ ಅಸಮಾನತೆಯನ್ನು ದೂರ ಮಾಡಲು ಹೋರಾಡಿದ ಬಸವಣ್ಣನಿಗೆ ನೆಲೆಯಾಗಿ, ಹಿನ್ನೆಲೆಯಾಗಿ ಇದ್ದುದು ದಯೆ. "ದಯವಿಲ್ಲದ ಧರ್ಮ ಅದ್ಯಾವುದಯ್ಯ?, ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮದ ಮೂಲವಯ್ಯ". ಬಸವಣ್ಣ ನಡೆಸಿದ ಹೋರಾಟದ ಚಳುವಳಿಯೇ ಈ ಮಾತಿಗೆ ಸಾಕ್ಷಿ. ಪುರೋಹಿತಶಾಹಿಯ ವಿರುದ್ಧ ಬಂಡಾಯ, ಜಾತಿಯ ನಿರಾಕರಣೆ, ವೃತ್ತಿಸಮಾನತೆ, ಅಂತರ್‌ಜಾತೀಯ ವಿವಾಹ, ಸ್ತ್ರೀ-ಸಮಾನತೆ, ಜನಪರ ಸರಳ ಮತಾಚರಣೆ, ಮಾತೃಭಾಷೆಗೆ ಒತ್ತು, ಬಸವನ ತತ್ವಗಳಾಗಿವೆ.

ಬಸವಣ್ಣನವರು ವೇದೋಪನಿಷತ್ತುಗಳನ್ನು ಧಿಕ್ಕರಿಸಿದರು. ಬ್ರಾಹ್ಮಣ್ಯವನ್ನು ನಿರಾಕರಿಸಿದರು. ಜಾತಿ ಪದ್ಧತಿಯನ್ನು ತಿರಸ್ಕರಿಸಿದರು. ಮೂಢನಂಬಿಕೆಗಳನ್ನು, ಬಹುದೇವೋಪಾಸನೆಯನ್ನು ಖಂಡಿಸಿದರು. ಮಾನವರು ನೀತಿವಂತರಾಗಿ ಬಾಳಲು ಅಗತ್ಯವಾದ ಅಹಿಂಸೆ, ಅಸ್ತೇಯ, ಅಪರಿಗ್ರಹ, ಅಂತರಂಗಶುದ್ಧಿ-ಬಹಿರಂಗ ಶುದ್ಧಿ, ಸತ್ಯಸಂದತೆ, ಸೌಜನ್ಯ, ಮಾನವೀಯತೆಗಳಂತಹ ನೈತಿಕ ಮೌಲ್ಯಗಳನ್ನು ಒಳಗೊಂಡ ಸರಳ, ಸಾಮಾನ್ಯ ಧರ್ಮವನ್ನು ಜನಸಾಮಾನ್ಯರಿಗೆ ಅವರ ಭಾಷೆಯಲ್ಲಿಯೇ ಕನ್ನಡದಲ್ಲಿ ಬೋಧಿಸಿದರು. ಅವರು ಈ ಮೌಲ್ಯಗಳನ್ನು ಮೊದಲು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆಚರಣೆಗೆ ತಂದು, ಅವುಗಳನ್ನು ತಮ್ಮ ವಚನಗಳ ಮೂಲಕ ಜನತೆಗೆ ಬೋಧಿಸಿದರು. ಕ್ರಿ.ಶ.12ನೇಯ ಶತಮಾನದಲ್ಲಿ ಬಸವೇಶ್ವರರು ಕರ್ನಾಟಕದಲ್ಲಿ ಕೈಗೊಂಡ ಸಮಾಜೋಧಾರ್ಮಿಕ ಆಂದೋಲನ ಇಡೀ ಭಾರತದ ಇತಿಹಾಸದಲ್ಲಿ ಅದ್ವಿತೀಯವಾದದ್ದು. ಬ್ರಾಹ್ಮಣ್ಯದ ಜಾತಿ ಪದ್ಧತಿಯ ವಿರೋಧ, ಮನುಷ್ಯ ಕುಲದ ಏಕತೆ, ಶ್ರೇಷ್ಠ-ಕನಿಷ್ಠ ಸ್ಪೃಶ್ಯ-ಅಸ್ಪೃಶ್ಯ ಭಾವನೆಗಳನ್ನು ತೆಗೆದು ಹಾಕಿ-ಸ್ತ್ರೀಯರನ್ನೊಳಗೊಂಡು ಎಲ್ಲರನ್ನೂ ಸಮಾನವಾಗಿ ಕಂಡರು. ಕಾಯಕತತ- ಸರ್ವ ಸಮಾನತೆಯ ಸಮಾಜ ಸ್ಥಾಪನೆಗೆ ಶ್ರಮಿಸಿದರು. ಅವರು ಕಂಡ ಆದರ್ಶ ಸಮಾಜದ ಕನಸು ಎಂಟು ಶತಮಾನಗಳ ನಂತರ, 20ನೇಯ ಶತಮಾನದಲ್ಲಿ ಡಾ.ಅಂಬೇಡ್ಕರ್‌ರವರ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನಾಧರಿಸಿದ "ಆದರ್ಶ ಸಮಾಜದ" ಕನಸಾಗಿ ಮರುಹುಟ್ಟು ಪಡೆಯಿತು. ವರ್ಣಾಶ್ರಮಧರ್ಮ ಪ್ರತಿಪಾದಿಸಿದ ಗೊಡ್ಡು ಹಾಗೂ ಅಮಾನವೀಯ ಸಂಪ್ರದಾಯದ ವಿರುದ್ಧ ಸಿಡಿದೆದ್ದು, ಆಧ್ಯಾತ್ಮಕ, ವೈಚಾರಿಕ ತಳಹದಿಯ ಮೇಲೆ ವರ್ಗರಹಿತ, ವರ್ಣರಹಿತ ಸರ್ವ ಸಮಾನತೆಯ ಸಮಾಜವನ್ನು ಸ್ಥಾಪಿಸಿದ ಮಹಾಮಾನವತಾವಾದಿ ಬಸವಣ್ಣ-ಒಂದು ಆದರ್ಶ ಮಾನವ ಸಮಾಜ ರಚನೆಗಾಗಿ ಸಪ್ತಸೂತ್ರಗಳನ್ನು ಪಾಲಿಸಲು, ತಾವು ಸ್ವತಃ ಅವುಗಳನ್ನು ಆಚರಿಸಿ, ನಮಗೆ ಬೋಧಿಸಿದ್ದಾರೆ. ಅವು ಹೀಗಿವೆ: "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,ತನ್ನ ಬಣ್ಣಿಸಬೇಡ,ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ನಮ್ಮ ಕೂಡಲಸಂಗಮದೇವರನೊಲಿಸುವ ಪರಿ".

ಬಸವತತ್ವ ಎಂದರೆ ಕರ್ಮಸಿದ್ಧಾಂತವನ್ನು ಬಿಟ್ಟು ಕಾಯಕ ಸಿದ್ಧಾಂತವನ್ನು ಹಿಡಿಯುವುದು, ಸರ್ವ ರೀತಿಯ ಸಮಾನತೆ ಸಾಧಿಸುವುದು, ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು, ಸಮಾಜವನ್ನು ಎಲ್ಲ ರೀತಿಯಿಂದ ಮಾನವೀಯಗೊಳಿಸುವುದು, ದೇವರೊಬ್ಬನೇ ಎಂದು ನಂಬಿ ಜಾತಿಭೇದ, ಲಿಂಗಭೇದ, ವರ್ಗ ಭೇದ, ವರ್ಣ ಭೇದ, ಕುಲ ಭೇದಗಳನ್ನು ಅಳಿಸಿ ಹಾಕುವುದು. ಬಸವತತ್ವ ಎಂದರೆ ಮನುಧರ್ಮವನ್ನು ಬಿಟ್ಟು ಮಾನವಧರ್ಮ ಸ್ವೀಕರಿಸುವುದು, ಜೀವ ವಿರೋಧಿ ಶಸ್ತ್ರ, ಶಾಸ್ತ್ರ ಮತ್ತು ಮೂರ್ತಿ ಪೂಜೆಯನ್ನು ತ್ಯಜಿಸುವುದು, ನಮ್ಮೊಳಗೆ ಕಟ್ಟಳೆಗಳನ್ನು ಹಾಕಿಕೊಳ್ಳುವುದು, ನಮ್ಮ ತಪ್ಪುಗಳನ್ನು ನಾವೇ ಬಹಿರಂಗ ಪಡಿಸಿಕೊಳ್ಳುವುದು, ಅಹಂಕಾರವನ್ನು ನಾಶ ಮಾಡುವುದು, ಕೇಡಿಲ್ಲದ ಸುಲಿಗೆ ಇಲ್ಲದ ಸಮಾಜದ ಬಗ್ಗೆ ಚಿಂತಿಸುವುದು, ಎಲ್ಲ ಸಂಸ್ಕೃತಿ ನಾಗರೀಕತೆ ಮತ್ತು ಧರ್ಮಗಳ ವಿಚಾರಧಾರೆಗಳಲ್ಲಿನ ವೈವಿಧ್ಯತೆಯಲ್ಲಿ ಏಕತೆ ಹುಡುಕುವುದು. ಭೌತಿಕ ಮತ್ತು ಅಧ್ಯಾತ್ಮಿಕ ಜಗತ್ತಿನಲ್ಲಿ ಏಕ ಕಾಲಕ್ಕೆ ಜೀವಿಸುವುದನ್ನು ಕಲಿಸುವುದು ಹಾಗೂ ಈ ಭೂಮಿಯನ್ನು ಎಲ್ಲ ರೀತಿಯಿಂದಲೂ ಬದುಕಲು ಯೋಗ್ಯಗೊಳಿಸುವುದು. ಅಂದರೆ ಎಲ್ಲ ವಿಧದ ಅನ್ಯಾಯ ವಿರೋಧಿಸುತ್ತ ಸುಲಿಗೆ ವ್ಯವಸ್ಥೆ ತಿರಸ್ಕರಿಸುವುದು, ನ್ಯಾಯ ನಿಷ್ಠುರಿಗಳಾಗುವುದು, ದಾಕ್ಷಿಣ್ಯದಿಂದಾಗಿ ತಪ್ಪು ಸಹಿಸುತ್ತ ನರಳುವ ಸ್ಥಿತಿಯಿಂದ ಹೊರಬರುವುದು. ಭೂಮಿಯ ಮೇಲೆಯೇ ಸ್ವರ್ಗ-ನರಕಗಳ

ಸೃಷ್ಟಿಯಾಗುತ್ತಿರುತ್ತದೆ ಎಂಬುದನ್ನು ಅರಿಯುವುದು, ನರಕ ಸೃಷ್ಟಿಸುವವರ ವಿರುದ್ಧ ಧ್ವನಿ ಎತ್ತುವುದು. ಸರಳ ಸಹಜವಾದ ಸ್ವತಂತ್ರ ಬದುಕಿನ ಕಡೆಗೆ ಮನುಷ್ಯನನ್ನು ತರುವುದು, ಕಾಯಕದ ಮಹತ್ವ ಸಾರುವುದು ಅದರ ಮೂಲಕ ಮಾನವ ಘನತೆಯನ್ನು ಪ್ರತಿಷ್ಠಾಪಿಸುವುದು, ಇವುಗಳೇ ಬಸವ ತತ್ವದ ತಿರುಳು-ವಚನಗಳಲ್ಲಿ ಬಸವನ ಚಿಂತನೆ, ಸಿದ್ಧಾಂತಗಳು ಸಂಗ್ರಹಿತಗೊಂಡಿವೆ. "ಬಸವ ತತ್ವ ಎಂಬುದು ರೂಪಗೊಂಡ ತತ್ವ ಅಲ್ಲ, ಇದು ರೂಪುಗೊಳ್ಳುತ್ತಿರುವ ಸಿದ್ಧಾಂತ ಎಂದು ಕೆಲವರ ವಾದಗಳಿವೆ"[34] "ಬಸವ ಎಂದರೆ ವೈದಿಕತ್ವ, ಜಾತಿ, ಅಸ್ಪೃಶ್ಯತೆಯ ವಿರುದ್ಧ ಹೋರಾಟ, ಇತಿಹಾಸವನ್ನು ವರ್ತಮಾನಕ್ಕೆ ಸಿದ್ಧಗೊಳಿಸುವಲ್ಲಿ ವಚನಗಳ ಮೇಲ್ಮೈ ಇದೆ"[35]

3.3 ವರ್ಣ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ :

ಬುದ್ಧ ಮೊದಲ ಬಾರಿಗೆ ವರ್ಣಾಶ್ರಮಕ್ಕೆ ತಿರುಗಿ ಬಿದ್ದು, ಕ್ರಿ.ಪೂ.6ನೇಯ ಶತಮಾನದಲ್ಲಿಯೇ ಪ್ರತಿಭಟಿಸಿದ. ಬಸವಣ್ಣ ಹುಟ್ಟಿನ ಕಳಂಕವೇ ಮುಖ್ಯವಾದ ಜಾತಿ ಹಾಗೂ ವರ್ಣವ್ಯವಸ್ಥೆಯನ್ನು ತೊಡೆಯಲು ಬಹು ದೊಡ್ಡ ಕ್ರಾಂತಿಯನ್ನೇ ಆರಂಭಿಸಿದ. ವೈದಿಕಧರ್ಮದ ಚಾತುರ್ವರ್ಣ ವ್ಯವಸ್ಥೆ ಇದು ಸ್ಥಾಪಿಸಿದ ಶ್ರೇಣಿಕರಣದಲ್ಲಿ ಕೆಲವರು ಶ್ರೇಷ್ಠರು, ಕೆಲವರು ಕನಿಷ್ಠರು, ಕೆಲವರು ಮಾತ್ರ ಎಲ್ಲ ಬಗೆಯ ಸವಲತ್ತುಗಳನ್ನು ಅನುಭವಿಸುತ್ತಾರೆ; ಮತ್ತೆ ಕೆಲವರು ಯಾವ ಸವಲತ್ತುಗಳಿಗೂ ಅರ್ಹರಲ್ಲ. ಇಂಥ ನಿಲುವನ್ನು ಸಮರ್ಥಿಸುವ ವ್ಯವಸ್ಥೆ ಚಾತುರ್ವರ್ಣ ವ್ಯವಸ್ಥೆ, ಇದು ಎಲ್ಲ ಮಾನವರ ಸಮಾನತೆಯ ಪರವಾಗಿ ಇಲ್ಲ ಎನ್ನುವುದು ಸುಸ್ಪಷ್ಟವಾಗಿದೆ. ಈ ವ್ಯವಸ್ಥೆಯಲ್ಲಿ ಸಂಕರವಾಗದಂತೆ ಒಂದು ವರ್ಣ-ಮತ್ತೊಂದು ವರ್ಣದಲ್ಲಿ ಅತಿಕ್ರಮಣ ಮಾಡದಂತೆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವುದು, ಅರಸನಾದವನ ಕರ್ತವ್ಯ ಹಾಗೂ ಧರ್ಮ ಎಂದು ನೀತಿಶಾಸ್ತ್ರಜ್ಞರು ಶಾಸನ ಬರೆದರು. ಶತಶತಮಾನಗಳಿಂದ ಭಾಷ್ಯಗಳ ಮೇಲೆ ಭಾಷ್ಯ ಬರೆದ, ಧರ್ಮ ಶಾಸ್ತ್ರಗಳನ್ನು ರಚಿಸಿದ, ಯಾವ ಆಚಾರ್ಯರೂ ಸಾಮಾಜಿಕ ಅಸಮಾನತೆಯನ್ನು ಸಾರುವ ವ್ಯವಸ್ಥೆಯನ್ನು ತಪ್ಪು ಎನ್ನಲಿಲ್ಲ. ಬದಲಾಗಿ ಅದನ್ನು ರಕ್ಷಿಸಿ ಸಮರ್ಥಿಸಿದರು. "ಸರ್ವೇ ಜನಾಃ ಸುಖಿನೋಭವಂತು" ಎಂದ್ಹೇಳಿದ ಈ ಆಚಾರ್ಯರು ಸಾಮಾಜಿಕ ನೆಲೆಯಲ್ಲಿ ವರ್ಣ ವ್ಯವಸ್ಥೆಯ ಪರವಾಗಿ ನಿಲ್ಲುವುದು ವಿಪರ್ಯಾಸ ಸಂಗತಿಯಾಗಿದೆ. ಇದಕ್ಕೆ ಧರ್ಮ ಮತ್ತು ಸಮಾಜಗಳನ್ನು ಬೇರೆಬೇರೆ ಇರಿಸಿ, ಸಿದ್ಧಾಂತಗಳನ್ನು ರೂಪಿಸುವ ಬೌದ್ಧಿಕ ದ್ವಂದ್ವವೇ ಕಾರಣವೆನ್ನಬಹುದು.

ಭಾರತದ ಚರಿತ್ರೆಯನ್ನು ಅವಲೋಕಿಸಿ ನೋಡಿದರೆ ಅದರ ರಾಜ್ಯವ್ಯವಸ್ಥೆಯಲ್ಲಿ ಸಾಕಷ್ಟು ಪರಿವರ್ತನೆಗಳಾದರೂ ಅದರ ಸಾಮಾಜಿಕ ವ್ಯವಸ್ಥೆ ಮಾತ್ರ ಶತಮಾನಗಳ ಕಾಲ ಬದಲಾಗದೆ 19ನೇ ಶತಮಾನದವರೆಗೂ ಸ್ಥಗಿತಗೊಂಡಿದ್ದಕ್ಕೆ ವರ್ಣಾಶ್ರಮ ಮತ್ತು ಜಾತಿ ವಿಂಗಡನೆಯೇ ಕಾರಣವೆಂದು ಕಾರ್ಲ್ಸ್‌ಮಾರ್ಕ್ಸ್ ಹೇಳುತ್ತಾರೆ. 20ನೇಯ ಶತಮಾನದ ಭಾರತೀಯ ಪುನರುಜ್ಜೀವನದ ನಂತರ, ಶಿಕ್ಷಣ, ಉದ್ಯೋಗ, ಕೈಗಾರೀಕರಣ, ನಗರೀಕರಣ ಇತ್ಯಾದಿಗಳ ಕಾರಣದಿಂದ ಚಾತುರ್ವರ್ಣ ವ್ಯವಸ್ಥೆ ಸಾಕಷ್ಟು ಸಡಿಲವಾಗಿದೆ. ಮೀಸಲಾತಿ, ಅಂತರ್ ಜಾತೀಯ ವಿವಾಹಗಳಿಂದ ವರ್ಣವ್ಯವಸ್ಥೆಯ ಪರವಾದ ನಿಲುವು ಬದಲಾಗಿದೆ. ಆದರೆ ಯಾವ ಧಾರ್ಮಿಕ ವ್ಯವಸ್ಥೆ ಒಂದು ಸಮಾಜದ ಕೆಲವೇ ಕೆಲವರ ಹಿತ ಕಾಯ್ದುಕೊಳ್ಳುತ್ತ ಇನ್ನಿತರ ಬಹುಸಂಖ್ಯಾತ ವರ್ಗವನ್ನು ಸದಾ ಶೋಷಣೆ ಹಾಗೂ ದಬ್ಬಾಳಿಕೆಗೆ ಗುರಿಪಡಿಸುತ್ತ, ಮೇಲೆ ಮತ್ರ ಸರ್ವರ ಸಮಾನತೆಯ ಹುಸಿಘೋಷಣೆಗಳನ್ನು ನೀಡುತ್ತದೆಯೋ ಅಂತಹ ದರ್ಮವನ್ನು

ಸಾಮಾಜಿಕ ಜವಾಬ್ದಾರಿಯುಳ್ಳದ್ದೆಂದು ಹೇಗೆ ಹೇಳುವುದು? ಆದ್ದರಿಂದಲೇ ಬುದ್ಧ ಮೊಟ್ಟ ಮೊದಲ ಬಾರಿಗೆ ಈ ವ್ಯವಸ್ಥೆಯನ್ನು ಪ್ರತಿಭಟಿಸಿ ಮನುಷ್ಯರ ಸಮಾನತೆಯ ಪರವಾಗಿ ಮಾತನಾಡಿದ. ಮಾನವ ಜನಾಂಗವೆಲ್ಲ ಒಂದೇ ಎಂಬ ಕಲ್ಪನೆಯನ್ನು ಜಗತ್ತಿನ ಚರಿತ್ರೆಯಲ್ಲಿ ಮೊಟ್ಟ ಮೊದಲಿಗೆ ಘೋಷಿಸಿದವನು ಬುದ್ಧ. ಹಾಗೆಯೇ ಏಸುಕ್ರಿಸ್ತ, ಗುರುನಾನಕ್, ಕಬೀರರು ಮಾನವರ ಸಮಾನತೆಯ ಪರವಾಗಿ ಬೋಧಿಸಿದರು. ಬಸವಣ್ಣ ಹಿಂದೂ ವೈದಿಕ ಧರ್ಮದ ಚಾತುರ್ವರ್ಣ ವ್ಯವಸ್ಥೆಯನ್ನು ಪ್ರತಿಭಟಿಸಿ ಮಾನವರ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಹಿಂದೂಧರ್ಮ ಹುಟ್ಟು ಹಾಕಿದ ಶ್ರೇಣೀಕೃತ ವ್ಯವಸ್ಥೆಯನ್ನು ಶೂದ್ರ ಮತ್ತು ಸ್ತ್ರೀ ವಿರೋಧಿ ಧೋರಣೆಗಳನ್ನು ಮೂಢನಂಬಿಕೆ, ಪ್ರಾಣಿ ಹಿಂಸೆ, ಅಂಧಾನುಕರಣೆ, ಬಹುದೇವತಾರಾಧನೆಗಳನ್ನು ತೊಡೆದು ಹಾಕುವುದು ಮತ್ತು ಅದಕ್ಕೆ ಪರ್ಯಾಯವಾಗಿ ನವಸಮಾಜ ವ್ಯವಸ್ಥೆ ರೂಢಿಸುವುದು ಮತ್ತು ಅದಕ್ಕೆ ತಾತ್ವಿಕ, ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸುವುದು ಆತನ ಹೋರಾಟದ ಗುರಿಯಾಗಿತ್ತು. ಸೈದ್ಧಾಂತಿಕವಾಗಿ ಹೋರಾಟವನ್ನಷ್ಟೇ ಮಾಡಲಿಲ್ಲ. ತಾನು ಪ್ರತಿಪಾದಿಸಿದ ತತ್ವ ಸಿದ್ಧಾಂತಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದ. ತನ್ನ ಅನುಯಾಯಿಗಳೂ ಅವುಗಳನ್ನು ಅನುಸರಿಸುವಂತೆ ನೋಡಿಕೊಂಡಿದ್ದು ಆತನ ಹಿರಿಮೆ.

12ನೇ ಶತಮಾನದ ಸಾಮಾಜಿಕ ವ್ಯವಸ್ಥೆ ವ್ಯಕ್ತಿಯ ಬೌದ್ಧಿಕ, ಆಧ್ಯಾತ್ಮಿಕ ಪ್ರಗತಿಗೆ ಮಾರಕವಾಗಿತ್ತು. ಸನಾತನ ವೈದಿಕ ವ್ಯವಸ್ಥೆಯಿಂದಾಗಿ ಜನರಲ್ಲಿ ಚಾತುರ್ವರ್ಣ ಪದ್ಧತಿ, ಕರ್ಮ ಸಿದ್ಧಾಂತಗಳಂತಹ ಅಮಾನವೀಯ ತತ್ವಗಳು ನೆಲೆಗೊಂಡಿದ್ದವು. ದೇವರು-ಧರ್ಮದ ಹೆಸರಿನಲ್ಲಿ ಶೋಷಣೆ, ಸಂಕಷ್ಟಗಳಿಗೆ ಜನ ಗುರಿಯಾಗಿದ್ದರು. ಬ್ರಾಹ್ಮಣ ಮತ್ತು ಕ್ಷತ್ರೀಯ (ಆಳುವ ವರ್ಗ) ಜೊತೆಯಾಗಿ ಕೆಳವರ್ಗದ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಶೋಷಣೆ ಮಾಡುತ್ತಿದ್ದರು. ಇವುಗಳ ವಿರುದ್ಧ ಬಸವಣ್ಣ ಉಗ್ರ ಪ್ರತಿಭಟನೆ ನಡೆಸಿದ. ಇವುಗಳ ನಿವಾರಣೆಗಾಗಿ ಶರಣ ಸಂಘಟನೆ, "ಅನುಭವ ಮಂಟಪ" ವಚನಗಳು, ಕಾಯಕ ತತ್ವಗಳನ್ನು ಆರಂಭ ಮಾಡಿದ. ವೈದಿಕರು ಶತಮಾನಗಳಿಂದ ಪೋಷಿಸಿಕೊಂಡು ಬಂದಿದ್ದ ಅಮಾನವೀಯ ಜಾತಿ ಪದ್ಧತಿಯ ವಿರುದ್ಧ ಉಗ್ರ ಪ್ರತಿಭಟನೆ ಮಾಡಿದ. ಬಸವಣ್ಣನ ಹೋರಾಟದ ಗುರಿ ಈ ಪದ್ಧತಿಯ ನಿರ್ಮೂಲನೆ ಮಾಡುವುದಾಗಿತ್ತು.

ವೈದಿಕಧರ್ಮದ ಆಧಾರಸ್ತಂಭ ಚಾತುರ್ವರ್ಣ ಪದ್ಧತಿ. ಅದನ್ನು ಬೇರು ಸಹಿತ ಕಿತ್ತೆಸೆಯಲು ಬಸವಣ್ಣ ಪ್ರಯತ್ನಿಸಿದ. ಬುದ್ಧ, ಬಸವ, ಅಂಬೇಡ್ಕರ್‌ರವರು ಹಿಂದೂಧರ್ಮದ ತಾರತಮ್ಯ, ದಮನಕಾರಿ ನೀತಿಯನ್ನು ವಿರೋಧಿಸಿ ಪ್ರತಿಭಟಿಸಿದರು. ವೈದಿಕವ್ಯವಸ್ಥೆಯನ್ನು ಆಮೂಲಾಗ್ರ ಪರಿವರ್ತನೆ ಮಾಡಲು ಇನ್ನೂ ಸಾಧ್ಯವಾಗಿಲ್ಲ. ಏಕೆಂದರೆ ಈ ದೇಶದಲ್ಲಿ ತತ್ವಸಿದ್ಧಾಂತಗಳು ಎಷ್ಟೇ ಶ್ರೇಷ್ಠವಾಗಿದ್ದರೂ ಧರ್ಮದ ಚುಕ್ಕಾಣಿ ಹಿಡಿದವರೇ ಆಚರಿಸುವುದಿಲ್ಲ. ಇನ್ನು ವೈದಿಕಶಾಹಿಯ ಸಂಚು ಕಾಲಕಾಲಕ್ಕೆ ತನ್ನ ರೂಪ ಬದಲಾಯಿಸುತ್ತ ಪ್ರತಿಗಾಮಿ ನೀತಿಯನ್ನು ಅನುಸರಿಸುತ್ತಿರುವುದು ಚರಿತ್ರೆಯಿಂದ ವಿದಿತವಾಗಿದೆ. ಬುದ್ಧ ವೈದಿಕ (ಹಿಂದೂ) ಧರ್ಮದ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತಿದ ಮೊದಲ ದಾರ್ಶನಿಕ. ಆದರೆ ಬೌದ್ಧಧರ್ಮ ಈ ನೆಲದಿಂದಲೇ ಕಣ್ಮರೆಯಾಗುವಂತೆ ವೈದಿಕಧರ್ಮ ನೋಡಿಕೊಂಡಿತು. ಶಂಕರಾಚಾರ್ಯರು ತಮ್ಮ ಪ್ರತಿಗಾಮಿ ನೀತಿಯಿಂದ ಬೌದ್ಧ ಧರ್ಮ ಕಣ್ಮರೆಯಾಗುವಂತೆ ಮಾಡಿದರು. ಇದು ನಮ್ಮ ಪರಂಪರೆ. 12ನೇಯ ಶತಮಾನದಲ್ಲಿ ಬಸವಣ್ಣ ವೈದಿಕವ್ಯವಸ್ಥೆಗೆ ವಿರುದ್ಧವಾದ ಪರ್ಯಾಯವಾದ ಧರ್ಮ ಸ್ಥಾಪಿಸಲು ಪ್ರಯತ್ನಿಸಿದ. ಸಾಮಾಜಿಕ ಹೋರಾಟ ಪ್ರಾರಂಭಿಸಿ, ಚಾತುರ್ವರ್ಣ ಪದ್ಧತಿ ವಿರೋಧಿಸಿದ. ಈ ಹೋರಾಟ ಭಾರತದ

ಚರಿತ್ರೆಯಲ್ಲಿಯೇ ಮಹತ್ವವಾದ ಘಟನೆಯಾಗಿದೆ. ಶತಶತಮಾನಗಳಿಂದ ಆಚರಿಸುತ್ತಿದ್ದ ವರ್ಣವ್ಯವಸ್ಥೆ-ಜಾತಿ ಪದ್ಧತಿ ಅಲೌಕಿಕವಾದುದು-ಅಮಾನವೀಯವಾದುದು. ಇದನ್ನು ಕಿತ್ತೆಸೆಯದೇ ಕಲ್ಯಾಣರಾಜ್ಯ ಕಟ್ಟಲು ಸಾಧ್ಯವಿಲ್ಲ. ಜಾತಿ ಪದ್ಧತಿ ಮಾನವ ಜನಾಂಗಕ್ಕೆ ಅಂಟಿದ ರೋಗ ಎಂದು ತಿಳಿದಿದ್ದನು. ಹಿಂದೂಧರ್ಮದ ಚಾತುರ್ವರ್ಣ ಪದ್ಧತಿಯ ಮುಖವಾಡ ಕಳಚಲೆತ್ನಿಸಿದನು. ಈ ಪದ್ಧತಿಯನ್ನು ದೇವರು ಸೃಷ್ಟಿಸಿದ, ವ್ಯಕ್ತಿ ತನ್ನ ಸತ್‌ಕರ್ಮಗಳಿಂದ ಬ್ರಾಹ್ಮಣನಾಗಿಯೂ ಕೆಟ್ಟ ಕರ್ಮಗಳಿಂದ ಅಸ್ಪೃಶ್ಯನಾಗಿಯೂ ಜನಿಸುತ್ತಾನೆ ಎಂಬ ವೈದಿಕರ ಕರ್ಮಸಿದ್ಧಾಂತ ಹೇಳುತ್ತದೆ. ಇದನ್ನು ವೇದ, ಪುರಾಣ, ಆಗಮ, ಶಾಸ್ತ್ರ, ಸ್ಮೃತಿ, ಮಹಾಕಾವ್ಯಗಳು ಪುಷ್ಟೀಕರಿಸಿವೆ. ವರ್ಣವ್ಯವಸ್ಥೆಯಿಂದಲೇ ಎಲ್ಲ ಸಮಸ್ಯೆಗಳು ಹುಟ್ಟಿಕೊಂಡಿವೆ ಎಂಬುದನ್ನು ಬಸವಣ್ಣ ಅರಿತಿದ್ದ. ಆದಕ್ಕಾಗಿ ಇದನ್ನು ವಿರೋಧಿಸಿ ಪ್ರತಿಭಟಿಸಿದ. ಈ ವ್ಯವಸ್ಥೆ ಸರಿಪಡಿಸಲು ಹೋರಾಡಿದ. ಉತ್ತಮ ಕುಲದಲ್ಲಿ ಹುಟ್ಟಿದ ಕಾರಣಕ್ಕಾಗಿ ಹೆಮ್ಮೆ ಪಡುವ ವೈದಿಕರ ಅಮಾನವೀಯ ಕೃತ್ಯಗಳನ್ನು ಬಹಿರಂಗಪಡಿಸಿದ. ತನ್ನ ವಚನವೊಂದರಲ್ಲಿ ಈ ರೀತಿ ಹೇಳಿದ್ದಾನೆ ಬಸವಣ್ಣ :

ವ್ಯಾಸ ವೋಯತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿ ಭೋ ।
ಕುಲದಿಂದ ಮುನ್ನೇನಾದಿರಿ ಭೋ ।
ಸಾಕ್ಷಾತ್ ಆಗಸ್ತ್ಯ ಕಬ್ಬಿಲ
ದೂರ್ವಾಸ ಮಚ್ಚಿಗ
ಕಶ್ಯಪ ಕಮ್ಮಾರ
ಕೌಂಡಿನ್ಯನೆಂಬ ಋಷಿ
ಮೂರು ಲೋಕವರಿಯೇ ನಾವಿದ ಕಾಣಿಭೋ ।
ನಮ್ಮ ಕೂಡಲಸಂಗನ ವಚನವಿಂತೆದುದು
ಶ್ವಪಚನಾದರೆನು ಶಿವಭಕ್ತ ಕುಲಜಂ ಭೋ ॥ ವಚನ 589 [36]

ಮೇಲಿನ ಈ ವಚನದಲ್ಲಿ ಹೇಳಿರುವಂತೆ ಮಹಾನ್‌ವ್ಯಕ್ತಿಗಳ ಕುಲವನ್ನು, ಜಾತಿಯನ್ನು ಹುಡುಕಬಾರದು. ಈ ಮಹನೀಯರಲ್ಲಿ ಜನಿಸಿದ್ದು, ಕೆಳ ಕುಲಗಳಲ್ಲಿ, ಕೆಳ ವರ್ಗಗಳಲ್ಲಿ ಹುಟ್ಟು ಆಕಸ್ಮಿಕ, ಉತ್ತಮ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಮಹಾತ್ಮರಾಗಲು ಸಾಧ್ಯವಿಲ್ಲ. ಹಲವಾರು ಋಷಿಮುನಿಗಳು ಜಾತಿಯನ್ನು ಹೆಸರಿಸಿ, ಅಂತಹ ಜಾತಿಗಳು ಕೀಳು, ಅಶುದ್ಧ ಎಂದಾದರೆ ಇವರೆಲ್ಲ ಏಕೆ ಮಹಾನ್ ವ್ಯಕ್ತಿಗಳಾದರು, ಶ್ರೇಷ್ಠರೆಂದೆನಿಸಿಕೊಂಡರು ಎಂದು ಪ್ರಶ್ನಿಸುತ್ತಾನೆ.

ವೈದಿಕವ್ಯವಸ್ಥೆಯ ಕೆಟ್ಟ ಆಚರಣೆಗಳಿಗಾಗಿ ಜನವಿರೋಧಿ, ಮಾನವವಿರೋಧಿ ತತ್ವಗಳಿಗಾಗಿಬಸವಣ್ಣ ಆ ವ್ಯವಸ್ಥೆಯನ್ನು ಖಂಡಿಸಿದನು. ವೈದಿಕಧರ್ಮದ ಆಧಾರ ಸ್ತಂಭಗಳಿಗೆ ಕೊಡಲಿ ಪೆಟ್ಟನ್ನು ಹಾಕಿದನು ಯಾವುದೇ ವ್ಯಕ್ತಿ ಹುಟ್ಟಿನಿಂದ ಶ್ರೇಷ್ಠನಾಗುವುದಿಲ್ಲ. ತನ್ನ ಚಾರಿತ್ರ್ಯದಿಂದ, ವರ್ತನೆಯಿಂದ ಶ್ರೇಷ್ಠನಾಗಿರುತ್ತಾನೆಂದು ಬಸವಣ್ಣ ಪ್ರತಿಪಾದಿಸಿದ. ಸಮಾಜದಲ್ಲಿ ವರ್ಣಾಶ್ರಮಪದ್ಧತಿ ಪ್ರಬಲವಾಗಿದ್ದ ಕಾಲದಲ್ಲಿ ಬಸವಣ್ಣ ಜಾತಿಗಳಿಗೆ ಹೊಸ ವ್ಯಾಖ್ಯೆಯನ್ನು ನೀಡಿದ. ಅವರ ಅಭಿಪ್ರಾಯದಲ್ಲಿ

"ಕೊಲುವವನೇ ಮಾದಿಗ
ಹೊಲಸು ತಿಂಬುವನೇ ಹೊಲೆಯ,
ಕುಲವೇನೋ ಆವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು"ವಚನ-591[37]

ಹೀಗೆ ಈ ವಚನದಲ್ಲಿ ಸಕಲ ಜೀವಾತ್ಮರನ್ನು ಪ್ರೀತಿಸುವವರೇ ಶ್ರೇಷ್ಠ ಕುಲಜರೆಂದು ಹೇಳಿದ್ದಾರೆ. ವರ್ಗ-ವರ್ಣ, ಶುದ್ಧ-ಅಶುದ್ಧ, ಮೇಲು-ಕೀಲುಗಳ ಎಲ್ಲೆಯನ್ನು ಮೀರಿದವರು ಕುಲಜರು. ಸಕಲ ಜೀವರಾಶಿಗೆ ಒಳ್ಳೆಯದನ್ನು ಬಯಸುವವನು ಕುಲಜನೆಂದಿದ್ದಾರೆ.

ವರ್ಣವ್ಯವಸ್ಥೆಯಲ್ಲಿ ವೈದಿಕರಿಗೆ-ಬ್ರಾಹ್ಮಣರಿಗೆ ಬಹುಮುಖ್ಯ ಸ್ಥಾನವಿತ್ತು. ಬಸವಣ್ಣ ಬ್ರಾಹ್ಮಣರಲ್ಲಿ ಜನಿಸಿದ. ಆದರೆ ಅವರು ಬ್ರಾಹ್ಮಣರೇ ಶ್ರೇಷ್ಠರು ಎಂದು ಹೇಳಲಿಲ್ಲ." ವಿಪ್ರ ಮೊದಲು ಅಂತಜ ಕಡೆಯಾಗಿ ಶಿವಭಕ್ತರಾದವರೆಲ್ಲರನೊಂದೇ ಎಂಬೆ "ಅಂದರೆ ಶಿವಭಕ್ತರಾದ ಎಲ್ಲರನ್ನು ಒಂದೇ ಎಂದು ಹೇಳುತ್ತಾರೆ. ಮುಂದುವರಿದು ದಲಿತರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ." ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ಎನ್ನನೇ ಅಕ್ಕರಿಯಿರಿ ಕೂಡಲಸಂಗಯ್ಯ"ವಚನ-349[38]

ಹೀಗೆ ಕೆಳವರ್ಗದವರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡು ಶಿವಭಕ್ತರೆಲ್ಲರ ಕುಲವನ್ನು ಅರಸುತ್ತಿರಲಿಲ್ಲ. ಮಾನವ ಕುಲ ಒಂದೇ ಎಂದು ಸಾರಿದರು. ಕುಲದ ವಿಚಾರದಲ್ಲಿ ಬಲು ನಿಷ್ಠುರ." ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾಗುವುದೆಂದು ಬೆಸಗೊಂಡರೆ ನಮ್ಮಾಣೆ । ನಿಮ್ಮ ಪುರಾತರಾಣೆ । ತಲೆದಂಡತಲೆದಂಡ। ಕೂಡಲಸಂಗಮದೇವ ಭಕ್ತರ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ"। ಎಂದೂ ಪ್ರಮಾಣ ಮಾಡುತ್ತಾರೆ ಬಸವಣ್ಣ. ಹೀಗೆ ದಲಿತರೊಂದಿಗೆ ಗುರುತಿಸಿಕೊಂಡು ಅವರನ್ನು ತಮ್ಮ ಚಳುವಳಿಯಲ್ಲಿ ಸೇರಿಸಿಕೊಂಡರು. ಬಸವಣ್ಣ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಆ ಜಾತಿಯ ಹಂಗಿನಿಂದ ಹೊರಗೆ ಬಂದಿದ್ದರು. ತಮ್ಮನ್ನು ದಲಿತರೊಂದಿಗೆ ಸಮೀಕರಿಸಿಕೊಂಡಿದ್ದರು.

ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂಬನೆ ಮಾಚಯ್ಯನ ?
ಡೋಹಾರನೆಂಬನೆ ಕಕ್ಕಯ್ಯನ ?
ಮಾದಾರನೆಂಬನೆ ಚೆನ್ನಯನ ?
ಅನುಹಾರವನೆಂದೆಡೆ-ಕೂಡಲಸಂಗಯ್ಯ ನಗುವನಯ್ಯ"[39] ವಚನ-345

ಎನ್ನುವುದರೊಂದಿಗೆ ಬಸವಣ್ಣ ಎಲ್ಲರೊಂದಿಗೆ ನಾನು ಒಬ್ಬನೇ ಹೊರತು ಬ್ರಾಹ್ಮಣ ಎಂದು ಹೇಳಿದರೆ ದೇವರು ನಗುತ್ತಾನೆ ಎಂದಿದ್ದಾರೆ. ವರ್ಣ ವ್ಯವಸ್ಥೆಯಲ್ಲಿ ಜಾತಿಯನ್ನೇ ಮುಖ್ಯವಾಗಿದ್ದ ಸಮಾಜದಲ್ಲಿ ತಾನು ಬ್ರಾಹ್ಮಣಜಾತಿಗೆ ಸೇರಿದ್ದರೂ ಕೂಡ ಅದನ್ನು ತಿರಸ್ಕರಿಸುತ್ತಾನೆ. ಬ್ರಾಹ್ಮಣತ್ವವನ್ನು ನಿರ್ಭಿಡೆಯಿಂದ ಖಂಡಿಸುತ್ತಾನೆ.

"ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ (592) [40]
ದ್ವಿಜರಿಗೆ ಕೊಟ್ಟು ಹಲವರು ಕೆಟ್ಟರು (622) [41]
ಬಡ ಹಾರವನೇನು ಭಕ್ತನಾದಡೆಯಾ ನೇಣಿನ ಹಂಗ ಬಿಡ (451)[42]

ಈ ವಚನಗಳಲ್ಲಿ ವಿಡಂಬನೆ, ಸಿಟ್ಟು ವ್ಯಕ್ತವಾಗಿದೆ. ವೈದಿಕವ್ಯವಸ್ಥೆ, ಬ್ರಾಹ್ಮಣಧರ್ಮದ ತತ್ವಗಳ ಮೇಲೆ ಅವರು ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದ್ದಾರೆ. ವ್ಯಕ್ತಿಯ ಹುಟ್ಟು ಮಾತ್ರವೇ ಸಮಾಜದಲ್ಲಿ ಆತನಿಗೆ ಘನತೆ, ಗೌರವ, ಸ್ಥಾನಮಾನಗಳನ್ನು ತಂದುಕೊಡುವುದಿಲ್ಲ. ಆತನ ನಡತೆ, ಶೀಲ, ನೈತಿಕತೆಯಿಂದ ಮಾತ್ರ ಆತನಿಗೆ ಸಾಮಾಜಿಕ ಸ್ಥಾನಮಾನ ದೊರೆಯಬಲ್ಲವೆಂದು ಬಸವಣ್ಣನವರ ವಚನಗಳಿಂದ ತಿಳಿದು ಬರುತ್ತದೆ.

"ದಾಸೀಪುತ್ರನಾಗಲಿ, ವೇಶ್ಯಾ ಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ
ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚ ಮಹಾಪಾತಕ - ನರಕ ಕಾಣಾ,
ಕೂಡಲಸಂಗಮ ದೇವಾ (1223) [43]

ಮನುಷ್ಯ ಯಾರಲ್ಲಿಯಾದರೂ ಜನಿಸಿರಲಿ, ಯಾವ ಜಾತಿಯಲ್ಲಿಯಾದರೂ ಜನಿಸಿರಲಿ ಆತನು ನಿರ್ಮಲ ಮನಸ್ಕನಾಗಿ ಶಿವದೀಕ್ಷೆ ಹೊಂದಿ ಶರಣನಾದರೇ ಅವನು ಪೂಜೆಗೆ ಅರ್ಹನಾಗುವನು ಎಂಬುದು ಈ ವಚನದ ಅರ್ಥ. ಹೀಗೆ ಜಾತಿಯತೆಯನ್ನು ಬಸವಣ್ಣ ಖಂಡಿಸುವುದನ್ನು ಕಾಣುತ್ತೇವೆ.
ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು

ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರನಾದ ಬಳಿಕ ?
ಶಿವಧರ್ಮ ಕುಲೇಜಾತಃ ಪುನರ್ಜನ್ಮ ವಿವರ್ಜಿತ ಃ
ಉಮಾ ಮಾತಾ ಪಿತಾ ರುದ್ರ ಐಶ್ವರಂ ಕುಲಮೇವ ಚ ॥
ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣನು. (718)[44]

ಜಾತಿ ಸಂಕರನಾದ ಬಳಿಕ ಎಂದು ಹೇಳುವ ಮುಖಾಂತರ ಲಿಂಗಧಾರಣೆ ಜಾತಿ ಸಂಕರವೆಂದು ವರ್ಗೀಕರಿಸಿ ಸಮಾನತೆಯ ಪಾತಳಿಗೆ ಕೊಂಡೊಯ್ಯುತ್ತಾನೆ - ಶ್ರೇಣಿಯಾಕೃತಿಯ ಜಾತಿಗಳನ್ನು ಕತ್ತರಿಸಿ, ಸಮಾನ ರೇಖೆಯಲ್ಲಿ ಮೂಡಿಸುತ್ತಾನೆ. ಶಿವಧರ್ಮಕ್ಕೆ ಒಪ್ಪಿಕೊಂಡ ಮೇಲೆ ಪುನರ್ಜನ್ಮ ವಿವರ್ಜಿತಃ ಅಂದರೆ ಜನ್ಮಾಂತರ ಇಲ್ಲವೆಂದು ಕರ್ಮಸಿದ್ಧಾಂತವನ್ನು ಒಮ್ಮೆಲೆ ತಿರಸ್ಕರಿಸುತ್ತಾನೆ. ವೇದ ಕಾಲದಿಂದ ನಡೆದು ಬಂದ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆಗೆ ತಾಯಿ ಬೇರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ ಎಂಬ ವಿಂಗಡಣೆ ಬೆಳೆದು ಬಂತು. ಮನುಸ್ಮೃತಿಯಲ್ಲಿ ಶೂದ್ರರನ್ನೂ ಪಂಚಮರನ್ನೂ ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳಲಾಗಿದೆ. ಹುಟ್ಟಿನೊಂದಿಗೆ ಅವರ ಕುಲಗಳು ನಿರ್ಧರಿಸಲ್ಪಟ್ಟವು. ಜಾತಿವಾಚಕಗಳಾದವು, ಗುಣ, ಶ್ರಮ-ಶ್ರದ್ಧೆಗಳನ್ನು ಕಡೆಗಣಿಸಿ, ಶೂದ್ರರಿಗೆ, ಅಸ್ಪೃಶ್ಯರಿಗೆ, ಸ್ತ್ರೀಯರಿಗೆ ಜ್ಞಾನ-ವಿದ್ಯೆ, ವೇದಗಳನ್ನು ನಿರಾಕರಿಸಿ, ಒಂದು ವೇಳೆ ಇವರು ಜ್ಞಾನ ಪಡೆಯಲು ಯತ್ನಿಸಿದರೆ ನಾಲಿಗೆ ಕೊಯ್ದು, ಕಾಯಸೀಸವನ್ನು ಕಿವಿಯಲ್ಲಿ ಹಾಕಲಾಗುತ್ತಿತ್ತು. ಬ್ರಾಹ್ಮಣರು ಜ್ಞಾನದ ವಾರಸುದಾರರಾಗಿ ಶೂದ್ರರನ್ನು, ಅಸ್ಪೃಶ್ಯರನ್ನು ಸ್ತ್ರೀಯರನ್ನು ತಮ್ಮ ಶಾಸ್ತ್ರಬಲದಿಂದ ಶೋಷಣೆ ಮಾಡಿದರು. ಕೆಳಗಿನ ಈ ವರ್ಗವನ್ನೆಲ್ಲ ಅಜ್ಞಾನದ ಅಂಧಕಾರದಲ್ಲಿ ನೂಕಿರುವ ಕರಾಳ ಚಿತ್ರಣ ನಮ್ಮ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಇದನ್ನು ಬಸವಣ್ಣ ಖಡಾಖಂಡಿತವಾಗಿ ಖಂಡಿಸಿದ್ದಾರೆ. ಕಾಸಿ ಕಮ್ಮಾರನಾದ, ಬಿಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ

ಹಾರುವನಾದ, ಎನ್ನುವಲ್ಲಿ ಅದು ವ್ಯಕ್ತಿಯ ಕಾಯಕವೇ ಹೊರತು ಕುಲವಲ್ಲ. ಲಿಂಗದೀಕ್ಷೆಯ ನಂತರ ಎಲ್ಲರನ್ನು ಸಮಾನವಾಗಿ ಕಾಣುತ್ತಿದ್ದರು.

ಭಾರತೀಯ ಸಾಮಾಜಿಕ ಬದುಕಿನಲ್ಲಿ ಅಸಮಾನತೆ ಉಂಟು ಮಾಡಿದ ವರ್ಣ, ಜಾತಿ, ಲಿಂಗ, ವರ್ಗ ವ್ಯತ್ಯಾಸಕ್ಕೆ ವೈದಿಕಧರ್ಮವೇ ಮೂಲ ಕಾರಣ. ಆದರ ವಿರುದ್ಧ ಪ್ರತಿಭಟಿಸದ ಹೊರತು ಹೊಸದನ್ನು ನಿರ್ಮಿಸಲು ಸಾಧ್ಯವಿಲ್ಲವೆಂದು ಬಸವಣ್ಣ ಅರಿತಿದ್ದರು. ಹೀಗಾಗಿ ವರ್ಣವ್ಯವಸ್ಥೆ, ಕರ್ಮಸಿದ್ಧಾಂತ, ಯಜ್ಞ-ಯಾಗ, ವೇದ ಆಗಮಶಾಸ್ತ್ರ, ಪುರಾಣಗಳನ್ನು ಬಸವಣ್ಣ ಖಂಡಿಸಿದರು. ಸಾಮಾಜಿಕ ದೂರದೃಷ್ಟಿಯುಳ್ಳ ಬಸವಣ್ಣ ಸಮಾನತೆ ತರುವಲ್ಲಿ ಬಹುವಾಗಿ ಶ್ರಮಿಸಿದರು. ವರ್ಣವ್ಯವಸ್ಥೆ ವಿರೋಧಿಸಿ, ಕಾಯಕತತ್ವ ವಿವಿಧ ವೃತ್ತಿಯಲ್ಲಿ ಸಮಾನತೆ ತರಲು ಪ್ರಯತ್ನಿಸಿದರು. ಅವರ ದೃಷ್ಟಿಯಲ್ಲಿ ಜಾತಿಪದ್ಧತಿಯನ್ನು ಹೋಗಲಾಡಿಸದ ಹೊರತು ಸಮಾನತೆ ಸಾಧ್ಯವಿಲ್ಲ. ಭ್ರಾತೃತ್ವ ಸಾಧ್ಯವಿಲ್ಲ ಎಂದರಿತು, ಅಂತರ್ಜಾತಿ ವಿವಾಹಗಳಿಗೂ ಪ್ರೇರೇಪಿಸಿದರು. ಬ್ರಾಹ್ಮಣ ಯುವತಿ ದಲಿತ ಯುವಕನ ಮಧ್ಯೆ ನಡೆದ ವಿವಾಹ ಇವರ ನೇತೃತ್ವದಲ್ಲಿ ನಡೆದು ಕಲ್ಯಾಣದಲ್ಲಿ ಕ್ರಾಂತಿ ಉಂಟಾಯಿತು. ವರ್ಣವ್ಯವಸ್ಥೆಯನ್ನು ವೈಚಾರಿಕವಾಗಿ ಖಂಡಿಸಿ ವರ್ಣರಹಿತ ಸಮಾಜವನ್ನು ರೂಪಿಸಿದವರು ಬಸವಣ್ಣ ಹಾಗೂ ಸಮಕಾಲೀನ ಶರಣರು, ಅವರು ಮಾನವ ಕಲ್ಪಿತ ವರ್ಣವ್ಯವಸ್ಥೆಯನ್ನು ತಿರಸ್ಕರಿಸಿ ಮಾನವನ ಹುಟ್ಟಿನ ಮೂಲವನ್ನು ತಿಳಿಸಿ ಜನಪ್ರಿಯ ವ್ಯವಸ್ಥೆಯಲ್ಲಿ ಹುರುಳಿಲ್ಲವೆಂದು ಬಹಿರಂಗವಾಗಿಯೇ ಸಂಪ್ರದಾಯವಾದಿಗಳಿಗೆ ಸವಾಲೆಸೆದರು.

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೇ, ಆಸೆಯಾಮಿಷ ರೋಷ
ಹರುಷ ವಿಷಯಾದಿಗಳೆಲ್ಲ ಒಂದೇಏನನೋದಿ ಏನು ಕೇಳಿ ಏನು ಫಲ?
ಕುಲಜನೆಂಬುದಕಾವುದು ದೃಷ್ಟ ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮ ಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ।
ಎಂಬುದಾಗಿ -ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ ಕೂಡಲಸಂಗಮದೇವಾ
ಲಿಂಗ ಸ್ಥಳವನರಿಯದವನೇ ಕುಲಜನು

ಎಂದು ಘಂಟಾ ಘೋಷವಾಗಿ ಸಮಾನತೆಯ ಸದುಪದೇಶವನ್ನು ಸಾರಿದರು.

3.4 ವರ್ಗ-ಜಾತಿಯ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ :

"ಜಾತಿ ವಿಭಜನೆ ಮತ್ತು ಬ್ರಾಹ್ಮಣರ ಧೂರ್ತ ಆಲೋಚನೆ ಭಾರತ ದೇಶದ ತುಂಬೆಲ್ಲ ಮೂಢ ನಂಬಿಕೆಗಳನ್ನು ಹುಟ್ಟಿಸಿದವು ಮಾತ್ರವಲ್ಲ, ವಿದೇಶೀಯರ ಅಕ್ರಮಣವನ್ನು ತಡೆಯಲಾಗದ ಹೀನಸ್ಥಿತಿಗೆ ದೇಶವನ್ನು ಇಳಿಸಿತು" ಎಂದು ಡಿ.ಡಿ.ಕೋಸಂಬಿಯವರು ನಿಖರವಾಗಿ ಹೇಳುವ ಮಾತು ಈಗಲಾದರೂ

ನಮ್ಮನ್ನು ಎಚ್ಚರಿಸಬೇಕು.[45] ಈ ಜಾತಿ ಆಧಾರಿತ ಸುಲಿಗೆ ವ್ಯವಸ್ಥೆಗೆ ಪ್ರತಿಭಟನೆಯೇ ಆಗಲಿಲ್ಲ ಎಂದು ತಿಳಿಯಬೇಕಾಗಿಲ್ಲ. ಚರಿತ್ರೆಯುಗುಂಟ ಈ ಪಟ್ಟ ಭದ್ರ ಹಿತಾಸಕ್ತಿಗೆ ಎದುರಾಗಿ ನಿಂತ ವೈಚಾರಿಕ ಚಳುವಳಿಯನ್ನು ನೋಡಬಹುದು. ಮೊದಲ ಬಾರಿಗೆ ಪ್ರತಿಭಟನೆ ಬಂದುದು ಬುದ್ಧನಿಂದ, ಇದಕ್ಕೂ ಮೊದಲು ಲೋಕಾಯತರಿಂದ ಪ್ರತಿಭಟನೆಬಂತು, ದಕ್ಷಿಣದಲ್ಲಿ ರಾಮಾನುಜರು ಉಗ್ರವಾಗಿ ಪ್ರತಿಭಟಿಸಿ ಜಾತಿವಿಂಗಡನೆಯನ್ನು ವಿರೋಧಿಸಿದರು. 12ನೇ ಶತಮಾನದಲ್ಲಿ ಬಸವಣ್ಣನವರಿಂದ ಉಂಟಾದ ವೀರಶೈವ ಚಳುವಳಿ ಜಾತಿ ಕಟ್ಟಳೆಯನ್ನು ನುಚ್ಚು ನೂರು ಮಾಡಿತು. ಆದರೂ ಸಹಜಾತಿ ನಿರ್ಮೂಲನವಾಗಲಿಲ್ಲ. ಜಾತಿಪದ್ಧತಿ ನಿರ್ಮೂಲನೆಗೆಂದೇ ಬಸವಣ್ಣ ಲಿಂಗ ಕೊಟ್ಟರು. ಆದರೆ ಲಿಂಗ ಕಟ್ಟಿಕೊಂಡವರೆಲ್ಲ ಪಕ್ಕಾ ಜಾತಿವಾದಿಗಳಾಗುತ್ತಿರುವುದು ದುರಂತ. ಬಸವಣ್ಣನವರು ಸ್ಥಾಪಿಸಿದ ಲಿಂಗಾಯತಧರ್ಮ ಎಲ್ಲ ಕಾಯಕಗಳ ಸಮಾಜದ ಜನರನ್ನೂ ಅಪ್ಪಿಕೊಂಡಿತು. ಜಾತಿರಹಿತ ಸಮಾಜ ನಿರ್ಮಾಣವಾಯಿತು. ಆದರೆ ಪಟ್ಟಭದ್ರ ಜಾತಿವಾದಿಗಳ, ಪುರೋಹಿತಶಾಹಿಗಳ ಕಪಟ ಕಾರಸ್ಥಾನದಿಂದ ಕಲ್ಯಾಣ ಕ್ರಾಂತಿ ನಡೆದು, ಹರಳಯ್ಯ - ಮಧುವರಸರಿಗೆ ಎಳೆ ಹೂಟೆ ಶಿಕ್ಷೆಯಾಗುವಂತಾಯಿತು. ಸಹಸ್ರಾರು ಶರಣರು ಬಲಿದಾನವಾದರು. ದಯೆ, ಪ್ರೀತಿ, ಮಾನವೀಯತೆ, ಸಮಾನತೆ, ಕಾಯಕ ಜೀವಿಗಳ ಕಲ್ಯಾಣ ರಾಜ್ಯ ನಿರ್ಮಿಸಿದ್ದ ಬಸವಣ್ಣ ಗಡಿಪಾರುಗೊಂಡು ಕೂಡಲಸಂಗಮಕ್ಕೆ ಬಂದು ಬಯಲಾಗಬೇಕಾಯಿತು.

ಬುದ್ಧನಿಗೆ ಸವಾಲಾಗಿದ್ದ ವರ್ಣ ವ್ಯವಸ್ಥೆ, ಜಾತಿ, ಅಂಧ ಶ್ರದ್ಧಾಚರಣೆಗಳು ಬಸವಣ್ಣನಿಗೂ ಇಂತಹ ಸಮಸ್ಯೆಗಳೇ ಎದುರಾದವು. ಹೀಗಾಗಿ ಜಾತೀಯತೆಯನ್ನು ಕುರಿತು ಬಸವಣ್ಣ ತೀವ್ರವಾಗಿ ಪ್ರತಿಭಟಿಸಿದ. ಅದರ ನಿರ್ಮೂಲನೆಗೆ ಪಣತೊಟ್ಟ.

ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ನಡೆದ ಬಸವ ಚಳುವಳಿ ಧಾರ್ಮಿಕ ಚಳುವಳಿಯಾದರೂ ಅದು ಸಾಮಾಜಿಕ-ಸಾಹಿತ್ಯಿಕ ಚಳುವಳಿ ಕೂಡಾ ಆಗಿತ್ತು. "ವಚನ ಚಳುವಳಿ ಇದು ಕರ್ನಾಟಕ ಕಂಡ ಪ್ರಪ್ರಥಮ ಪ್ರಮುಖ ಚಳುವಳಿ. ಧಾರ್ಮಿಕ-ಸಾಮಾಜಿಕ ಸಮಾನತೆಗಾಗಿ ನಡೆದ ಈ ಹೋರಾಟ ಅರ್ಥಪೂರ್ಣವಾದುದು. ಜಾತಿ-ಭಾಷೆ-ವಯಸ್ಸು-ಲಿಂಗ-ಅಂತಸ್ತು ಇವುಗಳ ಭೇದವನ್ನೆಣಿಸದೇ ಇಡೀ ಜನಸಮೂಹ ಒಂದಾಗಿ ಹೋರಾಟ ಮಾಡಿದ ಪ್ರಮುಖ ಚಳುವಳಿ ಇದು. ದುಡಿವ ವರ್ಗದ ಜನಕ್ಕೆ ದಲಿತವರ್ಗದ ಜನಕ್ಕೆ ಮೊದಲ ಬಾರಿಗೆ ಜನ್ಮ ಕೊಟ್ಟ ಚಳುವಳಿ ಇದು. ಮಹಿಳಾ ಸಮಾನತೆಗಾಗಿ ಮಹಿಳೆಯರನ್ನು ಸಂಘಟಿಸಿಕೊಂಡು ಹೋರಾಡಿದ ಮೊದಲ ಚಳುವಳಿ ಇದು. ಈ ಎಲ್ಲ "ಮೊದಲು"ಗಳನ್ನು ಪ್ರಾರಂಭಿಸಿದ ಈ ಚಳುವಳಿ ದಲಿತರ ಬದುಕಿಗಾಗಿ ಅವರ ಬೆಳವಣಿಗೆಗಾಗಿ ಅಂದಿನ ಅಸಮಾನತೆಯ ವ್ಯವಸ್ಥೆಯ ವಿರುದ್ಧ, ಜಾತೀಯತೆಯ ವಿರುದ್ಧ ನಿಜವಾದ ಬಂಡಾಯವನ್ನೆಬ್ಬಿಸಿದ್ದಾಗಿದೆ."[46] ಈ ಚಳುವಳಿ ಚಾರಿತ್ರಿಕ ಮಹತ್ವವನ್ನು ಹೊಂದಿದ್ದಾಗಿದೆ. ಶತಮಾನದ ಶೋಷಣೆಯಿಂದ ದಲಿತರನ್ನು ಮುಕ್ತಗೊಳಿಸಿ, ಸಮಾನತೆ ತರಲೆತ್ನಿಸಿದ ಹೋರಾಟವಾಗಿದೆ. ಜಾತಿಮುಕ್ತ ಸಮಾಜ ಕಟ್ಟ ಬಯಸಿದ ಪ್ರಯತ್ನವಾಗಿದೆ. ಜನಪರ ಚಳುವಳಿಯಾಗಿದೆ. "ಬುದ್ಧ ಹಿಂಸಾವಾದಿಗಳನ್ನು ವಿರೋಧಿಸುತ್ತಲೇ ಅಹಿಂಸೆಯನ್ನು ಸ್ಥಾಪಿಸುವುದು, ಬಸವ ಜಾತಿವಾದಿಗಳ ವಿರೋಧ ಕಟ್ಟಿಕೊಂಡು ದಲಿತರ-ಶೋಷಿತರ ಪರವಾಗಿ ನಿಲ್ಲುವುದು, ಅಂಬೇಡ್ಕರ್ ಈ ದೇಶದ ಸ್ವಾತಂತ್ರ್ಯ ಕೇವಲ ಉಳ್ಳವರಿಗೆ ಉಚ್ಚ ವರ್ಗದವರಿಗೆ ಸಿಕ್ಕಿದೆ ಎಂದು ಹೇಳುತ್ತಾ ದಲಿತರ ದನಿಯಾಗಿ ಪ್ರತಿಭಟಿಸುವುದು ಇವೆಲ್ಲ ನಿಜವಾದ ಜನಪರ ನಿಲುವುಗಳಾಗುತ್ತವೆ"[47] ಜನರ ಪರವಾದ ಜಾತಿಯ ನಿರ್ಮೂಲನೆಗಾಗಿ ಬಸವಣ್ಣ ಪ್ರತಿಭಟಿಸಿದ್ದು, ಚರಿತ್ರೆಯಲ್ಲಿ ವಿಶಿಷ್ಟ ಸಂದರ್ಭ". ನಮ್ಮ ಚರಿತ್ರೆಯ

ಮಟದಲ್ಲಿ ದಾಖಲಾಗಿರುವ ಜಾತೀಯತೆ ನಮ್ಮ ಸಮಾಜಕ್ಕಂಟಿದ ಕಳಂಕ, ಭಯಾನಕ ಪಿಡುಗು. ಚರಿತ್ರೆಗುಂಟಾ ಹಲವು ಚಿಂತಕರು ಈ ಜಾತಿಭೇದಗಳನ್ನು ಖಂಡಿಸುತ್ತ ಬಂದಿದ್ದಾರೆ. ಬಸವಣ್ಣ ಕೂಡ ಸಮಾಜದಲ್ಲಿ ಮೇಲು-ಕೀಳುಗಳೆಂಬ ಜಾತಿಯತಾರತಮ್ಯ ನಿವಾರಿಸಲು ಉಗ್ರ ಪ್ರತಿಭಟನೆಯನ್ನೇ ಆರಂಭಿಸಿದ.

ಚಾತುರ್ವರ್ಣ ವ್ಯವಸ್ಥೆ, ತತ್ಪರಿಣಾಮವಾಗಿ ಜಾತಿಪದ್ಧತಿಯು ಹಿಂದೂ ಸಮಾಜದ ನೆಲೆಗಟ್ಟಾಗಿ ಜನ ಸಮುದಾಯವನ್ನು ಜಾತಿ ಉಪಜಾತಿಗಳಾಗಿ ವಿಂಗಡಿಸಿ, ವಿಭಜಿಸಿ, ಅಡ್ಡಗೋಡೆಗಳನ್ನು ನಿರ್ಮಿಸಿ, ಜನತೆಯ ಸೌಹಾರ್ದತೆಗೂ ಭಾವೈಕ್ಯತೆಗೂ ದೇಶದ ಪ್ರಗತಿಗೂ ಮಾರಕವಾಗಿ ಘೋರ ಶಾಪವಾಗಿ ಪರಿಣಮಿಸಿದೆ. 12ನೇ ಶತಮಾನದಲ್ಲಿ ಬಸವಣ್ಣ ವರ್ಣಭೇದ, ವರ್ಗಭೇದ, ಮುಂತಾದ ಭಿನ್ನತೆಗಳನ್ನು ತೊಡೆದು ಮಾನವರೆಲ್ಲ ಸರಿಸಮಾನರು ಎಂದು ಸಾರಿದರು. ಸತ್ಯದ ಪರವಾದ, ಮಾನವೀಯತೆ ಪರವಾದ ಶರಣರಲ್ಲೂ ತುಂಬಿದರು. ಬಸವಣ್ಣ ಹಾಗೂ ಶರಣರು ವಚನಗಳನ್ನು ರಚಿಸಿ ಸಮಾಜದ ತಾರತಮ್ಯವನ್ನು ಖಂಡಿಸಿ ಸಾಮೂಹಿಕವಾಗಿ ಹೊಸದೊಂದು ಮಾರ್ಗವನ್ನು ಹುಟ್ಟು ಹಾಕಿ ಆ ಮಾರ್ಗದಲ್ಲಿ ಸಾಗಲು ಕರೆ ನೀಡಿದರು. ಬಸವಣ್ಣನ ಕಾಲದಲ್ಲಿ ಜಾತಿಭೇದ ನೀತಿಯು ಬಹು ದಿನದಿಂದಲೂ ಬೆಳೆದುಕೊಂಡು ಬಂದು, ಕೆಳವರ್ಗದ ಜನ, ಸಾಮಾಜಿಕ ಶೋಷಣೆಗೊಳಗಾದ ಶೂದ್ರರು, ಅಸ್ಪೃಶ್ಯರು ಎಲ್ಲ ಸವಲತ್ತುಗಳಿಂದ ವಂಚಿತರಾಗಿ ನೀಚಕುಲದವರಾಗಿ ಗುಲಾಮರಾಗಿ ಬದುಕುತ್ತಿದ್ದರು. ಇಂತಹ ಸಂದರ್ಭದಲ್ಲಿ ಬಸವಣ್ಣನ ವೈಚಾರಿಕ ಕ್ರಾಂತಿ ಆರಂಭಗೊಂಡಿತು. ಜಾತ್ಯಾತೀತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದನು. ವಚನಗಳ ಮೂಲಕ ಅಂದಿನ ವ್ಯವಸ್ಥೆಯನ್ನು ಬಹುಮಾರ್ಮಿಕವಾಗಿ ವಿಮರ್ಶಿಸಿದ್ದಾನೆ.

"ಎಂತಹವನಾದಡೇನು, ಲಿಂಗ ಮುಟ್ಟಿದವನೇ ಕೀಳು ಜಾತಿ
ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ,
ಹೊನ್ನಹುದು, ತಪ್ಪದು ಪರುಷ ಮುಟ್ಟಲೊಡನೆ
ಕೂಡಲಸಂಗಮದೇವನೊಲ್ಲ ಸರ್ವ ಸಂದೇಹಿಗಳ"[48]

ವ್ಯಕ್ತಿ ಎಂತಹವನಾಗಿದ್ದರೂ ಆತನ ಗುಣಮುಖ್ಯ. ಯೋಗ್ಯತೆ ಶೀಲ ಮುಖ್ಯ. ಪ್ರಜ್ಞಾವಂತನು ಯಾವ ಜಾತಿಯಲ್ಲಿ ಜನಿಸಿದರೂ ಅವರ ಪ್ರಾಮುಖ್ಯತೆಯನ್ನು ಹೇಳುವಾಗ ಜನನವಾದ ಕುಲ ಜಾತಿಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ ಬಸವಣ್ಣ.

"ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯ
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯ
ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಪ"[49]

ಎಂದು ನುಡಿದು ಭಕ್ತಿಯಿಂದ, ವಯಸ್ಸಿನಿಂದ, ಬುದ್ಧಿಯಿಂದ ಹಿರಿಯರಾದ ಕಕ್ಕಯ್ಯ, ಚೆನ್ನಯ್ಯ ಮೊದಲಾದವರನ್ನು ಗೌರವಿಸುತ್ತಾನೆ.

"ಕುಲವೊಂದೇ ತನ್ನ ತಾನರಿದವಂಗೆ
ನಿಲವೊಂದೇ ಕೂಡಲಸಂಗಮದೇವಾ
ನಿಮ್ಮನರಿದವಂಗೆ"[50]- ಎಂದಿದ್ದಾರೆ.

"ನೊರನೋದಿ ನೂರ ಕೇಳಿದಡೇನು?

ಆಸೆ ಹರಿಯದು ರೋಷ ಬಿಡದು,

ಮಜ್ಜನಕ್ಕೆರೆದು ಫಲವೇನು?

ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ

ನಗುವ ನಮ್ಮ ಕೂಡಲಸಂಗಮದೇವ"[51]

"ವೇದಶಾಸ್ತ್ರದವರ ಹಿರಿಯರೆನ್ನೆ

ಮಾಯಾಭ್ರಾಂತಿ ಕವಿದ "ಗೀತ" ಜ್ಞನರ ಹಿರಿಯರೆನ್ನೆ"[52]

ಹೀಗೆ ಬಸವಣ್ಣ ಅರಿವಿನ ಹಿರಿಮೆ ಹಾಗೂ ಸಮಾಜದಲ್ಲಿ ವ್ಯಕ್ತಿಗಳ ಹಿರಿಮೆ ಓದನ್ನು ಅವಲಂಬಿಸಿದೆ. ಸಾಧಿಸಿದ ಸಿದ್ಧಿಯನ್ನು ಅವಲಂಬಿಸಿದೆ ಎಂದಿದ್ದಾರೆ. ಅದಕ್ಕಾಗಿಯೇ

"ಕೊಲುವವನೆ ಮಾದಿಗ, ಹೊಲಸು ತಿಂಬುವವನೇ ಹೊಲೆಯ

ಕುಲವೇನೋ ಆವಂದಿರ ಕುಲವೇನೋ"[53]

ಎನ್ನುವುದರ ಮೂಲಕ "ಹೊಲೆಯ" ಎನ್ನುವುದು ಜಾತಿಸೂಚಕವಾಗಿ ಕಂಡುಬರದೇ ಆಯಾ ವ್ಯಕ್ತಿಗಳ ಮನೋಧರ್ಮವಾಗಿ ಕಾಣಿಸುತ್ತದೆ. ಸಮಾಜವನ್ನು ಅದು ಕಲುಷಿತಗೊಳಿಸುತ್ತದೆ. ಆದ್ದರಿಂದ ಅದನ್ನು ತೊರೆಯುವುದು ಸಾಮಾಜಿಕ ಹಿತದೃಷ್ಟಿಯಿಂದ ಒಳ್ಳೆಯದು ಎಂದಿದ್ದಾನೆ."ನಾನು ಶ್ರೇಷ್ಠನೆಂಬ ಭಾವನೆಯೇ ಸಮಾಜದ ಹಿತದೃಷ್ಟಿಯಿಂದ ಘಾತಕವಾದುದು. ಅದರ ಮೇಲೆ ಕಲಶವಿಟ್ಟಂತೆ ಇತರರನ್ನು ಕನಿಷ್ಠರೆಂದು ಕರೆಯುವುದು. ಹಿಂದೂ ಸಮಾಜ ಬಹಳ ಕಾಲದಿಂದಲೂ ಕೆಲವರನ್ನು ಹೊಲೆಯರೆಂದೂ, ಕನಿಷ್ಠ ಕುಲದವರೆಂದೂ ಸಾರಿ ಅವರು ಮನುಷ್ಯರಂತೆ ಬಾಳಲು ಬೇಕಾಗುವ ಎಲ್ಲ ಸೌಕರ್ಯಗಳನ್ನು ನಿರಾಕರಿಸಿ ಮಹಾಪಾಪವನ್ನೆಸಗುತ್ತ ಬಂದಿದೆ".[54] ಈ ವ್ಯವಸ್ಥೆಯನ್ನು ಬಸವಣ್ಣ ಹೋರಾಟ ಪ್ರಾರಂಭಿಸಿ ಜಾತಿಯ ಹಮ್ಮನ್ನು ನೀಗಿಕೊಂಡ ಮೇಲೆ ತಮ್ಮ ಮನಸ್ಸಿಗಾದ ಅತುಲ ಶಾಂತಿ ಸುಖವನ್ನು ಎಲ್ಲರಿಗೂ ಧಾರೆಯೆರೆಯಬೇಕೆಂದು ಅವರು ಸಂಕಲ್ಪಿಸಿದರು. 'ಜಾತಿವಿಡಿದು ಸೂತಕನವನರಸುವ, ಜ್ಯೋತಿವಿಡಿದು ಕತ್ತಲೆಯನರಸುವವರನ್ನು' ಎಚ್ಚರಿಸಿ ತಿದ್ದಿ ತಮ್ಮ ಪಥಕ್ಕೆ ತಿರುಗಿಸಿಕೊಳ್ಳಬೇಕಾಯಿತು. ಸಮಾಜದಲ್ಲಿ ಪ್ರತಿಯೊಂದರಲ್ಲೂ ಕುಲವನ್ನೇ ಮೊದಲು ಗುರುತಿಸುತ್ತಿದ್ದವರನ್ನು ಬಸವಣ್ಣ ಈ ರೀತಿ ಖಂಡಿಸಿದ್ದಾರೆ.

"ಹೊಲೆಯೊಳಗೆ ಹುಟ್ಟಿ ಕುಲವನರಸುವೆ

ಎಲವೋ, ಮಾತಂಗಿಯ ಮಗ ನೀನು

ಸತ್ತುದನೆಳೆವನೆತ್ತಣ ಹೊಲೆಯ ?

ಹೊತ್ತು ತಂದು ನೀವು ಕೊಲುವಿರಿ"[55]

ಎಂದು ಅವರಲ್ಲಿ ಅಡಗಿರುವ ಹೊಲೆತನವನ್ನು ತೆರೆದಿಡುತ್ತಾನೆ. "ಬಸವಣ್ಣನ ಮುಂದೆ ಎರಡು ಸಮಸ್ಯೆಗಳಿದ್ದವು. ಮೊದಲನೆಯದು ಧರ್ಮದ ಹೆಸರಿನಲ್ಲಿ ನಿರ್ಮಿಸಿಕೊಂಡ ಸಾಮಾಜಿಕ ವಿಷಮತೆ. ಮೇಲು-ಕೀಳುಗಳೆಂಬ ಉಕ್ಕಿನ ಕೋಟೆಗಳು, ಜಾತಿಯ ಅಡ್ಡಗೋಡೆಗಳು. ಇದರ ಜೊತೆಗೆ ವ್ಯಕ್ತಿಗತವಾದ ಉಪಾಸನೆಯ ಸಂಪ್ರದಾಯಗಳು, ಅಂಧಶ್ರದ್ಧೆಗಳೂ ಇದರ ಪ್ರಭಾವದಿಂದ ಬೆಳೆದು ಬಂದು ಶೋಷಣೆಯ ಸಾಧನವಾಗಿದ್ದುದು ಸಮಸ್ಯೆಯ ಇನ್ನೊಂದು ಮುಖ. ಈ ಎರಡನ್ನೂ ಬಸವಣ್ಣನ ವಿಚಾರವಾದ ಒಂದೇ ಏಟಿಗೆ ಕತ್ತರಿಸಿ ಹಾಕಿತು".[56]

ಜಾತಿಪದ್ಧತಿಯನ್ನು ನಿರ್ಮೂಲನ ಮಾಡಲು ಪಣತೊಟ್ಟಿದ್ದ ಬಸವಣ್ಣನವರು ಜಾತಿಪದ್ಧತಿಯ ಮೂಲವನ್ನೇ ಪ್ರಶ್ನಿಸಿದರು. ಎಲ್ಲರೂ ಹೊಲೆಯಿಂದಲೇ ಬಂದವರು." ಕರ್ಣದಲಿ ಜನಿಸಿದವರುಂಟೆ ಜಗದೊಳಗೆ" :ಅಂದ ಮೇಲೆ ಯಾರು ಮೇಲು, ಯಾರು ಕೀಳು? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ವ್ಯಕ್ತಿಯೇ ನಿಜವಾದ ಕುಲಜ ಎಂದಿದ್ದಾರೆ. ಬಸವಣ್ಣನವರು ಮನುಷ್ಯ ಕುಲದ ಏಕತೆಯ ಮಹಾಮಂತ್ರವನ್ನೇ ಬೋಧಿಸಿದರು.

"ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚಾಚಮನಕ್ಕೆ
ಫಲವೊಂದೇ ಷಡುದರ್ಶನ ಮುಕ್ತಿಗೆ
ಕುಲವೊಂದೇ ತನ್ನತಾನರಿದವಂಗೆ
ನಿಲುವು ಒಂದೇ ಕೂಡಲಸಂಗಮದೇವಾ
ನಿಮ್ಮನರಿದವಂಗೆ:[57]

ಶಿವನ ದೇವಾಲಯ, ಹೊಲಗೇರಿಗಳೆರಡೂ ಒಂದೇ ಭೂಮಿಯ ಮೇಲಿವೆ. ಶೌಚಾಚಮನಕ್ಕೆ, ಮಜ್ಜನಕ್ಕೆ ನೀರು ಒಂದೇ ಇರುವಾಗ ಭೇದವೇಕೆಂದು ಬಸವಣ್ಣ ವಿವರಿಸಿದ್ದಾನೆ. ಬಸವಣ್ಣನಿಗೆ ಕೀಳುಜಾತಿಗಳವರ ಬಗ್ಗೆ ಅಪಾರ ಪ್ರೀತಿ, ವಾತ್ಸಲ್ಯ, ಕರುಣೆ ಕೆಳವರ್ಗದ ಜನರನ್ನು ಊರಿನ ಹೊರಗಿಟ್ಟು "ಹೊಲೆಯರೆಂದು" ಕೀಳಾಗಿ ಕಾಣುವುದು ಅವರಿಗೆ ಸರಿಯೆನಿಸಲಿಲ್ಲ. ಸಂಬೋಳಿನಾಗಿದೇವನೆಂಬ ದಲಿತ ಶಿವಭಕ್ತನ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸಿ, ಸಂಪ್ರದಾಯವಾದಿಗಳ ಕೆಂಗಣ್ಣಿಗೆ ಗುರಿಯಾದರು.ಬಸವಣ್ಣನವರಿಗೆ ಮೇಲು ಜಾತಿಯ ಶಿವಭಕ್ತರು "ಮಹೇಶ್ವರ"ರಾದರೆ ಕೆಳ ವರ್ಗದ ಶಿವಭಕ್ತರು "ಹಿರಿಯ ಮಾಹೇಶ್ವರರು'.

"ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ"[58] ಎಂದು ಕೂಡಲಸಂಗಮ-ದೇವನನ್ನು ಪ್ರಾರ್ಥಿಸುವ ಬಸವಣ್ಣನವರು "ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ" ಎಂದಿದ್ದಾರೆ. ತಮ್ಮ ಮನಸ್ಸಿನಿಂದ ಸಂಪೂರ್ಣವಾಗಿ ಶ್ರೇಷ್ಠ-ಕನಿಷ್ಠ, ಸ್ಪೃಶ್ಯ-ಅಸ್ಪೃಶ್ಯ ಭಾವನೆಗಳನ್ನು ತೆಗೆದು ಹಾಕಿ ಎಲ್ಲರನ್ನೂ ಸಮಾನವಾಗಿ ಕಂಡರು. ಖ್ಯಾತ ಸಂಶೋಧಕ ಡಾ।ಎಂ. ಚಿದಾನಂದಮೂರ್ತಿ ಅವರ ನುಡಿಗಳಲ್ಲಿ "ಬಸವಣ್ಣನವರು ಬಡವರ ಪ್ರತಿನಿಧಿಗಳು, ಬಡವರ ಪಕ್ಷದವರು. ಅವರು ಬಡವರಿಗೆ ಮಾನ, ಗೌರವ, ಆತ್ಮವಿಶ್ವಾಸಗಳನ್ನು ತಂದು ಕೊಟ್ಟವರು. ಕುಲ, ಜಾತಿ, ಐಶ್ವರ್ಯ ಎಂಬ ಭೇದವಿಲ್ಲದೆ ಎಲ್ಲರ ಮನೆಗಳಿಗೂ ಹೋಗಿ ಅವರ ಕಿಂಕರರಂತೆ ವರ್ತಿಸಿರುವುದನ್ನು ಅವರ ಜೀವನ ಚರಿತ್ರೆಗಳು ಕೊಂಡಾಡಿವೆ. ಈ ದೃಷ್ಟಿಯಿಂದ, ಅವರೊಬ್ಬ ನಿಜವಾದ ಸಮಾಜವಾದಿಗಳು, ಸಮತಾವಾದಿಗಳು, ಅವರ ಕ್ರಾಂತಿ ಮುಖ್ಯವಾಗಿ ಬಡವರ ವರ್ಗದಲ್ಲಿ ನಡೆದ ಕ್ರಾಂತಿ, ಬಡವರಿಗಾಗಿ ಬಡವರಿಂದ ನಡೆದ ಕ್ರಾಂತಿ"[59]- ಹೀಗೆ ಬಸವಣ್ಣ ಎಲ್ಲ ಜಾತಿಯವರಿಗೂ ಲಿಂಗಧಾರಣೆ ಮಾಡಿ ಮೇಲು-ಕೀಳು, ತಾರತಮ್ಯ ಭಾವನೆ ಕಿತ್ತೆಸೆದ, ಜಾತಿಯ ಚಿಹ್ನೆಗಳನ್ನು ಕಿತ್ತೆಸೆದ, ಸರ್ವಸಮಾನತೆ ಸಾರಿ, ಸರ್ವರಿಗೂ ಪೂಜಾ ಸ್ವಾತಂತ್ರ್ಯ ನೀಡಿದ. ಪ್ರಗತಿಶೀಲ ವಿಚಾರಗಳಿಂದ ನವ ಸಮಾಜಕ್ಕೆ ನಾಂದಿ ಹಾಡಿದ.

ಜನ್ಮದಿಂದ ಎಲ್ಲರೂ ಸಮಾನರು, ಸ್ವತಂತ್ರರು, ಸ್ವಂತ ವಿಕಾಸಕ್ಕೆ ಎಲ್ಲರೂ ಅರ್ಹರು; ಸೃಷ್ಟಿಯಲ್ಲಿರುವ ನೆಲ, ಜಲ, ಗಾಳಿ, ಬೆಳಕು ಕೆಲವರಿಗಷ್ಟೇ ಅಲ್ಲ, ಸರ್ವರಿಗೂ. ಗುಣಶೀಲ-ವಿದ್ಯೆ-ಆಚಾರ-ಸಾಮರ್ಥ್ಯಗಳನ್ನೇ ವ್ಯಕ್ತಿಯಲ್ಲಿ ಕಂಡು ಗೌರವಿಸಬೇಕು. ಅವರ ವರ್ಣ, ಜಾತಿ, ಕುಲಕಸುಬುಗಳಲ್ಲ ಎಂಬುದು ಬಸವಣ್ಣನ ಸಮಾಜರಚನೆಯ ಮೂಲ ಅಂಶವಾಗಿತ್ತು. "ಶೋಷಣೆ" ಅವರಿಗೆ ಹಿಡಿಸದ ಮಾತು. ಸರ್ವಹಿತ, ಸಮಸ್ತ ಪ್ರಾಣಿಹಿತ, ಸಾಕಾರ ನಿಷ್ಠೆ ಸಮಾಜದ ಮೂಲ ತತ್ವವಾಗಬೇಕೆಂದು ಬಯಸಿದರು.

ಜಾತಿಪದ್ಧತಿಯನ್ನು ತೊಡೆದು ಹಾಕದೇ ಸಮಾನತೆಯನ್ನು ತರುವುದು ಅಸಾಧ್ಯವೆಂದು ಬಸವಣ್ಣ ಅರಿತಿದ್ದನು. ಜಾತಿ, ವರ್ಣ, ಅಸ್ಪೃಶ್ಯತೆಗಳನ್ನು ತೊಡೆದು ಹಾಕಲು ವೀರಶೈವ ಧರ್ಮ ಧ್ವನಿ ಎತ್ತಿತು.- ಬೌದ್ಧ, ಜೈನ, ಸಿಕ್, ವೀರಶೈವ ಈ ಎಲ್ಲ ಪ್ರತಿಭಟನಾತ್ಮಕ ಧರ್ಮಗಳು ಕೊನೆಗೆ ಜಾತಿಗಳಾಗಿ ರೂಪಾಂತರಗೊಂಡಿದ್ದು, ವಿಪರ್ಯಾಸ ಮತ್ತು ದುರಂತ. ಹಾಗೆಂದು ಈ ಧರ್ಮಗಳ ಪ್ರಯತ್ನವನ್ನೂ ಬಸವಣ್ಣನವರ ಜಾತಿ ನಿರ್ಮೂಲನೆಗೆ ಮಾಡಿದ ಹೋರಾಟವನ್ನೂ ಕಡೆಗಣಿಸುವಂತಿಲ್ಲ. "ವರ್ಣ ಸಂಕರದಮೂಲಕ ಶ್ರೇಣೀಕರಣ ವ್ಯವಸ್ಥೆ ಮುರಿಯುವ ಕಾರ್ಯ ನಡೆದದ್ದೆ ಈ ಶರಣರ ಚಳುವಳಿಯಿಂದ ಎಂದು ಜಿ.ಎಸ್. ಶಿವರುದ್ರಪ್ಪ ಬರೆಯುತ್ತಾರೆ. ಮನುಷ್ಯ ಮಾಡುವ ವೃತ್ತಿಯಲ್ಲಿ ಮೇಲು-ಕೀಳು ಉಚ್ಚ-ನೀಚಗಳೆನ್ನುವ ಭೇದ ಮಾಡಬಾರದೆಂದು ಬಸವಣ್ಣನವರು ಸಮಾಜಕ್ಕೆ ತೋರಿಸಿಕೊಡಲು :

ಸೆಟ್ಟಿಯೆಂಬನೆ ಸಿರಿಯಾಳನ?
ಮಡಿವಾಳನೆಂದೆಂಬೆನೆ ಮಾಚಯ್ಯನ?
ಡೋಹಾರನೆಂದೆಂಬೆನೆ ಕಕ್ಕಯ್ಯನ?
ಮಾದಾರನೆಂದೆಂಬೆನೆ ಚೆನ್ನಯ್ಯನ ?
ಅನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ"[80]

ಎಂದು ವ್ಯಕ್ತಿ ಮಾಡುವ ವೃತ್ತಿ ಅಥವಾ ಉದ್ಯೋಗದಿಂದ ಜಾತಿಗಳನ್ನು ಗುರುತಿಸಿ, ತಮ್ಮ ಸ್ವಾರ್ಥ ಸಾಧನೆ ಸರಿಯಲ್ಲವೆಂದಿದ್ದಾರೆ. ಈ ವಚನದಲ್ಲಿ ಬಸವಣ್ಣ ಜಾತಿ ಹಾಗೂ ವೃತ್ತಿಯಾಧಾರಿತ ವರ್ಗೀಕರಣವನ್ನು ಏಕಕಾಲಕ್ಕೆ ತಿರಸ್ಕರಿಸಿದ್ದಾರೆ. ಸಮಾಜದಲ್ಲಿ ಅಸಮಾನತೆಗೆ ಜಾತಿ ಹೇಗೆ ಮುಖ್ಯ ಕಾರಣವೋ, ಅದೇರೀತಿ ವೃತ್ತಿಯೂ ಮೂಲಕಾರಣವಾಗಿದೆ. ಇದನ್ನು ಬಸವಣ್ಣ ವಿರೋಧಿಸಿದ. ಎಲ್ಲ ಜಾತಿಗಳೂ ಸಮಾನವೆಂದೂ, ಎಲ್ಲ ವೃತ್ತಿಗಳೂ ಸಮಾನವೆಂದು ಜಾತ್ಯಾತೀತ ಕಲ್ಪನೆಯನ್ನು ಸಾರಿಹೇಳಿದ. ಯಾವುದನ್ನು ಕೀಳುವೃತ್ತಿಗಳೆಂದು ಪರಿಗಣಿಸಲಾಗಿತ್ತೋ ಅಂಥವರೊಂದಿಗೆ ತನ್ನನ್ನು ಗುರುತಿಸಿಕೊಂಡು ಕೀಳುವೃತ್ತಿಗಳಿಗೆ ಪಾವಿತ್ರ್ಯತೆ ತಂದು ಕೊಟ್ಟ. ಜಾತಿ-ವೃತ್ತಿಗಳಿಂದ ಬೆಳೆದಿದ್ದ ಅಸಮಾನತೆಯ ಗೋಡೆಗಳನ್ನು ಕೆಡವಿ ಸಮಾನತೆಯ ಪರಿಕಲ್ಪನೆ ಮೂಡಿಸಿದ.

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?"[81]

ವೃತ್ತಿಗಳು ಹೇಗೆ ಜಾತಿ ವಾಚಕಗಳಾದವು ಎಂಬ ಕಟುಸತ್ಯವಿದೆ. ಕಾಸುವುದು, ಬೀಸುವುದು, ಹಾಸನಿಕ್ಕುವುದು ಇವೆಲ್ಲ ಉದ್ಯೋಗದ ಕ್ರಿಯೆಗಳು ಇಂತಹ ವೃತ್ತಿ ಕ್ರಿಯೆಗಳೇ ಮುಂದೆ ಕುಲಗಳಾಗಿ ಬೆಳೆದುದನ್ನು ಬಸವಣ್ಣ ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾನೆ. ಹೀಗೆ ಬಸವಣ್ಣ ವೃತ್ತಿಯಾಧರಿತ

ವರ್ಗೀಕರಣವನ್ನು ತಿರಸ್ಕರಿಸಿ, ವೃತ್ತಿಕಾರರಿಗೆ ಗೌರವ ನೀಡಿ ಆ ಮೂಲಕ ವೃತ್ತಿಯನ್ನು "ಕಾಯಕ" ದೆತ್ತರಕ್ಕೆ ಬೆಳೆಸಿ ಅದನ್ನೊಂದು ಮೌಲ್ಯವನ್ನಾಗಿ ಬೋಧಿಸಿದ."ಜಾತಿ" ಈ ದೇಶಕ್ಕಂಟಿದ ದೊಡ್ಡ ಪಿಡುಗು. "ಚಾತುರ್ವರ್ಣ ಪದ್ಧತಿ" ಇಲ್ಲಿಯ ಶೋಷಣೆಯ ಕೇಂದ್ರ. ಶತಶತಮಾನಗಳಿಂದ ಅಸ್ತಿತ್ವದಲ್ಲಿರುವ ಈ ಜಾತಿವ್ಯವಸ್ಥೆಯನ್ನು ಸೈದ್ಧಾಂತಿಕವಾಗಿ ವಿರೋಧಿಸಿ ಚಳುವಳಿಯ ಮೂಲಕ ಹೋಗಲಾಡಿಸಲು ಪ್ರಯತ್ನಿಸಿದವರು ಶರಣರು. ಅವರ ನಾಯಕ ಬಸವಣ್ಣ. ಅಂದಿನ ಸಮಾಜದಲ್ಲಿ ಉತ್ತಮ ಕುಲ-ಕೀಳು ಕುಲವೆಂಬ ವಿಂಗಡನೆ ಸಹಜವಾಗಿ ಜಾರಿಯಲ್ಲಿತ್ತು. ಕೀಳು ಕುಲದಲ್ಲಿ ಹುಟ್ಟಿದವರು ಇದನ್ನು ವಿರೋಧಿಸಿ ಸಮಾನತೆ ಕೇಳುವುದು ಸಹಜ. ಆದರೆ ಬಸವಣ್ಣ ಉತ್ತಮ ಕುಲದಲ್ಲಿ ಹುಟ್ಟಿ ಜಾತಿಯನ್ನು ತಿರಸ್ಕರಿಸಿ ಪ್ರತಿಭಟಿಸುವುದು ಚರಿತ್ರೆಯಲ್ಲಿ ಇಂತಹ ದಿಟ್ಟ ಹೋರಾಟವನ್ನು ಹುಟ್ಟು ಹಾಕಿದ್ದು ತುಂಬಾ ವಿರಳ ಹಾಗೂ ವಿಶೇಷವಾದದ್ದು. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟದ ಹೊರೆಯ ಹೊರಿಸದಿರಯ್ಯ"[62] ಎಂಬಂತೆ ತಮ್ಮ ಉತ್ತಮ ಕುಲವೇ ಅವರಿಗೆ ಕಷ್ಟದ ಹೊರೆಯಾಗಿತ್ತು. ಅದಕ್ಕಾಗಿ ಬಸವಣ್ಣ ತನ್ನನ್ನು ಕೀಳು ಕುಲಗಳ ಮೂಲಕ ಸಮೀಕರಿಸಿಕೊಂಡು ಅಂದಿನ ಸಮಾಜದಲ್ಲಿ ಮಾದರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಕಿನ್ನರ ಬೊಮ್ಮಯ್ಯ, ನಿಂಬವ್ವೆಯರನ್ನು ತನ್ನ ಅಪ್ಪ, ಬೊಪ್ಪ. ಅಣ್ಣ, ತಾಯಿ ಎಂದು ಸಾರಿ ಚಳುವಳಿಯಲ್ಲಿ ತುಂಬಾ ಮುಖ್ಯ ಪಾತ್ರ ವಹಿಸಿದ.

"ಜಾತಿವಿಡಿದು ಸೂತಕವನರಸುವೆ
ಜ್ಯೋತಿವಿಡಿದು ಕತ್ತಲೆಯನರಸುವೆ
ಇದೇಕೊ ಮರುಳು ಮಾನವ"[63]

ಎಂಬ ಈ ವಚನದಲ್ಲಿ ಬಸವಣ್ಣ ಜ್ಯೋತಿಯನ್ನು ಹಿಡಿದು ಯಾರಾದರೂ ಕತ್ತಲನ್ನು ಹುಡುಕುವರೇ? ಎಂಬ ಈ ನುಡಿ ಜನರಲ್ಲಿದ್ದ ಜಾತಿಯ ಬಗೆಗಿನ ನಂಬಿಕೆಗಳನ್ನು ಪುನರ್ ಪರಿಶೀಲಿಸುವಂತೆ ಮಾಡಿತು.

"ಶ್ವಪಚನಾದಡೇನು? ಲಿಂಗ ಭಕ್ತನೇ ಕುಲಜನು"[64]
"ಆವ ಕುಲವಾದಡೇನು? ಶಿವಲಿಂಗವಿದ್ದವನೇ ಕುಲಜನು"[65]
"ಜಾತಿ ಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ"[66]

ಇಂತಹ ಹಲವು ವಚನಗಳಲ್ಲಿ ಜಾತಿ, ಕುಲಗಳನ್ನು ತಿರಸ್ಕರಿಸಿದ್ದಾನೆ. ಮನುಷ್ಯನ ಹುಟ್ಟಿಗಿಂತ ನಡತೆ, ಸಂಸ್ಕಾರ ಮುಖ್ಯ, ಗುಣ ಸ್ವಭಾವಗಳು ಮುಖ್ಯ. ಜಾತಿಗೆ ಸಂಬಂಧಿಸಿದಂತೆ ಇದ್ದ ಕಟ್ಟುಪಾಡುಗಳನ್ನು ಪ್ರತಿಭಟಿಸಿ ಸಮಾನತೆ ತರಲೆತ್ನಿಸಿದ. ಉತ್ತಮ ಕುಲದಲ್ಲಿ ಜನಿಸಿದವರೆಲ್ಲ ಶ್ರೇಷ್ಠರಲ್ಲ, ಕೀಳು ಕುಲದಲ್ಲಿ ಜನಿಸಿದವರು ಕನಿಷ್ಟರಲ್ಲ. ಎಲ್ಲ ವರ್ಗಗಳಲ್ಲೂ ಇಂತಹ ವ್ಯಕ್ತಿಗಳಿರುತ್ತಾರೆ. ಹೀಗಾಗಿ ಬಸವಣ್ಣ ಉತ್ತಮ ಕುಲದ ಹೊರೆಯಾಗಿ ಕಂಡು-ಕೀಳು ಕುಲದಲ್ಲಿ ಹುಟ್ಟಿದ ಶ್ರೇಷ್ಠರನ್ನು ಸ್ಮರಿಸಿದ್ದಾನೆ. ವ್ಯಾಸ, ಮಾರ್ಕಂಡೇಯ, ಮಂಡೋದರಿ, ಆಗಸ್ತ್ಯ, ದೂರ್ವಾಸ, ಕಶ್ಯಪ, ಕೌಂಡಿನ್ಯ ಇವರೆಲ್ಲರನ್ನು ಉದಾಹರಿಸಿ, ಇವರು ಕೀಳು ಕುಲದಲ್ಲಿ ಜನಿಸಿ ಮಾಡಿದ ಅಪಾರ ಸಾಧನೆಗಳಿಂದ ಸಿದ್ಧಿಪಡೆದವರೆಂದು ಪುರಾತನರ ಸ್ಮರಿಸಿ, ಜಾಗೃತಿ ಉಂಟು ಮಾಡಿದ್ದಾನೆ.

ಬಸವಣ್ಣ "ವೇದವನೋದಿ ಶೋಷಣೆ ಮಾಡುವ, ಶಾಸ್ತ್ರವ ಕೇಳಿ ಸ್ವಾರ್ಥ ಸಾಧಿಸುವ, ಜಪ-ತಪ ಮಾಡಿ ಅಹಂಭಾವ ಬೆಳೆಸಿಕೊಳ್ಳುವ ಜನತೆಯನ್ನು ಕಂಡು ಎಚ್ಚರಿಸಿದ್ದಾರೆ, ಟೀಕಿಸಿದ್ದಾರೆ, ವಿರೋಧಿಸಿದ್ದಾರೆ.

ಕಂದಾಚಾರಗಳ ಕಂದಕದಲ್ಲಿ ಬಿದ್ದು, ಅಂದಿನ ಜನತೆಗೆ ನಿಜಸ್ಥಿತಿ ತಿಳಿಸಿ ಮನುಷ್ಯರಾಗಿ ಬಾಳಲು ಕಲಿಸಿದ್ದಾರೆ, ಬೆಳಕಾಗಿ ಬೆಳಗಲು ತಿಳಿಸಿದ್ದಾರೆ"[67]. ಹಾಗೆಯೇ ವೇದ ಶಾಸ್ತ್ರಗಳಲ್ಲಿ, ತರ್ಕ-ಆಗಮಗಳಲ್ಲಿ ಯಾವುದೇ ಹುರುಳಿಲ್ಲ ಎಂದು ಖಂಡಿಸಿದ್ದಾರೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ.
ತರ್ಕದ ಬೆನ್ನು ಬಾರನೆತ್ತುವೆ, ಆಗಮದ ಮೂಗ ಕೊಯ್ಯುವೆ :[68]

ಎಂದು ನೇರವಾಗಿ ನುಡಿದು, ವೈದಿಕ ವ್ಯವಸ್ಥೆಯಲ್ಲಿರುವ ಜಾತಿಯನ್ನು ವಿರೋಧಿಸಿದ್ದಾನೆ. ಭಾರತದಲ್ಲಿ ಶತಮಾನಗಳಿಂದ ಬೆಳೆದು ಬಂದಿರುವ ಜಾತಿ ವ್ಯವಸ್ಥೆಯನ್ನು ತುಂಡರಿಸಿ, ಸಮಾನತೆಯನ್ನು ತರಲು ಬಸವಣ್ಣ ಪ್ರಯತ್ನಿಸಿದ. ಆಳುವ ಅರಸರು ಪುರೋಹಿತಶಾಹಿಗಳು ಶಾಮೀಲಾಗಿ ಸಮಾಜವನ್ನು ನೂರಾರು ಜಾತಿಗಳನ್ನಾಗಿ ವಿಂಗಡಿಸಿ, ಜಾತಿಯನ್ನು ಶೋಷಣೆಯ ಅಸ್ತ್ರವನ್ನಾಗಿ ಮಾಡಿಕೊಂಡಿದ್ದ ಸಂದರ್ಭದಲ್ಲಿ ಬಸವಣ್ಣನವರು ಆರಂಭಿಸಿದ ಪ್ರತಿಭಟನಾತ್ಮಕ ಹೋರಾಟ ಇಂದಿಗೂ ಅನುಕರಣೀಯ, ಜಾತಿ-ಕೋಮುಗಳಿಂದ ಉರಿಯುತ್ತಿರುವ ಈ ಸಂದರ್ಭದಲ್ಲಿ ಬಸವ ತತ್ವ ಹಿಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ. ಅವರು ಎತ್ತಿಹಿಡಿದ ಮೌಲ್ಯಗಳು-ಪ್ರತಿಪಾದಿಸಿದ ವಿಚಾರಗಳು ಇಂದಿಗೂ ಪ್ರಮುಖವೆನಿಸುತ್ತವೆ.

3.5 ವೇದಗಳು - ಯಜ್ಞ ಯಾಗಗಳ ವಿರುದ್ಧ ಪ್ರತಿಭಟನೆ

ನಮ್ಮ ಸಾಮಾಜಿಕ ವ್ಯವಸ್ಥೆ ಸ್ಥಗಿತಗೊಂಡು ಮಲೀನವಾಗಿರುವುದಕ್ಕೆ ವೇದಶಾಸ್ತ್ರಗಳು ಕಾರಣವಾಗಿವೆ. ಹೀಗಾಗಿ ಬಸವಣ್ಣ ಆ ಕಾಲದಲ್ಲಿಯೇ ವೇದಶಾಸ್ತ್ರಗಳನ್ನು ವಿರೋಧಿಸಿದರು. ವೇದಶಾಸ್ತ್ರಗಳಲ್ಲಿಯ ಹಲವಾರು ಸ್ಥಗಿತ, ಅಹಿತಕರ ತತ್ವಗಳನ್ನು ಬಸವಣ್ಣ ನೇರವಾಗಿ ಪ್ರತಿಭಟಿಸಿದ್ದಾರೆ. ಅನೇಕ ವಚನಗಳಲ್ಲಿ ಅವರ ವಿಚಾರಗಳನ್ನು ಕಾಣಬಹುದಾಗಿದೆ.

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗು ಕೊಯ್ಯುವೆ ನೋಡಯ್ಯ"[69]
"ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯ !
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತಯ್ಯ"[70]
"ವೇದವನೋದಿದಡೇನು? ಶಾಸ್ತ್ರವ ಕೇಳಿದಡನಯ್ಯ?
ಜಪವ ಮಾಡಿದಡೇನು? ತಪವ ಮಾಡಿದಡೇನಯ್ಯ?"[71]
"ವೇದ ವೇಧಿಸಲರಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು
ಶಾಸ್ತ್ರ ಸಾಧಿಸಲರಿಯದೇ ಅಸಾಧ್ಯ ಲಿಂಗವೆಂದು ಸಾರುತ್ತೈದಾವೆ"[72]
"ವೇದ ಶಾಸ್ತ್ರದವರ ಹಿರಿಯರೆನ್ನೆ
ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ
ಇವರು ಹಿರಿಯರುಗಳೇ?"[73]

ಎಂದು ನೇರವಾಗಿ ಬಸವಣ್ಣ ಪ್ರಶ್ನಿಸುತ್ತಾನೆ. ಈ ಮೇಲಿನ ವಚನಗಳಲ್ಲಿ ವೇದ, ಶಾಸ್ತ್ರ, ತರ್ಕ, ಆಗಮಗಳನ್ನು ತಿರಸ್ಕರಿಸಲಾದ ವಿಷಯ ತಿಳಿದು ಬರುತ್ತದೆ. ಈ ವೇದಶಾಸ್ತ್ರಗಳಿಗೆ ತಳಬುಡವಿಲ್ಲವೆಂದು, ಅವು ಕೇವಲ ಕೆಲವರ ಸೊತ್ತಾಗಿದ್ದು, ಅವೇ ಶೋಷಣೆಯ ಅಸ್ತ್ರಗಳಾಗಿದ್ದವು. ಆದ್ದರಿಂದ ವೇದಶಾಸ್ತ್ರದವರನ್ನು ಹಿರಿಯರೆನ್ನಲಾಗದೆಂದು ಬಸವಣ್ಣ ಹೇಳಿದ್ದಾನೆ. ಹೀಗೆ ಬಸವಣ್ಣನ ಪ್ರತಿಭಟನಾತ್ಮಕ ವಿಚಾರಗಳು ಅವರ

ವಚನಗಳಲ್ಲಿ ಕಂಡುಬರುತ್ತವೆ. ಋಷಿಗಳೂ ಕೂಡಾ ನಮ್ಮಂತೆ ಮಾನವರೆ, ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ" ಎಂಬ ಮಹಾಕವಿ ಕುವೆಂಪುರವರ ಮಾತು ಕೂಡ ಸಾಕ್ಷಿ. ಹಾಗೆಯೇ ಡಾ.ಬಿ.ಆರ್.ಅಂಬೇಡ್ಕರ್‌ರವರು ಕೂಡ ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಡುವಾಗ "ಮನುಸ್ಮೃತಿಯನ್ನು" ಸುಟ್ಟರು. ಏಕೆಂದರೆ ಸಾಮಾಜಿಕ ಅಸಮಾನತೆಯನ್ನು ಶತಶತಮಾನದವರೆಗೆ ಗಟ್ಟಿಗೊಳಿಸುವಂತ ಅಂಶ ಮನುಸ್ಮೃತಿ ಒಳಗೊಂಡಿರುವುದರಿಂದ ಅದನ್ನು ವಿರೋಧಿಸದೇ ಸಾಮಾಜಿಕ ಪ್ರತಿಭಟನೆ ಸಾಧ್ಯವಿಲ್ಲವೆಂದು ಅಂಬೇಡ್ಕರ್ ಚೆನ್ನಾಗಿ ಅರಿತಿದ್ದರು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ, ಜಾತಿ, ಲಿಂಗ, ವರ್ಗ, ವ್ಯತ್ಯಾಸಕ್ಕೆ ವೈದಿಕ ಧರ್ಮವೇ ಕಾರಣ. ವೈದಿಕಧರ್ಮಕ್ಕೆ ಆಧಾರಗಳು ಈ ವೇದಗಳು ಅದರ ವಿರುದ್ಧ ಬಂಡೇಳದ ಹೊರತು ಹೊಸತನ್ನು ಕಟ್ಟಲು ಸಾಧ್ಯವಿಲ್ಲವೆಂದು ಬಸವಣ್ಣನವರು ಅರಿತಿದ್ದರು. ಆದ್ದರಿಂದಲೇ ಅವರು ವರ್ಣವ್ಯವಸ್ಥೆ, ಕರ್ಮಸಿದ್ಧಾಂತ, ಯಜ್ಞ, ವೇದ-ಶಾಸ್ತ್ರ-ಪುರಾಣಗಳನ್ನು ಖಂಡಿಸಿದರು. ಯಾವುದೇ ಕಾಯಕ ಮಾಡಿದರೂ ದೇವನ ಆತ್ಮನ ಮನ ಮುಟ್ಟುವಂತೆ ಮಾಡಿದರೆ ಆ ವ್ಯಕ್ತಿ ಶ್ರೇಷ್ಠನಾಗುತ್ತಾನೆ. ವ್ಯರ್ಥವಾಗಿ ವೇದಗಳನ್ನು ಓದುವುದು, ಶಾಸ್ತ್ರ ಕೇಳುವುದು, ಜಪ-ತಪ ಮಾಡುವುದು, ಕೇವಲ ಕಾಲಹರಣಕ್ಕಾಗಿ. ಅದರಿಂದ ಫಲ ದೊರೆಯಲಾರದು. ಅದಕ್ಕಾಗಿ ಕಾಯಕತತ್ವ ಮಾಡುವುದೊಳಿತೆಂದು ಬಸವಣ್ಣ ಹೇಳಿದ್ದಾರೆ.

ಸಮಕಾಲೀನ ಶರಣ ಅಲ್ಲಮಪ್ರಭುಗಳು ಕೂಡ ವೇದಗಳನ್ನು ಕುರಿತು ಖಂಡಿಸಿದ್ದಾರೆ.

"ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರಹೋರಟೆ
ಭಕ್ತಿಯೆಂಬುದು ತೋರುಂಭ ಲಾಭ
ಗುಹೇಶ್ವರನೆಂಬುದು ಮೀರಿದ ಘನವು'[74]
"ವೇದ ವೇದಿಸಲರಿಯದೆ ಕೆಟ್ಟವು, ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು,
ಪುರಾಣ ಪೂರೈಸಲರಿಯದೆ ಕೆಟ್ಟವು"[75]

ಹೀಗೆ ಅಲ್ಲಮಪ್ರಭುಗಳು ಕೂಡಾ ವೇದಶಾಸ್ತ್ರಗಳನ್ನು ನಿರಾಕರಿಸಿರುವುದು ಸ್ಪಷ್ಟವಾಗಿದೆ. ಶಾಸ್ತ್ರವೆಂಬುದು ಸಂತೆಯ ಸುದ್ದಿಯೆಂದು, ಪುರಾಣವೆಂಬುದು ಪುಂಡರ ಗೋಷ್ಠಿಯೆಂದು ಕರೆದಿದ್ದಾರೆ. ಶಿವನು ನಾದಪ್ರಿಯ, ವೇದಪ್ರಿಯನೆಂದು ಹೇಳಿ ಪೂಜೆಯ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದವರನ್ನು ಟೀಕಿಸಿದ ಬಸವಣ್ಣನವರು ತಮ್ಮ ವಚನದಲ್ಲಿ "ವೇದವನೋದಿದ ಬ್ರಾಹ್ಮಣನ ಶಿರಹೋಯಿತು" ಎಂದಿದ್ದಾರೆ. ಇಲ್ಲಿ ನಾವು ಗಮನಿಸ ಬೇಕಾಗಿರುವುದೆಂದರೆ, "ಬಸವಣ್ಣನವರು ವಿರೋಧಿಸಿರುವುದು ಡಂಭಾಚಾರದ ಮತ್ತು ಮೋಸದ ಬ್ರಾಹ್ಮಣ್ಯ ವನ್ನಷ್ಟೇ ಹೊರತು ಬ್ರಹ್ಮತತ್ವವನ್ನರಿತ ಬ್ರಾಹ್ಮಣರನ್ನಲ್ಲ. ಈ ವಿಚಾರವನ್ನು ಬಸವಣ್ಣ ಪ್ರಭಾವಕ್ಕೊಳಗಾಗಿದ್ದ ಸಿದ್ಧರಾಮನ ವಚನವು ಸ್ಪಷ್ಟಪಡಿಸುತ್ತದೆ". ಅದು ಹೀಗಿದೆ;

ವೇದವನೋದಿ ವೇದಾಧ್ಯಯನ ಮಾಡಿಸಿದರೇನು?
ಬ್ರಹ್ಮ ವೇತ್ತುಗಳ ಶುಕ್ಲ ಶೋಣಿತದಿಂದ ಜನಿಸಿದರೇನು?

ಯಜನಾದೃಷ್ಟ ಷಡ್ಕರ್ಮಂಗಳ ಮಾಡಿದರೇನು?

ಆತ ಬ್ರಾಹ್ಮಣನಾಗಬಲ್ಲನೇ?

ಬ್ರಹ್ಮ ಜನಾತಿ ಬ್ರಾಹ್ಮಣ ಎಂಬ ವೇದವಾಕ್ಯವನರಿತು

ಬ್ರಹ್ಮೀ ಭೂತನಾದವನೇ ಬ್ರಾಹ್ಮಣ:[76] -ಎಂದಿದ್ದಾರೆ.

ನಿಜವಾದ ಧರ್ಮವಿರುವುದು ಮಾನವನ ಹೃದಯದಲ್ಲಿ ದಯೆಯಲ್ಲಿ, ಇದನ್ನು ಮರೆತು ಯಜ್ಞ ಯಾಗ, ಪೂಜೆ-ಪುನಸ್ಕಾರಗಳಿಗೆ ಆದ್ಯತೆಯನ್ನಿತ್ತ ವೇದಶಾಸ್ತ್ರಗಳನ್ನು ಬಸವಣ್ಣ ನಿರ್ದಾಕ್ಷಿಣ್ಯವಾಗಿ ಖಂಡಿಸಿದರು.

ಡಾ.ಎಂ.ಎಂ.ಕಲಬುರ್ಗಿಯವರ ಹೇಳಿದಂತೆ "ಬಸವ ಸಿದ್ಧಾಂತವೆನ್ನುವುದು ಶಂಕರ, ಮಧ್ವ, ರಾಮಾನುಜ ಸಿದ್ಧಾಂತಗಳಂತೆ. ವೇದ ಸಾಹಿತ್ಯಕ್ಕೆ ಬರೆದ ವ್ಯಾಖ್ಯಾನವಲ್ಲ. ಸಾಮಾಜಿಕ, ಮಾನವೀಯತೆಗಳನ್ನು ತೀಕ್ಷ್ಣವಾಗಿ ವಿಮರ್ಶಿಸಿ, ಬರೆದ ಸಿದ್ಧಾಂತ:[77] ವೈದಿಕ ವ್ಯವಸ್ಥೆಯ ಆಧಾರಸ್ತಂಭ ಈ ವೇದಗಳು. ವೇದಗಳಲ್ಲಿನ ಕೆಲವು ಅಂಶಗಳನ್ನು ಬಸವಣ್ಣ ವಿರೋಧಿಸಿದರು.

"ವೇದಗಳನ್ನು ಬಸವಾದಿ ಶರಣರು ಖಂಡಿಸಿರುವುದು ನಿಜ. ಆದರೆ ಸಮಗ್ರ ವೇದವನ್ನೇ ಅವರು ಖಂಡಿಸಿಲ್ಲ. ವೇದಗಳ ಕರ್ಮಕಾಂಡದ ಭಾಗಗಳನ್ನು ಹಿಂಸೆಗೆ ಆಸ್ಪದವಾಗಿರುವ ಯಜ್ಞ ಯಾಗಾದಿಗಳನ್ನು ಎತ್ತಿ ಹಿಡಿಯುವ ಭಾಗಗಳನ್ನು ಶರಣರು ಖಡಾಖಂಡಿತವಾಗಿ ಖಂಡಿಸಿರುವರು. ಆದರೆ ಈ ಕರ್ಮಕಾಂಡವಷ್ಟೇ ವೇದವಲ್ಲ. ವೈದಿಕ ಸಾಹಿತ್ಯದಲ್ಲಿ ವೇದ ಸಂಹಿತೆಗಳು, ಉಪನಿಷತ್ತುಗಳು, ಪ್ರಸ್ಥಾನತ್ರಯಗಳು ಮುಂತಾದವು ಅಡಕವಾಗುತ್ತವೆ. ಕರ್ಮಕಾಂಡದ ತವರೆನಿಸಿದ ಯಜ್ಞ ಯಾಗಾದಿಗಳ ವಿಧಿ-ವಿಧಾನಗಳನ್ನು ವಿವರಿಸುವ ಬ್ರಾಹ್ಮಣಗಳು ಹಾಗೂ ವರ್ಣಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಸ್ಮೃತಿಗಳು ಇಂಥವುಗಳನ್ನು ಶರಣರು ಒಪ್ಪಲಿಲ್ಲ"[78] ಡಾ.ಆರ್.ಸಿ.ಹಿರೇಮಠರವರ ವ್ಯಾಖ್ಯಾನವನ್ನು ಅವಲೋಕಿಸುವುದರಿಂದ ಬಸವಣ್ಣನವರು ವೇದಗಳಲ್ಲಿರುವ ಲೋಪದೋಷಗಳೆಲ್ಲವನ್ನು ಎತ್ತಿತೋರಿಸಿ ತಮ್ಮ ವಚನಗಳಲ್ಲಿ ಖಂಡಿಸಿರುವುದು ಸೂಕ್ತವೆನಿಸುತ್ತದೆ. ಬಸವಣ್ಣನವರ ಅತ್ಯುನ್ನತ ವಿಚಾರಗಳು ವಚನ ರೂಪದಲ್ಲಿ ಗರಿಗೆದರಿ ನಿಂತಿವೆ. "ಅವರ ಗಹನವಾದ ವಿಚಾರ ಹಾಗೂ ಅರ್ಥಗರ್ಭಿತವಾದ ವಚನಗಳು ಬುದ್ಧಿ ಹಾಗೂ ಹೃದಯವನ್ನು ಬೆಳಗುವ ಸುಂದರವೂ, ಮನೋಹರವೂ ಆದ ಅಪರೂಪ ರತ್ನಗಳಾಗಿವೆ" ಎಂದು ಶ್ರೀ ಆಲೂರು ವೆಂಕಟರಾಯರು ಅಭಿಪ್ರಾಯಪಟ್ಟಿದ್ದಾರೆ.[79] ಬುದ್ಧನ ಮಾನವತಾ ದೃಷ್ಟಿಯನ್ನು ಪುನರುಜ್ಜೀವನಗೊಳಿಸಿ, ಬೆಳೆಸಿದ ಬಸವಣ್ಣನವರು ಮಾನವನ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಿದವರಾಗಿದ್ದಾರೆ. ಯಾರು ವೇದಗಳ ಜ್ಞಾನ, ವಿದ್ಯೆ, ಸಾಮಾಜಿಕ ಸಮಾನತೆಯಿಂದ ವಂಚಿತವಾಗಿದ್ದ ವರ್ಗದವರಿಗೆ ವೇದಗಳ ತಿರಳನ್ನು ತಿಳಿಸಿ, ಅವುಗಳ ಢಾಂಬಿಕೆಯನ್ನು ಖಂಡಿಸಿ ನಿಜಜ್ಞಾನದ ಅರಿವು ಬೆಳೆಸಿದರು.

ಧರ್ಮದ ಹೆಸರಿನಲ್ಲಿ ಯಜ್ಞ-ಯಾಗಗಳನ್ನು ಮಾಡಿ ಜನ ಸಾಮಾನ್ಯರ ಶೋಷಣೆಯಾಗುವುದನ್ನು ಅವರು ವಿರೋಧಿಸಿದರು. ಅವರು ಪೊಳ್ಳು ಹಾಗೂ ಅರ್ಥವಿಲ್ಲದ ವ್ಯರ್ಥ ಸಂಸ್ಕಾರಗಳ ವಿರುದ್ಧ ಪ್ರತಿಭಟಿಸಿದರು. ಅಹಿಂಸಾ ತತ್ವ ಬಸವಣ್ಣನವರಿಗೆ ಅತ್ಯಂತ ಪ್ರಿಯವಾಗಿತ್ತು. ಜೀವದಯೆ - ಅಹಿಂಸೆ ಬಸವ ಧರ್ಮದ ತಿರುಳು, ಆಧಾರಸ್ತಂಭ. ದಯವೇ ಧರ್ಮದ ಮೂಲ, ದಯೆಯಿಲ್ಲದ ಧರ್ಮ

ಧರ್ಮವೇ ಅಲ್ಲವೆಂತಲೂ ಅವರು ಸಾರಿದರು. ಸಕಲ ಮಾನವರು, ಪ್ರಾಣಿ, ಪಕ್ಷಿಗಳ ವಿಷಯವಾಗಿ ದಯೆ-ಅನುಕಂಪ ಇರಬೇಕು. ಅದುವೇ ನಿಜಧರ್ಮವೆಂದು ಸಾರಿದರು. ಯಜ್ಞ-ಯಾಗ, ಪೂಜೆ-ಪುನಸ್ಕಾರ, ಬಾಹ್ಯ ಆಡಂಬರಗಳಿಗೆ ಆದ್ಯತೆ ನೀಡಿದ. ವೇದ ಶಾಸ್ತ್ರಗಳನ್ನು ಬಸವಣ್ಣ ಖಂಡಿಸಿದರು. ಯಜ್ಞ-ಯಾಗಗಳಿಗಿಂತ ಸರಳ ಭಕ್ತಿ ತತ್ವವನ್ನು ಸಾರಿದರು.

ಯಜ್ಞ-ಯಾಗಾದಿಗಳಿಂದಾಗಿ ಪ್ರಾಣಿಹಿಂಸೆ ಅತಿಯಾದಾಗ ಅದನ್ನು ಪ್ರತಿಭಟಿಸಿ ಬುದ್ಧ - ಮಹಾವೀರರು ಕ್ರಿ.ಪೂ.6ನೇ ಶತಮಾನದಲ್ಲಿಯೇ ಹೋರಾಡಿದರು. ಅದೇ ರೀತಿ 12ನೇ ಶತಮಾನದಲ್ಲಿ ಹೆಚ್ಚು ರೂಢಿಗತವಾಗಿದ್ದ ಪ್ರಾಣಿಹಿಂಸೆಯನ್ನು ಬಸವಣ್ಣ ಪ್ರತಿಭಟಿಸಿದರು.

"ಅಶ್ವಮೇಧಯಾಗವಂತಿರಲಿ,
ಅಜಪೆ ಉಪದೇಶ ಸಮಾಧಿಯಂತಿರಲಿ ಹೋ।
ಗಾಯತ್ರಿ ಜಪವಂತಿರಲಿ ಹೋ।
ಜನಮೋಹನ ಮಂತ್ರವಂತಿರಲಿ ಹೋ।
ಕೂಡಲಸಂಗನ ಶರಣರ ನುಡಿಗಡನ
ಎಲ್ಲಕ್ಕಧಿಕ ನೋಡಾ"[80] ಎಂದು

ಯಜ್ಞ-ಯಾಗ, ಜಪ-ತಪಗಳನ್ನು ಮಾಡುತ್ತ ಮಂತ್ರಗಳನ್ನು ಪಠಿಸುತ್ತ ಕಾಲ ಕಳೆಯುವುದಕ್ಕಿಂತ ಕೂಡಲಸಂಗನಲ್ಲಿ ದೃಢಭಕ್ತಿಗೆ ಅವರು ಪ್ರಾಶಸ್ತ್ಯ ಕೊಟ್ಟಿದ್ದಾರೆ. ತನ್ನ ಕಾಲಾವಧಿಯಲ್ಲಿ ರೂಢಿಯಲ್ಲಿದ್ದ ಯಜ್ಞ ಯಾಗಾದಿಗಳನ್ನು ಬಸವಣ್ಣ ಪ್ರತಿಭಟಿಸಿದ್ದಾರೆ.

"ಪುಣ್ಯ ಪಾಪಂಗಳೆಂಬವು ತಮ್ಮ ಇಷ್ಟವು ಕಂಡಿರೆ,
"ಅಯ್ಯಾ" ಎಂದಡೆ ಸ್ವರ್ಗ, "ಎಲವೋ" ಎಂದಡೆ ನರಕ
ದೇವಾ ಭಕ್ತಾ, ಜಯಾ, ಜೀಯಾ ಎಂಬ ನುಡಿಯೊಳಗೆ
ಕೈಲಾಸವೈದೊರೆ, ಕೂಡಲಸಂಗಮದೇವಾ"[81]

ಎಂದ್ಹೇಳಿ ಬಸವಣ್ಣನವರು ಮನುಷ್ಯ ತನ್ನಿಚ್ಛೆಯಂತೆ ಪಾಪ-ಪುಣ್ಯಗಳನ್ನು ಪಡೆಯುತ್ತಾನೆ. ಒಳ್ಳೆಯ ಮಾತು, ಒಳ್ಳೆಯ ಕೆಲಸಗಳಿಂದ ಪುಣ್ಯ ಪ್ರಾಪ್ತಿಯಾಗುತ್ತದೆ. ಅದಕ್ಕೆ ಬದಲಾಗಿ ಕೆಟ್ಟ ಮಾತು, ಕೆಟ್ಟ ಕೆಲಸಗಳಿಂದ ಮನುಷ್ಯನಿಗೆ ಹಿಂಸೆ, ನರಕ ತಪ್ಪಿದ್ದಲ್ಲ ಎನ್ನುವುದು ಬಸವಣ್ಣನ ನಿಲುವು. "ಬಸವಣ್ಣನವರ ಧರ್ಮ, ದಯೆಯ ತಳಹದಿಯ ಮೇಲೆ ನಿಂತುದು, ಯಾಗಕ್ಕೆ ಒಯ್ವ ಪಶುವನ್ನು ಕಂಡು,

"ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
ಎಲೆ ಹೋತೇ ಅಳು ಕಂಡಾ
ವೇದವನೋದಿದವರ ಮುಂದೆ ಅಳು ಕಂಡಾ ಹೋತೆ।
ಶಾಸ್ತ್ರವನೋದಿದವರ ಮುಂದೆ ಅಳು ಕಂಡಾಹೋತೆ।
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ"[82]

ಎಂದು ಮಮ್ಮಲ ಮರುಗಿದರು, ಪ್ರಾಣಿಹಿಂಸೆ ದೇವರಿಗೆ ಪ್ರಿಯವಲ್ಲ, ಅದು ಪಾಪಕೃತ್ಯ "ಎಂದು ಹೇಳಿದರು. ಹೋಮದ ನೆವದಲ್ಲಿ ಹೋತವನ್ನು ಕೊಂದು ತಿಂಬ ಅನಾಮಿಕರನ್ನು ಕಂಡು ಆಕ್ರೋಶ ಗೊಂಡಿರುವರು. ಇಂತಹ ದಯಾರ್ದ್ರ ಹೃದಯ ವಿಶ್ವಕ್ಕೆ ದಯೆಯ ಸಂದೇಶವನ್ನಿತ್ತರು. "ದಯವಿಲ್ಲದ ಧರ್ಮವಾವ್ಯದಯ್ಯ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲಿ, ದಯವೇ ಧರ್ಮದ ಮೂಲ"[83] ಎಂದು ಬಸವಣ್ಣನವರು ವಿಶ್ವಧರ್ಮದ ಸಂದೇಶವನ್ನು ಸಾರಿದ್ದಾರೆ.

12ನೇ ಶತಮಾನದಲ್ಲಿ ಅನಕ್ಷರಸ್ಥ, ಅಜ್ಞರ ಮನಸ್ಸಿನಲ್ಲಿ ಭಯವನ್ನು ಬಿತ್ತಿ ಶೋಷಣೆ ಮಾಡುತ್ತಿದ್ದರು. ಮಾತು ಬಾರದ, ಧ್ವನಿ ಇಲ್ಲದ ಜನರೂ ಮೂಢ ನಂಬಿಕೆ, ಅಂಧಶ್ರದ್ಧೆ, ಶೋಷಣೆ, ಯಜ್ಞ ಯಾಗಾದಿಗಳಲ್ಲಿ ನಡೆಯುವ ಪ್ರಾಣಿ ಹಿಂಸೆಯನ್ನು ಪ್ರಶ್ನಿಸುವಂತೆ ಮಾಡಿದ್ದು, ಬಸವಣ್ಣನ ಪ್ರತಿಭಟನಾತ್ಮಕ ಚಳುವಳಿಯ ಹಿರಿಮೆ. ಯಜ್ಞ ಯಾಗಾದಿಗಳನ್ನು ಉಗ್ರ ಟೀಕೆಗೆ ಬಸವಣ್ಣ ಒಳಪಡಿಸಿದನು.

"ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರ, ಬೀದಿಯ ಧೂಳ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯ
ಕೂಡಲಸಂಗಮದೇವವಂದನೆಯ ಮರೆದು ನಿಂದಿಸುತಿರ್ಪರಯ್ಯ॥[84]

ಎಂದು ಬಸವಣ್ಣ ಬ್ರಾಹ್ಮಣರ ಮನೆಯಲ್ಲಿ ದೈವವೆಂದು ಪೂಜಿಸುವ ಅಗ್ನಿ, ಯಜ್ಞ ಮಾಡುವಾಗ ಮನೆಯನ್ನೇ ಸುಡಲಾರಂಭಿಸಿದರೆ ಬಚ್ಚಲು ನೀರು ಬೀದಿಯ ಧೂಳನ್ನು ಹೊಯ್ದು ಆರಿಸುತ್ತ ಸಹಾಯಕ್ಕಾಗಿ ಬೊಬ್ಬಿಡುವುದನ್ನು ಬಸವಣ್ಣ ವ್ಯಂಗವಾಗಿ ಟೀಕಿಸಿದ್ದಾರೆ. ಬ್ರಾಹ್ಮಣನಾಗಿ ಜನಿಸಿದ್ದರೂ ಬಸವಣ್ಣ ಬ್ರಾಹ್ಮಣರ ಕಂದಾಚಾರಗಳನ್ನು ಖಂಡಿಸಿದ್ದಾರೆ. ಬ್ರಾಹ್ಮಣರು ನುಡಿದಂತೆ ನಡೆಯರು ಎನ್ನುವುದು ಬಸವಣ್ಣನವರ ವಾದ. ಆದಕ್ಕಾಗಿ:

"ಏನಯ್ಯ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯ ।
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ
ಕೂಡಲಸಂಗದೇವಯ್ಯ
ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟೆ
ಗೋಮಾಂಸವ ತಿಂಬರೆಂಬುದಕ್ಕೆ ಇದೇದೃಷ್ಟ॥[85]

ಬ್ರಾಹ್ಮಣರ ಗುಟ್ಟು ಬ್ರಾಹ್ಮಣರಿಗೆ ಮಾತ್ರ ಗೊತ್ತು. ಹೀಗಾಗಿ ಅವರು ರಚಿಸಿದ ಶಾಸ್ತ್ರ, ವೇದಗಳು ಶೂದ್ರರಿಗೆಅನ್ವಯವಾಗುತ್ತವೆ, ಅವರಿಗೆ ಅಲ್ಲ. ಅವರಿಗೆ ಬೇರೆ ನಿಯಮಗಳುಂಟು, ಶಾಸ್ತ್ರವುಂಟು. ತಮಗೊಂದು ಧರ್ಮ, ಅನ್ಯರಿಗೊಂದು ಧರ್ಮ. ಇದು ಅವರ ನೀತಿ. ಹೊಲೆಯ ಸತ್ತ ಪ್ರಾಣಿಯನ್ನು ತಿನ್ನುತ್ತಾನೆ. ಬ್ರಾಹ್ಮಣನೋ ಮೇಕೆಯನ್ನು ಹೊತ್ತು ತಂದು ಕೊಲ್ಲುತ್ತಾನೆಂದು ಬಸವಣ್ಣ ವ್ಯಂಗವಾಗಿ ಹೇಳಿದ್ದಾರೆ. ಇವರಿಬ್ಬರಲ್ಲಿ ಯಾರು ಕೀಳೆಂದವರು ಪ್ರಶ್ನಿಸಿದ್ದಾರೆ.

3.6 ಕರ್ಮ ಸಿದ್ಧಾಂತದ ವಿರುದ್ಧ ಪ್ರತಿಭಟನೆ :

ನಮ್ಮ ಧಾರ್ಮಿಕ-ಸಾಮಾಜಿಕ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಸಾಂಪ್ರದಾಯಿಕ ಧರ್ಮದ ಕೊಳೆಯನ್ನು ಕಿತ್ತೆಸೆದು ಆಮೂಲಾಗ್ರ ಪರಿವರ್ತನೆಗೆ ಬಸವಣ್ಣ ಪ್ರಯತ್ನಿಸಿದ ಕ್ರಿ.ಪೂ.6ನೇ ಶತಮಾನದಲ್ಲಿ ಬುದ್ಧ ಇದೇ ಪ್ರಯತ್ನ ಮಾಡಿದ್ದ ವೇದಗಳ ಕರ್ಮಕಾಂಡದ ಕರ್ಮಠತನವನ್ನು ನಿರಾಕರಿಸಿ, ಯಜ್ಞ-ಯಾಗಾದಿಗಳನ್ನು ತಿರಸ್ಕರಿಸಿ, ಎಲ್ಲರಿಗೂ ಎಟಕುವ ಸರಳ ಜೀವನ ಧರ್ಮವನ್ನು ಬೋಧಿಸಿದ. ಆದರೆ ಮುಂದೆ ವೈದಿಕಧರ್ಮ ಆದನ್ನು ಕಬಳಿಸಿ ಕರ್ಮಸಿದ್ಧಾಂತವನ್ನು ಕಣಕಣದಲ್ಲಿಯೂ ಕರಗಿಸಿ ಸಾಮಾಜಿಕ ವಿಷಮತೆಗೆ ಧಾರ್ಮಿಕ ಚೌಕಟ್ಟನ್ನು ಒದಗಿಸಿತು. ಧರ್ಮಸೂತ್ರ, ಶಾಸ್ತ್ರಗಳು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಿದವು. "ಗುಪ್ತರ ಕಾಲದಲ್ಲಿ ಇದು ಅತ್ಯಂತ ವ್ಯವಸ್ಥಿತವಾಗಿ ನಮ್ಮ ಸಾಮಾಜಿಕ ಮೇಲು-ಕೀಳುಗಳನ್ನು ಶಾಶ್ವತಗೊಳಿಸಿತು. ಆಗ ಚಾತುರ್ವರ್ಣಗಳ ಶ್ರೇಣೀಕೃತ ಸಮಾಜ ವ್ಯವಸ್ಥಿತವಾದುದಲ್ಲದೇ, ಅಸ್ಪೃಶ್ಯತೆಯೂ ಒಂದು ಅವಿಭಾಜ್ಯ ಅಂಗವಾಯಿತು"[86] ಸಮಾಜ ಜಡಗೊಂಡಿತು. ಸಮಾಜದ ಈ ಮೇಲು-ಕೀಳುಗಳನ್ನು ರಕ್ಷಿಸುವುದೇ ರಾಜಧರ್ಮವಾಯಿತು. ಬಸವಣ್ಣನ ಕಾಲಕ್ಕೆ ಕರ್ನಾಟಕದಲ್ಲಿ ಇದು ತುತ್ತ ತುದಿಯನ್ನು ತಲುಪಿತು. ವರ್ಣ ರಕ್ಷಣೆಯೇ ವೈದಿಕಧರ್ಮದ ಮೂಲ ಸೂತ್ರವಾಗಿ ಅದೇ ಧರ್ಮರಕ್ಷಣೆ ಎನಿಸಿತು. ಅದನ್ನು ರಕ್ಷಿಸುವುದೇ ರಾಜ ಧರ್ಮವಾಗಿತ್ತು. ಆದಕ್ಕನುಗುಣವಾಗಿ ಸಾಮಾಜಿಕ ಕರ್ಮಗಳೆಲ್ಲ ಬೆಳೆದು, ಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆ, ಮೂಢನಂಬಿಕೆಗಳೆಲ್ಲವೂ ಶೋಷಣೆಯನ್ನು ಸಮೃದ್ಧಗೊಳಿಸಿದ್ದವು. ಈ ವ್ಯವಸ್ಥೆಯ ಪರಿವರ್ತನೆಗೆ ಬಸವಣ್ಣ ಪ್ರತಿಭಟನೆ ಪ್ರಾರಂಭಿಸಿದ.

12ನೇ ಶತಮಾನದಲ್ಲಿ ಸಮಾನತೆ ಇರಲಿಲ್ಲ. ಮೇಲು-ಕೀಳುಗಳು ಬೆಳೆದು ವಿದ್ಯೆ ಮತ್ತು ಸಾಮಾಜಿಕ ಸೌಲಭ್ಯಗಳೆಲ್ಲ ಕೆಲವರಿಗೆ ಮಾತ್ರ ಮೀಸಲಾಗಿದ್ದವು. ಧರ್ಮಗ್ರಂಥಗಳಲನ್ನು ಓದುವುದಿರಲಿ ಕೇಳುವ ಹಕ್ಕೂ ಸಮಾಜದ ಕೆಳವರ್ಗಗಳಿಗೆ ಇರಲಿಲ್ಲ. ಈ ತಾರತಮ್ಯದ ಪರಿಯನ್ನು ಕಂಡು ಡಾ. ಅಂಬೇಡ್ಕರ್ ರವರು ಅದನ್ನು ಬೋಧಿಸುವ ಮನುಧರ್ಮಶಾಸ್ತ್ರವನ್ನು ಬಹಿರಂಗವಾಗಿ ಸುಟ್ಟದ್ದು. ಆದರೆ ಆತನನ್ನೇ "ಆಧುನಿಕ ಮನು" ಎಂದು ಕರೆಯುವ ಬುದ್ಧಿವಂತಿಕೆ ನಮ್ಮ ಸರ್ವಭಕ್ಷಕರ ಗುಣಕ್ಕೆ ಉದಾಹರಣೆ. ಇಂತಹ ಅಪ್ರಾಚೀನ ಪರಿಸರದಲ್ಲಿಯೇ ಬಸವಣ್ಣ ನೇರವಾಗಿ ಆದರ ವಿರುದ್ಧ ಸಿಡಿದು ನಿಂತದ್ದು ಅಭೂತಪೂರ್ವವಾದ ಐತಿಹಾಸಿಕ ಘಟನೆ.

"ಪುರೋಹಿತ ವರ್ಗ ವೃತ್ತಿ ಮತ್ತು ವರ್ಣಸಿದ್ಧಾಂತವನ್ನು ಸಂದರ್ಭೋಚಿತವಾಗಿ ವ್ಯಾಖ್ಯಾನ ಮಾಡುತ್ತ ವರ್ಣ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಗೊಳಿಸಲು ಶಾಸ್ತ್ರ ಪ್ರಮಾಣವನ್ನು ಬಳಸಿತು. ಕ್ಷತ್ರಿಯ ವರ್ಗದಿಂದಲೇ ಇದಕ್ಕೆ ತೀವ್ರ ವಿರೋಧ ಬಂದಿತು. ಯಜ್ಞ ಮಾಡಿ ರಾಜಭಂಡಾರ ಖಾಲಿ ಮಾಡಿಕೊಂಡ. ಶಾಸ್ತ್ರ ಪ್ರಮಾಣಗಳ ವಿರೋಧ ಸಹಜವೆನಿಸುತ್ತದೆ".[87] ಪುರಾಣ ಕಾಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವಿನ ವರ್ಣ ಸಂಘರ್ಷ, ಒಂದು ವರ್ಗದ ಹಿಡಿತದಿಂದ ಇನ್ನೊಂದು ವರ್ಗ ಬಿಡುಗಡೆ ಪಡೆಯುವುದಕ್ಕಾಗಿ ನಡೆಸಿದ ಪ್ರತಿಭಟನೆಯೇ ಆಗಿದೆ.

"ಸಾಮಾಜಿಕ ಜೀವನದಲ್ಲಿ ಅತೃಪ್ತಿ ಕಾಣಿಸಿಕೊಂಡಾಗ ಸಹಜವಾಗಿ ಪ್ರತಿಭಟನೆ ಕಾಣಿಸಿಕೊಳ್ಳುತ್ತದೆ. ಸಾಹಿತ್ಯ ಸಮಾಜದ ಪ್ರತಿಬಿಂಬವಾದ್ದರಿಂದ ಸಾಹಿತ್ಯದಲ್ಲಿ ಪ್ರತಿಭಟನೆ ದಾಖಲಾಗುತ್ತದೆ. ಮನುಷ್ಯ ಚೇತನ ಸದಾ ಸ್ವಾತಂತ್ರ್ಯದೆಡೆಗೆ ತುಡಿಯುತ್ತಿರುತ್ತದೆ ಎನ್ನುವ ಮಾತು ನಿಜ. ಧರ್ಮ-ದೇವರು, ಜಾತಿ ಮತ್ತು ಪಂಥ

ಇವುಗಳಲ್ಲಿ ತುಂಬ ಶ್ರದ್ಧೆಯುಳ್ಳ ಮನುಷ್ಯನೂ ಸಹ ಅದರಿಂದ ತನಗೆ ವೈಯಕ್ತಿಕವಾಗಿ ನೋವು-ನಷ್ಟಗಳಾದಾಗ, ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಾಗ, ತನ್ನವರಿಗೆ ತನ್ನ ಕಣ್ಣ ಮುಂದಿನ ಬಾಂಧವರಿಗೆ ದುಃಖ ಒದಗಿದಾಗ ತಾನು ನಂಬಿದ ಅವುಗಳನ್ನು ದೂಷಿಸದೆ ಇರುವುದಿಲ್ಲ. ಅವನ ಒಳಗಿನ ದನಿಯೊಂದು ಪ್ರತಿಭಟನೆ ಸೂಚಿಸದೆ ಸುಮ್ಮನಿರುವುದಿಲ್ಲ".[88] ವೈದಿಕಧರ್ಮದ ಕರ್ಮಸಿದ್ಧಾಂತ ಮತ್ತು ಅಸಮಾನತೆಯ ವಿರುದ್ಧ ಬುದ್ಧ, ಬಸವ ಮತ್ತು ಅಂಬೇಡ್ಕರ್‌ರ ಹೋರಾಟಗಳು ಸಹ ಚಾರಿತ್ರಿಕ ಪ್ರತಿಭಟನೆಗಳಾಗಿವೆ.

"ದೇವರು ಇಟ್ಟಂತೆ ಆಗುತ್ತದೆ' "ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ" "ಯಾರೇನು ಮಾಡುವರು? ಯಾರಿಂದಲೇನಹುದು? ಪೂರ್ವಜನ್ಮದ ಕರ್ಮವಿದು ಬೆನ್ನ ಬಿಡದು" "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ಹರಿಯೇ" "ಗಹನಾ ಕರ್ಮಣೋ ಗತಿಃ " ಪ್ರಕೃತಿ ತಾಂ ನಿಯಕ್ಷ್ಯತಿ," ಇಂತಹ ಉಪದೇಶ ವಾಕ್ಯಗಳೇ ಪುರೋಹಿತರ ಸುಲಿಗೆಗೆ, ಶೋಷಣೆ, ದಬ್ಬಾಳಿಕೆಗೆ ಅಸ್ತ್ರಗಳಾಗಿದ್ದವು.

ಕರ್ಮಸಿದ್ಧಾಂತದ ಮೇರೆಗೆ ಜೀವನು ತನ್ನ ಕ್ರಿಯೆಗಳ ಪ್ರಭಾವಕ್ಕೆ ಒಳಗಾಗಿ ಹುಟ್ಟು, ಸಾವು. ಪುನರ್ಜನ್ಮಗಳನ್ನು ಮತ್ತೆ ಮತ್ತೆ ಅನುಭವಿಸಬೇಕಾಗುತ್ತದೆ". ಕರ್ಮಸಿದ್ಧಾಂತದಲ್ಲಿ ವೈದಿಕ ಶಾಹಿಗಳು ಹೇಳುವಂತೆ :ಹಿಂದಿನ ಜನ್ಮಗಳ ಕ್ರಿಯೆಗಳ ಪರಿಮಾರ್ಜನೆಗಾಗಿ ಜೀವನು ಹುಟ್ಟಿ ಬರುತ್ತಾನೆ. ಒಳ್ಳೆಯ ಕೃತಿಗಳನ್ನು ಮಾಡಿ, ಕೆಟ್ಟ ಕೃತ್ಯಗಳಿಗೆ ದುಷ್ಪರಿಣಾಮವನ್ನು ಹೋಗಲಾಡಿಸುವುದಕ್ಕೆ ಆಗುವುದಿಲ್ಲ. ಆ ಪರಿಣಾಮವನ್ನು ಅನುಭವಿಸಲೇಬೇಕು. ಕೆಟ್ಟ ಕೃತ್ಯಗಳ ಪರಿಣಾಮವು ಸ್ವಯಂ ಚಾಲಿತವು ಮತ್ತು ವ್ಯಕ್ತಿಗತವಾಗಿದೆ. ಮೇಲು ನೋಟಕ್ಕೆ ಕರ್ಮಸಿದ್ಧಾಂತ ಬಹಳ ಸರಳವಾಗಿ ಕಂಡರೂ ಅದೊಂದು ಸಂಕೀರ್ಣಭಾವ, ಅದರಲ್ಲಿ ಕ್ಲಿಷ್ಟ ವಿಚಾರಗಳು ಅಡಕವಾಗಿದ್ದು, ಕರ್ಮಸಿದ್ಧಾಂತಗಳು ಪ್ರತಿಪಾದಿಸುವ ಧರ್ಮ ಮತ್ತು ಅಧರ್ಮದ ವಿಚಾರಗಳು, ಏಕ ಪಕ್ಷೀಯವೂ ಪೂರ್ವಗ್ರಹಿತವೂ ಆಗಿವೆ. ಅವರು ವಿವರಿಸುವ ಧರ್ಮ ಮತ್ತು ಅಧರ್ಮದ ಬಗೆಗಿನ ವ್ಯಾಖ್ಯೆಗಳು ಬ್ರಾಹ್ಮಣರ ಪರವಾಗಿದೆ ಮತ್ತು ಶ್ರೇಣಿ ಪದ್ಧತಿಯಲ್ಲಿ ತಮಗಿಂತಲೂ ಕೆಳಗಿನ ಅಂತಸ್ತುಗಳಲ್ಲಿರುವ ಜನಸಮುದಾಯವನ್ನು ನಿಯಂತ್ರಿಸುವ ಮತ್ತು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಸಾಧನಗಳು ಆಗಿವೆ. ಬ್ರಾಹ್ಮಣರ ಕೆಲಸವನ್ನು ಬ್ರಾಹ್ಮಣರೇ ಮಾಡುವುದು ಧರ್ಮ, ಶೂದ್ರರು ಮಾಡಿದರೆ ಅಧರ್ಮ. ಅದರಿಂದಾಗಿ ವರ್ಣಸಂಕರವಾಗುತ್ತದೆ, ಪಾಪ ಹೆಚ್ಚಾಗುತ್ತದೆ. ಅದರಿಂದ ಸಮಾಜವೇ ಹಾಳಾಗುತ್ತದೆ ಎನ್ನುವುದು ಕರ್ಮಸಿದ್ಧಾಂತದ ಕುತಂತ್ರ. ವರ್ಣಾಶ್ರಮ ಪದ್ಧತಿ ನಂತರ ಜಾತಿಪದ್ಧತಿಯನ್ನು ಸಮರ್ಥಿಸಿಕೊಂಡು ಬಂದ ಈ ಕರ್ಮಸಿದ್ಧಾಂತ ಹಿಂದೂ ವೈದಿಕವ್ಯವಸ್ಥೆಗೆ ಸೇರಿದ ಒಂದು ವಿಶಿಷ್ಟ ಹಾಗೂ ಪ್ರತ್ಯೇಕ ವಿಚಾರವಾಗಿದೆ. ಕರ್ಮಸಿದ್ಧಾಂತ ಕಟ್ಟಳೆಯನ್ನು ಜನ ಮುರಿಯದಂತೆ ಮಾಡಲಾಗಿದೆ. ವರ್ಣಾಶ್ರಮದ ಪರಿಪಾಲನೆ ರಾಜನ ಕರ್ತವ್ಯ.

"ಕರ್ಮಸಿದ್ಧಾಂತವೂ ಪುನರ್ಜನ್ಮ ಸಿದ್ಧಾಂತವೂ ಹಾಗೂ ಕಲ್ಪನೆಯು ಬಹಳ ವೈಜ್ಞಾನಿಕ ನೆಲೆಗಟ್ಟನ್ನು ಹೊಂದಿರುವುದರಿಂದಲೇ ಇಲ್ಲಿಯವರೆಗೂ ಉಳಿದು ಬಂದಿದೆ" ಎಂಬ ಹುಸಿ ವೈಜ್ಞಾನಿಕತೆಯ ಸಂಪ್ರದಾಯವಾದಿಗಳ ಸಮರ್ಥನೆಯು ಒಂದು ಟೊಳ್ಳುವಾದ. ಹಾಗೆ ನೋಡಿದರೆ ಗುಲಾಮಗಿರಿಪದ್ಧತಿ, ಪಶುಬಲಿ, ನರಬಲಿ, ಸತಿಬಲಿ, ಜಾತಿಯ ವರ್ಣಪ್ರಭೇದ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ಹಾಗೂ ಅದರಿಂದಲೇ ಉದ್ಭವಿಸಿದ ಅಸ್ಪೃಶ್ಯತೆ, ವಿಧವಾವಿವಾಹ ನಿಷೇಧ, ಬಾಲ್ಯ ವಿವಾಹ ಮುಂತಾದ ದುಷ್ಟ

ಪದ್ಧತಿಗಳು ನಮ್ಮ ಸಮಾಜವನ್ನು ಸಹಸ್ರಾರು ವರ್ಷಗಳಿಂದ ಕೆಟ್ಟ ಛಾಯೆಯಂತೆ ಆವರಿಸಿವೆ. ಇವುಗಳೆಲ್ಲ ವೈಜ್ಞಾನಿಕವೇ? ವೇದೋಪನಿಷತ್ತುಗಳಲ್ಲಿಯೂ ಮತ್ತು ಇತರ ಪ್ರಾಚೀನ ಗ್ರಂಥಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ ಎಂಬ ಕಾರಣದಿಂದಲೇ ಕರ್ಮಸಿದ್ಧಾಂತವನ್ನು ಒಪ್ಪಿಕೊಳ್ಳಬೇಕೇ?"[89] ಇದಕ್ಕೆ ಬಸವಣ್ಣ ಶಿವಧರ್ಮ ಒಪ್ಪಿಕೊಂಡ ಮೇಲೆ ಪುನರ್ಜನ್ಮ ಅಥವಾ ಜನ್ಮಾಂತರ ಇಲ್ಲವೆಂದು ಕರ್ಮ ಸಿದ್ಧಾಂತವನ್ನು ಒಮ್ಮೆಲೇ ತಿರಸ್ಕರಿಸಿದ್ದಾನೆ.

"ಆಸತ್ತೆ ಆಲಸಿದೆನೆಂದಡೆ ಮಾಣದು,
ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು,
ಏವನೇವೆನೆಂದಡೆ ಮಾಣದು,
ಕಾಯದ ಕರ್ಮದ ಫಲಭೋಗವು!
ಕೂಡಲಸಂಗನ ಶರಣರು ಬಂದು
ಹೋ ಹೋ ಅಂಜದಿರೆಂದಡಾನು ಬದುಕುವೆನು "

ವೈದಿಕ ವ್ಯವಸ್ಥೆಯ ಬಹುದೊಡ್ಡ ಕ್ರೌರ್ಯವೆಂದರೆ ಅದರ "ಕರ್ಮವಾದ". ಯಾವುದೂ ನಮ್ಮ ಕೈಯಲಿಲ್ಲ. ಎಲ್ಲವೂ ಪೂರ್ವ ನಿರ್ಧಾರಿತ. ಜಾತಿ, ಬಡತನ-ಸಿರಿತನ, ಮಾನ-ಅಪಮಾನ, ದಬ್ಬಾಳಿಕೆ, ಕ್ರೌರ್ಯ, ಅನ್ಯಾಯ ಇವೆಲ್ಲ ನಮ್ಮ ಪೂರ್ವ ಸಿದ್ಧಾಂತ ಕರ್ಮಫಲಗಳು. ನಾವು ಅವುಗಳನ್ನು ಅನುಭವಿಸಲೇಬೇಕು. ಇದೆಂಥ ಸಂಸ್ಕೃತಿ? ಆದ್ದರಿಂದಲೇ ಬಸವಣ್ಣ ಇಂತಹ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದರು; ಶತಮಾನಗಳಿಂದ ಈ ಕರ್ಮವಾದವು ಜನರನ್ನು ಆಳುತ್ತದೆ. ಇಂತಹ ಜನಸಮುದಾಯವನ್ನು ಬಸವಣ್ಣ ತಮ್ಮ ಹೋರಾಟದ ಮೂಲಕ ಎಚ್ಚರಗೊಳಿಸಿದರು. ಧರ್ಮ-ಕರ್ಮಗಳ ನಿಗೂಢತೆಯನ್ನು ಹೊರಗೆಳೆದರು. ಅವುಗಳನ್ನು ಸರಳವಾಗಿಸಿದರು. "ದಯವಿಲ್ಲದ ಧರ್ಮವೇ ಇಲ್ಲ. ದಯವೇ ಧರ್ಮದ ಮೂಲ" "ಧರ್ಮ" ಎಂದರೆ ದಯೆ, ಕರ್ಮ ಎಂದರೆ ಕ್ರಿಯೆ ಅಥವಾ ಕಾಯಕ" ಎಂದು ಅರ್ಥೈಸಿ ಹೊಸ ಅರ್ಥವನ್ನೇ ನೀಡಿದರು ಬಸವಣ್ಣ. ಕರ್ಮಕ್ಕೆ ಪ್ರತಿಯಾಗಿ ಕಾಯಕ ಸಿದ್ಧಾಂತವನ್ನು ಪ್ರತಿಪಾದಿಸಿದರು. ಕಾಯಕಸಿದ್ಧಾಂತ ಚೈತನ್ಯದ ಪ್ರತೀಕವಾದರೆ, ಕರ್ಮವು ಜಡತ್ವದ ಪ್ರತೀಕವಾಗಿದೆ, ದಾಸ್ಯದ ಪರವಾಗಿದೆ. ಕಾಯಕತತ್ವ ಜನಪರವಾಗಿದ್ದು, ಆತ್ಮಗೌರವದ ಪ್ರತೀಕವಾಗಿದೆ.

ಬಸವಣ್ಣ ಅಸಮಾನತೆಗೆ ಕಾರಣವಾದ ವೈದಿಕ ವ್ಯವಸ್ಥೆಯ ಕಟ್ಟುಪಾಡುಗಳನ್ನು, ನೀತಿ ನಿಯಮಗಳನ್ನು ನಿರಾಕರಿಸಿದರು. ಬಾಲ್ಯದಲ್ಲಿಯೇ ಕರ್ಮಲತೆಯಂತಿದ್ದ ಜನಿವಾರವನ್ನು ಹರಿದು ಹಾಕುವುದರ ಮೂಲಕ ಬ್ರಾಹ್ಮಣ್ಯದ ಹಂಗು ತೊರೆದರು. ಕರ್ಮಠರ ಕಟ್ಟಳೆ, ಧರ್ಮಶಾಸ್ತ್ರ, ವೇದ-ಪುರಾಣಗಳನ್ನು ಪ್ರಶ್ನಿಸಿದರು. ಕರ್ಮಶಾಸ್ತ್ರ ದಾಸ್ಯದ ಪರವಾಗಿದೆ ಎಂದರಿತ ಬಸವಣ್ಣ ಮಾನವೀಯ ಅನುಕಂಪ ಹೊಂದಿರುವುದು ಅವರ ವಚನಗಳಲ್ಲಿ ವ್ಯಕ್ತವಾಗಿದೆ. "ಕರ್ಮಕ್ಕೆ ಕರ್ತವ್ಯವೇ ಕಾರಣವೆಂದು ನಂಬೆನು" ಎಂದಿದ್ದಾರೆ. ವಿಷಯ ಮೋಹವನ್ನು ಶಿವಸಾಧನೆಯಿಂದ ಸುಟ್ಟರೆ ಕರ್ಮಪಾಶ ಹರಿದು ಹೋಗುತ್ತದೆಂದು ಹೇಳಿದರು. "ಎಲವೋ ಎಲವೋ ಪಾಪ ಕರ್ಮ ಮಾಡಿದವನೇ, ಬ್ರಹ್ಮ ಹತ್ಯೆಯ ಮಾಡಿದವನೇ, ಒಮ್ಮೆ ಶರಣೆಂದರೆ ಪಾಪ ಕರ್ಮ ಓಡುವವು" ಎಂದು ಕರೆ ನೀಡಿದ್ದಾರೆ. ಹೀಗೆ ಬದುಕನ್ನು ತಿರಸ್ಕರಿಸದೇ ಪುರಸ್ಕರಿಸುವ ಧೋರಣೆಯನ್ನು ಜನರಲ್ಲಿ ಬಿತ್ತಿದರು. ವೇದ, ಶಾಸ್ತ್ರ, ಸಿದ್ಧಾಂತ, ತರ್ಕಗಳನ್ನು ತಿರಸ್ಕರಿಸಿ ಕರ್ಮಕಾಂಡ ಪ್ರಧಾನವಾದ-ಹಿಂಸಾಮೂಲವಾದ ಯಜ್ಞ ಯಾಗಾದಿಗಳನ್ನು ಖಂಡಿಸಿ ಜ್ಞಾನಕಾಂಡಕ್ಕೆ ಮಹತ್ವ ನೀಡಿ "ದಯವೇ ಧರ್ಮದ ಮೂಲವಯ್ಯ " ಎಂದು ಸಾರಿ ಸರ್ವರಿಗೂ ಅನುಕರಣೀಯ ಸರಳ ತತ್ವ

ಬೋಧಿಸಿದರು. ಕರ್ಮವಾದದ ಭ್ರಮೆಯಲ್ಲಿ ಮಾನವರು ಸದಾ ನರಳುತ್ತಲೇ ಬದುಕುತ್ತಾರೆ. ಹತಾಶರಾಗಿ ತಮ್ಮನ್ನೇ ವಿಧಿಗೆ ಅರ್ಪಿಸಿಕೊಂಡು ದುಃಖ ಪಡುತ್ತಾರೆ. ಆದರೆ ಶರಣರ ಅನುಭಾವವು ವಿಧಿಯನ್ನು ನಿರ್ನಾಮ ಮಾಡಿ ಸ್ವತಂತ್ರ ಸುಖದ ಆನಂದವನ್ನು ಸೃಷ್ಟಿಸುತ್ತದೆ. ಅಂತಹ ಅನುಭಾವವನ್ನೇ ಬಸವಣ್ಣನವರು ವಚನರೂಪಕ್ಕಿಳಿಸಿದರು.

"ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ
ಹಾರುವೆನಯ್ಯ ಭಕ್ತರ ಬರವ ಗುಡಿ ಕಟ್ಟಿ
ಹಾರುವೆನಯ್ಯ ಶರಣರ ಬರವ ಗುಡಿ ಕಟ್ಟಿ
ಕೂಡಲಸಂಗಮದೇವನು ವಿಪ್ರ ಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದವನಾಗಿ"[90]

ಒಣಗಿದ ಹೊಳೆಯಂಥ (ಬರುದೊರೆ) ಟೊಳ್ಳು ಬ್ರಾಹ್ಮಣ್ಯದ ಐಹಿಕ ದುರಾಸೆಯ ಬದುಕೆ ಕರ್ಮವಾದದ ಬಂಧನದ ಪ್ರತೀಕವಾಗಿದೆ. ಇಂಥ ವಿಪ್ರಕರ್ಮದಿಂದ ಅಶುದ್ಧನಾಗಿದ್ದು, ಬ್ರಾಹ್ಮಣನಾಗಿ ಹುಟ್ಟಿದ ಕಾರಣದಿಂದ. ಅದರಿಂದ ಬಿಡಿಸಿಕೊಂಡು ಶುದ್ಧನಾದುದು ಕೂಡಲಸಂಗಮನಿಂದ ಎಂಬುದನ್ನು ಬಸವಣ್ಣ ಮಾರ್ಮಿಕವಾಗಿ ಹೇಳಿದ್ದಾರೆ. ಕೂಡಲಸಂಗಮದೇವ ಕರ್ಮದಿಂದ ಬಿಡಿಸಿ ಶುದ್ಧನನ್ನಾಗಿ ಮಾಡಿದ್ದಾನೆ. ಆದ್ದರಿಂದ ಜನರೂ ಕೂಡ ಕೂಡಲಸಂಗಮನನ್ನು ನಂಬಿ ಕರ್ಮರಹಿತರಾಗಿ ಎಂದು ಜನರನ್ನು ಆಹ್ವಾನಿಸಿದ್ದಾನೆ.

"ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯ?
ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯ?
ನಿಮ್ಮ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಯ್ಯ?

ಎಂದು ಹೇಳುತ್ತ ಬಸವಣ್ಣ ಮನದಲ್ಲಿ ಮೂಡುವ ಮೂಢನಂಬಿಕೆ, ಶಾಸ್ತ್ರದಾಸ್ಯಗಳನ್ನು ದೂರೀಕರಿಸುವುದು ಇದರಿಂದ ವ್ಯಕ್ತವಾಗುತ್ತದೆ. ಅಲ್ಲದೇ ಕರ್ಮದ ಗಾಣಕ್ಕೆ ಸಿಕ್ಕಿ ನರಳುವ ಜೀವಗಳನ್ನು ಎತ್ತಿ ರಕ್ಷಿಸುವ ಪ್ರಯತ್ನ ಅನುಪಮವಾಗಿದೆ.

"ಕರ್ಮವೆಂಬ ಅಂಕದೊಡನೆ ತೊಡರಿದೆ
ಭಿನ್ನಪ ಅವಧಾರು ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡುಹುವೆನಂಕವ
ಕರೆದಡೋ ಎನಿಸದಡೆ ನಿಮ್ಮಾಳಲ್ಲ
ಶಿವಶರಣರೆಂಬ ದಂಡೆಯ ಮಾಡಿ
ಗಣಮೇಳಪವೆಂಬ ಅಲಗಿ ನಿಂದಿರಿವೆ ಕೂಡಲಸಂಗಮದೇವಾ॥[91]

ಕರ್ಮವನ್ನು ಗೆಲ್ಲಲು, ಕತ್ತರಿಸಲು ಮನುಷ್ಯ ಪ್ರಯತ್ನಿಸಬೇಕು. ಕರ್ಮವನ್ನು ಹೇಗೆ ಗೆಲ್ಲುತ್ತೇನೆ ಎಂಬುದನ್ನು ಬಸವಣ್ಣ ವಿವರಿಸಿದ್ದಾನೆ. ಕರ್ಮ ಇದೆ ಎಂದು ಕೈಕಟ್ಟಿ ಕುಳಿತುಕೊಳ್ಳುವುದು ಹೇಡಿಗಳ ಲಕ್ಷಣ. ಕರ್ಮದಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಬಾಳಲು ಮಾನವ ಪ್ರಯತ್ನಿಸಬೇಕು ಎಂಬುದನ್ನು ಬಸವಣ್ಣ ಸಾರಿದ್ದಾನೆ.

"ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ
ತಪ್ಪದು ನೋಡಯ್ಯ .... ನಾ ಭುಕ್ತಂ ಕ್ಷೀಯತೇ
"ಕರ್ಮ" ಎಂಬ ಶ್ರುತಿ ತಪ್ಪದು.[92]

ಎಂದು ಬಸವಣ್ಣ ಮನುಷ್ಯನಾಗಿ ಹುಟ್ಟಿದ ಮೇಲೆ ತನ್ನ ಪಾಲಿನ ಕರ್ತವ್ಯವನ್ನು ಮಾಡಲೇಬೇಕು. ತಪ್ಪಿಸಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡಬಾರದು. ಕೆಟ್ಟ ಕೆಲಸ ಮಾಡಿದರೆ ಕರ್ಮ ಸುತ್ತಿಕೊಳ್ಳುತ್ತದೆ ಎಂದು ಗಾಬರಿಗೊಳ್ಳಬಾರದೆಂದು ಹೇಳಿದ್ದಾನೆ. ಆದಕ್ಕಾಗಿ ಬಸವಣ್ಣ

"ಎಲವೋ ಎಲವೋ ಪಾಪಕರ್ಮವ ಮಾಡಿದವನೇ,
ಎಲವೋ ಎಲವೋ ಬ್ರಹ್ಮೇತಿಯ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುದು,
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಗಳೈದವು"[93]

ಬಸವಣ್ಣ ಜನರಿಗೆ ನೀಡಿದ ಅಭಯವಚನವಿದು. ಪಾಪಪ್ರಜ್ಞೆಯಿಂದ ನರಳುತ್ತ ಬದುಕುವವರಿಗೆ ಈ ವಚನ ಬದುಕಿನ ಹೊಸದಾರಿ ತೋರಿಸುತ್ತದೆ. ಅವರ ಮನದ ಸ್ಥಿತಿ ಬದಲಾಯಿಸಿ ಹೊಸ ಉತ್ಸಾಹ ತುಂಬುತ್ತದೆ. ದೇವರಲ್ಲಿ ಶರಣಾದರೆ ಕರ್ಮ ತಾನೇ ತಾನಾಗಿ ಕತ್ತರಿಸಿ ಹೋಗುತ್ತದೆ ಎಂದು ಹೇಳಿದ್ದಾನೆ.

"ವಿಷ್ಣು ಕರ್ಮಿ ರುದ್ರ ನಿಷ್ಕರ್ಮಿ ಕರ್ಮವನರಿಯದೆ ನುಡಿವಿರೋ!
ವೇದಶ್ರುತಿಗಳ ತಿಳಿಯಲರಿಯದೇ ವಾದ ಮಾಡುವರೆಲ್ಲ ಕೇಳಿ;
ವಿಷ್ಣು ನಾನಾ ಯೋನಿಯಲ್ಲಿ ಬಾರದ ಬವಂಗಳಲ್ಲಿ ಬರುತಿಪ್ಪ]
ರುದ್ರನಾವ ಯೋನಿಯಲ್ಲಿ ಬಂದನೆಂದು ನೀವು ಹೇಳಿರೋ...
ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂದತ್ತತ್ತಲೆ......" [94]

ಎಂದು ಬಸವಣ್ಣ ರುದ್ರ ನಿಷ್ಕರ್ಮಿ. ಆದ್ದರಿಂದ ವೀರಶೈವಧರ್ಮ (ಶರಣ ಧರ್ಮ) ಕರ್ಮರಹಿತವಾದದ್ದು ಎಂದು ಸಾರಿದ್ದಾನೆ. ಜನರು ಹಿಂದೆ ಮಾಡಿದ ಕರ್ಮಗಳಿಂದ ಕೀಳುಜಾತಿಯಲ್ಲಿ ಜನಿಸುತ್ತಾನೆ ಎಂದು ವೈದಿಕರು ನಂಬಿಸಿಕೊಂಡು ಬಂದಿರುವುದು ತಪ್ಪು ಎಂದು ತಿರಸ್ಕರಿಸಿದ್ದಾನೆ. ಆದರಿಂದಾಗಿ ಬಸವಣ್ಣ ಕೆಳವರ್ಗದ ಜನ ಕೀಳು, ದಾಸ, ಕನಿಷ್ಠ ಎನ್ನುವುದನ್ನು ಪ್ರತಿಭಟಿಸಿದನು. ಇದರಿಂದಾಗಿ ವೈದಿಕರಿಗೆ ಸವಾಲಾಗಿ ನಿಂತನು.

"ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ ಎನ್ನ ಭವಬಂಧನ, ಹಿಂಗಿತ್ತು ಕರ್ಮ ನಿರ್ಮಳವಾಯಿತು. ಅವರ ತೊತ್ತಿನ ಪಡಿದೊತ್ತಿನ ಮಗನೆಂದು ಕೂಡಲಸಂಗಮದೇವನು "ಇತ್ತ ಬಾ "ಎಂದು ಎತ್ತಿಕೊಂಡನು"[95] ಕೆಳ ಕುಲದವರ, ದಲಿತರ ಸೇವೆಯಿಂದ, ಒದಗಿದ ಕರ್ಮವನ್ನು ಕಿತ್ತೊಗೆಯಲು ಸಾಧ್ಯವೆಂದು ಬಸವಣ್ಣ ತೋರಿಸಿಕೊಟ್ಟನು. ಕರ್ಮವಾದದ ಸಾಮಾಜಿಕ ದುಷ್ಪರಿಣಾಮವೇ ಜಾತಿ ವ್ಯವಸ್ಥೆ. ಪೂರ್ವಜನ್ಮದ ಪಾಪದ ಕಾರಣ ಕೀಳುಜಾತಿಗಳಲ್ಲಿ ಜನ ಹುಟ್ಟುತ್ತಾರೆ ಎಂಬುದು ದುಷ್ಟ ಮನಸ್ಸುಗಳ ಸಿದ್ಧಾಂತ. ಅದಕ್ಕೆ ವೈದಿಕ ಸಂಸ್ಕೃತಿಯ ಹಿನ್ನೆಲೆ ಇದೆ ಎಂದು ಬಸವಣ್ಣ ಕರ್ಮ, ಜಾತಿ ಮತ್ತು ಅಸ್ಪೃಶ್ಯತೆಯ ಕಡು ವೈರಯಾಗಿದ್ದಾನೆ" ಕರ್ಮ ಕ್ರೌರ್ಯ ನಾಶ ಪಡಿಸಲು "ಕಾಯಕ ತತ್ವ" ಸಾರಿದ. ಅದು ಸಮಾನತೆಯ ಪ್ರತೀಕವಾಗಿತ್ತು. ಸುಖ-ದುಃಖಗಳು, ಪಾಪ-ಪುಣ್ಯಗಳು ಕರ್ಮದಿಂದ ಉಂಟಾಗುವುದಿಲ್ಲ. ಆದಕ್ಕಾಗಿ "ಸುಖ ಬಂದಡೆ ಪುಣ್ಯದ

ಫಲವನ್ನೆನು, ದುಃಖ ಬಂದಡೆ ಪಾಪದ ಫಲವನ್ನೇನು ... ಸಂಸಾರದ ಸವೆಯೆ ಬಳಸುವೆನು[96] ಎಂದು ಬಸವಣ್ಣ ಕರ್ಮವಾದವನ್ನು ಖಂಡಿಸಿದ್ದಾನೆ. 'ಕರ್ಮ ಎಂದರೆ ಪೂರ್ವಜನ್ಮದ ಫಲ" ಎಂದು ನಂಬದೇ "ಕ್ರಿಯೆ" ಎಂದು ಅರಿತು ಕಾಯಕದಲ್ಲಿ ನಡೆಯುವಂತೆ ಬಸವಣ್ಣ ಕಾಯಕದ ದಾರಿ ತೋರಿಸಿದ್ದಾನೆ. ಆದ್ದರಿಂದ ಬಸವಣ್ಣನನ್ನು "ಕರ್ಮದ ಹಂಗು ಹರಿದವ" ನೆಂದು ವರ್ಣಿಸಲಾಗಿದೆ. ಏಕೆಂದರೆ ಅಸಮಾನತೆ ಪೋಷಿಸುವ ಎಲ್ಲ ಸೂತ್ರ, ಸಂಸ್ಥೆ, ಸಿದ್ಧಾಂತಗಳನ್ನು ನಿರಾಕರಿಸಿದನು. ಕರ್ಮವನ್ನು ಕಡಿದೊಗೆದು ಕರ್ಮರಹಿತರಾಗಿ, ಸರಿಸಮಾನರಾಗಿ ಬಾಳಲು ಬಯಸಿದನು. ಕರ್ಮದ ಲತೆಯಂತಿದ್ದ ಜನಿವಾರವನ್ನು ಹರಿದುಹಾಕಿ ಧರ್ಮಶಾಸ್ತ್ರ, ಬ್ರಾಹ್ಮಣ ವರ್ಗ, ಹಾಗೂ ಬ್ರಾಹ್ಮಣ್ಯದ ಹಂಗು ತೊರೆದು ಬಂದನು.

"ಕರ್ಮದ ಬಲೆಯಲ್ಲಿ ಸಿಲುಕಿ ಕೆಟ್ಟು ಹೋಗುವ ಹಾರುವ ನಾನಲ್ಲ, ನನ್ನ ದೇವರು ವಿಪ್ರ ಕರ್ಮದಿಂದ ಪಾರು ಮಾಡಿ ಅಶುದ್ಧವನ್ನು ಶುದ್ಧವನ್ನಾಗಿ ಮಾಡಿದ್ದಾನೆ. ಅವನನ್ನು ನಂಬಿ ನೀವೂ ಕರ್ಮರಹಿತರಾಗಿ ಬಾಳಿರಿ"[97] ಎಂಬ ಆಹ್ವಾನವನ್ನು ನೀಡಿದ್ದಾನೆ. ತನ್ನ ಆಹ್ವಾನವನ್ನು ಹಿಂಬಾಳಿಸಿ ಬಂದ ಶಿವ ಶರಣರನ್ನು ಬಸವಣ್ಣನು" ಅವರು ಕಾಲಕರ್ಮರಹಿತರು"[98] ಎಂದು ಬಣ್ಣಿಸಿದ್ದಾನೆ. ಹೀಗೆ ಸಾರ್ವತ್ರಿಕ ನೀತಿ, ವೃತ್ತಿ ಸಮಾನತೆ, ಸ್ವಾತಂತ್ರ್ಯ, ಸಹೋದರತೆಗಳನ್ನು ಬಸವಣ್ಣ ಪ್ರತಿಪಾದಿಸಿದ. ಕರ್ಮ ಶಬ್ದದ ಬದಲು "ಕಾಯಕ' ಎಂಬ ಶಬ್ದವನ್ನು ಬಳಸಿದ್ದು, ಅವನ ಅನುಯಾಯಿಗಳಿಗೆ ಮಹತ್ವದ ಭಾವವಾಗಿ ಕಂಡಿತು. ಕರ್ಮಸಿದ್ಧಾಂತವನ್ನು ಅಲ್ಲಗಳೆದು ಕಾಯಕವನ್ನು ಎತ್ತಿ ಹಿಡಿದ ಬಸವಣ್ಣ ಮಾನವ ಗೌರವವನ್ನು ರಕ್ಷಿಸಿದನು. ಶತಮಾನಗಳಿಂದ ಸಮಾಜದ ಜನತೆಯನ್ನು ಕರ್ಮದ ಬಲೆಯಲ್ಲಿ ಸಿಲುಕಿಸಿ, ಸದಾ ಭಯವನ್ನು ಹುಟ್ಟಿಸಿ, ಆ ಭಯದ ನೆರಳಿನಲ್ಲಿಯೇ ಜನತೆ ತತ್ತರಿಸಿ ಹೋಗುವಂತೆ ಮಾಡಿದ ಜನ ವಿರೋಧಿ ಶಕ್ತಿಯನ್ನು ಬಸವಣ್ಣ "ಕೆಡುಕ ಹಾರವನೆಂದು" ಕರೆದಿದ್ದಾನೆ. ತಾನು ಅಂತಹವನಲ್ಲವೆಂದು ಸ್ಪಷ್ಟಪಡಿಸಿದ್ದಾನೆ.

3.7 ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಪ್ರತಿಭಟನೆ :

"ಬ್ರಾಹ್ಮಣಧರ್ಮ ಮತ್ತು ಬುದ್ಧ ಬಸವರ ಧರ್ಮದ ನಡುವಣ ಸಂಘರ್ಷವೇ ಭಾರತದ ಇತಿಹಾಸ. ಬ್ರಾಹ್ಮಣಧರ್ಮ ಎಂದರೆ ಎಲ್ಲಾ ಸಂಕೋಲೆ; ಬುದ್ಧ ಬಸವರು ಎಂದರೆ ಸರ್ವ ಸ್ವಾತಂತ್ರ್ಯದ ಸೆಲೆ. ಭಾರತದ ಚರಿತ್ರೆಯ ಎಲ್ಲಾ ಕಾಲಗಳಲ್ಲಿಯೂ ಪ್ರಧಾನವಾಗಿ ಜೀವಂತವಾಗಿರುವ ಎರಡು ವಿಚಾರಧಾರೆಗಳಿವೆ. ಒಂದು ಜಾತಿ ಉಳಿಯಬೇಕೆನ್ನುವುದು. ಇನ್ನೊಂದು, ಜಾತಿ ಅಳಿಯಬೇಕೆನ್ನುವುದು"[99] ಜಾತಿ ಅಳಿಯಬೇಕೆಂದು ಬಸವಣ್ಣ ತಮ್ಮ ವಚನದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ. " ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ, ಕೂಡಲಸಂಗನ ಮನೆಯ ಮಗನೆಂದೆನಿಸಯ್ಯ" ಜಾತಿಯಾಧಾರಿತ ಅಸಮಾನತೆಯನ್ನು ಗಂಭೀರವಾಗಿ ಪರಿಗಣಿಸಿದ ಬಸವಣ್ಣ ಅಸ್ಪೃಶ್ಯತೆಯ ವಿರುದ್ಧ ಸಮರವನ್ನೇ ಸಾರಿದರು. ಕುಲದ ನೆಲೆಯಲ್ಲಿ ಅಸಮಾನತೆಯನ್ನು ಆಚರಿಸುವವರಿಗೆ ಹೀಗೆ ಹೇಳುತ್ತಾರೆ.

"ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಸಕಲ ಜೀವಾತ್ಮರಿಗೆ ಲೇಸ ಬಯಸುವವನೇ ಕುಲಜ "

ಮಾರ್ಮಿಕವಾಗಿ ಮತ್ತೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

"ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ? ಕುಲವುಂಟೆ ಜಂಗಮವಿದ್ದೆಡೆಯಲ್ಲಿ
ಶ್ವಪಚನಾದರೇನು ಲಿಂಗಭಕ್ತನೇ ಕುಲಜನು॥

ಬಸವಣ್ಣನವರು ಹೇಳುವಂತೆ ದಾಸೀಪುತ್ರನಾಗಲೀ, ವೇಶ್ಯಾಪುತ್ರನಾಗಲೀ ಶಿವದೀಕ್ಷೆ ಯಾದ ಬಳಿಕ ಆತನನ್ನು ಸಾಕ್ಷಾತ್ ಶಿವನೆಂದು ವಂದಿಸಬೇಕು. ಲಿಂಗ ಧರಿಸಿದ ಮಾದಾರ ಚೆನ್ನಯ್ಯ, ಡೊಹರ ಕಕ್ಕಯ್ಯ ಮುಂತಾದ ಶರಣರನ್ನು ತನ್ನ ಬಂಧುಗಳೆಂದನು.

"ಭಾರತೀಯ ಸಮಾಜದ ವರ್ಣ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತ ಪ್ರತಿಭಟನಾತ್ಮಕ ಸ್ಥೈರ್ಯ ಬಸವಣ್ಣನವರದ್ದಾಗಿತ್ತು. ಪಂಚಮವರ್ಣದಲ್ಲಿ ಗುರುತಿಸಲಾದ ಅಸ್ಪೃಶ್ಯರನ್ನು ನೇರವಾಗಿ ಮೇಲೆತ್ತಿ ಸರ್ವಸಮಾನತೆಯ ಮಟ್ಟಕ್ಕೆ ತಂದು ನಿಲ್ಲಿಸುವಲ್ಲಿ ಅವರು ಗುಣವನ್ನೇ ಮಾಪಕವಾಗಿ ಬಳಸಿದರು".[100] ಹೊಲೆತನವಿರುವುದು ನಮ್ಮ ಕೆಲಸದಲ್ಲಿ ಮತ್ತು ವ್ಯಕ್ತಿತ್ವದಲ್ಲಿಯೇ ಹೊರತು ಜನ್ಮದಲ್ಲಿ ಅಲ್ಲ. ಆದ್ದರಿಂದ ಉತ್ತಮ ಕೆಲಸವೆಂದರೆ ಸಕಲ ಜೀವಾತ್ಮರಿಗೂ ಲೇಸ ಬಯಸುವುದೇ ಆಗಿದೆ ಎಂದು ಸಾರಿದರು.

"ಅಸ್ಪೃಶ್ಯತೆ' ಭಾರತಕ್ಕೆ ಅಂಟಿದ ಒಂದು ಅಮಾನವೀಯ ಶಾಪವಾಗಿದೆ. ಮನುಷ್ಯರಲ್ಲಿ ಶ್ರೇಷ್ಠತೆ-ಕನಿಷ್ಠತೆ, ಮೇಲು-ಕೀಳುಗಳನ್ನು ಕಲ್ಪಿಸಿ, ಹುಟ್ಟಿಗೆ ಪ್ರಾಶಸ್ತ್ಯ ನೀಡಿ ಕರ್ಮಸಿದ್ಧಾಂತವನ್ನು ಮಂಡಿಸಿ ಜಾತೀಯತೆಯಿಂದಾಗಿ ಭಾರತ ಅನೈಕ್ಯತೆಯ ಕೇಂದ್ರವಾಯಿತು. ವರ್ಣ-ಜಾತಿ-ಪುನರ್ಜನ್ಮ ಕರ್ಮಸಿದ್ಧಾಂತವನ್ನು ವೃತ್ತಿಗಳಿಗೂ ಸ್ಮೃತಿಕಾರರು ಸಂಬಂಧ ಕಲ್ಪಿಸಿ ಜಾತಿ ವ್ಯವಸ್ಥೆ ವಿಸ್ತೃತವಾಗಿ ಬೆಳೆದು ನಿಂತಿತು. ಇಂದು ಭಾರತದಲ್ಲಿ 6000 ಕ್ಕಿಂತ ಹೆಚ್ಚು ಜಾತಿಗಳಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಜಾತಿಗಳೇ ಹಿಂದೂ ಧರ್ಮದ ಜೀವಾಳವಾಗಿವೆ ಹಾಗೂ ಅದರ ಹೆಸರಿನಲ್ಲಿ ಶೋಷಣೆ ಬೆಳೆದು ಬಂದು ಈ ಕ್ರೂರ ವ್ಯವಸ್ಥೆ ಭಾರತವನ್ನು ಅಖಂಡವಾಗಿ ರೂಪಿಸದೇ ಜಾತಿಯ ಹೆಸರಿನಲ್ಲಿ ಒಡೆದು ಹಾಕಿದೆ.

"ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ ಎಂಬುದು ಸತ್ಯಸಂಗತಿ. ಕಾಯ್ದೆಯಿಂದ ಇಂದು ಅದನ್ನು ಅಲ್ಲಗಳೆದರೂ ಅಸ್ಪೃಶ್ಯತೆ ಇಲ್ಲ ಎನ್ನುವುದು ಅಸಂಗತವಾಗುತ್ತದೆ. ಹಿಂದೂಗಳಲ್ಲಿ ನಾಲ್ಕು ವರ್ಗದವರೂ ಮಾಡಲಾಗದ ಕೆಲ ಕೆಲಸಗಳಿವೆ. ಬೀದಿ ಹೊಲಸಾದರೆ, ಪ್ರಾಣಿಗಳು ಸತ್ತು ಬಿದ್ದರೆ, ಮಲ ರಾಶಿ ಬಿದ್ದರೆ ತೆಗೆಯಲು, ಜೋಡು ಹೊಲಿಯಲು ಈ ಅಸ್ಪೃಶ್ಯ ಜಾತಿಗಳು ಬೇಕು. ಇವರು ಊರ ಹೊರಗಿನ ಜಾಗದಲ್ಲಿ ಮನೆ ಮಾಡಿ ಇರುತ್ತಾರೆ. ಈ ಪದ್ಧತಿ ಜೀತದಲ್ಲಿ ಇರುವ ಗುಲಾಮರಿಗಿಂತ ಕ್ರೂರವಾದುದು. ಗುಲಾಮನಿಗೆ ತನ್ನ ಒಡೆಯನ ಸಾಮಿಪ್ಯವಾದರೂ ಉಂಟು. ಒಮ್ಮೆ ಮುಕ್ತ ಜೀವನವೂ ಅನೀರಿಕ್ಷಿತವಲ್ಲ. ಆದರೆ ಈ ಅಸ್ಪೃಶ್ಯತೆ ವೈಯಕ್ತಿಕ ಗುಲಾಮಗಿರಿಯಲ್ಲ. ಸಾಮೂಹಿಕ ಗುಲಾಮಗಿರಿ[101] ಎಂದು ಕೆ.ಎಂ.ಫಣೀಕರ್ ತಮ್ಮ Hindu Society at Cross Roads ಎಂಬ ಪುಸ್ತಕದಲ್ಲಿ ಹೇಳುತ್ತಾರೆ. ವರ್ಣವ್ಯವಸ್ಥೆಯಲ್ಲಿ ಅವರ್ಣಜಾತಿಗಳವರು ಅಥವಾ ಪಂಚಮರೇ ಅಸ್ಪೃಶ್ಯರು. ಇವರು ಹೇಗೆ ದೌರ್ಜನ್ಯಕ್ಕೆ ಶೋಷಣೆಗೆ ಗುರಿಯಾಗಿ ವೇದದಿಂದ, ವಿದ್ಯೆಯಿಂದ, ಧರ್ಮದಿಂದ, ಸಾಮಾಜಿಕ ಸ್ಥಾನಮಾನಗಳಿಂದ ವಂಚಿತವಾಗಿ ತುಳಿಯಲ್ಪಟ್ಟರು. ಅದಕ್ಕೆ ಪ್ರತಿಕ್ರಿಯೆ -ಪ್ರತಿಭಟನೆಗಳು ಉಂಟಾಗಲಿಲ್ಲವೇ ಎಂಬ ಪ್ರಶ್ನೆಗಳಿಗೆ ಉತ್ತರವೆಂಬಂತೆ ಉದಯಿಸಿದವರು ಬುದ್ಧ, ಬಸವ, ಅಂಬೇಡ್ಕರ್‌ರವರು. ಅವರ ಹೋರಾಟ ಈ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ.

ಪ್ರಪಂಚದ ಯಾವುದೇ ಧರ್ಮದಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವ ಅಸ್ಪೃಶ್ಯತೆ ವೈದಿಕ ಧರ್ಮದಲ್ಲಿ ಮಾತ್ರ ಸ್ಥಾನವನ್ನು ಪಡೆದುಕೊಂಡಿದೆ. ಅಸ್ಪೃಶ್ಯತೆ ಧರ್ಮದ ಮರೆಯಲ್ಲಿ ಇಂದಿಗೂ ಅನುಷ್ಠಾನದಲ್ಲಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವರು ವರ್ಣ ವ್ಯವಸ್ಥೆಯ ಅಡಿಯಲ್ಲಿ ಬರುವವರು ಸವರ್ಣೀಯರು. ದಲಿತರು ವರ್ಣ ವ್ಯವಸ್ಥೆಯ ಹೊರಗಿನವರು ಅವರ್ಣೀಯರು. ಇವರನ್ನು ಪಂಚಮರು ಎಂದು ಕರೆಯುವುದು ಇದೆ. ಸ್ಮೃತಿಗಳ ಪ್ರಕಾರ ಇವರು ಅಂತ್ಯಜರು. ಸ್ಮೃತಿಗಳು ವಿಧಿಸಿರುವ ಅಸ್ಪೃಶ್ಯತೆಯ ಕಟ್ಟುಪಾಡಿಗೊಳಗಾಗಿ ಅಸ್ಪೃಶ್ಯರು ಎನಿಸಿಕೊಂಡವರು. ಭಾರತದ ವಿನಾ ಬೇರೆ ಯಾವ ದೇಶದಲ್ಲಿಯೂ ಕಂಡು ಬರುವುದಿಲ್ಲ. ವೈದಿಕ ಧರ್ಮವನ್ನು ಬಿಟ್ಟರೆ ಬೇರೆ ಯಾವ ಧರ್ಮದಲ್ಲಿಯೂ ಅಸ್ಪೃಶ್ಯರಿಲ್ಲ- ಕ್ರಿ.ಶ.2ನೇಯ ಶತಮಾನದಲ್ಲಿ ಮನುಸ್ಮೃತಿ ರಚಿಸಲ್ಪಟ್ಟರೂ ಅದು ಅನುಷ್ಠಾನಕ್ಕೆ ಬಂದಿದ್ದು ಗುಪ್ತರ ಕಾಲದಲ್ಲಿ. ಸ್ಮೃತಿ ಎಂದರೆ ಆ ಕಾಲದಲ್ಲಿಯ ಸಂವಿಧಾನವೆಂದೇ ತಿಳಿಯಬೇಕು. ಗುಪ್ತರ ಕಾಲಕ್ಕಾಗಲೇ 137ಸ್ಮೃತಿಗಳು ರಚಿಸಲ್ಪಟ್ಟಿದ್ದವು. ಅವುಗಳಲ್ಲಿ 'ಮನುಸ್ಮೃತಿ' ಮತ್ತು 'ಸಾಮವತ ಭಾರ್ಗವ' ಸ್ಮೃತಿಗಳು ಪ್ರಸಿದ್ಧವಾಗಿವೆ. ಸುಮತಿ ಭಾರ್ಗವನೆಂಬ ಸಾಮವೇದಿ ಬ್ರಾಹ್ಮಣನ ಕೈಯಿಂದ ಮನುಸ್ಮೃತಿಯನ್ನು 'ಸಾಮವತ ಭಾರ್ಗವ' ಹೆಸರಿನಿಂದ ಪುನರ್ ರಚಿಸುವ ಮೂಲಕ ಅಸ್ಪೃಶ್ಯರ ವಿಷಯದಲ್ಲಿ ಕಾನೂನು ರೂಪಿಸಿ, ಅದನ್ನು ಜಾರಿಗೊಳಿಸುವಲ್ಲಿ ಬ್ರಾಹ್ಮಣರು ಯಶಸ್ವಿಯಾದರು. "ಶೂದ್ರ ಮತ್ತು ಅತಿಶೂದ್ರರಿಗೆ ಸ್ಮೃತಿಗಳು ಹೇರಿದ ನಿಯಮಗಳು ಹೀಗಿವೆ :ವಿದ್ಯೆಯ ಹಕ್ಕಿಲ್ಲ, ಸಂಪತ್ತಿನ ಹಕ್ಕು ಇಲ್ಲ, ಆಯುಧಗಳನ್ನು ಹೊಂದುವ ಹಕ್ಕು ಇಲ್ಲ, ಮಂತ್ರಿಗಳು ಬ್ರಾಹ್ಮಣರೇ ಇರಬೇಕು. ಕಾರ್ಯಾಂಗ ದಲ್ಲಿಯೂ ಬ್ರಾಹ್ಮಣರೇ ಮುಖ್ಯರು. ಮುಖ್ಯ ನ್ಯಾಯಾಧೀಶ ಬ್ರಾಹ್ಮಣನೇ ಆಗಿರಬೇಕು. ದಂಡನಾಯಕರು ಬ್ರಾಹ್ಮಣರೇ ಇರಬೇಕು. ರಾಜ ಯಾವತ್ತೂ ಕ್ಷತ್ರಿಯನೇ ಆಗಿರಬೇಕು"[102] ಈ ಸಮಾಜದ್ರೋಹಿ ನಿಯಮ ಗಳನ್ನಲ್ಲದೇ ಕ್ರೂರ ನೀತಿಸಾರವು ಶೂದ್ರರ ವಿವಾಹದಲ್ಲಿ ವೇದಮಂತ್ರಪಠಣ ನಿಷೇಧಿಸಿತು. ಬೇರೆಬೇರೆ ಜಾತಿಯವರಿಗೆ ಬೇರೆಬೇರೆ ಸ್ಮಶಾನಗಳಿರಬೇಕೆಂದು ಕೌಟಿಲ್ಯನ 'ಅರ್ಥಶಾಸ್ತ್ರ' ಸಾರಿತು. ಬದುಕಿನ ಎಲ್ಲ ರಂಗಗಳಲ್ಲಿಯೂ ಈ ತಾರತಮ್ಯವನ್ನು ಮಾನದಂಡವಾಗಿಟ್ಟುಕೊಳ್ಳುವುದು ಆರಂಭವಾಯಿತು.

ಪ್ರತಿಯೊಂದು ಊರಿನಲ್ಲಿ ಒಂದು ಅಸ್ಪೃಶ್ಯರ ಕೇರಿ ಇರುವುದು, ಅವರಿಗೆ ಪ್ರತ್ಯೇಕ ಬಾವಿಯಿದ್ದು, ಅಸ್ಪೃಶ್ಯರು ಊರಿನವರ ಎಂಜಲು ತಿನ್ನುವುದು, ಹೊಲಸು ಬಳಿಯುವುದು ಸಹಜವೆಂಬಂತೆ ರೂಢಿಗೆ ಬಂದಿತು. ಅಸ್ಪೃಶ್ಯನೊಬ್ಬನು ಊರಿನಲ್ಲಿ ಪ್ರವೇಶಿಸಿದಾಗ ಅವನ ನೆರಳು ಸವರ್ಣೀಯರ ಮೇಲೆ ಬೀಳಬಾರದು. ಉಗುಳುವುದಕ್ಕೆ ಕೊರಳಲ್ಲಿ ಮಣ್ಣಿನ ಮಡಿಕೆ ಮತ್ತು ರಸ್ತೆಯಲ್ಲಿ ಮೂಡಿದ ಹೆಜ್ಜೆಗುರುತು ಅಳಿಸಲು ಪೊರಕೆಯೊಂದನ್ನು ನಡಕ್ಕೆ ಕಟ್ಟಿಕೊಳ್ಳಬೇಕಾಗಿತ್ತು. ಊರಲ್ಲಿ ಪ್ರವೇಶಿಸುವಾಗ ಸದ್ದು ಮಾಡುತ್ತ ಬರಬೇಕಾಗಿತ್ತು. ಇಂತಹ ಅಮಾನವೀಯ ಆಚರಣೆ ಭಾರತದಲ್ಲಿತ್ತು. ಅಸ್ಪೃಶ್ಯರನ್ನು ಪ್ರಾಣಿ-ಪಕ್ಷಿಗಳಿಗಿಂತ ಕೀಳಾಗಿ ಕಾಣಲಾಗುತ್ತಿತ್ತು. ಅಂತಹ ಕಾಲಘಟ್ಟದಲ್ಲಿ ಕ್ರಿ.ಪೂ.6ನೇ ಶತಮಾನದಲ್ಲಿ ಬುದ್ಧ ಈ ಅಸಮಾನತೆಯ ವಿರುದ್ಧ ಸಿಡಿದೆದ್ದು, ಅನೀತಿ, ಅಧರ್ಮ, ಮೂಢನಂಬಿಕೆಯಲ್ಲಿದ್ದ ಬಹು ಜನರನ್ನು ಬಡಿದೆಬ್ಬಿಸಿದರು. ಬುದ್ಧನ ಸಿದ್ಧಾಂತ ಬಲು ದೊಡ್ಡ ಪರಿವರ್ತನೆಯನ್ನುಂಟು ಮಾಡಿತು. "ಬಹುಜನ ಹಿತಾಯ ಬಹುಜನ ಸುಖಾಯ" ಎಂಬ ಸಿದ್ಧಾಂತ ಜನರಲ್ಲಿ ಸೌಹಾರ್ದತೆ-ಸಮಾನತೆ ಮೂಡಿಸಿತು. ಶ್ರೇಣಿಕೃತ ವ್ಯವಸ್ಥೆ ಸ್ಥಾಪಿಸಲು ಜನ ಮುಂದಾದರು. ಬುದ್ಧ ಪ್ರಾಚೀನ ಇತಿಹಾಸದಲ್ಲಿ ಅಸ್ಪೃಶ್ಯತೆ ನಿವಾರಣೆಮಾಡಿದ ಪ್ರಯತ್ನ ಒಂದು ಮೈಲಿಗಲ್ಲಾಯಿತು. ಹಲವು ಜನ ಅಸ್ಪೃಶ್ಯರನ್ನು, ಕೀಳು ಜಾತಿಯವರನ್ನು

ಸಂಘಕ್ಕೆ ಸೇರಿಸಿಕೊಂಡು ಅವರಿಗೆ ಶಿಸ್ತು, ಸಮಾನತೆ ಮತ್ತು ಸಿದ್ಧಾಂತವನ್ನು ಕಲಿಸಿದನು. ಬುದ್ಧನ ತರುವಾಯ ಉತ್ತರ ಭಾರತದಲ್ಲಿ ಜಾತಿಶ್ರೇಣಿಯನ್ನು ನಿರಾಕರಿಸುವ, ಅಲ್ಲಗಳೆಯುವ ಧೈರ್ಯ ಮಾಡಲಿಲ್ಲ. ದಕ್ಷಿಣ ಭಾರತದಲ್ಲಿ ವೈದಿಕವ್ಯವಸ್ಥೆಯ ವಿರುದ್ಧ ಪ್ರತಿಕ್ರಿಯೆ, ಪ್ರತಿಭಟನೆಗಳು ಕಾಲಕಾಲಕ್ಕೆ ಕಾಣಿಸಿಕೊಂಡಿವೆ. ತಮಿಳುನಾಡಿನ 63 ಪುರಾತನರು ಸದಾ ಸ್ಮರಣೀಯರು. ಇವರೆಲ್ಲ ಕೆಳಜಾತಿಯ ಭಕ್ತಿ ಪರಂಪರೆಯವರಾಗಿದ್ದು, ಶ್ರೇಣೀಕರಣವನ್ನು ತೊಡೆಯಲು ಪ್ರಯತ್ನಿಸಿದರು. ಇವರಲ್ಲಿ ನಂದನಾಥ್ ಹೊಲೆಯ, ಆದಿಬತ್ತಾನಾರ ಬೆಸ್ತ, ತಿರುಕುರಿಪ್ಪಂಡು ನಾಯನಾರ್ ಅಗಸ, ತಿರುನೀಲಕಂಠ ನಾಯನಾರ್ ಕುಂಬಾರ. ಇವರೆಲ್ಲ ಕೆಳ ಜಾತಿಯಿಂದ ಬಂದಿರುವುದು ಗಮನಾರ್ಹವಾದುದು. "ಈ ತಮಿಳು ಶೈವಪಂಥವು ವೇದಗಳನ್ನು ಒಪ್ಪಿಕೊಂಡೇ ಬೆಳೆದುಬಂದಿದೆ ಎಂಬುದು ನಿಜವೇ ಆದರೂ ವರ್ಣಭೇದವನ್ನು ತುಳಿದು ಸಮಾನತೆಯನ್ನು ಸಾಧಿಸುವುದು ಅದರ ವೈಶಿಷ್ಟ್ಯವೆಂಬುದನ್ನು ಮರೆಯುವಂತಿಲ್ಲ"[103] ಎಂಬ ಡಾ. ಮನಜವರಯ್ಯನವರ ಅಭಿಪ್ರಾಯವನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಭಾರತದಂತಹ ರಾಷ್ಟ್ರದಲ್ಲಿ ಶತಶತಮಾನಗಳ ಹಿನ್ನೆಲೆಯಿರುವ ಜಾತಿವ್ಯವಸ್ಥೆಯನ್ನು ಸೈದ್ಧಾಂತಿಕವಾಗಿ ಪ್ರತಿಭಟಿಸಿದವರಲ್ಲಿ 12ನೇ ಶತಮಾನದ ಶಿವಶರಣರೇ ಮೊದಲಿಗರು. ಇವರ ನಾಯಕ ಬಸವಣ್ಣ ಉತ್ತಮ ಕುಲದಲ್ಲಿ ಹುಟ್ಟಿ ಜಾತಿ ವರ್ಗೀಕರಣವನ್ನು ಪ್ರತಿಭಟಿಸಿದ್ದು ಚರಿತ್ರೆಯಲ್ಲಿ ಮಹತ್ವದ್ದೆನಿಸಿದೆ. ಜಾತ್ಯಾತೀತ ಹೋರಾಟವನ್ನು ಹುಟ್ಟುಹಾಕಿ ವರ್ಣಾಶ್ರಮ ಪದ್ಧತಿ ಹುಟ್ಟು ಹಾಕಿದ ಸ್ಪೃಶ್ಯ-ಅಸ್ಪೃಶ್ಯ, ಮೇಲು-ಕೀಳು ಈ ಕೃತಕ ಭೇದ ಸಂಸ್ಕೃತಿಯನ್ನು ನಾಶಮಾಡಿ ಸಮಸಮಾಜ ಸ್ಥಾಪಿಸಲು ಬಸವಣ್ಣ ನಡೆಸಿದ ಹೋರಾಟ ಲೋಕಮಾನ್ಯವೆನಿಸಿದೆ. ಜಾತಿಪದ್ಧತಿಯ ವಿರುದ್ಧ. ಅಸ್ಪೃಶ್ಯತೆಯ ವಿರುದ್ಧ, ಬಹಿರಂಗ ಬಂಡಾಯವನ್ನು ಕೈಗೊಂಡು, ಭಿನ್ನವಾದ, ಸೈದ್ಧಾಂತಿಕವಾದ ನಿಲುವುಗಳನ್ನು ತಳೆದು, ವೀರಶೈವ ಧರ್ಮದ ಮೂಲಕ ಸಮಾನತೆ ತರಲೆತ್ನಿಸಿದ್ದು, ಬಹುಮಹತ್ವದ ಸಂಗತಿಯಾಗಿದೆ. "ಧರ್ಮದಲ್ಲಿ ಮತ್ತು ಸಮಾಜದಲ್ಲಿದ್ದ ಬ್ರಾಹ್ಮಣ ಏಕಸ್ವಾಮ್ಯವನ್ನು ಪ್ರತಿಭಟಿಸಿದ್ದು, ಹೆಚ್ಚುತ್ತಿದ್ದ ಜಾತಿ ಪಕ್ಷಪಾತ ಭೇದ ಮತ್ತು ಭ್ರಷ್ಟಾಚಾರಗಳನ್ನು ಅತ್ಯಂತ ಕಟುವಾಗಿ ಟೀಕಿಸಿದ್ದು, 12ನೇ ಶತಮಾನದಲ್ಲಿ ಎದ್ದ ವೀರಶೈವ ಆಂದೋಲನದ ಮುಖ್ಯಾಂಶಗಳು. ಅದರ ಸರಳತೆ ಮತ್ತು ಎಲ್ಲರಿಗೂ ಅವಕಾಶಗಳಿಂದಾಗಿ ಅದು ಸಮಾಜದಲ್ಲಿ ಅದುವರೆಗೂ ಪ್ರಮುಖವೆಂದು ಪರಿಗಣಿತವಾಗಿಲ್ಲದ ವರ್ಗಗಳಲ್ಲೂ ಮನ್ನಣೆಗೆ ಪಾತ್ರವಾಯಿತು".[104] ಹೀಗೆ ಬಸವಣ್ಣ ಜಾತ್ಯಾತೀತ ಸಮಾನತೆಯ ಹೋರಾಟವನ್ನು 12ನೇ ಶತಮಾನದಲ್ಲಿಯೇ ಹುಟ್ಟುಹಾಕಿದ ಮಹತ್ವದ ವ್ಯಕ್ತಿಯಾಗಿದ್ದಾನೆ. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ"[105] ತಾನು ಉತ್ತಮ ಕುಲದಲ್ಲಿ ಹುಟ್ಟಿದ್ದೇ ಅವರಿಗೆ ಕಷ್ಟದ ಹೊರೆಯಾಗಿತ್ತು. ಉತ್ತಮ- ಕೀಳು ಎನ್ನುವುದನ್ನು ತಿರಸ್ಕರಿಸುತ್ತದೆ.

ಅಸ್ಪೃಶ್ಯತೆ ಒಂದು ಮಹಾಪಾಪ ಎಂದು ಮನವರಿಕೆ ಮಾಡಿಕೊಟ್ಟು, ಅಸ್ಪೃಶ್ಯರಿಗೆ ಸಮಾನವಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಕ್ಕುಗಳು ಮತ್ತು ಅವಕಾಶಗಳು ದೊರಕಬೇಕೆಂದು ಆಗ್ರಹಪಡಿಸುವ ಮೂಲಕ ಅಸ್ಪೃಶ್ಯತೆಯ ನಿವಾರಣೆಗಾಗಿ ಬಸವಣ್ಣ ಪ್ರಯತ್ನಿಸಿದ. ಅಂತರ್ಜಾತಿ ವಿವಾಹಗಳಿಗೆ ಪ್ರೇರಣೆ ಪ್ರೋತ್ಸಾಹ ನೀಡಿದ್ದಲ್ಲದೇ ಅಸ್ಪೃಶ್ಯನಾಗಿದ್ದ ಹರಳಯ್ಯ ಮತ್ತು ಬ್ರಾಹ್ಮಣನಾಗಿದ್ದ ಮಧುವಯ್ಯ ಇವರನ್ನು ಶಿವಭಕ್ತರನ್ನಾಗಿಸಿ ಅವರ ಮಕ್ಕಳಿಗೆ ಮದುವೆ ಮಾಡಿಸಿದನು. ಜಾತಿಯನ್ನು ಅಳಿಯಲು ವೀರಶೈವಧರ್ಮವನ್ನು ಪ್ರಸಾರಕ್ಕೆ ತಂದನು. ಬಸವಣ್ಣನ ಮುಖ್ಯ ಉದ್ದೇಶ ಸಾಮಾಜಿಕ ಸುಧಾರಣೆ. 'ವೀರಶೈವಮತ' ವನ್ನು ವಿಕಾಸಗೊಳಿಸಿ ಜಾತಿವರ್ಗಗಳಿಂದ ಮುಕ್ತವಾದ ಸಮಾಜದ ರಚನೆಗೆ ಆಗ್ರಹಪಡಿಸಿದ.

ವೀರಶೈವ ಆಂದೋಲನ ವರ್ಗರಹಿತ, ಜಾತಿರಹಿತ ಸಮಾಜ ಸ್ಥಾಪನೆಯ ಗುರಿ ಹೊಂದಿತ್ತು. ಸಾಮಾಜಿಕ ಅಸಮಾನತೆಗಳು-ಪುರೋಹಿತಶಾಹಿಯ ಜಾತಿ ವರ್ಣಶ್ರೇಣಿ ವ್ಯವಸ್ಥೆಯ ವಿರುದ್ಧ ಬಂಡೆದ್ದು, ಜಾತಿವ್ಯವಸ್ಥೆಯ ಭಾಗವಾಗಿದ್ದ ಅಸ್ಪೃಶ್ಯತೆಯನ್ನು ಉಗ್ರವಾಗಿ ಖಂಡಿಸಿದರು. ಸಮಾಜದಲ್ಲಿ ಮೇಲು-ಕೀಳು ಭೇದ ಸಲ್ಲದೆಂದು ಹೇಳಿ ಶಿವಭಕ್ತರೆಲ್ಲ ಸಮಾನರೆಂದು ಸಾರಿದ. ಅಸ್ಪೃಶ್ಯರ ಕಲ್ಯಾಣಕ್ಕಾಗಿ ವಿಶೇಷ ಶ್ರಮವಹಿಸಿ ಅನೇಕ ಅಸ್ಪೃಶ್ಯ ಶಿವಭಕ್ತರು ವೀರಶೈವ ಮತದ ಅನುಯಾಯಿಗಳಾಗಿದ್ದು, ಬಸವಣ್ಣನ ಪ್ರಯತ್ನದಿಂದಾಗಿ.

ಸೈದ್ಧಾಂತಿಕವಾಗಿ ವಿವೇಚಿಸುವುದಾದರೆ "ವೀರಶೈವರಲ್ಲಿ ವಿಚಾರ ಹೂವು, ಆಚಾರ ಹಣ್ಣು, ಹೂವಿನ ಮುಂದೆ ಹಣ್ಣಿದೆ. ಹಣ್ಣಿನ ಮುಂದೆ ಏನೂ ಇಲ್ಲ. ಅಂತೆಯೇ ಸಿದ್ಧಾಂತದ ಮುಂದೆ ವಿಮರ್ಶಿಸಬೇಕಾದುದು, ನಿರ್ಣಯಿಸಬೇಕಾದುದು, ಬೇರೊಂದಿರದು. ಅದೇ ಚರಮಸತ್ಯ ಪರಮಸತ್ಯ. ಅದು ನಿಸ್ಸೀಮ ನಿರ್ಣಯ. ಸುಸ್ಪಷ್ಟ ಸಿದ್ಧಾಂತ. ಅನನ್ಯವಾದ ಕೊನೆಯ ಮಾತು"[106] ಶರಣ ಸಿದ್ಧಾಂತ ಇಂಥ ಕೊನೆಯ ಮಾತಿನ ಸ್ವರೂಪದ್ದಾಗಿದೆ".

"ಸಾಮಾನ್ಯವಾಗಿ ಯಾವುದೇ ಧರ್ಮ ದೇವ-ಜೀವ ಜಗತ್ತುಗಳನ್ನು ಕುರಿತು ಚಿಂತನೆ ನಡೆಸುತ್ತದೆ. ಜೀವವು ದೇವನಾಗುವುದು ಮುಖ್ಯವೆಂದು ಹೇಳಿ ಅಲ್ಲಿಗೆ ನಿಲ್ಲದೇ, ದೇವನಾದವನು ಸಮಾಜವನ್ನು ದೇವನನ್ನಾಗಿಸಬೇಕೆನ್ನುವುದು ಪ್ರವಾದಿಗಳು. ಇವರು ಸಮಾಜ ಶುದ್ಧೀಕರಣಕ್ಕೆ ತಮ್ಮ ಸಿದ್ಧಾಂತವನ್ನು ಚಾಚುವುದರಿಂದ ಅದನ್ನು ಶೋಷಣೆ ಮಾಡುತ್ತಲಿರುವ ಶೋಷಕರು ಇವರನ್ನು ಕೆಂಗಣ್ಣಿನಿಂದ ಕಾಣುತ್ತಾರೆ. ಹೀಗಾಗಿ ಪ್ರವಾದಿಗಳು ಲೋಕದಲ್ಲಿ ಪಡಬಾರದ ಕಷ್ಟಪಡುತ್ತಾರೆ".[107] ಬುದ್ಧ ಬಸವರು ಅಂತಹ ಪ್ರವಾದಿಗಳಾಗಿದ್ದರು. ಪ್ರತಿಭಟನಾಕಾರರಾಗಿದ್ದರು. ಹೊಸ ಸಿದ್ಧಾಂತಗಳ ಪ್ರವರ್ತಕರಾಗಿದ್ದರು. ಬಸವಣ್ಣ ತನ್ನ ತತ್ವ ಸಿದ್ಧಾಂತವನ್ನು ವೀರಶೈವ ಧರ್ಮ ಅಥವಾ ಶರಣ ಧರ್ಮದ ಮೂಲಕ ಪ್ರಚಾರಪಡಿಸಿದರು. "ಈ ಧರ್ಮದ ಅನುಯಾಯಿಗಳು ದೇವನಷ್ಟೇ ಮಹತ್ವವನ್ನು ಸಮಾಜಕ್ಕೆ ಕೊಡುವುದರಿಂದ ಸಮಾಜದಲ್ಲಿ ಶಿವನನ್ನು ಕಾಣುವ ಹೊಸ ಸಿದ್ಧಾಂತ ಇಲ್ಲಿ ಆಕಾರ ಪಡೆಯಿತು. ಆದುದರಿಂದ ಅಂಗವು ಲಿಂಗವಾಗುವಂತೆ ಸಮಾಜವು ಲಿಂಗವಾಗಬೇಕೆಂದು ಈ ಧರ್ಮ ಹೇಳುತ್ತದೆ. ಸಮಾಜವು ಲಿಂಗವಾಗುವುದೆಂದರೆ ಅದರಲ್ಲಿ ಮನುಷ್ಯ ಸ್ಥಾಪಿಸಿರುವ ಭೇದ ಸಂಸ್ಕೃತಿಯನ್ನು ನಿವಾರಿಸಿ, ಅಭೇದ ಸಂಸ್ಕೃತಿಯನ್ನು ಸ್ಥಾಪಿಸುವುದು. ಈ ಪ್ರಯತ್ನದ ಫಲವಾಗಿ ಜಾತಿ-ಭೇದ ನಿರಸನವು ಈ ಸಿದ್ಧಾಂತದ ಒಂದು ಮುಖ್ಯ ಭಾಗವಾಯಿತು"[108] ಬಸವಣ್ಣ ಮನುಷ್ಯ ರೂಪಿಸಿರುವ ಸಾಮಾಜಿಕ ನೆಲೆಯಲ್ಲಿ ನಿಂತು, ಅವನಿಂದ ನಿರ್ಮಿತವಾಗಿರುವ ಶೋಷಣೆಗಳಿಗೆ ಗುರಿ ಇಟ್ಟು ನುಡಿಯುತ್ತಾರೆ. ಅದರ ನಿವಾರಣೆಗೆ ಪ್ರತಿಭಟನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಕಲ್ಯಾಣದ ಶರಣರು ಈ ದಿಸೆಯಲ್ಲಿ ಜಾತಿ ತಾರತಮ್ಯದ ನಿವಾರಣೆಗೆ ಶ್ರಮಿಸಿದರು. ಅಷ್ಟೇ ಅಲ್ಲ ಸರ್ವರಿಗೂ ಮತಾಂತರದ ದೀಕ್ಷೆ ನೀಡಿದರು. ಸ್ಪರ್ಶದಿಂದ ಶತಮಾನಗಳಿಂದ ವಂಚಿತವಾದ ಅಸ್ಪೃಶ್ಯರನ್ನು ಅಪ್ಪಿಕೊಂಡು ತಮ್ಮವರನ್ನಾಗಿ ಮಾಡಿಕೊಂಡರು. ಶೋಷಣೆಯ ವ್ಯವಸ್ಥೆ ನಿವಾರಿಸಿ ದೇವರನ್ನು ದೇವಾಲಯದಿಂದ ದೇಹಕ್ಕೆ ವರ್ಗಾಯಿಸಿದರು. ಗುರುವಿನಿಂದ ಇಷ್ಟಲಿಂಗ ದೀಕ್ಷೆ ಉಪಕ್ರಮ ಜಾರಿಗೆ ಬಂದಿತು. ಇದರಿಂದ ಬಹುಸಂಖ್ಯೆಯ ಜನರು ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯವನ್ನು ಏಕ ಕಾಲಕ್ಕೆ ಪಡೆದುಕೊಂಡು 'ಎಲ್ಲರೂ ಸಮಾನರು' ಎಂಬ ವೇದಿಕೆಗೆ ಬಂದು ಸಮಾಜದಿಂದ ತಿರಸ್ಕರಿಸಲ್ಪಟ್ಟ ಜನ, ಅಸ್ಪೃಶ್ಯರು ಇವರು ಊರನ್ನು ಪ್ರವೇಶಿಸುವುದು ದುರ್ಭರವಾಗಿದ್ದಿತು. ಶರಣರ ಪ್ರೇರಣೆಯಿಂದ ಇವರು ಕಲ್ಯಾಣದ ಕೇರಿಕೇರಿಗಳಲ್ಲಿ ಮುಕ್ತವಾಗಿ ಸಂಚರಿಸತೊಡಗಿದರು. ಹೀಗೆ ಅಸ್ಪೃಶ್ಯರು ಶರಣರಾಗಿ ಸ್ಪೃಶ್ಯರ ಕೇರಿಗೆ ಬರುವುದರೊಂದಿಗೆ,

ಸ್ಪೃಶ್ಯರೆನಿಸಿದ ಶರಣರು ಅಸ್ಪೃಶ್ಯರ ಕೇರಿಗೆ ಮುಕ್ತವಾಗಿ ಹೋಗುವುದು ರೂಢಿಯಾಯಿತು. ಪರಸ್ಪರ ನಮಸ್ಕಾರ-ಪಾದಪೂಜೆ ಆರಂಭಗೊಂಡಿತು. ಈ ಕ್ರಿಯೆ ನೋಡಿ ಸಂಪ್ರದಾಯವಾದಿಗಳು ನಡುಗಿ ಹೋದರು. ಸಮಗಾರ ಹರಳಯ್ಯ ಒಮ್ಮೆ "ಶರಣು" ಎಂದರೆ ಬಸವಣ್ಣ "ಶರಣು ಶರಣು" ಎಂದು ನುಡಿದ. ಅವನು ಕಾಯಕ ಭಕ್ತಿಯಿಂದ ಸಿದ್ಧಪಡಿಸಿಕೊಂಡು ತಂದ ಚಮ್ಮಾವುಗಳನ್ನು ಬಸವಣ್ಣ ಕಾಲಲ್ಲಿ ಮೆಟ್ಟದೇ ಸಾರ್ವಜನಿಕವಾಗಿ ತಲೆಯ ಮೇಲೆ ಹೊತ್ತುಕೊಂಡ ಕಥೆಯು ಸರ್ವರಿಗೂ ಗೊತ್ತಿದೆ. ನಮಸ್ಕಾರ-ಪ್ರತಿನಮಸ್ಕಾರ, ಅಸ್ಪೃಶ್ಯ ಶರಣರನ್ನು ಮುಟ್ಟುವುದು, ಕೈಹಿಡಿಯುವುದು, ತಮ್ಮ ಮನೆಗಳಿಗೆ ಕರೆದುಕೊಂಡು ಹೋಗುವುದು, ಹೀಗೆ ಮೇಲರಿಮೆ-ಕೀಳರಿಮೆಗಳನ್ನು ನಾಶ ಮಾಡಲೆತ್ನಿಸಿದರು. ಸಹಭೋಜನ-ರಕ್ತ ಸಂಬಂಧಗಳನ್ನು ಬೆಳೆಸಿದರು. ಬಸವಣ್ಣ ಹೊಲೆಯನಾದ ಸಂಬೋಳಿ ನಾಗಿದೇವನ ಮನೆಯಲ್ಲಿ ಪ್ರಸಾದ ಸೇವಿಸಿದ. ಈ ಸಹಭೋಜನವನ್ನು ವೈದಿಕರು ದೊಡ್ಡ ಸುದ್ದಿ ಮಾಡಿ ಅರಸನಿಗೆ ದೂರು ನೀಡಿದರು. ನ್ಯಾಯ ವಿಚಾರಣೆಗೆ ಬರಲು ಬಿಜ್ಜಳ ಬಸವಣ್ಣನಿಗೆ ಹೇಳಿ ಕಳಿಸಿದ. ಹೊಲೆಯರನ್ನು ಮುಟ್ಟಿ, ಊಟ ಮಾಡಿ ಮೈಲಿಗೆಯಾಗಿದ್ದ ಬಸವಣ್ಣನಿಂದಾಗಿ ಆಸ್ಥಾನ ಮೈಲಿಗೆಯಾಗಬಾರದೆಂದು ಸಿಂಹಾಸನವನ್ನು ಬೀದಿಯ ಮೇಲೆ ಇಡಿಸಿದ. ನಡುಬೀದಿಯಲ್ಲಿ ನ್ಯಾಯ ವಿಚಾರಣೆ ನಡೆಯಿತು. ಈ ಘಟನೆ ಆ ಕಾಲದಲ್ಲಿ ಜಾಗತಿಕ ದಾಖಲೆಯೇ ಸರಿ. ಈ ಘಟನೆಯ ನಂತರ ಪರಸ್ಪರ ಪ್ರಸಾದ ಸ್ವೀಕಾರ, ಸಹಭೋಜನಗಳು ಆರಂಭಗೊಂಡವು. ಇದು ಜಾತಿಗರ್ವ ನಿರಸನದ ಪರಮಾವಧಿ ಪ್ರಯೋಗವಾಗಿದೆ. ಇದಲ್ಲದೇ" ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು" ಆವ ಕುಲವಾದಡೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೆ ಶರಣರಲ್ಲಿ, ಜಾತಿಯ ಸಂಕರವಾದ ಬಳಿಕ"[109] ಇವೆ ಮಾತುಗಳ ಮೂಲಕ ಶರಣರು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಮುರಿದು ಹಾಕತೊಡಗಿದರು.

12ನೇ ಶತಮಾನದಲ್ಲಿ ಬಸವನ ಪ್ರಯತ್ನದಿಂದಾಗಿ ಸ್ಪರ್ಶ, ನಮಸ್ಕಾರ, ಸಹಭೋಜನಗಳು ಪ್ರಾರಂಭವಾಗಿ ರಕ್ತಸಂಬಂಧದ ಪ್ರಯತ್ನಗಳು ಆರಂಭಗೊಂಡವು. ಈ ಕಾಲದ ಶರಣನೊಬ್ಬ "ಉಂಬುದು, ಉಡುವುದು ಶಿವಾಚಾರ ಕೊಂಬುದು, ಕೊಡುವುದು ಕುಲಾಚಾರ" ಎಂಬ ಅನಾಚಾರಿಯ ಮಾತು ಕೇಳಲಾಗದು" ಎಂದು ಚೆನ್ನ ಬಸವಣ್ಣ ನುಡಿದುದು ದೊಡ್ಡ ಘೋಷಣೆಯಾಗಿತ್ತು. ಇದರ ಅನುಷ್ಠಾನವೆಂಬಂತೆ ಹರಳಯ್ಯ, ಮಧುವಯ್ಯರ ಮಕ್ಕಳ ಮದುವೆ ಕಲ್ಯಾಣದಲ್ಲಿ ನಡೆದು ಹೋಯಿತು. ಅಷ್ಟೇ ಅಲ್ಲ. ಸಹಚಿಂತನ ಮಂಥನವು "ಅನುಭವ ಮಂಟಪ" ದಲ್ಲಿ ಆರಂಭಗೊಂಡಿತು. ಎಲ್ಲ ಶರಣರು ತಮ್ಮ ಅನುಭವವನ್ನು ಹಂಚಿಕೊಳ್ಳಬಹುದಾಗಿತ್ತು. ಜಾತಿಭೇದ, ಲಿಂಗಭೇದ, ವರ್ಣಭೇದ ಮರೆತು ತಮ್ಮ ಅಭಿಪ್ರಾಯ ಮಂಡಿಸಲು ಸರ್ವ ಶರಣರಿಗೂ ಪೂರ್ಣ ಸ್ವಾತಂತ್ರ್ಯ ಕಲ್ಪಿಸಿ ಕೊಡಲಾಗಿತ್ತು. ಈ ಅನುಭವ ಮಂಟಪದಲ್ಲಿ ಮಥಿಸಿದ ತತ್ವ ಸಿದ್ಧಾಂತಗಳು ಸಾರ್ವಜನಿಕ ನೆಲೆಯಲ್ಲಿ ಹುಟ್ಟಿ, ಸಾರ್ವಜನಿಕರಿಗಾಗಿ ಆಕಾರ ಪಡೆದು, ಸಾರ್ವಜನಿಕರ ಕಲ್ಯಾಣಕ್ಕಾಗಿ ಬಳಕೆಗೆ ತರುವುದು ಈ ಸಂಘಟನೆಯ ಮುಖ್ಯ ಉದ್ದೇಶವಾಗಿತ್ತು. ಇಲ್ಲಿ ಕೆಳವರ್ಗದಿಂದ ಬಂದ ಶರಣರು ಪಾಲ್ಗೊಂಡಿದ್ದು ಅತ್ಯಂತ ವೈಶಿಷ್ಟ್ಯಪೂರ್ಣ. ಶಿವನಾಗಯ್ಯ, ಹರಳಯ್ಯ, ಮಾದಾರಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರಕಕ್ಕಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ನುಲಿಯಚಂದಯ್ಯ ಮೊದಲಾದ ಅಸ್ಪೃಶ್ಯರು ಪಾಲ್ಗೊಂಡು ಶತಮಾನಗಳಿಂದ ನಡೆದು ಬಂದ ಶೋಷಣೆಯ ವಿಚಾರಗಳ ವಿಮರ್ಶೆ ಜರುಗಿತು. ಅಸ್ಪೃಶ್ಯರ ನೋವುಗಳನ್ನು ಅವರಿಂದಲೇ ಕೇಳಿ ಅವುಗಳಿಗೆ ಪರಿಹಾರ ರೂಪಿಸಲಾಯಿತು. ಆ ವಿಚಾರಗಳೇ ವಚನರೂಪ ತಳೆದವು. ವಿಚಾರಗಳು ಆಚರಣೆಗೆ ಬಂದಿದ್ದು, ಈ

ಆಂದೋಲನದ ಹಿರಿಮೆಯಾಗಿತ್ತು. ಆ ನುಡಿ-ನಡೆಯಾಗಿ, ಬರಹವಾಗಿ, ಶಾಶ್ವತಸ್ಥಾನವನ್ನು ಪಡೆಯಿತು. ಅಸ್ಪೃಶ್ಯರಿಗೆ ಅಕ್ಷರ ಕಲಿಯುವ ಅವಕಾಶ ಲಭ್ಯವಾಗಿ ಅವರು ಸಾಕ್ಷರರಾಗಿ ವಚನಗಳನ್ನು ರಚಿಸಿದರು. ಈ ಸಾಹಿತ್ಯವನ್ನು ಶರಣರು ಜಾತಿ ಭೇದ ನಿವಾರಣೆಗಾಗಿ ಅಸ್ತ್ರದಂತೆ ಬಳಸಲಾಯಿತು.

"ಹೊಲೆಯ ಹೊಲಬಿಗನಾದರೆ ಅವನ ಹೊರೆಯಲಿಪ್ಪುದು ಲೇಸು "ಮಾದಿಗ ಶಿವಭಕ್ತನಾದರೆ ಅವನ ಮನೆಯ ಸೊಣಗಂಗೆ ಪಂಚವಾದ್ಯವ ಬಾರಿಸುವೆ' ಎಂಬ ವಚನಗಳು ಮಹಾನ್ ಘೋಷಣೆಗಳಾಗಿ ಪ್ರಸಾರ ಹೊಂದಿ, ಜನರಲ್ಲಿ ಸಾರ್ವತ್ರಿಕ ತಿಳುವಳಿಕೆ ಮೂಡಲಾರಂಭಿಸಿದ್ದು, ಈ ಆಂದೋಲನದ ಮುಖ್ಯ ಫಲಿತವಾಗಿತ್ತು. ಅಷ್ಟೇ ಅಲ್ಲ, ಅಸ್ಪೃಶ್ಯ ಶರಣರನ್ನು "ಹಿರಿಯ ಮಾಹೇಶ್ವರರು" ಎಂದು ಕರೆದದ್ದು ವಿಶೇಷ. ಮಿಕ್ಕ ಶರಣರು ಕೇವಲ ಮಾಹೇಶ್ವರರಾದರೆ ಇವರು ಹಿರಿಯ ಮಾಹೇಶ್ವರರು ಎಂದು ಅವರನ್ನು ಎತ್ತರಕ್ಕೆ ಬಸವಣ್ಣ ಎತ್ತರಿಸಿ ನುಡಿದು ಗೌರವಿಸಿದ. ಸಕಲೇಶ ಮಾದರಸನ ವಚನದಲ್ಲಿ "ಹಿರಿಯ ಮಾಹೇಶ್ವರ ಕೇರಿ" ಬಸವ ಪುರಾಣದಲ್ಲಿ "ಹಿರಿಯ ಭಕ್ತ" ಪದಗಳನ್ನು ಬಳಸಲಾಗಿದೆ. ನೀಲಕಂಠಾಚಾರ್ಯರ ಆರಾಧ್ಯ ಚರಿತ್ರೆಯಲ್ಲಿ "ಹಿರಿಯ ಭಕ್ತರ ಕಥೆ "ಹೆಸರಿನ ಅಧ್ಯಾಯದ ತುಂಬ ಅಸ್ಪೃಶ್ಯ ಶರಣರ ಕಥೆ ಚಿತ್ರಿಸಲಾಗಿದೆ. ಸಿಂಗಿರಾಜ ಪುರಾಣದಲ್ಲಿ ಹಿರಿಯ ಮಾಹೇಶ್ವರ, ರಾಘವಾಂಕ ಚಾರಿತ್ರ್ಯದಲ್ಲಿ "ಪಿರಿಯ ಭಕ್ತ ಕೆಂಭಾವಿ ಭೋಗಣ್ಣನ ಸಾಂಗತ್ಯದಲ್ಲಿ 'ಹಿರಿಯ ಭಕ್ತ 'ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರದಲ್ಲಿ 'ಹಿರಿಯ ಕುಲ' ಎಂಬ ಪದಗಳಿದ್ದು, ಚರಿತ್ರೆಯುದ್ದಕ್ಕೂ ಬಳಕೆಯಾದುದು ವಿಶೇಷ. ಅದರೊಂದಿಗೆ ಉತ್ತಮವಾದುದನ್ನು ಕಟ್ಟುವುದರೊಂದಿಗೆ ಅನುತ್ತಮವಾದುದನ್ನು ಕೆಡುವವು ಕಾರ್ಯ ಕ್ಷಿಪ್ರವಾಗಿ ನಡೆದು ಬಸವಣ್ಣನ ಜಾತಿಭೇದ ನಿರ್ಮೂಲನ ಚಳುವಳಿ ಪೂರ್ಣದಿಂದ ಪೂರ್ಣತ್ವಕ್ಕೆ ಸಾಗಿತು". ಭಾರತದಲ್ಲಿ ಧರ್ಮ-ಸಮಾಜಗಳನ್ನು ಪ್ರತ್ಯೇಕವಾಗಿಟ್ಟು ಸಿದ್ಧಾಂತಗಳನ್ನು ರೂಪಿಸುವ ಉಪಕ್ರಮ ನಡೆದು ಬರುತ್ತಿರುವಾಗ, ಧರ್ಮವಿರುವುದು ವ್ಯಕ್ತಿಯನ್ನೊಳಗೊಂಡ ಸಮಾಜದ ಆರೋಗ್ಯಕ್ಕಾಗಿ ಎಂಬ ವಿಚಾರದಲ್ಲಿ ಕರ್ನಾಟಕದಲ್ಲಿ ತಲೆ ಎತ್ತಿ "ಸಮಾಜೋ ಧಾರ್ಮಿಕ" ಎಂಬ ಸಂಯುಕ್ತ ಚಿಂತನೆ 12ನೇಯ ಶತಮಾನದಲ್ಲಿ ಚಾಲನೆ ಪಡೆಯಿತು.[110] ಬಸವಣ್ಣ ಇದರ ರೂವಾರಿಯಾಗಿದ್ದ ಅಸ್ಪೃಶ್ಯರ ಕಲ್ಯಾಣಕ್ಕಾಗಿ ಶ್ರಮಿಸಿ ಅನೇಕ ಅಸ್ಪೃಶ್ಯ ಶಿವಭಕ್ತರು ಬೆಳೆದುಬರಲು ಕಾರಣೀಕರ್ತನಾದ.

ಬ್ರಾಹ್ಮಣ ಮತ್ತು ಅಸ್ಪೃಶ್ಯನನ್ನು ಅವರ ಹುಟ್ಟಿನಿಂದ ಗುರುತಿಸಬಾರದು. ಯಾವನು ಒಳ್ಳೆಯ ವ್ಯಕ್ತಿತ್ವ ನಡತೆ ಹೊಂದಿರುವನೋ ಅವನು ಬ್ರಾಹ್ಮಣ. ಯಾವನು ಕೆಟ್ಟ ವ್ಯಕ್ತಿತ್ವ ನಡತೆಗಳನ್ನು ಹೊಂದಿರುವನೋ ಅವನು ಅಸ್ಪೃಶ್ಯನೆಂದು ಕರೆಯಬಹುದು. ಎಲ್ಲರಿಗೂ ಒಳಿತನ್ನು ಬಯಸುವವನೇ ಶ್ರೇಷ್ಠ ಕುಲಜ. ಅದಕ್ಕಾಗಿ ಬಸವಣ್ಣ "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲಸಂಗನ ಶರಣರೇ ಕುಲಜರು' ಎಂದಿದ್ದಾನೆ. ದಲಿತ ವರ್ಗದ ಅಸ್ಪೃಶ್ಯರು ವೀರಶೈವರಾಗಲು ಪ್ರೋತ್ಸಾಹಿಸಿದ ಮಾತ್ರವಲ್ಲದೇ ಅವರಿಗೆ ಶಿಕ್ಷಣವನ್ನು ಕೊಡಲಾಯಿತು. ಹಲವು ದಲಿತ ವರ್ಗದ ಶರಣರು ಬೆಳೆದು ಬಂದು ವಚನಗಳನ್ನು ರಚಿಸಿ, ಚಳುವಳಿಯಲ್ಲಿ ಭಾಗವಹಿಸಿದ್ದು, ಚರಿತ್ರೆಯಲ್ಲಿ ಅಪೂರ್ವವಾದುದು. ಅಂತಹವರಲ್ಲಿ ಉರಿಲಿಂಗ ಪೆದ್ದಿ ಹಾಗೂ ಅವನ ಪತ್ನಿ ಕಾಳವ್ವೆ ಪ್ರಮುಖರು. ಅವರ ಕೃತಿಗಳು ದಲಿತರು ಅನುಭವಿಸಿದ ಯಾತನೆಗಳನ್ನು ನಿವೇದಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ. ಅವರ ವಚನಗಳು ಮೌಲ್ಯಯುತವಾಗಿವೆ.

ಬಸವಣ್ಣನ ವಚನಗಳನ್ನು ನೋಡಿದರೆ ಅವನೊಬ್ಬ ವಾಸ್ತವವಾದಿಯಾಗಿದ್ದ. ಮೇಲು- ಕೀಳು ನಶಿಸಲು ಅಂತರ್-ಜಾತಿ ವಿವಾಹಗಳು ನಡೆಯುವುದೊಂದೇ ಮಾರ್ಗವೆಂದು ಅವರು ಹಾಗೂ ಶರಣರು ಮನಗಂಡಿದ್ದರು. ಮಾತ್ರವಲ್ಲದೇ ಅಂತಹುದೊಂದು ವಿವಾಹವನ್ನು ವಾಸ್ತವವಾಗಿ ನಡೆಸಲು ಮುಂದಾದರು. ಹರಳಯ್ಯ- ಮಧುವಯ್ಯರ ಮಕ್ಕಳಿಗೆ ವಿವಾಹ ನೆರವೇರಿಸಿದರು. ಇದು ಕಲ್ಯಾಣಕ್ರಾಂತಿಗೆ ಕಾರಣವಾಯಿತು. ಈ ಪ್ರಯತ್ನದ ಹಿಂದಿನ ಮನೋಭಾವ ತೀರ ಪ್ರಗತಿಪರ ಮಾತ್ರವಲ್ಲ, ಕ್ರಾಂತಿಕಾರವೂ ಆಗಿತ್ತು.

"ಲಿಂಗಾಯತವೆನ್ನುವುದು ಒಂದು ಜಾತಿಯಲ್ಲ, ಜೀವನ ಪದ್ಧತಿ. ಆತ್ಮಮುಖಿ, ಮಾನವಮುಖಿ, ಸಮಾಜಮುಖಿ, ಸಮೃದ್ಧಿಮುಖಿ- ಹೀಗೆ ಇದು ಚತುರ್ಮುಖಿ ಜೀವನ ಪದ್ಧತಿಯಾಗಿದೆ. ಪಾರಂಪರಿಕವಾಗಿ ಬೆಳೆದು ಬಂದಿದ್ದ ಭಾರತೀಯ ಜಾತಿ ನಿಷ್ಠ ಜೀವನ ಪದ್ಧತಿಗೆ ತೀವ್ರ ಪ್ರತಿಕ್ರಿಯೆ ತೋರಿದ ಇದರ ಉದಯಕಾಲ 12ನೇಯ ಶತಮಾನ, ಉದಯರವಿ ಬಸವಣ್ಣ" (ಡಾ:ಸಾವುಕಾರ ಎಸ್.ಕಾಂಬಳೆ :ಲಿಂಗಾಯತ ಅಸ್ಪೃಶ್ಯರು ಒಂದು ಅಧ್ಯಯನ: ಪಿಹೆಚ್‌ಡಿ ಪ್ರಬಂಧ ಮಾಲೆ 2003- ಡಾ:ಎಂ.ಎಂ.ಕಲಬುರ್ಗಿಯವರ ಮುನ್ನಿಡಿಯಲ್ಲಿ) ಎನ್ನುವ ಡಾ. ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯ ಬಹು ಮಾರ್ಮಿಕವಾಗಿದೆ. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೊಂದೇ ಎಂಬೆ" ಎಂದು ಬಸವಣ್ಣ ಘೋಷಿಸಿದನು. ಬಸವಣ್ಣ ಮಾಡಿದ ಅಸ್ಪೃಶ್ಯತಾ ನಿವಾರಣೆಯ ಹೋರಾಟವನ್ನು ಅರಿಯಬೇಕಾದರೆ ಅಂದಿನ ಅಸ್ಪೃಶ್ಯರು, ಅಂತ್ಯಜರು, ಪಂಚಮರು ಅನುಭವಿಸಿದ ನೋವು, ಯಾತನೆ, ಅನ್ಯಾಯಗಳ ಅರಿವು ನಮಗಿರುವುದು ಉತ್ತಮ. ಏಕೆಂದರೆ ಸ್ವಾತಂತ್ರ್ಯ ಸಿಕ್ಕು ಐದು ದಶಕಗಳೇ ಕಳೆದರೂ ಅಸ್ಪೃಶ್ಯರು ಅನುಭವಿಸುತ್ತಿರುವ ಹಿಂಸೆ, ಉಪಟಳ, ವೇದನೆ, ವ್ಯಥೆ ಇನ್ನೂ ಬದಲಾಗಿಲ್ಲ. ಹೀಗಿರುವಾಗ 12ನೇ ಶತಮಾನದ ಅಸ್ಪೃಶ್ಯರ ಬದುಕು ಕಲ್ಪಿಸಿಕೊಂಡರೆ ಸಾಕು ಬಸವಣ್ಣನ ಹೋರಾಟದ ಹಿರಿಮೆ ಅರ್ಥವಾದೀತು. ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಪ್ರಬಲ ಹೋರಾಟಗಳೇ ನಡೆದಿವೆ. ಅಸ್ಪೃಶ್ಯತೆಯ ನಿವಾರಣೆಗಾಗಿ ಶಾಸನಗಳನ್ನು ರಚಿಸಲಾಗಿದೆ. ಭಾರತದ ಸಂವಿಧಾನವೇ ಅಸ್ಪೃಶ್ಯತೆಯು ಅಪರಾಧವೆಂದು ಸಾರಿದೆ. ಹೀಗಿದ್ದು ಇಂದು ನಮ್ಮಲ್ಲಿ ಅಸ್ಪೃಶ್ಯತೆ ಅಳಿದಿಲ್ಲ. ಅದರ ರುದ್ರನರ್ತನ ನಮ್ಮ ಸಮಾಜವನ್ನು ಕಾಡುತ್ತಿದೆ.

"ನಮ್ಮ ಸಂವಿಧಾನ ಜಾರಿಗೆ ಬಂದು ಐವತ್ತು ವರ್ಷಗಳಾದ ಮೇಲೂ ಕಳೆದ ಏಳೆಂಟು ವರ್ಷಗಳಲ್ಲಿ ಮೂವತ್ತೆರಡು ಸಾವಿರ ಅಸ್ಪೃಶ್ಯ ಜಾತಿಯವರನ್ನು ಮೇಲುಜಾತಿಯ ಹಿಂದುಗಳು ಕೊಂದು ಹಾಕಿದರು! ನಲವತ್ತನಾಲ್ಕು ಸಾವಿರ ಅಸ್ಪೃಶ್ಯ ಹೆಣ್ಣುಗಳ ಮೇಲೆ ಮೇಲುಜಾತಿಯ ಹಿಂದುಗಳು ಅತ್ಯಾಚಾರ ಮಾಡಿದರು! ಅಸ್ಪೃಶ್ಯತೆಯ ನಿಷೇಧವಾಗಲಿ, ಮೀಸಲಾತಿ ಸ್ಥಾನವಾಗಲೀ ಅವರ ಸ್ಥಿತಿಯನ್ನು ಸುಧಾರಿಸಿಲ್ಲ. ಮೊದಲು ಹರಿಜನರ ಬಗ್ಗೆ ಮೇಲ್ಜಾತಿ ಹಿಂದೂಗಳಲ್ಲಿ ಯಾವ ತಿರಸ್ಕಾರವಿತ್ತೋ ಅದೇ ಇವತ್ತಿಗೂ ಮುಂದುವರೆದಿದೆ".[111] ಎಂದು ಹೇಳಿದ ಬುದ್ಧಿಜೀವಿ ಪತ್ರಕರ್ತ ಕುಲದೀಪ್ ನಯ್ಯರ್ ಹೇಳಿರುವ ಮಾತನ್ನು ಡಾ॥ಮ.ನ.ಜವರಯ್ಯ ತಮ್ಮ ಪುಸ್ತಕ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್"(2001)ದಲ್ಲಿ ಸ್ಫೋಟಗೊಳಿಸಿರುತ್ತಾರೆ. ಇಂತಹ ಅಭಿಪ್ರಾಯ ಸುಳ್ಳೇನಲ್ಲ. ಇಂದಿಗೂ ಅಸ್ಪೃಶ್ಯರ ಸ್ಥಿತಿಗೆ ಇದು ಹಿಡಿದ ಕೈಗನ್ನಡಿ. 12ನೇ ಶತಮಾನದ ಬಗ್ಗೆ ಅಂದಿನ ಅಸ್ಪೃಶ್ಯರ ಸ್ಥಿತಿಗತಿಗಳ ಬಗ್ಗೆ ಆಲೋಚಿಸಿದರೆ, ಅಂದಿನ ಬಸವಣ್ಣನ ಪ್ರತಿಭಟನಾತ್ಮಕ ಹೋರಾಟದ ಅರಿವು ನಮಗಾದೀತು. ಎಷ್ಟೇ ಪ್ರತಿಭಟನೆಗಳಾದರೂ ಅಸ್ಪೃಶ್ಯತೆ ಮತ್ತು ಜಾತಿ ವಿನಾಶವನ್ನು ಮಾಡುವಲ್ಲಿ ಅವು ಯಶಸ್ವಿಯಾಗಿಲ್ಲ. "ಮಹಾತ್ಮರು ಬಂದರು, ಮಹಾತ್ಮರು

ಹೋದರು, ಆದರೆ ದಲಿತರ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ" ಎನ್ನುವ ಡಾ. ಅಂಬೇಡ್ಕರ್‌ರ ಮಾತು ವಸ್ತುಸ್ಥಿತಿಯನ್ನು ಎತ್ತಿ ತೋರಿಸುತ್ತದೆ.

ಅಸ್ಪೃಶ್ಯತೆಯ ವಿರುದ್ಧ ಪ್ರತಿಭಟನಾತ್ಮಕ ಹೋರಾಟ ನಿರಂತರತೆಯನ್ನು ಬಯಸುತ್ತದೆ. ಬುದ್ಧ-ಬಸವ-ಅಂಬೇಡ್ಕರ್‌ರವರ ಮಾರ್ಗ, ಕಾರ್ಯಸೂಚಿ, ಇಂದಿಗೂ ಈ ಹೋರಾಟಕ್ಕೆ ಮಾದರಿಯಾಗಬಲ್ಲದು. ಅಷ್ಟೇ ಅಲ್ಲ ಸ್ಫೂರ್ತಿ ಕೂಡ ಆಗಬಲ್ಲದು. ಅಸ್ಪೃಶ್ಯತೆಯ ವಿರುದ್ಧ ಹೋರಾಟ ಇನ್ನೂ ಮುಗಿದಿಲ್ಲ. ಅದು ಇನ್ನಷ್ಟು ಬೃಹತ್ತರವಾಗಬೇಕಾಗಿದೆ. ಈ ನಾಡಿನಲ್ಲಿ ಒಬ್ಬ ಮಾನವನೂ ಇದರ ಕಳಂಕ ಹೊತ್ತಿರುವವರೆಗೆ ಸಾಗಬೇಕಾಗಿದೆ. ಈ ಕಾರ್ಯಕ್ಕಾಗಿ ಬಸವಣ್ಣನ ಸೈದ್ಧಾಂತಿಕ ಹೋರಾಟ, ಸಾರಿದ ವಿಚಾರಗಳು, ಉಪದೇಶಗಳು ಇಂದು ಅತ್ಯವಶ್ಯಕ. ಅಸ್ಪೃಶ್ಯನಾಗಿ ಹುಟ್ಟಿ ಅಸ್ಪೃಶ್ಯರಿಗಾಗಿ ಹೋರಾಟ ನಡೆಸುವುದೇ ದುಸ್ತರವಾದ ಕಾಲದಲ್ಲಿ ಉತ್ತಮ ಕುಲದಲ್ಲಿ ಜನಿಸಿದ ಬಸವಣ್ಣನ ಹೋರಾಟ ಸ್ತುತ್ಯಾರ್ಹವೆನಿಸುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಜಾತಿಯನ್ನೇ ಮುಂದು ಮಾಡುವ ಜನರನ್ನು ಕಂಡು ಬಸವಣ್ಣ: "ಹೊಲೆಯೊಳಗೆ ಹುಟ್ಟಿ ಕುಲವನರಸುವೆ, ಎಲವೋ ಮಾತಂಗಿಯ ಮಗ ನೀನು, ಸತ್ತುದನೆಳೆವನೆತ್ತಣ ಹೊಲೆಯ"[112] ಎಂದು ನಿರ್ಭಿಡೆಯಿಂದ ಪ್ರಶ್ನೆ ಮಾಡುತ್ತಾನೆ. ಹೀಗೆ ಮೇಲು-ಕೀಲು ಎಂದೆನ್ನುವವರನ್ನು ಖಂಡಿಸುತ್ತಾನೆ. ಇಂದು ಕೂಡ ಪ್ರತಿರಂಗದಲ್ಲಿ ಜಾತಿಯನ್ನಾಧರಿಸಿ ವ್ಯಕ್ತಿಯನ್ನು ಅಳೆಯಲಾಗುತ್ತದೆ. ಆದರೆ ಬಹು ಹಿಂದೆಯೇ ಬಸವಣ್ಣನು" ದಲಿತ ಜನಾಂಗದಿಂದ ಬಂದ ಶರಣರನ್ನು ತನ್ನ ಅಪ್ಪ ಬೊಪ್ಪನೆಂದು ಅಪ್ಪಿಕೊಂಡ. ಯಾವ ದಲಿತ ಜನಾಂಗ ಶತಮಾನಗಳಿಂದಲೂ ಕತ್ತಲೆಯಲ್ಲಿತ್ತೋ ಅಂತಹ ಜನರ ಮುಖಂಡತ್ವದಲ್ಲಿ ಬಸವಣ್ಣ ಚಳುವಳಿ ಕಟ್ಟಿದ. ಯಾರು ಧರ್ಮ- ಸಮಾಜದಿಂದ ದೂರವಿದ್ದರೋ, ಅಂತಹವರನ್ನು ಧರ್ಮದ ಸಮಾಜದ ಪ್ರಮುಖ ಅಂಗವನ್ನಾಗಿ ಮಾಡಿದ. ವರ್ಣಾಶ್ರಮದ ವ್ಯವಸ್ಥೆಯಲ್ಲಿ, ಸಾಂಪ್ರದಾಯಿಕವಾದ ಗೊಂಡಾರಣ್ಯದಲ್ಲಿ, ರಾಜಸತ್ತೆಯ ಹಿಡಿತದಲ್ಲಿ ಅಧ್ಯಾತ್ಮ ಧರ್ಮವನ್ನುಳಿಕೊಂಡೂ ಬಸವಣ್ಣ ದಲಿತರನ್ನು ಬೆಳೆಸಿದ-ಬೆಳಗಿಸಿದ. "ಚೆನ್ನಯ್ಯನನ್ನು ಅಪ್ಪನೆಂದ, ಕಕ್ಕಯ್ಯನನ್ನು ಬೊಪ್ಪನೆಂದ; ಕಿನ್ನರ ಬೊಮ್ಮಯ್ಯನನ್ನು ಅಣ್ಣನೆಂದ 'ಕಕ್ಕಯ್ಯನ ಮನೆಯಲ್ಲಿ, ಚನ್ನಯ್ಯ-ದಾಸಯ್ಯರ ಮನೆಯಲ್ಲಿ ಭಕ್ತಿಯನ್ನು ಬೇಡಿದೆ"[113] ಎಂದು ವಿನಮ್ರವಾಗಿ ಹೇಳಿದ. "ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಬೆರಣಿ ಆರಿಸಲು ಹೋಗಿ ಸಂಗವ ಮಾಡಿದಾಗ ಹುಟ್ಟಿದ ಮಗ ನಾನು ಎಂದು ವಿವರಿಸಿದ. ಈ ವಚನಗಳು ಬಸವಣ್ಣನ ಹಿರಿಮೆಯನ್ನು ಸ್ಪಷ್ಟಪಡಿಸುತ್ತವೆ. ಯಾರು ಶತಮಾನಗಳಿಂದ ಶೋಷಣೆಗೆ, ನಿರ್ಲಕ್ಷಕ್ಕೆ ಒಳಪಟ್ಟ ಜನಾಂಗವಾಗಿತ್ತು. ಅವರನ್ನು ಶರಣರೆಂದು ಅವರ ಮುಂದಾಳತ್ವದಲ್ಲಿ ಪ್ರತಿಭಟನಾ ಚಳುವಳಿ ಕಟ್ಟಿದ್ದು, ಬಸವಣ್ಣನ ವಿಶಾಲತೆಗೆ, ಮಾನವೀಯತೆಗೆ, ಸಮಾನತೆಗೆ ಸಾಕ್ಷಿ. ಭಾರತದಂತಹ ದೇಶದಲ್ಲಿ ಶತಮಾನಗಳಿಂದ ಬೇರು ಬಿಟ್ಟಿದ್ದ ಜಾತಿವ್ಯವಸ್ಥೆಯನ್ನು ಮುರಿದ ಸಮಾನತೆ ತರಲು ಪ್ರಯತ್ನಿಸಿದ್ದು ಬಸವಪ್ರಜ್ಞೆ, ಬಸವಣ್ಣನ ಜಾತ್ಯಾತೀತ ಹೋರಾಟ ಇಂದಿಗೂ ಅನುಕರಣೀಯ. ಕೋಮು-ದಳ್ಳುರಿಯಿಂದ ದಹಿಸುತ್ತಿರುವ ಈ ಸಂದರ್ಭದಲ್ಲಿ ಅನಿವಾರ್ಯತೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ.

ಅಸ್ಪೃಶ್ಯತಾ ನಿವಾರಣೆಗಾಗಿ ಬಸವಣ್ಣ ಹೋರಾಡಿದ ನಂತರವೂ ಜನ ಮತ್ತೆ ಆತನ ಕುಲದ ಹಿನ್ನೆಲೆಯಲ್ಲಿ ಆತನನ್ನು ನೋಡಿದಾಗ "ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟದಹೊರೆಯ ಹೊರಿಸದಿರಯ್ಯ"[114] ಎಂದು ನಮ್ರವಾಗಿ ಕೇಳಿಕೊಳ್ಳುತ್ತಾನೆ. "ಹೊಲೆಯ ಹೊಲಬಿಗನಾದಡೆ-ಆತನ

ಹೊರೆಯಲಿಪ್ಪುದೇ ಲೇಸೆಂದು" ಸ್ಪಷ್ಟವಾಗಿ ಹೇಳಿದ್ದಾನೆ. ಸುಮಾರು 30 ವಚನಗಳಲ್ಲಿ ದಲಿತ ವರ್ಗದ ಶರಣರನ್ನು ಕುರಿತು ಬಸವಣ್ಣ ಹೇಳಿದ್ದಾನೆ. ಆತ ದಲಿತ ಸಮುದಾಯಕ್ಕಾಗಿ ಹೋರಾಡಿದ ಶ್ರೇಯಸ್ಸು ಇಂದಿಗೂ ಆದರ್ಶಪ್ರಾಯವಾಗಿದೆ.

ಅಸ್ಪಶ್ಯೋದ್ಧಾರ ಕಾರ್ಯ ಬಸವಣ್ಣನ ಬದುಕಿನಲ್ಲಿ ಆಕಸ್ಮಿಕವಲ್ಲ. ಅವರ ಜೀವನದ ಮಹೋದ್ದೇಶಗಳಲ್ಲಿ ಒಂದಾಗಿದ್ದಿತು. ಅವರ ಹಲವು ವಚನಗಳಲ್ಲಿ ಅಸ್ಪಶ್ಯತೆ ಆಚರಣೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿದೆ.

"ಜಾತಿವಿಡಿದು ಸೂತಕವನರಸುವೆ
ಜ್ಯೋತಿವಿಡಿದು ಕತ್ತಲೆಯನರಸುವೆ
ಇದೇಕೊ ಮರುಳು ಮಾನವಾ"[115]

ಎಂಬ ವಚನದಲ್ಲಿಯ ಅರ್ಥಗಳು ಪರಿಣಾಮಕಾರಿ. ಜ್ಯೋತಿಯನ್ನು ಹಿಡಿದು ಯಾರಾದರೂ ಕತ್ತಲನ್ನು ಹುಡುಕುವರೆ? ಎಂದು ನುಡಿದು ಜನಸಮುದಾಯದಲ್ಲಿ ಜಾತಿಯ ಬಗೆಗಿದ್ದ ಪ್ರೀತಿ ನಂಬಿಕೆಯನ್ನು ಪುನರ್ ಪರಿಶೀಲಿಸುವಂತೆ ಮಾಡಿದವು.

"ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು"[116]
"ಆವ ಕುಲವಾದಡೇನು? ಶಿವಲಿಂಗವಿದ್ದವನೇ ಕುಲಜನು"[117]
"ಜಾತಿಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ"[118]

ಹೀಗೆ ಹಲವಾರು ವಚನಗಳಲ್ಲಿ ಜಾತಿಯಾಧಾರಿತ, ಕುಲ ಸಂಬಂಧಿ ಹೇಳಿಕೆಗಳನ್ನು ನೇರವಾಗಿ ತಿರಸ್ಕರಿಸಿದ್ದಾನೆ. ಮನುಷ್ಯನಿಗೆ ಹುಟ್ಟು ಮುಖ್ಯವಲ್ಲ, ಆತನ ಗುಣ ಸ್ವಭಾವ, ನಡತೆಗಳು ಮುಖ್ಯವೆಂದು ಬಸವಣ್ಣ ಅನೇಕ ಸಂಪ್ರದಾಯಗಳನ್ನು ಕತ್ತರಿಸಿ ಹಾಕಿದ್ದಾನೆ.

"ಕೆಡಬೇಡ-ಮಾನವಾ! ಕುಲವನೆಚ್ಚಿ ಕೆಡಬೇಡ ಜಾತಿ-ಸೂತಕಗಳ ನಂಬಿ ಕೆಡಬೇಡ! ಜನ್ಮದಿಂದಲೇ ಕೆಲವರು ಕುಲಜರು, ಉಳಿದವರು ಕುಲಹೀನರೆಂಬ ವಾದ ಒಪ್ಪಿಕೊಳ್ಳಬೇಡ. ಮನುಜಕೃತವಾದ ಮೇಲು-ಕೀಳುಗಳು, ಸ್ಪಶ್ಯ ಅಸ್ಪಶ್ಯ ಭಾವನೆಗಳು ದೇವಕೃತವೆಂದು ದುರ್ಬೋಧೆಗೆ ಕಿವಿಗೊಟ್ಟು ಕೆಡಬೇಡ! ಮೇಲ್ಮೆಯನ್ನು ನೀಡುವುದು ಕುಲವಲ್ಲ ಶಿವನ ಒಲವು. ಆ ವರ್ಣ-ಈ ವರ್ಣ, ಆ ಕುಲ-ಈ ಕುಲ, ಆ ಜಾತಿ-ಈ ಜಾತಿಯವನೆಂದು ಕರೆದುಕೊಂಡು ಕೆಡಬೇಡ, ಭಕ್ತನಾಗಿ ಶರಣ ಸಮೂಹಕ್ಕೆ ಸೇರು! ಎಲ್ಲ ಕುಲಗಳೂ ಅಳಿದು, ತೊಳೆದು ಹೋಗುವಲ್ಲಿ! ತೊಳೆದುಕೊಳ್ಳಲು ಹೊಳೆಗೆ ಹೋಗುವಿರೇಕೆ! ಬಾ ಅನುಭವ ಮಂಟಪಕ್ಕೆ, ಶರಣರ ಸನ್ನಿಧಿಗೆ! ಹಿಂಡಲೇಕೋ? ತೊಳೆಯಲೇಕೋ? ಮುಳುಗಿಮುಳುಗಿ ಮೂಗ ಹಿಡಿಯಲೇಕೋ? ಕೂಡಲಸಂಗನ ಶರಣರಲ್ಲಿ ಡೋಹಾರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?[119] ಎಂದು ಮಾರ್ಮಿಕವಾಗಿ ಬಸವಣ್ಣ ನುಡಿದಿರುವುದು ಇಲ್ಲಿ ವ್ಯಕ್ತವಾಗುತ್ತದೆ.

"ವ್ಯಾಸ ಬೋಯತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು,
ಕುಲವನರಸದಿರಿಂ ಬೋ ಕುಲದಿಂದ ಮುನ್ನೇನಾದಿರಿಂ ಬೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ

ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ, ಕಾಣ ಬೋ
ನಮ್ಮ ಕೂಡಲ ಸಂಗನ ವಚನವಿಂತೆಂದುದು
ಶ್ವಪಚೋಪಿಯಾದಡೇನು, ಶಿವಭಕ್ತನೇ ಕುಲಜಂ ಬೋ ।[120]

ಬಸವಣ್ಣ ಈ ಮೇಲಿನ ವಚನದಲ್ಲಿ ದಲಿತರ ಸಮಾನತೆಗಾಗಿ ಶ್ರಮಿಸಿದನು ಎಂಬುದು ವ್ಯಕ್ತವಾಗಿದೆ. ್ಯಾಸ, ಮಾರ್ಕಂಡೇಯ, ಮಂಡೋದರಿ, ಅಗಸ್ತ್ಯ, ದೂರ್ವಾಸ, ಕಶ್ಯಪ, ಕೌಂಡಿನ್ಯ ಈ ಮುಂತಾದವರ ಾಧನೆಯನ್ನು ಅವರು ಹುಟ್ಟಬಂದ ಕುಲವನ್ನು ಜನರ ಮುಂದಿಟ್ಟು ಹುಟ್ಟಿಗೂ-ಸಾಧನೆಗೂ ಯಾವ ಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ. ಈ ಎಲ್ಲ ಮಹಾನ್ ವ್ಯಕ್ತಿಗಳು ಕೀಳು ಕುಲದಲ್ಲಿ ಹುಟ್ಟಿ ಅನುಪಮ ಾಧನೆ ಮಾಡಿದ ಕಟುವಾಸ್ತವ ಸತ್ಯವನ್ನು ಪ್ರಸ್ತುತಪಡಿಸಿದ. ಬಸವಣ್ಣನ ಪ್ರತಿಭಟನೆಯ ಅಂತಿಮ ಗುರಿಯೇ ದಲಿತರಿಗೆ ದುಡಿಯುವ ವರ್ಗದವರಿಗೆ ಸಮಾನತೆಯ ಬದುಕನ್ನು ಕೊಡುವುದಾಗಿತ್ತು. ಈ ಸತ್ಯವನ್ನು ಅರ್ಥ ಮಾಡಿಕೊಂಡಾಗ ನಮಗೆ ದಲಿತ ವಿಮೋಚನೆಗೆ ಸಂಬಂಧಿಸಿದಂತೆ ಡಾ। ಅಂಬೇಡ್ಕರ್‌ರಂತೆ ಬಸವಣ್ಣನೂ ಅತ್ಯಂತ ಪ್ರಮುಖನಾಗಿ ಕಾಣುತ್ತಾನೆ. ಬಸವ ತತ್ವವನ್ನು ಜಪಿಸುತ್ತಾ ಹೇಳುತ್ತ ದಲಿತರ ಮೇಲೆ ದೌರ್ಜನ್ಯವೆಸಗಿ, ಅವರನ್ನು ಸುಡಲು ಪ್ರಯತ್ನಿಸುವ, ದಲಿತರಿಗೆ ಮಲ ತಿನ್ನಿಸಿದ ಜಾತಿವಾದಿಗಳು ಇಂದು ಎಚ್ಚೆತ್ತುಕೊಂಡು ಬಸವಣ್ಣನ ವ್ಯಕ್ತಿತ್ವವನ್ನು, ನಿಜತತ್ವವನ್ನು ಮರುಪರಿಶೀಲಿಸಿಕೊಂಡು ವಚನಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ತನ್ನನ್ನು ತಾನು ಅರಿತವನು ಜಾತಿ ಭೇದ ಮಾಡದೆ ಮಾನವ ಕುಲ ಂದೇ ಎಂದು ಭಾವಿಸುತ್ತಾನೆ. ಇದನ್ನು ತಮ್ಮ ಈ ವಚನದಲ್ಲಿ ಸಮರ್ಥಿಸಿದ್ದಾರೆ. "ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ ಜಲವೊಂದೆ ಶೌಚಾಚಮನಕ್ಕೆ ಕುಲವೊಂದೆ ತನ್ನ ತಾನರಿಯದವಂಗೆ"(ಬ.ವ.ಸಂ: 993: ಪುಟ 229) ಲಿಂಗದೇವನನ್ನು ಪೂಜಿಸುವ ವೀರಶೈವರು ಜನರ ಜಾತಿಯನ್ನು ನೋಡಬಾರದು ಎಂದು ಬಸವಣ್ಣ ತಮ್ಮ ಅನುಯಾಯಿಗಳಿಗೆ ಕರೆ ನೀಡುತ್ತಾರೆ. "ಸಕಲ ಜೀವಾತ್ಮರಿಗೆ ಲೇಸನು ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು" ಎಂದಿದ್ದಾರೆ.

ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಅಂತರ್ಜಾತಿ ವಿವಾಹಗಳು ಅನಿವಾರ್ಯವೆಂದು ಡಾ. ಅಂಬೇಡ್ಕರ್ ಇಪ್ಪತ್ತನೆಯ ಶತಮಾನದಲ್ಲಿ ಪ್ರತಿಪಾದಿಸಿದ್ದಾರೆ. ಆದರೆ ಬಸವಣ್ಣ ಎಂಟು ಶತಮಾನಗಳ ಂದೆಯೇ ಅಂತ್ಯಜನಾದ ಹರಳಯ್ಯನ ಮಗ ಮತ್ತು ಬ್ರಾಹ್ಮಣನಾದ ಮಧುವಯ್ಯನ ಮಗಳ ನಡುವೆ ಈ ೀತಿಯ ವಿವಾಹ ಏರ್ಪಡಿಸಿದ್ದರು. ಆ ಕಾಲದ ಹಿನ್ನೆಲೆಯಲ್ಲಿ ಇದೊಂದು ಕ್ರಾಂತಿಕಾರಕ ದಿಟ್ಟ ಹೆಜ್ಜೆಯೆಂಬುದರಲ್ಲಿ ಎರಡು ಮಾತಿಲ್ಲ" ವರ್ಣ ಸಂಕರದ ಮೂಲಕ ಶ್ರೇಣೀಕರಣ ವ್ಯವಸ್ಥೆ ಮುರಿಯುವ ಾರ್ಯ ನಡೆದದ್ದೇ ಈ ಶರಣ ಚಳುವಳಿಯಿಂದ" ಎಂದು ಜಿ.ಎಸ್. ಶಿವರುದ್ರಪ್ಪ ಬರೆಯುತ್ತಾರೆ. ಹೀಗೆ ಅಸ್ಪೃಶ್ಯತಾ ನಿವಾರಣೆಯನ್ನು ಕುರಿತಂತೆ ಬುದ್ಧನ ನಂತರ ಅತಿ ಹೆಚ್ಚಿನ ಕಳಕಳಿಯನ್ನು ವ್ಯಕ್ತಪಡಿಸಿದವರೆಂದರೆ ಬಸವಣ್ಣ.

3.8 ಲಿಂಗ - ತಾರತಮ್ಯದ ವಿರುದ್ಧ ಪ್ರತಿಭಟನೆ :

12ನೇ ಶತಮಾನದಲ್ಲಿ ಸ್ತ್ರೀಯರ ಸ್ಥಾನಮಾನ ಕೆಳಮಟ್ಟದ್ದಾಗಿತ್ತು. ಅವರ ಗುರುತರ ಶಿಕ್ಷಣಕ್ಕೆ ಅರ್ಹರಲ್ಲ ಎಂಬುದು ಸಾಮಾನ್ಯ ಭಾವನೆಯಾಗಿತ್ತು. "ಪುರುಷನಿಗಿಂತ ಸ್ತ್ರೀಯು ಸಾಮಾಜಿಕ ಅಂತಸ್ತು ಸಾಮಾನ್ಯವಾಗಿ ಕೆಳಮಟ್ಟದ್ದೆಂದು ಭಾವಿಸುವ ವಾಡಿಕೆಯಿತ್ತು. ಅಡುಗೆ ಮನೆಯೇ ಸ್ತ್ರೀಯ ಪಾಠಶಾಲೆ,

ಪತಿಯೇ ದೈವ ಹಾಗೂ ಅವಳ ಮೋಕ್ಷಕ್ಕೆ ಪ್ರತಿಭಕ್ತಿಯೇ ಮಾರ್ಗ ಎಂಬುದು ಸಾಮಾನ್ಯ ನಂಬಿಕೆಯಾಗಿತ್ತು"[121] ಸಾಮಾನ್ಯವಾಗಿ ಪುರುಷರಿಗಿರುವಂತಹ ಸೌಲಭ್ಯಗಳು, ಹಕ್ಕುಗಳು ಸ್ತ್ರೀಯರಿಗೆ ಇರಲಿಲ್ಲ. ಸಾಮಾಜಿಕವಾಗಿ ಸ್ತ್ರೀಯರು ಪುರುಷರಿಗಿಂತ ಕೆಳಗಿನವರೆಂದು ಭಾವಿಸಲಾಗಿತ್ತು. ಅವರ ಕಾರ್ಯಕ್ಷೇತ್ರ ಮನೆಗೆ ಸೀಮಿತವಾಗಿತ್ತು." ಅಂಥದೊಂದು ಸನ್ನಿವೇಶದಲ್ಲಿ ಬಸವಣ್ಣನವರೂ ಅವರ ಸಂಗಡಿಗರೂ, ಸ್ತ್ರೀಯರ ಬಗೆಗಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿದರು. ನ್ಯಾಯವಾಗಿ ದೊರಕಬೇಕಾದಂತಹ ಸ್ವಾತಂತ್ರ್ಯದ ಅವಕಾಶವನ್ನು ಅವರಿಗೆ ಕಲ್ಪಿಸಿ ಕೊಡಬೇಕೆಂದು ಘೋಷಿಸಿದರು".[122] ಸ್ತ್ರೀಯರಿಗೆ ಉತ್ತಮ ಶಿಕ್ಷಣ ಪಡೆಯುವ ಹಕ್ಕು, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಹಕ್ಕು, ಸಾರ್ವಜನಿಕ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕು, ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಧಾರ್ಮಿಕ ಆಚರಣೆಗಳನ್ನು ಕೈಗೊಳ್ಳುವ ಹಕ್ಕನ್ನು ಒದಗಿಸಿ ಕೊಡಲು ಶ್ರಮಿಸಿದರು. ಆ ಕಾಲದಲ್ಲಿ ಸ್ತ್ರೀಯರೆಂದರೆ ಮಾಯೆಯೆಂದು ಭಾವಿಸಲಾಗಿತ್ತು. ಈ ಕಾರಣದಿಂದಲೇ ಎಲ್ಲ ಕೆಡಕುಗಳ ಮೂಲವೆಂದು ಭಾವಿಸಲಾಗಿತ್ತು. ಸ್ತ್ರೀಯರಿಗೆ ಇಂಥ ಯಾವುದೇ ಕಳಂಕವನ್ನು ಹಚ್ಚುವುದನ್ನು ಬಸವಣ್ಣನವರು ಸಹಿಸಲಿಲ್ಲ.

ಭಾರತದಲ್ಲಿ ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಗಳಂತೆ ಕಾಣುತ್ತಿರುವುದಕ್ಕೆ ವೈದಿಕ ಶಾಸ್ತ್ರಗಳೇ ಕಾರಣ. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" -ಸ್ತ್ರೀ ಸ್ವಾತಂತ್ರ್ಯ ಪಡೆಯಲು ಅರ್ಹರಾಗಿಲ್ಲವೆಂದು ಮನುಸ್ಮೃತಿ ಹೇಳುತ್ತದೆ. 12ನೇ ಶತಮಾನದಲ್ಲಿ ಇದೇ ಪರಿಸ್ಥಿತಿ ಇತ್ತು. ಇದನ್ನು ಬಸವಣ್ಣ ವಿರೋಧಿಸಿದ. ಸ್ತ್ರೀ-ಪುರುಷರಿಬ್ಬರೂ ಸಮಾನರೆಂದು ಹಲವು ಶರಣರು ಲಿಂಗತಾರತಮ್ಯ ವಿರೋಧಿ ವಚನಗಳನ್ನು ರಚಿಸಿ ಆದರಂತೆ ಬದುಕಲೆತ್ನಿಸಿರುವುದು ತುಂಬಾ ಮಹತ್ವದ್ದಾಗಿದೆ. 11ನೇ ಶತಮಾನದ ಶರಣ ದೇವರದಾಸಿಮಯ್ಯನು ಸ್ತ್ರೀಯರೊಂದಿಗೆ ಗೌರವದಿಂದ ವ್ಯವಹರಿಸುವುದರ ಪರವಾಗಿ ಧ್ವನಿಯನ್ನೆತ್ತಿದ್ದಾನೆ. ಅವನೆಂದಂತೆ,

ನೀಡಿದೊಂದು ಕೋಲನು ಕಡಿದು ಎರಡು ಮಾಡಿ
ಅಡಿಯ ಹೆಣ್ಣ ಮಾಡಿ
ಒಡತೂದ ಗಂಡ ಮಾಡಿ ನಡುವೆ ಹೊಸೆದಡೆ
ಹುಟ್ಟಿದ ಕಿಚ್ಚು ಹೆಣ್ಣೋ ಗಂಡೋ ರಾಮನಾಥ

ಸ್ತ್ರೀ ಪುರುಷರಿಬ್ಬರು ಸಮಾನರೆಂಬುದನ್ನು ಲೌಕಿಕ ಉದಾಹರಣೆಯೊಡನೆ ಸ್ಪಷ್ಟ ಮಾಡಲಾಗಿದೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ
ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ?

ಪ್ರಾಣವಾಗಲೀ, ಆತ್ಮವಾಗಲೀ ಹೆಣ್ಣೂ ಅಲ್ಲ, ಗಂಡೂ ಅಲ್ಲ, ಬಾಹ್ಯರೂಪವನ್ನು ಆಧಾರವಾಗಿಸಿಕೊಂಡು ಮೇಲು-ಕೀಳು ಎಂದು ತಾರತಮ್ಯ ಮಾಡುವುದರಲ್ಲಿ ಅರ್ಥವಿಲ್ಲ ಎಂದು ದೇವರದಾಸಿಮಯ್ಯ ಮಾರ್ಮಿಕವಾಗಿ ಹೇಳಿದ್ದಾನೆ.

"ಬಸವಣ್ಣನವರೂ ಮತ್ತಿತರ ಶರಣರೂ ದೇವರದಾಸಿಮಯ್ಯನವರಿಂದಲೇ ಈ ವಿಚಾರವನ್ನು ಕಲಿತರು, ಸ್ತ್ರೀಯರನ್ನು ದಾಸ್ಯದಿಂದ ವಿಮೋಚನೆಗೊಳಿಸುವುದನ್ನು ತಮ್ಮ ಕ್ರಾಂತಿಯ ಧ್ಯೇಯ ಮಂತ್ರಗಳಲ್ಲಿ ಒಂದನ್ನಾಗಿ ಅವರು ಮಾಡಿಕೊಂಡರು"[123] ಮಹಿಳೆಯರ ವಿಮೋಚನೆಯಷ್ಟೇ ಅಲ್ಲ. ಬಸವಣ್ಣನ ಪ್ರಭಾವದಿಂದ ಅನೇಕ ಮಹಿಳೆಯರು ವಚನಕಾರ್ತಿಯರಾಗಿ ಬೆಳಗಿದರು. ಆದರೆ ಇಂದಿನ ಸ್ತ್ರೀ ಸ್ವಾತಂತ್ರ್ಯದ ಪರಿಕಲ್ಪನೆಗೂ ಶರಣರ ಸ್ತ್ರೀ ಸಮಾನತೆ, ಗೌರವದಪರಿಕಲ್ಪನೆಯಲ್ಲಿ ಪುರುಷ ದ್ವೇಷ ನುಸುಳಿದೆ. ಶರಣರಲ್ಲಿ ಅದಿಲ್ಲ. ಸಮಾನತೆ ಇದೆ. ಬಸವಣ್ಣನವರ ಮಹಿಳಾ ಹೋರಾಟದ ಗುರಿ ಸಾಂಸ್ಕೃತಿಕ-ಆರ್ಥಿಕ-ಸಾಮಾಜಿಕ ಸಮಾನತೆಯನ್ನು ಪಡೆಯುವುದಾಗಿತ್ತು. ಅನೇಕ ಜನ ವಚನಕಾರ್ತಿಯರು ಬೆಳೆದು, ಕೆಲವರು ಬಸವಣ್ಣನನ್ನೇ ಪ್ರಶ್ನಿಸುವ ಹಂತದವರೆಗೂ ಬೆಳೆದುನಿಂತರು.

ಬಸವಣ್ಣನ ಸಂಗಡಿಗ ಶರಣರು ಹೆಣ್ಣು ಮಾಯೆಯಲ್ಲವೆಂದು ಹೇಳಿ ಸಮಾನತೆ ಸಾರಿದ್ದಾರೆ. "ಹೆಣ್ಣು ಮಾಯೆಯಲ್ಲವೆಂದೂ ಅವಳು ದೈವೀ ಸ್ವರೂಪಳೆಂದೂ" ಸಿದ್ಧರಾಮ ಹೇಳಿದ್ದಾನೆ. "ಮನದ ಮುಂದಣ ಆಸೆಯೇ ಮಾಯೆ" ಎಂದು ಅಲ್ಲಮಪ್ರಭು ಹೇಳಿದ್ದಾನೆ. "ಸ್ತ್ರೀ-ಪುರುಷರು ಎರಡು ಕಣ್ಣುಗಳಂತೆ; ಒಂದು ಕಣ್ಣು ಇನ್ನೊಂದಕ್ಕಿಂತ ಶ್ರೇಷ್ಠವೆಂದೂ ವಾದಿಸುವಂತಿಲ್ಲವೆಂದು ಅಲ್ಲಮಪ್ರಭು ಮತ್ತೊಂದು ವಚನದಲ್ಲಿ ಹೇಳಿದ್ದಾನೆ. 12ನೇ ಶತಮಾನದಲ್ಲಿ ಶರಣರು ಸ್ತ್ರೀಯರಿಗೆ ವಿವಿಧ ವೃತ್ತಿ ಕೈಗೊಳ್ಳಲು ಅವಕಾಶ ನೀಡಿದರು. ಪುರುಷರಂತೆ ಅಧ್ಯಾತ್ಮಿಕ ಸಾಧನೆಗೂ ಅವಕಾಶ ಮಾಡಿಕೊಂಡಿದ್ದರು." ಆ ಶತಮಾನದ ಅನುಭವಿ ಶರಣರಲ್ಲಿ ವಚನಗಳನ್ನು ರಚಿಸಿದ ಕನಿಷ್ಟ ಮೂವತ್ತೆರಡು ಮಂದಿ ಸ್ತ್ರೀಯರನ್ನಾದರೂ ನಾವು ಕಾಣುತ್ತೇವೆ"[124] ಎಂದು ಡಾ। ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಬಸವಣ್ಣನ ಪತ್ನಿಯರಾದ ನೀಲಲೋಚನೆ ಮತ್ತು ಗಂಗಾಂಬಿಕೆ, ಅಕ್ಕ ನಾಗಲಾಂಬಿಕೆಯವರು ವಚನಗಳನ್ನು ರಚಿಸಿದ್ದಾರೆ. ಹಗ್ಗ ಹೊಸೆಯುವ ಅಮ್ಮವ್ವೆ, ಒಬ್ಬಟ್ಟಿನ ಪಿಟ್ಟವ್ವೆ. ಕೊಟ್ಟಣದ ಸೋಮವ್ವೆಯರೂ ವಚನ ರಚಿಸಿದ್ದಾರೆ. ಅಕ್ಕಮಹಾದೇವಿ, ರಾಣಿಮಹಾದೇವಿ, ಮುಕ್ತಾಯಕ್ಕ, ಲಕ್ಕಮ್ಮ ಅಧ್ಯಾತ್ಮಿಕ ಉನ್ನತಿ ಸಾಧಿಸಿದ ಮಹಾನುಭಾವಿಗಳಾಗಿದ್ದರು. ಅನೇಕ ಸ್ತ್ರೀಯರು ಸುಶಿಕ್ಷಿತರಾಗಿದ್ದರು. "ಬಸವಣ್ಣನವರ ಮನೆಯಲ್ಲಿ ನಡೆಯುವ ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು".[125] ತಮ್ಮ ಸಾಮರ್ಥ್ಯದಿಂದ ಸಾಮಾಜಿಕ-ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದುದು ವಿಶೇಷವಾಗಿತ್ತು. ಇವೆಲ್ಲವುಗಳು ಶರಣರ ಸಮಾನತೆಯ ಹೋರಾಟದ ಗುರಿಗಳಾಗಿದ್ದವು. ಈ ಹಿನ್ನೆಲೆಯಲ್ಲಿ ಬಸವಣ್ಣನ ಪಾತ್ರವೂ ದೊಡ್ಡದಾಗಿತ್ತು. ಅವರ ಅವರ ಅನೇಕ ವಚನಗಳಲ್ಲಿ ಈ ಪ್ರಜ್ಞೆ ವ್ಯಕ್ತವಾಗಿದೆ.

"ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ" [126]

"ಧೃತಿಗೆಟ್ಟು ಅನ್ಯರ ಬೇಡದಂತೆ
ಮತಿಗೆಟ್ಟು ಪರರ ಹೊಗಳದಂತೆ
ಪರಸತಿಯರ ರತಿಗೆ ಮನ ಹಾರದಂತೆ
ಎನ್ನ ಪ್ರತಿ ಪಾಲಿಸು, ಕೂಡಲಸಂಗಮದೇವಾ" [127]

ಈ ಎರಡು ವಚನಗಳಲ್ಲಿ ಪರಸತಿಯರ ಬಗೆಗೆ ಗೌರವ ವ್ಯಕ್ತವಾಗಿದೆ. ಪರಸತಿಯನೊಲ್ಲೆನೆಂಬ ಛಲವಿರಬೇಕೆಂದು ಬಸವಣ್ಣ ಸಾರುವುದರೊಂದಿಗೆ ಸಮಾಜದಲ್ಲಿ ಉದಾತ್ತ ಮೌಲ್ಯಗಳನ್ನು ಬೆಳೆಸಿದ. ಸ್ತ್ರೀಯರ ಬಗೆಗೆ ವಿಶೇಷ ಗೌರವ ಹೊಂದಿದ ಬಸವಣ್ಣ ಅವರಿಗೆ ಸಮಾನ ಅವಕಾಶ ಕಲ್ಪಿಸಿ, ಸಮಾಜ ವ್ಯವಸ್ಥೆಯಲ್ಲಿ ಆಕೆ ಚೈತನ್ಯಶೀಲಳು, ಚಲನಶೀಲಳು ಎಂದು ಸ್ಪಷ್ಟಪಡಿಸಿದ್ದಾನೆ. ಸಂಪ್ರದಾಯದಿಂದ ಬಂಧಿಯಾಗಿದ್ದ ಸ್ತ್ರೀಯರು ಸ್ವತಂತ್ರವಾಗಿ ಧರ್ಮಗ್ರಂಥಗಳ ಅಧ್ಯಯನ ಮಾಡಲು, ಧಾರ್ಮಿಕ ಆಚರಣೆಯಲ್ಲಿ ಪಾಲ್ಗೊಳ್ಳಲು ಸಮರ್ಥಳು ಮತ್ತು ಸಮಾನಳು ಎಂದು ಅಂದಿನ ಶರಣರು ಸಾಬೀತುಪಡಿಸಿದರು. ಸ್ತ್ರೀಯರ ಬಗ್ಗೆ ಬಸವಣ್ಣನವರಿಗಿದ್ದ ನಿಲುವುಗಳನ್ನು ಈ ವಚನಗಳಲ್ಲಿ ಕಾಣಬಹುದಾಗಿದೆ.

"ಒಲ್ಲೆನಯ್ಯ ಪರಸತಿಯರ ಸಂಗವ"[128]

ಅನ್ಯವಧುವೆಂಬುದು ನಿಮ್ಮ ರಾಣಿವಾಸ"[129]

"ಪರವಧುವನು ಮಾದೇವಿಯೆಂಬೆ"[130]

"ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ"[131]

ಬಸವನ ಈ ನುಡಿಗಳಲ್ಲಿ ಆತನ ನಿರ್ಮಲ ಮನಸ್ಸು, ಉದಾತ್ತತೆಯೊಂದಿಗೆ ಸ್ತ್ರೀಯರನ್ನು ಗೌರವದಿಂದ ಕಾಣಬೇಕು, ಕೀಳೆಂದು ಭಾವಿಸದೇ ಸಮಾನತೆಯಿಂದ ಕಾಣಬೇಕು ಎಂಬ ಭಾವ ವ್ಯಕ್ತವಾಗಿದೆ.

ಹೆಣ್ಣು ಮಾಯೆ, ರಾಕ್ಷಸಿ, ಚಂಚಲೆ, ಪಾಪಿ - ಎಂಬಂತಹ ನಂಬಿಕೆಗಳಿರುವ ಆ ಸಂದರ್ಭದಲ್ಲಿ ಬಸವಣ್ಣ ಕೈಗೊಂಡ ನಿರ್ಧಾರಗಳು ತುಂಬಾ ಮಹತ್ವದ್ದೆನಿಸುತ್ತವೆ. ಹೆಣ್ಣನ್ನು ದೇವರಿಂದ, ಧರ್ಮದಿಂದ ದೂರ ಇಡಲಾಗಿತ್ತ. ಹೆಣ್ಣು ಹೊಲೆಯೆಂದ ಭಾವಿಸಲಾಗಿತ್ತು. ಮುಟ್ಟಿನ ಕಾರಣ ಮಡಿ-ಮೈಲಿಗೆಯನ್ನು ಹೇಳಲಾಗುತ್ತಿತ್ತು. ದೇವರನ್ನು ಮುಟ್ಟುವುದಿರಲಿ, ದೂರದಿಂದ ನೋಡುವುದು ಸ್ತ್ರೀಯರಿಗೆ ಆಗ ಅಸಾಧ್ಯವಾಗಿತ್ತು. ಅಂತಹ ಸಂದರ್ಭದ ಬಸವಣ್ಣನ ಈ ವಚನ ಪ್ರಮುಖವೆನಿಸುತ್ತದೆ.

"ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು
ನೆನೆಯೊಳಗಣ ಪರಿಮಳದಂತಿದ್ದಿತ್ತು
ಕೂಡಲ ಸಂಗಮದೇವರ ನಿಲುವು
ಕನ್ನೆಯ ಸ್ನೇಹದಂತಿದ್ದಿತ್ತು "[132]

ಈ ವಚನದಲ್ಲಿ ಸ್ತ್ರೀಯರಿಗೆ ಸಂಬಂಧಿಸಿದಂತೆ ಕ್ರಾಂತಿಕಾರಕ ಬದಲಾವಣೆಯಿದೆ. ದೇವರಿಗೂ-ಕನ್ಯೆ(ಹೆಣ್ಣಿ)ಗೂ ಅಜಗಜಾಂತರ ದೂರವಿದ್ದ ಆ ಕಾಲದಲ್ಲಿ "ಕನ್ಯೆಯ ಸ್ನೇಹವೇ ಕೂಡಲಸಂಗಮದೇವರ ನಿಲುವು" ಎಂದು ಬಸವಣ್ಣ ಹೇಳಿರುವುದು ಇಂದು ಕೂಡ ಪ್ರಸ್ತುತವೆನಿಸುತ್ತದೆ. ಅವಳಿದ್ದರೆ ದೇವರಿಲ್ಲವೆಂಬ ನಂಬಿಕೆ ಹೊಂದಿದ್ದ ಆ ಕಾಲದಲ್ಲಿ, ಅವಳಿಂದಲೇ ದೇವರು ಎಂದು ಹೇಳಿರುವುದು ಬಸವಣ್ಣನ ನಿಜವಾದ ಕ್ರಾಂತಿ. ಹೀಗಾಗಿ ಸ್ತ್ರೀಯರಿಗೆ ನಿಜವಾದ ಸ್ವಾತಂತ್ರ್ಯ ಸಮಾನತೆ ಪರಿಕಲ್ಪನೆಗಳು ಸಾಧ್ಯವಾದವು. ಎಲ್ಲಾ ವಚನಕಾರ್ತಿಯರು ತಮ್ಮ ವಚನಗಳಲ್ಲಿ ಬಸವಣ್ಣನ ಬಗ್ಗೆ ಧನ್ಯತೆಯ ಭಾವವನ್ನು ವ್ಯಕ್ತಪಡಿಸಿದ್ದಾರೆ.

"ಬಸವಣ್ಣನೇ ತನಗೆ ದಾರಿದೀಪ"ವೆಂದು ಅಕ್ಕಮಹಾದೇವಿ ಹೇಳಿದರೆ, 'ಎನ್ನ ಭಾವಕ್ಕೆ ಗುರುವಾದನಯ್ಯ ಬಸವಣ್ಣ" ನೆಂದು ಮುಕ್ತಾಯಕ್ಕ ಹೇಳುತ್ತಾಳೆ" ಎನ್ನ ಸ್ಥೂಲ ತನುವೆ ಬಸವಣ್ಣನಯ್ಯ' ಎಂದು ಕದಿರ ರೆಮ್ಮವ್ವೆ ಹೇಳಿದರೆ," ಗುರುವಿಂಗೆ ಗುರುವಾಗಿ ಎನಗೆ ಗುರುವಾದನಯ್ಯ ಬಸವಣ್ಣನ" ಎಂದು ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಕೃತಜ್ಞತೆ ಸೂಚಿಸುತ್ತಾಳೆ"[133].-ಹೀಗೆ ಸ್ತ್ರೀ-ಪುರುಷರ ಸಮಾನತೆಯ ಈ ಮೌಲ್ಯಕ್ಕೆ ಪುನರ್ಜೀವ ಕೊಟ್ಟವರೂ ಬಸವಣ್ಣ, ಕಾಯಕ ಕೈಗೊಳ್ಳುವುದಕ್ಕೆ ಶಿವತ್ವ ಸಾಧನೆಗೆ, ಲಿಂಗದೀಕ್ಷೆಗೆ, ಜಂಗಮ ದಾಸೋಹಕ್ಕೆ ಹೆಣ್ಣಾದರೇನು -ಗಂಡಾದರೇನು? ಎಂದು ಪ್ರಶ್ನಿಸುವ ಅವರು ಸ್ತ್ರೀ ಸಾಮರ್ಥ್ಯಕ್ಕೆ ಒಂದು ಹೊಸ ಆಯಾಮವನ್ನೇ ನೀಡಿದರು. ಅಷ್ಟೇ ಅಲ್ಲ, "ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ" ಎಂಬ ವಾದವಿದ್ದು, ಆ ಕಾಲದಲ್ಲಿ ಸ್ತ್ರೀ - ಪುರುಷರ ಸಮಾನತೆಯ ಘೋಷಣೆಯನ್ನು ಮೊಳಗಿಸಿದ್ದ ಕ್ರಾಂತಿಕಾರಕ ಪ್ರಯತ್ನವಾಗಿತ್ತು. ಸ್ತ್ರೀ ವಿಮೋಚನಾ ಚಳುವಳಿಗೆ ಅಂದೇ ನಾಂದಿ ಹಾಡಿದರು. ಸ್ತ್ರೀಯರಿಗೂ ಲಿಂಗ ಧರಿಸುವ, ಶಿವಾರಾಧನೆ ಮಾಡುವ, ವಿಧವಾ ವಿವಾಹಕ್ಕೆ ಅವಕಾಶ ನೀಡಿದರು. ಬಹಿಷ್ಟೆಯಾಗಿದ್ದಾಗ ಮೈಲಿಗೆಯ ಆಚರಣೆ ತೊಡೆದು ಹಾಕಿದರು. ಧಾರ್ಮಿಕ ಚರ್ಚೆಗೆ ಮುಕ್ತ ಅವಕಾಶವನ್ನು" ಅನುಭವ ಮಂಟಪದಲ್ಲಿ" ನೀಡಿದರು. ಇದರಿಂದಾಗಿ ಹಲವಾರು ಜನ ವಚನಕಾರ್ತಿಯರು ಬೆಳೆದು ಬಂದರು. ಅಲ್ಲಮಪ್ರಭುವಿಗಿದ್ದಷ್ಟೇ ಸ್ಥಾನ ಅಕ್ಕಮಹಾದೇವಿಗೂ ಕಲ್ಪಿಸಿ ಕೊಡಲಾಯಿತು.

ಆಯ್ದಕ್ಕಿ ಲಕ್ಕಮ್ಮ ಅತಿಯಾಸೆಯಿಂದ ಅಕ್ಕಿ ಬಳಿದುಕೊಂಡು ಬಂದ ತನ್ನ ಪತಿ-ಮಾರಯ್ಯನಿಗೆ ಬುದ್ಧಿ ಹೇಳಿದರೆ, ಗೊಗ್ಗವ್ವೆ ಗಂಡು ಹೆಣ್ಣಿನ ನಡುವಿರುವ ಅಸಮಾನತೆಯನ್ನು ಎತ್ತಿ ತೋರಿಸಿ, ಇದೇ ವ್ಯವಸ್ಥೆಯನ್ನೇ ಪ್ರಶ್ನಿಸುತ್ತಾಳೆ. ರೆಮ್ಮವ್ವೆ, ರೇಕಮ್ಮ, ಸತ್ಯಕ್ಕ, ಸಂಗಮ್ಮ, ರೇಚವ್ವ, ಸೋಮಮ್ಮ, ಗುಡ್ಡವ್ವೆ, ಸಂಕವ್ವೆ, ಕಾಳವ್ವೆ ಈ ಮುಂತಾದ ವಚನಕಾರ್ತಿಯರು ಮಹಿಳಾ ವಿಮೋಚನೆಯ ಸೈದ್ಧಾಂತಿಕ ತತ್ವಗಳನ್ನು ರೂಪಿಸುತ್ತ, ಬಸವಣ್ಣ ಕಲ್ಪಿಸಿ ಕೊಟ್ಟ ಅವಕಾಶಕ್ಕಾಗಿ ಕೃತಜ್ಞರಾಗಿದ್ದಾರೆ. ಅನೇಕ ವಚನಕಾರ್ತಿಯರನ್ನು ಬೆಳಕಿಗೆ ತಂದ ಬಸವಣ್ಣ ಲಿಂಗ ತಾರತಮ್ಯವನ್ನು ಅಳಿಸಿ ಹಾಕಿ ಮಹಿಳಾ ವಿಮೋಚನೆಯ ಹರಿಕಾರನಂತೆ ಗೋಚರಿಸುತ್ತಾನೆ." ಪ್ರಾಚೀನ ಭಾರತೀಯ ತತ್ವ ಸಿದ್ಧಾಂತ" ವ್ಯಕ್ತಿ ಶುದ್ಧಿ"ಯ ಬಗೆಗೆ ಒತ್ತು ಕೊಟ್ಟು "ಸಮಾಜ ಶುದ್ಧಿ" ಯನ್ನು ಉಪೇಕ್ಷಿಸುತ್ತಾನೆ. ಬಸವ ಸಿದ್ಧಾಂತ ಮಾತ್ರ ವ್ಯಕ್ತಿ ಶುದ್ಧಿಯಲ್ಲಿ ಬಿಚ್ಚಿಕೊಂಡು ಸಮಾಜ ಶುದ್ಧಿಯಲ್ಲಿ ವಿಸ್ತಾರಗೊಳ್ಳುತ್ತದೆ. ಸಮಾಜ ಶುದ್ಧವಾಗುವುದೆಂದರೆ, ಸಮಾಜದಲ್ಲಿ ಸಮಾನತೆಯನ್ನು ತರುವುದು.[134] ಬಸವಣ್ಣನವರು ಇದನ್ನು ಚೆನ್ನಾಗಿ ಅರಿತಿದ್ದರು ಎಂದೂ ಹೇಳಲಾಗಿದೆ. ಸ್ತ್ರೀಯರಿಗೆ ಲಿಂಗ ಭೇದವನ್ನು ನಿರಾಕರಿಸಿ, ಲಿಂಗ ಸಮಾನತೆಯ ತತ್ವ ಎತ್ತಿ ಹಿಡಿದಿದ್ದಾರೆ. ಧಾರ್ಮಿಕ ಸ್ವಾತಂತ್ರ್ಯ ನೀಡಿ ಲಿಂಗ ದೀಕ್ಷೆ,ಲಿಂಗ ಧಾರಣೆ, ಲಿಂಗಾರ್ಚನೆಯ ಹಕ್ಕನ್ನು ಸ್ತ್ರೀಯರಿಗೆ ನೀಡಿದರು. ಅಷ್ಟೇ ಅಲ್ಲ, ಜ್ಞಾನ ಮಾರ್ಗದ ಮೂಲಕ" ಶಿವತ್ವವನ್ನು 'ಪಡೆಯುವ ಸ್ವಾತಂತ್ರ್ಯವನ್ನು ಕೊಡಲಾಗಿದೆ. ತಮಗಿಷ್ಟವಾದ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಲಾಯಿತು. ಸಾಮಾಜಿಕ, ಕೌಟುಂಬಿಕ ಸ್ವಾತಂತ್ರ್ಯ ನೀಡಲಾಯಿತು. ಸ್ವತಃ ಬಸವೇಶ್ವರರು ತಮ್ಮ ಪತ್ನಿಯರಿಗೆ ಸ್ವಾತಂತ್ರ್ಯ ನೀಡಿದ್ದರು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಹಾದೇವಿ, ಮುಕ್ತಾಯಕ್ಕ, ಕಾಳವ್ವ ಮುಂತಾದ ಶಿವಶರಣೆಯರು ಪ್ರಸಿದ್ಧಿಗೆ ಬಂದದ್ದು ಅವರಿಗಿದ್ದ ಸ್ವಾತಂತ್ರ್ಯದಿಂದಲೇ. ಪರಂಪರಾಗತವಾಗಿ ಸ್ತ್ರೀಯರಿಗೆ ಆರೋಪಿಸಲಾಗಿದ್ದ ಸೂತಕ, ಮೈಲಿಗೆ, ಹೊಲೆ ಮುಂತಾದ ಅಸಾಮರ್ಥ್ಯವನ್ನು ತೊಡೆದು ಹಾಕುವಲ್ಲಿ ಬಸವಣ್ಣನವರು ಯಶಸ್ವಿಯಾದರು. ಅಂತರ್ಜಾತೀಯ ವಿವಾಹಕ್ಕೆ, ವಿಧವಾ ಪುನರ್ವಿವಾಹಕ್ಕೆ, ಪರಿತ್ಯಕ್ತ ಹೆಣ್ಣಿನ ಮರುವಿವಾಹಕ್ಕೆ ಅವರು ಅವಕಾಶ ನೀಡಿದರು. ದಾಸಿಯರಿಗೆ,

ವೇಶ್ಯೆಯರಿಗೆ, ಹೀನ ಜಾತಿಯಲ್ಲಿ ಹುಟ್ಟಿದವರಿಗೆ ಕೂಡ ಎಲ್ಲರಂತೆ ಸಮಾನ ಗೌರವ-ಮರ್ಯಾದೆ ಪ್ರಾಪ್ತವಾಯಿತು.

ಸ್ತ್ರೀತ್ವವನ್ನು ಮಾತೃತ್ವಕ್ಕೆ ಏರಿಸಿ, ಪುರುಷರು ಗೌರವ ಭಾವನೆಯನ್ನು ತಳೆಯುವಂತೆ ಮಾಡುವಲ್ಲಿ ಬಸವಣ್ಣನವರ ಪಾತ್ರವು ಶ್ಲಾಘನೀಯ. ವೀರಶೈವ ಮತದಲ್ಲಿ ಅನೇಕ ಶಿವಶರಣೆಯರು ವಚನಕಾರ್ತಿಯರು ಮತಪ್ರಚಾರದ ಕಾರ್ಯದಲ್ಲಿ ತೊಡಗಿ ಸ್ತ್ರೀಸಮುದಾಯಕ್ಕೆ ಗೌರವ ತಂದುಕೊಟ್ಟರು. ಬಸವಣ್ಣನ ವೀರಶೈವ ಆಂದೋಲನಕ್ಕೆ ಭುಜಬಲವಾಗಿ ಸ್ತ್ರೀಯರು ನಿಂತರು. ಹೀಗೆ ಸಾಮಾಜಿಕ-ಧಾರ್ಮಿಕ ರಂಗದಲ್ಲಿ ಸ್ತ್ರೀಯರಿಗೆ ಸಮಾನತೆ ಲಭ್ಯವಾಗಿತ್ತು.

"ಬುದ್ಧ ಸಂಘ" ದಲ್ಲಿ ಮಹಿಳೆಯರಿಗೂ ಪ್ರಾಶಸ್ತ್ಯಕೊಟ್ಟಿರುವುದನ್ನು ಚರಿತ್ರೆಯಲ್ಲಿ ಕಾಣಬಹುದಾಗಿದೆ. " ಲಿಂಗ ವ್ಯತ್ಯಾಸರಹಿತ ಸ್ತ್ರೀ-ಪುರುಷರಿಬ್ಬರ ಅದೇ ಸಕ್ರಿಯ ಪ್ರಜಾಪ್ರಭುತ್ವ ಸಿದ್ಧಾಂತವನ್ನು ಎತ್ತಿ ಹಿಡಿದ "ಬುದ್ಧ ಸಂಘ" ದ ಮಹತ್ವವನ್ನು, ಆ ಮೂಲಕ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಪ್ರಾಚೀನತೆಯನ್ನೂ, ನಮ್ಮ ಸಂವಿಧಾನವನ್ನು ರಾಷ್ಟ್ರಕ್ಕೆ ಸಮರ್ಪಿಸುವ ಸಂದರ್ಭದಲ್ಲಿ ಅಂಬೇಡ್ಕರರು ಪಾರ್ಲಿಮೆಂಟ್‌ನಲ್ಲಿ ವಿವರಿಸಿರುವುದನ್ನು ಕಾಣಬಹುದಾಗಿದೆ. ಇದಾದ ಬಳಿಕ "ಬುದ್ಧ ಸಂಘ" ವನ್ನು ಯಥಾವತ್ತಾಗಿ ಹೋಲುವ ಅಂತಹದೇ ಇನ್ನೊಂದು ಸಂಸ್ಥೆಯೆಂದರೆ ಹನ್ನೆರಡನೇ ಶತಮಾನದ ಶರಣಧರ್ಮ ಮೂಲದ ಇಗಾಲಿಟೇರಿಯನ್ ಸಿದ್ಧಾಂತದ ಭೂಮಿಕೆಯಾದ "ಅನುಭವ ಮಂಟಪ". ನೂರಾರು ಬುದ್ಧಿಜೀವಿ ಮಹಿಳೆಯರು ಸೇರಿ, ಅನುಭವ ಮಂಟಪದಲ್ಲಿ ಕುಳಿತು, ತಮ್ಮ ಲೋಕೋತ್ತರ ಚಿಂತನೆಯಿಂದ ಮಹಿಳೆಗೊಂದು ಅಬಾಧಿತವೂ, ಅಖಂಡವೂ ಆದ ಪೂರ್ಣ ವ್ಯಕ್ತಿತ್ವವನ್ನೇ ನಿರ್ಮಿಸಿದುದನ್ನು ನಾಡಿನ ಚರಿತ್ರೆಯಲ್ಲಿ ಕಾಣಬಹುದಾಗಿದೆ"[135] ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಧಾರ್ಮಿಕ-ಅಧ್ಯಾತ್ಮಿಕ ವಿಷಯಗಳ ಬಗ್ಗೆ ಚರ್ಚಿಸಲು ಅವಕಾಶ ಮಾಡಿಕೊಡಲಾಗಿತ್ತು. ಸ್ತ್ರೀ-ಪುರುಷರಿಗೆ ಅಧ್ಯಾತ್ಮಿಕ ಸ್ವಾತಂತ್ರ್ಯಕ್ಕಾಗಿಯೇ ಈ ಅಧ್ಯಾತ್ಮಿಕ ಸಂಸತ್ತು ಎಂಬ ಪರಿಕಲ್ಪನೆಯ ಅನುಭವಮಂಟಪ ಸ್ಥಾಪಿಸಿ, ಸಮಾಜದ ಎಲ್ಲ ವರ್ಗ ಸ್ತ್ರೀ-ಪುರುಷರು ಭಾಗವಹಿಸಿ ಸ್ವತಂತ್ರವಾಗಿ ಚರ್ಚಿಸಿದರು. ಅನೇಕ ವಚನಗಳಿಗೆ ಈ ಚರ್ಚೆಗಳೇ ಆಧಾರಸ್ತಂಭವಾಗಿವೆ. ಈ ವಚನಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು.

"ಮತ, ಕುಲ, ವರ್ಣ, ಲಿಂಗ, ವಯಸ್ಸು, ಅಂತಸ್ತುಗಳ ಅಂತರವಿಲ್ಲದೆ ಸರ್ವಮಾನವ ಸಮಾವೇಶಕ್ಕೆ ವೇದಿಕೆಯಾಗಿ ಅನುಭವ ಮಂಟಪವು ನವಜಾಗೃತಿಗೆ ನಾಂದಿ ಹಾಡಿತು. ಜಾತ್ಯಾತೀತ ಸಮಾಜ ಸ್ಥಾಪನೆಗೆ ನೆಲೆಗಟ್ಟನ್ನು ಒದಗಿಸಿತು. ಇದರ ಮೂಲಕ ಮಾನವ ಜನಾಂಗದ ಒಂದು ಕುಟುಂಬ ಎಂಬ ವಿಶ್ವ ಸೋದರತ್ವದ ಸಂದೇಶವನ್ನು ಸಾರಿದರು"[136] ಬಸವಣ್ಣ. ಇದರಂತೆ ಸ್ತ್ರೀ ನೆಲೆಯಲ್ಲಿ ನಿಂತು, ಪುರುಷ ಪ್ರಧಾನ ವೈದಿಕ ಮೌಲ್ಯ ವ್ಯವಸ್ಥೆಯನ್ನು, ಮಾನವನಾತ್ಮದ ಅಖಂಡತೆಯ ಹಿನ್ನೆಲೆಯಲ್ಲಿ ಪ್ರಶ್ನಿಸುತ್ತ, ಪ್ರತಿಭಟಿಸುತ್ತ ನಡೆದ ಭಾರತೀಯ ದಾರ್ಶನಿಕರನ್ನು ಕಾಣಬಹುದಾಗಿದೆ. ಅವರಲ್ಲಿ ಪ್ರಮುಖರೆಂದರೆ ಮಹಾತ್ಮ ಜ್ಯೋತಿಬಾ ಫುಲೆ, ಈಶ್ವರಚಂದ್ರ ವಿದ್ಯಾಸಾಗರ, ರಾಜಾರಾಮ ಮೋಹನ್‌ರಾಯ್, ಡಾ।ಅಂಬೇಡ್ಕರ್, ಪೆರಿಯಾರ್, ಇ.ವಿ.ರಾಮಸ್ವಾಮಿ ನಾಯಕರ್ ಪ್ರಮುಖವಾಗಿ ಹೆಸರಿಸಬಹುದಾಗಿದೆ.

ಅಧೀನತೆ, ಅವೈಚಾರಿಕತೆ, ಅಸಮಾನತೆಯ ಜೀವವಿರೋಧಿ ಸಂಗತಿಗಳನ್ನು ಪ್ರತಿಭಟಿಸಿದವರು ಬಸವಣ್ಣ. ಸಮಾನತೆ, ಸ್ವಾತಂತ್ರ್ಯ, ಸ್ವಂತಿಕೆಯ ಅನ್ವೇಷಣೆಯನ್ನು, ವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿ ವೈಶಿಷ್ಟ್ಯತೆಯನ್ನು ಗೌರವಿಸಿದ್ದಾರೆ. ಗಂಡು ಹೆಣ್ಣೆನ್ನುವ ತಾರತಮ್ಯವನ್ನು ನಿರಾಕರಿಸಿ ಮನುಷ್ಯರೆಲ್ಲರನ್ನೂ ಸಮಾನ ನೆಲೆಯಲ್ಲಿ ಗೌರವಿಸಿದ ಸಮಾನತಾವಾದಿಗಳಾಗಿದ್ದಾರೆ ಬಸವಣ್ಣ. ಲಿಂಗಭೇದವನ್ನು ತೊಡೆದು ಹಾಕಿ ಲಿಂಗ ಸಮಾನತೆಯನ್ನು ಆಧರಿಸಿದ ಆದರ್ಶ ಸಮಾಜವನ್ನು ಸ್ಥಾಪಿಸಲು ಯತ್ನಿಸಿದರು. "ಸ್ತ್ರೀಯರ ಸ್ಥಾನಮಾನ ಎತ್ತರಿಸಿ ಅವರನ್ನು ಸ್ವತಂತ್ರರಾಗಿಸುವುದನ್ನೇ ಮುಖ್ಯ ಅಂಶವಾಗಿಟ್ಟುಕೊಂಡು ಬಸವಣ್ಣನವರು ಸಾಮಾಜಿಕ ಸುಧಾರಣೆಗೆ ಬೃಹತ್ ಮತ್ತು ಸಮಗ್ರ ಯೋಜನೆಯೊಂದನ್ನು ರೂಪಿಸಿ ದೃಢಸಂಕಲ್ಪದೊಂದಿಗೆ ಪ್ರಯತ್ನಿಸಿದರು" ಎಂದು ಟೈಮ್ಸ್ ಆಫ್ ಇಂಡಿಯಾ ತನ್ನ 17-05-1918 ರಂದು ಪ್ರಕಟಿಸಿದ ಸಂಪಾದಕೀಯದಲ್ಲಿ ಪ್ರಶಂಸಿಸುತ್ತ ಬರೆಯಿತು.[137] ಆಧುನಿಕ ದೃಷ್ಟಿಯ ಸ್ತ್ರೀ ವಿಮೋಚನೆ ಎಂಟು ನೂರು ವರ್ಷಗಳ ಹಿಂದೇ ಬಸವಣ್ಣನವರ ನೇತೃತ್ವದಲ್ಲಿ ನಡೆದದ್ದು ಒಂದು ಆಶ್ಚರ್ಯಕರ ಸಂಗತಿ. "ಬ್ರಾಹ್ಮಣೇತರ ಮಹಿಳೆಯರು ಮೊಟ್ಟಮೊದಲ ಬಾರಿಗೆ ಕೃತಿ ರಚನೆಗೆ ಕೈ ಹಾಕಿದ್ದೇ ಬಸವ ಯುಗದಲ್ಲಿ ಎಂದು ಡಾ. ಎಂ. ಚಿದಾನಂದಮೂರ್ತಿ ಬರೆದಿದ್ದಾರೆ.

ಧರ್ಮಗಳಿಂದ ತುಂಬಿದ ಈ ದೇಶದಲ್ಲಿ ಇನ್ನೊಂದು ಧರ್ಮವನ್ನು ಅಸ್ತಿತ್ವಕ್ಕೆ ತರುವ ಸಂಕುಚಿತ ಉದ್ದೇಶ ಬಸವಣ್ಣನಿಗಿರಲಿಲ್ಲ. ಅವನ ಉದ್ದೇಶವೇನಿದ್ದರೂ ಶತಮಾನಗಳಿಂದ ಬೆಳೆದುಬಂದ ಅಸಮಾನತೆಗಳನ್ನು ನಿರ್ಮೂಲನೆ ಮಾಡಿ "ಸಮಭಾವ, ಸಹಕಾರ ಮತ್ತು ಸ್ವಾತಂತ್ರ್ಯದ ಬುನಾದಿಯ ಮೇಲೆ ನೂತನ ಸಮಾಜವನ್ನು ನಿರ್ಮಿಸಬೇಕೆಂಬುದಾಗಿತ್ತು ಎಂಬ ಹಿರೇಮಲ್ಲೂರು ಈಶ್ವರನ್‌ರ ವಿಚಾರವನ್ನು ನಾವಿಲ್ಲ ನೆನಪಿಸಿಕೊಳ್ಳುವುದು ಸೂಕ್ತ"[138] ಈ ದಿಶೆಯಲ್ಲಿ ಬಸವಣ್ಣ ಮತ್ತು ಶರಣರ ಹೋರಾಟ- ಸಾಮಾಜಿಕ ಸಮಾನತೆಯನ್ನು ತರಲು ಮಾಡಿದ ಆಂದೋಲನವಾಗಿತ್ತು.

12ನೇ ಶತಮಾನದ ಸಮಾಜ ಮೂಢನಂಬಿಕೆ, ಅಸ್ಪೃಶ್ಯತೆ, ಲಿಂಗತಾರತಮ್ಯ ಹೊಂದಿದ ಕಾಲದ ಸಮಾಜವಾಗಿತ್ತು. ಎಲ್ಲ ಚಟುವಟಿಕೆಗಳಿಂದ ಸ್ತ್ರೀಯರನ್ನು ದೂರ ಇಡಲಾಗಿತ್ತು. ಬಸವಣ್ಣನ ಪ್ರಯತ್ನದಿಂದಾಗಿ ಸ್ವಾತಂತ್ರ್ಯ- ಸಮಾನತೆ ಸ್ತ್ರೀಯರಿಗೆ ಲಭ್ಯವಾಗಿ ವಚನ ಸಾಹಿತ್ಯವನ್ನು ಕ್ರಾಂತಿಕಾರಕ ಮಟ್ಟಕ್ಕೆ ಕೊಂಡ್ಯೊಯ್ದಿರುವುದು ಇಂದಿಗೂ ಪ್ರಸ್ತುತ. ಬಸವಣ್ಣ ಜಗತ್ತಿಗೆ ನೀಡಿದ ಬಹು ಅಮೂಲ್ಯ ಕಾಣಿಕೆ ಎಂದರೆ "ಅನುಭವ ಮಂಟಪ". ಇದು ಜಗತ್ತಿನ ಪ್ರಥಮ ಪಾರ್ಲಿಮೆಂಟ್ ಎಂದು ಕರೆಸಿಕೊಂಡಿದೆ. ಇಲ್ಲಿ ಯಾವುದೇ ವರ್ಣ, ವರ್ಗ, ಜಾತಿ, ಲಿಂಗ, ಬಡವ-ಬಲ್ಲಿದ, ಉಚ್ಚ-ನೀಚ, ವಿವಾಹಿತ-ಅವಿವಾಹಿತರೆನ್ನದೇ ಶಿವಭಕ್ತರೆಲ್ಲ ಇದರ ಸದಸ್ಯರು. ವಿಶೇಷವೆಂದರೆ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿದ್ದು. ಎಲ್ಲ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಹಲವಾರು ವಚನಗಳನ್ನು ರಚಿಸಿ ಖ್ಯಾತಿ ಹೊಂದಿದರು. ಆಧ್ಯಾತ್ಮಿಕಸಿದ್ಧಿ ಸಾಧನೆಗೈದಿರುವರು. ಅವರಲ್ಲಿ ಅಕ್ಕಮಹಾದೇವಿ, ನೀಲಾಂಬಿಕೆ, ಅಕ್ಕ ನಾಗಮ್ಮ, ಗಂಗಾಂಬಿಕೆ, ನಿಜದೇವಿ, ಮೋಳಿಗೆ ಮಾದೇವಿ, ಸತ್ಯಕ್ಕ, ಗೊಗ್ಗವ್ವೆ, ಅಕ್ಕಮ್ಮ, ಕಾವಮ್ಮ, ಸಂಕವ್ವೆ, ರೇವಮ್ಮ, ಕಾಳವ್ವೆ, ಸೋಮವ್ವೆ, ವೀರಮ್ಮ, ರಾಮಮ್ಮ ಮುಂತಾದವರ ವಚನಗಳು ಅವರ ಸ್ವಾನುಭವದ ಆತ್ಮವಾಣಿಗಳೇ ಆಗಿವೆ.

ಮೊದಲ ವಚನಕಾರ್ತಿ ದುಗ್ಗಳೆ. ಅನಂತರದಲ್ಲಿ ಅಕ್ಕಮಹಾದೇವಿ ವಚನಗಾರ್ತಿಯರಲ್ಲಿ ಪ್ರಮುಖಳು. ಶಿವಭಕ್ತೆ ಕೌಶಿಕನನ್ನು ಮದುವೆಯಾದರೂ, ಸಂಸಾರತ್ಯಾಗ ಮಾಡಿ ವಿರಕ್ತಳಾಗಿ ಆಧ್ಯಾತಪತಿ ಚೆನ್ನಮಲ್ಲಿಕಾರ್ಜುನ ನನ್ನು ಹುಡುಕುತ್ತ ಹೊರಡುತ್ತಾಳೆ.

"ಹಸಿವಾದೊಡೆ ಭಿಕ್ಷಾನ್ನವುಂಟು
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀನೆನಗುಂಟು "

ಈಕೆಯ ಶರಣಸತಿ-ಲಿಂಗಪತಿ ಭಾವ ಸುಪ್ರಸಿದ್ಧಿವಾದದ್ದು. ಜ್ಞಾನ, ಭಕ್ತಿ, ವೈರಾಗ್ಯ ಮೂರ್ತಿ. "ಯೋಂಗಾಂಗ ತ್ರಿವಿಧಿ' ಗ್ರಂಥವನ್ನು ರಚನೆ ಮಾಡಿದ್ದಾಳೆ. ಬಸವಣ್ಣನವರ ಮನೆಯಲ್ಲಿ ಮಹಿಳಾ ವೈಚಾರಿಕಧ್ವನಿ ಇತ್ತು. ನೀಲಾಂಬಿಕೆ ವಿಚಾರ ಪತ್ನಿಯಾಗಿ, ಗಂಗಾಂಬಿಕೆ ಆಚಾರ ಪತ್ನಿಯಾಗಿ ಮಹಾ ಸಾಧಕಿಯರಾಗಿದ್ದರು. ಬಸವಣ್ಣನ ಅಕ್ಕನಾಗಲಾಂಬಿಕಾ ಕ್ರಾಂತಿಯಕಿಡಿಯಾಗಿ ಆಂದೋಲನಕ್ಕೆ ಸ್ಫೂರ್ತಿಯಾದಳು. 12ನೇ ಶತಮಾನದಲ್ಲಿ ಅನೇಕ ಶಿವಶರಣೆಯರು ಮಹಾ ಜ್ಞಾನಿಗಳಾಗಿ ಧರ್ಮದ ಸಾರವನ್ನು ಜಗಕ್ಕೆ ಸಾರಿದ್ದಾರೆ.

ಪ್ರತಿಭಟನೆ ಮನುಷ್ಯನ ಸಹಜ ಮನೋಧರ್ಮ. ಮನುಷ್ಯ ತನಗಾದ ಅನ್ಯಾಯವನ್ನು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರತಿಭಟಿಸುತ್ತಲೇ ಬಂದಿದ್ದಾನೆ. ಅಸಮಾನತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾನೆ. ಚರಿತ್ರೆಯನ್ನು ಗಮನಿಸಿ ನೋಡಿದರೆ ಪ್ರತಿಭಟನೆ ಆಯಾ ಕಾಲದ ಆರ್ಥಿಕ ಅಸಮಾನತೆ, ಲಿಂಗ-ವರ್ಣ-ವರ್ಗದ ಅಸಮಾನತೆಯನ್ನು ವಿರೋಧಿಸಿ ನಡೆದಿದೆ. 12ನೇ ಶತಮಾನದಲ್ಲಿ ಶರಣರು-ಶರಣೆಯರು ಅಂದಿನ ಅಸಮಾನತೆಯ ವಿರುದ್ಧ ಬಸವಣ್ಣನ ನೇತೃತ್ವದಲ್ಲಿ ಪ್ರತಿಭಟನೆ ಮಾಡಿದ್ದಾರೆ. ಸಮಾನತೆ, ಮಾನವೀಯತೆ, ಅಹಿಂಸೆ ಹಾಗೂ ವೈಚಾರಿಕತೆ ಇವರ ಪ್ರತಿಭಟನೆಯಲ್ಲಿ ವ್ಯಕ್ತವಾಗಿ ವಚನರೂಪವನ್ನು ಪಡೆದುಕೊಂಡಿರುವುದು ಈ ಆಂದೋಲನದ ವಿಶೇಷ ಅಂಶ. ವಿಭಿನ್ನ ವರ್ಗದಿಂದ ಬಂದಂತಹ ಶಿವಶರಣೆಯರು ಧರ್ಮನಿಷ್ಠ, ಸಮಾಜನಿಷ್ಠ ನೆಲೆಯಲ್ಲಿ ಆಲೋಚಿಸಿ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಶೋಷಣೆಗಳನ್ನು ಪ್ರತಿಭಟಿಸಿರುವುದು ಅವರ ವಚನಗಳಲ್ಲಿ ವ್ಯಕ್ತವಾಗಿದೆ. ಕೆಳವರ್ಗದ ಶರಣೆಯರಲ್ಲಿ ಹೋರಾಟ ಕೆಚ್ಚು ಹೆಚ್ಚು ಸ್ಪಷ್ಟವಾಗಿ ವ್ಯಕ್ತವಾಗಿದೆ. ಅಕ್ಕಮಹಾದೇವಿ, ನೀಲಲೋಚನೆ, ಗಂಗಾಂಬಿಕೆ, ಅಕ್ಕ ನಾಗಮ್ಮ ಮೊದಲಾದ ಮೇಲ್ವರ್ಗ ಶಿವಶರಣೆಯರ ವಚನಗಳಲ್ಲಿ ವ್ಯಕ್ತಿಗತ ಭಾವನೆ, ನೋವು-ನಿರಾಶೆ, ವೈರಾಗ್ಯಭಾವ, ಸತಿ-ಪತಿ ವ್ಯಕ್ತವಾದರೆ ಕಾಳವ್ವೆ, ಆವಂಗೆರಾಯಮ್ಮ, ಅಕ್ಕಮ್ಮ, ಹಡಪದ ಲಿಂಗಮ್ಮ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಗೊಗ್ಗವ್ವೆ, ಗಂಗಮ್ಮ, ಸೂಳೆ ಸಂಕವ್ವೆ ಮೊದಲಾದ ಕೆಳವರ್ಗದ ಶರಣೆಯರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ, ಲಿಂಗ, ವರ್ಣ-ವರ್ಗ ಪ್ರಜ್ಞೆ, ಆತ್ಮವಿಶ್ವಾಸ, ಸ್ವಾಭಿಮಾನ, ಕಾರ್ಯನಿಷ್ಠೆ, ಸಾಮಾಜಿಕ ವಿಡಂಬನೆ ಪ್ರತಿಭಟನಾತ್ಮಕ ರೀತಿಯಲ್ಲಿ ವ್ಯಕ್ತವಾಗಿವೆ." ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡು ಕೂಸ" -ಎಂದು ಲಿಂಗಭೇದ ನೀತಿಯನ್ನು ಅಕ್ಕಮಹಾದೇವಿ ಅಲ್ಲಗಳೆದಿದ್ದಾರೆ." ಕೂಟಕ್ಕೆ ಸತಿ-ಪತಿ ಎಂಬ ನಾಮವಲ್ಲದೇ ಅರಿವಿಂಗೆ ಬೇರೊಂದೊಡಲುಂಟೆ? ಲಕ್ಕಮ್ಮ ಪ್ರಶ್ನಿಸುವಲ್ಲಿ ಸಾಂಪ್ರದಾಯಿಕ ಪತ್ನೀ ಧರ್ಮದ ಮೌಲ್ಯವನ್ನು ಪ್ರತಿಭಟಿಸುವ ಭಾವವಿದೆ. ಈಸಕ್ಕಿಯಾಸೆ ನಿಮಗೇಕೆ? ಎಂದು ತನ್ನ ಗಂಡ ಮಾರಯ್ಯನನ್ನು ಲಕ್ಕಮ್ಮ ಪ್ರಶ್ನಿಸುತ್ತಾಳೆ. "ಕುರಿ, ಕೋಳಿ, ಕಿರಿ ಮೀನು ತಿಂಬುವವರೆಲ್ಲ. ಕುಲಜರು ಕುಲಜರು

ಎಂದೆಂಬರು, ಶಿವನಿಗೆ ಪಂಚಾಮೃತ ಕೊಡುವ ಗೋವ ತಿನ್ನುವ ಹೊಲೆಯರು ನಾವೆಂತು ಕೀಳಾದವಯ್ಯ"ಎಂದು ಕಾಳವ್ವೆ ಪ್ರಶ್ನಿಸುವಲ್ಲಿ ವರ್ಣವ್ಯವಸ್ಥೆಯ ಆಚಾರ-ವಿಚಾರವನ್ನೇ ಪ್ರತಿಭಟಿಸುವ ಭಾವ ಅಡಕವಾಗಿದೆ.

"ಹೊನ್ನ ಬಿಟ್ಟ ಲಿಂಗವನೊಲಿಸಬೇಕೆಂಬುದು ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ? ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು ಎಂದು ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಇಹವನ್ನು ಬಿಟ್ಟು ಪರವನ್ನು ಸಾಧಿಸಬೇಕೆನ್ನುವವರ ವಿಚಾರವನ್ನು ಖಂಡಿಸಿದ್ದಾಳೆ. "ಮೊಲೆ ಮುಡಿ ಬಂದಡೆ ಹೆಣ್ಣೆಂಬರು, ಮೀಸೆ ಕಾಸೆ ಬಂದಂಡೆ ಗಂಡೆಂಬರು, ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥಾ? ಎಂಬ ಗೊಗ್ಗವ್ವೆ ಪ್ರಶ್ನಿಸುವಲ್ಲಿ ಗಂಡು ಹೆಣ್ಣಿನ ಸಮಾನತೆಯನ್ನು ಬಯಸಿದ್ದಾಳೆ. "ಊರ ಒಳಗಣ ಬಯಲು, ಊರ ಹೊರಗಣ ಬಯಲಾದುಂಟೆ? ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲುಂಟೆ? ಎಂದು ಸಮಾಜದಲ್ಲಿದ್ದ ಜಾತಿ-ಭೇದವನ್ನು ಬೊಂತಾದೇವಿ ನಿರಾಕರಿಸುವಲ್ಲಿ ಪ್ರತಿಭಟನೆಯ ವಿಚಾರವಿದೆ.

ಶಿವಶರಣ-ಶರಣೆಯರ ಪ್ರತಿಭಟನೆ ಕೇವಲ ನುಡಿಯಲ್ಲಿರದೇ ನಡೆಯಲ್ಲಿ ಜೀವಂತವಾಗಿದೆ. ಜಾತಿಯ ಅಸಮಾನತೆ, ಅಂಗದ ಅಸಮಾನತೆ, ಭಕ್ತಿಯ ಹೆಸರಿನಲ್ಲಿ ನಡೆಯುವ ಶೋಷಣೆಯ ವಿರುದ್ಧ, ಧರ್ಮದ ನೆಪದಲ್ಲಿ ನಡೆಯುವ ಯಜ್ಞ-ಯಾಗಗಳ ವಿರುದ್ಧ ಪ್ರತಿಭಟನೆಯನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸ್ಥಾಪಿತ ನಿಲುವುಗಳ ವಿರುದ್ಧ ನೇರಪ್ರತಿಭಟನೆ ಮಾಡಿದ್ದಾರೆ. 12ನೇ ಶತಮಾನದ ಈ ಎಲ್ಲ ಶರಣ-ಶರಣೆಯರ ಪ್ರತಿಭಟನೆ ಜೀವಪರವಾಗಿದೆ, ಮಾನವೀಯವಾಗಿದೆ, ಮನಸ್ಸನ್ನು ಕಟ್ಟುವಂತಹದ್ದಾಗಿದೆ, ಇವರೆಲ್ಲರಿಗೂ ಪ್ರೇರಕ ಶಕ್ತಿ, ಸ್ಪೂರ್ತಿ, ಬಸವಣ್ಣ ಹಾಗೂ ಅನುಭವ ಮಂಟಪ.

3.9 <u>ಮೌಢ್ಯತೆ ಅನಿಷ್ಟಗಳು, ಅನೀತಿಯ ವಿರುದ್ಧ ಪ್ರತಿಭಟನೆ</u> :

ಮಾನವನ ಇತಿಹಾಸವೇ ಹೋರಾಟದ ಕಥನವಾಗಿದೆ. ಮಾನವ ವಿಕಾಸದಲ್ಲಿ ಹೊಸದನ್ನು ಕಾಣುವ, ನಿರ್ಮಿಸುವ ಆಶೆ ಹೊಂದಿರುವ ಮನುಷ್ಯ ಕೆಲಬಾರಿ ಪ್ರತಿಗಾಮಿ ಶಕ್ತಿ ಮತ್ತು ವಿಚಾರಗಳ ವಿರುದ್ಧ ಧ್ವನಿ ಎತ್ತುವುದನ್ನು ಅರಿತುಕೊಂಡಿದ್ದಾನೆ. ಈ ಹೋರಾಟದ ಮುಖ್ಯ ಉದ್ದೇಶ ಮಾನವನ ಬದುಕನ್ನು ಹಸನುಗೊಳಿಸುವುದು ಮತ್ತು ವಿಕಾಸಗೊಳಿಸುವುದಾಗಿದೆ. "ಸಮಾಜವು ಹಲವಾರು ಸ್ವನಿರ್ಮಿತ ತೊಡಕುಗಳಲ್ಲಿ ಸಿಕ್ಕು ಕಂಗೆಟ್ಟು ಮುಂಗಾಣದಿರುವಾಗ ಮಾನವನಿಗೆ ಮಾರ್ಗದರ್ಶಕವಾಗುವ ಶಕ್ತಿಗಳು ಹಲವಾರು ರೂಪದಲ್ಲಿ ಮೈದೋರಿ ಅವನ ಮುನ್ನಡೆಗೆ ಸಹಾಯಕವಾಗಿದೆ. ಮಾನವನ ವಿಕಾಸದ ಎಲ್ಲ ಅಂಶಗಳನ್ನು ಅಳವಡಿಸಿಕೊಂಡು ಬೆಳೆದು ಮಾನವತೆಯ ಉದ್ಧಾರಗೈದ ಮಹಾಪುರುಷರ ಪಾತ್ರ ಇವುಗಳಲ್ಲಿ ಬಹುಮುಖ್ಯವಾದುದು.[139] ಅಂತಹ ಮಹಾತ್ಮರಲ್ಲಿ ಬಸವಣ್ಣನವರು ಒಬ್ಬರು. ಇವರು ತಮ್ಮ ಅನುಭವಗಳಿಂದ ಹೊಸದಾರಿ, ಹೊಸ ಬದುಕನ್ನು ಜಗತ್ತಿಗೆ ತೋರಿಸಿ ಕೊಟ್ಟಿದ್ದಾರೆ.

12ನೇಯ ಶತಮಾನದಲ್ಲಿ ಧರ್ಮಾಚರಣೆ ಅರ್ಥರಹಿತ ವ್ಯರ್ಥ ಸಂಸ್ಕಾರಗಳಿಂದ ಕೃತಕ ಸಂಪ್ರದಾಯವಾಗಿತ್ತು. ಕುರುಡು ನಂಬಿಕೆ, ಸಾಮಾಜಿಕ ಅನಿಷ್ಠತೆಗಳು ಬೆಳೆದು ಬಂದಿದ್ದವು. ಜಟಿಲ ವ್ರತಾಚರಣೆ ಧರ್ಮವನ್ನು ಜಟಿಲಗೊಳಿಸಿತ್ತು. ಅಜ್ಞಾನ, ಅಂಧ ಶ್ರದ್ಧೆಗಳು, ಅಹಂಕಾರ, ಅರ್ಥರಹಿತ ಕರ್ಮಾಚರಣೆಗಳು, ಧಾರ್ಮಿಕ - ಸಾಮಾಜಿಕ ಜೀವನದಲ್ಲಿ ತುಂಬಿದ್ದು, ವೈಚಾರಿಕತೆ ಮಸುಕಾಗಿತ್ತು. ಅಂತಹ

ಸಂದರ್ಭದಲ್ಲಿ " ನಮ್ಮ ನಾಡಿನ ಧಾರ್ಮಿಕ ರಂಗದಲ್ಲಿ ಬಸವಣ್ಣನವರು ಕಾಣಿಸಿಕೊಂಡಾಗ ಧರ್ಮದ ಕಲ್ಪನೆ ತೀರ ಸಂಕುಚಿತವಾಗಿ, ಅಪಾರ್ಥಕ್ಕೊಳಗಾಗಿ, ಕೊನೆಯ ಘಟ್ಟದಲ್ಲಿ ಅದಕ್ಕಿರಬೇಕಾದ ಸಾಮಾಜಿಕ ಸಂಬಂಧವನ್ನೂ, ಮಾನವೀಯ ಮೌಲ್ಯವನ್ನೂ ಕಳೆದುಕೊಂಡಿತ್ತು. ಅಧ್ಯಾತ್ಮಿಕ ವಿಚಾರ ಇಹಕ್ಕಿಂತ ಪರವನ್ನೇ ದೊಡ್ಡದಾಗಿಸಿ ಅವೆರಡಕ್ಕೂ ಸಂಬಂಧವೇ ಇಲ್ಲವೆಂಬಂತೆ ಇಲ್ಲಿಯ ಬದುಕಿನ ರೀತಿ-ನೀತಿಗಳನ್ನು ಕಡೆಗಣಿಸಿತ್ತು. ಮನುಷ್ಯನನ್ನು ಸನ್ಮಾರ್ಗದಲ್ಲಿರಿಸುವುದಕ್ಕೆಂದು ಒಂದು ಕಾಲಕ್ಕೆ ಏರ್ಪಾಡಾಗಿರಬಹುದಾದ ಸ್ವರ್ಗ-ನರಕಗಳ ಕಲ್ಪನೆ ತನ್ನ ಮೂಲೋದ್ದೇಶಕ್ಕೆ ಎರವಾಗಿ ಧರ್ಮಾಚರಣೆಗಳನ್ನು ಅರ್ಥಹೀನವಾದ ಕೃತಕ ಸಂಪ್ರದಾಯಗಳನ್ನಾಗಿಸಿತು. ನೂರು ಬಗೆಯ ಕುರುಡು ನಂಬಿಕೆಗಳಿಗೆ ಎಡೆ ಮಾಡಿ ಕೊಟ್ಟಿತು".[140] ಹೀಗೆ ಸಾಮಾಜಿಕ ಧಾರ್ಮಿಕ ರಂಗ ಬಾಹ್ಯ ಆಚರಣೆಗೆ ಪ್ರಾಮುಖ್ಯತೆ ನೀಡಿ ಸ್ವರ್ಗ-ನರಕ, ಪಾಪ-ಪುಣ್ಯಗಳೆಂಬ ಕೃತಕ ಸಂಪ್ರದಾಯಗಳು ಬೆಳೆದು ಬಂದಿದ್ದವು. ಅವುಗಳೊಂದಿಗೆ ಅಜ್ಞಾನ, ಅಂಧ ಶ್ರದ್ಧೆಗಳು ಬೆಳೆದು ಬದುಕು ಜಟಿಲವಾಗಿತ್ತು. ಸಾಮಾಜಿಕ, ಧಾರ್ಮಿಕ ರಂಗಗಳು ತಲ್ಲಣಿಸಿದ ಸಂದರ್ಭದಲ್ಲಿ ಬಸವಣ್ಣನ ಉದಯವಾಯಿತು. ಬಸವಣ್ಣನವರು ಧಾರ್ಮಿಕ ಅಂಧಶ್ರದ್ಧೆ, ಮೂಢನಂಬಿಕೆಗಳನ್ನು, ಮನುಷ್ಯನ ಅನೀತಿಯುತ ನಡವಳಿಕೆಗಳನ್ನು ಬಲವಾಗಿ ತಿರಸ್ಕರಿಸಿದ್ದಾರೆ. ಆ ಸಂದರ್ಭದಲ್ಲಿ ಜನರು ಅಜ್ಞಾನ, ಅಂಧಕಾರ, ಮೂಢನಂಬಿಕೆಗಳಿಂದ ಶೋಷಣೆಗೆ ಒಳಗಾಗಿದ್ದರು. ಮೂಢನಂಬಿಕೆ ಮತ್ತು ಶಕುನಗಳು ಧರ್ಮದ ಜೀವಾಳವಾಗಿದ್ದವು. ಅಂತಹ ಮೌಢ್ಯತೆಯನ್ನು, ಮೂಢನಂಬಿಕೆಯನ್ನು ಬಸವಣ್ಣ ಖಂಡಿಸಿದ್ದಾನೆ.

"ಹಾವಾಡಿಗನು ಮೂಕೊರತಿಯು ತನ್ನ ಕೈಯಲ್ಲಿ ಹಾಗು
ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲ್ಲೊಬ್ಬ ಮೂಕೊರತೆಯ ಹಾವಾಡಿಗನ ಕಂಡು
"ಶಕುನ ಹೊಲ್ಲೆಂ" ಬ ಚದುರನ ನೋಡಾ!
ತನ್ನ ಸತಿ ಮೂಕೊರತೆ! ತನ್ನ ಕೈಯಲ್ಲಿ ಹಾವು
ತಾನೂ ಮೂಕೊರೆಯ!
ತನ್ನ ಭಿನ್ನವನರೆಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಮದೇವಾ?"[141]

ಈ ವಿಚಾರದಲ್ಲಿ ಮೂಢನಂಬಿಕೆಗಳ ಅವಹೇಳನವಿದೆ. ವಿಡಂಬನೆ ಇದೆ. ಇಂದೂ ಕೂಡ ಈ ಮೂಢ ನಂಬಿಕೆ ವಿದ್ಯಾವಂತರನ್ನು ಬಿಟ್ಟಿಲ್ಲ. 12ನೇ ಶತಮಾನದ ಕಾಲ ಹೇಗಿರಬೇಕು? ಮೌಢ್ಯತೆ, ಅಜ್ಞಾನ, ಮೂಢನಂಬಿಕೆಗಳು ಸಾಮಾನ್ಯ ಜನರಲ್ಲಿ ಮನೆ ಮಾಡಿದ್ದವು. ಕೆಲವರು ಸತತ ಪ್ರಯತ್ನ ಮಾಡಿ ಇವುಗಳನ್ನು ಉಳಿಸಿಕೊಂಡು ಅವುಗಳಿಂದ ಶೋಷಣೆ ಮಾಡುತ್ತಿದ್ದರು. ತಮ್ಮ ಉಪಜೀವನದ ದಾರಿ ಮಾಡಿಕೊಂಡಿದ್ದರು. ಮಂತ್ರ, ತಂತ್ರ, ಶಾಂತಿ, ಪೂಜೆ, ಭಯ, ಭಕ್ತಿಗಳನ್ನು ಬಿತ್ತಿದ್ದರು. ಮುಹೂರ್ತ, ಶಾಂತಿ, ದಕ್ಷಿಣೆಗಳು ಚಲಾವಣೆಯಲ್ಲಿದ್ದವು. ಇವುಗಳನ್ನು ನಿರರ್ಥಕವೆಂದು ಸಾರಿ ಬಸವಣ್ಣ ಪ್ರತಿಭಟಿಸಿದ ವಚನಗಳಲ್ಲಿ ವಿಡಂಬಿಸಿದ.

ಒಳ್ಳೆಯ ಕಾರ್ಯಕ್ಕೆ ಮುಹೂರ್ತಕ್ಕಾಗಿ ಕಾಯಬೇಕೇ? ಎಂದು ಪ್ರಶ್ನಿಸಿ," ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ" ಎಂದಿದ್ದಾರೆ. ಒಳ್ಳೆಯ ಕೆಲಸಕ್ಕೆ ದಿನ ನೋಡುವುದು ಮೂಢತನವೆಂದರು. "ಅಂದು - ಇಂದು ಮತ್ತೆಂದೆನಬೇಡ ದಿನವಿಂದೇ ಶಿವಶರಣನೆಂಬುವಂಗೆ" ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಇಂದಿಗೂ ಧರ್ಮದ ಹೆಸರಿನಲ್ಲಿ, ಜಾತಿ-ಭೇದಗಳ ನೆಪದಲ್ಲಿ, ಮೇಲು-ಕೀಳುಗಳ ತಾರತಮ್ಯದಲ್ಲಿ ಜನರು ತೊಳಲಾಡುತ್ತಿದ್ದಾರೆ. ಮಾನವ - ಮಾನವರ ಮಧ್ಯ ಅಡ್ಡಗೋಡೆಗಳುಂಟಾಗಿವೆ. ಅಸಮಾನತೆ ಇಂದೂ ಇದೆ. ಹೀಗಾಗಿ ಇಂದೂ ಸಹಿತ ಬುದ್ಧ- ಬಸವರ ವಿಚಾರಗಳು ಮೌಢ್ಯತೆಯನ್ನು ಪ್ರತಿಭಟಿಸುವ ವಿಚಾರಗಳು, ವಚನಗಳು ಅಗತ್ಯವೆನಿಸುತ್ತವೆ. ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಆಯಾ ಕಾಲ ಘಟ್ಟದಲ್ಲಿ ಅವರು ಮಾಡಿದ ಹೋರಾಟ, ಸಾರಿದ ಪ್ರತಿಭಟನಾತ್ಮಕ ತತ್ವ ಸಿದ್ಧಾಂತಗಳು ಇಂದು ಕೂಡ ಪ್ರಸ್ತುತವೆನಿಸುತ್ತವೆ " ಬಸವಣ್ಣ ಮೂಢನಂಬಿಕೆಗಳ ಕಟು ಟೀಕಾಕಾರರಾಗಿದ್ದರು. ಜ್ಯೋತಿಷ್ಯ, ಶಕುನ, ತಿಥಿ, ವಾರ, ರಾಹುಕಾಲ, ಗುಳಿಕಕಾಲ ಎಂದು ಮುಂತಾಗಿ ಹೆಜಳಹೆಜ್ಜೆಗೂ ದೈವಕೃಪೆಗಾಗಿ ಹಾತೊರೆಯುವ ಜನರ ದುರ್ಬಲ ಮನಸ್ಸನ್ನು ಸಬಲಗೊಳಿಸಿದ ಸಾಧನೆ ಅವರದು. ತಿಥಿವಾರವೆಂದರಿಯೆ, ಲಗ್ನ ವಿಲಗ್ನವೆಂದರಿಯೇ; ಇರುಳೊಂದು ವಾರ, ಹಗಲೊಂದು ವಾರ; ಭವಿಯೊಂದು ಕುಲ, ಭಕ್ತನೊಂದು ಕುಲ" ವೆಂಬುದಾಗಿ ಹೇಳಿ ಶಿವನಲ್ಲಿ ಏಕೈಕ ನಿಷ್ಠೆಗಾಗಿ ಕರೆ ನೀಡಿದರು"[142] ಏಕದೇವತಾರಾಧನೆಯನ್ನು ಪ್ರತಿಪಾದಿಸಿದ ಅವರು ಎಲ್ಲರೂ ಸಮಾನರೆಂದು ಸಾರಿದ್ದಾರೆ.

12ನೇ ಶತಮಾನದಲ್ಲಿ ಜಟಿಲವಾದ ಮೂಢನಂಬಿಕೆಗಳು ಜಾರಿಯಲ್ಲಿದ್ದವು. ಅವುಗಳ ಆಚರಣೆಯಿಂದಾಗಿ ಕಲ್ಲು, ಮಣ್ಣು, ಮೊರ, ಮಡಿಕೆಗಳೆಲ್ಲವನ್ನು, ಜನ ಪೂಜಿಸುವುದನ್ನು ಕಂಡು ಬಸವಣ್ಣ ತನ್ನ ಈ ವಚನದಲ್ಲಿ ಖಂಡಿಸಿರುವುದನ್ನು ಕಾಣಬಹುದಾಗಿದೆ.

"ಮಡಕೆ ದೈವ, ಮಾರದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲನಾರಿದೈವ ಕಾಣಿರೋ
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ
ದೈವ ದೈವವೆಂದು ಕಾಲಿಡ-ಲಿಂಬಿಲ[143] .... ಎಂದು ವಿಡಂಬಿಸಿದ್ದಾನೆ.

ದೈವಗಳನ್ನು ಅವುಗಳಿಂದಾಗುವ ಶೋಷಣೆಯನ್ನು ಕುರಿತು ಅಂದಿನ ಜನರ ಮೌಢ್ಯತೆಯನ್ನು ಕುರಿತು ಬಸವಣ್ಣ ಖಂಡಿಸಿರುವುದನ್ನು ಆತನ ವಚನಗಳಿಂದ ತಿಳಿದು ಬರುತ್ತದೆ.

"ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯ?
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯ?
ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯ?[144]

ಎಂದು ಬಸವಣ್ಣ ಆ ಸಂದರ್ಭದ ದೇವರ ಅಸ್ತಿತ್ವವನ್ನು ಕುರಿತು ಪ್ರಶ್ನಿಸಿದ್ದಾನೆ. ಇಂತಹ ದೈವಗಳ ನಂಬಿಕೆಯನ್ನು ಸಮಾಜದಿಂದ ತೊಲಗಿಸಲು ಶ್ರಮಿಸಿದನು.

ಮೂಢನಂಬಿಕೆ, ವೈಚಾರಿಕತೆ ಇಲ್ಲದ ಸಮಾಜದಲ್ಲಿ ಸರ್ವೇಸಾಮಾನ್ಯ. ಇಂದು ಕೂಡ ಲಿಂಗಾಯತರೆನಿಸಿಕೊಂಡವರು, ಲಿಂಗದೀಕ್ಷೆ ಪಡೆದ ಮೇಲೂ ಕೆಲವರು ಮೂಢನಂಬಿಕೆ, ವ್ರತಗಳಿಂದ ಹೊರಬಂದಿಲ್ಲ. ಈ ಕಾಲದಲ್ಲೂ ಸಹಿತ ಲಿಂಗಾಯತರೂ ಗುಡಿ ಗುಂಡಾರಗಳಿಗೆ ಹೋಗುವುದು, ಲಕ್ಷ್ಮೀ ಪೂಜೆ ಮಾಡುವುದು, ಮನೆಯಲ್ಲಿ ಗದ್ದಿಗೆ ಮೇಲೆ ದೇವತೆಗಳ ಗುಂಪನ್ನೇ ಪೂಜಿಸುವುದು, ಸಿಡಿಯಾಡುವುದು, ಶಸ್ತ್ರ ಚುಚ್ಚಿಕೊಳ್ಳುವುದು, ಹರಕೆ-ಯಜ್ಞಯಾಗಾದಿಗಳಿಗೆ ಬೆಂಬಲಿಸುವವರು ಇದ್ದಾರೆ. ಇಂತಹ ಮೂಢ ನಂಬಿಕೆಗಳನ್ನು 12ನೇ ಶತಮಾನದಲ್ಲಿ ಕಂಡ ಅಕ್ಕ ಮಹಾದೇವಿ ಈ ರೀತಿ ನುಡಿದಿದ್ದಾಳೆ.

"ಭವಿತಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡಿಯ ಕಟ್ಟಿ ಹುರಿಬೆನ್ನ ಸಿಡಿಯನಾಡಿ
ಬಾಯ ಬೀಗವನ್ನಿಕ್ಕಿಕೊಂಬ(ನು) ದುರಾಚಾರಿಯು
ಬೇವಿನುಡುಗೆಯನ್ನುಟ್ಟುಕೊಂಡು ಹಡಗಲಿಯ ಪಿಡಿದುಕೊಂಡು
'ಉಧೋ ಉಧೋ' ಎಂಬ ದುರಾಚಾರಿಯ ಮುಖ ನೋಡಲಾಗದು
ಸದ್ಗುರು ಮಲ್ಲಿಕಾರ್ಜುನ"[145]

ಭವಿಷ್ಯ ನೋಡುವುದು, ಶಕುನ ಕೇಳುವುದು, ದಿನ ಮಹತ್ವ ಕೇಳಿ ಕಾರ್ಯ ಪ್ರಾರಂಭಿಸುವುದು, ಇವೆಲ್ಲವುಗಳನ್ನು 12ನೇ ಶತಮಾನದ ಶಿವಶರಣರು ಖಂಡಿಸಿದ್ದಾರೆ.

"ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯ
ರಾಶಿ ಕೂಟ ಋಣ ಸಂಬಂಧವುಂಟೆಂದು ಕೇಳಿರಯ್ಯ
ಚಂದ್ರಬಲ ತಾರಬಲವುಂಟೆಂದು ಹೇಳಿರಯ್ಯ
ಕೂಡಲಸಂಗಮನ ಪೂಜಿಸಿದ ಫಲ ನಿಮ್ಮದಯ್ಯ "[146]

" ನಾಳೆ ಬಪ್ಪುದು ನಮಗಿಂದೇ ಬರಲಿ,
ಇಂದು ಬಪ್ಪುದು ನಮಗೀಗಲೇ ಬರಲಿ,
ಇದಕಾರಂಜುವರು, ಇದಕಾರಳುಕುವರು "[147]

ಎಂಬ ಎದೆಗಾರಿಕೆಯನ್ನು ಬಸವಣ್ಣ ಹಾಗೂ ಅವನ ಸಂಗಡಿಗರು ಹೊಂದಿದ್ದು, ಶಕುನ, ಭವಿಷ್ಯ, ಕರ್ಮಸಿದ್ಧಾಂತ, ಹಣೆಬರಹ, ಪುನರ್‌ಜನ್ಮ, ದೆವ್ವ, ಭೂತಗಳನ್ನು ಅಲ್ಲಗಳೆದು, ವೈಚಾರಿಕ ತತ್ವಗಳನ್ನು ಜನಮಾನಸದಲ್ಲಿ ಬಿತ್ತರಿಸಲು ಪ್ರಯತ್ನಿಸಿದರು.

"ಒಲೆಯ ಬೂದಿನ ಬಿರಿಯಲುಬೇಡ
ಒಲಿದಂತೆ ಹೂಸಿಕೊಂಡಿಪ್ಪುದು
ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ
ಒಂದನಾಡ ಹೋಗಿ ಒಂಬತ್ತನಾಡುವ ಡಂಭಕರ ಮೆಚ್ಚ
ನಮ್ಮ ಕೂಡಲಸಂಗಮದೇವ "[148]

ಈ ವಚನದಲ್ಲಿ ಬಸವಣ್ಣ ಡಾಂಭಿಕತೆಯನ್ನು ಕಟುವಾಗಿ ಟೀಕಿಸಿದ್ದಾನೆ. ಧರ್ಮದ ಹೆಸರಿನಲ್ಲಿ ನಡೆಯುವ ಅಂಧಶ್ರದ್ಧೆ, ಪರಂಪರಾಗತವಾಗಿ ಬಂದ ಮೂಢನಂಬಿಕೆ, ತಿಥಿ, ನಕ್ಷತ್ರ, ತಾರಾಬಲ, ಚಂದ್ರಬಲ, ಶಕುನ, ಅಪಶಕುನ ಮುಂತಾದ ಮೌಢ್ಯಗಳನ್ನು ಕುರಿತು ಕಟು ಮಾತುಗಳಲ್ಲಿ ಖಂಡಿಸಿರುವುದು ಅವನ ವಚನಗಳಲ್ಲಿ ವ್ಯಕ್ತವಾಗಿದೆ." ಧರ್ಮದ ಸುತ್ತ ಬೆಳೆದಿದ್ದ ಅವಿಚಾರ, ಅಂಧ ಶ್ರದ್ಧೆ, ಶೋಷಣೆ, ಆಡಂಬರ, ಮೇಲು-ಕೀಳುಗಳು ದುರಹಂಕಾರ ಮೊದಲಾದ ಪಾಪಾಸು ಕಳ್ಳಿಯ ಹೊದರುಗಳನ್ನು ಕಂಡು ಬಸವಣ್ಣ ಅವನ್ನೆಲ್ಲ ಕತ್ತರಿಸಿ ಹಾಕಲು ವಿಚಾರವಾದದ ಹರಿತ ಆಯುಧವನ್ನು ಕೈಗೆತ್ತಿಕೊಂಡ"[149] ಹೀಗೆ ಸಂಪ್ರದಾಯ-ಅಂಧಶ್ರದ್ಧೆ ಅದರಿಂದ ಬೆಳೆದು ಬಂದ ಶೋಷಣೆಯನ್ನು ಕಿತ್ತೆಸೆಯಲು ಬಸವಣ್ಣ ಹೋರಾಡಿದ.

ಅಂದಿನ ಜನರ ವಿವಿಧ ಮೂಢನಂಬಿಕೆಗಳನ್ನು ನಿವಾರಿಸಲು ಬಸವಣ್ಣ ಯತ್ನಿಸಿದರು. ಶಕುನ ಕೇಳುವುದು, ಕುರಿ ಕೋಳಿ ಬಲಿ ಕೊಡುವುದು. ಕಾಲವನ್ನ ರಾಹುಕಾಲ-ಗುಳಿಕಾಲವೆಂದು ವಿಭಜಿಸುವುದು.

ಮರವನ್ನು ಸುತ್ತಿದರೆ, ಮೂಗು ಮುಚ್ಚಿ ಧ್ಯಾನ ಮಾಡಿದರೆ ಪುಣ್ಯ ಅಥವಾ ಮುಕ್ತಿ ದೊರೆಯುತ್ತದೆ ಎಂಬುದು ಜನರ ಮೌಢ್ಯವಲ್ಲದೇ ಮತ್ತೇನು ಅಲ್ಲವೆಂದು ಬಸವಣ್ಣ ನುಡಿದಿದ್ದಾನೆ. ಮರದೈವ, ಪೊರಕೆದೈವ, ಗಿಣ್ಣಿಲುದೈವ ಎಂದು ಕಾಲಿಡಲು ಇಂಬಿಲ್ಲದಷ್ಟು ದೇವರನ್ನು ನಂಬುವವರನ್ನು ಕಂಡು ನಗುತ್ತಾರೆ. ಈ ದೈವಗಳೆಲ್ಲಾ ಹುಸಿ, ಮಡಿಕೆಯ ತೆರ. ಕೂಡಲಸಂಗಮನೊಬ್ಬನೇ ದೈವವೆಂದು ಏಕದೇವ ಕಲ್ಪನೆಯನ್ನು ಸಾರಿದರು. ಮೂಢನಂಬಿಕೆ ಯನ್ನು ನಂಬಿ ಅಂಧ ಸಂಪ್ರದಾಯಗಳ ಕತ್ತಲಲ್ಲಿ ಬದುಕುತ್ತಿದ್ದ ಅಂದಿನ ಜನತೆಯನ್ನು ಶರಣರು ವೈಚಾರಿಕತೆಯ ಬೆಳಕಿನತ್ತ ಕರೆ ತಂದರು. ಅಜ್ಞಾನದ ಕೊಳೆಯನ್ನು ಕಿತ್ತು ಹಾಕಿದ್ದು ಶರಣರ ಪ್ರಮುಖ ಸಾಧನೆಯಾಗಿತ್ತು.

ಶರಣರು ಅಂಧ ಸಂಪ್ರದಾಯಗಳ ಆಗರವಾದ ವೇದ ಪುರಾಣಗಳನ್ನು ಅಲ್ಲಗಳೆಯುವುದರೊಂದಿಗೆ ವೈಚಾರಿಕತೆಯನ್ನು ಒಡಮೂಡಿಸಿದರು. ಕರ್ಮವನ್ನು ತಿರಸ್ಕರಿಸಿದರು. ಅವರಿಗೆ 'ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ'ಯಾಗಿ ಕಂಡವು. 'ವೇದ ವೇಧಿಸಲರಿಯದೆ ಕೆಟ್ಟವು, ಪುರಾಣ ಪೂರೈಸಲರಿಯದೆ ಕೆಟ್ಟವು, ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು, ಹಿರಿಯರು ತಮ್ಮ ತಾವರಿಯದೆ ಕೆಟ್ಟರು' ಎಂದು ಹೇಳುವ ಅಲ್ಲಮ ಪ್ರಭುವಿನ ನುಡಿ ಮಹತ್ವದ್ದಾಗಿದೆ. 'ವೇದ ಶಾಸ್ತ್ರಾಗಮ ಪುರಾಣಗಳೆಂಬವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ' ಎನ್ನುವ ಅಕ್ಕಮಹಾದೇವಿಯ ನುಡಿ ತೀವ್ರ ಮಾರ್ಮಿಕವಾಗಿದೆ. ಒಂದು ಕಡೆ ವೈದಿಕ ಶೋಷಣೆ-ಮತ್ತೊಂದು ಕಡೆ ಅಜ್ಞಾನ ಇವುಗಳನ್ನು ಶರಣರು ಹೋಗಲಾಡಿಸಲೆತ್ನಿಸಿದರು. ಮಾರಿಮಸಣಿಗಳ ಪೂಜೆ, ತಾಮಸವ್ರತನೇಮ, ಜೋತಿಷ್ಯ-ಶಕುನಗಳನ್ನು ನಂಬಿಕೊಂಡು ಕತ್ತಲಲ್ಲಿದ್ದ ಜನತೆಗೆ ಬೆಳಕಿನ ಕಿರಣಗಳನ್ನು ಶರಣರು ತೋರಿದರು.

ಬಸವಣ್ಣನ ಕಾರ್ಯ ಚಟುವಟಿಕೆಗಳನ್ನು ಆರ್ಥರ ಮಾಯಿಲ್ಸ ಎಂಬ ವಿದ್ವಾಂಸರು ತಮ್ಮ ' ಲ್ಯಾಂಡ್ ಆಫ್ ದಿ ಲಿಂಗಂ ' ಕೃತಿಯಲ್ಲಿ ಹೇಳಿದ ಮಾತುಗಳು ಹೀಗಿವೆ : "ಬಸವಣ್ಣನವರನ್ನು ಕುರಿತು ಪೌರಾಣಿಕ ಕಥೆ ಏನೇ ಹೇಳಲಿ, ಅವನು ಭಾರತ ದೇಶದ ಮೊಟ್ಟ ಮೊದಲನೆಯ ಸ್ವತಂತ್ರ ವಿಚಾರವಾದಿ (First Indian Free Thinker) ಆಗಿದ್ದನೆಂಬ ವಿಷಯ ಅತ್ಯಂತ ಸ್ಪಷ್ಟವಾಗಿದೆ. ಅವನನ್ನು ಭಾರತ ದೇಶದ ಲೂಥರ್‌ನೆಂದು ಕರೆಯಬಹುದು. ಬಸವಣ್ಣನವರು ಕಾಣಿಸಿಕೊಂಡಾಗ ಪುರೋಹಿತರು ಸಮಾಜದ ನೇತಾರರಾಗಿ ರಾಜಿಸುತ್ತಿದ್ದರು. ಬುದ್ಧಿವಂತಿಕೆ ಮತ್ತು ಸ್ವತಂತ್ರ ವಿಚಾರ ಶಕ್ತಿಯಿಂದ, ಜಾತೀಯತೆಯ ನಿರ್ಮೂಲನೆ ಮಾಡಲು, ಪೌರೋಹಿತ್ಯದ ಅಧಿಕಾರವನ್ನು ಕಿತ್ತೆಸೆಯಲು, ಚಳುವಳಿಯೊಂದು ಆದೇ ಆಗ ಪ್ರಾರಂಭವಾಗಿತ್ತು. ಶೈವ ಬ್ರಾಹ್ಮಣನಾದ ಬಸವೇಶ್ವರನು ಈ ಉಗ್ರವಾದಿಗಳ ಪಕ್ಷದಲ್ಲಿದ್ದನು. ಜಾತೀಯತೆ ಮತ್ತು ಕಂದಾಚಾರಗಳನ್ನು ನಿರ್ನಾಮ ಮಾಡಲು ಉಗ್ರವಾದಿಗಳ ಪಕ್ಷದ ಹಿರಿತನವನ್ನು ವಹಿಸಿದನು ಹುಟ್ಟಿನಿಂದ ಸಕಲರೂ ಸಮಾನರೆಂದೂ, ಪುರುಷರಷ್ಟೇ ಸ್ತ್ರೀಯರೂ ಶ್ರೇಷ್ಠರೆಂದೂ, ಬಾಲ್ಯ ವಿವಾಹವು ತಪ್ಪೆಂದೂ, ವಿಧವೆಯರಿಗೆ ಪುನರ್ವಿವಾಹ ಮಾಡಿಕೊಳ್ಳಲು ಅನುಮತಿ ಕೊಡುವುದು ಒಪ್ಪವೆಂದೂ ಬೋಧಿಸಿದನು. ಲಿಂಗಾಯತ ವೀರಶೈವರಿಗೆಲ್ಲ ವೈಯಕ್ತಿಕ ಸ್ವಾತಂತ್ರ್ಯದ ಭರವಸೆಯಿತ್ತು. ಇಷ್ಟಲಿಂಗಧಾರಿಗಳೆಲ್ಲರೂ ಒಂದೇಯಾಗಿದ್ದು, ಸಹ ಪಂಕ್ತಿ ಭೋಜನ ಮತ್ತು ತಮ್ಮತಮ್ಮೊಳಗೆ ರಕ್ತ ಸಂಬಂಧ ಮಾಡುವುದು ಕಡ್ಡಾಯವಾಗಿತ್ತು"[150]

ಹೀಗೆ ಬಸವಣ್ಣನವರು ಮೂಢನಂಬಿಕೆ, ಸಾಮಾಜಿಕ ಅನಿಷ್ಟಗಳು, ಅನೀತಿಗಳನ್ನು ಖಂಡಿಸಿದ್ದಾರೆ. ಮೌಢ್ಯತೆಯಿಂದ ಆಚರಿಸುವ ಕೆಲವು ಆಚರಣೆಗಳನ್ನು ಸಂಪ್ರದಾಯಗಳನ್ನು ವಿರೋಧಿಸಿದರು. ವೈಚಾರಿಕತೆಯನ್ನು ಬೆಳೆಸಿದರು. ಶಾಸ್ತ್ರ, ಪುರಾಣ, ಆಗಮ, ವೇದಗಳ ಬಗ್ಗೆ ಅಂಧ ಶ್ರದ್ಧೆಯನ್ನೇ ಕಿತ್ತು ಹಾಕಿದರು. ಜಾತಿ ಸೂಚಕ, ಜನನ ಸೂಚಕ, ಮೃತ ಸೂಚಕ, ರಜ ಸೂತಕ, ಉಚ್ಛಿಷ್ಟ ಸೂತಕಗಳ ಬಗ್ಗೆ ಇದ್ದ ಮೌಢ್ಯತೆಯನ್ನು ತೊಡೆದು ಹಾಕಿದರು.

ತಲೆ ತಲಾಂತರಗಳಿಂದ ಸಂಪ್ರದಾಯಗಳಿಗೆ ಶರಣಾಗಿ ಅವುಗಳನ್ನು ಒಪ್ಪಿಕೊಂಡು ಜಡತ್ವ, ಜಾಢ್ಯತೆ ನಮಗೆ ನಮ್ಮ ಸಮಾಜಕ್ಕೆ ಅಂಟಿಕೊಂಡಿದೆ. ಎಲ್ಲ ಸಾಂಪ್ರದಾಯಿಕ ಮತ್ತು ಧರ್ಮಗಳಲ್ಲಿ ಅನೇಕ ನೀತಿ ಪರ ಅಂಶಗಳಿದ್ದರೂ ಕೂಡ, ಅವುಗಳ ಅನುಯಾಯಿಗಲು, ಧಾರ್ಮಿಕ ಮುಂದಾಳುಗಳು ಸ್ವಾರ್ಥ ಮತ್ತು ಮತಾಂಧತೆಯಿಂದ ಆಳವಾಗಿ ಬೇರೂರಿಸುವ ಅಸಹಾಯಕತೆಯ ಬಿಕ್ಕಟ್ಟಿನಿಂದ ಹೊರಬರಲು ಜನಸಾಮಾನ್ಯರಿಗೆ ಅಸಾಧ್ಯವಾಗಿದೆ. ಇಂದಿನ ತುರ್ತು ಅಗತ್ಯವೆಂದರೆ ವೈಚಾರಿಕತೆ ಅದನ್ನು ಬಸವ ತತ್ವ ಒಳಗೊಂಡಿದೆ. "ಮನುಷ್ಯನ ಅನೇಕ ಸಂಕಷ್ಟಗಳು ವೈಚಾರಿಕತೆಯಿಂದ ಅಂತ್ಯಗೊಳ್ಳಲು ಸಾಧ್ಯ" ಎಂಬುದು ಬರ್ಟ್ರಾಂಡ ರಸೆಲ್‌ರವರ ಅಭಿಪ್ರಾಯ. ಮೂಢನಂಬಿಕೆ, ಅಂಧ ಸಂಪ್ರದಾಯ, ಅನೀತಿಯುತ ನಡುವಳಿಕೆಗಳು ಸಮಾಜಕ್ಕೆ ಮಾರಕ. ದೇವರು ಧರ್ಮದ ಹೆಸರಿನಲ್ಲಿ ಮಾಡುವ ಶೋಷಣೆ ಇನ್ನೂ ಭಯಂಕರ ಇವುಗಳನ್ನು ಬಸವಣ್ಣ ವಿರೋಧಿಸಿದರು. ವೈಚಾರಿಕತೆ ಬೆಳೆಸಲು ವಚನ ಸಾಹಿತ್ಯ ಸೃಷ್ಟಿಗೊಂಡಿತು. ನೀತಿಯುತ ಬದುಕಿಗೆ, ನೈತಿಕ ವಿಚಾರಗಳಿಗೆ ಹೆಚ್ಚು ಒತ್ತುನೀಡಿ, ವಿನಯವಂತನೇ ನೀತಿವಂತನೆಂದು ಬಸವಣ್ಣ ತಿಳಿಸಿದ್ದಾರೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಲ್ಲ' ಎಂದು ಸಾರಿದ್ದಾರೆ. ಸರ್ವರಿಗೂ ಸುಲಭವಾಗಿ ಅರ್ಥವಾಗುವಂತಹ ಏಳು ನೈತಿಕ ವಿಚಾರಗಳನ್ನು ಬಸವಣ್ಣ ತನ್ನ ಈ ವಚನದಲ್ಲಿ ಹೇಳಿದ್ದಾನೆ.

" ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗದೇವನೊಲಿಸುವ ಪರಿ "

ಎಲ್ಲ ಪ್ರಗತಿಪರ ಧರ್ಮಗಳಲ್ಲಿ ಇಂತಹ ಉದಾತ್ತ ವಿಚಾರಗಳನ್ನು ನೀತಿಯ ನೆಲೆಗಟ್ಟನ್ನು ಕಾಣಬಹುದಾಗಿದೆ. ಅದನ್ನು 12ನೇ ಶತಮಾನದಲ್ಲಿಯೇ ಬಸವಣ್ಣ ಹೇಳಿದರು.

"ನುಡಿದಂತೆ ನಡೆಯಬೇಕು" ಎಂಬುದು ಬಸವಣ್ಣನವರ ಕಟ್ಟಪ್ಪಣೆ, ಅದಕ್ಕಾಗಿ ಅವರು "ಏನಯ್ಯ ವಿಪ್ರರು ನುಡಿದಂತೆ ನಡೆಯರು! ಇದೆಂತಯ್ಯ? ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ" ಎಂದು ವಿಪ್ರರನ್ನು ಟೀಕಿಸಿದರು" ಕಂಡಕಂಡ ನೀರಲ್ಲಿ ಮುಳುಗುವ" "ಕಂಡ ಕಂಡ ಗಿಡವನ್ನು ದೇವರೆಂದು ಸುತ್ತುವ" "ಬಂಡೆ ಪತ್ರೆ ಪುಷ್ಪವ ತಂದು" ತಾಸುಗಟ್ಟಲೆ ಪೂಜಿಸುವ, "ಮನದಲ್ಲಿ ಲೇಸಿಲ್ಲದೆ, ಭಸಿತವನ್ನು ಪೂಸುವ" ಮನದಲ್ಲಿ ಲೇಸಿಲ್ಲದೆ ಲಿಂಗವನ್ನು ಪೂಜಿಸುವ ಢಾಂಬಿಕರನ್ನು ತೆಗಳಿದರು. "ಕಿರುಕುಳ ದೇವ ಪೂಜೆ, ಅಂತ್ರ-ಮಂತ್ರ ತಾಯಿತ ಕಟ್ಟಿಕೊಳ್ಳುವುದನ್ನು ಖಂಡಿಸಿದರು. ಯಾರೇ ಇರಲಿ, ಅವರ ಡಾಂಭಿಕ ಆಚಾರ - ವಿಚಾರ, ಪರರ ಸುಲಿಗೆಯನ್ನು ತೆಗಳಿದರು. ಕುಲಮೂಲದಿಂದೊದಗುವ ಅಹಂಕಾರ ಸಂಪತ್ತಿನೊಂದೊದಗುವ

ಅಹಂಕಾರಗಳನ್ನು ತೆಗಳಿ ಶೀಲಕ್ಕೆ ಅತ್ಯಂತ ಬೆಲೆ ಕೊಟ್ಟರು. ಉತ್ತಮ ನೀತಿ ಪಾಲನೆ, ಆಚಾರ-ವಿಚಾರಪಾಲನೆಯನ್ನು ಪ್ರಶಂಸಿಸಿ, ತೋರಿಕೆಯ ಮಡಿಯನ್ನು ದೂರವಿರಿಸಿದರು. ಅಂಧಶ್ರದ್ಧೆಗಳಿಗೆ ಅವಕಾಶ ಕೊಡಲಿಲ್ಲ. ಹೀಗಾಗಿ ವಿದ್ವಜ್ಜನತೆಯು ಅವರು ಮಾಡಿದ ಕ್ರಾಂತಿಯಿಂದಾಗಿ ಅವರನ್ನು "ಲೂಥರ್ ಆಫ್ ಇಂಡಿಯಾ" ಎಂದು ಗೌರವಿಸಿತು.

ಅನೀತಿಯನ್ನು ಖಂಡಿಸಿ, ಬಸವಣ್ಣ ನೀತಿಯನ್ನು ಪ್ರತಿಪಾದಿಸಿದು. ಧರ್ಮದ ಜೀವಾಳವೇ ನೀತಿ "ಒಳಿತನ್ನು ಒಳಗೆ ಧಾರಣ ಮಾಡುವುದು ಧರ್ಮ. ಒಳಗೆ ಧಾರಣ ಮಾಡಿದುದನ್ನು ಮನೇಂದ್ರಿಯಗಳ ಮೂಲಕ ಹೊರಗೆ ಪ್ರಯೋಗದಲ್ಲಿ ತರುವುದು ನೀತಿ".[151] ಧರ್ಮಕ್ಕೂ ನೀತಿಗೂ ನಿಕಟ ಸಂಬಂಧವಿದೆ. ಅನೀತಿಯನ್ನು ಹೊಡೆದೋಡಿಸುವುದು ಧರ್ಮದ ಕೆಲಸ. ನೀತಿಯುತ ಧರ್ಮದಿಂದ ಮಾತ್ರ ವ್ಯಕ್ತಿಯ, ಸಮಾಜದ ಸ್ವಾಸ್ಥ್ಯ ಸಾಧ್ಯ. ನೀತಿಯುತ ಬದುಕಿಗೆ ಬಸವಣ್ಣ ಮಾದರಿಯಾಗಿದ್ದ, ಹೇಳಿದ್ದನ್ನೇ ಬದುಕಿ ತೋರಿದ ವ್ಯಕ್ತಿ. ನೈತಿಕ ಪರಿಶುದ್ಧತೆಗೆ ಪ್ರಾಮುಖ್ಯತೆ ನೀಡಿದ.

ಅನೀತಿ ಅದೊಂದು ಕಾಲ್ಕೊಳೆ. ಅದು ಒಳಮೈ ಹೊರಮೈಗಳೆರಡನ್ನು ಅಂಟಿಕೊಂಡ ಕಾಲ್ಕೊಳೆ. ಅದನ್ನು ತೊಳೆವ ನಿಜವಾದ ನೀರು ನೀತಿ. ನೀತಿವಂತನಾಗದೆ ಬರೀ ನೀರಿನಿಂದ ಹೊರಮೈ ತೊಳೆದರೆ ಉಪಯೋಗವಿಲ್ಲ.

"ಕುದುರನೇಸು ತೊಳೆದರೆಯೂ ಕೆಸರು ಮಾಣ್ಬುದೆ?
ಎನ್ನ ಕಾಯದೊಳುಳ್ಳವ ಗುಣಂಗಳ ಕಳೆದು
ಕೃಪೆಯ ಮಾಡಯ್ಯ!
ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ ಎನ್ನ ಮನ
ಕೂಡಲ ಸಂಗಮದೇವಾ, ನಿಮಗೆ ಶರಣೆಂದು ಶುದ್ಧ ಕಾಣಯ್ಯ॥ "

'ಅನೀತಿ ತೊಲಗಬೇಕಾದರೆ ನೀತಿಯೊಂದೇ ಪರಮೋಪಾಯ. ಈ ನೀತಿಗೆ ಜೀವಾಳ ಭಕ್ತಿಭಾವ. ಅನೀತಿ-ಅನಾಚಾರಗಳನ್ನು ಬಿಡದೆ ಭಕ್ತಿ ಮುಂದುವರಿಯುವಂತಿಲ್ಲ. ದೇಹ ದೇಗುಲ ಹಸನಾಗುವಂತಿಲ್ಲ. ಹಸನಾಗದ ದೇವ ದೀಪ್ತಿ ಹೊಮ್ಮಿ ಹೊಳೆಯುವಂತಿಲ್ಲ"[152] ಎಂದು ಬಸವಣ್ಣ ನೀತಿಯ ಮಹತ್ವ ಹೇಳಿದ್ದಾನೆ.

"ಅತ್ತಲತ್ತ ಹೋಗದಂತೆ, ಹೆಳವನ ಮಾಡಯ್ಯ ತಂದೆ,
ಸುತ್ತಿ ಸುಳಿದು ನೋಡದಂತೆ,ಅಂಧಕನ ಮಾಡಯ್ಯ ತಂದೆ,
ಮತ್ತೊಂದು ಕೇಳದಂತೆ, ಕಿವುಡನ ಮಾಡಯ್ಯ ತಂದೆ,
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿತು" [153]

ಎಂದು ಬಸವಣ್ಣ ಮನದ ಆಶೆಗಳನ್ನು ಅಳಿಸಿಹಾಕಲು, ಮನಸ್ಸಿನ ಚಂಚಲತೆಯನ್ನು ಕಳೆದು ನೀತಿ ಮಾರ್ಗದಲ್ಲಿ ನಡೆಯಲು ಸಾಧ್ಯ ಎಂದು ಹೇಳಿದ್ದಾನೆ. "ದಯವಿಲ್ಲದ ಧರ್ಮ ಅದಾವುದಯ್ಯ ದಯವೇ ಬೇಕು, ಸಕಲ ಪ್ರಾಣಿಗಳಲ್ಲಿ" ಎಂದ ಬಸವಣ್ಣ ದಯೆ ಪ್ರೀತಿ, ಅಹಿಂಸೆ, ಸತ್ಯ -ಇವು ಮಾತು ಮತ್ತು ಕೃತಿಯಲ್ಲಿ ನೀತಿಯುತವಾಗಿರಬೇಕೆಂದು ಹೇಳಿದ್ದಾನೆ. ಅಲ್ಲದೇ 12ನೇ ಶತಮಾನದಲ್ಲಿದ್ದ ಕರ್ಮಕಾಂಡ, ಜಾತೀಯತೆ, ಮೂರ್ತಿಪೂಜೆ, ಸ್ತ್ರೀಯರನ್ನು ಕೀಳಾಗಿ ಕಾಣುವುದು, ಅಸ್ಪೃಶ್ಯತೆ ಇವುಗಳನ್ನು ಬಸವಣ್ಣ ಪ್ರತಿಭಟಿಸಿ ಸಾಮಾಜಿಕ -ಧಾರ್ಮಿಕ ಸುಧಾರಣೆಗಳನ್ನು ಕೈಗೊಂಡಿದ್ದು ಚರಿತ್ರೆಯ ಮಹತ್ವದ ಅಂಶವಾಗಿದೆ.

ಮಾನವೀಯತೆಗೆ ಪ್ರಾಶಸ್ತ್ಯ ನೀಡಿ ಸಮಾನತೆಯ ನವಸಮಾಜ ನಿರ್ಮಿಸಿ ವೈಚಾರಿಕ ಕ್ರಾಂತಿಯುಂಟು ಮಾಡಿದರು. ದಯೆ, ಸತ್ಯನಿಷ್ಠೆ, ಸದ್ಭಾವಗಳನ್ನು ಸಾರಿದರು.

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮ ಒಂದೇ ಎಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ"[154]

ಸಾಧಕನು ಎಂತಹ ಮಾನಸಿಕ ದೃಢತೆಯನ್ನು ಗಳಿಸಬೇಕು ಎಂಬುದನ್ನು ಈ ವಚನದಲ್ಲಿ ಬಸವಣ್ಣ ಹೇಳಿದ್ದಾನೆ. ಸಾಧಕನಾದವನಿಗೆ 'ನೈತಿಕ ಮತ್ತು ಧಾರ್ಮಿಕ' ವಿಚಾರಗಳೆರಡರಲ್ಲಿಯೂ ಸಮಾನವಾದ ನಿಷ್ಠೆ ಬೆಳೆಯಬೇಕು ಎಂದು ಬಯಸುತ್ತಾನೆ. ನೈತಿಕ, ಸಾಮಾಜಿಕ, ಧಾರ್ಮಿಕ ವಿಷಯಗಳಲ್ಲಿ ಬಹಿರಂಗ ಮತ್ತು ಅಂತರಂಗ ಎರಡು ಶುಚಿಯಾಗಿರಬೇಕೆಂದು ಆಶಿಸುತ್ತಾನೆ.

* * * * *

ಅಡಿ ಟಿಪ್ಪಣಿಗಳು :

1 ಡಾ।ಎಸ್.ಆರ್.ಗುಂಜಾಳ: ಬಸವಣ್ಣನವರ ಸುತ್ತಮುತ್ತ ಪುಟ 3

2 ಪ್ರೋ.ಬಿ.ಷೇಕ್‌ಅಲಿ (ಸಂ) ಪ್ರೋ.ಬಿ.ಸುರೇಂದ್ರರಾವ್: ಕರ್ನಾಟಕ ಚರಿತ್ರೆ ಸಂ.2 ಪುಟ 4-5

3 ಜಿ.ಎಸ್.ಶಿವರುದ್ರಪ್ಪ(ಸಂ): ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ-1 ಪುಟ 31

4 S.N.DASAGUPTA: History of Indian Philosophy Vol.V 1992

5 ಡಾ।ಬಸವರಾಜ ಸಬರದ: ಬಸವೇಶ್ವರ ಮತ್ತು ಪುರಂದರದಾಸರು ಒಂದು ಸಾಂಸ್ಕೃತಿಕ ಅಧ್ಯಯನ ಪುಟ 5

6 ಎಂ.ಚಿದಾನಂದಮೂರ್ತಿ: ವಚನ ಸಾಹಿತ್ಯ ಪುಟ 38

7 ರಹಮತ್ ತರಿಕೇರೆ : ಧರ್ಮ : ಕ.ವಿ. ವಿಶ್ವಕೋಶ - 3 ಸಂ ಪುಟ 329-330

8 ಮಹೇಶ ತಿಪ್ಪಶೆಟ್ಟಿ (ಸಂ): ಬಸವ ತತ್ವ : ಸಾಮಾಜಿಕ ಬದಲಾವಣೆ ಬಸವತತ್ವ ಒಂದು ಪ್ರತಿಭಟನೆಯ ಚಳುವಳಿಯಾಗಿ - ಡಾ. ಎ.ಜಿ. ಮುಡಬಿದ್ರಿಯವರ ಲೇಖನ ಪುಟ : 48

9 ಶ್ರೀ ಬಸವೇಶ್ವರ ಸಂಪಾದಿತ -1967 ಪುಟ 55

10 ಕನ್ನಡ ವಿಷಯ ವಿಶ್ವಕೋಶ - ಪ್ರ. ಸಂ. ಡಾ.ಹಾ.ಮಾ.ನಾಯಕ ಪುಟ 972

11 ಶ್ರೀ ಬಸವರಾಜ ಸಬರದವರ ಕೃತಿ: ಬಸವೇಶ್ವರ ಮತ್ತು ಪುರಂದರದಾಸ ಒಂದು ಸಂಸ್ಕೃತಿಕ ಅಧ್ಯಯನ ಕೃತಿಯಿಂದ ಆಯ್ದುಕೊಂಡದ್ದು.

12 ಶ್ರೀ ಬಸವೇಶ್ವರ - ಸಂಪಾದಿತ 1967 ಪುಟ 59

13 ಡಾ. ಸಿದ್ಧಯ್ಯ ಪುರಾಣಿಕ : ಬಸವಣ್ಣನವರ ಜೀವನ ಹಾಗೂ ಸಂದೇಶ ಪುಟ 13

14 ಡಾ. ಬಸವರಾಜ ಸಬರದರ : ಬಸವಣ್ಣ ಮತ್ತು ಪ್ರಸ್ತುತ ಸಾಮಾಜಿಕ ಸಂದರ್ಭ ಪುಟ 39

15 ಕೀರ್ತಿನಾಥ ಕುರ್ತಕೋಟಿ : ಕನ್ನಡ ಸಾಹಿತ್ಯ ಸಂಗಾತಿ ಪುಟ 152

16 ಅದೇ ಗ್ರಂಥ ಪುಟ 158

17 Dr. P.B. Desai : Basaveshwara and his times Page 195

18 ಡಾ. ಬಸವರಾಜ ಸಬರದ : ಬಸವೇಶ್ವರ ಮತ್ತು ಪುರಂಧರ ದಾಸ ಒಂದು ಸಾಂಸ್ಕೃತಿಕ ಅಧ್ಯಯನ ಪುಟ 35

19 Dr. P.B. Desai : Basaveshwara and his times Page 195

20 ಅದೇ ಗ್ರಂಥ ಪುಟ 220

21 ಡಾ. ಬಿ.ಷೇಕ್ ಅಲಿ: ಕರ್ನಾಟಕ ಚರಿತ್ರೆ ಸಂ : 2 ಸಂ ಪುಟ 239

22 ಗೊ.ರು.ಚೆನ್ನಬಸಪ್ಪ : ಶರಣ ತತ್ವ ಚಿಂತನ (ಸಂ.) ಪುಟ : 106

23 ಡಾ। ಆರ್.ಸಿ.ಹಿರೇಮಠ :ಬಸವಣ್ಣನವರ ವಚನಗಳು ವಚನ : 62

24 ಅದೇ ಗ್ರಂಥ ವಚನ : 437

25 ಕರ್ನಾಟಕ ಚರಿತ್ರೆ : ಸಂಪುಟ - 2 ಪುಟ : 4-5

26 ಡಾ।. ಮೃತ್ಯುಂಜಯ ರುಮಾಲೆ (ಸಂ): ಬಸವ ಸಾಹಿತ್ಯ ಪುಟ : 341

27 ಅದೇ ಗ್ರಂಥ ಪುಟ : 342

28 ಅದೇ ಗ್ರಂಥ ಪುಟ : 344

29	ಮಹೇಶ ತಿಪ್ಪಶೆಟ್ಟಿ(ಸಂ): ಬಸವ ತತ್ವ : ಸಾಮಾಜಿಕ ಬದಲಾವಣೆ	ಪುಟ : 49
30	ಅದೇ ಗ್ರಂಥ	ಪುಟ : 51
31	ಕರ್ನಾಟಕ ಚರಿತ್ರೆ : ಸಂಪುಟ - 2	ಪುಟ : 216-217
32	ಮಹೇಶ ತಿಪ್ಪಶೆಟ್ಟಿ (ಸಂ) :ಬಸವ ತತ್ವ : ಸಾಮಾಜಿಕಬದಲಾವಣೆ	ಪುಟ : 97
33	ಅದೇ ಗ್ರಂಥ	ಪುಟ : 105
34	ಅದೇ ಗ್ರಂಥ	ಪುಟ : 5
35	ಅದೇ ಗ್ರಂಥ	ಪುಟ : 10
36	ಡಾ । ಆರ್.ಸಿ. ಹಿರೇಮಠ(ಸಂ) : ಬಸವಣ್ಣನವರ ವಚನಗಳು	ವಚನ : 589
37	ಅದೇ ಗ್ರಂಥ	ವಚನ : 591
38	ಅದೇ ಗ್ರಂಥ	ವಚನ : 349
39	ಅದೇ ಗ್ರಂಥ	ವಚನ : 345
40	ಅದೇ ಗ್ರಂಥ	ವಚನ : 592
41	ಅದೇ ಗ್ರಂಥ	ವಚನ : 622
42	ಅದೇ ಗ್ರಂಥ	ವಚನ : 451
43	ಅದೇ ಗ್ರಂಥ	ವಚನ : 1223
44	ಅದೇ ಗ್ರಂಥ	ವಚನ : 718
45	D.D. Kasambi : The Culture and Civilization of Ancient India in Historical Outline.	Page : 52
46	ಡಾ. ಬಸವರಾಜ ಸಬರದ : ಸಮುದಾಯ ಮತ್ತು ಸಂಸ್ಕೃತಿ -	ಪುಟ : 128
47	ಅದೇ ಗ್ರಂಥ	ಪುಟ : 16
48	ಡಾ। ಆರ್.ಸಿ. ಹಿರೇಮಠ : ಬಸವಣ್ಣನವರ ವಚನಗಳು	ವಚನ : 142
49	ಅದೇ ಗ್ರಂಥ	ವಚನ : 334
50	ಅದೇ ಗ್ರಂಥ	ವಚನ : 879
51	ಅದೇ ಗ್ರಂಥ	ವಚನ : 652
52	ಅದೇ ಗ್ರಂಥ	ವಚನ : 612
53	ಅದೇ ಗ್ರಂಥ	ವಚನ : 591
54	ಅ.ನ. ಕೃಷ್ಣರಾಯ: ಶ್ರೀ ಬಸವಣ್ಣನವರ ಅಮೃತವಾಣಿ	ಪುಟ : 61
55	ಬಸವಣ್ಣನವರ ವಚನಗಳು	ವಚನ : 576
56	ಡಾ। ಹೆಚ್. ತಿಪ್ಪೇರುದ್ರಸ್ವಾಮಿ: ವೀರಶೈವ ದೀಪ್ತಿ	ಪುಟ : 16
57	ಬಸವಣ್ಣನವರ ವಚನಗಳು	ಪುಟ : 879
58	ಅದೇ ಗ್ರಂಥ	ಪುಟ : 344
59	" ಜನಪದ " ಮಾಸಿಕ ಮೇ 2005	ಪುಟ : 13
60	ಬಸವಣ್ಣನವರ ವಚನಗಳು	ವಚನ : 345

61 ಅದೇ ಗ್ರಂಥ ವಚನ : 589
62 ಅದೇ ಗ್ರಂಥ ವಚನ : 343
63 ಅದೇ ಗ್ರಂಥ ವಚನ : 594
64 ಅದೇ ಗ್ರಂಥ ವಚನ : 656
65 ಅದೇ ಗ್ರಂಥ ವಚನ : 717
66 ಅದೇ ಗ್ರಂಥ ವಚನ : 417
67 ಡಾ। ಬಸವರಾಜ ಸಬರದ: ಬಸವಣ್ಣ ಪುರಂದರದಾಸರು ಒಂದು ಸಾಂಸ್ಕೃತಿಕ ಅಧ್ಯಯನ ಪುಟ : 121
68 ಬಸವಣ್ಣನವರ ವಚನಗಳು ವಚನ : 717
69 ಅದೇ ಗ್ರಂಥ ಪುಟ : 180 ವಚನ : 717
70 ಅದೇ ಗ್ರಂಥ ಪುಟ : 187 ವಚನ : 750
71 ಅದೇ ಗ್ರಂಥ ಪುಟ : 150 ವಚನ : 599
72 ಅದೇ ಗ್ರಂಥ ಪುಟ : 251 ವಚನ : 952
73 ಅದೇ ಗ್ರಂಥ ಪುಟ : 153 ವಚನ : 612
74 ಅಲ್ಲಮಪ್ರಭುಗಳ ವಚನ ಸಂ : 2 ಪುಟ : 128 ವಚನ : 465
75 ಅದೇ ಗ್ರಂಥ ಪುಟ : 66 ವಚನ : 324
76 ಮಹೇಶ ತಿಪ್ಪಶೆಟ್ಟಿ (ಸಂ): ಬಸವ ತತ್ವ : ಸಾಮಾಜಿಕ ಬದಲಾವಣೆ ಪುಟ : 37
77 ಅದೇ ಗ್ರಂಥ ಪುಟ : 18
78 ಡಾ। ಆರ್.ಸಿ. ಹಿರೇಮಠ : ಮಹಾಯಾತ್ರೆ ಪುಟ : 35
79 ಡಾ। ಮೃತ್ಯುಂಜಯ ರುಮಾಲೆ : ಬಸವ ಸಾಹಿತ್ಯ : ಸಂ. ಪುಟ : 18
80 ಬಸವಣ್ಣನವರ ವಚನಗಳು ವಚನ : 611
81 ಅದೇ ಗ್ರಂಥ ವಚನ : 240
82 ಅದೇ ಗ್ರಂಥ ವಚನ
83 ಅದೇ ಗ್ರಂಥ ವಚನ
84 ಅದೇ ಗ್ರಂಥ ವಚನ
85 ಅದೇ ಗ್ರಂಥ ವಚನ
86 ಡಾ। ಹೆಚ್. ತಿಪ್ಪೇರುದ್ರಸ್ವಾಮಿ : ವೀರಶೈವ ದೀಪ್ತಿ ಪುಟ : 14
87 ಕೆ.ಜಿ. ನಾಗರಾಜಪ್ಪ : ಭಕ್ತಿ ಸಾಹಿತ್ಯದಲ್ಲಿ ಪ್ರತಿಭಟನೆಯ ವಿಧಾನಗಳು ಪುಟ : 40
88 ಸಂಕ್ರಮಣ - 359 - ಜನವರಿ ಫೆಬ್ರುವರಿ 2005 ಪುಟ : 61
89 ಶ್ರೀ ಡಿ.ಎಂ. ಧನ್ನೂರ್ : ಅರಿವಿನ ಆಂದೋಲನ ಪುಟ : 41
90 ಬಸವಣ್ಣನವರ ವಚನಗಳು ವಚನ : 716
91 ಅದೇ ಗ್ರಂಥ ವಚನ : 700
92 ಅದೇ ಗ್ರಂಥ ವಚನ : 689

93 ಅದೇ ಗ್ರಂಥ ವಚನ : 620
94 ಅದೇ ಗ್ರಂಥ ವಚನ : 544
95 ಅದೇ ಗ್ರಂಥ ವಚನ : 47
96 ಅದೇ ಗ್ರಂಥ ವಚನ : 695
97 ಅದೇ ಗ್ರಂಥ ವಚನ : 715
98 ಅದೇ ಗ್ರಂಥ ವಚನ : 575
99 ಬಸವ ಮಾರ್ಗ ಪತ್ರಿಕೆ - ಫೆಬ್ರುವರಿ 2002 ಪುಟ : 31
100 ಮಹೇಶ ತಿಪ್ಪಶೆಟ್ಟಿ (ಸಂ):ಬಸವ ತತ್ವ : ಸಾಮಾಜಿಕ ಬದಲಾವಣೆ ಪುಟ : 38
101 ಆರ್.ವಿ.ಭಂಡಾರಿ : ವರ್ಣದಿಂದ ವರ್ಗದ ಕಡೆಗೆ ಪುಟ : 62
102 ಡಾ। ಸಾವುಕಾರ ಎಸ್. ಕಾಂಬಳೆ : ಲಿಂಗಾಯತ ಅಸ್ಪಶ್ಯರು:ಒಂದು ಅಧ್ಯಯನ ಪುಟ : 8
103 ಡಾ। ಮ.ನ. ಜವರಯ್ಯ :ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ ಪುಟ : 20
104 ಕರ್ನಾಟಕ ಚರಿತ್ರೆ ಸಂ : 2 ಪುಟ : 239
105 ಬಸವಣ್ಣನವರ ವಚನಗಳು ವಚನ : 343
106 ಡಾ।ಜ.ಚ.ನಿ.: ವೀರಶೈವ ಧರ್ಮ - ತತ್ವ ಸಿದ್ಧಾಂತ ಪುಟ : 132
107 ಡಾ। ಸಾವುಕಾರ ಎಸ್. ಕಾಂಬಳೆ : ಲಿಂಗಾಯತ ಅಸ್ಪಶ್ಯರು:ಒಂದು ಅಧ್ಯಯನ ಪುಟ : 11
108 ಡಾ। ಎಂ.ಎಂ.ಕಲಬುರ್ಗಿ: ಬಸವಣ್ಣನವರ ವಚನಸಂಪುಟ : 1 ಸಂ. ಪುಟ : 165
109 ಡಾ। ಸಾವುಕಾರ ಎಸ್. ಕಾಂಬಳೆ : ಲಿಂಗಾಯತ ಅಸ್ಪಶ್ಯರು:ಒಂದು ಅಧ್ಯಯನ ಪುಟ : 16
110 ಅದೇ ಗ್ರಂಥ : ಮುನ್ನುಡಿ ಪುಟ : iii
111 ಆರ್.ವಿ.ಭಂಡಾರಿ: ದಲಿತರು ಮತ್ತು ಸಾಮಾಜಿಕ ನ್ಯಾಯ - ಲೇಖನ ಸಂಕ್ರಮಣ - 389/ ಮೇ-ಜೂನ್ 2003 ಪುಟ 48
112 ಬಸವಣ್ಣನವರ ವಚನಗಳು ವಚನ : 591
113 ಡಾ। ಬಸವರಾಜ ಸಬರದ : ವಚನ ಚಳುವಳಿ ಪುಟ : 161
114 ಬಸವಣ್ಣನವರ ವಚನಗಳು ವಚನ: 343
115 ಅದೇ ಗ್ರಂಥ ವಚನ : 594
116 ಅದೇ ಗ್ರಂಥ ವಚನ : 659
117 ಅದೇ ಗ್ರಂಥ ವಚನ : 717
118 ಅದೇ ಗ್ರಂಥ ವಚನ : 417
119 ಡಾ. ಸಿದ್ಧಯ್ಯ ಪುರಾಣಿಕ: ಬಸವಣ್ಣನವರ ಜೀವನ ಹಾಗೂ ಸಂದೇಶ - ಪುಟ : 81
120 ಬಸವಣ್ಣನವರ ವಚನಗಳು ವಚನ : 588
121 ಎಂ. ಚಿದಾನಂದ ಮೂರ್ತಿ :ಬಸವಣ್ಣನವರು ಪುಟ : 6
122 ಅದೇ ಗ್ರಂಥ ಪುಟ : 56
123 ಅದೇ ಗ್ರಂಥ ಪುಟ : 57

124 ಅದೇ ಗ್ರಂಥ ಪುಟ : 58

125 ಅದೇ ಗ್ರಂಥ ಪುಟ : 59

126 ಬಸವಣ್ಣನವರ ವಚನಗಳು ವಚನ : 676

127 ಅದೇ ಗ್ರಂಥ ವಚನ : 263

128 ಅದೇ ಗ್ರಂಥ ವಚನ : 736

129 ಅದೇ ಗ್ರಂಥ ವಚನ : 756

130 ಅದೇ ಗ್ರಂಥ ವಚನ : 446

131 ಅದೇ ಗ್ರಂಥ ವಚನ : 447

132 ಅದೇ ಗ್ರಂಥ ವಚನ : 1

133 ಡಾ। ಬಸವರಾಜ ಸಬರದ : ವಚನ ಚಳುವಳಿ - ಪುಟ : 159

134 ಎಂ.ಎಂ. ಕಲ್ಬುರ್ಗಿ:ಬಸವಣ್ಣನವರ ವಚನ ಸಂಪುಟ: ಪ್ರಸ್ತಾವನೆಯಲ್ಲಿ

135 ಡಾ. ಮ.ನ.ಜವರಯ್ಯ :ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ ಪುಟ : 201

136 ಮಹೇಶ ತಿಪ್ಪಶೆಟ್ಟಿ (ಸಂ): ಬಸವ ತತ್ವ : ಸಾಮಾಜಿಕ ಬದಲಾವಣೆ ಪುಟ : 42

137 ಪ್ರೊ. ಹೆಚ್.ವಿ. ನಾಗೇಶ್ (ಸಂ) :ಶರಣ ಸಮಾಜ ಪುಟ : 178

138 ಅದೇ ಗ್ರಂಥ ಪುಟ : 180

139 ಬಿ.ಡಿ. ಜತ್ತಿ (ಸಂ): ಶ್ರೀ ಬಸವೇಶ್ವರರು ಪುಟ : 1

140 ವಿ.ಸೀತಾರಾಮಯ್ಯ, ಪ್ರೊ. ಜಿ. ವೆಂಕಟಸುಬ್ಬಯ್ಯ (ಸಂ) :ಬಸವೇಶ್ವರ ಪುಟ : 64-65

141 ಜೆ.ಎಸ್.ಕುಳ್ಳಿ 'ಬುದ್ಧ-ಬಸವ-ಗಾಂಧೀ' - ಪುಟ : 66

142 ಮಹೇಶ ತಿಪ್ಪಶೆಟ್ಟಿ (ಸಂ): ಬಸವ ತತ್ವ : ಸಾಮಾಜಿಕ ಬದಲಾವಣೆ ಪುಟ : 39

143 ಬಸವಣ್ಣನವರ ವಚನಗಳು ವಚನ ; 562

144 ಅದೇ ಗ್ರಂಥ ವಚನ: 557

145 ಗೊ.ರು. ಚನ್ನಬಸಪ್ಪ(ಸಂ) : ಶರಣ ತತ್ವ ಚಿಂತನ ಪುಟ : 116

146 ಅದೇ ಗ್ರಂಥ ಪುಟ : 117

147 ಅದೇ ಗ್ರಂಥ ಪುಟ ; 117

148 ಅದೇ ಗ್ರಂಥ ಪುಟ : 117

149 ಬಸವ ಮತ್ತು ವಿಚಾರವಾದ (ಸಂ) ಬಸವ ಸಮಿತಿ ಬೆಂಗಳೂರು ಪುಟ : 29

150 ಡಾ। ಎಸ್.ಆರ್. ಗುಂಜಾಳ :ಪಾಶ್ಚಾತ್ಯ ವಿದ್ವಾಂಸರ ದೃಷ್ಟಿಯಲ್ಲಿ ಬಸವಣ್ಣನವರು ಮತ್ತು ಲಿಂಗಾಯತ ಧರ್ಮ ಪುಟ : 16

151 ಬಿ.ಡಿ.ಜತ್ತಿ (ಸಂ) : ಶ್ರೀ ಬಸವೇಶ್ವರರು ಪುಟ : 114

152 ಅದೇ ಗ್ರಂಥ ಪುಟ : 117

153 ಆರ್.ಸಿ.ಹಿರೇಮಠ (ಸಂ): ಬಸವಣ್ಣನವರ ವಚನಗಳು ವಚನ : 59

154 ಬಸವ ಮತ್ತು ವಿಚಾರವಾದ (ಸಂ) ಪುಟ : 9

# # # # #

ಅಧ್ಯಾಯ - 4

ಡಾ.ಬಿ.ಆರ್.ಅಂಬೇಡ್ಕರ್

4.1 ಅಂಬೇಡ್ಕರ್ ಬದುಕು ಹಾಗೂ ವಿಚಾರಗಳು.

4.2 ಅಂಬೇಡ್ಕರ್‌ರವರ ಪ್ರತಿಭಟನಾ ನೆಲೆಗಳು. ಅಂಬೇಡ್ಕರ್‌ವಾದ-ತತ್ವ

4.3 ವರ್ಣವ್ಯವಸ್ಥೆಯ ವಿರುದ್ಧ ಪ್ರತಿಭಟನೆ.

4.4 ವರ್ಗ-ಜಾತಿಯ ವಿರುದ್ಧ ಪ್ರತಿಭಟನೆ.

4.5 ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಪ್ರತಿಭಟನೆ.

4.6 ಲಿಂಗತಾರತಮ್ಯದ ವಿರುದ್ಧ ಪ್ರತಿಭಟನೆ.

4.7 ಹಿಂದೂಧರ್ಮದ ವಿರುದ್ಧ ಪ್ರತಿಭಟನೆ.

4.8 ವೇದಗಳು, ಯಜ್ಞ-ಯಾಗಗಳು, ವೈದಿಕಆಚರಣೆಗಳು, ಕರ್ಮಸಿದ್ಧಾಂತದ ವಿರುದ್ಧ ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ವಿಚಾರಗಳು.

4.9 ಮೌಢ್ಯತೆ, ಅನಿಷ್ಟಗಳ ವಿರುದ್ಧ ಪ್ರತಿಭಟನೆ.

ಅಧ್ಯಾಯ - ನಾಲ್ಕು.

ಡಾ.ಬಿ.ಆರ್. ಅಂಬೇಡ್ಕರ್

ಪ್ರಸ್ತಾವನೆ :

ಭಾರತರತ್ನ ಡಾ।ಬಿ.ಆರ್.ಅಂಬೇಡ್ಕರ್ ಶತಶತಮಾನಗಳಿಂದ ಮೂಕವಾಗಿದ್ದ ಜನಸ್ತೋಮಕ್ಕೆ ದನಿಯಾದವರು. ಭಾರತದ ಸಂವಿಧಾನವನ್ನು ರಚಿಸಿ, ಸಾಮಾಜಿಕ ನ್ಯಾಯಕ್ಕೆ ಭಾಷ್ಯ ಬರೆದರು. ಶೋಷಣೆಯ ಸಂಕಲೆಗಳಿಗೆ ಸಿಲುಕಿದ್ದ ಸಮುದಾಯಕ್ಕೆ ವಿಮೋಚನೆಯ ಹಾದಿತೋರಿದವರು. "ಅಂಬೇಡ್ಕರ್ ಹಿಂದೂ ಧಾರ್ಮಿಕ ವ್ಯವಸ್ಥೆಯ ವಿರುದ್ಧ ಯುದ್ಧವನ್ನೇ ಸಾರಿದರು. ಹಿಂದೂಮತೀಯ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಮತ್ತು ಪುರಾಣಗಳ ಮೇಲೆ ವೈಜ್ಞಾನಿಕ ವಿಮರ್ಶೆಯನ್ನು ಬರೆದರು. ಅವು ಎಷ್ಟು ಅವೈಚಾರಿಕವಾದವು ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಹಿಂದೂ ಸಾಮಾಜಿಕವ್ಯವಸ್ಥೆಯಲ್ಲಿ ಅಸಮಾನತೆಗೆ ಮೂಲ ಕಾರಣವಾದ ವರ್ಣ ಮತ್ತು ಜಾತಿಯ ಮೇಲೆ ತೀವ್ರದಾಳಿ ಮಾಡಿ ಹಿಂದೂಸಮಾಜದ ಪುನರ್‌ನಿರ್ಮಾಣವು ಜಾತಿ ವಿನಾಶದಿಂದ ಮಾತ್ರಸಾಧ್ಯ ಎಂದು ಸಾರಿದರು. ಅಸ್ಪೃಶ್ಯತೆ ಮತ್ತು ಸ್ತ್ರೀಯರ ಅಸಮಾನತೆಯನ್ನು ಹೋಗಲಾಡಿಸಲು ಕಂಕಣತೊಟ್ಟು ಹೋರಾಡಿದರು" (ಧರ್ಮ ವಿಶ್ವಕೋಶ-3 ಸಂ. ರಹಮತ್ ತರಿಕೇರಿ ಕ.ವಿ.ಹಂಪಿ ಪುಟ 332) ನಮ್ಮ ವ್ಯವಸ್ಥೆಯಲ್ಲಿರುವ ಸಾಮಾಜಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಅಸಮಾನತೆಯ ವಿರುದ್ಧ ಪ್ರತಿಭಟನೆಯ ಧ್ವನಿ ಎತ್ತಿದ ಮಹಾನ್ ವ್ಯಕ್ತಿ ಅಂಬೇಡ್ಕರ್. ಸಾಮಾಜಿಕ ತುಳಿತಕ್ಕೆ ಒಳಗಾದ ಜನಸಮುದಾಯದ ಆಶಾಕಿರಣ. ಅಸಮಾನತೆ ಹೋಗಲಾಡಿಸಿ, ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಅವರು ನಡೆಸಿದ ಹೋರಾಟ, ಮುಂದಿಟ್ಟ ವಿಚಾರಗಳು ಮಹತ್ವಪೂರ್ಣ ವಾದವುಗಳು. ಸಮಾಜದ ಬೌದ್ಧಿಕ ವಿಕಾಸಕ್ಕೆ ಅವರ ಕೊಡುಗೆ ಅಪಾರ. ಮಾನವೀಯ ಹಕ್ಕುಗಳಿಗಾಗಿ ಹೋರಾಡಿದ ಕ್ರಾಂತಿಕಾರಿ ನಾಯಕರು. ನಾವಿಂದು "ಭಾರತದ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುವ ನಮಗೆಲ್ಲರಿಗೂ "ಸಂವಿಧಾನಶಿಲ್ಪಿ" ಡಾ।ಬಿ.ಆರ್.ಅಂಬೇಡ್ಕರ್ ನಮಗೆಲ್ಲರಿಗೂ ದಾರಿದೀಪ. ಅವರ ಜ್ಞಾನದೀವಿಗೆ ದಲಿತರಿಗಷ್ಟೇ ಅಲ್ಲ, ಭಾರತೀಯರೆಲ್ಲರಿಗೂ ಮಾರ್ಗದೀಪ. ಮಹಾನ್ ಮಾನವತಾವಾದಿ, ಸಮತಾವಾದಿ. ಅಸ್ಪೃಶ್ಯತೆ, ಜಾತೀಯತೆಗಳ ವಿರುದ್ಧ ಅವರು ನಡೆಸಿದ ಸಂಘರ್ಷ-ಪ್ರತಿಭಟನೆ ಮಹತ್ವಪೂರ್ಣವಾದುದು.

ಅಸಮಾನತೆಯ ವಿರುದ್ಧ ಪ್ರತಿಭಟಿಸಿರುವ, ಪ್ರಯತ್ನಿಸಿರುವ ಮಹಾಪುರುಷರ ಬದುಕು-ಹೋರಾಟ-ಚಿಂತನೆ ಕುರಿತು ಅಧ್ಯಯನ ಮಾಡುವುದು, ಅರಿಯುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯ ಎಕೆಂದರೆ ಇನ್ನೂ ಅಸಮಾನತೆ ಅಳಿದಿಲ್ಲ ಸಮಾನತೆ-ನೆಲೆಗೊಂಡಿಲ್ಲ. ಈ ವ್ಯವಸ್ಥೆ ಸರಿಪಡಿಸಲು ಪ್ರತಿಭಟನೆಯ ನಿರಂತತೆ ಅಗತ್ಯವಿದೆ. ನಮ್ಮ ಸಮಸ್ಯೆಗಳಿಗೆ ಮಹಾನ್ ವ್ಯಕ್ತಿಗಳ ವೈಚಾರಿಕಜ್ಞಾನದ ಬೆಳಕು ಬದುಕನ್ನು ಹಸನಾಗಿಸಬಲ್ಲದು. ಅಷ್ಟೇ ಅಲ್ಲ. ವರ್ಣಧರ್ಮ ನೀತಿ ಧಿಕ್ಕರಿಸಲು, ಸಮಾಜದಲ್ಲಿ ಶಾಂತಿನೆಮ್ಮದಿ ತರಲು, ಸಮಾನತೆ-ಸ್ವಾತಂತ್ರ್ಯ ಸಹೋದರತೆ ಭಾವನೆ ಮೂಡಿಸಲು, ಸಮಉತ್ಪಾದನೆ, ಸಮವಿತರಣೆ, ಸಮಅನುಭೋಗವನ್ನು ಪ್ರತಿಷ್ಠಾಪಿಸಲು ಅನೇಕ ಮಹಾನ್ ವ್ಯಕ್ತಿಗಳು ಶ್ರಮಿಸಿರುವರು. ವರ್ಣಧರ್ಮ ಮತ್ತು ಜಾತಿಪದ್ಧತಿ ವಿರುದ್ಧ ಪ್ರತಿಭಟಿಸುತ್ತಲೇ ಸಮಾನತೆಯ ಮೌಲ್ಯಗಳಿಗೆ ಜೀವತುಂಬಲು ಅನೇಕರು

ಹೋರಾಡಿದರು. ಅವರಲ್ಲಿ ಪ್ರಮುಖರೆಂದರೆ ಬುದ್ಧ, ಬಸವ, ಅಂಬೇಡ್ಕರ್ ಇವರು ವೈದಿಕವ್ಯವಸ್ಥೆಯನ್ನು ತಿರಸ್ಕರಿಸಿ, ಚಿಂತಿಸಿದ ಹೋರಾಡಿದ ಮಹಾಮಾನವರು ಇವರೆಲ್ಲರ ಪ್ರಮುಖ ಧ್ಯೇಯ. ವರ್ಣಧರ್ಮವನ್ನು ಧಿಕ್ಕರಿಸುವುದು, ಅದು ಸೃಷ್ಟಿಸಿದ ಅಸಮಾನತೆಗಳನ್ನು ತುಂಡರಿಸುವುದು. ಇದರಿಂದಾಗಿ ಬಹುಜನರಿಗೆ ಉಂಟಾದ ಶೋಷಣೆ, ಅವಮಾನಗಳನ್ನು ತೊಡೆದು ಹಾಕುವುದು, ಆತ್ಮ, ಕರ್ಮ, ಪುನರ್ಜನ್ಮ ತತ್ವಗಳನ್ನು ನಿರಾಕರಿಸುವುದು. ವೈದಿಕಗ್ರಂಥಗಳ ವಂಚನೆಯನ್ನು ಬಯಲಿಗೆಳೆಯುವುದು ಇವರೆಲ್ಲರ ಹೋರಾಟದ ಮೂಲ ಆಶಯಗಳಾಗಿದ್ದವು. ಈ ಹಿನ್ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಬದುಕು, ಹೋರಾಟ, ವಿಚಾರಗಳನ್ನು ಅರಿಯುವ ಅಗತ್ಯವಿದೆ. "ಇತಿಹಾಸವನ್ನು ಮರೆತವರು, ಇತಿಹಾಸವನ್ನು ಸೃಷ್ಟಿಸಲಾರರು" ಎಂಬ ಡಾ.ಅಂಬೇಡ್ಕರ್‌ರವರ ಮಾತು ತುಂಬಾ ಮಾರ್ಮಿಕವಾಗಿದ್ದು, ತಮ್ಮ ಹೋರಾಟ ಮತ್ತು ಪ್ರತಿಭಟನೆಯಿಂದಲೇ ಇತಿಹಾಸವನ್ನು ಸೃಜಿಸಿದವರು, ಇತಿಹಾಸದಲ್ಲಿ ಶಾಶ್ವತ ಸ್ಥಾನ ಹೊಂದಿದವರು, ಭಾರತದ ಬಹುಸಂಖ್ಯಾತ ವರ್ಗಕ್ಕೆ ದಲಿತರಿಗೆ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸಿದವರು. ಅಂಬೇಡ್ಕರ್ ದಲಿತರಿಗಷ್ಟೇ ಅಲ್ಲ. ಇಡೀ ವಿಶ್ವದ ಮಾನವ ಸಮುದಾಯಕ್ಕೆ ದಾರಿದೀಪವಾಗಿದ್ದಾರೆ. ಶೋಷಿತ ಸಮುದಾಯದಿಂದಲೇ ರೂಪಗೊಂಡ "ಕಪ್ಪುಜನತೆಯ ಸೂರ್ಯ" ಡಾ.ಅಂಬೇಡ್ಕರ್.

ಬ್ರಿಟಿಷ್ ಸಾಮ್ರಾಜ್ಯಶಾಹಿ ಭಾರತದಲ್ಲಿ 200 ವರ್ಷ ಆಳ್ವಿಕೆ ನಡೆಸಿದ್ದರೆ, ಹಿಂದೂ ಸಾಮ್ರಾಜ್ಯಶಾಹಿ ಈ ದೇಶದ ಮೂಲ ನಿವಾಸಿಗಳ ಮೇಲೆ ಆರುಸಾವಿರ ವರ್ಷಗಳಿಂದ ಆಡಳಿತ ನಡೆಸುತ್ತಿದೆ. ಅಸ್ಪೃಶ್ಯರಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಕ್ರೌರ್ಯಕ್ಕಿಂತ ಹಿಂದೂ ಸಾಮ್ರಾಜ್ಯಶಾಹಿ ಕ್ರೌರ್ಯ ಅತ್ಯಂತ ಕ್ರೂರವಾಗಿತ್ತು. ಇಂದಿಗೂ ಕ್ರೂರವಾಗಿದೆ ಎಂದರೆ ಉತ್ಪ್ರೇಕ್ಷೆಯ ಮಾತಲ್ಲ. ಜಾತಿ ತಾರತಮ್ಯ, ಮೇಲು-ಕೀಳುಗಳ ಭಾವನೆ 21ನೇಯ ಶತಮಾನಕ್ಕೆ ಕಾಲಿಡುತ್ತಿರುವ ಭಾರತದಲ್ಲಿ ಇನ್ನೂ ಗಟ್ಟಿಗೊಳ್ಳುತ್ತಲೇ ಬೆಳೆಯುತ್ತಿರುವುದು ಆತಂಕಕಾರಿಯಾಗಿದೆ. ಜಾತಿ-ಧರ್ಮಗಳ ತಾರತಮ್ಯದಿಂದ ನಾಡು ನರಳುತ್ತಿದೆ. ಈ ಸಮಸ್ಯೆಗೆ ಪರಿಹಾರ ಎಲ್ಲಿದೆ? ಸಮಾನತೆಯ ಆರೋಗ್ಯಪೂರ್ಣ ಬದುಕಿಗಾಗಿ, ಸಾಮಾಜಿಕ. ಧಾರ್ಮಿಕ, ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ಡಾ।ಅಂಬೇಡ್ಕರ್‌ರವರ ವಿಚಾರಗಳು ನಮಗಿಂದು ದಾರಿದೀಪವಾಗಿದೆ.

ಅಂಬೇಡ್ಕರ್ ಹೇಳುತ್ತಿದ್ದರು "If you tell Slave, he is a Slave, he will fight against Slavery". "ಒಬ್ಬ ಗುಲಾಮನಿಗೆ ಅವನು ಗುಲಾಮ ಎಂಬ ಅರಿವನ್ನು ಹೇಳಿಕೊಡಿ. ಅವನು ಗುಲಾಮಗಿರಿಯ ವಿರುದ್ಧ ಹೋರಾಡುತ್ತಾನೆ". ಎಂದು ಗ್ರೀಕಿನ ತತ್ವಜ್ಞಾನಿ ಥುಸಿಡೈಡಸ್‌ನ ಮಾತನ್ನು ಅಂಬೇಡ್ಕರ್ ಅವರು ಮೇಲಿಂದ ಮೇಲೆ ಉದ್ಧರಿಸುತ್ತಿದ್ದರು. (ಪ್ರೋ.ಬಿ.ಕೃಷ್ಣಪ್ಪ ಚಿಂತನೆಗಳು-ಬರಹಗಳು ಪುಟ 3) ಏಕೆಂದರೆ ತುಳಿಯುವುದರಲ್ಲಿ ಖುಷಿ ಪಟ್ಟ ಜನ ತುಳಿಸಿಕೊಳ್ಳುವವರ ಬಗ್ಗೆ ಕಿಂಚಿತ್ತಾದರೂ ಚಿಂತಿಸಿದ್ದರೆ, ಈ ದೇಶ, ಈ ಸಮಾಜ ಈ ರೀತಿ ಇರುತ್ತಿರಲಿಲ್ಲ. ಬುದ್ಧ, ಬಸವಾದಿಗಳ ಪ್ರಯತ್ನ ಈ ತುಳಿಯುವ ವರ್ಗದ ಮೇಲೆ ಪ್ರಭಾವ ಬೀರಲಿಲ್ಲ.ಬುದ್ಧ, ಬಸವರ ಪ್ರತಿಭಟನಾ ಧರ್ಮಗಳೇ ಕಾಲಾನುಕ್ರಮದಲ್ಲಿ ಜಾತಿ ಧರ್ಮಗಳಾಗಿ ಪರಿವರ್ತನೆಗೊಂಡಿರುವುದು ಈ ದೇಶದ ಕರಾಳ ಇತಿಹಾಸವಾಗಿದೆ. ಪ್ರತಿಭಟನೆ, ಪರಿವರ್ತನೆ ನಿರಂತರವಾಗಿರಬೇಕೆಂಬ ವಾದವೂ ಇದೆ. ಹೀಗಾಗಿ ಅಸ್ಪೃಶ್ಯತೆಯ ವಿರುದ್ಧ, ಸಮಾನತೆಗಾಗಿ ಜಾತಿಯ ವಿರುದ್ಧ ಹೋರಾಡುವಂತೆ ತಿಳಿಸಿ, ಅಂಬೇಡ್ಕರ್ ಸ್ವತಃ ತಾವೇ ಪ್ರತಿಭಟನಾತ್ಮಕ ಹೋರಾಟ ಆರಂಭಿಸಿದರು.

ಅಂಬೇಡ್ಕರ್ ಪೂರ್ವದ ಸ್ಥಿತಿ-ಗತಿ:

ಭಾರತದ ಇತಿಹಾಸ ಜಾತಿ ಮತ್ತು ಧರ್ಮಗಳನ್ನು ಆಧರಿಸಿ ನಿರ್ಮಾಣಗೊಂಡಿದೆ. ಜಾತಿಪದ್ಧತಿ, ಅಮಾನವೀಯ ಮೌಲ್ಯಗಳಿಂದ ಕೂಡಿದ್ದ ಸಮಾಜವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಶತಶತಮಾನಗಳಿಂದಲೂ ಜಾತಿ ಪದ್ಧತಿಯ ಕಠೋರತೆಯಿಂದ ಸಾಮಾಜಿಕವ್ಯವಸ್ಥೆ ಕ್ರೂರವಾಗಿದೆ. ವೃತ್ತಿಗಳನ್ನು ಆಧರಿಸಿ, ರೂಪತಳೆದ ಪ್ರಾಚೀನ ಭಾರತೀಯ ಸಂಸ್ಕೃತಿ ಮೇಲು-ಕೀಳೆಂಬ ಸವಕಲು ಸಂಸ್ಕೃತಿ ಆ ಸಮುದಾಯಗಳ ನಡುವಿನ ಮಾನವೀಯ ಸಂಬಂಧಗಳನ್ನು ನಾಶಮಾಡಿ, ಅಡ್ಡಗೋಡೆ ನಿರ್ಮಿಸಿ, ಜಾತಿವಾದವನ್ನು ಎತ್ತಿಹಿಡಿದು, ಶ್ರೇಣೀಕೃತ ಚಾತುರ್ವರ್ಣ ವ್ಯವಸ್ಥೆಯನ್ನು ಜಾರಿಗೆ ತಂದಿತು. ವರ್ಣಗಳ ವರ್ಗೀಕರಣ ಬ್ರಾಹ್ಮಣ (ದ್ವಿಜ) ಹಾಗೂ ಬ್ರಾಹ್ಮಣೇತರರೆಂದು ಶ್ರೇಣೀಕರಿಸಿತು. ಬ್ರಾಹ್ಮಣೇತರರನ್ನು ವಿವಿಧ ಶ್ರೇಣಿಗಳಾಗಿ ವಿಂಗಡಿಸಲಾಯಿತು. ಅವರನ್ನು ಸಾಮಾಜಿಕ ಸ್ತರ ವಿನ್ಯಾಸಗಳ ಮೂಲಕ ಶುದ್ಧ ಮತ್ತು ಅಶುದ್ಧ, ಶೂದ್ರಾತಿಶೂದ್ರ ಜಾತಿಗಳೆಂದು ಸೃಷ್ಟಿಯಾದವು. ಜಾತಿಪದ್ಧತಿಯ ಜಡತ್ವದಿಂದಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆಯುಂಟಾಗಲಿಲ್ಲ. ಶ್ರೇಣೀಕೃತ ವ್ಯವಸ್ಥೆಯ ತಳಭಾಗದಲ್ಲಿನ ಜಾತಿಗಳಲ್ಲಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯವಿರಲಿಲ್ಲ. "ಜಾತಿ ಹಣೆ ಪಟ್ಟಿಯ ಅಡಿಯಲ್ಲಿ ಎಲ್ಲ ಸಾಮಾಜಿಕ ಗುಂಪುಗಳನ್ನು ತರಲು ವರ್ಣ ಚೌಕಟ್ಟು ಹಾಗೂ ಅದರ ಚಿಂತನೆ ಸಹಾಯ ಮಾಡಿತು. ಈ ಉದ್ದೇಶಕ್ಕಾಗಿ ಈ ಚೌಕಟ್ಟನ್ನು ಹಿಗ್ಗಿಸಲಾಯಿತು. ಆರ್ಥಿಕ ಅಥವಾ ವೃತ್ತಿಪರ ಗುಂಪುಗಳನ್ನಾಗಿ ಸೇರ್ಪಡೆ ಮಾಡಲಾಯಿತು. ಬ್ರಾಹಣರು ನಿಯಂತ್ರಕರಾಗಿದ್ದರು. ಬ್ರಾಹ್ಮಣೇತರರು ಹೆಚ್ಚು ಕಡಿಮೆ ಅವರಿಗಾಗಿ ಕೆಲಸ ಮಾಡುತ್ತಿದ್ದರು. ಬ್ರಾಹ್ಮಣರು ಸಹಜವಾಗಿ ಜಾತಿ ನಿಷ್ಠೆಗೆ ಒತ್ತು ನೀಡಿದರು. ಜಾತಿಭೇದಗಳಿಗೂ ಅವರು ಒತ್ತುನೀಡಿದರು. ಇದರಿಂದಾಗಿ ಬ್ರಾಹ್ಮಣೇತರರು ಒಗ್ಗಟ್ಟಾಗುವುದಕ್ಕೆ ತಡೆಒಡ್ಡಿದಂತಾಯಿತು". (ರಜನಿಕಾಂತ್ ಎಂ.ಎಸ್.: ಪ್ರಾಚೀನ ಭಾರತ ಪುಟ 125-126) ಇಂತಹ ವ್ಯವಸ್ಥೆಯ ವಿರುದ್ಧ ಬುದ್ಧ-ಬಸವರ ನಂತರ ಪ್ರತಿಭಟಿಸಿದವರು ಡಾ।ಅಂಬೇಡ್ಕರರು.

4.1 ಅಂಬೇಡ್ಕರ್ ಬದುಕು ಮತ್ತು ವಿಚಾರಗಳು.

" ಶತಮಾನದ ಅದ್ಭುತ "

"ಹಿಂದೂಸಮಾಜ ಅಸಮಾನತೆಯ ತವರು, ಅದು ಏಣಿ ಇಲ್ಲದ, ಪ್ರವೇಶದ್ವಾರವಿಲ್ಲದ, ಅನೇಕ ಮಹಡಿಗಳುಳ್ಳ ಗೋಪುರ. ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು. ಅಸ್ಪೃಶ್ಯರು ಶತಮಾನಗಳ ಬಡತನದಿಂದ ಜಾಗೃತರಾಗುವ ತನಕ ಈ ನಾಡಿಗೆ ಮುಕ್ತಿ ಇಲ್ಲ. ಭಾರತ ಸ್ವತಂತ್ರವಾದರೆ ಸಾಲದು. ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ಭರತಖಂಡದಲ್ಲಿ ಹುಟ್ಟಿದವರೆಲ್ಲರೂ ಸಮಾನ ಹಕ್ಕುಳ್ಳವರಾಗಬೇಕು. ಪ್ರತಿಯೊಬ್ಬನೂ ವಿಕಾಸ ಹೊಂದಲು ಅನುಕೂಲವಾಗುವಂತೆ ಸಮಾನ ಅವಕಾಶವನ್ನು ಕಲ್ಪಿಸಬೇಕು". 1920ರಲ್ಲಿ ಈ ಮಾತುಗಳನ್ನು ಬರೆದ ಡಾ।ಬಾಬಾಸಾಹೇಬ ಅಂಬೇಡ್ಕರ್‌ರವರು ಆಧುನಿಕ ಭಾರತ ಕಂಡ ಮಹಾನ್‌ದ್ರಷ್ಟಾರರು. ಮಹಾರಾಷ್ಟ್ರದ ಅತ್ಯಂತ ಬಡಕುಟುಂಬದಲ್ಲಿ ಹುಟ್ಟಿದ ಭೀಮರಾವ್ ಅಂಬೇಡ್ಕರ್ ಆಧುನಿಕ ಭಾರತದ ಸಾಮಾಜಿಕ ಕ್ರಾಂತಿಯ ಸಂಕೇತ ದಲಿತ ಜನಾಂಗದ ಆಶಾಕಿರಣ.

ಬಾಲ್ಯದ ದಿನಗಳಲ್ಲಿ ಅಂಬೇಡ್ಕರ್‌ರ ಮುಗ್ಧ ಮನಸ್ಸು ಮತ್ತು ದೇಹದ ಮೇಲೆ ಉಂಟಾದ ಪೈಶಾಚಿಕ ಸ್ವರೂಪದ ಅಮಾನವೀಯ ಸಾಮಾಜಿಕ ಅನಿಷ್ಟಗಳ ಹಾಗೂ ನಾಗರಿಕ ದೌರ್ಜನ್ಯಗಳ ಪರಿಣಾಮವಾಗಿ, ಅವರು ದಲಿತಜನಾಂಗದ ಸಹಸ್ರಸಹಸ್ರ ವರ್ಷಗಳ ಹಣೆಬರಹವನ್ನು ತಿದ್ದಲು ಅಗತ್ಯವಾದ ಅರ್ಹತೆಯನ್ನು ಪಡೆಯುವಲ್ಲಿ ಸಫಲರಾದರು. ಲಿಂಕನ್, ಬುಕರ್, ವಾಷಿಂಗಟನ್, ಜಾನ್‌ಸ್ಟುವರ್ಟ್‌ಮಿಲ್ ಅವರಂತಹ ಪಾಶ್ಚಾತ್ಯ ಉದಾರವಾದಿ ಚಿಂತಕರು ಹಾಗೂ ಫುಲೆ, ರಾನಡೆ, ಗೋಖಲೆಯವರಂತಹ ಮಿತವಾದಿ, ಉದಾರವಾದಿಗಳ ಪ್ರಭಾವದಲ್ಲಿ ತಮ್ಮ ಅನನ್ಯ ವ್ಯಕ್ತಿತ್ವವನ್ನು ರೂಪಿಸಿಕೊಂಡ ಅಂಬೇಡ್ಕರ್‌ರು, ಭಾರತೀಯ ದಲಿತಜನಾಂಗದ ದಾಸ್ಯ ವಿಮೋಚನೆಯ ಕಾರಣ ಪುರುಷರಾಗಿ ಚಿರಸ್ಮರಣೀಯರಾಗಿದ್ದಾರೆ. ಅಸ್ಪೃಶ್ಯನಾಗಿ ಜನಿಸಿ, ಅಸ್ಪೃಶ್ಯತೆಯ ನಿವಾರಣೆಗಾಗಿ ಹೋರಾಡಿದ ಅಂಬೇಡ್ಕರ್ ನಮ್ಮ ಶತಮಾನದ ಅತ್ಯದ್ಭುತಗಳಲ್ಲೊಂದು.

ಅಂಬೇಡ್ಕರ್ ಜೀವನ ಚರಿತ್ರೆಯಲ್ಲಿ ಎರಡು ಅಂಶಗಳು ಗಮನ ಸೆಳೆಯುತ್ತವೆ. ಒಂದು ಅವರು ಜೀವನುದುದ್ದಕ್ಕೂ ನಡೆಸಬೇಕಾಗಿ ಬಂದ ಅವಿರತ ಪ್ರತಿಭಟನಾತ್ಮಕ ಹೋರಾಟದ ಕಥೆ, ಮತ್ತೊಂದು ಹಿಂದುಳಿದ ಜನವರ್ಗದ ಉನ್ನತಿಗಾಗಿ ಅವಿಶ್ರಾಂತ ಹೋರಾಟ. ಇವರು ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿಯ ಅಸಮಾನತೆಯನ್ನು ಕಿತ್ತೆಸೆಯಲು ಶ್ರಮಿಸಿದ ಅಸಾಮಾನ್ಯ ವಿಚಾರವಾದಿ, ಓರ್ವ ಹುಟ್ಟು ಹೋರಾಟಗಾರ, ಸಮತಾವಾದಿ, ನ್ಯಾಯಶಾಸ್ತ್ರಜ್ಞ ಮತ್ತು ಮಹಾನ್ ಮಾನವತಾವಾದಿ, ಸ್ವತಂತ್ರ ಭಾರತದ ಸಂವಿಧಾನದ ಶಿಲ್ಪಿ. ರಾಜಕೀಯ ಮುತ್ಸದ್ದಿಯಾಗಿ ಅವರು ಮಾಡಿದ ಸಾಧನೆ ಹಾಗೂ ಅವರು ಬಿಟ್ಟು ಹೋಗಿರುವ ವೈಚಾರಿಕ ಸಾಹಿತ್ಯ ಅವಿಸ್ಮರಣೀಯವಾದುದು. ಅಸ್ಪೃಶ್ಯತೆ, ಜಾತೀಯತೆಗಳ ವಿರುದ್ಧ ಅವರು ನಡೆಸಿದ ಸಂಘರ್ಷ, ಪ್ರತಿಭಟನೆ ಮಹತ್ವಪೂರ್ಣವಾದುದು. ಅಂಬೇಡ್ಕರ್‌ರವರ ಬಗ್ಗೆ ಅವರಿವರು ಪ್ರಾಸಂಗಿಕವಾಗಿ ಹೇಳುವ ಮಾತುಗಳಷ್ಟೇ ಅಂಬೇಡ್ಕರ್‌ರ ಇಡಿಯಾದ ವ್ಯಕ್ತಿತ್ವವಲ್ಲ. ಅಂಬೇಡ್ಕರ್‌ರ ಹಲವಾರು ಆರಿಸಿತೆಗೆದ ಹೇಳಿಕೆಗಳಿಂದಲೇ ನಾವು ಅವರನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಅಂಬೇಡ್ಕರ್‌ರ ಜೀವನ ಚರಿತ್ರೆ ಓದಿ ಬಿಟ್ಟಾಕ್ಷಣ ಅವರ ಬದುಕಿನ ಹೂರಣ ಪೂರ್ತಿಯಾಗಿ ನಮಗೆ ದಕ್ಕಿ ಬಿಡುವುದಿಲ್ಲ. ಅಂಬೇಡ್ಕರವರು ತಮ್ಮ ಭಾವನೆ-ಚಿಂತನೆಗಳನ್ನು ತಾವೇ ಭಾಷೆಗೆ ಅನುವಾದಿಸಿ ಇಟ್ಟಿರುವ ಪುಸ್ತಕಗಳು ಸಾಕಷ್ಟಿವೆ. ಅವರ ಬರಹಗಳ ಅಧ್ಯಯನ ಅತ್ಯಗತ್ಯ. ಒಂದು ಚಾರಿತ್ರಿಕ ಚೌಕಟ್ಟಿನಲ್ಲಿರುವ ಅಂಬೇಡ್ಕರ್‌ರ ನಡೆ-ನುಡಿಗಳನ್ನು ವರ್ತಮಾನದ ತುರ್ತಿಗೆ ಒಗ್ಗಿಸಿಕೊಳ್ಳುವ ಎಚ್ಚರ ನಮ್ಮಲ್ಲಿರಬೇಕು. ಅವರು ಹೇಳಿರುವ ಮಾತುಗಳನ್ನು ಅರಗಿಸಿಕೊಂಡು ಹೇಳದೇ ಬಿಟ್ಟ ಮಾತುಗಳ ಸಾಮಾಜಿಕ ಇಂಗಿತವನ್ನು ಹಿಡಿಯಬೇಕು. ದಲಿತಸಮುದಾಯದ ಏಳಿಗೆಯನ್ನು ಇಡೀ ದೇಶದ ಒಟ್ಟು ಕಲ್ಯಾಣವನ್ನು ಸಾಧಿಸುವ ಕನಸು ಕಂಡವರು ಅಂಬೇಡ್ಕರ್.

" ಬಂಡಾಯದ ಪ್ರತೀಕ "

"ಭಾರತ ಸಂವಿಧಾನದಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಜನ ಸಾಮಾನ್ಯರ ಮನಸ್ಸಿನಲ್ಲಿ ಬೇರೂರಿರುವಂತೆ, ಕೇವಲ ದಲಿತರ ನಾಯಕರಲ್ಲ; ಬದಲಾಗಿ ಅವರು ರಾಷ್ಟ್ರನಾಯಕರು. ಇಡೀ ದೇಶದ ಸಂಬಂಧದಲ್ಲಿ, ಭಾರತದ ಇತಿಹಾಸದ ಸಂಬಂಧದಲ್ಲಿ ಹಾಗೂ ಸಾಮಾಜಿಕ ವಿಷಯದಲ್ಲಿ ಅವರು ಒಂದು ಮಹತ್ವಪೂರ್ಣವಾದ ವೈಚಾರಿಕ ಕೊಡುಗೆ ನೀಡಿದ್ದಾರೆ. ವಿದ್ವಾಂಸರಾಗಿ, ಲೇಖಕರಾಗಿ, ಸಂವಿಧಾನ ತಜ್ಞರಾಗಿ, ರಾಜಕೀಯ ನಾಯಕರಾಗಿ, ಸಮಾಜಸುಧಾರಕರಾಗಿ ಶಿಕ್ಷಣ ಪರಿಣಿತರಾಗಿ ಡಾ।ಅಂಬೇಡ್ಕರ್‌ರವರು

ಯುವಜನಾಂಗಕ್ಕೆ ದೈದೀಪ್ಯಮಾನ್ಯವಾದ ಸೂರ್ಯನಂತೆ ಹೊಳೆಯುತ್ತಾರೆ[1] ಡಾ:ಅಂಬೇಡ್ಕರ್‌ರವರದು ಬಿರುಗಾಳಿಯಂಥ ವ್ಯಕ್ತಿತ್ವ. ತಮ್ಮ ಸುಧಾರಣಾವಾದೀ ವಿಚಾರಗಳಿಂದ ಹಿಂದೂಸಮಾಜಕ್ಕೆ ಭೂಕಂಪದ ಬಿಸಿ ತಗಲುವಂತೆ ಮಾಡಿದರು. ಅಂತೆಯೇ ಜವಾಹರಲಾಲನೆಹರೂ ಅವರು "ಹಿಂದೂಸಮಾಜದೊಳಗಿನ ದಮನಶೀಲ ಪ್ರವೃತ್ತಿಯ ವಿರುದ್ಧ ಬಂಡಾಯದ ಪ್ರತೀಕ" ಎಂದು ಸರಿಯಾಗಿಯೇ ಅವರನ್ನು ಗುರುತಿಸಿದ್ದರು. ಸಂತಾಪ ಹಾಗೂ ಸಿಡಿಮಿಡಿಗೊಳ್ಳುವುದು ಅವರ ಸ್ವಭಾವದ ಸ್ಥಾಯೀಭಾವವಾಗಿತ್ತು. ಅನ್ಯಾಯ, ಅತ್ಯಾಚಾರ ಹಾಗೂ ಅಂಧಶ್ರದ್ಧೆಗಳ ವಿರುದ್ಧ ಅವರು ಸಿಡಿದೇಳುತ್ತಿದ್ದರು. ಈ ದೇಶದ ಜನಸಮುದಾಯದಲ್ಲಿ ರೂಢಿಗೊಂಡಿದ್ದ ಹಲವೊಂದು ಭೇದಗಳನ್ನು ಅಳಿಸಿ ಹಾಕಿ ಸರ್ವಸಮಾನಾಧಿಕಾರಗಳುಳ್ಳ ರಾಜ್ಯಘಟನೆಯ ಕಾಣಿಕೆಯಿತ್ತು. ಭಾರತದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳ ಅಸ್ತಿವಾರ ಹಾಕಿದರು. ಇಂಥ ಅಪೂರ್ವ ವ್ಯಕ್ತಿತ್ವ ಹೊಂದಿದ್ದ ಡಾ.ಅಂಬೇಡ್ಕರ್ ಅವರ ಜೀವನವು ರೋಮಾಂಚಕ ಹಾಗೂ ಸಂಘರ್ಷಮಯವಾಗಿರುವಷ್ಟೇ ಬೋಧಪ್ರದವೂ ಆಗಿದೆ. ಇಪ್ಪತ್ತನೇಯ ಶತಮಾನದ ಪುನರುಜ್ಜೀವನ ಕಾಲದ ಒಂದು ಅತ್ಯುತ್ತಮ ಕುಸುಮ. ಪ್ರೌಢ ವಿದ್ವಾಂಸರು, ಅಂತರ್‌ರಾಷ್ಟ್ರೀಯ ಖ್ಯಾತಿಯ ಆಲೋಚನಾಪರರೂ ವ್ಯಕ್ತಿ ಸ್ವಾತಂತ್ರ್ಯ ಮತ್ತು ವ್ಯಕ್ತಿ ಗೌರವಗಳಿಗಾಗಿ ಸೆಣಸಿದ ಕೆಚ್ಚಿನ ಹೋರಾಟಗಾರರೂ ಆದ ಡಾ.ಅಂಬೇಡ್ಕರ್ ಅವರಜೀವನ ಮತ್ತು ಸಾಧನೆಗಳು ಜಗತ್ತಿನಾದ್ಯಂತ ಬಹುಕಾಲ ಸ್ಫೂರ್ತಿಯ ಉಗಮ ಸ್ಥಾನವಾಗಿ ಉಳಿದಿದೆ.

ಅಸ್ಪೃಶ್ಯತೆಯ ನಿವಾರಣೆಯ ಪ್ರಯತ್ನ :

ಮಾನವರಿಗೆಲ್ಲ ಇರುವುದು ಒಂದೇ ಭೂಮಿ, ಕುಡಿಯುವ ನೀರು ಒಂದೇ, ಉಸಿರಾಡುವುದು ಒಂದೇ ಗಾಳಿ, ಅವರನ್ನು ಸುಡುವುದು ಒಂದೇ ಬೆಂಕಿ, ಹುಟ್ಟು-ಸಾವು, ಅಳು-ನಗು, ಸುಖ-ದುಃಖ, ಸಂಕೋಚ-ಸಂಭ್ರಮ ಎಲ್ಲರಿಗೂ ಸಮಾನ, ಆದರೂ ಜಗತ್ತಿನಲ್ಲಿ ಬಿಳಿಯ-ಕರಿಯ, ಶ್ರೀಮಂತ-ಬಡವ, ಮೇಲುಜಾತಿ-ಕೀಳುಜಾತಿ, ಸ್ಪೃಶ್ಯ-ಅಸ್ಪೃಶ್ಯ ಎಂಬ ಭೇದ-ಭಾವವನ್ನು ಸೃಷ್ಟಿಸಿಕೊಂಡು ಜನರು ತಮ್ಮತಮ್ಮಲ್ಲಿ ಬಡಿದಾಡುತ್ತಾರೆ. ಜೀವನದ ನೆಮ್ಮದಿಯನ್ನು ಕಲಕುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಜಾತಿಯ ಹೆಸರಿನಲ್ಲಿ ಆಗಿರುವ ಆಗುತ್ತಿರುವ ಅನಾಹುತ ಹೆಚ್ಚು. ಅದರಲ್ಲೂ ಅಸ್ಪೃಶ್ಯತೆ ಭಾರತೀಯ ಸಮಾಜಕ್ಕೆ ಅಂಟಿಕೊಂಡಿರುವ ಘೋರ ಕಳಂಕ. ಈ ಘೋರ ಕಳಂಕವನ್ನು ತೊಡೆದು ಹಾಕಲು ಬಹು ಹಿಂದಿನಿಂದಲೂ ಪ್ರಯತ್ನಗಳು ನಡೆದಿವೆ. ಕ್ರಿ.ಪೂ.6ನೇ ಶತಮಾನದಲ್ಲಿ ಬುದ್ಧ ಈ ಅವಹೇಳನಕರವಾದ ಪದ್ಧತಿಯನ್ನು ತೊಡೆದು ಹಾಕಿ ಸರ್ವಸಮಾನತೆಯನ್ನು ಸ್ಥಾಪಿಸಲು ಯತ್ನಿಸಿದ. ತನ್ನ ಬೌದ್ಧಮತಕ್ಕೆ ಅಸ್ಪೃಶ್ಯರನ್ನು ಸೇರಿಸಿಕೊಂಡು ಗೌರವಿಸಿದ. ಆದರೇನು? ಕಾಲಕ್ರಮೇಣ ಈ ಉದಾತ್ತ ಬೌದ್ಧಧರ್ಮವೇ ಭಾರತದಿಂದ ಕಣ್ಮರೆಯಾಯಿತು. 11ನೇ ಶತಮಾನದ ರಾಮಾನುಜರು ಅಸ್ಪೃಶ್ಯ ಶಿಷ್ಯರನ್ನು ಅಂಗೀಕರಿಸಿದ್ದರು, ತಾವು ಸ್ಥಾಪಿಸಿದ್ದ ಮಠಗಳಿಗೆ ದೇವಾಲಯಗಳಿಗೆ ಅಸ್ಪೃಶ್ಯರಿಗೆ ಪ್ರವೇಶ ನೀಡಿದ್ದರು. 12ನೇ ಶತಮಾನದ ಬಸವಣ್ಣನವರು ಈ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸಿದರು. ಎಲ್ಲರಿಗೂ ಸಮಾನ ಸ್ಥಾನವನ್ನು ಧರ್ಮದಲ್ಲಿ -ಸಮಾಜದಲ್ಲಿ ಕೊಟ್ಟರು ಎಲ್ಲರನ್ನೂ ಸಮಾನವಾಗಿ ಗೌರವಿಸಿದರು. ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿ ಕ್ರಾಂತಿಯನ್ನೇ ಮಾಡಿದರು. ಅನಂತರದ ಶತಮಾನಗಳಲ್ಲಿ ಚಕ್ರಧರ, ರಮಾನಂದ, ಏಕನಾಥ, ಕಬೀರ, ಚೈತನ್ಯ, ತುಕಾರಾಮ್, ರೋಹಿದಾಸ್, ಕನಕದಾಸ, ಮುಂತಾದ ಭಕ್ತಿಪಂಥದ ಮಹನೀಯರು ಭಗವದ್ ಭಕ್ತಿಗೆ ಜಾತಿಭೇದವಿಲ್ಲ ಎಂದು ಸಾರಿದರು. ಅದರಂತೆ ನಡೆದರು. ಆಧುನಿಕ ಕಾಲದಲ್ಲಿ ರಾಜಾರಾಮ

ಮೋಹನ್‌ರಾಯ್, ಮಹಾತ್ಮಫುಲೆ, ಶಶಿಧರ ಮಹೋಪಾಧ್ಯಾಯರು, ಸಯ್ಯಾಜಿರಾವ್, ಗಾಯಕವಾಡ್‌ರವರು ಅಸ್ಪೃಶ್ಯತೆಯ ನಿವಾರಣೆಗಾಗಿ ಶ್ರಮಿಸಿದರು. ಶಿಕ್ಷಣಪ್ರಸಾರದಿಂದ ಈ ಪಿಡುಗನ್ನು ತೊಲಗಿಸಲು ಯತ್ನಿಸಿದರು."

ಅಸ್ಪೃಶ್ಯರಲ್ಲಿ ಅರುಣೋದಯ:

"ಈ ಕಾಲಘಟ್ಟದಲ್ಲಿ ಮಹಾರಾಷ್ಟ್ರದ ಅಸ್ಪೃಶ್ಯರು ತಮ್ಮ ಶತಮಾನದ ನಿದ್ರೆಯಿಂದ ಕೆಲಮಟ್ಟಿಗೆ ಎಚ್ಚೆತ್ತರು. ತಮಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲು, ತಮ್ಮ ಬಗ್ಗೆ ತೋರುತ್ತಿರುವ ಕ್ರೌರ್ಯವನ್ನು ಅಸಹನೆಯನ್ನು ಸವರ್ಣೀಯರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಅವರಲ್ಲಿ ಗೋಪಾಲಬಾಬಾ ವಾಲಂಗ್‌ಕರ್ ಪ್ರಮುಖರು. ಈ ಅಸ್ಪೃಶ್ಯತಾ ನಿವಾರಣೆಗಾಗಿ ಮಹಾಪ್ರಯತ್ನ ಮಾಡಿದವರಲ್ಲಿ ದಯಾನಂದರನ್ನು ಮರೆಯುವಂತಿಲ್ಲ. ಈ ದಿಸೆಯಲ್ಲಿ ಮಹಾತ್ಮಾಗಾಂಧೀಜಿಯವರ ಪ್ರಯತ್ನ ಹಚ್ಚಹಸಿರು. ಹೋದಲ್ಲಿ ಬಂದಲ್ಲಿ ಅಸ್ಪೃಶ್ಯರಿದ್ದೆಡೆ ತಂಗಿದರು. ಅವರೊಡನೆ ಉಂಡರು. ಅವರ ಬಗ್ಗೆ ಸವರ್ಣೀಯರ ಮನಸ್ಸು ಪರಿವರ್ತನೆ ಯಾಗುವಂತೆ ಮಾಡಲು ಶ್ರಮಿಸಿದರು. ಆದರೆ ತನ್ನ ಜೀವಿತವನ್ನೆಲ್ಲ ಕಾಯಾ-ವಾಚಾ-ಮನಸಾ ತನ್ನವರಿಗಾಗಿಯೇ ತೇದು, ಅವರಲ್ಲಿ ಆತ್ಮಗೌರವವನ್ನು ಧೀಮಂತಿಕೆಯನ್ನು, ಧೈರ್ಯವನ್ನು ಬೆಳೆಸಿ, ಅವರ ಬಾಳಿನ ಕತ್ತಲನ್ನು ಹರಿಯಬಲ್ಲ ಮಹಾಚೇತನವೊಂದರ ಉದಯಕ್ಕಾಗಿ ಕಾಯುತ್ತಿತ್ತು ಈ ಮೂಕ ಜನತೆ. ಈ ಜನಮನದ ಆಶಾ ಸೂರ್ಯನಾಗಿ ಮೂಡಿ ಬಂದವರು, ಅಸ್ಪೃಶ್ಯರ ಬಾಳಿನಲ್ಲಿ ಅರುಣೋದಯ ಉಂಟು ಮಾಡಿದವರು. 'ಸಮತೆಯ ಶಿಲ್ಪಿ' 'ದಲಿತ ಸೂರ್ಯ' ಡಾ॥ಭೀಮರಾವ್ ರಾಮಜೀ ಅಂಬೇಡ್ಕರ್. ಮಾನವೀಯ ಹೋರಾಟದ ಮೂಲಕ ಶೂದ್ರರ, ಅಸ್ಪೃಶ್ಯರೆನಿಸಿಕೊಂಡವರ ಮೂಲಕ್ಕೆ ಸುತ್ತುವರಿದ ರಹಸ್ಯದ ಸಿಕ್ಕು ಬಿಡಿಸಿದವರು ಡಾ.ಬಾಬಾಸಾಹೇಬ ಅಂಬೇಡ್ಕರ್. "ಸಾವಿರಾರು ವರ್ಷದ ಕತ್ತಲೆಯ ಗರ್ಭದೊಳಗಿಂದ ಮೂಡಿ ಬಂದ ಈ ಮಿಂಚು, ಇತಿಹಾಸದಲ್ಲಿ ಚಿಮ್ಮಿದ ಕಿಡಿಗಳು ಯಾವುದೇ ಕಾಲದ, ಯಾವುದೇ ದೇಶದ ಕ್ರಾಂತಿಕಾರರಿಗೂ ದಾರಿ ದೀಪಗಳಾಗಬಲ್ಲವು"[2] ಶೋಷಿತ-ಜನವರ್ಗದಿಂದಲೇ ರೂಪುಗೊಂಡ 'ಕಪ್ಪು ಜನತೆಯ ಸೂರ್ಯ" ಡಾ.ಅಂಬೇಡ್ಕರ್. ಈಗಿನ ಚರಿತ್ರೆಯಲ್ಲಿ ಅಂಬೇಡ್ಕರ್ ವರ್ತಮಾನದ ವ್ಯಕ್ತಿತ್ವವಾಗಿದ್ದಾರೆ.

ಲೋಕಮಾನ್ಯತಿಲಕ್, ಮಹರ್ಷಿಕರ್ವೆ, ಪರಾಂಜಪೆ ಮುಂತಾದ ಮಹಾಮೇಧಾವಿಗಳನ್ನು, ಹೋರಾಟಗಾರರನ್ನು ಭಾರತಕ್ಕೆ ಕಾಣಿಕೆ ನೀಡಿದ ಮಹಾರಾಷ್ಟ್ರದಲ್ಲಿ ಜನಿಸಿದವರು ಅಂಬೇಡ್ಕರ್. ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬಾವಾಡೆ ಎಂಬ ಹಳ್ಳಿ ಅಂಬೇಡ್ಕರರ ಹಿರಿಯರ ಪೂರ್ವಸ್ಥಳ. ಈ ಗ್ರಾಮದ ಗ್ರಾಮದೇವತೆಯ ಪಲ್ಲಕ್ಕಿಯನ್ನು ಹೊರುವ ಗೌರವ ಇವರ ಕುಟುಂಬದವರಿಗೆ. ಮಹಾರಾಷ್ಟ್ರದ ಮಹಾರ್ ಎಂಬುದೊಂದು ಅಸ್ಪೃಶ್ಯ ಜಾತಿ. ಅಸ್ಪೃಶ್ಯ ಪಂಗಡಗಳಲೆಲ್ಲ ಈ ಪಂಗಡದ ಜನ ತುಂಬ ಧೈರ್ಯವಂತರು, ಬುದ್ಧಿವಂತರು, ಗಟ್ಟಿಗರು ಮತ್ತು ಮತ ಸಹಿಷ್ಣುಗಳು. ತಮ್ಮ ಗುಲಾಮತನದ ಅರಿವು ಅವರಿಗಿತ್ತು. ಈ ಮಹಾರ್ ಜನರೇ ಮಹಾರಾಷ್ಟ್ರದ ಮೂಲನಿವಾಸಿಗಳು. ಇವರಿಂದಲೇ ಈ ಪ್ರಾಂತ್ಯಕ್ಕೆ ಮಹಾರಾಷ್ಟ್ರವೆಂದು ಹೆಸರಾಯಿತು ಎಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಇಂತಹ ಪಂಗಡದವರು ಅಂಬೇಡ್ಕರ್.

ಅಂಬೇಡ್ಕರ್ ತಂದೆ ರಾಮಜೀ, ತಾಯಿ ಭೀಮಾಬಾಯಿ. ಈ ದಂಪತಿಗಳೆಲ್ಲ ಹಿರಿಯರೆಲ್ಲ ಕಬೀರರ ಭಕ್ತಿ ಪಂಥಕ್ಕೆ ಸೇರಿದವರು. ದೇವರನ್ನು ಪೂಜಿಸುವವರೆಲ್ಲಾ ಅವರು ಯಾವುದೇ ಜಾತಿಯಾಗಿರಲಿ-ದೇವರಿಗೆ ಸೇರಿದವರು. ಕರುಣೆ, ಪ್ರೀತಿ, ಅನುಕಂಪ ದೇವರಲ್ಲಿ ಅನನ್ಯ ಭಕ್ತಿ ಇವುಗಳಿರುವವರೆಲ್ಲ ಸಮಾನರು ಎಂದು ಕಬೀರನ ಬೋಧನೆಯಲ್ಲಿ ಅವರಿಗೆ ಅತೀವ ನಂಬಿಕೆ. ಮನೆಯಲ್ಲಿ ಶಿಸ್ತು, ಅಚ್ಚುಕಟ್ಟು, ಸರಳತೆ, ಭಕ್ತಿ ಮತ್ತು

ಪ್ರೀತಿ ತುಂಬಿ ತುಳುಕುತ್ತಿತ್ತು. ಇಂತಹ ವಾತಾವರಣದಲ್ಲಿ 1891 ಏಪ್ರಿಲ್ 14ರಂದು ಹುಟ್ಟಿದವರು ಭೀಮರಾವ್ ರಾಮಜೀ ಅಂಬೇಡ್ಕರ್. ಇವರ ತಂದೆ-ತಾಯಿಗಳಿಗೆ ಹದಿನಾಲ್ಕು ಜನ ಮಕ್ಕಳು. 14ನೇ ಮಗನಾಗಿ ಜನಿಸಿದವರು ಭೀಮರಾವ್. ಅವರಲ್ಲಿ ಉಳಿದವರು ಐದು ಜನ ಮಾತ್ರ. ಮೂರು ಗಂಡು ಮತ್ತು ಎರಡು ಹೆಣ್ಣು. ಭೀಮರಾವ್ ಅವರ ಜೀವನವೆಂದರೆ-ಅದೊಂದು ನಿರಂತರವಾದ, ಸೋಲೊಪ್ಪದ ಹೋರಾಟಗಾಥೆ.

ಎಳೆತನದಲ್ಲಿ ಭೀಮ ಬಲು ತುಂಟನಾಗಿದ್ದ. ಏನಾದರೂ ತುಂಟಾಟ ಮಾಡುವುದು ಅವನ ನಿತ್ಯದ ಕಸುಬಾಗಿತ್ತು. ಭೀಮ ಇನ್ನೂ ಆರು ವರ್ಷದವನಿದ್ದಾಗಲೇ ಅವನ ತಾಯಿ ತೀರಿ ಹೋಗಿ ಅವನಿಗಿದ್ದ ವಾತ್ಸಲ್ಯದಾಶ್ರಯ ಕಳಚಿ ಬಿದ್ದಂತಾಯಿತು. ಭೀಮಾಬಾಯಿಯ ನಿಧನದ ನಂತರ ಅವನ ಪಾಲನೆ-ಪೋಷಣೆಯನ್ನು ಅವನ ವಿಕಲಾಂಗ ಸೋದರತ್ತೆ ಮೀರಾಬಾಯಿ ನೋಡಿಕೊಂಡಳು. ಆ ಸಂದರ್ಭದಲ್ಲಿ ಅಸ್ಪೃಶ್ಯತೆ ರೂಢಿಯಲ್ಲಿದ್ದರೂ ಪ್ರೀತಿಯ ತೇವ ಕಾಪಾಡಿಕೊಂಡು ಬಂದ ಶಿಕ್ಷಕರೂ ಇದ್ದರು. "ಅಂಬೇಡ್ಕರ್ ಎಂಬ ಹೆಸರಿನ ಬ್ರಾಹ್ಮಣ ಶಿಕ್ಷಕರೊಬ್ಬರು ಭೀಮರಾವನಿಗೆ ತಮ್ಮ ಸ್ವಂತ ಅಡ್ಡ ಹೆಸರಿಟ್ಟುದು ಮಾತ್ರವಲ್ಲದೇ ನಿತ್ಯ ಮಧ್ಯಂತರ ಸಮಯದಲ್ಲಿ ತಮ್ಮ ಊಟದ ಡಬ್ಬಿಯೊಳಗಿಂದ ಅವನಿಗೂ ರೊಟ್ಟಿ ತಿನ್ನಲು ಕೊಡುತ್ತಿದ್ದರು"[3] ಮುಂದೆ, 1927 ರಲ್ಲೊಮ್ಮೆ ಅಂಬೇಡ್ಕರ್ ಗುರುಗಳು ಬಾಬಾಸಾಹೇಬರ ಭೇಟ್ಟಿಗೆ ಬಂದಾಗ ಅವರ ಹೃದಯ ತುಂಬಿ ಬಂದು ಕೃತಜ್ಞತೆಯ ಕಣ್ಣೀರು ತುಳುಕಿತು. ಅವರದೊಂದು ಪ್ರೀತಿಪೂರ್ಣ ಪತ್ರವನ್ನು ಬಾಬಾಸಾಹೇಬರು ಬಹುಕಾಲ ಜೋಪಾನವಾಗಿಟ್ಟದ್ದರು. ಇದರ ಬಗ್ಗೆ ಮತ್ತೊಂದು ಅಭಿಪ್ರಾಯವಿದೆ" ಇವರ ಕುಟುಂಬದ ಮೂಲಹೆಸರು ಸಕ್ಪಾಲ್, ಆದರೆ ಇವರ ಪೂರ್ವಜರು ಪಿತ್ರಾರ್ಜಿತವಾಗಿ ಬಂದ ರತ್ನಗಿರಿ ಜಿಲ್ಲೆಯ ಬೇಡ್ ತಾಲೂಕಿನ ಅಂಬಾವಾಡೆಯಲ್ಲಿದ್ದುದರಿಂದ ಅಂಬಾವಾಡೇಕರ್ ಎಂದು ಹೆಸರಾಯಿತು. ಇದನ್ನೇ ಅವರ ಸತಾರದಲ್ಲಿದ್ದ ಶಿಕ್ಷಕರೊಬ್ಬರು ಅಂಬೇಡ್ಕರ್ ಎಂದೇ ಕರೆದರು"[4] ಈ ಹೆಸರೇ ಅಂತಿಮವಾಗಿ ಉಳಿಯಿತು. "ಮಹಾರ್, ಅಸ್ಪೃಶ್ಯ ಜನಾಂಗದಲ್ಲಿ ಜನಿಸಿದ ಅಂಬೇಡ್ಕರ್ ಶಾಲೆಯಲ್ಲಿ ಪ್ರತ್ಯೇಕವಾಗಿ ಕುಳಿತು ಪಾಠ, ಪ್ರವಚನ ಆಲಿಸಬೇಕಾಗಿತ್ತು. ಇವರು ಇತರ ಮಕ್ಕಳೊಂದಿಗೆ ಆಟವನ್ನು ಆಡುವಂತಿರಲಿಲ್ಲ. ಇವರಿಗೆ ಸಂಸ್ಕೃತ ಕಲಿಯುವ ಆಸೆಯೂ ಇತ್ತು. ಆದರೆ ಸಂಸ್ಕೃತ ಶಿಕ್ಷಕನೊಬ್ಬ ಅಸ್ಪೃಶ್ಯರಿಗೆ ಸಂಸ್ಕೃತವನ್ನು ಕಲಿಸಿ ಕೊಡಲು ನಿರಾಕರಿಸಿದನು. ಇದರಿಂದಾಗಿ ಅಂಬೇಡ್ಕರ್ ಅನಿವಾರ್ಯವಾಗಿ ಸ್ಕೂಲಿನಲ್ಲಿ ಎರಡನೇ ಭಾಷೆಯಾಗಿ ಪರ್ಶಿಯನ್ ಓದಬೇಕಾಗಿ ಬಂತು. ಆದರೆ ಮುಂದೆ ಭೀಮ ದೊಡ್ಡವನಾಗಿ ಸಂಸ್ಕೃತವನ್ನು ಸ್ವಂತ ಪರಿಶ್ರಮದಿಂದ ಅಭ್ಯಾಸ ಮಾಡಿದ. ಕೆಲವು ಸಂಸ್ಕೃತ ಪಂಡಿತರ ಸಹಾಯ ಪಡೆದುಕೊಂಡು ತಾನೇ ಸಂಸ್ಕೃತದ ಅತಿ ದೊಡ್ಡ ವಿದ್ವಾಂಸನೆನಿಸಿಕೊಂಡ.

ಅಸ್ಪೃಶ್ಯತೆಯ ಅರಿವು :

ಭೀಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ 1900 ರಲ್ಲಿ ಪ್ರೌಢಶಾಲೆ ಸೇರಿದ. ಬುದ್ಧಿ ಬಲಿಯುತ್ತಿದ್ದಂತೆ ಅಸ್ಪೃಶ್ಯತೆಯ ಅರಿವು ಉಂಟಾಯಿತು. ಈ ಶಾಲಾ ದಿನಗಳಲ್ಲಿಯೇ ಭೀಮಜೀಯ ಮನಸ್ಸಿನ ಮೇಲೆ ಮಾಯದ ಗಾಯವನ್ನುಂಟು ಮಾಡುವ ಹಲವು ಘಟನೆಗಳು ನಡೆದವು. ಅಸ್ಪೃಶ್ಯತೆಯ ಘೋರತರ ಪರಿಣಾಮ ಅರಿವನ್ನು ಅವನ ಸುಕುಮಾರ ಹೃದಯದಲ್ಲಿ ತುಂಬಿದವು. ಮನೆಯೊಳಗಿನ ಪ್ರೀತಿ, ಅನುಕಂಪ,

ಔದಾರ್ಯ, ಭಕ್ತಿ, ಶಾಂತಿಗಳಿಂದ ಹೂವಿನಂತೆ ಅರಳುತ್ತಿದ್ದ ವ್ಯಕ್ತಿತ್ವದ ಮೇಲೆ ಹೊರಜಗತ್ತಿನ ಕಾಠಿಣ್ಯ ದ್ವೇಷ ಸಂಕುಚಿತ ಗುಣಗಳು ವಜ್ರಾಘಾತ ಮಾಡಿದವು.

ಬೇಸಿಗೆಯ ದಿನದಲ್ಲೊಮ್ಮೆ ಭೀಮಜೀ ತನ್ನ ಅಣ್ಣ ಮತ್ತು ಗೆಳೆಯರೊಡನೆ ತಂದೆಯನ್ನು ನೋಡುವುದಕ್ಕಾಗಿ ಹೊರಟ. ಪಡಲಿ ನಿಲ್ದಾಣದಲ್ಲಿ ರೈಲು ಹಿಡಿದು ಮಾಸೂರಿನವರೆಗೆ ಪ್ರಯಾಣ ಮಾಡಿದರು. ಅಲ್ಲಿ ತಮ್ಮ ತಂದೆಗಾಗಿ ಬಹಳ ಹೊತ್ತು ಕಾದು, ಕೊನೆಗೆ ಎತ್ತಿನ ಗಾಡಿಯೊಂದನ್ನು ಸ್ಟೇಷನ್ ಮಾಸ್ಟರ್ ನೆರವಿನೊಂದಿಗೆ ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಕೂತು ತಮ್ಮ ತಂದೆ ಕೆಲಸ ಮಾಡುತ್ತಿದ್ದ ಗೊರೆಗಾಂವ್‌ಗೆ ಹೊರಟರು. ಗಾಡಿ ಕೆಲವು ಮಾರು ದೂರ ಹೋದ ಕೂಡಲೇ, ಗಾಡಿಯಲ್ಲಿ ಕುಳಿತಿರುವ ಹುಡುಗರ ಮಾತುಗಳಿಂದ ಅವರು ಅಸ್ಪೃಶ್ಯರೆಂಬುದು ಗಾಡಿಯವನಿಗೆ ತಿಳಿದು ಹೋಯಿತು. ತನ್ನ ಗಾಡಿ ಹೊಲೆಯಾಯಿತು. ತನ್ನ ಎತ್ತುಗಳು ಅಪವಿತ್ರವಾಗಿ ಬಿಟ್ಟವು, ತನಗೂ ಮೈಲಿಗೆಯಾಯಿತು ಎಂಬ ರೋಷ ಅವನಲ್ಲಿ ಹೆಡೆಯುತ್ತಿತ್ತು. ಕಸದ ಬುಟ್ಟಿಗಳನ್ನು ಎಸೆಯುವಂತೆ ಅವರನ್ನು ರಸ್ತೆಯಲ್ಲಿ ಉರುಳಿಸಿಬಿಟ್ಟ. ಮುಂದೇನು ಮಾಡುವುದೆಂದು ತಿಳಿಯದೆ "ನಾವೇ ಬೇಕಾದರೆ ಗಾಡಿ ಹೊಡೆಯುತ್ತೇವೆ. ಊರಿನ ಗಡಿಯಲ್ಲಿಯೇ ಇಳಿದು ಬಿಡುತ್ತೇವೆ ಜೊತೆಗೆ ಎರಡರಷ್ಟು ಬಾಡಿಗೆ ಕೊಡುತ್ತೇವೆ" ಎಂದಾಗ ಗಾಡಿಯವ ಒಪ್ಪಿದ. ದಾರಿಯಲ್ಲಿ ತೀವ್ರವಾದ ಬಾಯಾರಿಕೆ ಯಾಯಿತು. ಗಂಟಲು ಒಣಗಿದವು. ಯಾರನ್ನು ಬೇಡಿದರೂ ಒಂದು ತೊಟ್ಟು ನೀರೂ ದೊರೆಯಲಿಲ್ಲ. ಕೆಲವರು ದೂರದಲ್ಲಿದ್ದ ಕೊಳಕು ನೀರನ್ನು ತೋರಿದರು. ಕೆಲವರು ನಾಯಿ-ನರಿಗಳನ್ನು ಬಡಿದಷ್ಟು ಹೀನಾಯವಾಗಿ ಅವರನ್ನು ಗದರಿಸಿ ದೂರ ಅಟ್ಟಿದರು.

ಸಂಜೆಯಿಂದ ಮಧ್ಯರಾತ್ರಿಯವರೆಗೂ ಆ ಹುಡುಗರು ಅದೇ ಸ್ಥಿತಿಯಲ್ಲಿ ಪ್ರಯಾಣ ಮಾಡಬೇಕಾಯಿತು. ಈ ಘಟನೆ ಭೀಮನ ನಿರ್ಮಲವಾದ ಮೃದು ಮನಸ್ಸಿನಲ್ಲಿ ಆಳವಾಗಿ ಬೇರೂರಿಬಿಟ್ಟಿತು. ತಾನು ಅಸ್ಪೃಶ್ಯ, ಕೊಳಕು ನೀರು ಕುಡಿಯಲು, ಅನ್ಯರು ಬಿಟ್ಟ ಅಸಹ್ಯ ವಸ್ತುವನ್ನು ತಿನ್ನಲು, ತಾನು ಹುಟ್ಟಿದವನು ಎಂಬ ಕಹಿಯಾದ ಅರಿವು ಮೊತ್ತಮೊದಲಿಗೆ ಉಂಟಾಯಿತು. ಕೆಲವು ದಿನಗಳ ನಂತರ ನಡೆದ ಮತ್ತೊಂದು ಘಟನೆಯಿಂದ ಈ ಅರಿವು ಮತ್ತುಷ್ಟು ಸ್ಥಿರವಾಯಿತು. ಒಂದು ದಿನ ತಡೆಯಲಾರದ ಬಾಯಾರಿಕೆಯಿಂದಾಗಿ ಸಾರ್ವಜನಿಕ ಕೊಳವೊಂದರಲ್ಲಿ ಗಟಗಟನೆ ನೀರು ಕುಡಿಯತೊಡಗಿದ್ದ. ಯಾರೋ ಕಂಡರು, ಹಿಡಿದರು, ಎಳೆಯ ಮೈ ಹಸಿರುಗಟ್ಟುವಂತೆ ಬಾರಿಸಿದರು.

ಎಂಥೆಂಥವರ ಕೊಳಕು ತಲೆಗಳಿಗೆಲ್ಲ ಕ್ಷೌರ ಮಾಡುತ್ತಿದ್ದ ಕ್ಷೌರಿಕನೊಬ್ಬ ತನ್ನ ಮೃದುವಾದ, ಶುಭ್ರವಾದ ತಲೆಗೂದಲನ್ನು ಕತ್ತರಿಸಲು ನಿರಾಕರಿಸಿದಾಗ ಭೀಮನ ಕಣ್ಣಲ್ಲಿ ಕೋಡಿ ಹರಿದಿತ್ತು ಅಪಮಾನದಿಂದ. ಅಕ್ಕಂದಿರು ಅವನನ್ನು ಸಂತೈಸಿ, ತಾವೇ ಕೂದಲು ಕತ್ತರಿಸಿದರು. ಶಾಲೆಯ ಹೊರಗೆ ಈ ಸ್ಥಿತಿಯಾದರೆ ಒಳಗೆ ಮತ್ತೊಂದು ಬಗೆ. ತನ್ನ ಸಹ ವಿದ್ಯಾರ್ಥಿಗಳ ಜೊತೆಗೆ ಅವನು ಕೂರುವಂತಿರಲಿಲ್ಲ. ಅವನೂ ಅವನ ಅಣ್ಣನೂ ತಾವೇ ತಂದ ಗೋಣಿಚೀಲವೊಂದರ ಮೇಲೆ ತರಗತಿಯ ಒಂದು ಕತ್ತಲೆಯ ಮೂಲೆಯಲ್ಲಿ ಕೂರಬೇಕಾಗಿತ್ತು. ಉಪಾಧ್ಯಾಯರು ಇವರನ್ನು ಮುಟ್ಟುತ್ತಿರಲಿಲ್ಲ. ಕೆಲವರಂತೂ ತಮಗೆ ಮೈಲಿಗೆಯಾಗುತ್ತದೆಂದು ಇವರಿಗೆ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಇವರಿಗೇನಾದರೂ ತಡೆಯಲಾರದಷ್ಟು ಬಾಯಾರಿಕೆಯಾದರೆ, ಮುಖ ಮೇಲೆ ಮಾಡಿ ಬಾಯನ್ನು ಅಗಲಿಸಿ ದೇಹವನ್ನು ಹಿಡಿಗಾತ್ರ ಮಾಡಿಕೊಂಡು

ಕೂರಬೇಕು. ಯಾರಾದರೂ ಸವರ್ಣೀಯ ಹುಡುಗರು ತಾವೇನೋ ಮಹಾಉಪಕಾರ ಮಾಡುತ್ತಿದ್ದೇವೆ ಎಂಬ ಭಾವನೆಯಿಂದ ಅವರ ಬಾಯಿಗೆ ನೀರು ಸುರಿಯಬೇಕು.

ದಿನನಿತ್ಯ ಇಂಥ ಘಟನೆಗಳು ಹತ್ತಾರು ನಡೆಯುತ್ತಿದ್ದವು. ಕುಂತಲ್ಲಿ, ನಿಂತಲ್ಲಿ, ಹೋದಲ್ಲಿ, ಬಂದಲ್ಲಿ "ನೀನು ಹೊಲೆಯ, ನೀನು ಅಪವಿತ್ರ" ಎಂದು ಸಮಾಜ ಚುಚ್ಚಿ ಚುಚ್ಚಿ ತೋರಿಸುತ್ತಿತ್ತು. ಯಾಕೆ ಹೀಗೆ? ತಾವು ಇವರಂತೆ ಇಲ್ಲವೇ? ತಾವು ಮನುಷ್ಯರಲ್ಲವೇ? ತಮ್ಮನ್ನು ಯಾಕೆ ಮುಟ್ಟಬಾರದು? ದನ, ಎಮ್ಮೆ, ನಾಯಿ ಕುರಿ ಕೋಳಿಗಳನ್ನು ಪ್ರೀತಿಯಿಂದ ಕಾಣುವ ಇವರು ತಮ್ಮನ್ನು ಯಾಕೆ ಇಷ್ಟು ಹೀನಾಯವಾಗಿ ಕಾಣುತ್ತಾರೆ? ತಮ್ಮಲ್ಲಿರುವ ಕಳಂಕವೇನು? ಭೀಮನ ಮನಸ್ಸು ಪದೇ ಪದೇ ಕೇಳುತ್ತಿತ್ತು.

ಭೀಮ್‌ಜೀ ಪ್ರಸಿದ್ಧವಾದ ಎಲ್ಫಿನ್‌ಸ್ಟನ್ ಪ್ರೌಢಶಾಲೆಗೆ ಸೇರಿದ್ದ. ಅದು ಸರ್ಕಾರಿ ಶಾಲೆಯಾದರೂ ಅಲ್ಲಿಯೂ ಕಿರುಕುಳ, ಅವಹೇಳನ ತಪ್ಪಲಿಲ್ಲ ಭೀಮನಿಗೆ. ಜಾತೀಯತೆಯ ವಿಷಗಾಳಿ ಇಡೀ ಭಾರತವನ್ನೇ ಆಪೋಶನ ತೆಗೆದುಕೊಂಡಿದ್ದಾಗ ಆ ಶಾಲೆಯನ್ನು ಬಿಟ್ಟೀತೇ? ಒಂದು ದಿನ ಉಪಾಧ್ಯಾಯರೊಬ್ಬರು ಕಪ್ಪು ಹಲಗೆಯ ಮೇಲೆ ಲೆಕ್ಕ ಮಾಡುವುದಕ್ಕಾಗಿ ಭೀಮನನ್ನು ಕರೆದರು. ತರಗತಿಯಲ್ಲಿ ಬಾಂಬ್ ಸಿಡಿದಂತಾಯಿತು. ಹುಡುಗರೆಲ್ಲ ಭೂತಾವೇಶ ಬಂದವರಂತೆ ಕಪ್ಪು ಹಲಗೆಯ ಬಳಿ ಧಾವಿಸಿದರು. ಆ ಹಲಗೆಯ ಹಿಂದೆ ಅವರು ತಮ್ಮ ಊಟದ ಡಬ್ಬಿಗಳನ್ನು ಇಟ್ಟಿದ್ದರಂತೆ. ಭೀಮ ಅವುಗಳನ್ನು ಮುಟ್ಟಿದರೆ ತಮ್ಮ ಆಹಾರ ಕಳಂಕಿತವಾಗುತ್ತದೆಂದು ಭಾವಿಸಿದ-ಅವರು ತಮ್ಮ ಡಬ್ಬಿಗಳನ್ನು ದಡಬಡನೆ ತೆಗೆದುಕೊಂಡರು. ಆಗ ಉಂಟಾದ ಶಬ್ದ ನೂರು ಸಿಡಿಲುಗಳಾಗಿ ಬಾಲಕ ಭೀಮನ ಹೃದಯಕ್ಕೆ ಬಡಿದವು. ಮತ್ತೊಬ್ಬ ಉಪಾಧ್ಯಾಯರು ಭೀಮನು ಓದುವುದು ನಿರರ್ಥಕ ಎಂದು ಅವನನ್ನು ಜರಿದಾಗ ಅವನ ಸಹನೆಯ ಕಟ್ಟು ಕುಸಿದು ಸಿಟ್ಟಿನಿಂದ ಅಬ್ಬರಿಸಿದ. "ನಿಮ್ಮ ಕೆಲಸ ನೀವು ನೋಡಿಕೊಳ್ಳಿ. ನನಗೆ ಉಪದೇಶ ಮಾಡಬೇಕಾಗಿಲ್ಲ" ಹೀಗೆ ಬಾಲ್ಯದಲ್ಲಿಯೇ ಪ್ರತಿಭಟನೆ ವ್ಯಕ್ತಗೊಂಡಿತು.

ಸ್ವಪ್ರಯತ್ನಕ್ಕೆ ನಾಂದಿ :

ಬಾಲಕ ಭೀಮನ ಮನಸ್ಸಿನ ಮೇಲೆ ಆಳವಾದ ಬರೆಯೆಳೆದ ಸವರ್ಣೀಯರ ಮೇಲೆ ಅವನ ಜಿಗುಪ್ಸೆ, ಕ್ರೋಧ, ಕೆಂಡವಾಗುವಂತೆ ಮಾಡಿದ ಮರೆಯಲಾಗದ ಮತ್ತೊಂದು ಪ್ರಸಂಗ ಸಂಸ್ಕೃತದ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ್ದು, ಸಂಸ್ಕೃತವು ವೇದದ ಅಭ್ಯಾಸಕ್ಕೆ ಕೀಲಿಕೈ, ವೇದ ಹಿಂದೂಧರ್ಮದ ಪ್ರತಿನಿಧಿ, ಆದರೆ ಶೂದ್ರರು, ಅಸ್ಪೃಶ್ಯರು ಅದನ್ನು ಓದುವಂತಿರಲಿಲ್ಲ. ಅವರು ಅದಕ್ಕೆ ಅನರ್ಹರು. ಅವರ ನಾಲಿಗೆಯ ಸೋಂಕಿನಿಂದ ಅದು ಅಪವಿತ್ರವಾಗುತ್ತದೆ. ಅದನ್ನು ಅವರಿಗೆ ಬೋಧಿಸಿದವರಿಗೂ ನರಕ ಪ್ರಾಪ್ತಿಯಾಗುತ್ತದೆ. ಸಂಸ್ಕೃತ ಕಲಿತು ವೇದ ಪುರಾಣ, ಶಾಸ್ತ್ರಗಳನ್ನು ಓದಿ ಜ್ಞಾನಗಳಿಸಬೇಕೆಂಬ ಅವನ ಬಯಕೆಗೆ ಧರ್ಮಾಂಧರ ಸಂಕುಚಿತದೃಷ್ಟಿ ಬೆಂಕಿಯಿಕ್ಕಿತು. ಅವರು ಪಾರಸಿಯನ್ನು ಆರಿಸಿಕೊಂಡರು ಮುಂದೆ ಸ್ವಪ್ರಯತ್ನದಿಂದ ಸಂಸ್ಕೃತದ ವಿದ್ವತ್ತನ್ನು ಗಳಿಸಿಕೊಂಡರು. ಶಾಲೆಯಲ್ಲಿ ಪ್ರತ್ಯೇಕ ಕೂತು ಕಲಿಯುವಾಗ, ತಾನು ಹತ್ತಿದ ಗಾಡಿಯವನು ಅರ್ಧದಾರಿಗೆ ನಿಷ್ಕರುಣೆಯಿಂದ ಕೆಳದಬ್ಬಿದಾಗ, ಎಳೆಯ ಭೀಮ ಈ ನಾಡಿನ ಇತಿಹಾಸವನ್ನು ಕಣ್ಣಾರೆ ಕಂಡ, ಮತ್ತು ಈ ನಾಡ ಇತಿಹಾಸ ಬದಲಿಸುವ ಸಂಕಲ್ಪ ಆಗಲೇ ಬೀಜರೂಪದಲ್ಲಿ ಆ ಬಾಲಕನ ಮನ ಸೇರಿತೆಂದು ತೋರುತ್ತದೆ. ತನ್ನ ಸುತ್ತ ಹಬ್ಬಿದ ದಾಸ್ಯಕ್ಕೆ ಅಜ್ಞಾನವೇ ಮೂಲವೆಂದು ಮನಗಂಡು ಬಾಲಕ ಭೀಮ ಅದಮ್ಯ ಜ್ಞಾನದಾಹದಿಂದ ಓದಿನಲ್ಲಿ ಮುಳುಗಿ ಹೋದ. ರಾತ್ರಿ ಬುಡ್ಡಿ ದೀಪದ ಬೆಳಕಿನಲ್ಲಿ

ಪುಟ್ಟ ಗೂಡಿನಂಥ ಜೋಪಡಿಯಲ್ಲಿ, ಆ ಬಾಲಕನ ಎದೆಯಲ್ಲಿ ಭವಿಷ್ಯವನ್ನು ಬರೆಯಬಲ್ಲ ಜ್ಞಾನಜ್ಯೋತಿ ಆಗಿನಿಂದಲೇ ಉರಿಯತೊಡಗಿತು. ಅಸ್ಪೃಶ್ಯನಿಗೆ ಸಂಸ್ಕೃತ ಕಲಿಸಲು ನಿರಾಕರಿಸಿದ ನೀತಿಯಿಂದಾಗಿ, ಸ್ವಪ್ರಯತ್ನವನ್ನೇ ನೆಚ್ಚಿಕೊಳ್ಳಬೇಕಾಯಿತು. ಅಂದು ತೊಡಗಿದ ಈ ಸ್ವಪ್ರಯತ್ನದ ಫಲವೇ ಮುಂದಕ್ಕೆ ಅವರನ್ನು ಶೋಷಿತ ಜನಾಂಗದ ಸ್ವಾಭಿಮಾನ, ಸ್ವಪ್ರಯತ್ನಗಳ ಸಂಕೇತವನ್ನಾಗಿ ರೂಪಿಸಿತು.

ಬಾಲಕ ಅಂಬೇಡ್ಕರ್‌ಗೆ ಸನ್ಮಾನ :

ತಮ್ಮ ಮಾರ್ಗದಲ್ಲೇ ಎಷ್ಟೇ ಅವಮಾನ ಎದುರಾದರೂ, ಅಡೆತಡೆಗಳು ಬಂದರೂ ಕಟ್ಟಿಕೊಂಡಿದ್ದ ಧ್ಯೇಯವನ್ನು ಸಾಧಿಸಲು ಹಾಗೂ ತಂದೆಯ ಕನಸನ್ನು ನನಸು ಮಾಡಲು ಅಂಬೇಡ್ಕರ್ 1907ರಲ್ಲಿ ಎಲ್ಫಿನ್‌ಸ್ಟನ್ ಶಾಲೆಯಿಂದ ಮೆಟ್ರಿಕ್ಯೂಲೇಷನ್ ಪರೀಕ್ಷೆ ಪಾಸುಮಾಡಿದರು. ಅಸ್ಪೃಶ್ಯರ ಹುಡುಗ ಮೆಟ್ರಿಕ್‌ನಲ್ಲಿ ಪಾಸಾಗಿದ್ದು, ಆಗಿನ ಕಾಲದಲ್ಲಿ ದೊಡ್ಡ ಸುದ್ದಿಯಾಯಿತು. ಅಂಬೇಡ್ಕರ್‌ರ ಮನೆಯವರಿಗೂ ಹಾಗೂ ಡಬಕ್ ಚಾಳಿನ ನಿವಾಸಿಗಳೆಲ್ಲರಿಗೂ ತುಂಬಾ ಸಂತೋಷವಾಗಿತ್ತು. ಚಾಳಿನ ನಿವಾಸಿಗಳೆಲ್ಲ ಸೇರಿ, ಸಮಾಜ ಸುಧಾರಕ ಎಸ್.ಕೆ. ಬೋಲೆ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅಂಬೇಡ್ಕರ್‌ರನ್ನು ಸನ್ಮಾನಿಸಿದರು. ಆ ಸಭೆಯಲ್ಲಿ ಉಪಸ್ಥಿತರಿದ್ದು, ತಾವು ಮರಾಠಿಯಲ್ಲಿ ಬರೆದ "ಗೌತಮ ಬುದ್ಧನ ಜೀವನ ಚರಿತ್ರೆ" ಗ್ರಂಥವನ್ನು ಕೃಷ್ಣಾಜಿ ಅರ್ಜುನ ಕೇಳೂಸ್ಕರ್ ಗುರುಜಿಯವರೂ ಅವನಿಗೆ ಬಹುಮಾನವೆಂದು ಸಲ್ಲಿಸಿದರು. ಅಂಬೇಡ್ಕರ್‌ರಿಗೆ ಬುದ್ಧ ಮೊಟ್ಟಮೊದಲ ಬಾರಿಗೆ ವಿವರವಾಗಿ ಪರಿಚಯವಾಗಿದ್ದು ಈ ಪುಸ್ತಕದ ಮೂಲಕ. ಕೇಳೂಸ್ಕರ್ ಗುರೂಜಿಯವರು ಅವನಿಗೆ ಬಹುಮಾನವೆಂದು ಸಲ್ಲಿಸಿದರು. ಅವನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಶ್ರೀಮಂತ ಸಯಾಜಿರಾವ್ ಗಾಯಕವಾಡ್ ಅವರ ನೆರವು ದೊರಕಿಸಿ ಕೊಡುವ ಭರವಸೆಯಿತ್ತುದಲ್ಲದೆ ಮಹಾರಾಜರಿಗೆ ಭೀಮರಾವನ ಪರಿಚಯವನ್ನು ಮಾಡಿಸಿಕೊಟ್ಟರು. ಮಹಾರಾಜರು ಅವನಿಗೆ ಪ್ರತಿ ತಿಂಗಳೂ 20 ರೂಪಾಯಿಗಳ ಶಿಷ್ಯವೇತನ ನೀಡುವ ಆದೇಶ ಹೊರಡಿಸಿದರು.

ವಿವಾಹ :

ಅಂಬೇಡ್ಕರ್‌ರ ಮದುವೆಯ ವಿಷಯ ಪ್ರಸ್ತಾಪವಾಯಿತು. ಆ ಕಾಲದಲ್ಲಿ ಹುಡುಗರಿಗೆ ಹದಿನಾರು ತುಂಬುವ ಹೊತ್ತಿಗೆ ಮದುವೆ ಮಾಡುವುದು ರೂಢಿ. ಹಾಗಾಗಿ ರಾಮಜೀ ಕೂಡ ಸಹಜವಾಗಿ ಆ ಕಡೆ ಚಿಂತನೆ ಮಾಡಿದ್ದರು. ಮದುವೆಗೆ ಅಗತ್ಯವಾದ ಜಾಗದ ಕೊರತೆ ಇರುವ ಕಾರಣ ಅಂಬೇಡ್ಕರ್‌ರ ಮದುವೆ ಬೈಕುಲಾ ಸಂತೆ ಮಾರ್ಕೇಟ ಷೆಡ್ ಒಂದರಲ್ಲಿ ರಾತ್ರಿ ಹೊತ್ತು ನಡೆಯಿತು. ಅಂಬೇಡ್ಕರ್‌ಗೆ ಆಗ 17 ವರ್ಷ. ಪತ್ನಿಯಾದ ರಮಾಬಾಯಿ 9 ವರ್ಷ. ಆಕೆಯ ತಂದೆ ಭಿಕು ವಾಲಂಗ್‌ಕರ್ ದಾಪೋಲಿಯಲ್ಲಿ ಕೂಲಿಯಾಗಿದ್ದು, ನಿಧನ ಹೊಂದಿದ್ದ. ರಮಾಬಾಯಿ ಸರಳ ಹುಡುಗಿ. ಬಡಕುಟುಂಬದಿಂದ ಬಂದವಳು. ಅಂಬೇಡ್ಕರ್ ಅಭ್ಯುದಯದಲ್ಲಿ ನೆರವಾಗಿದ್ದಳು.

ಪದವಿ ವ್ಯಾಸಂಗ :

ಮದುವೆಯಾದ ಮೇಲೂ ಅವರ ವ್ಯಾಸಂಗ ಮುಂದುವರೆಯಿತು. ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಓದು ಮುಂದುವರೆದಾಗ ಬರೋಡದ ಮಹಾರಾಜರು ಶಿಷ್ಯವೇತನ ನೀಡಿ ಸಹಾಯ ಮಾಡಿದರು. ತನ್ನ ಬೆಂಬಿಡದ ಅಸ್ಪೃಶ್ಯ ಸ್ಥಿತಿಯ ಕೋಟಲೆ, ಅವಮಾನಗಳು, ಜಾತಿಭೂತ ಮಾತ್ರ ಅವನ ಬೆನ್ನು ಬಿಡಲಿಲ್ಲ. ಅವನ

ಕಾಲೇಜ್ ಕ್ಯಾಂಟೀನಿನ ಮಾಲೀಕ ಅವನಿಗೆ ಒಂದು ಲೋಟ ನೀರನ್ನು ಕೊಡುತ್ತಿರಲಿಲ್ಲ. ಭೀಮಜಿಯ ಕಣ್ಣಲ್ಲಿ ನೀರು ಹರಿಯುತ್ತಿತ್ತು. ಹೃದಯದಲ್ಲಿ ಸಂಕಟದ ಸಮುದ್ರ ಭೋರ್ಗರೆಯುತ್ತಿತ್ತು. ಇದಕ್ಕೆ ಪರಿಹಾರ ಹುಡುಕಲೇಬೇಕೆಂಬ ಛಲ ಮನಸ್ಸಿನಲ್ಲಿ ಹೆಮ್ಮರವಾಗಿ ಬೆಳೆಯುತ್ತಿತ್ತು. ಸದಾ ಓದು, ಮನನ, ಚಿಂತನೆ, ಸಂಸ್ಕೃತವನ್ನು ಅಭ್ಯಾಸ ಮಾಡಿ, ಜಾತಿಧರ್ಮಗಳಿಗೆ ಸಂಕುಚಿತ ದೃಷ್ಟಿಯ ಚೌಕಟ್ಟನ್ನು ಹಾಕಿದ ಮನುಸ್ಮೃತಿಯನ್ನು, ವೇದ ಉಪನಿಷತ್ತು, ಪುರಾಣಗಳನ್ನು ಅಧ್ಯಯನ ಮಾಡಿ ಜೀರ್ಣಿಸಿಕೊಂಡ. 1912ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪದವೀಧರರಾದರು. ತಮ್ಮ ತಂದೆಯ ಕನಸನ್ನು ನನಸು ಮಾಡಿದ. ಬಿ.ಎ. ಪದವೀಧರರಾದ ಬಳಿಕ ತಂದೆಯ ಸಮ್ಮತಿಯಿಲ್ಲದಿದ್ದರೂ ಭೀಮರಾವ್ ಯಾವುದಾದರೂ ಕೆಲಸಕ್ಕೆ ಸೇರಬೇಕೆಂದು ನಿರ್ಧಾರ ಮಾಡಿದರು. ಬರೋಡಾ ರಾಜ್ಯದಲ್ಲಿ ಲೆಫ್ಟನೆಂಟ್‌ನಾಗಿ ನೇಮಕ, 15ನೇ ದಿನಗಳಲ್ಲಿ ಅವರ ತಂದೆಯ ಅನಾರೋಗ್ಯದ ಸುದ್ದಿ ಬಂತು. ಕೂಡಲೇ ಮುಂಬಯಿಗೆ ಧಾವಿಸಿದರು. ಮನೆಗೆ ಬಂದು ನೋಡಿದಾಗ ಮರಣೋನ್ಮುಖರಾಗಿ ಮಲಗಿದ್ದ ತಂದೆಯ ದರ್ಶನವಾಯಿತು. ತಂದೆಯ ಪ್ರಾಣ ಮಗನ ಆಗಮನಕ್ಕಾಗಿಯೇ ಕಾಯುತ್ತಿತ್ತೋ ಏನೋ, ರಾಮಜೀ ಸುಬೇದಾರ್ 1913ರ ಫೆಬ್ರುವರಿ 2ರಂದು ಕೊನೆಯುಸಿರೆಳೆದರು. ರಾಮಜೀ ಸುಭೇದಾರರ ಮರಣಾ ನಂತರ ಭೀಮರಾವ್‌ರಿಗೆ ತಮ್ಮ ಕಾಲ ಮೇಲೆ ನಿಲ್ಲುವುದು ಅನಿವಾರ್ಯವಾಯಿತು. ಆದರೆ ಮತ್ತೆ ಬರೋಡಗೆ ಹೋಗಲಿಲ್ಲ. ಉನ್ನತ ಶಿಕ್ಷಣಕ್ಕಾಗಿ ಮಹಾರಾಜರ ನೆರವಿನೊಂದಿಗೆ ಅಮೇರಿಕೆಗೆ ಹೋಗಲು ನಿರ್ಧರಿಸಿದರು.

ಅಸಂತೋಷದ ಕಾಲ :

1912-13ರ ಸಂದರ್ಭ ಇದು ಭಾರತದ ಪಾಲಿಗೆ ಅತ್ಯಂತ ಕರಾಳ ಕಾಲವಾಗಿತ್ತು. ಭಾರತೀಯ ನಾಗರೀಕರ ಬಹುತೇಕ ಹಕ್ಕುಗಳನ್ನು ಬ್ರಿಟಿಷ್ ಆಡಳಿತ ಹತ್ತಿಕ್ಕಿತ್ತು. ಸ್ವಾತಂತ್ರ್ಯದ ಮಾತೆತ್ತಿದರೆ ಬ್ರಿಟಿಷ್ ಪೋಲಿಸರು ಮೇಲೆರಗಿ ಬಿದ್ದು, ದನಿಯನ್ನು ಅಡಗಿಸಿ ಬಿಡುತ್ತಿದ್ದರು. ಜನರಲ್ಲಿ ಅಸಂತೋಷವನ್ನು ಉಂಟು ಮಾಡುವವರನ್ನು ಬ್ರಿಟಿಷ್ ಸರ್ಕಾರ ಸುಮ್ಮನೇ ಬಿಡುವುದಿಲ್ಲ ಎಂದು ಘೋಷಿಸಲಾಗಿತ್ತು. ಸ್ವಾತಂತ್ರ್ಯಕ್ಕಾಗಿ ಪ್ರಚಾರ ಮಾಡುತ್ತಿದ್ದವರನ್ನು ಬಂಧಿಸಲಾಗುತ್ತಿತ್ತು. ಬ್ರಿಟಿಷರ ದಮನಕಾರಿ ನೀತಿ ಭಾರತೀಯರಲ್ಲಿ ಅಸಂತೋಷ ಉಂಟುಮಾಡಿತು. ತಿಲಕರನ್ನು ಮಂಡಾಲೆಗೆ ಬಲಾತ್ಕಾರದಿಂದ ರವಾನೆ ಮಾಡಿದರೆ, ಸಾವರ್ಕರ್‌ರವರು ಅಂಡಮಾನಿನಲ್ಲಿ ಕರಿನೀರಿನಶಿಕ್ಷೆ ಅನುಭವಿಸುತ್ತಿದ್ದ ರಾಜಕೀಯ ಕ್ಷೋಭೆ ಒಂದೆಡೆಯಾದರೆ, ಮರಾಠಾ, ಕರ್ಮವೀರ ಶಿಂಧೆಯವರ "ಡಿಪ್ರೆಸ್ಡ್ ಕ್ಲಾಸ್ ಮಿಷನ್" ಹಾಗೂ ಗೋಖಲೆಯವರ "ಭಾರತ ಸೇವಕ ಸಂಘ"ಗಳ ಸಮಾಜ ಸುಧಾರಣೆಯ ಪ್ರಯತ್ನಗಳು ಇನ್ನೊಂದೆಡೆ ನಡೆಯುತ್ತಿದ್ದ ಸಂಕ್ರಮಣ ಕಾಲವದು. ಅಂಬೇಡ್ಕರ್ ಮನಸ್ಸಿನ ಮೇಲೆ ಈ ಸಂದರ್ಭ ತೀವ್ರ ಪರಿಣಾಮ ಮಾಡಿತು. ಆ ಯುವಮನಸ್ಸು ಅನೇಕ ತುಮುಲಗಳಿಗೆ ಒಳಗಾಗಿರಬೇಕು. ಎಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿ ಪ್ರಭಾವಕ್ಕೊಳಗಾದರೂ, ನೇರ ಕಾರ್ಯರಂಗಕ್ಕಿಳಿಯುವ ಕಾಲವಿನ್ನೂ ಸಮೀಪಿಸಿರಲಿಲ್ಲ.

ಉನ್ನತ ವ್ಯಾಸಂಗ :

ಬರೋಡ ಮಹಾರಾಜರು ಇರಿಸಿದ್ದ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿ ಆಯ್ಕೆಗೊಂಡ ಅಂಬೇಡ್ಕರ್ 1913ರಲ್ಲಿ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ನಡೆಸಲು ಹೊರಟರು.

ಜಾತಿಗ್ರಸ್ತ ಸಮಾಜದ ಸಂಕೋಲೆಗಳಿಲ್ಲದ ಮುಕ್ತ ವಾತಾವರಣದಲ್ಲಿ ಜ್ಞಾನಾರ್ಜನೆಗೆ ತೊಡಗುವ ಅವಕಾಶ ಈ ರೂಪದಲ್ಲಿ ಸಿಕ್ಕಿದ್ದು, ಅಂಬೇಡ್ಕರ್ ಜೀವನದ ಮಹತ್ತರ ತಿರುವು. ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ವಾಂಸರ ಕೂಟದಲ್ಲಿ ಸದಾ ತಮ್ಮ ಜ್ಞಾನದ ಅರಿವನ್ನು ಹಿಗ್ಗಿಸಿಕೊಳ್ಳಲಾರಂಭಿಸಿದರು. ಅಲ್ಲಿ ಜಾನ್‌ಡಿವ್ಹೇ ಎಂಬ ಖ್ಯಾತ ಶಿಕ್ಷಣ ತಜ್ಞ ಹಾಗೂ ತತ್ವ ಶಾಸ್ತ್ರಜ್ಞ ಅವರಿಗೆ ಬೋಧನೆ ಮಾಡುತ್ತಿದ್ದರು. ಇನ್ನೊಬ್ಬ ಖ್ಯಾತ ಅರ್ಥಶಾಸ್ತ್ರಜ್ಞರಾದ ಎಡ್ವರ್ಡ ಸೆಲಿಂಗ್‌ಮನ್ ಕೂಡ ಅಂಬೇಡ್ಕರ್ ಮೇಲೆ ಅಗಾಧ ಪ್ರಭಾವ ಬೀರಿದರು. "ನನ್ನ ಕೃತಜ್ಞತೆಗಳು ಜೀವನದುದ್ದಕ್ಕೂ ಸೆಲ್ಲಿಂಗ್‌ಮನ್ನರಿಗೆ ಸಲ್ಲುತ್ತವೆ. ನನಗೆ ಮೊದಲು ಮಾನವ ಜೀವನದಲ್ಲಿ ಇರಬೇಕಾದ ಆವಶ್ಯಕತೆಗಳು, ಅವುಗಳನ್ನು ಪೂರೈಸಿಕೊಳ್ಳಲು ಮಾಡಬೇಕಾದ ಸೂತ್ರಗಳನ್ನು ಬೋಧಿಸಿದರು. ಇದರಿಂದ ಜನಸಾಮಾನ್ಯರ ಸಮಸ್ಯೆಗಳನ್ನು ಗ್ರಹಿಸುವಲ್ಲಿ ಅವರ ಪ್ರವಚನ ಸಹಕರಿಸಿದೆ"[5] ಎಂದು ಅಂಬೇಡ್ಕರ್ ಅವರನ್ನು ಸ್ಮರಿಸಿದ್ದಾರೆ. ಹಣಕಾಸು ತೊಂದರೆಯಲ್ಲಿಯೂ ಮಿತವ್ಯಯದೊಂದಿಗೆ ಅರ್ಥಶಾಸ್ತ್ರ ಹಾಗೂ ಸಮಾಜಶಾಸ್ತ್ರಗಳನ್ನು ಅಧ್ಯಯನಕ್ಕೆ ಆರಿಸಿಕೊಂಡ ಅಂಬೇಡ್ಕರ್ "ಪ್ರಾಚೀನ ಭಾರತದ ವ್ಯಾಪಾರೋದ್ಯಮ" ಎಂಬ ಪಾಂಡಿತ್ಯ ಪೂರ್ಣ ಪ್ರಬಂಧದೊಂದಿಗೆ ಎಂ.ಎ.ಪದವಿ ಪಡೆದರು. ಈ ಪದವಿಯಲ್ಲಿ ಅರ್ಥಶಾಸ್ತ್ರವನ್ನು ಮೂಲವಿಷಯವಾಗಿ ಪಡೆದು, ಸಮಾಜಶಾಸ್ತ್ರ, ರಾಜ್ಯ ಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ, ಮಾನವಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಅಂಬೇಡ್ಕರ್ ಗೋಲ್ಡನ್ ವೈಜರ್ ಎಂಬ ಮಾನವಶಾಸ್ತ್ರಜ್ಞರ ಸ್ಮರಣಾರ್ಥ ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣದಲ್ಲಿ 1916 ರಲ್ಲಿ ಮಂಡಿಸಿದ ಭಾರತದಲ್ಲಿ ಜಾತಿಗಳು (Castes in India) ಕುರಿತು ಪ್ರಬಂಧ ಮಂಡಿಸಿದರು. ಇದರಲ್ಲಿ ಚಾತುರ್ವರ್ಣಗಳ ಅಡಿಯಲ್ಲಿ ಬಹಿಷ್ಕೃತರಾದವರ ಪಾಲಿಗೆ ಖಾಯಂ ಆಗಿದ್ದ ಕಷ್ಟಕಾರ್ಪಣ್ಯಗಳನ್ನು ಮನೋಜ್ಞವಾಗಿ ಅಭಿವ್ಯಕ್ತಿಸಿ, ಜಗತ್ತಿನ ಇತರ ವಿದ್ವಾಂಸರನ್ನು ಭಾರತದತ್ತ ಮುಖ ಮಾಡಿ ಚಿಂತಿಸುವಂತೆ ಮಾಡಿದರು. ಇದು ಭಾರತೀಯ ಚರಿತ್ರೆಗೆ ಹೊಸ ಆಯಾಮವನ್ನೇ ಕೊಟ್ಟ ಕ್ರಾಂತಿಕಾರಕ ನೋಟವಾಗಿತ್ತು.

ಡಾಕ್ಟರೇಟ್ ಪದವಿ :

ಎಂ.ಎ.ಮುಗಿಸುವ ವೇಳೆಗೆ ಭಾರತದ ಹಣಕಾಸು ವ್ಯವಸ್ಥೆ ಕುರಿತು ಅಂಬೇಡ್ಕರ್ ಮಹಾಪ್ರಬಂಧ ರಚನೆಗೆ ಅಧ್ಯಯನ ನಿರತರಾಗಿದ್ದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ.ಗೆ ಆಯ್ಕೆ ಮಾಡಿಕೊಂಡ ವಿಷಯ "The National Dividend of India : A Historical and Analytical study in the provincial Decentralisation of Imperial Finance " ಎಂದಾಗಿತ್ತು. "ಭಾರತದ ರಾಷ್ಟ್ರೀಯ ಡಿವಿಡೆಂಡ್ : ಒಂದು ಐತಿಹಾಸಿಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ವಿಷಯದ ಬಗ್ಗೆ ಅಧ್ಯಯನ ಕೈಗೊಂಡ ಮಹಾಪ್ರಬಂಧವನ್ನು 1916ರ ಜೂನ್‌ನಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಇದನ್ನು ಒಪ್ಪಿಕೊಂಡು ವಿಶ್ವವಿದ್ಯಾಲಯ ಪಿಹೆಚ್.ಡಿ. ಪದವಿ ಪ್ರಧಾನ ಮಾಡಿತು. ಅಂಬೇಡ್ಕರ್ ಪಿಹೆಚ್.ಡಿ. ಪಡೆದು ಡಾ. ಅಂಬೇಡ್ಕರ್‌ರಾದರು. ಅಮೇರಿಕಾದಲ್ಲಿದ್ದಾಗ ಅಂಬೇಡ್ಕರ್‌ರನ್ನು ಗಾಢವಾಗಿ ತಟ್ಟಿದ ವಿಷಯಗಳೆರಡು: ಒಂದು ಅಮೇರಿಕಾದ ಕರಿಯ ನಿಗ್ರೋಗಳಿಗೆ ಸ್ವಾತಂತ್ರ್ಯ ತಂದು ಕೊಟ್ಟ ಸಂವಿಧಾನ ಹಾಗೂ ಅದರ 14ನೇ ತಿದ್ದುಪಡಿ-ಇನ್ನೊಂದು ನಿಗ್ರೋಜನಾಂಗದ ಉನ್ನತಿಗಾಗಿ ಶ್ರಮಿಸಿದ ಬುಕರ್ ಟಿ.ವಾಷಿಂಗ್‌ಟನ್‌ನ ಉಜ್ವಲ ಜೀವನ: ಇವೆರಡೂ-ಮೇಧಾವಿ ಅಂಬೇಡ್ಕರ್‌ರಲ್ಲಿ ಕ್ರಾಂತಿಕಾರಿ ಅಂಬೇಡ್ಕರ್‌ರಿಗೆ ಜನ್ಮ ಕೊಟ್ಟ ಸಂಗತಿಗಳು.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದ ನಂತರ ಅಂಬೇಡ್ಕರ್ ಅವರು ಅರ್ಥಶಾಸ್ತ್ರದ ಅಧ್ಯಯನವನ್ನು ಮುಂದುವರೆಸಲು 1916ರಲ್ಲಿ ಲಂಡನ್ ವಿಶ್ವವಿದ್ಯಾಲಯಕ್ಕೆ ಬಂದರು. ಅಲ್ಲಿ ಅವರು ಕಾನೂನು ವ್ಯಾಸಂಗಗಳಲ್ಲಿ ತೊಡಗಿದರು. ಆದರೆ ವಿದ್ಯಾರ್ಥಿ ವೇತನದ ಅವಧಿ ಮುಗಿದು ಹೋಗಿದ್ದರಿಂದ ಅವರು ಭಾರತಕ್ಕೆ ಹಿಂತಿರುಗಲೇ ಬೇಕಾಯಿತು. ಮುಂದೆ "The Problem of Rupee" ವಿಷಯದ ಮಂಡನೆಗೆ 1923 ರಲ್ಲಿ ಲಂಡನ್ ವಿಶ್ವವಿದ್ಯಾಲಯ ಅರ್ಥಶಾಸ್ತ್ರದಲ್ಲಿ ಡಿ.ಎಸ್ಸಿ. ಪದವಿಯನ್ನು ಪ್ರಧಾನ ಮಾಡಿತು.

ಬರೋಡದಲ್ಲಿ ಸೇವೆ :

ವಿದ್ಯಾರ್ಥಿ ವೇತನ ಪಡೆಯುವ ಮುನ್ನವೇ ಹಿಂತಿರುಗಿ ಬಂದ ನಂತರ ಬರೋಡಾ ಸರ್ಕಾರದಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಬೇಕೆಂಬ ಕರಾರಿಗೆ ಅಂಬೇಡ್ಕರ್ ಸಹಿ ಹಾಕಿದ್ದರು. ಇವರನ್ನು ಸ್ವಾಗತಿಸಬೇಕೆಂದು ಸ್ವತಃ ಮಹಾರಾಜರೇ ಆದೇಶ ನೀಡಿದ್ದರೂ, ಇವರು ಅಸ್ಪೃಶ್ಯರೆಂಬ ಒಂದೇ ಕಾರಣಕ್ಕೆ ಯಾರೂ ಬಂದಿರಲಿಲ್ಲ. ಜ್ಞಾನವು ಮೌಢ್ಯದೆದುರು ತಲೆ ಬಾಗಿಸಬೇಕಾದ ದಾರುಣಸ್ಥಿತಿ ಅದು. ಡಾ।ಅಂಬೇಡ್ಕರ್‌ರವರು ಮಿಲಿಟರಿ ಕಾರ್ಯದರ್ಶಿಯಾಗಿ ನೇಮಕಗೊಂಡು ಬರೋಡಕ್ಕೆ ಬಂದರು. ಇವರ ಆಗಮದ ಸುದ್ದಿ ಹಬ್ಬಿದ್ದರಿಂದ ಇವರಿಗೆ ತಂಗಲು ಎಲ್ಲೆಲ್ಲೂ ಸ್ಥಳ ದೊರೆಯಲಿಲ್ಲ. ಕಛೇರಿಯಲ್ಲಿ ಜವಾನರೂ ಸಹ ಅವರ ಮುಂದೆ ಸುಳಿಯುತ್ತಿರಲಿಲ್ಲ. ಕಡತಗಳನ್ನು ದೂರದಿಂದಲೇ ಅವರಿದ್ದೆಡೆಗೆ ಎಸೆಯುತ್ತಿದ್ದರು. ಕಛೇರಿಯಲ್ಲಿದ್ದ ಪಾತ್ರೆಯ ನೀರನ್ನು ಕುಡಿಯಲು ಅವರಿಗೆ ಅವಕಾಶ ಕೊಡುತ್ತಿರಲಿಲ್ಲ. ಅಂಬೇಡ್ಕರ್ ಗುಟ್ಟಾಗಿ ತಲೆ ಮರೆಸಿಕೊಂಡು ಪಾರ್ಸಿಯೊಬ್ಬನ ಮನೆಯಲ್ಲಿ ಉಳಿಯಬೇಕಾಯಿತು. ಅಂಬೇಡ್ಕರ್‌ರನ್ನು ಅರ್ಥಮಂತ್ರಿಯಾಗಿ ನೇಮಿಸಿಕೊಳ್ಳಬೇಕೆಂಬುದು ಮಹಾರಾಜರ ಆಸೆಯಾಗಿದ್ದರೂ, ಅದಕ್ಕೆ ಬೆಂಬಲ ಸಿಕ್ಕದೇ ಅಂಬೇಡ್ಕರ್ ಸೇನಾ ಕಾರ್ಯದರ್ಶಿ ಸ್ಥಾನದಲ್ಲಿ ಕೂರುವಂತಾಯಿತು. ಈ ಕಛೇರಿಯಲ್ಲಿ ಒಬ್ಬ ಯಕಶ್ಚಿತ್ ಸವರ್ಣೀಯ ಸಿಪಾಯಿಯೂ ಕೋಣೆಯ ಹೊರಗಿನಿಂದ ಫೈಲನ್ನು ಮೇಜಿನ ಮೇಲೆ ಎಸೆದು ಹೋಗುತ್ತಿದ್ದ ಘೋರ ಅವಮಾನವನ್ನು ಅಂಬೇಡ್ಕರ್ ಎದುರಿಸಬೇಕಾಯಿತು. ಅಲ್ಲಿ ಅವರಿಗೆ ಕುಡಿಯುವ ನೀರೂ ಸಿಕ್ಕುತ್ತಿರಲಿಲ್ಲ.

ಇದು ಇಲ್ಲಿಗೇ ನಿಲ್ಲಲೂ ಇಲ್ಲ. ಇವರ ವಾಸ್ತವ್ಯದ ಸುಳಿವು ಹಿಡಿದ ಪಾರ್ಸಿ ಕುಲಬಾಂಧವರು ಲಾಠಿ, ದೊಣ್ಣೆ ಹಿಡಿದು ಬಂದು ಇವರನ್ನು ಮುತ್ತಿಗೆ ಹಾಕಿದರು. ತಮ್ಮ ನಿಲಯ ಅಪವಿತ್ರವಾಯಿತು. ಬಿಟ್ಟು ತೊಲಗಬೇಕು ಇಲ್ಲದಿದ್ದರೆ ಬಡಿದು ಹಾಕುತ್ತೇವೆ ಎಂದು ಬೆದರಿಸಿದರು. ಇವರನ್ನು ಮನೆಯಿಂದಲೇ ಹೊರದಬ್ಬಿದರು. ಮಹಾರಾಜರಿಗೆ ಮನವಿ ಸಲ್ಲಿಸಿದರು. ಬರೋಡದಂಥ ರಾಜಧಾನಿಯಲ್ಲಿ ಎಲ್ಲಿಯೂ ಯಾರೂ ಅವರಿಗೆ ಸ್ಥಳ ಕೊಡದೇ ಅಟ್ಟಿದರು. ವಿಷಯ ದಿವಾನರಿಗೆ ತಿಳಿಯಿತು. ಆದರೆ ತಾವು ಅಸಹಾಯಕರೆಂದು ತಲೆ ಕೊಡವಿಬಿಟ್ಟರು. ದುಃಖ, ಸಿಟ್ಟು, ಅಪಮಾನಗಳಿಂದ ಹಸಿದ ದೇಹ, ದಣಿದ ಮನಸ್ಸಿನ ಅಂಬೇಡ್ಕರ್, ಈ ನಾಡ ಹೆಮ್ಮೆ ಎನಿಸಿದ ಅಂಬೇಡ್ಕರ್ ನಟ್ಟಿರುಳಲ್ಲಿ ಆಶ್ರಯಕ್ಕಾಗಿ ದಿಕ್ಕೆಟ್ಟು ಅಲೆದು ಕೊನೆಗೆ ಒಂಟಿಯಾಗಿ ಮರದ ಬುಡದಲ್ಲಿ ಕುಳಿತು ಕಣ್ಣೀರು ಹಾಕಿದರು. ಅದು ಅವರೊಬ್ಬರ ಕಣ್ಣೀರಾದರೆ, ಮನುಕುಲದ 'ಅನ್ಯಾಯಗಳ ವಿರುದ್ಧ ಸಮಸ್ತ ನೊಂದ ಹೃದಯಗಳ ವಿದ್ರಾವಕ ಕಂಬನಿಯಾಗಿತ್ತು. ಈ ನಿರಂತರ ಅವಮಾನ ಅವರ ಕಂಬನಿಯಾಗಿ ಉದುರಿದರೂ, ಅವರ ಹೃದಯ ಸಂಕಲ್ಪದ ವಜ್ರವಾಯಿತು.

ಹೊಸದೇ ಅಂಬೇಡ್ಕರ್ ರೂಪುಗೊಂಡ ಪರಿಯಿದು. ತೀವ್ರವಾದ ಮಾನಸಿಕ ನೋವಿನಿಂದ ಕೇವಲ ಒಂದೇ ತಿಂಗಳಲ್ಲಿ ಅವರು ನೌಕರಿ ಬಿಟ್ಟು ಮುಂಬಯಿಗೆ ಹಿಂತಿರುಗಿದರು.

"ಪ್ರಾದ್ಯಾಪಕನಾಗಿ ಸೇವೆ"

ಮುಂಬಯಿಯ ಸಿಡೆನ್ ಹ್ಯಾಂ ಕಾಲೇಜ್ ಆಫ್ ಕಾಮರ್ಸ್‌ಗೆ ಪ್ರಾಧ್ಯಾಪಕರಾಗಿ ಸೇರ್ಪಡೆಯಾದರು. 11-11-1918 ರಂದು ನಿರಂತರವಾದ ಅಧ್ಯಯನದಲ್ಲಿ ತೊಡಗಿದ್ದು, ಕಾರ್ಯ ರೂಪಕ್ಕೆ ತರಲು ಬಯಸಿದರು. 1920 ರಲ್ಲಿ ಈ ಕಾಲೇಜಿನ ಹುದ್ದೆಗೆ ರಾಜೀನಾಮೆ ನೀಡಿದರು. 1923 ರಲ್ಲಿ ಬ್ಯಾರಿಸ್ಟರ್ ಆಟ್ ಲಾ ಪದವಿ ಗಳಿಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ನಂತರದ ದಿನಗಳಲ್ಲಿ ಅಂಬೇಡ್ಕರ್ ವ್ಯಾಸಂಗ ಮಾಡಿದಷ್ಟು, ಅಭಿವ್ಯಕ್ತಿಸಿದಷ್ಟು, ಬೇರಾರೂ ಮಾಡಲಿಲ್ಲ. ಅರಿವಿನಿಂದ ಬಂದ ಜ್ಞಾನಸುಧೆಯನ್ನು ತಮ್ಮ ಸಂಪತ್ತಿನ ವೃದ್ಧಿಗಾಗಿ ಬಳಸಲಿಲ್ಲ. ಅದನ್ನು ಬಹಿಷ್ಕೃತರ ಬಾಳಿನ ಜ್ಯೋತಿಯಾಗಿ ಪರಿವರ್ತಿಸಲು ಅವರ ಹೃದಯ ಮಿಡಿಯತೊಡಗಿತು. ನಾನೊಬ್ಬ ಮಾತ್ರ ಸುಖಿಯಾಗಿರಬೇಕೆನ್ನವ ಕ್ಷಣಿಕ ವಾದಗಳಿಗೆ 1920 ರಲ್ಲೇ ತಿಲಾಂಜಲಿ ಹಾಡಿದರು. ಅಂಬೇಡ್ಕರ್ ವ್ಯಕ್ತಿತ್ವವನ್ನು ಡಾ.ಕೆ.ಎಸ್.ಭಗವಾನ್ ಕಂಡಂತೆ: "ಗಾಂಧೀಜಿ ಮೂಢನಂಬಿಕೆಯ (Faith) ಮನುಷ್ಯ ;ಅಂಬೇಡ್ಕರ್ ವಿಚಾರವಂತಿಕೆಯ ಮನುಷ್ಯ. ಅವರ ವೈಚಾರಿಕತೆ ಅಪಾರ ಓದಿನಿಂದ ಸರ್ವ ಜ್ಞಾನ ಶಾಖೆಗಳ ಅಧ್ಯಯನದಿಂದ ರೂಪಿತವಾದುದು. ಅಂಬೇಡ್ಕರ್ ಪಾಂಡಿತ್ಯದ ಜೊತೆ ಗಾಂಧೀಜಿಯ ಪಾಂಡಿತ್ಯವನ್ನು ಹೋಲಿಸಿದರೆ ಅದು ಅಂಬೇಡ್ಕರ್ ಅವರ ವಿದ್ವತ್ತಿನ 100ನೇ ಒಂದು ಭಾಗ ಕೂಡ ಇರಲಿಲ್ಲ ಎನಿಸುತ್ತದೆ.[6] ಇಂದಿನ ಚರಿತ್ರೆಗಳಲ್ಲಿ ಅಂಬೇಡ್ಕರ್ ಯಾರೆಂದು ಶೋದಿಸತೊಡಗಿದರೆ ಸಿಗುವ ಶಾಶ್ವತ ಅಭಿಪ್ರಾಯಗಳಿವು.

ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಹೋರಾಟ:

ಅಂಬೇಡ್ಕರ್ ತಮಗೆ, ತಮ್ಮ ಸಮಾಜದಲ್ಲೆ ಆಗುತ್ತಿರುವ ಅಸಹನೀಯ ಅನ್ಯಾಯದ ವಿರುದ್ಧ ವಿಧಾಯಕ ರೀತಿಯಲ್ಲಿ ಪ್ರತಿಭಟಿಸಬೇಕೆಂಬ, ತನ್ನ ಬಾಂಧವರಿಗೆ ಗೌರವ ಸ್ಥಾನವನ್ನು ದೊರಕಿಸಿ ಕೊಡಬೇಕೆಂಬ ಛಲ ಅವರಲ್ಲಿ ಬಲವಾಯಿತು. 1920 ರಲ್ಲಿ "ಮೂಕ ನಾಯಕ" ಎಂಬ ಪತ್ರಿಕೆಯ ಆರಂಭ ಅದರ ಮೂಲಕ ಅಸ್ಪೃಶ್ಯರ ಏಕತೆ ಹಾಗೂ ಸಾಮಾಜಿಕ ಸ್ಥಾನಮಾನಗಳಿಗಾಗಿ ಅವರು ಮಾಡಬೇಕಾದ ಪ್ರತಿಭಟನೆ, ಹೋರಾಟ ಮುಂತಾದವುಗಳನ್ನು ಕುರಿತು ಲೇಖನ ಬರೆಯತೊಡಗಿದರು. ದಲಿತರು ತಮ್ಮ ಉದ್ಧಾರಕ್ಕಾಗಿ ತಮ್ಮ ಕಾಲ ಮೇಲೆ ನಿಲ್ಲಬೇಕೆಂಬ ಅರಿವಿನ ಮೊದಲ ಹೆಜ್ಜೆಯಾಗಿತ್ತು. ಮೇಲು ವರ್ಗದ ಸಹಾನುಭೂತಿಪರ ಸುಧಾರಕರೂ ಕೂಡ ಈ ಸಮಾಜದ ಅಸಮತೆಯನ್ನು ಸಂಪೂರ್ಣವಾಗಿ ತೊಡೆದು ಹಾಕಲಾರರೆಂಬುದು ಅಂಬೇಡ್ಕರ್‌ರ ದೃಢ ನಂಬಿಕೆಯಾಗಿತ್ತು. ಅದಕ್ಕಾಗಿಯೇ "ಬಹಿಷ್ಕೃತ ಹಿತಕಾರಿಣಿ ಸಭೆ" ಸ್ಥಾಪಿಸಿದ ಅಂಬೇಡ್ಕರ್ "ಶಿಕ್ಷಣ-ಸಂಘಟನೆ-ಹೋರಾಟ"ದ ಮೂರು ಮಂತ್ರಗಳನ್ನು ಹಿಡಿದು ಕಾರ್ಯನಿರತರಾಗಿದ್ದರು. 1920ರ ಜುಲೈ ತಿಂಗಳಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ತೆರಳಿದರು. ತಮ್ಮ ನಿರಂತರವಾದ ಅಧ್ಯಯನದ ನಡುವೆಯೂ ಅಂಬೇಡ್ಕರ್ ತಮ್ಮ ಬಾಂಧವರ ಹಿತಚಿಂತನೆಯನ್ನು ಮರೆಯಲಿಲ್ಲ. ಭಾರತದಲ್ಲಿರುವ ದಲಿತರ ಹಿತರಕ್ಷಣೆಗಾಗಿ ಕ್ರಮ ಕೈಗೊಳ್ಳಬೇಕೆಂದು ಲಂಡನ್ನಿನಲ್ಲಿ ಭಾರತದ ವ್ಯವಹಾರಗಳ ಸಚಿವರಾಗಿದ್ದ ಲಾರ್ಡ್ ಮಾಂಟೆಗೋ ಅವರನ್ನು ಸಂಧಿಸಿ ವಿನಂತಿಸಿದರು. 1923 ರಲ್ಲಿ

ಎಂ.ಎಸ್.ಸಿ. ಡಿ.ಎಸ್.ಸಿ. ಹಾಗೂ ನ್ಯಾಯಶಾಸ್ತ್ರದಲ್ಲಿ ಬ್ಯಾರಿಸ್ಟರ್ ಪಡೆದು ಸರ್ವಸಜ್ಜಿತರಾಗಿ ಅಂಬೇಡ್ಕರ್ ಭಾರತಕ್ಕೆ ಮರಳಿದರು.

ಗಾಂಧಿ ಉದಯ : ಅಂಬೇಡ್ಕರ್ ಗುಡುಗು :

ಈ ವೇಳೆಗೆ ಭಾರತದ ರಾಜಕೀಯ ರಂಗದಲ್ಲಿ ಗಾಂಧೀ ಸೂರ್ಯನ ಉದಯವಾಗಿತ್ತು. ಅವರೂ ಸಾವರ್ಕರ್ ಅವರೂ ಕೂಡಿ ಅಲ್ಲಲ್ಲಿ ಸಭೆಗಳನ್ನು ನಡೆಸಿದರು. ಅಸ್ಪೃಶ್ಯತೆ ಹಿಂದೂ ಸಮಾಜಕ್ಕಂಟಿದ ಶಾಪ. ಅವರ ಏಳಿಗೆಗಾಗಿ ಪ್ರತಿಯೊಬ್ಬ ಹಿಂದೂವು ದುಡಿಯಬೇಕು. ನಮ್ಮವರೇ ಆದ ಅವರನ್ನು ಹೀನಾಯವಾಗಿ ಕಾಣುವುದು ಮಹಾಪಾಪ ಎಂಬುದಾಗಿ ಸಂಪ್ರದಾಯ ಶರಣರ ಮನಮುಟ್ಟುವಂತೆ ಬೋಧಿಸತೊಡಗಿದ್ದರು. - ಆದರೆ, ಅಂಬೇಡ್ಕರ್ ಗುಡುಗಿದರು. "ನಾವೂ ಎಲ್ಲರಂತೆ ಭಾರತೀಯರು, ಹಿಂದೂಗಳು, ನಮಗೆ ಬೇಕಾಗಿರುವುದು ಕರುಣೆಯಲ್ಲ, ದಾನವಲ್ಲ, ಎಲ್ಲರಂತೆ ಸಮಾನವಾಗಿ ಬದುಕುವ ಹಕ್ಕು, ಸ್ವಾತಂತ್ರ್ಯ. ಈ ನೆಲ, ಈ ಜಲ, ಈ ಗಾಳಿ, ಈ ಬೆಂಕಿ, ಈ ಬೆಳಕು, ಈ ದೇವರು, ಈ ಜ್ಞಾನ ಯಾರ ಸ್ವತ್ತೂ ಅಲ್ಲ. ಅದನ್ನು ಅನುಭವಿಸಲು ಯಾರ ಹಂಗೂ ಬೇಕಿಲ್ಲ. ನಾವು ಆತ್ಮಗೌರವವನ್ನು, ಸ್ವಪ್ರತಿಷ್ಠೆಯನ್ನು ದಿಟ್ಟ ನಿಲುವನ್ನು ರೂಢಿಸಿಕೊಳ್ಳಬೇಕು. ಸಾವಿರಾರು ವರ್ಷಗಳಿಂದ ಸವರ್ಣೀಯರ ಅಡಿಗೆ ಮುಡಿ ಚಾಚಿ ಕಳೆದುಕೊಂಡಿರುವ ಸ್ವಾಭಿಮಾನವನ್ನು, ಸ್ವಾತಂತ್ರ್ಯವನ್ನು ಮತ್ತೆ ಪಡೆಯಲು ಅಡೆತಡೆಗಳಿಗೆ ಎದೆಗೊಡದೆ ಹೋರಾಡಬೇಕು-ಸಂಯಮದಿಂದ. ಅಂಬೇಡ್ಕರ್‌ರ ಈ ಸ್ಫೂರ್ತಿದಾಯಕ ನುಡಿ ಆಗ ತಾನೇ ಎಚ್ಚರಾಗುತ್ತಿದ್ದ ಅಸ್ಪೃಶ್ಯರ ಮನವನ್ನು ತಟ್ಟಿತು-ಬಡಿದೆಚ್ಚರಿಸಿತು. ಸಮಾಜ ಸುಧಾರಕ ಎಸ್.ಕೆ. ಬೋಲೆಯವರು ದಲಿತರ ಹಿತ ರಕ್ಷಣೆಗಾಗಿ ಒಂದು ಮಸೂದೆಯನ್ನು ತಂದರು. "ಸಾರ್ವಜನಿಕ ಹಣದಿಂದ ನಿರ್ಮಾಣವಾದ ಕೆರೆ-ಕಟ್ಟೆ, ಭಾವಿ-ಛತ್ರಗಳನ್ನು ಬಳಸಲು ಅಸ್ಪೃಶ್ಯರಿಗೆ ಅವಕಾಶಕೊಡಬೇಕು. ಆಸ್ಪತ್ರೆಗಳು, ಕಛೇರಿಗಳು, ಶಾಲಾ ಕಾಲೇಜುಗಳು, ನ್ಯಾಯಾಲಯಗಳು ಮತ್ತು ದೇವಾಲಯಗಳಿಗೆ ಅವರಿಗೆ ಮುಕ್ತಪ್ರವೇಶ ದೊರೆಯಬೇಕು" ಎಂದು ಮುಂಬಯಿಯ ವಿಧಾನ ಪರಿಷತ್ತು ನಿರ್ಣಯ ಮಾಡಿತು. ಆದರೆ ಕಾಗದದ ನಿರ್ಣಯ ಕಾಗದದಲ್ಲೇ ಉಳಿಯಿತು. ಅದನ್ನು ಜಾರಿಗೆ ತರುವ ಮನಸ್ಸು ಮತ್ತು ಸಂಕಲ್ಪ, ಸಂಪ್ರದಾಯ ಜಡ ಸಮಾಜಕ್ಕೆ ಇರಲಿಲ್ಲ. ಒತ್ತಾಯದಿಂದ ಅದರಂತೆ ನಡಯುವ ಧೈರ್ಯ ಪರಂಪರೆಯಿಂದ ತುಳಿತಕ್ಕೊಳಗಾಗಿ ತಮ್ಮತನವನ್ನೇ ಕಳೆದುಕೊಂಡಿದ್ದ ದಲಿತರಿಗೂ ಇರಲಿಲ್ಲ. 1923ರಲ್ಲಿ ಸಾರ್ವಜನಿಕ ಪ್ರದೇಶಗಳಲ್ಲಿ ಅಸ್ಪೃಶ್ಯರಿಗೆ ಭೇದವೆಣಿಸ ಬಾರದೆಂದು ಸರ್ಕಾರ ಹೊರಡಿಸಿದ್ದ ಆದೇಶವನ್ನು 1926ರಲ್ಲಿ ಪುನರುಚ್ಚರಿಸಿ ಮರುಸೂಚನೆ ನೀಡಲಾಗಿತ್ತು. ಕೊಲಾಬಾ ಜಿಲ್ಲೆಯ ಚೌಡರ್ ಕೆರೆಯಬಳಿ ಈ ತತ್ವವನ್ನು ಪರೀಕ್ಷಿಸಲು ಅಂಬೇಡ್ಕರ್ ತೀರ್ಮಾನಿಸಿದರು.

ಬಹಿಷ್ಕೃತ ಹಿತಕಾರಣೀ ಸಭಾ :

ಹಿಂದೂಸಮಾಜ ಸುಧಾರಕರಲ್ಲಿ ದಲಿತರ ಬಗ್ಗೆ ಎಷ್ಟೇ ಅನುಕಂಪ, ಕಳಕಳಿ ಇದ್ದರೂ, ಅದರ ನಿಜವಾದ ಯಾತನೆಯನ್ನು ಅನುಭವಿಸಿದ ಅವರ ಹೃದಯದಲ್ಲಿ ಅದರ ಬಗ್ಗೆ ತೀಕ್ಷ್ಣವಾದ ಕಾವು, ಮೂಲಭೂತವಾದ ಪ್ರಚೋದನೆ ಇರುವುದಿಲ್ಲವೆಂಬುದು ಅಂಬೇಡ್ಕರ್‌ರ ನಂಬಿಕೆಯಾಗಿತ್ತು. ತಮ್ಮಿಂದಲೇ ತಾವು ಉದ್ಧಾರವಾಗಬೇಕು. ನಡೆಯಲು ಯಾರೋ ಕಾಲು ಕೊಟ್ಟರೆ ಸಾಲದು. ನಡೆಯುವ ಮನಸ್ಸು ತಮ್ಮಲ್ಲಿ ಮೂಡಬೇಕು ಎಂಬುದು ಅವರ ನಿಲುವು. ಈ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿ ಅವರು ಮುಂಬಯಿಯಲ್ಲಿ ಒಂದು ಸಭೆ ಕರೆದರು. ಅದರ ನಿರ್ಣಯದಂತೆ "ಬಹಿಷ್ಕೃತ ಹಿತಕಾರಣೀಸಭಾ" ಎಂಬ

ಸಂಘವನ್ನು ಸ್ಥಾಪಿಸಲಾಯಿತು. ಸರ್, ಚಿಮನ್‌ಲಾಲ್ ಸೆಟಲ್‌ವಾಡ ಅದರ ಅಧ್ಯಕ್ಷರು. ಅಂಬೇಡ್ಕರ್ ಕಾರ್ಯಸಮಿತಿ ಅಧ್ಯಕ್ಷರು. ಪರಾಂಜಪೆ, ನಾರಿಮನ್, ಬಿ.ಜಿ.ಖೇರ್ ಮುಂತಾದವರು ಅದರ ಸದಸ್ಯರು. ದಲಿತ ವರ್ಗದವರಲ್ಲಿ ಶಿಕ್ಷಣ ಮತ್ತು ಸಂಸ್ಕೃತಿಗಳನ್ನು ಪ್ರಚಾರ ಮಾಡುವುದು. ಅವರ ಕುಂದುಕೊರತೆಗಳನ್ನು ನಿವಾರಿಸುವಂತೆ, ಅವರ ಸ್ಥಿತಿ-ಗತಿಗಳನ್ನು ಸುಧಾರಿಸುವಂತೆ ಸರ್ಕಾರವನ್ನು ಒತ್ತಾಯಪಡಿಸುವುದು, ಅವರ ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಉತ್ತಮಗೊಳಿಸುವುದು ಈ ಸಂಘದ ಗುರಿಗಳಾಗಿದ್ದವು. ಅಂಬೇಡ್ಕರ್ ತಮ್ಮ ಜನರೊಡನೆ ಬೆರೆತರು, ಅವರ ಸುಖ-ದುಃಖಗಳಲ್ಲಿ ಪಾಲ್ಗೊಂಡರು, ಅವರಿಗಾಗುತ್ತಿರುವ ಅಮಾನುಷ ಅನ್ಯಾಯಗಳಿಗಾಗಿ ಕಣ್ಣೀರಿಟ್ಟರು. ಅವರ ಮನದ ಮಿಡಿತಗಳಿಗೆ ಮರುಧ್ವನಿಕೊಟ್ಟರು. ಹಾಗೆಯೇ ಅಂಬೇಡ್ಕರ್‌ರವರ ಕೀರ್ತಿ ಪ್ರತಿಷ್ಠೆಗಳು ಬೆಳೆದವು. ಮುಂಬಯಿ ಸರಕಾರ ವಿಧಾನಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಿತು. ಅವರ ಕಾರ್ಯಕ್ಷೇತ್ರ ವಿಸ್ತರಿಸಿತು. ಬಹಿಷ್ಕೃತ ಹಿತಕಾರಿಣಿ ಸಂಘದ ಆಶ್ರಯದಲ್ಲಿ ದಲಿತ ವಿದ್ಯಾರ್ಥಿ ನಿಲಯ ಒಂದನ್ನು ಸೊಲ್ಲಾಪೂರದಲ್ಲಿ ಸ್ಥಾಪಿಸಿದರು. ಸಭೆ-ಸಮ್ಮೇಳನಗಳಲ್ಲಿ ಭಾಗವಹಿಸಿ ಜನಜಾಗೃತಿ ಉಂಟು ಮಾಡತೊಡಗಿದರು. ಈ ಉದ್ದೇಶಕ್ಕಾಗಿಯೇ ಬಹಿಷ್ಕೃತ ಭಾರತ ಪತ್ರಿಕೆ ಆರಂಭಿಸಿದರು. ಅವರ ಬರಹಗಳೆಲ್ಲವೂ ಒಂದು ವೈಚಾರಿಕ ಪ್ರಜ್ಞೆ ಹಾಗೂ ನಿರ್ದಿಷ್ಟ ಮೌಲ್ಯಗಳ ಆಧಾರದ ನೆಲೆಗಟ್ಟಿನ ಮೇಲೆ ಬರತೊಡಗಿದವು.

"ನಿಮ್ನ ವರ್ಗಗಳ ಸಮಾವೇಶಗಳು" :

ಅಂಬೇಡ್ಕರ್‌ರವರ ಮೊದಲ ಹಂತದ ಹೋರಾಟದಲ್ಲಿ ಬಹು ಮುಖ್ಯವಾದ ಮೂರು ನಿಮ್ನ ವರ್ಗಗಳ ಸಮಾವೇಶವನ್ನು ಉದ್ದೇಶಿಸಿ ಪ್ರಬುದ್ಧ ಭಾಷಣ ಮಾಡಿದರು. 20.03.1920. ರಂದು ಮೊದಲ ಅಧಿವೇಶನ ಕೊಲ್ಹಾಪೂರ ಜಿಲ್ಲೆಯ ಮಂಗಾಂವ್‌ನಲ್ಲಿ, 31.05.1920 ರಂದು ಎರಡನೇ ಅಧಿವೇಶನ ನಾಗಪೂರದಲ್ಲಿ ನಡೆಯಿತು ಹಾಗೂ ಮೂರನೇ ಅಧಿವೇಶನವು ಕರ್ನಾಟಕದ ನಿಪ್ಪಾಣಿಯಲ್ಲಿ ಜರುಗಿತು. ಈ ಅಧಿವೇಶನಗಳ ಅಧ್ಯಕ್ಷತೆಯನ್ನು ಕೊಲ್ಹಾಪೂರ ಮಹಾರಾಜ ಸಾಹು ಛತ್ರಪತಿ ವಹಿಸಿದ್ದರು. ಅವರು ನಿಮ್ನ ವರ್ಗಗಳ ಜನರು "ತಮ್ಮ ನಾಯಕನನ್ನು ತಮ್ಮೊಳಗಿಂದಲೇ ಕಂಡುಕೊಂಡಿದ್ದಾರೆ" ಎಂದು ಅಭಿಮತಪಟ್ಟರು.[7] ಅಸ್ಪೃಶ್ಯತೆಯ ಕೊಳಕನ್ನು ತೆಗೆದು ಹಾಕಲು, ಅಸ್ಪೃಶ್ಯತೆಯ ವಿರುದ್ಧದ ಹೋರಾಟದ ದಾರಿಯನ್ನು ಬಹುಸಂಖ್ಯಾತ ಶೋಷಿತರಿಗೆ ತೋರಿಸಿಕೊಟ್ಟರು.

ಮಹಡ್ ಸತ್ಯಾಗ್ರಹ :

1927ರ ಮಾರ್ಚ 19 ಮತ್ತು 20 ರಂದು ಕೋಲಾಬಾ ಜಿಲ್ಲೆಯ ಮಹಾಡ್ ನಗರದಲ್ಲಿ ಸಂಪ್ರದಾಯ ವಿರೋಧಿ ಐತಿಹಾಸಿಕ ಸತ್ಯಾಗ್ರಹ ಹಮ್ಮಿಕೊಂಡರು. ಅಧ್ಯಕ್ಷತೆಯನ್ನು ಅಂಬೇಡ್ಕರ್‌ರವರೇ ವಹಿಸಿದ್ದರು. ಸುಮಾರು 10 ಸಾವಿರಕ್ಕಿಂತ ಹೆಚ್ಚು ಜನ ಅಸ್ಪೃಶ್ಯರು ಅಲ್ಲಿ ಸೇರಿದ್ದರು. ಸೇರಿದ ನಾಗರೀಕರನ್ನು ಕುರಿತು ಪ್ರಸ್ತಾಪಿಸಿದ ವಿಚಾರವೇನೆಂದರೆ: "ಅವರಿಗೆ ತಮ್ಮ ಕೆಟ್ಟ ಅಭ್ಯಾಸಗಳನ್ನು ಬಿಟ್ಟು ತುಂಬು ಮಾನವರಂತೆ ತಮ್ಮ ಹಕ್ಕುಗಳಿಗಾಗಿ ಹೋರಾಡುವಂತೆ ನಾನು ಕರೆ ಕೊಟ್ಟೆನು. ಅದಾದ ನಂತರ ಅಲ್ಲಿ ನೆರೆದಿದ್ದ ಸವರ್ಣ ಹಿಂದೂಗಳು ತಾವೂ ಅಸ್ಪೃಶ್ಯರ ಸ್ನೇಹಿತರೆಂದೂ, ಅವರು ತಮಗೆ ಕಾನೂನು ದತ್ತವಾಗಿ ದೊರೆತಿರುವ ಹಕ್ಕುಗಳಿಗಾಗಿ ಧೈರ್ಯವಾಗಿ ಹೋರಾಡಬೇಕೆಂದೂ ಕರೆ ಕೊಟ್ಟರು".[8] ಈ ಮಾತಿನ ಧಾಟಿ ಮತ್ತು ಅದರ ಗಾಂಭೀರ್ಯವನ್ನು ಇಂದಿನ ಪೀಳಿಗೆ ಹೆಚ್ಚಾಗಿ ಗ್ರಹಿಸಬೇಕಾದ ಅಗತ್ಯತೆ ಜಾಸ್ತಿಯಿದೆ.

ಅಂಬೇಡ್ಕರ್ ಭಾಷಣದಲ್ಲಿ ಮುಂದುವರೆದು ಹೇಳಿದರು: ಬೋಲೆಯವರ ಮಸೂದೆಯನ್ನು ಮಹಾಡ್ ಪೌರಸಮಿತಿ ವಿರೋಧಿಸುತ್ತಿದೆ. ಅದರ ಜಾರಿಗಾಗಿ ನಾವು ಒಮ್ಮತದಿಂದ ಪ್ರಾಣವನ್ನು ಪಣವಿಟ್ಟು ಹೋರಾಡಬೇಕು. ಈ ಹೋರಾಟಕ್ಕೆ ನಾಂದಿಯಾಗಿ ಈ ನಗರದ ಚೌಡರ್ ಕೆರೆಯ ನೀರನ್ನು ನಾವು ಕುಡಿಯಬೇಕು." ಅಂಬೇಡ್ಕರ್‌ರ ಹೃದಯದಿಂದ ಹರಿದು ಬಂದ ಭಾವ ಪ್ರವಾಹ ಸಭಿಕರ ಹೃದಯದಲ್ಲಿ ಸಂಗಮಿಸಿತು. ಅವರ ಧಮನಿ ಧಮನಿಗಳಲ್ಲಿ ಹೊಸ ನೆತ್ತರು ಹರಿಯಲಾರಂಭಿಸಿತು.

ಚೌಡರ್ ಕೆರೆಯ ಜಲಯಾತ್ರೆ:

ಮಾರ್ಚ 20, 1927 ರಂದು ಅಂಬೇಡ್ಕರ್ ನೇತೃತ್ವದಲ್ಲಿ ಜಲಯಾತ್ರೆ ಆರಂಭವಾಯಿತು. ಸಾವಿರಾರು ಶೋಷಿತರ ಮೆರವಣಿಗೆಯಲ್ಲಿ ನಡೆದು ಕೆರೆ ನೀರನ್ನು ಬೊಗಸೆಯಲ್ಲಿ ಎತ್ತಿ ಕುಡಿಯುವ ಮೂಲಕ ಹೋರಾಟದ ಹೊಸ ಅಧ್ಯಾಯವನ್ನೇ ಬರೆದರು ಅಸ್ಪೃಶ್ಯರು. ಅವರ ಮೈ ರೋಮಾಂಚನಗೊಂಡಿತು, ಹರ್ಷೋದ್ಗಾರವಾಯಿತು. ಅಮೃತಕ್ಕಿಂತ ರುಚಿಯಾಗಿತ್ತು ಆ ನೀರು. ಇದುವರೆಗೆ ತಮ್ಮನ್ನು ಬಂಧಿಸಿದ್ದ ಯಾವುದೋ ಕಟ್ಟು ಕಳೆದು ಮುಕ್ತರಾದಂತೆ ಹೊಸ ಹುಟ್ಟು ಪಡೆದವರಂತೆ ಹಿರಿಹಿರಿ ಹಿಗ್ಗಿದರು. ದಂಡೀ ಸಮುದ್ರ ತೀರದಲ್ಲಿ ಉಪ್ಪು ತಯಾರಿಸಿದ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಹೇಗೆ ರಾಜಕೀಯ ಸ್ವಾತಂತ್ರ್ಯದ ಸಂಕೇತವಾಗಿತ್ತೋ ಹಾಗೆ ಅಂಬೇಡ್ಕರ್ ಬೊಗಸೆಯಲ್ಲಿ ಹಿಡಿದ ಕೆರೆಯ ನೀರು ಈ ನಾಡಿನ ಸಾಮಾಜಿಕ ಸ್ವಾತಂತ್ರ್ಯದ ಸಂಕೇತವಾಗಿತ್ತು. ಸಭೆ ಮುಗಿದು ಹೊರಡಲಿದ್ದ ಚಳುವಳಿಗಾರರ ಮೇಲೆ ಸವರ್ಣಿಯರು ಹಲ್ಲೆ ನಡೆಸಿದರು. ದಾಂಧಲೆ ಮಾಡಿದರು. ಅಸ್ಪೃಶ್ಯರ ಆಕ್ರಂದನ ಮುಗಿಲು ಮಟ್ಟಿತು. ಆದರೆ ಅಂಬೇಡ್ಕರ್ ಅಂದು ಈ ಸನ್ನಿವೇಶವನ್ನು ನೋಡಿ ಧೃತಿಗೆಡಲಿಲ್ಲ. ಮುಂದೆ ಸಂಕುಚಿತ ಸವರ್ಣೀಯರ ಮನಸ್ಸು ಈ ಕೆರೆಯನ್ನು "ಶುದ್ಧಿಗೊಳಿಸಿದರೂ ಅಂಬೇಡ್ಕರ್‌ರ ಕೃತಿಯ ಮಹತ್ವ ತಗ್ಗುವುದು ಸಾಧ್ಯವಿರಲಿಲ್ಲ. ಈ ಘಟನೆಯ ಸುದ್ದಿ ಭಾರತದಾದ್ಯಂತ ಹಬ್ಬಿತು. "ಚೌಡಕರ್ ಕೆರೆ" ಸಾರ್ವಜನಿಕವಾದುದು ಎಂದು ಸಾರಿದ್ದ ನಿರ್ಣಯವನ್ನು ಮಹಾಡ್ ಪೌರಸಭೆ ವಾಪಸ್ಸು ತೆಗೆದುಕೊಂಡಿತು. ಆ ಕೆರೆಯನ್ನು ಶುದ್ಧೀಕರಿಸಲಾಯಿತು. 1000 ಗಡಿಗೆ ನೀರಿನ ಶುದ್ಧೀಶಾಸ್ತ್ರದಿಂದ ಅಂಬೇಡ್ಕರ್ ಉರಿದೆದ್ದರು. ಈ ಪ್ರಗತಿ ವಿರೋಧಿ ಕ್ರಮವನ್ನು ಪ್ರತಿಭಟಿಸಲು ಸತ್ಯಾಗ್ರಹ ಮಾಡಬೇಕೆಂದು ನಿರ್ಧರಿಸಲಾಯಿತು. ಅಷ್ಟೇ ಅಲ್ಲ ಈ ಕಾರ್ಯಕ್ಕೆ ಸರ್ಕಾರವೇನಾದರೂ ಅಡ್ಡ ಬಂದರೆ ಈ ಸಮಸ್ಯೆಯನ್ನು ವಿಶ್ವ ಸಂಸ್ಥೆಯ ಮುಂದೂ ತರಬೇಕಾಗುತ್ತದೆ. ಹಿಂದೂಗಳು ಕೊನೆಗೂ ತಮ್ಮ ಹಠವನ್ನೇ ಸಾಧಿಸ ಹೊರಟರೆ ಕೋಟ್ಯಂತರ ಮಂದಿ ಅಸ್ಪೃಶ್ಯರು ತಮ್ಮ ಗೌರವ ರಕ್ಷಣೆಗಾಗಿ ಅನ್ಯಮತವನ್ನು ಆಶ್ರಯಿಸಬೇಕಾಗುತ್ತದೆ ಎಂಬ ಉಗ್ರ ಎಚ್ಚರಿಕೆಯನ್ನು ಅಂಬೇಡ್ಕರ್ ಕೊಟ್ಟರು. ಕಾರ್ಮಿಕರಿಗಾಗಿ, ಭೂಹೀನರಿಗಾಗಿ ಶಾಸನಸಭೆಯ ಚೌಕಟ್ಟಿನಲ್ಲಿ ಹೋರಾಡುತ್ತಲೇ ಅಂಬೇಡ್ಕರ್‌ರ ಮನಸ್ಸು "ಕೆರೆ ಶುದ್ಧೀಕರಣ"ದ ಪ್ರಸಂಗದಿಂದ ಬೇರೊಂದು ಜಿಜ್ಞಾಸೆಯಲ್ಲಿ ತೊಡಗಿತ್ತು. ಧರ್ಮ ಮನುಷ್ಯನಿಗಾಗಿಯೋ ಅಥವಾ ಮನುಷ್ಯನಿರುವುದು ಧರ್ಮಕ್ಕಾಗಿಯೋ? ಐದನೇ ಒಂದು ಭಾಗದ ಜನರನ್ನು ಪ್ರಾಣಿಯೂ ಅಲ್ಲ, ಮನುಷ್ಯರೂ ಅಲ್ಲ ಎಂದು ಕಾಣುವ ಧರ್ಮ 90 ಭಾಗದ ಜನಕ್ಕೆ ಅಕ್ಷರ ಮತ್ತು ಜ್ಞಾನದ ಬಾಗಿಲು ಮುಚ್ಚಿದ ಧರ್ಮ-ಈ ಧರ್ಮದಲ್ಲಿ ದಲಿತರ ವಿಮೋಚನೆ ಸಾಧ್ಯವೇ ಎಂಬ ಐತಿಹಾಸಿಕ ತೊಳಲಾಟ ಆ ಮಹಾಮಾನವನ ಎದೆಯಲ್ಲಿ ಹೊಯ್ದಾಡುತ್ತಿತ್ತು.

"ದೇವಾಲಯ ಪ್ರವೇಶ ಚಳುವಳಿ":

ನಾಸಿಕ ಕಾಳರಾಮ ದೇವಸ್ಥಾನ ಪ್ರವೇಶ: ಅಂಬೇಡ್ಕರ್ ಪ್ರತಿಕ್ರಿಯೆ ಏನೆಂದರೆ "ನೇರ ಹೋರಾಟ ಇತಿಹಾಸದಲ್ಲಿ ಹೇಳಬಹುದಾದ ಮತ್ತೊಂದು ಮುಖ್ಯ ಘಟನೆ, ನಾಸಿಕದ ಕಾಳರಾಮನ ದೇವಾಲಯಕ್ಕೆ ಅಸ್ಪಶ್ಯರ ಪ್ರವೇಶಕ್ಕೆ ಸಂಬಂಧಿಸಿದ್ದು. ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಮಾಡಿದ ನೇರ ಹೋರಾಟದಲ್ಲಿ ಇದು ಒಂದು. ಹಿಂದೂ ಸಾಮಾಜಿಕ ವ್ಯವಸ್ಥೆಯ ಬುನಾದಿಗೆ ಸಿಡಿಮದ್ದನ್ನಿಟ್ಟು ಸಿಡಿಸಿ ಅದನ್ನು ನಾಶಗೊಳಿಸಲು ಯತ್ನಿಸಿದ ಎರಡು ನಿದರ್ಶನಗಳು ಈ ಹೋರಾಟದಲ್ಲಿ ಸೇರಿವೆ"[9] ಸ್ವತಃ ಅಸ್ಪೃಶ್ಯರೆಲ್ಲರೂ ಅನ್ಯರಂತೆ ನಾವು ಮನುಷ್ಯರೆನ್ನುವ ಭಾವನೆ ಬರುವಂತೆ ಮಾಡುವುದು ಅದರಿಂದ ಅವರ ಆತ್ಮಾಭಿಮಾನ ಹಾಗೂ ಸ್ವಾಭಿಮಾನಗಳನ್ನು ಧರಿಸುವಂತೆ ಪ್ರೇರೆಪಿಸುವ ಮೊದಲ ನಿದರ್ಶನ ಇಲ್ಲಿದೆ. ಆದರೂ ಅಂಬೇಡ್ಕರ್ ಮಾತ್ರ ಅಸ್ಪಶ್ಯರಿಗೆ ಸಾಂಕೇತಿಕವಾಗಿ ದೇವಾಲಯ ಪ್ರವೇಶ ದೊರಕಿದ ಕೂಡಲೇ ಸಮಾನತೆ ಬರುವುದಿಲ್ಲವೆಂದು ಸಾರಿದರು. ಅದರ ಬದಲು ಆರ್ಥಿಕ, ರಾಜಕೀಯ, ಶೈಕ್ಷಣಿಕ, ಕೈಗಾರಿಕೆ ಹಾಗೂ ಇತರ ರಂಗಗಳಲ್ಲೂ ಸವರ್ಣೀಯರಿಗೆ ಸಿಗುವಂತಹ ಸಮಾನತೆ ಸಿಕ್ಕಿದರೆ ಮಾತ್ರವೇ ದೇವಾಯ ಪ್ರವೇಶ ಕಾರ್ಯಕ್ರಮಕ್ಕೆ ಸಾರ್ವತ್ರಿಕ ಬೆಂಬಲ ಬರುವುದೆಂದು ಸಮರ್ಥಿಸಿಕೊಂಡರು. ಆದಕ್ಕಾಗಿ ಹಿಂದೂ ಸಮಾಜಕ್ಕೆ ಮಾನವೀಯ ಗುಣವಿಶೇಷಗಳನ್ನು ಧಾರಣ ಮಾಡಿಕೊಂಡು ಅವುಗಳನ್ನು ಗ್ರಹಿಸುವಂತೆ ಸೂಚಿಸಿದರು.

ಮನುಸ್ಮತಿ ದಹನ :

ಅಮಾನವೀಯ ಮತ್ತು ಜಡತ್ವದ ನಿಯಮಾವಳಿಗಳನ್ನು ಒಳಗೊಂಡಿರುವ ಮನುಸ್ಮೃತಿಯನ್ನು ಪ್ರಪ್ರಥಮ ಬಾರಿಗೆ" 1927 ಡಿಸೆಂಬರ್ 20ನೇ ತಾರೀಖು ಮಹಾಡ್ ನಗರದಲ್ಲಿ ಸುಟ್ಟು ಹಾಕಿದರು. ಚೌಡರ್ ಕೆರೆಯಿಂದ ನೀರು ತೆಗೆದುಕೊಳ್ಳಲು ನಡೆಸಿದ ಹೋರಾಟದ ಅಂಗವಾಗಿ ಈ ಸಮಾರಂಭವು ನಡೆಯಿತು. ಮನುಸ್ಮತಿಯನ್ನು ಸುಡುವ ಕೆಲಸವು ಬಹಿರಂಗವಾಗಿ ಅಸ್ಪಶ್ಯರ ಸಮ್ಮೇಳನದಲ್ಲಿ ಸಾರ್ವಜನಿಕರ ಎದುರು ನಡೆಯಿತು."[10] ಶೂದ್ರರೂ, ಅಸ್ಪಶ್ಯರೂ, ಉಚ್ಚ ವರ್ಗದವರ ಸೇವೆ ಮಾಡಿಕೊಂಡೇ ಜೀವನ ಸಾಗಿಸಬೇಕು. ಅವರಿಗೆ ಸಮಾನತೆ ಸಲ್ಲದು. ಸಂಸ್ಕೃತದ ಅಧ್ಯಯನ ಅವರಿಗೆ ನಿಷಿದ್ಧ. ಒಂದು ವೇಳೆ ಕಲಿತರೆ ಅವರ ಕಿವಿ-ಬಾಯಿಗಳಲ್ಲಿ ಕಾದ ಸೀಸವನ್ನು ಸುರಿಯಬೇಕು. ಉಚ್ಚ ವರ್ಣದವರ ಎಂಜಲನ್ನು ತಿಂದು, ಅವರು ದಯಪಾಲಿಸಿದ ಹಳೆಯ ಬಟ್ಟೆಗಳನ್ನು ಹೊದ್ದು, ಅವರು ಕೊಟ್ಟ ಕೇರಿ-ತೂರಿದ ಜೊಳ್ಳು ಧಾನ್ಯಗಳನ್ನು ಪಡೆದು ಇವರು ಬದುಕಬೇಕು ಎಂದು ಮುಂತಾಗಿ ಬೋಧಿಸಿದ ಸವರ್ಣ ಹಿಂದೂಗಳ ವೇದವೆನಿಸಿದ್ದ ಮನುಸ್ಮತಿ ಗ್ರಂಥವನ್ನು ಸಾಂಕೇತಿಕವಾಗಿ ಸುಡಲಾಯಿತು. ಮನುಸ್ಮತಿಯ ಉರಿದು ಎದ್ದ ಜ್ವಾಲೆಗಳು ಅಸ್ಪಶ್ಯರ ಹೃದಯದ ಕೋಟಿ ಕೋಟಿ ವೇದನೆಗಳ ಪ್ರತೀಕವಾಗಿದ್ದವು.

ಮನುಸ್ಮತಿಯನ್ನು ಸುಟ್ಟ ವಾರ್ತೆ ಭಾರತದಾದ್ಯಂತ ಗಾಳಿಗಿಂತಲೂ ವೇಗವಾಗಿ ಹಬ್ಬಿತು. ಭಾರತದ ಎಲ್ಲೆಡೆಗಳಲ್ಲಿ ಖಂಡನೆ ಮಂಡನೆಗಳ ಕಾಳಗವೇ ನಡೆಯಿತು. ಕಾಲಕ್ಕೆ ತಕ್ಕಂತೆ ಬದಲಾಗದೇ ಈ ಮನುಧರ್ಮಶಾಸ್ತ್ರದ ಬೋಧನೆಗಳನ್ನು ಕಟ್ಟನಿಟ್ಟಾಗಿ ಆಚರಿಸಿದ್ದೇ ನಮ್ಮ ಪತನಕ್ಕೆ ಮೂಲಕಾರಣ. ಇದರಿಂದಾಗಿ ಸಾವಿರಾರು ವರ್ಷಗಳಿಂದ ನಾವು ಪಡುತ್ತಿರುವ ಅಮಾನುಷ ಯಾತನೆಯ ಅಭಿವ್ಯಕ್ತಿಯ ಸಂಕೇತ-ಈ ದಹನಕ್ರಿಯೆ ಎಂದು ಅಂಬೇಡ್ಕರ್ ತೀಕ್ಷ್ಣವಾಗಿ ನುಡಿದರು. ಹಾಗೆಯೇ ಸಾಮಾಜಿಕ ಪರಿವರ್ತನೆಯನ್ನು ಹಿಂದೂವಾದಿಗಳು ಹೇಗೆ ಬದಲಿಸಬಲ್ಲರು ಎನ್ನುವುದನ್ನು ಅಂಬೇಡ್ಕರ್ ಹೀಗೆ ಗುರುತಿಸಿದ್ದಾರೆ. "ತಮ್ಮ

ಧರ್ಮವನ್ನು ರಕ್ಷಿಸಿ ಕೊಡುತ್ತೇವೆ ಎಂದುಕೊಂಡು ಆದನ್ನು ಒಂದು ವ್ಯಾಪಾರಿ ವಸ್ತುವನ್ನಾಗಿ ಮಾಡಿರುವ ಅವರು ಒಂದು ನೀಚ ಗುಂಪೆಂದು ನಾನು ಚೆನ್ನಾಗಿ ಬಲ್ಲೆ. ಪ್ರಪಂಚದ ಯಾವುದೇ ಗುಂಪಿಗಿಂತ ಅವರು ಹೆಚ್ಚು ಸ್ವಾರ್ಥಿಗಳಾಗಿದ್ದಾರೆ. ತಮ್ಮ ಜಾತಿಯ ಪಟ್ಟಭದ್ರ ಹಿತಾಸಕ್ತಿಗಳನ್ನು ಬೆಂಬಲಿಸಲು ತಮ್ಮ ಬುದ್ಧಿಯನ್ನು ಭ್ರಷ್ಟಗೊಳಿಸುತ್ತಿದ್ದಾರೆ. ಯಾವುದೇ ವ್ಯಕ್ತಿ ಹಿಂದೂ ಧರ್ಮಗ್ರಂಥಗಳ ವಿರುದ್ಧ ಧೈರ್ಯದಿಂದ ದನಿಯೆತ್ತಿದರೆ ಸಂಪ್ರದಾಯ ಶರಣರು ಅವನ ಮೇಲೆ ಹುಚ್ಚು ನಾಯಿಗಳ ಹಾಗೆ ಬೀಳುತ್ತಾರೆ"[11] ಹೀಗೆ ಅಂಬೇಡ್ಕರ್‌ರವರು ಹಿಂದೂ ಸಮಾಜದಲ್ಲಿ ಜಡ್ಡುಗಟ್ಟಿಕೊಂಡು ಬಂದಿರುವ ಅಸಮಾನತೆಯನ್ನು ಅದನ್ನು ಪೋಷಿಸುತ್ತಿರುವ ಧರ್ಮಗ್ರಂಥಗಳನ್ನು ಕಟುವಾಗಿ ವಿಮರ್ಶಿಸುತ್ತಿದ್ದರು. "ಐತಿಹಾಸಿಕ ಸತ್ಯದ ಅನ್ವೇಷಣೆಯಲ್ಲಿ, ಹಿಂದೂ ಧರ್ಮ ಗ್ರಂಥಗಳನ್ನು ಬಹಿರಂಗಪಡಿಸುವುದರ ಮೂಲಕ ಅವುಗಳಲ್ಲಿ ಅಡಕವಾಗಿರುವ ಸಿದ್ಧಾಂತಗಳೇ ಅವರ ದೇಶ ಮತ್ತು ಸಮಾಜದ ಅವನತಿ ಮತ್ತು ಪತನಕ್ಕೆ ಕಾರಣವೆಂದು ಹಿಂದೂಗಳಿಗೆ ಅರಿವುಂಟು ಮಾಡಲು ನಾನು ಡಾ.ಜಾನ್ಸನ್‌ನ ಮಾರ್ಗವನ್ನೇ ಅನುಸರಿಸುತ್ತೇನೆ."[12] ಎಂದು ಡಾ। ಅಂಬೇಡ್ಕರ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಚೌಡರ್ ಕೆರೆಯ ತೀರ್ಪು: ಮುಂಬಯಿ ನ್ಯಾಯಾಲಯ ಅಸ್ಪಶ್ಯರ ಪರವಾಗಿ ತೀರ್ಪುಕೊಟ್ಟಿತು. ಸವರ್ಣೀಯರು ಈ ಕೆರೆ ಖಾಸಗಿ ಆಸ್ತಿ ಎಂದು ಅಸ್ಪಶ್ಯರಿಗೆ ಹಕ್ಕಿಲ್ಲವೆಂದು ದಾವೆ ಹೂಡಿದ್ದರು.- ನ್ಯಾಯಾಲಯ ತೀರ್ಪು ಸಮತಾ ತತ್ವಕ್ಕೆ ಲಭಿಸಿದ ಜಯವಾಗಿತ್ತು. ಅಂಬೇಡ್ಕರ್ ಹೋರಾಟದ ಹಾದಿಯಲ್ಲಿ 'ಚೌಡರ್ ಕೆರೆ' ನೀರು ಸೇವನೆ ಮತ್ತು ನಾಸಿಕ್‌ನ "ಕಾಳಾರಾಮ ದೇವಾಲಯ" ಪ್ರವೇಶ ಮೈಲಿಗಲ್ಲುಗಳು 1927ರಲ್ಲಿ ಮಹಾಡ್ ಚಳುವಳಿಯ ಸಮ್ಮೇಳನದಲ್ಲಿ "ಮನುಸ್ಮೃತಿ" ಯನ್ನು ಸಾರ್ವಜನಿಕವಾಗಿ ಸುಡಬೇಕೆನ್ನುವ ನಿರ್ಣಯ ತೆಗೆದುಕೊಂಡಿದ್ದು, ಅಂಬೇಡ್ಕರ್‌ರವರಿಗೆ ಭಾರತದ ವರ್ಣ-ವರ್ಗದ ಬಗೆಗಿದ್ದ ಸಿಟ್ಟನ್ನು ಸೂಚಿಸುತ್ತದೆ.

ಅಂಬೇಡ್ಕರ್‌ರವರ ಬಹುತೇಕ ಕಾರ್ಯಗಳು ವಿವಾದಗ್ರಸ್ತವಾದವು. ಶತಮಾನಗಳಿಂದ ಮೂಕರಾಗಿದ್ದ ಜನತೆಗೆ ಮೊಟ್ಟ ಮೊದಲು ಬಾಯಿ ಬಂದಾಗ ಅದರ ತೊದಲು ನುಡಿಯೂ ವಿಪ್ಲವಕಾರಿ ಎನಿಸುವುದು ಸಹಜ. 1928ರಲ್ಲಿ ಭಾರತೀಯರ ರಾಜಕೀಯ ಸ್ಥಿತಿಗತಿಗಳ ಅಧ್ಯಯನಕ್ಕೆ ಬಂದ ಸೈಮನ್‌ಆಯೋಗವನ್ನು ಕಾಂಗ್ರೆಸ್ ಆದಿಯಾಗಿ ಎಲ್ಲರೂ ಬಹಿಷ್ಕರಿಸಿದ್ದಾಗಲೂ ಅಂಬೇಡ್ಕರ್ ಅಸ್ಪಶ್ಯರಿಗಾಗಿ ರಾಜ್ಯಾಂಗಬದ್ಧ ಹಕ್ಕುಗಳನ್ನು ಕೇಳಲು ಆಯೋಗದ ಮುಂದೆ ಹೋಗಲೇಬೇಕಾಯಿತು. ಇದರಿಂದ ಅಂಬೇಡ್ಕರ್ ದೇಶದ್ರೋಹಿ ಎಂದು ಕರೆಸಿಕೊಳ್ಳಬೇಕಾದ ಪ್ರಸಂಗವೂ ಬಂದಿತು. ಆದರೆ ಬ್ರಿಟಿಷ್ ಆಳ್ವಿಕೆಯ ಬಗ್ಗೆ ಅವರು ಮಂಡಿಸಿದ ಪ್ರತಿಭಾಪೂರ್ಣ ಪ್ರಬಂಧಗಳಲೆಲ್ಲ ಅವರ ಉಜ್ವಲ ದೇಶಪ್ರೇಮ ನಿಚ್ಚಳವಾಗಿ ಹೊಳೆಯುತ್ತದೆ. "ಮೂಕ ನಾಯಕ" ಮತ್ತು "ಬಹಿಷ್ಕೃತ ಭಾರತ" "ಜನಕ" ಮತ್ತು "ಪ್ರಬುದ್ಧ ಭಾರತ" ಎಂಬ ಪತ್ರಿಕೆಗಳ ಪ್ರಕಟನೆಯಿಂದ ವತನ್‌ದಾರ್, ಮಹಾರ್, ಮಂಡಲ್, ಬಹಿಷ್ಕೃತ ಹಿತಕಾರಣೀ ಸಭಾ, ಸಮಾಜ ಸಮತಾ ಮಂಡಲ, ಸ್ವತಂತ್ರ ಕಾರ್ಮಿಕರ ಸಂಘ, ನಿಮ್ನ ವರ್ಗದವರ ಫೆಡರೇಷನ್, ಭಾರತ ರಿಪಬ್ಲಿಕ್ ಪಾರ್ಟಿ, ಪೀಪಲ್ಸ ಎಜುಕೇಷನ್ ಸೊಸೈಟಿ ಇತ್ಯಾದಿ ಸಾಮಾಜಿಕ, ರಾಜಕೀಯ ಸಂಘಗಳ ಸ್ಥಾಪನೆಯಿಂದಲೂ ರಾಜಕೀಯ ಎಚ್ಚರಿಕೆಯನ್ನು ಅಂಬೇಡ್ಕರ್‌ರವರು ವ್ಯಕ್ತಪಡಿಸಿದರು.

ದುಂಡುಮೇಜು ಪರಿಷತ್ತಿನಲ್ಲಿ:

1930 ಅಂಬೇಡ್ಕರ್ ನಿಮ್ನ ವರ್ಗಗಳ ಪ್ರತಿನಿಧಿಯಾಗಿ ದುಂಡುಮೇಜಿನ ಪರಿಷತ್ತಿಗೆ ಆಹ್ವಾನಿತರಾಗಿ ಲಂಡನ್ನಿಗೆ ಹೋದ ಕಾಲ. ಅವರ ಪ್ರಖರ ಪ್ರತಿಪಾದನೆಯಿಂದಾಗಿ ಬ್ರಿಟಿಷರಷ್ಟೇ ಅಲ್ಲ. ದೇಶೀಯ ನಾಯಕರು ಅಸ್ಪೃಶ್ಯರ ಸ್ಥಿತಿ-ಗತಿಗಳ ಬಗ್ಗೆ ಕಣ್ಣು ತೆರೆಯುವಂತಾಯಿತು. ಅಂಬೇಡ್ಕರ್ ದುಂಡು ಮೇಜಿನ ಪರಿಷತ್ ವ್ಯಕ್ತಪಡಿಸಿದ ಅಭಿಪ್ರಾಯ: "ಮಾನ್ಯ ಚೇರಮನ್, ಈ ದುಂಡು ಮೇಜಿನ ಪರಿಷತ್ತಿನಲ್ಲಿ ನಾನು ಮತ್ತು ರಾವ್ ಬಹದ್ದೂರ್ ಶ್ರೀನಿವಾಸ್‌ರವರು ತುಳಿತಕ್ಕೊಳಗಾದವರ ಬಗ್ಗೆ ಮಾತನಾಡುವುದು ಮತ್ತು ಪ್ರತಿನಿಧಿಸುವುದು ಗೌರವಾನ್ವಿತವಾದುವೆಂದು ಭಾವಿಸುತ್ತೇವೆ. ನಾವು ಪ್ರತಿನಿಧಿಸುತ್ತಿರುವ ಜಗತ್ತು ಭಾರತದ 1/5 ಜನಸಂಖ್ಯೆಯಷ್ಟು ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ನಾವು ಪ್ರತಿನಿಧಿಸುತ್ತಿರುವ ಶೋಷಿತವರ್ಗ ಮಹಮದೀಯರಿಗಿಂತ ಭಿನ್ನವೂ, ಹಿಂದೂಗಳಲ್ಲಿ ಸೇರಿದರೂ ಅವರೊಂದಿಗಿರದಂತಾಗಿದೆ. ನಾವು ಪ್ರತಿನಿಧಿಸುತ್ತಿರುವ ಸಮುದಾಯ ಭಾರತದಲ್ಲಿ ಅತ್ಯಂತ ಕೆಳಸ್ತರದ ಮತ್ತು ಗುಲಾಮಿಸ್ಥಿತಿಗಳನ್ನು ಹೊಂದಿದೆ. ನಾನು ಮಾಡಬೇಕೆಂದಿರುವ ಸಮುದಾಯದವರು ಭಾರತದಲ್ಲಿ ಯಾರನ್ನು ಮುಟ್ಟಲಾಗದ ಸ್ಥಿತಿಯಲ್ಲಿದ್ದಾರೆ....ಎಲ್ಲಕ್ಕಿಂತ ಮಿಗಿಲಾಗಿ ಅನೇಕ ಅವಕಾಶಗಳಿಂದ ವಂಚಿತರಾಗಿದ್ದಾರೆ. ಶೋಷಿತ ಜನಾಂಗವಾದ ನಾವು ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಮತ್ತು ಬಂದ ನಂತರದ ದಿನಗಳಿಗೆ ಹೋಲಿಸಿದರೆ ಅಷ್ಟೇನೂ ಪ್ರಗತಿ ಹೊಂದಿಲ್ಲ. ಬ್ರಿಟಿಷರು ಭಾರತಕ್ಕೆ ಬಂದಾಗಿನಿಂದಲೂ, "ಅಸ್ಪೃಶ್ಯತೆ ನನ್ನ ಜನಾಂಗವನ್ನು ನಿಕೃಷ್ಟ ಸ್ಥಿತಿಯಲ್ಲಿಟ್ಟಿತ್ತು, ಇದನ್ನು ಹೋಗಲಾಡಿಸಲು ಬ್ರಿಟಿಷರು ಏನು ಮಾಡಿದರು? ಬ್ರಿಟಿಷರು ಭಾರತಕ್ಕೆ ಬರುವ ಮೊದಲು ನಾವು ಅಸ್ಪೃಶ್ಯರು ದೇವಾಲಯಗಳಿಗೆ ಪ್ರವೇಶಿಸುವಂತಿರಲಿಲ್ಲ. ಭಾರತಕ್ಕೆ ಬರುವ ಮೊದಲು ನನ್ನ ಸಮುದಾಯಕ್ಕೆ ಪೋಲೀಸ್ ಪಡೆಯಲ್ಲಿ ಸೇರುವ ಅವಕಾಶವಿರಲಿಲ್ಲ. ಈಗಲೂ ಬ್ರಿಟಿಷ್ ಸರ್ಕಾರ, ಅವಕಾಶವನ್ನು ನೀಡಿದೆಯೇ? ನಾವು ಬ್ರಿಟಿಷರನ್ನು ದೂಷಿಸುತ್ತಿಲ್ಲ, ನಮ್ಮನ್ನು ಕಾಡುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಷ್ಟೆ. ಶಕ್ತಿ ಮೀರಿ ಯತ್ನಿಸುತ್ತಿದ್ದೇವೆ.

ಸರ್, ನಾನು ಇಲ್ಲಿಯವರೆಗೆ "ಡೊಮಿಯನ್ ಸ್ಟೇಟಸ್" ಬಗ್ಗೆ ಪ್ರಸ್ತಾಪಿಸದಿದ್ದರೂ, ನನ್ನ ಅಂತಿಮ ಮಾತುಗಳನ್ನು ಸ್ಪಷ್ಟತೆಗೆ ತಿರುಗಿಸುತ್ತಿದ್ದೇನೆ. ಶೋಷಿತ ವರ್ಗಕ್ಕೆ ಪ್ರತ್ಯೇಕ ಮತದಾನದ ಹಕ್ಕು ಮತ್ತು ಅಧಿಕಾರದಲ್ಲಿ ಪಾಲು ಸಿಗಬೇಕೆಂಬ ಸಾರಾಂಶದ ಮಾತುಗಳನ್ನು ಹೇಳಬಯಸುತ್ತೇನೆ" ಅಂಬೇಡ್ಕರ್‌ರ ನಿರ್ಭೀತ ನಿಲುವು ಹಾಗೂ ದಿಟ್ಟ ದೃಷ್ಟಿಕೋನ ಇಡೀ ಪರಿಷತ್ತಿನ ಮೇಲೆ ಮೋಡಿ ಮಾಡಿತು. ಅವರ ನಿರ್ದಾಕ್ಷಿಣ್ಯ ಮಾತುಗಳು ಹಲವು ಮೂಲೆಗಳಿಂದ ಪ್ರಶಂಸೆಯನ್ನು ಹೊತ್ತು ತಂದವು. ಅಂಬೇಡ್ಕರ್ ಅಭಿಪ್ರಾಯ ಒಂದು ರೀತಿಯಲ್ಲಿ ಹಿಂದೂ ಮಹಾಸಭಾ ನಾಯಕರಿಗೂ, ಇನ್ನೊಂದು ರೀತಿಯಲ್ಲಿ ಬ್ರಿಟಿಷರಿಗೂ ಹಿಡಿಸಿತು. ಪರಿಷತ್ತಿನ ವರದಿ ಮಾಡಿದ "ದ ಇಂಡಿಯನ್ ಡೇಲಿ ಮೇಲ್" ಪತ್ರಿಕೆಯು ಅಂಬೇಡ್ಕರ್‌ರದು ಅಮೋಘ ಭಾಷಣ ಎಂದು ಬಣ್ಣಿಸಿತು.[13]

ಗಾಂಧೀ-ಅಂಬೇಡ್ಕರ್ : "ಪೂನಾ ಒಪ್ಪಂದ":

1932ರ ಎರಡನೇ ದುಂಡು ಮೇಜಿನ ಪರಿಷತ್ತಿಗೂ ಅಂಬೇಡ್ಕರರಿಗೆ ಆಹ್ವಾನ ಬಂತು. ಅಲ್ಲಿ ಮೊದಲ ಬಾರಿ ಭಾರತದ ಇಬ್ಬರು ಮಹಾಪುರುಷರ ಐತಿಹಾಸಿಕ ತಾಕಲಾಟ ಆರಂಭವಾಯಿತು. ಒಂದು ಕಡೆ ಮಹಾತ್ಮಾ ಗಾಂಧಿ ಇನ್ನೊಂದು ಕಡೆ ಅಂಬೇಡ್ಕರ್. ನಿಮ್ನ ವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೇಳಿದ ಅಂಬೇಡ್ಕರ್ ಒತ್ತಾಯ, ಗಾಂಧೀಜಿ ಪಾಲಿಗೆ ಭಾರತೀಯ ಸಮಾಜ ಒಡೆಯುವಂತೆ ಕಂಡಿತು.

ದಲಿತರಿಗೆ ಪ್ರತ್ಯೇಕ ಮತಕ್ಷೇತ್ರವಿರಬೇಕೆಂಬ ವಿಷಯದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್‌ರವರಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿ, ಗಾಂಧೀಜಿ 1932 ರ ಸೆಪ್ಟೆಂಬರನಲ್ಲಿ ಆಮರಣ ಉಪವಾಸ ಕೈಗೊಂಡರು. ಅಂಬೇಡ್ಕರ್ ಮೇಲೆ ಭಾರಿ ದೊಡ್ಡ ಭಾರ ಬಿದ್ದಂತಾಯಿತು. ಕೊನೆಗೆ ಪರಿಸ್ಥಿತಿಗೆ ಮಣಿದ ಅಂಬೇಡ್ಕರ್ ಮೀಸಲಾತಿ ನೀತಿಯ ಒಡಂಬಡಿಕೆ ಮಾಡಿಕೊಂಡಿದ್ದು, "ಪೂನಾ ಒಪ್ಪಂದ" ವೆಂದು ಪ್ರಖ್ಯಾತವಾಯಿತು. "ಎರಡು ವಿಭಿನ್ನ ಆಯ್ಕೆಗಳಲ್ಲಿ ಒಂದನ್ನು ಆರಿಸಬೇಕಿತ್ತು. ಒಂದು ಕಡೆ ಸಾಮಾನ್ಯ ಮನುಷ್ಯನಾಗಿ ಕರ್ತವ್ಯ ; ಇನ್ನೊಂದು ಕಡೆ ಅಸ್ಪೃಶ್ಯರಿಗಾಗಿ ಪ್ರಧಾನ ಮಂತ್ರಿಯವರು ಕೊಟ್ಟಿರುವ ರಾಜಕೀಯ ಹಕ್ಕುಗಳನ್ನು ಕಾಪಾಡಬೇಕಾಗಿರುವ ಸಮಸ್ಯೆ. ಕೊನೆಗೆ, ಮನುಷ್ಯತ್ವದ ಕರೆಗೆ ಓಗೊಟ್ಟು ಗಾಂಧೀಜಿಯವರ ಜೀವನವನ್ನು ರಕ್ಷಿಸಲೆಂದು ಸೂಚಿಸಿದೆ"[14] ಈ ಒಪ್ಪಂದವನ್ನು "ಪೂನಾ ಒಪ್ಪಂದ" ವೆಂದು ಕರೆದರು. ಕೊನೆಗೂ ಅಂಬೇಡ್ಕರ್ ಭಾರತೀಯ ಮಾನವರಲ್ಲಿ ಮುಂದಿನ ದಿನಗಳಲ್ಲಾದರೂ ಸೌಜನ್ಯ ಸ್ವರೂಪದ ಮಾನವೀಯ ಕಳಕಳಿ ಮೈಗೂಡಬಹುದೆಂದು ತಮ್ಮ ನಿಲುವನ್ನು ಸಡಿಲಿಸಿದರು. ಹಿಂದೂ ಜನರ ಪರವಾಗಿ ಗಾಂಧೀಜಿ ಅಂಬೇಡ್ಕರ್ ನಿಮ್ನ ವರ್ಗಗಳ ಪರವಾಗಿ "ಪೂನಾ ಒಪ್ಪಂದ" ಕ್ಕೆ ಸಮ್ಮತಿಸಿದರು. 24.09.1932 ರಂದು ಒಪ್ಪಂದದ ಕರಾರಿಗೆ ಸಹಿ ಹಾಕಿದರು. ಒಪ್ಪಂದದಲ್ಲಿ ಸರಳ ಮೀಸಲು ಪದ್ಧತಿ ಮೂಲಕ ನಿಮ್ನ ವರ್ಗಗಳ ಪ್ರಾತಿನಿಧ್ಯ ಕಾಪಾಡುವ ನಿರ್ಣಯಕ್ಕೆ ಬಂದರು.

ಆದರೂ ಇಲ್ಲಿ ಇಬ್ಬರೂ ಗೆದ್ದಂತಾಯಿತು. ಗಾಂಧೀಜಿ ಉಪವಾಸದಿಂದ ಸವರ್ಣೀಯ ಸಮಾಜ ಅಸ್ಪೃಶ್ಯರತ್ತ ಕಣ್ಣು ಬಿಟ್ಟು ಉದಾರಭಾವ ತಳೆಯುವಂತಾದರೆ, ಅಂಬೇಡ್ಕರ್ ನೀತಿಯಿಂದ ಅಸ್ಪೃಶ್ಯ ಸಮಾಜ ಸ್ವಾಭಿಮಾನದಿಂದ ಎದ್ದು ನಿಲ್ಲುವಂತಾಯಿತು. ಆದರೆ ಸ್ವಲ್ಪ ಕಾಲದಲ್ಲೇ ಸವರ್ಣೀಯ ನಾಯಕರು ಪೂನಾ ಒಪ್ಪಂದದಿಂದ ಹಿಂತೆಗೆಯುತ್ತಿದ್ದುದನ್ನು ಕಂಡ ಅಂಬೇಡ್ಕರ್ ಖಿನ್ನರಾದರು. "ಮೀಸಲಾತಿ ಸಿಗದಿದ್ದರೆ ಒಬ್ಬ ಅಸ್ಪೃಶ್ಯನನ್ನು ಆರಿಸಲು ಹಿಂದೂಗಳು ಮನಸ್ಸು ಮಾಡುತ್ತಿರಲಿಲ್ಲ".[15] ಅಂಬೇಡ್ಕರ್‌ರ ಅಂದಿನ ಈ ದೂರದೃಷ್ಟಿಯ ಚಿಂತನೆ ಇಂದಿಗೂ ತನ್ನ ನಗ್ನ ಸತ್ಯಗಳನ್ನು ಸಾಬೀತು ಮಾಡುತ್ತಿದೆ.

ಈ ನಡುವೆ 1935 ರ ಮೇ ತಿಂಗಳಲ್ಲಿ ಅವರ ಜೀವನದ ಬಹುದೊಡ್ಡ ಶಕ್ತಿಯಾಗಿದ್ದ ಪತ್ನಿ ರಮಾಬಾಯಿ ಅನಾರೋಗ್ಯದಿಂದ ತೀರಿಕೊಂಡಿದ್ದು, ಅಂಬೇಡ್ಕರ್‌ರಿಗೆ ಇನ್ನೊಂದು ಆಘಾತವಾಯಿತು.

ಧರ್ಮ ಜಿಜ್ಞಾಸೆ : ಆಧ್ಯಾತ್ಮಿಕ ಚಿಂತಕ :

ಇಷ್ಟು ದೀರ್ಘ ಕಾಲದ ತಮ್ಮ ಹೋರಾಟ ಯಾವ ಗುರಿಗೂ ತಲುಪದಿದ್ದುದರಿಂದ ಪ್ರಕ್ಷುಬ್ಧರಾಗಿದ್ದ ಅಂಬೇಡ್ಕರ್ ಈಗ ಹೊಸ ನಿಲುವಿನ ಘೋಷಣೆ ಮಾಡಿದರು. "ನಾವು ಹಿಂದೂಗಳಾಗಿ ಉಳಿಯಬೇಕೇ ಬೇಡವೇ? ಎಂದು ಅವರು ಕೇಳಿದ ಪ್ರಶ್ನೆ ಭಾರತದಾದ್ಯಂತ ಕಂಪನದ ಅಲೆಗಳನ್ನು ಸೃಷ್ಟಿಸಿತು. ಅವರನ್ನು ಒಲಿಸಿಕೊಳ್ಳಲು ಕ್ರೈಸ್ತ, ಮುಸ್ಲಿಂ ಮುಂತಾದ ಬಹುಧರ್ಮೀಯರು ಯತ್ನಿಸಿದರೂ, ಅಂಬೇಡ್ಕರ್‌ರ ನಿರ್ಧಾರಕ್ಕೆ ಮನುಷ್ಯನ ಆಂತರಿಕ ನೆಮ್ಮದಿಯೇ ಮುಖ್ಯವಾದ ಆಧ್ಯಾತ್ಮಿಕ ಚಿಂತನೆ ಮೂಲವಾಗಿತ್ತು. ಕೊನೆಗವರು ಸಮಾನತೆ, ನೈತಿಕತೆ ಹಾಗೂ ವೈಚಾರಿಕತೆಗಳನ್ನೂ ಅಡಿಪಾಯವಾಗಿ ಉಳ್ಳ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು, ಅತ್ಯಂತ ಖಚಿತ, ಸಹಜ ಹಾಗೂ ಮಾನವೀಯ ಆಯ್ಕೆಯಾಗಿತ್ತು. ಆದರೆ ಅಂತಿಮ ಧರ್ಮದೀಕ್ಷೆಗೆ ಮುನ್ನ ಇನ್ನೂ ಕೆಲವು ಸಾಧನೆಗಳು ಉಳಿದಿದ್ದವು.

ಸಂವಿಧಾನ ಶಿಲ್ಪಿ :

1936 ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಸ್ಥಾಪನೆ ಅಂಥ ಸಾಧನೆಗಳಲ್ಲಿ ಪ್ರಮುಖವಾದುದು. ಆದರೆ ಭಾರತದ ಹಾಗೂ ಅವರ ಜೀವನದಲ್ಲಿ ಮೇರು ಸಾಧನೆ ಎನಿಸಿದ್ದು, ಸ್ವತಂತ್ರ ಭಾರತದ ಸಂವಿಧಾನದ ರಚನೆ. 1947ರ ಜುಲೈ 15 ರಂದು ಬ್ರಿಟಿಷ್ ಸಂಸತ್ತು. ಭಾರತಕ್ಕೆ ಸ್ವಾತಂತ್ರ್ಯ ನೀಡುವ ಅಧಿನಿಯಮವನ್ನು ಅಂಗೀಕರಿಸಿತು. ಆಗ ಭಾರತದ ಸಂವಿಧಾನ ರಚನಾ ಸಭೆಗೆ ಸಾರ್ವಭೌಮ ಅಧಿಕಾರ ಪ್ರಾಪ್ತವಾಯಿತು. ಸಂವಿಧಾನದ ಕರಡನ್ನು ಸಿದ್ಧಪಡಿಸುವ ಸಮಿತಿಗೆ ಅಂಬೇಡ್ಕರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಯಿತು. ಅವರ ವ್ಯಾಪಕವಾದ ವ್ಯಾಸಂಗ, ಹರಿತವಾದ ವಿವೇಚನಾ ಶಕ್ತಿ, ವಿಶಾಲವಾದ ಅನುಭವ, ನಿಷ್ಪಕ್ಷಪಾತವಾದ ಮನೋಧರ್ಮ ಹಾಗೂ ದೂರದೃಷ್ಟಿಗೆ ತಕ್ಕ ಮನ್ನಣೆ ಅದು. ಸಂವಿಧಾನವನ್ನು ರಚಿಸಲು ನೇಮಿತವಾದ ಸಮಿತಿಯಲ್ಲಿ ಏಳು ಜನರಿದ್ದರು. ಆದರೆ ಬಹುಮಟ್ಟಿಗೆ ಅದನ್ನು ರಚಿಸಿದವರು ಡಾ। ಅಂಬೇಡ್ಕರ್ ಅವರೊಬ್ಬರೆ. ಹತ್ತಾರು ದೇಶಗಳ ಸಂವಿಧಾನವನ್ನು ಅಭ್ಯಾಸ ಮಾಡಿ ಭಾರತದ ಸಂಕೀರ್ಣತೆಗೆ, ಸ್ಥಿತಿ-ಗತಿಗಳಿಗೆ ಸಂಸ್ಕೃತಿಗೆ ಅನುಗುಣವಾಗುವಂತೆ ಕಾಲದ ಪರೀಕ್ಷೆಯನ್ನು ಗೆದ್ದು ನಿಲ್ಲುವಂತೆ ಅತ್ಯಂತ ವಿಶಿಷ್ಟವಾದ ಸಂವಿಧಾನವನ್ನು ರೂಪಿಸಿದ ಮಹಾಕೀರ್ತಿ ಅಂಬೇಡ್ಕರ್ ಅವರದು. ಅವರು ಇದುವರೆಗೆ ಗಳಿಸಿದ ಮಹಾಜ್ಞಾನವೆಲ್ಲ ಈ ಶಾಶ್ವತವಾದ ಮಹಾಕಾರ್ಯದಲ್ಲಿ ಸದುಪಯೋಗವಾಯಿತು. ಆದ್ದರಿಂದಲೇ ಇವರನ್ನು "ಸಂವಿಧಾನದ ಶಿಲ್ಪಿ" ಎಂದು ಕರೆಯಲಾಗಿದೆ. ರಾಜ್ಯಾಂಗ ಸಮಿತಿ ಅಧ್ಯಕ್ಷರಾಗಿ, ಸ್ವಾತಂತ್ರ್ಯ, ಸಮಾನತೆಗಳ ಆದರ್ಶ ಸಾಧನೆಗಾಗಿ ರೂಪಿಸಿದ ಸಂವಿಧಾನ ಅಂಬೇಡ್ಕರ್‌ರ ಮಾನವತಾ ವಾದ, ಜ್ಞಾನ, ಅರಿವು, ಇವೆಲ್ಲದರ ಪರಿಪೂರ್ಣ ಸಂಗಮದಂತಿದೆ.

1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು. ನೆಹರೂ ಪ್ರಧಾನಮಂತ್ರಿಯಾದರು. ಅಂಬೇಡ್ಕರ್ ಕಾಂಗ್ರೆಸ್ಸಿಗೆ ಸೇರಿರಲಿಲ್ಲ. ಅಷ್ಟೇ ಅಲ್ಲ. ಕಾಂಗ್ರೆಸ್ಸಿನ ಹಲವು ಧೋರಣೆಗಳಿಗೆ ಅವರ ವಿರೋಧವಿತ್ತು. ಆದರೂ ಕಾನೂನು ಮಂತ್ರಿ ಪದವನ್ನು ಒಪ್ಪಿಕೊಳ್ಳಲು ನೆಹರೂ ಅವರನ್ನು ಆಹ್ವಾನಿಸಿದರು. ಇದು ಅಂಬೇಡ್ಕರ್‌ರ ಬುದ್ಧಿಮತ್ತೆ ಹಾಗೂ ದಕ್ಷತೆಯ ಬಗ್ಗೆ ನೆಹರೂ ಅವರಿಗಿದ್ದ ನಂಬಿಕೆಯ ದ್ಯೋತಕ. ಭಾರತದಲ್ಲಿ ಅತ್ಯಂತ ಹೀನಾವಸ್ಥೆಗೆ ಗುರಿಯಾಗಿದ್ದ ಅಸ್ಪೃಶ್ಯ ವರ್ಗದವರೊಬ್ಬರು ಕೇಂದ್ರ ಸರ್ಕಾರದ ಮಂತ್ರಿಯಾದುದು ಸ್ವತಂತ್ರ ಭಾರತದ ಪ್ರಗತಿಪರ ದೃಷ್ಟಿಯ ಸಂಕೇತವೂ ಆಗಿತ್ತು. ಆ ಸಂದರ್ಭದಲ್ಲಿ ಅಂಬೇಡ್ಕರ್ ಕಾನೂನು ಮಂತ್ರಿಯಾಗಿ ದಲಿತರ, ಕಾರ್ಮಿಕರ, ಮಹಿಳೆಯರ ಹಿತಾಸಕ್ತಿ ನ್ಯಾಯ ಸಂಹಿತೆಯ ಪರಿಷ್ಕರಣೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಕಾರ್ಯ ನಿರ್ವಹಿಸಿದರು. ಆದರೆ ಅಂಥ ಮೇಧಾವಿಯೂ ಭಾರತ ಸರ್ಕಾರಕ್ಕೆ ಬೇಡವಾದ ದಿನವೂ ಬಂತು. ಅಂಬೇಡ್ಕರ್ ಕಾನೂನುಮಂತ್ರಿಯಾಗಿ ಸಿದ್ಧಪಡಿಸಿದ್ದ ಸಮಗ್ರ ಹಿಂದೂ ಕಾನೂನು ಮಸೂದೆ ಬಿದ್ದು ಹೋದದ್ದರಿಂದ 1951ರಲ್ಲಿ ಅಂಬೇಡ್ಕರ್ ಮಂತ್ರಿ ಪದವಿಗೆ ರಾಜಿನಾಮೆ ನೀಡಿ ಬಿಟ್ಟು ಕೊಟ್ಟರು. ಮುಂದಿನ ಎರಡು ಮೂರು ವರ್ಷದ ಅವರ ಶಾಸನಸಭಾ ಹೋರಾಟ ಅವರು ಎಣಿಸಿದ ಫಲ ನೀಡದೇ ಹೋದಾಗ ಅಂಬೇಡ್ಕರ್ ಧರ್ಮಚಿಂತನೆಯಲ್ಲಿ ತೊಡಗಿದರು.

ಸವಿತಾ ಅಂಬೇಡ್ಕರ್ :

ಈ ನಡುವೆ ಆಗಾಗ ಅಂಬೇಡ್ಕರ್ ಅವರ ಆರೋಗ್ಯ ಕೆಡುತ್ತಿತ್ತು. ತಮ್ಮ ಜೀವನದ ಒಂದು ಗಳಿಗೆಯನ್ನು ವ್ಯರ್ಥವಾಗಿ ಪೋಲು ಮಾಡದ ಅಂಬೇಡ್ಕರ್ ತಮ್ಮ ಪತ್ನಿ ತೀರಿಕೊಂಡ ಮೇಲೆ

ಮರುಮದುವೆಯ ಯೋಚನೆಯನ್ನು ಮಾಡಿರಲಿಲ್ಲ. ಅದಕ್ಕೆ ಸಮಯವೂ ಇರಲಿಲ್ಲ. ಅಂಬೇಡ್ಕರ್‌ರವರ ಆರೋಗ್ಯ ದಿನೇ ದಿನೇ ಹದಗೆಡುತ್ತಿದ್ದಂತೆ ತಮ್ಮನ್ನು ಪ್ರೀತಿಯಿಂದ ಆರೈಸುವವರು ಬೇಕು ಎಂಬ ನಿರ್ಧಾರಕ್ಕೆ ಅವರು ಬಂದರು. ಮುಂಬಯಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಿದ್ದ ಸಂದರ್ಭದಲ್ಲಿ ಡಾ।ಶಾರದಾ ಕಬೀರ ಅವರ ಪರಿಚಯವಾಯಿತು. ಇಂಥ ಸ್ಥಿತಿಯಲ್ಲಿ "ತಮ್ಮ ಆರೋಗ್ಯದತ್ತ ಗಮನ ಕೊಡುವವರೊಬ್ಬರೂ ಬೇಕು" ಎಂದೆನಿಸಿಅವರು ಡಾ.ಶಾರದಾ ಕಬೀರ ಅವರೊಡನೆ ವಿವಾಹವಾಗುವ ನಿರ್ಧಾರ ಮಾಡಿದರು. "ದೆಹಲಿಯ ಹಾರ್ಡಿಂಜ್ ಎವೆನ್ಯೂ ನಿವಾಸ ಸ್ಥಾನದಲ್ಲಿ ಕೆಲವೇ ಆತ್ಮೀಯ ಮಿತ್ರರ ಸಮ್ಮುಖದಲ್ಲಿ ಡಾ.ಶಾರದಾ ಕಬೀರ ಅವರೊಡನೆ ರಿಜಿಸ್ಟರ್ ಪದ್ಧತಿಯಿಂದ 1948ರ ಏಪ್ರಿಲ್ 15ರಂದು ಅವರ ಸರಳ ವಿವಾಹ ಸಮಾರಂಭ ಜರುಗಿತು[16]". ಡಾ.ಶಾರದಾ ಕಬೀರ ಸಾರಸ್ವತ ಬ್ರಾಹ್ಮಣ ಕನ್ಯೆಯಾಗಿದ್ದರು. ನಂತರ ಡಾ. ಸವಿತಾ ಅಂಬೇಡ್ಕರ್ ಎಂದು ಹೆಸರು ಬದಲಿಸಿಕೊಂಡರು.

ಪದವಿ - ಪುರಸ್ಕಾರಗಳ ಸುರಿಮಳೆ :

1952ರಲ್ಲಿ ನಡೆದ ಮೊದಲನೇ ಮಹಾ ಚುನಾವಣೆಯಲ್ಲಿ ಅಂಬೇಡ್ಕರ್ ಸ್ಪರ್ಧಿಸಿ ಸೋತರು. ಆದರೆ ಅವರ ಸೇವೆ ಹಾಗೂ ವ್ಯಕ್ತಿತ್ವವನ್ನು ಗೌರವಿಸಿ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಲಾಯಿತು. ಕೋಲಂಬೋ ವಿಶ್ವ ವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ಹೈದರಾಬಾದಿನ ವಿಶ್ವ ವಿದ್ಯಾಲಯ "ಡಾಕ್ಟರ್ ಆಫ್ ಲಿಟರೇಚರ್" ಪದವಿಯನ್ನು ನೀಡಿ ಅವರನ್ನು ಗೌರವಿಸಿದವು. ಮುಂಬಯಿ ನಗರದ "ಹಿಂದುಳಿದ ಜನಾಂಗಗಳ ಜಂಟಿ ಸಂಘವು" ಅವರಿಗೆ ಒಂದು ಲಕ್ಷದ ಹದಿನೆಂಟು ಸಾವಿರ ರೂಪಾಯಿಗಳ ನಿಧಿಯನ್ನು ಅರ್ಪಿಸಿತು. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ದಾದರಿನಲ್ಲಿ ಕಟ್ಟುತ್ತಿದ್ದ ಗ್ರಂಥಾಲಯಕ್ಕೆ ಆ ನಿಧಿಯನ್ನು ಅವರು ದಾನ ಮಾಡಿದರು.

"ಬೌದ್ಧ ಧರ್ಮದ ಕಡೆಗೆ ಒಲವು -ಮತಾಂತರ" :

65 ವರ್ಷ ತುಂಬಿದವು. ಅವರ ಆರೋಗ್ಯ ಮತ್ತಷ್ಟು ಇಳಿಮುಖವಾಗಿತ್ತು. ಆದರೂ ತಾವು ಮಾಡಬೇಕಾದ ಕಾರ್ಯಪೂರ್ಣವಾಗಿಲ್ಲ, ದಲಿತರಿಗೆ ದೊರಕಬೇಕಾದ ಸ್ಥಾನಮಾನಗಳು ಇನ್ನೂ ಲಭ್ಯವಾಗಿಲ್ಲ ಎಂಬ ಕೊರಗು ಅವರನ್ನು ಬಾಧಿಸುತ್ತಿತ್ತು. ಏನೇ ಮಾಡಿದರೂ ಸವರ್ಣೀಯರ ಮನೋಧರ್ಮದಲ್ಲಿ ಯಾವ ಬದಲಾವಣೆಯೂ ಆಗದಿದ್ದುದನ್ನು ಕಂಡು ಅವರು ಹೆಚ್ಚು ಹೆಚ್ಚು ವ್ಯಥಿತರಾಗುತ್ತಿದ್ದರು. ಇದರಿಂದಾಗಿ ಅವರ ಮನಸ್ಸು ಬೌದ್ಧಧರ್ಮದ ಕಡೆಗೆ ಹರಿಯುತ್ತಿತ್ತು. "ಬುದ್ಧ ಮತ್ತು ಬೌದ್ಧಮತ ಎಂಬ ಗ್ರಂಥವನ್ನು ಬರೆದು ಮುಗಿಸಿದರು. "ಅಸ್ಪೃಶ್ಯರು" ಎಂಬ ಸಂಶೋಧನಾತ್ಮಕ ಕೃತಿಯನ್ನು ರಚಿಸಿದರು. 1955ರಲ್ಲಿ ಅಂಬೇಡ್ಕರ್ ಬೌದ್ಧ ಧರ್ಮ ಸೇರುವ ತಮ್ಮ ನಿರ್ಧಾರವನ್ನು ಮೊದಲು ಸಾರಿದರು. 1956 ರಲ್ಲಿ ಅದರ ಜೊತೆಗೆ "ರಿಪಬ್ಲಿಕೇಷನ್ ಪಕ್ಷ" ವನ್ನು ಹುಟ್ಟುಹಾಕಿದರು. ಆರೋಗ್ಯ ಶಿಥಿಲವಾಗುತ್ತಿದ್ದುದರಿಂದ ಅವರು ಪೂರ್ಣ ಪ್ರಮಾಣದಲ್ಲಿ ಅದನ್ನು ಬೆಳೆಸಲಾಗಲಿಲ್ಲ.

"ಮೇ, 1956 ರಲ್ಲಿ ಬಿ.ಬಿ.ಸಿ. ಲಂಡನ್ ಮೂಲಕ ಅಂಬೇಡ್ಕರ್ ಭಾಷಣ" ಬೌದ್ಧಧರ್ಮ ನಮಗೇಕೆ ಇಷ್ಟ? ಈ ಹೊತ್ತಿನಲ್ಲಿ ಅದರ ಸಮಕಾಲೀನತೆ ಏನು" ಎಂಬ ಭಾಷಣ ಪ್ರಸಾರವಾಯಿತು. ತಮ್ಮ ಭಾಷಣದಲ್ಲಿ ಬೌದ್ಧಧರ್ಮದ ಮೂರು ಮುಖ್ಯ ಸೂತ್ರಗಳನ್ನು ತಿಳಿಸಿ, ಅವುಗಳೇ ತಮ್ಮನ್ನು ಆ ಧರ್ಮದತ್ತ ಸೆಳೆದವು ಎಂದು ಅಂಬೇಡ್ಕರ್ ತಿಳಿಸಿದರು. ಪ್ರಜ್ಞೆ (ಮೂಢನಂಬಿಕೆ, ಕರ್ಮವಿಧಿವಾದ ಮುಂತಾದವುಗಳಿಗೆ

ವಿರುದ್ಧವಾದ ತಿಳುವಳಿಕೆ) ಕರುಣಾ (ಪ್ರೀತಿ -ವಿಶ್ವಾಸ -ಭ್ರಾತೃತ್ವ) ಮತ್ತು ಸಮತಾ (ಸಮಾನತೆ) ಎಂಬ ಮೂರು ಮುಖ್ಯ ಸೂತ್ರಗಳು ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯ ; ಇವುಗಳು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಂದಿಗೆ ವರ್ತಿಸುವಾಗಲೂ ಅವಶ್ಯಕ. ಸಮಾಜವನ್ನು ದೇವರಾಗಲೀ, ಮಹಾತ್ಮರಾಗಲೀ ಉದ್ಧಾರ ಮಾಡಲಾರರು"[17] ಎಂದು ಅವರು ಅಭಿಪ್ರಾಯಪಟ್ಟರು. ಮಾನವ ಸಮಾನತೆಯ ಆಧಾರದ ಮೇಲೆ ಬೌದ್ಧಧರ್ಮ ನಿಂತಿದೆ. ಸಹಜೀವಿಗಳಲ್ಲಿ ಅನುಕಂಪ ತೋರುವುದೇ ಆ ಧರ್ಮದ ಸಾರ. ಜಾತಿಪದ್ಧತಿಯಾಗಲೀ ಪುರೋಹಿತಶಾಹೀಯಾಗಲೀ ಅಲ್ಲಿಲ್ಲ. ಹೆಣ್ಣು-ಗಂಡುಗಳೆಂಬ ತಾರತಮ್ಯವೂ ಅಲ್ಲಿಲ್ಲ. ನೀತಿಯುಕ್ತವಾದ ಬದುಕು ಮುಖ್ಯ ಎಂದು ಅದು ಒತ್ತಿ ಹೇಳುತ್ತಿದೆ. ಈ ಧರ್ಮದಲ್ಲಿ ಮಾತ್ರ ದಲಿತರಿಗೆ ನ್ಯಾಯ ದೊರಕಬಹುದು ಎಂಬ ನಿರ್ಧಾರಕ್ಕೆ ಅವರು ತಲುಪಿದರು.

"ಬುದ್ಧ ಮತ್ತು ಅವನ ಧರ್ಮ" ಕೃತಿಯಲ್ಲಿ ಅಂಬೇಡ್ಕರ್ ಹಲವಾರು ಅಂಶಗಳನ್ನು ಗುರುತಿಸಿದರು." ಹಿಂದೂಧರ್ಮ ಮತ್ತು ಬೌದ್ಧಧರ್ಮ ಜೊತೆ ಜೊತೆಗೆ ಉಳಿಯುವುದು ಸಾಧ್ಯವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರು. ಹಿಂದೂಧರ್ಮ ದೇವರನ್ನು ಒಪ್ಪುತ್ತದೆ, ಬೌದ್ಧಧರ್ಮದಲ್ಲಿ ದೇವರಿಗೆ ಸ್ಥಾನವಿಲ್ಲ. ಹಿಂದೂಧರ್ಮ ಆತ್ಮವನ್ನು ಮಾನ್ಯ ಮಾಡುತ್ತದೆ, ಬೌದ್ಧ ಧರ್ಮದಲ್ಲಿ ಆತ್ಮಕ್ಕೆ ಜಾಗವಿಲ್ಲ. ಹಿಂದೂಧರ್ಮ ಚಾತುರ್ವರ್ಣವನ್ನು ಒಳಗೊಂಡಿದೆ, ಬೌದ್ಧಧರ್ಮದಲ್ಲಿ ಅದಕ್ಕೆ ಮಾನ್ಯತೆಯಿಲ್ಲ. ಹಿಂದೂಧರ್ಮ ಜಾತಿಪದ್ಧತಿಯ ಅಡಿಪಾಯದ ಮೇಲೆ ನಿಂತಿದೆ. ಆದರೆ ಬೌದ್ಧಧರ್ಮ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ ಎಂದು ಅವರು ವಿವರಿಸಿದರು".[18] ತನ್ನ ಜನರನ್ನು ವಿಮೋಚನೆಯ ಧ್ಯೇಯ ಸಾಧನೆಗಾಗಿ ಈಜಿಪ್ಟ್‌ನಿಂದ ಪ್ಯಾಲಿಸ್ತೀನ್ ಕಡೆಗೆ ಕರೆದೊಯ್ದ ಮೋಸೆಸ್‌ಗೆ, ಅಂಬೇಡ್ಕರ್ ತಮ್ಮನ್ನು ಹೋಲಿಸಿಕೊಂಡರು. ಹಿಂದೂಧರ್ಮದ ಕೊಳಕಿನಿಂದ ಅಸ್ಪೃಶ್ಯರನ್ನು ಬಿಡುಗಡೆ ಮಾಡುವ ಬಂಡುಕೋರ ಪ್ರವೃತ್ತಿಯನ್ನು ಮೆರೆದರು. ಅಸ್ಪೃಶ್ಯತೆಯಿಂದ ನೀವು ಪರಿವರ್ತನೆಯಾಗಲು ಬಯಸಿದರೆ, ಅಸ್ಪೃಶ್ಯತೆಯಂತಹ ಕಳಂಕದಿಂದ ಹೊರಬರಲು ಇಚ್ಛಿಸಿದರೆ, ಮಾನವನ ಪ್ರಗತಿಯಲ್ಲಿ ನಂಬಿಕೆ ಇಟ್ಟದ್ದೇ ಆದರೆ, ಹಿಂದೂಧರ್ಮ ಹಾಕಿದ ಸಂಕೋಲೆಗಳನ್ನು ಕಿತ್ತು ಸ್ವತಂತ್ರರಾಗಲು ಮತಾಂತರ ಒಂದೇ ದಾರಿ" ಎಂದು ಅಂಬೇಡ್ಕರ್ ಅಭಿಪ್ರಾಯಪಡುತ್ತಾರೆ.

ಹಿಂದೂಧರ್ಮವು ಅಸಮಾನತೆಯ ಆಧಾರದ ಮೇಲೆ ರಚಿಸಲ್ಪಟ್ಟಿದ್ದರೆ, ಬೌದ್ಧಧರ್ಮವು ಸಮಾನತೆ ಯನ್ನು ಪ್ರತಿಪಾದಿಸುತ್ತದೆ. ಬುದ್ಧನು ವರ್ಣವ್ಯವಸ್ಥೆಯ ವಿರುದ್ಧ ಬಂಡೆದ್ದ ಪ್ರಥಮ ಧಾರ್ಮಿಕ ಕ್ರಾಂತಿಕಾರಿ. ಯಾವ ಶೂದ್ರ ಮತ್ತು ಮಹಿಳೆಯರಿಗೆ ಹಿಂದೂಧರ್ಮ ತನ್ನ ಬಾಗಿಲುಗಳನ್ನು ಮುಚ್ಚಿಕೊಂಡಿತ್ತೋ, ಅಂಥವರಿಗೆ ಬೌದ್ಧಧರ್ಮದ ಸಂಘಟನೆಗಳಲ್ಲಿ ಮುಕ್ತ ಪ್ರವೇಶವಿತ್ತು. ಬೌದ್ಧಧರ್ಮ ಬಹುಸಂಖ್ಯಾತರ ಧರ್ಮ. ಏಕೆಂದರೆ ಅದು "ಬಹುಜನ ಹಿತಾಯ ಬಹುಜನ ಸುಖಾಯ" "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು" ಎಂಬ ತತ್ವಗಳಲ್ಲಿ ನಂಬಿಕೆ ಇಟ್ಟಿದೆ. ಆದರೆ ಹಿಂದೂಧರ್ಮ ಅಲ್ಪ ಸಂಖ್ಯಾತರ (ಬ್ರಾಹ್ಮಣರ) ಧರ್ಮವಾಗಿದೆ. ಏಕೆಂದರೆ, ಅದು ಪುರೋಹಿತ ವರ್ಗದ ಹಿತವನ್ನು ಮಾತ್ರ ಕಾಪಾಡುತ್ತಿದೆ. ಹಿಂದೂಧರ್ಮ ಬೌದ್ಧಧರ್ಮವನ್ನು ತನ್ನ ಪ್ರಥಮ ವೈರಿಯೆಂದು ಏಕೆ ಪರಿಗಣಿಸಿದೆ ಎಂದರೆ, ಬೌದ್ಧಧರ್ಮವು ಪುರೋಹಿತ, ಶಾಸ್ತ್ರ ಮತ್ತು ಧರ್ಮಗ್ರಂಥಗಳ ಅಸ್ತಿತ್ವವನ್ನೇ ಪ್ರಶ್ನಿಸಿ ಹಿಂದೂಧರ್ಮ ಜೀವವಿರೋಧಿ ಧರ್ಮವೆಂದು ಘೋಷಿಸಿದಾಗ ಆಕ್ಟೋಪಸ್‌ನಂತಹ ಪುರೋಹಿತಶಾಹಿಗಳು ಅದರ ಸಂಪೂರ್ಣ ನಿರ್ನಾಮಕ್ಕೆ ಪಣ ತೊಟ್ಟರು. ಏಕೆಂದರೆ ಹಿಂದೂಧರ್ಮವು ಎಂದೂ ಸುಧಾರಣಾ ಚಳುವಳಿಯನ್ನು ಸಹಿಸಿಲ್ಲ ಹಾಗೂ ಎಲ್ಲ ಸುಧಾರಕರನ್ನು ನುಂಗಿ ನೀರು ಕುಡಿದಿದೆ'[19] ಹೀಗಾಗಿ ಈ ಮೊದಲು ಅವರು ಹೇಳಿದಂತೆ "ಹಿಂದೂವಾಗಿ ಜನಿಸಿದೆ

ಹಿಂದೂವಾಗಿ ಸಾಯಲಾರೆ" ಎಂಬ ಅಭಿಪ್ರಾಯದಂತೆ ಮತಾಂತರಕ್ಕೆ ಮನಸ್ಸು ಮಾಡಿ ಬೌದ್ಧರಾದರು. ಅಲ್ಲದೇ ಉಳಿದ ಆಯುಸ್ಸನ್ನು ಬೌದ್ಧಧರ್ಮ ಪ್ರಸಾರಕ್ಕಾಗಿ ಮತ್ತು ನನ್ನ ಜನರ ಉತ್ಥಾನಕ್ಕಾಗಿ ಸವೆಸುತ್ತೇನೆ ಎಂದು ಅಂಬೇಡ್ಕರ್ ಕರೆ ಕೊಟ್ಟರು.

1956 ರ ಅಕ್ಟೋಬರ್ 14 ರ ವಿಜಯದಶಮಿಯ ಶುಭದಿನದಂದು ನಾಗಪೂರದಲ್ಲಿ ಮತಾಂತರ ಸಮಾರಂಭ ನಡೆಯಿತು. ಇದು ಅಂಬೇಡ್ಕರ್ ಬದುಕಿನ ಪರ್ವದಿನ. ಲಕ್ಷಾಂತರ ಜನರೊಂದಿಗೆ ಮಹಾಥೇರಾ ಚಂದ್ರಮಣಿ ಕುಶಿನಾರದಿಂದ ಬಂದಿದ್ದರು. ಅವರು ಅಂಬೇಡ್ಕರ್‌ಗೆ ಮತ್ತು ಅವರ ಪತ್ನಿಗೆ ದೀಕ್ಷೆ ನೀಡಿದರು. ಬುದ್ಧಧರ್ಮ ಸಂಘಗಳಿಗೆ ತಲೆಬಾಗುವ ತ್ರಿಶರಣಗಳ ಬೋಧನೆಯಾಯಿತು. ಪಂಚಶೀಲ ಪಠಣವಾಯಿತು. ಧರ್ಮದೀಕ್ಷೆ ಮುಕ್ತಾಯವಾಯಿತು. ಮೂರು ಲಕ್ಷ ಜನ ಪ್ರೇಕ್ಷರಿದ್ದರು. ಲಕ್ಷಾಂತರ ಜನ ಬೌದ್ಧಧರ್ಮ ಸ್ವೀಕರಿಸಿದರು. "ದೇಶಕ್ಕೆ ಯಾವ ತೊಂದರೆಯೂ ಬಾರದಂತೆ ನಾನು ನನ್ನ ದಾರಿಯನ್ನು ಕಂಡುಕೊಂಡಿದ್ದೇನೆ. ಭಾರತೀಯ ಸಂಸ್ಕೃತಿಯಲ್ಲಿ ಬೌದ್ಧಧರ್ಮ ಹೆಣೆದುಕೊಂಡಿದೆ. ಈ ನನ್ನ ಮಾತೃಭೂಮಿಯ ಇತಿಹಾಸ, ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ನನ್ನ ಧರ್ಮಾಂತರದಿಂದ ಯಾವ ಕೇಡೂ ಉಂಟಾಗದೆಂದು ನಾನು ನಂಬಿದ್ದೇನೆ" ಎಂದು ಅಂಬೇಡ್ಕರ್ ಘೋಷಿಸಿದರು.

"ಅಸಮಾನತೆಯನ್ನು ಮತ್ತು ಶೋಷಣೆಯನ್ನು ಎತ್ತಿ ಹಿಡಿಯುವ ನನ್ನ ಹುಟ್ಟಿನ ಧರ್ಮವನ್ನು ತಿರಸ್ಕರಿಸಿ, ನಾನು ಇಂದು ಬೌದ್ಧಧರ್ಮವನ್ನು ಒಪ್ಪಿಕೊಂಡಿರುವೆ. ನನಗೆ ಮರುಹುಟ್ಟು ದೊರಕಿದೆ. ಬುದ್ಧನು ವಿಷ್ಣುವಿನ ಅವತಾರ ಎಂಬುದು ಕುಚೋದ್ಯದ ಕಟ್ಟು ಕಥೆ. ದುರುದ್ದೇಶದಿಂದ ಇಂಥ ಕಥೆ ಪ್ರಚಾರ ಮಾಡಲಾಗಿದೆ. ನಾನು ಇನ್ನು ಯಾವ ಹಿಂದೂ ದೇವ-ದೇವತೆಗಳನ್ನು ಪೂಜಿಸುವುದಿಲ್ಲ. ಶ್ರಾದ್ಧ-ಕರ್ಮಾದಿಗಳನ್ನು ಮಾಡುವುದಿಲ್ಲ. ಬುದ್ಧ ಬೋಧಿಸಿದ ಅಷ್ಟಾಂಗಮಾರ್ಗವನ್ನು ನಾನು ಕಟ್ಟು ನಿಟ್ಟಾಗಿ ಅನುಸರಿಸುತ್ತೇನೆ. ಧರ್ಮ ಎಂಬುದರ ಅರ್ಥಕ್ಕೆ ಬೌದ್ಧಧರ್ಮ ಅತ್ಯಂತ ಸಮಂಜಸವಾಗಿದೆ"[20] ಎಂದು ನುಡಿದ ಅಂಬೇಡ್ಕರ್, ತಾವು ರೂಪಿಸಿದ್ದ 22 ನಿಯಮಗಳನ್ನು ಗಟ್ಟಿಯಾಗಿ ಓದಿದರು ಈ ನಿಯಮಗಳನ್ನು ಒಪ್ಪುವವರು ಜನಸ್ತೋಮದಲ್ಲಿ ಎದ್ದು ನಿಲ್ಲಬೇಕೆಂದು ಕೇಳಿದರು. ಲಕ್ಷಾಂತರ ಜನ ಎದ್ದು ನಿಂತಾಗ, ಅವರಿಗೆ ತ್ರಿಶರಣ ಮತ್ತು ಪಂಚಶೀಲಗಳನ್ನು ಮರಾಠಿ ಭಾಷೆಯಲ್ಲಿ ಬೋಧಿಸಲಾಯಿತು. ಹನ್ನೊಂದು ಗಂಟೆಯ ಹೊತ್ತಿಗೆ ಇಡೀ ಸಮಾರಂಭ ಮುಗಿದಿತ್ತು.

"ದಲಿತ ಸೂರ್ಯ, ಸಮತೆಯ ಶಿಲ್ಪಿ ಅಸ್ತಂಗತನಾದ"

ನಾಗಪೂರದ ಸಮ್ಮೇಳನದಲ್ಲಿ ಬೌದ್ಧಧರ್ಮ ಸ್ವೀಕರಿಸಿ, ಮರಳಿದ ಮೇಲೆ ದೇಹ ದಣಿದಿದ್ದರೂ, ಅವರ ಚೇತನ ಹೊಸ ಉಲ್ಲಾಸದಿಂದ ಸಂಭ್ರಮಿಸುತ್ತಿತ್ತು. ಆಗಲೂ ಪ್ರವಾಸ, ಭಾಷಣ ಕೈಬಿಡದ ಅಂಬೇಡ್ಕರ್‌ರ ದೇಹಸ್ಥಿತಿ ದಿನೇ ದಿನೇ ಕಳವಳಕಾರಿಯಾಗತೊಡಗಿತು. 1956 ರ ಡಿಸೆಂಬರ್ 5 ರಂದು ರಾತ್ರಿ ಊಟವಾದ ನಂತರ ಕೆಲವು ಪುಸ್ತಕಗಳನ್ನು ತಮ್ಮ ಹಾಸಿಗೆಯ ಬಳಿ ಇಟ್ಟುಕೊಂಡರು. ತಾವು ಬರೆದಿದ್ದ" ಬುದ್ಧ ಮತ್ತು ಅವನ ಧಮ್ಮ" ಗ್ರಂಥದ ಹಸ್ತಪ್ರತಿಯೂ ಪಕ್ಕದಲ್ಲಿತ್ತು. ರಾತ್ರಿ 11-15 ರವರೆಗೂ ತನ್ನ ಧಣಿಯ ಕಾಲುಗಳನ್ನು ಒತ್ತುತ್ತಿದ್ದ ಆತ್ಮೀಯ ಸೇವಕ ದತ್ತು ಮನೆಗೆ ಹೊರಟು ಹೋದ. ಮಲಗಿದ ಅಂಬೇಡ್ಕರ್ ಮತ್ತೆ ಮೇಲೇಳಲಿಲ್ಲ. ಚಿರನಿದ್ರೆಗೈದರು. ಡಿಸೆಂಬರ್ 6 ರಂದು ಬೆಳಿಗ್ಗೆ ಶ್ರೀಮತಿ ಅಂಬೇಡ್ಕರ್ ತಮ್ಮ ಪತಿಯನ್ನು ಎಬ್ಬಿಸಲು ಬಂದಾಗ ಅವರು ಮರಳಿ ಬಾರದ ಲೋಕಕ್ಕೆ ಪಯಣಿಸಿದ್ದರು. ಅವಿಶ್ರಾಂತ

ಹೋರಾಟಗಾರ ಇನ್ನಿಲ್ಲವಾಗಿದ್ದರು. ಅಸ್ಪೃಶ್ಯತೆಯ ಅಂಧಕಾರದಲ್ಲಿ ಮೂಡಿ ಬಂದು ಸ್ವಪ್ರಯತ್ನದಿಂದ ಮೇಲೆದ್ದು ತನ್ನವರ ಬಾಳಿಗೆ ಬೆಳಕು ಕೊಟ್ಟ "ದಲಿತ ಸೂರ್ಯ" ಭಾರತದ ಜನತೆಯಲ್ಲಿ ಸಮಾನತೆಯನ್ನು ಮೂಡಿಸಲು ಬಾಳಿನುದ್ದಕ್ಕೂ ಶ್ರಮಿಸಿದ ಸಮತೆಯ ಶಿಲ್ಪಿ ಅಸ್ತಂಗತನಾದ. ಅವರ ಬದುಕು, ಅವರ ಹೋರಾಟ ಭಾರತಕ್ಕೆ ಅನೇಕ ಅಮೂಲ್ಯ ಪಾಠಗಳನ್ನು ಕಲಿಸಿ ಹೋಗಿದೆ. ಸಮಾನತೆಯ ಹೊಸ ಸ್ಫೂರ್ತಿ, ಎಂಥ ಕಷ್ಟದ ಬಿಕ್ಕಟ್ಟಿನ ಗಳಿಗೆಯಲ್ಲಿ ಮರೆಯಾಗದ ವಾತಾವರಣ ಅಂಬೇಡ್ಕರ್ ಮಹಾನ್ ಕೊಡುಗೆಯಾಗಿ ಉಳಿದಿದೆ. ಡಾ. ಅಂಬೇಡ್ಕರ್‌ರು ಬಿರುಗಾಳಿಯಂಥ ವ್ಯಕ್ತಿತ್ವ ತಮ್ಮ ಸುಧಾರಣಾವಾದೀ ವಿಚಾರಗಳಿಂದ ಹಿಂದೂಸಮಾಜಕ್ಕೆ ಭೂಕಂಪದ ಬಿಸಿ ತಗಲುವಂತೆ ಮಾಡಿದರು. ಅಂತೆಯೇ ನೆಹರೂ ಅವರು "ಹಿಂದೂ ಸಮಾಜದೊಳಗಿನ ದಮನಶೀಲ ಪ್ರವೃತ್ತಿಯ ವಿರುದ್ಧದ ಬಂಡಾಯದ ಪ್ರತೀಕ"[21] ಎಂದು ಸರಿಯಾಗಿಯೇ ಅವರನ್ನು ಗುರುತಿಸಿದ್ದರು. ಸಂತಾಪ ಹಾಗೂ ಸಿಡಿಮಿಡಿಗೊಳ್ಳುವುದು ಅವರ ಸ್ವಭಾವದ ಸ್ಥಾಯೀ ಭಾವವಾಗಿತ್ತು. ಅನ್ಯಾಯ, ಅತ್ಯಾಚಾರ ಹಾಗೂ ಅಂಧಶ್ರದ್ಧೆಗಳ ವಿರುದ್ಧ ಅವರು ಸಿಡಿದೇಳುತ್ತಿದ್ದರು. ಸ್ವಾಭಿಮಾನ, ಸ್ವಾವಲಂಬನೆ, ಸ್ವ-ಉತ್ಕರ್ಷ, ಸಮಾನತೆಗಾಗಿ ಹೋರಾಟ ಅವರ ಸ್ವಾಭಿಮಾನಿ ಚಳುವಳಿಯ ಬಳುವಳಿಗಳು. ತ್ಯಾಗ ಮತ್ತು ಸಂಘರ್ಷವಿಲ್ಲದೆ ಸಾರ್ಥಕತೆ ಪ್ರಾಪ್ತಿಯಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು.

ಅಂಬೇಡ್ಕರ್ ಜೀವನ ಚರಿತ್ರೆ ಎಂದರೆ ಅದು ಸಮುದಾಯವೊಂದು ಸ್ವಾಭಿಮಾನದಿಂದ ಪ್ರತಿಭಟನೆ ನಡೆಸಿದ ಸಂಘರ್ಷದ ಚರಿತ್ರೆ. ಮಾನವ ಹಕ್ಕುಗಳಿಗಾಗಿ, ಅಮಾನುಷ ಸಾಮಾಜಿಕ ವ್ಯವಸ್ಥೆಗೆ ಸವಾಲಾಗಿ ನಿಂತಿದ್ದು -ಅಸ್ಪೃಶ್ಯರಿಗೆ ವ್ಯವಸ್ಥೆಯಲ್ಲಿ ಸಮಪಾಲು ಪಡೆದುಕೊಳ್ಳಲು ಪ್ರತಿಭಟಿಸಿ ಹೋರಾಡಿದ ಅರ್ಥಪೂರ್ಣ ಬದುಕಾಗಿದೆ. ಬಂಡಾಯದ ಪ್ರತೀಕ, ವೈಚಾರಿಕ ಚಿಂತಕ, ಅರಿವಿನ ದಾರಿ ತೋರಿದ, ಆತ್ಮಗೌರವ ಮೂಡಿಸಿದ ಮಹಾ ಮಾನವತಾವಾದಿ. ಜಗತ್ತಿನ ಮಹಾ ಮಾನವರೆಲ್ಲ ನುಡಿದಂತೆ ನಡೆದಿದ್ದಾರೆ. ನಡೆದು ನುಡಿದಿದ್ದಾರೆ. ದಿವ್ಯ ಜ್ಯೋತಿಯಂತೆ ಬದುಕು ಬೆಳಗಿ ಹೋಗಿದ್ದಾರೆ. ಮೇಣದ ಬತ್ತಿಯಂತೆ ಸುಟ್ಟುಕೊಂಡು ಲೋಕಕ್ಕೆ ಬೆಳಕು ನೀಡಿದ್ದಾರೆ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲ ಸಂಗನ ಶರಣರೆ ಕುಲಜರು. ಬಸವಣ್ಣನು ಹೇಳುವ ಮಾತುಗಳು ಲೋಕದೆಲ್ಲಾ ಮಹಾ ಮಾನವರು ಹೇಳಿದ್ದಾರೆ. ಮಾತನ್ನೇ ಜ್ಯೋತಿರ್ಲಿಂಗ ಮಾಡಿ ಜ್ಯೋತಿಯಾಗಿ ಹೋಗಿದ್ದಾರೆ. ಆ ಕಾರಣಕ್ಕಾಗಿ ಲೋಕ ಅಂಥವರನ್ನೆಲ್ಲ ಪ್ರತಿಯುಗಕ್ಕೂ ನೆನೆಯುವುದು. ಅಂಬೇಡ್ಕರ್ ಅಂತಹ ಮಹಾಮಾನವರು. ಭಾರತದ ಚರಿತ್ರೆಯಲ್ಲಿ ಅವರಿಗೆ ವಿಶಿಷ್ಟ ಸ್ಥಾನವಿದೆ. ಡಾ. ಅಂಬೇಡ್ಕರ್ ಯುವ ಜನಾಂಗಕ್ಕೆ ದೇದೀಪ್ಯಮಾನವಾದ ಸೂರ್ಯನಂತೆ ಹೊಳೆಯುತ್ತಾರೆ.

ಅಂಬೇಡ್ಕರ್ ವಾಣಿ (ವಿಚಾರಗಳು) :

ಅಂಬೇಡ್ಕರ್ ದಲಿತರಿಗಷ್ಟೇ ಅಲ್ಲ, ಇಡೀ ವಿಶ್ವದ ಮಾನವ ಸಮುದಾಯಕ್ಕೆ ದಾರಿದೀಪವಾಗಿದ್ದಾರೆ. ಅವರ ಒಂದೊಂದು ಮಾತುಗಳು ಬಸವಣ್ಣನವರು ಹೇಳುವಂತೆ ರತ್ನದ ದೀಪ್ತಿಯಂತಿವೆ. ಸ್ಫಟಿಕದ ಶಲಾಕೆಯಂತಿವೆ. ಎಮಾರ್ಸನ್ ಹೇಳುವಂತೆ ಬಾಂಬಾಗಿವೆ. ಬದುಕಿನುದ್ದಕ್ಕೂ ಸವರ್ಣೀಯ ಜನಾಂಗದಿಂದ ನಾನಾ ಬಗೆಯ ಹಿಂಸೆ, ಅಪಮಾನ, ತಿರಸ್ಕಾರಗಳನ್ನು ಕಂಡುಂಡ ಅಂಬೇಡ್ಕರ್‌ರು ಕೆಳವರ್ಗದ ಬಿಡುಗಡೆಗಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತೆ, ಸಹಬಾಳ್ವೆ, ಪ್ರಜ್ಞಾ, ಕರುಣೆ, ಶೀಲ, ಬೆಳೆಸುವ ಸಲುವಾಗಿ ಮಾಡಿದ

ಭಾಷಣ, ಬರೆದ ಲೇಖನ, ಸದಾ ಮನನಕ್ಕೆ ಯೋಗ್ಯವಾದವುಗಳು ಅಧ್ಯಯನಕ್ಕೆ ಅಡಿಗಲ್ಲಾದವುಗಳು. ಅಂಬೇಡ್ಕರ್ ತಮ್ಮ ರಕ್ತವನ್ನು ಕಣ್ಣೀರಿನೊಡನೆ ಬೆರೆಸಿ ತನ್ನ ಪ್ರಜೆಗಳ ದಾಸ್ಯದ ವಿಮೋಚನೆಗಾಗಿ ಸುರಿಸಿದರು, ವಿಮುಕ್ತಿಗೊಳಿಸಿದರು; ವರ್ಣಾಶ್ರಮಧರ್ಮ, ಜಾತೀಯತೆ ನಾಶವಾಗದೇ ಅಸ್ಪೃಶ್ಯತೆ ತೊಲಗದು. ಸರ್ವ ಮಾನವ ಸಮಾನತೆ ಸಾಧ್ಯವಾಗದೆಂದು ಅವರು ಸನಾತನಿಗಳ ಎದೆಗಳಲ್ಲಿ ಗರ್ಜಿಸಿದರು. ಆತನ ಅಮೃತವಾಣಿ ಇಂದಿನ ಮಾನವ ಸಮಾಜದಲ್ಲಿನ ಅಶಾಂತಿಗೆ, ಅಕ್ರಮಗಳಿಗೆ ಸಮಂಜಸವಾದ ಪರಿಹಾರ.

ಧರ್ಮ, ದೇವರು, ದೇವಾಲಯ, ವಿದ್ಯೆ, ಸಾಮಾಜಿಕ ಪ್ರತಿಷ್ಠೆ, ಜ್ಞಾನ, ನಾಗರೀಕತೆ, ರಾಜಕೀಯ ಹಕ್ಕು, ಅಧಿಕಾರ, ಆರ್ಥಿಕ ಸಮಾನತೆ, ಮಾನವೀಯತೆ, ಇತಿಹಾಸ ಇತ್ಯಾದಿಗಳಾವವೂ ಇಲ್ಲದ ದಲಿತರಿಗೆ ಅಂಬೇಡ್ಕರ್ ಇವೆಲ್ಲವನ್ನೂ ಒದಗಿಸಿ, ನೂತನ ಆಲೋಚನೆಗಳಿಂದ ನೂತನ ಜೀವನದಿಂದ ಪರಿಪೂರ್ಣ ಮಾನವರಾಗಿ ಬಾಳುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟ ಅಭಿನವ ಬುದ್ಧ ಆತನ ವಿಚಾರಗಳು, ಬಲಹೀನ ವರ್ಗಗಳಿಗೆ ಉತ್ಸಾಹ, ಉತ್ತೇಜನ, ಸ್ಫೂರ್ತಿ, ಚೈತನ್ಯ, ಸ್ಥೈರ್ಯ, ಧೈರ್ಯ, ಆತ್ಮ ವಿಶ್ವಾಸವನ್ನು ನೀಡಬಲ್ಲವು. "ನನಗೊಂದು ತಾಯಿ ನಾಡಿಲ್ಲ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ನಮ್ಮನ್ನು ಅತ್ಯಂತ ಕೀಳಾಗಿ ಕಾಣುವ ಈ ನಾಡನ್ನು, ಈ ಧರ್ಮವನ್ನು, ನನ್ನ ನಾಡೆಂದು ನನ್ನ ಧರ್ಮವೆಂದು ಹೇಗೆ ಕರೆಯಲಿ? ಹೇಗೆ ಭಾವಿಸಲು? ಈ ವಿಷಯದಲ್ಲಿ ನನ್ನನ್ನು ದೇಶದ್ರೋಹಿಯೆಂದು ಕರೆಯುವುದಾದರೆ ಅದಕ್ಕೆ ನನ್ನ ವಿಷಾದವಿಲ್ಲ, ನಾನು ದೇಶದ್ರೋಹಿ ಎನ್ನುವುದಾದರೆ ಅದಕ್ಕೆ ಕಾರಣ ಈ ನಾಡು. ತುಳಿತಕ್ಕೊಳಗಾದ ನನ್ನ ಜನಕ್ಕೆ ಮಾನವೀಯ ಹಕ್ಕುಗಳನ್ನು ದೊರಕಿಸುವ ಹೋರಾಟದಲ್ಲಿ ದೇಶದ ಹಿತಕ್ಕೆ ತೊಂದರೆ ಎನ್ನುವುದಾದರೆ ಅದನ್ನು ದ್ರೋಹವೆಂದು ನಾನು ಪರಿಗಣಿಸುವುದೇ ಇಲ್ಲ". ಇದು ಸಿಡಿಲಗುಡಿನ ಸ್ಫೋಟ. 1931ರ ಆಗಸ್ಟ್ 14 ರಂದು ಗಾಂಧೀಜಿಯವರಿಗೆ ನೇರವಾಗಿ ಡಾ. ಅಂಬೇಡ್ಕರ್ ಹೇಳಿದ ಮಾತುಗಳಿವು[22] ಈ ಮಾತುಗಳು ಕೇವಲ ಮಾತುಗಳಲ್ಲ. ಶತಮಾನಗಳ ನೋವು ಸಿಟ್ಟಾಗಿ, ಸಿಡಿದು, ದೇಶ ದೇಶ ಭಕ್ತಿ ಮುಂತಾದ ಪರಿಕಲ್ಪನೆಗಳೆಲ್ಲ ಪೊಳ್ಳಾಗಿ ಕಂಡು ಪುಡಿ ಮಾಡಿದ ವಿಧಾನ ಇದು. "ನಿಮ್ಮ ಜೀವನದ ಒಳಿತು-ಕೆಡಕುಗಳು ನೀವು ಹುಟ್ಟುವ ಮುನ್ನವೇ ನಿರ್ಧಾರಿತವಾಗಿ ಬಿಟ್ಟಿವೆ ಎಂಬ ಮೂಢ ನಂಬಿಕೆಯನ್ನು ಕಿತ್ತು ಒಗೆಯಿರಿ. ನಿಮ್ಮ ಸುಖ-ದುಃಖ, ದಾರಿದ್ರ್ಯಗಳಿಗೆ ದೇವರು ಕಾರಣ ಅಲ್ಲವೇ ಅಲ್ಲ. ಅವುಗಳಿಂದ ಬಿಡುಗಡೆ ಇಲ್ಲ ಎಂಬ ನಿರಾಶೆ ಮಾತ್ರ ಬೇಡ, ಈ ತೆರನಾದ ಅನಂತ ಮೂಢನಂಬಿಕೆಗಳೇ ನೀವು ಶಾಶ್ವತ ಗುಲಾಮರಾಗಿರಲು ಕಾರಣ"[23] "ನಾನು ಹೋರಾಡುತ್ತಿರುವುದು ಸರ್ವಾಂಗ ಸುಂದರವಾದ ಏಕೈಕ ಭಾರತಕ್ಕಾಗಿ. ಇಂತಹ ಹೋರಾಟ ನಿಮಗೆ ಎರಡು ಸಾವಿರ ವರ್ಷಗಳ ನಂತರವೇ ಅನುಭವಕ್ಕೆ ಬರುತ್ತದೆ".[24]

"ಮಾನವನಲ್ಲಿನ ಮಹೋನ್ನತವಾದ ಗುಣಗಳಿಗಿಂತ, ತಾನು ಜನಿಸಿದ ಕುಲವೇ ಶ್ರೇಷ್ಠ ಎಂಬ ಧೋರಣೆ ನಮ್ಮ ಸಮಾಜದಲ್ಲಿ ಅಳಿಸಿ ಹೋಗದೇ ಇರುವವರೆಗೂ ಶಾಂತಿ ಸುಧಾರಣೆಗಳು ಶುಷ್ಕ ನಿನಾದಗಳು ಮಾತ್ರ".[25] "ಹಿಂದೂಗಳು ನನ್ನನ್ನು ಶತ್ರುವಾಗಿ ಕಾಣುವುದು ಅವಿವೇಕ. ಅವರನ್ನು ನಾನು ಸದಾ ಪ್ರೀತಿಸುತ್ತಲೇ ಇರುವೆ. ಭಾರತೀಯ ತತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿರುವ ನಾನು ಅವರಲ್ಲಿರುವ ಕೊಳಕನ್ನು ಶುದ್ಧ ಮಾಡಿ, ಪರಿಶುದ್ಧವಾದ ಜನಾಂಗವನ್ನಾಗಿ ತಯಾರು ಮಾಡಲು ಅವರ ದುರಾಚಾರ ವಿರುದ್ಧ ಹೋರಾಟ ನಡೆಸಿರುವೆ". "ರಷ್ಯಾದ ಕಮ್ಯೂನಿಸ್ಟ್ ಹೋರಾಟ, ರಕ್ತಪಾತದಿಂದಾದುದು. ಬೌದ್ಧಧರ್ಮಕ್ಕೆ ಸಂಬಂಧಿಸಿದ ವಿಪ್ಲವ ಶಾಂತಿ ಪ್ರಧಾನವಾದುದು. ಇಂದಿನ ರಾಜಕೀಯ ವಾತಾವರಣದಲ್ಲಿ ಬುದ್ಧನ ಸೂಕ್ತಿಗಳಿಗೆ ರಾಜಕೀಯ ವ್ಯಾಖ್ಯಾನ ಮಾಡುವ ಅಗತ್ಯ ಎಷ್ಟೋ ಇದೆ ".

"ಇತಿಹಾಸವನ್ನು ಮರೆತವರು, ಇತಿಹಾಸವನ್ನು ಸೃಷ್ಟಿಸಲಾರರು". "ನನ್ನ ದೃಷ್ಟಿಯಲ್ಲಿ ಪ್ರಜಾ ಪ್ರಭುತ್ವ ಎಂದರೆ ರಕ್ತಪಾತರಹಿತ ವಿಪ್ಲವದ ಮೂಲಕ ಪ್ರಜೆಗಳ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆ ತರುವಂತಹ ಒಂದು ಪದ್ಧತಿ ಮತ್ತು ಅಂತಹ ಸ್ವರೂಪವುಳ್ಳ ಸರ್ಕಾರ"[26] ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಹೋರಾಟದಲ್ಲಿ ಜಾತಿಪದ್ಧತಿಯ ವಿರೋಧಿಯಾಗಿ, ವರ್ಗ ಹೋರಾಟದ ವಿಚಾರಗಳನ್ನು ಮಂಡಿಸಿದ ಅಂಬೇಡ್ಕರ್ ಅವರನ್ನು ಅಸ್ಪೃಶ್ಯರು ಆರಾಧಿಸಿ ಅನ್ಯಾಯ ಮಾಡಬೇಕಿಲ್ಲ. ಅರ್ಥ ಮಾಡಿಕೊಳ್ಳಬೇಕಾಗಿದೆ." ನಮಗೆ ಅಂಬೇಡ್ಕರ್ ಅಮಲು ಬೇಡ, ಅರಿವು ಬೇಕು. ಈ ಅರಿವು ಆದಿ ಮತ್ತು ಅಂತ್ಯವಾಗುವ ಬದಲು ಸಾಮಾಜಿಕ ಶೋಧನೆ ಮತ್ತು ಸಂಘರ್ಷಕ್ಕೆ ಒಂದು ಪ್ರಮುಖ ಸಾಧನವಾಗಬೇಕು"[27] ಎಂಬ ಬರಗೂರ ರಾಮಚಂದ್ರಪ್ಪನವರ ಮಾತು ಮಾದರಿಯಾಗಬೇಕಾಗಿದೆ. ಅಂಬೇಡ್ಕರ್‌ರ ಪ್ರಗತಿ ಪ್ರಯತ್ನದ ಹೋರಾಟವನ್ನು ಇಂದು ಕೂಡ ಮುಂದುವರೆಸುವ ಅಗತ್ಯವಿದೆ. ಏಕೆಂದರೆ ಸಮಾಜ ಇಂದು ಕೂಡ ಹಾಗೆಯೇ ಇದೆ. ಅಂಬೇಡ್ಕರ್ ನಡೆಸಿದ ಪ್ರತಿಭಟನಾತ್ಮಕ ಚಳುವಳಿಗಳು ಇಂದಿಗೂ ಪ್ರಸ್ತುತವಾಗಿವೆ. ಅಂದಿನ ಸಾಮಾಜಿಕ ಪಿಡುಗುಗಳಾದ ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ ಇಂದಿಗೂ ಭಾರತದ ದೊಡ್ಡ ಕಂಟಕಗಳಾಗಿವೆ. ಅಸ್ಪೃಶ್ಯತೆ ರೂಪಾಂತರ ಹೊಂದಿ ಅಂತರ್ಮುಖವಾಗುತ್ತಿದೆ. ವಿದ್ಯಾವಂತರೂ ಬೌದ್ಧಿಕ ದಾಸ್ಯದಲ್ಲಿದ್ದಾರೆ. ಜಾತಿ ಸರ್ವ ರಂಗಗಳಲ್ಲಿ ವ್ಯಾಪಿಸಿ ಕರಾಳತೆಯನ್ನು ಹರಡಿದೆ. ಜ್ಞಾನ ಕೇಂದ್ರಗಳಲ್ಲಿ ಜಾತಿಯ ವಿಷಗಾಳಿ ವ್ಯಾಪಿಸಿದೆ. ಮಾನವ ಕೇಂದ್ರವಾಗಬೇಕಾದ ಚಿಂತನೆಗಳು ಜಾತಿ, ಧರ್ಮ ಕೇಂದ್ರವಾಗುತ್ತಿವೆ. ಧರ್ಮದ ಹೆಸರಿನಲ್ಲಿ ಪ್ರಜಾಪ್ರಭುತ್ವ ಬೆಳೆಯುತ್ತಿದೆ. ಇದನ್ನೇ ಜಾತ್ಯಾತೀತತೆ ಮೌಲ್ಯವೆಂಬಂತೆ ಪ್ರಸಾರ ಮಾಡಲಾಗುತ್ತಿದೆ. ಸ್ವಾತಂತ್ರ್ಯ ಸಮಾನತೆ, ಸಹೋದರತ್ವಗಳ ಅಡಿಗಲ್ಲಾಗಿ ನಿರ್ಮಾಣವಾಗಬೇಕಾಗಿದ್ದ "ಪ್ರಜಾತಂತ್ರ" ಅಲುಗಾಡುತ್ತಿದೆ. ಭಾರತದ ಇಂದಿನ ಸಮಸ್ಯೆಗಳಿಗೆ ಅಂಬೇಡ್ಕರ್ ವಿಚಾರಗಳು ಪರಿಹಾರವಾಗಬಲ್ಲವು. ಅದಕ್ಕೂ ಕೂಡ ಚಳುವಳಿ ಅಗತ್ಯ ಇದೆ.

"ವಿಚಾರವಂತರು ಅಂಬೇಡ್ಕರ್‌ರನ್ನು, ಆಧುನಿಕ ಭಾರತದ ಪ್ರಮುಖ ಪ್ರೊಟೆಸ್ಟಂಟ್ ನಾಯಕರಲ್ಲಿ ಒಬ್ಬರೆಂದು, ಅವರು ಹಿಂದೂಧರ್ಮದ ಪುನರುಜ್ಜೀವನದ ಕಾಲಘಟ್ಟದಲ್ಲಿ ಕಾಣಿಸಿಕೊಂಡು ಅಪೂರ್ವ ಚೇತನ ಎಂದೂ, ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಮಾನವೀಯವಾಗಿ ಪುನರ್ ನಿರ್ಮಾಣ ಮಾಡಲು ಶ್ರಮಿಸಿದ ಅದ್ಭುತಜೀವ ಎಂದು ದಾಖಲಿಸಿರುವುದು ಅರ್ಥಪೂರ್ಣವಾಗಿದೆ",[28] ಅವರು ಹಿಂದೂಸಮಾಜ ವ್ಯವಸ್ಥೆಯನ್ನು ಸರಿಪಡಿಸಲು ನಡೆಸಿದ ಪ್ರಯತ್ನಗಳಿಗೆ ವಿಶೇಷವಾದ ಮಹತ್ವ ಇದೆ. ದಮನಕ್ಕೆ ಒಳಗಾದ ಜನರಿಗೆ ಮಾನವ ಹಕ್ಕುಗಳನ್ನು ಅವರು ನ್ಯಾಯದ ನೆಲೆಯಲ್ಲಿ, ಸಂವಿಧಾನದ ಮೂಲಕ ಒದಗಿಸಲು ಮುಂದಾದ ಕಾರಣಕ್ಕೂ ಅವರ ಕೊಡುಗೆ ಅನನ್ಯವಾದುದು.

4.2 ಅಂಬೇಡ್ಕರ್‌ರವರ ಪ್ರತಿಭಟನಾ ನೆಲೆಗಳು : ಅಂಬೇಡ್ಕರ್ ವಾದ-ತತ್ವ :

ಡಾ।ಬಾಬಾಸಾಹೇಬ ಅಂಬೇಡ್ಕರ್‌ರು 20ನೇ ಶತಮಾನದ ಮಹಾನ್ ಹೋರಾಟಗಾರರು ಜೀವನುದ್ದಕ್ಕೂ ದಮನಕಾರಿ ಹಿಂದೂ ಸಂಸ್ಕೃತಿ, ವ್ಯವಸ್ಥೆ ಮತ್ತು ಸಿದ್ಧಾಂತದ ವಿರುದ್ಧ ಸಮರವನ್ನೇ ಸಾರಿದರು. ಅವರು ಕ್ರಾಂತಿಯ ಸಂಕೇತ, ಯಾವ ಹಿಂದೂಧರ್ಮವು ದಲಿತರನ್ನು 'ಶತಮಾನಗಳ ದಾರಿದ್ರ್ಯ, ಶೋಷಣೆ ಮತ್ತು ದಬ್ಬಾಳಿಕೆಗಳಿಗೆ ಒಳಪಡಿಸಿತ್ತೋ ಅಂಥವರ ಬಾಳಿನಲ್ಲಿ ಆಶಾಕಿರಣವಾಗಿ ಅವರ ಶಕ್ತಿಯಾಗಿ ಭಾರತದ ಇತಿಹಾಸದಲ್ಲಿ ಧೂಮಕೇತುವಿನಂತೆ ಉದಯಿಸಿ, ಅಸ್ಪೃಶ್ಯರ ಬಾಳಿನ ಅರುಣೋದಯವಾಗಿದ್ದರು.

ಅಂಬೇಡ್ಕರ್‌ರ ಹೆಸರು ಶೋಷಕರ ಎದೆಯಲ್ಲಿ ಬಾಂಬ್ ಸಿಡಿಸಿದಂತೆ ಹಾಗೂ ದೀನದಲಿತರ ಮನದಲ್ಲಿ ಕರುಣೆ ಹಾಗೂ ಮಾನವೀಯತೆಯ ಬುಗ್ಗೆಯೊಡೆದಂತೆ. ಅಂಬೇಡ್ಕರ್ ಕೋಪ ಕೇವಲ ವೈಯಕ್ತಿಕವಾಗಿರಲಿಲ್ಲ. ಅದು ಇಡೀ ದಲಿತ ಜನಾಂಗಕ್ಕೆ ಎಸಗಿದ ಘೋರ ಅನ್ಯಾಯ ಮತ್ತು ಬರ್ಬರ ಅತ್ಯಾಚಾರದ ವಿರುದ್ಧ ಎಸಗಿದ ಬಂಡಾಯದ ಪ್ರತಿಭಟನೆಯಾಗಿತ್ತು. ಸಮಾನತೆ ಮತ್ತು ಭ್ರಾತೃತ್ವವನ್ನು ಅಸಮಾನತೆಯ ನಾಡಿನಲ್ಲಿ ಹುಟ್ಟು ಹಾಕುವುದು. ದಲಿತ ಮತ್ತು ಹಿಂದುಳಿದವರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಹಕ್ಕನ್ನು ಕಲ್ಪಿಸಿ ಕೊಟ್ಟು ಅವರಿಗೆ ಪ್ರತಿಭಟನಾತ್ಮಕ ಹೋರಾಟದ ಮೂಲ ಆಶಯವಾಗಿತ್ತು. ಮನುಷ್ಯ ಮನುಷ್ಯರಲ್ಲಿನ ಅಮಾನವೀಯ ವರ್ತನೆ ಮತ್ತು ಬಲಿಷ್ಠರು ಅಬಲರನ್ನು ಶೋಷಿಸುವುದನ್ನು ಅವರು ತೀವ್ರವಾಗಿ ಖಂಡಿಸಿದ್ದರು, ಈ ಕೆಟ್ಟ ಪರಂಪರೆಯ ನಾಶಕ್ಕಾಗಿ ಜೀವನದುದ್ದಕ್ಕೂ ದೊಡ್ಡ ಹೋರಾಟವನ್ನೇ ಮಾಡಿದರು. ದಲಿತೋದ್ಧಾರಕ್ಕೆ ಅವರು ತಮ್ಮನ್ನು ಹಚ್ಚಿಕೊಂಡಿದ್ದ ರೀತಿ ಮನಸ್ಸಿಗೆ ನಾಟುವಂತಾದ್ದು. ಮುಂಬಯಿ ವಿಧಾನಸಭೆಯಲ್ಲೊಮ್ಮೆ ಮಾತನಾಡುತ್ತಾ ಅವರು ತಮ್ಮ ಸಮರ್ಪಣೆಯನ್ನು ಈ ಮಾತಿನಲ್ಲಿ ವಿವರಿಸಿದರು. "ನನ್ನ ಸ್ವಂತ ಹಿತಾಸಕ್ತಿ ಮತ್ತು ರಾಷ್ಟ್ರದ ಹಿತಾಸಕ್ತಿ ಮತ್ತು ಹಿಂದುಳಿದವರ ಹಿತಾಸಕ್ತಿಗೆ ಧಕ್ಕೆಯಾದಾಗ ನಾನು ಹಿಂದುಳಿದವರ ಹಿತಾಸಕ್ತಿಯನ್ನು ಎತ್ತಿ ಹಿಡಿಯುತ್ತೇನೆ. ಒಂದು ರಾಷ್ಟ್ರದ ಏಳಿಗೆ ಅಲ್ಲಿನ ಹಿಂದುಳಿದವರ ಏಳಿಗೆಯಲ್ಲಿ ಅಡಗಿದೆ ಎಂಬುದು ಅವರ ಗಾಢ ನಂಬಿಕೆಯಾಗಿತ್ತೆಂಬುದು ಇದರಿಂದ ನಾವು ಅರಿಯಬಹುದು.

"Tell the slave he is slave, and he will revolt"[29] ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಹೇಳಿದ ಮಾತಿದು. ಸಾವಿರಾರು ವರ್ಷಗಳ ಕಾಲ ಮಲಗಿದ ಜನಾಂಗವನ್ನು ಬಡಿದೆಬ್ಬಿಸುವ ಸಲುವಾಗಿ ಅವರು ಹಮ್ಮಿಕೊಂಡಿದ್ದು "ಶಿಕ್ಷಣ- ಸಂಘಟನೆ- ಹೋರಾಟ".

"My heart breaks to see the pitiable sight of your faces and to hear your sad voices,. You have been growing from time immemorial and yet you are not ashamed to hug your helplessness as an inevitability. Why did you not perish in the prenatal stage instead ? Why do you worsen and sadden the picture of the sorrows, poverty, slavery and burdens of the world with your deplorable, despicable and detestable miserable life ? You had better die and relieve this world if you can not rise to a new life and if you can not rejuvenate yourselves............ If you believe in self - help, which is the best help "[30]

ನಿಮ್ಮ ಈ ದಮನೀಯವಾದ, ದಾರುಣವಾದ ಪರಿಸ್ಥಿತಿಗಳನ್ನು ನಿಮ್ಮಿಂದ ಸುಧಾರಿಸಿಕೊಳ್ಳಲಾಗದಿದ್ದರೆ ನೀವು ಈ ಜಗತ್ತಿನಲ್ಲಿ ಬದುಕಿರುವುದಕ್ಕಿಂತ -ಸಾಯುವುದೇ ಸರಿ ಎಂದು ಹೇಳಿದ ಡಾ। ಅಂಬೇಡ್ಕರ್ ತನ್ನ ಜನಾಂಗದ ಬಿಡುಗಡೆಯೇ ಎಲ್ಲಕ್ಕಿಂತ ಮುಖ್ಯವೆಂದು ತಮ್ಮ ಜೀವನದ ಕಡೆ ಗಳಿಗೆಯವರಿಗೆ ಹೋರಾಡಿದರು. ಅಂಬೇಡ್ಕರ್ ಚಿಂತನೆಯ ಯಶಸ್ಸಿರುವುದು ಅದರ ವಾಸ್ತವಿಕ ಮನೋಧರ್ಮದಲ್ಲಿ, ಅವರ ಚಿಂತನೆಯು ಎಷ್ಟು ವಿಶಾಲವಾಗಿತ್ತೆಂದರೆ ಅದು ವರ್ತಮಾನಕ್ಕೆ ಸಲ್ಲುವ ಮತ್ತು ಭವಿಷ್ಯವನ್ನು ರೂಪಿಸುವ ಚೈತನ್ಯವನ್ನು ಪಡೆದುಕೊಂಡಿತ್ತು. ಆದ್ದರಿಂದಲೇ ಜಾತಿಯ ಪ್ರಶ್ನೆ ಅವರ ಚಿಂತನೆಯ ಬಹುಭಾಗವನ್ನು ಆಕ್ರಮಿಸಿದೆ. ಒಂದೊಂದಾಗಿ ಹಿಂದೂಧರ್ಮದ ಅಮಾನವೀಯ ಸಂಗತಿಗಳನ್ನು ನಾಶಗೊಳಿಸುವ ಮತ್ತು ದಲಿತರ ಆತ್ಮಗೌರವವನ್ನು ಕಾಪಾಡುವ ಕ್ರಿಯಾತ್ಮಕ ಯೋಜನೆಯನ್ನು ಅಂಬೇಡ್ಕರ್ ರೂಪಿಸಿಕೊಂಡರು. ಅಲ್ಲದೇ ಅವರು ಬೌದ್ಧಧರ್ಮವನ್ನು ಒಪ್ಪಿಕೊಂಡಿದ್ದು ಕೂಡಾ ಅವರ ಪ್ರಾಯೋಗಿಕ ಮತಧರ್ಮವನ್ನು

ಸೂಚಿಸುತ್ತದೆ. ಕನ್ನಡ ಮಹತ್ವದ ಚಿಂತಕರಾಗಿದ್ದ ಡಿ.ಆರ್.ನಾಗರಾಜ್ ಅವರು ಹೇಳಿರುವ ಮಾತುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. "ಅಂಬೇಡ್ಕರ್‌ರಿಗೆ ಬೌದ್ಧ ಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ ಸಿಕ್ಕಿದ್ದ ಚಾರಿತ್ರಿಕ ಸಮರ್ಥನೆ, ಚಾರಿತ್ರಿಕವಾದ ನೀತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ಹೆಚ್ಚು ದೊಡ್ಡ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಪ್ರಯತ್ನ ಅದು. ದಲಿತರಿಗೆ ದೊಡ್ಡ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಡುವ ಮಹಾನ್ ಪ್ರಯತ್ನದ ಭಾಗ ಅದು"[31] ಈಗ ನಡೆಯುತ್ತಿರುವ ದಲಿತ ಮತ್ತು ಹಿಂದುಳಿದ ಚಳುವಳಿಗಳು ಅಂಬೇಡ್ಕರ್‌ರು ತಮ್ಮ ಕೊನೆಗಾಲ ಬೌದ್ಧಧರ್ಮದ ಪರವಾದ ನಿಲುವುಗಳನ್ನು ಏಕೆ ತಳೆದಿದ್ದರು ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿ ಬೌದ್ಧಧರ್ಮದ ಮಾನವೀಯ ಅಂಶಗಳನ್ನು, ಬಸವಣ್ಣನವರ ಹೋರಾಟದ ಕೆಚ್ಚನ್ನು ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಕಲ್ಪನೆಯನ್ನು ತಮ್ಮ ಚಳುವಳಿಯ ಜೀವಸತ್ವವನ್ನಾಗಿ ಸ್ವೀಕರಿಸಬೇಕಾದ ಅಗತ್ಯವಿದೆ ಎಂದೆನಿಸುತ್ತದೆ.

ವಿಚಿತ್ರವೆಂದರೆ ಅಂಬೇಡ್ಕರ್ ಅವರನ್ನು ಕೇವಲ ದಲಿತರ ನಾಯಕರೆಂದು ಪ್ರತಿಬಿಂಬಿಸುವ ಚಾರಿತ್ರಿಕ ತಪ್ಪುಗಳಾಗುತ್ತಿವೆ. ಅಂಬೇಡ್ಕರ್ ದಲಿತರು, ಹಿಂದುಳಿವರು, ಮಹಿಳೆಯರು, ಅಲ್ಪಸಂಖ್ಯಾತರು, ಒಟ್ಟಾರೆ ದಮನಿತರ ಪರವಾಗಿ ದನಿಎತ್ತಿದ ಚಿಂತಕ, ಅವರು ರೂಪಿಸಿದ ಸಂವಿಧಾನವನ್ನು ಗಮನಿಸಿದರೆ, ಅವರ ಕಾಳಜಿಗಳು ಎಷ್ಟು ಜೀವಪರವಾಗಿದ್ದವು ಎನ್ನುವುದು ತಿಳಿಯುತ್ತದೆ. ಅಕ್ಷರ, ಅಧಿಕಾರ, ಆತ್ಮಾಭಿಮಾನ ಅವರ ಚಿಂತನೆಯ ಮೂರು ಮುಖ್ಯ ಕೇಂದ್ರಗಳಾಗಿದ್ದವು. ಇವು ಯಾವುದೇ ಒಂದು ವರ್ಗಕ್ಕೆ ದಕ್ಕಬೇಕು ಎಂಬುದಕ್ಕಿಂತ ಭಾರತದ ಎಲ್ಲಾ ತಳಸಮುದಾಯಗಳಿಗೂ ಕೂಡಾ ಇವು ಒದಗಬೇಕೆಂದು ಅವರ ಹಂಬಲವಾಗಿತ್ತು.ಅವರು ಕೇಳಿದ್ದು ಅಂಚಿನ ಸಮುದಾಯದ ಆತ್ಮಗೌರವ. ಈ ಆತ್ಮಗೌರವದಲ್ಲಿಯೇ ಭಾರತದ ಆತ್ಮಗೌರವ ಅಡಗಿದೆ ಎಂದು ಅವರು ಬಲವಾಗಿ ನಂಬಿದ್ದರು. ಅಂಬೇಡ್ಕರ್ ಈ ದೇಶದ ಎಲ್ಲಾ ಶೋಷಿತರ ನಾಯಕರಾಗಿದ್ದರು. ಎಲ್ಲಾ ಶೋಷಿತ ಜನಾಂಗಗಳನ್ನು ಒಂದು ಕಡೆ ಸೇರಿಸಿ, ಬಲಿಷ್ಠ ರಾಜಕೀಯ ಪಕ್ಷ ಕಟ್ಟಿ ಈ ಜನರು ಆಳುವುದನ್ನು ನೋಡಬೇಕೆಂಬುದು ಅವರ ಆಶೆಯಾಗಿದ್ದಿತು. ಅವರು ಕಟ್ಟಿದ"ಇಂಡಿಪೆಂಡೆಟ್ ಲೇಬರ್ ಪಾರ್ಟಿ" ಇದಕ್ಕೊಂದು ನಿದರ್ಶನ. ಆರ್ಥಿಕ-ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ದೀನದಲಿತರಿಗೆ ವಿಶೇಷ ಸವಲತ್ತು, ಮೀಸಲಾತಿ ನೀಡುವ ಬಗ್ಗೆ ಅವರು ಹೇಳಿದ್ದರೂ ಕಾಲಮಿತಿಯನ್ನು ಸೂಚಿಸಿದ್ದಾರೆ. ಆದರೆ ಎಂದಿಗೂ ಅಸಮಾನತೆ ಹೋಗದಂತೆ ಯೋಜನೆ ಜಾರಿಗೊಳಿಸುವ ಸರ್ಕಾರಗಳು ಅಂಬೇಡ್ಕರ್‌ರ ಆಶೋತ್ತರಗಳನ್ನು ಮತ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಜಾತಿ ಮತದ ವಿರುದ್ಧ ಸಮರ ಸಾರಿದ ಅಂಬೇಡ್ಕರ್ ಮತ್ತೊಂದು ರೀತಿಯಲ್ಲಿ ಮತ ರಾಜಕೀಯಕ್ಕೆ, ಸ್ವಾರ್ಥ ರಾಜಕಾರಣಕ್ಕೆ ದಾಳವಾಗುತ್ತಿರುವುದು ಮಾತ್ರ ಇಂದಿನ ಮಹಾನ್ ವ್ಯಂಗ್ಯಗಳಲ್ಲಿ ಒಂದು.

"ಎಲ್ಲಿಯವರೆಗೆ ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಸಮಾನತೆಗಳಿರುವುದಿಲ್ಲವೋ ಅಲ್ಲಿಯತನಕ ರಾಜಕೀಯ ಸ್ಥಿರತೆ ಇರುವುದಿಲ್ಲ. ಸಾಮಾಜಿಕ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಸಮಾನತೆ ಉಂಟಾಗದೇ ಹೋದರೆ ವಿಪ್ಲವವಾಗುವುದು ಖಂಡಿತ". ಡಾ। ಅಂಬೇಡ್ಕರ್‌ರ ಈ ಮಾತು ಭಾರತಕ್ಕೆ ಅಂದು ಇಂದಿಗೂ ಅನ್ವಯವಾಗುತ್ತದೆ. ಸಾಮಾಜಿಕ-ಸಾಮರಸ್ಯ ಮಾತ್ರ ಭಾರತದ ರಾಜಕೀಯ ಸ್ವಾಯತ್ತತೆಗೆ ಅಖಂಡತೆಗೆ ಆರ್ಥಿಕ ಪ್ರಗತಿಗೆ ಸರ್ವಾಂಗೀಣ ಅಭ್ಯುದಯಕ್ಕೆ ದೃಢವಾದ ಆಸ್ತಿಭಾರವನ್ನು ಒದಗಿಸಬಲ್ಲದು ಎಂದು ಅವರು ಬಲವಾಗಿ ನಂಬಿದ್ದರು. ಸಮಾಜದ ಸಮಗ್ರ ಉನ್ನತಿಗೆ ಭಾರತದ ಜನಸಂಖ್ಯೆಯ ಐದರಲ್ಲೊಂದು ಭಾಗದಷ್ಟಿರುವ, ಹಿಂದಿನಿಂದ ಅಸ್ಪೃಶ್ಯರೆಂದು ಪರಿಗಣಿತರಾಗಿರುವ ಕೆಳವರ್ಗದವರಿಗೆ ವಿಶಾಲ

ಸ್ಥಾನಮಾನ ದೊರೆತು ಅವರು ಶಿಕ್ಷಣ, ಉದ್ಯೋಗ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಹೊಂದುವ ಅವಶ್ಯಕತೆಗಳನ್ನು ಒತ್ತಿ ಹೇಳಿದರು. ತನ್ನ ಯಾವುದೇ ಮೂಲಭೂತ ಹಕ್ಕಗಳನ್ನು ಕುರಿತು ಯೋಚಿಸುವಾಗ ಪ್ರತಿಯೊಬ್ಬ ಭಾರತೀಯನೂ ಅಂಬೇಡ್ಕರ್‌ರ ಹೆಸರನ್ನು ಕೃತಜ್ಞತೆಯಿಂದ ನೆನೆಯಬೇಕು.

"ಇಂದು ಆಚರಣೆಯಲ್ಲಿರುವ ನಮ್ಮ ಧರ್ಮದಲ್ಲಿ ದೇವರೂ ಇಲ್ಲ, ನೈತಿಕತೆಯೇ ಇಲ್ಲಿ ಜನರ ಮನಸ್ಸು ಅತ್ಯಂತ ಹದಗೆಟ್ಟಿರುವ ಸ್ಥಿತಿ ಇದು. ಈ ಸ್ಥಿತಿಯನ್ನು ಹೋಗಲಾಡಿಸಿ ಧರ್ಮದಶುದ್ಧ ಉದಾತ್ತ ರೂಪವನ್ನು ಪುನಃ ಸ್ಥಾಪಿಸುವುದು ಮುಂದಿನ ಪೀಳಿಗೆಯ ಕೆಲಸ" ಎಂದು ಹಿಂದೂಧರ್ಮದ ಬಗೆಗೆ ಚಿಂತನೆ ನಡೆಸಿದ ಅವರು 1933ರ ಫೆಬ್ರುವರಿ 12ರಂದು ಗಾಂಧೀಜಿಯವರಿಗೆ ಹೀಗೆ ಪತ್ರ ಬರೆದರು. "ಸಾಮಾಜಿಕ ಸಮಾನತೆಯನ್ನು ಅಂಗೀಕರಿಸಿದ್ದಲ್ಲಿ ಮಾತ್ರ ಹಿಂದೂಧರ್ಮವನ್ನು ಅಸ್ಪೃಶ್ಯ ಜಾತಿಯವರು ಒಪ್ಪಲಾದೀತು. ಇದು ಅಸಾಧ್ಯವಾದಲ್ಲಿ ದೇವಾಲಯ ಪ್ರದೇಶದ ಮಾತಿರಲಿ ಹಿಂದೂಧರ್ಮವನ್ನೇ ನಿಮ್ನಜಾತಿಯವರು ತಿರಸ್ಕರಿಸಬೇಕಾಗುತ್ತದೆ". ಅಂದು ಅಂಬೇಡ್ಕರ್‌ರು ಹೇಳಿದ್ದು ಇಂದು ಸತ್ಯವಾಗುತ್ತಿದೆ. ನಮ್ಮಲ್ಲಿ ಸಾಮಾಜಿಕ ಅಸಮಾನತೆಯ ಜಾತಿವ್ಯವಸ್ಥೆ ಮುಂದುವರೆದಿದ್ದು, ಇದನ್ನು ಸಹಿಸದ ಅನೇಕರು ಬೌದ್ಧಧರ್ಮ, ಕ್ರೈಸ್ತ ಧರ್ಮಗಳನ್ನು ಸ್ವೀಕರಿಸುತ್ತಿರುವುದು ಇಂದಿನ ಕಟುಸತ್ಯ. ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಹೋರಾಟಕ್ಕೆ ಪ್ರೇರಕಶಕ್ತಿ, ಅಸ್ಪೃಶ್ಯತೆ, ಅಸಮಾನತೆ, ಶೋಷಣೆ ಇವುಗಳಿಗೆ ಆಶ್ರಯ ಹಿಂದೂಧರ್ಮ, ವರ್ಣವ್ಯವಸ್ಥೆ, ಜಾತಿ, ತಾರತಮ್ಯ- ಇವುಗಳೆಲ್ಲವನ್ನೂ ಭಾರತದ ಸಮಾಜವನ್ನು, ಚರಿತ್ರೆಯನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ಸೈದ್ಧಾಂತಿಕವಾಗಿವಿವರಿಸಿದ ಕೆಲವೇ ಕೆಲವು ಸಮಾಜ ಶಾಸ್ತ್ರಜ್ಞರಲ್ಲಿ ಅಂಬೇಡ್ಕರ್ ಅಗ್ರಗಣ್ಯರು, ಅಷ್ಟೇ ಅಲ್ಲ ಧರ್ಮಮೀಮಾಂಸಕರು, ರಾಜಕಾರಣಿಯಾಗಿ, ಕಾನೂನು ತಜ್ಞರಾಗಿ, ಚಿಂತಕರಾಗಿ ಪ್ರಸಿದ್ಧರಾಗಿದ್ದಾರೆ.

ಅಂಬೇಡ್ಕರ್‌ರವರ ಹಲವು ಸಂಘಟನೆಗಳಲ್ಲಿ ನಮ್ಮೆದುರಿಗಿರುವ ಅವರ ಬರಹಗಳಲ್ಲಿ ಈ ದೇಶದ ಶೋಷಿತರ ದುಃಖ-ದುಮ್ಮಾನಗಳು ಮತ್ತು ಅವುಗಳಿಗೆ ತಕ್ಕುದಾದ ಪರಿಹಾರೋಪಾಯಗಳೇ ತುಂಬಿಕೊಂಡಿವೆ. ತಮ್ಮ ಜೀವಮಾನವಿಡೀ ಅಂಬೇಡ್ಕರ್ ಈ ದೇಶದ ಅಸಹಾಯಕರ, ಶೋಷಿತರ ಕುರಿತು ಚಿಂತಿಸಿದ್ದಾರೆ. ಆದಕ್ಕಾಗಿ ಇಡೀ ಜಗತ್ತಿನ ತತ್ವಶಾಸ್ತ್ರವನ್ನು ಅಂಬೇಡ್ಕರ್ ಅಧ್ಯಯನ ಮಾಡುತ್ತಾರೆ. ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಅವರ ಇಡೀ ಬದುಕೇ ಹೋರಾಟಮಯವಾಗಿತ್ತು. ಅವರ ಬರಹಗಳಲ್ಲಿ ನಾವಿದನ್ನು ಅರಿಯಬಹುದಾಗಿದೆ. ಅವರ ಇಡೀ ಚಿಂತನೆಯಲ್ಲಿ ಹುಟ್ಟಿನ ಕಾರಣದಿಂದ ಎಲ್ಲಬಗೆಯ ಹಕ್ಕು-ಅಧಿಕಾರಗಳಿಂದ ವಂಚಿತವಾಗಿರುವ ಸಮುದಾಯಗಳ ಕುರಿತು ತೀವ್ರ ಕಾಳಜಿ ವ್ಯಕ್ತವಾಗಿದೆ. ಭಾತರದ ಸಮಾಜ ಶತಮಾನಗಳಿಂದ ಸಾಕಿಕೊಂಡು ಬಂದ ಹಿಂಸೆ ಮತ್ತು ಅಮಾನವೀಯ ಕ್ರೌರ್ಯಗಳ ಕುರಿತು ಉಗ್ರ ಆಕ್ರೋಶ ಮಡುಗಟ್ಟಿದೆ. ಸ್ವತಃ ಅಸ್ಪೃಶ್ಯರಾಗಿದ್ದ ಕಾರಣಕ್ಕೋ ಅಥವಾ ತಮ್ಮ ಸಮಕಾಲೀನ ಬದುಕನ್ನು ಗ್ರಹಿಸುವ ಸೂಕ್ಷ್ಮಜ್ಞನಾಗಿದ್ದಕ್ಕೋ ಏನೋ ಅಂಬೇಡ್ಕರ್ ಮಡುಗಟ್ಟಿದ ಅಸಹಾಯಕ ಪ್ರತಿರೋಧಗಳ ಸಾಕ್ಷಿ ಪ್ರಜ್ಞೆಯಂತೆ ಕಂಡು ಬರುತ್ತದೆ. ತಣ್ಣಗಿನ ಕ್ರೌರ್ಯವನ್ನು ಇಡಿಯಾಗಿ ಧ್ವಂಸ ಮಾಡಿಬಿಡುವ ಜ್ವಾಲಾಮುಖಿಯಂತೆ ಅಂಬೇಡ್ಕರ್ ಗೋಚರಿಸುತ್ತಾರೆ. ಹಿಂದೂಧರ್ಮದ ಚಾರಿತ್ರಿಕ ಕ್ರೌರ್ಯವನ್ನು ತಕ್ಕ ಪುರಾವೆಗಳ ಮೂಲಕ ನಮ್ಮೆದುರಿಗಿಡುತ್ತಾರೆ. ಅವರ ಇಡೀ ಬರಹಗಳಲ್ಲಿ ಅವರು ಹಿಂದೂಧರ್ಮದ ಕುರಿತು ಎತ್ತುವ ಪ್ರಖರ ಪ್ರಶ್ನೆಗಳಿಗೆ ಪ್ರಾಯಶಃ ಯಾವ ಹಿಂದೂ ಮತಾವಲಂಬಿಯೂ ಉತ್ತರಿಸಲಾರ. ಶೋಷಕವರ್ಗ, ಶೋಷಣೆಗೆ ಒಳಗಾದ ವರ್ಗವನ್ನು ಸೈದ್ಧಾಂತಿಕವಾಗಿ ವಿವರಿಸಿದವರು ಅಂಬೇಡ್ಕರ್ ತಮ್ಮ

ಪ್ರತಿಭಟನಾತ್ಮಕ ಹೋರಾಟವನ್ನು ಈ ಹಿನ್ನೆಲೆಯಲ್ಲಿ ರೂಪಿಸಿ ಪರಿಹಾರ ಕಂಡುಕೊಳ್ಳಲು ಅವರು ಪ್ರಯತ್ನಿಸಿದರು.

ಧರ್ಮವೆನ್ನುವುದು ಅಲೌಕಿಕ ಆಚರಣೆಗಳ, ಅರ್ಥವಾಗದ ಶ್ಲೋಕ ನುಡಿಗಟ್ಟುಗಳಿಂದ ಕೂಡಿದ, ಶೂನ್ಯಕ್ಕೆ ಸಂಬಂಧಿಸಿದ ವಿಷಯದಲ್ಲಿ ಧರ್ಮ ಮನುಷ್ಯನಿಗೆ ಸಂಬಂಧಿಸಿದ್ದು. ಅದು ಮನುಷ್ಯನ ಕಲ್ಯಾಣಕ್ಕೆ ಮತ್ತು ಮಾನವತೆಯ ನಿರ್ಮಾಣಕ್ಕೆ ಸಂಬಂಧಿಸಿದ್ದು ಎಂಬುದು ಅಂಬೇಡ್ಕರ್‌ವಾದದ ಬಹಳ ಮುಖ್ಯ ತಿರುಳುಗಳಲ್ಲೊಂದು. ಅದಕ್ಕೆ ಅಂಬೇಡ್ಕರ್" ಧರ್ಮವನ್ನು ಸ್ವೀಕರಿಸಿ ಬದುಕುವ ವ್ಯಕ್ತಿಗೆ ಧರ್ಮದಿಂದ ಸಮಾಜಕ್ಕೆ ಎಷ್ಟರ ಮಟ್ಟಿಗೆ ಕಲ್ಯಾಣ ಸಾಧನೆಯಾಗಿದೆ ಎಂದು ಪ್ರಶ್ನಿಸುವ ಹಕ್ಕು ಇರಬೇಕಾದದ್ದು ಅಗತ್ಯ"[32] ಎನ್ನುತ್ತಾರೆ. ಪ್ರಾಯಶಃ ಆಧುನಿಕ ಜಗತ್ತಿನಲ್ಲಿ ಸದ್ದಿಲ್ಲದೆ ಹಿಂಸೆಗೆ ಕಾರಣವಾಗುವ ಎಲ್ಲ ಧರ್ಮಗಳಿಗೂ ಅಂಬೇಡ್ಕರ ಕೊಡುವ ಛಡಿಏಟು ಇದು. ಸಾವಿರಾರು ವರ್ಷಗಳ ವೈಚಾರಿಕ ನಡೆಗೆ ಇದೆ ಎಂದುಕೊಳ್ಳುವ ಧರ್ಮವೊಂದನ್ನು ಎದುರಿಗೆನಿಲ್ಲಿಸಿ ಗಟ್ಟಿದನಿಯಲ್ಲಿ ಪ್ರಶ್ನೆಮಾಡುತ್ತ ನಿರುತ್ತರಗೊಳಿಸಿದವರು ಸಹ ವಿರಳವೆ. ಧರ್ಮ ಮತ್ತು ಪರಂಪರೆಯ ಕುರಿತ ಈ ಬಗೆಯ ವೈಚಾರಿಕ ಪ್ರತಿರೋಧ ಅಂಬೇಡ್ಕರ್ ವಾದದ ಬಹುದೊಡ್ಡ ಹೆಚ್ಚುಗಾರಿಕೆ ಹೇಗೋ ಅದರ ಮಿತಿಯೂ ಹೌದು. ಹೆಚ್ಚುಗಾರಿಕೆ ಯಾವುದೆಂದರೆ, ಪರಂಪರೆಯೊಂದರ ಭಾಗವಾಗಿ ಬದುಕುತ್ತಲೇ ಅದರ ಚಾರಿತ್ರಿಕ ಅನ್ಯಾಯಗಳ ವಿರುದ್ಧ ಬಂಡೆದ್ದು ಸೆಣೆಸಾಡಲು ಸಿದ್ಧವಾಗುವುದು. ಅಂಬೇಡ್ಕರ್‌ರವರ ಬೌದ್ಧಧರ್ಮದ ಆಯ್ಕೆಯು ಅವರ ಚಾರಿತ್ರಿಕ ಮತ್ತು ಸಮಕಾಲೀನ ಹಿಂದೂಧರ್ಮದ ಸಮರ್ಥಕರನ್ನು ಸೈದ್ಧಾಂತಿಕವಾಗಿ ಮಣಿಸಿತು. "ಅಂಬೇಡ್ಕರ್‌ಗೆ ಸಹಜವಾಗಿಯೇ ಮೊದಲ ಶತ್ರುವಾಗಿದ್ದು, ಹಿಂದೂಧರ್ಮ ಅನಂತರ ಈ ಧರ್ಮವನ್ನು ರಾಜಕೀಯವಾಗಿ ಪೋಷಿಸಲು ಹೆಣಗುತ್ತಿದ್ದ ಕಾಂಗ್ರೆಸ್ ಪಕ್ಷ ಮತ್ತು ಈ ಧರ್ಮಕ್ಕೆ ಹಸುವಿನಮುಖವಾಡ ತೊಡಿಸಿ ಸೈದ್ಧಾಂತಿಕವಾಗಿ ಸಮರ್ಥಿಸಲು ಯತ್ನಿಸುತ್ತಿದ್ದ ಗಾಂಧೀಜಿಯವರು, ಅಂಬೇಡ್ಕರ್ ಈ ಮೂರು ಶತ್ರುಗಳನ್ನು ತಮ್ಮ ಜೀವಮಾನವೀಡಿ ಪ್ರತಿರೋಧಿಸುತ್ತಲೇ ಬಂದರು".[33] ಅವರ ಬಹುಪಾಲು ಬರಹ-ಭಾಷಣಗಳಲ್ಲಿ ಈ ಮೂರು ಸಂಗತಿಗಳೇ ಆಕ್ರಮಿಸಿಕೊಂಡಿವೆ. ಇವುಗಳ ವಿರುದ್ಧ ಪ್ರತಿಭಟಿಸುತ್ತ ಪರಿಹಾರ ಕಾಣಲು ಪ್ರಯತ್ನಿಸಿದರು.

ಅಂಬೇಡ್ಕರ್‌ರವರ ಪ್ರತಿಭಟನಾ ಹೋರಾಟ ಏನನ್ನು ಸಾಧಿಸಿತು? ಎಂದು ಪ್ರಶ್ನಿಸಿಕೊಂಡಾಗ- ಸ್ವಾಭಿಮಾನ ಮತ್ತು ಸ್ವಾವಲಂಬನೆ, ಮಾನವತೆಯ ಆಗ್ರಹ, ಬದುಕಿನಲ್ಲಿ ದೈನ್ಯತೆಗೆ ಆಸ್ಪದ ಕೊಡದಿರುವುದು, ಭಾರತೀಯರೆಂದು ಎಲ್ಲ ಕ್ಷೇತ್ರಗಳಲ್ಲಿ ದೊರೆಯಬೇಕಾದ ಅಧಿಕಾರಗಳಿಗಾಗಿ ಆಗ್ರಹಪಡಿಸುವುದು, ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳುವುದು, ಅವಕಾಶ ಸಿಕ್ಕ ಹಾಗೆ ಸ್ವಉತ್ಕರ್ಷ ಸಾಧಿಸುವುದು, ಹಿಂದೂಗಳೊಡನೆ ಸಾಮಾಜಿಕ-ಶೈಕ್ಷಣಿಕ ಹಾಗೂಆರ್ಥಿಕ ಸಮಾನತೆಗಾಗಿ ಹೋರಾಡುವುದು ಇವೆಲ್ಲ ಅಂಬೇಡ್ಕರ್‌ರ ಪ್ರತಿಭಟನಾತ್ಮಕ ಹೋರಾಟದ ಮುಖ್ಯಾಂಶಗಳು. ತ್ಯಾಗ ಮತ್ತು ಸಂಘರ್ಷವಿಲ್ಲದೆ ಸಾರ್ಥಕತೆ ಪ್ರಾಪ್ತಿಯಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು. "ಹಿಂದೂ ಸಮಾಜದೊಳಗಿನ ದಮನಶೀಲ ಪ್ರವೃತ್ತಿಯ ವಿರುದ್ಧದ ಬಂಡಾಯದ ಪ್ರತೀಕ" ಎಂದು ನೆಹರೂರವರು ಅಂಬೇಡ್ಕರ್‌ರವರನ್ನು ಕುರಿತು ಮಾರ್ಮಿಕವಾಗಿ ಹೇಳಿದ್ದಾರೆ. ಹೋರಾಟದ ಬದುಕು ಅವರದಾಗಿತ್ತು.ಕೊನೆಯವರೆಗೂ ಸಂಘರ್ಷಶೀಲರಾಗಿದ್ದು, ಹೊಸಬದುಕಿಗಾಗಿ ಹಾತೊರೆಯುತ್ತಿದ್ದರು ಅಂಬೇಡ್ಕರ್. ಅಂಬೇಡ್ಕರ್‌ರವರು ದಲಿತರ ಸ್ವಾಭಿಮಾನದ ಸಂಕೇತ. ಭಾರತದ ಸಾಮಾಜಿಕ ಬದುಕನ್ನು ಆಳವಾಗಿ ಅಧ್ಯಯನ ಮಾಡಿ, ಸ್ವತಃ ಅನುಭವಿಸಿ, ಆ ನೋವಿನ

ಕಾರಣಗಳಿಂದಲೇ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳಲ್ಲಿ ಪ್ರತಿಭಟನಾತ್ಮಕ ಹೋರಾಟವನ್ನು ಹುಟ್ಟು ಹಾಕಿದರು. ಹಿಂದೂಧರ್ಮದ ಸಾಮಾಜಿಕ ವಿಷಮಸ್ಥಿತಿಗೆ ಬ್ರಾಹ್ಮಣೀಕರಣವೇ ಕಾರಣವೆಂದು ವಿಶ್ಲೇಷಿಸಿದರು. ಅದನ್ನು ಈ ಕೆಳಗಿನಂತೆ ಗುರುತಿಸಿದರು.

1. ಅಸಮಾನತೆಯನ್ನು ನಿರಂತರವಾಗಿ ಪೋಷಿಸಿಕೊಂಡು ಬರುವುದು.
2. ಅಸ್ಪೃಶ್ಯರನ್ನು ಮತ್ತು ಶೂದ್ರರನ್ನು ಸಂಪೂರ್ಣವಾಗಿ ನಿರಾಯುಧರನ್ನಾಗಿಸುವುದು.
3. ಅಧಿಕಾರ,ಸ್ಥಾನಗಳನ್ನು ಶೂದ್ರರು ಮತ್ತು ಅಸ್ಪೃಶ್ಯರು ಹೊಂದದಂತೆ ಷಡ್ಯಂತ್ರಗಳನ್ನು ರಚಿಸುವುದು.
4. ಶೂದ್ರರು ಮತ್ತು ಅಸ್ಪೃಶ್ಯರಿಗೆ ಶಿಕ್ಷಣ ದೊರೆಯದಂತೆ ನಿಷೇಧ ಹೇರುವುದು.
5. ಶೂದ್ರರಿಗೆ ಮತ್ತು ಅಸ್ಪೃಶ್ಯರಿಗೆ ಆಸ್ತಿ ನಿರಾಕರಣೆ ಮಾಡುವುದು.
6. ಮಹಿಳೆಯರಿಗೆ ಸ್ವಾತಂತ್ರ್ಯ ನಿರಾಕರಿಸುವುದು.[34]

ಅಂಬೇಡ್ಕರ್‌ರವರ ಪ್ರಕಾರ ಈ ಎಲ್ಲ ವಿಧಗಳಿಂದಲೂ ಅಸಮಾನತೆಯನ್ನು ಸಾಂಸ್ಥೀಕರಿಸುವುದೇ 'ಬ್ರಾಹ್ಮಿನಿಸಂ'ನ ಅಧಿಕೃತ ತತ್ವವಾಗಿದೆ. ಇದನ್ನು ತಲಸ್ಪರ್ಶಿಯಾಗಿ ವಿರೋಧಿಸಿದ ಅವರು ದಲಿತ ಏಳಿಗೆಗಾಗಿ ಸ್ವ-ಸುಧಾರಣೆ, ಸ್ವ-ಪ್ರಗತಿ, ಸ್ವಾವಲಂಬನೆ, ಸ್ವಾಭಿಮಾನ, ಸ್ವಪ್ರಯತ್ನ ಇವನ್ನು ಬಲವಾಗಿ ಪ್ರತಿಪಾದಿಸಿದರು. ತಮ್ಮ ಹೋರಾಟದ ಮೂಲ ಮಂತ್ರಗಳನ್ನಾಗಿ ಶಿಕ್ಷಣ, ಸಂಘಟನೆ, ಹೋರಾಟ ಎಂದು ಘೋಷಿಸಿದರು. ಇವುಗಳೇ ಅಂಬೇಡ್ಕರ್‌ವಾದದ ಮೂಲ ಆಶಯಗಳು ಕೂಡ ಆಗಿವೆ. ಶೋಷಣಾರಹಿತ ಸಮಾಜ ನಿರ್ಮಾಣಕ್ಕೆ ಅಂಬೇಡ್ಕರ್ ಹೇಳಿದ ಮಾತು ಸದಾ ಮನನೀಯವಾದದ್ದು "ಶ್ರೀಮಂತರ ಸಿರಿತನ ದರಿದ್ರರ ಬಡತನದಲ್ಲಿದೆ. ಇದನ್ನು ನಿವಾರಿಸಬೇಕಾದರೆ ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಈ ಸಂಘಟನೆಯಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಲು ಸಾಧ್ಯ. ಹಾಗಾದಾಗ ಎಲ್ಲರ ಅಗತ್ಯತೆಗಳನ್ನು ಪೂರೈಸಬಹುದು. ಸಂಪತ್ತನ್ನು ಉತ್ಪಾದಿಸುವವರು, ಹಸಿವೆಯಿಂದ ಸಾಯಬೇಕಾಗಿಲ್ಲ"[35] ಅಂಬೇಡ್ಕರ್ ಅಸಮಾನತೆಯ ನಿವಾರಣೆಗೆ ಹೋರಾಟ ಮಾಡಬೇಕು ಎನ್ನುವುದರ ಜೊತೆಗೆ ಸಮಸ್ಯೆ ನಿವಾರಣೆಗೆ ಪರಿಹಾರ ನೀಡಿರುವುದು ವಿಶೇಷ ಹೀಗಾಗಿ ಅವರ ವಿಚಾರಗಳು ಇಂದು ಸಹಿತ ಪ್ರಸ್ತುತವೆನಿಸುತ್ತವೆ.

4.3 ವರ್ಣ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ :

ಗಾಂಧೀಜಿ ಅಸ್ಪೃಶ್ಯತೆಯ ನಿವಾರಣೆಗಾಗಿ ಕಾರ್ಯಕ್ರಮ ಹೊಂದಿದ್ದರೂ ಕೂಡ ಅವರು ಚಾತುರ್ವರ್ಣವನ್ನು ಎತ್ತಿ ಹಿಡಿಯುತ್ತಿದ್ದರು. ಆದ್ದರಿಂದ ಅಂಬೇಡ್ಕರ್ "ಒಂದು ವರ್ಗವು ವಿದ್ಯೆಯನ್ನು ಕಲಿಯಲಿ, ಒಂದು ವರ್ಗ ಶಸ್ತ್ರ ಹಿಡಿಯಲಿ, ಒಂದು ವರ್ಗ ವ್ಯಾಪಾರ ಮಾಡಲಿ, ಉಳಿದೊಂದು ವರ್ಗ ಬರಿಯ ಸೇವೆಯನ್ನು ಮಾಡಿಕೊಂಡಿರಲಿ ಎಂಬ ಧರ್ಮ ನನಗೆ ಒಪ್ಪಿಗೆಯಾಗದು. ಒಂದು ವರ್ಗಕ್ಕೆ (ಶೂದ್ರ) ವಿದ್ಯೆಯನ್ನೂ, ಸಂಪತ್ತುಗಳಿಕೆಯ ಹಕ್ಕನ್ನು, ಶಸ್ತ್ರವನ್ನು ನಿರ್ಬಂಧಿಸುವಧರ್ಮ ಧರ್ಮವಲ್ಲ, ಅದೊಂದುಹುಚ್ಚು[36] ಎಂದು ಅಬ್ಬರಿಸಿದರು. ಜಾತಿ ವರ್ಣಗಳ ಕುರಿತು ಇರುವ ತಾರತಮ್ಯ ಭಾವವನ್ನು ಮರೆಯಲು ಬಯಸಿದ್ದರು. ಆ ಕಾರಣಕ್ಕಾಗೇ ಅವರು ಮಹಾಡದ ಸಾರ್ವಜನಿಕ ಕೆರೆಯಿಂದ ಅಸ್ಪೃಶ್ಯರು ನೀರನ್ನು ತಾವೇ ತೆಗೆದು ಕುಡಿಯುವ, ನಾಸಿಕ, ದೇವಸ್ಥಾನದ ಪ್ರವೇಶದ, ಮನುಧರ್ಮ ಶಾಸ್ತ್ರವನ್ನು ಸುಡುವ

ಸತ್ಯಾಗ್ರಹವನ್ನು ಮಾಡಿದರು. ಇವು ದೇಶದಲ್ಲೇ ತಲ್ಲಣ ಉಂಟು ಮಾಡಿದವು. ಅಂಬೇಡ್ಕರ್ ತಮ್ಮ "ಮೂಕನಾಯಕ" ಪತ್ರಿಕೆ ಮತ್ತು "ಬಹಿಷ್ಕೃತ ಹಿತಕಾರಣಿ" ವೇದಿಕೆಯ ಮೂಲಕ ಹೋರಾಟ ನಡೆಸಿದರು.

ಭಾರತೀಯರಾದ ನಾವು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಹಾಗೂ ಆರ್ಥಿಕ-ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಸಂವಿಧಾನವನ್ನು ಒಪ್ಪಿಕೊಂಡು ಐದು ದಶಕಗಳೇ ಕಳೆದಿವೆ. ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವು ನಮ್ಮದೆಂದು ಎಷ್ಟೇ ಅರಚಿಕೊಂಡರೂ, ವರ್ಣಾಶ್ರಮ ವ್ಯವಸ್ಥೆಯ ಬಂಧನದಿಂದ ಭಾರತೀಯ ಸಮಾಜವು ಮುಕ್ತವಾಗಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಮನುಷ್ಯಮನುಷ್ಯರ ನಡುವೆ ಅಸಮಾನತೆಯನ್ನು ಬಿತ್ತಿರುವ ವರ್ಣಾಶ್ರಮ ವ್ಯವಸ್ಥೆಯು ಆದಿಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಲಾಗಿದೆ. ಪುರುಷಸೂಕ್ತವು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲೆಂದೇ ಸೃಷ್ಟಿಸಿಕೊಂಡ ಬ್ರಾಹ್ಮಣರ ಚಿತಾವಣೆ, ಕುತಂತ್ರವೆಂದು ಅಂಬೇಡ್ಕರ್ ಕಟುವಾಗಿ ಟೀಕಿಸಿದ್ದಾರೆ. "ಪುರುಷಸೂಕ್ತ" ಚಾತುರ್ವರ್ಣವನ್ನು "ಪವಿತ್ರ ನಿಯಮ ಹಾಗೂ ದೈವಿಕ ಕಟ್ಟಳೆ"ಯನ್ನಾಗಿಯೂ ಮಾಡಿದೆ. ಪುರುಷನ ಬಾಯಿಯಾಗಿ ಬ್ರಾಹ್ಮಣ, ಕೈಗಳಾಗಿ ಕ್ಷತ್ರಿಯ, ತೊಡೆಗಳಾಗಿ ವೈಶ್ಯ ಹಾಗೂ ಶೂದ್ರರನ್ನು ಪಾದವನ್ನಾಗಿ ವರ್ಣಿಸಲಾಗಿದೆ. "ಪುರುಷ ಸೂಕ್ತ" ಇಡೀ ವಿಶ್ವದ ಸೃಷ್ಟಿ ಶಾಸ್ತ್ರವೆಂದು ಹೇಳಲಾಗಿದೆ. 11 ಮತ್ತು 12 ನೇ ಚರಣಗಳು ನಿರ್ದಿಷ್ಟ ಸಾಮಾಜಿಕ ರಚನೆಗೆ ಅವಶ್ಯವಾದ ದೈನಿಕ ಆಜ್ಞೆಯನ್ನು ಒಳಗೊಂಡಿವೆ. ಈ ಸಾಮಾಜಿಕ ರಚನೆಯನ್ನು ಚಾತುರ್ವರ್ಣವೆಂದು ಹೇಳಿದ ಅಂಬೇಡ್ಕರ್‌ರು "ಪುರುಷಸೂಕ್ತವು ನಿರ್ದಿಷ್ಟಪಡಿಸಿದ ಸಾಮಾಜಿಕ ರಚನೆಯನ್ನು ಗೌತಮಬುದ್ಧನ ಹೊರತು, ಬೇರಾರು ಪ್ರಶ್ನಿಸಿಲ್ಲ" ಎಂದರು. ಪುರುಷಸೂಕ್ತದ ಕಲ್ಪನೆಯನ್ನು ಅನುಶಾಸನವೇ ವೇದವೆಂದು ಒತ್ತಿಹೇಳಿದ ಮನು, ಚಾತುರ್ವರ್ಣಕ್ಕೆ ದೈವೀಕತೆಯನ್ನು ಆರೋಪಿಸಿದನು.

ಅಂಬೇಡ್ಕರ್ ಪ್ರಮುಖ ಸಾಮಾಜಿಕ, ರಾಜಕೀಯ ಚಿಂತಕರು, ಶೋಷಿತ ವರ್ಗದಿಂದ ಹುಟ್ಟಿ ಬಂದ ಅವರು ತಮ್ಮ ಅನುಭವಗಳಿಂದ, ಅಧ್ಯಯನಗಳಿಂದ ತಮ್ಮ ಜ್ಞಾನವನ್ನು ವೃದ್ಧಿಪಡಿಸಿಕೊಂಡರು. ತಮ್ಮ ಬದುಕಿನುದ್ದಕ್ಕೂ ಅವರು ಸೈದ್ಧಾಂತಿಕವಾದ-ಪ್ರತಿಭಟನಾತ್ಮಕವಾದ ಹೋರಾಟಗಳನ್ನು ನಿರಂತರವಾಗಿ ಮಾಡುತ್ತ ಬಂದರು. ಹೀಗಾಗಿ ಅವರು ಭಾರತೀಯ ಸಮಾಜದ ಚಾತುರ್ವರ್ಣ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ವರ್ಣದ ನೆಲೆಯನ್ನು ಕುರಿತು ಚಿಂತಿಸಿದ್ದಾರೆ. ಮೂಲಭೂತವಾಗಿ ಚಾತುರ್ವರ್ಣ ವ್ಯವಸ್ಥೆಯಿಂದಾಗಿಯೇ ಶೂದ್ರ -ಅಸ್ಪಶ್ಯ ವ್ಯವಸ್ಥೆ ಬಂದವೆಂದು ಭಾರತದಲ್ಲಿ ನೂರೆಂಟು ಜಾತಿ-ಉಪಜಾತಿ ಪಂಗಡ-ಒಳಪಂಗಡಗಳು ಸೃಷ್ಟಿಯಾದವೆಂದು ಅಂಬೇಡ್ಕರ್‌ರು ಉಲ್ಲೇಖಿಸಿದ್ದಾರೆ. ಈ ಸಾಮಾಜಿಕ ರಚನೆಯನ್ನು ಪಿರಾಮಿಡ್‌ಗೆ ಹೋಲಿಸಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳಗಿನವರು ಬಹುಸಂಖ್ಯಾತರು, ಜಾತಿಶೋಷಣೆ, ಅಸ್ಪಶ್ಯತೆ, ಹಿಂಸೆ, ಅವಮಾನ ಮುಂತಾದವು ಮೇಲಿನವರಿಂದ ಒತ್ತಾಯಪೂರ್ವಕವಾಗಿ ಹೇರಲ್ಪಟ್ಟವೆ. ಭರಿಸಿಕೊಳ್ಳಲಾಗದಂತೆ ಧರ್ಮ ಗ್ರಂಥಗಳಾದ ರಾಮಾಯಣ, ಮಹಾಭಾರತ, ಮನುಸ್ಮೃತಿ ಈ ವ್ಯವಸ್ಥೆಗೆ ಪ್ರಭಾವಿಸಿದೆ. ಹೀಗಾಗಿ ರಾಮಾಯಣ, ಮಹಾಭಾರತ ಹಾಗೂ ಮನುಸ್ಮೃತಿಯ ಬಗ್ಗೆ ಅಂಬೇಡ್ಕರ್‌ರು ಪ್ರಖರವಾದ ವಿಮರ್ಶೆಯನ್ನು ಬರೆದರು. ಹಾಗೂ ಒಂದು ಹಂತದಲ್ಲಿ ಮನುಸ್ಮೃತಿಯ ಪ್ರತಿಯನ್ನು ಸುಟ್ಟರು. "ಪಾರಂಪರಿಕವಾಗಿ ಹಿಂದೂಧರ್ಮದ ತಾತ್ವಿಕತೆಗೂ ಮತ್ತು ಚಾತುರ್ವರ್ಣಕ್ಕೂ ನೇರವಾದ ಸಂಬಂಧವಿದೆ ಎನ್ನುವುದು ಅವರ ಬಲವಾದ ತಿಳುವಳಿಕೆ. ಅದರಿಂದಾಗಿ ಚಾತುರ್ವರ್ಣ ವ್ಯವಸ್ಥೆಯಲ್ಲಿ ಬದಲಾವಣೆ ಅಥವಾ ಪರಿವರ್ತನೆ ಆಗಬೇಕೆಂದರೆ, ಅದು ಹಿಂದೂ ಧರ್ಮದ ಸನಾತನ

ದೃಷ್ಟಿಕೋನದಲ್ಲಿ ಸಮಗ್ರ ಬದಲಾವಣೆಯಾಗಬೇಕೆಂಬುದು ಅವರ ನಿಲುವು".[37] ಸಾಮಾಜಿಕ ಚಲನೆಯಿಂದ ಮಾತ್ರ ಜಾತಿ, ಅಸ್ಪೃಶ್ಯತೆಗಳು ಸಡಿಲಗೊಳ್ಳಬಲ್ಲವು-ಶಿಕ್ಷಣ ಮತ್ತು ಆಧುನಿಕ ಸೌಲಭ್ಯಗಳ ಮೂಲಕ ಮುಂದುವರಿದಾಗ ಮಾತ್ರ ನಿವಾರಣೆ ಸಾಧ್ಯವೆಂದು ಬಯಸಿದರು. ಇದಕ್ಕೆ ಸಾಮಾಜಿಕ-ಧಾರ್ಮಿಕ ಹೋರಾಟಗಳು ಮುಖ್ಯವೆಂದು ಬಗೆದರು.

ಪುರುಷಸೂಕ್ತದ ಸಮಾಜ ರಚನೆಯನ್ನು ಅಂಬೇಡ್ಕರ್‌ರವರು ತೀಕ್ಷಣವಾಗಿ ವಿಮರ್ಶಿಸಿದ್ದಾರೆ. ಅಂದಿನ ಕೊಳಕು ವಾಸ್ತವತೆಯನ್ನೇ ಶಾಶ್ವತವಾದ ಉನ್ನತ ಆದರ್ಶದ ಮಟ್ಟಕ್ಕೆ ಏರಿಸಲಾಗಿದೆ. ತಾನು ವಿಭಜಿಸಿದ ನಾಲ್ಕು ವರ್ಗಗಳನ್ನು ಒಂದು ಸಿದ್ಧಾಂತವಾಗಿ ಮಾಡಿದೆ. ಇದು ಜೀವ ವಿರೋಧಿಯಾಗಿದೆ. ಇದರ ಉದ್ದೇಶಗಳು ಅತ್ಯಂತ ಹೀನವಾಗಿದ್ದು, ಫಲಿತಾಂಶಗಳು ಸಮಾಜ ವಿರೋಧಿಯಾಗಿವೆ. ವಿದ್ಯೆ, ಜ್ಞಾನಗಳ ಒಡೆಯರಾಗಿ ಬ್ರಾಹ್ಮಣರನ್ನು, ಯುದ್ಧಕ್ಕಾಗಿ ಕ್ಷತ್ರಿಯರನ್ನು, ವ್ಯಾಪಾರ ವಾಣಿಜ್ಯಕ್ಕೆ ವೈಶ್ಯರು, ಸಾಮಾಜಿಕ ವ್ಯವಸ್ಥೆಯ ಕೊನೆಯಲ್ಲಿರುವ ಶೂದ್ರರನ್ನು ಅತ್ಯಂತ ಹೊಲಸು ಕೆಲಸ ಮಾಡುವ ಗುಲಾಮರನ್ನಾಗಿ ಮಾಡಲಾಗಿದೆ. ಇವರು ಎಲ್ಲ ಹಕ್ಕುಗಳಿಂದಲೂ ವಂಚಿತರು, ಇವರಿಗೆ ಅನೇಕ ರೀತಿಯ ಹಿಂಸೆ, ಅವಮಾನಗಳನ್ನು ಮಾಡಲಾಯಿತು. ವೇದಗಳಿಂದ, ಜ್ಞಾನದಿಂದ, ವೈದಿಕ ಆಚರಣೆಗಳಿಂದ, ಸಂಪತ್ತು ಮತ್ತು ವಿದ್ಯೆಗಳಿಂದ ಶೂದ್ರರನ್ನು ದೂರ ಇಡಲಾಯಿತು. ಇದಕ್ಕಿಂತ ಹೀನವಾದ ಬದುಕು ಅಸ್ಪೃಶ್ಯರದಾಗಿತ್ತು. ಅಸ್ಪೃಶ್ಯತೆ ಎಂದರೆ ಮೈಲಿಗೆ, ಕೀಳು ಜಾತಿಯಲ್ಲಿ ಹುಟ್ಟಿದವನನ್ನು ಮುಟ್ಟುವುದರಿಂದ ಮೈಲಿಗೆಯಾಗುತ್ತದೆ ಎನ್ನಲಾಗಿದೆ. ಮನುಷ್ಯರಲ್ಲಿ ಮೇಲು ಕೀಳು ಜಾತಿಗಳನ್ನು ನಿರ್ಮಿಸಿ, ಮನುಷ್ಯನ್ನು ಮುಟ್ಟುವುದರಿಂದ ಮೈಲಿಗೆಯಾಗುತ್ತದೆ. ಎನ್ನುವ ಹಿಂದೂ ನಾಗರಿಕತೆಯೇ ಅಲ್ಲ. ಇದೇ ಮಾನವೀಯತೆಯನ್ನೆ ತುಳಿದು, ಗುಲಾಮಗಿರಿಗೆ ತಳ್ಳುವ ಪೈಶಾಚಿಕ ನಿರಂತರ ಯೋಜನೆಯೇ ಹಿಂದೂ ನಾಗರೀಕತೆ" ಎಂದಿದ್ದಾರೆ ಅಂಬೇಡ್ಕರ್[38] ಕೊಳಕು ಕೆಲಸ ಮಾಡುವ ವ್ಯಕ್ತಿಗೇ ಮೈಲಿಗೆಯನ್ನಂಟಿಸಿ, ಅವನನ್ನು ಮುಟ್ಟುವುದರಿಂದಲೇ ಮೈಲಿಗೆಯಾಗುತ್ತದೆನ್ನುವ ಪದ್ಧತಿಯನ್ನು ಹುಟ್ಟು ಹಾಕಲಾಯಿತು. ಹೀಗೆ ಮೈಲಿಗೆ ಎಂಬ ಮಾನಸಿಕ ಕಲ್ಪನೆಯನ್ನು ವ್ಯಕ್ತಿಯೊಬ್ಬರಿಗೆ ಭೌತಿಕವಾಗಿ ವರ್ಗಾಯಿಸುವುದರ ಮೂಲಕ ಅಸ್ಪೃಶ್ಯತೆ ಆಚರಣೆ ಬಂದಿತು.

ಅಂಬೇಡ್ಕರ್‌ರ ಪ್ರಕಾರ, ಅಸ್ಪೃಶ್ಯರು ವರ್ಣವ್ಯವಸ್ಥೆಯ ಹಿಡಿತದಲ್ಲಿಲ್ಲ. ಶೂದ್ರರು ವರ್ಣವ್ಯವಸ್ಥೆಯಲ್ಲಿರುವ "ಸವರ್ಣೀಯ" ರಾಗಿದ್ದರೆ, ಅಸ್ಪೃಶ್ಯರು 'ಅವರ್ಣೀಯ" ರಾಗಿದ್ದಾರೆ. ಹಿಂದೂಸಿದ್ಧಾಂತದಲ್ಲಿನ" ಸೃಷ್ಟಿ ಪ್ರಾಮುಖ್ಯತೆ"ಯು ಅಸ್ಪೃಶ್ಯನಿಗೆ ಅನ್ವಯಿಸುವುದಿಲ್ಲ. ಅಸ್ಪೃಶ್ಯರನ್ನು ಅಂತ್ಯ, ಅಂತ್ಯಜ ಮತ್ತು ಅಂತ್ಯವಾಸಿನ್ ಎಂದು ಕರೆಯಲಾಗಿದೆ. ಅಂತ್ಯ ಎಂದರೆ ಸೃಷ್ಟಿಯ ಕೊನೆಯಲ್ಲಿ ಊರಿನ ಕೊನೆ ಎಂದು ಅರ್ಥ. ಊರ ಹೊರಗಿನ ಅಂಚಿನಲ್ಲಿ ವಾಸ ಮಾಡುವವರನ್ನು ಅಂತ್ಯಜ ಎಂದು ಕರೆಯಲಾಗುತ್ತಿತ್ತು ಮಹಾರಾಷ್ಟ್ರದ 'ಮಹರ್' ರು ಆದಿಕಾಲದಿಂದಲೂ ಊರ ಹೊರಗಡೆಯೇ ನೆಲೆಸಿದ್ದರು. ಏಕೆಂದರೆ, ಕೃಷಿ ಪ್ರದೇಶಗಳ ಒಡೆತನ ಹೊಂದಿದ್ದ ನೆಲೆಗೊಂಡ ಗುಂಪುಗಳಿಗೆ ಇವರು ಸೇರಿರಲಿಲ್ಲ. ಅಸ್ಪೃಶ್ಯರು ಬೇರೆಯ ಬುಡಕಟ್ಟು ಮತ್ತು ಬೇರೆ ರಕ್ತಕ್ಕೆ ಸೇರಿದ್ದರಿಂದ, ಪ್ರತ್ಯೇಕವಾಗಿ ನೆಲಸುವುದು ಸ್ಥಿರವಾಗಿ ಉಳಿಯಿತು. ಅಸ್ಪೃಶ್ಯತೆ ವೃತ್ತಿಯಿಂದಲೇ ಹುಟ್ಟಿತು ಎಂಬುದನ್ನು ಅಂಬೇಡ್ಕರ್‌ರು ತಿರಸ್ಕರಿಸಿ ಚಾತುರ್ವರ್ಣವ್ಯವಸ್ಥೆಯ ಆಧಾರಸ್ತಂಭವೇ ಅಸಮಾನತಾ ತತ್ವವಾಗಿದೆ. ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು, ಅಸಮಾನತೆಯನ್ನು ಆಧರಿಸಿ, ತಮ್ಮ ಮೇಲಿನವರಿಗೆ ಗುಲಾಮರಾಗಿದ್ದು, ಹಾಗೆಯೇ ಮೇಲಿನವರ ಸೇವೆಯ

ಹೆಸರಿನಲ್ಲಿ ಅನೇಕ ಹೊಲಸು ಕೆಲಸಗಳನ್ನು ಮಾಡಿರುತ್ತಾರೆ. ಆದರೆ ಅವರಾರೂ ಅಸ್ಪೃಶ್ಯರಾಗಿರಲಿಲ್ಲ. ಹಾಗಿರುವಲ್ಲಿ ವೃತ್ತಿಯಿಂದ ಅಸ್ಪೃಶ್ಯತೆ ಹುಟ್ಟಿತೆಂದು ಹೇಳುವುದು ಸಮರ್ಥನೀಯವಲ್ಲ.

"ಜಾತಿಯ ಬಗ್ಗೆ ಅಂಬೇಡ್ಕರ್‌ರ ಅಧ್ಯಯನವು ನಾಲ್ಕು ಅಂಶಗಳನ್ನು ಒಳಗೊಂಡಿದೆ. ಹಿಂದೂ ಜನಸಮೂಹವು ವಿಭಿನ್ನ ಜನಾಂಗಗಳ ರಚನೆಯಾಗಿದ್ದರೂ, ಆಳದಲ್ಲಿ ಸಾಂಸ್ಕೃತಿಕ ಐಕ್ಯತೆಯನ್ನು ಹೊಂದಿದೆ; ಈ ಬೃಹತ್ ಸಾಂಸ್ಕೃತಿಕ ಐಕ್ಯತೆಯ ಸಣ್ಣ ಘಟಕವಾಗಿ ಜಾತಿ ರೂಪುಗೊಂಡಿದೆ; ಆರಂಭದಲ್ಲಿ ಒಂದೇ ಜಾತಿಯು ಇದ್ದಿತು. ಹೊಸ ಪ್ರವೇಶ ಮತ್ತು ಬಹಿಷ್ಕಾರಗಳಿಂದ, ಒಂದೇ ಜಾತಿಯಲ್ಲಿನ ವರ್ಗಗಳೇ ಜಾತಿಗಳಾಗಿ ಬಿಟ್ಟವು.[39] ಸಾಮಾಜಿಕ ಸುಧಾರಣೆಗಳು ರಾಜಕೀಯ ಸ್ವಾತಂತ್ರ್ಯದಷ್ಟೇ ಮಹತ್ವಪೂರ್ಣ ಎಂಬುದು ಅಂಬೇಡ್ಕರ್‌ರವರ ಖಚಿತ ಅಭಿಪ್ರಾಯವಾಗಿತ್ತು. ಜಾತಿವ್ಯವಸ್ಥೆ ಕೇವಲ ಅಸ್ಪೃಶ್ಯ ಹಾಗೂ ಉಚ್ಚ ವರ್ಣಗಳನ್ನಷ್ಟೇ ನಿರ್ಮಿಸಿಲ್ಲ. ಎಲ್ಲ ವರ್ಣಗಳಲ್ಲಿ ಅನೇಕ ಜಾತಿ ಉಪಜಾತಿಗಳನ್ನು ಕೂಡ ನಿರ್ಮಿಸಿದೆ; ಇದು ಕೇವಲ ಅಸ್ಪೃಶ್ಯರನ್ನೇ ಗುಲಾಮರನ್ನಾಗಿಸಿಲ್ಲ. ಭಾರತೀಯರೆಲ್ಲರ ಮನಸ್ಸನ್ನೂ ಗುಲಾಮರನ್ನಾಗಿಸಿದೆ." ಎಂಬ ನಿರ್ಣಯಕ್ಕೆ ತಲುಪಿದರು. ಅಪಾರ ಪಾಂಡಿತ್ಯ, ಸತತ ಅಭ್ಯಾಸ, ನಿರಂತರ ಶ್ರಮಜೀವಿಯಾಗಿದ್ದ ಅಂಬೇಡ್ಕರ್ ಅಸ್ಪೃಶ್ಯತೆಯ ಮೂಲಗಳ ಶೋಧನೆಗೆ ಇಳಿದರು. ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ Castes in India, their mechanism genesis and development ಎಂಬ ಪ್ರಬಂಧವನ್ನು ಮಂಡಿಸಿ -ಮುಂದಿನ ತಮ್ಮ ಇಡೀ ಜೀವನದ ಹೋರಾಟದ ಗತಿಯನ್ನು ಸೂಕ್ಷ್ಮವಾಗಿ ತೋರಿದ್ದರು. "Goats are used for sacrificial offerings and not lions" ಎಂದು ಭಾರತದ ರಾಜಕೀಯ, ಸಾಮಾಜಿಕ ರಂಗದಲ್ಲಿದ್ದ ಕೊಳೆಯನ್ನು ತೊಳೆಯಲು ಸಿಂಹದಂತೆ ಗರ್ಜಿಸತೊಡಗಿದರು. ಅವರ ಪ್ರತಿಭಟನಾತ್ಮಕ ಹೋರಾಟಗಳ ಗುರಿ ನಿಮ್ನವರ್ಗದವರಿಗೆ ಒಂದು ಗೌರವದ ಬದುಕನ್ನು ನೀಡುವುದಾಗಿತ್ತು. ಅಂಬೇಡ್ಕರ್ ವಿಚಾರಗಳು ಆಳತೊಡಗಿವೆ. ಅವರು ಆರಂಭಿಸಿದ ಜಾತಿ ನಿರ್ಮೂಲನ, ಮೀಸಲಾತಿ, ಮತಾಂತರ, ಶಿಕ್ಷಣ, ಸಂಘಟನೆ, ದಲಿತರಲ್ಲಿ ಹೊಸ ವಿಚಾರಗಳ ಸಂಚಲನಕ್ಕೆ ಜಾಗೃತಿಗೆ ಕಾರಣವಾಗಿವೆ.

ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ಮರಳಿದ ನಂತರ ಅಂಬೇಡ್ಕರ್ ತಮಗೆ ಮತ್ತು ಸಮಾಜಕ್ಕೆ ಆಗುತ್ತಿರುವ ಅಸಹನೀಯ ಅನ್ಯಾಯದ ವಿರುದ್ಧ ವಿಧಾಯಕ ರೀತಿಯಲ್ಲಿ ಪ್ರತಿಭಟಿಸಬೇಕೆಂದು ಅವರು ಸಂಕಲ್ಪ ಮಾಡಿದರು. ಕೊಲ್ಲಾಪೂರದ ಮಹಾರಾಜರ ನೆರವಿನಿಂದ "ಮೂಕ ನಾಯಕ" ಎಂಬ ಪತ್ರಿಕೆಯನ್ನು ಅವರು ಹೊರಡಿಸಿದರು. ಅದು ಅವರ ಅಭಿಪ್ರಾಯಗಳ ಮಂಡನೆಯ ವೇದಿಕೆಯಾಗಿತ್ತು. ಅದರ ಪ್ರಥಮ ಸಂಚಿಕೆಯಲ್ಲಿ ಅವರು ಹೀಗೆ ಬರೆದರು: "ಭಾರತ ಅಸಮಾನತೆಯ ತವರು. ಹಿಂದೂ ಸಮಾಜ ಒಂದು ಎತ್ತರವಾದ ಗೋಪುರವಿದ್ದಂತೆ, ಅದಕ್ಕೆ ಹಲವು ಅಂತಸ್ತುಗಳುಂಟು. ಆದರೆ ಅದಕ್ಕೆ ಬಾಗಿಲುಗಳಾಗಲೀ, ಅದನ್ನೇರಲು ಏಣಿಯಾಗಲಿ ಇಲ್ಲ. ಒಂದು ಅಂತಸ್ತಿನಲ್ಲಿ ಹುಟ್ಟಿದ ವ್ಯಕ್ತಿ ಅದೇ ಅಂತಸ್ತಿನಲ್ಲಿ ಸಾಯಬೇಕು. ಅನ್ಯ ಮಾರ್ಗವೇ ಅವನಿಗಿಲ್ಲ. ಹಿಂದೂ ಸಮಾಜದಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರರು ಮತ್ತು ಅಸ್ಪೃಶ್ಯರು ಎಂಬ ಮೂರು ಭಾಗಗಳಿವೆ. "ಈಶಾವಾಸ್ಯಮಿದಂ ಸರ್ವಂ" ಎಂದು ಹಿಂದೂಗಳು ಉದ್ಘೋಷಿಸುತ್ತಾರೆ. ಆದರೆ ತಮ್ಮ ಧರ್ಮದವರೇ ಆದ ಕೆಲವರನ್ನು ಅಸ್ಪೃಶ್ಯರೆಂದು ಕಡೆಗಣಿಸುತ್ತಾರೆ. ಜ್ಞಾನ ಪ್ರಸಾರವಾಗಲೀ, ವಿದ್ಯಾ ಪ್ರಸಾರವಾಗಲೀ ಬ್ರಾಹ್ಮಣರ ನಿಜವಾದ ಗುರಿಯಾಗಿಲ್ಲ. ಏಕ ಸ್ವಾಮ್ಯವೇ ಅವರ ಧ್ಯೇಯ. ಇದು ದುಃಖಕರವಾದ ಸಂಗತಿ. ಬ್ರಾಹ್ಮಣೇತರರು ಹಿಂದುಳಿದಿರುವುದಕ್ಕೆ

ಕಾರಣ ಅವರಿಗೆ ಸರಿಯಾದ ಶಿಕ್ಷಣವಿಲ್ಲದಿರುವುದು, ನಿರಂತರವಾದ ದಾಸ್ಯ, ದಾರಿದ್ರ್ಯ ಮತ್ತು ಅಜ್ಞಾನಗಳಿಂದ ದಲಿತರ ವರ್ಗಗಳನ್ನು ಪಾರು ಮಾಡಲು, ಅವರಲ್ಲಿ ಜಾಗೃತಿಯುಂಟು ಮಾಡಲು ಭಗೀರಥ ಪ್ರಯತ್ನವನ್ನೇ ಮಾಡಬೇಕು". ಮತ್ತೊಂದು ಲೇಖನದಲ್ಲಿ ಹೀಗೆ ಬರೆದರು:

"ಭಾರತ ದೇಶಕ್ಕೆ ತಾನು ಸ್ವತಂತ್ರವಾಗುವುದು ಮಾತ್ರ ಸಾಲದು. ಅದು ಎಲ್ಲ ವರ್ಗದವರಿಗೂ ಸಮಾನವಾದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು ಒದಗಿಸುವ ಅವಕಾಶಗಳನ್ನು ಮತ್ತು ಅದಕ್ಕೆ ಅನುಕೂಲರವಾದ ವಾತಾವರಣವನ್ನು ನಿರ್ಮಾಣ ಮಾಡಬೇಕು, ಬ್ರಿಟಿಷರ ಅನ್ಯಾಯಕರವಾದ ಆಡಳಿತದ ಬಗ್ಗೆ ಬ್ರಾಹ್ಮಣರು ಪ್ರತಿಭಟಿಸುವುದು ಸಮರ್ಥನೀಯವಾಗಿದ್ದರೆ, ಅಧಿಕಾರದ ಹಸ್ತಾಂತರವಾಗಿ ಬ್ರಾಹ್ಮಣ ಆಡಳಿತ ಹೇರುವುದನ್ನು ವಿರೋಧಿಸುವುದಕ್ಕೂ ದಲಿತರಿಗೆ ನೂರು ಪಟ್ಟು ಸಮರ್ಥನೆಯಿದೆ. ದಲಿತರ ಮೂಲಭೂತ ಹಕ್ಕುಗಳನ್ನು ಮಾನ್ಯ ಮಾಡಿದ ಸ್ವರಾಜ್ಯ, ಸ್ವರಾಜ್ಯವಲ್ಲ. ಅದು ಮತ್ತೊಂದು ಬಗೆಯ ಗುಲಾಮಗಿರಿ.

1923 ರ ಸುಮಾರಿಗೆ ಭಾರತದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿ ನಿಧಾನವಾಗಿ ಹಬ್ಬತೊಡಗಿತು. ಆ ವೇಳೆಯಲ್ಲಿ ಅಂಬೇಡ್ಕರ್ ನುಡಿ ಚಾವಟಿಯನ್ನು ಬೀಸಿದರು. "ನಾವು ಎಲ್ಲರಂತೆ ಭಾರತೀಯರು, ಹಿಂದುಗಳು. ನಮಗೆ ಬೇಕಾಗಿರುವುದು ಕರುಣೆಯಲ್ಲ, ದಾನವಲ್ಲ, ಎಲ್ಲರಂತೆ ಸಮಾನವಾಗಿ ಬದುಕುವ ಹಕ್ಕು, ಸ್ವಾತಂತ್ರ್ಯ. ಈ ನೆಲ, ಈ ಜಲ, ಈ ಗಾಳಿ, ಈ ಬೆಂಕಿ, ಈ ಬೆಳಕು, ಈ ದೇವರು ಯಾರ ಸ್ವತ್ತೂ ಅಲ್ಲ. ಅದನ್ನು ಅನುಭವಿಸಲು ಯಾರ ಹಂಗೂ ಬೇಕಿಲ್ಲ. ನಾವು ಆತ್ಮ ಗೌರವವನ್ನು, ಸ್ವ-ಪ್ರತಿಷ್ಠೆಯನ್ನು ದಿಟ್ಟ ನಿಲುವನ್ನು ರೂಢಿಸಿಕೊಳ್ಳಬೇಕು. ಸಾವಿರಾರು ವರ್ಷಗಳಿಂದ ಸವರ್ಣೀಯರ ಅಡಿಗೆ ಮುಡಿ ಚಾಚಿ ಕಳೆದುಕೊಂಡಿರುವ ಸ್ವಾಭಿಮಾನ, ಸ್ವಾತಂತ್ರ್ಯಗಳನ್ನು ಮತ್ತೆ ಪಡೆಯಲು ಎಡರುಗಳಿಗೆ ಎದೆಗೆಡದೆ ಸಂಯಮದಿಂದ ಹೋರಾಡಬೇಕು" ಎಂದು ತನ್ನ ದಲಿತ ವರ್ಗಕ್ಕೆ ಕರೆ ನೀಡಿದರು.

ಇಂದು ಕೂಡ ಭಾರತದಲ್ಲಿ ಜಾತಿವ್ಯವಸ್ಥೆ ಸ್ಥಿರವಾಗಿದೆ, ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಜೀವನ ನಡೆಸುತ್ತಿದ್ದಾರೆ. ಅಸ್ಪೃಶ್ಯತೆ ಎನ್ನುವುದು ಭಾರತದ ಸಮಾಜಕ್ಕಂಟಿಕೊಂಡು ಬಂದ ಅನಿಷ್ಠ ಪದ್ಧತಿ, ಇದು ಚಾತುರ್ವರ್ಣದ ಕೂಸು, ಕೊಡುಗೆ ಇತಿಹಾಸದುದ್ದಕ್ಕೂ ಇದು ಬೆಳೆದು ಬಂದಿದೆ. ಅಸಮಾನತೆ ಎನ್ನುವುದು ಸ್ಥಿರಗೊಳ್ಳುತ್ತಿದೆ. ಈ ಕಳಂಕವನ್ನು ಸಾರಾಸಗಟಾಗಿ ಕಿತ್ತುಹಾಕುವ ನಿಟ್ಟಿನಲ್ಲಿ ದುಡಿದವರು ಬುದ್ಧ, ಬಸವ, ಅಂಬೇಡ್ಕರ್ ಪ್ರಮುಖರು. ಇವರು ವರ್ಣ ಮತ್ತು ಜಾತಿವ್ಯವಸ್ಥೆಯ ವಿರುದ್ಧ ಗಂಭೀರವಾಗಿಯೇ ಪ್ರತಿಭಟಿಸಿದ್ದಾರೆ. ಇವರುಗಳು ಈ ಸಾಮಾಜಿಕ ಅನಿಷ್ಟಗಳ ವಿರುದ್ಧ ಪ್ರತಿಭಟಿಸಿರುವುದರಿಂದ ದಲಿತರಿಗೆ ಈ ನೆಲದಲ್ಲಿ ಒಂದಷ್ಟು ಸ್ಥಾನಮಾನಗಳು ದೊರೆತಿವೆ ಹಾಗೂ ದೊರೆಯುತ್ತಿವೆ. ಜಾತಿವಿನಾಶದ ವಿರುದ್ಧ ಅಂಬೇಡ್ಕರ್ ಅವರು ಮಾಡಿದ ಹೋರಾಟ ಅವಿಸ್ಮರಣೀಯ ಹಾಗೂ ಅನನ್ಯ.

4.4 ವರ್ಗ-ಜಾತಿ-ವ್ಯವಸ್ಥೆಯ ವಿರುದ್ಧ ಪ್ರತಿಭಟನೆ :

ಭಾರತದ ಸಾಮಾಜಿಕ ಪದ್ಧತಿಯ ಪ್ರಧಾನವಾದ ಲಕ್ಷಣ ಎಂದರೆ ಜಾತಿ. ಇದು ಸಾಮಾಜಿಕ ವ್ಯವಸ್ಥೆಗೆ ಅಡಿಪಾಯವಷ್ಟೇ ಅಲ್ಲ, ಸಾಮಾಜಿಕ ಸಂಸ್ಥೆಯಾಗಿ ಬಲಗೊಂಡು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಮುಂದುವರೆಯುತ್ತಿದೆ. ಜಾತಿ ಎಂದರೆ ಆಳುವ ವರ್ಗಗಳು ಶ್ರಮ ಶೋಷಣೆಗೆ

ನಿರ್ಮಿಸಿಕೊಂಡ ಕಟ್ಟ ವ್ಯವಸ್ಥೆ, ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ದುಡಿಯುವ ಸಮೂಹಗಳನ್ನು ಶೋಷಿಸುವ ಹಾಗೂ ಧಮನಿಸುವ ವಿಧಾನಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಮನುಷ್ಯ ಪ್ರಾಣಿ ಪ್ರಪಂಚದಿಂದ ಬೇರ್ಪಟ್ಟ ನಂತರ ಸಮಾಜದ ಅಭಿವೃದ್ಧಿ ಕ್ರಮವನ್ನು ನಾವು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದಾಗ, ಪರಿಶೀಲಿಸಿದಾಗ ಮಾತ್ರ "ಜಾತಿ-ವರ್ಗ" ಪ್ರಶ್ನೆ ಕುರಿತು ಒಂದು ಸ್ಪಷ್ಟವಾದ ಅಭಿಪ್ರಾಯ ಅಥವಾ ನಿಲುವು ತೆಗೆದುಕೊಳ್ಳಲು ಸಾಧ್ಯವಾಗಬಹುದು. ಜಾತಿ ಸಮಸ್ಯೆಗೆ ಮೂರು ಸಾವಿರ ವರ್ಷಗಳ ಚರಿತ್ರೆ ಇದೆ. ಜಾತಿ, ವರ್ಗ ಸಮಾಜದ ಬೆಳವಣಿಗೆಗೆ ರಾಜ್ಯದ (ಪ್ರಭುತ್ವ) ಉಗಮ, ಊಳಿಗಮಾನ್ಯ ಉತ್ಪಾದನಾ ವಿಧಾನದ ಬೆಳವಣಿಗೆ ಹಾಗೂ ನಿರಂತರವಾದ ಆದರೆ ತಮ್ಮದೇ ರೂಢಿ ಆಚರಣೆಗಳನ್ನು ಹೊಂದಿದ್ದ ಬುಡಕಟ್ಟು ಗುಂಪುಗಳನ್ನು ಶೋಷಣಾ ವ್ಯವಸಾಯದ ಆರ್ಥಿಕತೆಯೊಂದಿಗೆ ನಿರ್ಬಂಧಿತವಾಗಿ ಅಂತರ್ಗತ ಮಾಡಿಕೊಂಡಿರುವುದರೊಂದಿಗೆ, ಬೇರ್ಪಡಿಸಲಾರದಂತೆ ಬೆಸೆದುಕೊಂಡಿದೆ.

ಅಂಬೇಡ್ಕರ್ ಜಾತಿ ಕುರಿತು: A reformer rebuilds the old structure, A revolutionary blows up the old sttructure and builds a new one. ಅಂಬೇಡ್ಕರ್ ಜಾತಿ ಕುರಿತು ಇದ್ದದ್ದು -ಅದನ್ನು ನಿರ್ಮೂಲನ ಮಾಡುವ ತೀವ್ರ ಹಠದ ಕಡೆಗೆ ಹೊರತು, ಅದನ್ನು ಸುಧಾರಿಸುವುದರ ಕಡೆಗೆ ಅಲ್ಲ. ಜಾತಿಯ ಭೂತವನ್ನು ಕಿತ್ತೆಸೆಯಲು ಜೀವನದುದ್ದಕ್ಕೂ ಪ್ರತಿಭಟನಾತ್ಮಕ ಹೋರಾಟ ಕೈಗೊಂಡರು. ಭಾರತದ ಇತಿಹಾಸದಲ್ಲಿಯೇ ವರ್ಗ-ಜಾತಿಯನ್ನು -ಅದರೆಲ್ಲ ಕರಾಳ ಮುಖವನ್ನು ಎಳೆಎಳೆಯಾಗಿ ಬಿಡಿಸಿಟ್ಟವರು ಮತ್ತು ಜಾತಿಯನ್ನು, ಜಾತಿಗೆ ಸಂರಕ್ಷಕವಾಗಿ ನಿಂತಿರುವ ಹಿಂದೂಧರ್ಮವನ್ನು ಕಟುವಾಗಿ, ಉಗ್ರವಾಗಿ ಪರೀಕ್ಷೆಗೆ ಒಳಪಡಿಸಿದವರು, ಪ್ರತಿಭಟಿಸಿದವರು ಅಂಬೇಡ್ಕರ್. ಜಾತಿ ಎನ್ನುವುದು ಕೋಟೆ. ಜಾತಿ ಎನ್ನುವುದು ಒಂದು ಪರಿವೇಷ್ಠಿತ ವರ್ಗ, ಜಾತಿಎನ್ನುವುದು ಒಂದು ಪೂರ್ವ ನಿಶ್ಚಿತ ಬದುಕಿನ ವಿಧಾನ." ಭಾರತದಲ್ಲಿ ಜಾತಿ ಇರುವವರೆಗೂ ಹಿಂದೂಗಳೂ ಅಂತರ್ಜಾತಿ ವಿವಾಹವಾಗಲು ಅಥವಾ ಹೊರಗಿನವರೊಂದಿಗೆ ಸಾಮಾಜಿಕ ಸಂಬಂಧ ಮಾಡರು. ಹಿಂದೂಗಳು ಪ್ರಪಂಚದ ಬೇರೆ ಭಾಗಗಳಿಗೆ ವಲಸೆ ಹೋದರೂ ಭಾರತದ ಜಾತಿಯು ಒಂದು ಲೋಕ ಸಮಸ್ಯೆಯಾಗಿ ಪರಿಣಮಿಸುತ್ತದೆ"[40] ಎನ್ನುವ ಅಂಬೇಡ್ಕರ್ ಜಾತಿ ಸಮಸ್ಯೆಯೆನ್ನುವುದು ಜಗತ್ತಿನ ಯಾವ ದೇಶಗಳಲ್ಲೂ ಕಾಣದೆ ಭಾರತಕ್ಕೆ ವಿಶೇಷವಾಗಿ ತಗುಲಿರುವ ಪಾಪವೆಂದು ಹೇಳಿದ್ದಾರೆ.

ಜಾತಿ ಎನ್ನುವುದು ಸಮಾಜದೊಳಗೆ ಪ್ರತ್ಯೇಕಗೊಂಡ ವಿಭಿನ್ನವಾದ ವಿಶೇಷ ಘಟಕಗಳು. ಅವು ಇನ್ನೊಂದು ಘಟಕದೊಂದಿಗೆ ಯಾವುದೇ ಸಂಬಂಧವನ್ನು ನಿರಾಕರಿಸುತ್ತವೆ. ಒಟ್ಟಿಗೆ ಊಟ ಮಾಡುವಂತಿಲ್ಲ, ವಿವಾಹ ವಾಗುವಂತಿಲ್ಲ, ಕಸುಬನ್ನು ಜೊತೆಯಾಗಿ ಮಾಡುವಂತಿಲ್ಲ, ಹೀಗೆ ಅಡ್ಡಗೋಡೆಗಳು ನಿರ್ಮಾಣವಾಗಿ ಬಿಟ್ಟಿವೆ. ಮತ್ತೊಂದು ಜಾತಿಯಾಗಿ ಉತ್ಪತ್ತಿಯಾಗಿ ಭಾರತದ ತುಂಬಾ ಈ ಜಾತಿ-ಉಪಜಾತಿಗಳೇ ತುಂಬಿ ಹೋಗಿವೆ. ಭಾರತದಲ್ಲಿ ಹೀಗೆ ಜಾತಿಗಳು ಒಡೆದು ಹೋಳಾಗಿ ಹಬ್ಬುತ್ತಾ ಹೋಗುವ ದ್ವಿಗುಣ ಕ್ರಿಯೆಗೆ ಅಂಬೇಡ್ಕರ್ ಮುಂದಿಡುವ ಕಾರಣಗಳು 1) ಕಸುಬು 2) ಬುಡಕಟ್ಟು ಜನಾಂಗದ ಸಂಘಟನೆಯ ಪಳಿಯುಳಿಕೆಗಳು 3) ಹೊಸ ನಂಬಿಕೆಯ ಉದಯ 4) ಅಂತರ್ಜಾತಿಯ ಸಂತಾನ 5) ವಲಸೆ[41] ಈ ಕಾರಣಗಳಿಂದ ಜಾತಿಗಳು ಅಸಂಖ್ಯಾತವಾಗಿ ಸೃಷ್ಟಿಯಾಗುತ್ತ ಬೆಳೆದಿವೆ ಎನ್ನುತ್ತಾರೆ ಅಂಬೇಡ್ಕರ್.

ಸಾಮಾನ್ಯವಾಗಿ ಜಾತಿಯನ್ನು 'ಮನು' ಸೃಷ್ಟಿಸಿದ ಎಂದು ನಂಬಿಕೆ ಇದೆ. ಆದರೆ ಅಂಬೇಡ್ಕರ್ ಜಾತಿಗಳು ಮನುವಿಗಿಂತ ಮೊದಲಿದ್ದವು ಎನ್ನುತ್ತಾರೆ. ಆರಂಭದಲ್ಲಿದ್ದ ಜಾತಿಯ ವರ್ಗಗಳೆಂದರೆ-1) ಬ್ರಾಹ್ಮಣರು ಅಥವಾ ಪುರೋಹಿತ ವರ್ಗ 2) ಕ್ಷತ್ರಿಯರು ಅಥವಾ ಸೈನಿಕ ವರ್ಗ 3) ವೈಶ್ಯರು ಅಥವಾ ವರ್ತಕವರ್ಗ 4) ಶೂದ್ರರು ಮತ್ತು ಕಸುಬುದಾರರು -ಮುಂದೆ ಈ ವರ್ಗಗಳ ನಡುವೆ ಸಂಕರಗೊಂಡ ಜನ ಅಥವಾ ಯುದ್ಧದಲ್ಲಿ ಸೆರೆಸಿಕ್ಕವರು-'ಪಂಚಮ'ರಾಗಿರಬಹುದು ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಇಂಥ ಜಾತಿವ್ಯವಸ್ಥೆಯನ್ನು ಸೈದ್ಧಾಂತಿಕಗೊಳಿಸಿದವನು, ಕಟ್ಟುನಿಟ್ಟಿನ ಸಂವಿಧಾನವನ್ನು ರೂಪಿಸಿದವನು 'ಮನು' ಹೀಗಾಗಿ ಅಂಬೇಡ್ಕರ್ ಅವರಿಗೆ ಮನುವನ್ನು ಕಂಡರೆ ಕೆಂಡದಂತಹ ಕೋಪ. "ಭಾರತದ ಕಾನೂನು ಜನಕನಾದ ಮನು, ಈ ವ್ಯಕ್ತಿ ಬದುಕಿದ್ದು ನಿಜವೇ ಆಗಿದ್ದರೆ ನಿಶ್ಚಲವಾಗಿಯೂ ಆತ ನಿರ್ಲಜ್ಯ ವ್ಯಕ್ತಿಯೇ ಸರಿ"[42] ಎಂದ ಅಂಬೇಡ್ಕರ್ ಮನುಸ್ಮೃತಿಯು ಅಸಮಾನತೆಯ ವಿಚಾರಗಳನ್ನು ಪ್ರತಿಪಾದಿಸುತ್ತದೆ ಎಂದು 25-12-1927 ರಂದು ಸಾರ್ವಜನಿಕವಾಗಿ ಅದನ್ನು ಸುಟ್ಟು ಹಾಕಿದರು.

ಜಾತಿಸಮಸ್ಯೆಯನ್ನು ಕುರಿತು ಅಂಬೇಡ್ಕರ್ ತಮ್ಮ ಅಧ್ಯಯನದಲ್ಲಿ 4 ಅಂಶಗಳನ್ನು ಉಲ್ಲೇಖಿಸಿರುವರು.

1) ಹಿಂದೂಜನಾಂಗ ಒಂದು ಸಂಕೀರ್ಣರಚನೆಯಾಗಿದ್ದರೂ, ಅದರಲ್ಲೊಂದು ಆಳವಾದ ಸಾಂಸ್ಕೃತಿಕ ಏಕತೆಯಿದೆ.
2) ವ್ಯಾಪಕವಾದ ಸಾಂಸ್ಕೃತಿಕ ಘಟಕದ ಪ್ರತಿಯೊಂದು ಭಾಗವನ್ನು ಜಾತಿಯು ಹೆಣೆದು ಕಟ್ಟಿದೆ.
3) ಪ್ರಾರಂಭದಲ್ಲಿದ್ದುದ್ದು ಒಂದೇ ಜಾತಿ.
4) ಅನುಕರಣೆಯಿಂದಲೂ ಮತ್ತು ಬಹಿಷ್ಕರಿಸಿದ್ದರಿಂದಲೂ ವರ್ಗಗಳೇ ಜಾತಿಗಳಾಗಿ ಪರಿಣಮಿಸಿವೆ.[43]

ಅನುಕರಿಸುವ ಮತ್ತು ಬಹಿಷ್ಕೃತ ಸಮೂಹವನ್ನು ಉಳಿದ ಜಾತಿಗಳು ಮತ್ತೊಂದು ಜಾತಿಯಾಗಲು ಒತ್ತಾಯಿಸುವ ಒಳಸಂಚನ್ನು ಗುರುತಿಸುವ ಅಂಬೇಡ್ಕರ್ "ಜಾತಿಯ ನೈತಿಕ, ಧಾರ್ಮಿಕ, ಸಾಮಾಜಿಕ ಸಂಹಿತೆಯನ್ನು ಗಂಭೀರವಾಗಿ ವಿರೋಧಿಸುವ ಹೊಸ ಬದಲಾವಣೆಯನ್ನು ಜಾತಿಯು ಸಹಿಸಲಾರರು. ಸಂಹಿತೆಯನ್ನು ಉಲ್ಲಂಘಿಸುವ ಧೈರ್ಯಶಾಲಿಯಾದ ತಪ್ಪಿತಸ್ಥನಿಗೆ ಜಾತಿಗಳು ದಯೆ ತೋರುವುದಿಲ್ಲ"[44] ಈ ರೀತಿಯ ಜಾತಿಯೊಳಗಡೆ ಅಡಗಿಕೊಂಡಿರುವ ಕ್ರೌರ್ಯ ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಹಲವು ಹುನ್ನಾರಗಳನ್ನು ನಿರ್ಮಿಸಿಕೊಂಡಿದೆ. ಅಂಬೇಡ್ಕರ್ ಅವುಗಳನ್ನು (1) ಸತಿಪದ್ಧತಿ ಅಥವಾ ಸತಿಯನ್ನು ಪತಿಯೊಂದಿಗೆ ಸುಟ್ಟು ಬಿಡುವುದರಿಂದ ಜಾತಿಸಂಕರವನ್ನು ತಪ್ಪಿಸಲೆತ್ನಿಸುತ್ತದೆ. (2) ವಿಧವೆ ಮರುಮದುವೆಯಾಗದಂತೆ ಆಕೆಗೆ ಕಠೋರರೀತಿಯ ವೈಧವ್ಯವನ್ನು ಹೇರುವುದು (3) ಬಾಲ್ಯವಿವಾಹ ಮಾಡಿ ಬಿಡುವುದು ಎಂದು ಗುರುತಿಸಿದ್ದಾರೆ.

"ಜಾತಿ ನಿರ್ಮೂಲನ" ಎಂಬ ಪುಸ್ತಕವನ್ನು ಬರೆದ ಡಾ॥ಅಂಬೇಡ್ಕರ್ ಅವರು ಅದರಲ್ಲಿ ಗಾಂಧೀಜಿ ಹಾಕಿಕೊಂಡ ಹರಿಜನೋದ್ಧಾರ ಕಾರ್ಯಕ್ರಮಗಳ ಉದ್ದೇಶವನ್ನು ಪ್ರಶ್ನಿಸುತ್ತಾರೆ. ಹಾಗೆಯೇ ಅಸ್ಪೃಶ್ಯರನ್ನು' ಹರಿಜನ' ಎಂಬ ಹೆಸರಿನಿಂದ ಸಂಬೋಧಿಸುವುದನ್ನು ಛೇಡಿಸುತ್ತಾರೆ. "ಅಸ್ಪೃಶ್ಯರಿಗೆ 'ಹರಿಜನ' ಎನ್ನುವ ಪದ ಕಂಡರಾಗದು. ಅದರ ವಿರುದ್ಧ ಅನೇಕರು ಆಕ್ಷೇಪಣೆಯೆತ್ತಿದ್ದಾರೆ. ಮೊದಲನೆಯ ಆಕ್ಷೇಪ- ಇದರಿಂದ

ಅಸ್ಪೃಶ್ಯರ ಸ್ಥಿತಿಯಂತೂ ಸುಧಾರಣೆಯಾಗಿಲ್ಲ. ಹೊಸ ಹೆಸರು ಕೊಟ್ಟಾಕ್ಷಣ ಅಸ್ಪೃಶ್ಯತೆಯ ಶಾಪದಿಂದ ಅವರು ಮುಕ್ತರಾಗಿಲ್ಲ. ಹಳೆಯ ಹೆಸರಿದ್ದಾಗ ಅವರು ಎಷ್ಟು ನಿಕೃಷ್ಟರಾಗಿದ್ದರೋ ಹೊಸಹೆಸರಿನಲ್ಲಿ ಅಷ್ಟೇ ನಿಕೃಷ್ಟರಾಗಿದ್ದಾರೆ. ಎರಡನೇಯದಾಗಿ ಅವರಿಗೆ 'ಅಸ್ಪೃಶ್ಯ' ಎಂದು ಕರೆಸಿಕೊಳ್ಳುವುದೇ ಇಷ್ಟ. ಅವರ ವಾದವೇನೆಂದರೆ ಕೆಟ್ಟದ್ದನ್ನು ಅದರ ಹೆಸರು ಹಿಡಿದು ಕರೆದರೇ ಸರಿ. ರೋಗಿಗೆ ತನ್ನ ಕಾಯಿಲೆ ಏನೆಂದು ತಿಳಿದರೇ ಉತ್ತಮ. ಅನ್ಯಾಯ ಇದ್ದಷ್ಟು ಕಾಲ ಅದನ್ನ ನಿವಾರಿಸುವ ಒಳ್ಳೆ ಪ್ರಯತ್ನಗಳನ್ನು ಮಾಡುತ್ತಿರಬಹುದು. ಇದ್ದ ವಿಷಯಗಳನ್ನು ಬಚ್ಚಿಟ್ಟರೆ ವಾಸ್ತವದ ಬಗ್ಗೆ ತಪ್ಪು ಅಭಿಪ್ರಾಯಗಳು ಮೂಡಬಹುದು. ಹೊಸ ಹೆಸರಿನಿಂದ ಸತ್ಯವನ್ನು ಬಚ್ಚಿಡಲು ಪ್ರಯತ್ನಿಸಿದರೆ ಅದು ಅಸ್ಪೃಶ್ಯರಿಗೆ ಎಸಗಿದ ಅನ್ಯಾಯ ಮತ್ತು ಹಿಂದೂಗಳಿಗೆ ತಕ್ಕುದಲ್ಲದ ಹೊಗಳಿಕೆ ಸಿಕ್ಕಂತೆ. ಮೂರನೇಯದಾಗಿ, 'ಹರಿಜನ' ಎನ್ನುವ ಹೆಸರು ದಯೆ, ಅನುಕಂಪಗಳನ್ನು ಸೂಚಿಸುವಂಥಾದ್ದು. 'ಅಸ್ಪೃಶ್ಯ' ಎನ್ನುವುದು ಒಂದು ಕೆಟ್ಟ ಹೆಸರು. ಆದರಲ್ಲಿ ನಿಷೇಧ, ತಿರಸ್ಕಾರ ಮತ್ತು ದುರ್ವಾಸನೆಗಳಿವೆ. 'ಅಸ್ಪೃಶ್ಯ' ಎಂದ ಕೂಡಲೇ ಅವನನ್ನು ಕುರಿತ ಒಬ್ಬ ಹಿಂದೂ ವ್ಯಕ್ತಿಯ ಧೋರಣೆ ಖಚಿತಗೊಂಡಿರುತ್ತದೆ"[45] ಎಂದು ಮಹಾತ್ಮ ಗಾಂಧಿಯವರನ್ನು ತರಾಟೆಗೆ ತೆಗೆದುಕೊಳ್ಳುವ ಅಂಬೇಡ್ಕರ್ -If the untouchable classes were the people of God, were the touchable classes assumed to belong to the monsters? ಅಂದರೆ -ಅಸ್ಪೃಶ್ಯರು ದೇವರ ಮಕ್ಕಳಾದರೆ - ಸ್ಪೃಶ್ಯರು ರಾಕ್ಷಸರ ಮಕ್ಕಳೇ? ಎಂದು ಪ್ರಶ್ನಿಸಿದರು. "ಅಸ್ಪೃಶ್ಯ ಗಣ್ಯರೆಲ್ಲರೂ ಈ ಹೆಸರಿನಲ್ಲಿರುವ ಸೂಚಿತವಾಗಿರುವ ಅವಮಾನಕರ ಅರ್ಥಗಳನ್ನು ವಿರೋಧಿಸಿದ್ದಾರೆ. ಈ ಹೊಸ ಹೆಸರಿನ ಬಗ್ಗೆ ಅಸ್ಪೃಶ್ಯರಿಗೆ ಎಷ್ಟು ವಿರೋಧವೆಂದರೆ ಮುಂಬಯಿ ಶಾಸಕಾಂಗ ಸಭೆಯಲ್ಲಿ 'ಹರಿಜನ' ಎಂಬ ಪದಕ್ಕೆ ಕಾನೂನಿನ ಸಮರ್ಥನೆ ನೀಡಲು ಕಾಂಗ್ರೆಸ್ ಸರ್ಕಾರ ಮಸೂದೆ ಮಂಡಿಸಿದಾಗ ಎಲ್ಲಾ ಅಸ್ಪೃಶ್ಯ ಸದಸ್ಯರೂ ಸಭಾತ್ಯಾಗ ಮಾಡಿ ವಿರೋಧ ಸೂಚಿಸಿದರು".[46]

ಕಾಂಗ್ರೆಸ್ ಹಾಗೂ ಗಾಂಧೀಜಿಯರು ಹಮ್ಮಿಕೊಂಡಿದ್ದ ಹರಿಜನೋದ್ಧಾರ ಕಾರ್ಯಕ್ರಮಗಳು -ಕೇವಲ ಮೇಲ್ವರ್ಗದವರು ಹಮ್ಮಿಕೊಂಡಿರುವ ಮೇಲು ಮೇಲಿನ ಹಂತದ ಉದ್ದೇಶಗಳಾಗಿದ್ದು, ಅವುಗಳಿಂದ ಹರಿಜನ ಬಿಡುಗಡೆ ಸಾಧ್ಯವಿಲ್ಲವೆಂದು ಅಂಬೇಡ್ಕರ್ ಭಾವಿಸಿದ್ದರು. ಆಶ್ಚರ್ಯವೆಂದರೆ ಅಂಬೇಡ್ಕರ್ ಅವರು ಹಾಕಿಕೊಂಡಿದ್ದ ಹರಿಜನ ದೇವಾಲಯ ಪ್ರವೇಶ, ಮಾಹಾಡ್ ಕೆರೆಯ ನೀರು ಸ್ವೀಕಾರ, ಮೊದಲಾದ ಕಾರ್ಯಕ್ರಮಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದವರು ಕಾಂಗ್ರೆಸ್ಸಿಗರೇ ಆಗಿದ್ದರು. ಈ ಸಂದರ್ಭದಲ್ಲಿ ಅವರು ಗಾಂಧೀಜಿಯವರಿಗೆ ಒಂದು ಉಗ್ರವಾದ ಪತ್ರ ಬರೆದು ಗಾಂಧೀಜಿಯ ಕಾರ್ಯಕ್ರಮಗಳು ಎಷ್ಟೊಂದು ನಿರುಪಯೋಗಿ ಎಂಬುದನ್ನು ಮನಗಾಣಿಸುತ್ತಾ :

1) ಜಾತಿ ಪದ್ಧತಿ ಹಿಂದೂಗಳನ್ನು ಹಾಳುಗೆಡಹಿದೆ
2) ಚಾತುರ್ವರ್ಣ್ಯದ ಮೇರೆಗೆ ಹಿಂದೂ ಸಮಾಜವನ್ನು ಪುನರ್ ಸಂಘಟಿಸುವುದು ಅಸಾಧ್ಯ.
3) ಇಂಥ ಸಂಘಟನೆ ಅಪಾಯಕಾರಿ, ಏಕೆಂದರೆ ವರ್ಣ ವ್ಯವಸ್ಥೆ ಸಾಮಾನ್ಯ ಜನರ ಸಮೂಹಕ್ಕೆ ಜ್ಞಾನ ಸಂಪಾದನೆ ಹಾಗೂ ಶಾಸ್ತ್ರಾಭ್ಯಾಸದ ಅವಕಾಶವನ್ನು ನಿರಾಕರಿಸುವುದರಿಂದ ಜನಸಾಮಾನ್ಯರ ಅವನತಿಗೆ ಕಾರಣವಾಗುತ್ತದೆ.
4) ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ತತ್ವಗಳನ್ನೊಳಗೊಂಡ ಧರ್ಮವನ್ನು ಆಧರಿಸಿಯೇ ಹಿಂದೂ ಸಮಾಜ ಪುನರ್ ನಿರ್ಮಾಣವಾಗತಕ್ಕದ್ದು.

5) ಈ ಗುರಿಯನ್ನು ಸಾಧಿಸಬೇಕಾದರೆ ವರ್ಗ ಮತ್ತು ಜಾತಿಗಳ ಕುರಿತಾದ ಗೌರವ ಭಾವನೆ ನಷ್ಟವಾಗತಕ್ಕದ್ದು.

6) ಶಾಸ್ತ್ರಗಳು ದೇವವಾಣಿಯೆಂಬ ಭಾವನೆಯನ್ನು ನಾಶಗೊಳಿಸುವುದರಿಂದ ಮಾತ್ರ ಜಾತಿ ವರ್ಣಗಳ ಮೇಲಿನ ಗೌರವ ನಾಶವಾಗಬಲ್ಲದು".[47]

ಅಂಬೇಡ್ಕರ್ ಅವರು ಅಸ್ಪೃಶ್ಯತೆ-ಅಸ್ಪೃಶ್ಯರನ್ನು ವಿರೋಧಿಸುವುದಕ್ಕಿಂತ ಅವುಗಳನ್ನು ರೂಪಿಸಿದ ವೇದ, ಸ್ಮೃತಿ-ಇತ್ಯಾದಿ ಶಾಸ್ತ್ರಗ್ರಂಥಗಳನ್ನು ಪುರೋಹಿತಶಾಹಿಯನ್ನು ತೀವ್ರವಾಗಿ ಖಂಡಿಸುತ್ತಿದ್ದರು. ನೀವು ಎದುರಿಸಬೇಕಾದ ವೈರಿ ಜಾತಿನಿಷ್ಠ ಜನರಲ್ಲ. ಅವರಿಗೆ ಈ ಧರ್ಮವನ್ನು ಬೋಧಿಸಿದ ಶಾಸ್ತ್ರಗಳೇ ಶತ್ರು. ಶಾಸ್ತ್ರಗಳಲ್ಲಿ ಜನರಿಗಿರುವ ನಿಷ್ಠೆಯನ್ನು ನಾಶಪಡಿಸುವುದೇ ನಿಜವಾದ ಮಾರ್ಗ. ಜಾತಿ ಬಹಳ ಪವಿತ್ರವೆಂಬ ಭ್ರಾಂತಿ ಹುಟ್ಟಿದ್ದು ನಿಮ್ಮ ಧರ್ಮದಿಂದ ಎಂಬ ಮಾತುಗಳನ್ನು ಹಿಂದೂಗಳಿಗೆ ಹೇಳುವ ಧೈರ್ಯ ನಿಮ್ಮಲ್ಲಿ ಬರಬೇಕು. ಧರ್ಮಗುರುವಾಗತಕ್ಕಂತಹ ಮನುಷ್ಯ ಕ್ರಾಂತಿಕಾರನಲ್ಲ ಧರ್ಮಗುರುವಾಗಿರುವ ಮನುಷ್ಯ ಕ್ರಾಂತಿಕಾರನಾಗ ಬಯಸುವುದಿಲ್ಲ"[48] ಎಂದು ಮಾರ್ಮಿಕವಾಗಿ ಪಟ್ಟಭದ್ರ ಹಿತಾಸಕ್ತಿಗಳು ಜಾತಿಯನ್ನು ಪೋಷಿಸುತ್ತವೆ ಹೊರತು ಅವರು ಜಾತಿಯನ್ನು ವಿನಾಶಗೊಳಿಸುವುದಿಲ್ಲವೆಂಬ ವಿಚಾರವನ್ನು ಅಂಬೇಡ್ಕರ್ ತಮ್ಮ ಅನುಯಾಯಿಗಳಿಗೆ ಹೇಳುತ್ತಿದ್ದರು.

ಜಾತಿಯೆಂಬುದನ್ನು ಬೇಧಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ ಎಂಬುದನ್ನು ಹಾಗೂ ಅದು ಅಭಾದಿತವಾಗಿ ತಲೆ-ತಲೆಮಾರುಗಳಿಗೆ ಮುಂದುವರೆದುಕೊಂಡು ಹೋಗಲು ಪ್ರಬಲವಾದ ಕಾರ್ಯ ತಂತ್ರಗಳನ್ನು ರೂಢಿಸಿಕೊಂಡಿದೆ ಎಂಬುದನ್ನು ಅಂಬೇಡ್ಕರ್ ಬಲ್ಲವರಾಗಿದ್ದರು. ಊಟ, ವಾಸಸ್ಥಾನ, ಮದುವೆ, ಧಾರ್ಮಿಕ ವಿಧಿ ವಿಧಾನ, ಕಸುಬು, ವೇಷಭೂಷಣ ಹೀಗೆ ಇಡೀ ಬದುಕನ್ನು ನಿಯಂತ್ರಿಸುವ ಈ ಜಾತಿಯು ಅವರ ಪ್ರಕಾರ : "ಜಾತಿ ಕಟ್ಟಿಕೊಂಡ ಕೋಟೆ ದುರ್ಭೇದ್ಯವಾಗಿದೆ. ಬುದ್ಧಿ ಮತ್ತು ನೀತಿಗಳು ಅದನ್ನು ಬೇಧಿಸಲಾರವು. ಇನ್ನೂ ಒಂದು ಮಾತನ್ನು ನೆನಪಿಡಿ... ಈ ದುರ್ಗದ ಒಳಗೆ ಬುದ್ಧಿವಂತ ವರ್ಗದ ಬ್ರಾಹ್ಮಣರ ಸೈನ್ಯ ಸನ್ನದ್ಧವಾಗಿ ನಿಂತಿದೆ.... ಇದು ಸಂಬಳಕ್ಕಾಗಿ ದುಡಿಯುವ ಸೈನ್ಯವಲ್ಲ... ತನ್ನ ಮಾತೃಭೂಮಿಯನ್ನು ರಕ್ಷಿಸಲು ಸಿದ್ಧವಾಗಿ ನಿಂತ ಸೈನ್ಯವಾಗಿದೆ... ನೀತಿಗೂ ಬುದ್ಧಿಗೂ ಅವಕಾಶವೀಯದಿರುವ ವೇದಗಳನ್ನು ಹಾಗೂ ಶಾಸ್ತ್ರಗಳನ್ನು ಸಿಡಿಮದ್ದು ಹಾಕಿ ಸುಡಬೇಕು..."[49] ಎಂದು ಆಕ್ರೋಶವನ್ನು ಅಂಬೇಡ್ಕರ್ ಜಾತಿಯ ವಿರುದ್ಧ ಕಾರಿದ್ದಾರೆ.


ಭಾರತದ ಅನಿಷ್ಟ ಜಾತಿಪದ್ಧತಿಯ ವಿನಾಶದ ಬಗ್ಗೆ ಆಳವಾಗಿ, ಗಂಭೀರವಾಗಿ ಚಿಂತಿಸಿದರು. ಅಂಬೇಡ್ಕರ್ ಸುಮಾರು 6 ದಶಕಗಳ ಹಿಂದೆಯೇ ದಾಖಲಿಸಿದರು. "ಯಾವುದೂ ಎಲ್ಲ ಕಾಲಕ್ಕೂ ಸಲ್ಲುವುದಿಲ್ಲ. ಯಾವುದೂ ಸನಾತನವಲ್ಲ. ಎಲ್ಲವೂ ಬದಲಾಗುತ್ತಿದೆ. ಬದಲಾವಣೆ ವ್ಯಕ್ತಿಗಳ ಮತ್ತು ಸಮಾಜ ಜೀವನದ ನಿಯಮ ". ಈ ಸಾರ್ವತ್ರಿಕ ನಿಯಮಕ್ಕೆ ಯಾವೊಂದು, ಯಾರೊಬ್ಬರೂ ಹೊರತಲ್ಲ. "ಜಾತಿಗಳು ಇರುವಷ್ಟು ಕಾಲವೂ ಜಾತಿಬಹಿಷ್ಕೃತರು ಇದ್ದೇ ಇರುತ್ತಾರೆ. ಜಾತಿಪದ್ಧತಿಯ ವಿನಾಶವೊಂದರಿಂದ ಹೊರತು ಮತ್ತಾವುದರಿಂದಲೂ ಜಾತಿಬಹಿಷ್ಕೃತರ ವಿಮೋಚನೆ ಸಾಧ್ಯವಿಲ್ಲ" ಎಂಬುದು ಅವರ ಖಚಿತ ಅಭಿಪ್ರಾಯವಾಗಿದ್ದಿತು. "ಹಿಂದೂಗಳು, ಪಶು ಪ್ರಾಣಿಗಳನ್ನು, ನಾಯಿಯನ್ನು ಕೂಡ ತಮ್ಮ ಮನೆಯೊಳಕ್ಕೆ ಕರೆದುಕೊಳ್ಳಬಲ್ಲರು ಆದರೆ ಅಸ್ಪೃಶ್ಯರನ್ನಲ್ಲ. ಅಸ್ಪೃಶ್ಯರನ್ನು ಕುರಿತು ಹಿಂದೂಗಳಲ್ಲಿ ಅಸಾಧಾರಣವಾದ ಕ್ರೌರ್ಯ ತುಂಬಿಕೊಂಡಿದೆ. ಜಾತಿ ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕಾದ ಸನ್ನಿವೇಶ ಎದುರಾದಲ್ಲಿ

ಅದು ಸಮಾಜವಿರೋಧಿಯೂ ಆಗಿ ಕೆಲಸ ಮಾಡಬಲ್ಲದು. "ಮಹಮ್ಮದೀಯನು ಕ್ರೂರನಾಗಿದ್ದರೆ, ಹಿಂದುವು ನೀಚನಾಗಿದ್ದಾನೆ, ನೀಚತನ ಕ್ರೌರ್ಯಕ್ಕಿಂತ ಕೆಟ್ಟದ್ದು"[50] "ಮಹಮ್ಮದೀಯರಿಂದ ಹಾಗೂ ಸಿಖ್ಖರಿಂದ ಹಿಂದೂವು ಭಿನ್ನವಾಗಿರುವುದು ತನ್ನ ಅಂಜುಬುರುಕತನ ಅಥವಾ ಹೇಡಿತನದಿಂದ. ಹಿಂದುವು ಆತ್ಮರಕ್ಷಣೆಗಾಗಿ ಠಕ್ಕತನವನ್ನು, ದ್ರೋಹವನ್ನು ಮಾಡುತ್ತಾನೆ"[51] ಎಂದ ಅಂಬೇಡ್ಕರ್ "ಜಾತಿಯಿಂದ ಹಿಂದೂಗಳ ನೀತಿ ಶೋಚನೀಯ ಅವಸ್ಥೆಗೆ ಮುಟ್ಟಿದೆ. ಜಾತಿ ಸಾರ್ವಜನಿಕ ಭಾವನೆಯನ್ನು ನಾಶಗೊಳಿಸಿದೆ. ಹೃದಯ ವೈಶಾಲ್ಯ ಹಾಳು ಮಾಡಿದೆ. ಸಾರ್ವಜನಿಕ ಅಭಿಪ್ರಾಯಗಳಿಗೆ ಅವಕಾಶವಿಲ್ಲದಂತೆ ಮಾಡಿದೆ. ಹಿಂದೂವಿನ ಸಮಾಜ ಹಾಗೂ ಹೊಣೆಗಾರಿಕೆ ಅವನ ಜಾತಿಗೆ ಸೀಮಿತವಾದವು. ಅವನ ನಿಷ್ಠೆ ಜಾತಿಗೆ ಪರಿಮಿತವಾಗಿದೆ".[52] ಜಾತಿ ಇಷ್ಟೆಲ್ಲ ಅನ್ಯಾಯ ಮತ್ತು ಕೆಡಕಿಗೆ ಕಾರಣವಾಗಿದ್ದರೂ, ಬಹು ಸಂಖ್ಯಾತರಾದ ಅಸ್ಪೃಶ್ಯರು ಏಕೆ ದಂಗೆ ಎದ್ದಿಲ್ಲ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವ ಅಂಬೇಡ್ಕರ್" ಜಗತ್ತಿನ ಬೇರೆಬೇರೆ ಪ್ರದೇಶಗಳಲ್ಲಿ ಸಾಮಾಜಿಕ ಕ್ರಾಂತಿಗಳಾಗಿವೆ. ಭಾರತದಲ್ಲಿ ಸಾಮಾಜಿಕ ಕ್ರಾಂತಿಗಳು ಏಕೆ ನಡೆಯಲಿಲ್ಲ....ಈ ಪ್ರಶ್ನೆಗೆ ಒಂದೇ ಉತ್ತರ: ಅದೇನೆಂದರೆ ಚಾತುರ್ವರ್ಣ್ಯ ಪದ್ಧತಿಯ ಪರಿಣಾಮವಾಗಿ ಹಿಂದೂಸಮಾಜದ ಕೆಳವರ್ಗಗಳು ದಂಗೆ ಏಳಲಾರದಷ್ಟು ದುರ್ಬಲಗೊಳಿಸಲ್ಪಟ್ಟವೆ..."[53] ಎಲ್ಲಿಯವರೆಗೆ ಜಾತಿ ಮತ್ತು ಜಾತಿಪದ್ಧತಿಗೆ ಆಧಾರವಾಗಿರುವ ಚಾತುರ್ವರ್ಣ್ಯ ಪದ್ಧತಿ ಇರುತ್ತದೋ ಅಲ್ಲಿಯವರೆಗೆ ದಲಿತರಿಗೆ ಮುಕ್ತಿ ಇಲ್ಲ ಎಂಬ ನಿಲುವನ್ನು ಅಂಬೇಡ್ಕರ್ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಇಡೀ ದೇಶಕ್ಕೆ ದೇಶವೇ "ಬ್ರಿಟಿಷರೇ ತೊಲಗಿ" ಅನ್ನುತ್ತಿದ್ದಾಗ ಅಂಬೇಡ್ಕರ್ " ಅಸ್ಪೃಶ್ಯತೆ ತೊಲಗಿ ಅಸ್ಪೃಶ್ಯತೆಯನ್ನಾಚರಿಸುವ ಹಿಂದೂಗಳೇ ತೊಲಗಿ" ಎಂದು ಘರ್ಜಿಸುತ್ತಿದ್ದರು. ಈ ಮಾತುಗಳನ್ನೇ ಅವರು ತಮ್ಮ ಒಂದು ಭಾಷಣದಲ್ಲಿ "You know well that the Satyagraha movement started by Gandhi - was backed up by the people as it was against a foreign dominatin. Our struggle is against the mass of caste Hindus and naturally we have little support from outside. Taking these facts into consideration, I feel, we should not antogonise the Government and put it on the side of our opposition. It is not beneficial either"[54] ಈ ಮಾತುಗಳು ಯಾಕಾಗಿ ಡಾ।ಅಂಬೇಡ್ಕರ್ ಬ್ರಿಟಿಷರ ಪರವಾಗಿದ್ದರು ಎಂಬುದನ್ನು ಬಹು ಸೂಚ್ಯವಾಗಿ ಹೇಳುವಂತಿದೆ. ದುರ್ಬಲಗೊಂಡಿರುವ ಅಸ್ಪೃಶ್ಯವರ್ಗ ಏಕ ಕಾಲಕ್ಕೆ ಎರಡು ವೈರಿಗಳನ್ನು ಎದುರಿಸಿ ತಾಳಲಾರದು. ಮೇಲ್ಜಾತಿ ಹಿಂದೂವಿನ ವಿರುದ್ಧ ತಮ್ಮ ಸಮರದಲ್ಲಿ -ತಾವು ಬ್ರಿಟಿಷರ ವಿರೋಧಿಗಳೂ ಆದಲ್ಲಿ ತಮಗೆ ಯಾವ ಪ್ರಯೋಜನವೂ ದಕ್ಕದು... ಬ್ರಿಟಿಷರಿಗೆ ಅನುಕೂಲದಿಂದ ಅವರ ಬೆಂಬಲದಿಂದ ಜಾತಿಪದ್ಧತಿಯ ವಿರುದ್ಧ ಹೋರಾಡಬಹುದೆಂದು ಡಾ।ಅಂಬೇಡ್ಕರ್ ಅವರ ನಿಲುವಾಗಿತ್ತು. ಆದ್ದರಿಂದಲೇ ಬ್ರಿಟಿಷರ ಜೊತೆಗೆ ಯಾವುದೇ ಬಗೆಯ ಅಂಬೇಡ್ಕರ್ ಮುಂದಿಡುವ ಪ್ರಶ್ನೆ ನಿಮ್ನ ವರ್ಗದವರ ಬಿಡುಗಡೆಯಾಗಿತ್ತು. ಹೀಗಾಗಿ ಅಂಬೇಡ್ಕರ್ ಚಿಂತನೆಯು ದಲಿತ ಚಳುವಳಿಯ ಸೈದ್ಧಾಂತಿಕ ಬುನಾದಿಯಾಗಿ ಅದು ಕಾರ್ಯ ಮಾಡುತ್ತಿದೆ. ಜಾತಿವಿನಾಶ ಹೋರಾಟದ ಬೆನ್ನೆಲುಬಾಗಿ ಅವರ ಚಿಂತನೆಗಳು ನಿಂತಿವೆ. ಅವರು ಜಾತಿಪದ್ಧತಿಯನ್ನು ತಿರಸ್ಕರಿಸಿದರು. ಈ ವ್ಯವಸ್ಥೆಯನ್ನು ಕುರಿತಂತೆ ಅವರದು ಅತ್ಯಂತ ಕಟುವಾದ ಟೀಕೆಯಾಗಿತ್ತು. ಅವರ ವಿಚಾರಗಳು ಅತ್ಯಂತ ವೈಚಾರಿಕ ಹಾಗೂ ಪ್ರಸ್ತುತವಾಗಬಲ್ಲವು.

ಆದರೆ ಗಾಂಧೀಜಿಯವರ ಆಲೋಚನೆಯೇ ಬೇರೆಯದಾಗಿತ್ತು. ಹಿಂದೂಗಳ ಮತ್ತು ಅಸ್ಪೃಶ್ಯರ ನಡುವಿನ ಜಗಳ ಒಂದು ಮನೆಯೊಳಗಿನ ದಾಯಾದಿಗಳ ಜಗಳವಿದ್ದಂತೆ. ಮೊದಲು ಹೊರಗಿನ ವೈರಿಯನ್ನು ಒಟ್ಟಿಗೆ ಸೇರಿ ಓಡಿಸೋಣ, ನಂತರ ನಮ್ಮ ಜಗಳವನ್ನು ಬಗೆಹರಿಸಿಕೊಳ್ಳೋಣ ಎಂದಾಗಿತ್ತು. ಆದರೆ ಅಂಬೇಡ್ಕರ್ ಅವರು ಹೊರಗಿನ ವೈರಿ ಇರುವುದರಿಂದ ಮತ್ತು ಅವನ ಆಗಮನದಿಂದ ನಮಗಷ್ಟು-ಇಷ್ಟು ಸೌಲಭ್ಯಗಳು ದೊರಕಿವೆ. ಅವರು ಹೋದ ಮೇಲೆ ಪುನಃ ಜಾತಿ ಹಿಂದೂಗಳ ಕೈಗೆ ಅಸ್ಪೃಶ್ಯರು ಸಿಕ್ಕು ಪನಃ ಯಥಾಸ್ಥಿತಿ ಮುಂದುವರಿಯುತ್ತದೆ. ಆದ್ದರಿಂದ ನಮಗೆ ದೇಶದ ಸ್ವಾತಂತ್ರ್ಯಕ್ಕಿಂತ ನಮ್ಮ ಸ್ವಾತಂತ್ರ್ಯ ಮುಖ್ಯ ಎಂದು ಪ್ರತಿಪಾದಿಸುತ್ತಿದ್ದರು. "Ambedkar was on the dilemma. Had he opposed the Britisher statesmen, and taken sides with Gandhi, he would not have gained anything for his people from the Britishers, and Gandhi would not have given his people anything more than words of blessings and hollow platitudes."[55] ಅಂಬೇಡ್ಕರ್‌ರು ಇಂಥ ಗೊಂದಲಕ್ಕೆ ಸಿಕ್ಕಿಬಿದ್ದಿದ್ದರ ಚಾರಿತ್ರಿಕ ಅನಿವಾರ್ಯತೆ ಇವತ್ತು ಬಹು ಜನರಿಗೆ ಅರ್ಥವಾಗುತ್ತಿದೆ. ಅವರಂತೆ ಭಾರತದ ಚರಿತ್ರೆಯಲ್ಲಿಯೇ ಭಾರತದ ಜಾತಿವ್ಯವಸ್ಥೆಯನ್ನು ಕುರಿತು ಇಷ್ಟೊಂದು ಆಳವಾಗಿ ಅಧ್ಯಯನ ಮಾಡಿದವರು, ಅದರ ವಿರುದ್ಧ ಹೋರಾಡಿದವರು ಮತ್ತೊಬ್ಬರು ಇರಲಿಕ್ಕಿಲ್ಲ. ಏಕೆಂದರೆ ಉಳಿದ ಸಮಾಜ ಸುಧಾರಕರು ಜಾತಿವ್ಯವಸ್ಥೆಯನ್ನು ವಿರೋಧಿಸಿ, ಅದರಲ್ಲಿ ಬದಲಾವಣೆ ತರಲು ಹೋರಾಟ ಮಾಡಿರಬಹುದು. ಆದರೆ ಅಂಬೇಡ್ಕರ್‌ರ ಹಾಗೆ ಜಾತಿವ್ಯವಸ್ಥೆಯನ್ನು ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ವಿಶ್ಲೇಷಿಸಿ, ವಿವರಿಸಿದವರಿಲ್ಲ. ಜಾತಿ ಒಂದು ದೊಡ್ಡ ಒಗಟಿನ ಹಾಗೆ ಕಂಡಿದೆ ಅಂಬೇಡ್ಕರ್‌ರವರಿಗೆ. ಈ ಒಗಟನ್ನು ಬಿಡಿಸುವ ನಿರಂತರ ಪ್ರಯತ್ನಕ್ಕೆ ಪ್ರತಿಭಟನಾತ್ಮಕ ಹೋರಾಟ ಮಾಡಿ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು.

ಅಂಬೇಡ್ಕರ್ ರವರ ಪ್ರಕಾರ ಹಿಂದೂ ಸಮಾಜದ ವಿವರಣೆ ಹೀಗಿದೆ.[56]



ಹಿಂದೂ ಸಮಾಜದ ಸಂರಚನೆ ತುಂಬ ಸಂಕೀರ್ಣವಾದದ್ದು. ಆದರೊಳಕ್ಕೆ ಸ್ವತಃ ನೇಯ್ದುಕೊಂಡಿರುವ ಒಬ್ಬ ವ್ಯಕ್ತಿಗಲ್ಲದೆ ಬೇರೆಯವರಿಗೆ ಇದರ ವಿನ್ಯಾಸ ಕ್ರಮವನ್ನು ಅರಿತುಕೊಳ್ಳುವುದೂ ಕಷ್ಟವೇ. ಅಂಬೇಡ್ಕರ್‌ರವರು ಪ್ರಾಯಶಃ ಗ್ರಹಿಸಲು ಸುಲಭವಾದೀತೆಂದು ಮೇಲಿನಂತೆ ವಿವರಿಸಿದ್ದಾರೆ.

"ಈ ರೀತಿಯಾಗಿ ಮನುಷ್ಯರನ್ನು ವಿಭಜಿಸಿರುವ ಜಾತಿಯು ಸಮಾಜದಲ್ಲಿ ಸೃಷ್ಟಿಸಿರುವ ಶಾಶ್ವತ ಕಂದರವನ್ನು ಅಂಬೇಡ್ಕರ್‌ರವರು ಹೀಗೆ ಪಟ್ಟಿ ಮಾಡುತ್ತಾರೆ.

1) ಜಾತಿಗಳು ದುಡಿಮೆಗಾರರನ್ನು ಪ್ರತ್ಯೇಕಿಸುತ್ತವೆ.
2) ಆಸಕ್ತಿ ಮತ್ತು ದುಡಿಮೆಯನ್ನು ಜಾತಿಗಳು ಪರಸ್ಪರ ಹೊಂದಿಸುವುದಿಲ್ಲ.
3) ಬುದ್ಧಿವಂತಿಕೆಗೂ, ದೈಹಿಕ ಶ್ರಮಕ್ಕೂ ಇರುವ ಸಂಪರ್ಕವನ್ನು ಜಾತಿ ಕಡಿದು ಹಾಕುತ್ತದೆ.
4) ತನ್ನ ನಿಜವಾದ ಆಸಕ್ತಿಯನ್ನು ಬೆಳೆಸಿಕೊಳ್ಳುವುದನ್ನು ನಿರಾಕರಿಸುವುದರಿಂದ ಜಾತಿಯು ವ್ಯಕ್ತಿಯನ್ನು ನಿರ್ವೀರ್ಯಗೊಳಿಸುತ್ತದೆ.
5) ಜಾತಿಯು ಚಲನೆಯನ್ನು ಸ್ಥಗಿತಗೊಳಿಸುತ್ತದೆ. ಜಾತಿ ವ್ಯವಸ್ಥೆಯು ಕೇವಲ ಕೆಲಸಗಳ ವಿಂಗಡಣೆಯಲ್ಲ. ಅದು ಕೆಲಸಗಾರರನ್ನು ವಿಭಾಗಿಸುತ್ತದೆ."[57]

ಇಂಥ ಏಣಿ ಶ್ರೇಣಿಯನ್ನು ಸೃಷ್ಟಿಸಿ, ಅವುಗಳ ಮಧ್ಯೆ ಪರಸ್ಪರ ಈರ್ಷೆ ಹಾಗೂ ಸ್ಪರ್ಧೆಯನ್ನು ಏರ್ಪಡಿಸಿದ ಸಂಹಿತೆಗಳ ಬಗ್ಗೆ ಅಂಬೇಡ್ಕರ್ ಅವರಿಗೆ ಎಲ್ಲಿಲ್ಲದ ಕೋಪ, ಆಕ್ರೋಷ :"ಸಾಮಾಜಿಕ ಹಕ್ಕುಗಳ ಬಗೆಗೆ ಮನು ಧರ್ಮಸಂಹಿತೆಯಂತಹ ದುಷ್ಟ ಕಾನೂನುಗಳು ಇನ್ನೆಲ್ಲಿಯೂ ಇಲ್ಲ. ಸಾಮಾಜಿಕ ಅನ್ಯಾಯದ ಯಾವುದೇ ದೇಶದ ಯಾವುದೇ ಉದಾಹರಣೆಗಳು ಇದರ ಮುಂದೆ ಸಪ್ಪೆಯಾಗಿ ಬಿಡುತ್ತವೆ. ಮನುಷ್ಯ ಸಮೂಹಗಳು ಈ ಸಾಮಾಜಿಕ ದೌರ್ಜನ್ಯವನ್ನು ಏಕೆ ಸಹಿಸಿ ಅವರನ್ನು ಹಿಂಬಾಲಿಸಿದರು? ಇಂಡಿಯಾದಲ್ಲಿ ಸಾಮಾಜಿಕ ಬಂಡಾಯಗಳು ಏಕೆ ನಡೆಯಲಿಲ್ಲವೆಂಬುದು ನನ್ನನ್ನು ಯಾವಾಗಲೂ ಕಾಡುತ್ತಿರುವ ಪ್ರಶ್ನೆಯಾಗಿದೆ. ಇದಕ್ಕೆ ನಾನು ಕೊಡಬಹುದಾದ ಉತ್ತರ ಒಂದೇ ಒಂದು ಕೆಳವರ್ಗದ ಹಿಂದೂಗಳು ನೇರ ಕ್ರಮಕ್ಕೆ ತೊಡಗದಂತೆ ಅವರನ್ನು ಪ್ರತಿಬಂಧಿಸಿದ್ದು - ಈ ಕೊಳಕು ಚಾತುರ್ವರ್ಣ್ಯ ಪದ್ಧತಿ"[58] ಇಂಥ ಪದ್ಧತಿಯನ್ನು ಸೃಷ್ಟಿಸಿದ ಮನುವನ್ನು ಜರ್ಮನಿಯ ತತ್ವಜ್ಞಾನಿ "ನಿಶೆ" ಗೆ ಹೋಲಿಸಿದ ಅಂಬೇಡ್ಕರ್ ನಿಶೆಯ ವಿಚಾರಗಳು ಎಷ್ಟೋ ಪಾಲಿನಲ್ಲಿ ಮೇಲು ಎನ್ನುತ್ತಾರೆ. ಜಾತಿಪದ್ಧತಿಯನ್ನು ನಾಶ ಮಾಡಲು, ಶೋಷಣೆಯ ಅಂತ್ಯಕ್ಕಾಗಿ ಅಂಬೇಡ್ಕರ್‌ರು ಆಡಿರುವ ನುಡಿಗಳು ಚಿರಸ್ಮರಣೀಯ, ಎಂದೆಂದಿಗೂ ಪ್ರಸ್ತುತ :"ಈ ಜಗತ್ತಿನಲ್ಲಿ ಎರಡು ವರ್ಗಗಳಿವೆ. ಶ್ರೀಮಂತರು-ಬಡವರು, ಶೋಷಕರು-ಶೋಷಿತರು, ಮಧ್ಯಮ ವರ್ಗವೂ ಇದೆ. ಆದರೆ ಅದು ತೀರಾ ಸಣ್ಣದು. ಶ್ರೀಮಂತರ ಸಿರಿತನ ಬಡವರ ಬವಣೆಯಲ್ಲಿದೆ. ಇದನ್ನು ನಿವಾರಿಸಬೇಕಾದರೆ. ದುಡಿಯುವವರೆಲ್ಲ ಜಾತಿ-ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಇಂತಹ ಸಂಘಟನೆ ಮಾತ್ರ ಬಡವರನ್ನು ಪ್ರತಿನಿಧಿಸಲು ಯೋಗ್ಯ. ಹಾಗಾದಾಗ ಎಲ್ಲರೂ ಎಲ್ಲವನ್ನೂ ಹಂಚಿಕೊಳ್ಳಬಹುದು. ಆಗ ಮಾತ್ರ ಸಂಪತ್ತನ್ನು ಉತ್ಪಾದಿಸುವ ಜನ ಹಸಿವೆಯಿಂದ ಸಾಯುವುದಿಲ್ಲ". ಸೈದ್ಧಾಂತಿಕವಾಗಿ ಅಂಬೇಡ್ಕರ್‌ರವರು ಉದಾರ ಪ್ರಜಾಪ್ರಭುತ್ವವಾದಿ ಹಾಗೂ ಬಂಡವಾಳಶಾಹಿ ಸುಧಾರಕರಾಗಿದ್ದರೆಂಬುದನ್ನು ಅವರ ವಿಚಾರಗಳಿಂದ ನಾವು ಗುರುತಿಸಬಹುದಾಗಿದೆ.

4.5 ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಪ್ರತಿಭಟನೆ

"ಮಾನವನ ಹುಟ್ಟು ಆಕಸ್ಮಿಕ" ಎಂಬ ಮಾತೊಂದಿದೆ. ಹುಟ್ಟಿನಿಂದ ಒಬ್ಬ ಮಾನವ ಮೇಲು, ಮತ್ತೊಬ್ಬ ಕೀಳು ಎಂಬುದು ಅತ್ಯಂತ ಅಮಾನವೀಯವಾದ ನಿಯಮ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿನ ಆಧಾರದಿಂದ ವಿಭಜನೆಯಾಗಿ ಇಡೀ ಸಮಾಜದ ಪ್ರಗತಿಗೆ ಮಾರಕವಾಗುವುದನ್ನು ನಾವು ನಮ್ಮ ಇತಿಹಾಸದಿಂದ ಅರಿಯಬಹುದಾಗಿದೆ. ಆದಿ ಕಾಲದ ಮಾನವ ನಾಗರೀಕ ಬದುಕಿಗೆ ಬರುವ ಸಂದರ್ಭದಲ್ಲಿ ಹಲವು ಮಾರ್ಪಾಡುಗಳಾಗಿ, ತನ್ನ ಅನುಕೂಲಕ್ಕಾಗಿ ಹಲವು ವ್ಯಾಖ್ಯಾನಗಳನ್ನು ಕೊಟ್ಟುಕೊಂಡನು. ಅವು ಜಡವಾಗಿ, ಮೂಢನಂಬಿಕೆಗಳಾಗಿ ಮನುಷ್ಯ ತನ್ನ ಸ್ವಾರ್ಥಕ್ಕೆ ಸುಖಲೋಲಪತೆಗೆ ನೂರಾರು ಕಟ್ಟು ಪಾಡುಗಳನ್ನು ವಿಧಿಸಿಕೊಂಡನು. ಇದನ್ನು ನಾವು ಜಗತ್ತಿನ ಎಲ್ಲ ನಾಗರೀಕತೆಗಳಲ್ಲಿ ಕಾಣಲು ಸಾಧ್ಯ. ಇಂಥ ಮೌಢ್ಯವನ್ನು, ಶೋಷಣೆಯನ್ನು ಸುಧಾರಿಸಲು ಕಾಲಕಾಲಕ್ಕೆ ಹಲವು ಸುಧಾರಕರು ಜನಿಸಿದ್ದಾರೆ. ತಮ್ಮ ಚಿಂತನೆಗಳನ್ನು ಮಂಡಿಸಿ, ಜನರ ಉದ್ಧಾರಕ್ಕೆ ಶ್ರಮಿಸಿದ್ದಾರೆ. ಭಾರತದ ಚರಿತ್ರೆಯಲ್ಲಿ ಇಂಥ ಸುಧಾರಕರು ಕ್ರಾಂತಿಕಾರಿಗಳು ಹಲವರು. ಇವರಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಮುಂತಾದವರು ಬುದ್ಧನ ಆದರ್ಶಪರತೆ, ಬಸವನ ಕಾರ್ಯತತ್ಪರತೆ, ಅಂಬೇಡ್ಕರ್ ಅವರ ಪ್ರತಿಭಟನಾತ್ಮಕ ಜನತಾ ಹೋರಾಟಗಳು ಅಪೂರ್ವವಾದವು.

ವರ್ಣವ್ಯವಸ್ಥೆ ತನ್ನ ಬಿಗಿಮುಷ್ಠಿಯಲ್ಲಿ ಜನರನ್ನು ಸಿಕ್ಕಿಸಿಕೊಂಡು, ತನ್ನ ಕಬಂಧಬಾಹುಗಳನ್ನು ಚಾಚುತ್ತಿರುವಾಗಲೇ ಸಮಾಜ ಜಡ್ಡುಗಟ್ಟಿ ಹೋಯಿತು. ಚಾತುರ್ವರ್ಣ ಪದ್ಧತಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಸೃಷ್ಟಿಗೊಂಡು, ಅವೇ ಜಾತಿಗಳಾಗಿ ಬಿಗಿ ಕಟ್ಟುಪಾಡುಗಳು ಬೆಳೆದುಬಂದವು. ವರ್ಣದಿಂದಾಚೆ ಜನಾಂಗವೊಂದು ಉಳಿಯಿತು. ಪಂಚಮವರ್ಗ ಅಥವಾ "ಅಸ್ಪೃಶ್ಯ" ಜನಾಂಗವೊಂದು ಭಾರತೀಯ ಸಮಾಜದ ಶ್ರೇಣಿಯಲ್ಲಿ ಕಟ್ಟಕಡೆಯ ಹಂತವಾಯಿತು. ಅಂಬೇಡ್ಕರ್ ಈ ಸಮಾಜದ ನಿರ್ಲಕ್ಷ್ಯಕ್ಕೊಳಗಾದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿದ್ದರಿಂದಲೇ, ಅವರ ಕಷ್ಟಗಳಿಗೆ ದನಿಯಾದರು. ಆ ಜನಾಂಗಕ್ಕೆ ಬಾಯಿಯಾದರು. ಮೂಕ ಮಾನವ ಕುಲಕ್ಕೆ ಮಾತಿನ ಸಂಕೇತವಾದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಹಿಂದೂ ಸಮಾಜದ ಪ್ರತಿಭಟನೆಯ ಕಿಡಿಯಾದರು.

ಅಸ್ಪೃಶ್ಯತೆ ಮತ್ತು ವರ್ಣಭೇದಗಳು ಪ್ರಪಂಚದ ಎರಡು ಅಮಾನವೀಯ ಕ್ರೌರ್ಯಗಳು. ಇವುಗಳ ವಿರುದ್ಧದ ಹೋರಾಟಗಳೇ ಅಗ್ರಮಾನ್ಯ ಕ್ರಾಂತಿಕಾರಿ ಹೋರಾಟಗಳು ಇವು ಮಾನವೀಯತೆ ಪರವಾದ ಹೋರಾಟಗಳು. ಭಾರತದಲ್ಲಿ ಇಂತಹ ಹೋರಾಟದ ಮುಂಚೂಣಿಯಲ್ಲಿದ್ದ ಮಾನವತಾವಾದಿ ಅಂಬೇಡ್ಕರ್. ಅಸ್ಪೃಶ್ಯನಾಗಿ ಜನಿಸಿ, ಸ್ವಪ್ರಯತ್ನದಿಂದ ಜ್ಞಾನ ನಿಧಿಯಾಗಿ, ವಿದ್ವಾಂಸರಾಗಿ, ವಿದ್ವತ್ಪೂರ್ಣ ಲೇಖನ-ಬರಹಗಳಿಂದ ಹಿಂದೂ ಸಮಾಜದ ಅಸಮಾನತೆಯ ವಿರುದ್ಧ ಪ್ರತಿಭಟನಾತ್ಮಕ ಚಳುವಳಿಗಳನ್ನು ಸಂಘಟಿಸಿದರು. ಚಳುವಳಿಗೆ ಪೂರಕವಾದ ಪತ್ರಿಕೆಗಳನ್ನು, ಸಿದ್ಧಾಂತಗಳನ್ನು ತಮ್ಮ ಅಧ್ಯಯನಗಳಿಂದ ರೂಪಿಸಿ ಹಂತವಾದ ವಿಮರ್ಶೆಯಿಂದ ಸಮಕಾಲೀನರನ್ನು ದಂಗುಬಡಿಸಿದರು. ಭಾರತದ ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲೇ ದಲಿತರ ವಿಮೋಚನೆಯ ಕನಸುಕಂಡರು. ಸ್ವಾತಂತ್ರ್ಯ ಚಳುವಳಿಯ ಮುಖ್ಯ ಘಟನೆಯಾದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿ ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸಲು ತಮ್ಮದೇ ವಿಚಾರಗಳನ್ನು ಮಂಡಿಸಿ ಬ್ರಿಟಿಷರನ್ನು ಬೆರಗುಗೊಳಿಸಿದರು. ಸಾಂಪ್ರದಾಯಿಕ ಭಾರತೀಯರನ್ನು ಎಚ್ಚರಗೊಳಿಸಿದರು.

ಅಂಬೇಡ್ಕರ್ ಆರಂಭಿಸಿದ ಇಂತಹ ಹೋರಾಟಗಳು ಇಂದಿಗೂ ಪ್ರಸ್ತುತವಾಗಿವೆ. ಅಂದಿನ ಸಾಮಾಜಿಕ ಪಿಡುಗುಗಳಾದ ಜಾತಿಪದ್ಧತಿ, ಅಸ್ಪೃಶ್ಯತೆ, ಶೋಷಣೆ, ಬಡತನ ನಿರುದ್ಯೋಗ - ಇಂದಿಗೂ ಭಾರತದ ಬಹು ದೊಡ್ಡ ಸಮಸ್ಯೆಗಳಾಗಿವೆ. ಅಸ್ಪೃಶ್ಯತೆ ರೂಪಾಂತರ ಹೊಂದುತ್ತಾ ಅಂತರ್ಮುಖವಾಗುತ್ತಿದೆ. ಜಾತಿ ಸರ್ವರಂಗದಲ್ಲಿ ತನ್ನ ಕರಾಳ ಹಸ್ತಗಳನ್ನು ಚಾಚಿದೆ. ಮಾನವ ಕೇಂದ್ರಿತವಾಗಬೇಕಾದ ಚಿಂತನೆಗಳು ಜಾತಿ, ಧರ್ಮ ಕೇಂದ್ರವಾಗುತ್ತಿವೆ. ಧರ್ಮವಿನಾಶದ ಅಂಚಿನಲ್ಲಿದೆ. ಧರ್ಮದ ಹೆಸರಿನಲ್ಲಿ ಪ್ರಜಾಪ್ರಭುತ್ವ ಬೆಳೆಯುತ್ತಿದೆ. ಇದನ್ನೇ ಜಾತ್ಯಾತೀತತೆಯ ಉನ್ನತ ಮೌಲ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವಗಳ ಮೂಲಕ ಬೆಳೆಯಬೇಕಾದ "ಪ್ರಜಾಪ್ರಭುತ್ವ" ವ್ಯವಸ್ಥೆ ಹುಸಿಗೊಳ್ಳುತ್ತಿದೆ. ಹೀಗಾಗಿ ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಹೋರಾಟ ಇಂದು ಕೂಡ ಪ್ರಸ್ತುತವೆನಿಸುತ್ತದೆ. ಅಂಬೇಡ್ಕರ್ ಅವರ ಬಾಲ್ಯದಲ್ಲಿ ಜರುಗಿದ ಅಮಾನವೀಯ ಘಟನೆಗಳು ಅವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿ, ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯ ಮೂಲವನ್ನು, ಕಾರಣಗಳನ್ನು ಸದಾ ಹುಡುಕುವಂತೆ ಮಾಡಿದವು. ತನ್ನ ಸುತ್ತಲಿನ ಜನರ ನೋವಿಗೆ ದನಿಯಾಗಿ ಹೋರಾಟದ ಕಿಡಿಯನ್ನು ಹೊತ್ತಿಸಿ ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು. ಜಾತಿಪದ್ಧತಿ ಜಾರಿಗೆ ಬಂದದ್ದೆ ಅಸ್ಪೃಶ್ಯರಾಗಿ, ಹಾಗಾದರೆ ಈ ಅಸ್ಪೃಶ್ಯರು ಯಾರು? ಈ ಅಸ್ಪೃಶ್ಯತನ ಯಾವಾಗ ಆರಂಭವಾಯಿತು ಎಂದು ಅಂಬೇಡ್ಕರ್‌ರು ಇತಿಹಾಸದ ಪುಟಗಳ ಕಡೆ ತಮ್ಮ ಚಿಂತನೆಯನ್ನು, ಅಧ್ಯಯನವನ್ನು ಆರಂಭಿಸಿದರು.

ಅಸ್ಪೃಶ್ಯರು ಯಾರು ? ಅಂಬೇಡ್ಕರ್‌ರವರ ವಿಚಾರಗಳು :

ಅಸ್ಪೃಶ್ಯತೆಯನ್ನು ಆಳವಾಗಿ ಅಧ್ಯಯನ ಮಾಡಿದ ಅಂಬೇಡ್ಕರ್ " ಸ್ವಲ್ಪ ಮಟ್ಟಿನ ವಿಶ್ವಾಸದಿಂದ ಅಸ್ಪೃಶ್ಯತೆ ಕ್ರಿ.ಶ.400 ರಲ್ಲಿ ಹುಟ್ಟಿದೆ ಎಂದು ಹೇಳಬಹುದು. ಅದು ಬೌದ್ಧರು ಮತ್ತು ಬ್ರಾಹ್ಮಣರ ನಡುವೆ ಪಾರಮ್ಯಕ್ಕಾಗಿ ನಡೆದ ಹೋರಾಟದ ಮಧ್ಯೆ ಇದರ ಜನನವಾಯಿತು. ಈ ಹೋರಾಟ ಭಾರತದ ಚರಿತ್ರೆಗೆ ಒಂದು ರೂಪವನ್ನು ಕೊಡುವುದರಲ್ಲಿ ಮಹತ್ವದ ಪಾತ್ರ ವಹಿಸಿದೆ"[59] ಹಾಗೂ ಶೂದ್ರ ಮತ್ತು ಬ್ರಾಹ್ಮಣರ ಮಧ್ಯೆ ನಡೆದ ತೀವ್ರ ಸಂಘರ್ಷ ಉಂಟಾದುದರ ಬ್ರಾಹ್ಮಣರ ಮಧ್ಯೆ ನಡೆದ ತೀವ್ರ ಸಂಘರ್ಷ ಉಂಟಾದುದರ ಫಲವಾಗಿಯೂ ಶೂದ್ರರು ಕೆಳದರ್ಜೆಗೆ ಇಳಿಸಲ್ಪಟ್ಟು ಅಂತ್ಯಜರಾಗಿರಬಹುದೆಂದು ಡಾ।ಅಂಬೇಡ್ಕರ್ ತರ್ಕಿಸುತ್ತಾರೆ.

ಹಾಗೆಯೇ ಡಾ।ಅಂಬೇಡ್ಕರ್ ಹೇಳುವ ಹಾಗೆ ಅಸ್ಪೃಶ್ಯತೆಯು ಎರಡು ಮೂಲಗಳಿಂದ ಹುಟ್ಟಿರುತ್ತದೆ.

1) ಪರಕೀಯ ಪಂಗಡಗಳಿಂದ ಸಿಡಿದವರ ಬಗೆಗೆ ತಿರಸ್ಕಾರ ಮತ್ತು ದ್ವೇಷ.
2) ಉಳಿದವರು ಗೋಮಾಂಸ ಭಕ್ಷಣವನ್ನು ತ್ಯಜಿಸಿದ ಮೇಲೂ ಈ ಬಿಡಿ ಜನರು ಗೋಮಾಂಸ ಭಕ್ಷಣವನ್ನು ಮುಂದುವರಿಸಿದರು.

ಇಷ್ಟೇ ಅಲ್ಲದೇ ಜಾತಿ ಬಹಿಷ್ಕಾರಕ್ಕೆ ಒಳಗಾದವರು, ವರ್ಣಸಂಕರದಿಂದ ಹುಟ್ಟಿದ ಸಂತಾನ, ಯುದ್ಧದಲ್ಲಿ ಸೆರೆಸಿಕ್ಕ ಕೈದಿಗಳು, ಮೊದಲಾದವರೆಲ್ಲ ಹೀಗೆ ಅಸ್ಪೃಶ್ಯರಾಗಿ ಪರಿವರ್ತಿತರಾಗಿರಬಹುದೆಂದು ಅಂಬೇಡ್ಕರ್ ತರ್ಕಿಸುತ್ತಾರೆ.

ಅಸ್ಪೃಶ್ಯರ ಜೀವನಪದ್ಧತಿ, ಆಚಾರ, ವಿಚಾರ, ವೇಷ, ಭೂಷಣ, ವಾಸ, ಕಸುಬು -ಈ ಎಲ್ಲ ಹೇಗಿರಬೇಕೆಂದು ಮನು ಕರಾರುವಕ್ಕಾಗಿ ನಿಗದಿಪಡಿಸಿದ್ದಾನೆ. ಅವುಗಳ ಅಧ್ಯಯನದಿಂದ ಅಸ್ಪೃಶ್ಯರ ಜೀವನಶೈಲಿ ಪರಿಚಯವಾಗುತ್ತದೆ. ಡಾ।ಅಂಬೇಡ್ಕರ್ ಅವುಗಳನ್ನು ಹೆಕ್ಕಿ ಹೀಗೆ ಪಟ್ಟಿ ಮಾಡುತ್ತಾರೆ.

1) ಹಿಂದೂಗಳ ವಾಸಸ್ಥಾನಗಳಿಂದ ದೂರವಾಗಿಪ್ರತ್ಯೇಕ ಜಾಗದಲ್ಲಿ ಅಸ್ಪೃಶ್ಯರು ವಾಸಿಸಬೇಕು. ಈ ನಿಯಮ ಮುರಿಯುವುದಾಗಲೀ ಅದರಿಂದ ತಪ್ಪಿಸಿಕೊಳ್ಳುವುದಾಗಲೀ ಅಸ್ಪೃಶ್ಯರಲ್ಲಿ ಒಂದು ಅಪರಾಧವೆನಿಸುತ್ತದೆ.
2) ಅಸ್ಪೃಶ್ಯರ ವಾಸಪ್ರದೇಶವು ಹಳ್ಳಿಯ ದಕ್ಷಿಣ ದಿಕ್ಕಿನಲ್ಲಿರಬೇಕು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣವು ಅತ್ಯಂತ ಅಮಂಗಲಕರವಾದುದು. ಈ ನಿಯಮದ ಉಲ್ಲಂಘನೆಯು ಅಪರಾಧವೆನಿಸಿಕೊಳ್ಳುತ್ತದೆ.
3) ಹತ್ತಿರ ಬರುವುದರಿಂದ ಅಥವಾ ನೆರಳು ಬೀಳುವುದರಿಂದ ಉಂಟಾಗುವ ಮಾಲಿನ್ಯವನ್ನು ಅಸ್ಪೃಶ್ಯನು ಉಂಟು ಮಾಡಬಾರದು.
4) ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ಭೂಮಿ, ಧನ ಇತ್ಯಾದಿ ರೂಪದ ಸಂಪತ್ತನ್ನು ಪಡೆದು ಕೊಳ್ಳುವುದು ಒಂದು ಅಪರಾದ.
5) ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ಹಂಚಿನ ಹೊದಿಕೆ ಇರುವಂಥ ಮನೆಯನ್ನು ಕಟ್ಟಿಕೊಳ್ಳುವುದು ಒಂದು ಅಪರಾಧ.
6) ಅಸ್ಪೃಶ್ಯರ ಗುಂಪಿಗೆ ಸೇರಿದವನು ಶುಭ್ರವಾದ ವಸ್ತ್ರಗಳನ್ನು ತೊಡುವುದು, ಪಾದರಕ್ಷೆಗಳನ್ನು ಹಾಕಿಕೊಳ್ಳುವುದು, ಗಡಿಯಾರ ಅಥವಾ ಯಾವುದೇ ಚಿನ್ನದ ಆಭರಣಗಳನ್ನು ಹಾಕಿಕೊಳ್ಳುವುದು ಒಂದು ಅಪರಾಧವೆನಿಸುತ್ತದೆ.
7) ಅಸ್ಪೃಶ್ಯರ ಗುಂಪಿಗೆ ಸೇರಿದವನು ತನ್ನ ಮಕ್ಕಳಿಗೆ ಸೊಗಸಾದ ಹೆಸರುಗಳನ್ನಿಡುವುದು ಒಂದು ಅಪರಾಧ. ಅವನಿಡುವ ಹೆಸರುಗಳು ತಿರಸ್ಕಾರಸೂಚಕಗಳಾಗಿರಬೇಕೆಂದು
8) ಅಸ್ಪೃಶ್ಯರ ಗುಂಪಿಗೆ ಸೇರಿದವನು ಒಂದು ಹಳ್ಳಿಯಲ್ಲಿ ಕುದುರೆ ಮೇಲೆ ಕುಳಿತು ಹಾದು ಹೋಗುವುದು ಅಥವಾ ಪಲ್ಲಕ್ಕಿಯಲ್ಲಿ ಕುಳಿತು ತೆರಳುವುದು ಒಂದು ಅಪರಾಧ.
9) ಒಬ್ಬ ಹಿಂದುವಿನ ಸಮ್ಮುಖದಲ್ಲಿ ಕುರ್ಚಿಯ ಮೇಲೆ ಕೂರುವುದು ಅಸ್ಪೃಶ್ಯರ ಗುಂಪಿಗೆ ಸೇರಿದವನು ಮಾಡಬಹುದಾದ ಅಪರಾಧ.
10) ಅಸ್ಪೃಶ್ಯರ ಗುಂಪಿಗೆ ಸೇರಿದವನು ಅಸ್ಪೃಶ್ಯರ ಮೆರವಣಿಗೆಯೊಂದನ್ನು ಹಳ್ಳಿಯ ಮುಖಾಂತರ ಕೊಂಡು ಹೋಗುವುದು ಒಂದು ಅಪರಾಧ.[60]

ಮೇಲಿನ ಎಲ್ಲ ನಿಯಮಗಳು ಅಸ್ಪೃಶ್ಯನು ಅನುಸರಿಸಬೇಕಾದ ವಾಸಸ್ಥಾನ ಹಾಗೂ ನಡುವಳಿಕೆಗಳನ್ನು ಸೂಚಿಸಿದರೆ ಅವನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕುರಿತು "ಮನುಸ್ಮೃತಿ" ಈ ಕೆಳಗಿನ ಕಟ್ಟುಪಾಡುಗಳನ್ನು ವಿಧಿಸಿದೆ.

1) "ಅಸ್ಪೃಶ್ಯರ ಗುಂಪಿಗೆ ಸೇರಿದವನು ಹಿಂದೂವೊಬ್ಬನ ಮನೆಯಲ್ಲಿನ ಎಲ್ಲ ರೀತಿಯ ಘಟನೆಗಳ ಬಗೆಗೂ ಸಂದೇಶವನ್ನು ಹೊತ್ತು ಆ ಹಿಂದೂವಿನ ನೆಂಟರಿಷ್ಟರಿಗೆ ಅದನ್ನು ಮುಟ್ಟಿಸಬೇಕು. ಘಟನೆಯು ಮರಣಕ್ಕೆ ಸಂಬಂಧಿಸಿದ್ದಿರಬಹುದು, ಮದುವೆಗೆ ಸಂಬಂಧಿಸಿರಬಹುದು.

2) ಹಿಂದೂವೊಬ್ಬನ ಮನೆಯಲ್ಲಿ ವಿವಾಹವು ಜರುಗುವಂತಿದ್ದರೆ ಅವನ ಮನೆಯಲ್ಲಿ ಸೌದೆ ಒಡೆಯುವುದು ಮತ್ತು ಚಿಕ್ಕ ಪುಟ್ಟ ಚಾಕರಿಗಳನ್ನು ಹೇಳಿದಂತೆ ಮಾಡುವುದು ಅಸ್ಪೃಶ್ಯರ ಕೆಲಸ.
3) ಹಿಂದೂ ಹುಡುಗಿಯೊಬ್ಬಳು ಮದುವೆಯಾಗಿ ತವರು ಮನೆಯಿಂದ ಗಂಡನ ಮನೆಯಿರುವ ಹಳ್ಳಿಗೆ ಹೊರಡುವಾಗ ಅಸ್ಪೃಶ್ಯನು ಅವಳೊಡನೆ ಹೋಗಬೇಕು.
4) ಕಾಮನಹಬ್ಬ, ದಸರಾ ಇತ್ಯಾದಿ ಸಾಮೂಹಿಕ ಉತ್ಸವಗಳನ್ನು ಆಚರಿಸುವುದರಲ್ಲಿ ಇಡೀ ಗ್ರಾಮ ಸಮುದಾಯವು ನಿರತವಾಗಿದ್ದಾಗ ಅಸ್ಪೃಶ್ಯರು ಈ ಉತ್ಸವಕ್ಕೆ ಪೂರಕವಾದ ಎಲ್ಲ ಕೀಳು ಕೆಲಸಗಳನ್ನು ಮಾಡಬೇಕು.
5) ಕೆಲವು ಉತ್ಸವ ಸಂದರ್ಭದಲ್ಲಿ ಅಶ್ಲೀಲ ಮೋಜಿಗೆ ಗುರಿಯಾಗಲು ತಮ್ಮ ಹೆಂಗಸರನ್ನು ಅಸ್ಪೃಶ್ಯರು ಗ್ರಾಮ ಸಮುದಾಯದ ಸದಸ್ಯರಿಗೆ ಒಪ್ಪಿಸಬೇಕು"[61] ಎಂದು ಪಟ್ಟಿ ಮಾಡಿರುವ ಅಂಬೇಡ್ಕರ್ ಈ ಸಂಹಿತೆಗಳನ್ನು ರೂಪಿಸುವಲ್ಲಿ ಸವರ್ಣೀಯ ಹಿಂದೂಗಳು ಶ್ರೇಷ್ಠರೆಂದು ಭಾವಿಸಿರುವ ಮನು, ಯಾಜ್ಞವಲ್ಕ್ಯ, ನಾರದ, ವಿಷ್ಣು, ಕಾತ್ಯಾಯನ ಎಲ್ಲರ ಪಾತ್ರವಿದೆ ಎಂದು ಸೋದಾಹರಣ ಸಹಿತ ವಾಕ್ಯಗಳನ್ನು ತಮ್ಮ ಲೇಖನದಲ್ಲಿ ಒದಗಿಸುತ್ತಾರೆ.

"ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆಂದರೆ ಅದಕ್ಕೆ ಕಾರಣ ಅವರ ಧರ್ಮ ಅವರನ್ನು ಬೆಂಬಲಿಸುತ್ತದೆ. ಅಸ್ಪೃಶ್ಯರು ಈ ಸ್ಥಾಪಿತ ವ್ಯವಸ್ಥೆಯ ವಿರುದ್ಧ ಬಂಡೆದ್ದರೆ ಹಿಂದೂಗಳು ಅದನ್ನು ಅನ್ಯಾಯವಾಗಿ, ಅಮಾನವೀಯವಾಗಿ ತುಳಿಯುತ್ತಾರಾದರೆ -ಅದಕ್ಕೆ ಕಾರಣ, ಅವರ ಧರ್ಮ ಅವರಿಗೆ ಈ ಸ್ಥಾಪಿತ ವ್ಯವಸ್ಥೆ ದೈವ ನಿರ್ಮಿತವೆಂದು, ಪವಿತ್ರವೆಂದು ಹೇಳುತ್ತದೆ. ಹಾಗೂ ಯಾವುದೇ ಮಾರ್ಗವನ್ನು ಬಳಸಿಯಾದರೂ ಈ ಸ್ಥಾಪಿತ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೆಂದು ಒತ್ತಾಯಿಸುತ್ತದೆ. ಅವರ ಧರ್ಮ ಅವರಿಗೆ ಅಸ್ಪೃಶ್ಯರನ್ನು ಮನುಷ್ಯರನ್ನಾಗಿ ನೋಡದಿರುವಂತೆ ಹೇಳುತ್ತದೆ"[62] ಹೀಗಾಗಿ ಹಿಂದೂಧರ್ಮವೆಂಬುದು ಧರ್ಮವೇ ಅಲ್ಲ ಅಸ್ಪೃಶ್ಯರ ಎಲ್ಲಾ ಬಗೆಯ ಹೀನಾಯ ಸ್ಥಿತಿಗೆ ಹಿಂದೂಧರ್ಮ ಮತ್ತು ಅದು ಮಂಡಿಸಿರುವ ನಿಯಮಗಳೇ ಕಾರಣವೆಂದು ನಂಬುತ್ತಾರೆ. ಜಗತ್ತಿನಲ್ಲಿ ಎಲ್ಲಾ ಧರ್ಮಗಳು ಬಡವರ ಪರವಾಗಿ, ಅವರ ಬಿಡುಗಡೆಗಾಗಿ ಇದ್ದರೆ, ಹಿಂದೂಧರ್ಮ ಮಾತ್ರ ಉಳ್ಳವರ ಪರವಾಗಿ, ಶೋಷಕರ ಪರವಾಗಿದೆ." ಗುಲಾಮಗಿರಿಯ ಸಂದರ್ಭದಲ್ಲಿ ಧರ್ಮ ಗುಲಾಮನ ಪರವಾಗಿತ್ತು. ಆದರೆ ಅಸ್ಪೃಶ್ಯರಿಗೆ ಮಾತ್ರ ಧರ್ಮವು ವಿರೋಧವಾಗಿದೆ" ಎನ್ನುತ್ತಾರೆ ಅಂಬೇಡ್ಕರ್[63] ಹೀಗಾಗಿ ಹಿಂದೂಧರ್ಮದೊಳಗೆ ಅಸ್ಪೃಶ್ಯರು ಇರುವವರೆಗೂ ಅವರ ಬಿಡುಗಡೆ ಸಾಧ್ಯವಿಲ್ಲವೆಂಬುದು ಅಂಬೇಡ್ಕರ್ ಅವರ ಖಚಿತ ಅಭಿಪ್ರಾಯವಾಗಿತ್ತು.

ಅಸ್ಪೃಶ್ಯತೆ ಎನ್ನುವುದು ಹಿಂದೂಗಳ ಅಂತಃಸಾಕ್ಷಿಯನ್ನು ಕೊಂದುಹಾಕಿದೆ. ಕಣ್ಣೆದಿರು ಇಷ್ಟೆಲ್ಲ ಅನ್ಯಾಯಗಳು, ಅವಮಾನಗಳು ಘಟಿಸುತ್ತಿದ್ದರೂ ಅವರ ಅಂತಃಕರಣ ಸ್ಪಂದಿಸದಿರಲು ಕಾರಣ- "ಅಸ್ಪೃಶ್ಯತೆ ಎನ್ನುವುದು ಅಸ್ಪೃಶ್ಯರಿಗೆ ಒಂದು ದುರಾದೃಷ್ಟವಾಗಿರಬಹುದು ಆದರೆ ಹಿಂದೂಗಳಿಗೆ ಅದು ಖಂಡಿತವಾಗಿಯೂ ಒಂದು ಅದೃಷ್ಟವೇ. ಇದು ಅವರಿಗೆ ನೀಚರೆಂದು ಪರಿಗಣಿಸಬಹುದಾದ ಒಂದು ವರ್ಗವನ್ನು ಕಲ್ಪಿಸಿಕೊಡುತ್ತದೆ. ಹಿಂದೂಗಳ ಅಸ್ತಿತ್ವಹೀನರಿಗೂ ಏನೋ ಒಂದು ಅಸ್ತಿತ್ವವಿರುವ ವ್ಯವಸ್ಥೆಯನ್ನು ಬಯಸುವುದಿಲ್ಲ. ಅವರು ಬಯಸುವ ವ್ಯವಸ್ಥೆ, ಕೆಲವು ಅಸ್ತಿತ್ವ ಇರುವವರು ಮತ್ತು ಉಳಿದವರು ಅಸ್ತಿತ್ವಹೀನರೂ ಆಗಿರುವಂಥ ವ್ಯವಸ್ಥೆ".[64]

ಅಸ್ಪೃಶ್ಯತೆಯು ಇಷ್ಟೊಂದು ಭೀಕರವಾಗಿ, ಭೀಭತ್ಸವಾಗಿದ್ದರೂ ಯಾಕಾಗಿ ಅಸ್ಪೃಶ್ಯರು ಇಷ್ಟೊಂದು ದೀರ್ಘ ಕಾಲ ಸಹಿಸಿಕೊಂಡು ಬಂದರು ಎಂಬುದನ್ನು ಕುರಿತು ಅಂಬೇಡ್ಕರ್ ಮತ್ತೆಮತ್ತೆ ಪ್ರಶ್ನೆ ಹಾಕಿಕೊಳ್ಳುತ್ತಾರೆ. ಇದಕ್ಕೆ ಅವರು ಕಂಡುಕೊಂಡ ಕಾರಣ, ಅವರ ಸಂಖ್ಯಾಬಲದ ಮಿತಿ. ಯಾವ ಹಳ್ಳಿಯಲ್ಲಾದರೂ ಅಸ್ಪೃಶ್ಯರ ಸಂಖ್ಯೆ ಅಲ್ಪ ಸಂಖ್ಯಾತವಾಗಿರುತ್ತದೆ. ಮತ್ತೊಂದು ಭಯ ಸಾಮಾಜಿಕ, ಬಹಿಷ್ಕಾರ, ಎರಡನೇಯದು ಅವರ ಪರಾವಲಂಬಿತನ. ತಮ್ಮ ಪ್ರತಿಯೊಂದು ಅಗತ್ಯಕ್ಕೂ ಜಾತೀಯ ಹಿಂದೂಗಳನ್ನು ಆವಲಂಬಿಸುವ ಆರ್ಥಿಕ ದುಸ್ಥಿತಿ. ಅಲ್ಲದೇ ಅಸ್ಪೃಶ್ಯರ ಮತ್ತು ಸವರ್ಣೀಯರ ಕಲಹ ಏರ್ಪಟ್ಟಾಗ ಪೋಲೀಸ್ ವ್ಯವಸ್ಥೆ ಸಕಾಲದಲ್ಲಿ ದೊರಕದಿರುವುದು ಮತ್ತು ದೊರೆತರೂ ಅದರ ಪಕ್ಷಪಾತ ನೀತಿ ಹಾಗೂ ಬ್ರಾಹ್ಮಣ ವ್ಯವಸ್ಥೆಯಲ್ಲಿ ಶೂದ್ರರು ಶೋಷಣೆಗೆ ಒಳಗಾಗಿದ್ದರೂ ಅಸ್ಪೃಶ್ಯರ ವಿಷಯದಲ್ಲಿ ಅವರು ಮೇಲ್ವರ್ಗದವರ ಜೊತೆ ಒಂದುಗೂಡುವುದು ಮೊದಲಾದ ಕಾರಣಗಳನ್ನು ಅಂಬೇಡ್ಕರ್ ಗುರುತಿಸುತ್ತಾರೆ. ಇದರೊಂದಿಗೆ ಅಂಬೇಡ್ಕರ್ ಅವರು ಶೂದ್ರರ ಪರಿಸ್ಥಿತಿಯನ್ನು ಕುರಿತು ಚಿಂತಿಸಿದ್ದಾರೆ. ಶೂದ್ರರೂ ಕೂಡ ಹಿಂದೂಧರ್ಮದ ದಬ್ಬಾಳಿಕೆಗೆ ತುತ್ತಾಗಿದ್ದಾರೆಂದು ವಿವರಿಸುತ್ತಾರೆ.

ಶೂದ್ರರು ಯಾರು? ಅಂಬೇಡ್ಕರ್ ವಿಚಾರಗಳು :

ಅಸ್ಪೃಶ್ಯರ ಸ್ಥಿತಿ-ಗತಿ, ಆ ವರ್ಗದ ಚರಿತ್ರೆಯನ್ನು ಅಧ್ಯಯನ ಮಾಡಿರುವಂತೆಯೇ ಶೂದ್ರವರ್ಗದ ಸ್ಥಿತಿಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಲಭ್ಯವಿರುವ ಶಾಸ್ತ್ರ- ಸ್ಮೃತಿಗಳನ್ನು ಜಾಲಾಡಿದ್ದಾರೆ. ಮುಖ್ಯವಾಗಿ ಧರ್ಮಸೂತ್ರ, ವಿಷ್ಣುಸ್ಮೃತಿ, ಬ್ರಹ್ಮಸ್ಮೃತಿ, ಮನುಸ್ಮೃತಿ, ಗೌತಮಸೂತ್ರ, ವಶಿಷ್ಠಧರ್ಮಸೂತ್ರಗಳನ್ನು ಜಾಲಾಡಿ ಶೂದ್ರರಿಗೆ ಹಿಂದೂಧರ್ಮವು ವಿಧಿಸಿದ ಕಾನೂನುಗಳ ಸಾರಾಂಶವನ್ನು ಸೂತ್ರೀಕರಿಸಿ ತೆಗೆದಿದ್ದಾರೆ. ಅಂಬೇಡ್ಕರ್ ರವರು ಸಂಸ್ಕೃತವನ್ನು ಅಧ್ಯಯನ ಮಾಡಿ, ಇಂಗ್ಲೀಷಿಗೆ ತರ್ಜುಮೆಯಾದ ವೇದ-ಶಾಸ್ತ್ರಗಳನ್ನು ಸತತ ಅಧ್ಯಯನ ಮಾಡಿ ತಮ್ಮ ಅಭಿಪ್ರಾಯಗಳನ್ನು ಬರೆದಿಟ್ಟಿದ್ದಾರೆ.

ಶೂದ್ರರ ಬಗ್ಗೆ ಬ್ರಾಹ್ಮಣ ಸ್ಮೃತಿಕಾರರು ಮಾಡಿರುವ ನಿಯಮ-ಕಾನೂನುಗಳನ್ನು ಸಾರಾಂಶ ರೂಪದಲ್ಲಿ ಅಂಬೇಡ್ಕರ್ ರವರು ಈ ರೀತಿ ಪಟ್ಟಿ ಮಾಡುತ್ತಾರೆ.

1) ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರನದು ಕೊನೆಯ ಸ್ಥಾನ.
2) ಶೂದ್ರ ಅಶುದ್ಧನಾದುದ್ದರಿಂದ ಯಾವುದೇ ಧಾರ್ಮಿಕ ವಿಧಿಯನ್ನು ಅವನಿಗೆ ಕಾಣುವಂತೆ ಅಥವಾ ಕೇಳುವಂತೆ ಮಾಡಬಾರದು.
3) ಉಳಿದ ಮೂರು ವರ್ಣಗಳನ್ನು ಗೌರವಿಸುವ ರೀತಿಯಲ್ಲಿ ಶೂದ್ರನನ್ನು ಗೌರವಿಸಬಾರದು.
4) ಶೂದ್ರನ ಜೀವಕ್ಕೆ ಬೆಲೆ ಇಲ್ಲ. ಆದ್ದರಿಂದ ಯಾವುದೇ ಪರಿಹಾರ ಕೊಡದೇ ಅವನನ್ನು ಯಾರು ಬೇಕಾದರೂ ಕೊಲ್ಲಬಹುದು.
5) ಶೂದ್ರ ಜ್ಞಾನವನ್ನು ಗಳಿಸಕೂಡದು; ಗಳಿಸಿದರೆ ಅದು ಪಾಪವಾಗುತ್ತದೆ.
6) ಶೂದ್ರನಿಗೆ ಆಸ್ತಿ ಮಾಡುವ ಹಕ್ಕಿಲ್ಲ. ಬ್ರಾಹ್ಮಣ ತನ್ನಿಷ್ಟದಂತೆ ಅದನ್ನು ಕಿತ್ತುಕೊಳ್ಳಬಹುದು.
7) ಸರ್ಕಾರಿ ಸೇವೆಯಲ್ಲಿ ಶೂದ್ರನು ಯಾವುದೇ ಅಧಿಕಾರ ವಹಿಸಕೂಡದು.
8) ಮೇಲಿನ ವರ್ಣಗಳನ್ನು ಸೇವೆ ಮಾಡುವುದೇ ಶೂದ್ರನ ಕರ್ತವ್ಯ ಮತ್ತು ಅದರಿಂದಲೇ ಅವನಿಗೆ ಮೋಕ್ಷ.

9) ಮೇಲಿನ ವರ್ಣದವರು ಶೂದ್ರನನ್ನು ಮದುವೆಯಾಗಬಾರದು. ಆದರೆ ಅವರು ಶೂದ್ರ ಸ್ತ್ರೀಯರನ್ನು ಸೂಳೆಯರನ್ನಾಗಿಟ್ಟುಕೊಳ್ಳಬಹುದು. ಶೂದ್ರನೇನಾದರೂ ಮೇಲುಜಾತಿಯ ಹೆಣ್ಣನ್ನು ಮುಟ್ಟಿದರೆ ಅವನಿಗೆ ಉಗ್ರ ಶಿಕ್ಷೆ ವಿಧಿಸತಕ್ಕದ್ದು.

10) ಶೂದ್ರ ಗುಲಾಮಗಿರಿಯಲ್ಲಿ ಹುಟ್ಟಿರುವುದರಿಂದ ಅವನನ್ನು ಸದಾ ಗುಲಾಮಗಿರಿಯಲ್ಲಿಯೇ ಇಡಬೇಕು.[65]

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿ ಅಂಬೇಡ್ಕರ್‌ರವರೂ ಶೂದ್ರರನ್ನು ಚಾತುರ್ವರ್ಣ ಪದ್ಧತಿಯ ಅಡಿಯಲ್ಲಿ ಅತಿ ಕೀಳಾದ ಸ್ಥಾನದಲ್ಲಿ ಇಡಲಾಗಿದೆ. ಹಾಗೂ ಹೇಗೆ ಅಸ್ಪೃಶ್ಯರನ್ನು ಅತಿಯಾದ ಅಗೌರವ ಮತ್ತು ಅವಮಾನಾಸ್ಪದ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ ಎಂಬುದನ್ನು ಸ್ಮೃತಿಗಳನ್ನು ಉಲ್ಲೇಖಿಸಿ ವಿವರಿಸಿದ್ದಾರೆ.

ಅಪಸ್ತಂಭ ಧರ್ಮಸೂತ್ರದಲ್ಲಿ "ಬ್ರಾಹ್ಮಣ ತನ್ನ ಕಿವಿಯ ಮಟ್ಟಕ್ಕೆ ಬಲಗೈಯನ್ನು ಎತ್ತಿ ನಮಸ್ಕರಿಸಬೇಕು. ಕ್ಷತ್ರಿಯ ತನ್ನ ಎದೆಯ ಮಟ್ಟಕ್ಕೆ ಅದನ್ನು ಎತ್ತಿ ನಮಸ್ಕರಿಸಬೇಕು- ವೈಶ್ಯ ತನ್ನ ಸೊಂಟದ ಮಟ್ಟಕ್ಕೆ ಅದನ್ನು ಎತ್ತಿ ನಮಸ್ಕರಿಸಬೇಕು. ಶೂದ್ರ ಅಡ್ಡಬಿದ್ದು ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಬೇಕು"[66] "ಕೀಳುಜಾತಿಯವನು ತನ್ನ ಯಾವ ಅಂಗದಿಂದ ಮೇಲು ಜಾತಿಯವನನ್ನು ಅವಮಾನಗೊಳಿಸುತ್ತಾನೋ ಆ ಅಂಗವನ್ನು ಊನಗೊಳಿಸುವಂತೆ ರಾಜನು ಶಿಕ್ಷೆ ವಿಧಿಸತಕ್ಕದ್ದು".[67] "ಬ್ರಹ್ಮಸ್ಮೃತಿ ಸ್ಮೃತಿ ಪ್ರಕಾರ : ಶೂದ್ರ ಧರ್ಮೋಪದೇಶ ಮಾಡಿದರೆ ಅಥವಾ ವೇದೋಚ್ಚಾರಣೆ ಮಾಡಿದರೆ ಅಥವಾ ಬ್ರಾಹ್ಮಣನನ್ನು ಅವಮಾನ ಗೊಳಿಸಿದರೆ ಅವನ ನಾಲಿಗೆಯನ್ನು ಕತ್ತರಿಸುವ ಶಿಕ್ಷೆಯನ್ನು ವಿಧಿಸತಕ್ಕದ್ದು".[68] ವಶಿಷ್ಠ ಧರ್ಮಸೂತ್ರ : ದ್ವೇಷ, ಅಸೂಯೆ ಪಡುವುದು, ಸುಳ್ಳು ಹೇಳುವುದು, ಬ್ರಾಹ್ಮಣ ನಿಂದೆ ಮಾಡುವುದು, ಚಾಡಿ ಹೇಳುವುದು, ಮತ್ತು ಹಿಂಸೆ ಮಾಡುವುದು ಇವು ಶೂದ್ರನ ಲಕ್ಷಣಗಳೆಂದು ತಿಳಿಯಬೇಕು. ಶೂದ್ರರು ತಮ್ಮ ಮಕ್ಕಳಿಗೆ ಹೆಸರುಗಳನ್ನು ಕೂಡ ಹೇಗೆ ಇಡಬೇಕು ಎನ್ನುವುದು ವಿಷ್ಣುಸ್ಮೃತಿ ಹೀಗೆ ನಿಗದಿಪಡಿಸುತ್ತದೆ. "ಬ್ರಾಹ್ಮಣನ ಹೆಸರು ಶುಭವನ್ನು ಸೂಚಿಸಬೇಕು, ಕ್ಷತ್ರಿಯನ ಹೆಸರು ಶೌರ್ಯವನ್ನು ಸೂಚಿಸಬೇಕು, ವೈಶ್ಯನ ಹೆಸರು ಐಶ್ವರ್ಯವನ್ನು ಸೂಚಿಸಬೇಕು, ಶೂದ್ರರ ಹೆಸರು ತಿರಸ್ಕಾರವನ್ನು ಸೂಚಿಸಬೇಕು".

ಗೌತಮಧರ್ಮ ಸೂತ್ರ : ಶೂದ್ರ ನಾಲ್ಕನೇಯ ವರ್ಣಕ್ಕೆ ಸೇರಿದ್ದಾನೆ. ಅವನಿಗಿರುವುದು ಒಂದೇ ಹುಟ್ಟು. ಅವನು ತನ್ನ ಮೇಲಿನ ವರ್ಣಗಳ ಸೇವೆ ಮಾಡಬೇಕು, ಅವನಿಂದ ಯಾಚಿಸಿ ತನ್ನ ಹೊಟ್ಟೆ ಹೊರೆಯಬೇಕು. ಅವನು ಹಳೇಮೆಟ್ಟುಗಳನ್ನು ಉಪಯೋಗಿಸಬೇಕು. ಅವರು ತಿಂದುಳಿದುದನ್ನು ಅವನು ಉಣ್ಣಬೇಕು.[69] ಹೀಗೆ ಶೂದ್ರರ ಸ್ಥಿತಿಯು ಅಸ್ಪೃಶ್ಯರಂತೆ ಚಾತುರ್ವರ್ಣ ಪದ್ಧತಿಯಲ್ಲಿ ಹೀನಾಯವಾಗಿದ್ದರೂ ಅವರೇಕೆ ಅಸ್ಪೃಶ್ಯರ ಜೊತೆ ಒಂದುಗೂಡಿ ಹೋರಾಟ ಮಾಡಲಿಲ್ಲವೆಂಬ ಪ್ರಶ್ನೆಯನ್ನು ಶೂದ್ರ ಜನಾಂಗಕ್ಕೆ ಸಂಬಂಧಪಟ್ಟಂತೆ ಕೇಳಿಕೊಳ್ಳುತ್ತಾರೆ. ಅಂಬೇಡ್ಕರ್ ಅವರ ಪ್ರಕಾರ-"ಹಿಂದೂ ಸಮಾಜ ವ್ಯವಸ್ಥೆಯ ಮೇಲೆ ಅಸ್ಪೃಶ್ಯರಿಂದ ಉಂಟಾಗುವ ದಾಳಿಯನ್ನು ತಡೆಗಟ್ಟಲು ಶೂದ್ರರೇ ಹೋರಾಟದ ಬಂಟರಾಗಿ ಬ್ರಾಹ್ಮಣರಾಗಿ ನೆರವಾಗುತ್ತಿದ್ದಾರೆ. ಇದೊಂದು ವಿಲಕ್ಷಣವಾದ ಪ್ರಕ್ರಿಯೆ. ಆದರೆ ಸತ್ಯವಾದದ್ದು"[70] ಅಲ್ಲದೇ ಚಾತುರ್ವರ್ಣ ಪದ್ಧತಿಯ ಏಣಿಶ್ರೇಣಿಯಲ್ಲಿ ಸಿಕ್ಕಿರುವ ಎಲ್ಲಾ ಜಾತಿಗಳು ಕೀಳುಜಾತಿಯವರೊಂದಿಗೆ ಹೊಂದಾಣಿಕೆ

ಮಾಡಿಕೊಳ್ಳುವುದಕ್ಕಿಂತ ಅಥವಾ ಕೀಳುಜಾತಿಗಳು ತಮ್ಮ ಜೊತೆ ಬಂದು ಕೂರುವುದನ್ನು ಸಹಿಸಿಕೊಳ್ಳುವುದಕ್ಕಿಂತ ಮೇಲಿನವರು ಉಂಟು ಮಾಡುವ, ದಬ್ಬಾಳಿಕೆಗಳನ್ನು ಸಹಿಸಿಕೊಳ್ಳಲು ಇಚ್ಛೆ ತೋರುತ್ತವೆ. ಹೀಗಾಗಿ ಅಸ್ಪೃಶ್ಯ ಅಸ್ಪೃಶ್ಯರಲ್ಲಿ, ಶೂದ್ರ ಶೂದ್ರರಲ್ಲಿ, ಯಾರು ಮೇಲು, ಯಾರು ಕೀಳು ಎಂಬುದೇ ಮುಖ್ಯವಾಗುತ್ತದೇ ವಿನಃ ಇದರ ಸೃಷ್ಟಿಕರ್ತರೂ ಈ ವ್ಯವಸ್ಥೆಯನ್ನು ಸ್ಥಾಪಿಸಿದವರೂ.... ಇದರ ಒಟ್ಟು ನಿವ್ವಳ ಲಾಭವನ್ನು ಪಡೆಯುವರ ಕಡೆ ಅವರ ಸಿಟ್ಟು ತಿರುಗುವುದಿಲ್ಲ ಎಂದೆನಿಸುತ್ತದೆ.

ಹೀಗಾಗಿ "ತಾರತಮ್ಯವುಳ್ಳ ಅಸಮಾನತೆಯ ಮೇಲೆ ನಿಂತಿರುವ ಸಮಾಜ ವ್ಯವಸ್ಥೆಯಲ್ಲಿ ಶೋಷಿತ ಜನರೆಲ್ಲ ಒಟ್ಟಾಗಿ ಉಳಿದವರನ್ನು ಎದುರಿಸುವ ಸಾಧ್ಯತೆಯೇ ಇಲ್ಲ, ತಾರತಮ್ಯವುಳ್ಳ ಅಸಮಾನತೆಯ ವ್ಯವಸ್ಥೆಯಲ್ಲಿ ಶೋಷಿತ ಜನರೆಲ್ಲ ಒಂದೇ ಮಟ್ಟದವರಾಗಿರುವುದಿಲ್ಲ"[71] "ದಲಿತ ಸಮುದಾಯಗಳು ಒಂದು ಬಾರಿ ಎಚ್ಚರಗೊಂಡರೆ ಅವುಗಳ ಮೇಲಿರುವ ಜಾತಿಗಳು ಒಂದೇ ಪಟ್ಟಿಗೆ ಹತ್ತುಪಟ್ಟು ಎಚ್ಚರವಾಗಿ ವೈಚಾರಿಕತೆಗೆ ತೆರೆದುಕೊಂಡು ಜಗತ್ತಿನ ಜೊತೆ ನಡೆಯತೊಡಗಿದರೆ, ಅದೇ ಅವನ ಮೇಲಿನ ಮತ್ತೊಂದು ಜಾತಿ ನೂರುಪಟ್ಟು ಜಾಗೃತವಾಗಿ ಎದ್ದುನಿಂತಿರುತ್ತದೆ. ಭಾರತದಲ್ಲಿ ಸಾಮಾಜಿಕ ಎಚ್ಚರದ ಪ್ರಕ್ರಿಯೆ ಇದು. ಒಂದು ಜಾತಿ ಎಚ್ಚರವಾದ ಕೂಡಲೇ ಇನ್ನೊಂದು ಜಾತಿ ಅದರ ಎಚ್ಚರಕ್ಕೆ ವಿರುದ್ಧವಾಗಿ ತಂತ್ರ ರೂಪಿಸಿಕೊಳ್ಳುತ್ತದೆ. ದಲಿತ ಅಕ್ಷರ ಕಲಿತ ಎಂದರೆ ಪಕ್ಕ ಕೇರಿಯ ಮೇಲು ಜಾತಿಯವನು ಇಂಗ್ಲೀಷ್ ಕಲಿತಾಗಿರುತ್ತದೆ."[72] ಇದು ಭಾರತದಲ್ಲಿ ಸಾವಿರಾರು ವರ್ಷಗಳಿಂದ ನಡೆದಿರುವ ಜಾತಿಯ ಪ್ರಕ್ರಿಯೆ.

ಜಾತಿಯ ವಿರುದ್ಧ ಪ್ರತಿಭಟಿಸಿ, ಹೊಸ ಪಂಥ, ಧರ್ಮಗಳು ಉದಯವಾಗಿ ಕಾಲಕ್ರಮೇಣ ಅವು ಜಾತಿಗಳಾಗಿ ಮಾರ್ಪಾಡಾಗಿರುವುದನ್ನು ಕಾಣಬಹುದಾಗಿದೆ. ಜಾತಿಯ ವಿರುದ್ಧ ಸಮರ ಸಾರಿ ಮತ್ತು ಕ್ರೂರವಾದ ಜಾತಿಗಳ ಉದಯಕ್ಕೆ ಕಾರಣವಾಗಿವೆ. ಹೀಗಾಗಿ ಭಾರತದಲ್ಲಿ ಅಂಬೇಡ್ಕರ್ ಅವರ ಪ್ರಕಾರ ಮೂರು ಸಾವಿರಕ್ಕೂ ಹೆಚ್ಚಿನ ಜಾತಿಗಳು ಇವೆ. ಅವುಗಳ ಸಂಖ್ಯೆ ಇಂದು ಇನ್ನೂ ಹೆಚ್ಚಾಗಿವೆ. ಅಂಬೇಡ್ಕರ್ ಮಹಾನ್ ಹೋರಾಟಗಾರರು ಜೀವನದುದ್ದಕ್ಕೂ ದಮನಕಾರಿ ಹಿಂದೂಸಂಸ್ಕೃತಿ, ವ್ಯವಸ್ಥೆ, ಸಿದ್ಧಾಂತದ ವಿರುದ್ಧ ಸಮರವನ್ನೇ ಸಾರಿದರು. ಅವರು ಕ್ರಾಂತಿಯ ಸಂಕೇತ. ಯಾವ ಹಿಂದೂಧರ್ಮ ಅಸ್ಪೃಶ್ಯರನ್ನು ಶತಮಾನಗಳ ದಾರಿದ್ರ್ಯ, ಶೋಷಣೆ ಮತ್ತು ದಬ್ಬಾಳಿಕೆಗಳಿಗೆ ಒಳಪಡಿಸಿತ್ತೋ ಅಂಥವರ ಬಾಳಿಗೆ ಧ್ವನಿಯಾಗಿ, ಶಕ್ತಿಯಾಗಿ, ಸೂರ್ಯನಾಗಿ ಉದಯಿಸಿದರು. "ಅಂಬೇಡ್ಕರ್‌ರ ಹೆಸರು ಶೋಷಕರ ಎದೆಯಲ್ಲಿ ಬಾಂಬ್ ಸಿಡಿಸಿದಂತೆ ಹಾಗೂ ದೀನದಲಿತರ ಮನದಲ್ಲಿ ಕರುಣೆ ಹಾಗೂ ಮಾನವೀಯತೆಯ ಬುಗ್ಗೆಯೊಡೆದಂತೆ.[73]

ಅಂಬೇಡ್ಕರ್‌ರ ಕೋಪ ಕೇವಲ ವೈಯಕ್ತಿಕವಾಗಿರಲಿಲ್ಲ. ಅದು ಇಡೀ ದಲಿತ ಜನಾಂಗಕ್ಕೆ ಎಸಗಿದ ಘೋರ ಅನ್ಯಾಯ ಮತ್ತು ಬರ್ಬರ ಅತ್ಯಾಚಾರದ ವಿರುದ್ಧ ಎಸಗಿದ ಬಂಡಾಯದ ಪ್ರತಿಭಟನೆಯಾಗಿತ್ತು. ಸಮಾನತೆ ಮತ್ತು ಭ್ರಾತೃತ್ವವನ್ನು ಅಸಮಾನತೆಯ ನಾಡಿನಲ್ಲಿ ಹುಟ್ಟು ಹಾಕಿ, ದಲಿತ ಹಿಂದುಳಿದವರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಹಕ್ಕನ್ನು ಕಲ್ಪಿಸಿಕೊಟ್ಟು, ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವುದು, ಅವರ ಹೋರಾಟದ ಮೂಲ ಆಶಯವಾಗಿತ್ತು. ಸಾಮಾಜಿಕ ಅನ್ಯಾಯ ಮತ್ತು ಅಸಮಾನತೆಯ ವಿರುದ್ಧ ಸಿಡಿದೆದ್ದು, ಅಸ್ಪೃಶ್ಯತೆಯಂಥ ಹೀನಾಯವಾದ ವ್ಯವಸ್ಥೆಯ ಸಂಕೋಲೆಗಳನ್ನು ಹರಿದು ಹಾಕಲು ದೃಢ ಸಂಕಲ್ಪ ಮಾಡಿದರು.

ಅಂಬೇಡ್ಕರ್ ಅಸ್ಪೃಶ್ಯರ ಬಿಡುಗಡೆಗೆ ತೋರಿದ ದಾರಿ :

ಜಾತಿವ್ಯವಸ್ಥೆ, ದಬ್ಬಾಳಿಕೆ, ಅಸ್ಪೃಶ್ಯತೆ ಈ ಅಮಾನವೀಯ ಆಚರಣೆಗಳನ್ನು ಕುರಿತು ಟೀಕಿಸಿ, ತರ್ಕಬದ್ಧವಾಗಿ ಚಿಂತಿಸಿ, ಪರಿಹಾರಕ್ಕಾಗಿ ತಮ್ಮ ಬದುಕಿನುದ್ದಕ್ಕೂ ಪರ್ಯಾಯ ಮಾರ್ಗಕ್ಕಾಗಿ ಪ್ರಯತ್ನಿಸಿದ್ದರು. ಜಾತಿಪದ್ಧತಿಯ ವಿರುದ್ಧ ಇದುವರೆಗೂ ಇದ್ದ ಸುಧಾರಣಾ ಮಾರ್ಗಗಳು ಅಂಬೇಡ್ಕರ್‌ರವರಿಗೆ ಇಷ್ಟವಾಗಲಿಲ್ಲ. ಅವೆಲ್ಲ ಇರುವ ವ್ಯವಸ್ಥೆಯಲ್ಲಿಯೇ ಹೊಂದಿಕೊಂಡು ಹೋಗುವ ರಾಜಿ ಸೂತ್ರಗಳಾಗಿದ್ದವು. "ಶಿಕ್ಷಣ ಮತ್ತು ಸಂಘಟನೆ, ಹೋರಾಟ" ಅಸ್ಪೃಶ್ಯರ ಹೊಸ ಬದುಕಿಗೆ ಮಾರ್ಗಗಳೆಂದು ಅವರಲ್ಲಿ ವಿಚಾರಗಳು ಮೊಳೆತು ಅವುಗಳನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿದರು.

ಮತ್ತೊಂದು ಪ್ರಯತ್ನ-ಪರ್ಯಾಯ ಮಾರ್ಗವೆಂದರೆ ಅಸ್ಪೃಶ್ಯರು ಹಿಂದೂಧರ್ಮವನ್ನು ತ್ಯಜಿಸುವುದು. "You have nothing to lose, ... Except chains, and everything to gain by chaging your religion"[74] ಹಿಂದೂಧರ್ಮವನ್ನು ಬಿಡುವುದರಿಂದ ನೀವು ಕಳಕೊಳ್ಳುವುದು ನಿಮ್ಮನ್ನು ಬಂಧಿಸಿರುವ ಜಾತಿಯ ಸರಪಳಿಗಳನ್ನು ಎಂದು ಅಸ್ಪೃಶ್ಯರಿಗೆ ಕರೆ ಕೊಟ್ಟರು. ಇದು ಸುಲಭ ಮಾರ್ಗವಾಗಿರಲಿಲ್ಲ. ದೇವಾಲಯ ಪ್ರವೇಶ, ಮನುಸ್ಮೃತಿಯ ದಹನ, ಕೆರೆ, ಬಾವಿಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ನಡೆಸುವ ಹೋರಾಟ ಈ ಎಲ್ಲಾ ಹೋರಾಟಗಳ ಮಿತಿ ಮತ್ತು ಮಹತ್ವ ಅಂಬೇಡ್ಕರ್ ಅವರಿಗೆ ಚೆನ್ನಾಗಿ ತಿಳಿದಿದ್ದವು. ಈ ಹೋರಾಟಗಳು ದಲಿತರಲ್ಲಿ ಒಂದು ಆತ್ಮಾಭಿಮಾನ ಹಾಗೂ ಎಚ್ಚರವನ್ನುಂಟು ಮಾಡುವಲ್ಲಿ ಸಾಂಕೇತಿಕವಾಗಿ ಸಹಕಾರಿಯೆಂದು ಅವರು ಭಾವಿಸಿದರು. ಮಹಾಡ್ ಕೆರೆಯ ಪ್ರವೇಶಕ್ಕೆ ಅಂಬೇಡ್ಕರ್ ದೊಡ್ಡ ಹೋರಾಟವನ್ನೇ ಮಾಡಿದರು.

ಅವರ ಪ್ರಕಾರ ಅಸ್ಪೃಶ್ಯರ ಬಿಡುಗಡೆ "The surest way for their salvation lies in higher education, higher employment and better ways of earning. Once they became well place in the scale of social life - they would became respectable"[75] ಎಂದ ಅಂಬೇಡ್ಕರ್ ಅಸ್ಪೃಶ್ಯರು ಉದ್ಯೋಗ, ಶಿಕ್ಷಣ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗಿ ಒಂದು ಹಂತ ಮೇಲೆಂದರೆ ಸಹಜವಾಗಿ ಅವರ ಸಾಮಾಜಿಕ ಗೌರವ ಹೆಚ್ಚುತ್ತದೆ.

ಸ್ಥಾನಮಾನ ಮೇಲೆರುತ್ತದೆ ಎಂದು ಹೇಳಿದರು. ಇದಕ್ಕಾಗಿ ಅವರು "ಮೀಸಲಾತಿ" ಎಂಬ ಪ್ರಬಲ ಅಸ್ತ್ರವನ್ನು ಅಸ್ಪೃಶ್ಯರ ಉದ್ಧಾರಕ್ಕಾಗಿ ಬಳಸಿದರು. ಬ್ರಿಟಿಷರ, ಗಾಂಧಿಯ ಹಾಗೂ ಒಟ್ಟಾರೆ ಕಾಂಗ್ರೆಸ್ಸಿಗರ ಜೊತೆಗಿನ ಅವರ ಬಹು ಪಾಲು ಭಿನ್ನಾಭಿಪ್ರಾಯಕ್ಕೆ ಈ ಮೀಸಲಾತಿ ಅಂಶವೇ ಕಾರಣವಾಗಿರುವುದನ್ನು ಸ್ವಾತಂತ್ರ್ಯ ಪೂರ್ವದ ಭಾರತದ ಇತಿಹಾಸದಲ್ಲಿ ಎದ್ದು ಕಾಣುವುದನ್ನು ನೋಡಬಹುದು. ಗಾಂಧೀಜಿ ಹಾಗೂ ಕಾಂಗ್ರೆಸ್ಸಿಗರು ಮೀಸಲಾತಿಯ ಕಟ್ಟಾ ವಿರೋಧಿಗಳಾಗಿದ್ದರು. ಈ ಮೀಸಲಾತಿಯು ಹಿಂದೂಗಳನ್ನು ಒಡೆಯುತ್ತದೆ. ಹಿಂದೂಗಳು ಇಬ್ಭಾಗವಾಗಿ ಇದರಿಂದ ಬ್ರಿಟಿಷರಿಗೆ ನೆರವಾಗುತ್ತದೆ ಎಂಬುದು ಅವರ ಪ್ರಬಲ ವಾದವಾಗಿತ್ತು. ಬ್ರಿಟಿಷರಿಗೆ "ಮೀಸಲಾತಿ" ಯ ಪ್ರಶ್ನೆ ಇತ್ತ ದಲಿತರನ್ನು ಅತ್ತ ಕಾಂಗ್ರೆಸ್ಸಿಗರನ್ನು ಇಕ್ಕಟ್ಟಿಗೆ ಸಿಲುಕಿಸಿ ನಿಮ್ಮನಿಮ್ಮ ಜಗಳಗಳನ್ನು ಬಗೆಹರಿಸಿಕೊಳ್ಳಲಾರದ ನೀವು ಸ್ವತಂತ್ರಕ್ಕೆ ಹೇಗೆ ಅರ್ಹರು ಎಂಬ ಪ್ರಶ್ನೆಯನ್ನು ಮುಂದಿಡಲು ಸಹಾಯಕವಾಗಿತ್ತು. ದಲಿತರಿಗೆ ಪ್ರತ್ಯೇಕ ಮತಕ್ಷೇತ್ರವಿರಬೇಕೆಂಬ ವಿಷಯದಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್‌ರವರಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಗಾಂಧೀಜಿ 1932ರ ಸೆಪ್ಟೆಂಬರ್‌ನಲ್ಲಿ

ಆಮರಣ ಉಪವಾಸ ಕೈಗೊಂಡರು. "ಪೂನಾಒಪ್ಪಂದ" ದ ಸಂದರ್ಭದಲ್ಲಿ ಹಾಗೂ ಗಾಂಧೀ-ಅಂಬೇಡ್ಕರ್ ಜಿನ್ನಾ ಅವರು ಭಾಗವಹಿಸಿದ್ದ "ದುಂಡು ಮೇಜಿನ ಸಮ್ಮೇಳನದಲ್ಲಿ ಈ ಮೀಸಲಾತಿ ಪ್ರಶ್ನೆಗಳು ಬಹುಗಂಭೀರ ಸ್ವರೂಪ ತಳೆದವು. ಪೂನಾ ಒಪ್ಪಂದವನ್ನು ಡಾ। ಅಂಬೇಡ್ಕರ್ ಬಲವಾಗಿ ಪ್ರತಿಪಾದಿಸಿದರೆ ಗಾಂಧಿ ಪ್ರಬಲವಾಗಿ ವಿರೋಧಿಸಿ -"You are untouchable by birth and I am by adoption, we must be one and indivisible. I am prepare to give my life to avert the discuption of the Hindu Community " ಎಂದು ಆಮರಣಾಂತ ಉಪವಾಸಕ್ಕೆ ಕೂತರೆ ಅಂಬೇಡ್ಕರ್‌ರವರು - " But one thing is decided to save Gandhi's life I would not be aparty to any proposal that would be against the interest of my people ".[76] ಎಂದು ಪಟ್ಟು ಹಿಡಿದರು. ಆಗ ಇಡೀ ದೇಶ ಅಂಬೇಡ್ಕರ್ ವಿರುದ್ಧ ಎದ್ದು ನಿಂತಿದ್ದರಿಂದ ಬಹಳ ವಿಷಾದದಿಂದ ತಮ್ಮ ನಿಲುವಿನಿಂದ ಅವರು ಹಿಂದೆ ಸರಿಯಬೇಕಾಯಿತು. ಅಂಬೇಡ್ಕರ್ ಗಾಂಧಿಯ ಉಪವಾಸ ಮತ್ತು ಅಹಿಂಸಾ ಮಾರ್ಗಗಳು ಹಿಂಸಾ ಮಾರ್ಗಕ್ಕಿಂತ ಕ್ರೂರವಾದವು ಎಂದರು.

"ಅಂಬೇಡ್ಕರ್' ಸಮಾನತೆ' ಎಂದರು. ಗಾಂಧಿ 'ಸ್ವಾತಂತ್ರ್ಯ' ಎಂದರು. ಇಬ್ಬರ ಮಧ್ಯೆ ತೀವ್ರ ಭಿನ್ನಾಭಿಪ್ರಾಯಗಳುಂಟಾದವು. ಮಧೆಮಧ್ಯೆ ಇವರ ಅನುಯಾಯಿಗಳೇ ಕೂಡಿ ಇವರಲ್ಲಿ ರಾಜಿ ಮಾಡಿಸಬೇಕಾಯಿತು. ಇಬ್ಬರೂ ಹಟದಿಂದ ಸೆಣಸಿದರು. ಹಟದಿಂದ ರಾಜಿ ಮಾಡಿಕೊಂಡರು. ರಾಜಿಯಾದ ಮೇಲೂ ಸೆಣಸಿಕೊಂಡರು. ಇಬ್ಬರೂ ತೀರಾ ಸಭ್ಯರಿದ್ದು ಪರಸ್ಪರ ಬಹುಕಟುವಾಗಿ ಮಾತಾಡಿಕೊಂಡರು. ಸಂದರ್ಭದಲ್ಲಿ ಪರಸ್ಪರ ಪ್ರಾಂಜಲವಾಗಿ ಪ್ರಶಂಸಿಕೊಂಡರು".[77] ಈ ಇಬ್ಬರ ಮಧ್ಯದ ಸಾಮ್ಯವು, ಅಂಬೇಡ್ಕರ್‌ರೇ ಹೇಳಿಕೊಳ್ಳುವ ಹಾಗೆ ನಮಗೂ "ಆಶ್ಚರ್ಯ ಅತ್ಯಾಶ್ಚರ್ಯ" ಹುಟ್ಟಿಸುತ್ತದೆ. ಇಂದು ಗಾಂಧಿ ನಮಗೆ ಅವರ ಸತ್ಯ ಮತ್ತು ಅಹಿಂಸೆ ತ್ಯಾಗಗಳಿಗಾಗಿ ಪ್ರಸ್ತುತರಾದರೆ, ಅಂಬೇಡ್ಕರ್ ದಲಿತರಲ್ಲಿ ಘನತೆ ಮತ್ತು ಆತ್ಮ ವಿಶ್ವಾಸ ಮೂಡಿಸಿದ್ದಕ್ಕಾಗಿ ಪ್ರಸ್ತುತರಾಗುತ್ತಾರೆ.

"ಇಬ್ಬರ ಅಸ್ಪೃಶ್ಯರ ಏಳ್ಗೆಯ ಸಿದ್ಧಾಂತದ ನೆಲೆಗಳಲ್ಲೂ ಗಮನಾರ್ಹವಾದ ವ್ಯತ್ಯಾಸವಿರಲಿಲ್ಲ. ಅಂಬೇಡ್ಕರ್‌ರೇ ಒಂದು ಹಂತದಲ್ಲಿ ಇದನ್ನು ಬಹಿರಂಗವಾಗಿಯೇ ಒಪ್ಪಿಕೊಂಡರೂ ಈ ಬಗ್ಗೆ ಸಂಶೋಧನೆ ನಡೆಸಿರುವವರ ಗಮನ ಹರಿಯದೆ ಇಬ್ಬರನ್ನೂ ಎರಡು ವಿರುದ್ಧ ದಿಕ್ಕುಗಳಲ್ಲಿಟ್ಟು ನೋಡಿರುವಂತಿದೆ. ಪೂನಾ ಒಪ್ಪಂದದ ನಂತರ ಅಂಬೇಡ್ಕರ್ ಕೊಟ್ಟ ಹೇಳಿಕೆ ಗಮನಿಸಿ: 'ನನ್ನ ಮತ್ತು ಆತನ (ಗಾಂಧಿ) ಮಧ್ಯೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಆತನನ್ನೂ ಭೇಟಿ ಮಾಡಿದಾಗ ತಿಳಿದು, ನನಗೆ ಆಶ್ಚರ್ಯವಾಗಿದೆ. ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳಲೇಬೇಕಾಗಿದೆ".[78] ಅಂಬೇಡ್ಕರ್ ತಮ್ಮ ವಿದ್ವತ್ ಪೂರ್ಣ ಬರವಣಿಗೆ, ಕಟು ವಿಮರ್ಶೆ ಹಾಗೂ ಸಂಘಟಿತ ಯತ್ನಗಳಿಂದ ಸಮಸ್ಯೆಯನ್ನು ಬಹಿರಂಗಗೊಳಿಸಿ ಪರಿಹಾರಕ್ಕೆ ಹೋರಾಡಿದರೆ, ಗಾಂಧೀ ಸಮಸ್ಯೆಯನ್ನು ತಮ್ಮದೇ ಆಗಿಸಿಕೊಂಡು ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು.

ಡಾ॥ಮ.ನ.ಜವರಯ್ಯನವರು ತಮ್ಮ ವಿಚಾರಗಳನ್ನು ಹೀಗೆ ಹಿಡಿದಿಟ್ಟಿದ್ದಾರೆ." ಆ ಪ್ರಶ್ನೆ ಏನೆಂದರೆ ಅಸ್ಪೃಶ್ಯತೆಯ ಸಮಸ್ಯೆಯನ್ನು ಪ್ರಪ್ರಥಮ ಬಾರಿಗೆ ಸರ್ವ ವಿರೋಧಿಗಳ ನಡುವೆಯೂ ಕಾಂಗ್ರೆಸ್ಸಿನ ವೇದಿಕೆಯ ಮೇಲೆ ತರುವ ಮೂಲಕ ಗಾಂಧೀಜಿಯವರು ಆ ಸಮಸ್ಯೆಗೊಂದು ಪಕ್ಷ ರಾಜಕಾರಣದ ಚಾಲನೆ ನೀಡಿದರಷ್ಟೆ

ಅಲ್ಲದೇ ಅದನ್ನೊಂದು ರಾಷ್ಟ್ರೀಯ ಸಮಸ್ಯೆಯನ್ನಾಗಿಯೂ ಪರಿವರ್ತಿಸಿದರು. ತನ್ಮೂಲಕ ಗಾಂಧಿಯವರು ಒಂದು ರೀತಿಯಲ್ಲಿ ರಾಷ್ಟ್ರಕ್ಕೆ ಒಂದು ದೊಡ್ಡ ಕೊಡುಗೆಯನ್ನೇ ನೀಡಿದರು. ಏಕೆಂದರೆ ವಾಸ್ತವವಾಗಿ ಅಸ್ಪೃಶ್ಯತೆಯು ಅಂಬೇಡ್ಕರ್‌ರವರು ಎತ್ತಿದ ಸಮಸ್ಯೆ ಎಂಬುದು ಎಂತೋ, ಅಂತೆಯೇ ಗಾಂಧೀಯವರಿಗೆ ಅದು ತುಂಬ ಪ್ರಿಯವಾದ ಸಮಸ್ಯೆಯೂ ಆಗಿತ್ತು. ಅಂದ ಬಳಿಕ ಅಂಬೇಡ್ಕರ್‌ರವರು ಆ ಸಮಸ್ಯೆಯನ್ನು ರಾಷ್ಟ್ರದ ಸಮಸ್ಯೆಯನ್ನಾಗಿ ಪರಿವರ್ತಿಸಿ ಅದಕ್ಕೆ ಚಾಲನೆ ನೀಡಿದರು. ಅಂತೆಯೇ ಹಿಂದೂಗಳ ಸಮಸ್ಯೆಯೂ, ಗಾಂಧಿಯವರಿಗೆಪ್ರಿಯವೂ ಆಗಿದ್ದ ಹಿಂದೂಗಳ ಧಾರ್ಮಿಕ ಕಂದಾಚಾರಗಳ ಸಮಸ್ಯೆಯನ್ನು ಎತ್ತಿಕೊಂಡು, ಅಂಬೇಡ್ಕರ್‌ರು ಅದನ್ನೊಂದು ರಾಷ್ಟ್ರೀಯ ಸಮಸ್ಯೆಯನ್ನಾಗಿ ಪರಿವರ್ತಿಸಿ ಅದಕ್ಕೆ ಚಾಲನೆ ನೀಡಿದ್ದು, ಅವರು ರಾಷ್ಟ್ರಕ್ಕೆ ಕೊಟ್ಟ ಕೊಡುಗೆಯಾಗಿದೆ ಎಂಬುದನ್ನು ಮರೆಯದಿರಬೇಕು ".[79]

"ಬಹುಶಃ ಅಂಬೇಡ್ಕರ್‌ರನ್ನು ಸಮಗ್ರವಾಗಿ ಅಧ್ಯಯನ ಮಾಡುವುದರಿಂದ ಮಾತ್ರ ಈ ಪ್ರಶ್ನೆಗೆ ಉತ್ತರ ಸುಲಭವೆಂದು ತೋರುತ್ತದೆ. ಏಕೆಂದರೆ, ಹಿಂದೂಧರ್ಮದಲ್ಲಿ ಎಲ್ಲ ರೀತಿಯ ದೌರ್ಬಲ್ಯಗಳನ್ನು ಹಿಂದೂ ಜನಾಂಗದ ಎಲ್ಲ ರೀತಿಯ ಅಕಾರಣಿಕ ಆಚಾರಗಳನ್ನು ಸಕಾರಣಿಕವೂ, ವೈಚಾರಿಕವೂ ಆದ ರೀತಿಯಲ್ಲಿ ಬಯಲಿಗೆ ತಂದು ನಿಲ್ಲಿಸುವ ಮೂಲಕ, ಹಿಂದೆಂದೂ ಹಿಂದೂಗಳು ಕಂಡರಿಯದ, ಆ ಕುರಿತು ತಮ್ಮ ನಿರಂತರ ಸಂಶೋಧನೆ, ಚಿಂತನೆ ಹಾಗೂ ಆ ಬಗೆಗಿನ ಒಂದು ವ್ಯವಸ್ಥಿತ ಜನಾಂದೋಲನದ ಮೂಲಕ ಅಂಬೇಡ್ಕರರು ಗಾಂಧಿಯವರಿಗೆ ಪ್ರಿಯವಾಗಿದ್ದ ಹಿಂದೂಧರ್ಮ ಹಾಗೂ ಅವರ ಜನಾಂಗದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮೂಲಕ ಇಡೀ ರಾಷ್ಟ್ರೀಯ ಬದುಕಿಗೂ ಅದರ ಅಂದಿನ ವೈಚಾರಿಕ ಪುನರುಜ್ಜೀವನಕ್ಕೂ ಕಾರಣರಾಗಿದ್ದಾರೆ ಎಂಬುದನ್ನು ನೆನಪಿಡಬೇಕಾಗುತ್ತದೆ."[80] ಅಂಬೇಡ್ಕರ್ ಸಾಮಾಜಿಕ ಪರಿವರ್ತನೆಯಲ್ಲಿ ಬಲವಾದ ನಂಬಿಕೆಯಿಟ್ಟಿದ್ದರು. ಅವರು ಭಾರತದಲ್ಲಿನ ಜಾತಿಪದ್ಧತಿಯನ್ನು ವೈಚಾರಿಕ ನೆಲೆಯಲ್ಲಿ ವಿರೋಧಿಸಿದರು.

ದುಂಡು ಮೇಜಿನ ಪರಿಷತ್‌ನಲ್ಲಿ ಅಂಬೇಡ್ಕರ್ ಬ್ರಿಟಿಷರಿಗೆ ಅಸ್ಪೃಶ್ಯತೆಯ ಇದೇ ಪ್ರಶ್ನೆಯನ್ನು ಹಾಕಿದರು. ಮುನ್ನೂರು ವರ್ಷಗಳಿಂದ ಬಾರತವನ್ನು ಆಳುತ್ತಿರುವಿರಿ. ಇನ್ನೂ ಅದೇ ಮನುಪದ್ಧತಿಯ ಸಾಮಾಜಿಕವ್ಯವಸ್ಥೆ ಇದೆ. ಅಸ್ಪೃಶ್ಯರ ಸ್ಥಿತಿ ನೀವು ಭಾರತಕ್ಕೆ ಬಂದಾಗ ಹೇಗಿತ್ತೋ ಇವತ್ತು ಹಾಗೆಯೇ ಇದೆ! ಸ್ವತಂತ್ರ ಬಂದ ಕೂಡಲೇ ಪರಿಸ್ಥಿತಿಯಲ್ಲಿ ಒಮ್ಮೆಲೇ ಬದಲಾವಣೆ ಆಗುವುದೆ ಎಂದು ದಲಿತರಿಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆಯನ್ನು ಪ್ರತಿಪಾದಿಸಿದರು. "ಮೀಸಲಾತಿಗಾಗಿ ಅವರು ನಡೆಸಿದ ಹೋರಾಟದ ಫಲವಾಗಿ ಸ್ವಾತಂತ್ರ್ಯ ಸಿಕ್ಕ ಕೂಡಲೇ ರಚಿತವಾದ ಸಂವಿಧಾನದಲ್ಲಿ ಈ ವಿಶೇಷ ಹಕ್ಕನ್ನು ಅಂಬೇಡ್ಕರ್‌ರವರು ಸೇರಿಸಲು ಸಾಧ್ಯವಾಯಿತು ಹಾಗೂ ಮೀಸಲಾತಿ ಎಂಬುದು ಒಂದು ತತ್ಕಾಲದ ವ್ಯವಸ್ಥೆ ಎಂಬುದನ್ನು ಅವರು ಬಲ್ಲವರಾಗಿದ್ದರು.

ಅಸ್ಪೃಶ್ಯರು ತಮ್ಮ ನಡವಳಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಬಹುದೆಂದೂ ಕೂಡ ಅಂಬೇಡ್ಕರ್ ನಂಬಿದ್ದರಲ್ಲದೇ-ಅಸ್ಪೃಶ್ಯ ಸಮೂಹ ಗಳನ್ನು ಉದ್ದೇಶಿಸಿ ಭಾಷಣ ಮಾಡುವ ಪ್ರಸಂಗ ಬಂದಾಗಲೆಲ್ಲಾ ಈ ವಿಷಯಗಳಿಗೆ ಪ್ರಾಶಸ್ತ್ಯ ನೀಡಿ - ಸತ್ತ ದನಗಳ ಮಾಂಸ ತಿನ್ನದಿರುವುದು, ತಮ್ಮ ತಮ್ಮೊಳಗೆ ಮೇಲು-ಕೀಳು ಎಂದು ಭಾವಿಸದಿರುವುದು, ಬಿಸಾಡಿದ ಆಹಾರ ಪದಾರ್ಥಗಳನ್ನು ತಿನ್ನದಿರುವುದು, ಮಾತುಕತೆಯಲ್ಲಿ

ಸುಧಾರಿಸಿಕೊಳ್ಳುವುದು.....ಉನ್ನತವಾಗಿ ಯೋಚಿಸುವುದು.... ಇತ್ಯಾದಿ ಸಾಮಾಜಿಕ ರೂಢಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಸ್ಪೃಶ್ಯರು ತಮ್ಮನ್ನು ತಾವು ಸುಧಾರಿಸಿಕೊಳ್ಳಲು ಸಾಧ್ಯವೆಂದರು. ಅಸ್ಪೃಶ್ಯರನ್ನು ಯಾರೋ ಬಂದು ಉದ್ಧಾರ ಮಾಡುತ್ತಾರೆಂದು ಭಾವಿಸುವುದು ತಪ್ಪು. ನಮ್ಮ ಹಕ್ಕುಗಳನ್ನು ಕೊಡಿ ಎಂದು ಮೇಲ್ವರ್ಗದವರ ಮುಂದೆ ಭಿಕ್ಷೆ ಬೇಡಿದರೆ ಸಿಗುವುದಿಲ್ಲ...... ನಿರಂತರವಾದ ಸೋಲರಿಯದ ಹೋರಾಟದಿಂದ ಮಾತ್ರ ಅವು ದೊರೆಯುತ್ತವೆಂದು ಡಾ। ಅಂಬೇಡ್ಕರ್ ತಮ್ಮ ಜನಾಂಗದವರಿಗೆ ಕರೆ ನೀಡಿದರು.

"Removal of untouchability and inter caste diner alone will not put on end to our ills. All departments of servies such as courts, militry, police and commerce, should be thrown open to us"[81] ಎಂದ್ಹೇಳಿದ ಅಂಬೇಡ್ಕರ್‌ರು ಅದಕ್ಕಾಗಿ ಬ್ರಿಟಿಷ ಸರ್ಕಾರವನ್ನು ನಂತರ ಭಾರತದ ಸರ್ಕಾರವನ್ನು ಒತ್ತಾಯಿಸಿದರು. "You must abolish your slavery yourselves. It is disgraceful to live at the cost of one's selft respect. Self respect is a most vital factor in life without it man is a mere chiper"[82] ಅಂಬೇಡ್ಕರ್ ಅವರು ತಮ್ಮ ಜನಾಂಗಕ್ಕೆ ಬೋಧಿಸಿದ ಮತ್ತೊಂದು ಮಾರ್ಗವೆಂದರೆ ಆತ್ಮಾಭಿಮಾನ ಬೋಧಿಸಿದ ಮತ್ತೊಂದು ಮಾರ್ಗವೆಂದರೆ-ಆತ್ಮಾಭಿಮಾನ ಹಾಗೂ ಸ್ವಾಭಿಮಾನ ಬೆಳೆಸಿಕೊಳ್ಳುವುದು. ಈ ಆತ್ಮಾಭಿಮಾನ ಹಾಗೂ ಸ್ವಾಭಿಮಾನದ ಹಾದಿಗಳು-ಶಿಕ್ಷಣ, ಉದ್ಯೋಗ, ಅಧಿಕಾರ ಹಾಗೂ ಸಂಘಟನೆಗಳಿಂದ ದೊರೆಯುತ್ತವೆ ಎಂದರು.

ಸಂಘಟನೆ, ಶಿಕ್ಷಣ, ಹೋರಾಟದ ಮಂತ್ರಗಳನ್ನು ಅಸ್ಪೃಶ್ಯ ಜನಾಂಗಕ್ಕೆ ನೀಡಿದ ಅಂಬೇಡ್ಕರ್ ಅವರು ಅಸ್ಪೃಶ್ಯರು ಸಂಘಟಿತರಾಗಿ ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳಬೇಕು. ರಾಜಕೀಯ ಅಧಿಕಾರವು ಅಸ್ಪೃಶ್ಯ ಬಿಡುಗಡೆಗೆ ಬಹು ಮುಖ್ಯವಾದ ಸಾಧನವೆಂದು ಸ್ಪಷ್ಟವಾಗಿ ಹೇಳಿದರು.ಆರಂಭದಲ್ಲಿ ಅಸ್ಪೃಶ್ಯತೆ, ಜಾತಿ-ವ್ಯವಸ್ಥೆ ವಿರುದ್ಧ ಹೋರಾಡುತ್ತಿದ್ದ ಅಂಬೇಡ್ಕರ್ ಅವರು ಬರಬರುತ್ತ ಕೊನೆಗೆ ಅಸ್ಪೃಶ್ಯರು ಪ್ರವೇಶ ಮಾಡಬೇಕಾಗಿರುವುದು ದೇವಸ್ಥಾನವನ್ನಲ್ಲ, ಪಾರ್ಲಿಮೆಂಟನ್ನು ಎಂಬ ತೀರ್ಮಾನಕ್ಕೆ ಬಂದರು. ಪ್ರಜಾತಂತ್ರದಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ. ಒಂದು ಮತವೆಂದರೆ ಒಂದು ಮೌಲ್ಯ. ಓಟಿನ ಶಕ್ತಿಯಿಂದ ಪಡೆದುಕೊಳ್ಳುವ ರಾಜಕೀಯ ಅಧಿಕಾರದಿಂದ ನಾವು ಇಷ್ಟಪಟ್ಟ ಬದಲಾವಣೆ ತರುವುದು ಸಾಧ್ಯ. ಬದಲಾವಣೆಯನ್ನು ಎರಡು ಮಾರ್ಗಗಳಿಂದ ತರಬಹುದು. ಒಂದು ಬ್ಯಾಲೆಟ್ಟು ಮತಪೆಟ್ಟಿಗೆ ಮತ್ತೊಂದು ಬುಲೆಟ್ಟು, ಬಂದೂಕಿನ ನಳಿಕೆ, ಬಂದೂಕಿನ ನಳಿಕೆ ರಕ್ತಮಯ ಕ್ರಾಂತಿಯಾದರೆ ಮತಪೆಟ್ಟಿಗೆ ರಕ್ತರಹಿತ ಕ್ರಾಂತಿ-ಬುಲೆಟ್ಟಿಗಿಂತ ಬ್ಯಾಲೆಟ್ಟೇ ಹೆಚ್ಚು ಪರಿಣಾಮಕಾರಿ. ಈ ದೇಶದ ಅಜ್ಞಾನ, ಕೆಟ್ಟಸಂಪ್ರದಾಯ, ಶೋಷಣೆಗಳಿಗೆ ಪ್ರಜಾಪ್ರಭುತ್ವ ಬಲವಾದ ಅಸ್ತ್ರ ಎಂದು ಅವರು ಭಾವಿಸಿದ್ದರು. ರಾಜಕೀಯ ಅಧಿಕಾರ ಎನ್ನುವುದು ಮಾಸ್ಟರ್ ಕೀಲಿಕೈ ಇದ್ದ ಹಾಗೆ. ಈ ಮಾಸ್ಟರ್ ಕೀಲಿ ಕೈಯಿಂದ ನೀವು ಬದಲಾವಣೆಯ ಕಪಾಟುಗಳನ್ನು ತೆರೆಯಬಹುದು ಎಂದರು.

ರಾಜಕೀಯ ಅಧಿಕಾರ ಅಸ್ಪೃಶ್ಯರಿಗೆ ಅವಶ್ಯವೆಂದೇ ಅವರು ಶಾಸಕಾಂಗ, ವಿಧಾನಸಭಾ, ಲೋಕಸಭಾ ಮೊದಲಾದ ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಅಸ್ಪೃಶ್ಯರಿಗೆ ನಿರ್ದಿಷ್ಟ ಸ್ಥಾನಮಾನಗಳನ್ನು ಮೀಸಲಿರಿಸಬೇಕೆಂದು ಪ್ರಬಲ ಹೋರಾಟ ಮಾಡಿದರು. ಸ್ವತಂತ್ರ ಸಂವಿಧಾನವನ್ನು ರಚಿಸಿ, ಅದರಲ್ಲಿ

ಅಸ್ಪೃಶ್ಯರಿಗೆ ಹಲವು ಅವಕಾಶಗಳನ್ನು ಕಲ್ಪಿಸಿದರು. ಇಷ್ಟೆಲ್ಲಾ ಬಿಡುಗಡೆಯ ದಾರಿಗಳನ್ನು ಗಾಢವಾಗಿ ಆಲೋಚಿಸಿದ ಅಂಬೇಡ್ಕರ್‌ರವರು ಕೊನೆಗೂ ತೃಪ್ತರಾಗಲಿಲ್ಲ. ಹಿಂದೂಧರ್ಮದ ಚೌಕಟ್ಟನ್ನು ದಾಟದ ಹೊರತು ಅಸ್ಪೃಶ್ಯತೆಯಿಂದ ಅಂತಿಮ ಮುಕ್ತಿ ದೊರೆಯಲಾರದೆಂದು ಭಾವಿಸಿದ ಅಂಬೇಡ್ಕರ್ 1936 ರಲ್ಲಿ ತಮ್ಮ ಅನುಯಾಯಿಗಳಿಗೆ "The only way to get rid of untouchability is that the depressed class should leave Hindu religion"[83] ಎಂದು ಅಸ್ಪೃಶ್ಯರಿಗೆ ಕರೆ ನೀಡಿದರು. ಅಲ್ಲದೇ "ನಾವು ಹಿಂದೂಗಳಾಗಿ ಉಳಿಯಬೇಕೇ ಬೇಡವೇ?" ಎಂದು ಅಂಬೇಡ್ಕರ್ ಕೇಳಿದ ಪ್ರಶ್ನೆಗೆ ಭಾರತದಾದ್ಯಂತ ಕಂಪನದ ಅಲೆಗಳನ್ನು ಸೃಷ್ಟಿಸಿತು. ಅವರನ್ನು ಒಲಿಸಿಕೊಳ್ಳಲು ಕ್ರೈಸ್ತ, ಮುಸ್ಲಿಂ ಮುಂತಾದ ಬಹುಧರ್ಮೀಯರು ಯತ್ನಿಸಿದರೂ ಅಂಬೇಡ್ಕರ್‌ರವರ ನಿರ್ಧಾರಕ್ಕೆ ಮನುಷ್ಯನ ಆಂತರಿಕ ನೆಮ್ಮದಿಯೇ ಮುಖ್ಯವಾದ ಆಧ್ಯಾತ್ಮಿಕ ಚಿಂತನೆ ಮೂಲವಾಗಿತ್ತು.

ಅಸ್ಪೃಶ್ಯತೆ ತೊಡೆಯಲು ಅಂಬೇಡ್ಕರ್‌ರ ಅಂತಿಮ ನಿರ್ಧಾರ :

ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಆಧ್ಯಾತ್ಮಿಕ ದಾರಿಗಳೇನಾದರೂ ಇವೆಯೇ ಎಂದು ಅನ್ವೇಷಣೆಯಲ್ಲಿತೊಡಗಿದರು. ಮನುಷ್ಯ ಧಾರ್ಮಿಕತೆಯ ಅವಶ್ಯಕತೆಯನ್ನು ಮನಗಂಡಿದ್ದರು. ಹಿಂದೂ ಧರ್ಮದ ಆದರ್ಶಗಳು ಎಷ್ಟೇ ಔನ್ನತ್ಯದಿಂದ ಕೂಡಿದ್ದರೂ ಅದು ವಾಸ್ತವಿಕತೆಯಲ್ಲಿ ಅತಿ ಕ್ರೌರ್ಯದಿಂದ ಕೂಡಿದೆ. "ಹಿಂದೂ ಸಮಾಜವು ಜಾತಿಗಳ ಆಧಾರದ ಮೇಲೆ ರೂಪುಗೊಂಡಿರುವಂತೆ ಮತ ಧರ್ಮಗಳ ಆಧಾರದ ಮೇಲೆಯೂ ರೂಪುಗೊಂಡಿದೆ ಎಂಬ ಮಾತು ಅಷ್ಟೇ ನಿಜ.

ಆದರೆ ಜಾತಿಗಳ ಅಧ್ಯಯನಕ್ಕೆ ಸಿಕ್ಕ ಒತ್ತು ಮತ್ತು ಧರ್ಮಗಳ ಅಧ್ಯಯನಕ್ಕೆ ಸಿಕ್ಕದೆ ಹೋಗಿರುವುದು ಸೋಜಿಗದ ವಿಚಾರ"[84] ಎಂದ ಅಂಬೇಡ್ಕರ್ ಅವರು "ತಪ್ಪು ಆದರ್ಶಗಳನ್ನೇ ಎತ್ತಿ ಹಿಡಿಯುವ ಅಥವಾ ಸರಿಯಾದ ಆದರ್ಶಗಳನ್ನಿಟ್ಟುಕೊಂಡು ಕೂಡ ಅದಕ್ಕೆ ಅನುಗುಣವಾಗಿ ಜೀವನವನ್ನು ತಿದ್ದಿಕೊಳ್ಳಲಾಗದ ಸಮಾಜದಲ್ಲಿ ನಾನು ಬದುಕಲಾರೆ" -ಎಂಬ ನಿಲುವಿಗೆ 1956 ರ ಸುಮಾರಿಗೆ ಬಂದರು. ಆದರೆ ಅವರು "ಧರ್ಮ": ವಿರದ ಮನುಷ್ಯನ ಮತ್ತು ಸಮಾಜದ ಅಸ್ತಿತ್ವವನ್ನು ಅವರು ಒಪ್ಪಲಿಲ್ಲ. ಹೀಗಾಗಿ ಅವರು ಮಾರ್ಕ್ಸವಾದದ ಕಡೆ ಒಲಿಯಲಿಲ್ಲ. "ಮಾನವ ಜನಾಂಗ ಕೇವಲ ಆರ್ಥಿಕ ಮೌಲ್ಯಗಳನ್ನು ಬಯಸುವುದಿಲ್ಲ. ಅದು ಅಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಕೂಡ ಇಚ್ಛಿಸುತ್ತದೆ. ನಿರಂತರ ಸರ್ವಾಧಿಕಾರ ಅಧ್ಯಾತ್ಮಿಕ ಮೌಲ್ಯಗಳಿಗೆ ಯಾವ ಗಮನವನ್ನೂ ನೀಡಿಲ್ಲ. ನೀಡುವಂತೆ ಕಾಣುವುದೂ ಇಲ್ಲ"[85] ಎಂದ ಅಂಬೇಡ್ಕರ್ ತನ್ನ ಜನಾಂಗದ ಬಿಡುಗಡೆಗೆ ಯಾವ ಧರ್ಮ ಸೂಕ್ತವಾಗಬಹುದೆಂಬುದರ ತೀವ್ರ ಅನ್ವೇಷಣೆಗೆ ತೊಡಗಿದರು.

ಅಂಬೇಡ್ಕರ್ ಅವರ ಜೀವನದ ಕೊನೆಯ ದಿನಗಳು ಸಂದಿಗ್ಧತೆಯ ಕಾಲ ಅವರ ಮುಂದೆ ಹಲವು ಆಯ್ಕೆಗಳು ತೆರೆದುಕೊಂಡಿದ್ದವು. ಕ್ರಿಶ್ಚಿಯನ್, ಇಸ್ಲಾಂ, ಬೌದ್ಧ, ಸಿಖ್ ಎಲ್ಲವನ್ನು ಅಂಬೇಡ್ಕರ್ ಆಳವಾಗಿ ಅಧ್ಯಯನ ಮಾಡಿದರು. ಎಲ್ಲ ಧರ್ಮಗಳಿಂದಲೂ ಧರ್ಮ ಪ್ರಚಾರಕರಿಂದಲೂ ಅವರ ಮೇಲೆ ಒತ್ತಡ, ಆಮಿಷ, ಪ್ರಲೋಬನೆಗಳು ಬಂದವು. ಅಂತಿಮವಾಗಿ ಅವರು ಬೌದ್ಧಧರ್ಮವನ್ನು ಆಯ್ಕೆ

ಮಾಡಿಕೊಂಡರು. ಬೌದ್ಧ ಧರ್ಮದ ಕಡೆಗೆ ಗಮನ ಕೇಂದ್ರೀಕರಿಸಿದರು ಭಾರತದಿಂದ ಗಡೀಪಾರು ಮಾಡಲ್ಪಟ್ಟಿದ್ದ ಬುದ್ಧನನ್ನು ಮತ್ತೆ ಭಾರತಕ್ಕೆ ಕರೆ ತಂದು, ಬುದ್ಧನ ಬೋಧನೆಯನ್ನು ಮತ್ತೆ ಭಾರತದ ನೆಲದಲ್ಲಿ ಚಿಗುರಿಸುವ ಸಂಕಲ್ಪವನ್ನು ಕೈಗೊಂಡರು. ಹಿಂದೂಧರ್ಮದ ಅಮಾನವೀಯತೆಯ ವಿರುದ್ಧ ಅಂಬೇಡ್ಕರ್ ನಡೆಸಿದ ಬಲು ಆಘಾತಕರ ಹೋರಾಟ ಇದಾಗಿತ್ತು. ಅಂತಿಮವಾಗಿ ಅಂಬೇಡ್ಕರ್ ಬೌದ್ಧಧರ್ಮವನ್ನು ಆಯ್ಕೆ ಮಾಡಿಕೊಳ್ಳಲು ತಮ್ಮ ಕಾರಣಗಳೇನೆಂದು ಈ ರೀತಿ ಉತ್ತರಿಸಿದರು.: "I prefer Buddhism - because it gives thre principles in combination which no other religion does. Buddhism teachers prajana (understanding as against superstition and super naturalism) Karuna (Love) and Sama (Equality)." Hinduism belives in God. Buddhism has no God. Hindusim belives in soul. According to Buddhism there is no soul. Hinduism belives in Chaturvarnya and the caste system. Buddhism has no place for the caste system and charturvanya.."[86] -ಬೌದ್ಧಧರ್ಮದಲ್ಲಿ ದೇವರಿಗೆ, ಆತ್ಮಕ್ಕೆ ಪುನರ್ಜನ್ಮಕ್ಕೆ ಚಾತುರ್ವರ್ಣ ಪದ್ಧತಿಗೆ ಅದರ ಆಧಾರವಾದ ಜಾತಿವ್ಯವಸ್ಥೆಗೆ ಸ್ಥಾನವಿಲ್ಲವಾದ್ದರಿಂದ ತಾವು ಬೌದ್ಧಮತಕ್ಕೆ ಸೇರುವುದಾಗಿ ಪ್ರಕಟಿಸಿ ಬೌದ್ಧಧರ್ಮದ ಮೂರು ಮುಖ್ಯ ಸೂತ್ರಗಳನ್ನು ತಿಳಿಸಿ, ಅವುಗಳೇ ತಮ್ಮನ್ನು ಆ ಧರ್ಮದತ್ತ ಸೆಳೆದವು ಎಂದು ಅಂಬೇಡ್ಕರ್ ತಿಳಿಸಿದರು.

ಪ್ರಜ್ಞೆ (ಮೂಢ ನಂಬಿಕೆ-ಕರ್ಮ, ವಿಧಿವಾದ ಮುಂತಾದವುಗಳಿಗೆ ವಿರುದ್ಧವಾದ ತಿಳುವಳಿಕೆ), ಕರುಣ (ಪ್ರೀತಿ-ವಿಶ್ವಾಸ -ಭಾತೃತ್ವ), ಸಮತಾ (ಸಮಾನತೆ), ಈ ಮೂರು ಮುಖ್ಯ ಸೂತ್ರಗಳು ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯ. ಇವುಗಳು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಂದಿಗೆ ವರ್ತಿಸುವಾಗಲೂ ಅವಶ್ಯಕ. ಸಮಾಜವನ್ನು ದೇವರಾಗಲಿ, ಮಹಾತ್ಮರಾಗಲಿ ಉದ್ಧಾರ ಮಾಡಲಾರರು. ಸಮಾನತೆ, ಸೋದರತೆ, ಸ್ವಾತಂತ್ರ್ಯವನ್ನು ಬೋಧಿಸುವಂಥ ಬೌದ್ಧಧರ್ಮ ಮಾತ್ರ ವಿಶ್ವಧರ್ಮ ಎಂದರು. ಆ ಕಡೆಗೆ ಸೆಳೆಯಲ್ಪಟ್ಟರು. ಕೊನೆಗೆ ಬೌದ್ಧರೇ ಆದರು. "ಬೌದ್ಧಧರ್ಮ ಜೀವನಾನುಭವವನ್ನು, ಉದಾತ್ತ ಬದುಕನ್ನು ಹೇಳುತ್ತಾರೆ. ಇಹದಲ್ಲೇ ಬದುಕಿನ ದಿವ್ಯತೆಯನ್ನು ತಿಳಿಸುತ್ತದೆ. ಅದು ವಾಸ್ತವಿಕತೆಯ ಮೇಲೆ ನಿಂತಿದೆ. ಆದರ್ಶದ ಮೇಲಲ್ಲ. ಅದು ಸೋದರತೆ, ಸಮಾನತೆ, ಸ್ವಾತಂತ್ರ್ಯವನ್ನು ಹೇಳುತ್ತದೆ. ಅದು ಸಮೃದ್ಧ, ವೈಜ್ಞಾನಿಕ, ವಿಶ್ವಸಂಬಂಧ, ಎಲ್ಲದಕ್ಕಿಂತ ಬೌದ್ಧಧರ್ಮಕ್ಕೆ ಮನುಷ್ಯರೇ ಕೇಂದ್ರ ಬಿಂದು" ಎಂದು ಖಚಿತ ಪಡಿಸಿದರು. ಅಂಬೇಡ್ಕರ್ ಒಬ್ಬ ಮಹಾಧಾರ್ಮಿಕ ವ್ಯಕ್ತಿಯಾಗಿದ್ದರೂ ವೈಜ್ಞಾನಿಕ ವಸ್ತುನಿಷ್ಠತೆ ಅವರದಾಗಿತ್ತು.

ಬುದ್ಧನ ಹಾಗೆ ಅಂಬೇಡ್ಕರ್ ಸಹ ಹಿಂದೂ ಧರ್ಮಕ್ಕೆ ಬಲವಾದ ಆಘಾತ ಮಾಡಿದರು. ಅಂತೆ ಮಾರ್ಕ್ಸ್‌ನ ಹಾಗೆ ಸೈದ್ಧಾಂತಿಕ ಬೆಳಕಿನಲ್ಲಿ ಬಲವಾದ ಸಂಘಟನೆ ಮಾಡಿದರು. ಅವರ ಸಂಘಟನಾ ಸಾಮರ್ಥ್ಯ ಅದ್ಭುತವಾದುದು. ಸಿದ್ಧಾಂತ ಅಥವಾ ಅಭ್ಯಾಸ ಮತ್ತು ಹೋರಾಟದಲ್ಲಿ ಅವರು ಮಾರ್ಕ್ಸನಿಗೆ ಸಮೀಪ. ಬುದ್ಧ ಸತ್ತ ನಂತರ ಅವನ ಧರ್ಮ ವಿಶ್ವವ್ಯಾಪಿಯಾಯಿತು. ಮಾರ್ಕ್ಸ್ ಸತ್ತ ನಂತರ ಅವರ ಸಿದ್ಧಾಂತ ಜಗತ್ತಿನಾದ್ಯಂತ ಪಸರಿಸುತ್ತದೆ. ಅಂತೆಯೇ ಅಂಬೇಡ್ಕರ್‌ರ ಮರಣಾನಂತರ ಅವರ ವಿಚಾರ ಮಹಾರಾಷ್ಟ್ರವನ್ನು ದಾಟಿ ದೇಶದೆಲ್ಲೆಡೆ ಚಿಂತನೆಗೆ, ಸಂಘಟನೆಗೆ, ಹೋರಾಟಕ್ಕೆ ಸ್ಫೂರ್ತಿಯಾಗುತ್ತದೆ. ಹೊಸಚಿಂತನೆಗೆ ಆಹ್ವಾನಿಸುತ್ತದೆ.

ಬುದ್ಧನ ತತ್ವಗಳು : ಅಂಬೇಡ್ಕರ್ ಬೌದ್ಧಧರ್ಮದ ಮೂಲ ತಿರುಳನ್ನು ಹೀಗೆ ಸಂಕ್ಷೇಪಿಸಿದರು.

1) ಧರ್ಮ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು. ದೇವರು ಅಥವಾ ಆತ್ಮ ಅಥವಾ ಸ್ವರ್ಗ ಅಥವಾ ಭೂಮಿ ಬಗೆಗಿನ ಊಹೆಗಳಿಗೆ ಮತ್ತು ವಾದಗಳಿಗೆ ಸಂಬಂಧಿಸಿರಬೇಕು.
2) ಧರ್ಮದ ಕೆಲಸ ಪ್ರಪಂಚದ ಪುನರ್ರಚನೆ ಮತ್ತು ಸುಖ ಸಂವರ್ಧನೆ ಮಾಡುವುದು. ಅದರ ಆದಿ ಮತ್ತು ಅಂತ್ಯವನ್ನು ವಿವರಿಸುವುದಿಲ್ಲ.
3) ಆಸ್ತಿಯ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರವೂ ಇನ್ನೊಂದು ವರ್ಗಕ್ಕೆ ದುಃಖವೂ ಉಂಟಾಗುತ್ತದೆ.
4) ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕೇ ಹೊರತು ಹುಟ್ಟಿನಿಂದ ಅಲ್ಲ.
5) ಶೀಲವಿಲ್ಲದ ಜ್ಞಾನ ಅಪಾಯಕಾರಿ.
6) ಯಾವುದೂ ನಿರ್ದೋಷವಲ್ಲ, ಯಾವುದೂ ಸದಾ ಬದ್ಧವಲ್ಲ. ಪ್ರತಿಯೊಂದು ವಿಚಾರಣೆಗೂ, ಪರಿಶೀಲನೆಗೂ ಅಧೀನವಾಗಿದೆ.
7) ಯಾವುದು ಸನಾತನವಲ್ಲ ಅಥವಾ ಶಾಶ್ವತವಲ್ಲ. ಎಲ್ಲವೂ ಪರಿವರ್ತನಾಶೀಲವಾದುದು. ಇರುವಿಕೆಯೆಂದರೆ ಸದಾ ಆಗುವಿಕೆ.
8) ಸತ್ಯ ಮತ್ತು ನ್ಯಾಯಕ್ಕಾಗಿ ಅಲ್ಲದಿದ್ದರೆ ಯುದ್ಧ ಕೆಟ್ಟದ್ದು.
9) ಗೆದ್ದವನು ಸೋತವನನ್ನು ಧರ್ಮದಿಂದ ಕಾಣಬೇಕು."[87]

ಈ ಎಲ್ಲಾ ಮಾನವೀಯ ಗುಣಗಳಿಗೆ ಮಾರುಹೋಗಿ ನಾಗಪೂರದಲ್ಲಿ ಅಂಬೇಡ್ಕರ್‌ರವರು 14-10-1956ರಂದು ಬುದ್ಧಜಯಂತಿಯಂದು ತಮ್ಮ ಅಪಾರ ಅನುಯಾಯಿಗಳೊಂದಿಗೆ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಅಂದು ಅವರು ಹೇಳಿದ ಮಾತುಗಳು.

By discarding my ancient religion whcih stood for inequality and appression today I am reborn. I have no faith in the philosophy of incarnation; and it is wrong and mischievous to say that Buddha was an incranation of Vishnu. I will not perform shradda. I will strictly follow the eight fold path of Buddha. Buddhism is a true religion and I will lead a life guided by the three principles of knowledge, right path and compassion"[88] ಎಂದ ಅಂಬೇಡ್ಕರ್‌ರವರು ಹಿಂದೂ ಧರ್ಮದ ಬಂಧನದಿಂದ ಬಿಡುಗಡೆಗೊಂಡು ಜಾತಿಪದ್ಧತಿಯ ಬಿಡುಗಡೆಗೆ ಇದೆ ಕೊನೆಯ ಅಸ್ತ್ರ ಎಂದು ತಮ್ಮ ಬಾಂಧವರಿಗೆ ಸಾರಿದರು.

"ಅಸಮಾನತೆಯನ್ನು ಮತ್ತು ಶೋಷಣೆಯನ್ನು ಎತ್ತಿ ಹಿಡಿಯುವ ನನ್ನ ಹುಟ್ಟಿನ ಧರ್ಮವನ್ನು ತಿರಸ್ಕರಿಸಿ, ನಾನು ಇಂದು ಬೌದ್ಧಧರ್ಮವನ್ನು ಒಪ್ಪಿಕೊಂಡಿರುವೆ. ನನಗೆ ಮರುಹುಟ್ಟು ದೊರಕಿದೆ. ಬುದ್ಧನು ವಿಷ್ಣುವಿನ ಅವತಾರ ಎಂಬುದು ಕುಚೋದ್ಯದ ಕಟ್ಟು ಕಥೆ. ದುರುದ್ದೇಶದಿಂದ ಇಂಥ ಕಥೆ ಪ್ರಚಾರ ಮಾಡಲಾಗಿದೆ. ನಾನು ಇನ್ನು ಯಾವ ಹಿಂದೂ ದೇವ-ದೇವತೆಗಳನ್ನು ಪೂಜಿಸುವುದಿಲ್ಲ. ಶ್ರಾದ್ಧ-ಕರ್ಮಾದಿಗಳನ್ನು ಮಾಡುವುದಿಲ್ಲ. ಬುದ್ಧ ಬೋಧಿಸಿದ ಅಷ್ಟಾಂಗಮಾರ್ಗವನ್ನು ನಾನು ಕಟ್ಟು ನಿಟ್ಟಾಗಿ ಅನುಸರಿಸುತ್ತೇನೆ. ಧರ್ಮ ಎಂಬುದರ ಅರ್ಥಕ್ಕೆ ಬೌದ್ಧಧರ್ಮ ಅತ್ಯಂತ ಸಮಂಜಸವಾಗಿದೆ"[89] ಎಂದು ಅಂಬೇಡ್ಕರ್ ನುಡಿದರು.

ಅಂಬೇಡ್ಕರ್ ಮಂತಾಂತರದ ಸಂದರ್ಭದಲ್ಲಿ ರಾಷ್ಟ್ರದ ಒಗ್ಗಟ್ಟನ್ನು ಕಾಳಜಿಯನ್ನು ಮರೆಯಲಿಲ್ಲ. ಅವರು ಏನಾದರೂ ಮುಸ್ಲಿಂಧರ್ಮ ಅಥವಾ ಕ್ರಿಶ್ಚಿಯನ್‌ಧರ್ಮಕ್ಕೆ ಮತಾಂತರಗೊಂಡಿದ್ದರೆ ದೇಶದೊಳಗೆ ನಾಗರೀಕ ಯುದ್ಧ ಸಂಭವಿಸುವ ಸಾಧ್ಯತೆಗಳಿದ್ದವು. ಆದನ್ನೇ ಅಂಬೇಡ್ಕರ್ ರವರು "I will choose only the least harmful way for the country and that is the greatest benefit I am confirming on the country be embracing Buddhism : For Buddhism is a part and parcel of Bharatiy culture. I have taken care that my conversion will not hard the tradition of the culture and history of this land" ಎಂದು ಹೇಳಿ ಎಲ್ಲದಕ್ಕಿಂತ ರಾಷ್ಟ್ರ ದೊಡ್ಡದು ಎಂದು ಸಾಬೀತು ಮಾಡಿದರು.

"ಈಗ ನಾನು ದೇಶದ್ರೋಹಿಯಾಗಿ, ಧರ್ಮದ್ರೋಹಿಯಾಗಿ ಕಾಣುತ್ತಿದ್ದೇನೆ... ಕೆಲಕಾಲ ನಂತರ ಈಗ ಎದ್ದಿರುವ ಧೂಳು ನೆಲಕ್ಕಿಳಿದ ತರುವಾಯ, ಮುಂದೊಂದು ದಿನ ಚರಿತ್ರೆಕಾರರು ನನ್ನ ಚಿಂತನೆಗಳನ್ನು, ನನ್ನ ಹೋರಾಟಗಳನ್ನು ಮುಕ್ತ ಮನಸ್ಸಿನಿಂದ ವಿಶ್ಲೇಷಿಸಿದಾಗ -ನಾನು ಈ ದೇಶಕ್ಕೆ ಮಾಡಿದ ಸೇವೆ ಏನು ಎಂಬುದು ಅರ್ಥವಾಗುತ್ತದೆ "ಎಂದಿದ್ದರು ಅಂಬೇಡ್ಕರ್. ವಿಚಾರವಂತರು ಅಂಬೇಡ್ಕರ್‌ರನ್ನು ಆಧುನಿಕ ಭಾರತದ ಪ್ರಮುಖ 'ಪ್ರೊಟೆಸ್ಟಂಟ್' ನಾಯಕರಲ್ಲಿ ಒಬ್ಬರೆಂದು, ಅವರು ಹಿಂದೂಧರ್ಮದ ಪುನರುಜ್ಜೀವನದ ಕಾಲದಲ್ಲಿ ಕಾಣಿಸಿಕೊಂಡ ಅಪೂರ್ವಚೇತನ ಎಂದು, ಹಿಂದೂ ಸಾಮಾಜಿಕವ್ಯವಸ್ಥೆಯನ್ನು ಮಾನವೀಯವಾಗಿ ಪುನರ್‌ನಿರ್ಮಾಣ ಮಾಡಲು ಶ್ರಮಿಸಿದ ಅದ್ಭುತಜೀವ ಎಂದು ದಾಖಲಿಸಿರುವುದು ಅರ್ಥಪೂರ್ಣವಾಗಿದೆ.

4.6 ಲಿಂಗತಾರತಮ್ಯದ ವಿರುದ್ಧ ಪ್ರತಿಭಟನೆ :

ಭಾರತದ ಸಾಮಾಜಿಕ ಚರಿತ್ರೆಯುದ್ದಕ್ಕೂ ಸ್ತ್ರೀಯರನ್ನು ಅತ್ಯಂತ ಹೀನಾಯವಾಗಿ ಪುರುಷ ಪ್ರಧಾನ ವ್ಯವಸ್ಥೆ ಕಾಣುತ್ತ ಬಂದಿದೆ. ಸ್ತ್ರೀ ಅಬಲೆ, ಪುರುಷರ ಆಧೀನದಲ್ಲಿರಬೇಕು. ಸ್ವತಂತ್ರಳಾಗಿರಬಾರದು. ಅವಳು ಸ್ವತಂತ್ರಳಾದರೆ ನಮ್ಮ ಸಂಸ್ಕೃತಿಯೇ ನಾಶವಾಗುತ್ತದೆ ಎಂಬ ಧೋರಣೆಯನ್ನು ಪುರುಷ ಸಮಾಜ ಹೊಂದಿದ್ದು, ಪುರುಷ ಸ್ತ್ರೀಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಶತಪ್ರಯತ್ನ ಮಾಡಿರುವುದನ್ನು ನಮ್ಮ ಚರಿತ್ರೆ ಸಾಬೀತು ಪಡಿಸುತ್ತದೆ. ಸ್ತ್ರೀಯರನ್ನು ಶೋಷಣೆಗೆ ಒಳಪಡಿಸಿ ಅವಳ ಸ್ಥಾನವನ್ನು ಕೀಳು ಎನ್ನುವ ರಿತಿಯ ನಿಯಮಗಳನ್ನು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಿರ್ಮಿಸಲಾಗಿದೆ. ಸ್ತ್ರೀಯರನ್ನು ಕೀಳಾಗಿ ಕಂಡು ಅವಳನ್ನು ಹೆರುವ ಯಂತ್ರ, ಭೋಗದ ವಸ್ತುವನ್ನಾಗಿ ಪರಿಗಣಿಸಲಾಗಿದೆ.

ವೈದಿಕ ವ್ಯವಸ್ಥೆಯಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಸ್ತ್ರೀಯರನ್ನು ಕೀಳಾಗಿ ಕಾಣಲಾಗಿದೆ. ಸ್ತ್ರೀಯಾದವಳು ನೀಚಳು ಮೇಲಗಿ ಸ್ವಾತಂತ್ರ್ಯಕ್ಕೆ ಅನರ್ಹಳು ಎಂದು ತುಚ್ಛೀಕರಿಸಲಾಗಿದೆ. ಈ ದೇಶದ ಇತಿಹಾಸದುದ್ದಕ್ಕೂ ಸ್ತೀಯರನ್ನು ಮತ್ತು ಅಸ್ಪೃಶ್ಯರನ್ನು ಬಳಸಿ ಬೀಸಾಡು ಎನ್ನುವ ಅರ್ಥದಲ್ಲಿ ಉಪಯೋಗಿಸಿ ಕೊಂಡು ಬರಲಾಗಿದೆ. ಪುರುಷ ಸಮಾಜ ಭಾರತದ ಸ್ತ್ರೀಯರನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿದೆ. ವೇದಗಳ ಕಾಲದಲ್ಲಿ ಪುರುಷನೊಂದಿಗೆ ಸಮಾನ ಸ್ಥಾನಮಾನಗಳನ್ನು ಸ್ತ್ರೀಯರು ಪಡೆದಿದ್ದರು. ಆದರೆ, ನಂತರದ ವರ್ಷಗಳಲ್ಲಿ ಸ್ತ್ರೀಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಶೋಷಣೆಗೊಳಪಟ್ಟ ಸ್ತ್ರೀಯರಿಗೆ ಸ್ವಾತಂತ್ರ್ಯ ಸಮಾನತೆಯನ್ನು ದೊರಕಿಸಿ ಕೊಡಲು ಅಂಬೇಡ್ಕರ್ ರವರು ಪ್ರಯತ್ನಿಸಿದರು. ಭಾರತೀಯ ಸಮಾಜದಲ್ಲಿ ಸ್ತ್ರೀಯರು ಯಾವ ಸಮಾನತೆ, ಸ್ವಾತಂತ್ರ್ಯವಿಲ್ಲದೇ ಬದುಕುವ ಸಂದರ್ಭ. ಅದಕ್ಕೆ ಕಾರಣವಾದ ಅಂಶಗಳನ್ನು ಕುರಿತು ಅಂಬೇಡ್ಕರ್‌ರವರು ಆಳವಾಗಿ ಅಧ್ಯಯನ ಮಾಡಿ ಲಿಂಗತಾರತಮ್ಯದ ವಿರುದ್ಧ ಹೋರಾಟ ಮಾಡಿದರು.

ಅಂಬೇಡ್ಕರ್ ಮಹಾನ್ ಸಮಾಜ ಸುಧಾರಕರು, ಮಾನವೀಯ ಹಕ್ಕುಗಳ ಪ್ರತಿಪಾದಕರು ಸ್ತ್ರೀಯರ ಮೇಲೆ ಶತಮಾನಗಳ ಕಾಲ ವಿರಲಾಗಿರುವ ಲಿಂಗತಾರತಮ್ಯವನ್ನು ತೀವ್ರವಾಗಿ ಖಂಡಿಸಿದರು. ಸ್ತ್ರೀಯರ ಮೇಲಾಗುವ ಅತ್ಯಾಚಾರ, ಹಿಂಸೆ, ಕಿರುಕುಳ ಇತ್ಯಾದಿಗಳನ್ನು ಕಟುವಾಗಿ ಟೀಕಿಸಿದರು. ಅಲ್ಲದೇ ಸ್ತ್ರೀಯರಿಗೆ ನೈಸರ್ಗಿಕವಾಗಿ ಸಿಗಬೇಕಾದ ಪ್ರಾಶಸ್ತ್ಯಗಳನ್ನು ದೊರಕಿಸಿ ಕೊಡಲು ಶ್ರಮಿಸಿದರು. ಅತಿಯಾದ ಸಾಂಪ್ರದಾಯಿಕ ನಿಯಮಗಳ ಅಡಿಯಲ್ಲಿ ಸರಪಳಿಗಳಿಲ್ಲದೆ ಕುಟುಂಬದಲ್ಲಿ ಸ್ತ್ರೀ ಬಂಧಿಸಿಕೊಂಡಿದ್ದಾಳೆ. ಸ್ತ್ರೀಯರನ್ನು ಶತಮಾನಗಳ ಕಾಲ ಭಾರತೀಯ ಸಮಾಜ ಕ್ರೂರವಾಗಿ ನಡೆಸಿಕೊಂಡಿದೆ. ಆದ್ದರಿಂದ ಸ್ತ್ರೀಯರಿಗೆ ಸಮಾಜದೊಳಗೆ ಕರುಣೆ, ಪ್ರೀತಿ, ಸಹಾನುಭೂತಿಗಳೆಲ್ಲವೂ ನೆಲೆಗೊಂಡು ಸಮಾನತೆಯು ರೂಪ ತಳೆಯಲೆಂದು ಅಂಬೇಡ್ಕರ್ ಬಯಸಿದರು.

ಅಂಬೇಡ್ಕರ್‌ರವರ ಪ್ರಕಾರ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಮಿತಿ ಹೇರಿದ್ದು, ಮನು. ಮನುಸ್ಮೃತಿಯಲ್ಲಿ ಇರುವಂತಹ ನಿಯಮಗಳೆಲ್ಲಾ ಬ್ರಾಹ್ಮಣ ತತ್ವದಲ್ಲಿ ಇದ್ದಂತಹ ವಿಷಯಗಳೇ, ಈ ವಿಷಯಗಳನ್ನು ಸಾಮಾಜಿಕ ನಿಯಮಗಳೆಂದು ಕರೆಯಲಾಗಿದೆ. 'ಮನುಸ್ಮೃತಿ'ಯು ಇದನ್ನು 'ಸಾಮಾಜಿಕ ಕಾನೂನು' ಎಂದು ಕರೆದಿದೆ. ಮನು ಈ ರೀತಿಯ ತತ್ವಗಳನ್ನು ಜಾರಿಗೊಳಿಸಲು ಪ್ರಮುಖ ಕಾರಣ ಅವನು ಬೌದ್ಧಧರ್ಮದ ವಿರೋಧಿಯಾಗಿದ್ದುದು ಎನ್ನುವ ಅಭಿಪ್ರಾಯ ಅಂಬೇಡ್ಕರ್‌ರವರದಾಗಿತ್ತು. ಆ ಕಾಲದಲ್ಲಿ ಸ್ತ್ರೀಯರು ಹಾಗೂ ಶೂದ್ರರು ಸಮಾಜದ ಹಿಂದುಳಿದ, ಸ್ವಾತಂತ್ರ್ಯವಿರದ ಎರಡು ವರ್ಗಗಳಾಗಿದ್ದವು. ಈ ಎರಡೂ ವರ್ಗಗಳು ಸಮಾನತೆಯನ್ನು ಸಾರುವ ಬೌದ್ಧಧರ್ಮವನ್ನು ಸೇರಲು ಹಾತೊರೆಯುತ್ತಿದ್ದರು. ಸ್ತ್ರೀಯರು-ಶೂದ್ರರು ಬೌದ್ಧಧರ್ಮ ಸ್ವೀಕರಿಸಿದರೆ ವೈದಿಕಧರ್ಮ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವುದು ಎಂಬ ಅಂಶವನ್ನು ಮನಗಂಡು ಮನು ಈ ರೀತಿಯ ಕಾನೂನು ಮಾಡಿದ ಎನ್ನುವುದು ಅಂಬೇಡ್ಕರ್‌ರವರ ಅಭಿಪ್ರಾಯ. ಮನುಸ್ಮೃತಿಯು ಜಾರಿಗೆ ಬಂದು ಹಲವಾರು ಶತಮಾನಗಳ ನಂತರ ಮಹಿಳೆಯರ ಶೋಷಣೆಯು ಭಾರತದ ಸಮಾಜ ಸುಧಾರಕರ ಗಮನ ಸೆಳೆಯಿತು.

ಡಾ । ಅಂಬೇಡ್ಕರ್ ಆಧುನಿಕ ಭಾರತದ ಪ್ರಮುಖ ಸಮಾಜ ಸುಧಾರಕರಲ್ಲಿ ಒಬ್ಬರು. ಭಾರತದಲ್ಲಿ ಶೋಷಣೆಗೊಳಪಟ್ಟ ಸ್ತ್ರೀಯರು ಹಾಗೂ ಅಸ್ಪೃಶ್ಯರ ಶೋಷಣೆಯ ವಿರುದ್ಧ ಹೋರಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಮುಂಬಯಿಯ ಶಾಸಕಾಂಗದ ಸಭೆಯಲ್ಲಿ, ವೈಸರಾಯ್‌ರವರ ಕಾರ್ಯಾಂಗ ಸಭೆಯಲ್ಲಿ ಕಾರ್ಮಿಕ ಸದಸ್ಯರಾಗಿ, ಸಂವಿಧಾನವನ್ನು ರಚಿಸುವ ಸಮಿತಿಯ ಮುಖ್ಯಸ್ಥರಾಗಿ, ಸ್ವತಂತ್ರ ಭಾರತ ಸರಕಾರದ ಮೊದಲ ಕಾನೂನು ಮಂತ್ರಿಯಾಗಿ ಅಂಬೇಡ್ಕರ್‌ರವರು ಮಹಿಳಾ ತಾರತಮ್ಯ, ಸಮಸ್ಯೆಗಳು ಹಾಗೂ ಅವುಗಳ ಪರಿಹಾರಗಳ ಕುರಿತಾಗಿ ವಿಶೇಷವಾದ ರೀತಿಯಲ್ಲಿ ಚರ್ಚಿಸಿದರು. ತಮ್ಮ ಅಧ್ಯಯನದ ಮೂಲಕ ಹಿಂದೂ ಸ್ತ್ರೀಯರ ಸ್ಥಿತಿಗಳನ್ನು ಪರಿಶೀಲಿಸಿ ಲಿಂಗತಾರತಮ್ಯವನ್ನು ವಿರೋಧಿಸಿ ಹೋರಾಟ ಮಾಡಿ ನೀತಿ ಸಂಹಿತೆಯೊಂದಿಗೆ ಸಮಾನತೆ ತರಲು ಹೆಣಗಿದರು.

ಹಿಂದೂವಾದವನ್ನು ಗಗನಕ್ಕೇರಿಸಿದ 'ಮನು' ಸ್ತ್ರೀಯರನ್ನವನು ಅಪ್ರಬುದ್ಧ ಮಾನದಂಡಗಳಿಂದ ತರ್ಕಿಸಿ, ನೂರಾರು ಕಟ್ಟುಪಾಡುಗಳನ್ನು ಹಾಕಿ ಅವುಗಳನ್ನು ಸ್ತ್ರೀಯರು ಪಾಲಿಸಿ ಸಾಯುವಂತೆ ಮಾಡಿರುವನು. ಅಂಬೇಡ್ಕರ್ ಎಲ್ಲ ಜಾತಿಯ ಸ್ತ್ರೀಯರ ವಿಮೋಚನೆಗಾಗಿ ಹಾಗೂ ಮನುವಾದದ ವಿರುದ್ಧ

ಪ್ರತಿಕ್ರಾಂತಿವೊಡ್ಡಿದರು. ಅವರು ಭಗವಾನ್ ಬುದ್ಧರ ನಿಯಮಗಳಂತೆ ಸ್ವಾಭಾವಿಕ ಹಕ್ಕುಗಳನ್ನು ಅನುಭವಿಸಲು ಯಾವುದೇ ಲಿಂಗಭೇದಗಳು ಇರಲಾರದು ಎಂದು ವಾದಿಸಿದರು. ಮಹಿಳೆಯರ ಸ್ವಾತಂತ್ರ್ಯ, ಸಮಾನತೆಯನ್ನು ಕುರಿತು ಮಾತನಾಡಿದ ಭಾರತೀಯ ಚಿಂತಕರಿಗಿಂತಲೂ ಹೆಚ್ಚು ವೈಜ್ಞಾನಿಕವಾಗಿ, ವಾಸ್ತವವಾಗಿ ಚಿಂತನೆಗೈದವರು ಅಂಬೇಡ್ಕರ್‌ರವರೇ ಮೊದಲಿಗರು. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ನಿಂತು ಭಾರತೀಯ ಮಹಿಳೆಯ ಬಗೆಗೆ ಅಂಬೇಡ್ಕರ್ ರವರು ಚಿಂತಿಸುವ ಸಂದರ್ಭದಲ್ಲಿ ಮನುವಾದಿ ಚಿಂತನೆಯಲ್ಲಿ ಸ್ತ್ರೀಯರ ಸ್ಥಾನಮಾನ, ಬ್ರಿಟಿಷ ಆಡಳಿತ ಕಾಲದ ಪಾಶ್ಚಾತ್ಯರು ನೀಡಿದ ಮಹಿಳಾ ಸಮಾನತೆ ಮತ್ತು ಸಂಪೂರ್ಣ ಸ್ವಾತಂತ್ರ್ಯದ ಪರಿಕಲ್ಪನೆ. ಇವುಗಳನ್ನು ಆಳವಾಗಿ ಅಧ್ಯಯನ ಮಾಡಿ ಚಿಂತಿಸಿರುವುದು ಕಂಡು ಬರುತ್ತದೆ. ಅವರ ಮೇಲೆ ಜ್ಯೋತಿಬಾಪುಲೆಯವರ ಪ್ರಭಾವ ಹಾಗೂ ಲಾರ್ಡ ವಿಲಿಯಂ ಬೆಂಬೆಂಕ್‌ರವರ ಸುಧಾರಣಾ ಕಾರ್ಯಗಳು ಪ್ರೇರಕವಾಗಿದ್ದವು. ಅನ್ಯ ಭಾರತೀಯ ಸಮಾಜಕರಿಗಿಂತಲೂ ಅಂಬೇಡ್ಕರ್‌ರವರು ಭಿನ್ನವಾಗಿ ಆಲೋಚಿಸಿದರು. ಅನೇಕ ಸಮಾಜ ಸುಧಾರಕರು ತಮ್ಮ ಚಿಂತನೆ, ಬರವಣಿಗೆ, ಬೋಧನೆ ಮತ್ತು ತತ್ಸಂಬಂಧಿತ ಕಾರ್ಯಕ್ರಮಗಳ ಮೂಲಕ ಮಹಿಳಾ ಸಮಾನತೆ ಎತ್ತಿಹಿಡಿದುದನ್ನು ಕಾಣಬಹುದಾಗಿದೆ. ಅವರೆಂದರೆ ಪೆರಿಯಾರ್, ಇವಿ, ರಾಮಸ್ವಾಮಿ, ರಾಜಾರಾಮ್ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಕುಂದುಕುರಿ, ವಿರೇಶಲಿಂಗಂ, ದುರ್ಗಾಭಾಯ್ ದೇಶಮುಖ್ ಮುಂತಾದವರು.

"ಆದರೆ ಸಂವಿಧಾನದ ಕರಡು ರಚನಾ ಶಿಲ್ಪಿಯಾಗಿ, ಅಂಬೇಡ್ಕರ್‌ರ ಚಿಂತನೆ, ಜಾತಿ, ಕುಲ ಮತ್ತು ಲಿಂಗಭೇದದ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಮೂಲಭೂತಹಕ್ಕುಗಳನ್ನು ನೀಡುವ ಮೂಲಕ, ತಮಗಿಂತ ಹಿಂದಿನ ಎಲ್ಲ ಸ್ತ್ರೀ ಪರ ಚಿಂತಕರನ್ನು ಮೀರಿ ನಿಂತಿದೆ ಅವರ ಸ್ತ್ರೀ ವಾದಿ ಚಿಂತನೆ ಎಂಬುದನ್ನು ಇತಿಹಾಸ ಮನಗಂಡಿದೆ. ಅಷ್ಟೇ ಅಲ್ಲದೇ ಸ್ವತಂತ್ರ ಭಾರತದ ನೆಹರೂ ಸಚಿವ ಸಂಪುಟದ ನ್ಯಾಯಮಂತ್ರಿಯಾಗಿ ಅಂಬೇಡ್ಕರರು 1951 ಫೆಬ್ರುವರಿ 15ರಂದು 'ಹಿಂದೂ ಕೋಡ್ ಬಿಲ್' ಅನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದರು. ಆ ಮಸೂದೆಯನ್ನು ಕೇವಲ ಹಿಂದೂ ಮಹಾಸಭಾ ಮಾತ್ರವಲ್ಲದೇ, ಸ್ವತಃ ಕಾಂಗ್ರೆಸ್‌ನೊಳಗೆ ಇದ್ದ ಕೆಲವು ಮಡಿವಂತ ಹಿಂದೂಗಳು ವಿರೋಧಿಸಿದರು. ಅದರಲ್ಲೂ ಮುಖ್ಯವಾಗಿ, ಆ ಮಸೂದೆಯಲ್ಲಿ ಅಳವಡಿಸಲಾಗಿದ್ದ ಎರಡು ಮಹತ್ವದ ಪ್ರಾವದಾನಗಳಾದ ಏಕಪತ್ನಿತ್ವ ಮತ್ತು ಮಹಿಳೆಯ ವಿಚ್ಛೇದನ ಸ್ವಾತಂತ್ರ್ಯವನ್ನು ತುಂಬಾ ಬಲವಾಗಿ ಖಂಡಿಸಲಾಯಿತು. ಇಷ್ಟೆಲ್ಲ ವಿರೋಧಗಳ ನಡುವೆ ಕೂಡ ಪಾರ್ಲಿಮೆಂಟ್‌ನಲ್ಲಿ ಎದ್ದು ನಿಂತ ಅಂಬೇಡ್ಕರ್‌ರು ಮಹಿಳೆಗೆ ಆಸ್ತಿ ಹಕ್ಕನ್ನು ಸಮರ್ಥಿಸುವ "ಬೃಹಸ್ಪತಿ ಸ್ಮೃತಿ"ಯನ್ನೂ ಅದೇ ಮೂಲಭೂತವಾದಿ ಹಿಂದೂ ಮುಖಂಡರ ಮುಖದ ಮುಂದೆ ಎತ್ತಿಹಿಡಿದು, ಹಿಂದೂ ಕೋಡ್ ಬಿಲ್ ನಲ್ಲಿನ ತಮ್ಮ ಸಿದ್ಧಾಂತದ ಮೂಲಭೂತ ಸತ್ಯವನ್ನು ಎತ್ತಿ ಹಿಡಿದರು"[90]

"ಮಲಗುವುದು ಕುಳಿತುಕೊಳ್ಳುವುದು, ಅಲಂಕಾರಗಳಲ್ಲಿ ಪ್ರೀತಿಯು ಕಾಮ ಕ್ರೋಧ, ಕಪಟ, ದ್ರೋಹ, ದುರ್ವರ್ತನೆ ಮತ್ತು ಮನೋವಿಕಾರಗಳು ಸ್ತ್ರೀಗೆ ಜನ್ಮ ಸಿದ್ಧವಾದವುಗಳು" ಸ್ತ್ರೀಯನ್ನು ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳು ರಕ್ಷಿಸುತ್ತಾರೆ. ಆದ್ದರಿಂದ ಸ್ತ್ರೀಗೆ ಸ್ವಾತಂತ್ರ್ಯದ ಅವಶ್ಯಕತೆಯಿಲ್ಲ. ಸ್ತ್ರೀಯರಿಗೆ ಪುರುಷ ದೋಷಕತ್ವವು ಹುಟ್ಟಿನಿಂದಲೇ ಬಂದಿರುತ್ತದೆ. ಆದ್ದರಿಂದಲೇ ಬುದ್ಧಿವಚಿತರು ಸ್ತ್ರೀಯ ಬಗೆಗೆ ಸದಾ ಜಾಗರೂಕರಾಗಿರುತ್ತಾರೆ. ಕಾಮ ಮತ್ತು ಕ್ರೋಧಗಳಿಗೆ ವಶನಾದ ಪಂಡಿತ ಮಾತ್ರವಲ್ಲದೇ, ಪಾಮರನನ್ನು ಸ್ತ್ರೀಯು ವ್ರತ ಭ್ರಷ್ಟನನ್ನಾಗಿ ಮಾಡಬಲ್ಲಳು"[91] ಸ್ತ್ರೀಯರ ಬಗೆಗಿನ ಈ

ಪರಿಯ ರಾಕ್ಷಸಿ ಚಿಂತನೆಯ ವೈಭವೀಕರಣ ಮತ್ತು ಸ್ತ್ರೀಸ್ವಾತಂತ್ರ್ಯ ಹರಣದ ಮನುವಾದಿ ಆಲೋಚನೆಯ ಭವಿಷ್ಯದ ಘೋರತೆಯನ್ನು ಮನಗಂಡುಕೊಂಡ ಅಂಬೇಡ್ಕರರವರು ಆ ಸಂಸ್ಕೃತಿಯ ಮೂಲೋತ್ಪಾಟನೆಗಾಗಿ ಅಂದು ಪಾರ್ಲಿಮೆಂಟಿನಲ್ಲೇ ಒಂದು ರೀತಿಯ ಸಮರ ಸಾರಿದರು. ಸಂವಿಧಾನದಲ್ಲಿ ಮಾತ್ರ ಇದಕ್ಕೆ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂದು ಅಂಬೇಡ್ಕರ್ ಅಂದೇ ಸ್ಪಷ್ಟಪಡಿಸಿದರು. ಸ್ತ್ರೀಯರ ಸಮಾನತೆ ಮತ್ತು ಸ್ವಾತಂತ್ರ್ಯದ ಬಗೆಗೆ ತಾವು ಏನೆಲ್ಲಾ ಹೋರಾಟ ಮಾಡಲು ಬಯಸಿದ್ದರೋ ಸಂವಿಧಾನದಲ್ಲಿ ಮಾತ್ರ ಮಾಡಲು ಸಾಧ್ಯವೆಂದು ಅಂಬೇಡ್ಕರ್ ಅರಿತಿದ್ದರು. ಹೀಗಾಗಿ ಸಂವಿಧಾನದ ಕರಡುರಚನೆಯ ಸಂದರ್ಭದಲ್ಲಿ ಕಾನೂನಿನ ಪ್ರಕಾರವೇ ಜಾರಿಗೊಳಿಸಿದರು.

ವೈಯಕ್ತಿಕ ಕಾನೂನುಗಳಲ್ಲಿ ಸ್ತ್ರೀಯರಿಗೆ ಸಂಬಂಧಿಸಿದಂತೆ, ಮದುವೆ ಕಾನೂನು, ವಿಚ್ಛೇದನ ಕಾನೂನು, ಮಕ್ಕಳ ಅಭಿರಕ್ಷೆ ಕಾನೂನುಗಳಲ್ಲಿ ಅಸಮಾನತೆ ಇರುವುದು ಒಂದು ರೀತಿಯಲ್ಲಿ ಸ್ತ್ರೀಯರ ಸ್ಥಾನಮಾನದ ಅಧೋಗತಿಗೆ ಕಾರಣವೆಂದೇ ಹೇಳಬಹುದಾಗಿದೆ. ಧರ್ಮದ ಹಿನ್ನೆಲೆಯಲ್ಲೇ ಈ ಕಾನೂನುಗಳು ರಚಿತವಾಗಿವೆ. ಯಾವುದೇ ಧರ್ಮವು ಸ್ತ್ರೀಯರ ವಿಚಾರದಲ್ಲಿ ಅಷ್ಟೇನೂ ಉದಾರವಾದ ಭಾವನೆಯನ್ನು ಹೊಂದಿಲ್ಲದಿರುವುದೇ ಮೊದಲನೆಯ ತಪ್ಪು. ಅಂಥದ್ದರಲ್ಲಿ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿಹಿಡಿಯುವ ಹಿಂದೂಧರ್ಮ ಸ್ತ್ರೀಯರನ್ನು ಉನ್ನತಮಟ್ಟದಲ್ಲಿ ನೋಡಿಯೇ ಇಲ್ಲ. ಯಾವಾಗಲೂ ಪುರುಷ ಪರವಾದ ನೀತಿ ನಿಯಮಗಳಿಗೆ ಬದ್ಧವಾಗಿರುವಂಥವು. ಸ್ತ್ರೀಯರಿಗೆ ಅನಾದಿಕಾಲದಿಂದಲೂ ಅನ್ಯಾಯವಾಗುತ್ತಲೇ ಇದೆ. ಹೀಗಾಗಿ ಅಂಬೇಡ್ಕರ್‌ರವರು ಮದುವೆ ಹಾಗೂ ವಾರಸುದಾರ ಹಕ್ಕಿಗೆ ಸಂಬಂಧಿಸಿದಂತೆ ಸಮಾನ ಕಾನೂನುಗಳು ಜಾರಿಯಾಗಬೇಕಾದ ಅವಶ್ಯಕತೆ ಇದೆ ಎಂದು ವಾದಿಸಿದರು. ಅದಕ್ಕಾಗಿಯೇ ಹೋರಾಡಿದರು. ಅದಕ್ಕಾಗಿ ಅವರು ಮಂಡಿಸಿದ 'ಹಿಂದೂ ಕೋಡ್ ಬಿಲ್' ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಗುಲಾಮಗಿರಿಯಿಂದ ಮೇಲೆತ್ತುವ ದೃಷ್ಟಿಯಿಂದ ಪ್ರತಿಪಾದಿಸಲ್ಪಟ್ಟಿದ್ದರು ಕೂಡ ಮಡಿವಂತ ಸದಸ್ಯರು ಬೆಂಬಲಿಸದೇ ಇದ್ದ ಕಾರಣ ಅದು ಪಾರ್ಲಿಮೆಂಟಿನಲ್ಲಿ ಸೋಲನ್ನನುಭವಿಸಿತು. ಆ ಕ್ಷಣವೇ ಅಂಬೇಡ್ಕರ್‌ರವರು ಕಾನೂನುಮಂತ್ರಿ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿ ಹೊರಬಂದರು. ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಂಬೇಡ್ಕರ್ ಸ್ತ್ರೀಯರ ಪರವಾದ ಕಾಳಜಿಯುಳ್ಳ ಒಬ್ಬ ಮಹಾನ್ ವ್ಯಕ್ತಿಯಾಗಿ, ಚಿಂತಕರಾಗಿ ಕಂಡು ಬರುತ್ತಾರೆ. ಏಕಪತ್ನಿತ್ವ ಮತ್ತು ವಿಚ್ಛೇದನಾ ಸ್ವಾತಂತ್ರ್ಯ, ಆಸ್ತಿ ಹಕ್ಕು, ಸಮಾನ ಉದ್ಯೋಗಾವಕಾಶ ಮತ್ತು ವೇತನ ಮುಂತಾದ ಸ್ತ್ರೀಪರ ಅಂಶಗಳುಳ್ಳ 'ಹಿಂದೂ ಕೋಡ್ ಬಿಲ್' ಅವರ ಸ್ತ್ರೀ ಪರ ಕಾಳಜಿಗೆ ಸಾಕ್ಷಿಯಾಗಿದೆ. ಹಿಂದೂ ಸ್ತ್ರೀಯರನ್ನು ಕುರಿತ ವಿವಾಹ, ಉತ್ತರಾಧಿಕಾರ, ಮತ್ತಿತರ 4 ಮಹತ್ವದ ಮಸೂದೆಗಳನ್ನು ಮಂಡಿಸಿದ ಅಂಬೇಡ್ಕರ್‌ರು ಅವುಗಳನ್ನು ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಅಂಗೀಕಾರ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಅಂದು ಅಂಬೇಡ್ಕರ್ ಪ್ರಯತ್ನಗಳಿಂದ ರಚಿತವಾದ ಈ ಕಾನೂನುಗಳಿಂದು ಸ್ತ್ರೀಯರು ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ಪಡೆಯಲು ಸಾಧ್ಯವಾಗಿದ್ದು, ಮನುವಿನ ಕ್ರೂರ ಕಾನೂನಿನ ಕೊಂಡಿಗಳನ್ನು ಕಳಚಿಕೊಂಡು ಸಮಾನತೆಯ ಬದುಕಿಗೆ ನಾಂದಿ ಹಾಡಲು ಅನುವಾದವು. ಅಲ್ಲದೇ ಅವು ಹಿಂದೂ ಮೂಲಭೂತವಾದಿಗಳಿಗೆ ಸವಾಲಾಗಿ ರೂಪಗೊಂಡವು. ಅದರಿಂದಾಗಿಯೇ 1955ರ ಹಿಂದೂವಿವಾಹ ಕಾನೂನಿಗೆ ಇಂದು ದ್ವಿಪತ್ನಿತ್ವವು ಶಿಕ್ಷಾರ್ಹ ಅಪರಾಧವೆಂದೇ ಘೋಷಿಸಲ್ಪಟ್ಟಿರುವುದು. ಹಾಗೇ 1956ರ ಉತ್ತರಾಧಿಕಾರದ ಕಾನೂನಿನಲ್ಲಿ ವಿಧವೆಯರು ಗಂಡು ಮಗನನ್ನಾಗಲೀ, ಹೆಣ್ಣು ಮಗಳನ್ನಾಗಲೋ ದತ್ತು

ತೆಗೆದುಕೊಳ್ಳುವ ಹಕ್ಕು ಸಿಗುವಂತಾಯಿತು. ಆದರೆ ಈ ಸ್ವಾತಂತ್ರ್ಯ ಹಿಂದೂಕಾನೂನಿನಲ್ಲಿ ಅದಕ್ಕೆ ಮುಂಚೆ ಇರಲಿಲ್ಲವೆಂಬುದು ಗಮನಾರ್ಹವಾದುದು.

ಧರ್ಮಶಾಸ್ತ್ರಗಳ ಕಾಲದಲ್ಲಿದ್ದ ಮನುವಿನ ವಿಚಾರಗಳನ್ನು, ಸ್ತ್ರೀಯರ ಬಗ್ಗೆ ಇದ್ದ ಕೀಳು ಭಾವನೆಗಳನ್ನು ತೀವ್ರವಾಗಿ ಖಂಡಿಸುತ್ತ ಅಂಬೇಡ್ಕರ್‌ರು "ವೇದಗಳ ಕಾಲವನ್ನು ಪುನರ್ ಪರಿಶೀಲಿಸುತ್ತ ಮೈತ್ರೇಯಿ, ಗಾರ್ಗಿ, ಸುಲಭ ಇವರೆಲ್ಲರೂ ಪುರುಷರ ಸಮನಾಗಿ ಸಾರ್ವಜನಿಕ ವೇದಿಕೆಗಳಲ್ಲಿ, ಚರ್ಚಾಗೋಷ್ಠಿಗಳಲ್ಲಿ ವಿಚಾರ-ವಿವಾದಗಳಲ್ಲಿ ಭಾಗವಹಿಸುತ್ತಿದ್ದುದನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ಪಾಣಿನಿಯ ಪ್ರಕಾರ ಸ್ತ್ರೀಯರು ವೇದಾಧ್ಯಯನವನ್ನಲ್ಲದೇ, ವೇದಬೋಧನೆಯನ್ನು ಸಹ ಮಾಡುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ" ಎನ್ನುತ್ತಾರೆ. ಮುಂದೆ ಕೌಟಿಲ್ಯನ ಕಾಲದ ಮಹಿಳೆಯರ ವೈವಾಹಿಕ ವಿಚಾರವನ್ನು ತೆಗೆದುಕೊಂಡರೆ, ಕ್ರೂರಿಯಾದ ಗಂಡನಿಂದ ಸ್ತ್ರೀ ವಿಚ್ಛೇದನ ಪಡೆಯುವ ಸ್ವಾತಂತ್ರ್ಯ ಹೊಂದಿದ್ದಳೆಂಬುದಾಗಿ ತಿಳಿಯುತ್ತದೆ. ಆದರೆ ಸ್ತ್ರೀ ದ್ವೇಷಿ ಮನು ಮಾತ್ರ ಸ್ತ್ರೀಯರನ್ನು ಇಷ್ಟೊಂದು ಕೀಳು ದೃಷ್ಟಿಯಿಂದ ಹಾಗೂ ಹೀನಾಯವಾದ ಭಾವನೆಗಳಿಂದ ಅವರನ್ನು ಪ್ರಾಣಿಗಳಿಗಿಂತಲೂ ಕಡೆಯೆಂದು ತಿಳಿಸುವ ಮೂಲಕ ಅನೇಕ ರೀತಿಯ ಸಾಮಾಜಿಕ ಹಾಗೂ ಧಾರ್ಮಿಕ ಕಟ್ಟು ಪಾಡುಗಳನ್ನು ಕಾನೂನುಗಳನ್ನಾಗಿ ಸ್ತ್ರೀಯರ ಮೇಲೆ ಹೇರಿ ಅವರ ಸ್ವಾತಂತ್ರ್ಯಹರಣ ಮಾಡಲು ಕಾರಣಗಳೇನು? ಎಂದು ಪ್ರಶ್ನಿಸುತ್ತಾರೆ ಅಂಬೇಡ್ಕರ್.

ವೇದಕಾಲದಲ್ಲಾಗಲೀ, ಕೌಟಿಲ್ಯನ ಕಾಲದಲ್ಲಾಗಲೀ ಮನುವಿಗಿಂತ ಹಿಂದಿನ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಸ್ತ್ರೀಯರು ಉನ್ನತಮಟ್ಟದ ಸ್ಥಾನವನ್ನು ಹೊಂದಿದವರಾಗಿದ್ದಾರೆ. ಎಷ್ಟೋ ಶತಮಾನಗಳ ನಂತರದ ಮನುವಿನ ಕಾಲದಲ್ಲಿ ಮಾತ್ರ ಸ್ತ್ರೀಯರ ಸ್ಥಾನ ಅಧೋಗತಿಗೆ ಇಳಿಯಲು ಕಾರಣಗಳೇನು? ಎಂದು ಅಂಬೇಡ್ಕರ್‌ರವರು ಪ್ರಶ್ನಿಸುತ್ತಾರೆ.

ಸಮಾಜದಲ್ಲಿ ಸ್ತ್ರೀಯರಿಗೆ ವಿಧಿಸಲ್ಪಟ್ಟಿದ್ದ ವಿಚಾರಗಳು ಮೂಲತಃ ಬ್ರಾಹ್ಮಣರ ಆಚರಣೆಗಳಾಗಿದ್ದವು. ಅವುಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಮನು ಅವೆಲ್ಲವನ್ನು ಇಡೀ ಸಮಾಜ ಒಪ್ಪಿತ/ಹೇರಲ್ಪಟ್ಟ ಕಾನೂನುಗಳನ್ನಾಗಿ ಪರಿಗಣಿಸುವಂತಹ ಸ್ಥಿತಿ ಉಂಟಾಯಿತು. ಮತ್ತೊಂದು ಅಂಶ ಅಂದಿನ ಸಂಗತಿಯ ಪ್ರಕಾರ ಶೂದ್ರರು ಮತ್ತು ಸ್ತ್ರೀಯರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದವರಾದ್ದರಿಂದ, ಅವರಲ್ಲಿ ಬೌದ್ಧಧರ್ಮವನ್ನು ಅವಲಂಬಿಸಿ, ಬ್ರಾಹ್ಮಣಧರ್ಮವನ್ನು ಅಧೋಗತಿಗೆ ಇಳಿಸುವರೆಂಬ ಭಯದಿಂದ, ಸ್ತ್ರೀಯರು ಬುದ್ಧನ ಮಾರ್ಗವನ್ನು ಅನುಸರಿಸಲು ಆಗದಂತೆ ತಡೆಯನ್ನು ಉಂಟು ಮಾಡುವುದೇ ಮನುವಿನ ಉದ್ದೇಶವಾಗಿತ್ತೆಂಬುದು ಸ್ಪಷ್ಟ. ಈ ಎರಡೂ ಕಾರಣಗಳಿಂದಾಗಿ ಸ್ತ್ರೀಯರನ್ನು ಸಾಂಪ್ರದಾಯಿಕ ಕಟ್ಟುಪಾಡುಗಳಿಂದ ಧರ್ಮ ಸಂಕೋಲೆಯಿಂದ ಬಿಡಿಸಿಕೊಳ್ಳಲಾರದಂತೆ ಕಟ್ಟಿಹಾಕಲಾಯಿತು ಎಂಬುದಾಗಿ ತಿಳಿಯುತ್ತದೆ. ಅಂದಿನ ಸಮಾಜ ಈ ಕ್ರೂರವಾದ ಮೂಲಭೂತವಾದಿಗಳ ದುರುದ್ದೇಶಗಳನ್ನು ಬಯಲಿಗೆಳೆಯುವುದೇ ಅಂಬೇಡ್ಕರ್‌ರವರ ಹೋರಾಟದ ಉದ್ದೇಶವಾಗಿತ್ತು. ಅದರೊಂದಿಗೆ ಸ್ತ್ರೀಯರಿಗೆ ಸ್ವತಂತ್ರ ವ್ಯಕ್ತಿತ್ವ ನಿರ್ಮಾಣ ಮಾಡುವುದೇ ಅವರ ಹೋರಾಟದ ಗುರಿಯಾಗಿತ್ತು. ಸ್ತ್ರೀಯರ ಬಿಡುಗಡೆಯಿಂದಲೇ ಹೊಸ ಸಮಾಜದ ನಿರ್ಮಾಣ ಸಾಧ್ಯ. ಜಾತಿ ಪದ್ಧತಿಯ ವಿರುದ್ಧ ಹೋರಾಟ ಸ್ತ್ರೀಯರಿಂದಲೇ ಅರ್ಥಪೂರ್ಣವಾದದ್ದು ಎಂದು ಅಂಬೇಡ್ಕರ್ ಪ್ರತಿಪಾದಿಸಿದರು.

"ಅಸ್ಪೃಶ್ಯ ಸಮಾಜದಿಂದಲೇ ಹುಟ್ಟಿದ ಅಂಬೇಡ್ಕರ್ ಜಾತಿವ್ಯವಸ್ಥೆಯ ವಿರುದ್ಧ ಸಂಘರ್ಷಕ್ಕಿಳಿಯುತ್ತಲೇ, ಜಾತಿಪದ್ಧತಿಯು ಅಂತರಾಳದಲ್ಲಿ ಹೇಗೆ ಮಹಿಳಾ ಪ್ರಶ್ನೆಗಳನ್ನು ಒಳಗೊಂಡಿದ್ದಾಗಿದೆ ಎಂಬುದನ್ನು ವಿವರಿಸಿದರು. ಜಾತಿಪದ್ಧತಿಯ ಸಂಕೋಲೆಗಳನ್ನು ಮುರಿಯುವ ಮೂಲಕ ಮಹಿಳೆಯರು ಸಮಾಜವನ್ನು ಆರೋಗ್ಯಪೂರ್ಣ ವಾಗಿಸುವುದಲ್ಲದೆ, ತಮ್ಮ ಬಿಡುಗಡೆಯನ್ನು ಕಾಣಬಹುದೆಂದರು. ಹೀಗಾಗಿ ಅಂಬೇಡ್ಕರ್ ಪ್ರಕಾರ ಜಾತಿ ಭೇದ ಹಾಗೂ ಲಿಂಗಭೇದಗಳು ಭಾರತ ಸಮಾಜ ವ್ಯವಸ್ಥೆಯ ಎರಡು ಮುಖಗಳು. ಮಹಿಳೆಯ ಮೇಲಿನ ಎಲ್ಲ ನಿರ್ಬಂಧಗಳೂ ಜಾತೀಯತೆಯನ್ನು ಬಲಪಡಿಸುವ ಕಾರಣಕ್ಕಾಗಿಯೇ ಹೇರಲ್ಪಟ್ಟವು"[92] ಹೀಗಾಗಿ ನಾವು ಅಂಬೇಡ್ಕರ್‌ರನ್ನು ಜಾತಿಪದ್ಧತಿಯ ವಿರುದ್ಧ ಹೋರಾಡಿದ ಒಬ್ಬ ಧೀಮಂತ ನಾಯಕನೆಂದು ಗುರುತಿಸಿದಂತೆ ವಾಸ್ತವವಾಗಿ ಅಂಬೇಡ್ಕರ್ ಸಮಾನತೆಗಾಗಿ ಸಂಘರ್ಷಕ್ಕಿಳಿದರು ಎಂಬುದು ಹೆಚ್ಚು ಸೂಕ್ತವೆನಿಸುತ್ತದೆ.

ಸಮಾನತೆಯ ಪ್ರಶ್ನೆ ಬಂದಾಗ ಅಂಬೇಡ್ಕರ್ ಪದೇಪದೇ ಅಸ್ಪೃಶ್ಯತೆಯ ಪ್ರಸ್ತಾಪ ಮಾಡುತ್ತಿದ್ದರೂ ಕೂಡ ಉಳಿದ ಅಸಮಾನತೆಯನ್ನು ಅವರು ನಿರ್ಲಕ್ಷಿಸಿದವರಲ್ಲ. ಈ ಸಮಾಜದ ಎಲ್ಲ ವಂಚಿತ ವರ್ಗಗಳ ಕಡೆಗೂ ಅವರ ನಿಷ್ಪಕ್ಷಪಾತವಾದ ನಿಲುವಿತ್ತು. ಆದಕ್ಕಾಗಿಯೇ ಅವರು ವರ್ಣಬೇಧವಷ್ಟೇ ಅಲ್ಲದೇ ವರ್ಗಭೇದ. ಲಿಂಗಭೇದ ವಿಚಾರದಲ್ಲಿ ವಿವೇಚನಾಯುಕ್ತವಾಗಿ, ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಜಾತಿ ಮತ್ತು ವರ್ಗಗಳ ಕುರಿತು ಪ್ರಸ್ತಾಪಿಸುತ್ತ" ಜಾತಿಯು ವರ್ಗದಿಂದ ಬೇರೆಯಾದುದು ಮತ್ತು ಅದಕ್ಕೆ ವಿರುದ್ಧವಾದುದು. ಆದರೂ ಜಾತಿವ್ಯವಸ್ಥೆಯು ಜಾತಿಯಲ್ಲಿ ಬಂದು ವರ್ಗವ್ಯವಸ್ಥೆಯನ್ನು ಅಂಗೀಕರಿಸುತ್ತದೆ. ಹಿಂದೂವು ಜಾತಿ ಪ್ರಜ್ಞೆಯುಳ್ಳವನೂ, ವರ್ಗಪ್ರಜ್ಞೆಯುಳ್ಳವನೂ ಆಗಿದ್ದಾನೆ. ಅವನು ಜಾತಿ ಪ್ರಜ್ಞೆಯುಳ್ಳವನೋ, ವರ್ಗ ಪ್ರಜ್ಞೆಯುಳ್ಳವನೋ ಎನ್ನುವುದು ಅವನು ಸಂಘರ್ಷಿಸಬೇಕಾಗಿ ಬರುವ ಜಾತಿಯನ್ನು ಅವಲಂಬಿಸಿದೆ"[93] ಎಂದು ಅಂಬೇಡ್ಕರ್ ಹೇಳಿದ್ದಾರೆ.

ಅಂಬೇಡ್ಕರ್‌ರ ಪ್ರಕಾರ "ಹಿಂದೂಸಮಾಜದಲ್ಲಿ ಮಹಿಳೆ ಮತ್ತು ದಲಿತ ಎಂಬುದು ವಿಭಜಿಸಿ ಗ್ರಹಿಸಬೇಕಾದ ಸಂಗತಿಯಲ್ಲ"[94]. ಮನುವಿನ ಸಮಾಜದಲ್ಲಿ ಸ್ತ್ರೀ-ಶೂದ್ರ-ಅಸ್ಪೃಶ್ಯರ ಸ್ಥಾನಮಾನಗಳು ದುಃಖದುಮ್ಮಾನಲು ಒಂದೇ ಆಗಿದ್ದವು ಎನಿಸುತ್ತದೆ. ಅಂಬೇಡ್ಕರ್ ಲಿಂಗಭೇದದ ಬಗ್ಗೆ ಹೆಚ್ಚು ಮಾತನಾಡಿಲ್ಲ ನಿಜ. ಆದರೆ ಆಡಿದಷ್ಟು ಮಾತನ್ನು ಖಚಿತವಾಗಿ, ತೀಕ್ಷ್ಣವಾಗಿ ನುಡಿದಿದ್ದಾರೆ. ತಮ್ಮದೇ ಆದ ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿಕೊಂಡಿದ್ದಾರೆ. ಆದ್ದರಿಂದಲೇ ಅವರು ಎಲ್ಲ ಕಡೆ ಮಹಿಳೆ ಎಂಬ ಪದವನ್ನು ಪುನರುಚ್ಚರಿಸದಿದ್ದರೂ, ಹೇಳಬೇಕಾದ ಮಹತ್ವದ ಸಂದರ್ಭದಲ್ಲಿ ಎಲ್ಲಿಯೂ ಮರೆಯಲಿಲ್ಲ. "ಭಾರತದ ಸಂವಿಧಾನದ 14ನೇ ವಿಧಿಯಲ್ಲಿ ಸಮಾನತೆಯ ವಿಚಾರ ಬಂದಾಗ ಸಷ್ಟವಾಗಿ 'ಲಿಂಗ' ವನ್ನು ನಮೂದಿಸಿದರು. "Prohibition of discrimination on arounds of religion, race, caste, sex or place of birth " ಎಂಬ ಸವಿವರವನ್ನು ನೀಡಿದರು. ದೇಶದ ಪೌರತ್ವವನ್ನು ಪ್ರಸ್ತಾಪಿಸುವಾಗಲೂ "Men and Women" ಎಂಬ ವರ್ಗೀಕರಣವನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸಿದರು"[95]. ಹಿಂದೂ ಮಹಿಳೆಯರ ಮೇಲಿನ ಕರಾಳ ಹಿಡಿತವನ್ನು ತಪ್ಪಿಸಲು ಮನು ಶಾಸನಕ್ಕೆ ಸವಾಲೆಸೆಯುವಂತೆ ಹಿಂದೂ ಕೋಡ್ ಬಿಲ್ಲನ್ನು ರೂಪಿಸಿದರು. ಈ ದೇಶದ ಸ್ತ್ರೀ ಹಾಗೂ ದಲಿತರ ಬದುಕನ್ನು ಬರ್ಬರವಾಗಿಸಿದ್ದ ಮನುಸ್ಮೃತಿಯನ್ನು ಬಹಿರಂಗವಾಗಿ ಸುಟ್ಟರು. "ಮನು ಶೂದ್ರರ ಮೇಲೆ ಮೃದುವಾಗಿದ್ದುದಕ್ಕಿಂತ ಸ್ತ್ರೀಯರ ಮೇಲೆ

ಮೃದುವಾಗಿದ್ದನೆನ್ನುವುದು ಕಷ್ಟ"[96] ಎಂಬ ಮಾತುಗಳು ಅಂಬೇಡ್ಕರ್‌ರ ಈ ವಿಚಾರಗಳು ಪರಿಶೀಲನಾ ಯೋಗ್ಯವೆನಿಸುತ್ತವೆ. ಅಂದು ಸ್ತ್ರೀಯರ ಸಮಸ್ಯೆಗಳೆಂದು ಗುರುತಿಸಿಕೊಂಡಿದ್ದ ಬಾಲ್ಯವಿವಾಹ, ಸತಿಪದ್ಧತಿ ಇತ್ಯಾದಿ ಸ್ತ್ರೀ ಸಮಸ್ಯೆಗಳು ಹಿಂದೂಸಮಾಜದ ಶ್ರೇಣೀಕೃತ ಜಾತೀಯತೆಯನ್ನು ಕಾಪಾಡಿ ಕೊಳ್ಳಲೋಸುಗವಾಗಿಯೇ ಹುಟ್ಟಿಕೊಂಡ ಅಂಶಗಳು ಎಂಬ ತಾತ್ವಿಕ ನಿಲುವು ಅಂಬೇಡ್ಕರ್‌ದ್ದಾಗಿದ್ದರಿಂದ ಅದಕ್ಕನುಗುಣವಾಗಿಯೇ ಅಂಬೇಡ್ಕರ್‌ರವರು ಜಾತಿವಿನಾಶದ ದಿಕ್ಕಿನಿಂದಲೇ ಸ್ತ್ರೀಯರ ಸಮಸ್ಯೆಗಳನ್ನು ಗುರುತಿಸಿದ್ದರು. 'ಹಿಂದೂ ಮಹಿಳೆಯರ ಉನ್ನತಿ ಹಾಗೂ ಅವನತಿ' ಎಂಬ ಕೃತಿಯಲ್ಲಿ ಬ್ರಾಹ್ಮಣಿಕೆಯ ಸಂಸ್ಕೃತಿಯೇ ಮಹಿಳಾ ಪರಾಧೀನತೆಯ ಹೊಣೆಗಾರ ಎಂದು ವಿವರವಾಗಿ ಚರ್ಚಿಸಿದ್ದರು. ಮೇಲ್ವರ್ಗ-ಕೆಳವರ್ಗಗಳಸ್ತ್ರೀಯರಿಬ್ಬರ ಸಂದರ್ಭದಲ್ಲಿಯೂ ಬಿಡುಗಡೆಯ ದಾರಿಗಳು ಜಾತಿ ವಿನಾಶದಲ್ಲಿವೆ ಎಂಬುದನ್ನು ತೋರಿಸಿಕೊಟ್ಟರು.

1927ರಲ್ಲಿ ಅಂಬೇಡ್ಕರ್ ಬಹಿರಂಗವಾಗಿ ಮನುಸ್ಮೃತಿಯನ್ನು ಸುಟ್ಟರು. ಇದು ಅಂಬೇಡ್ಕರ್‌ರವರು ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿದ್ದರು, ಮನುಸ್ಮೃತಿ ಅಸ್ಪೃಶ್ಯತೆಯ ಪ್ರತಿಪಾದನೆಯನ್ನು ಹೊಂದಿತ್ತು. ಅಷ್ಟೇ ಅಲ್ಲ ಅದರಂತೆ ಸ್ತ್ರೀಯರನ್ನು ಶೂದ್ರಾತಿ ಶೂದ್ರರಾಗಿ ಪರಿಭಾವಿಸಿತ್ತು. ಆದ್ದರಿಂದ ಅಂಬೇಡ್ಕರ್‌ರವರು ಮನುಸ್ಮೃತಿಯನ್ನು ಕಟುವಾಗಿ ಖಂಡಿಸುತ್ತಿದ್ದರು, ಆದ್ದರಿಂದಲೇ ಪ್ರತಿಭಟನೆಯ ಪ್ರತೀಕವಾಗಿ ಮನುಸ್ಮೃತಿಯನ್ನು ಬಹಿರಂಗವಾಗಿ ಸುಟ್ಟರು. ಮನು ಅಸ್ಪೃಶ್ಯರಿಗೆ ಮಾಡಿದ ಅನ್ಯಾಯದಂತೆ ಸ್ತ್ರೀಯರಿಗೂ ಅನ್ಯಾಯವೆಸಗಿದ್ದಾನೆ ಎಂದು ಸಾರಿ ಹೇಳಿದ್ದರು. ಸ್ತ್ರೀಯರ ವಿಚಾರವಾಗಿ ಮನುವನ್ನು ಪ್ರಶ್ನಿಸುವ, ವಿದ್ವತ್ ಪೂರ್ಣಲೇಖನ ಅವರ 'ಸ್ತ್ರೀ ಮತ್ತು ಪ್ರತಿಕ್ರಾಂತಿ' ಅದರಲ್ಲಿ ಪ್ರತಿಭಟನಾತ್ಮಕ ನಿಲುವನ್ನು ಕಾಣಬಹುದಾಗಿದೆ. ಈ ಲೇಖನದಲ್ಲಿ 'ಮನು ಶೂದ್ರರ ಮೇಲೆ ಮೃದುವಾಗಿದ್ದದಕ್ಕಿಂತ ಸ್ತ್ರೀಯರ ಮೇಲೆ ಮೃದುವಾಗಿದ್ದನೆನ್ನುವುದು ಕಷ್ಟ. ಹೆಣ್ಣಿನ ಮೇಲೆ ಕೀಳು ಅಭಿಪ್ರಾಯದಿಂದಲೇ ಅವನು ಪ್ರಾರಂಭಿಸುತ್ತಾನೆ' ಎಂಬ ನೇರ ಆಪಾದನೆಯೊಂದಿಗೇ ಆರಂಭಿಸುವ ಅಂಬೇಡ್ಕರ್ ಆಧಾರ ಸಹಿತ ಎಳೆಎಳೆಯಾಗಿ ಮನು ಪ್ರತಿಪಾದಿಸಿದ ಸ್ತ್ರೀ ವಿರೋಧಿ ನಿಲುವುಗಳನ್ನು ಬಯಲಿಗೆಳೆಯುತ್ತಾರೆ.

ಮನುವಿನ ಅಪಾಯಕಾರಿ ಜೀವವಿರೋಧಿ ನಿಲುವನ್ನೇ ಹಿಂದೂಧರ್ಮ ಸ್ತ್ರೀಯರ ಉನ್ನತ ಆದರ್ಶವೆಂದು ಪರಿಗಣಿಸುತ್ತದೆ. ಇದನ್ನು ಅಂಬೇಡ್ಕರ್ ರವರು ಕಟುವಾಗಿ ಖಂಡಿಸಿದರು. ಹೀಗಾಗಿ ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ಮನುಪೂರ್ವದ ಅರ್ಥವೇದ, ಶ್ರೌತ ಸೂತ್ರ, ಅಷ್ಟಾಧ್ಯಾಯಿ, ಮಹಾಭಾಷ್ಯ ಇತ್ಯಾದಿಗಳು ಸ್ತ್ರೀಯರ ಬಗ್ಗೆ ತೋರಿದ ಉದಾರತೆಯನ್ನು ದಾಖಲೆಸಮೇತ ಪ್ರಸ್ತಾಪಿಸಿದ್ದಾರೆ. ಭಾರತೀಯ ಇತಿಹಾಸದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೂಡ ಸ್ತ್ರೀಯರಿಗಿದ್ದ ಕೆಲವು ಸ್ವಾತಂತ್ರ್ಯವನ್ನು ಗುರುತಿಸಿ, ಮನು ಯಾಕಾಗಿ ಸ್ತ್ರೀಯರನ್ನು ಅವರ ಸ್ಥಿತಿಯನ್ನು ಅಧೋಗತಿಗೆ ಇಳಿಸಿದ ಎಂದು ಪ್ರಶ್ನಿಸುತ್ತಾರೆ. ಅಷ್ಟೇ ಅಲ್ಲ, ವೈದಿಕ ಸಮಾಜವು ಹುಟ್ಟು ಹಾಕಿದ ಅನಿಷ್ಟಗಳನ್ನು ಉಗ್ರವಾಗಿ ಖಂಡಿಸಿದರು.

ವೇದಕಾಲಿನ ಸ್ತ್ರೀಯರ ಸ್ಥಿತಿಗತಿಗಳನ್ನು ಕುರಿತು ಅಂಬೇಡ್ಕರ್ ರಚಿಸಿದ ಕೆಲವು ಬರಹಗಳನ್ನು ಅವಲೋಕಿಸಬಹುದಾಗಿದೆ

1) ಪಿತೃತ್ವದಿಂದ ಮಾತೃತ್ವಕ್ಕೆ ಬದಲಾವಣೆ. ಇದರಿಂದ ಬ್ರಾಹ್ಮಣರು ಗಳಿಸಲು ಬಯಸಿದ್ದೇನು?
2) ಅಹಿಂಸೆಯ ದೇವರಿಗೆ ರಕ್ತ ಪಿಪಾಸು ದೇವತೆಯನ್ನು ಮದುವೆ ಮಾಡಿದ ಕತೆ.
3) ಬ್ರಾಹ್ಮಣರು ದೇವರುಗಳನ್ನು ಪದಚ್ಯುತಿಗೊಳಿಸಿ ದೇವಿಯರನ್ನೇಕೆ ಮೇಲೇರಿಸಿದರು?[97]

ಈ ಲೇಖನಗಳಲ್ಲಿ ವೈದಿಕ ಸಂಸ್ಕೃತಿ ಅನುಸರಿಸಿದ ಪುರುಷ ಪ್ರಧಾನ ಧೋರಣೆ, ಸ್ತ್ರೀಯರ ಮೇಲೆ ಹೇರಿದ ನಿಷೇಧ, ಪಿತೃ ಪ್ರಧಾನ ವ್ಯವಸ್ಥೆ, ಮಾತೃ ದೇವತೆಯ ಪೂಜೆ, ದೈವ ಸಂಕರದ ಮೂಲಕ ವೈದಿಕೇತರ ಸಮಾಜದ ಮೇಲೆ ಹಿಡಿತ ಸಾಧಿಸಲು ಮಾಡಿದ ಪ್ರಯತ್ನವನ್ನು ವಿವರಿಸಿದ್ದಾರೆ. "ವರ್ಣವ್ಯವಸ್ಥೆಯನ್ನು ಬಲಪಡಿಸಿದ ಮೇಲಿನ ಎಲ್ಲ ಬಗೆಯ ದೀರ್ಘಾವಧಿ ಕಾರ್ಯತಂತ್ರದಿಂದಾಗಿ ಬ್ರಾಹ್ಮಣ ಸಮಾಜದ, ಹಿಂದೂ ಸಮಾಜದ ಕಡೆಗೆ ಭಾರತದ ಎಲ್ಲ ಮಹಿಳೆಯರ ಸವಲತ್ತುಗಳು, ಸ್ಥಾನಮಾನಗಳು ಹಂತ ಹಂತವಾಗಿ ನಿರಾಕರಿಸಲ್ಪಟ್ಟವು. ಈ ಘೋರ ಅನ್ಯಾಯವು ಗೋಚರವಾಗದ ರೀತಿಯಲ್ಲಿ ಭಾರತೀಯ ಮಹಿಳೆಯ ಬಗ್ಗೆ ವೈಭವೀಕರಣದ ಹೇಳಿಕೆಗಳು, ಆಚರಣೆಗಳು ಚಾಲ್ತಿಗೆ ಬಂದವು".[98] ಸ್ತ್ರೀಯರನ್ನು ಅತ್ಯಂತ ಗೌರವದಿಂದ ಕಾಣುವ ಸಮಾಜವಾಗಿ ಭಾರತವು ಹೊರನೋಟಕ್ಕೆ ಬೇಕಾದ ಭಿತ್ತಿಯನ್ನು ರೂಪಿಸಿಕೊಂಡಿತು. ಇದನ್ನು ಅಂಬೇಡ್ಕರ್ ಅತ್ಯಂತ ಸೂಕ್ಷ್ಮ ಮತಿಯಾಗಿ ಈ ಕಾರ್ಯತಂತ್ರವನ್ನ ಭೇದಿಸಿ, ವೈದಿಕಸಮಾಜದ ಕರಾಳ ರೂಪವನ್ನು ಬಹಿರಂಗಗೊಳಿಸಲು ಪ್ರಯತ್ನಿಸಿದರು. ಈ ವೈದಿಕ ಸಮಾಜ ವ್ಯವಸ್ಥೆ ಹೇಗೆ ಭೇದತಂತ್ರವನ್ನು ಅನುಸರಿಸುತ್ತದೆ ಎನ್ನುವುದನ್ನು ತಿಳಿಸುತ್ತ ಅದರ ವಿರುದ್ಧ ಪ್ರತಿಕ್ರಾಂತಿಗಾಗಿ, ಬೌದ್ಧಿಕಚಿಂತನೆಯನ್ನು, ಪ್ರತಿಭಟನಾತ್ಮಕ ಸಾಮಾಜಿಕ ಚಳುವಳಿಯನ್ನು ರೂಪಿಸಿದರು. ಸ್ತ್ರೀಯರ ಮೇಲೆ ಹೇರಲಾಗಿದ್ದ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಸಂಘರ್ಷಯುತವಾದ ಹೋರಾಟಕ್ಕೆ ಅಂಬೇಡ್ಕರ್ ಚಾಲನೆ ನೀಡಿದರು. ಹಾಗೂ ಸ್ತ್ರೀವಾದಿ ಹೋರಾಟಕ್ಕೆ ಅವರ ಕೊಡುಗೆ ಅವಶ್ಯವಾದದ್ದು.

ಅಸ್ಪೃಶ್ಯ ಸ್ತ್ರೀಯರನ್ನು ದೇವರ, ಧರ್ಮದ ಹಾಗೂ ಸಂಪ್ರದಾಯದ ಹೆಸರಿನಲ್ಲಿ ದೇವದಾಸಿ, ಜೋಗತಿ, ಆರಾಧಿ, ಅಸಾದಿ, ಭೂತೇ ಸಂಸ್ಕೃತಿಗಳ ಮೂಲಕ ಅಮಾನವೀಯ ಶೋಷಣೆ ಮಾಡುವುದನ್ನು ಅಂಬೇಡ್ಕರ್ ಖಂಡಿಸಿದರು. ಅಂತಹ ಶೋಷಿತ ಸ್ತ್ರೀಯರ ಪರಿವರ್ತನೆಗೆ ಅವರು ಹೋರಾಡಿದರು. ಸ್ತ್ರೀಯರ ವಿಮೋಚನೆಗಳಿಗೆ ಅವರ ಕೊಡುಗೆ ಅಪಾರ.ಸ್ತ್ರೀಯರನ್ನು ಅಪಾರ ಗೌರವ ಆದರಗಳೊಂದಿಗೆ ಕಾಣುತ್ತಿದ್ದ ಅವರು 1935ರ ಯಹೋಲ ಸಾರ್ವತ್ರಿಕ ಮತಾಂತರದಲ್ಲಿ ಉದ್ಗರಿಸಿದ ವಾಕ್ಯಗಳಿವು.:"ನೀವು ನಮ್ಮೊಡನೆ ನಿಮ್ಮ ಧರ್ಮ ಬದಲಾಯಿಸುತ್ತಿರೋ ಅಥವಾ ಇಲ್ಲವೋ ಅದೊಂದು ನನಗೆ ಪ್ರಮುಖ ವಿಷಯವಲ್ಲ. ಆದರೆ, ನೀವು ನಮ್ಮೊಡನೆ ಸೇರುವುದಾದರೆ, ನೀವು ಹೊಂದಿರುವ ಅಪಕೀರ್ತಿಯ ಬದುಕಿಗೆ ತೆರೆ ಎಳೆಯಿರಿ. ನೀವು ಕಡ್ಡಾಯವಾಗಿ ವೈವಾಹಿಕರಾಗಿ ಮತ್ತು ಎಲ್ಲ ಕುಟುಂಬಗಳ ಹೆಂಗಸರಂತೆ ಗೃಹಸ್ಥರಾಗಿ, ನಿಮ್ಮ ಜೀವನೋಪಾಯ ಮುಂದುವರೆಸಿ, ಇಲ್ಲದಿದ್ದಲ್ಲಿ ಅನ್ಯ ಮಾರ್ಗಗಳಿಲ್ಲದೆ ನಿಮ್ಮನ್ನು ಈ ಸಮಾಜ ಶಾಶ್ವತವಾಗಿ ವೇಶ್ಯಾವಾಟಿಕೆಯ ಕೂಪಕ್ಕೆ ತಳ್ಳಿ ಬಿಡಬಹುದು.[99]- ಈ ಮಾತನ್ನು ಅಪಕೀರ್ತಿಗೆ ಒಳಗಾಗಿದ್ದ ಸ್ತ್ರೀಯರನ್ನು ವಿಮೋಚನೆಗೊಳಿಸಿ, ಅವರಿಗೆ ಸಾಂಸಾರಿಕ ಬಂಧನಗಳನ್ನು ರೂಢಿಸಿಕೊಟ್ಟ ಸಂದರ್ಭದಲ್ಲಿ ನುಡಿದ ಮಾತುಗಳಿವು. ಅವರಿಂದ ಪ್ರಜ್ಞಾಪೂರ್ವಕವಾಗಿ ಹೊರಬಂದ ಎಚ್ಚರಿಕೆಯ ಧ್ವನಿಗಳಿವು.

1942 ರ ಜುಲೈ 20 ರಂದು ನಾಗಪೂರದಲ್ಲಿ ನಿಮ್ನ ವರ್ಗಗಳ ಮಹಿಳೆಯರು ತಮಗಾಗಿ ಪ್ರತ್ಯೇಕ ಸಮಾವೇಶವನ್ನು ವ್ಯವಸ್ಥೆ ಮಾಡಿಕೊಂಡಿದ್ದರು. ಅದರಲ್ಲಿ ವಿಶೇಷವಾಗಿ ಮಹಿಳೆಯರ ಸಮಸ್ಯೆಗಳ ಬಗ್ಗೆ, ಅವರ ಪತ್ರದ ಬಗ್ಗೆ ಅವರ ಕೊಡುಗೆಯ ಬಗ್ಗೆ ಪ್ರಸ್ತಾಪವಾಗಿತ್ತು. ಅಮರಾವತಿಯ ಸುಲೋಚನಾಬಾಯಿ ಡೋಂಗ್ರೆ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. "ಮಹಿಳೆಯರ ಸಂಘಟನೆ ಅತ್ಯಗತ್ಯ. ಮಹಿಳೆಯರಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಇವುಗಳನ್ನು ಮಹಿಳಾ ಸಂಘಟನೆಯೇ ಹೆಚ್ಚು ಸಮರ್ಥವಾಗಿ

ನಿಭಾಯಿಸಬಲ್ಲದು. ಮಹಿಳೆಯರಿಗೆ ಮನದಟ್ಟಾದರೆ ಯಾವುದೇ ಬದಲಾವಣೆ ಬೇಗನೇ ಬರುವುದು. ಮಹಿಳೆಯರು ಒಟ್ಟು ಸಮಾಜದ ಮುಂಚೂಣಿಗೆ ಬಂದಲ್ಲಿ, ಆ ಸಮಾಜ ಬಹು ಶೀಘ್ರವಾಗಿ ಸುಧಾರಿಸುತ್ತದೆ" ಎಂದು ನುಡಿದ ಅಂಬೇಡ್ಕರ್. "ಹುಡುಗ ಮತ್ತು ಹುಡುಗಿಯರಲ್ಲಿ ತಾರತಮ್ಯ ಮಾಡುವುದು ಅನ್ಯಾಯ. ಹುಡುಗರಿಗೆ ಶಿಕ್ಷಣದ ಅವಶ್ಯಕತೆ ಇರುವಷ್ಟೇ ಹುಡುಗಿಯರಿಗೂ ಇದೆ. ಹುಡುಗಿಯರ ಮದುವೆಯನ್ನು ಬಹುಬೇಗ ಮಾಡುವುದು ತರವಲ್ಲ. ಹುಡುಗ ಹುಡುಗಿಯರೇ ಮುಂದೆ ನಾಗರೀಕರಾಗುವುದರಿಂದ, ಅವರು ಉತ್ತಮ ಚಾರಿತ್ರ್ಯವುಳ್ಳವರೂ, ವಿದ್ಯಾವಂತರೂ, ಜವಾಬ್ದಾರರು ಆಗಿ ರೂಪುಗೊಳ್ಳಬೇಕಾಗುತ್ತದೆ. ಬಾಲ್ಯದಿಂದಲೇ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು, ಸಂಕಲ್ಪ ಶಕ್ತಿಯನ್ನು ಬೆಳೆಸಬೇಕು" ಎಂದು ಕರೆ ನೀಡಿದರು.

"ಮನೆಯ, ಸಂಘಟನೆಯ, ಪಕ್ಷದ ಹಾಗೂ ದೇಶದ ಆಗುಹೋಗುಗಳಲ್ಲಿ ಮಹಿಳೆಗೆ ಸಮರ್ಪಕವಾದ ಪ್ರಾತಿನಿಧ್ಯ ಅತ್ಯವಶ್ಯ. ಸಮುದಾಯದ ಪ್ರಾತಿನಿಧ್ಯವನ್ನು ಒತ್ತಾಯ ಮಾಡುತ್ತಿರುವಂಥ ಸಂದರ್ಭದಲ್ಲಿ ಸಮುದಾಯದೊಳಗಣ ಮಹಿಳೆಯರನ್ನು ನಿರ್ಲಕ್ಷಿಸಲಾಗದು. ಅಸ್ಪೃಶ್ಯತೆ, ಜಾತೀಯತೆ, ಜನಸಂಖ್ಯಾ ಹೆಚ್ಚಳ, ಶಿಕ್ಷಣದ ಮಹತ್ವ, ಧರ್ಮಾಂತರ, ವತನ್ ಪದ್ಧತಿಯ ರದ್ದತಿ ಮುಂತಾದ ವಿಷಯಗಳ ಬಗ್ಗೆ ಬರೀ ಪುರುಷರೇ ಚರ್ಚೆ ನಡೆಸಿದರೆ ಸಾಲದು. ಇಂಥ ಚರ್ಚೆಗಳಲ್ಲಿ ಮಹಿಳೆಯರೂ ಪಾಲುಗೊಳ್ಳುವಂತಾಗಬೆಕು. ಇದು ಪುರುಷರ ಜವಾಬ್ದಾರಿಯೂ ಹೌದು., ಮಹಿಳೆಯರ ಜವಾಬ್ದಾರಿಯೂ ಹೌದು"[100] ಎಂದು ಎಚ್ಚರಿಸಿದರು. ಹೀಗೆ ಎಲ್ಲ ವರ್ಗದ ಸ್ತ್ರೀಯರಿಗೂ ಶಿಕ್ಷಣ ಅಗತ್ಯವೆಂದು ಹೇಳಿದರು. ಸಾಂಸಾರಿಕ ಜೀವನಕ್ಕೆ ಸ್ತ್ರೀ-ಪುರುಷರಿಬ್ಬರೂ ತಿಳುವಳಿಕೆಯುಳ್ಳವರಾಗಿರಬೇಕು. ಬಾಲ್ಯ ವಿವಾಹದಂತಹ ಪೆಡಂಭೂತಗಳನ್ನು ನಿಗ್ರಹಿಸಲು ಸಮಾಜ ಚಿಂತಿಸಬೆಕು. ಆದರ ವಿರುದ್ಧ ಅಂಬೇಡ್ಕರ್ ಧ್ವನಿ ಎತ್ತಿದರು. ಬದುಕಿಗೆ ಮುಖ್ಯವಾಗಿ ಸಂಸಾರದೊಳಗೆ ಪ್ರೀತಿ ವಿಶ್ವಾಸಗಳಿರಬೇಕೆಂದು ಪ್ರತಿಪಾದಿಸುತ್ತಿದ್ದರು. ಸಮಾನ ಮನಸ್ಕ ಜೀವಿಗಳಲ್ಲಿ ನಿರ್ದಿಷ್ಟ, ನಿಶ್ಚಲವಾದ ಆಶಯಗಳಿರುತ್ತವೆ ಎನ್ನುವ ಬುದ್ಧನ ನಂಬಿಕೆಗಳನ್ನು ಅಂಬೇಡ್ಕರ್ ಸಾಕಾರಗೊಳಿಸಲೆತ್ನಿಸಿದರು. ಬುದ್ಧ ಬಸವರಿಗಿಂತಲೂ ಮಿಗಿಲಾಗಿ ಸ್ತ್ರೀಯರಿಗಿದ್ದ ಸಂಕೋಲೆಗಳನ್ನು ಮುಕ್ತಗೊಳಿಸಿ ಸ್ವಾತಂತ್ರ್ಯ -ಸಮಾನತೆ ಸಿಗುವಂತೆ ಅಂಬೇಡ್ಕರ್ ಕಾನೂನು ಮತ್ತು ಸಂವಿಧಾನದ ಮೂಲಕ ನೆರವೇರಿಸಿದರು.

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ಸಾವಿರ ಸಾವಿರ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿರುವುದು ಪುರುಷ ಹೆಣೆದ ಶೋಷಣೆಯ ಬಲೆಯಿಂದ ಮುಕ್ತಗೊಳ್ಳಲು ಶತಮಾನಗಳಿಂದಲೂ ಸಾಧ್ಯವಾಗದಿರುವುದು ಅಕ್ಷರಶಃ ಸತ್ಯ. ಭಾರತದ ಸಾಮಾಜಿಕ ಕ್ಷೇತ್ರದಲ್ಲಿ ಬುದ್ಧ, ಬಸವಣ್ಣನವರು ಜನಿಸುವವರೆಗೂ ತದನಂತರ ಪೆರಿಯಾರ್ ರಾಮಸ್ವಾಮಿ, ನಾರಾಯಣಗುರು, ಜ್ಯೋತಿಬಾಪುಲೆ, ಮುಂತಾದವರ ಪ್ರಯತ್ನದಿಂದ ಒಂದಿಷ್ಟು ಸ್ವಾತಂತ್ರ್ಯವನ್ನು ಪಡೆದಳು. ಆದರೆ ಕಾಲಾಂತರದಲ್ಲಿ ವೈದಿಕ ಮನಸ್ಸು ಸ್ತ್ರೀ ಶೋಷಣೆ ಆರಂಭಿಸಿದ್ದುದರಿಂದ ಅಂಬೇಡ್ಕರ್ ಹಿಂದೂ ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗಾಗಿ 'ಹಿಂದೂ ಕೋಡ ಬಿಲ್'ನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಿದರು. ಅದನ್ನು ಜಾರಿಗೆ ತರುವಲ್ಲಿ ಸಂಪ್ರದಾಯವಾದಿಗಳು ಹಿಂಜರಿದಾಗ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಹೊರಬಂದರು.

ಭಾರತೀಯ ಸ್ತ್ರೀಯರ ಸಂದರ್ಭದಲ್ಲಿ 1955-56 ರಲ್ಲಿ ಮಂಡಿತವಾದ ಹಿಂದೂ ಕೋಡ್ ಬಿಲ್‌ಗೆ ಪ್ರಮುಖವಾದ ಸ್ಥಾನವೊಂದಿದೆ. ಏಕೆಂದರೆ ಇದು ವಿವಾಹ ಸಂಬಂಧಿತವಾದ ಸ್ತ್ರೀಯರ ಹಲವು ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿತವಾದ ಕಾಯ್ದೆಯಾಗಿದ್ದು, ಅದರ ಪ್ರಮುಖ ಅಂಶಗಳು ಈ ರೀತಿ ಇವೆ.

1. ಬಹು ಪತ್ನಿತ್ವವನ್ನು ನಿಷೇಧಿಸಿ, ಏಕಪತಿ-ಪತ್ನಿತ್ವವನ್ನು ಕಾನೂನುಬದ್ಧಗೊಳಿಸುವುದು Hindu Marraige Act ಹಿಂದೂ ವಿವಾಹ ಕಾಯ್ದೆ (1955).
2. ಮಹಿಳೆಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು Suvvession Act- 1956.
3. ತಾಯಿಯನ್ನು ಮಗುವಿನ ಸಹಜ ಪೋಷಕಳೆಂದು ನಿರ್ಧರಿಸುವುದು. Hindu Minority and Guardianship Act 1956.
4. ಮಹಿಳಗೆ ದತ್ತು ಸ್ವೀಕಾರದ ಹಕ್ಕು ಹಾಗೂ ವಿಚ್ಛೇದನದ ಸಂದರ್ಭದಲ್ಲಿ ನಿರ್ವಹಣಾ ಹಕ್ಕು Adoption and Maintenance Act 1956.

ಈ ಎಲ್ಲ ಕಾನೂನುಗಳ ಮೂಲಕ ಸಮಾಜದ ಲಿಂಗಭೇದವನ್ನು ಸ್ತ್ರೀಗೆ ಹಾಕಿದ ನಿರ್ಬಂಧಗಳಿಂದಷ್ಟೇ ಅಲ್ಲದೇ ಪುರುಷನಿಗೆ ಒದಗಿಸಿದ ಸ್ವೇಚ್ಛೆಯಿಂದ ಕೂಡ ಉಲ್ಬಣಿಸಿರುವ ಶೋಷಣೆಯನ್ನು ಸರಿಪಡಿಸಲು ಯತ್ನಿಸಿದರು. ಪುರುಷನ ಒಂದಕ್ಕಿಂತ ಹೆಚ್ಚು ವಿವಾಹ, ಆಸ್ತಿಯ ಮೇಲಿನ ಏಕ ಸ್ವಾಮ್ಯ, ಸಂತಾನದ ಮೇಲೆ ಏಕಸ್ವಾಮ್ಯ ಇತ್ಯಾದಿಗಳನ್ನು ನಿಯಂತ್ರಿಸುವುದು ಅಗತ್ಯವೆಂದು ಅಂಬೇಡ್ಕರ್ ರವರು ಅರಿತಿದ್ದರು.

"ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕ ಸ್ತ್ರೀಯರ ಹೆರಿಗೆ ರಜೆಗೆ ಸಂಬಂಧಿಸಿದ ಮಹತ್ವದ ವಿಧೇಯಕವನ್ನು ಅವರು 1945 ರ ಮಾರ್ಚ ತಿಂಗಳಲ್ಲಿ ಪಾಸು ಮಾಡಿಸಿದರು. ಇನ್ನೂ ಮಹತ್ವದ್ದೆಂದರೆ, ಅವರು 1946 ರ ಫೆಬ್ರುವರಿಯಲ್ಲಿ ಪಾಸು ಮಾಡಿಕೊಂಡ ಕಾರ್ಮಿಕರ ದಿನದ ಕಾರ್ಯಾವಧಿಯನ್ನು ಹತ್ತು ಗಂಟೆಗಳಿಂದ ಎಂಟು ಗಂಟೆಗಳಿಗಿಳಿಸಿದ ಕ್ರಾಂತಿಕಾರಿ ವಿಧೇಯಕ. ಭಾರತದೊಳಗಿನ ಕಾರ್ಮಿಕ ಸ್ತ್ರೀ-ಪುರುಷರಿಗೆ ಸಂಬಂಧಿಸಿದ ವಿವಿಧ ಇಲಾಖೆಗಳಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತರುವಂತೆ ಮಾಡಿ ಅನೇಕ ಸುಧಾರಣೆಗಳನ್ನು ಕಾರ್ಯಗತಗೊಳಿಸಿದರು",[101]-ಹೀಗೆ ಸ್ತ್ರೀಯರ ಸಮಾನತೆಗೆ ಅಂಬೇಡ್ಕರ್ ಶ್ರಮಿಸಿದರು.

ಇದೇ ಸುಮಾರಿಗೆ 'ಈವ್ಸ್ ವೀಕ್ಲಿ' ಎಂಬ ಸ್ತ್ರೀಯರ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಬೌದ್ಧಧರ್ಮದಿಂದಾಗಿ ಹಿಂದೂ ಸ್ತ್ರೀಯರ ಅಧಃ ಪತನವಾಯಿತೆಂಬ ಸಿದ್ಧಾಂತವನ್ನು ಮಂಡಿಸಲಾಗಿತ್ತು. ಬಾಬಾ ಸಾಹೇಬರು ಅದಕ್ಕೆ 'ಮಹಾಬೋಧ' ಮಾಸ ಪತ್ರಿಕೆಯಲ್ಲಿ (1951) "ರೈಸ್ ಆ್ಯಂಡ್ ಫಾಲ್ ಆಫ್ ದಿ ಹಿಂದೂ ವಿಮೆನ್' ಎಂಬುದೊಂದು ಲೇಖನ ಬರೆದು ಪ್ರಕಟಿಸಿ ಉತ್ತರವಿತ್ತರು. ಈ ಲೇಖನದಲ್ಲಿ " ಬೌದ್ಧ ಕಾಲದಲ್ಲಿ ಭಾರತೀಯ ನಾರಿಗೆ ದೊರೆತ ಸ್ವಾತಂತ್ರ್ಯವನ್ನು ಮನು ನಷ್ಟಪಡಿಸಿದ" ಎಂಬ ಸಿದ್ಧಾಂತವನ್ನು ಮಂಡಿಸುತ್ತ ಬಾಬಾಸಾಹೇಬರೆಂದರ: "ಬುದ್ಧನು ಸ್ತ್ರೀಗೆ ಪರಿವ್ರಾಜಕ ಅಥವಾ ಭಿಕ್ಷುಣಿಯಾಗಲು ಸಮ್ಮತಿ ನೀಡಿದ ಕಾರಣ ಅವಳಿಗೆ ವಿದ್ಯಾಸಂಪಾದನೆಯ ಸ್ವಾತಂತ್ರ್ಯ ದೊರೆತಿತ್ತು. ಆದರಂತೆ, ಆತ್ಮೋನ್ನತಿಯ ಸ್ವಾತಂತ್ರ್ಯವೂ ಅವಳಿಗಿತ್ತು. ಅದರಿಂದಾಗಿ ಬುದ್ಧನು ಸಂಪೂರ್ಣ ಸಮಾಜದಲ್ಲಿ

ಕ್ರಾಂತಿಯನ್ನುಂಟು ಮಾಡಿದ ಮತ್ತು ಸ್ತ್ರೀಯರಿಗೆ ಸ್ವಾತಂತ್ರ್ಯದೊಡನೆ ಗೌರವ ಪ್ರತಿಷ್ಠೆಯೂ ದೊರೆಯುವಂತೆಯೂ ಮಾಡಿದ. ಆದರೆ ಮನು ಸ್ತ್ರೀಯರು ಬೌದ್ಧಧರ್ಮಕ್ಕೆ ಸೇರದಂತೆ ಅವರ ಮೇಲೆ ನಾನಾ ತರದ ಕಟ್ಟು ನಿಟ್ಟುಗಳನ್ನು ಹೇರಿದ ಹಾಗೂ ಅವರನ್ನು ಗುಲಾಮರನ್ನಾಗಿ ಮಾಡಿದ'[102] ಹೀಗಾಗಿ ಕಟುವಾದ ಮಾತುಗಳಲ್ಲಿ ಮನುವನ್ನು ಟೀಕಿಸಿದರು. ಮನು ಪ್ರಣೀತ ಹಿಂದೂ ಧರ್ಮವನ್ನು ಟೀಕಿಸಿದರು.

ಹಿಂದೂ ಕೋಡ್ ಬಿಲ್ ಪಾರ್ಲಿಮೆಂಟ್‌ನಲ್ಲಿ ಅಂಗೀಕಾರವಾಗದೆ ಇದ್ದಾಗ 1951ರ ಸೆಪ್ಟೆಂಬರ್ 27 ರಂದು ಡಾ. ಅಂಬೇಡ್ಕರ್ ತಮ್ಮ ಮಂತ್ರಿಪದದ ರಾಜೀನಾಮೆಯನ್ನು ನೆಹರೂ ಅವರಿಗೆ ಕಳುಹಿಸಿಕೊಟ್ಟರು. 1951ರ ಅಕ್ಟೋಬರ್ 11 ರಂದು ಅಂಬೇಡ್ಕರ್‌ರು ತಮ್ಮ ರಾಜೀನಾಮೆಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಸ್ಪಷ್ಟೀಕರಣ ನೀಡಲು ಸಭಾಪತಿಯವರ ಸಮ್ಮತಿಸಿದಾಗ ಅವರು ಸಭಾತ್ಯಾಗ ಮಾಡಿ ಹೊರ ಬಂದು ತಮ್ಮ ರಾಜೀನಾಮೆ ಪತ್ರಗಳನ್ನು ಪತ್ರಿಕಾ ಪ್ರತಿನಿಧಿಗಳಿಗೆ ಹಂಚಿದರು. ಬಾಬಾಸಾಹೇಬರು ತಮ್ಮ ನಿವೇದನೆಯಲ್ಲಿ "ಸಮಾಜವು ತನ್ನ ಭೂತ ಕಾಲದಿಂದ ಭವಿಷ್ಯತ್ಕಾಲಕ್ಕೆ ಮಗ್ಗಲು ಬದಲಾಯಿಸುವಾಗ ತನ್ನ ವಿವೇಕ ಸಮ್ಮತವಾದ ವಿಷಯಗಳನ್ನೇ ಅಂಗೀಕರಿಸಬೇಕಾಗುತ್ತದೆ. ವರ್ಗವರ್ಗಗಳ ನಡುವೆ ಹಾಗೂ ಸ್ತ್ರೀ-ಪುರುಷರ ನಡುವೆ ವಿಷಮತೆಯೇ ಹಿಂದೂ ಸಮಾಜದ ಆತ್ಮವಾಗಿರುವಾಗ, ಆ ಹಿಂದೂಧರ್ಮವನ್ನು ಸ್ಪರ್ಶ ಮಾಡದೇ ಆರ್ಥಿಕ ಸುಧಾರಣೆಗಾಗಿ ಒಂದರ ಮೇಲೊಂದು ಕಾನೂನು ಮಾಡುತ್ತ ಕೂರುವುದೆಂದರ ಸಂವಿಧಾನದ ಚೇಷ್ಟೆ ಮಾಡಿದಂತೆ ಅಥವಾ ಮಳಲಿನ ಮೇಲೆ ಕೋಟೆ ಕಟ್ಟಿದಂತೆಯೇ ಸರಿ" ಎಂದರು.[103] ಅಂಬೇಡ್ಕರ್ ಹೋರಾಟ ಮಾಡಿದ ಹೆಚ್ಚಿನ ವಿಚಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ, ಸಮಾನತೆ ಅವಕಾಶಗಳನ್ನು ಪಡೆದುಕೊಳ್ಳುವುದರಿಂದ ವಂಚಿತರಾಗಿದ್ದವರು ಹೆಚ್ಚಿನ ಮಂದಿ ಸವರ್ಣೀಯರೇ ಹೊರತು ಇತರೇ ಕೆಳವರ್ಗದವರಾದಂತಹ ಅಸ್ಪೃಶ್ಯರಾಗಲಿ, ದಲಿತರಾಗಲಿ ಅಲ್ಲವೇ ಅಲ್ಲ. ಏಕೆಂದರೆ ಆಸ್ತಿಯಾಗಲಿ, ಶಿಕ್ಷಣವಾಗಲಿ ಇವರಿಗೆ ಎಟುಕದೇ ಇದ್ದ ವಿಚಾರಗಳು. ಇದರಿಂದ ಲಾಭ ಪಡೆಯುತ್ತಿದ್ದವರು ಬ್ರಾಹ್ಮಣರು, ಇತರೇ ಮೇಲ್ವರ್ಗದವರೇ ಆಗಿದ್ದರೂ ಒಂದು ಪ್ರಾಣಿಜೀವಕ್ಕಿಂತಲೂ ಕಡೆಗಣಿಸೆ ಅಸ್ಪೃಶ್ಯರಾಗಲಿ, ದಲಿತರಾಗಲಿ, ವ್ಯಕ್ತಿ ಸ್ವಾತಂತ್ರ್ಯವೆಂಬುದೇ ಇಲ್ಲದಂತಹ ಸಂದರ್ಭದಲ್ಲಿ ಮಹಿಳೆಯರ ಪರವಾದ ಇವರ ಎಲ್ಲ ಹೋರಾಟಗಳು ದಲಿತ ಮಹಿಳೆಯರನ್ನು ಅಸ್ಪೃಶ್ಯರನ್ನು ಹೊರತಾಗಿಸಿಯೇ ಇದ್ದವು. ಮೇಲು-ಕೀಳೆಂಬ ಭೇದವೆಣಿಸಿದೆ, ಜಾತಿ-ಧರ್ಮಗಳೆಂದು ಯೋಚಿಸದೆ ಇಡೀ ಭಾರತೀಯ ಮಹಿಳೆಯರ ಪರವಾಗಿ ಅಂಬೇಡ್ಕರ್ ಅವರು ನಿಂತರು ಎಂಬುದಕ್ಕೆ ಬೇರೆ ಯಾವ ಸಾಕ್ಷ್ಯಾಧಾರಗಳು ಬೇಕಿಲ್ಲ.

ರಾಷ್ಟ್ರೀಯ ಜೀವನದ ಯುಗಾಂತರದ ಆ ಘಟ್ಟದ ಮಹಾನ್ ಬೌದ್ಧ ಪಥಾವಲಂಬಿಯಾದ ಅಂಬೇಡ್ಕರ್‌ರು, ಭರತವರ್ಷದ ಭವಿತವ್ಯದ ವಿಷಯದಲ್ಲಿ ಮಹಿಳೆಯ ಸ್ವಾತಂತ್ರ್ಯ ಮತ್ತು ಸಮತೆಯ ನೆಲೆಯಿಂದ ಚಿಂತಿಸತೊಡಗಿದುದರಲ್ಲಿ ಅವರ ದೃಷ್ಟಿಯ ವಿಸ್ತೀರ್ಣವನ್ನೂ ಅವರು ಪ್ರತಿಪಾದಿಸಿದ ತತ್ವದ ಸೈದ್ಧಾಂತಿಕ ಸ್ವರೂಪವನ್ನು ಅರಿಯಲೆತ್ನಿಸಬೇಕಾಗುತ್ತದೆ. ತನ್ಮೂಲಕ ಅವರು ಎತ್ತಿ ಹಿಡಿದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಸ್ವರೂಪವನ್ನು ಕಲ್ಪಿಸಿಕೊಳ್ಳಲೆತ್ನಿಸಬೇಕಾಗುತ್ತದೆ.

ಭಾರತದಲ್ಲಿ ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ವೈಯಕ್ತಿಕ ಸ್ಥಾನಮಾನಗಳನ್ನೆಲ್ಲ ತ್ಯಾಗ ಮಾಡಿ ಹೋರಾಡಿದ ಅಂಬೇಡ್ಕರ್ ರ ಬಗೆಗೆ ಈ ಕೆಳಗಿನ ಒಂದು ಮಾತು ಉಲ್ಲೇಖನೀಯ ಎಂದೆನಿಸುತ್ತದೆ. "It would not be inappropriate to call Ambedkar as one of the Saviours of the Indian women. The gift of

his advocacy of the causes of women and his exhortion to the Hindus to change the society to suit the needs of the modern times can be described in his own words. "

"Those who want to conserve must be ready to repair and all want is that if you want to maintain the Hindu System, the Hindu Culture, the Hindu Society, do not hesitate to repair where it is necessary. The Bill asks for nothing more than repairing those parts of the Hindu Society which have almost become dilapidated (A. Hariprasanna, Ambedkar and Social Justice. Vol. 1 P. 199. "(76) ಸ್ವತಂತ್ರ ಭಾರತಕ್ಕೆ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯ ಭದ್ರಬುನಾದಿ ಹಾಕಿ ಸಂವಿಧಾನದಲ್ಲಿ ದಲಿತರಿಗೆ, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ವಿಶೇಷ ರಕ್ಷಣೆ ಒದಗಿಸಿದವರು ಡಾ. ಬಿ.ಆರ್. ಅಂಬೇಡ್ಕರ್. ಆದಕ್ಕಾಗಿ ಬದುಕಿನುದ್ದಕ್ಕೂ ಹೋರಾಡಿದರು.

4.7 ಹಿಂದೂ ಧರ್ಮದ ವಿರುದ್ಧ ಪ್ರತಿಭಟನೆ :

ಅಂಬೇಡ್ಕರ್‌ರು ಹಿಂದೂಧರ್ಮ ಕೇವಲ ಧರ್ಮವಾಗಿರದೆ ಆದೊಂದು ಶೋಷಿತ ವ್ಯವಸ್ಥೆ ಮತ್ತು ಶೋಷಣಾ ಸಿದ್ಧಾಂತವಾಗಿದೆ ಎಂದು ತಿಳಿದುಕೊಂಡಿದ್ದರು. ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಅಮಾನವೀಯ ಧರ್ಮವೆಂದರೆ ಹಿಂದೂಧರ್ಮ. ಅಮಾನವೀಯ ಧರ್ಮಶಾಸ್ತ್ರವೆಂದರೆ ಮನು ಧರ್ಮಶಾಸ್ತ್ರ. ಅಮಾನವೀಯ ಪುರುಷರೆಂದರೆ ಬ್ರಾಹ್ಮಣರು, ಇಡೀ ಹಿಂದೂಧರ್ಮವು ಬ್ರಾಹ್ಮಣರು ತಮ್ಮ ಹೊಟ್ಟೆಪಾಡಿಗಾಗಿ ಅತ್ಯಂತ ಕುಶಲತೆಯಿಂದ ನೇಯ್ದ ಒಂದು ಅಮೂರ್ತ ವಿಚಾರಗಳ ನೇಯ್ಗೆ. ಸಮಯಕ್ಕೆ ತಕ್ಕಂತೆ ಅದನ್ನು ವ್ಯಾಖ್ಯಾನಿಸಿ, ವ್ಯಾಖ್ಯಾನಗಳನ್ನು ತಿದ್ದಿ ತಮ್ಮ ಸ್ವಾರ್ಥದ ಅಸ್ತ್ರವನ್ನಾಗಿ ಮಾಡಿಕೊಂಡರು. ಹೀಗಾಗಿ ಬ್ರಾಹ್ಮಣ ಸಂಸ್ಕೃತಿ, ದೇಶ ವಿರೋಧಿ -'ಜೀವ ವಿರೋಧಿ' ಸಂಸ್ಕೃತಿಯಾಗಿದೆ. ಬ್ರಾಹ್ಮಣರು ಧರ್ಮವನ್ನು ದಲಿತರ ಶೋಷಣೆಗಾಗಿ ಉಪಯೋಗ ಮಾಡಿಕೊಂಡಿದ್ದು, ಇತಿಹಾಸಕ್ಕೆ ಬಗೆದ ದ್ರೋಹ ಹಾಗೂ ಅತ್ಯಾಚಾರವಾಗಿದೆ. ಈ ದೇಶದಲ್ಲಿರುವ ಧರ್ಮಗ್ರಂಥಗಳೇ ಶೂದ್ರ ಮತ್ತು ಅತಿ ಶೂದ್ರರ ವೈರಿಗಳಾಗಿವೆ, ಇವುಗಳ ನಾಶವಾದಾಗಲೇ ದಲಿತರಿಗೆ ನಿಜವಾದ ಸ್ವಾತಂತ್ರ್ಯ ಸಿಗುತ್ತದೆ ಎಂಬುದು ಅಂಬೇಡ್ಕರ್‌ರ ವಾದವಾಗಿತ್ತು. ಆದ್ದರಿಂದ ಅಂಬೇಡ್ಕರ್ ಬಹಳ ಉಗ್ರವಾಗಿ "You kill Brahmanism and Save Hinduism"[105] ಎಂದು ಟೀಕಿಸಿದ್ದಾರೆ. ಅಷ್ಟೇ ಅಲ್ಲ ಹಿಂದೂ ಧರ್ಮ ಬ್ರಾಹ್ಮಣರು ಸ್ವಾರ್ಥದಿಂದ ಕಟ್ಟಿಕೊಂಡ ಅಭೇದ್ಯ ಕೋಟೆ. ಹೀಗಾಗಿ ಇಡೀ ಹಿಂದೂ ಧರ್ಮವನ್ನು ಜಾಲಾಡಿದ ಡಾ। ಅಂಬೇಡ್ಕರ್ ಘೋಷಿಸಿದ ಒಂದು ವ್ಯಾಖ್ಯಾನ "ಹಿಂದೂ ಧರ್ಮವೇ; ನಿನ್ನ ಹೆಸರೇ ಅಸಮಾನತೆ".[106]

"ಜಗತ್ತಿನ ಎಲ್ಲೆಡೆ ಧರ್ಮವು ಮನುಷ್ಯರನ್ನು ಮೇಲೆತ್ತುವ ಉದ್ಧರಿಸುವ ಕಾರ್ಯದಲ್ಲಿ ನಿರತವಾಗಿದ್ದಾಗ ಹಿಂದೂಧರ್ಮವು ಮನುಷ್ಯನನ್ನು ಹೀನಾಯಗೊಳಿಸಿ ಕೆಳಕ್ಕೆ ತಳ್ಳುವುದರಲ್ಲಿ ನಿರತವಾಗಿತ್ತು"[107] ಎಂದು ಹೇಳುತ್ತಾರೆ ಅಂಬೇಡ್ಕರ್. ಹಿಂದೂಗಳಿಗೆ ಏಕ ದೇವರಿಲ್ಲ, "ಹಿಂದೂಧರ್ಮವೆಂಬುದು ಅನೇಕ ನಂಬಿಕೆ ಮತ್ತು ಸಿದ್ಧಾಂತಗಳ ಒಂದು ಸಂಕೀರ್ಣ ಸಮೂಹ". ಆದ್ದರಿಂದ ಹಿಂದೂ ಅನ್ನುವವನು ಜಾತಿಯಿಂದಲೇ ಗುರುತಿಸಲ್ಪಡುತ್ತಾನೆ. ಜಾತಿಯಿಂದಲೇ ಆಳಲ್ಪಡುತ್ತಾನೆ. ಆ ಜಾತಿಗೆ 'ಹಿಂದೂ' ಎಂಬ ಮುಖವಾಡವನ್ನು ಹಾಕಲಾಗಿದೆ ಎಂದು ಅಂಬೇಡ್ಕರ್‌ರ ಅಭಿಪ್ರಾಯ. 'ಹಿಂದೂ ಸಮಾಜ' 'ಅಸಮಾನತೆಯ ತವರು' ಎಂಬುದನ್ನು ಮನಗಂಡ ಅಂಬೇಡ್ಕರ್ -ಅದಕ್ಕೆ ಕಾರಣ ಹಿಂದೂಧರ್ಮ ಅದರಲ್ಲಿನ ಅಸಮಾನತೆ,

ಅನಿಷ್ಟಗಳು, ದೌರ್ಜನ್ಯ, ಶೋಷಣೆಗಳ ವಿರುದ್ಧ ಸಿಡಿದೆದ್ದರು. ಕ್ರಾಂತೀಯ ಕಳಹೆಯನ್ನು ಊದಿದರು. ಹಿಂದೂ ಧರ್ಮವನ್ನು ವೈಜ್ಞಾನಿಕವಾಗಿ ಪರಿಷ್ಕರಿಸುವ ಅಗತ್ಯತೆಯನ್ನು ಮನಗಂಡರು.

ಹಿಂದೂಧರ್ಮದ ತತ್ವಜ್ಞಾನ ಹಾಗೂ ಹಿಂದೂ ಧರ್ಮದ ಒಗಟುಗಳು' ಎಂಬ ತಮ್ಮ ಬರಹಗಳಲ್ಲಿ ಅಂಬೇಡ್ಕರ್ ಹಿಂದೂಧರ್ಮದೊಳಗಿನ ಅಮಾನವೀಯ ಸಂಗತಿಗಳನ್ನು ಬಯಲಿಗೆಳೆದಿದ್ದಾರೆ. ಆರಂಭದಲ್ಲಿ ಬ್ರಾಹ್ಮಣರು ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನಗಳಲ್ಲಿ ಮುಳುಗಿದ್ದ ಕಾಲಾ ನಂತರ ಅವುಗಳನ್ನು ತ್ಯಜಿಸುತ್ತ ಉಳಿದವರ ಮೇಲೆ ಶ್ರೇಷ್ಠತೆ ಸಾಧಿಸಲು ಸ್ಮೃತಿಗಳನ್ನು ಇನ್ನಿತರ ಗ್ರಂಥಗಳನ್ನು ರಚಿಸುತ್ತ ಬಂದರು. ಅಂಬೇಡ್ಕರ್ ಗುರುತಿಸಿರುವಂತೆ ಹಿಂದೂಗಳ ಧಾರ್ಮಿಕ ಸಾಹಿತ್ಯ, ಸಂಹಿತೆಗಳು, ಬ್ರಾಹ್ಮಣಕಗಳು, ಆರಣ್ಯಕಗಳು, ಉಪನಿಷತ್ತುಗಳು, ಸೂತ್ರಗಳು, ಇತಿಹಾಸ, ಸ್ಮೃತಿಗಳು, ಪುರಾಣಗಳು ಎಂದಿದ್ದಾರೆ. ಮೂರು ವೇದಗಳ ಕರ್ತೃಗಳು ಭಂಡ, ಧೂರ್ತ ಮತ್ತು ರಾಕ್ಷಸರು[108]" ಎಂದು ಮೂರು ವೇದಗಳ ಕರ್ತೃಗಳನ್ನು ಟೀಕಿಸುತ್ತಾರೆ. ವೇದಗಳು ದೋಷ ರಹಿತ, ಅದನ್ನು ಪ್ರಶ್ನಿಸಬಾರದು ಎಂದು ಘೋಷಿಸಲು ಕಾರಣ ಅದರಲ್ಲಿನ ವಿಚಾರಗಳು ಬ್ರಾಹ್ಮಣರಿಗೆ ಅನುಕೂಲಕರವಾಗಿದ್ದವು ಎನ್ನುತ್ತಾರೆ.

"ಅಂಬೇಡ್ಕರ್ ಹಿಂದೂಧಾರ್ಮಿಕ ವ್ಯವಸ್ಥೆಯ ವಿರುದ್ಧ ಯುದ್ಧವನ್ನೇ ಸಾರಿದರು. ಹಿಂದೂ ಮತೀಯ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಮತ್ತು ಪುರಾಣಗಳ ಮೇಲೆ ವೈಜ್ಞಾನಿಕ ವಿಮರ್ಶೆಯನ್ನು ಬರೆದರು. ಅವು ಎಷ್ಟು ಅವೈಚಾರಿಕವಾದವು ಎಂಬುದನ್ನು ಮನದಟ್ಟ ಮಾಡಿ ಕೊಟ್ಟರು. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಗೆ ಮೂಲಕಾರಣವಾದ ವರ್ಣ ಮತ್ತು ಜಾತಿಯ ಮೇಲೆ ತೀವ್ರ ದಾಳಿ ಮಾಡಿ, ಹಿಂದೂ ಸಮಾಜದ ಪುನರ್ ನಿರ್ಮಾಣವು ಜಾತಿ ವಿನಾಶದಿಂದ ಮಾತ್ರ ಸಾಧ್ಯ ಎಂದು ಸಾರಿದರು. ಅಸ್ಪೃಶ್ಯತೆ ಮತ್ತು ಸ್ತ್ರೀ ಸಮಾನತೆಯನ್ನು ಹೋಗಲಾಡಿಸಲು ಕಂಕಣ ತೊಟ್ಟು ಹೋರಾಡಿದರು".[109] ಸಾಮಾಜಿಕವಾಗಿ ಸಮಾನತೆಯಿಲ್ಲದ, ಹಿಂದೂ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮನುಷ್ಯ ವರ್ಗಗಳ ನಡುವೇ ಸಂಪರ್ಕವೇ ಇಲ್ಲ. ವಿದ್ಯೆ, ಯುದ್ಧ, ವ್ಯಾಪಾರ, ವ್ಯವಸಾಯ-ಹುಟ್ಟುವ ಮುಂಚೆ ಆಯಾ ಜನಾಂಗದವರಿಗೆ ಮೊದಲೇ ನಿರ್ಧರಿತವಾಗಿದೆ. ಒಂದು ಜನಾಂಗ ಶಾಶ್ವತವಾಗಿ ಮನುಷ್ಯನ ಸಂಸರ್ಗದಿಂದಲೇ ದೂರವಾಗಿ ಮನುಷ್ಯ ಮಾಡಬಯಸುವ ಯಾವ ಹಕ್ಕು, ಅಧಿಕಾರಗಳು, ಆ ಜನಾಂಗಕ್ಕೆ ಲಭ್ಯವಾಗುವುದಿಲ್ಲ.

ಇಂಥ ಅಸಮಾನತೆಯ ಜಾತಿ-ವ್ಯವಸ್ಥೆಗೆ ಹಿಂದೂಧರ್ಮ ಕಾರಣವಾಗಿದ್ದು ಮನುಷ್ಯರನ್ನು ನೀಚ-ಉಚ್ಚ, ಕೀಳು-ಮೇಲು ಎಂದು ಅದು ಹುಟ್ಟಿನಿಂದಲೇ ವಿಭಾಗಿಸಿಟ್ಟಿದೆ. ಬದಲಾವಣೆ ಸಾಧ್ಯವಿದ್ದರೂ ಬೇಕೂಂತಲೇ ಆ ಬದಲಾವಣೆಯನ್ನು ಧರ್ಮದ ಮೂಲಕ ನಿಗ್ರಹಿಸಲಾಗಿದೆ. ಆ ಹಿಂದೂಧರ್ಮದ ಮೂಲ ಬೇರುಗಳಿರವುದು ಅದರ ಧರ್ಮಗ್ರಂಥ ಮತ್ತು ದೇವರುಗಳಲ್ಲಿ, ಆಧುನಿಕಯುಗದಲ್ಲಿ ಈ ವ್ಯವಸ್ಥೆಯನ್ನು ಬಲವಾಗಿ ವಿರೋಧಿಸಿದವರು ಅಂಬೇಡ್ಕರ್. ಜಾತಿಪದ್ಧತಿ ಮತ್ತು ಹಿಂದೂಧರ್ಮದ ಬೇರುಗಳನ್ನು ಕತ್ತರಿಸಿ ಧಾರ್ಮಿಕ ಸಂಘರ್ಷ ಏರ್ಪಡಿಸಿದವರು. ಬದುಕಿನುದ್ದಕ್ಕೂ ಅದಕ್ಕಾಗಿ ನಿರಂತರ ಹೋರಾಟ ಮಾಡಿದರು.

ಹಿಂದೂ ಅಥವಾ ವೈದಿಕಧರ್ಮ ಜಾತಿವ್ಯವಸ್ಥೆ, ಚಾತುರ್ವರ್ಣ, ಅದರ ಅನಿಷ್ಟಗಳಾದ ಅಸಮಾನತೆ, ಸ್ತ್ರೀ ಶೋಷಣೆ, ಪೂಜೆ-ಬಲಿ, ಯಜ್ಞ-ಯಾಗ, ವಿಧಿ-ನಿಯಮ, ಸ್ವರ್ಗ-ನರಕ

ಮುಂತಾದವುಗಳನ್ನು ಸಮಾಜದ ಮೇಲೆ ಹೇರಿ, ಆರ್ಯ ದೇವಾನು ದೇವತೆಗಳನ್ನು ಸೃಷ್ಟಿ ಮಾಡಿ, ಪವಾಡಗಳನ್ನು ವಿಜೃಂಭಿಸಿ ಹಿಂದೂಧರ್ಮ ನಮ್ಮ ವೈಚಾರಿಕ ಬದುಕಿಗೆ ಮಾರಕವಾಗಿದೆ. ಇಂತಹ ಅವೈಚಾರಿಕ ಅಸಮಾನತೆ ಬೋಧಿಸುವ ಧರ್ಮವನ್ನು ಅಂಬೇಡ್ಕರ್ ಕಟುವಾಗಿ ಟೀಕಿಸಿದರು.

"ಹಿಂದೂಧರ್ಮದ ತತ್ವಜ್ಞಾನವನ್ನು ಮಾನವತಾ ಧರ್ಮವೆಂದು ಕರೆಯಲು ಸಾಧ್ಯವೇ ಇಲ್ಲ. ಆದುದರಿಂದಲೇ ಬೆಲ್‌ಪೋರ್‌ರವರ ಮಾತಿನಲ್ಲಿಯೇ ಹೇಳುವುದಾದರೆ, ಹಿಂದೂಧರ್ಮವು ಸಾಮಾನ್ಯ ಮಾನವಕೋಟಿಯನ್ನು ಒಳಹೊಕ್ಕು ಪಾರದರ್ಶಕವಾಗಿ ಕಾಣಿಸಲಾರದು. ಹಾಗೇನಾದರೂ ಕಾಣಿಸಿದರೆ ಅದನ್ನು ನಿಸ್ಸತ್ವಗೊಳಿಸುತ್ತದೆ. ಹಿಂದೂಧರ್ಮದಲ್ಲಿ ಸಾಮಾನ್ಯ ಮಾನವನ ಜೀವಕ್ಕೆ ಯಾವುದೇ ಪುಷ್ಟಿಯಿಲ್ಲ. ಸಾಮಾನ್ಯನ ದುಃಖಕ್ಕೆ ಯಾವುದೇ ಸಾಂತ್ವನವಿಲ್ಲ. ಮನುಷ್ಯನ ಬಲಹೀನತೆಗೆ ಯಾವ ನೆರವೂ ಇಲ್ಲ. ಅದು ಮನುಷ್ಯನನ್ನು ಅಂಧಕಾರದಲ್ಲಿ ನಿಸರ್ಗದ ಅಚಿಂತ್ಯ ಶಕ್ತಿಗಳಿಗೆ ಮುಖಾಮುಖಿಯಾಗಿ ನಿಲ್ಲಿಸುತ್ತದೆ. ನಿಷ್ಫಲವಾದ ಕೆಲವು ಹೋರಾಟದ ಬಳಿಕ ಅವರು ಸೋತು ಹೋಗುತ್ತಾರೆ. ಅತ್ಯಂತ ಬರ್ಬರ ಧರ್ಮಕ್ಕಿಂತ ಕಡಿಮೆಯಿಲ್ಲದ ಕ್ರೌರ್ಯದಿಂದ ದೇವರೊಂದಿಗೆ ಯಾವುದೇ ಸಂಸರ್ಗವಾಗದಂತೆ ಮನುಷ್ಯರನ್ನು ವಿಚ್ಛೇದಗೊಳಿಸುತ್ತದೆ".[110] ಹೀಗಿದೆ ಹಿಂದೂಧರ್ಮದ ತತ್ವಜ್ಞಾನ. ಅದು ಅತಿಮಾನವನಿಗೆ ಸ್ವರ್ಗವಾದರೆ, ಸಾಮಾನ್ಯ ಮನುಷ್ಯನಿಗೆ ನರಕವಾಗಿದೆ ಎಂದು ಅಂಬೇಡ್ಕರ್ ಅಭಿಪ್ರಾಯಪಡುತ್ತಾರೆ. ಹಿಂದೂಧರ್ಮ ಇಂದಿಗೂ ತನ್ನ ಅವಲಂಬಿತ ಜನರನ್ನು ಏಕ ದೃಷ್ಟಿಕೋನದಿಂದ ಪರಿಗಣಿಸಿದ ಉದಾಹರಣೆಗಳೇ ಇಲ್ಲ. ಒಬ್ಬರು ಮತ್ತೊಬ್ಬರ ಸ್ಪರ್ಶದಿಂದ ಉಂಟಾಗುವ ಮೈಲಿಗೆಯಿಂದ ಅಪವಿತ್ರವಾಗುತ್ತೇವೆ ಎಂಬ ಭಯಭೀತಿಗಳಿಂದ ನರಳುವವರೇ ಜಾಸ್ತಿ.

ಹಿಂದೂಧರ್ಮ ಮನುಷ್ಯರ ನಡುವೆ ಹೇಗೆ ಕಂದರಗಳನ್ನು ನಿರ್ಮಿಸುತ್ತದೆ ಎಂಬುದನ್ನು ಅಂಬೇಡ್ಕರ್ "ಬದುಕಿನ ಮೂಲಭೂತ ಸಂಗತಿಗಳಿಗೆ ಸಂಬಂಧಿಸಿದ ಸುಖ-ದುಃಖಗಳಲ್ಲಿ ಹಿಂದೂಗಳ ನಡುವೆ ಹಂಚಿಕೆ ಇಲ್ಲ. ಎಲ್ಲವೂ ಪ್ರತ್ಯೇಕ ಮತ್ತು ವಿಶಿಷ್ಟ.ವಾಗಿ ಉಳಿಯುತ್ತಾನೆ. ಇಂಡಿಯಾಕ್ಕೆ ಬಂದ ವಿದೇಶಿ ವ್ಯಕ್ತಿಯೊಬ್ಬ "ಹಿಂದೂ ಪಾನೀಯ" ಮತ್ತು "ಮುಸ್ಲಿಂ ಪಾನೀಯ" ಎಂದು ಕೂಗುವುದನ್ನು ಕೇಳುವುದಿಲ್ಲ. ಆದರೆ ಬ್ರಾಹ್ಮಣ ಕಾಫಿ ಅಂಗಡಿಗಳು ಬ್ರಾಹ್ಮಣರ ಭೋಜನ ಶಾಲೆಗಳು ಆವನಿಗೆ ಕಾಣಿಸುತ್ತವೆ. ಅಲ್ಲಿಗೆ ಬ್ರಾಹ್ಮಣೇತರರು ಸುಳಿಯುವುದಿಲ್ಲ. ಬ್ರಾಹ್ಮಣನ ಮನೆಯಲ್ಲಿ ಒಂದು ಮಗು ಹುಟ್ಟಿದರೆ ಅವನು ಯಾವುದೇ ಬ್ರಾಹ್ಮಣೇತರರನ್ನು ಕರೆಯುವುದಿಲ್ಲ. ಒಂದು ಜಾತಿಯ ಸುಖ ದುಃಖಗಳು ಮತ್ತೊಂದು ಜಾತಿಗೆ ಸಂಬಂಧಿಸಿಲ್ಲ. ಒಂದು ಜಾತಿಯು ಮತ್ತೊಂದು ಜಾತಿಯ ಬಗೆಗೆ ಯಾವುದೇ ಆಸಕ್ತಿ ತೋರಿಸುವುದಿಲ್ಲ"[111] ಎಂದೆನ್ನುವ ಅಂಬೇಡ್ಕರ್‌ರವರು ಹಿಂದೂಧರ್ಮವೆಂದರೆ ಹಲವು ಪ್ರತ್ಯೇಕ ಕೋಣೆಗಳಿರುವ ಒಂದು ವಿಶಾಲ ಮನೆ ಅದರೊಳಗೆ ಹೊಸ ಗಾಳಿ -ಹೊಸ ಬೆಳಕು ಬರದೆ ಶತಶತಮಾನದ ಕತ್ತಲು ಕವಿದಿದೆ ಎನ್ನುತ್ತಾರೆ.

"ಧರ್ಮ ಎನ್ನುವುದು ವಿಜ್ಞಾನ ಸಮ್ಮತವಾಗಿರಬೇಕು ಹಾಗಿಲ್ಲದಿದ್ದರೆ ಧರ್ಮವು ತನ್ನ ಘನತೆಯನ್ನು ಕಳೆದುಕೊಂಡು ಕೇವಲ ಅಣಕದ ವಸ್ತುವಾದೀತು. ಅಷ್ಟೇ ಅಲ್ಲ, ಬದುಕನ್ನು ನಿಯಂತ್ರಿಸುವ ಮೂಲ ತತ್ವವಾಗಿಯೂ ಅದು ತನ್ನ ಸತ್ವವನ್ನು ಕಳೆದುಕೊಳ್ಳುವುದಲ್ಲದೇ, ಕಾಲಕ್ರಮೇಣ ಚೂರುಚೂರಾಗಿ ನಷ್ಟ ಹೊಂದುತ್ತದೆ. ಆದರ ಕಾರಣ ಧರ್ಮವು ವಿಜ್ಞಾನ ಸಮ್ಮತವಾಗಿರುವುದು ಅಗತ್ಯ. ಬೇರೆ ಮಾತಿನಲ್ಲಿ ಹೇಳುವುದಾದರೆ, ಧರ್ಮವು ನಿಜವಾಗಿಯೂ ಕ್ರಿಯಾಶೀಲವಾಗಿರಬೇಕಾದರೆ ವೈಚಾರಿಕತೆಯ ಬುನಾದಿಯ

ಮೇಲೆ ನಿಲ್ಲಬೇಕು. ವೈಚಾರಿಕತೆ ಎನ್ನುವುದು ವಿಜ್ಞಾನ ಬುದ್ಧಿಗೆ ಮತ್ತೊಂದು ಹೆಸರು.[112]- ಹೀಗೆ ಅಂಬೇಡ್ಕರ್‌ರವರು ಧರ್ಮದ ನೈಜತೆಯನ್ನು, ಹೇಳುವುದರೊಂದಿಗೆ ಹಿಂದೂಧರ್ಮದ ಹುಳುಕುಗಳನ್ನು ನಿವಾರಿಸಿ ನಿಜ ಅರ್ಥದ ಧರ್ಮವನ್ನು ಕುರಿತು ಅದು ವೈಜ್ಞಾನಿಕವಾಗಿರಬೇಕು, ವೈಚಾರಿಕವಾಗಿರಬೇಕು ಎಂದೆನ್ನುತ್ತಾರೆ.

ಹಿಂದೂಧರ್ಮಕ್ಕೆ ಇನ್ನೊಬ್ಬರನ್ನು ಪವಿತ್ರಗೊಳಿಸುವ ಗುಣವಿಲ್ಲ. ಏಕೆಂದರೆ ಅದೇ ಅಪವಿತ್ರಗೊಳ್ಳುವ ಮಹಾ ಭಯದಿಂದ ಕೂಡಿದೆ. ಇನ್ನೊಬ್ಬರನ್ನು ಶುದ್ಧಗೊಳಿಸುವ ಶಕ್ತಿ ಇಲ್ಲ... ಮತ್ತೊಬ್ಬರನ್ನು ಸ್ವಾಗತಿಸುವ ಶಕ್ತಿ ಅದಕ್ಕಿಲ್ಲ... ಏಕೆಂದರೆ ಅದರ ಬಾಗಿಲುಗಳು ಸದಾ ಮುಚ್ಚಿವೆ. ಹಿಂದೂಧರ್ಮ ಏನನ್ನು ಬೋಧಿಸುತ್ತದೆ. ಎಂದರೆ "ಬೇರೆಯಾಗಿರು", "ಅಂತರ್ಜಾತೀಯ ವಿವಾಹವಾಗಬೇಡ", "ಒಟ್ಟಿಗೆ ಕುಳಿತು ಊಟಮಾಡಬೇಡ", 'ಮುಟ್ಟಿಸಿಕೊಳ್ಳಬೇಡ" ಇತ್ಯಾದಿಯಾದ ವಿಚಾರಗಳನ್ನು ಪ್ರಸ್ತಾಪಿಸಿದ ಅಂಬೇಡ್ಕರ್ ಹಿಂದೂಧರ್ಮದಲ್ಲಿ ನಾನಿರಲಾರೆ ಎಂದರು.

"I solemnly assure you that I will not die as a Hindu" ಹಿಂದೂವಾಗಿ ಹುಟ್ಟಿದೆ, ಆದರೆ ಹಿಂದೂವಾಗಿ ಸಾಯಲಾರೆ ಎಂದರು ಅಂಬೇಡ್ಕರ್." ನನಗೆ ನನ್ನದೆ ಆದ ತಾಯ್ನಾಡಿದೆಯೇ? ಇಲ್ಲ ಇಲ್ಲ. ಹಂದಿ ನಾಯಿಗಳಿಗಿಂತಲೂ ಕಡೆಯಾಗಿ ಬದುಕುತ್ತಿರುವ, ಕುಡಿಯಲು ಒಂದು ತೊಟ್ಟು ನೀರಿಗೂ ದೂರವಿರುವ ನನ್ನ ಜನಕ್ಕೆ ಇದು ತಾಯ್ನಾಡೆ? ದೇವಾಲಯಗಳ ಪ್ರವೇಶವನ್ನು ನಿರಾಕರಿಸುವ ಅಸಮಾನತೆಯ ಮೂಲಭೂತ ತತ್ವವಾಗಿರುವ ಈ ಧರ್ಮ ನನ್ನ ಧರ್ಮವೇ? ಆತ್ಮಗೌರವ ಉಳ್ಳ ಯಾವ ಅಸ್ಪೃಶ್ಯನೂ ಈ ನಾಡಿನ ಬಗ್ಗೆ ಹೆಮ್ಮೆಪಟ್ಟುಕೊಳ್ಳುವುದು ಸಾಧ್ಯವಿಲ್ಲ"[113]-ಎಂದು ಅಂಬೇಡ್ಕರ್‌ರವರು ಗಾಂಧೀಜಿಯವರಿಗೆ ಈ ಮಾತನ್ನು ಹೇಳಿದರು. ಹೀಗಾಗಿಯೇ ಅವರು ಹಿಂದೂ ಧರ್ಮವನ್ನು ತ್ಯಜಿಸುವ ಮಾತನಾಡಿದರು. ಅದರ ಕರಾಳತೆಯನ್ನು -ಕ್ರೌರ್ಯವನ್ನು ಜಗತ್ತಿನ ಮುಂದೆ ತೆಗೆದಿಟ್ಟರು.

"ಹಿಂದೂಸಮಾಜ" ಎಂಬುದೇ ಒಂದು ಮಿಥ್ಯಪದ "ಹಿಂದೂ" ಎಂಬ ಹೆಸರೇ ವಿದೇಶಿಯವಾಗಿದೆ ಎಂದ ಅಂಬೇಡ್ಕರ್" ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಹೀಗೆಂದರೆ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎಂದು ಹೇಳಿದಂತಲ್ಲ. ಅದಕ್ಕೆ ವಿಪುಲವಾದ ಇತಿಹಾಸವುಂಟು. ಆದರೆ ಅದು ವಿರೂಪಗೊಂಡಿದೆ. ಅದು ಸ್ತ್ರೀಯರನ್ನು, ಮಕ್ಕಳನ್ನು ರಂಜಿಸಲೆಂದು ರಚಿತವಾದ ಪುರಾಣವಾಗಿಬಿಟ್ಟಿದೆ. ಬ್ರಾಹ್ಮಣ ಲೇಖಕರು ಬುದ್ಧಿಪೂರ್ವಕವಾಗಿ ಹೀಗೆ ಮಾಡಿರಬೇಕೆಂದು ಅನಿಸುತ್ತದೆ"[114] -ಇತಿಹಾಸವನ್ನು ಬರೆದವರು ಅದನ್ನು ವಿರೂಪಗೊಳಿಸಿ, ಸ್ವಾರ್ಥದಿಂದಾಗಿ ಒಂದು ವರ್ಗದ ಪರವಾಗಿ ಚಿತ್ರಿಸಿರುವುದನ್ನು ನಾವು ಇಂದಿಗೂ ಕಾಣಬಹುದಾಗಿದೆ.

"ಮನು" ಧರ್ಮಶಾಸ್ತ್ರವನ್ನು ಹಿಂದೂಗಳ ಬೈಬಲ್ಲೆಂದು ಮನುಧರ್ಮಶಾಸ್ತ್ರವನ್ನು ಗಾಂಧೀಜಿಯವರು ವಿಶ್ವಕ್ಕೆ ಹಿಂದೂಗಳು ಕೊಟ್ಟ ಕೊಡುಗೆ ಎಂಬುದಾಗಿ ಬಣ್ಣಿಸಿದ್ದನ್ನು ಅಂಬೇಡ್ಕರ್ ಕಟುವಾಗಿ ಟೀಕಿಸಿದರು". ಪವಿತ್ರಾಚರಣೆಗಳಿಂದ ಶೂದ್ರರನ್ನು ಮನು ಏಕೆ ಹೊರಗಿಟ್ಟ? ಶೂದ್ರರು ಸನ್ಯಾಸಿಗಳಾಗುವುದನ್ನು ಅವನು ನಿಷೇಧಿಸಿರುವುದಂತೂ ಒಗಟಿನಂತಿದೆ. ಸಾಮಾಜಿಕ ಅಸಮಾನತೆಯನ್ನು ಆತ ದೃಢವಾಗಿ ನಂಬುತ್ತಿದ್ದ. ಮತ್ತು ಧಾರ್ಮಿಕ ಸಮಾನತೆಯನ್ನು ಒಪ್ಪಿಕೊಳ್ಳುವುದರ ಅಪಾಯವೇನೆಂಬುದನ್ನು ಅವನು

ಚೆನ್ನಾಗಿ ತಿಳಿದಿದ್ದ. ದೇವರ ಎದುರಿನಲ್ಲಿ ನಾನು ಸಮನಾದರೆ ಭೂಮಿಯ ಮೇಲೆ ಏಕೆ ಸಮನಲ್ಲ".[115] ಎಂದೂ ಶೂದ್ರರು, ಅಸ್ಪೃಶ್ಯರು ಪ್ರಶ್ನಿಸಬಹುದೆಂದು ತನ್ನ ಸ್ಮೃತಿಯಲ್ಲಿ ಈ ಬಗೆಯ ನಿಷೇಧಗಳನ್ನು ಹೇರಿದ್ದಾನೆಂದು ಅಂಬೇಡ್ಕರ್ ನಂಬಿದ್ದರು. ಹಿಂದೂಧರ್ಮದ ಆಧಾರ ಗ್ರಂಥಗಳನ್ನೆಲ್ಲ ಬ್ರಾಹ್ಮಣರು ತಮ್ಮ ಉದರ ಪೋಷಣೆಗಾಗಿ ರಚಿಸಿಕೊಂಡ ಸಾಧನಗಳಾಗಿದ್ದವೆಂದು ಕವಿಗಳು ತಮ್ಮ ಆಸೆ-ಆಕಾಂಕ್ಷೆಗಳನ್ನು, ವೇದನೆಗಳನ್ನು ಅಭಿವ್ಯಕ್ತಿಗೊಳಿಸಿದ ಕವಿತೆಗಳಷ್ಟೇ ಹೊರತು ಅವುಗಳಿಗೆ ಅದರಾಚೆ ಹೆಚ್ಚಿನ ಮಹತ್ವವಿಲ್ಲ ಎಂದರು.

"ಅಗ್ನಿಹೋತ್ರ, ಮೂರು ವೇದಗಳು, ಸನ್ಯಾಸಾದಿಗಳು, ತ್ರಿದಂಡಗಳು, ಭಸ್ಮಲೇಪನ-ಇದನ್ನು ಬುದ್ಧಿಹೀನರು-ಪುರುಷಹೀನರು ತಮ್ಮ ಜೀವಿತಕ್ಕೋಸ್ಕರ ಸೃಷ್ಟಿಸಿಕೊಂಡಿದ್ದಾರೆ"[116] "ಸತ್ತವರಿಗೆ ಪ್ರೇತ ಕರ್ಮಗಳನ್ನು ಮಾಡುವುದು, ಬ್ರಾಹ್ಮಣರು ತಮ್ಮ ಜೀವಿತಕ್ಕೋಸ್ಕರ ಮಾಡಿಕೊಂಡಿರುವ ಉಪಾಯವಷ್ಟೆ ಹೊರತು ಅದರಿಂದ ಮತ್ತೇನೂ ಫಲವಿಲ್ಲ"- ಮೂರು ವೇದಗಳ ಕರ್ತೃಗಳು ಭಂಡ, ಧೂರ್ತ ಮತ್ತು ರಾಕ್ಷಸರು".[117] ಅಷ್ಟೇ ಅಲ್ಲ, ಮನುಷ್ಯನ ಸುಖ ಮತ್ತು ದುಃಖದ ಸಂದರ್ಭದಲ್ಲಿ ಬ್ರಾಹ್ಮಣ ತನ್ನ ಜೀವನೋಪಾಯಕ್ಕೆ ಬೇಕಾದ ಆಧಾರಗಳನ್ನು ನಿರ್ಮಿಸಿಕೊಂಡಿದ್ದಾನೆ ಎಂಬುದನ್ನು ಅಂಬೇಡ್ಕರ್ ತಮ್ಮ ಬರಹಗಳಲ್ಲಿ ವಿವರವಾಗಿ ಚರ್ಚಿಸಿ ಉಲ್ಲೇಖಿಸಿದ್ದಾರೆ.

ಬ್ರಾಹ್ಮಣರು ದೇವರುಗಳಲ್ಲಿ ಏಣಿ-ಶ್ರೇಣಿ, ಶ್ರೇಷ್ಠ-ಕನಿಷ್ಠನೆಂದು ತಮ್ಮ ಅನುಕೂಲಕ್ಕೆ ತಕ್ಕಂತೆ ಹೀಗೆ ಚಿತ್ರಿಸಿದ್ದಾರೆ-ಎನ್ನುವುದನ್ನು ಅಂಬೇಡ್ಕರ್ ಶಿವ, ಬ್ರಹ್ಮ, ಕೃಷ್ಣ, ವಿಷ್ಣುಗಳ ಸ್ಥಾನಗಳಲ್ಲಿ ಆಗಾಗ ಆಗಿರುವ ಸ್ಥಾನಪಲ್ಲಟಗಳನ್ನು ಕುರಿತು ಉಲ್ಲೇಖಿಸಿದ್ದಾರೆ. ಶಿವನನ್ನು ಒಮ್ಮೆ ದೇವತೆಗಳಲ್ಲೇ ಶ್ರೇಷ್ಠ ಎಂದರು-ಮುಂದೆ ಶಿವ ಯಜ್ಞ ಪದ್ಧತಿಗೆ ವಿರೋಧಿ ಎಂದು ಅವನ ಸ್ಥಿತಿಯನ್ನು ತೀರ ಚಿಂತಾಜನಕಗೊಳಿಸಿದರು. ಇದೇ ಗತಿಯು ಬ್ರಹ್ಮನಿಗೂ ಆಗಿದೆ. ಆದ್ದರಿಂದ ಹಿಂದೂಧರ್ಮದ ದೇವತೆಗಳೊಳಗೆ ಅಪಾರ ವೈರುಧ್ಯ, ಅಸಮಾನತೆಗಳನ್ನು ಸೃಷ್ಟಿಸುವ ಹಿಂದೂಧರ್ಮ ಮನುಷ್ಯರಿಗೆ ಹೇಗೆ ಸಮಾನತೆ ಕೊಡಬಲ್ಲದೆಂದು ಅಂಬೇಡ್ಕರ್ ಪ್ರಶ್ನೆ ಮಾಡಿ" ಹಿಂದೂಧರ್ಮ ಸೋದರತೆಯನ್ನು ಬೋಧಿಸುವ ಧರ್ಮವಲ್ಲ. ಐಕ್ಯವನ್ನು ಬೋಧಿಸುವ ಧರ್ಮವಲ್ಲ ಬದಲಿಗೆ ಅದು ಭಿನ್ನತೆಯನ್ನು ವರ್ಣಾಶ್ರಮಗಳನ್ನು ಬೋಧಿಸಿ ಬೇರೆ ಬೇರೆ ವರ್ಗ ಪ್ರಜ್ಞೆಯನ್ನು ರೂಢಿಸುವ ಧರ್ಮ".[118] ಎಂದು ಕರೆದಿದ್ದಾರೆ. ಇದನ್ನು ಸ್ಪಷ್ಟಪಡಿಸಲು ಅಂಬೇಡ್ಕರ್ ಶಂಕರಾಚಾರ್ಯರ ಉದಾಹರಣೆ ತೆಗೆದುಕೊಳ್ಳುತ್ತಾರೆ. ಶಂಕರಾಚಾರ್ಯರು "ಸರ್ವಂ ಖಲ್ವಿದಂ ಬ್ರಹ್ಮ" "ಅಹಂ ಬ್ರಹ್ಮಾಸ್ಮಿ" ಎಂದು ಜಗತ್ತೆಲ್ಲ ಬ್ರಹ್ಮಮಯ, ಪ್ರತಿಯೊಬ್ಬನಲ್ಲೂ ಆ ಬ್ರಹ್ಮನ ಅಂಶವಿದೆ ಎಂದು ಬೋಧಿಸುವ ಶಂಕರಾಚಾರ್ಯರೇ ಬ್ರಾಹ್ಮಣವಾದದ ಸಾಮಾಜಿಕ ಅಸಮಾನತೆಯನ್ನು ಎತ್ತಿ ಹಿಡಿದರು. ಇಂಥ ದ್ವಂದ್ವಸಿದ್ಧಾಂತವನ್ನು ರಚಿಸಿದ್ದಕ್ಕಾಗಿ ಹುಚ್ಚನು ಮಾತ್ರ ಹೆಮ್ಮೆ ಪಟ್ಟಾನು". "ಬ್ರಾಹ್ಮಣನು ನಿಜವಾಗಿ ಗೋ ಸಮಾನನು. ದನವು ಎಲ್ಲವನ್ನೂ ತಿಂದೂ ದನವಾಗೇ ಉಳಿಯುವ ಹಾಗೆ ಇವನೂ ಏನೆಲ್ಲ ತಿಂದೂ ಸಿದ್ಧಾಂತವನ್ನು ಸ್ವೀಕರಿಸಿಯೂ ಬ್ರಾಹ್ಮಣನಾಗೇ ಉಳಿಯುತ್ತಾನೆ"[119] ಎಂದು ಕಟುವಾಗಿ ಅಂಬೇಡ್ಕರ್ ಬರೆಯುತ್ತಾರೆ.

ಯುಗಗಳ ಕಲ್ಪನೆ ಇದೂ ಕೂಡಾ ಚಾತುರ್ವರ್ಣ್ಯ ಪದ್ಧತಿಯನ್ನು ಬಲಪಡಿಸಲಿಕ್ಕಾಗಿ ಬ್ರಾಹ್ಮಣರು ಸೃಷ್ಟಿಸಿದ ಕಲ್ಪನೆ ಎನ್ನುವ ಅಂಬೇಡ್ಕರ್‌ರವರು ಕಲಿಯುಗ ವಿನಾಶಕಾರವಾದದ್ದು ಎಂದು ಹೇಳುವುದು

ಬ್ರಾಹ್ಮಣರ ದೃಷ್ಟಿಯಿಂದ ಸರಿ. ಆದರೆ ಅಸ್ಪೃಶ್ಯರ ದೃಷ್ಟಿಯಲ್ಲಿ ಇದು ಅವರ ಬಿಡುಗಡೆಯ ಯುಗ, ಪ್ರಗತಿಯೆಡೆಗೆ ನಡೆಯುವ ಯುಗ "ನೈತಿಕತೆಯ ದೃಷ್ಟಿಯಿಂದ ಕಲಿಯುಗವೇ ಉತ್ತಮ ಎಂದು ಸ್ವಾಭಾವಿಕವಾಗಿಯೇ ಹೇಳಬಹುದು. ಈ ಯುಗದಲ್ಲಿ ನೀತಿನಿಯಮಗಳು ನಾಶವಾಗುತ್ತಿವೆ ಎಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ ಮಾತ್ರವಲ್ಲ ಮೂರ್ಖತನದಿಂದ ಕೂಡಿದೆ"[120] ಎಂದ ಅಂಬೇಡ್ಕರ್ ಪಟ್ಟಭದ್ರರು ಸೃಷ್ಟಿಸಿದ ನೀತಿ ನಿಯಮಗಳು ಈ ಕಾಲದಲ್ಲಿ ನಾಶವಾಗುತ್ತಿವೆ. ಅದು ಶುಭಸೂಚಕವೆಂದು ಅಭಿಪ್ರಾಯಪಟ್ಟರು.

ಅಸ್ಪೃಶ್ಯರ ದುರ್ಗತಿಗೆ "ಹಿಂದೂ ಧರ್ಮ ಮತ್ತು ಅದರ ಉಪದೇಶಗಳೇ ಮುಖ್ಯ ಕಾರಣ ಎಂದು ಘೋಷಿಸಿದರು -ಅಂಬೇಡ್ಕರ್ 1936 ರಲ್ಲಿ ಜಾತ್‌ಪಾತ್ ತೊಡಕ್ ಮಂಡಲದವರು ಲಾಹೋರ್‌ದಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಮಾತನಾಡುತ್ತ ಅಂಬೇಡ್ಕರ್ .... ತಾವು ಹಿಂದೂವಾಗಿ ಮಾಡುತ್ತಿರುವ ಕೊನೆಯ ಭಾಷಣವಿದು ಎಂದು ಹೇಳುತ್ತ "ನಾನೆಂತಹವನು ನೋಡಿ, ಹಿಂದೂಗಳನ್ನು ಟೀಕಿಸಿದವನು ನಾನು. ಅವರಿಗೆ ಗೌರವಾಸ್ಪದವೆನಿಸಿದ ಮಹಾತ್ಮರ ಅಧಿಕಾರವನ್ನು ಪ್ರಶ್ನಿಸಿದವನು ನಾನು. ಹಿಂದೂಗಳು ನನ್ನನ್ನು ದ್ವೇಷಿಸುತ್ತಾರೆ. ಅವರ ದೃಷ್ಟಿಯಲ್ಲಿ ನಂದನದಲ್ಲಿ ಹೊಕ್ಕ ದುಷ್ಟ ಸರ್ಪ ನಾನು" -ಅವರ ಮಾತು ಸತ್ಯ - ಅಂಬೇಡ್ಕರ್ ಹಿಂದೂ ಧರ್ಮ, ಜಾತಿ ಪದ್ಧತಿ, ವರ್ಣಾಶ್ರಮ .... ಅದರ ಎಲ್ಲ ಸಾಹಿತ್ಯದಲ್ಲಿ ಹೊಕ್ಕು ಸರ್ಪದಂತೆ ಪೂತ್ಕರಿಸಿದರು ಹಾಗೂ ಭುಸುಗುಟ್ಟಿದವರು ಎಂದರೆ ತಪ್ಪಾಗಲಿಕ್ಕಿಲ್ಲ.

ಮತ್ತೊಂದು ಸಂದರ್ಭದಲ್ಲಿ ಅಂಬೇಡ್ಕರ್ ಹೀಗೆ ನುಡಿದಿದ್ದಾರೆ. "ಹಿಂದೂಗಳು ನನ್ನನ್ನು ಶತ್ರುವಾಗಿ ಕಾಣುವುದು ಅವಿವೇಕ. ಅವರನ್ನು ನಾನು ಸದಾ ಪ್ರೀತಿಸುತ್ತಲೇ ಇರುವೆ. ಭಾರತೀಯ ತತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿರುವ ನಾನು ಅವರಲ್ಲಿರುವ ಕೊಳಕನ್ನು ಶುದ್ಧಿ ಮಾಡಿ, ಪರಿಶುದ್ಧವಾದ ಜನಾಂಗವನ್ನಾಗಿ ತಯಾರು ಮಾಡಲು ಅವರ ದುರಾಚಾರಗಳ ವಿರುದ್ಧ ಹೋರಾಟ ನಡೆಸಿರುವೆ. ನನ್ನನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡಿರುವರು. ಎಂದಿಗಾದರೂ ನನ್ನ ಮಾರ್ಗವೇ ಸರಿಯಾದುದು ಎಂದು ತಪ್ಪದೇ ತಿಳಿಯುವ ಕಾಲ ಬರುತ್ತೆ"[121]-ಆ ಕಾಲ ಈಗ ಬಂದಿದೆ ಎಂದರೆ ತಪ್ಪಾಗಲಾರದು. ವೈಚಾರಿಕ ಪ್ರಜ್ಞೆ ಬೆಳೆದಂತಹ ಭಾರತೀಯರು ಹಿಂದೂ ಧರ್ಮದ ಒಳಾರ್ಥಗಳನ್ನೂ -ಗೂಡಾರ್ಥಗಳನ್ನೂ ಅರಿತುಕೊಂಡು ಅಂಬೇಡ್ಕರ್‌ರವರ ವೈಚಾರಿಕತೆಯನ್ನು ಒಪ್ಪುತ್ತಿದ್ದಾರೆ.

ಡಾ। ಅಂಬೇಡ್ಕರ್‌ರು ತಮ್ಮ ಮೊದಲ ಘಟ್ಟದ ಹೋರಾಟದಲ್ಲಿ ಹಿಂದೂಧರ್ಮದ ಸುಧಾರಣೆಗಾಗಿ ಹೋರಾಟ ನಡೆಸಿದರು. ಆದರೆ ಹಿಂದೂಧರ್ಮ ಮತ್ತು ಹಿಂದೂಗಳಲ್ಲಿ ಬದಲಾವಣೆ ಅಸಾಧ್ಯವೆಂದು ತಿಳಿದು ಅಂಬೇಡ್ಕರ್‌ರು ಹಿಂದೂಧರ್ಮವನ್ನು ತ್ಯಜಿಸುವ ನಿರ್ಧಾರ ಕೈಗಂಡರು. 1935 ಅಕ್ಟೋಬರ್ 13 ರಂದು ನಾಸಿಕನ ಯೋಲ್ಹಾದಲ್ಲಿ ಮುಂಬೈ ಪ್ರಾಂತದ ದಲಿತರನ್ನುದ್ದೇಶಿಸಿ ಮಾತನಾಡುವಾಗ "ನಾನು ಹಿಂದೂವಾಗಿ ಹುಟ್ಟಿದ್ದೇನೆ ನಿಜ. ಆದರೆ ನಾನು ಹಿಂದೂವಾಗಿ ಸಾಯಲಾರೆ" ಎಂಬ ದೃಢ ಸಂಕಲ್ಪ ಮಾಡಿದರು. 1956 ಅಕ್ಟೋಬರ್ 14 ರಂದು ನಾಗಪುರದಲ್ಲಿ ಮತಾಂತರ ಮಾಡಿ "ಬೌದ್ಧಧರ್ಮ" ಸೇರಿದರು. ಬೌದ್ಧಧರ್ಮದ ಉದಾತ್ತ ಬೋಧನೆಗಳಾದ "ಸಮಾನತೆ, ಕರುಣೆ, ಪ್ರಜ್ಞಾ, ಅಹಿಂಸೆ"ಗಳಿಂದ ತಾವು ಆಕರ್ಷಿತರಾದರೆಂದು ತಮ್ಮ "ಬುದ್ಧ ಮತ್ತು ಅವನ ಧರ್ಮ" ಎಂಬ ಕೃತಿಯಲ್ಲಿ ವಿವರಿಸಿದ್ದಾರೆ.

ಹಿಂದೂಧರ್ಮದ ಅನಿಷ್ಟಗಳನ್ನು ತೊರೆದು ಹಾಕಲು ಅವರು ಶ್ರಮಿಸಿದ್ದು ಅಪಾರ. ಆದರೆ ಇಂದಿಗೂ ಸಹಿತ ಹಿಂದೂ ಧರ್ಮದಲ್ಲಿ ಅಂತಹ ಅನಿಷ್ಟಗಳಿಗೇನು ಕೊರತೆ ಇಲ್ಲ. ಪ್ರಸ್ತುತ ಸಂದರ್ಭವನ್ನು ಗಮನಿಸಿದಾಗ ಹಿಂದೂ ಧರ್ಮದಲ್ಲಿರುವ ಕೊಳಕು ಕಂಡು ಬರುವುದು ಸಾಮಾನ್ಯ. ಆದ್ದರಿಂದ ಅಂದಿನ ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಹೋರಾಟದ ಚಳುವಳಿ ನಿರಂತರಗೊಂಡರೆ ಒಳಿತು ಅನಿಸುತ್ತದೆ. ಮನುಷ್ಯರಿಂದ ಉದಯವಾದ ಧರ್ಮಗಳು ಮನುಷ್ಯ ಕುಲವನ್ನೇ ನಾಶಗೊಳಿಸುತ್ತಿರುವುದು ಆಶ್ಚರ್ಯಕರ ಸಂಗತಿ.

ಹಿಂದೂಧರ್ಮದ ಕ್ರೌರ್ಯಕ್ಕೆ ತುತ್ತಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಂತಹ ಅಸ್ಪೃಶ್ಯರ ಬದುಕಿನಲ್ಲಿ ಡಾ। ಅಂಬೇಡ್ಕರ್ ಆಶಾಕಿರಣವಾದರು. ತಮ್ಮ ಸತತ ಹೋರಾಟದಿಂದಾಗಿ ಅಸ್ಪೃಶ್ಯರು ಭಾರತೀಯ ಸಮಾಜದಲ್ಲಿ ತಲೆ ಎತ್ತಿ ಸ್ವಾಭಿಮಾನದ ಬದುಕು ನಡೆಸಲು ಸ್ಫೂರ್ತಿಯಾದರು. ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳು ಹಾಗೂ ಶೋಷಣೆಗಳ ವಿರುದ್ಧ ಸಿಡಿದೆದ್ದು ಅಸ್ಪೃಶ್ಯತೆಯಂಥ ಹೀನಾಯವಾದ ವ್ಯವಸ್ಥೆಯ ಸಂಕೋಲೆಗಳನ್ನು ಕಿತ್ತೆಸೆಯಲು ದೃಢಸಂಕಲ್ಪ ಮಾಡಿದರು. ಪ್ರಸ್ತುತ ಭಾರತದಲ್ಲಿ ಅಸ್ಪೃಶ್ಯರು ಸ್ವಾಭಿಮಾನ ಮತ್ತು ಧೈರ್ಯದಿಂದ ಬದುಕು ಸಾಗಿಸುತ್ತಿರುವುದು ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ಸಿದ್ಧಾಂತದ ಫಲದಿಂದ. ಅಂಬೇಡ್ಕರ್‌ರವರ ಸಿದ್ಧಾಂತ ಕೇವಲ ದಲಿತರ ವಿಮೋಚನಾ ಸಿದ್ಧಾಂತವಾಗಿರದೇ ಅದು ವಿಶ್ವದ ಶೋಷಿತ ಜನ ಸಮುದಾಯಗಳ ವಿಮೋಚನಾ ಸಿದ್ಧಾಂತವಾಗಿದೆ. ಭಾರತದ ಪ್ರಸ್ತುತ ಸಮಸ್ಯೆಗಳ ನಿವಾರಣೆಗೆ ಅಂಬೇಡ್ಕರ್‌ರವರ ಸಿದ್ಧಾಂತದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.

4.8 ವೇದಗಳು, ಯಜ್ಞ-ಯಾಗಾದಿಗಳು, ವೈದಿಕ ಆಚರಣೆಗಳು, ಕರ್ಮಸಿದ್ಧಾಂತಗಳ ವಿರುದ್ಧ ಅಂಬೇಡ್ಕರ್‌ರವರ ಪ್ರತಿಭಟನಾತ್ಮಕ ವಿಚಾರಗಳು :

ವೇದಗಳು :

ಅಂಬೇಡ್ಕರ್ ವೈದಿಕಧಾರ್ಮಿಕ ವ್ಯವಸ್ಥೆಯ ವಿರುದ್ಧ ಯುದ್ಧವನ್ನೇ ಸಾರಿದರು. ವೈದಿಕಮತೀಯ ಗ್ರಂಥಗಳಾದ ವೇದಗಳು, ಧರ್ಮಶಾಸ್ತ್ರಗಳು ಮತ್ತು ಪುರಾಣಗಳ ಕುರಿತು ವೈಜ್ಞಾನಿಕ ವಿಮರ್ಶೆಯನ್ನು ಬರೆದರು. ಅವು ಎಷ್ಟು ಅವೈಚಾರಿಕ -ಅವೈಜ್ಞಾನಿಕ ಎಂಬುದನ್ನು ಜನತೆಗೆ ಮನದಟ್ಟ ಮಾಡಿಕೊಟ್ಟರು. ಅಷ್ಟೇ ಅಲ್ಲ. ಅವುಗಳಿಂದುಂಟಾದ ಅಸಮಾನತೆ -ಶೋಷಣೆಗಳ ವಿರುದ್ಧ ಅವಿಶ್ರಾಂತ ಹೋರಾಟ ಮಾಡಿದರು. ತಮ್ಮ ಸುಧಾರಣಾವಾದೀ ವಿಚಾರಗಳಿಂದ ಹಿಂದೂ ಸಮಾಜಕ್ಕೆ ಭೂಕಂಪದ ಬಿಸಿ ತಗಲುವಂತೆ ಮಾಡಿದರು. ಅಂತೆಯೇ ನೆಹರೂ ಅವರು "ಹಿಂದೂ ಸಮಾಜದೊಳಗಿನ ದಮನಶೀಲ ಪ್ರವೃತ್ತಿಯ ವಿರುದ್ಧದ ಬಂಡಾಯದ ಪ್ರತೀಕ" ಎಂದು ಅಂಬೇಡ್ಕರ್‌ರವರನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಸ್ವತಃ ನೋವುಂಡು ತನ್ನವರ ಪಾಲಿಗೆ ನಲಿವು ತರಲು ಯತ್ನಿಸಿದರು. ತಮಗಾದ ಅನ್ಯಾಯ ಮತ್ತೊಬ್ಬರಿಗೆ ಉಂಟಾಗಲಾರದು ಎಂಬ ಕಾರಣಕ್ಕೆ ವ್ಯವಸ್ಥೆಯ ಲೋಪದೋಷಗಳನ್ನೂ, ಸಾಮಾಜಿಕ ಅನಿಷ್ಟಗಳನ್ನೂ ಸರಿಪಡಿಸಲು ಅಂಬೇಡ್ಕರ್ ಪ್ರಯತ್ನಿಸಿದರು.

ವೈದಿಕ ತತ್ವಜ್ಞಾನದ ಬೆಳವಣಿಗೆಯಲ್ಲಿ ವೇದ ಒಂದು ಶಿಖರವಾದರೆ ಉಪನಿಷತ್ತು ಇನ್ನೊಂದು ಶಿಖರ. ಒಂದಕ್ಕೆ ಕರ್ಮಕಾಂಡವೆಂದು ಇನ್ನೊಂದಕ್ಕೆ ಜ್ಞಾನಕಾಂಡವೆಂದು ಕರೆಯಲಾಗುತ್ತದೆ. ಈ ಕುರಿತು, ತಮ್ಮ ವಿಚಾರವನ್ನು ಭಗವತ್ ಶರಣ ಉಪಾಧ್ಯಾಯರು ತಮ್ಮ "ಭಾರತೀಯ ಸಮಾಜದ ಐತಿಹಾಸಿಕ-ವಿಶ್ಲೇಷಣೆ " ಎಂಬ ಪುಸ್ತಕದಲ್ಲಿ "ವೇದದಿಂದ ಬ್ರಾಹ್ಮಣಗಳತ್ತ, ಬ್ರಾಹ್ಮಣದಿಂದ ಉಪನಿಷತ್ತುಗಳತ್ತ, ಉಪನಿಷತ್ತುಗಳಿಂದ ಸಾಂಖ್ಯವೇ ಮೊದಲಾದ ಬ್ರಾಹ್ಮಣ ದರ್ಶನಗಳತ್ತ ಹಾಗೂ ಇವುಗಳ ನಡುವೆ ಪರಸ್ಪರ ಹೋರಾಟ ಪ್ರಕ್ರಿಯೆ, ಸಿದ್ಧಾಂತ ಸೃಷ್ಟಿ ಇದೇ ದಾರ್ಶನಿಕ ಇತಿಹಾಸ ಮುನ್ನಡೆಯ ಸಂಕ್ಷಿಪ್ತ ಇತಿಹಾಸ ಎನ್ನುತ್ತಾರೆ". ವೇದದ ಯಜ್ಞ ಬ್ರಾಹ್ಮಣ ಚಿಂತನೆಯಾದರೆ ಬ್ರಹ್ಮ ರಹಸ್ಯ ಉಪನಿಷತ್ತಿನ ಚಿಂತನೆ ಎಂಬುದು ಅವರ ಅಭಿಪ್ರಾಯ.[122]

ನ್ಯಾಯಶಾಸ್ತ್ರದಲ್ಲಿ ಧರ್ಮದ ಉಗಮಕ್ಕೆ ನಾಲ್ಕು ಮೂಲಗಳನ್ನು ಗುರುತಿಸಲಾಗಿದೆ. ವೇದ, ಸ್ಮೃತಿ, ಸಂಪ್ರದಾಯ, ಆತ್ಮಸಾಕ್ಷಿ (ಮನು ಸ್ಮೃತಿ-1-108, 2-12) ಎಲ್ಲಕ್ಕೂ ವೇದವೇ ಆಧಾರ. ಸ್ಮೃತಿ ಮತ್ತು ಸಂಪ್ರದಾಯ ವೇದದ ಮೇಲೆ ನಿಂತಿದೆ. ಸ್ಮೃತಿ ಸಾಹಿತ್ಯದ ಮುಖ್ಯ ಭಾಗ ಧರ್ಮಶಾಸ್ತ್ರ. ಇದರ ಗುರಿ ವೈದಿಕ ಹಿಂದೂಗಳಿಗೆ ವೇದದಲ್ಲಿರುವ ಲೌಕಿಕ ಮತ್ತು ಅಲೌಕಿಕ ಧರ್ಮವನ್ನು ತಿಳಿಯ ಹೇಳುವುದು ಹಾಗೂ ವಿಶ್ವದಲ್ಲಿ ಅವರ ಅಸ್ತಿತ್ವವನ್ನು ಅರಿವು ಮಾಡಿ ಕೊಡುವುದಾಗಿದೆ. ಸ್ಮೃತಿಗಳಲ್ಲಿ ಮುಖ್ಯವಾದದ್ದು "ಮನುಸ್ಮೃತಿ". ಮನುಸ್ಮೃತಿಯನ್ನು ಕುರಿತು ಡಾ।ಅಂಬೇಡ್ಕರ್ ಅವರು "ಮನುಸ್ಮೃತಿ - ಕಾನೂನುಶಾಸ್ತ್ರ, ಧರ್ಮಶಾಸ್ತ್ರ ಮತ್ತು ನೀತಿ ಶಾಸ್ತ್ರ ಎಲ್ಲಾ ಒಟ್ಟಿಗೆ ಸೇರಿರುವ ಗ್ರಂಥವಾಗಿದೆ. ಅದು ನೀತಿಶಾಸ್ತ್ರ, ಏಕೆಂದರೆ ಅದು ಮನುಷ್ಯನ ಕರ್ತವ್ಯಗಳನ್ನು ಹೇಳುತ್ತದೆ. ಅದು ಧರ್ಮಶಾಸ್ತ್ರ, ಏಕೆಂದರೆ ಹಿಂದೂಧರ್ಮದ ಜೀವವಾದ ಜಾತಿಯ ಬಗ್ಗೆ ಹೇಳುತ್ತದೆ. ಅದು ಕಾನೂನು ಶಾಸ್ತ್ರ, ಏಕೆಂದರೆ ಕರ್ತವ್ಯ ಭ್ರಷ್ಟತೆಗೆ ಶಿಕ್ಷೆ ವಿಧಿಸುತ್ತದೆ" ಎಂದು ವಿಶ್ಲೇಷಿಸುತ್ತಾರೆ.

"ಹಿಂದೂಧರ್ಮವೆಂದರೆ ಗೊಂದಲಮಯ, ಮೂಢನಂಬಿಕೆಗಳ, ಹಕ್ಕುಗಳ ಕ್ರೋಢೀಕರಣದ, ಆರಾಧನೆಗಳ, ನಂಬಿಕೆಗಳ ಸಂಪ್ರದಾಯ ಮತ್ತು ಪುರಾಣಗಳ ಅಸ್ತವ್ಯಸ್ತ ಕಗ್ಗಟ್ಟು. ಇವುಗಳಿಗೆ ಬ್ರಾಹ್ಮಣರ ಧರ್ಮಗ್ರಂಥಗಳು ಮತ್ತು ಶಾಸನಗಳು ಅಧಿಕಾರ ಮುದ್ರೆಯೊತ್ತಿವೆ ಮತ್ತು ಇವುಗಳನ್ನು ಬ್ರಾಹ್ಮಣರ ಉಪದೇಶಗಳಿಂದ ಪ್ರಚುರಪಡಿಸಲಾಗಿದೆ"-ಎಂದು ಸರ್. ಎ.ಲ್ಯಾಲ್ ವಿವರಣೆ ನೀಡಿದ್ದಾರೆ.

ಇದನ್ನು ವಿಶ್ಲೇಷಿಸುತ್ತ ಡಾ।ಅಂಬೇಡ್ಕರ್‌ರವರು ಹಿಂದೂಧರ್ಮಕ್ಕೆ ಸಂಬಂಧಿಸಿದಂತೆ ಅದರ ಸಾರಭೂತ ಅಂಶವೇನು ಎಂಬ ಬಗ್ಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಜಾತಿ ಹಿಂದೂಧರ್ಮದ ಒಂದು ಏಕೈಕ ಸಾರಭೂತವಾದ ಅವಿಭಾಜ್ಯ ಅಂಗವೆನ್ನುವುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಜಾತಿಸಿದ್ಧಾಂತವನ್ನು ಮನು ಪ್ರತಿಪಾದಿಸುವಷ್ಟರ ಮಟ್ಟಿಗೆ ಹಾಗೂ ಜಾತಿಸಿದ್ಧಾಂತವೇ ಹಿಂದೂಧರ್ಮದ ತಿರುಳಾಗಿರುವಷ್ಟರ ಮಟ್ಟಿಗೆ ಮನುಸ್ಮೃತಿಯನ್ನು ಧಾರ್ಮಿಕ ಗ್ರಂಥವೆಂದು ಒಪ್ಪಿಕೊಳ್ಳಬೇಕಾಗುತ್ತದೆ.-ಮನುಸ್ಮೃತಿ ಸಾಮಾಜಿಕ ರೀತಿ-ನೀತಿ, ವ್ಯವಹಾರ, ಕರ್ತವ್ಯಗಳು, ನಾಲ್ಕು ವರ್ಣಗಳು, ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬ್ರಾಹ್ಮಣ ಶ್ರೇಷ್ಠ. ಶೂದ್ರ ಹಾಗೂ ಸ್ತ್ರೀ ಕನಿಷ್ಠ".[123] ಎಂಬ ವಿವರಗಳಿವೆ. ಹೀಗಾಗಿ ಅಂಬೇಡ್ಕರ್‌ರವರು ಅಸಮಾನತೆ ಬೋಧಿಸುವ ಮನಸ್ಮೃತಿಯನ್ನು ಸಾಂಕೇತಿಕವಾಗಿ ದಹಿಸಿದರು.

ಅತ್ಯಂತ ಅಮಾನವೀಯ ಧರ್ಮಶಾಸ್ತ್ರವೆಂದರೆ ಮನುಧರ್ಮಶಾಸ್ತ್ರ. ಇದೇ ಹಿಂದೂ ಧರ್ಮವನ್ನು ಜಾಲಾಡಿದ ಅಂಬೇಡ್ಕರ್ "ಹಿಂದೂ ಧರ್ಮವೇ; ನಿನ್ನ ಹೆಸರೇ ಅಸಮಾನತೆ" ಎಂದು ವ್ಯಾಖ್ಯಾನಿಸಿದ್ದಾರೆ.- "ಹಿಂದೂಧರ್ಮದ ತತ್ವಜ್ಞಾನ" ಹಾಗೂ "ಹಿಂದೂಧರ್ಮದ ಒಗಟುಗಳು" ಎಂಬ ಲೇಖನದಲ್ಲಿ ಡಾ।ಅಂಬೇಡ್ಕರ್ ಹಿಂದೂಧರ್ಮದೊಳಗೆ ಅಡಗಿರುವ ಅಮಾನವೀಯ ಸಂಗತಿಗಳನ್ನು ಬಯಲಿಗೆಳೆದಿದ್ದಾರೆ. "ಮೂರು ವೇದಗಳ ಕರ್ತೃಗಳು-ಭಂಡ, ಧೂರ್ತ ಮತ್ತು ರಾಕ್ಷಸರು": ಎಂದು ವೇದಗಳನ್ನು ಕರ್ತೃಗಳನ್ನು ಜರಿದ ಅಂಬೇಡ್ಕರ್‌ರು ಬ್ರಾಹ್ಮಣರು ಏಕಾಏಕಿ ವೇದಗಳು ದೋಷರಹಿತವೆಂದು ಹಾಗೂ ಅದನ್ನು ಪ್ರಶ್ನಿಸಬಾರದೆಂದು ಘೋಷಿಸಲು ಅದರೊಳಗೆ ಅಡಗಿದ್ದ ವಿಚಾರಗಳು ಅವರುಗಳಿಗೆ ಅನುಕೂಲಕರವಾಗಿದ್ದವೆಂಬ ಕಾರಣದಿಂದ ಎಂದು ವಿವರಿಸುತ್ತಾರೆ.

ಅಂಬೇಡ್ಕರ್‌ರು ಹೇಳುವಂತೆ "ಹಿಂದೂಗಳ ಪಾಲಿಗೆ ಧರ್ಮವೆಂದರೆ ಮತ್ತೇನೂ ಅಲ್ಲ -ಹಿಂದೂ ಧರ್ಮ ಶಾಸನಕಾರರು ಹೇಳಿದ ವಿಧಿ ನಿಷೇಧಗಳು, ವೇದಗಳಲ್ಲಿ ಹೇಳಲಾದ ಯಜ್ಞಯಾಗಗಳ ಕ್ರಮಗಳು ಮತ್ತು ಸೂತ್ರಕಾರರು ನಿರ್ದೇಶಿಸಿದ ಸಾಮಾಜಿಕ, ರಾಜಕೀಯ ಹಾಗೂ ಶೌಚ-ಅಶೌಚ ನಿರ್ಣಾಯಕ ನಿಬಂಧನೆಗಳು. ಇವೆಲ್ಲವುಗಳ ಮಿಶ್ರಣವಷ್ಟೇ -ಇಷ್ಟನ್ನು ಬಿಟ್ಟರೆ ಹಿಂದೂ ಧರ್ಮವೆಂಬುದೇನೂ ಇಲ್ಲವೆಂದು"ಹೇಳುತ್ತಾರೆ.[124] ಆದಕ್ಕಾಗಿ ಅವರು "ಶಾಸ್ತ್ರ ಮತ್ತು ಸ್ಮೃತಿಗಳ ಯಮಹಿಡಿತದಿಂದ ಹಿಂದೂಸಮಾಜವನ್ನು ವಿಮೋಚನೆಗೊಳಿಸಬೇಕು ಎನ್ನುತ್ತಾರೆ. "ಪುರೋಹಿತಶಾಹಿ ಮೌಲ್ಯವ್ಯವಸ್ಥೆಯಲ್ಲಿ ಪ್ರಸ್ಥಾನಗಳಾದ ವೇದ, ಶಾಸ್ತ್ರ, ಪುರಾಣಗಳು ಭರತ ಖಂಡವನ್ನು ಆಳಲಿಕ್ಕೆ ಸಾಧ್ಯವಿಲ್ಲ" ಎಂಬುದಾಗಿ ಅಂಬೇಡ್ಕರ್‌ರು ಅಂದು ಉದ್ಘೋಷಿಸಿದರು. ಇಲ್ಲಿನ ತುಂಬಾ ಕುತೂಹಲದ ಸಂಗತಿ ಎಂದರೆ, ಅದೇ ವೈದಿಕಧರ್ಮದ ವೇದಶಾಸ್ತ್ರ, ಪುರಾಣಾದಿಗಳನ್ನು ಬಸವಣ್ಣ ಮತ್ತು ಅಲ್ಲಮಪ್ರಭು ಪ್ರಶ್ನಿಸಿದ್ದಕ್ಕೂ ಜ್ಯೋತಿಭಾಫುಲೆ ಮತ್ತು ಅಂಬೇಡ್ಕರ್‌ರು ಪ್ರಶ್ನಿಸಿದ್ದಕ್ಕೂ ಮೂಲಭೂತ ನೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಿರುವುದನ್ನು ಗಮನಿಸಬೇಕು ".

ಬಕಲ್ ತನ್ನ 'ಹಿಸ್ಟರಿ ಆಫ್ ಸಿವಿಲೈಜೇಷನ್' ನಲ್ಲಿ ಹೀಗೆನ್ನುತ್ತಾನೆ. "ಸಂದೇಹ ಮೂಗು ತೂರಿಸಿದ ನಂತರವೇ ಸಂಶೋಧನೆ ಪ್ರಾರಂಭವಾಗಬಲ್ಲದು. ಆದ್ದರಿಂದ, ಸಂದೇಹಿಸುವ ಈ ಕ್ರಿಯೆಯು ಎಲ್ಲ ಪ್ರಗತಿಯ ಬೇರು ಅಥವಾ ಎಲ್ಲ ಸಂದರ್ಭಗಳಲ್ಲಿಯೂ ಅಗತ್ಯವಾದ ಒಂದು ಪೂರ್ವನಿಯಾಮಕ"- ಆದರೆ ಬ್ರಾಹ್ಮಣರು ಸಂದೇಹಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಏಕೆಂದರೆ ಅವರು ಜನಸಾಮಾನ್ಯರಲ್ಲಿ ಕುಯುಕ್ತಿಪೂರ್ವಕವಾಗಿ ಒಂದು ಕುರುಡು ನಂಬಿಕೆಯನ್ನು ಅಂದರೆ ವೇದಗಳಲ್ಲಿ ತಪ್ಪೇ ಇಲ್ಲ ಎಂಬ ನಂಬಿಕೆಯನ್ನು ಹರಡಿದ್ದಾರೆ. ಹಿಂದೂಗಳು ಬುದ್ಧಿ ಬೆಳೆಯದೇ ಹಾಗೇ ನಿಂತಿದ್ದರೆ ಮತ್ತು ಹಿಂದೂ ನಾಗರೀಕತೆ ಮತ್ತು ಸಂಸ್ಕೃತಿ ನಿಂತ ಹಾಗೂ ಕೊಳೆತ ನೀರಾಗಿದ್ದರೆ ಅದಕ್ಕೆ ಕಾರಣವಾದ ಈ ಕುರುಡು ನಂಬಿಕೆಯನ್ನು ಬುಡ ಮತ್ತು ಬೇರು ಸಮೇತ ನಾಶ ಮಾಡಬೇಕು. ಭಾರತದ ಪ್ರಗತಿಯಾಗಬೇಕಾದರೆ ಹಾಗೆ ಮಾಡಲೇಬೇಕು. ವೇದಗಳು ಯೋಗ್ಯತೆಯಿಲ್ಲದ ಪುಸ್ತಕಗಳು. ಅವುಗಳನ್ನು ದೋಷರಹಿತವಾಗಲೀ, ಪವಿತ್ರವೆಂದಾಗಲೀ ಕರೆಯಲು ಕಾರಣವೇ ಇಲ್ಲ. ಬ್ರಾಹ್ಮಣರು ಅವುಗಳಿಗೆ ಪಾವಿತ್ರ್ಯವನ್ನು ದೋಷಾರಾಹಿತ್ಯವನ್ನೂ ಆರೋಪಿಸಲು ಒಂದೇಕಾರಣವಿದೆ. ಅದೆಂದರೆ, ಅವರು ಆಮೇಲೆ ಪುರುಷಸೂಕ್ತವನ್ನು ವೇದಗಳಿಗೆ ಸೇರಿಸಿದ ಕಾರಣ, ವೇದಗಳು ಅವರನ್ನು ಭೂಮಿಯ ಮೇಲಿನ ಪ್ರಭುಗಳನ್ನಾಗಿ ಮಾಡಿವೆ. ಈ ಯೋಗ್ಯತೆಯಿಲ್ಲದ ಪುಸ್ತಕಗಳಲ್ಲಿ ವೈರಿಗಳನ್ನು ನಾಶ ಮಾಡಬೇಕೆಂದೂ ಅವರ

ಸ್ವತ್ತನ್ನು ದೋಚಬೇಕೆಂದೂ ಅದನ್ನು ತಮ್ಮ ಸಹಚರರಿಗೆ ಹಂಚಬೇಕೆಂದೂ ಬಣಗಧರ್ಮದ ದೈವಗಳನ್ನು ಕೇಳುವ ಪ್ರಾರ್ಥನೆಗಳಿದ್ದರೂ, ಅವುಗಳನ್ನು ಪವಿತ್ರ ಮತ್ತು ದೋಷರಹಿತವೆಂದೇಕೆ ಕರೆದಿರಿ ಎಂದು ಕೇಳುವ ಧೈರ್ಯ ಯಾರಿಗೂ ಇಲ್ಲ. ಆದರೆ ಬ್ರಾಹ್ಮಣರು ಬಿತ್ತಿದ ಈ ಮೂರ್ಖ ವಿಚಾರಗಳ ಹಿಡಿತದಿಂದ ಹಿಂದೂ ಬುದ್ಧಿಯು ಬಿಡಿಸಿಕೊಳ್ಳಬೇಕಾದ ಕಾಲ ಬಂದಿದೆ. ಈ ಹಿಡಿತದಿಂದ ಪಾರಾಗದೆ ಭಾರತಕ್ಕೆ ಭವಿಷ್ಯವಿಲ್ಲ. ನಾನು ಈ ಕೆಲಸವನ್ನು ಕೈಗೆತ್ತಿಕೊಂಡಿದ್ದೇನೆ. ಅದು ಅಪಾಯವನ್ನು ಒಳಗೊಂಡಿದೆ ಎಂದು ಚೆನ್ನಾಗಿ ಗೊತ್ತಿದ್ದರೂ, ನಾನು ಪರಿಣಾಮಗಳಿಗೆ ಹೆದರುವವನಲ್ಲ. ನಾನು ಜನರ ಬುದ್ಧಿಯನ್ನು ಅಲುಗಾಡಿಸುವಲ್ಲಿ ಜಯಶೀಲನಾದರೆ, ನನಗೆ ಸಂತೋಷವಾಗುತ್ತದೆ"[125] ಎಂದು ಅಂಬೇಡ್ಕರ್‌ರು -"ಹಿಂದೂಧರ್ಮದ ಒಗಟುಗಳು" ಎಂಬ ಪೀಠಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

"ಹಿಂದೂಧರ್ಮದ ಒಗಟುಗಳು" ಎಂಬ ಕೃತಿಯಲ್ಲಿ ಡಾ। ಅಂಬೇಡ್ಕರ್ ರವರು ಹಿಂದೂಧರ್ಮದ ಸಂದಿಗ್ಧಗಳು ಅಥವಾ ಒಗಟುಗಳು ಎಂಬ ಮಾಲಿಕೆಯಲ್ಲಿ ಸುಮಾರು 24 ಒಗಟುಗಳನ್ನು ತಮ್ಮದೇ ಆದ ಶೈಲಿಯಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಮತ್ತು ಆದಾರಸಹಿತವಾಗಿ ವಿಶ್ಲೇಷಿಸಿದ್ದಾರೆ. ಹಿಂದೂಧರ್ಮದ ನಿರೂಪಣೆಯಲ್ಲಿ ಮತ್ತು ಆಚರಣೆಯಲ್ಲಿ ಕಂಡು ಬರುವ ಸಂದಿಗ್ಧ ಸಮಸ್ಯೆಗಳನ್ನು ಅವರು ನಿಷ್ಪಕ್ಷಪಾತವಾಗಿ ಮತ್ತು ವಸ್ತು ನಿಷ್ಠವಾಗಿ ಪ್ರಸ್ತುತಪಡಿಸಿದ್ದಾರೆ. ಹಿಂದೂಧರ್ಮವೆಂದರೆ ಅನೇಕ ನಂಬಿಕೆ ಮತ್ತು ಸಿದ್ಧಾಂತಗಳ ಒಂದು ಸಂಕೀರ್ಣ ಸಮೂಹ. ಜಾತಿಪದ್ಧತಿಯು ಹಿಂದೂಧರ್ಮದ ಪ್ರಮುಖ ಲಕ್ಷಣ. "ವೇದಗಳನ್ನು ತನ್ನ ಧರ್ಮದ ಅತ್ಯಂತ ಪವಿತ್ರಗಳೆಂದು ಪರಿಗಣಿಸದ ಹಿಂದೂ ಪ್ರಾಯಶಃ ಎಲ್ಲೂ ಇರಲಾರ. ಆದರೂ ಯಾವ ಹಿಂದೂವನ್ನಾದರೂ ವೇದಗಳ ಮೂಲವೆಲ್ಲಿ ಎಂದು ಕೇಳಿದರೆ, ಈ ಸರಳ ಪ್ರಶ್ನೆಗೆ ಒಂದು ಸ್ಪಷ್ಟ ಹಾಗೂ ಖಚಿತವಾದ ಉತ್ತರ ಹೇಳುವವನನ್ನು ಹುಡುಕುವುದು ಕಷ್ಟವಾಗುತ್ತದೆ. ಇದೇ ಪ್ರಶ್ನೆಯನ್ನು ಒಬ್ಬ ವೈದಿಕ ಬ್ರಾಹ್ಮಣನಿಗೆ ಕೇಳಿದರೆ, ಅವನು ವೇದಗಳು ಸನಾತನವೆನ್ನುತ್ತಾನೆ. ಆದರೆ ಆ ಪ್ರಶ್ನೆಗೆ ಇದು ಉತ್ತರವಲ್ಲ. ಏಕೆಂದರೆ "ಸನಾತನ" ಎಂಬ ಪದದ ಅರ್ಥವೇನು? ಸನಾತನ ಎಂಬ ಪದದ ಉತ್ತಮ ವಿವರಣೆಯು ಮನುಸ್ಮೃತಿ ಅಧ್ಯಾಯ ಒಂದು, ಶ್ಲೋಕ-22 ಮತ್ತು 23 ರ ಮೇಲೆ ಕಲ್ಲೂಕ ಭಟ್ಟ ಬರೆದಿರುವ ವ್ಯಾಖ್ಯಾನದಲ್ಲಿ ಸಿಕ್ಕುತ್ತದೆ.-'ಸನಾತನ' ಎಂಬ ಶಬ್ದಕ್ಕೆ ಮೊದಲಿಂದಲೂ ನಿತ್ಯವಾಗಿರುವುದು ಎಂದರ್ಥ. ವೇದಗಳು ಅಪೌರುಷೇಯ ಎಂಬ ಸಿದ್ಧಾಂತವನ್ನು ಮನು ಅನುಮೋದಿಸುತ್ತಾನೆ. ಈಗಿರುವ ವೇದಗಳೇ ಮೊದಲಿನ ಕಲ್ಪದಲ್ಲಿ ಸರ್ವಜ್ಞನಾದ ಬ್ರಹ್ಮನ ಸ್ಮೃತಿಯಲ್ಲಿದ್ದವು. ಆಗ ಬ್ರಹ್ಮನು ಪರಮಾತ್ಮನೊಂದಿಗೆ ಐಕ್ಯನಾಗಿದ್ದನು. ಈ ವೇದಗಳನ್ನೇ ಬ್ರಹ್ಮನು ಈ ಕಲ್ಪದ ಆದಿಯಲ್ಲಿ ಅಗ್ನಿ, ವಾಯು ಮತ್ತು ಸೂರ್ಯರಿಂದ ಹೊರತೆಗೆದನು. ವೇದಗಳ ಮೇಲೆ ನಿಂತಿರುವ ಈ ನಂಬಿಕೆಯನ್ನು ನಾವು ಪ್ರಶ್ನಿಸುವಂತಿಲ್ಲ. ಏಕೆಂದರೆ, ವೇದವು "ಋಗ್ವೇದವು ಅಗ್ನಿಯಿಂದಲೂ, ಯಜುರ್ವೇದವೂ ವಾಯುವಿನಿಂದಲೂ, ಸಾಮವೇದವು ಸೂರ್ಯನಿಂದಲೂ ಬರುತ್ತವೆ" ಎಂದು ಹೇಳುತ್ತದೆ.[126] ಹೀಗಾಗಿ ವೇದಗಳಿಗೆ ಅಂತ್ಯವಿಲ್ಲದಿದ್ದರೂ, ಆದಿಯಂತೂ ಇರಲೇಬೇಕು. ಹಾಗೆಂದು ಬ್ರಾಹ್ಮಣರು ಬಹಿರಂಗವಾಗಿ ಏಕೆ ಹೇಳಬಾರದು? ಎಂದು ಪ್ರಶ್ನಿಸುತ್ತಾರೆ.

ಯಜ್ಞ -ಯಾಗಗಳು :

ಚಾತುರ್ವರ್ಣಗಳನ್ನು ವೇದಗಳು ಪ್ರತಿಪಾದಿಸಿದ್ದು, ಬ್ರಾಹ್ಮಣರು ಎಲ್ಲದರ ಅಧಿಪತಿಗಳು ಎಂದು ಸಾರುವ ಉದ್ದೇಶದಿಂದಲೇ ಎಂದು ಅಂಬೇಡ್ಕರ್‌ರವರು ತರ್ಕಿಸುತ್ತಾರೆ. ಅಲ್ಲದೆ ಚಾರ್ವಾಕರು ಹೇಳುವಂತೆ ವೇದಗಳಲ್ಲಿ ಅಸತ್ಯ, ಸ್ವವಿರೋಧ, ಪುನರುಕ್ತಿ ಎಂಬ ದೋಷಗಳಿವೆ. ವೇದಗಳು ಧೂರ್ತರು ರಚಿಸಿದ ಅಸಂಬದ್ಧ ಪ್ರಲಾಪಗಳು ಎಂದಿದ್ದಾರೆ - ಬೃಹಸ್ಪತಿ ಚಾರ್ವಾಕ ದರ್ಶನದ ಮತ್ತೊಂದು ಉದಾಹರಣೆ. ಅವನು ವೇದಗಳ ಬಗೆಗೆ ಚಾರ್ವಾಕರಿಗಿಂತ ಹೆಚ್ಚು ಧೈರ್ಯ ಹಾಗೂ ಯೋಧ ಮನೋಭಾವವನ್ನು ತಳೆದಿದ್ದಾನೆ. ಮಾಧವ ಆಚಾರ್ಯರು ಬೃಹಸ್ಪತಿಯ ಬಗೆಗೆ ಹೀಗೆನ್ನುತ್ತಾರೆ : "ಸ್ವರ್ಗ, ಮೋಕ್ಷ, ಪರಲೋಕಕ್ಕೆ ಹೋಗುವ ಆತ್ಮ ಇಲ್ಲ, ವರ್ಣಾಶ್ರಮ ಧರ್ಮದ ಕರ್ಮಗಳಿಗೆ ತಕ್ಕ ಫಲಗಳೂ ಇಲ್ಲ, ಅಗ್ನಿಹೋತ್ರ, ಮೂರು ವೇದಗಳು, ಸನ್ಯಾಸಾದಿಗಳು, ಭಸ್ಮಲೇಪನ..... ಇವನ್ನು ಬುದ್ಧಿಹೀನರೂ ಪೌರುಷಹೀನರೂ ತಮ್ಮ ಜೀವಿಕೆಗೋಸ್ಕರ ಸೃಷ್ಟಿ ಮಾಡಿಕೊಂಡರು. ಜ್ಯೋತಿಷ್ಟೋಮ ಯಾಗದಲ್ಲಿ ಕೊಲ್ಲಲ್ಪಟ್ಟು ಸ್ವರ್ಗಕ್ಕೆ ಹೋಗುವುದಾದರೆ, ಯಜಮಾನನು ತನ್ನ ತಂದೆಯನ್ನೇ ಕೊಂದು ಆತನನ್ನು ಏಕೆ ಸ್ವರ್ಗಕ್ಕೆ ಕಳುಹಿಸಬಾರದು"[127] ಆದುದರಿಂದ, ಸತ್ತವರಿಗೆ ಪ್ರೇತಕರ್ಮಗಳನ್ನು ಮಾಡುವುದು ಬ್ರಾಹ್ಮಣರು ತಮ್ಮ ಜೀವಿಕೆಗೋಸ್ಕರ ಮಾಡಿಕೊಂಡಿರುವ ಉಪಾಯವಷ್ಟೇ ಹೊರತು, ಅದರಿಂದ ಮತ್ತೇನೂ ಫಲವಿಲ್ಲ.

ಮೂರು ವೇದಗಳ ಕರ್ತೃಗಳು ಭಂಡ, ಧೂರ್ತ ಮತ್ತು ರಾಕ್ಷಸರು[128] ಎಂದು ಟೀಕಿಸಿದ್ದಾರೆ. ಅಷ್ಟೇ ಅಲ್ಲ, ಕೆಲವು ಯಜ್ಞಯಾಗಗಳು ದಾನ, ಮಾಂಸಭಕ್ಷಣೆ, ಪುತ್ರಕಾಮೇಷ್ಟಿಯಾಗ, ಮಾನವನ ಇಚ್ಛೆಗನುಗುಣವಾಗಿ ಮಂತ್ರಪಠಿಸುವುದು ಇವುಗಳೆಲ್ಲವೂ ವೇದಗಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳಲ್ಲವೆಂದು ಸಾಧಿಸಲು ಸಾಕು. ವೇದಗಳು ವರ್ಣಗಳನ್ನು ಹುಟ್ಟುಹಾಕಿ ಅಸಮಾನತೆ ಬೆಳೆಸಿದವು. ಆಶ್ರಮ ಧರ್ಮವನ್ನು ಬೆಳೆಸಿದವು. ವರ್ಣಧರ್ಮವು ಸಾಮಾಜಿಕ ವ್ಯವಸ್ಥೆಯಾದರೆ, ಆಶ್ರಮಧರ್ಮವು ವ್ಯಕ್ತಿಯನ್ನು ನಿಯಂತ್ರಿಸುವ ಒಂದು ಸಿದ್ಧಾಂತ.

"ಹಿಂದೂ ಸಾಮಾಜಿಕ ವ್ಯವಸ್ಥೆಯು ಪ್ರಜಾಪ್ರಭುತ್ವಕ್ಕೆ ವಿರೋಧಿಯಾದದ್ದು ಕೇವಲ ಆಕಸ್ಮಿಕವಲ್ಲ. ಅದನ್ನು ಅಪ್ರಜಾಸತ್ತಾತ್ಮಕವಾಗಿಯೇ ರೂಪಿಸಲಾಗಿದೆ. ಸಮಾಜವನ್ನು ವರ್ಣಗಳಾಗಿ, ಜಾತಿಗಳಾಗಿ ವಿಂಗಡಿಸಿದ್ದು, ಜಾತಿಗಳು, ಬಹಿಷ್ಕೃತ ಜಾತಿಗಳು ಇವೆಲ್ಲಾ ಕೇವಲ ಸಿದ್ಧಾಂತಗಳಲ್ಲ. ಶಾಸನಗಳು, ಪ್ರಜಾಸತ್ತೆಯ ವಿರುದ್ಧ ಎತ್ತಿದ ಬಡಿಗೋಲುಗಳು"[129] ಎಂದು ಅಂಬೇಡ್ಕರ್ ರವರು ವ್ಯಾಖ್ಯಾನಿಸಿದ್ದಾರೆ.

ವೈದಿಕ ಅಥವಾ "ಆರ್ಯಧರ್ಮ ಯಜ್ಞದಿಂದ ಕೂಡಿದ ಧರ್ಮವಾಗಿತ್ತು. ಯಜ್ಞವು ದೇವತ್ವವನ್ನು ಹೊಂದುವ ಅಂದರೆ ದೇವಗಣದಲ್ಲಿ ಪ್ರವೇಶ ಪಡೆಯುವ ಒಂದು ಸಾಧನವಾಗಿತ್ತು. ಸಂಪ್ರದಾಯದಂತೆ ಯಜ್ಞಗಳ ಸಂಖ್ಯೆ 21. ಅವುಗಳನ್ನು ಏಳರ ಮೂರು ಗುಂಪುಗಳಾಗಿ ವಿಭಾಗಿಸಲಾಗಿತ್ತು. ಮೊದಲನೇ ಗುಂಪಿನಲ್ಲಿ ಬೆಣ್ಣೆ, ಹಾಲು, ಧಾನ್ಯ, ಮೊದಲಾದವು ಸೇರಿದ್ದವು. ಎರಡನೆಯ ಗುಂಪಿನಲ್ಲಿ ಸೋಮಯಾಗಗಳು ಸೇರಿದ್ದವು ಮತ್ತು ಪಶುಯಾಗಗಳು ಮೂರನೆಯ ಗುಂಪಿಗೆ ಸೇರಿದ್ದವು. ಯಜ್ಞಗಳು ಅಲ್ಪಕಾಲದವಿರಬಹುದು ಅಥವಾ ಒಂದು ವರ್ಷ ಅಥವಾ ಅದಕ್ಕೂ ಹೆಚ್ಚು ದೀರ್ಘ ಅವಧಿಯ ಯಜ್ಞ ನಡೆಯಬಹುದು. ಯಜ್ಞ ಮಾಡುವವನು ಶಾಶ್ವತ ಪುಣ್ಯವನ್ನು ಪಡೆಯುತ್ತಾನೆ. ಕೇವಲ ಯಜ್ಞ ಮಾಡುವ ಯಜಮಾನನ ಆತ್ಮವೊಂದೇ ಅಲ್ಲ, ಅವನ ಪಿತೃಗಳೂ ಸಹ ಯಜ್ಞದಿಂದ ಲಾಭ ಪಡೆಯುತ್ತಾರೆ. ಅಷ್ಟೇ ಅಲ್ಲ, ಶಿವನ

ಸ್ಥಾನವನ್ನು ಹೆಚ್ಚಿಸುತ್ತಾನೆ ಮತ್ತು ಉನ್ನತ ಲೋಕದ ವಾಸಿಯಾಗಲು (ಅವರನ್ನು) ಮೇಲೆ ಕಳುಹಿಸುತ್ತಾನೆ". ಎಂಬ ವಿವರಗಳನ್ನು ನೀಡಲಾಗಿದೆ-ಯಜ್ಞ ಭಯ ಭಕ್ತಿಯನ್ನು ಹುಟ್ಟಿಸುತ್ತದೆ. ಯಜ್ಞವೆಂದರೆ ಪುರೋಹಿತರಿಗೆ ದಕ್ಷಿಣೆಯೆಂದರ್ಥ. ಖರ್ಚು ಅತಿಯಾಗಿತ್ತು. ಪಶುಯಜ್ಞವು ಮುಖ್ಯ ಯಜ್ಞವಾಗಿತ್ತು. ಅದು ಬಹಳ ವೆಚ್ಚದ್ದು ಮತ್ತು ಅನಾಗರೀಕವೂ ಆಗಿತ್ತು. ಸಾವಿರಾರು ಪಶುಗಳನ್ನು ಯಜ್ಞಕ್ಕೆ ಬಲಿ ಕೊಡಲಾಯಿತು. ಯಜ್ಞವು ಕಗ್ಗೋಲೆಯನ್ನು ಒಳಗೊಂಡಿತ್ತಷ್ಟೇ ಅಲ್ಲ ಅದೊಂದು ಸ್ವೇಚ್ಛಾವಿಹಾರೋತ್ಸವವಾಗಿತ್ತು. ಮಾಂಸ, ಮದ್ಯ ಅಲ್ಲಿರುತ್ತಿತ್ತು. ಬ್ರಾಹ್ಮಣರು ಸೋಮ-ಸುರಾಪಾನ ಮಾಡುತ್ತಿದ್ದರು. ಪ್ರತಿಯೊಂದು ಯಜ್ಞ ಮುಗಿದ ನಂತರ ಜೂಜಾಟವಾಡುತ್ತಿದ್ದರು. ಮತ್ತು ಇನ್ನೂ ಅಸಾಧಾರಣವಾದ ಒಂದು ಮಾತೆಂದರೆ ಇದರ ಜೊತೆಯಲ್ಲಿಯೇ ಬಯಲಲ್ಲಿ ಮೈಥುನ ನಡೆಯುತ್ತಿತ್ತು. ಯಜ್ಞವೆಂದರೆ ವ್ಯಭಿಚಾರವಾಗಿತ್ತು. ಅದರಲ್ಲಿ ಧರ್ಮವೆಂಬುದೇನೂ ಉಳಿದಿರಲಿಲ್ಲ"[130] ಎಂದು ಅಂಬೇಡ್ಕರ್ ಕಟುವಾಗಿ ಖಂಡಿಸಿದ್ದಾರೆ.

ವೈದಿಕಧರ್ಮವು ಕೇವಲ ಆಚರಣೆಗಳ ಸರಮಾಲೆಯಾಗಿತ್ತು. ಈ ಆಚರಣೆಗಳ ಹಿಂದೆ ಒಳ್ಳೆಯ ಮತ್ತು ನೈತಿಕ ಜೀವನಕ್ಕಾಗಿ ಹಂಬಲವಿರಲಿಲ್ಲ. ಸಚ್ಚಾರಿತ್ರ್ಯಕ್ಕಾಗಿ ಪಿಪಾಸೆಯಿರಲಿಲ್ಲ. ಅವರ ಧರ್ಮದಲ್ಲಿ ಅಧ್ಯಾತ್ಮದ ಯಾವ ತಳಹದಿಯಿರವೆಂಬ ಬಗ್ಗೆ ಋಗ್ವೇದದ ಸೂಕ್ತಗಳು ಒಳ್ಳೆಯ ಮಾಹಿತಿ ಒದಗಿಸುತ್ತವೆ.

ಜರ್ಭರಿ, ತುರ್ಫರೀ ಮುಂತಾದ ಮಂತ್ರಗಳನ್ನು ಅಶ್ವಮೇಧಗಳಲ್ಲಿ ರಾಣಿಯರಿಗಾಗಿ ಮಾಡುವ ಅಶ್ಲೀಲ ಕಾರ್ಯಗಳನ್ನು ಪುರೋಹಿತರಿಗೆ ಮಾಡಬೇಕಾದ ದಾನಗಳನ್ನು ಧೂರ್ತ ಪಂಡಿತರು ಸೇರಿಸಿದ್ದಾರೆ. ಅದೇ ರೀತಿ ಯಜ್ಞದಲ್ಲಿ ಮಾಂಸ ತಿನ್ನಬೇಕೆಂಬ ವಿಧಿಯನ್ನು ಮಾಂಸಪ್ರಿಯರಾದ ರಾಕ್ಷಸರು ಸೇರಿಸಿದ್ದಾರೆ. ಪುತ್ರ ಕಾಮೇಷ್ಟಿ ಮುಂತಾದ ಯಾಗ ಮಾಡುವುದರಿಂದ ಯಾವ ಫಲವೂ ಉಂಟಾಗುವುದಿಲ್ಲವೆಂದು ನಮಗೆ ತಿಳಿದಿರುವುದರಿಂದ, ವೇದಕ್ಕೆ ಅನೃತವೆಂಬ ದೋಷವಿದೆ ಎಂಬುದು ಸಿದ್ಧವಾಗುತ್ತದೆ ಎಂದು ಅಂಬೇಡ್ಕರ್ ರವರು ವಿಶ್ಲೇಷಿಸಿದ್ದಾರೆ. ಪ್ರೊ.ವಿಲ್ಸನ್ ಹೇಳುವಂತೆ, ಪುರಾತನ ವೇದವಾದ ಋಗ್ವೇದದಲ್ಲಿ, ಸೈದ್ಧಾಂತಿಕ ಅಥವಾ ದಾರ್ಶನಿಕ ಚಿಂತನೆಯ ಚಿಹ್ನೆಯೇ ಇಲ್ಲ. ಅಷ್ಟೇ ಅಲ್ಲ. ಅದರಲ್ಲಿ ಉದಾತ್ತ ಅಂಶಗಳಾವವೂ ಇಲ್ಲ. ಅದರಲ್ಲಿ ದುಷ್ಟ ಅಂಶಗಳು ಹೆಚ್ಚಿವೆ, ಶಿಷ್ಟ ಅಂಶಗಳು ಕಡಿಮೆ ಇವೆ.

ಹಿಂದೂ/ವೈದಿಕ ಧರ್ಮ ಜಾತಿವ್ಯವಸ್ಥೆ ಇರಬೇಕೆಂದು ಚಾತುರ್ವರ್ಣಧರ್ಮ ಪ್ರತಿಪಾದಿಸಿ ಎಣೆದಿರುವುದು ಅನಿಷ್ಟಗಳಾದ ಅಸಮಾನತೆ ಬೋಧಿಸುವ, ಮನು ಸ್ಥಾಪಿಸಿದ ಶಾಸನದ ಸುಳಿಯಲ್ಲಿ ಶೂದ್ರ, ಸ್ತ್ರೀ, ಅಸ್ಪೃಶ್ಯರನ್ನು ಶೋಷಣೆಗೆ ಎಣೆದಿರುವ, ಅನಿಷ್ಟಗಳಾದ ಪೂಜೆ, ಬಲಿ, ಯಜ್ಞ-ಯಾಗ, ವಿಧಿ ವಿಘ್ನಗಳು, ಸ್ವರ್ಗ-ನರಕ, ಮುಂತಾದವುಗಳನ್ನು ಬಲಾತ್ಕಾರವಾಗಿ ಮಾನವರ ಮೇಲೆ ಹೇರಿ ಈ ಜಗತ್ತು ಮಿಥ್ಯ. ಬ್ರಹ್ಮ ಸತ್ಯ ಎಂದು ಮನುಷ್ಯನ ಸಾಹಸವನ್ನು, ಪ್ರಯತ್ನಗಳನ್ನು ದಮನ ಮಾಡುವ, ಇವೆಲ್ಲದರ ಜೊತೆಗೆ ಚಿಲ್ಲರೆ ಆರ್ಯದೇವತೆಗಳನ್ನು ಸೃಷ್ಟಿಸಿ ಮತ್ತು ಅವುಗಳ ಪವಾಡಗಳನ್ನು ವಿಜೃಂಭಿಸಿ ಇಂದು ನಮ್ಮ ವೈಚಾರಿಕ ಬದುಕಿಗೆ ಮಾರಕವಾಗುವುದರೊಂದಿಗೆ ನಮ್ಮನ್ನು ಬೌದ್ಧಿಕವಾಗಿ ಕುಬ್ಜರನ್ನಾಗಿ ಮಾಡಿದೆ. ಅದಕ್ಕಾಗಿ ಅಂಬೇಡ್ಕರ್‌ರವರು ಅಂಧಾನುಕರಣೆ, ಮೂಢನಂಬಿಕೆ, ಕರ್ಮಸಿದ್ಧಾಂತ, ಪುನರ್ಜನ್ಮಗಳನ್ನು ಕಟುವಾಗಿ ಟೀಕಿಸಿ ಅಲ್ಲಗಳೆದರು.

ವೇದಪುರಾಣಾಗಮಶಾಸ್ತ್ರಗಳನ್ನು ಪದರಪದರವಾಗಿ ಹೆಕ್ಕಿ ನ್ಯಾಯಬದ್ಧ ಸತ್ಯನಿಷ್ಠ ಕಟು ವಿಮರ್ಶೆಗೊಳಗು ಮಾಡಿದ, ಅವುಗಳೇ ನಾಡಿನ ಅವನತಿಗೆ ಕಾರಣವೆಂದರು ಅಂಬೇಡ್ಕರ್. ಸ್ಮೃತಿ ಶಾಸ್ತ್ರಗಳನ್ನು ಮಾತ್ರವಲ್ಲ, ರಾಮಾಯಣ, ಮಹಾಭಾರತಗಳ ಪಾತ್ರಗಳನ್ನು ಸಹ ಅಂಬೇಡ್ಕರ್ ವಿಮರ್ಶೆಯ ಒರೆಗಲ್ಲಿಗೆ ತಿಕ್ಕಿದರು. ಆ ಮೂಲಕ ನವಮನ್ವಂತರಕ್ಕೆ ನಾಂದಿ ಹಾಡಿದರು. ಪ್ರಾಚೀನ ಭಾರತೀಯ ಸಾಹಿತ್ಯದ ಮೇಲೆ ಪ್ರಬುದ್ಧವೂ ತರ್ಕಬದ್ಧವೂ ಆದ ವ್ಯಾಖ್ಯಾನವನ್ನು ಬರೆದು ಮನುಕುಲಕ್ಕೆ ಉಪಕಾರ ಮಾಡಿದರು.

ವೈದಿಕ ಆಚರಣೆಗಳು - ಕರ್ಮಸಿದ್ಧಾಂತ :

ಅಂಬೇಡ್ಕರ್ ಧರ್ಮ, ವೈದಿಕ ಆಚರಣೆಗಳು, ಮೂಢನಂಬಿಕೆಗಳು ಕಂದಾಚಾರ ಮುಂತಾದವುಗಳ ಬಗ್ಗೆ ಕಟು ವಿಮರ್ಶೆ ಮಾಡಿದರು. ಹಿಂದೂಧರ್ಮದಲ್ಲಿರುವ ಪವಾಡ ಪುರುಷರನ್ನು ಅವರು ಖಂಡಿಸಿದರು. ಬೌದ್ಧ ಧರ್ಮ ನೈತಿಕತೆಯನ್ನು ಆಧಾರವಾಗಿ ಹೊಂದಿದೆ ಎಂದು ಉದಾಹರಿಸಿದ ಅವರು "ಕೃಷ್ಣ ತಾನು ದೇವರ ದೇವನೆಂದು ಹೇಳಿಕೊಂಡ; ಕ್ರಿಸ್ತ ತಾನು ದೇವರ ಮಗನೆಂದು ಹೇಳಿಕೊಂಡ; ಮೊಹಮ್ಮದ ಪೈಗಂಬರ್ ತಾನು ದೇವರಿಂದ ಕಲಿಸಲ್ಪಟ್ಟ ಕೊನೆಯ ದೂತ ಎಂದು ಹೇಳಿಕೊಂಡನು. ಆದರೆ ಬುದ್ಧ ತನ್ನನ್ನು ದೇವರೆಂದು ಎಂದು ಹೇಳಿಕೊಳ್ಳಲಿಲ್ಲ. ಅಷ್ಟೇ ದೇವರನ್ನು ನಂಬಲು ಕೂಡ ಅವನು ಹೇಳಲಿಲ್ಲ. ಬುದ್ಧನನ್ನು ಹೊರತುಪಡಿಸಿ ಇನ್ನಿತರ ಎಲ್ಲಾ ಧರ್ಮಗಳ ಸ್ಥಾಪಕರು ತಮ್ಮನ್ನು ಮೋಕ್ಷದಾತರೆಂದು ಹೇಳಿಕೊಂಡಿದ್ದಾರೆ ಎಂದು ಘೋಷಿಸಿದರು".[131]

ಹಿಂದೂಧರ್ಮದಲ್ಲಿ ಯಜ್ಞ ಮತ್ತು ದೇವರಿಗೆ ಅರ್ಪಣೆ (ಬಲಿ) ನೀಡುವುದನ್ನು, ಕರ್ಮಫಲವನ್ನು ಅನುಬವಿಸುವುದು ಕಡ್ಡಾಯ ಎಂಬುದನ್ನು ಸಾಮಾಜಿಕ ಅಸಮಾನತೆ, ಭಗವದ್ಗೀತೆ ಎತ್ತಿ ಹಿಡಿದ ಚಾತುರ್ವರ್ಣವನ್ನು, ಬ್ರಾಹ್ಮಣರ ಸರ್ವಾಧಿಕಾರ ಸ್ವಾರ್ಥಗಳನ್ನು ಅತ್ಯಂತ ವೈಜ್ಞಾನಿಕವಾಗಿ, ವೈಚಾರಿಕವಾಗಿ ಖಂಡಿಸಿದರು. ವೈದಿಕ, ಬ್ರಾಹ್ಮಣ ಹಿಂದೂ ಧರ್ಮವನ್ನು ಖಂಡಿಸಲೆಂದೇ ಬೌದ್ಧಧರ್ಮ ಭಾರತದಲ್ಲಿ ಜನ್ಮ ತಾಳಿತು ಎಂದು ಅಂಬೇಡ್ಕರ್ ತಮ್ಮ ಚಿಂತನೆಗಳನ್ನು ಮುಂದಿಟ್ಟರು. "ಅಸ್ಪೃಶ್ಯರು ತಮ್ಮ ಪೂರ್ವಜರಂತೆ ಭಕ್ತಿಯಲ್ಲಿ ಮುಳುಗಿ ಹೋಗುವುದನ್ನು ಅಂಬೇಡ್ಕರ್ ಇಷ್ಟ ಪಡಲಿಲ್ಲ. ಸ್ವ-ಶಕ್ತಿಯಲ್ಲಿ ನಂಬಿಕೆ ಇಲ್ಲದವರು ದೇವರ ಮೊರೆ ಹೋಗುತ್ತಾರಷ್ಟೇ. ಭಕ್ತಿ ಎಂಬುದು ಅಸಹಾಯಕತೆಯ ಇನ್ನೊಂದು ರೂಪ. ದೈವಕ್ಕೆ ಯಾವುದನ್ನು ಬಿಡದೇ, ತಮ್ಮ ಭವಿಷ್ಯವನ್ನು ತಾವೇ ರೂಢಿಸಿಕೊಳ್ಳಬೇಕೆಂದ"[132] ಅಂಬೇಡ್ಕರ್ ಕರೆ ನೀಡುತ್ತಿದ್ದರು.

ಪರಲೋಕದ ಚಿಂತೆ ಬಿಟ್ಟು ಇಹಲೋಕದ ಬಗ್ಗೆ ಆಲೋಚನೆ ಮಾಡುವಂತೆ ಅವರು ಒತ್ತಾಯಿಸುತ್ತಿದ್ದರು. ಕರ್ಮವನ್ನು, ವಿಧಿವಾದವನ್ನು ನಂಬದಿರಲು ಆಗ್ರಹಪಡಿಸುತ್ತಿದ್ದರು. ಹಿಂದಿನ ಜನ್ಮದಲ್ಲಿ ಮಾಡಿದ ಪಾಪದಿಂದ ಈಗ ಅಸ್ಪೃಶ್ಯರಾಗಿ ಹುಟ್ಟಿದ್ದೇವೆ ಎಂಬ ಮೂಢ ನಂಬಿಕೆ ಬಹಳ ಜನರಲ್ಲಿತ್ತು. ಅದನ್ನು ಕಿತ್ತೆಸೆಯಬೇಕೆಂದು ಅಂಬೇಡ್ಕರ್ ಕರೆ ನೀಡುತ್ತಿದ್ದರು. "ದೇವರು ಎಂಬುದಿಲ್ಲ: ಆತ್ಮ ಎಂಬುದಿಲ್ಲ ಎಂದು ಸಾರಿ ಹೇಳಿದರು. ಮೂಢ ನಂಬಿಕೆ, ಕರ್ಮ, ವಿಧಿವಾದಗಳನ್ನು ತೀವ್ರವಾಗಿ ಖಂಡಿಸಿದರು. "ಬುದ್ಧ ಮತ್ತು ಅವನ ಧರ್ಮ" ಕೃತಿಯಲ್ಲಿ ಹಿಂದೂಧರ್ಮ ದೇವರನ್ನು ಒಪ್ಪುತ್ತದೆ. ಆತ್ಮವನ್ನು ಮಾನ್ಯ ಮಾಡುತ್ತದೆ. ಚಾತುರ್ವರ್ಣವನ್ನು ಒಳಗೊಂಡಿದೆ. ಜಾತಿಪದ್ಧತಿಯ ಅಡಿಪಾಯದ ಮೇಲೆ ನಿಂತಿದೆ ಆದ್ದರಿಂದ ಅಸಮಾನತೆ ಅದರ ಜೀವಾಳವೆಂದು ಖಂಡಿಸಿದರು. ಜೊತೆಗೆ ಪರ್ಯಾಯವಾಗಿ ಬೌದ್ಧಧರ್ಮದಲ್ಲಿ ಇವು ಯಾವವೂ

ಇಲ್ಲ. ಆದ್ದರಿಂದ ಬೌದ್ಧಧರ್ಮ ಶ್ರೇಷ್ಠ ಎಂದರು-"ಪ್ರಜ್ಞೆ, ಸಮತಾ-ಕರುಣಾ' ಈ ಮೂರು ಸೂತ್ರಗಳು ಪ್ರತಿಯೊಬ್ಬರಿಗೂ ಅವಶ್ಯಕವೆಂದು ಸಾರಿದರು. ಹೀಗಾಗಿ ಹಿಂದೂಧರ್ಮದ ಕೊಳಕಿನಿಂದ ಅಸ್ಪೃಶ್ಯರನ್ನು ಬಿಡುಗಡೆ ಮಾಡುವ ಬಂಡುಕೋರರ ಪ್ರವೃತ್ತಿಯನ್ನು ಮೆರೆದರು.

4.9 ಮೌಢ್ಯತೆ (ಮೂಢನಂಬಿಕೆ) ಅನಿಷ್ಟಗಳ ವಿರುದ್ಧ ಪ್ರತಿಭಟನೆ :

ಡಾ।ಬಾಬಾ ಸಾಹೇಬ ಅಂಬೇಡ್ಕರ್‌ರವರ ಬರಹ ಮತ್ತು ಭಾಷಣಗಳ ಸಂಪುಟಗಳಲ್ಲಿ ಅವರ ವೈಚಾರಿಕ ಹಾಗೂ ವಿದ್ವತ್ಪೂರ್ಣ ಅನುಭಾವಿಕ ವಿಚಾರಗಳಾಗಿದ್ದು, ಪ್ರಾಚೀನ ಭಾರತದ ಇತಿಹಾಸ, ವೇದಗಳು, ವೈದಿಕ ಆಚರಣೆಗಳು, ಯಜ್ಞ-ಯಾಗಗಳು ಕರ್ಮಸಿದ್ಧಾಂತ, ಮೂಢನಂಬಿಕೆಗಳನ್ನು ಕುರಿತು ಪ್ರಾಸಂಗಿಕವಾಗಿ ತಮ್ಮ ಬರಹ ಮತ್ತು ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲ, ಅವುಗಳ ಸತ್ಯಾಸತ್ಯತೆಯನ್ನು ಒರೆಗಚ್ಚಿ ವಿಮರ್ಶಾತ್ಮಕ ದೃಷ್ಟಿಯಿಂದ ಅವುಗಳನ್ನು ಖಂಡಿಸಿದ್ದಾರೆ. ಅವುಗಳು 'ಅಂಬೇಡ್ಕರ್ ವಾಣಿ' 'ಅಂಬೇಡ್ಕರ್ ವೈಚಾರಿಕ ವಿಚಾರಗಳು' ವ್ಯಾಖ್ಯಾನಗಳೆಂದೆ ಪ್ರಸಿದ್ಧವಾಗಿದ್ದು, ಭಾರತೀಯರ ಬಾಳಿಗೆ ಬೆಳಕನ್ನು ನೀಡುತ್ತಿವೆ.

ಧರ್ಮ, ದೇವರು, ದೇವಾಲಯ, ವಿದ್ಯೆ, ಸಾಮಾಜಿಕ ಪ್ರತಿಷ್ಠೆ, ಜ್ಞಾನ, ನಾಗರೀಕತೆ, ರಾಜಕೀಯ ಹಕ್ಕುಗಳು, ಅಧಿಕಾರ, ಆರ್ಥಿಕ ಸಮಾನತೆ, ಮಾನವೀಯತೆ, ಇತಿಹಾಸ ಇತ್ಯಾದಿಗಳಾವವೂ ಇಲ್ಲದ ಅಸ್ಪೃಶ್ಯರಿಗೆ ಅಂಬೇಡ್ಕರ್ ಇವೆಲ್ಲವನ್ನೂ ಒದಗಿಸಿ ನೂತನ ಆಲೋಚನೆಗಳಿಂದ ನೂತನ ಜೀವನದಿಂದ ಪರಿಪೂರ್ಣ ಮಾನವರಾಗಿ ಬಾಳುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟ ಮಹಾನ್ ವ್ಯಕ್ತಿ ಅಂಬೇಡ್ಕರ್. ಅವರ ವ್ಯಾಖ್ಯೆಗಳನ್ನು ಅಧ್ಯಯನ ಮಾಡುವುದರಿಂದ -ಬಲಹೀನ ವರ್ಗಗಳಿಗೆ ಉತ್ಸಾಹ, ಉತ್ತೇಜನ, ಸ್ಫೂರ್ತಿ, ಚೈತನ್ಯ, ಸ್ಥೈರ್ಯ, ಧೈರ್ಯ, ಆತ್ಮವಿಶ್ವಾಸ ಲಭ್ಯವಾಗುತ್ತವೆ. ಅನ್ಯಾಯದ ಅಸಮಾನತೆಯ ಹೋರಾಟಕ್ಕೆ ಕೈದೀವಿಗೆಯಾಗುತ್ತವೆ. "ತುಳಸೀ ಮಾಲೆಯನ್ನು ಕೊರಳಲ್ಲಿ ಧರಿಸಿದ ಮಾತ್ರದಿಂದಲೇ ಸಾಲ ಕೊಟ್ಟವರಿಂದ ತಪ್ಪಿಸಿಕೊಳ್ಳಲಾಗದು. ರಾಮನಾಮ ಸ್ಮರಣೆ ಮಾಡಿದ ಮಾತ್ರದಿಂದಲೇ ಜಮೀನ್ದಾರರಿಗೆ ತೆರಬೇಕಾದ ಗೇಣಿ ತಪ್ಪದು. ಪ್ರತಿವರ್ಷ ಪಂಢರಾಪುರಕ್ಕೆ ತೀರ್ಥಯಾತ್ರೆ ಹೋಗುವುದರಿಂದ ಪ್ರತಿ ತಿಂಗಳೂ ಸಂಬಳ ಸಿಗದು. ಸಮಾಜದಲ್ಲಿ ಬಹು ಸಂಖ್ಯಾತರು ಬೆಲೆಯೇ ಇಲ್ಲದ ಅರ್ಥರಹಿತವಾದ ಮೂಢನಂಬಿಕೆಗಳು, ಅಜ್ಞಾನಾಂಧಕಾರಕ್ಕೆ ಸಿಕ್ಕಿ ನರಳುತ್ತಿರುವಾಗ ಬುದ್ಧಿವಂತರಾದವರು ಅಂಥವರ ನೆರಳಿನಲ್ಲಿ ಸಮಾಜವಿರೋಧಿ ಚಟುವಟಿಕೆಗಳನ್ನು ನಡೆಸುತ್ತ ಇದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಸಮಾಜದಲ್ಲಿನ ಬಹುಸಂಖ್ಯಾತರ ಗೌರವ, ಮರ್ಯಾದೆಗಳನ್ನೇ ಬಲಿ ತೆಗೆದುಕೊಳ್ಳುತ್ತಿದ್ದಾರೆ. ಜ್ಞಾನ, ನೇತ್ರಗಳನ್ನು ತೆರೆದು ಬೆಳಕನ್ನು ಕಾಣಿ"[133] ಎಂದು ಅಂಬೇಡ್ಕರ್ ತಮ್ಮ ಅನುಯಾಯಿಗಳಿಗೆ ಕರೆ ಕೊಟ್ಟರು.

ಸಾಮಾಜಿಕ ಸುಧಾರಣೆ ಎಂದರೆ ಇಡೀ ಸಮಾಜದಲ್ಲಿನ ದುರಾಚಾರಗಳ ವಿರುದ್ಧವಾಗಿ, ಮೂಢನಂಬಿಕೆಗಳ ವಿರುದ್ಧವಾಗಿ ತೀವ್ರವಾದ ಕ್ರಾಂತಿ -ದುರದೃಷ್ಟವಶಾತ್ ನಮ್ಮ ಸುಧಾರಕರಲ್ಲಿ ತಮ್ಮ ತಮ್ಮ ಜಾತಿಗಳ ಸುಧಾರಣೆಗೆ ಹೆಣಗಾಡಿದ ಸುಧಾರಕರಾಗಿ ಮಾತ್ರ ಚಲಾವಣೆಯಾದರು -ಎಂದು ಅಂಬೇಡ್ಕರ್ ರವರು ವಿಷಾದಿಸುತ್ತಾರೆ. "ನವ ಸಮಾಜ ನಿರ್ಮಾಣ ಪ್ರಾರ್ಥನೆ, ಘೋಷಣೆಗಳಿಂದ ಸಾಧ್ಯವಾಗದು. ಅದಕ್ಕೆ ಕ್ರಾಂತಿಯೇ ಅಗತ್ಯ. ವೈಚಾರಿಕತೆ ಇಲ್ಲದ ಶಾಸ್ತ್ರಜ್ಞಾನ ಎಷ್ಟೇ ಶ್ರೇಷ್ಠವಾದುದಾರೂ ಅದು ಮಾನವರಿಗೆ ಮಾತ್ರ ನಿರುಪಯೋಗಿ. 'ಮೂಢ ನಂಬಿಕೆಗಳು, ಅರ್ಥವಿಲ್ಲದ ಆದರ್ಶ ಆಚಾರಗಳು ವೈಚಾರಿಕ ಪ್ರಜ್ಞೆಯ ಮುಂದೆ

ನಿಲ್ಲುವುದಿಲ್ಲ. ಆದ್ದರಿಂದ ನಂಬಬಾರದು. ಸಮಾಜ ಚೈತನ್ಯಮಯವಾಗಿರಬೇಕಾಗಿದ್ದಲ್ಲಿ ಕಾಲಕ್ಕೆ ತಕ್ಕಂತೆ ಮುನ್ನಡೆಯಬೇಕು ಎಂದು ಅಂಬೇಡ್ಕರ್‌ರವರು ಹೇಳಿದ್ದಾರೆ[134]

"ಪುರೋಹಿತ ಯಾವ ಮತಕ್ಕೆ ಸೇರಿರಲಿ, ಅವನು ವಂಚಕ ಮತ್ತು ಸಮಾಜದ್ರೋಹಿ". "ವೇದಗಳು ಮಾನವ ನಿರ್ಮಿತವಾದದ್ದು. ಇತರ ವೇದಗಳ ಬಗ್ಗೆಯೂ ಇಂಥದೇ ನಿರ್ಧಾರಕ್ಕೆ ಬರಬಹುದು", "ಸಂಪ್ರದಾಯಗಳನ್ನು ಜನರು ರಾಷ್ಟ್ರದ ಕಾನೂನಿಗಿಂತಲೂ ಪರಿಣಾಮಕಾರಿಗಯಾಗಿ ಜಾರಿಗೊಳಿಸುತ್ತಾರೆ ಏಕೆಂದರೆ ಒಂದು ಸಂಘಟಿತ ಜನಾಂಗದ ಒತ್ತಾಯ ರಾಷ್ಟ್ರದ ಒತ್ತಾಯಕ್ಕಿಂತಲೂ ಪ್ರಬಲವಾಗಿರುತ್ತದೆ", "ಧರ್ಮ ಹುಟ್ಟಿದ್ದೇ ಹಲವು ಪ್ರಶ್ನೆಗಳನ್ನು ಎತ್ತುವುದರ ಮೂಲಕ". "ವೇದಗಳು ಯೋಗ್ಯತೆ ಇಲ್ಲದ ಪುಸ್ತಕಗಳು. ಅವುಗಳನ್ನು ದೋಷರಹಿತವೆಂದಾಗಲೀ, ಪವಿತ್ರವೆಂದಾಗಲೀ ಕರೆಯಲು ಕಾರಣವೇ ಇಲ್ಲ". "ವೇದಗಳೇ ಧರ್ಮದ ಮೂಲ: ಆದರೆ ವೇದಗಳು ತಾವು ಧರ್ಮದ ನಿರೂಪಣಾ ಗ್ರಂಥಗಳು ಎಂದು ಹೇಳಿಕೊಳ್ಳುವುದಿಲ್ಲ". "ಹಿಂದೂಗಳ ವಿಗ್ರಹವು ಒಂದು ಜೀವಂತ ವಸ್ತು ಮತ್ತು ಅದಕ್ಕೆ ಮಾನವರ ಎಲ್ಲ ಕಾರ್ಯಗಳನ್ನು ಆರೋಪಿಸಲಾಗುತ್ತಿದೆ. ಅದಕ್ಕೆ ಪ್ರಾಣ ಪ್ರತಿಷ್ಠಾನ ಎಂಬ ಕರ್ಮದ ಮೂಲಕ ಪ್ರಾಣವನ್ನು ಕೊಡಲಾಗುತ್ತದೆ". "ಸಂಪ್ರದಾಯಗಳೂ, ಕಟ್ಟುನಿಟ್ಟಾಗಿ, ಬ್ರಾಹ್ಮಣರಲ್ಲಿ ಮಾತ್ರ ದೊರೆಯುತ್ತವೆ". ರೋಗಕಾರಕವಾದ ಪುರಾತನ ಸಂಪ್ರದಾಯಗಳಿಂದ ಮುಸ್ಲಿಮರು ಮತ್ತು ಹಿಂದೂಗಳು ಮುಕ್ತರಾಗಿಲ್ಲ". "ಮೇಕೆಗಳು ಯಜ್ಞ ಪಶುಗಳಾಗುತ್ತವೆಯೇ ಹೊರತು ಹುಲಿ ಸಿಂಹಗಳಲ್ಲ". "ಅವಿವೇಕ ಮೂಢನಂಬಿಕೆ ಮುಂತಾದ ಮಾನಸಿಕ ರೋಗಗಳು, ಮಲೇರಿಯಾ, ಪ್ಲೇಗು, ಮುಂತಾದ ಶಾರೀರಿಕ ರೋಗಗಳು ಹೆಣಕ್ಕೆ ಹೊದೆಸುವ ಕಪ್ಪು ಬಟ್ಟೆಯಂತೆ ಯಾವ ಕಾಲಕ್ಕೂ ಈ ದೇಶವನ್ನು ಆವರಿಸಿಕೊಂಡಿವೆ. "ಧರ್ಮ ಒಂದು ಪ್ರವೃತ್ತಿಯಾದಾಗ ಮತ್ತು ಅದನ್ನು ಸಮಾರಂಭದ ಬಿಗಿ ಚೌಕಟ್ಟಿಗೆ ಹೊಂದಿಸಿ ರೂಢಿಸಿಕೊಂಡಾಗ ಮನುಷ್ಯ ತನ್ನ ವಿವೇಚನೆ ಮತ್ತು ಯೋಚನಾದೃಷ್ಟಿ ಕಳೆದುಕೊಳ್ಳುವುದುಂಟು". "ವೇದ ಸಾಹಿತ್ಯದ ತುಂಬೆಲ್ಲ ರಾಕ್ಷಸರೊಡನೆ ಮಾಡಿದ ಯುದ್ಧಗಳ ಪ್ರಸ್ತಾಪವಿದೆ". "ಹಿಂದೂ ದೇವರುಗಳ ಇತಿಹಾಸದಲ್ಲಿ ಸಾಮಾನ್ಯವಾಗಿ ಕಾಣುವ ಅಂಶವೆಂದರೆ, ಕೆಲವು ದೈವಗಳನ್ನು ಸ್ವಲ್ಪ ಕಾಲದವರೆಗೆ ಪೂಜಿಸಿ, ಅನಂತರ ಅವುಗಳ ಪೂಜೆಯನ್ನು ಬಿಟ್ಟು ಕೊನೆಗೆ ಆ ದೈವಗಳನ್ನೇ ತಿಪ್ಪೆಗೆಸೆದು ಬಿಡುವುದು. ಅನಂತರ ಹೊಚ್ಚ ಹೊಸ ದೈವಗಳಿಗೆ ಅಂಟಿಕೊಳ್ಳುವುದು. ಅವುಗಳ ಪೂಜೆಯನ್ನು ಅತ್ಯಂತ ಗಾಢಭಕ್ತಿಯಿಂದ ಮಾಡುವುದು. ಅನಂತರ ಈ ಹೊಸ ದೈವಗಳನ್ನು ಕೈ ಬಿಡುವುದು. ಬೇರೆ ಹೊಸ ದೈವಗಳಿಗೆ ಅಂಟಿಕೊಳ್ಳುವುದು ಈ ಚಕ್ರ ಹೀಗೆ ಉರುಳುತ್ತದೆ. ಬ್ರಾಹ್ಮಣರ ಯಜ್ಞ ಪದ್ಧತಿಗೆ ಶಿವ ವಿರೋಧಿಯಾಗಿದ್ದನು". ವಿಷ್ಣುವಿಗೆ ಸಂಬಂಧಿಸಿದ್ದ ಲಿಂಗ ಪೂಜೆಯನ್ನು ಶಿವನಿಗೆ ವರ್ಗಾಯಿಸಿದ್ದು, ಒಂದು ಒಗಟಾಗಿಯೇ ಉಳಿಯುತ್ತದೆ" "ದೇವರುಗಳು ಹೆಚ್ಚಿದಂತೆಲ್ಲ ಅವರ ನಡುವಿನ ಘರ್ಷಣೆಗಳು ಹೆಚ್ಚಿದವು". "ಹಿಂದೂಧರ್ಮದಲ್ಲಿ ನೈತಿಕತೆಗೆ ಸ್ಥಾನವಿಲ್ಲ". "ಹಿಂದೂ ಧರ್ಮವೆಂದರೆ ನೂರಾರು ದೇವರುಗಳನ್ನು, ದೇವತೆಗಳನ್ನು ವೃಕ್ಷಗಳನ್ನು ಪೂಜಿಸುವುದು, ಯಾತ್ರಾ ಸ್ಥಳಗಳನ್ನು ಸಂದರ್ಶಿಸುವುದು ಹಾಗೂ ಬ್ರಾಹ್ಮಣರಿಗೆ ಕಾಣಿಕೆಗಳನ್ನು ನೀಡುವುದು". ಬ್ರಾಹ್ಮಣರ ಯಜ್ಞವೆಂದರೆ ವೈಭವಯುತವಾಗಿ ಧರ್ಮದ ಹೆಸರಿನಲ್ಲಿ ಪ್ರಾಣಿಗಳ ವಧೆ ಹಾಗೂ ತನ್ನ ಗೋಮಾಂಸಾಕಾಂಕ್ಷೆಯನ್ನು ಮರೆಸುವ ಅಂಧಶ್ರದ್ಧೆಯ ಮುಸುದು". ಯಜ್ಞಪಶುವಿನ ಮಾಂಸವನ್ನು ಪೂರ್ಣವಾಗಿ ಬ್ರಾಹ್ಮಣರೇ ತಮ್ಮದಾಗಿಸಿ ಕೊಳ್ಳುತ್ತಿದ್ದರು. "ಹಿಂದೂಧರ್ಮ ಭಾವನಾತ್ಮಕವಾಗಿ ಜಾತೀಯತೆಗೆ ಹತ್ತಿಕೊಂಡಿರುತ್ತದೆ. ಹಿಂದೂಧರ್ಮಕ್ಕೆ ಖಚಿತವಾದ ತತ್ವವಾಗಲೀ ಒಪ್ಪಿಕೊಂಡ ಪರಂಪರೆಯಾಗಲಿ ಇಲ್ಲ".

"ಹಿಂದೂಧರ್ಮದಲ್ಲಿ ಯಾರಿಗೂ ವಿಚಾರ ಸ್ವಾತಂತ್ರ್ಯವಿರಲಾರದು". "ಅಸಮಾನತೆ ಮತ್ತು ಭೇದಭಾವಗಳನ್ನು ಮಾನ್ಯ ಮಾಡುವ ಧರ್ಮ ಧರ್ಮವಲ್ಲ". "ಹಣೆ ಬರಹವನ್ನು ನಂಬಿ ಆತ್ಮಗೌರವವನ್ನು ಮರೆತು ಅಸಹಾಯಕತೆಯ ನಿರಾಶೆಯಿಂದ ಕೈಕಟ್ಟಿಕೊಂಡು ಕುಳಿತವರಿಗೆ ಮೋಕ್ಷವಿಲ್ಲ". "ಮೂಢನಂಬಿಕೆಗಳು ನಿಮ್ಮಿಂದ ದೂರವಿರಲಿ". "ನಿಮ್ಮ ವೃತ, ನಿಯಮ, ಪೂಜೆ ಪುನಸ್ಕಾರಗಳಿಂದ ನಿಮಗೆ ಶುಭವಾಗಿಲ್ಲ" "ಯಾವ ಶಾಸ್ತ್ರಗಳು ಬೆನ್ನ ಹಿಂದಿನ ಅನಿಷ್ಠ ಭೂತದಂತೆ ಸಾಗುತ್ತಿವೆಯೇ ಆ ಶಾಸ್ತ್ರಗಳನ್ನು ಮೊದಲು ಸುಟ್ಟು ಹಾಕಿ" ನಾನು ಮೂರ್ತಿ ಪೂಜೆ ಆರಾಧಕನಲ್ಲ, ವ್ಯಕ್ತಿಯ ಪೂಜೆ ಮಾಡುವಂತಹ ಮನುಷ್ಯನಲ್ಲ, ನಾನು ಮೂರ್ತಿಗಳನ್ನು ನಾಶಮಾಡುವಂತಹ ವ್ಯಕ್ತಿಯಾಗಿದ್ದೇನೆ" ಇದು ಅಂಬೇಡ್ಕರ್‌ರವರು ಖಚಿತವಾದ ಮಾತು.[135] ಇಂತಹ ನೂರಾರು-ಸಾವಿರಾರು ವಿಚಾರಗಳನ್ನು, ವ್ಯಾಖ್ಯೆಗಳನ್ನು ಅಂಬೇಡ್ಕರ್‌ರವರು ತಮ್ಮ ಬರಹ ಮತ್ತು ಭಾಷಣಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಅವುಗಳ ಅಧ್ಯಯನದಿಂದ ಅಂಬೇಡ್ಕರ್‌ರವರನ್ನು ಅರಿಯಲು ಸಾಧ್ಯ.

ಅಂಬೇಡ್ಕರ್ ದಲಿತರಿಗಷ್ಟೇ ಅಲ್ಲ ಇಡೀ ವಿಶ್ವದ ಮಾನವ ಸಮುದಾಯಕ್ಕೆ ದಾರಿದೀಪವಾಗಿದ್ದಾರೆ. ಅವರ ಒಂದೊಂದು ಮಾತುಗಳು ಬಸವಣ್ಣನವರು ಹೇಳುವಂತೆ ರತ್ನದ ದೀಪ್ತಿಯಂತೆ ಇವೆ. ಸ್ಫಟಿಕದ ಶಲಾಕೆಯಂತಿವೆ. ಎಮಾರ್ಸನ್ ಹೇಳುವಂತೆ ಬಾಂಬಾಗಿವೆ. ಬದುಕಿನುದ್ದಕ್ಕೂ ಸವರ್ಣೀಯ ಜನಾಂಗದಿಂದ ನಾನಾ ಬಗೆಯ ಹಿಂಸೆ, ಅಪಮಾನ, ತಿರಸ್ಕಾರಗಳನ್ನು ಕಂಡುಂಡ ಅಂಬೇಡ್ಕರ್‌ರು ಕೆಳವರ್ಗದ ಬಿಡುಗಡೆಗಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತೆ, ಸಹಬಾಳ್ವೆ, ಪ್ರಜ್ಞಾ, ಕರುಣೆ ಶೀಲ, ಬೆಳೆಸುವ ಸಲುವಾಗಿ ಮಾಡಿದ ಭಾಷಣ, ಬರೆದಲೇಖನ ಸದಾ ಮನನಕ್ಕೆ ಯೋಗ್ಯವಾದವುಗಳು, ಅಧ್ಯಯನಕ್ಕೆ ಅಡಿಗಲ್ಲಾದವುಗಳು. ಅಂಬೇಡ್ಕರ್‌ರವರ ವಿಚಾರಗಳು, ವ್ಯಾಖ್ಯಾನಗಳು ಯಾವುದೇ ಒಂದು ಜಾತಿ, ಜನಾಂಗ, ಕೋಮಿಗಾಗಿ ಹೇಳಿದವುಗಳಲ್ಲ. ಇಡೀ ಮಾನವ ಜನಾಂಗದ ಏಳಿಗೆಗಾಗಿ ಬಡತನ, ಅಜ್ಞಾನ, ಮುಗ್ಧತೆ, ಅಂಧಕಾರದಲ್ಲಿ ಮುಳುಗಿದ ಬಲಹೀನರನ್ನು ಬಲವಂತರನ್ನಾಗಿ ಮಾಡಲು, ಉಳ್ಳವರನ್ನು ಅರಿವುಳ್ಳವರನ್ನಾಗಿ ಮಾಡಲು ಹೇಳಿದ ಮಾತುಗಳಿವು - ಅವರ ಪ್ರತಿಭಟನೆಯ ಸಿಡಿಗುಂಡುಗಳಾಗಿವೆ.

ಕ್ರೌರ್ಯ, ಹಿಂಸೆ, ಬರ್ಬರತೆ, ಮತ್ತು ಅಮಾನವೀಯತೆಗಳನ್ನು ಅತ್ಯಂತ ನಾಜೂಕಾಗಿ ಧರ್ಮ ಸಮ್ಮತವಾಗಿ ರಾಜಾರೋಷವಾಗಿ ಶೋಷಣೆ ಮಾಡಿದ ವೈದಿಕರ ಮುಖಂಡತ್ವದ ಹಿಂದೂಧರ್ಮದಲ್ಲಿ ಆಗಾಗ ಅನೇಕ ಹೊಸ ಮತ-ಪಂಥ-ಸಿದ್ಧಾಂತಗಳು ವೈದಿಕರನ್ನು ವೈದಿಕ ಧರ್ಮವನ್ನು ಪ್ರತಿಭಟಿಸುತ್ತಲೇ ತಮ್ಮ ಅಸ್ತಿತ್ವವನ್ನು ಶೈವರು, ಜೈನರು, ಲೋಕಾಯುತರು, ಸಾಂಖ್ಯವಾದಿಗಳು ಮುಂತಾದವರು ಪ್ರಕಟಪಡಿಸುವ ಸಂದರ್ಭದಲ್ಲಿಯೇ ಹಿಂದೂಧರ್ಮದ ಪ್ರತಿಭಟನಾರ್ಥವಾಗಿ ಬುದ್ಧನ ಉದಯವಾಯಿತು, ದಲಿತರಿಗೆ ಬಾಯಾಗಿ, ಕಣ್ಣಾಗಿ, ಉಸಿರಾಗಿ ಬಂದ ಬೌದ್ಧಧರ್ಮ ಭಾರತದಲ್ಲಿ ಜನಪ್ರಿಯವಾಯಿತು. 12ನೇ ಶತಮಾನದಲ್ಲಿ ಕನ್ನಡನಾಡಿನಲ್ಲಿ ಬಸವಣ್ಣ ಉದಯಿಸಿ, ವೈದಿಕ ವ್ಯವಸ್ಥೆಗೆ ಹೊಡೆತ ನೀಡಿದ. ಭಾರತದಲ್ಲಿ ಮುಸ್ಲಿಂ, ಕ್ರೈಸ್ತ ಧರ್ಮಗಳ ಪ್ರವೇಶದೊಂದಿಗೆ ಧಾರ್ಮಿಕ ಸಂಘರ್ಷವೂ, ಮಂತಾಂತರವೂ ಆರಂಭಗೊಂಡಿತು.

ಹಿಂದೂಧರ್ಮದ ಜಾಗೃತಿಗಾಗಿ ಧಾರ್ಮಿಕ-ಸಾಮಾಜಿಕ ಚಳುವಳಿಯನ್ನು ಅರವಿಂದರು, ವಿವೇಕಾನಂದರು, ದಯಾನಂದ ಸರಸ್ವತಿ, ರಾಜಾರಾಮಮೋಹನರಾಯ, ಗಾಂಧೀಜಿ, ಪುಲೆಯವರು ಆರಂಭಿಸಿದರು. ಈ ಸಾಲಿನಲ್ಲಿ ಪ್ರತಿಭಟನಾತ್ಮಕ ಹೋರಾಟ ಪ್ರಾರಂಭಿಸಿದವರು. ಬಾಬಾಸಾಹೇಬ

ಅಂಬೇಡ್ಕರ್‌ರು ಭಾರತೀಯ ಅಸ್ಪೃಶ್ಯರ ಪಾಲಿಗೆ ' ದಲಿತ ಸೂರ್ಯರಾದರು'. ತಲೆ ಮತ್ತು ಕೈ (ಹಬ್ಬೆರಳು) ಕಳೆದುಕೊಂಡ ಹೆಳವ ಸಮುದಾಯದವರಿಗೆ ಸಂಜೀವಿನಿಯಾದರು. ದಲಿತರ ಪರವಾಗಿ ಎಷ್ಟರ ಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡರೆಂದರೆ ದೇಶಕ್ಕಿಂತ ಜನರ ಬದುಕು ಮುಖ್ಯ ಎಂದು ಘೋಷಿಸಿದರು. ಬುದ್ಧ, ಬಸವರಂತೆ ಸತ್ಯ ಶೋಧನೆಯಲ್ಲಿ ತಾವೂ ಭಾರತೀಯ ಆಧ್ಯಾತ್ಮ ಗ್ರಂಥಗಳನ್ನು, ಧಾರ್ಮಿಕಗ್ರಂಥಗಳನ್ನು ಜಾಗತಿಕ ಕೃತಿಗಳನ್ನು ಅಧ್ಯಯನ ಮಾಡಿ ಜ್ಞಾನದ ಎಲ್ಲ ಶಾಖೆಗಳನ್ನು ತಡಕಾಡಿದರು. ಭಾರತೀಯ ಅಸ್ಪೃಶ್ಯರ (ಅಂತ್ಯಜರ) ಬಿಡುಗಡೆಗಾಗಿ ಪ್ರತಿಭಟನಾತ್ಮಕ ಹೋರಾಟ ಕೈಕೊಂಡರು. ದಲಿತರ ಧ್ವನಿಯಾಗಿ, ಸವರ್ಣೀಯರ ಕ್ರೌರ್ಯಕ್ಕೆ ಸಿಂಹಸ್ವಪ್ನರಾಗಿ ಹಿಂದೂಧರ್ಮಶಾಸ್ತ್ರಗಳ ಬಗ್ಗೆ ತರ್ಕಬದ್ಧವಾಗಿ, ವೈಚಾರಿಕವಾಗಿ ತಮ್ಮ ವಾದಗಳನ್ನು ಮಂಡಿಸಿದರು. ದಲಿತರ ಬಾಳಿಗೆ ಜ್ಞಾನದೀಪವಾದರು, ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಬದುಕಿಗೆ, ಕಾರಣೀಪುರುಷರಾದರು.

ಡಾ॥ಅಂಬೇಡ್ಕರ್‌ರವರು 20ನೇ ಶತಮಾನದ ಮಹಾನ್ ಹೋರಾಟಗಾರರು, ಜೀವನದುದ್ದಕ್ಕೂ ದಮನಕಾರಿ ಹಿಂದೂ ಸಂಸ್ಕೃತಿ, ವ್ಯವಸ್ಥೆ, ಧರ್ಮ, ಆಚರಣೆಗಳು, ಕಂದಾಚಾರಗಳು, ಜಾತಿ, ವರ್ಗ, ವರ್ಣ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಇತ್ಯಾದಿಗಳನ್ನು ಖಂಡಿಸಿದರು. ಹಿಂದೂ ಸಿದ್ಧಾಂತದ ವಿರುದ್ಧ ಯುದ್ಧವನ್ನೇ ಸಾರಿ ಅದರ ತಾಯಿ ಬೇರನ್ನು ಅಲುಗಾಡಿಸಿದರು. ಅವರು ಕ್ರಾಂತೀಯ ಸಂಕೇತ, ಹೋರಾಟದ ಪ್ರತೀಕ, ಅಸ್ಪೃಶ್ಯರಲ್ಲಿ ಅರುಣೋದಯ ಅವರ ಬಾಳಿನಲ್ಲಿ ಆಶಾಕಿರಣವಾಗಿ ಭಾರತದ ಚರಿತ್ರೆಯಲ್ಲಿ ಸಂಘರ್ಷದ ಹೊಸಯುಗಕ್ಕೆ ನಾಂದಿ ಹಾಡಿದರು. ಹಿಂದೂಸಮಾಜದಲ್ಲಿ ಬಿರುಗಾಳಿಯಾಗಿ, ಬೆಂಕಿಯುಂಡೆಯಾಗಿ, ಜ್ವಾಲಾಮುಖಿಯಾಗಿ ಕಂಪನ ಸೃಷ್ಟಿಸಿದ ಚೇತನ".

ಅಂಬೇಡ್ಕರ್ ಅವರ ವೈಚಾರಿಕ ದೃಷ್ಟಿ ಮತ್ತು ಹೋರಾಟದ ಆದ್ಯತೆಗಳು ಇಂದಿಗೂ ಪ್ರಸ್ತುತವಾಗಿವೆ. ಅವರೇ ಹೇಳಿದಂತೆ "ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ಮೂಲಕ ಮಾತ್ರ ಗುಲಾಮಿ ಬದುಕಿನಿಂದ, ದಾಸ್ಯದ ಶೃಂಖಲೆಗಳಿಂದ, ಅವಮಾನ ಅಪಮಾನಗಳಿಂದ ತಪ್ಪಿಸಿಕೊಳ್ಳಲು ಸಾಧ್ಯ. ಅದೇ ಸಂದರ್ಭದಲ್ಲಿ ತನ್ನ ವಸ್ತ್ರ ವಸತಿಗಳನ್ನು ಪ್ರತಿಯೊಬ್ಬ ದಲಿತನು ದಕ್ಕಿಸಿಕೊಳ್ಳಲು ಸಾಧ್ಯ. ಪಾಪ-ಪುಣ್ಯ, ಸ್ವರ್ಗ-ನರಕಗಳು ಸೃಷ್ಟಿಸಿರುವ ಬಡವ-ಬಲ್ಲಿದ, ಕೂಲಿ-ಮಾಲೀಕ, ಸ್ತ್ರೀ-ಪುರುಷನೆಂಬ ಭೇದಗಳನ್ನು ತೊಡೆದು ಹಾಕಲು ಸಾಧ್ಯ".ಎಂದಿದ್ದರು.[136] ಇವೆಲ್ಲವೂ ಇಂದಿನ ಸಂದರ್ಭದಲ್ಲಿ ಗಮನೀಯವೂ, ಅರ್ಥಪೂರ್ಣವೂ ಆಗಿವೆ. ಏಕೆಂದರೆ, ಹುಟ್ಟಿನಿಂದ ಯಾರೂ ಬುದ್ಧಿವಂತರಲ್ಲ, ಅವಕಾಶ ಸಿಕ್ಕರೆ, ಬಡವನು ಬುದ್ಧಿವಂತನಾಗಬಲ್ಲ, ಗುಲಾಮನು ಯಜಮಾನನಾಗಬಲ್ಲ. ಬುದ್ಧಿ ಕೀರ್ತಿ ಮತ್ತು ನಾಯಕತ್ವಗಳು ಯಾರೋ ಒಬ್ಬರ ಸ್ವತ್ತಾಗುವುದರ ಬಗ್ಗೆ ಅವರಿಗೆ ತಕರಾರಿತ್ತು. ಆದರಂತೆ, ಕೆಲ ಮೇಲ್ಜಾತಿ ಜನರು ದಲಿತರನ್ನು 'ಅನ್‌ಟಚೇಬಲ್ಸ್"! ಎಂದಾಗ ತಳಮಳವಾಗಿತ್ತು. ಆದರೂ ಅವರು ಹೌದು, ದಲಿತರು ಅನ್‌ಟಚೇಬಲ್ಸ್! ಇವರು ಉರಿಯುವ ಸೂರ್ಯನ ತರಹ. ಮುಟ್ಟಿದರೆ ನೀವು ಸುಟ್ಟು ಹೋಗುತ್ತಿರೆಂದು ಕೆಂಡವಾಗುತ್ತಿದ್ದರು.

ಅಂಬೇಡ್ಕರ್‌ರವರ ಸಿಟ್ಟು ಆಳವಾದ ಅರಿವಿನಿಂದ, ಅಧ್ಯಯನದಿಂದ, ಪಾಂಡಿತ್ಯದಿಂದ ಬಂದದ್ದಾಗಿತ್ತು. ಹೀಗಾಗಿ ಅದಕ್ಕೆ ವಿಸ್ತೃತವಾದ ನೆಲೆ ಹಾಗೂ ಬೆಲೆ ಮತ್ತು ಹೋರಾಟದ ಕೆಚ್ಚು ಪ್ರಾಪ್ತವಾಗುತ್ತಿತ್ತು. ಅವರು ಕೇವಲ ಒಣಪಂಡಿತರಾಗಿರಲಿಲ್ಲ. ಮಹಾನ್ ಚಿಂತಕರು, ಅನುಭವ ಮತ್ತು ಅಧ್ಯಯನಗಳು ಅವರ ಬದುಕಿನಲ್ಲಿ ಅನನ್ಯವಾಗಿದ್ದವು.

* * * * *

: ಅಡಿ ಟಿಪ್ಪಣಿಗಳು :

1)	ವಸಂತಮೂನ್-ಅನು :ಬಿ.ಎ. ಸನದಿ: ಡಾ।ಬಾಬಾಸಾಹೇಬ ಅಂಬೇಡ್ಕರ್	ಹಿನ್ನುಡಿಯಿಂದ
2)	ದೇವಯ್ಯ ಹರವೆ (ಸಂ) : ಡಾ । ಅಂಬೇಡ್ಕರ್ ವಿಶೇಷಾಂಕ:ಸಂಕ್ರಮಣ	ಕೊನೆಯ ಪುಟ
3)	ವಸಂತಮೂನ್-ಅನು :ಬಿ.ಎ. ಸನದಿ :ಡಾ। ಬಾಬಾಸಾಹೇಬ್ ಅಂಬೇಡ್ಕರ್	ಪುಟ 4
4)	ಕೆ.ಜಿ. ಸುರೇಶ್ :ಭಾರತೀಯ ರಾಜಕೀಯ ಚಿಂತಕರು	ಪುಟ 343
5)	ದಾಸನೂರು ಕೂಸಣ್ಣ :ಡಾ । ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ	ಪುಟ 8
6)	ಅದೇ ಗ್ರಂಥ	ಪುಟ 11
7)	ಡಾ। ಅಂಬೇಡ್ಕರ್ ಸಾಮಾಜಿಕ ಚಿಂತನೆ	ಪುಟ 17
8)	ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5	ಪುಟ 331-32
9)	ಅದೇ ಗ್ರಂಥ	ಪುಟ 336
10)	ಅದೇ ಗ್ರಂಥ	ಪುಟ 336
11)	ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-7	ಪುಟ 17
12)	ಅದೇ ಗ್ರಂಥ	ಪುಟ 18
13)	ಮಂಗಳೂರು ವಿಜಯ (ಸಂ): ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ:	ಪುಟ 167
14)	ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5	ಪುಟ 453
15)	ಅದೇ ಗ್ರಂಥ	ಪುಟ 470
16)	ವಸಂತಮೂನ್ ಅನು :ಬಿ.ಎ.ಸನದಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್	ಪುಟ 197
17)	ಮಂಗಳೂರು ವಿಜಯ (ಸಂ) ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ	ಪುಟ 438
18)	ಅದೇ ಗ್ರಂಥ	ಪುಟ 440
19)	ಪ್ರೊ. ಶಿವರುದ್ರಪ್ಪ ಕಲ್ಲೋಳಿಕರ, ಪ್ರೊ.ವೈ.ಬಿ.ಹಿಮ್ಮಡಿ(ಸಂ) ಸ್ವಾಭಿಮಾನ ಶಿಲ್ಪಿ	ಪುಟ 79
20)	ಮಂಗಳೂರು ವಿಜಯ (ಸಂ) :ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ	ಪುಟ 445
21)	ವಸಂತಮೂನ್ ಅನು :ಬಿ.ಎ.ಸನದಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್	ಪುಟ 236
22)	ಬರಗೂರ ರಾಮಚಂದ್ರಪ್ಪ : ಅಂಬೇಡ್ಕರ್ ದಲಿತ ಧ್ವನಿ ಲೇಖನ ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ	'ಆಯ್ದ ಭಾಗ'
23)	ಮಹಾಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಪ್ರ: ನಿರ್ದೇಶಕರು, ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು	ಪುಟ 13
24)	ಅದೇ ಗ್ರಂಥ	ಪುಟ 13
25)	ಅದೇ ಗ್ರಂಥ	ಪುಟ 14
26)	ಅದೇ ಗ್ರಂಥ	ಪುಟ 15
27)	ಬರಗೂರ ರಾಮಚಂದ್ರಪ್ಪ : ಅಂಬೇಡ್ಕರ್ ದಲಿತ ಧ್ವನಿ ಲೇಖನ ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ	'ಆಯ್ದ ಭಾಗ'
28)	ಮಂಗಳೂರು ವಿಜಯ (ಸಂ) ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ	ಪುಟ 430
29)	Dhanjayakeer : Dr. Ambedkar Life and mission -	ಪುಟ 60
30)	ಅದೇ ಗ್ರಂಥ	ಪುಟ 71
31)	ಡಾ। ಕೆ. ವೆಂಕಟೇಶ್(ಸಂ) : ಅಂಬೇಡ್ಕರ್ ಒಂದು ಮರುವ್ಯಾಖ್ಯಾನ	ಪುಟ xii
32)	ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5	ಪುಟ 545
33)	ಡಾ। ಕೆ. ವೆಂಕಟೇಶ್(ಸಂ) : ಅಂಬೇಡ್ಕರ್ ಒಂದು ಮರುವ್ಯಾಖ್ಯಾನ	ಪುಟ 48

34) ಡಾ।ಬಸವರಾಜ ಸಬರದ (ಸಂ) : 'ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು' ಪುಟ 176
35) ಡಾ। ಅರವಿಂದ ಮಾಲಗಿತ್ತಿ (ಸಂ) : ಅಂಬೇಡ್ಕರ್ ವಿಚಾರಧಾರೆ ಪುಟ 60
36) ಆರ್. ವಿ. ಭಂಡಾರಿ: ವರ್ಣದಿಂದ ವರ್ಗದ ಕಡೆಗೆ ಪುಟ 167
37) ಡಾ. ಟಿ.ಆರ್. ಚಂದ್ರಶೇಖರ್(ಸಂ) 'ದಲಿತ ಅಧ್ಯಯನ' ಪುಟ 327
38) ಡಾ.। ಅರವಿಂದ ಮಾಲಗಿತ್ತಿ (ಸಂ) :ಡಾ। ಅಂಬೇಡ್ಕರ್ ವಿಚಾರಧಾರೆ. ಪುಟ 121
39) ಅದೇ ಗ್ರಂಥ ಪುಟ 128
40) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-1 ಪುಟ 5
41) - ಅದೇ ಗ್ರಂಥ - ಪುಟ 23
42) - ಅದೇ ಗ್ರಂಥ - ಪುಟ 20
43) - ಅದೇ ಗ್ರಂಥ - ಪುಟ 29
44) - ಅದೇ ಗ್ರಂಥ - ಪುಟ 29
45) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5 ಪುಟ 483
46) - ಅದೇ ಗ್ರಂಥ - ಪುಟ 483
47) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-1 ಪುಟ 122
48) - ಅದೇ ಗ್ರಂಥ - ಪುಟ 95-96
49) - ಅದೇ ಗ್ರಂಥ - ಪುಟ 100
50) - ಅದೇ ಗ್ರಂಥ - ಪುಟ 77
51) - ಅದೇ ಗ್ರಂಥ - ಪುಟ 78
52) - ಅದೇ ಗ್ರಂಥ - ಪುಟ 80
53) - ಅದೇ ಗ್ರಂಥ - ಪುಟ 88
54) Dhananjayakeer : Dr. Ambedkar Life and mission ಪುಟ 103
55) - ಅದೇ ಗ್ರಂಥ - ಪುಟ 108
56) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5 ಪುಟ 169
57) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 97
58) - ಅದೇ ಗ್ರಂಥ - ಪುಟ 101
59) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-7 ಪುಟ 30
60) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5 ಪುಟ 32
61) - ಅದೇ ಗ್ರಂಥ - ಪುಟ 35
62) - ಅದೇ ಗ್ರಂಥ - ಪುಟ 135
63) - ಅದೇ ಗ್ರಂಥ - ಪುಟ 138
64) - ಅದೇ ಗ್ರಂಥ - ಪುಟ 154
65) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-7 ಪುಟ 78
66) - ಅದೇ ಗ್ರಂಥ - ಪುಟ 65
67) - ಅದೇ ಗ್ರಂಥ - ಪುಟ 68
68) - ಅದೇ ಗ್ರಂಥ - ಪುಟ 68
69) - ಅದೇ ಗ್ರಂಥ - ಪುಟ 73
70) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-5 ಪುಟ 174

71) - ಅದೇ ಗ್ರಂಥ - ಪುಟ 174
72) ಮೊಗಳ್ಳಿಗಣೇಶ್ :ದಲಿತರು ಮತ್ತು ಜಾಗತೀಕರಣ ಪುಟ 247
73) 'ಸಂಕ್ರಮಣ' - ಪತ್ರಿಕೆ ಸಂ : 28 ಸಂಚಿಕೆ 4-5, ಏಪ್ರಿಲ್-ಮೇ 1993 ಪುಟ 37
74) Dhananjayakeer : Dr. Ambedkar Life and mission - ಪುಟ 273
75) - ಅದೇ ಗ್ರಂಥ - ಪುಟ 229
76) - ಅದೇ ಗ್ರಂಥ - ಪುಟ 212
77) ಡಾ । ಎಸ್. ಚಂದ್ರಶೇಖರ್ :ಅಂಬೇಡ್ಕರ್ ಮತ್ತು ಗಾಂಧೀ - ಪುಟ ix
78) - ಅದೇ ಗ್ರಂಥ - ಪುಟ 12
79) ಡಾ।ಮ.ನ. ಜವರಯ್ಯ :ಅಂಬೇಡ್ಕರ್ ವಿಚಾರ ಸಾಹಿತ್ಯ ಸಮಗ್ರ ಅಧ್ಯಯನ ಪುಟ 350
80) - ಅದೇ ಗ್ರಂಥ - ಪುಟ 351
81) Dhananjayakeer : Dr. Ambedkar Life and mission ಪುಟ 99
82) - ಅದೇ ಗ್ರಂಥ - ಪುಟ 127
83) - ಅದೇ ಗ್ರಂಥ - ಪುಟ 273
84) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-1 ಪುಟ 195
85) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 663
86) Dr. Ambedkar Life and mission - Dhananjayakeer ಪುಟ 492
87) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 635
88) Dr. Ambedkar Life and mission - Dhananjayakeer ಪುಟ 500
89) ಮಂಗಳೂರು ವಿಜಯ (ಸಂ) ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ ಪುಟ 445
90) ಡಾ.ಮ.ನ. ಜವರಯ್ಯ, (ಅನು): ಮೂಲ:ಡಾ । ಬಿ.ಆರ್.ಅಂಬೇಡ್ಕರ್: ಜಾತಿ ಸತಿ ಮತ್ತು ಮಹಿಳೆ ಪುಟ xxxi
91) ಅದೇ ಗ್ರಂಥ (ಮನುಸ್ಮೃತಿ-ಶ್ಲೋಕಗಳು 9-11, 9-3, 2-3, 2-14 ಇತ್ಯಾದಿ) ಪುಟ xxxi
92) ಡಾ । ಟಿ.ಆರ್. ಚಂದ್ರಶೇಖರ್ (ಸಂ) :ದಲಿತ ಅಧ್ಯಯನ ಪುಟ 208
93) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 216
94) ಡಾ । ಟಿ.ಆರ್. ಚಂದ್ರಶೇಖರ್ (ಸಂ) :ದಲಿತ ಅಧ್ಯಯನ ಪುಟ 209
95) - ಅದೇ ಗ್ರಂಥ - ಪುಟ 210
96) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 616
97) ಡಾ । ಟಿ.ಆರ್. ಚಂದ್ರಶೇಖರ್ (ಸಂ) :ದಲಿತ ಅಧ್ಯಯನ ಪುಟ 220
98) - ಅದೇ ಗ್ರಂಥ - ಪುಟ 221
99) ದಾಸನೂರು ಕೂಸಣ್ಣ,: ಡಾ । ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ ಪುಟ 85
100) ಮಂಗಳೂರು ವಿಜಯ (ಸಂ) ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ ಪುಟ 345
101) ವಸಂತಮೂನ್ ಅನು :ಬಿ.ಎ.ಸನದಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್ ಪುಟ 184
102) - ಅದೇ ಗ್ರಂಥ - ಪುಟ 207
103) - ಅದೇ ಗ್ರಂಥ - ಪುಟ 208
104) ಡಾ । ಮ.ನ. ಜವರಯ್ಯ :ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ ಪುಟ 387
105) Dr. Ambedkar Annihilation of caste Babasaheb Ambedkar writings and speeches Vol. I ಪುಟ 77
106) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 127

107) - ಅದೇ ಗ್ರಂಥ - ಪುಟ 54

108) - ಅದೇ ಗ್ರಂಥ - ಪುಟ 37

109) ರಹಮತ್ ತರಿಕೇರಿ : ಧರ್ಮ ವಿಶ್ವಕೋಶ - 3 ಸಂ : ಪುಟ 332

110) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 112

111) - ಅದೇ ಗ್ರಂಥ - ಪುಟ 93

112) ಡಾ । ಜಿ.ಎಸ್. ಶಿವರುದ್ರಪ್ಪ, ಡಾ । ಶ್ರೀ ರಾಮಭಟ, ಮಾಹೆರ್ ಮನ್ಸೂರ್ (ಸಂ) ದೀಪಧ್ವನಿ. ಪುಟ 60

113) - ಅದೇ ಗ್ರಂಥ - ಪುಟ 116

114) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 221

115) - ಅದೇ ಗ್ರಂಥ - ಪುಟ 53

116) ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-4 ಪುಟ 36

117) - ಅದೇ ಗ್ರಂಥ - ಪುಟ 37

118) - ಅದೇ ಗ್ರಂಥ - ಪುಟ 350

119) - ಅದೇ ಗ್ರಂಥ - ಪುಟ 354

120) - ಅದೇ ಗ್ರಂಥ - ಪುಟ 379

121) ತೆಲಗುಮೂಲ:ಡಿ.ಆರ್.ಕುಸುಮ,(ಅನು)ಕೆ.ನಾರಾಯಣಸ್ವಾಮಿ ಅಂಬೇಡ್ಕರ್‌ವಾಣಿ ಪುಟ 33

122) ಭಗವತ್ ಶರಣಗುಪ್ತ: ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ' ಅನು :ಪ್ರಧಾನ ಗುರುದತ್ತ: ಪುಟ 30

123) ಸಂ : ರಹಮತ್ ತರಿಕೇರಿ, :ಧರ್ಮ ವಿಶ್ವಕೋಶ :3 ಪುಟ 80

124 ಪ್ರೊ. ಕೆ.ಎಸ್. ಪಾಟೀಲ್ :ಡಾ ಅಂಬೇಡ್ಕರ್ ಮತ್ತು ರಾಷ್ಟ್ರೀಯತೆ ಪುಟ 13

125 ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-4 ಪುಟ xxxii

126 - ಅದೇ ಗ್ರಂಥ - ಪುಟ 7

127 - ಅದೇ ಗ್ರಂಥ - ಪುಟ 37

128 - ಅದೇ ಗ್ರಂಥ - ಪುಟ 37

129 - ಅದೇ ಗ್ರಂಥ - ಪುಟ 350

130 ಡಾ। ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂ-3 ಪುಟ 256-260

131 ಮಂಗಳೂರ ವಿಜಯ(ಸಂ) : ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ ಪುಟ 398

132 - ಅದೇ ಗ್ರಂಥ - ಪುಟ 430

133 ತೆಲಗುಮೂಲ:ಡಿ.ಆರ್.ಕುಸುಮ,(ಅನು)ಕೆ.ನಾರಾಯಣಸ್ವಾಮಿ ಅಂಬೇಡ್ಕರ್‌ವಾಣಿ ಪುಟ 16

134 - ಅದೇ ಗ್ರಂಥ - ಪುಟ 49

135 ಡಾ । ಟಿ.ಎಂ. ಭಾಸ್ಕರ್ (ಸಂ) "ಭಾರತ ರತ್ನ ಡಾ। ಬಿ.ಆರ್. ಅಂಬೇಡ್ಕರ್ ಅವರ 'ಸಾವಿರದ ಸ್ಲೋಗನ್ಸ್" ಪುಟ 24-53

136 ಡಾ. ಕೆ. ವೆಂಕಟೇಶ್ (ಸಂ):ಸಂಸ್ಕೃತಿ :ಅಂಬೇಡ್ಕರ್ :ಒಂದು ಮರುವ್ಯಾಖ್ಯಾನ. ಪುಟ 122

# # # # #

ಅಧ್ಯಾಯ - 5

ಪ್ರಸ್ತುತ ಸಂದರ್ಭದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ವಿಚಾರಗಳು

5.1 ಬುದ್ಧ ವಿಚಾರಗಳ ಪ್ರಸ್ತುತತೆ..

5.2 ಬಸವ ವಿಚಾರಗಳ ಪ್ರಸ್ತುತತೆ.

5.3 ಅಂಬೇಡ್ಕರ್ ವಿಚಾರಗಳ ಪ್ರಸ್ತುತತೆ.

ಅಧ್ಯಾಯ -5.

ಪ್ರಸ್ತುತ ಸಂದರ್ಭದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ವಿಚಾರಗಳು

ಪ್ರಸ್ತಾವನೆ :

ನಮ್ಮ ಸಾಂಪ್ರದಾಯಿಕ, ಪರಂಪರಾಗತ, ಶ್ರೇಣೀಕೃತ ಸಮಾಜದ ಎದ್ದು ಕಾಣುವ ವೈರೀತ್ಯ, ವೈರುಧ್ಯ ಎಂದರೆ ಅಸಮತೆ, ಅಸಮಾನತೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸಮಾನತೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಲವರು ಶ್ರೀಮಂತರು, ಬಲಿಷ್ಠರು, ಪ್ರತಿಷ್ಠಿತರು; ಬಹುಸಂಖ್ಯಾತ ಜನ ಬಡವರು, ದುರ್ಬಲರು, ಯಾವ ಸ್ಥಾನಮಾನವೂ ಇಲ್ಲದವರು. ಶತಶತಮಾನಗಳಿಂದಲೂ ಸಾಮಾಜಿಕವಾಗಿ ಮೇಲ್ವರ್ಗಗಳ, ಬಲಿಷ್ಠರ ಕಾಲ್ತುಳಿತಕ್ಕೆ, ದಬ್ಬಾಳಿಕೆಗೆ ಸಿಕ್ಕಿ, ಜರ್ಝರಿತರಾಗಿರುವ ಕೆಳವರ್ಗಗಳಿಗೆ ಸೇರಿದ ಬಡವರು, ದೀನ-ದಲಿತರು ಕ್ರೂರ, ಅಮಾನವೀಯ ಶೋಷಣೆಗೊಳಗಾಗಿ ಸಾಮಾಜಿಕ ನ್ಯಾಯದಿಂದ, ನೆಮ್ಮದಿಯ ಗೌರವಯುತ ಜೀವನ ನಡೆಸುವ ಅವಕಾಶಗಳಿಂದ ವಂಚಿತರಾಗಿದ್ದಾರೆ. ಉಳ್ಳವರಿಗೆ ಎಲ್ಲವೂ ಉಂಟು, ಇಲ್ಲದವರಿಗೆ ಏನೂ ಇಲ್ಲ! ಇಂತಹ ವಿಷಯ ಹೃದಯಹೀನ ಸಾಮಾಜಿಕ ವ್ಯವಸ್ಥೆಗೆ ವೇದಕಾಲದಿಂದಲೂ ನಡೆದು ಬಂದಿರುವ ಚಾತುರ್ವರ್ಣ ವ್ಯವಸ್ಥೆ ಅನಿಷ್ಠ ಜಾತಿ ಪದ್ಧತಿ ಬಲ-ಬೆಂಬಲ ನೀಡಿದೆ. ಈ ಚಾತುರ್ವರ್ಣ ವ್ಯವಸ್ಥೆಗೆ ಋಗ್ವೇದದ 'ಪುರುಷಸೂಕ್ತ ಮತ್ತು ಭಗವದ್ಗೀತೆಗಳ ಸಮರ್ಥನೆ ಇರುವುದರಿಂದ, ಅದು ಪ್ರಶ್ನಾತೀತ, ಅನುಲ್ಲಂಘನೀಯ. ತತ್ಪರಿಣಾಮವಾಗಿ ಜಾತಿ ಪದ್ಧತಿಯು ಹಿಂದೂ ಸಮಾಜದ ನೆಲೆಗಟ್ಟಾಗಿ, ಜನ ಸಮುದಾಯವನ್ನು ಜಾತಿ ಉಪಜಾತಿಗಳಾಗಿ ವಿಂಗಡಿಸಿ, ವಿಭಜಿಸಿ, ಅಡ್ಡಗೋಡೆಗಳನ್ನು ನಿರ್ಮಿಸಿ, ಜನತೆಯ ಭಾವೈಕ್ಯತೆಗೂ, ದೇಶದ ಪ್ರಗತಿಗೂ ಮಾರಕವಾಗಿ, ಘೋರ ಶಾಪವಾಗಿ ಪರಿಣಮಿಸಿದೆ. ಹಿಂಸೆ, ಶೋಷಣೆ ಮತ್ತು ಅನ್ಯಾಯಗಳಿಂದ ಕೂಡಿದ ಈ ಅಮಾನವೀಯ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸಲು ಕ್ರಿ.ಪೂ. 6ನೇ ಶತಮಾನದಲ್ಲಿ ಬುದ್ಧ ಕ್ರಿ.ಶ. 12ನೇ ಶತಮಾನದಲ್ಲಿ ಬಸವಣ್ಣ, 20ನೇ ಶತಮಾನದಲ್ಲಿ ಡಾ|ಬಾಬಾ ಸಾಹೇಬ ಅಂಬೇಡ್ಕರ್‌ರವರು ಹೋರಾಡಿದರು. ಅವರ ತತ್ವ ಚಿಂತನೆಗಳು ಇಂದು ಕೂಡಾ ಪ್ರಸ್ತುತ ಏಕೆಂದರೆ ಯಾವ ಸಮಸ್ಯೆಗಳ ನಿವಾರಣೆಗೆ ಆ ಮಹನೀಯರು ಹೋರಾಡಿದರೋ ಅಂತಹ ಕೆಲ ಸಮಸ್ಯೆಗಳು ಇನ್ನೂ ಆಚರಣೆಯಲ್ಲಿರುವುದರಿಂದ ಅವುಗಳಿಂದ ಪಾರಾಗಿ ಅಭಿವೃದ್ಧಿ ಹೊಂದಲು ಇವರ ಹೋರಾಟದ ಪ್ರಯತ್ನ ನಿರಂತರವಾಗಬೇಕಾದ ಅಗತ್ಯವಿದೆ ಎಂದೆನಿಸುತ್ತದೆ.

ಪ್ರಸ್ತುತ ಸಾಮಾಜಿಕ ಸಂದರ್ಭ, ಸಮಸ್ಯೆಗಳ ಸುಳಿಯಲ್ಲಿ ಮುಳುಗಿ ಹೋಗಿದೆ. ಜಾತಿ ಜಗಳ, ಅಸಮಾನತೆ, ಪ್ರತ್ಯೇಕತೆ, ಮಹಿಳಾ ಶೋಷಣೆ, ಅಂಧಾಭಿಮಾನದಂತಹ ಜ್ವಲಂತ ಸಮಸ್ಯೆಗಳು ಈಗ ಮತ್ತಷ್ಟು ಉರಿಯತೊಡಗಿವೆ. ಧರ್ಮವನ್ನು, ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡ ಅನೇಕರು ಜ್ವಲಂತ ಸಮಸ್ಯೆಗಳ ಮರುಹುಟ್ಟಿಗೆ ಕಾರಣರಾಗಿದ್ದಾರೆ. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಅನೇಕ ಚಿಂತಕರ ಚಿಂತನೆಗಳು ನಮಗೆ ಮಾರ್ಗ ತೋರಿಸಬಲ್ಲವುಗಳಾಗಿವೆ. ಈ ದೇಶದ ಪ್ರಮುಖ ಚಿಂತಕರಾದ ಬುದ್ಧ, ಬಸವ, ಅಂಬೇಡ್ಕರ್, ಲೋಹಿಯಾ, ಗಾಂಧೀ, ಪೆರಿಯಾರ್ ಈ ಮುಂತಾದವರ ವಿಚಾರಗಳು ಇಂದಿಗೂ

ನಮ್ಮನ್ನು ಚಿಂತನೆಗೆ ತೊಡಗಿಸುತ್ತವೆ. ಬುದ್ಧನ ಜೀವನ ಪ್ರೀತಿ, ಬಸವಣ್ಣನ ದಯೆ, ಅಂಬೇಡ್ಕರ್‌ರವರ ಹೋರಾಟ, ಗಾಂಧೀಜಿಯ ಸರಳತೆ, ಲೋಹಿಯಾರ ನಿಷ್ಠುರತೆ, ಮತ್ತೆ ಮತ್ತೆ ನಮ್ಮ ಚಿಂತನೆಯ ಮೂಸೆಯಲ್ಲಿ ಮೂಡಿ ಬಂದಾಗ ಹೊಸ ಬೆಳಕು ಕಾಣಬಹುದಾಗಿದೆ.

ನಾಡಿನ ಪ್ರಗತಿಪರ ಶಕ್ತಿಗಳಿಗೆ, ವ್ಯಕ್ತಿಗಳಿಗೆ ಬಸವಣ್ಣ ಒಂದು ಮಾರ್ಗಸೂಚಿ ಸಂಕೇತ. ಈ ಮಾರ್ಗಕ್ಕೆ ಕೊನೆ ಎಂಬುದಿಲ್ಲ. ಬಸವಣ್ಣನ ಹೊಟ್ಟೆಯಲ್ಲಿ ಬುದ್ಧನಿದ್ದ ಹಾಗೆ ಬುದ್ಧ, ಬಸವಣ್ಣ ಇಬ್ಬರೂ ಅಂಬೇಡ್ಕರ್‌ರ ಹೊಟ್ಟೆಯಲ್ಲಿದ್ದಾರೆ, ಕ್ರಾಂತೀಯ ಈ ಪ್ರಕ್ರಿಯೆಯನ್ನು ನಾವು ಗಂಭೀರವಾಗಿ ಅರ್ಥ ಮಾಡಿಕೊಳ್ಳಬೇಕು.[1]

ಜಗತ್ತಿನ ಅತೀ ಶ್ರೇಷ್ಠ ಚಿಂತಕರು ಭಾರತದಲ್ಲಿ ಹುಟ್ಟಿದರೂ ದುರದೃಷ್ಟವಶಾತ್ ಸಮಾನತೆಯ ಪದ ನ್ಯಾಯದ ಪುಸ್ತಕಗಳಲ್ಲಿ ಅಡಗಿ ಕುಳಿತಿದೆ. ಬುದ್ಧ, ಬಸವ, ನಾನಕ, ಕಬೀರ, ಸರ್ವಜ್ಞ ಇನ್ನೂ ಅನೇಕರು ಇಲ್ಲಿನ ವ್ಯವಸ್ಥೆಯನ್ನು ಟೀಕಿಸಿದರೂ ನಾವು ಜಪ್ಪೆನ್ನಲಿಲ್ಲ. ಅನ್ಯಾಯ, ಅಸಮಾನತೆ, ಅಮಾನವೀಯತೆ ತಾಂಡವವಾಡುತ್ತಿದೆ. ಇನ್ನೂ ಇವರು ಪ್ರತಿಪಾದಿಸಿದ ತತ್ವ ವಿಚಾರಗಳೆಲ್ಲವೂ ಬೋಧನೆಗಳಿಗಷ್ಟೇ ಸೀಮಿತವಾಗಿರುವುದು. ಇಷ್ಟೊಂದು ಪ್ರಬಲ ವೈಚಾರಿಕತೆಗಳು ಕಾಲಕಾಲಕ್ಕೆ ಬಂದು ಹೋಗಿದ್ದರೂ ವ್ಯವಸ್ಥೆಯ ಪಲ್ಲಟ ಸಾಧ್ಯವಾಗದಿರುವುದು ಮೌಢ್ಯವೇ ಮತ್ತೆ ಸ್ಥಾಯಿಯಾಗುತ್ತಿರುವುದು ಆಶ್ಚರ್ಯಕರ ಸಂಗತಿ. ಇಂತಹ ಸ್ಥಿತಿ ಇಂದು ಇದ್ದು, ಬುದ್ಧ, ಬಸವ, ಅಂಬೇಡ್ಕರ್‌ರವರ ವಿಚಾರಧಾರೆಗಳ ಪುನರ್‌ಮನನ, ಆಚರಣೆ, ವೈಚಾರಿಕ ಚಿಂತನೆ ಇಂದಿನ ಸಂದರ್ಭದಲ್ಲಿ ಅಗತ್ಯವೆನಿಸುತ್ತವೆ. ಏಕೆಂದರೆ ಚರಿತ್ರೆಯನ್ನು ಅರಿಯದವರು ಚರಿತ್ರೆಯನ್ನು ನಿರ್ಮಿಸಲಾರರು.

5.1 ಬುದ್ಧ ವಿಚಾರಗಳ ಪ್ರಸ್ತುತತೆ :

ಬುದ್ಧ ಈ ನೆಲದ ಸರ್ವಶ್ರೇಷ್ಠ ಶಾಂತಿದೂತ, ವೈಚಾರಿಕ ಪಥವನ್ನು ತುಳಿಯುವುದರ ಮೂಲಕ ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿದ ಈ ಮಹಾಚೇತನ ಮಾನವನ ಬದುಕಿನಲ್ಲಿ ಶುದ್ಧವಾದ ದೃಷ್ಟಿಕೋನ, ಆಶೋತ್ತರ, ಮಾತು, ವರ್ತನೆ, ಜೀವನ, ಪ್ರಯತ್ನ, ಆಲೋಚನೆ, ಉದ್ದೇಶಗಳು, ಹಿಂಸಾರಹಿತವಾಗಿ ನಿಸ್ವಾರ್ಥದ ನೆಲೆಯಲ್ಲಿ ಬೆಳೆದುಬರಬೇಕು ಎಂದನು. ಬೌದ್ಧಧರ್ಮ ಇತರ ಧರ್ಮಗಳಂತೆ ಸಂಪ್ರದಾಯದ ನೆಲೆಯಲ್ಲಿ ನಿಲ್ಲುವಂತಹದ್ದಲ್ಲ. ಅದೊಂದು ತತ್ವನಿಯಮ, ಅತ್ಯಂತ ವಾಸ್ತವಿಕ ನೆಲೆಯಲ್ಲಿ ವೈಚಾರಿಕ, ವೈಜ್ಞಾನಿಕ ಆಲೋಚನೆಗಳ ನಿಜಮೊತ್ತ. ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರಗಳಿಗೆ ಬೌದ್ಧಧರ್ಮದಲ್ಲಿ ಅವಕಾಶವಿಲ್ಲ.

ಬುದ್ಧನ ಪ್ರಕಾರ ಧರ್ಮವು ಮಾನವನ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕು ಹೊರತು ದೇವರು, ಆತ್ಮ, ನರಕ, ಸ್ವರ್ಗ, ಭೂಮಿ, ಆದಿ, ಅಂತ್ಯ ಇತರೆ ವಾದ ವಿವಾದಗಳಿಗಲ್ಲ. ಧರ್ಮವು ಸತ್ಯ, ಮೈತ್ರಿ, ಶೀಲ, ಕರುಣೆ, ನೈತಿಕತೆಯಿಂದ ಕೂಡಿರಬೇಕು. ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು. ಬುದ್ಧನ ಪ್ರಕಾರ ಹುಟ್ಟು ಶ್ರೇಷ್ಠವಲ್ಲ. ಮಾನವ ಮಾನವರಲ್ಲಿ ಯಾರೂ ಕೀಳಲ್ಲ, ಯಾರೂ ಮೇಲಲ್ಲ. ಒಳ್ಳೆಯ ಕಾರ್ಯ ಮಾಡುವುದರಿಂದ ಎಲ್ಲರೂ ಒಳ್ಳೆಯವರಾಗುತ್ತಾರೆ. ಬುದ್ಧ ಕರ್ಮಠರ ಯಜ್ಞ, ಯಾಗ, ಕಂದಾಚಾರಗಳನ್ನು ವಿರೋಧಿಸಿದ. ಮನುಷ್ಯನ ಆಸೆ ದುಃಖಗಳಿಗೆ ಬುದ್ಧನ

ಸಿದ್ಧಾಂತವೇ ಪರಿಹಾರ. ಸಮಾಜದ ಅನಿಷ್ಟ ಜಾತಿ ಪದ್ಧತಿಯನ್ನು ಖಂಡಿಸಿದ. ಬುದ್ಧ ತನ್ನ ಭಿಕ್ಷು ಸಂಘದಲ್ಲಿ ಸುನೀತನಂತಹ ಅಸ್ಪೃಶ್ಯರನ್ನು ಮತ್ತು ಅಮ್ರಪಾಲಿಯಂತಹ ವೇಶ್ಯೆಯನ್ನು ಸೇರಿಸಿಕೊಂಡು ಅವರಿಗೆ ನ್ಯಾಯವಾಗಿ ದೊರಕಬೇಕಾದ ಮಾನವ ಗೌರವ ಮತ್ತು ಸಮಾನತೆಯನ್ನು ದೊರಕಿಸಿ ಕೊಟ್ಟ. ಮಹಾಕ್ರೂರಿ ಅಂಗುಲಿಮಾಲನನ್ನು ಮನುಷ್ಯನನ್ನಾಗಿ ಪರಿವರ್ತಿಸಿದ. ಸ್ತ್ರೀ ಸಮಾನತೆ, ಸ್ಥಾಪಿಸಲು ಭಿಕ್ಷುಸಂಘದಲ್ಲಿ ಸ್ತ್ರೀಯರಿಗೆ ಅವಕಾಶ ನೀಡಿದ. ಬುದ್ಧ ಮೂರ್ತಿಪೂಜೆಯನ್ನು ಧಿಕ್ಕರಿಸಿದ. ಸಾಮಾಜಿಕ ಕ್ರಾಂತಿ ಮಾಡಿ ಪರಿವರ್ತನೆಯನ್ನು ತಂದನು.

ವೈದಿಕಧರ್ಮದ ವಿಧಿ, ವಿಧಾನ, ಅಂಧಾನುಕರಣೆಗಳ ವಿರುದ್ಧ ಸಿಡಿದೆದ್ದ ಧರ್ಮವಾದುದರಿಂದ ಬೌದ್ಧಧರ್ಮ ಅವೈದಿಕ ಧರ್ಮವೆನಿಸಿಕೊಂಡಿದೆ. ಆದರೆ ಬುದ್ಧ ಬೋಧನೆಯಲ್ಲಿ ವೇದ ಉಪನಿಷತ್ತುಗಳ ಸಾರ ಸಂಗ್ರಹವಿದೆ. ಹಿಂಸಾತ್ಮಕವಾದ ಯಜ್ಞ-ಯಾಗಗಳಿಗೆ ಸ್ಥಾನವಿಲ್ಲ. ಯಾವುದನ್ನೇ ಆಗಲಿ ಸ್ವಾನುಭವ, ಸ್ವಚಿಂತನೆ, ವಿವೇಕದ ಒರೆಗಲ್ಲಿಗೆ ಹಚ್ಚಿ ನೋಡಬೇಕೆಂಬ ಆಧುನಿಕ ವೈಚಾರಿಕ ಮನೋಭಾವವಿದೆ. ಭಾರತದಲ್ಲಿ ಧಾರ್ಮಿಕ ವಲಯದಲ್ಲಿ ವಿಚಾರ ಯುಗಕ್ಕೆ ಆದ್ಯತೆಯನ್ನು ನೀಡಿದ ಬುದ್ಧನು ನಿದ್ರೆಯಲ್ಲಿ ಮಗ್ನವಾಗಿರುವ ಜಗತ್ತನಲ್ಲಿ ಜಾಗೃತನಾಗಿರುವವನು ಬುದ್ಧನೊಬ್ಬನೇ ಎಂಬ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಬುದ್ಧನ ಅನುಕಂಪ, ಮಾನವ ಪ್ರೇಮ, ಸರಳ ತತ್ವಗಳು ಬಹು ಬೇಗನೇ ಜನರನ್ನು ಆಕರ್ಷಿಸಿದವು. ಬೌದ್ಧಧರ್ಮವನ್ನು ಹಲವರು ಸ್ವೀಕರಿಸಿದರು. ಈ ಕಾಲವನ್ನು ಮಾನವ ಪ್ರಗತಿಯ ಒಂದು ಮೈಲಿಗಲ್ಲೆಂದು ಇತಿಹಾಸಕಾರರು ನಿರ್ಣಯಿಸಿದ್ದಾರೆ.[2]

ಬೌದ್ಧಧರ್ಮ ಗಣನೀಯವಾಗಿ ಪ್ರಸಾರವಾಗುತ್ತಿರುವುದಕ್ಕೆ ಇನ್ನೊಂದು ಪ್ರಮುಖ ಕಾರಣವೆಂದರೆ ದಲಿತರ ಸಾಮೂಹಿಕ ಮತಾಂತರ. ವ್ಯಕ್ತಿ ಮತ್ತು ಸಮಾಜದ ನಡುವಣ ಸಂಬಂಧವನ್ನು ಬೌದ್ಧಧರ್ಮ ಬೆಸೆಯುತ್ತದೆ. ಒಂದು ಜನಾಂಗವನ್ನು ಸಮಾಜದಿಂದ ಬಹಿಷ್ಕರಿಸಿ, ಕೀಳಾಗಿ, ಆಳಾಗಿ ನೋಡುವಂತಹ ಕ್ರೂರಪದ್ಧತಿ ಹಿಂದೂಧರ್ಮದಲ್ಲಿರುವಂತೆ ಬೌದ್ಧ ಧರ್ಮದಲ್ಲಿಲ್ಲ. ಬೌದ್ಧಧರ್ಮದಲ್ಲಿರುವ ಔದಾರ್ಯ, ಮಾನವೀಯ ತತ್ವಗಳು, ಜಾತ್ಯಾತೀತ ಭಾವನೆ, ಸಮಾನತೆ, ಕರುಣೆ, ಅಹಿಂಸೆ ಮುಂತಾದ ವಿಶೇಷ ಗುಣಗಳು ದಲಿತ ನಾಯಕರಾದ ಅಂಬೇಡ್ಕರ್‌ರವರನ್ನು ಆಕರ್ಷಿಸಿದವು. ಬುದ್ಧಸಂಘ ಪ್ರಜಾಪ್ರಭುತ್ವ ಸಿದ್ಧಾಂತಗಳ ಆಧಾರದ ಮೇಲೆ ರೂಪುಗೊಂಡಿದ್ದು ಅಂಬೇಡ್ಕರ್‌ರ ಮೇಲೆ ಆಳವಾದ ವರ್ಚಸ್ಸನ್ನು ಬೀರಿತ್ತು.

ಬುದ್ಧನು ವಿಚಾರವಾದಿ, ತರ್ಕವಾದಿ, ಮಾನವರ ಒಳಿತಿಗೆ ಸಂಬಂಧಿಸಿದ್ದಲ್ಲದ ಯಾವ ವಿಷಯವನ್ನೇ ಕುರಿತು ವ್ಯರ್ಥ ಚರ್ಚೆಗೆ ಇಳಿದವನಲ್ಲ. ಸರ್ವ ವಸ್ತು ವಿಚಾರಗಳಲ್ಲಿಯೂ ಬುದ್ಧನು ಖಚಿತವಾದ ನಿರ್ದಿಷ್ಟವಾದ ಪ್ರಾಯೋಗಿಕ ದೃಷ್ಟಿಯುಳ್ಳವನಾಗಿದ್ದನು. ತತ್ವ ಧ್ಯೇಯಗಳು ತಮ್ಮಷ್ಟಕ್ಕೆ ತಾವೇ ಜೀವಿಸಿರಬೇಕು. ಅವು ಎಂದಿಗೂ ಮಾನವನ ಅಧಿಕಾರ ಚಲಾವಣೆಯಿಂದಾಗಬಾರದು ಎಂಬುದು ಬುದ್ಧನ ಧ್ಯೇಯವಾಗಿದ್ದಿತು. ಬುದ್ಧ ತನ್ನನ್ನಾಗಲೀ, ತನ್ನ ಬೋಧನೆಗಳಿಗಾಗಲೀ ದೈವತ್ವವನ್ನು ಆರೋಪಿಸಿಕೊಳ್ಳದೇ, ಮಾನವ ಕೋಟಿಯಲ್ಲಿ ತಾನೊಬ್ಬ ಮಾನವನೆಂದು ಹೇಳಿಕೊಂಡಿದ್ದಾನೆ. ತನ್ನ ಸಂದೇಶಗಳು ಎಲ್ಲಾ ಬಗೆಯ ತಪ್ಪುಗಳಿಂದ ಸಂಪೂರ್ಣ ವಿಮುಕ್ತವೆಂದು ಹೇಳಿಕೊಳ್ಳಲಿಲ್ಲ. ಸಮರ್ಥಿಸಿಕೊಳ್ಳಲಿಲ್ಲ. ವಿಮೋಚನೆಗೆ ಸಾಧನವಾದ ತನ್ನ ಧರ್ಮ ಸಂದೇಶವನ್ನು ಯಾರಾದರೂ ಪರೀಕ್ಷಿಸಬಹುದು, ಪ್ರಶ್ನಿಸಬಹುದು, ಪ್ರಯೋಗಕ್ಕೆ ಒಳಪಡಿಸಬಹುದು ಎಂದೂ ಸಂದೇಶವಿತ್ತಿದ್ದಾನೆ.[3]

ಬುದ್ಧ ರೂಢಮೂಲವಾದ ಮತಾಚಾರ, ಮೂಢನಂಬಿಕೆ, ಕರ್ಮಕಾಂಡ ಮತ್ತು ಪೌರಾಹಿತ್ಯ ಮತ್ತು ಅವರ ಪರಿವಾರಕ್ಕೆ ಅಂಟಿಕೊಂಡಿದ್ದ ಎಲ್ಲ ಹಕ್ಕುದಾರಿಕೆಗಳನ್ನು ಧೈರ್ಯದಿಂದ ವಿರೋಧಿಸಿದ. ತತ್ವಶಾಸ್ತ್ರದ ಮತ್ತು ಮತೀಯ ದೃಷ್ಟಿ ಪವಾಡಗಳನ್ನು ಅಪೌರಷೀಯ ವೇದಗಳನ್ನು, ಅಲೌಕಿಕ ವ್ಯಾಪಾರಗಳನ್ನು ಖಂಡಿಸಿದ. ತರ್ಕ, ವಿಚಾರ, ಮತ್ತು ಅನುಭವದ ಅಡಿಗಲ್ಲಿನ ಮೇಲೆ ತನ್ನ ಸಂದೇಶವನ್ನು ನಿರ್ಮಿಸಿದ. ನೀತಿ ಧರ್ಮಕ್ಕೆ ಪ್ರಾಮುಖ್ಯತೆ ಕೊಟ್ಟ. ಮನಃಶಾಸ್ತ್ರದ ವಿಶ್ಲೇಷಣಾ ಪದ್ಧತಿಯ ರೀತ್ಯ ಆತ್ಮಕ್ಕೆ ಎಡೆಗೊಡದ ಮನಃಶಾಸ್ತ್ರದ ರೀತ್ಯ ತನ್ನ ಧರ್ಮವನ್ನು ರಚಿಸಿದ.[4] ಯುಗ-ಯುಗಗಳು ಉರುಳುತ್ತವೆ. ಬುದ್ಧನು ನಿಜವಾಗಿ ಬಹು ದೂರವಿದ್ದಂತೆ ತೋರುವುದಿಲ್ಲ. ಅವನ ವಾಣಿಯು ನಮ್ಮ ಕಿವಿಯಲ್ಲಿ ಮಾತನಾಡುತ್ತದೆ. ಹೋರಾಟಕ್ಕೆ ಹೆದರಿ ಓಡಬೇಡ, ಶಾಂತಚಿತ್ತನಾಗಿ ಎದುರಿಸು, ಜೀವನದಲ್ಲಿ ಸದಾ ಪ್ರವೃದ್ಧಿಯ ಪ್ರಗತಿಯ ಮಹದವಕಾಶಗಳನ್ನು ನೋಡು ಎಂದು ಹೇಳುತ್ತದೆ.

ಬುದ್ಧನ ಬದುಕಿನ ಸುದೀರ್ಘ ನಡಿಗೆ ಮತ್ತು ಚಿಂತನೆಯು ಸದಾ ಪ್ರೇಮಪೂರ್ಣ, ಮುಕ್ತ ಹಾಗೂ ವಿಶಾಲವಾದುದು ತುಂಬು ಬಾಳನು ಬದುಕಲು ಹಾತೊರೆಯುವವರಿಗೆ ಇದು ಅತ್ಯಂತ ಆತ್ಮೀಯವಾದ ದಾರಿ ದೀಪ. ಜೀವ ಪ್ರೇಮದ ಹೆಮ್ಮರವಾಗಿರುವ ಬುದ್ಧನು ವಾಸ್ತವವಾಗಿ ವೈಚಾರಿಕತೆಯ ಹಾದಿಯಲ್ಲಿ ನಡೆದ ಹಿರಿಯಣ್ಣನೇ ಸರಿ. ಈತನು ತಮ್ಮ ಸಮಾಜಕ್ಕೆ ಆನಂದದಾಯಕವೂ, ಸ್ಪಷ್ಟವೂ, ಅಗತ್ಯವೂ ಆದ ಗಾಳಿ, ಬೆಳಕನ್ನು ಎಲ್ಲೆಡೆಗಳಿಂದಲೂ ಸಹಜವಾಗಿ ಸ್ವೀಕರಿಸುವ ಬಗೆಗಳನ್ನು ಮನದಟ್ಟು ಮಾಡಿದ ದಾರ್ಶನಿಕ. ಆರೋಗ್ಯಕರ ಜಾಯಮಾನದ ಒಡನಾಡಿಯಾಗಿರುವ ಬುದ್ಧನ ಸೂಕ್ಷ್ಮಗಳನ್ನು ಅರಿಯುವುದು ಹಾಗೂ ಆ ದಿಕ್ಕಿನಲ್ಲಿ ಇನ್ನಷ್ಟು ಧ್ಯಾನಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮಲ್ಲಿರುವ ಅಸಹನೆ, ವಂಚನೆ, ದ್ವೇಷ, ಕ್ರೌರ್ಯ, ನೀಚತನ ಹಾಗೂ ಪಕ್ಷಪಾತ ಭಾವಗಳನ್ನು ನಾವೇ ನೀಗಿಕೊಂಡು ಹರ್ಷಚಿತ್ತರಾಗಿ ಸಾಗಲು ಈ ದಾರಿಯು ಅಕ್ಷರಶಃ ನೆರವಾಗುತ್ತದೆ. ಇಲ್ಲಿನ ಹಳೆಯ ಕೊಳೆಯಾದ ವರ್ಗ-ವರ್ಣ-ಲಿಂಗಭೇದ ನೀತಿಯ ಎಲ್ಲ ವಿಕಾರಗಳೂ ಸಹಸ್ರಾರು ವರ್ಷಗಳ ಹಿಂದಿನ ರೀತಿಯಲ್ಲಿಯೇ ಈಗಲೂ ವಿಜೃಂಭಿಸುವಂತಾಗಬೇಕೆಂದು ಅತ್ಯಂತ ನೀಚತನದಿಂದ ಭಾರತದ ವಿನಾಶಕಾರಿ ಮನಸ್ಸುಗಳು ಎಲ್ಲ ಬಗೆಯ ಹೀನ ತಂತ್ರಗಳ ಮೂಲಕ ಮುನ್ನುಗ್ಗುತ್ತಿವೆ. ಅಸಂಖ್ಯಾತ ಮುಗ್ಧ ಹೀನ ಜನತೆಯನ್ನು ಈ ಬಗೆಯ ಜನರು ತಮ್ಮತ್ತ ಸೆಳೆಯುವ ಅಸಹ್ಯಕರ ಸನ್ನಾಹದಲ್ಲಿ ತೊಡಗಿರುವುದನ್ನು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಬುದ್ಧ ತತ್ವ ಹಳೆಯ ಕೊಳೆಯನ್ನು ತೊಳೆಯುವ ಸತ್ವವನ್ನೊಳಗೊಂಡಿದೆ. ಅವನ ಪ್ರತಿಭಟನಾ ತತ್ವಸಿದ್ಧಾಂತಗಳ ಮರುವಿಶ್ಲೇಷಣೆ ಹಾಗೂ ವಾಸ್ತವ ಸತ್ಯದ ಅರಿವು ಇಂದು ಅಗತ್ಯವೆನಿಸುತ್ತದೆ. ಹೀಗಾಗಿ ಬುದ್ಧ ಹಾಗೂ ಬುದ್ಧನ ವಿಚಾರಗಳು ಸದಾ ಕಾಲ ಪ್ರಸ್ತುತ.

ಬುದ್ಧ ಅರಿವಿನ ಸಂಕೇತ. ಜಗತ್ತಿನಾದ್ಯಂತ ಚಿಂತಕರು, ತತ್ವಜ್ಞಾನಿಗಳು, ವಿಜ್ಞಾನಿಗಳಾದಿಯಾಗಿ ಧರ್ಮವನ್ನು ಹೊರತುಪಡಿಸಿಯೂ ಜ್ಞಾನದ ಸಂಕೇತವಾಗಿ, ಶಾಂತಿಯ ಸಂಕೇತವಾಗಿ, ಅಹಿಂಸೆಯ ಸಂಕೇತವಾಗಿ ಬುದ್ಧನನ್ನು ಒಪ್ಪಿಕೊಳ್ಳುತ್ತಾರೆ, ಗೌರವಿಸುತ್ತಾರೆ. ಜಗತ್ತಿನ ಶ್ರೇಷ್ಠ ಮಾರ್ಗದರ್ಶಕ ಬುದ್ಧ. ಬುದ್ಧಿ ಮತ್ತು ಮನಸ್ಸಿನ ಮಾರ್ಗದರ್ಶಕ ಕೂಡಾ. ಮಾನವ ನಿಸರ್ಗದ ಕೂಸು. ಹಾಗಾಗಿಯೇ ಹುಟ್ಟಿನಿಂದ ಸಾವಿನವರೆವಿಗೆ ನಿಸರ್ಗದ ನಿಯಮಕ್ಕೊಳಪಡುತ್ತಾನೆ. ಆದ್ದರಿಂದ ಬುದ್ಧ ನಿಸರ್ಗದ ನಿಯಮಗಳನ್ನು ಮೊದಲು ಸರಿಯಾಗಿ ಅರ್ಥೈಸುತ್ತಾನೆ ಮತ್ತು ಅರ್ಥ ಮಾಡಿಸುತ್ತಾನೆ. ಬೌದ್ಧಧರ್ಮ ನಿಸರ್ಗದೊಡನೆ

ಸರಾಗವಾಗಿ ಸಾಗುತ್ತದೆ. ಹಠದಿಂದ ಯಾವ ನಿಯಮವನ್ನೂ ಎದುರು ಹಾಕಿಕೊಳ್ಳುವುದಿಲ್ಲ. ಸುಳ್ಳು ತತ್ವಗಳನ್ನು ಹೇಳಿ ನಂಬಿಸುವುದಿಲ್ಲ. ಬೌದ್ಧ ತತ್ವಗಳೆಲ್ಲವೂ ಪರೀಕ್ಷೆಗೆ ಒಳಪಡಿಸಬಹುದಾದ ತತ್ವಗಳೇ ಪ್ರಶ್ನಿಸಬಹುದಾದ ತತ್ವಗಳೇ. ಯಜ್ಞದ ಅನರ್ಥಕಾರಿ ಫಲಗಳನ್ನು ಕುರಿತು ಒಮ್ಮೆ ಬುದ್ಧ ತನ್ನನ್ನು ಪ್ರಶ್ನಿಸುತ್ತಿದ್ದ ಬ್ರಾಹ್ಮಣರಿಗೆ ಹೀಗೆ ಹೇಳುತ್ತಾನೆ. ಲೋಕದ ಸಚರಾಚರ ವಸ್ತುಗಳನ್ನು ಸೃಷ್ಟಿಸಿದವನೂ ಅವನೇ. ಮತ್ತೆ ಅಗ್ನಿಯನ್ನೇಕೆ ಪೂಜಿಸಬೇಕು. ದಹಿಸುವುದು ಅಗ್ನಿಯ ನಿಸರ್ಗ ನಿಯಮ. ನೀವು ಏನನ್ನೇ ಹಾಕಿದರೂ ಅಗ್ನಿ ದಹಿಸಬಲ್ಲದು. ಆದರಿಂದ ಫಲಗಳನ್ನು ನಿರೀಕ್ಷಿಸುವುದು ಮೂರ್ಖತನ. ಇಂಥ ಸಾಮಾನ್ಯ ಜ್ಞಾನವನ್ನು ಉಣಬಡಿಸುವ ಬುದ್ಧನ ಹೇಳಿಕೆಗಳ ಮೊತ್ತವೇ ಬೌದ್ಧ ಧರ್ಮವಾಗಿದೆ.[5] ಆಚರಣೆಗಳನ್ನು ಮಾಡದೆ ತನಗೂ ಇತರರಿಗೂ ಹಿತವಾಗುವಂತೆ ನಡೆದುಕೊಳ್ಳುವುದನ್ನೇ ಬೌದ್ಧಧರ್ಮ ಹೇಳುತ್ತದೆ. ಹೀಗಾಗಿ ಯಾವುದೇ ಕಾಲಕ್ಕೂ ಬೌದ್ಧಧರ್ಮ ಪ್ರಸ್ತುತ.

ಬೌದ್ಧಧರ್ಮದಲ್ಲಿ ಅಲೌಕಿಕತೆ ಲವಲೇಶವೂ ಇಲ್ಲ. ಬುದ್ಧನೆಂಬ 'ಅರಿವು' ಅಥವಾ 'ಜ್ಞಾನ' ಪಡೆದ ವ್ಯಕ್ತಿಯೊಬ್ಬ ಮನುಷ್ಯನ ಒಳಿತನ್ನು ಕುರಿತು ವೈಜ್ಞಾನಿಕವಾಗಿ ಚಿಂತನೆ ನಡೆಸಿ ಮಂಡಿಸಿದ ಮಹಾಪಾಠ ಇದು. ಇದನ್ನು ಪರೀಕ್ಷಿಸಬಹುದು, ವಿಮರ್ಶಿಸಬಹುದು. ಬುದ್ಧ ಬದುಕಿರುವಾಗಲೇ ಇವೆಲ್ಲವೂ ನಡೆದಿದ್ದವು. ಅವನು ಗೆದ್ದಿದ್ದರಿಂದ ಇದು ಧರ್ಮವಾಗಿ ಉಳಿಯಿತು. ಹೀಗಾಗಿ ಇಂತಹ ಧರ್ಮ ಇಂದಿಗೂ ಧರ್ಮವಾಗಿ ಉಳಿಯಿತು.

ಹಣತೆಯ ದೀಪದಿಂದ ಮಾತ್ರ ಇನ್ನೊಂದು ದೀಪವನ್ನು ಹಚ್ಚಲು ಆಗುತ್ತದೆ. ಆಂತರಿಕ ಜ್ಞಾನದಿಂದ ಮಾತ್ರ ಇನ್ನೊಬ್ಬರಿಗೆ, ಜ್ಞಾನ ನೀಡಲು, ಜ್ಞಾನದ ಮಾಹಿತಿ ನೀಡಲು ಸಾಧ್ಯ. ಈ ಅರಿವು ಹೆಚ್ಚಿದಷ್ಟು ಮನುಷ್ಯರಲ್ಲಿ ಆಂತರ್ಯದ ದೀವಟಿಗೆಗಳು ಬೆಳಗುತ್ತವೆ ಮತ್ತು ಜ್ಞಾನದ ಬೆಳಕಿನ ಶಕ್ತಿ ಹೆಚ್ಚು ವಿಸ್ತಾರಗೊಳ್ಳುತ್ತದೆ.ಜ್ಞಾನೋದಯ ಉಂಟಾಗುತ್ತದೆ. ಅಂತಹ ಜ್ಞಾನೋದಯ ಪಡೆದ ವ್ಯಕ್ತಿ ಗೌತಮ ಬುದ್ಧ. ಜಗಕ್ಕೆ ಜ್ಞಾನದ ಬೆಳಕನ್ನು ನೀಡಿದನು.

ಬೌದ್ಧ ಧರ್ಮ ನಾಸ್ತಿಕ ಧರ್ಮವಲ್ಲ :

ಮನುಷ್ಯ ತನ್ನ ಮೂಲವನ್ನು, ತಾನಿರುವ ಈ ಜಗತ್ತಿನ ಮೂಲವನ್ನು ಕಂಡುಕೊಳ್ಳಲು ಸಾಧ್ಯವಾಗದೇ ಇರುವುದರಿಂದ, ಇವೆಲ್ಲವನ್ನು ನಿಯಂತ್ರಿಸುವ ಒಂದು ಅಗೋಚರ ಶಕ್ತಿ ಇದೆ ಎಂದು ನಂಬಿದ್ದಾನೆ. ಹಾಗಾಗಿ ಬೇರೆಬೇರೆ ನಂಬಿಕೆಯುಳ್ಳ ಧರ್ಮಗಳು ಆ ಅಗೋಚರ ಶಕ್ತಿಯನ್ನು ಬೇರೆಬೇರೆ ಬಗೆಯಾಗಿ ಅರ್ಥೈಸಿಕೊಂಡಿವೆ. ಹಾಗೆ ನಡೆದುಕೊಳ್ಳುತ್ತಿವೆ. ಆದರೆ ವೈದಿಕಧರ್ಮ ಆ ನಂಬಿಕೆಯನ್ನು ಮನುಷ್ಯರೂಪವೇ ಬ್ರಹ್ಮನ ಮುಖಾಂತರ ಕಲ್ಪಿಸಿ ಸುಳ್ಳುಗಳ ಸರಮಾಲೆಯನ್ನೇ ಸೃಷ್ಟಿಸಿದೆ. ಅದು ಮೇಲ್ನೋಟಕ್ಕೆ ಒಂದು ವರ್ಗದ ಶ್ರಮರಹಿತ ಉಂಬಳಿಗಾಗಿ ಹೆಣೆದ ಕಥೆಯಂತಿದೆ. ಅದು ಅನೈತಿಕತೆಯ ಉತ್ತುಂಗವನ್ನು ಮುಟ್ಟಿದೆ. ಸೇವೆಗಾಗಿಯೇ ಹುಟ್ಟಿರುವ ಬಹುಸಂಖ್ಯಾತ ಶೂದ್ರ ಸಮುದಾಯ ಸದಾ ದೇವರೆಂಬ ಭಯದ ನೆರಳಲ್ಲಿ ಬದುಕು ಸವೆಸುತ್ತ ಭಯ ನಿರ್ಮೂಲನ ವ್ರತಗಳಾದ ಮೌಢ್ಯಾಚರಣೆಗಳನ್ನೇ ಭಕ್ತಿಯೆಂದು ನಂಬಿ ತಮ್ಮ ತನು-ಮನ-ಧನಗಳನ್ನು ವಿನಿಯೋಗಿಸುತ್ತಾ ವ್ಯರ್ಥಬದುಕನ್ನು ಸಾಗಿಸುತ್ತ ಬಂದಿದೆ. ಇಂಥ ಧಾರ್ಮಿಕ ನೀತಿಯಿಂದ ದೇಶದ ಆರ್ಥಿಕತೆ, ಸಾಮಾಜಿಕತೆ ಕುಗ್ಗಿ ಜಾಗತಿಕ ಮಟ್ಟದಲ್ಲಿ ತಲೆ ತಗ್ಗಿಸುವಂತಾಗಿರುವುದು ಅದಕ್ಕೆ ಸಾಕ್ಷೀಭೂತವಾಗಿದೆ.

ಬೌದ್ಧಧರ್ಮವನ್ನು ನಾಸ್ತಿಕವಾದವೆಂದು ಕರೆಯುವ ರೂಢಿಯಿದೆ. ಆದರೆ ಅದು ಪೂರ್ಣ ಸತ್ಯವಲ್ಲ. ಬುದ್ಧ ಯಾವುದನ್ನೂ ಪುರಾವೆಯಿಲ್ಲದೆ ನಂಬುವವನಲ್ಲವಾದ್ದರಿಂದ ಆತ್ಮವನ್ನು ನಿರಾಕರಿಸಿದ. ಅದು ಜೈವಿಕವಲ್ಲ, ಆದ್ದರಿಂದ ತಾಯಿಯ ಗರ್ಭದಿಂದ ಬರುವುದಿಲ್ಲ, ಹೊರಗಿನಿಂದಲೂ ಬರುವುದಿಲ್ಲ ಎಂದು ಹೇಳಿದ.ಆದರೆ ದೇವರು ಇಲ್ಲ ಎಂದೂ ಹೇಳಿಲ್ಲ. ಅಂಥ ಪ್ರಶ್ನೆಗಳಿಗೆ ಬುದ್ಧನ ಮರು ಪ್ರಶ್ನೆ ಏನಾಗಿತ್ತೆಂದರೆ ಯಾರಾದರೂ ಗಂಗಾ ನದಿಯ ತಟದಲ್ಲಿರುವ ಮರಳು ಕಣಗಳನ್ನು ಎಣಿಸಬಲ್ಲರೇ? ಸಮುದ್ರದ ಆಳ ಅಗಲಗಳನ್ನು ತಿಳಿಯಬಲ್ಲರೇ? ಎಂಬುದಾಗಿತ್ತು. ಅಂದರೆ ಅದು ಮನುಷ್ಯನ ಮಿತಿಗೆ ಮೀರಿದ್ದು. ಅದನ್ನು ತಿಳಿದುಕೊಳ್ಳುವ ಪ್ರಯತ್ನವೇ ವ್ಯರ್ಥ ಕಾಲಹರಣವಾಗಿ ಬಿಡುತ್ತದೆ. ಹೆಚ್ಚೆಂದರೆ ಪುಂಡರ ಗೋಷ್ಠಿಯಾಗಿ ಬಿಡುತ್ತದೆ. ಅದನ್ನೂ ಬಿಟ್ಟು ಇರುವಿನ ಕಡೆಗೆ ಗಮನ ಹರಿಸುವುದೇ ಸೂಕ್ತ ಎಂಬುದು ಬುದ್ಧನ ಅಭಿಮತ.

ಬುದ್ಧ, ಒಮ್ಮೆ ಜೈನ ನಿರ್ಗಂಥರೊಬ್ಬರಿಗೆ ಉತ್ತರಿಸುತ್ತ ಪೂರ್ವ ಜನ್ಮದಲ್ಲಿ ಪುಣ್ಯ ಮಾಡಿದವನು ಶ್ರೀಮಂತನ ಮಗನಾಗಿ, ಪಾಪ ಮಾಡಿದವನು ಬಡವನ ಮಗನಾಗಿ ಹುಟ್ಟುವುದಾದರೆ ಬ್ರಾಹ್ಮಣನಿಗೆ ತಾನು ಬ್ರಾಹ್ಮಣ ಕುಲದಲ್ಲಿಯೆ ಹುಟ್ಟುವೆನೆಂಬ ಪೂರ್ವ ನಿರ್ಧಾರಿತ ಶಕ್ತಿ ಇರುವುದಾದರೆ, ಬ್ರಾಹ್ಮಣನಿಗೆ ಬ್ರಹ್ಮನ ಅಗತ್ಯವಾದರೂ ಏನು? ಅಥವಾ ಬ್ರಹ್ಮನಿಗೆ ಬ್ರಾಹ್ಮಣನ ಅಗತ್ಯವಾದರೂ ಏನು? ಇದು ಕಪೋಲಕಲ್ಪಿತ ಕತೆಯಲ್ಲವೇ, ಸತ್ಯಕ್ಕೆ ಮಾಡಿದ ಅಪಚಾರವಲ್ಲವೇ? ಎಂದು ಪ್ರಶ್ನಿಸುತ್ತಾನೆ. ಹೀಗೆ ಎಲ್ಲವನ್ನೂ ತರ್ಕದ ಆಧಾರದ ಮೇಲೆಯೇ ನಿರಾಕರಿಸುವುದರಿಂದ ಅಥವಾ ಒಪ್ಪುವುದರಿಂದ ಇಹಲೋಕದ ಆಸಕ್ತರಿಗೆ ಬುದ್ಧ ಸುಲಭವಾಗಿ ಒಪ್ಪಿಗೆಯಾಗಿ ಬಿಡುತ್ತಾನೆ. ಇಂಗ್ಲೀಷಿನಲ್ಲಿ agnostic ಎಂಬ ಪದವಿದೆ. ಅಂದರೆ ಅಜ್ಞೇಯತಾವಾದ. ಅಂದರೆ ಆಸ್ತಿಕತೆಗೆ ವಿಮುಖವಾಗಿ ಬಿಡುವುದು. ನಾಸ್ತಿಕವಾದಕ್ಕೆ ಜೋತು ಬಿದ್ದರೆ ದೇವರನ್ನು ಖಂಡಿಸುವ, ಖಂಡನೆಯನ್ನು ಸಮರ್ಥಿಸಿಕೊಳ್ಳುವ ಅಗತ್ಯ ಬೀಳುತ್ತದೆ. ಅದೇ ಒಂದು ಕಾಯಕವಾಗಿ ಬಿಡುತ್ತದೆ. ಆ ಅನಗತ್ಯ ಕ್ರಮವನ್ನೂ ತಡೆಯುವ ಮಾರ್ಗವೇ ಬುದ್ಧನ ಮಧ್ಯಮ ಮಾರ್ಗವಾದ ಅಜ್ಞೇಯತಾವಾದ.[6]

ನಕಾರಾತ್ಮಕ ವಾದವಲ್ಲ :

ಪ್ರತಿಗಾಮಿ ಹಿಂದೂಗಳೆನಿಸಿಕೊಂಡರ ಒಂದು ವಾದವಿದೆ. ಅದು ಬೌದ್ಧಧರ್ಮ ನಕಾರಾತ್ಮಕ ವಾದವಾಗಿದೆ. ಅದು ಜೀವ ಪೋಷಕವಲ್ಲ. ದುಃಖವನ್ನೇ ಪ್ರಧಾನವಾಗಿ ಚಿಂತಿಸುತ್ತದೆ ಎಂಬುದು ಇತ್ತೀಚೆಗೆ ಖ್ಯಾತ ಸಾಹಿತಿಯೊಬ್ಬರು ಸಂಸಾರಿಯಾಗಿ ಮೋಕ್ಷ ಪಡೆಯುವ ಮಾರ್ಗವನ್ನು ಹಿಂದೂಧರ್ಮ ಹೇಳುತ್ತದೆ. ಬ್ರಹ್ಮಚರ್ಯೆ ಅಸ್ವಾಭಾವಿಕ ಎಂಬಿತ್ಯಾದಿ ಮಾತುಗಳನ್ನು ಹೇಳಿದ್ದಾರೆ. ವಾಸ್ತವದಲ್ಲಿ ಅದು ಬೇರೆಯೇ ಆಗಿದೆ. ಇಹವನ್ನು ಕುರಿತು ಚಿಂತಿಸುವ ಧರ್ಮ,ಮನುಷ್ಯನನ್ನು, ಮನಸ್ಸನ್ನು ಕುರಿತು ಚಿಂತಿಸುವ ಧರ್ಮ ಬೌದ್ಧಧರ್ಮ. ತ್ರಿಪಿಟಕಗಳಲ್ಲಿ ಕಬ್ಬಿಣದ ಕಡಲೆಯಂತಿರುವ ಅಭಿಧಮ್ಮ ಪೀಟಕ ಮನಸ್ಸನ್ನು ಕುರಿತು ನಡೆಸಿದ ಬುದ್ಧನ ಚಿಂತನೆ. ಅದರಲ್ಲಿ ಇದುವರೆವಿಗೂ ಮನಶ್ಶಾಸ್ತ್ರಜ್ಞರು ನಿರಾಕರಿಸಬಹುದಾದ ಯಾವ ಅಂಶವೂ ಕಂಡುಬಂದಿಲ್ಲ. ಮನುಷ್ಯನಲ್ಲಿ ಪ್ರಾಣಿಜನ್ಯವಾದ ಮೂಲ ಸ್ಫುರಣೆಗಳು ಮನಸ್ಸನ್ನು ಕೆಡುಕಿನತ್ತಲೇ ಸೆಳೆಯುತ್ತವೆ. ಆದಕ್ಕೆ ಬುದ್ಧಿಯ ಅನುಸಂಧಾನ ಅಗತ್ಯ. ಬುದ್ಧಿ ತಂತಾನೆ ಪ್ರಕಾಶಿಸುವುದಿಲ್ಲ. ಅದಕ್ಕೆ ಜ್ಞಾನದ ಬೆಳಕು ಬೇಕು. ದುಃಖವನ್ನು ಹೋಗಲಾಡಿಸುವುದೆಂದರೆ ಮೊದಲು ಮನಸ್ಸನ್ನಾವರಿಸಿದ ಕತ್ತಲೆಯನ್ನು ಜ್ಞಾನದ ಬೆಳಕಿನಿಂದ ದೂರ ಮಾಡುವುದು. ಕತ್ತಲನ್ನು ಹೊರದೂಡುವುದು ಎಂದರೆ ಬೆಳಕಿನಲ್ಲಿ ಬದುಕುವುದು. ಅದು

ದುಃಖವನ್ನೇ ಕುರಿತು ಧ್ಯಾನವಲ್ಲ. ದುಃಖಕ್ಕೆ ಬೌದ್ಧ ಅರ್ಥಪರಂಪರೆಯಲ್ಲಿ ವ್ಯಾಪಕವಾದ ಅರ್ಥವಿದೆ. ಎಲ್ಲ ಕೆಡಕುಗಳ ಮೂಲವೂ ಸಕಲ ಅಕುಶಲ ವಿಚಾರಗಳೂ ದುಃಖವೆಂದೇ ಕರೆಸಿಕೊಳ್ಳುತ್ತವೆ. ಹಾಗೆಯೇ ಆಸೆಯೇ ದುಃಖಕ್ಕೆ ಕಾರಣ ಎಂಬ ಧರ್ಮಸೂತ್ರ ವಾಕ್ಯವೂ ಸಹ ಅತ್ಯಂತ ಸರಳ ಅನುವಾದ. ಬುದ್ಧನ ಮೂಲ ಉದ್ದೇಶ ಮನುಷ್ಯನ ಬದುಕನ್ನು ಹಸನುಗೊಳಿಸುವುದು. ಆದ್ದರಿಂದ ಇಹವನ್ನು ಕುರಿತೇ ಅವನ ಧ್ಯಾನ.

ಬುದ್ಧನ ಪರಲೋಕ ನಿಷ್ಠೆ ಲವಲೇಶವೂ ಕಾಣುವುದಿಲ್ಲ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಬುದ್ಧನನ್ನು ಸಂಧಿಸಿದ ದೊರೆ ಪಸೇನದಿಯು ಭಕ್ತಿ ಗೌರವದಿಂದ ವಂದಿಸಿ ಸಮೀಪವೇ ಕುಳಿತು ಹೀಗೆ ಪ್ರಶ್ನಿಸುತ್ತಾರೆ.

> ಮಹಾಪ್ರಬು! ನನ್ನದೊಂದು ಪ್ರಾರ್ಥನೆ. ಮರಣದ ನಂತರ ತಥಾಗತನು ಇರುತ್ತಾನೆಯೇ?
> ಮಹಾರಾಜಾ, ಆ ವಿಷಯ ನನ್ನಿಂದ ವ್ಯಕ್ತವಾಗಿಲ್ಲ .
> ಹಾಗಾದರೆ, ಮಹಾಪ್ರಭು, ತಥಾಗತನು ಮರಣದ ನಂತರ ಇರುವುದಿಲ್ಲ .
> ಮಹಾರಾಜಾ! ಅದೂ ಕೂಡ ನನ್ನಿಂದ ವ್ಯಕ್ತವಾಗಿಲ್ಲ .
> ಮಹಾಪ್ರಭು, ಪರಮಾತ್ಮ ಅಥವಾ ದೇವರಿದ್ದಾನೆಯೇ?
> ಮಹಾರಾಜಾ ಈ ಪ್ರಶ್ನೆಗೆ ಕೂಡಾ ನಾನು ಉತ್ತರಿಸಿಲ್ಲ .
> ಮಹಾಪ್ರಭು, ಪುರ್ನಜನ್ಮ ಎಂಬುದು ಉಂಟೇ?
> ಮಹಾರಾಜಾ ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ .
> ಮಹಾಪ್ರಭು, ಸ್ವರ್ಗ-ನರಕಗಳುಂಟೆ?
> ಮಹಾರಾಜಾ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ .
> ಮಹಾಪ್ರಭು, ಅತಿಮಾನುಷ ಶಕ್ತಿ ಮತ್ತು ಪವಾಡಗಳು ನಿಜವೇ?
> ಮಹಾರಾಜಾ, ಈ ಪ್ರಶ್ನೆಗೆ ಕೂಡ ನಾನು ಉತ್ತರಿಸಿಲ್ಲ.[7]

ಮಹಾಪ್ರಭು, ಇದಕ್ಕೆ ಕಾರಣವೇನು? ನಿಮಿತ್ತವೇನು? ಈ ಗಹನವೂ, ಗಂಭೀರವೂ, ಮೂಲಭೂತವೂ ಆದ ಈ ವಿಷಯಗಳು ತಮ್ಮಿಂದ ಏಕೆ ಉತ್ತರ ಪಡೆದಿಲ್ಲ?

ಮಹಾರಾಜಾ, ಈ ಎಲ್ಲವೂ ಊಹೆ, ಕಲ್ಪನೆ, ಕನಸು, ಕುತಂತ್ರ, ವ್ಯವಸ್ಥಿತ ಸಂಚು, ಪರಾವಲಂಬಿತನ ಹಾಗೂ ಶೋಷಣೆಗೆ ಮೂಲವಾದ್ದರಿಂದ, ನನ್ನ ಅಲ್ಪ ಆಯುಷ್ಯದ ಮಿತಿಗೆ ಸವಾಲಾದುದ್ದರಿಂದ, ನನ್ನ ಪಂಚೇಂದ್ರೀಯಗಳಿಗೆ ಸ್ಪರ್ಶಿಸದೆ ಇದ್ದುದಕ್ಕೆ ನನ್ನ ಅನುಭವ, ಅನುಭಾವ, ಇರುವಿಕೆ, ಆಗುವಿಕೆ ಮತ್ತು ಸ್ಪರ್ಶಕ್ಕೆ ನಿಲುಕದೇ ಇದ್ದುದರಿಂದ ಈ ಯಾವುದರ ಹಿನ್ನೆಲೆಯಲ್ಲಿಯೂ ಕಾರ್ಯಕಾರಣ ಸಂಬಂಧ ಇಲ್ಲದೇ ಇರುವುದರಿಂದ, ಈ ಎಲ್ಲವನ್ನೂ ಮೌನವಾಗಿ ತಿರಸ್ಕರಿಸಿದೆ .

ವಿಚಿತ್ರ ಮಹಾಪ್ರಭು, ಆದರೆ ಕರ್ಮ ಸಿದ್ಧಾಂತವನ್ನು ನೇರವಾಗಿ ಸ್ಪಷ್ಟವಾಗಿ, ಕಟುವಾಗಿ ಟೀಕಿಸಲು ಕಾರಣವೇನು?

ಮಹಾರಾಜಾ, ಅದು ಬದುಕಿಗೆ ನೇರವಾಗಿ ಸಂಬಂಧಿಸಿದ್ದು ಎಂಬ ಕಾರಣಕ್ಕಾಗಿ! ಅಸಮಾನತೆ ಮತ್ತು ಶೋಷಣೆಗೆ ಮೂಲ ಎಂಬ ಕಾರಣಕ್ಕೆ! ಇದೂ ಕೂಡ ಊಹೆ, ಕಲ್ಪನೆ ಮತ್ತು ಕೃತ್ರಿಮಕ್ಕೆ ಮೂಲಮಂತ್ರ ಎಂಬ ಕಾರಣಕ್ಕಾಗಿ!

ಮಹಾಪ್ರಭು, ಈ ಕಾರಣಗಳಿಗಾಗಿ ಪಾರಮಾರ್ಥ್ಯವನ್ನೇ ಅಲ್ಲಗಳೆಯುವುದು ಸಮಂಜಸವೇ? ಇದರಿಂದ ಒಮ್ಮೆಲೆ ಮನುಷ್ಯ ತತ್ತರಿಸಿ ಹೋಗುವುದಿಲ್ಲವೇ? ಇದು ಪ್ರವಾಹಕ್ಕೆ ಎದುರಾಗಿ ಈಜುವ ನಿಲುವಲ್ಲವೇ? ಇದು ಅನ್ಯಾಯವಲ್ಲವೇ?

ಮಹಾರಾಜಾ, ಯಾವುದು ಅನ್ಯಾಯ? ತೋರಿಕೆಗೆ ನಟನೆ ಮಾಡುವುದು ಅನ್ಯಾಯವಲ್ಲವೇ? ಮತ್ತೊಬ್ಬರನ್ನು ಮೆಚ್ಚಿಸಲಿಕ್ಕಾಗಿ ಸುಳ್ಳು ಹೇಳುವುದು ಅನ್ಯಾಯವಲ್ಲವೇ? ಸತ್ಯವನ್ನು ಸತ್ಯವೆಂದು, ಅಸತ್ಯವನ್ನು ಅಸತ್ಯ ಎಂದು ಸ್ಪಷ್ಟವಾಗಿ ಪ್ರತಿಪಾದಿಸುವುದು ಅನ್ಯಾಯವೇ?

ಮಹಾರಾಜಾ ನಿನಗೊಂದು ಪ್ರಶ್ನೆಯನ್ನು ಕೇಳುತ್ತೇನೆ. ನಿನಗೆ ಯಾವುದು ಸೂಕ್ತವೆನಿಸುತ್ತದೋ ಹಾಗೆ ಉತ್ತರಿಸು. ನೀನಾಗಲಿ, ನಿನ್ನ ಸಿಬ್ಬಂದಿಗಳಾಗಲೀ, ಅಸಂಖ್ಯಾತ ಲೆಕ್ಕಿಗರಾಗಲೀ ಗಂಗಾನದಿಯಲ್ಲಿನ ಮರಳ ಕಣಗಳ ಸಮುದ್ರದ ಆಳ, ಅಗಲ, ಉದ್ದ ಮತ್ತು ನೀರಿನ ಪ್ರಮಾಣವನ್ನು ಹೇಳಬಲ್ಲಿರಾ?

ಮಹಾಪ್ರಭು, ಸಾಧ್ಯವಿಲ್ಲ, ಖಂಡಿತಾ ಸಾಧ್ಯವಿಲ್ಲ, ಏಕೆಂದರೆ ಇದು ನನ್ನ ಮಿತಿಗೆ ಮೀರಿದ್ದು, ನನ್ನ ಊಹೆ, ಕನಸು ಮತ್ತು ಕಲ್ಪನೆಗೆ ಮೀರಿದ್ದು!

ಮಹಾರಾಜಾ, ನಾನು ಕೂಡ ಇದನ್ನೇ ಹೇಳಿದ್ದು! ಇದಕ್ಕಿಂತ ಹೊಸದನ್ನು ಭಿನ್ನವಾದುದನ್ನು ಏನೂ ಹೇಳಲಿಲ್ಲ!

ಅದ್ಭುತ ಪ್ರಭು! ಅದ್ಭುತ! ಆಶ್ಚರ್ಯಕರ! ಅದೆಷ್ಟು ವಿಚಿತ್ರ ಪ್ರಭು!! ಗುರು ಶಿಷ್ಯರಿಬ್ಬರ ಅರ್ಥ ವಿವರಣೆಯೂ ಅಕ್ಷರ ಮತ್ತು ಎರಡರಲ್ಲಿಯೂ ಹೊಂದಾಣಿಕೆ, ಸಾಂಗತ್ಯ ಮತ್ತು ಉತ್ಕೃಷ್ಟತೆ ಇದೆ .

ಮಹಾಪ್ರಭು ಈ ಹಿಂದೆ ಒಮ್ಮೆ ನಿಮ್ಮ ಪರಮ ಶಿಷ್ಯಳಾದ ಸಾಧ್ವಿ ಖೇಮಾಳನ್ನು ಸಂಧಿಸಿ ಇದೇ ಪ್ರಶ್ನೆಗಳನ್ನು ಕೇಳಿದೆ. ಇದೇ ಉತ್ತರವನ್ನು ಪಡೆದೆ. ಅಕ್ಷರ ಮತ್ತು ಅರ್ಥಗಳಲ್ಲಿ ಎಂತಹ ಸಾಮ್ಯವಿದೆ. ಉತ್ಕೃಷ್ಟ ತಂದೆಯೇ ಉತ್ಕೃಷ್ಟ![8]

ಹೌದು, ಮಹಾಪ್ರಭು, ನಿನ್ನಂತಹ ಗುರುವನ್ನು, ನೀನು ತರಬೇತುಗೊಳಿಸಿದ ಶಿಷ್ಯರನ್ನು ಪಡೆದ ಭರತ ಖಂಡವೇ ಧನ್ಯ!! ಎಂದು ನಮಸ್ಕರಿಸಿ ಕೋಸಲದ ರಾಜ ಪಾಸೇನ ಹರ್ಷದಿಂದ ತೆರಳಿದನು.

ಇದಕ್ಕೆ ಹೊರತಾಗಿ ಬುದ್ಧ ದುಃಖವನ್ನು ಅರಿತುಕೊಳ್ಳುವ, ದುಃಖಕ್ಕೆ ಕಾರಣಗಳನ್ನು ತಿಳಿದುಕೊಳ್ಳುವ, ದುಃಖ ನಿವಾರಣೆಯನ್ನು ಕಂಡುಕೊಳ್ಳುವ ಮತ್ತು ದುಃಖ ನಿವಾರಣೆಗೆ ಮಾರ್ಗಗಳನ್ನು ಹುಡುಕಿಕೊಳ್ಳುವ ವಿಧಾನವನ್ನು ಹೇಳಿಕೊಡುತ್ತಾನೆ. ಅಷ್ಟಾಂಗ ಮಾರ್ಗಗಳನ್ನು ಪಾಲಿಸುವವನಿಗೆ ದೈವದ ಆಶ್ರಯ ನಗಣ್ಯವಾಗಿ ಬಿಡುತ್ತದೆ. ಆತನೇ ದೈವತ್ವಕ್ಕೇರುತ್ತಾ ಹೋಗುತ್ತಾನೆ. ಧರ್ಮವೆಂಬುದು ಬದುಕಿನ ಸತ್ಯ ಸಂಗತಿಗಳಿಗೆ ಸಂವಾದಿಯಾಗಿರಬೇಕೇ ಹೊರತು, ಸ್ವರ್ಗ, ಭೂಮಿ, ದೇವತೆ ಅಥವಾ ಆತ್ಮವನ್ನು ಕುರಿತು ಸಿದ್ಧಾಂತಗಳಾಗಿಯಲ್ಲ.[9] ಹೀಗೆ ವಾಸ್ತವದ ಬದುಕಿಗೆ ಬುದ್ಧ ಪ್ರಾಶಸ್ತ್ಯವನ್ನು ಕೊಟ್ಟಿರುವುದರಿಂದ ಸದಾ ಪ್ರಸ್ತುತವಾಗುತ್ತಾನೆ. ಮಾನವನ ನಡೆ-ನುಡಿಗಳಿಗೆ, ನೈತಿಕತೆಗೆ, ಸಮಾನತೆಗೆ, ಪ್ರಾಶಸ್ತ್ಯ ನೀಡಿ ಧರ್ಮದ ಕೇಂದ್ರ, ದೇವತೆಯಲ್ಲ, ಮಾನವ ಕೇಂದ್ರೀತವಾಗಬೇಕು ಎಂದು ಬಯಸಿದ ವಾಸ್ತವವಾದಿ ಬುದ್ಧ.

ಇಂದಿಗೂ ಎಂದೆಂದಿಗೂ ಎಲ್ಲ ಕಾಲಕ್ಕೂ ಅನ್ವಯವಾಗುವ ಧರ್ಮ :

ಬೌದ್ಧಧರ್ಮ ಪರಲೋಕ ನಿಷ್ಠೆಯ, ಪಾರಮಾರ್ಥಿಕ ನಂಬುಗೆಗಳ ಧರ್ಮವಲ್ಲ. ಅದು ಇಹದ ಮತ್ತು ಮನುಷ್ಯಪರ ಧರ್ಮ. ಪ್ರಜ್ಞೆಯ ಮಿತಿಗೆ ಸಿಕ್ಕುವ ಧರ್ಮ. ಇತರ ಧರ್ಮಗಳು ಮುಕ್ತಿಗಾಗಿ,

ಸ್ವರ್ಗಕ್ಕಾಗಿ ಜೀವನವನ್ನು ನಡೆಸುವಂತೆ ಪ್ರಚೋದಿಸುತ್ತವೆ. ಆದರೆ ಬೌದ್ಧ ಧರ್ಮದಲ್ಲಿ ಸ್ವರ್ಗ-ನರಕಗಳ ಬಗ್ಗೆ ವ್ಯಾಖ್ಯಾನವೇ ಇಲ್ಲ. ಹುಟ್ಟು ಸಾವಿನ ಜಿಜ್ಞಾಸೆಯಿಂದ ತಪ್ಪಿಸಿ ವಾಸ್ತವದ ಇವತ್ತಿನ ಬದುಕನ್ನು ಮಾತ್ರ ಕುರಿತು ಹೇಳುವ ಧರ್ಮ ಬೌದ್ಧಧರ್ಮ. ಮನುಷ್ಯ ಬದುಕಿರುವಾಗ ತನ್ನ ಒಳಿತು, ಇತರರ ಒಳಿತು ಮತ್ತು ಪ್ರಕೃತಿಯ ಒಳಿತಿಗಾಗಿ ಹೇಗೆ ನಡೆದುಕೊಳ್ಳಬೇಕೆಂಬ ನಡಾವಳಿಗಳನ್ನು ಬುದ್ಧ ತನ್ನ ಜೀವನುದುದ್ದಕ್ಕೂ ಬೋಧಿಸಿದ. ಆ ಬೋಧನೆಗಳ ಸಾರವೇ ಬೌದ್ಧಧರ್ಮ.

ಬೌದ್ಧಧರ್ಮ ಹೇಗೆ ಪ್ರಸ್ತುತ ಎಂಬ ಪ್ರಶ್ನೆಗೆ ಉತ್ತರ : ಬಡವ-ಶ್ರೀಮಂತನೆಂಬ ಭೇದ-ಭಾವವಿಲ್ಲದ ವೈಚಾರಿಕತೆಯನ್ನು ಬೋಧಿಸುತ್ತದೆ. ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿದ ಈ ಧರ್ಮವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅರಿತರೆ ಪ್ರತಿಯೊಬ್ಬರಿಗೂ ಈ ಧರ್ಮ ಒಪ್ಪಿಗೆಯಾಗುತ್ತದೆ. ಬುದ್ಧ ಬೋಧನೆ ಆರಂಭವಾಗುವುದೇ ಅಸಮಾನತೆಯ ವಿರುದ್ಧ. ಅಲ್ಲಿ ಜಾತಿ-ಉಪಜಾತಿಗಳಿಲ್ಲ, ಕೀಳರಿಮೆ ಇಲ್ಲ, ಬೌದ್ಧಧರ್ಮದಲ್ಲಿ ಸಮಾನತೆ ಇದೆ. ಸರ್ವ ಮಾನವರೂ ಸಮಾನರು ಎಂಬ ಉದಾತ್ತ ವಿಚಾರವನ್ನೊಳಗೊಂಡಂತೆ ಇದು ಪ್ರಜಾಪ್ರಭುತ್ವಕ್ಕೆ ಹತ್ತಿರವಾದ ಧರ್ಮವಾಗಿದೆ. ಬೌದ್ಧಧರ್ಮವೊಂದು ಪ್ರಜಾಸತ್ತಾತ್ಮಕ ಚಳುವಳಿ ಎಂದು ಡಾ। ಅಂಬೇಡ್ಕರ್‌ರವರು ಸ್ಪಷ್ಟಪಡಿಸಿದ್ದಾರೆ.

ಬೌದ್ಧಧರ್ಮದಲ್ಲಿ ಮೌಢ್ಯಾಚರಣೆಗೆ ಅವಕಾಶವಿಲ್ಲ. ಆತ್ಮ, ದೇವರು, ಸ್ವರ್ಗ ಇತ್ಯಾದಿ ಅಲೌಕಿಕ ವಿಚಾರಗಳಿಗೆ ನೆಲೆಯೇ ಇಲ್ಲ. ಅಂದ ಮೇಲೆ ಮನುಷ್ಯನಿಗೆ ದೇವರ ಭಯವೇ ಇಲ್ಲ. ಬೌದ್ಧಧರ್ಮ ನೈತಿಕತೆಯ ನೆಲೆಗಟ್ಟಿನ ಮೇಲೆ ನಿಂತಿದೆ. ಈ ಧರ್ಮದಲ್ಲಿ ದುಂದುವೆಚ್ಚವಾಗಲಿ, ಅತಿಯಾದ ಖರ್ಚಾಗಲಿ ಇಲ್ಲ. ತೀರ್ಥ, ಯಾತ್ರೆ, ಪ್ರಸಾದಗಳ ಭಯವಿಲ್ಲ, ಹೀಗಾಗಿ ಆರ್ಥಿಕ ಹೊರೆ ಇಲ್ಲ ಹೀಗಾಗಿ ಭಾರತದಂತಹ ದೇಶದ ಭಯಪೀಡಿತ ಕೆಳಸಮುದಾಯಗಳಿಗೆ ಬೌದ್ಧಧರ್ಮ ಉತ್ತಮ ಮಾರ್ಗವಾಗಬಲ್ಲದು. ಸಾಮಾಜಿಕ ರೋಗಗಳನ್ನು ನಾಶಮಾಡುವ ಶಕ್ತಿ ಬೌದ್ಧಧರ್ಮಕ್ಕಿದೆ. ಸಮಾನತೆ, ಭ್ರಾತೃತ್ವ ಮತ್ತು ನ್ಯಾಯವನ್ನು ಒದಗಿಸುವ ಧರ್ಮ ಬೌದ್ಧಧರ್ಮವಾಗಿರುವುದರಿಂದ ಅದರ ಪ್ರಸ್ತುತತೆಯನ್ನು ಪ್ರಶ್ನೆ ಮಾಡುವ ಅವಕಾಶವೇ ಇರುವುದಿಲ್ಲ. ಅದು ಎಲ್ಲ ಕಾಲಕ್ಕೂ ಸಲ್ಲುವ ಧರ್ಮವಾಗಿದೆ. ಆದ್ದರಿಂದಲೇ ಐನ್‌ಸ್ಟೀನ್ ಎಂಬ ವಿಜ್ಞಾನಿ ಭವಿಷ್ಯದ ಧರ್ಮವೆಂಬುದೇನಾದರೂ ಇದ್ದರೆ ಅದು ಬೌದ್ಧಧರ್ಮ ಎಂದು ಹೇಳಿದ ಮಾತು ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಮತಾಂತರಗಳು ಜರುಗಿ ಬೌದ್ಧಧರ್ಮದ ಕಡೆಗೆ ಜನ ನಡೆದಿರುವುದನ್ನು ಸಾಬೀತುಪಡಿಸುತ್ತದೆ. ಹೀಗಾಗಿ ಬೌದ್ಧಧರ್ಮ ಎಲ್ಲ ಕಾಲಕ್ಕೂ ಸಲ್ಲುವ ಧರ್ಮವೆಂದರೆ ತಪ್ಪಾಗಲಾರದು.

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಈ ತ್ರಿಶರಣಗಳು ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಹಿಂದೆ ಮೊದಲ ಬಾರಿ ಅನುರಣಿಸಿ, ಉತ್ತರ ದಕ್ಷಿಣ ಭಾರತದಲ್ಲಿ ಪಸರಿಸಿ, ಸಿಂಹಳ ದ್ವೀಪ ತಲುಪಿ, ಇಡೀ ಏಷ್ಯಾಖಂಡದಲ್ಲಿ ಪ್ರಸಾರವಾಗಿ ಕ್ರಿ.ಶ.20ನೇ ಶತಮಾನದ ಆದಿಯ ವೇಳೆಗೆ ಪ್ರಪಂಚದ ಒಂದರಷ್ಟು ಜನರ ಕಿವಿಗಳಲ್ಲಿ ಅನುರಣಿಸಿ ಅವರಿಗೆ ಜೀವನದ ಸಾವು-ನೋವುಗಳನ್ನು ಸಹ್ಯವಾಗಿಸಿಕೊಳ್ಳುವಲ್ಲಿ ಸಹಾಯ ಮಾಡಿದೆ. ಕ್ರಿ.ಪೂ. 6ನೇ ಶತಮಾನದಲ್ಲಿ ಈ ಮಾರ್ಗವನ್ನು ಬುದ್ಧ ತಾನು ಮೊದಲು ಕಂಡುಕೊಂಡು ನಂತರ ಜನತೆಗೆ ತೋರಿಸಿಕೊಟ್ಟ, ಈ ಸತ್ಯದ ಮಾರ್ಗದಲ್ಲಿ ನಡೆಯುವ ಜನ ಭಾರತದಲ್ಲಿ ಅಪಾರ ಸಂಖ್ಯೆಯಲ್ಲಿದ್ದರು

ಎಂಬುದಕ್ಕೆ ದಾಖಲೆಗಳಿವೆ. ಕ್ರಿ.ಶ.7ನೇ ಶತಮಾನದ ನಂತರ ಭಾರತದಿಂದ ಈ ಧರ್ಮ ಕಣ್ಮರೆಯಾಯಿತು. ಕ್ರಿ.ಶ.12ನೇ ಶತಮಾನದ ವೇಳೆಗೆ ಈ ಧರ್ಮ ಕೆಲ ಕಡೆ ಉಳಿದಿದ್ದರ ಸಾಕ್ಷಿಗಳು ಆ ಕಾಲದ ಸಾಹಿತ್ಯ ಶಾಸನಗಳಲ್ಲಿ ಉಳಿದಿರುವುದನ್ನು ಕಾಣಬಹುದಾಗಿದೆ. ನಂತರ ಈ ಧರ್ಮ ಹಿಮಾಲಯ ಗುಡ್ಡಗಾಡು ಪ್ರದೇಶಗಳಲ್ಲಿ ಪ್ರಚಲಿತವಿದ್ದು, ಬೌದ್ಧ ಧರ್ಮದ ಅನುಯಾಯಿಗಳ ಸಂಖ್ಯೆ ಸುಮಾರು ಮೂವತ್ತು ಲಕ್ಷ ಎಂದು ಅಂದಾಜಿಸಲಾಗಿದೆ.

1956 ರಲ್ಲಿ ಮತ್ತೆ ಭಾರತದ ಜನರು ಡಾ।ಅಂಬೇಡ್ಕರ್‌ರವರ ನೇತೃತ್ವದಲ್ಲಿ ಬೌದ್ಧಧರ್ಮವನ್ನು ತಮ್ಮದಾಗಿಸಿಕೊಳ್ಳತೊಡಗಿದರು. ಈ ವಿಜ್ಞಾನಯುಗದಲ್ಲಿ ಯುದ್ಧವನ್ನು ತಪ್ಪಿಸಿ ಜಗತ್ತಿನಲ್ಲಿ ಶಾಂತಿ ಸಮಾಧಾನದತ್ತ ನಡೆಯಲು, ವೈಚಾರಿಕ ವೈಜ್ಞಾನಿಕ ನೆಲೆಯನ್ನಾಧರಿಸಿದ ಬೌದ್ಧ ತತ್ವಗಳಿಂದ ಮಾತ್ರ ಸಾಧ್ಯ ಎಂದು ಜಗತ್ತಿನ ಅನೇಕ ಮಹನೀಯರು ಮತ್ತೆ ಮತ್ತೆ ಹೇಳುತ್ತಿರುವುದನ್ನು ನಾವೆಲ್ಲ ಕೇಳುತ್ತಿದ್ದೇವೆ. ಹೀಗಾಗಿ ಪ್ರಸ್ತುತ ಸಂದರ್ಭದಲ್ಲಿ ಬೌದ್ಧಧರ್ಮದ ತತ್ವಗಳು ಹೆಚ್ಚು ಮಹತ್ವವನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ಬುದ್ಧ ತಾನು ಕಂಡುಕೊಂಡು ನಾಲ್ಕು ಆರ್ಯ ಸತ್ಯಗಳು ಮತ್ತು ಅಷ್ಟಾಂಗ ಮಾರ್ಗ ಜಗತ್ತಿನ ಜೀವರಾಶಿಗಳಿಗೆ ದಾರಿದೀವಿಗೆಯಾಗಿವೆ.

ಬುದ್ಧ ಸ್ಥಾಪಿಸಿದ ಸಂಘ, ಜಾತಿ-ಮತ, ಕುಲಗಳ ಭೇದಗಳಿಗೆ ಮನ್ನಣೆ ನೀಡುತ್ತಿರಲಿಲ್ಲ. ಮನುಷ್ಯ-ಮನುಷ್ಯರಲ್ಲಿ ಭೇದನ್ನು ಒಪ್ಪುತ್ತಿರಲಿಲ್ಲ. ಸಂಘದ ಬುನಾದಿಯನ್ನು ಜನತಂತ್ರದ ಆಧಾರದ ಮೇಲೆ ರೂಪಿಸಿದ್ದ. ಸಂಘದಲ್ಲಿ ಚರ್ಚೆಯ ಸ್ವಾತಂತ್ರ್ಯವಿತ್ತ. ಆ ಚರ್ಚೆಯಿಂದ ಒಡಮೂಡಿದ ವಿಚಾರಗಳನ್ನು ನಿಯಮಗಳಾಗಿ ರಚಿಸಿದ. ಸಂಘದ ನಿಯಮವನ್ನು ಪಾಲಿಸದವರು ಸಂಘದಿಂದ ಹೊರ ನಡೆಯಬೇಕಾಗಿತ್ತು. ಸಂಘದ ಭಿಕ್ಷುಗಳಿಗೆ ಹಲವು ನಿಯಮಗಳಿದ್ದವು. ಅವುಗಳನ್ನು ವಿನಯ ಪೀಟಕದಲ್ಲಿ ಕಾಣಬಹುದಾಗಿದೆ. ಇದುವೇ ಭಾರತದಲ್ಲಿ ಮೊದಲ ಜನತಂತ್ರಾಧಾರಿತ ಸಂಘವೆಂಬ ಹೆಗ್ಗಳಿಕೆ-ಹೊಂದಿದ ಸಂಘ. ನಮ್ಮ ಪ್ರಜಾತಂತ್ರ ವ್ಯವಸ್ಥೆಗೆ, ಸಂವಿಧಾನದ ನಿರ್ಮಾಣಕ್ಕೆ ಅಂಬೇಡ್ಕರ್‌ರವರಿಗೆ ಸ್ಫೂರ್ತಿಯಾಗಿ ಜಾತ್ಯಾತೀತ ಸಂವಿಧಾನ ರಚನೆಗೆ ಪ್ರೇರಕವಾಯಿತು. ಬುದ್ಧನ ಹಲವು ತತ್ವಗಳನ್ನು ನಾವು ನಮ್ಮ ಸಂವಿಧಾನದಲ್ಲಿ ಕಾಣಬಹುದಾಗಿದೆ. ಅದರಲ್ಲೂ ಸರ್ವರಿಗೂ ಸಮಾನತೆ ಎಂಬ ತತ್ವ ಬೌದ್ಧಧರ್ಮದ ಕೊಡುಗೆ ಎಂದರೆ ತಪ್ಪಾಗಲಾರದು.

ಕುಶಿನಾರದ ಸಾಲವೃಕ್ಷದ ಕೆಳಗೆ ಬುದ್ಧ ಮರಣಶಯ್ಯೆಯಲ್ಲಿ ಮಲಗಿದ ಸಂದರ್ಭ. ಆಗ ಬುದ್ಧ ಆನಂದನನ್ನು ಕುರಿತು ಹೇಳಿದ ಮಾತುಗಳು ಬುದ್ಧನ ಕೊನೆಯ ವಾಕ್ಯಗಳು ಎಂದು ಪ್ರಸಿದ್ಧಿ ಪಡೆದು ಶ್ರೇಷ್ಠವಾಗಿವೆ. ಬುದ್ಧ ಆನಂದನಿಗೆ ಹೇಳುತ್ತಾನೆ. ತಥಾಗನು ಹೇಳಿದ ಜ್ಞಾನ ದೃಷ್ಟಿಯನ್ನು ನೀನು ಕಾಣಬೇಕೆ ಹೊರತು, ತಥಾಗತನ ಶರೀರದ ಬಗ್ಗೆ ಇಟ್ಟಿರುವ ವ್ಯಾಮೋಹವನ್ನು ತೊರೆದು ಬಿಡು. ನಾನು ಇಲ್ಲದಿರುವಾಗ ನಾನು ಹೇಳಿದ ಧರ್ಮ ಮತ್ತು ವಿನಯ ನಿಮಗೆ ದಾರಿದೀಪವಾಗುತ್ತದೆ, ಗುರುವಾಗುತ್ತದೆ.

ಕೊನೆಯದಾಗಿ ತನ್ನ ಎಲ್ಲ ಭಿಕ್ಕುಗಳನ್ನು ಕರೆದು ಏನಾದರೂ ಪ್ರಶ್ನೆಗಳಿವೆಯೇ? ಇದ್ದರೆ ಕೇಳಿ ಎಂದು ಹೇಳಿದ ಯಾವ ಭಿಕ್ಷುವೂ ಪ್ರಶ್ನೆಯನ್ನು ಕೇಳಲಿಲ್ಲ. ಬುದ್ಧ ತನ್ನ ಕೊನೆಯ ವಾಕ್ಯವನ್ನು ನುಡಿದ.

ಹುಟ್ಟಿದ್ದೆಲ್ಲಾ ನಾಶವಾಗಲೇಬೇಕು
ಇದು ಲೋಕದ ನಿಯಮ
ನೀವೆಲ್ಲ ಈ ಹುಟ್ಟು ಸಾವುಗಳ ಭವ ಚಕ್ರದಿಂದ
ಪಾರಾಗಲು ಧರ್ಮದ ದಾರಿಯಲ್ಲಿ ನಡೆಯಿರಿ
ಧರ್ಮದ ದಾರಿಯಲ್ಲಿ ನಡೆದು ನಿರ್ವಾಣ ಪಡೆಯಿರಿ

ಕುಶಿನಾರದ ಸಾಲು ವೃಕ್ಷಗಳ ನೆರಳಲ್ಲಿ ವೈಶಾಖ ಶುದ್ಧ ಪೂರ್ಣಿಮೆಯಂದು ಬುದ್ಧ ದೇಹವನ್ನು ತ್ಯಜಿಸಿ ನಿರ್ವಾಣ ಪಡೆದ. ಬುದ್ಧ ಹೇಳಿದ ಕೊನೆಯ ವಾಕ್ಯ ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲರಿಗೂ ಅನ್ವಯವಾಗುವಂತಾಗಿದ್ದು. ಬುದ್ಧನ ವೈಜ್ಞಾನಿಕ ವೈಚಾರಿಕ ಮನೋಭಾವವೇ ಆ ಧರ್ಮದ ಹಿರಿಮೆ. ಬುದ್ಧನ ಇಂತಹ ವಿಚಾರಗಳೇ ಪ್ರಸ್ತುತ ಸಂದರ್ಭಕ್ಕೂ ಪೂರಕವಾಗಬಲ್ಲವು.

ಪ್ರೀತಿ, ಕರುಣೆ, ಸಮಾನತೆ ಬೋಧಿಸಿದ ಕಾರುಣ್ಯಮೂರ್ತಿ ಬುದ್ಧ. ಬುದ್ಧ ಜ್ಞಾನದ ಬೆಳಕು, ಜ್ಞಾನದ ಬೆಳಕಿನ ದೀವಿಗೆಯನ್ನು ಅಜ್ಞಾನದ ಕತ್ತಲು ತುಂಬಿರುವ ಈ ನಾಡಿನಲ್ಲಿ ಮತ್ತೊಮ್ಮೆ ಪ್ರಜ್ವಲಿಸುವಂತೆ ಮಾಡಿದವರು ಡಾ। ಬಾಬಾ ಸಾಹೇಬ ಅಂಬೇಡ್ಕರ್‌ರವರು. ಬೌದ್ಧಧರ್ಮ ಮಾನವಧರ್ಮ. ಅದರಲ್ಲಿ ಮಾನವ ವೈಚಾರಿಕತೆ ಇದೆ. ಧರ್ಮವು ಮಾನವನಿಗಾಗಿ ಇದೆ. ಮಾನವರು ಧರ್ಮಕ್ಕಾಗಿ ಇಲ್ಲ ಎಂದು ಘೋಷಿಸಿದರು. ಹೀಗಾಗಿ ಬುದ್ಧನ ವಿಚಾರಗಳು ಪ್ರಸ್ತುತ ಸಂದರ್ಭದಲ್ಲಿ ಕೂಡಾ ದಲಿತರಿಗೆ ದಾರಿದೀಪವಾಗಿವೆ. ಬುದ್ಧ ತತ್ವ ಈ ಕಾರಣಗಳಿಗಾಗಿ ಪ್ರಸ್ತುತವಾಗುತ್ತದೆ.

- ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗಳಿಂದ ವಿಮೋಚನೆಗೊಳ್ಳಲು.
- ಜಾತಿರಹಿತ ವರ್ಗರಹಿತ ಸಮಾಜ ನಿರ್ಮಿಸಲು.
- ಸ್ವಾಭಿಮಾನ, ಸ್ವಾತಂತ್ರ್ಯ, ಸಮಾನತೆಯ ಬದುಕಿಗೆ ಸ್ಫೂರ್ತಿ ನೀಡಲು.
- ಅಸ್ಪೃಶ್ಯರು, ಅಲ್ಪಸಂಖ್ಯಾತರ ಮೇಲೆ ನಡೆಯುವ ದಬ್ಬಾಳಿಕೆ-ದೌರ್ಜನ್ಯಗಳನ್ನು ತಡೆಗಟ್ಟಲು.
- ಸಮಾನತೆ-ಸಹೋದರತೆ, ಪ್ರೀತಿಯ ನೆಲೆಗಟ್ಟಿನ ಸಮಾಜ ನಿರ್ಮಾಣ ಮಾಡಲು.
- ಜಾತಿ ಹಾಗೂ ಮತೀಯ ವಾದಗಳಿಂದ ದೇಶವನ್ನು ವಿಮೋಚನೆಗೊಳಿಸಲು.

ಬುದ್ಧ ನಮ್ಮ ಬದುಕಿಗೆ ದಾರಿದೀಪವಾಗಬಲ್ಲ. ಅಸಮಾನತೆ ಕಿತ್ತೆಸೆದು ಸಮಾನತೆಯ ಸುಂದರ ಭಾರತಕ್ಕೆ ಅವನ ತತ್ವ ಚಿಂತನೆಗಳು ಸೂಕ್ತವಾಗಬಲ್ಲವು.

ಆಧುನಿಕ ಸಂದರ್ಭದಲ್ಲೂ ಜಾತಿಯ ಕುರೂಪ ಒಡೆದು ಕಾಣುತ್ತಿದೆ. ದಲಿತ, ರೈತ, ಕಾರ್ಮಿಕ, ದಲಿತ ಮಹಿಳೆ ಹಲವು ಸಮಸ್ಯೆಗಳಲ್ಲಿ ಬೆಂದು ಬಡತನ-ಹಸಿವುಗಳಿಂದ ಇಂದು ಸಾಯುತ್ತಿದ್ದಾರೆ. ಸಾಮಾಜಿಕ ದಬ್ಬಾಳಿಕೆ, ದೌರ್ಜನ್ಯ, ಸೂಕ್ಷ್ಮ ರೂಪ ತಳೆದು ರಾಜಕೀಯ ಕಾರಣಗಳಿಗಾಗಿ ದಲಿತರಿಂದಲೇ ದಲಿತರನ್ನು ದಹಿಸುವ ಪ್ರಯತ್ನಗಳು ಇತ್ತೀಚಿನ ಕೆಲ ಘಟನೆಗಳು ಸಾಬೀತುಪಡಿಸಿವೆ. ಹೀಗಾಗಿ ಈ ಹೊತ್ತಿನ ಜರೂರು ಶಾಂತಿ, ಸಮಾನತೆ, ಸಾಮಾಜಿಕ ನ್ಯಾಯ, ದಲಿತರಿಗೆ ಸ್ವಾಭಿಮಾನದ ಬದುಕು ತಂದು ಕೊಟ್ಟವರೆಂದರೆ ಬುದ್ಧ, ಬಸವ, ಅಂಬೇಡ್ಕರ್. ಹೀಗಾಗಿ ಅವರ ವಿಚಾರಗಳು ಹೊಳಮ ಕಳೆದುಕೊಳ್ಳದಂತೆ

ನೋಡಿಕೊಂಡು ಬ್ರಾಹ್ಮಣ್ಯದ ವಿರುದ್ಧ ದುಷ್ಟ ಯಜಮಾನಿಕೆಯ ವಿರುದ್ಧ ಹೋರಾಟದ ಮನೋಭಾವ ಬೆಳೆಸಬೇಕಾಗಿದೆ.

ಕಾಣದ ಶಕ್ತಿ ಅಥವಾ ವ್ಯಕ್ತಿಯ ಬಗ್ಗೆ ಮಾತನಾಡುವುದಕ್ಕಿಂತ ಸಹಮಾನವನ ಕಷ್ಟದಲ್ಲಿ ಭಾಗಿಯಾಗುವುದು ಹೆಚ್ಚು ಶ್ರೇಯಸ್ಕರ ಎಂಬುದನ್ನು ಬುದ್ಧ ಅತ್ಯಂತ ಮನನೀಯವಾಗಿ ಆಚರಣೀಯವಾಗಿ ಹೇಳಿದ್ದಾನೆ. ಬೋಧಕ ಬಾಯಿಗಿಂತ ಸಹಾಯಕ ಹಸ್ತ ಹೆಚ್ಚು ಪವಿತ್ರವಾದುದು. ಪ್ರಪಂಚದ ಯಾವ ಸಂತ ಮಹಾಂತರಾಗಲೀ ದೇವರನ್ನು ಕಂಡಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಇದುವರೆಗಿನ ಇತಿಹಾಸದಲ್ಲಿ ದೇವರನ್ನು ಕುರಿತು ನಡೆದಿರುವುದೆಲ್ಲ ಕೇವಲ ಕಲ್ಪನೆ, ವೈಯಕ್ತಿಕ ನಂಬಿಕೆ ಆಗಿದೆ. ಅದಕ್ಕೆ ಯಾವುದೇ ಸಾರ್ವತ್ರಿಕ ಆಧಾರವಿಲ್ಲ. ಪೂಜೆ, ಯಜ್ಞ, ವಿಧಿ-ವಿಧಾನಗಳು ಧರ್ಮವಲ್ಲ. ಧರ್ಮವೆಂದರೆ ಒಂದು ಗಳಿಗೆ ಪ್ರಾರ್ಥನೆ ಸಲ್ಲಿಸಿ, ನಂತರ ದಿನವೆಲ್ಲ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವುದಲ್ಲ. ಇಡೀ ಬದುಕೇ ಪ್ರಾರ್ಥನೆಯ ಹಾಗೆ ಪವಿತ್ರವಾಗಿ ಇರಬೇಕು ಎಂದು ಬಾಳಿ ತೋರಿಸಿದ ಮಹಾನುಭಾವ ಬುದ್ಧ. ಬುದ್ಧನ ಮಾನಸಿಕ ಸ್ವಾಸ್ಥತೆ ಅಪೂರ್ವವಾದುದು. ಅಲ್ಲಿ ದೇವರು, ದೇವತೆಗಳು, ದೇವದೂತರು, ಭೂತಗಣಗಳು ಯಾವುದಕ್ಕೂ ಜಾಗವಿಲ್ಲ. ಅವನದು ಸ್ವಚ್ಛ ಮನಸ್ಸು. ಪರಿಪೂರ್ಣವಾದ ಮನಸ್ಸು.[10] ಈ ಕಾರಣಗಳಿಗಾಗಿ ಬುದ್ಧ ಮತ್ತು ಬೌದ್ಧ ಧರ್ಮ ಪ್ರಸ್ತುತವಾಗುವುದು. ಆಧುನಿಕ ಜಗತ್ತಿಗೆ ಬೇಕಾಗಿರುವುದು ಇಂತಹ ಸರಳ, ಸುಲಭ, ಖರ್ಚಿಲ್ಲದ, ನಿಗೂಢತೆ, ಭಯ, ಮೂಢನಂಬಿಕೆ ಇಲ್ಲದ ಧರ್ಮದ ಅಗತ್ಯವಿದೆ. ಅಂತಹ ಎಲ್ಲ ಅಂಶಗಳನ್ನು ಒಳಗೊಂಡ ಬೌದ್ಧ ಧರ್ಮ ಸರ್ವರಿಗೂ ಅನುಸರಣೀಯವೆನಿಸಿದೆ.

ಬುದ್ಧನಂತಹ ವ್ಯಕ್ತಿಗಳು ಎಂದೋ ಆಗಿ ಹೋದ ಇತಿಹಾಸದ ಪುಟಗಳಲ್ಲಿ ಸೇರಿಹೋದ ವ್ಯಕ್ತಿಗಳಲ್ಲ. ಈ ಭೂಮಿಯ ಮೇಲೆ ಎಲ್ಲಿಯವರೆಗೆ ಮಾನವ ಜೀವಿಸಿರುತ್ತಾನೆಯೇ ಅಲ್ಲಿಯವರೆವಿಗೂ ಬುದ್ಧ ಪ್ರಸ್ತುತನಾಗುತ್ತಾನೆ. ಮಾತ್ರವಲ್ಲ, ನಮ್ಮೊಂದಿಗೇ ಇರುತ್ತಾನೆ. ನಮ್ಮೊಳಗೆ ಇರುತ್ತಾನೆ. ಬುದ್ಧನ ತ್ಯಾಗ, ವೈರಾಗ್ಯ, ಚಿಂತನೆ, ಬೋಧನೆಗಳು ವಿಕಾಸ ಶೀಲತೆಯನ್ನು ಬಯಸುವ ಚೇತನಗಳಿಗೆ ಅನಂತತೆಯನ್ನು ನೀಡುವ ಆಶಾಕಿರಣಗಳು. "ಒಂದು ಕಾಲಕ್ಕೆ ಮನುಷ್ಯರನ್ನು ಹಿಡಿದು ಕೂಡಿಸುತ್ತಿದ್ದ ದೇವರು, ದೇವಸ್ಥಾನ ಮತ್ತು ಗುರು, ಇಂದು ಮನುಷ್ಯರನ್ನು ಒಡೆಯುವ ಸ್ಫೋಟಕಗಳಂತೆ ಬಳಕೆ ಆಗುತ್ತಿವೆ. ಈ ಎಲ್ಲವುಗಳನ್ನು ನಿರಾಕರಿಸಿ ನಿಲ್ಲಬಲ್ಲ ಮನಸ್ಥಿತಿಯೊಂದು ನಿರ್ಮಾಣವಾದೀತೆ ಎಂದು ಪ್ರಜ್ಞಾವಂತರು ಆಶಿಸುತ್ತಿರುವಾಗ ನಮಗೆ ಬುದ್ಧನ ನೆನಪಾಗುತ್ತದೆ" ಡಾ। ಜಿ.ಎಸ್. ಶಿವರುದ್ರಪ್ಪನವರು ಹೀಗೆ ಉಲ್ಲೇಖಿಸುತ್ತಾರೆ.

ಬೌದ್ಧಧರ್ಮದ ಎರಡು ಆಧಾರಸ್ತಂಭಗಳೆಂದರೆ ಅನತ್ತ ಮತ್ತು ಅನಿಕ್ಕ. 'ಅನತ್ತ' ಎಂದರೆ ಆತ್ಮವಿಲ್ಲದಿರುವುದು. ಆತ್ಮವಿಲ್ಲದ ಮೇಲೆ ಪರಮಾತ್ಮನ ಅವಶ್ಯಕತೆ ಉದ್ಭವಿಸಿಲ್ಲ. ಆದ್ದರಿಂದ ಬೌದ್ಧಧರ್ಮದಲ್ಲಿ ದೇವರ ಅಸ್ತಿತ್ವಕ್ಕೆ ಆಧಾರವಿಲ್ಲ. 'ಅನಿಕ್ಕ' ಎಂದರೆ ಅಶಾಶ್ವತತೆ. ದೇವರಿಲ್ಲವೆಂದ ಮೇಲೆ ಸ್ವರ್ಗ, ಪರಲೋಕಗಳ ಕಲ್ಪನೆಯೇ ಬಾರದು. ಬೌದ್ಧಧರ್ಮ ಹೇಳುವ 31 ಲೋಕಗಳಲ್ಲಿ ಕೆಲವನ್ನು ಮನುಷ್ಯ ತನ್ನ ಧ್ಯಾನಸ್ಥ ಸ್ಥಿತಿಯಲ್ಲಿಯೇ ತಲುಪಿಸಬಹುದು. ಮೇಲೆ ಹೋದಂತೆ ಕೆಲವು ಅರೂಪ ಲೋಕಗಳು. ಅವೆಲ್ಲವನ್ನೂ ಮೀರಿದೆ ನಿರ್ವಾಣ ಸ್ಥಿತಿ. ಅವು ಯಾವುವೂ ಅಪ್ಸರೆಯರು ನರ್ತಿಸುವ ಲೋಕಗಳಲ್ಲ. ಅಲ್ಲಿ ಸೋಮಪಾನದ ಆತಿಥ್ಯವಿಲ್ಲ.

ಪುನರ್ಜನ್ಮವೂ ಕೂಡ ಹಿಂದೂ ಧರ್ಮದಲ್ಲಿರುವಂತೆ ಅಲ್ಲ. ಅದನ್ನು ಪುನರ್ಭವ ಎಂದು ಕರೆಯುತ್ತಾರೆ. ಆತ್ಮದ ಇರುವನ್ನೇ ಅಲ್ಲಗಳೆದ ಮೇಲೆ ಅದರ ಜನ್ಮಾಂತರದ ಹುಡುಕಾಟ ಅಪ್ರಸ್ತುತ. ಬೌದ್ಧ ಧರ್ಮ ಮನುಷ್ಯ ಮತ್ತು ಮನಸ್ಸು ಇವುಗಳ ಸುತ್ತ ಹೆಣೆದ ಧರ್ಮ. ಮನುಷ್ಯನ ದೇಹಾಂತ್ಯದ ಸಮಯದಲ್ಲಿ ಪ್ರಾಣಿಪಕ್ಷಿ ಮತ್ತೊಂದು ಜೀವದ ಆಶ್ರಯ ಪಡೆಯುವುದನ್ನೆ ಪುನರ್ಭವ ಎಂದು ಹೇಳಲಾಗಿದೆ. ಆತನ ಕುಶಲ ಮತ್ತು ಅಕುಶಲ ಕರ್ಮಗಳು ನೀಡುವ ಫಲಗಳೇ ಆ ಜೀವಿಯನ್ನು ಆರಿಸಿಕೊಳ್ಳುತ್ತವೆ. ಪುನರ್ಭವಕ್ಕೆ ಬುದ್ಧ ಒಂದು ಅದ್ವಿತೀಯವಾದ ಸುಂದರ ರೂಪಕವನ್ನು ನೀಡುತ್ತಾನೆ. ಒಂದು ಮೇಣದ ಬತ್ತಿಯಿಂದ ಇನ್ನೊಂದು ಮೇಣದ ಬತ್ತಿಯನ್ನು ಹಚ್ಚಿದಂತೆ ಎಂದು ಆ ಬೆಳಕು ಸಂಪೂರ್ಣ ಸ್ವಂತದ್ದೂ ಅಲ್ಲ ಅಥವಾ ಸಂಪೂರ್ಣ ಎರವಲು ಪಡೆದದ್ದೂ ಅಲ್ಲ. ಮುಂದೆಯೂ ತನ್ನ ಕುಶಲ ಕರ್ಮಗಳಿಂದ ನಿರ್ವಾಣ ಸ್ಥಿತಿಯನ್ನು ತಲುಪಲು ಅವಕಾಶವಿದೆ.

ಡಾ|ಅಂಬೇಡ್ಕರ್ ಅವರು ತಮ್ಮ "ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್" ಎಂಬ ಕೃತಿಯಲ್ಲಿ, 2500 ವರ್ಷಗಳ ಹಿಂದೆಯೇ ಬುದ್ಧ, ಮಾರ್ಕ್ಸ್‌ವಾದವನ್ನು ಹೇಳಿದ್ದಾಗಿ ಅಭಿಪ್ರಾಯಪಡುತ್ತ ಭೌತಿಕ ವಿಷಯಗಳೇ ಮನುಷ್ಯನಿಗೆ ಅತ್ಯಂತಿಕ ಸುಖ ನೀಡಲಾರವು ಎಂಬುದನ್ನು ಅರಿತು ಧರ್ಮದ ಉಪದೇಶವನ್ನು ನೀಡಿದ, ಅವರಿಬ್ಬರ ಗುರಿ ಒಂದೇ ಆಗಿತ್ತು. ಆದರೆ ಮಾರ್ಗಗಳು ಬೇರೆಯಾಗಿದ್ದವು ಎಂದು ಹೇಳುತ್ತಾರೆ. ಬೌದ್ಧಧರ್ಮದಲ್ಲಿ ಬ್ರಹ್ಮ ವಿಹಾರ ಎಂದರೆ ದೈವಿಕ ಗುಣಗಳುಳ್ಳ ನಾಲ್ಕು ಸ್ಥಿತಿಗಳು. ಅವುಗಳೆಂದರೆ ಮುದ್ರಿತ (Loving Kindness) ಮೆತ್ತ (ಮೈತ್ರಿ) ಉಪೇಕ್ಷ (Equanimity) ಮತ್ತು ಕರುಣ (Compassion) ಇವೆಲ್ಲವೂ ಮನುಷ್ಯ ತಾನು ಬದುಕಿರುವಾಗಲೇ ಅನುಭವಿಸಬಹುದಾದ ಸ್ಥಿತಿಗಳು. ಈ ಕಾರಣಗಳಿಂದಲೇ ಬೌದ್ಧಧರ್ಮವನ್ನು ವೈಜ್ಞಾನಿಕಧರ್ಮ ಎಂದು ಕರೆಯುತ್ತಾರೆ. ವಿಜ್ಞಾನಿ ಐನ್‌ಸ್ಟಿನ್ ಮತ್ತು ತತ್ವಜ್ಞಾನಿ ರಸೆಲ್‌ರಂಥವರು ಒಲವು ತೋರಿದ್ದಾರೆ. ಪ್ರಸ್ತುತ ಸಂದರ್ಭದಲ್ಲೂ ಐಷಾರಾಮಿ ಬದುಕಿನಿಂದ ಬೇಸತ್ತ ಹಾಲಿವುಡ್‌ನ ಖ್ಯಾತನಾಮರು ಬುದ್ಧನ ಮೊರೆ ಹೋಗುತ್ತಿದ್ದಾರೆ. ಇವತ್ತಿಗೂ ಚೈನಾದಲ್ಲಿ ಬುದ್ಧ ಮತ್ತು ಮಾರ್ಕ್ಸ್ ಒಟ್ಟಿಗೆ ಇದ್ದಾರೆ. ಸಮಾನತೆಯೊಂದಿಗೆ ಸಮೃದ್ಧಿಯನ್ನು ಪಡೆದುಕೊಳ್ಳುತ್ತ ಈಗ ಅದು ಜಗತ್ತನ್ನು ಚಕಿತಗೊಳಿಸುತ್ತದೆ.

ಭೋಗಲೋಲುಪತೆ, ದೇಹದಂಡನೆಗಳ ನಡುವಣ ಸುವರ್ಣ ಮಧ್ಯಮ ಪಥಕ್ಕೆ ಬುದ್ಧನ ಪ್ರಾಶಸ್ತ್ಯ. ಧರ್ಮದ ಸಿದ್ಧಾಂತ ಭಾಗದ ಮೇಲೆ ಅವನು ಒತ್ತು ಹಾಕದೇ, ಅದರ ನೈತಿಕ ಮುಖಕ್ಕೆ ಪ್ರಾಧಾನ್ಯ ಕೊಡುತ್ತಾನೆ.

ಪ್ರತಿ ಮಾನವಾತ್ಮವೂ ವಿಶ್ವಾತ್ಮದ ಒಂದು ಅಂಗ ಎಂದು ಹೇಳಿ, ಮೈತ್ರಿ, ಕರುಣ, ಕಲ್ಯಾಣ ಎಂಬ ಮೂರು ಅಮೃತ ಸೂತ್ರಗಳನ್ನು ಮಂಡಿಸುತ್ತಾನೆ. ಅವನ ಪ್ರಕಾರ ವ್ಯಕ್ತಿ ತನ್ನನ್ನು ತಾನು ಗೆಲ್ಲುವುದೇ ದೊಡ್ಡ ವಿಜಯ. ಸಂಯಮವೇ ದೊಡ್ಡ ಗುಣ. ಅವನ ಸಂದೇಶವಿದು ದ್ವೇಷದಿಂದ ದ್ವೇಷ ಶಮನವಾಗುವುದಿಲ್ಲ, ಪ್ರೀತಿಯಿಂದ ಶಮನವಾಗುತ್ತದೆ. ಕೋಪವನ್ನು ದಯೆಯಿಂದ ಕೆಡಕನ್ನು ಒಳಿತಿನಿಂದ ಗೆಲ್ಲಬೇಕು

ವೈಚಾರಿಕತೆಯ ಹಿನ್ನೆಲೆಯಲ್ಲಿ ಬುದ್ಧ ವೈದಿಕಧರ್ಮದ ಹಿಂಸೆ, ವರ್ಗ ವರ್ಣಾಶ್ರಮ ಪದ್ಧತಿ, ಮೌಢ್ಯಗಳಿಗೆ ಕೊಡಲಿ ಪೆಟ್ಟು ಹಾಕುತ್ತಾನೆ. ಜಾತಿನಾಶಕ್ಕಾಗಿ, ಸಮಾನತೆಗಾಗಿ ಶ್ರಮಿಸುತ್ತಾನೆ. ತನ್ನ ಧರ್ಮದ

ಬಗ್ಗೆ ಅವನ ಹೇಳಿಕೆಯಿದು. ಎಲ್ಲ ನಾಡುಗಳಿಗೂ ಹೋಗಿ, ಇದನ್ನು ಸಾರಿ; ಬಡವ ಬಲ್ಲಿದರೆಲ್ಲ ಒಂದು; ಎಲ್ಲ ಜಾತಿಗಳೂ ಈ ಧರ್ಮದಲ್ಲಿ ಒಂದಾಗುತ್ತವೆ. ನದಿಗಳು ಸಮುದ್ರದಲ್ಲಿ ಹೇಗೋ ಹಾಗೆ. ಇದಲ್ಲವೇ ಸರ್ವರ ಉದಯ? ಅವನು ಉಪದೇಶಿಸಿದ್ದು ತನ್ನ ಕಾಲದ ಜನ ಭಾಷೆಯಾಗಿದ್ದ ಪಾಳಿಯಲ್ಲಿ.

ಒಟ್ಟಿನಲ್ಲಿ ಹುಟ್ಟು ಸಾವುಗಳ ವಿಷಮ ಚಕ್ರದಿಂದ ಜೀವಿ ಪಾರಾಗುವುದು ಹೇಗೆಂಬುದು ಬುದ್ಧನ ಮುಖ್ಯ ಕಾಳಜಿಯಾಗಿತ್ತು. ಆದರೆ ಅವನು ತನ್ನದೇ ಕಡೆಯ ಮಾತು ಎನ್ನದೆ ನಾನು ಹೇಳುವುದನ್ನೆಲ್ಲ ಗೌರವದಿಂದ ಒಪ್ಪಿ ಬಿಡಬೇಕಿಲ್ಲ; ಪರೀಕ್ಷಿಸಿ ನೋಡಿ! ಎಂದ. ಹಿಂಸೆ, ದ್ವೇಷ, ದೌರ್ಜನ್ಯ, ಭಯೋತ್ಪಾದನೆ, ಅಶಾಂತಿಗಳು ತುಂಬಿ ತುಳುಕುತ್ತಿರುವ ಇಂದಿನ ಪ್ರಪಂಚಕ್ಕೆ ಬುದ್ಧನ ತಾರಕ ಸಂದೇಶ ಅತ್ಯಂತ ಪ್ರಸ್ತುರವಾದದ್ದು. ಕುವೆಂಪು ರವರ ತಮ್ಮ ಬುದ್ಧದೇವ ಎಂಬ ಕವನದಲ್ಲಿ. ಈ ರೀತಿ ವರ್ಣಿಸಿದ್ದಾರೆ ಬುದ್ಧನನ್ನು.

ಹೇ ಬುದ್ಧದೇವ, ನಿನ್ನತುಲ ಬುದ್ಧಿ ಸ್ಫೂರ್ತಿ
ಮಾನವನ ಮೂರ್ಖತೆಯ ದಹಿಸುವ ಮಹಾಜ್ವಾಲೆ.....
ಹೇ ಪುಣ್ಯಮತಿ-ಮೂರ್ತಿ, ಮತದ ಮತಿ ಹೀನತೆಯು
ಸಾಕೆಮಗೆ, ಬೇಕು ಸನ್ಮತಿಯ ನಾಗರೀಕತೆಯು
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ ?

25-09-2003 ರಂದು ಬೆಂಗಳೂರಿನಲ್ಲಿ ಜರುಗಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಅಂಬೇಡ್ಕರ್ ವಾದದ ಅನಿವಾರ್ಯತೆ ಮತ್ತು ಬಹು ಜನರ ಸಾಮಾಜಿಕ ಪರಿವರ್ತನೆ ವಿಚಾರ ಸಂಕೀರ್ಣದಲ್ಲಿ ಮಾತನಾಡಿದ ಡಾ। ಮೊಗಳ್ಳಿ ಗಣೇಶ್‌ರವರು ಬೌದ್ಧಧರ್ಮ ಕೇವಲ ಧರ್ಮ ಮಾತ್ರ ಅಲ್ಲ. ಅದೊಂದು ಮಾನವೀಯ ವಿವೇಕದ ಸಂಕೇತ ಎಂದು ವ್ಯಾಖ್ಯಾನಿಸಿದ ಅವರು ಬಹು ಸಂಖ್ಯಾತರಿಗೆ ದೀಪದ ಬೆಳಕಾದ ಬೌದ್ಧಧರ್ಮದ ಆಶಯಗಳನ್ನು ನೊಂದವರ ಬಿಡುಗಡೆಯ ರಾಜಕಾರಣವಾಗಿ ಅಂಬೇಡ್ಕರ್ ರೂಪಿಸಿದರು . ಎಂದಿರುವುದು ಪ್ರಸ್ತುತ ಸಂದರ್ಭಕ್ಕೆ ಸೂಕ್ತ ಉತ್ತರವೆಂದರೆ ತಪ್ಪಾಗಲಾರದು.

ಚಿಂತಕರ ದೃಷ್ಟಿಯಲ್ಲಿ ಬುದ್ಧ :

ಜಗತ್ತಿನ ಬೆಳಕಾದ ಬುದ್ಧನನ್ನು ಕುರಿತು ಜಗತ್ತಿನ ಖ್ಯಾತ ಚಿಂತಕರು ಬರೆದ ಗ್ರಂಥಗಳಿಂದ ಲೇಖನಗಳಿಂದ ಆಯ್ದ ಕೆಲವು ಸೂಕ್ತಿಗಳನ್ನು ಪೂಜ್ಯರಾದ ಧಮ್ಮಾನಂದರು ಸಂಗ್ರಹಿಸಿ Buddhism in the eyes of Intellectual ಎಂಬ ಸಣ್ಣ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅದರಲ್ಲಿ ಕೆಲವನ್ನು ಡಾ।ಸಿ.ಎಸ್. ದ್ವಾರಕಾನಾಥ್‌ರವರು ಆಯ್ದು ಕನ್ನಡೀಕರಿಸಿ ಜೂನ್ 2, 2005 ಅಗ್ನಿ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಅವುಗಳನ್ನು ಪ್ರಸ್ತುತ ಸಂದರ್ಭದಲ್ಲಿ ಬುದ್ಧ ಎಂಬ ಅಧ್ಯಾಯಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ, ಹಲವಾರು ಚಿಂತಕರು ಈ ರೀತಿ ವ್ಯಾಖ್ಯಾನಿಸಿದ್ದಾರೆ.

ಗುಲಾಮಗಿರಿಯಿಂದ ವಿಮುಕ್ತಿ :

ಪ್ರಪಂಚದ ಯಾವುದೇ ಬೋಧಕರನ್ನು ಕಂಡಾಗ : ಬುದ್ಧನೊಬ್ಬ ಮಾತ್ರ ನಮಗೆ ಸ್ವಾಲಂಬನೆಯನ್ನು ಬೋಧಿಸಿದ್ದಾನೆ. ಆತ ನಮ್ಮನ್ನು ಕಣ್ಣಿಗೆ ಕಾಣದಿರುವ ದೇವರು ದಿಂಡಿರೆಂಬ ಗುಲಾಮಗಿರಿಯಿಂದ ನಿಮ್ಮನ್ನು ನೀವೇ ಪಾರು ಮಾಡಿಕೊಳ್ಳಿರೆಂದು ತಿಳಿಸಿದ್ದಾನೆ. - **ಸ್ವಾಮಿ ವಿವೇಕಾನಂದ**

ಪ್ರಶಾಂತ ಹೃದಯ :

ಬುದ್ಧನ ಬೋಧನೆಯಲ್ಲಿ ಅಧಿಕವಾಗಿ ಎದ್ದು ಕಾಣುವ ಅಂಶವೇನೆಂದರೆ ಅವನ ಪ್ರಶಾಂತ ಮನಸ್ಸು, ವೈಜ್ಞಾನಿಕ ಮನೋಭಾವ ಮತ್ತು ಪ್ರೀತಿಸುವ ಹೃದಯ ಶ್ರೀಮಂತಿಕೆ. ಈ ಜಗತ್ತು ಆತನ ಕಡೆ ಮತ್ತೆ ಮತ್ತೆ ಏಕೆ ತಿರುಗಿ ನೋಡುತ್ತಿರುತ್ತದೆ ಎಂದರೆ ಬುದ್ಧ ವಿಮೋಚನಾ ಶಕ್ತಿ ಮತ್ತು ಮಾನವೀಯತೆಯ ಸಾರ ಸಂಗಮದ ಪ್ರತೀಕ **-ಮೋನಿಭಾಗೀ**

ಗೊಂದಲರಹಿತ :

ಬುದ್ಧನ ಬೋಧನೆಗಳನ್ನು ಓದಿ ಅರ್ಥ ಮಾಡಿಕೊಂಡು, ನಾವು ಎಲ್ಲವನ್ನೂ ಪ್ರಶ್ನೆ ಮಾಡಿಯೇ ಒಪ್ಪಿಕೊಳ್ಳಬೇಕೆಂಬ ಬುದ್ಧನ ಮಾತಿನಿಂದ ಪ್ರಭಾವಿತನಾಗಿದ್ದೇನೆ. ಆತನ ನೀತಿ ಮಾರ್ಗ ಉತ್ತಮ ದಾರಿಗೆ ಮೊದಲ ಮೆಟ್ಟಲಾಗಿದೆ. ಅದು ತರ್ಕ ಸಮ್ಮತವಾದ, ಸತ್ಯವಾದ, ವಾಸ್ತವವಾದ ಅನುಭವ ನೋಟವಾಗಿರುತ್ತದೆ, ಆತನು ಪ್ರತಿಪಾದಿಸಿರುವುದೇನೆಂದರೆ, ಮಾನವ ಕುಲ ತನ್ನ ಉದ್ಧಾರ ಮತ್ತು ಉನ್ನತಿಗಾಗಿ ಎಲ್ಲ ರೀತಿಯ, ಗೊಂದಲಗಳನ್ನು ದೂರ ಮಾಡುವುದೇ ಆಗಿದೆ. **-ಡಾ। ಎಸ್. ರಾಧಾಕೃಷ್ಣನ್**

ಬುದ್ಧ ನೆಮ್ಮದಿ :

ಅತ್ಯಂತ ನೋವುಂಡು ದುಃಖ ಪಡುತ್ತಿದ್ದ ಬಡ ಜನರ ಬಾಳಿನಲ್ಲಿ ಬುದ್ಧ ಧ್ವನಿ ಸಾಂತ್ವನ ತಂದಿತು. ಅದೇ ಧ್ವನಿ ದಾರಿ ತಪ್ಪಿದ ದುಷ್ಟರನ್ನು ಉತ್ತಮ ಮಾನವರನ್ನಾಗಿ ಪರಿವರ್ತಿಸಿತು. ದನಿಯಿಲ್ಲದವರಿಗೆ ದನಿ ನೀಡಿತು. ಒಡೆದು ಹಂಚಿ ಹೋಗಿದ್ದವರನ್ನು ಒಂದುಗೂಡಿಸಿತು. ಅಜ್ಞಾನಿಗಳನ್ನು ಜ್ಞಾನಮಾರ್ಗಕ್ಕೆ ಕೊಂಡೊಯ್ಯಿತು. ಕೆಳಸ್ತರದಲ್ಲಿದ್ದವರನ್ನು ಮೇಲ್ಮಟ್ಟಕ್ಕೇರಿಸಿತು.- **ಮ್ಯಾಕ್ಸ್ ಮುಲ್ಲರ್**

ಕಣ್ಣಂಚಿನ ಶಕ್ತಿ :

ಬುದ್ಧನ ವಿಗ್ರಹ ನೋಡಿದಾಗ ಕೇವಲ ಕಣ್ಮುಚ್ಚಿ ಕುಳಿತಂತೆ ಕಾಣುತ್ತದೆಯಷ್ಟೆ. ಆದರೆ ಕಣ್ಣಂಚಿನಲ್ಲಿ ಒಂದು ಬೃಹತ್ ಶಕ್ತಿಯೇ ಹೊರಹೊಮ್ಮಿದಂತೆ ಭಾಸವಾಗುತ್ತದೆ. ಬುದ್ಧ ಹುಟ್ಟಿ ವರ್ಷಗಳೇ ಉರುಳಿ ಹೋಗಿದ್ದರೂ ಆತ ಇಂದೂ ಕೂಡ ಹೊಸಬನಂತೆ ಕಾಣುತ್ತಾನೆ. ಆತನ ಮಾತುಗಳು ಈಗಲೂ ನಮ್ಮ ಕಿವಿಯಲ್ಲಿ ಪಿಸುಗುಟ್ಟುವುದೇನೆಂದರೆ ಧೈರ್ಯದಿಂದ ಜೀವನದಲ್ಲಿ ಹೋರಾಡು, ಬಂದುದೆಲ್ಲವನ್ನೂ ಎದುರಿಸು, ನಿನ್ನ ಬೆಳವಣಿಗೆ ನಿನ್ನಿಂದಲೇ ಆಗುತ್ತದೆ. - **ಜವಾಹರಲಾಲ್ ನೆಹರು**

ಸರಳ ಶುದ್ಧ ಏಕಾಂಗಿ :

ಬುದ್ಧನಲ್ಲಿ ನೀವು ಒಬ್ಬ ಸರಳ ಶುದ್ಧ ಏಕಾಂಗಿ ಬೆಳಕಿಗಾಗಿ ಹೋರಾಡುತ್ತಿರುವ ಪುರಾಣವಲ್ಲದ ವ್ಯಕ್ತಿತ್ವವನ್ನು ಕಾಣುತ್ತೀರಿ. ಅನೇಕ ವಿಲಕ್ಷಣ ಕಲ್ಪಿತ ಕಥೆಗಳ ರಾಶಿಯ ಅಡಿಯಲ್ಲಿಯೂ ಒಬ್ಬ ಮಾನವನಿದ್ದನೆಂದು ನನಗನ್ನಿಸುತ್ತದೆ. ಅವನು ಮಾನವನಿದ್ದರೂ ಸರ್ವಕಾಲಿಕ ಸತ್ಯದಿಂದ ಕೂಡಿದ ಸಂದೇಶವನ್ನು ಮನು ಕುಲಕ್ಕೆ ನೀಡಿದ. ನಮ್ಮ ಅನೇಕ ಆಧುನಿಕ ವಿಚಾರಗಳು ಆ ಸಂದೇಶದ ಜೊತೆ ಜೊತೆಗೆ ಸುಲಭವಾಗಿ ಹೊಂದಿಕೊಂಡು ಹೋಗುತ್ತವೆ. ಬುದ್ಧ ನಮಗೆ ಹಲವಾರು ರೀತಿಗಳಲ್ಲಿ ಮತ್ತು ಮಾರ್ಗಗಳಲ್ಲಿ ನಮ್ಮ ಅವಶ್ಯಕತೆಗಳಿಗೆ ಸಮೀಪನಾಗಿದ್ದಾನೆ. ಸೇವಾ ಮನೋಭಾವದಲ್ಲಿ ವ್ಯಕ್ತಿಯ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಬುದ್ಧ, ಏಸು ಕ್ರಿಸ್ತನಿಗಿಂತ ಹೆಚ್ಚು ಸ್ಪಷ್ಟವಾಗಿ ಕಾಣುತ್ತಾನೆ ಮತ್ತು ವ್ಯಕ್ತಿಯ ಅಮರತ್ವಕ್ಕೆ ಸಂಬಂಧಿಸಿದ ಪ್ರಶ್ನೆಗೆ ಅವನಲ್ಲಿ ಸಂದೇಹಕ್ಕೆ ಆಸ್ಪದ ತುಂಬ ಕಡಿಮೆ.- **ಹೆಚ್. ಜಿ. ವೇಲ್ಸ್**

ಶ್ರೇಷ್ಠ ರೋಮಾಂಚನ :

ಬುದ್ಧ ಎಲ್ಲ ಉಪದೇಶ ಮತ್ತು ಎಲ್ಲ ತತ್ವಜ್ಞಾನಗಳಿಗಿಂತ ಶ್ರೇಷ್ಠನಾದವನು, ಆತನ ಅನಂತ ಸಂದೇಶಗಳು ಸದಾ ಕಾಲ ಮಾನವ ಜನಾಂಗವನ್ನು ರೋಮಾಂಚನಗೊಳಿಸುತ್ತ ಬಂದಿವೆ. ಚರಿತ್ರೆಯನ್ನು ತೆರೆದು ನೋಡಿದಾಗ ಉಳಿದೆಲ್ಲ ಕಾಲಕ್ಕಿಂತಲೂ ಇಂದು ಬುದ್ಧನ ಶಾಂತಿಯ ಸಂದೇಶ ಅತ್ಯವಶ್ಯಕ ಅನಿವಾರ್ಯ ಎನಿಸುತ್ತದೆ.- **ಜವಾಹರಲಾಲ್ ನೆಹರು**

ಪರಮ ಸುಖದ ಸ್ವಾತಂತ್ರ್ಯ :

ನಾನು ಬುದ್ಧನ ಅನುಯಾಯಿ, ನನ್ನ ಇಷ್ಟದೇವತೆ, ಬುದ್ಧ, ಆತ ಮಂಗಳಕರನೂ ಆಗಿದ್ದಾನೆ. ಕೇಳಿದ್ದೆಲ್ಲವನ್ನೂ ಕೊಟ್ಟಿದ್ದಾನೆ, ಈಗಲೂ ಕೊಡುವವನಿದ್ದಾನೆ, ಮುಂದೆಯೂ ಕೊಡುತ್ತಾನೆ. ಬುದ್ಧ ಒಂದೇ ಒಂದು ಶಾಪದ ಮಾತನ್ನೂ ತನ್ನ ತುಟಿಯಂಚಿನಿಂದ ಹೊರ ಹಾಕಲಿಲ್ಲ. ಪ್ರತಿ ಮಾತು ಆತನ ಬಾಯಲ್ಲಿ ಮಂಗಳಕರ, ಮಂಗಳವಲ್ಲದೇ ಬೇರೇನೂ ಅಲ್ಲ. ಅವನಂತಹ ದೇವರಿಲ್ಲ, ಅವನಂತಹ ದೇವತೆಯೂ ಇಲ್ಲ. ಅವನಂತಹ ದೈವವೂ ಇಲ್ಲ, ಸ್ವರ್ಗದಲ್ಲಿ, ನರಕದಲ್ಲಿ, ಭೂಮಿಯಲ್ಲಿ ಅವನಿಗೆ ಹೋಲಿಕೆಯಾದವರು ಯಾರೂ ಇಲ್ಲ.... ಅವನು ಬುದ್ಧನೊಬ್ಬನೆ. ಬುದ್ಧ ನಮ್ಮನ್ನು ನಿಧಾನವೆಂಬ ಪರಮ ಸುಖದ ಸ್ವಾತಂತ್ರ್ಯದ ಕಡೆಗೆ ಆಹ್ವಾನಿಸಿದನು. ಪ್ರತಿ ಮಾನವ ಎಂದಾದರೊಂದು ದಿನ ಅದನ್ನು ಪಡೆದುಕೊಂಡು ಮಾನವತ್ವವನ್ನು ಸಂಪಾದಿಸಿಕೊಳ್ಳಲೇಬೇಕಾಗುತ್ತದೆ.- **ಸ್ವಾಮಿ ವಿವೇಕಾನಂದ**

ಚಿರಋಣಿಗಳು :

ಬುದ್ಧ ಬೋಧಿಸಿದ ಮೂಲತತ್ವಗಳಲ್ಲಿ ಇಂದು ಹಿಂದೂ ಧರ್ಮದ ಬೋಧನೆಯ ಸಮಗ್ರ ಭಾಗವಾಗಿದೆ ಎಂದು ಹೇಳುವುದು ನನ್ನ ಪ್ರಜ್ಞಾಪೂರ್ವಕ ಅಭಿಪ್ರಾಯಕವಾಗಿದೆ. ಗೌತಮಬುದ್ಧ ಹಿಂದೂಧರ್ಮದ ಒಳಗೆ ಮಾಡಿದ ಬಹು ದೊಡ್ಡ ಸುಧಾರಣೆಗಳನ್ನು ಇಂದು ಭಾರತದಲ್ಲಿರುವ ಹಿಂದೂಗಳು ಹುಡುಕುತ್ತಾ ಹಿಂದಿಂದಕ್ಕೆ ಹೋದರೆ ಅದು ಸಾಧ್ಯವಾಗುವುದಿಲ್ಲ. ಬುದ್ಧನ ಅಪರಿಮಿತವಾದ ತ್ಯಾಗ, ಶ್ರೇಷ್ಠವಾದ ವೈರಾಗ್ಯ ನಿಷ್ಕಳಂಕ ಪರಿಶುದ್ಧತೆಯ ಜೀವನ ಹಿಂದೂಧರ್ಮದ ಮೇಲೆ ಅಳಿಸಲಾಗದಂತಹ ಪ್ರಭಾವವನ್ನು ಬೀರಿದೆ. ಆದ್ದರಿಂದ ಹಿಂದೂಧರ್ಮ ಆ ಮಹಾನ್‌ಬೋಧಕನಿಗೆ ಎಲ್ಲ ಕಾಲಕ್ಕೂ ಚಿರಋಣಿಯಾಗಿರಬೇಕಾಗಿರುತ್ತದೆ.-**ಮಹಾತ್ಮ ಗಾಂಧಿ.**

ಬುದ್ಧಿಷ್ಟರ ಆಸ್ತಿಯಲ್ಲ :

ಬುದ್ಧ ಕೇವಲ ಬುದ್ಧ ಧರ್ಮಿಯರ ಆಸ್ತಿಯಲ್ಲ. ಆತ ಎಲ್ಲಾ ಮಾನವ ಜನಾಂಗದ ಆಸ್ತಿಯಾಗಿದ್ದಾನೆ. ಆತನ ಬೋಧನೆ ಎಲ್ಲ ಮಾನವರಿಗೂ ಎಲ್ಲ ಧರ್ಮದವರಿಗೂ ಅನ್ವಯವಾಗುತ್ತದೆ. ಬುದ್ಧ ಹುಟ್ಟಿದ ನಂತರ ಹುಟ್ಟಿಕೊಂಡ ಎಲ್ಲಾ ಧರ್ಮಗಳೂ ಅವನ ಬೋಧನೆಯ ಮುಖ್ಯಾಂಶಗಳನ್ನು ಅಳವಡಿಸಿಕೊಂಡು ಶ್ರೀಮಂತಗೊಂಡಿವೆ.- **ಒಬ್ಬ ಮುಸ್ಲಿಂ ಪ್ರವಾದಿ**

ಎತ್ತರ, ಅತಿ ಎತ್ತರ :

ಜ್ಞಾನದ ವಿಚಾರವಿರಲಿ ಅಥವಾ ಪಾವಿತ್ರ್ಯತೆಯ ವಿಚಾರವಿರಲಿ, ಏಸು ಕ್ರಿಸ್ತನು ಚರಿತ್ರೆಯಲ್ಲಿ ಕಾಣುವ ಇತರ ವ್ಯಕ್ತಿಗಳಿಗಿಂತ ತುಂಬಾ ಎತ್ತರದ ಸ್ಥಾನಕ್ಕೇರಿದ್ದಾನೆಂದು ನನಗನ್ನಿಸುವುದಿಲ್ಲ. ಆ ವಿಚಾರಗಳಲ್ಲಿ ನಾನು ಬುದ್ಧ ನಮ್ಮ ಕ್ರೈಸ್ತನಿಗಿಂತಲೂ ಎತ್ತರದ ಸ್ಥಾನದಲ್ಲಿಡಲು ಬಯಸುತ್ತೇನೆ. -**ಬರ್ಟೆಂಡ್ ರಸೆಲ್**

ನನ್ನ ಧರ್ಮ :

ನಾನು ಯಾವುದೇ ಧರ್ಮದ ಅನುಯಾಯಿಯಲ್ಲ. ನನಗೊಂದು ಧರ್ಮ ಬೇಕೆನಿಸಿದರೆ, ನನ್ನ ಧರ್ಮ ಬುದ್ಧ ಧಮ್ಮವೇ ಆಗಿರುತ್ತದೆ.- **ಆಲ್ಬರ್ಟ್ ಐನ್‌ಸ್ಟೀನ್**

ಮನೋಹರ ಕಾವ್ಯ :

ಬುದ್ಧನ ಜೀವನ ಚರಿತ್ರೆ ಒಂದು ಕವಿತೆಯಂತಿದೆ. ನಾನೆಂದೂ ಓದಿರದ ಆಕರ್ಷಕವಾದ, ಕಲಾತ್ಮಕವಾದ, ಮನೋಹರವಾದ ಅದ್ಭುತ ಕಾವ್ಯವಿದಾಗಿದೆ. ಬುದ್ಧನ ಆಗಮನದಿಂದ ಮನುಷ್ಯ ಕುಲ ತನ್ನ ಇತಿಹಾಸದಲ್ಲಿ ಅತ್ಯುನ್ನತವಾದ ಗೌರವ ಸ್ಥಾನವನ್ನು ಪಡೆದುಕೊಂಡಿದೆ.- **ರವೀಂದ್ರನಾಥ ಠಾಗೋರ್**

ಇಂದು ಬುದ್ಧ ಧಮ್ಮವೇ ಏಕೆ ಪ್ರಸ್ತುತ ?

ಹಲವು ಚಿಂತಕರ ವಿಚಾರಗಳನ್ನು ಅವಲೋಕಿಸಿದಾಗ ಬುದ್ಧನ ಶ್ರೇಷ್ಠತೆ, ಅವನ ಧರ್ಮದ ಅವಶ್ಯಕತೆಯ ಅರಿವು ಉಂಟಾಗುತ್ತದೆ. ಏಕೆ ಈ ಧರ್ಮ ಪ್ರಸ್ತುತ ಸಂದರ್ಭದಲ್ಲಿ ಮುಖ್ಯವಾಗುತ್ತದೆ ಎಂದರೆ ಬೌದ್ಧ ಧರ್ಮ ಮನುಷ್ಯನಿಗೆ ಯಾವುದೇ ರೀತಿಯ ಮಾನಸಿಕ, ಬೌದ್ಧಿಕ, ಆರ್ಥಿಕವಾಗಿ ಹೊರೆಯಾಗದೆ ಮನುಷ್ಯನ ಮನಸ್ಸು ಸಂಸ್ಕರಿಸಿಕೊಳ್ಳಲು ಸುಲಭ ಸರಳವಾದ ಪಾರದರ್ಶಕ ತತ್ವಗಳಿದ್ದು ಮನುಷ್ಯ ಮನುಷ್ಯನನ್ನಾಗಿ ನೋಡುವಂತೆ ಬೋಧಿಸುತ್ತದೆ. ಯಾವುದೇ ಯಜ್ಞ-ಯಾಗ, ದೇವರು-ಪೂಜೆ, ಸ್ವರ್ಗ-ನರಕಗಳ ಕಲ್ಪನೆ ಅಗೋಚರ ಶಕ್ತಿಗಳ ನಂಬಿಕೆ, ಕೆಟ್ಟ ಸಂಪ್ರದಾಯಗಳ ಪಾಲನೆ, ಆತ್ಮ ಪರಮಾತ್ಮಗಳೆಂಬ ಕಲ್ಪನೆ ಇಲ್ಲವೇ ಇಲ್ಲವೆಂದು ಬೋಧಿಸುತ್ತದೆ. ಬೌದ್ಧ ಧರ್ಮ ಮನಸ್ಸು ಮತ್ತು ಮನಸ್ಸಿನ ಸಂಸ್ಕಾರಕ್ಕೆ ಮಾತ್ರ ಪ್ರಾಧಾನ್ಯತೆ ನೀಡುತ್ತದೆ. ಬೇರೆ ಅನಿಷ್ಟಗಳು ಮೌಢ್ಯಗಳು ಇಲ್ಲಿ ಸಲ್ಲುವುದಿಲ್ಲ. ಈ ಧರ್ಮ ಮನುಷ್ಯನನ್ನು ವಿಚಾರವಂತನನ್ನಾಗಿ ಮಾಡುತ್ತದೆ. ಮನಸ್ಸನ್ನು ಸಂಸ್ಕರಿಸುತ್ತದೆ. ಹೀಗಾಗಿ ಪ್ರಸ್ತುತ ಸಂದರ್ಭಕ್ಕೂ ಬೌದ್ಧಧರ್ಮ ಸತ್ಯವೆನಿಸುತ್ತದೆ.

ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮಗಳೊಂದಿಗೆ ಬೌದ್ಧಧರ್ಮವನ್ನು ಹೋಲಿಸಿದಾಗ ಅದರ ಪ್ರತ್ಯೇಕತೆ, ಶ್ರೇಷ್ಠತೆ ಕಂಡು ಬರುತ್ತದೆ. ಹಿಂದೂಧರ್ಮ ದೇವರು ಅವತಾರ ಪುರುಷರು, ಯಜ್ಞ-ಯಾಗಾದಿ, ವಿಧಿಬರಹ, ಸ್ವರ್ಗ-ನರಕ, ಪಾಪ-ಪುಣ್ಯ, ಆತ್ಮ-ಪರಮಾತ್ಮ, ಪೂಜೆ-ಪುರೋಹಿತರು, ಮೂಢ ನಂಬಿಕೆಗಳು ಇತ್ಯಾದಿ ಕೆಟ್ಟ ಸಂಪ್ರದಾಯಗಳನ್ನು ಬೋಧಿಸುತ್ತದೆ ಹಾಗೂ ಮಾನವನ ಎಲ್ಲಾ ಶ್ರೇಯಸ್ಸಿಗೂ ದೈವತ್ವವೇ ಕಾರಣವೆಂದು ಬೋಧಿಸುತ್ತದೆ. ಸ್ತ್ರೀಯರಿಗೆ-ಶೂದ್ರರಿಗೆ ಅಸ್ಪೃಶ್ಯರಿಗೆ ಧಾರ್ಮಿಕ ಆಚರಣೆಯಲ್ಲಿ ಸ್ಥಾನವೇ ಇಲ್ಲ ಅದು ಅಸಮಾನತೆಯನ್ನು ಬೋಧಿಸುವ ಧರ್ಮ.

ಇನ್ನೂ ಇಸ್ಲಾಂಧರ್ಮ ದೇವರು, ಪ್ರವಾದಿ, ಆತ್ಮ-ಪರಮಾತ್ಮ, ದೇವರು-ಪ್ರಾರ್ಥನೆ, ಪರಲೋಕ ಕಲ್ಪನೆ, ಮೂಢ ನಂಬಿಕೆಗಳು ಇತ್ಯಾದಿ ಕಟ್ಟಾ ಸಂಪ್ರದಾಯನಿಷ್ಠ ಧರ್ಮ. ಈ ಧರ್ಮದಲ್ಲೂ ಮನುಷ್ಯನ ಎಲ್ಲಾ ಒಳಿತಿಗೂ ದೈವತ್ವವೇ ಕಾರಣವೆಂಬ ನಂಬಿಕೆ ಇದೆ. ಹೀಗಾಗಿ ಇಲ್ಲೂ ಮನುಷ್ಯನಿಗಿಂತ ಪರಲೋಕ ಚಿಂತನೆ ಹೆಚ್ಚು.

ಇನ್ನೂ ಕ್ರೈಸ್ತ ಧರ್ಮವನ್ನು ಅವಲೋಕಿಸಿದಾಗ ದೇವರು, ದೇವರ ಪುತ್ರ, ಸ್ವರ್ಗ-ನರಕ, ಪರಲೋಕ ಕಲ್ಪನೆ ಇತ್ಯಾದಿ ನಂಬಿಕೆಗಳು ಇಲ್ಲಿ ಇವೆ. ಅಷ್ಟೇ ಅಲ್ಲ. ಮನುಷ್ಯ ತನ್ನ ಎಲ್ಲಾ ಶ್ರೇಯಸ್ಸಿಗೆ ದೈವತ್ವವನ್ನೇ ನಂಬಿಕೊಳ್ಳಲು ಬೋಧಿಸಲಾಗುತ್ತದೆ.

ಆದರೆ ಬೌದ್ಧಧರ್ಮದಲ್ಲಿ ದೇವರಿಲ್ಲ. ಮಾರ್ಗದರ್ಶಕರಿದ್ದಾರೆ. ಸಹಜ ಲೌಕಿಕ ಮನುಷ್ಯ ಧ್ಯಾನ ಪ್ರಾರ್ಥನೆಗಳಿಂದ ಮನಸ್ಸಿನ ಏಕಾಗ್ರತೆಗೆ ಪ್ರಾಶಸ್ತ್ಯ ನೀಡಿ, ಪಂಚಶೀಲಗಳ ಪಾಲನೆ, ಅಷ್ಟಾಂಗ ಮಾರ್ಗಗಳು, ನಾಲ್ಕು ಶ್ರೇಷ್ಠ ಸತ್ಯಗಳ ಪಾಲನೆಗೆ ಪ್ರಾಶಸ್ತ್ಯ. ಮನುಷ್ಯನಿಗೆ ಆತ್ಮ ಇಲ್ಲ. ದೇವರಿಲ್ಲ. ಮನಸ್ಸು ಮಾತ್ರ ಇದೆ. ಮನುಷ್ಯ ತನ್ನೆಲ್ಲ ಸಾಧನೆ ಸಿದ್ಧಿಗೆ ಮನಸ್ಸೇ ಸಾಧನ, ಅಂತಿಮವಾಗಿ ಯಾವ ದೇವತ್ವವೂ ಇಲ್ಲಿ ಇಲ್ಲವೇ ಇಲ್ಲ. ಇಲ್ಲಿ ಇರುವುದೆಲ್ಲ ಸಮಾನತೆ ಮಾತ್ರ.

ಬೌದ್ಧಧರ್ಮ ಮನುಷ್ಯನಿಗೆ ಪರಲೋಕದ ಭಯವನ್ನು ಹುಟ್ಟಿಸದೆ, ಮನುಷ್ಯನನ್ನು ವೈಜ್ಞಾನಿಕ, ವೈಚಾರಿಕ ವಿಚಾರದ ಕಡೆಗೆ ಕೊಂಡೊಯ್ಯುವ ಚಿಂತನಾಪರ ಧರ್ಮವಾಗಿದೆ. ಮನುಷ್ಯನಿಗೆ ಆತನ ಮನಸ್ಸೇ ಎಲ್ಲಾ ಶ್ರೇಯಸ್ಸಿಗೆ, ಅಪಾಯಕ್ಕೆ ಕಾರಣವೆಂದು ಮತ್ತು ಪ್ರತಿಯೊಬ್ಬ ಮಾನವನೂ ತನಗೆ ತಾನೇ ಸಂರಕ್ಷಕ. ಹಾಗೆಯೇ ತನ್ನ ಉದ್ಧಾರವನ್ನು ತಾನೇ ಕಂಡುಕೊಳ್ಳಬೇಕು. ಆದನ್ನುಳಿದು ಜಗತ್ತಿನ ಯಾವ ಶಕ್ತಿಯೂ ಯಾರನ್ನೂ ಉದ್ಧರಿಸಲು, ಸಂರಕ್ಷಿಸಲು ಬರುವುದಿಲ್ಲವೆಂದು ಸರಳವಾಗಿ ಸತ್ಯವನ್ನು ಹೇಳುವ ಬೌದ್ಧಧಮ್ಮ ವಿಶ್ವದ ಶ್ರೇಷ್ಠ ಧರ್ಮ. ಗೌತಮಬುದ್ಧ ವಿಶ್ವದ ಮೊದಲ ವಿಚಾರವಾದಿಯಾಗಿ ನಮಗೆ ಗೋಚರಿಸಿದ್ದಾನೆ.

ಡಾ।ಅಂಬೇಡ್ಕರ್‌ರವರ ಅತ್ಯುತ್ತಮ ಹಾಗೂ ಆಳವಾದ ಭಾವಾಲೋಚನೆಗಳು ಅವರ ಮತಧರ್ಮದ ಸ್ವಾತಂತ್ರದೆಡೆಗೆ ಎಂಬುದರ ಮೂಲಕ ಪ್ರಕಟಗೊಂಡವು. ಇದು 31-05-1936 ರಲ್ಲಿ ಪ್ರಕಟವಾಯಿತು. ಇದರಲ್ಲಿ ಅಂಬೇಡ್ಕರ್‌ರವರು ಮತಧರ್ಮಗಳು ಮಾನವನಿಗಾಗಿ ಮಾನವನಿಂದಲೇ ಉದ್ಭವಿಸಿರುವುದೇ ವಿನಃ ಮಾನವನು ಮತ ಧರ್ಮಗಳಿಗಾಗಿ ಜನ್ಮ ತಳೆದಿಲ್ಲವೆಂಬ ತಮ್ಮ ಸ್ವ ಅನುಭವದ ಅಭಿಪ್ರಾಯವನ್ನು ಹೊರ ತಂದುದಲ್ಲದೆ ಮುಂದುವರೆದು ಯಾವ ಮತ ಧರ್ಮಗಳ ನಿರೂಪಣೆ ಮತ್ತು ಆಚರಣೆಗಳು ಮಾನವರನ್ನು ಮೃಗ ಪಶುಗಳಂತೆ ಅಮಾನವೀಯತೆಯಿಂದ, ನಿಷ್ಕರುಣೆಯಿಂದ ಕಾಣುವವೋ ಅವುಗಳು ಮತ ಧರ್ಮಗಳೇ ಅಲ್ಲ[11] ಎಂಬ ಮಾನವೀಯತೆಯ ಶ್ರೇಷ್ಠತೆಯನ್ನು ಬಹಿರಂಗಪಡಿಸಿದರು. ಹೀಗೆ, ಅವರ ಆಂತರ್ಯದಲ್ಲಿ ಬೇಗುದಿಯುತ್ತಿದ್ದ ಭಾವನೆಯನ್ನು ಪ್ರಪ್ರಥಮ ಬಾರಿಗೆ ಹೊರತಂದು ಮತಧರ್ಮ ಬದಲಾವಣೆಯ ಇಂಗಿತವನ್ನು ಹೊರಗೆಡವಿದ್ದಾರೆ. ಬುದ್ಧ ಮತ್ತು ಆತನ ಭವಿಷ್ಯದ ಮತಧರ್ಮ ಎಂಬ ಅವರ ಪ್ರಬಂಧದಲ್ಲಿ ಈ ಮೂಲ ಭಾವನೆಯನ್ನು ಸೂಚಿಸಿರುವರು.

ಹಿಂದೂವು ತನ್ನ ಧರ್ಮದ ತ್ಯಾಗ ಮಾಡುವ ಬದಲು ಯಾವುದೇ ತರಹ ಉಳಿದುಕೊಳ್ಳುವ ಉಪಾಯ ಹುಡುಕುತ್ತಾನೆ. ಕೆಲವರು ಎಲ್ಲ ಧರ್ಮವೂ ತಪ್ಪು, ಯೋಚಿಸುವುದರಿಂದೇನು ಪ್ರಯೋಜನ ಎಂದು ತಿಳಿದು ತಮಗೆ ತಾವೇ ಸಮಾಧಾನ ಹೊಂದುತ್ತಾರೆ. ದೇಶಭಕ್ತಿಯ ಈ ವಿಚಾರವೇ ಅವರಿಗೆ ಬಹಿರಂಗವಾಗಿ ಬುದ್ಧ ಧಮ್ಮದ ಸ್ವೀಕಾರ ಮಾಡುವುದನ್ನು ತಡೆಯುತ್ತದೆ. ಈ ತರಹದ ರೀತಿಗೆ ಹೊರ ಹೊಮ್ಮುವ ಒಂದೇ ಒಂದು ಪರಿಣಾಮವೆಂದರೆ ಹಿಂದೂ ಧರ್ಮದ ಪತನ ಮತ್ತು ಒಂದು ಜೀವನ ನಿಯಮಿತ ಶಕ್ತಿಯ ರೂಪದಲ್ಲಿ ಅದು ಮುಗಿದು ಹೋಗುತ್ತದೆ. ಒಂದು ಶೂನ್ಯ ಸ್ಥಿತಿ ಹುಟ್ಟಿಕೊಂಡು ಅದರ

ಪ್ರಭಾವದಿಂದ ಹಿಂದೂ ಸಮಾಜ ಚಿಂದಿ ಚಿಂದಿ ಆಗುವುದು. ಆಗ ಹಿಂದೂಗಳು ವಿಮರ್ಶಕರಾಗಿ ಹೆಚ್ಚಿನ ಆಶೆ ತೋರಿಸಬೇಕಾಗುವುದು. ಅವರು ಯಾವಾಗ ಸಾರ್ಥಕ ಕೆಲಸ ಮಾಡಲು ಯೋಚಿಸುವವರು ಆಗ ಬುದ್ಧ ಧಮ್ಮದ ಹೊರತಾಗಿ ಬೇರೆಲ್ಲೂ ಹೋಗಲು ಸಾಧ್ಯವಿಲ್ಲ.

ಪ್ರತ್ಯೇಕ ಧರ್ಮಗಳು ಒಂದು ಪ್ರಶ್ನೆಗೆ ಉತ್ತರ ಅವಶ್ಯವಾಗಿ ಹೇಳಬೇಕಾಗಿದೆ. ಅದೆಂದರೆ ಶೋಷಿತ ಮತ್ತು ದುರ್ಬಲರಿಗೆ ಅವು ಯಾವ ತರಹದ ಮಾನಸಿಕ ಮತ್ತು ನೈತಿಕ ದಾರಿಯನ್ನು ತೋರಿಸುತ್ತವೆಯೆಂದು ಒಂದು ವೇಳೆ ಅವು ಈ ಪ್ರಶ್ನೆಗೆ ಸರಿಯಾದ ಮಾರ್ಗ ತೋರಿಸದಿದ್ದರೆ ಅವುಗಳು ಅಂತ್ಯವಾಗುವುದು. ಹಿಂದೂ ಧರ್ಮವು ಹಿಂದುಳಿದ ಮತ್ತು ಉಚ್ಚ ಜನ ಜಾತಿಯ ಕೋಟಿಗಟ್ಟಲೆ ಜನಗಳಿಗೆ ಯಾವುದಾದರೂ ಮಾನಸಿಕ ಮತ್ತು ನೈತಿಕ ದಾರಿ ತೋರಿಸುತ್ತದೆಯೇ? ನಿಶ್ಚಿತವಾಗಿಯೂ ಇಲ್ಲ. ಹಿಂದೂಧರ್ಮವು ಈ ಉಚ್ಚ ಮತ್ತು ನೀಚವರ್ಗಗಳ ಜನರಿಗೆ ಯಾವುದೇ ಮಾನಸಿಕ ಮತ್ತು ನೈತಿಕ ಭರವಸೆ ಕೊಡದೆ ಅವರುಗಳು ಹಿಂದೂ ಧರ್ಮಕ್ಕೆ ಅಂಟಿಕೊಂಡಿರುತ್ತಾರೆಂದು ಆಶೆ ಇಟ್ಟುಕೊಳ್ಳಲು ಸಾಧ್ಯವೇ? ಇಂತಹ ಆಶೆ ಮಾಡುವುದು ಸರ್ವಥಾ ವ್ಯರ್ಥವಾಗುವುದು. ಹಿಂದೂ ಧರ್ಮವು ಜ್ವಾಲಾಮುಖಿಯ ಮೇಲೆ ಸವಾರಿ ಮಾಡುತ್ತಿದೆ. ಇಂದು ಆ ಜ್ವಾಲಾಮುಖಿ ಆರಿ ಹೋದ ಹಾಗೆ ಗೋಚರಿಸುತ್ತದೆ. ಆದರೆ ಅದು ಆರಿ ಹೋಗಿಲ್ಲ. ಒಂದು ಬಾರಿ ಈ ಕೋಟಿಗಟ್ಟಲೆ ಶಕ್ತಿಶಾಲಿ ಸಮೂಹ ತಮ್ಮ ಪತನದ ಬಗ್ಗೆ ಸಚೇತನರಾಗುವುದು ಮತ್ತು ಬಹಳಷ್ಟು ಹಿಂದೂ ಧರ್ಮದ ಸಾಮಾಜಿಕ ದರ್ಶನದ ಕಾರಣದಿಂದಲೇ ಹೀಗಾಗಿದೆಯೆಂದು ತಿಳಿಯುವರು. ಆಗ ಆ ಜ್ವಾಲಾಮುಖಿ ಮತ್ತೆ ಹತ್ತಿ ಉರಿಯುವುದು. ಈ ಸಂದರ್ಭದಲ್ಲಿ ರೋಮನ್ ಸಾಮ್ರಾಜ್ಯದಲ್ಲಿ ಹರಡಿದ ಮೂರ್ತಿ ಪೂಜೆಯನ್ನು ಕ್ರೈಸ್ತ ಧರ್ಮದವರು ಹೊರ ಎಸೆದ ಕಾರಣ ನೆನಪಾಗುತ್ತದೆ. ಯಾವಾಗ ಜನರಿಗೆ ಮೂರ್ತಿಪೂಜೆಯಿಂದ ಯಾವುದೇ ತರಹದ ಮಾನಸಿಕ ಮತ್ತು ನೈತಿಕದಾರಿ ದೊರೆಯುವುದಿಲ್ಲವೆಂದು ತಿಳಿಯಿತೋ ಹಾಗೆಯೇ ಅವರು ಅದನ್ನು ಬಿಟ್ಟು ಬಿಟ್ಟರು. ಕ್ರೈಸ್ತಧರ್ಮವನ್ನು ಸ್ವೀಕರಿಸಿದರು. ಯಾವುದು ರೋಮಿನಲ್ಲಿ ಆಯಿತೋ ಅದು ಭಾರತದಲ್ಲಿ ಖಂಡಿತ ಆಗುವುದು. ಹಿಂದೂಧರ್ಮದವರಿಗೂ ತಿಳುವಳಿಕೆ ಬಂದ ನಂತರ ಅವರು ನಿಶ್ಚಯವಾಗಿಯೂ ಬೌದ್ಧಧರ್ಮದ ಕಡೆಗೆ ವಾಲುವರು ಎಂಬ ಅಭಿಪ್ರಾಯವನ್ನು ತಮ್ಮ ಪ್ರಬಂಧದಲ್ಲಿ ಡಾ। ಅಂಬೇಡ್ಕರ್ ರವರು ಉಲ್ಲೇಖಿಸಿರುವರು.

ಸಮಾಜವು ತನ್ನ ಏಕತೆಯನ್ನು ಉಳಿಸಿಕೊಳ್ಳಲು ಕಾನೂನಿನ ಬಂಧನ ಸ್ವೀಕರಿಸಬೇಕು ಅಥವಾ ನೈತಿಕತೆಯ ಬಂಧನಕ್ಕೊಳಪಡಬೇಕು. ಇವೆರಡರ ಅಭಾವದಿಂದ ಸಮಾಜ ಚೂರು ಚೂರಾಗುವುದು. ಎಲ್ಲ ಪ್ರಕಾರದ ಸಮಾಜದಲ್ಲಿ ಭೂಮಿಕೆ ಅತ್ಯಲ್ಪವಾಗಿದೆ. ಅದರ ಉದ್ದೇಶ (ಕಾನೂನು ಮುರಿಯುವ) ಕೆಲ ಜನರಿಗೆ (ಅಲ್ಪ ಸಂಖ್ಯಾತರಿಗೆ) ಸಾಮಾಜಿಕ ಕಟ್ಟಳೆಗಳ ಸೀಮೆಯಲ್ಲಿರಿಸುವುದೇ ಆಗಿದೆ. ಬಹುಸಂಖ್ಯಾತರಿಗೆ ತಮ್ಮ ಸಾಮಾಜಿಕ ಜೀವನ ಕಳೆಯುವುದಕ್ಕಾಗಿ ನೈತಿಕತೆಯ ಆಧಾರದ ಮೇಲೆ ಬಿಡಲಾಗಿದೆ. ಆದ್ದರಿಂದ ಧರ್ಮವು ನೈತಿಕತೆಯ ಆರ್ಥದಲ್ಲಿ ಪ್ರತ್ಯೇಕ ಸಮಾಜದ ಅನುಶಾಸನದ ತತ್ವವಾಗಿ ಇರಬೇಕಾಗಿದೆ. ಧರ್ಮದ ಉಪಯುಕ್ತತೆ ಪರಿಭಾಷಾ ವಿಜ್ಞಾನಕ್ಕೆ ಅನುಕೂಲಕರವಾಗಿರಬೇಕು. ಒಂದು ವೇಳೆ ಧರ್ಮ ವಿಜ್ಞಾನವನ್ನು ತನ್ನದಾಗಿಸಿಕೊಂಡರೆ ಅದು ತನ್ನ ಮಹತ್ವವನ್ನು ಕಳೆದುಕೊಂಡು ನಗೆಪಾಟಿಕೆಯ ವಿಷಯವಾಗಿ ಬಿಡುತ್ತದೆ ಮತ್ತು ಜೀವನಾನುಶಾಸನದ ತತ್ವದ ರೂಪದಲ್ಲಿ ಅದು ತನ್ನ ಶಕ್ತಿಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೇ ಸಮಯದೊಂದಿಗೆ ಛಿದ್ರವಾಗಿ ಸಮಾಜದಿಂದ ಮಾಯವೂ ಆಗಬಹುದು. ಇನ್ನೊಂದು ರೀತಿಯಲ್ಲಿ

ಹೇಳುವುದಾದರೆ ಧರ್ಮವು ಒಂದು ವೇಳೆ ವಾಸ್ತವವಾಗಿ ಕಾರ್ಯಶೀಲವಾಗಬೇಕಾದರೆ ಅದು ತರ್ಕ ಮತ್ತು ವಿವೇಕದ ಮೇಲೆ ಆಧಾರಿತವಾಗಿರಬೇಕು. ಇದರ ಹೆಸರೇ ವಿಜ್ಞಾನ.

ಯಾವ ಧರ್ಮವು ಈ ಅವಶ್ಯಕತೆಗಳನ್ನು ಪೂರೈಸುತ್ತದೆ? ಈ ಪ್ರಶ್ನೆಗಳ ವಿಚಾರ ಮಾಡುವ ಸಮಯದಲ್ಲಿ ಸಂತ ಮಹಾತ್ಮರುಗಳ ನಿರ್ಮಾಣದ ದಿನ ಈಗ ಮುಗಿದು ಹೋಗುತ್ತಿದೆ ಮತ್ತು ಜಗತ್ತಿನಲ್ಲಿ ಯಾವುದೇ ಹೊಸ ಧರ್ಮ ಹುಟ್ಟಿಕೊಳ್ಳುವುದಿಲ್ಲ ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಜಗತ್ತಿನಲ್ಲಿ ಪ್ರಚಲಿತವಿರುವ ಧರ್ಮಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಆದ್ದರಿಂದ ಈ ಪ್ರಶ್ನೆಗಳ ವಿಚಾರವನ್ನು ಪ್ರಚಲಿತ ಧರ್ಮಗಳಿಗಷ್ಟೇ ಸೀಮಿತವಾಗಿದೆ.

ಪ್ರಚಲಿತ ಧರ್ಮಗಳಲ್ಲಿ ಯಾವುದಾದರೂ ಒಂದು ಧರ್ಮವು ಮೇಲ್ಕಾಣಿಸಿದ ಮಾನದಂಡಗಳ ಯಾವುದಾದರೂ ಒಂದು ಅಥವಾ ಎರಡರ ಮೇಲೆ ನಿಂತಿದೆ. ಆದರೆ ಯಾವುದಾದರೂ ಒಂದು ಧರ್ಮ ಈ ಎಲ್ಲಾ ಮಾನದಂಡಗಳ ಮೇಲೆ ಆಧಾರವಾಗಿದೆಯೇ ಎಂಬುದೇ ಈಗಿನ ಪ್ರಶ್ನೆಯಾಗಿದೆ. ನನ್ನ ತಿಳುವಳಿಕೆಯ ಪ್ರಕಾರ ಅದೇ ಬೌದ್ಧ ಧಮ್ಮವಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ (ಇನ್ನೊಂದು ರೀತಿಯಲ್ಲಿ) ಕೇವಲ ಬುದ್ಧ ಧಮ್ಮವು ಹೊಸ ಜಗತ್ತು ಸ್ವೀಕರಿಸುವಂತಹ ಒಂದು ಧಮ್ಮವಾಗಿದೆ. ಒಂದು ವೇಳೆ ಹೊಸ ಜಗತ್ತಿಗೆ ಹಳೆಯ ಜಗತ್ತಿಗಿಂತ (ಪ್ರಾಚೀನ) ಸರ್ವಥಾ ಭಿನ್ನವಾದ ಧರ್ಮದ ಅವಶ್ಯವಿದ್ದರೆ ಅದೇ ಬುದ್ಧನ ಧಮ್ಮವೇ ಆಗಿದೆ. ಇಂದಿಗೂ ಈ ಕಾರಣಗಳಿಗಾಗಿ ಬುದ್ಧನ ಧರ್ಮ ಪ್ರಸ್ತುತವಾಗಿದೆ.

ಡಾ।ಅಂಬೇಡ್ಕರ್‌ರವರು 1950 ರಲ್ಲಿ ನಮ್ಮ ಧರ್ಮಗಳಲ್ಲಿ ಅತ್ಯುತ್ತಮ ಮಾನವೀಯತೆ ಸಮಾನತೆ ಮತ್ತು ಸಹೋದರ ಬಾಳವೆಗಳಾದಿಯಾಗಿ ಸರ್ವ ಮಾನವರ ಕಲ್ಯಾಣವನ್ನು ಬಯಸುವ ಎಲ್ಲಾ ಭಾಗಗಳನ್ನು ಅಳವಡಿಸಿಕೊಂಡಿರುವ ಮತಧರ್ಮವು ಯಾವುದಾದರೂ ಉಂಟೇ? ಈ ಪ್ರಶ್ನೆಯನ್ನು ಅವರೇ ಹಾಕಿಕೊಂಡು ಅದಕ್ಕೆ ಅವರೇ ಈ ಬಗೆಯ ಉತ್ತರವನ್ನು ನೀಡಿರುವರು. ನನಗೆ ತಿಳಿದಿರುವ ಜ್ಞಾನದ ಆಧಾರದ ಮೇಲೆ ಬೌದ್ಧ ಧರ್ಮ ಎಂಬುದೊಂದೇ ಮಾತ್ರವೇ ಆ ಎಲ್ಲಾ ಭಾಗಗಳಿಗೆ ಸಮಂಜಸವಾದ ಮಾರ್ಗಗಳನ್ನು ಹೊಂದಿದ್ದು ಇಂದಿನ ಪ್ರಾಪಂಚಿಕದ ಎಲ್ಲಾ ಸನ್ನಿವೇಶಗಳಿಗೆ ವೈಜ್ಞಾನಿಕವಾಗಿಯೂ ಮತ್ತು ತಾಂತ್ರಿಕವಾಗಿಯೂ ಸಮಂಜಸ ವಾಗುವ ಧರ್ಮಗಳನ್ನಳವಡಿಸಿಕೊಂಡಿದೆ ಎಂದು ನೇರವಾಗಿ ನುಡಿದಿದ್ದಾರೆ. ಇದಾದ 20 ವರ್ಷಗಳವರೆಗೆ ತನ್ನ ಸುಪ್ತಜ್ಞಾನ ಮತ್ತು ಸ್ಥಿತಪ್ರಜ್ಞತೆಯನ್ನು ಒರೆಹಚ್ಚಿ ಸಮಂಜಸದ ಸನ್ನಿವೇಶಗಳನ್ನು ವಿವೇಚಿಸಿ 1956 ರಲ್ಲಿ ಅವರು ಬೌದ್ಧದೀಕ್ಷೆಯನ್ನು ಪಡೆದರು.

ದಲಿತರ ಧರ್ಮಾಂತರ :

ಪ್ರಸ್ತುತ ಸಂದರ್ಭದಲ್ಲಿ ದಲಿತರು ಬೌದ್ಧಕ್ಕೆ ಧರ್ಮಾಂತರಗೊಳ್ಳುತ್ತಿದ್ದಾರೆ?. ಅಕ್ಟೋಬರ್ 14, 2003 ರಂದು ಬೆಂಗಳೂರಿನಲ್ಲಿ ಐತಿಹಾಸಿಕ ಧರ್ಮಾಂತರ ಕಾರ್ಯಕ್ರಮ ಜರುಗಿತು. ಆದರ ನೇತೃತ್ವವನ್ನು ಆರ್.ವಿ.ಜೌದಿಯವರು ಅವರೊಂದಿಗೆ ಕರ್ನಾಟಕದ ದಲಿತಚಳುವಳಿಯ ಪ್ರಮುಖರಾದ ಸಿ.ಎಂ.ಮುನಿಯಪ್ಪ, ಡಿ.ಜಿ. ಸಾಗರ್, ಎಂ.ವೆಂಕಟಸ್ವಾಮಿ, ಮಾವಳ್ಳಿಶಂಕರ್, ಎನ್.ಮಹೇಶ್, ಜಿಗಣಿಶಂಕರ್ ಮುಂತಾದ ನಾಯಕರೊಂದಿಗೆ ಬೋರಯ್ಯ, ನಂದನ ಚಂದ್ರಶೇಖರ್, ಸುಬ್ರಹ್ಮಣ್ಯಂ ರಂತಹ ನೂರಾರು ಮಂದಿ ಈ ಕಾರ್ಯಕ್ರಮದಲ್ಲಿ ದುಡಿದರು. ಜೌದಿಯವರು 1993ರಿಂದ ಈ ರೀತಿಯ ಕಾರ್ಯಕ್ರಮಗಳನ್ನು ಉತ್ತರ

ಕರ್ನಾಟಕದಲ್ಲಿ ಹಮ್ಮಿಕೊಳ್ಳುತ್ತಲೇ ಬರುತ್ತಿದ್ದಾರೆ. ಮೊಟ್ಟಮೊದಲ ಬಾರಿಗೆ ದಿನಾಂಕ 14-10-2003ರಂದು ಐತಿಹಾಸಿಕ ಧರ್ಮಾಂತರ ಕಾರ್ಯಕ್ರಮ ಏರ್ಪಡಿಸಿದ್ದರು.

ದಲಿತರು ಬೌದ್ಧಧರ್ಮವನ್ನು ಸ್ವೀಕರಿಸಿಬಿಟ್ಟರೆ ದಲಿತರ ಬದುಕುಗಳು ಹಸನಾಗಿ ಬಿಡುತ್ತವೆಯೇ? ಇದರಿಂದಾಗುವ ಪ್ರಯೋಜನಗಳೇನು? ಬೌದ್ಧಧರ್ಮ ಸ್ವೀಕರಿಸುವುದು ಇಂದಿನ ಅನಿವಾರ್ಯತೆಯೇ? ಹಿಂದೂ ಧರ್ಮದಲ್ಲೇ ಇದ್ದು ನಾವು ಜಾತಿ ಪದ್ಧತಿ ವಿರುದ್ಧ ಯಾಕೆ ಹೋರಾಡಬಾರದು? ಈ ದೇಶದಲ್ಲಿರುವ ಹಿಂದೂ ಧರ್ಮವನ್ನು ಬಿಟ್ಟು ಬೇರೆಲ್ಲೋ ಚೀನಾ, ಜಪಾನ್, ಇತ್ಯಾದಿಗಳಲ್ಲಿರುವ ಬೌದ್ಧಧರ್ಮವನ್ನು ಸ್ವೀಕರಿಸಿದ ನಂತರ ನಾವು ಹಿಂದೂಧರ್ಮದ ಮುಖ್ಯವಾಹಿನಿಯಿಂದ ದೂರವಾಗು ವುದಿಲ್ಲವೇ? ಬೌದ್ಧಧರ್ಮವನ್ನೇ ಏಕೆ ಸ್ವೀಕರಿಸಬೇಕು, ಸಿಖ್, ಕ್ರೈಸ್ತ, ಇಸ್ಲಾಂಗಳನ್ನು ನಾವೇಕೆ ಸ್ವೀಕರಿಸಬಾರದು? ಹಿಂದೂಧರ್ಮದಲ್ಲೇ ಉಳಿಯುವುದರಿಂದ ನಮಗೇನು ತೊಂದರೆಗಳಾಗುತ್ತವೆ? ಒಟ್ಟಾರೆ ಧರ್ಮಾಂತರ ಯಾಕೆ ಆಗಬೇಕು? ಎಂಬಂತಹ ಅನೇಕ ಪ್ರಶ್ನೆಗಳನ್ನು ಅನೇಕ ಜನ, ಬುದ್ಧಿಜೀವಿಗಳೇ ಮುಂತಾದವರು ಕೇಳುತ್ತಿದ್ದಾರೆ. ಇದಕ್ಕೆ ಆರ್.ವಿ.ಜಾದಿಯವರು ತಣ್ಣಗೆ ಅಂಬೇಡ್ಕರ್‌ರವರನ್ನು ತೋರಿಸಿ ಈ ಮಾನವನಲ್ಲಿ ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರವಿದೆ ಎನ್ನುತ್ತಾರೆ.

ಬಾಬಾ ಸಾಹೇಬ :

ನಾವು ಅಂಬೇಡ್ಕರ್‌ರವರನ್ನು ಹೊಕ್ಕಂತೆಲ್ಲಾ ಮೇಲಿನ ಪ್ರತಿ ಪ್ರಶ್ನೆಗೂ ಉತ್ತರವನ್ನು ಕಂಡುಕೊಳ್ಳಬಹುದು. 1935 ರಲ್ಲೇ ಅಂಬೇಡ್ಕರ್‌ರವರು ಹಿಂದೂಧರ್ಮವನ್ನು ತ್ಯಜಿಸಬೇಕೆಂದು ತೀರ್ಮಾನಿಸುತ್ತಾರೆ. ಹಿಂದೂಧರ್ಮದಲ್ಲಿನ ಅತ್ಯಂತ ಕ್ರೂರವಾದ ಜಾತಿ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ, ಬ್ರಾಹ್ಮಣ್ಯದ ಕೊಳಕು, ದೇವರು-ದಿಂಡರು, ಅವೈಚಾರಿಕತೆ, ಅಮಾನವೀಯತೆ, ಹುಟ್ಟಿನಿಂದಲೇ ಬರುವ ಅಹಂಕಾರ, ಮೇಲು-ಕೀಳು, ಆಡಂಬರಿಕೆ ಮುಂತಾದ ಅಮಾನವೀಯವಾದ ಮೌಲ್ಯಗಳು ಅಂಬೇಡ್ಕರ್ ರವರನ್ನು ಹಿಂದೂಧರ್ಮ ತ್ಯಜಿಸುವಂತೆ ಪ್ರೇರೆಪಿಸುತ್ತವೆ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಒಮ್ಮೆ ಹೇಳುತ್ತಾರೆ. ಹಿಂದೂವಾಗಿ ಹುಟ್ಟಿರುವ ನಾನು ಹಿಂದೂವಾಗಿ ಸಾಯಲಾರೆ ಎಂದು.

1950ರ ಮೇ ತಿಂಗಳಲ್ಲಿ ಹೊಸ ದೆಹಲಿಯಲ್ಲಿ ಜರುಗಿದ ಬುದ್ಧಜಯಂತಿಯ ಸಂದರ್ಭದಲ್ಲಿ ಅಂಬೇಡ್ಕರ್‌ರು ಮಹತ್ವದ ಭಾಷಣ ಮಾಡಿದರು: ಬುದ್ಧನ ಹೊರತಾಗಿ ಇತರ ಎಲ್ಲ ಧರ್ಮಸಂಸ್ಥಾಪಕರು ತಾವು ಮುಕ್ತಿದಾತರು ಎಂಬ ನಿಲುಮೆಯನ್ನು ತಳೆದವರಾಗಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಬುದ್ಧನು ಮಾತ್ರ ತನ್ನ ಸುತ್ತಲೂ ಯಾವ ದೈವಿಕ ವಲಯವನ್ನು ನಿರ್ಮಿಸಿಕೊಳ್ಳದೇ ತಾನೊಬ್ಬ ಮಾರ್ಗದಾತಾ ಎಂದು ಸಾರಿದ. ಬುದ್ಧನ ಧರ್ಮವು ನೀತಿ ಧರ್ಮವಾಗಿದೆ .

ಮಹಾಬೋಧಿ ಸೊಸೈಟಿಯ ಬುದ್ಧ ಜಯಂತಿ ವಿಶೇಷಾಂಕದಲ್ಲಿ ಬುದ್ಧ ಆ್ಯಂಡ್ ದಿ ಫ್ಯೂಚರ್ ಆಫ್ ಹಿಸ್ ರಿಲೀಜನ್ ಎಂಬ ಲೇಖನವನ್ನು ಪ್ರಕಟಿಸಿದರು. ಈ ಲೇಖನದಲ್ಲಿ 1) ಸಮಾಜಕ್ಕೆ ನಿಗ್ರಹ ಅಥವಾ ನೀತಿಯ ಅಗತ್ಯವಿದೆ. 2) ಧರ್ಮ ವ್ಯವಹಾರದಲ್ಲಿ ಮಾತ್ರವಲ್ಲ, ವಿವೇಕಪೂರ್ಣವೂ ಆಗಿರಬೇಕು. 3) ಧರ್ಮದೊಳಗಿನ ನೀತಿ-ನಿಯಮಗಳು, ಸಮತೆ, ಸ್ವಾತಂತ್ರ್ಯ ಮತ್ತು ಬಂಧು ಭಾವವನ್ನು ಪೋಷಿಸುವಂತಿರಬೇಕು. 4) ಧರ್ಮವು ದಾರಿದ್ರ್ಯವನ್ನು ಉದಾತ್ತಗೊಳಿಸುವ ಅಗತ್ಯವಿಲ್ಲ. ಈ ಟಿಪ್ಪಣೆಗಳನ್ನು

ಮಂಡಿಸಿ ಈ ಮೇಲಿನ ನಾಲ್ಕು ಒರೆಗಲ್ಲುಗಳಿಗೆ ಉಜ್ಜಿ ನೋಡಿದರೆ ಇಂದು ಬೌದ್ಧಧರ್ಮವೊಂದೇ ವಿಶ್ವಧರ್ಮವಾಗಬಲ್ಲದೆಂದು ಅಂಬೇಡ್ಕರ್‌ರವರು ತಮ್ಮ ಲೇಖನದಲ್ಲಿ ಪ್ರತಿಪಾದಿಸಿದರು.

ಇದಾದ ನಂತರ ಸುಮಾರು ಇಪ್ಪತ್ತು ವರ್ಷಗಳ ಕಾಲ ಹಿಂದೂ ಧರ್ಮ ಬಿಟ್ಟು ಯಾವ ಧರ್ಮವನ್ನು ಸ್ವೀಕರಿಸಿಬೇಕೆಂದು ಸಂಶೋಧನೆ ಕೈಗೊಳ್ಳುತ್ತಾರೆ. ಈ ಮಧ್ಯೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮ ಸೇರಲು ಪಾದ್ರಿಗಳು, ಮುಲ್ಲಾಗಳು ಅಂಬೇಡ್ಕರ್‌ರವರಿಗೆ ಒತ್ತಾಯ ತರಲು ಪ್ರಯತ್ನಿಸಿ ಕಡೆಗೆ ಹಣದಾಸೆ ನೀಡಲು ಯತ್ನಿಸುತ್ತಾರೆ. ಅಂಬೇಡ್ಕರ್ ಇದನ್ನೆಲ್ಲಾ ಕಂಡು ರೋಸಿ ಹೋಗಿ ಸಿಖ್‌ಧರ್ಮ ಸೇರಲು ಸಂಶೋಧನೆ ಮಾಡುತ್ತಾರೆ. ಸಿಖ್ ಧರ್ಮದಲ್ಲಿ ಜಾತಿಪದ್ಧತಿಯಂತಹ ಕ್ರೌರ್ಯಗಳಿವೆಯೆಂದು ಕಂಡುಕೊಂಡು ಇದು ಹಿಂದೂಧರ್ಮಕ್ಕಿಂತಲೂ ಬೇರೆಯಲ್ಲ ಎಂದು ತೀರ್ಮಾನಿಸುತ್ತಾರೆ.

ಅಂತಿಮವಾಗಿ ಬೌದ್ಧಧರ್ಮವು ವೈಜ್ಞಾನಿಕ ಹಾಗೂ ವೈಚಾರಿಕೆ ತಳಹದಿಯ ಮೇಲೆ ನಿಂತಿರುವ ಜಗತ್ತಿನ ಶ್ರೇಷ್ಠವಾದ ಮಾನವ ಧರ್ಮವಾಗಿದೆಯೆಂದು ಅರಿಯುತ್ತಾರೆ. ಬೌದ್ಧಧರ್ಮ ಅತ್ಯಂತ ಪ್ರಾಚಿನವಾದ, ಪ್ರೀತಿ ಕರುಣೆ, ವಿಚಾರಗಳ ತಳಹದಿಯ ಮೇಲೆ ನಿಂತ ಜಾತಿರಹಿತವಾದ ಧರ್ಮ, ಭಾರತದಲ್ಲೇ ಹುಟ್ಟಿದ ಅಪ್ಪಟ ಭಾರತೀಯ ನೆಲದ ಧರ್ಮವಿದಾಗಿದೆ. ಈ ಕಾರಣದಿಂದಲೇ ಭಾರತದ ಮೂಲನಿವಾಸಿಗಳಾದ ದಲಿತರಿಗೆ ಬೌದ್ಧ ಧಮ್ಮ ಅವರ ಮೂಲ ಧಮ್ಮವೆಂಬ ಸತ್ಯ ಸಂಗತಿ ಬಾಬಾ ಸಾಹೇಬ ಸಂಶೋಧನೆಯಿಂದ ತಿಳಿದು ಬಂದಿದೆ.

ಮನುಷ್ಯನಿಗೆ ಅನ್ನಕ್ಕಿಂತಲೂ ಮುಖ್ಯವಾದುದು ಆತ್ಮಗೌರವ, ಹಿಂದೂ ಧರ್ಮದಲ್ಲಿ ದಲಿತರಿಗೆ, ಗಿರಿ ಜನರಿಗೆ, ಶೂದ್ರಜನರಿಗೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಗೌರವ ಘನತೆಗಳಿಲ್ಲ. ಈ ಕಾರಣದಿಂದಾಗಿ ಹಿಂದೂ ಧರ್ಮದ ಕರಾಳ ಸಂಕೋಲೆಗಳಿಂದ ಬಿಡುಗಡೆ ಪಡೆದು, ದಲಿತರು ತಮ್ಮ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬೇಕಾದರೆ ಬೌದ್ಧಧಮ್ಮವನ್ನು ಸ್ವೀಕರಿಸದೇ ಅನ್ಯ ಮಾರ್ಗವಿಲ್ಲ ಎಂಬುದು ಅಂಬೇಡ್ಕರ್ ವಿಚಾರಗಳಿಂದಾಗಿ ಇಂದು ಎಲ್ಲರಿಗೂ ಮನದಟ್ಟಾಗಿದೆ. ಬೌದ್ಧಧಮ್ಮವನ್ನು ಸ್ವೀಕರಿಸುವುದರಿಂದ ಈ ದೇಶಕ್ಕೆ ಯಾವುದೇ ರೀತಿಯ ಅನ್ಯಾಯವೆಸಗುತ್ತಿಲ್ಲ. ಬದಲಾಗಿ ಈ ದೇಶಕ್ಕೆ ಈ ಕಾರ್ಯ ಫಲಕಾರಿಯಾಗಿದ್ದು, ದೇಶದ ಆರೋಗ್ಯ ಸುಧಾರಿಸುತ್ತದೆಯೆಂಬ ಅರ್ಥದಲ್ಲಿ ಅಂಬೇಡ್ಕರ್ ತಿಳಿ ಹೇಳುತ್ತಾರೆ.

ಬುದ್ಧಿಸಂ ಈ ದೇಶದ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ, ಭಾರತೀಯತೆಯಲ್ಲಿ ಬುದ್ಧಿಸಂ ಇದೆ ಎಂದ ಬಾಬಾಸಾಹೇಬರು 1956ರಲ್ಲಿ ತಾವು ಧರ್ಮಾಂತರವಾದಾಗ ಆ ಕ್ರಿಯೆಗೆ ನಾಗಪೂರನ್ನೇ ಆರಿಸಿಕೊಳ್ಳುತ್ತಾರೆ. ಯಾಕೆಂದರೆ ನಾಗಜನಾಂಗದವರು ಭಾರತದಲ್ಲಿ ಬುದ್ಧಿಸಂ ಅನ್ನು ಪಾಲಿಸುತ್ತಿದ್ದವರು. ಇವರು ಬಹು ಸಂಖ್ಯೆಯಲ್ಲಿ ಇದ್ದ ಪ್ರದೇಶವನ್ನು ನಾಗಪೂರ ಎಂದು ಕರೆಯಲಾಯಿತು. ಆರ್ಯರು ಇಲ್ಲಿನ ಮೂಲ ನಿವಾಸಿಗಳಾದ ನಾಗರನ್ನು ಸುಟ್ಟುದಕ್ಕೆ ದಾಖಲೆಗಳಿವೆ. ಶೂದ್ರರು ಮತ್ತು ಅತಿ ಶೂದ್ರರು ಸ್ವೀಕರಿಸಿದ್ದರಿಂದ ಬೌದ್ಧ ಧರ್ಮ ಇಲ್ಲಿ ಪ್ರಮುಖ ಧಮ್ಮವಾಗಿತ್ತು ಎಂದು ಅಂಬೇಡ್ಕರ್ ಹೇಳುತ್ತಾರೆ. 1956 ರ ಅಕ್ಟೋಬರ್ 14ರಂದು ಬಾಬಾಸಾಹೇಬರು ನಾಗಪೂರದಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದ ಕಾರ್ಯಕ್ರಮ ಇಡೀ ಈ ದೇಶದ ಇತಿಹಾಸದಲ್ಲಿ ಮರೆಯಲಾಗದಂತಹದ್ದು. ಇಡೀ ನಾಗಪೂರವೇ ಬೌದ್ಧಮಯವಾಗಿತ್ತು. ಅಂಬೇಡ್ಕರ್‌ರವರೊಂದಿಗೆ ಬೌದ್ಧದೀಕ್ಷೆ ಪಡೆಯಲು ಬಂದಿದ್ದ ಸುಮಾರು ಎಂಟು ಲಕ್ಷ ಮಂದಿ ಒಮ್ಮೆಲೇ

ಬುದ್ಧಂ ಶರಣಂ ಗಚ್ಛಾಮಿ ಎಂದು ಹೇಳುತ್ತಿದ್ದಂತೆ ಇಡೀ ದೇಶಕ್ಕೆ ಇದು ಮುಂದೊಂದು ದಿನ ಬುದ್ಧ ಭಾರತವಾಗುವ ಸೂಚನೆಯಂತಿತ್ತು. ಇದರ ಮುಂದುವರಿದ ಭಾಗವೇ ಬೆಂಗಳೂರಿನಲ್ಲಿ ನಡೆದ ಧರ್ಮಾಂತರ.[12]

ಬಾಬಾಸಾಹೇಬ ಅಂಬೇಡ್ಕರ್‌ರವರು ಅಂದು ನುಡಿದಿದ್ದರು....I want the whole of India to be converted to buddhism. It should not become only Harijan Relegion .... It is after all an universal faith....

ಮತಾಂತರ ಕುರಿತು ಚಿಂತಕರ ಅಭಿಪ್ರಾಯಗಳು

ಕತ್ತಲೆ ಜಗತ್ತಿಗೆ ಬೆಳಕಿನ ಕುಡಿ :

ಬೌದ್ಧಧರ್ಮ ಜಗತ್ತಿನ ಸರ್ವಶ್ರೇಷ್ಠ ಚಿಂತನೆಗಳಲ್ಲಿ ಒಂದೆಂದು ನಾನು ನಂಬಿದ್ದೇನೆ. ಬೌದ್ಧ ಧರ್ಮದ ವೈರಾಗ್ಯ ಬೋಧೆಯನ್ನು ಭೈರಪ್ಪನವರು ಜೀವ ವಿರೋಧಿ ಎಂದು ಅರ್ಥೈಸಲು ಯತ್ನಿಸುವುದು ತಪ್ಪು, ಜಗತ್ತಿನ ಬಹಳಷ್ಟು ಧರ್ಮಗಳ ಅತ್ಯುನ್ನತ ಹಂತಗಳಲ್ಲಿ ಈ ವೈರಾಗ್ಯ ಬೋಧೆ ಇರುವುದನ್ನು ನೋಡಬಹುದು. ಏನೇ ಆದರೂ ಅಂತಿಮವಾಗಿ ವೃದ್ಧಾಪ್ಯದಲ್ಲಿ ಸಾವಿನಲ್ಲೂ ಅಂತ್ಯವಾಗುವ ಈ ಐಹಿಕ ಜಗತ್ತೇ ಶಾಶ್ವತ ಎಂದು ಯಾವ ಧರ್ಮವೂ ಹೇಳಿಲ್ಲ. ಇದಕ್ಕೆ ಹಿಂದೂಧರ್ಮ ಸಹ ಹೊರತಾಗಿಲ್ಲ ಎಂಬುದು ಭೈರಪ್ಪನವರಿಗಿರಲಿ ಪ್ರತಿಯೊಬ್ಬರಿಗೂ ಗೊತ್ತು.

ಈ ವೈರಾಗ್ಯಪರ ನಿಲುವಿನಿಂದಾಗಿ ಬುದ್ಧ ಸಮಾನತೆಯನ್ನು ಮಾನವರಿಗೂ ಮೀರಿ ಬೋಧಿಸಿದ, ಅಂಬೇಡ್ಕರ್, ಕುವೆಂಪು ಅಂಥವರು ಬೌದ್ಧತತ್ವಗಳಿಂದ ಆಕರ್ಷಿತರಾದುದಕ್ಕೆ ಮೂಲಕಾರಣ ಇದೇ. ಅಕ್ಷರ ಜಗತ್ತಿನಿಂದಲೇ ವಂಚಿತರಾಗಿದ್ದ ಶೂದ್ರರಿಗೂ ದಲಿತರಿಗೂ ಅವರ ಕತ್ತಲೆ ಜಗತ್ತಿನಲ್ಲಿ ಬೆಂಕಿಯ ಕುಪಿಯಾಗಿ ಕಾಣುತ್ತಿರುವುದು ಬೌದ್ಧಧರ್ಮದ ಈ ಸರ್ವಸಮಾನತೆ ಮತ್ತು ಅನುಕಂಪಗಳು. ಈ ಬೆಳಕಿಗೆ ಬಾಯಾರಿ ಬೌದ್ಧ ಧಮ್ಮದತ್ತ ಇವರೆಲ್ಲ ವಲಸೆ ಹೊರಟವರು. ಈ ಕಿಡಿ ಕಾಳ್ಗಿಚ್ಚಾಗಿ ಹಬ್ಬುವ ಮೊದಲೇ ಇದಕ್ಕೆ ತಣ್ಣೀರೆರಚಿ ನಂದಿಸಬೇಕೆಂದು ಹಿಂದೂಮೂಲಭೂತವಾದಿಗಳು ಸರ್ವಪ್ರಯತ್ನ ಮಾಡುತ್ತಿದ್ದಾರೆ. ಮತಾಂತರ ತಡೆ ಮಸೂದೆ ತರಬೇಕೆಂಬುದು ಸಹ ಇಂಥಾ ಪ್ರಯತ್ನಗಳಲ್ಲಿ ಒಂದು.- **ಕೆ.ಪಿ.ಪೂರ್ಣಚಂದ್ರ ತೇಜಸ್ವಿ.**

ಶಕ್ತಿ ನೀಡಲಿ :

ಬೌದ್ಧಧರ್ಮವನ್ನು ನಿರುದ್ವೇಗದಲ್ಲಿ ಸ್ವೀಕರಿಸುವುದು ಮುಖ್ಯ. ಇಲ್ಲಿ ರಾಜಕೀಯಕ್ಕಿಂತ ಸೇರುವವರ ಮನಸ್ಸಿಗೆ ಶಾಂತಿ ಸಿಗಬೇಕು. ಬೌದ್ಧಧರ್ಮ ಸ್ವೀಕರಿಸುವ ಕ್ರಿಯೆ ಆಳವಾದುದ್ದಾಗಿರಬೇಕು, ಅವರನ್ನು ಕೋಪ ವಿಮುಕ್ತರನ್ನಾಗಿಸಬೇಕು. ಆ ಮೂಲಕ ಅವರು ಕೋಪದಿಂದ ಪಡೆಯಲಾಗದ ಶಕ್ತಿಯನ್ನು ಬೌದ್ಧಧರ್ಮ ಸ್ವೀಕರಿಸುವುದರಿಂದ ಪಡೆಯುವಂತಾಗಬೇಕು. -**ಪ್ರೊ. ಯು.ಆರ್. ಅನಂತಮೂರ್ತಿ**

ನಾಗರೀಕ ಲಕ್ಷಣ :

ಯಾವುದೇ ಮತ ಧರ್ಮವನ್ನು ಅಂಗೀಕರಿಸಲು ಅಥವಾ ನಿರಾಕರಿಸಲು ನಮ್ಮ ದೇಶದ ಪ್ರಜೆಗಳಿಗೆ ಹಕ್ಕಿದೆ. ಅದನ್ನು ಚಲಾಯಿಸಲು ಯಾರ ಅಪ್ಪಣೆಯೂ ಬೇಕಿಲ್ಲ. ಹುಟ್ಟಿನಿಂದಲೇ ಮೇಲು-ಕೀಳುಗಳನ್ನು ನಿರ್ಧರಿಸುವ ಪ್ರಣಾಳಿಕೆಯನ್ನು ತೊರೆದು ಸಮಾನತೆಗಾಗಿ ಹಂಬಲಿಸುವುದು ಬೌದ್ಧಮತ ಸ್ವೀಕರಿಸಬೇಕೆನ್ನುವವರ ಮನಸ್ಸಿನ ತುಡಿತವಾಗಿರುತ್ತದೆ. ಅವರ ಆಶಯದ ಈಡೇರಿಕೆಯಿಂದ ಬೇರೊಂದು

ಧರ್ಮಕ್ಕೆ ಏನೋ ಆಘಾತವಾಗುತ್ತದೆಂದು ಚಡಪಡಿಸುವುದು ಮುರ್ಖತನ. ಮೂಲತಃ ಎಲ್ಲಾ ಧರ್ಮಗಳಲ್ಲೂ ನ್ಯೂನ್ಯತೆಗಳಿವೆ, ಭ್ರಾಂತಿಯ ನೆಲೆಗಳಿವೆ. ಅವೆಲ್ಲಾ ತೋರಿಕೆಗೆ ಮಾನವಧರ್ಮವನ್ನು ಬೋಧಿಸುತ್ತವಾದರೂ ಆಚರಣೆಯಲ್ಲಿ ಶ್ರೇಣಿಗಳ ಕಲ್ಪನೆ ಅಸಹ್ಯ ಹುಟ್ಟಿಸುವಷ್ಟು ಅಗಾಧವಾಗಿರುತ್ತದೆ. ದಲೈಲಾಮನು ಬೇರೆ ಮತಗಳ ಧರ್ಮಾಧಿಕಾರಿಗಳಿಗಿಂತ ಭಿನ್ನವೆಂದು ಹೇಳುವುದು ಅಸಂಗತ. ವ್ಯವಹಾರದಲ್ಲಿ ಇಂದಿನ ಬೌದ್ಧವಿಹಾರಗಳು ಮಠ ಮಸೀದಿ ಚರ್ಚ್‌ಗಳಂತೆಯೇ ಕಾಣುತ್ತಿವೆ. ಆದರೆ ಮತಾಂತರ ಹೊಂದುವವರ ಹಕ್ಕು ಮತ್ತು ಅಭಿಪ್ರಾಯಗಳನ್ನು ಗೌರವಿಸುವುದು ಒಂದು ನಾಗರೀಕ ಲಕ್ಷಣ.- **ಪ್ರೊ. ಜಿ. ರಾಮಕೃಷ್ಣ**

ಹೊಸ ಎಚ್ಚರದತ್ತ :

ಸಾಮಾಜಿಕ ಸಮಾನತೆಯ ಕನಸು ಮತ್ತು ಆಧ್ಯಾತ್ಮಿಕ ತುಡಿತ ಮತಾಂತರಕ್ಕೆ ಪ್ರೇರಣೆ ನೀಡುವ ಮುಖ್ಯ ಕಾರಣಗಳು. ಯಾವ ಪರಿಸರದಲ್ಲಿ ಕ್ರೂರವಾದ ಅಸಮಾನತೆ ಇರುತ್ತದೆಯೋ ಅದು ಮತಾಂತರಕ್ಕೆ ಫಲವತ್ತಾದ ಕ್ಷೇತ್ರವಾಗಿರುತ್ತದೆ. ಬುಡಕಟ್ಟು ಜನರು ಹಾಗೂ ದಲಿತ ಸಮುದಾಯಗಳವರು ಆಧ್ಯಾತ್ಮಿಕ ಹಸಿವೆಯಿಂದಲೂ ಮತಾಂತರಗೊಳ್ಳುತ್ತಾರೆ. ಅದರಲ್ಲಿ ತಪ್ಪೇನೂ ಇಲ್ಲ. ಅದು ಸಹಜವಾದ ಚಲನಶೀಲ ಬೆಳವಣಿಗೆ ಎಲ್ಲ ದೇಶಗಳಲ್ಲೂ, ಎಲ್ಲ ಕಾಲಗಳಲ್ಲೂ ಮತಾಂತರ ನಡೆದಿದೆ. ಮುಂದೆಯೂ ನಡೆಯುತ್ತದೆ. ಇಸ್ಲಾಂ, ಕ್ರೈಸ್ತ, ಬೌದ್ಧ ಧರ್ಮಗಳು ವಿಸ್ತಾರಗೊಂಡದ್ದೇ ಮತಾಂತರದಿಂದ. ನಮ್ಮ ಕನ್ನಡ ನಾಡಿನಲ್ಲಿಯೇ ಲಿಂಗಾಯತರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಭಾಗ ಮತಾಂತರಗೊಂಡವರಿದ್ದಾರೆ. ಅವರಿಗೆ ತಮ್ಮ ಮೂಲ ಜಾತಿಗಳ ನೆನಪು ಉಳಿದಿಲ್ಲವಾದರೂ ಅವರೆಲ್ಲ ದಲಿತ ಹಾಗೂ ಕೆಳಜಾತಿಗಳಿಂದ ಶರಣಧರ್ಮಕ್ಕೆ ಬಂದು ಸೇರಿದವರೆಂಬುದು ಸ್ಪಷ್ಟವಾದ ವಿಚಾರ. ಸಮಕಾಲೀನ ಸಂದರ್ಭದಲ್ಲಿ ಮತಾಂತರ ನಿಷೇಧಿಸಲು ಹೊರಟವರು ಆತ್ಮಶೋಧನೆ ಮಾಡಿಕೊಳ್ಳಬೇಕು. ಅಲ್ಲದೇ ದಲಿತರು ಬೌದ್ಧಧರ್ಮ ಸೇರುವುದು ಮತಾಂತರವೇನೂ ಅಲ್ಲ; ತಮಗೆ ಕವಿದಿದ್ದ ವಿಸ್ಮೃತಿಯನ್ನು ಕಳಚಿ, ಕಿತ್ತೊಗೆದು ಹೊಸ ಎಚ್ಚರದತ್ತ ಅವರು ಸಾಗುತ್ತಿದ್ದಾರೆಂದೇ ತಿಳಿಯಬಹುದು. ಅವರಿಗೆ ಈ ನಿಟ್ಟಿನಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಮಾರ್ಗದರ್ಶನವಿದೆ. -**ಪ್ರೋ. ಕೆ.ಮರುಳಸಿದ್ದಪ್ಪ**

ಪ್ರಕೃತಿಯೇ ಧರ್ಮ ;

ನಮ್ಮದು ಜಾತ್ಯಾತೀತ ದೇಶ. ಇಲ್ಲಿ ಯಾರು ಯಾವ ಧರ್ಮಕ್ಕೆ ಬೇಕಾದರೂ ಹೋಗಬಹುದು. ಬೌದ್ಧಧರ್ಮಕ್ಕೆ ಹೋಗುವವರಿಗೆ ಅಲ್ಲಿ ನೆಮ್ಮದಿ ಸಿಗುವುದಾದರೆ ಹೋಗಲಿ, ಅದು ಸಂತೋಷದ ವಿಚಾರ. ಅದನ್ನು ಕೀಳಾಗಿ ಕಾಣಲು, ತಡೆಯಲು ಹೋಗಬಾರದು. ಹಾಗೆ ತಡೆಯಲು ನಾನು ಪೇಜಾವರ ಸ್ವಾಮಿಯಲ್ಲ. ಬದುಕಿನ ವ್ಯಾಪ್ತಿಯೇ ಒಂದು ರೀತಿ ಮತಾಂತರವಿದ್ದಂತೆ. ಇರುವ ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೋಗುವುದೆಂದು. ನಾನಂತು ಮೂಲತಃ ಯಾವ ಧರ್ಮದಲ್ಲಿ ನಂಬಿಕೆ ಇಲ್ಲದವನು. ಪ್ರಕೃತಿ ಧರ್ಮವೇ ನಿಜವಾದ ಧರ್ಮವೆಂದು ನಂಬಿದ್ದೇನೆ. ಇದರ ಜೊತೆಗೆ ಪ್ರಜಾಸತ್ತಾತ್ಮಕ ನಿಲುವುಗಳೂ ನಮ್ಮ ಧರ್ಮವಾಗಬೇಕು. ಬೌದ್ಧಧರ್ಮ ಸೇರುವವರಿಂದ ಅದು ಸಾಧ್ಯವಾಗಲಿ. - **ಪ್ರೊ. ಜಿ.ಕೆ. ಗೋವಿಂದರಾವ್**

ಸ್ವಾಭಿಮಾನದ ದಾರಿ :

ಬೌದ್ಧಧಮ್ಮ ಸ್ವೀಕರಿಸಿದ ಕ್ಷಣದಿಂದಲೇ ಹೊಸ ಬದುಕು ಆರಂಭವಾಗುತ್ತದೆ. ಸ್ವಾಭಿಮಾನ ಛಲ ಸಿದ್ಧಿಸುತ್ತದೆ. ಶತಮಾನಗಳ ಕಳಂಕದಿಂದ ಮುಕ್ತಿ ಪಡೆದ ಆನಂದ ಜಗತ್ತಿನ ಎಲ್ಲರೊಳಗೆ ತಾನೂ

ಒಬ್ಬನಾಗುವ ಹೆಮ್ಮೆ ಮೂಡುತ್ತದೆ. ಬದುಕಿನ ಕ್ಷಿತಿಜ ಕ್ಷಣ ಮಾತ್ರದಲ್ಲಿ ವಿಸ್ತರಿಸಿ ಕೀಳರಿಮೆಯ ಕುಬ್ಜತೆ ಕರಗಿ ಹೋಗುತ್ತದೆ. ಮನಸ್ಸು-ಹೃದಯಗಳನ್ನು ಬಂಧಿಸಿದ ಶತಮಾನಗಳ ಕೊಂಡಿ ಕಳಚಿ ಪ್ರೀತಿ, ಕರುಣೆ, ಸಮಾನತೆಗಳ ನಿರ್ಮಲ ಜೀವನಕ್ಕೆ ದಾರಿ ಮಾಡಿಕೊಡುತ್ತದೆ.- **ಇಂದೂಧರ ಹೊನ್ನಾಪೂರ**

ಜೀವ ಕಾರುಣ್ಯ ಹಾಗೂ ಸಮಾನತೆ :

ಪ್ರಾಚೀನ ಭಾರತದ ಪ್ರಥಮ ಕ್ರಾಂತಿಕಾರಿ ಸಂತ ಬುದ್ಧ, ಆಧ್ಯಾತ್ಮದಲ್ಲಿ ಅದುವರೆಗೂ ಅಗತ್ಯವೆಂದು ತಿಳಿಯಲಾರದ ದೇವರು, ಗುರು ಹಾಗೂ ಶಾಸ್ತ್ರಗಳ ಅವಲಂಬನೆ ಮತ್ತು ನಿರ್ದೇಶನಗಳನ್ನು ದಿಟ್ಟತನದಿಂದ ನಿರಾಕರಿಸಿ ಧರ್ಮವನ್ನು ವೈಚಾರಿಕವಾದ ನೆಲೆಯಲ್ಲಿ ಜೀವಪರವಾಗಿ ರೂಢಿಸಿದವನು ಬುದ್ಧ, ಬುದ್ಧನ ಜೀವಕಾರುಣ್ಯ ಹಾಗೂ ಮಾನವ ಪ್ರೀತಿಗೆ ಹೋಲಿಸಿದರೆ, ದೇವರು ಪರಲೋಕಗಳ ಕಡೆ ಸದಾ ಮುಖ ಮಾಡಿಕೊಂಡು ವಾಸ್ತವ ಬದುಕಿನ ದುಃಖ ಹಾಗೂ ತರ ತಮಗಳಿಗೆ ವಿಮುಖವಾಗುವ ಹಿಂದೂ ಧರ್ಮವೇ ನಿಜವಾದ ಅರ್ಥದಲ್ಲಿ ಜೀವ ವಿರೋಧಿ ಮತ್ತು ಜೀವನ ವಿರೋಧಿ ಎನ್ನುವುದರಲ್ಲಿ ಸಂಶಯವಿಲ್ಲ.

ಕೆಳವರ್ಗದ ಸಾವಿರಾರು ವ್ಯಕ್ತಿಗಳು ಬೌದ್ಧಧರ್ಮ ಸ್ವೀಕರಿಸಲು ಹೊರಟಿರುವ ಸಂಗತಿ ನನಗೆ ಆಶ್ಚರ್ಯವನ್ನಾಗಲೀ, ಆಘಾತವನ್ನಾಗಲೀ ಉಂಟು ಮಾಡುವ ಸುದ್ದಿಯಲ್ಲ. ಒಂದು ರೀತಿಯಲ್ಲಿ ಇದು ಸಂತೋಷದ ಸುದ್ದಿ. ಅಂಬೇಡ್ಕರ್ ಧರ್ಮಾಂತರ ಹೊಂದಿದ ಆನಂತರದ ಇಷ್ಟು ಕಾಲದ ಮೇಲೂ ಸಹಸ್ರ ಸಂಖ್ಯೆಯಲ್ಲಿ ಕೆಳವರ್ಗದವರು ಬೌದ್ಧಧರ್ಮಕ್ಕೆ ಸೇರಲು ಹೊರಟಿರುವದನ್ನು ನೋಡಿದರೆ ಪರಿಸ್ಥಿತಿ ಅಂದಿಗಿಂತ ಇಂದು ಹೆಚ್ಚೇನೂ ಭಿನ್ನವಾಗಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಯಾವ ಧಾರ್ಮಿಕ ವ್ಯವಸ್ಥೆಯೊಳಗೆ ಒಂದು ವರ್ಗದ ಜನ ಗೌರವಯುತವಾದ ಬದುಕು ನಡೆಸಲು ಸಾಧ್ಯವಿಲ್ಲವೆಂಬುದು ಮನವರಿಕೆಯಾದಾಗ ಅವರು ಜೀವ ಕಾರುಣ್ಯ ಹಾಗೂ ಸಮಾನತೆಯ ಪರವಾಗಿ ನಿಂತ ಬೌದ್ಧಧರ್ಮದಂತಹ ವ್ಯವಸ್ಥೆಯನ್ನು ಸೇರುವುದು ಅನಿವಾರ್ಯವೆಂದೇ ತೋರುತ್ತದೆ. ನಿಜವಾಗಿ ವಿರೋಧಿಸಬೇಕಾದದ್ದು ಬಲವಂತದ ಮತಾಂತರವನ್ನೇ ಹೊರತು ಸ್ವಂತ ವಿವೇಚನೆಯಿಂದ ಮಾಡಿಕೊಳ್ಳುವ ಆಯ್ಕೆಯನ್ನಲ್ಲ. - **ಪ್ರೊ. ಜಿ.ಎಸ್. ಶಿವರುದ್ರಪ್ಪ**

ಪ್ರಜ್ಞೆ ಹಾಗೂ ಸಾಂಸ್ಕೃತಿಕ ಮತಿ :

ಧರ್ಮಗಳೆಲ್ಲವೂ ಮಾನವನ ಸ್ಫೂರ್ತ ಸ್ಥಿತಿಯ ಫಲವಾಗಿದ್ದು, ಮಾನವನ ಸಮನ್ನತೆಯೇ ಅವುಗಳ ಉದ್ದೇಶವಾಗಿದೆ. ಆ ಸಮನ್ನತಿ ಮನುಷ್ಯ ಗೌರವ ಮತ್ತು ಸಮಾನತೆಯ ಭಾವನೆಗಳಿಂದ ಹುಟ್ಟಿದ ಪರಸ್ಪರತೆಯಿಂದ ಸಾಧ್ಯ. ಹುಟ್ಟಿನಿಂದ ಮೇಲು-ಕೀಳು ಎಂಬುದನ್ನು ಹೇಳುವ ಮತ್ತು ಆಚರಿಸುವ ಯಾವುದೂ ಧರ್ಮವಲ್ಲ. ಅದು ಮಾನವ ಸಮನ್ನತಿ ಸಾಧಿಸಲು ಶಕ್ಯವೇ ಇಲ್ಲ. ಅಂಥಾ ಬರ್ಬರ, ಅನಾಗರೀಕ ಧರ್ಮವನ್ನು ಬಿಟ್ಟು ಯಾವ ಧರ್ಮದಲ್ಲಿ ಮನುಷ್ಯ ಗೌರವ ಮತ್ತು ಸಮಾನತೆ ದೊರೆಯುವುದೋ ಆ ಧರ್ಮಕ್ಕೆ ಮತಾಂತರ ಹೊಂದುವುದು ಸ್ವಾಭಿಮಾನ ಮತ್ತು ಸ್ವಮರ್ಯಾದೆಗಳ ನಾಗರೀಕ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಮತಿ ಇರುವ ಮನುಷ್ಯನ ಕರ್ತವ್ಯ. ಮತಾಂತರಗಳ ಬಗ್ಗೆ ಬಲಾತ್ಕಾರ, ಆಸೆ, ಆಮಿಷಗಳ ಆಪಾದನೆ ಆರೋಪಗಳನ್ನು ಮಾಡುವುದು ಧರ್ಮಾಂಧ ಸ್ವಾರ್ಥಿಗಳು, ಮಾನವ ದ್ವೇಷಿಗಳು ಮತ್ತು ಜೀವ ಶೋಷಕರು. ಅಧಿಕಾರ ಬಲದಿಂದ ಕಾಯ್ದೆ, ಕಾನೂನು ಮಾಡಿ ಮತಾಂತರವನ್ನು ಬಲಾತ್ಕಾರದಿಂದ ತಡೆಯುವುದು ಮನುಷ್ಯರೆನ್ನಿಸಿಕೊಳ್ಳಲು ಯೋಗ್ಯರಲ್ಲ. - **ಕಲ್ಲೆ ಶಿವೋತ್ತಮರಾವ್**

ಲೋಕದ ಮೊದಲ ವಿಚಾರವಾದಿ

ಭಾರತದಲ್ಲಿ ದಲಿತರು ಮಾತ್ರ ಮತಾಂತರವಾಗುತ್ತಿಲ್ಲ. ಇತ್ತೀಚೆಗೆ ಜಗತ್ತಿನಾದ್ಯಂತ ಬುದ್ಧಿ ಜೀವಿಗಳು, ಆಧ್ಯಾತ್ಮದಲ್ಲಿ ಆಸಕ್ತಿ ಉಳ್ಳವರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇಡೀ ಜಗತ್ತು ಇಂದು ಧ್ಯಾನ್ಯದ ಕಡೆಗೆ ಒಲವು ತೋರಿಸುತ್ತಾರೆ. ಜಗತ್ತಿನಾದ್ಯಂತ ಧ್ಯಾನದ ತರಗತಿಗಳು ನಡೆಯುತ್ತಿವೆ. ಈ ಧ್ಯಾನ ತರಗತಿಗಳಲ್ಲಿ ಬಹುಪಾಲು ಬೌದ್ಧಧರ್ಮದ ವಿಚಾರವನ್ನೇ ಬೋಧಿಸಲಾಗುತ್ತದೆ. ಬೌದ್ಧಧರ್ಮದ ತತ್ವಗಳು ಜಗತ್ತಿನ ಎಲ್ಲ ವರ್ಗದ ಜನರಿಗೂ ಕೂಡ ಸ್ವಾತಂತ್ರ್ಯ ಕೊಡುವ ಶಕ್ತಿ ಪಡೆದಿವೆ. ಇಂದಿನ ಅಶಾಂತಿ, ಅಭದ್ರತೆಯಂತಹ ಜಾಗತಿಕ ಬಿಕ್ಕಟ್ಟುಗಳಿಗೆ ಬೌದ್ಧಧರ್ಮದಿಂದ ಪರಿಹಾರ ಸಿಗುವ ಎಲ್ಲ ಸೂಚನೆಗಳೂ ಇವೆ. ಈ ಲೋಕದ ಮೊದಲ ವಿಚಾರವಾದಿ ಬುದ್ಧ. ಬೌದ್ಧರು ಮಾತ್ರವಲ್ಲ; ಎಲ್ಲರೂ ಆತನ ವಿಚಾರಗಳನ್ನು ಪಾಲಿಸುವ ಅಗತ್ಯವಿದೆ. ಇದರಷ್ಟು ವೈಜ್ಞಾನಿಕ ಧರ್ಮ ಇನ್ನೊಂದಿಲ್ಲ. ಬುದ್ಧ ಎಂದರೇನೇ ವೈಜ್ಞಾನಿಕತೆ, ಅರಿವು, ಮಾನವತೆ ಮತ್ತ ಪ್ರೀತಿ. - **ಡಾ.ಸಿದ್ಧಲಿಂಗಯ್ಯ**

ಅಸ್ಪೃಶ್ಯತೆಯ ನರಕ :

ಅಂಬೇಡ್ಕರ್‌ವಾದದಿಂದ ರೂಪುಗೊಂಡ ದಲಿತ ಚಳುವಳಿ ಅಸ್ಪೃಶ್ಯತೆಯ ನಿವಾರಣೆಗೆ ಅಂತಿಮವಾಗಿ ಬಾಬಾಸಾಹೇಬರು ಕಂಡುಕೊಂಡ ಮತಾಂತರದ ಮಾರ್ಗದತ್ತ ನಡೆದಿರುವುದು ಅತ್ಯಂತ ಸಹಜ ಬೆಳವಣಿಗೆಯಾಗಿದೆ. ವೈಚಾರಿಕತೆಯಿಂದ ಹೊಸ ನೈತಿಕತೆಯನ್ನು ರೂಪಿಸಿಕೊಳ್ಳಬಲ್ಲ ಮನುಷ್ಯನಿಗೆ ಯಾವ ಧರ್ಮದ ಅಗತ್ಯವೂ ಇರಲಾರದೆಂಬುದು ನನ್ನ ನಂಬಿಕೆ.

ಆದರೆ ಚರಿತ್ರೆಯುದ್ದಕ್ಕೂ ದಲಿತರು ಬೌದ್ಧರಾದಾಗ, ಸಿಖ್ಖರಾದಾಗ ಅಥವಾ ವಚನ ಯುಗದಲ್ಲಿ ಶರಣರಾದಾಗ ಅವರ ಮುಂದಿನ ತಲೆಮಾರಾದರೂ ಅಸ್ಪೃಶ್ಯತೆಯ ನರಕದಿಂದ ಪಾರಾಯಿತು. ನಮ್ಮ ಈ ಕಾಲದಲ್ಲಿ ಭಾರತೀಯ ಸಂವಿಧಾನದ ಶ್ರೇಷ್ಠ ಆದರ್ಶಗಳ ಮೂಲಕ ಅಥವಾ ಗಾಂಧಿಮಾರ್ಗದ ಹೃದಯ ಪರಿವರ್ತನೆಯ ಮೂಲಕ ಅಥವಾ ಆಧುನಿಕ ಪ್ರಜ್ಞೆಯ ಮೂಲಕ ಹಿಂದೂಮನಸ್ಸು ಜಾತ್ಯಾತೀತ ವಾಗಬಹುದಿತ್ತು. ಆ ಮೂಲಕ ಅಸ್ಪೃಶ್ಯತೆಯನ್ನು ಕೊನೆಗಾಣಿಸಬಹುದಿತ್ತು. ಆದರೆ ಇಂಥಾ ಆತ್ಮ ನಿರೀಕ್ಷೆಯೇ ಇಲ್ಲದೆ ಭಂಡ ನಿರ್ಲಕ್ಷ್ಯ ತಳೆದಿರುವ ಒಂದು ಸಮಾಜದ ಭಾಗವಾಗಿರಲು ದಲಿತರಿಗೆ ಯಾವ ಕಾರಣವೂ ಇಲ್ಲ.-**ಡಾ ನಟರಾಜ್ ಹುಳಿಯಾರ್** [13.]

ಮೇಲಿನ ಈ ಚಿಂತಕರೆಲ್ಲರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಬುದ್ಧ ಮತ್ತು ಬುದ್ಧಧರ್ಮದ ಶ್ರೇಷ್ಠತೆ, ಅಗತ್ಯತೆ, ಹಾಗೂ ಪ್ರಸ್ತುತ ಜರುಗುತ್ತಿರುವ ಮತಾಂತರದ ಸತ್ಯಾಸತ್ಯತೆಗಳನ್ನು ಅರಿಯಬಹುದಾಗಿದೆ. ಜೊತೆಗೆ ಬೌದ್ಧ ಧರ್ಮದ ವೈಚಾರಿಕ ವೈಜ್ಞಾನಿಕ ವಿಚಾರಗಳು ಪ್ರಸ್ತುತ ಸಂದರ್ಭಕ್ಕೂ ಸೂಕ್ತ ಎಂಬ ವಿಚಾರಗಳು ಇಲ್ಲಿ ವ್ಯಕ್ತವಾಗಿವೆ. ಏಕೆಂದರೆ ಇಂದಿಗೂ ಕೂಡ ಹಿಂದೂ ಧರ್ಮದಲ್ಲಿದ್ದ ಅನಿಷ್ಟಗಳಾದ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ಬ್ರಾಹ್ಮಣ್ಯ, ಅಸಮಾನತೆ, ದೇವರು, ದಿಂಡಿರು, ದೆವ್ವ- ಪಿಶಾಚಿಗಳೇ ಮುಂತಾದ ಅಮಾನವೀಯ ಮೌಲ್ಯಗಳು ಕೇವಲ ಬಾಬಾ ಸಾಹೇಬರನ್ನೇ ಅಲ್ಲ ಮನಸ್ಸಿರುವ ಯಾವ ಕನಿಷ್ಟ ಮಾನವನನ್ನು ತಮ್ಮ ಜೀವ ವಿರೋಧಿ ಧರ್ಮದಲ್ಲಿರಲು ಸಾಧ್ಯವಿಲ್ಲ. ಬುದ್ಧಧಮ್ಮಕ್ಕೆ ಧಮ್ಮಾಂತರವಾಗುವುದೆಂದರೆ ಮನುಷ್ಯತ್ವದ ಕಡೆಗೆ ನಾವು ಹೊರಡುತ್ತಿದ್ದೇವೆಂದು ಅರ್ಥ ಎನ್ನುತ್ತಿದ್ದ ಬಾಬಾಸಾಹೇಬ ಅಂಬೇಡ್ಕರ್‌ರು ಅಂದು ಕೈಗೊಂಡ ನಿರ್ಣಯವನ್ನು ನಾವು ಇಂದೂ ಕೂಡ ಮುಂದುವರೆಸುವ ಅನಿವಾರ್ಯತೆಯಿದೆ. ಯಾಕೆಂದರೆ ಇಂದು ಪರಿಸ್ಥಿತಿಯೇನೂ ಬದಲಾಗಿಲ್ಲ. ಬದಲಾಗಿ

ಇಂದು ಕೂಡ ಹಿಂದೂಧರ್ಮ ಇನ್ನಷ್ಟು ಮತಾಂಧ ರೂಪ ತಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತ ಬೌದ್ಧಭಾರತವಾಗಬೇಕಾಗಿದೆ. ಈ ನೆಲದಲ್ಲಿರುವ ನೆತ್ತರದಾಹ, ಹಿಂಸೆ, ಕ್ರೌರ್ಯಗಳನ್ನು ಅಳಿಸಿ, ಕರುಣೆ, ಪ್ರೀತಿ ಹಾಗೂ ಮಾನವೀಯತೆಯನ್ನು ಇಲ್ಲಿ ಚಿಗುರಿಸಬೇಕಿದೆ. ಈ ಮೂಲಕ ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್, ಫುಲೆ ರಂತವರ ಕನಸುಗಳನ್ನು ಸಾಕಾರಗೊಳಿಸುವುದು ಹೆಚ್ಚು ಪ್ರಸ್ತುತ. ಹಿಂದೂ ಧರ್ಮದಲ್ಲಿರುವ ಮನುವಾದ, ಅಸ್ಪೃಶ್ಯತೆ, ಜಾತಿ ಪದ್ಧತಿ, ಅಸಮಾನತೆ ಇವುಗಳನ್ನು ತೊಡೆದು ಹಾಕಲು ಇಂದು ಕೂಡ ಬುದ್ಧ, ಬಸವ, ಅಂಬೇಡ್ಕರ್ ರಂತವಹ ವಿಚಾರ ಮತ್ತು ಹೋರಾಟ ಪ್ರಸ್ತುತ ಸಂದರ್ಭಕ್ಕೂ ಅತ್ಯಗತ್ಯ.

ಭಾರತಕ್ಕೆ ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವ ನೆಲೆಗೊಂಡು 60 ವರ್ಷಗಳಾಗುತ್ತಿದೆ. ಹಲವು ರಂಗಗಳಲ್ಲಿ ಪ್ರಗತಿಯಾಗಿದೆ. ಆರ್ಥಿಕ ಸ್ಥಿತಿ ಸುಧಾರಿಸಿದೆ. ಆದರೆ ಮಾನವೀಯ ಮೌಲ್ಯಗಳೂ ನಾಶವಾಗುತ್ತಲೇ ಇವೆ. ಇದಕ್ಕೆ ಇತ್ತೀಚೆಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಬನ್ನಿಕೊಪ್ಪದಲ್ಲಿ ನಡೆದ ಘಟನೆ ತಾಜಾ ಉದಾಹರಣೆ. ಇಲ್ಲಿಯ ಕೆರೆಯ ನೀರನ್ನು ಸವರ್ಣೀಯರು ಕೊಡಬೇಕು. ಪರಿಶಿಷ್ಟರು ತೆಗೆದುಕೊಳ್ಳಬೇಕು. ಇದಕ್ಕೆ ಮುಖ್ಯ ಕಾರಣ ಅಸ್ಪೃಶ್ಯತೆ. ಪರಿಶಿಷ್ಟರನ್ನು ಬಿಟ್ಟು ಗ್ರಾಮದ ಉಳಿದೆಲ್ಲ ಜಾತಿಯವರು ಈ ನೀರನ್ನು ಮುಟ್ಟಬಹುದು. ಪರಿಶಿಷ್ಟರಿಗೆ ಮುಟ್ಟುವ ಅಧಿಕಾರ ಇಲ್ಲ.

ಇದು ಬನ್ನಿಕೊಪ್ಪಕ್ಕಷ್ಟೇ ಸೀಮಿತವಾದ ಕತೆಯಲ್ಲ. ಭಾರತದ ಬಹುಪಾಲು ಹಳ್ಳಿಗಳಲ್ಲಿ ಇಂಥ ಪದ್ಧತಿ ಇದೆ. ಮನುಷ್ಯ ಮನುಷ್ಯನನ್ನು ಮುಟ್ಟದ ಅತ್ಯಂತ ಹೀನ ಪದ್ಧತಿಗಳನು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉಳಿಸಿಕೊಂಡು ಬರಲಾಗಿದೆ. ಈ ರಾಷ್ಟ್ರದ ಬಹುಪಾಲು ದೇವಾಲಯಗಳು ಸರ್ಕಾರದ ಮುಜರಾಯಿ ಇಲಾಖೆಗೆ ಸೇರಿವೆ. ಆದರೆ ಮುಕ್ತ ಪ್ರವೇಶ ಮಾತ್ರ ಎಲ್ಲರಿಗೂ ಇಲ್ಲ. ಇದನ್ನು ಬಹಿರಂಗವಾಗಿ ಹೇಳದಿದ್ದರೂ, ಶಾಸನದಂತೆ ಪಾಲಿಸಿಕೊಂಡು ಬರಲಾಗುತ್ತದೆ. ಪರಿಶಿಷ್ಟರ ಪ್ರತಿನಿಧಿಗಳೂ ಸೇರಿದಂತೆ ಎಲ್ಲ ಶಾಸಕರೂ ಇದನ್ನು ಬಲ್ಲರು. ಇಡೀ ನಮ್ಮ ಆಡಳಿತ ವ್ಯವಸ್ಥೆಗೇ ಈ ಸತ್ಯ ಗೊತ್ತು. ಆದರೆ ಯಾರೂ ಇಂಥ ಪದ್ಧತಿಗಳ ವಿರುದ್ಧ ದನಿ ಎತ್ತುವುದಿಲ್ಲ. ಹಸಿವಿನಿಂದ ಜನ ಸಾಯುವ ಸ್ಥಿತಿಯಂತೂ ಈಗ ರಾಷ್ಟ್ರದಲ್ಲಿ ಇಲ್ಲವೇ ಇಲ್ಲ. ಆದರೆ ಅವಮಾನದಿಂದ ಕ್ಷಣ ಕ್ಷಣವೂ ಸಾಯಬೇಕಾದ ಪರಿಸ್ಥಿತಿಯಿಂದ ಇನ್ನೂ ಬಿಡುಗಡೆಯಾಗಿಲ್ಲ ಎಂಬುದಕ್ಕೆ ಮೇಲಿಂದ ಮೇಲೆ ಇಂತಹ ನಿದರ್ಶನಗಳು ಈ ದೇಶದಲ್ಲೇ ಸಿಗುತ್ತಲೇ ಇವೆ. ಇಂತಹ ವ್ಯವಸ್ಥೆಯಿಂದ ಪಾರಾಗುವ ಎಚ್ಚರ ನಮ್ಮಲ್ಲಿ ಬಹುಪಾಲು ಜನರಿಗಿಲ್ಲ. ನಮ್ಮಲ್ಲಿ ಬೇರೂರಿರುವ ಮೂಢನಂಬಿಕೆಗಳನ್ನು ನಾವು ಪರಾಮರ್ಶಿಸುವ ಗೋಜಿಗೆ ಹೋಗುವುದಿಲ್ಲ. ನಮ್ಮ ಜನ ಈ ಮೂಢನಂಬಿಕೆಗಳನ್ನು ಪೋಷಿಸಿಕೊಂಡು ಬಂದಿದ್ದಾರೆ. ನೀರು ನಮ್ಮ ಹಕ್ಕು ಎಂದು ಹೇಳುವಂತೆಯೆ ಅದನ್ನು ತುಂಬಿಕೊಳ್ಳುವ ಧೈರ್ಯವನ್ನೂ ಪರಿಶಿಷ್ಟರು ತೋರಿಸಬೇಕು. ಸಾರ್ವಜನಿಕ ಸ್ವತ್ತಿನ ಈ ನೀರನ್ನು ಎಲ್ಲ ಜಾತಿಯವರು ಮುಟ್ಟಬಹುದಾದರೆ ಪರಿಶಿಷ್ಟರು (ಹೊಲೆ ಮಾದಿಗ) ಯಾಕೆ ಮುಟ್ಟಬಾರದು? ಈ ಪ್ರಶ್ನೆಗಳಿಗೆ ಉತ್ತರ ಬುದ್ಧ, ಬಸವ ಅಂಬೇಡ್ಕರ್‌ರವರ ವಿಚಾರಗಳಲ್ಲಿ ಅಡಕವಾಗಿದೆ. ಆ ಕಾರಣಕ್ಕೆ ಇವರು ಸದಾ ಈ ನಾಡಿಗೆ ಪ್ರಸ್ತುತರಾಗಿರುತ್ತಾರೆ. ಎಚ್ಚರಕ್ಕೆ, ಪ್ರಗತಿಪರವಿಚಾರಕ್ಕೆ, ಆಂದೋಲನಕ್ಕೆ, ಸಮಸ್ಯೆಯಪರಿಹಾರಕ್ಕೆ, ಪ್ರಜಾಪ್ರಭುತ್ವದ ಯಶಸ್ಸಿಗೆ ಇವರು ಸ್ಫೂರ್ತಿಯಾಗುತ್ತಾರೆ.

ದಲಿತರ ವಿಮೋಚನೆಯ ಕಾರ್ಯತಂತ್ರ ಬೌದ್ಧ ಧರ್ಮ :

ಇಡೀ ಜೀವರಾಶಿಯಲ್ಲಿಯೇ ಮಾನವ ಅತ್ಯುನ್ನತ ಜೀವಿ. ಜ್ಞಾನ ಜೀವಿ. ಈ ಅಂಶವನ್ನು ತತ್ವಜ್ಞಾನ ಮತ್ತು ವಿಜ್ಞಾನಗಳು ಸಾಬೀತುಪಡಿಸಿವೆ. ತನ್ನ ಜ್ಞಾನಬಲದಿಂದ ಮಾನವ ಅಪಾರ ಪ್ರಗತಿ ಸಾಧಿಸಿದ್ದಾನೆ. ವಿಜ್ಞಾನದಿಂದ ಅನೇಕ ಹೊಸ ಆವಿಷ್ಕಾರಗಳನ್ನು ಮಾಡಿದ್ದಾನೆ. ಅದರೊಂದಿಗೆ ಮಾರಕ ಅಸ್ತ್ರಗಳನ್ನು ಉತ್ಪಾದಿಸಿ ಸರ್ವ ಮಾನವರ ವಿನಾಶಕ್ಕೂ ಸಿದ್ಧವಾಗಿದ್ದಾನೆ. ಜೊತೆಗೆ ತಾತ್ಕಾಲಿಕ ಸುಖಕ್ಕಾಗಿ, ಆಶೆ, ಆಕಾಂಕ್ಷೆಗಳ ಮಿತಿ ಮೀರಿದ್ದಾನೆ. ಆ ಸುಖಯಾಂತ್ರಿಕವಾಗುತ್ತದೆ. ಸುಖ, ಸಂಪತ್ತು, ಅಭಿವೃದ್ಧಿ ಸಂಕಷ್ಟಕ್ಕೆ ನೂಕುತ್ತಿದೆ. ಇಂದಿನ ಮಾನವ ಸ್ವಾರ್ಥಿಯಾಗಿ ಸ್ವ-ಸುಖಕ್ಕೆ ಪ್ರಾಶಸ್ತ್ಯ ನೀಡಿ ಸಹಬಾಳ್ವೆ, ಭ್ರಾತೃತ್ವ, ಸರ್ವಜನ ಹಿತ, ಸೇವಾ ಮನೋಭಾವ, ನೀತಿ ನಿಯಮ ಕಣ್ಮರೆಯಾಗುತ್ತಿವೆ. ಒಟ್ಟಾರೆ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇದರೊಂದಿಗೆ ಮತಾಂಧತೆ, ಡಂಭಾಚಾರ ಭಾರತೀಯರಲ್ಲಿ ಬೆಳೆದು ಅಮಾನವೀಯ ಆಚರಣೆಗಳು ಸ್ಥಿರಗೊಳ್ಳುತ್ತಿವೆ. ವ್ಯಕ್ತಿ, ಸಮಾಜ, ರಾಷ್ಟ್ರದಲ್ಲಿ ಅಮಾನವೀಯ ನಡುವಳಿಕೆಗಳು ವಿಸ್ತರಿಸುತ್ತಿವೆ. ಇಡೀ ವ್ಯವಸ್ಥೆಯಲ್ಲಿ ನಿರಾಶಾದಾಯಕ, ನಿರ್ದಯದ, ನಿಷ್ಕರುಣೆಯ ಮತಾಂಧತೆ ಬೆಳೆದು ಬರುತ್ತದೆ. ಅನಾದಿ ಕಾಲದಿಂದಲೂ ಇರುವ ಅಮಾನವೀಯ ಆಚರಣೆಗಳು ಯಾವ ಬಗೆಯ ಬೋಧನೆಗಳಿಗೂ ಮಣಿಯದೇ ಸ್ಥಿರವಾಗಿವೆ. ಈ ಬಗೆಯ ಅಮಾನುಷ ವರ್ತನೆಗಳನ್ನು ಬುದ್ಧ ಅರಿತು, ಅನುಭವಿಸಿ, ಪರಿಹಾರ ಸೂಚಿಸಿರುವನು. ಸಾಮಾಜಿಕ ಸುಧಾರಣೆಯ ಮೊದಲ ಪ್ರಯತ್ನ ಮಾಡಿದ ಮಹಾಪುರುಷ 12ನೇ ಶತಮಾನದಲ್ಲಿ ಬಸವಣ್ಣನವರು ಮಾನವ ಅಸಮಾನತೆಯನ್ನು ಅದರ ಅವೈಜ್ಞಾನಿಕ ವಿಂಗಡಣೆಗಳನ್ನು ತಾರ್ಕಿಕವಾಗಿ ಅಲ್ಲಗಳೆದರು. ಮಾನವ ನಡುವಳಿಕೆಗಳಲ್ಲಿ ಮಾರ್ಪಾಡು ತರಲು ಕ್ರಮಸಾಧ್ಯವಾದ ನಿರಂತರ ಹೋರಾಟ ಮಾಡಿದರು. ಅವರೂ ಸಂಪೂರ್ಣ ಸುಧಾರಿಸಲು ಸಾಧ್ಯವಾಗಲಿಲ್ಲ. ಇಂದು ಸಹಿತ ಅಮಾನವೀಯ ಕರಾಳ ಸುಳಿಯಲ್ಲಿ ಸಿಕ್ಕಿದ್ದೇವೆ. ವಿಮೋಚನೆ ಕಾಣದೇ ಜನ ಅಸಹಾಯಕರಾಗಿದ್ದಾರೆ. ಈ ಮಧ್ಯೆ ಡಾ।ಬಿ.ಆರ್.ಅಂಬೇಡ್ಕರ್‌ರವರು ತಮ್ಮ ಅಪಾರ ಜ್ಞಾನಾನುಭವ ಹೋರಾಟದ ಫಲವಾಗಿ ಭಾರತ ಸಂವಿಧಾನ ರಚಿಸಿ ಕೊನೆಗೆ 1956 ರಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಆದರೆ ಇಂದು ನಮ್ಮ ಮುಂದಿರುವುದು ಅವರ ವಿಚಾರಗಳು ಮಾತ್ರ. ಆ ವಿಚಾರಗಳ ಬೆಳಕಿನಲ್ಲಿ ಮುನ್ನಡೆಯಬೇಕಾಗಿದೆ.

ಡಾ।ಮೊಗಳ್ಳಿ ಗಣೇಶ್‌ರವರು ಅಗ್ನಿ ಪತ್ರಿಕೆಯ (30.102003) ತಕರಾರು 52 ಕಾಲಂನಲ್ಲಿ ಅಭಿಪ್ರಾಯಪಟ್ಟಿರುವಂತೆ ಬುದ್ಧತ್ವಕ್ಕೂ ದಲಿತತತ್ವಕ್ಕೂ ನೇರ ಸಂಬಂಧವಿದೆ. ದಲಿತತ್ವ ನಿಸರ್ಗಬದ್ಧವಾದದ್ದು. ದುಡಿಮೆಯ ಮೂಲಕ ಲೋಕವನ್ನು ಭಾವಿಸುವಂತಹ ಸೃಷ್ಟಿಶೀಲವಾದ ಆಚರಣೆಗಳಿಂದ ಸಮಾಜವನ್ನು ಬೆಸೆಯುವಂಥದ್ದು. ದಲಿತತ್ವಕ್ಕೆ ಸಂಸ್ಕೃತಿಯ ಕರುಳ ಬಳ್ಳಿಯ ಸಂಬಂಧವಿದೆ. ಈ ಬಂಧುತ್ವವನ್ನು ಜನಪದ ಸಮಾಜ ಆಚರಿಸಿಕೊಂಡು ಬಂದಿದೆ. ನೊಂದವರ ಕನಸು ಯಾವತ್ತೂ ಬೆಂಕಿಯಲ್ಲ. ಅದು ಬೆಳಕಿನ ದಾಹವಾಗಿ, ಧಾನ್ಯವಾಗಿ ಬದುಕಿಗೆ ಮಿಡಿಯುವಂಥದ್ದು. ಹಾಗಾಗಿಯೇ ಬುದ್ಧತ್ವಕ್ಕೆ ದಲಿತತ್ವದ ಕನಸುಗಳಿರುವುದು. ಬುದ್ಧ ಪೂರ್ವಿಕರ ಲೌಕಿಕದ ಸಂಕಟವನ್ನು, ದುಃಖವನ್ನು ಸಮಷ್ಠಿಯಲ್ಲಿ ಮಿಡಿಸಿ ದೇವರನ್ನು ನಿರಾಕರಿಸಿದ. ದೇವರಿಗಿಂತ ದೊಡ್ಡದು ಅಂತಃಕರಣವೆಂದ ದಯೆಯೇ ನಿಜವಾದ ಧರ್ಮದ ಧ್ಯಾನವೆಂದ. ಅದನ್ನೇ ಬಸವಣ್ಣನೂ ನುಡಿದ. ವಚನಕಾರರಿರಲಿ, ಭಕ್ತಿಪಂಥದ ದಾಸರಿರಲಿ, ಹಳ್ಳಿಗಾಡಿನ ಹಾದಿಬೀದಿಯ ತತ್ವಪದಕಾರರಿರಲಿ, ಕೊನೆಗೆ ಜನಪದ ಹಾಡುಗಾರರಿರಲಿ ಇವರೆಲ್ಲ ಆದಿಮದ ದಲಿತತ್ವವನ್ನೇ ಭಿನ್ನ ರಾಗಗಳಲ್ಲಿ ಹಾಡಿದರು. ಬುದ್ಧತ್ವಕ್ಕೆ ನೊಂದವರ ಒಡಲಾಳದ ಸಂಕಟದ ಅರಿವಿದ್ದ ಕಾರಣದಿಂದಲೇ

ಆದು ದಲಿತರಿಗೆ ಸೂಕ್ತವಾದ ಧರ್ಮ ಎಂದು ಅಂಬೇಡ್ಕರ್ ಅವರು ತೀರ್ಮಾನಿಸಿದ್ದು, ಗರ್ಭದಿಂದ ಬಂದದ್ದು, ದಲಿತತ್ವ ಎನ್ನುವುದು ನಿಸರ್ಗದಷ್ಟೆ ಸಹಜವಾದ ಆಲೋಚನೆ.[14] ಪ್ರಸ್ತುತ ದಲಿತರು ಯಾಕೆ? ಬುದ್ಧ ತತ್ವಕ್ಕೆ ಮಾರು ಹೋಗುತ್ತಿದ್ದಾರೆ ಎನ್ನುವುದಕ್ಕೆ ಸ್ಪಷ್ಟ ಉತ್ತರದಂತೆ ಡಾ। ಮೊಗಳ್ಳಿ ಗಣೇಶ್ ರವರ ಅಬಿಪ್ರಾಯವಿದೆ. ಈ ನಿಟ್ಟಿನಲ್ಲಿ ನನ್ನ ಅಧ್ಯಯನದ ವ್ಯಾಪ್ತಿಯನ್ನು ವಿಶ್ಲೇಷಿಸಿಕೊಂಡು ಬುದ್ಧ, ಬಸವ, ಅಂಬೇಡ್ಕರ್‌ರವರ ದಲಿತ ಚಿಂತನೆ ಹಾಗೂ ವಿಮೋಚನಾ ಯತ್ನದ ಪರಿಕಲ್ಪನೆಗಳನ್ನು ಪರಿಭಾವಿಸಿಕೊಂಡು ಈ ಪ್ರಬಂಧವನ್ನು ವಿಸ್ತರಿಸಿಕೊಳ್ಳಲು ಯತ್ನಿಸಿರುವೆ.

ವಿಶ್ವಶಾಂತಿಗೆ ಮಾರ್ಗಸೂತ್ರವಾಗಿರುವ ಪಂಚಶೀಲ ತತ್ವಗಳು ಜಗತ್ತಿನಾದ್ಯಂತ ಅನುಷ್ಠಾನಗೊಳ್ಳಲು ದಾರಿ ಕಾಯುತ್ತಿವೆ. ಇವು ಹೆಚ್ಚಾಗಿ ಬೌದ್ಧತತ್ವಗಳನ್ನು ಆಧರಿಸಿ ರೂಪಾಂತರಗೊಳ್ಳುತ್ತಾ ಜಗತ್ತಿನ ಅನೇಕ ರಾಷ್ಟ್ರಗಳ ಜನ ಅವರದೇ ಆದ ರೀತಿಯಲ್ಲಿ ಬೌದ್ಧ ಧರ್ಮವನ್ನು ಅನುಸರಿಸುತ್ತಿರುವರು. ಸಂಖ್ಯೆ ದೃಷ್ಟಿಯಿಂದ ಅವಲೋಕಿಸಿದಾಗ ಜಗತ್ತಿನ ಆರು ಜನರಲ್ಲಿ ಇಂದು ಒಬ್ಬ ಬೌದ್ಧನಿರುವುದು ಕಂಡು ಬರುತ್ತದೆ. ಭಾರತದಲ್ಲಿ ಬೌದ್ಧಧರ್ಮದ ಮಧ್ಯಮ ಮಾರ್ಗ ಜನಸಮುದಾಯವನ್ನು ಬೆಸೆಯುವ ಕೆಲಸ ಮಾಡುತ್ತಿದೆ. ಸ್ವಾಮಿ ಧರ್ಮತೀರ್ಥರು ಹಿಂದೂ ಸಾಮ್ರಾಜ್ಯಶಾಹಿ ಇತಿಹಾಸ ಎಂಬ ಗ್ರಂಥದಲ್ಲಿ ಹಿಂದೂಧರ್ಮ, ಧಾರ್ಮಿಕ ನೆಲೆಗಿಂತ ರಾಜ್ಯಾಧಿಕಾರದ ಹಿತಾಸಕ್ತಿಯನ್ನೆ ಹೊಂದಿರುವ ಸ್ವಭಾವವುಳ್ಳದ್ದಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಆದ್ದರಿಂದಲೇ ಇಂದಿಗೂ ಕೂಡ ಜಾತಿಗಳನ್ನು ಬಿಟ್ಟು ಈ ದೇಶದಲ್ಲಿ ರಾಜಕಾರಣ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ವಾಮಿ ಧರ್ಮತೀರ್ಥರು ಹೇಳುವಂತೆ ಬುದ್ಧ ಧಮ್ಮ, ಭಾರತದ ಧಮ್ಮ, ಏಕೆಂದರೆ ಬುದ್ಧ ಭಾರತೀಯ ಶಾಕ್ಯ ವಂಶದ ಭಾರತೀಯ ಅರಸರ ಮಗ, ಭಾರತೀಯ ಚಕ್ರಾಧಿಪತ್ಯಗಳಲ್ಲೂ, ಸಾಮ್ರಾಜ್ಯಗಳಲ್ಲೂ ಕಾಣಿಸಿಕೊಂಡ ರಾಷ್ಟ್ರೀಯ ಜಾಗೃತಿಗೆ ಬುದ್ಧಧಮ್ಮವೇ ಮೂಲ ಸ್ಪೂರ್ತಿ. ಒಂದು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಅದು ಈ ದೇಶದ ಹಣೆಬರಹವನ್ನು ತಿದ್ದಿತು. ಮೊಟ್ಟಮೊದಲ ಬಾರಿಗೆ ಬುದ್ಧಧಮ್ಮ ಸಮಾನವಾದ ಸಾಂಸ್ಕೃತಿಕ ಸಮನ್ವಯ ಮತ್ತು ಸಂಘಟನೆಯಿಂದ ಭಾರತವನ್ನು ಒಗ್ಗೂಡಿಸಿತು. ಬ್ರಾಹ್ಮಣಧರ್ಮ ಪ್ರತಿಷ್ಠಿತ ವರ್ಗಗಳ ಧರ್ಮವಾದರೆ ಬುದ್ಧಧಮ್ಮ ಜನಸಾಮಾನ್ಯರ ಮೊಟ್ಟಮೊದಲ ಧರ್ಮ[15] ಎಂದು ಹೇಳುತ್ತಾರೆ. ಇಂತಹ ರಾಷ್ಟ್ರೀಯತೆಯ ಶಕ್ತಿ ಕೇಂದ್ರವಾದ ದರ್ಮಕ್ಕೆ ತಾವು ಐದು ಲಕ್ಷ ಅನುಯಾಯಿಗಳೊಂದಿಗೆ ಮತಾಂತರಗೊಂಡು ಬೌದ್ಧಧರ್ಮವನ್ನು ಮರಳಿ ಭಾರತಕ್ಕೆ ತಂದ ಡಾ।ಅಂಬೇಡ್ಕರ್‌ರು ರಾಷ್ಟ್ರೀಯತೆಯ ನೆಲೆಯಲ್ಲಿಯೇ ನಾನು ಭಾರತವನ್ನು ಬೌದ್ಧಮಯ ಮಾಡುತ್ತೇನೆ ಎಂದು ಹೇಳಿರುವುದರ ಮೂಲ ಕಾಳಜಿಯಾಗಿದೆ.

ಡಾ।ಅಂಬೇಡ್ಕರ್‌ರವರು ಬೌದ್ಧಧರ್ಮಕ್ಕೆ ಮತಾಂತರಗೊಂಡು ಅವರದೇ ಆದ ಚಾರಿತ್ರಿಕ ವಿಶ್ಲೇಷಣೆಗಳ ಆಧಾರದ ಮೇಲೆ ಪರಿಕಲ್ಪಿಸಿದ ಬೌದ್ಧಧಮ್ಮವನ್ನು ದಲಿತವಿಮೋಚನೆಯ ಸಾಂಸ್ಕೃತಿಕ ಅಸ್ತ್ರವನ್ನಾಗಿ, ಮಾಧ್ಯಮವಾಗಿ ದಲಿತರಿಗೆ ಬಿಟ್ಟು ಹೋಗಿದ್ದಾರೆ. ಅವರ ಮಾದರಿಯನ್ನು ಅನುಸರಿಸುವ, ಅವರ ವಿಚಾರಗಳಿಂದ ಪ್ರೇರಣೆ ಪಡೆದು ಮುನ್ನಡೆಯುತ್ತಿರುವ ಅಸಂಖ್ಯಾತ ದಲಿತ ಹಿಂದುಳಿದ ಬಹುಜನರು ದಿನದಿಂದ ದಿನಕ್ಕೆ ಬೌದ್ಧ ಧರ್ಮಕ್ಕೆ ಹತ್ತಿರವಾಗುತ್ತಿದ್ದಾರೆ. ತಮ್ಮನ್ನು ತುಚ್ಛವಾಗಿ ಕಂಡು, ತಮ್ಮ ಅಭಿವೃದ್ಧಿಯ ಹಕ್ಕುಗಳನ್ನು ಕಸಿದುಕೊಂಡು, ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗೆ ಕಾರಣವಾದ ಯಜಮಾನೀ ಸಂಸ್ಕೃತಿಯ ಎಲ್ಲ ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸುತ್ತ ನಡೆದಿದ್ದಾರೆ. ಅಂಬೇಡ್ಕರ್‌ರವರು ಹೇಳಿದ ಸ್ಥಳಾಂತರ

ಧರ್ಮಾಂತರ ಮತ್ತು ನಾಮಾಂತರ ಸೂತ್ರವನ್ನು ತಮ್ಮ ಸಾಂಸ್ಕೃತಿಕ ಗುಲಾಮಗಿರಿಯ ಬಿಡುಗಡೆಗೆ ಸೂತ್ರವನ್ನಾಗಿಸಿಕೊಂಡಿದ್ದಾರೆ.

ಭಾರತೀಯ ಜಾತಿವ್ಯವಸ್ಥೆಯಲ್ಲಿ ಸಾವಿರಾರು ವರ್ಷಗಳಿಂದ ಶೋಷಣೆಗೊಳಗಾದ ದಲಿತರ ಮಾನವ ಹಕ್ಕುಗಳ ಬೇಡಿಕೆ ಇವತ್ತು ವಿಶ್ವಸಂಸ್ಥೆಯ ಮೆಟ್ಟಿಲೇರಿದೆ. ದಲಿತರಲ್ಲಿಯೇ ಹಲವಾರು ಉಪಜಾತಿಗಳು ದೇಶಾದ್ಯಂತ 1500 ಕ್ಕಿಂತಲೂ ಹೆಚ್ಚಿಗೆ ಇವೆ ಎಂದು ಅಂದಾಜು ಮಾಡಲಾಗಿದೆ. ಸಂವಿಧಾನದ ಸೌಲಭ್ಯಗಳನ್ನು ಪಡೆಯುವಲ್ಲಿ ದಲಿತರಲ್ಲಿಯೇ ಪೈಪೋಟಿ ಪ್ರಾರಂಭವಾಗಿ ಮೀಸಲಾತಿಯಲ್ಲಿಯೇ ಆಂತರಿಕ ಸಮತಲ ಮೀಸಲಾತಿಗೆ ಬೇಡಿಕೆಗಳು ಪ್ರಾರಂಭವಾಗಿದೆ. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳಲ್ಲಿ ಒಳಮೀಸಲಾತಿ ಹೋರಾಟಗಳು ಪ್ರಾರಂಭಗೊಂಡಿವೆ. ಜಾತಿಯ ಕ್ರೌರ್ಯದ ವಿವಿಧ ಆಯಾಮಗಳು ರಾಜಕೀಕರಣಗೊಳ್ಳುತ್ತಿವೆ. ಇದರೊಂದಿಗೆ ಪ್ರತಿಶತ 30ರಷ್ಟಿರುವ ದಲಿತರು ಸ್ವಾತಂತ್ರ್ಯದ ಐದು ದಶಕಗಳ ನಂತರವೂ ಹೇಳಿಕೊಳ್ಳುವ ಅಭಿವೃದ್ಧಿಯನ್ನು ಸಾಧಿಸಿಲ್ಲ. ಆದರೆ ಶೋಷಿಸುವ ಶಕ್ತಿಗಳ ವಿರುದ್ಧ ಸಂಘಟನಾತ್ಮಕ ಹೋರಾಟಗಳು ನಮ್ಮ ಚರಿತ್ರೆಯಲ್ಲಿವೆ. ಆ ದಿಸೆಯಲ್ಲಿ ತಳ ಸಮುದಾಯಗಳ ಕುರಿತು ಇತ್ತೀಚೆಗಷ್ಟೇ ಅಧ್ಯಯನಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಬೌದ್ಧಧರ್ಮ ಹೆಚ್ಚು ಪ್ರಸ್ತುತವೆನಿಸುತ್ತದೆ ಈ ಎಲ್ಲ ಕಾರಣಗಳಿಂದಾಗಿ.

ದಲಿತ ವಿಮೋಚನೆಯ ಸಾಂಸ್ಕೃತಿಕ ಗುರುತಾಗಿ ಬೌದ್ಧಧರ್ಮ ಬೆಳೆದು ಬರುತ್ತಿದೆ. ಈ ಧರ್ಮ ಪ್ರಸ್ತುತ ದಲಿತರಿಗೆ ಸಾಂಸ್ಕೃತಿಕ ಗುರುತು (Cultural Identity) ಒಡಮೂಡಿಸಿದೆ. ಆದರೊಂದಿಗೆ ದಲಿತ ವಿಮೋಚನೆಗೆ ಅಂಬೇಡ್ಕರ್ ರವರು ಪ್ರತಿಪಾದಿಸಿದ ಬೌದ್ಧಧರ್ಮ ಮತಾಂತರ ಚಳುವಳಿ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಭಾರತದಾದ್ಯಂತ, ಕರ್ನಾಟಕದಲ್ಲೂ ಮತಾಂತರಗಳು ಜರುಗುತ್ತಿವೆ. ಇತ್ತೀಚಿನ ಐತಿಹಾಸಿಕ ಧರ್ಮಾಂತರ 2003, ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಜರುಗಿರುವುದು ಬೌದ್ಧಧರ್ಮದ ಪ್ರಸ್ತುತತೆ ಯನ್ನು ಸಾರಿ ಹೇಳುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ದಲಿತ ವಿಮೋಚನೆಗೆ ಅಂಬೇಡ್ಕರ್‌ರವರು ಪ್ರತಿಪಾದಿಸಿದ ಬುದ್ಧಧಮ್ಮದ ಜೀವನದಲ್ಲಿ ಅವರ ಬದುಕಿನಲ್ಲಿ ಹೊಸ ಆಶಾಕಿರಣ ಬೆಳೆದು ಬರಲು ಕಾರಣವಾಗಿದೆ. ದಲಿತರ ವಿಮೋಚನೆಗೆ ಇದೇ ಪಥ ಸೂಕ್ತವೆಂದು ಪ್ರತಿಪಾದಿಸಿದ ಸಾಂಸ್ಕೃತಿಕ ಮಾದರಿಯ ಸ್ವಾವಲಂಬನೆಯನ್ನು ತರಬಲ್ಲದು. ಇದೇ ಅಂಬೇಡ್ಕರ್‌ವಾದದ ತಿರುಳು ಕೂಡ. ಈ ಮಾದರಿಯಲ್ಲಿಯೇ ಪ್ರಸ್ತುತ ದಲಿತರು ಸ್ವಾಭಿಮಾನ, ಮಾನವ ಘನತೆಗೆ ಸಿದ್ಧಾಂತವನ್ನು ರೂಪಿಸಿಕೊಂಡು ತಮ್ಮ ಹಕ್ಕೊತ್ತಾಯಪಡಿಸುತ್ತಿರುವುದನ್ನು ಭಾರತದಲ್ಲಿ ಪ್ರಸ್ತುತ ಕಾಣಬಹುದಾಗಿದೆ.

ಅಂಬೇಡ್ಕರ್‌ರವರು ಬೌದ್ಧಧರ್ಮವನ್ನು ಸ್ವೀಕರಿಸಿ, ದಲಿತರ ವಿಮೋಚನೆಗೆ ಬೌದ್ಧಧರ್ಮವನ್ನು ಒಂದು ಕಾರ್ಯತಂತ್ರವನ್ನಾಗಿ ಬಳಸಿಕೊಂಡರು, ದಲಿತರ ಬಿಡುಗಡೆ ವ್ಯಕ್ತಿಯಿಂದ ಸಾಧ್ಯವಾಗುವುದಿಲ್ಲ, ಅದು ಸಾಮೂಹಿಕ ಶಕ್ತಿಯಿಂದ ಮಾತ್ರ ಸಾಧ್ಯ. ಆ ಕಾರಣಕ್ಕಾಗಿ ದಲಿತರಲ್ಲಿ ಎಚ್ಚರವುಂಟು ಮಾಡುವುದರೊಂದಿಗೆ ದಲಿತರ ಸಂಘಟನೆಗೆ ಕೂಡ ಬೌದ್ಧಧರ್ಮದ ಮತಾಂತರವನ್ನು ಅಂಬೇಡ್ಕರ್‌ರರು ಪ್ರತಿಪಾದಿಸಿದರು. ಅಷ್ಟೇ

ಅಲ್ಲ. ಧರ್ಮವನ್ನು ಕುರಿತು ಸಂಶೋಧಿಸಿದ ಅಂಬೇಡ್ಕರ್‌ರವರು ಧರ್ಮವನ್ನು ಒಂದು ಸಾಮಾಜಿಕ ಶಕ್ತಿಯಾಗಿ ಅವರು ಗ್ರಹಿಸಿದರು.

ಧರ್ಮವನ್ನು ಕುರಿತು ಅಂಬೇಡ್ಕರ್‌ರವರ ಅಭಿಪ್ರಾಯವನ್ನು ನಾವಿಲ್ಲಿ ಪರಿಶೀಲಿಸಬಹುದಾಗಿದೆ. ಯಾರು ಧರ್ಮದ ಮಹತ್ವವನ್ನು ಅಲ್ಲಗಳೆಯುತ್ತಾರೋ, ಅವರು ಜೀವಂತ ತಂತಿ (Live Wire)ಯನ್ನು ನಿರ್ಲಕ್ಷಿಸಿದ ಹಾಗೆ.[16] ಲೌಕಿಕ ಪ್ರಗತಿಯನ್ನು ನಿರ್ಧರಿಸುವ ಮತ್ತು ಅದನ್ನು ಮಂಜೂರಿಸುವ ಶಕ್ತಿ ಧರ್ಮಕ್ಕಿದೆ ಎಂಬುದನ್ನು ವಿವರಿಸುತ್ತಾರೆ. ಅಂಬೇಡ್ಕರ್‌ರವರು ಎಲ್ಲಾ ಧರ್ಮಗಳು ಒಳ್ಳೆಯದೆಂದರೆ ಅದು ಧರ್ಮಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡದೇ ಹೇಳಿದ ಹಾಗೆ.[17] ಎಂದು ಅಭಿಪ್ರಾಯಪಡುತ್ತಾರೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯದ, ಅವೈಜ್ಞಾನಿಕ ಮತ್ತು ಅಲೌಕಿಕ ವರ್ತನೆಗಳನ್ನು ಪ್ರತಿಪಾದಿಸುವ ಹಿಂದೂಧರ್ಮವನ್ನು ಅಂಬೇಡ್ಕರ್ ರವರು ಸ್ಪಷ್ಟವಾಗಿ ನಿರಾಕರಿಸಿದರು.[18] ಅದು ಅಸಾಮಾನ್ಯ ಮನುಷ್ಯ ಸ್ವರ್ಗ ಮತ್ತು ಸಾಮಾನ್ಯ ಮನುಷ್ಯನ ನರಕವಾಸ[19] ಎಂಬ ಅಂಬೇಡ್ಕರ್‌ರವರ ಮಾತನ್ನು ಪ್ರೊ.ಕೆ. ರಾಘವೇಂದ್ರರಾವ್‌ರವರು ಉಲ್ಲೇಖಿಸುತ್ತಾರೆ.

ದಲಿತರು ನಿಜವಾಗಿಯೂ ಶೋಷಣೆಯಿಂದ ಮುಕ್ತಗೊಳ್ಳಬೇಕಾದರೆ ಅಂಬೇಡ್ಕರ್‌ರವರು ಪುನರ್ ವ್ಯಾಖ್ಯಾನಿಸಿದ ಭಾರತದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ವ್ಯಕ್ತಪಡಿಸಿರುವ ಮಾದರಿ ಮತ್ತು ಕಾರ್ಯತಂತ್ರವನ್ನು ಅರಿಯಬೇಕಾಗುತ್ತದೆ. ಅಂಬೇಡ್ಕರ್‌ರವರು ಭಾರತದ ಚರಿತ್ರೆಯ ಪೂರ್ವಾಗ್ರಹದ, ತಪ್ಪು ಮಾಹಿತಿಗಳ, ತೇಲುವ ಸಿದ್ಧಾಂತಗಳನ್ನು ನಿರ್ಲಕ್ಷಿಸಿದರು. ಪ್ರಾಚೀನ ಭಾರತದ ಬೇರೆಬೇರೆ ಭಾಷೆಯಲ್ಲಿದ್ದ ಕೃತಿಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದರು. ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಮಾನವನ ವಿಮೋಚನೆಗೆ ನಡೆಸಿದ ಹೋರಾಟಗಳ ಚರಿತ್ರೆಗಳನ್ನು ಅಸಮಾನತೆಯ ವಿರುದ್ಧ ಅವರು ಸಾರಿದ್ದ ಪ್ರತಿಭಟನೆಗಳನ್ನು ಅರ್ಥ ಮಾಡಿಕೊಂಡು ಭಾರತದ ಅಸ್ಪೃಶ್ಯರ ವಿಮೋಚನೆಗೆ ಮಾರ್ಗೋಪಾಯಗಳನ್ನು ಕಂಡುಹಿಡಿದರು. ಅಂಬೇಡ್ಕರ್‌ರವರು ಜಾತಿವ್ಯವಸ್ಥೆ ಹಿಂದೂಧರ್ಮಗಳ ಕುರಿತು ಸರಳೀಕರಿಸಿದ ಧಾರ್ಮಿಕ ಮಂಜೂರಿಗಳನ್ನು (Religious Sanctions) ಸರ್ವಮಾನ್ಯ ಮಾಡಲು ಪ್ರಯತ್ನಿಸಿದ ಅಧ್ಯಯನಗಳನ್ನು ಹಿಂದೂ ಪಂಡಿತರು ವಿಶ್ಲೇಷಿಸಿದ ಚರಿತ್ರೆಯನ್ನು ನಿರಾಕರಿಸಿದರು. ಅವುಗಳ ತೀರ್ಮಾನಗಳನ್ನು ಖಡಾಖಂಡಿತವಾಗಿ ಟೀಕಿಸಿದರು. ಧರ್ಮಶಾಸ್ತ್ರಗಳ ತಳಬುಡಗಳನ್ನು ಶೋಧಿಸಿ ಅಸಮಾನತೆಯ ಮೂಲಗಳನ್ನು ಅನಾವರಣಗೊಳಿಸುತ್ತ ಬಂದರು. ಹಿಂದೂಧರ್ಮವನ್ನು ಆಳರಸರ ಖಡ್ಗದ ಬಲದಿಂದ ನಡೆಸಿಕೊಂಡು ಅಸಂಖ್ಯಾತ ಜನರನ್ನು ಜಾತಿ ಆಧಾರದ ಮೇಲೆ ಖಾಯಂ ಗುಲಾಮಗಿರಿಗೆ ತಳ್ಳಿದ ಹುನ್ನಾರಗಳನ್ನು ತಮ್ಮ ಆಳವಾದ ಅಧ್ಯಯನಗಳಲ್ಲಿ ವಿಶ್ಲೇಷಿಸಿದರು. ಡಾ।ಡಿ.ಆರ್.ನಾಗರಾಜ್ ಅವರು ಗುರುತಿಸಿದಂತೆ ಎರಡು ರೀತಿಯ ಹಿಂಸೆಗಳನ್ನು ಅಂಬೇಡ್ಕರ್‌ರವರು ಅನಾವರಣಗೊಳಿಸುತ್ತಾರೆ. 1) ವಸಾಹತುಪೂರ್ವ ಸಮಾಜಗಳಿಗೆ ಅನ್ವಯಿಸುವ ಜ್ಞಾನ ಶಾಖೆಗಳ ಹಿಂಸೆ (Esistemological) 2) ರಾಷ್ಟ್ರ ಪ್ರಭುತ್ವದ ಹಿಂಸೆ (State Violence) ಇದಕ್ಕೆ ಪೂರಕವಾಗಿ ಡಾ।ಡಿ.ಆರ್.ನಾಗರಾಜ್ ಈ ಹಿಂಸೆಗಳನ್ನು ನಮ್ಮ ಸಮಾಜದ ಅಂತ್ಯಜರು ಇವತ್ತಿನ ಗ್ಲೋಬಲೈಸೇಷನ್ ಮತ್ತು ಆಧುನಿಕ ಜಗತ್ತಿನ ಸಂದರ್ಭದಲ್ಲೂ ತಮ್ಮದೇ ಆದ ಸಾಂಸ್ಕೃತಿಕ ಜಗತ್ತಿನ ಶ್ರೀಮಂತಿಕೆಯಿಂದ ಕಾರ್ಯ ತಂತ್ರಗಳಿಂದ ಎದುರಿಸಬೇಕಾಗಿದೆ.[20] ಎಂದು ಅಭಿಪ್ರಾಯಪಡುತ್ತಾರೆ. ಪ್ರಸ್ತುತ

ಇಂತಹ ಸಂದಿಗ್ಧ ಸ್ಥಿತಿಯಲ್ಲಿರುವ ದಲಿತರಿಗೆ ಬೌದ್ಧಧರ್ಮ ಅನಿವಾರ್ಯ ಹಾಗೂ ಅತ್ಯಗತ್ಯ. ಆ ಕಾರಣಗಳಿಗಾಗಿ ಅಂಬೇಡ್ಕರ್‌ರವರು ಅಸಮಾನತೆಯ ವ್ಯವಸ್ಥೆಗೆ ವಿರುದ್ಧವಾಗಿ ದಲಿತರನ್ನು ವಿಮೋಚನೆಯೆಡೆಗೆ ಪ್ರಜ್ಞೆಯಿಂದ ನಡೆಸುವ ಬೌದ್ಧಧರ್ಮವನ್ನು ಒಪ್ಪಿಕೊಂಡರು. ತಮ್ಮ ಐದು ಲಕ್ಷ ಅನುಯಾಯಿಗಳೊಂದಿಗೆ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಈ ಘಟನೆ ಜಗತ್ತಿನ ಇತಿಹಾಸದಲ್ಲಿಯೇ ಏಕಮೇವ ಬೃಹತ್ ಮತಾಂತರ ಘಟನೆಯಾಗಿದೆ. ಇಲ್ಲಿಯವರೆಗೂ ಬೇರೆ ಯಾವ ಭಾಗದಲ್ಲೂ ಇಂತಹ ಘಟನೆ ಜರುಗಿದ ಉದಾಹರಣೆಗಳಿಲ್ಲ.[21] ಬೌದ್ಧ ಸಾಂಸ್ಕೃತಿಕ ಆವರಣದಲ್ಲಿ ಸಾಮಾನ್ಯ ಮನುಷ್ಯ ಕೂಡ ಬುದ್ಧತ್ವವನ್ನು ಗಳಿಸಿಕೊಳ್ಳಲು ಮುಕ್ತ ಅವಕಾಶವಿರುವುದನ್ನು ಅಂಬೇಡ್ಕರ್ ಗುರುತಿಸಿದ್ದರು. ಅಂಬೇಡ್ಕರ್‌ರವರು ಪ್ರತಿಪಾದಿಸಿದ ಬೌದ್ಧ ಧರ್ಮದಲ್ಲಿ ಬುದ್ಧಧರ್ಮ ಮತ್ತು ಸಂಘ ಈ ಮೂರು ಮುಖ್ಯ ಆಯಾಮಗಳಿಗೆ ಚಲನಶೀಲತೆ ಇದೆ. ಆದಕ್ಕಾಗಿಯೇ ಅಂಬೇಡ್ಕರ್‌ರವರ ಬೌದ್ಧಧರ್ಮವನ್ನು ಜೀವಂತ ಬೌದ್ಧಧರ್ಮ ತಮ್ಮದು ನವಯಾನ ಎಂದು ಕರೆದಿರುವುದು. ಬುದ್ಧ ಮತ್ತು ಬೌದ್ಧಧರ್ಮವನ್ನು ಮರು ವಿಶ್ಲೇಷಿಸಿ, ಪ್ರಸ್ತುತ ಕಾಲಘಟ್ಟದಲ್ಲಿ ವೈಜ್ಞಾನಿಕವಾಗಿ ಪುನರ್ ವ್ಯಾಖ್ಯಾನಿಸಿದರು. ಮೂಲ ಬೋಧನೆಗಳಿಗೆ ಧಕ್ಕೆಯಾಗದಂತೆ ಪರಿಷ್ಕರಿಸಿ ಬುದ್ಧ ಮತ್ತು ಅವನ ಧರ್ಮ ಎಂಬ ಕೃತಿ ರಚಿಸಿದರು.

ಬೌದ್ಧಧರ್ಮಕ್ಕೆ ಅಂಬೇಡ್ಕರ್‌ರವರು ಮತಾಂತರಗೊಂಡಿದ್ದು ಕೇವಲ ಪ್ರತಿಭಟನಾತ್ಮಕ ನೆಲೆಯದ್ದಾಗಿರಲಿಲ್ಲ. ಬದಲಾಗಿ ಶೋಷಿತ ದಲಿತರಿಗೆ ಧಾರ್ಮಿಕ, ಸಾಂಸ್ಕೃತಿಕ ಪರ್ಯಾಯವನ್ನು ಸೃಷ್ಟಿಸುವುದಾಗಿತ್ತು. ಅಂಬೇಡ್ಕರ್‌ರಿಗೆ ಬೌದ್ಧಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ ಸಿಕ್ಕಿದ್ದ ಚಾರಿತ್ರಿಕ ಸಮರ್ಥನೆ. ಚಾರಿತ್ರಿಕವಾದ ನೀತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ಹೆಚ್ಚು ದೊಡ್ಡ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಪ್ರಯತ್ನ ಅದು. ದಲಿತರಿಗೆ ದೊಡ್ಡ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿ ಕೊಡುವ ಮಹಾನ್ ಪ್ರಯತ್ನದ ಭಾಗ ಅದು[22] ಎಂದು ಡಿ.ಆರ್.ನಾಗರಾಜ್‌ರವರು ವ್ಯಾಖ್ಯಾನಿಸುತ್ತಾರೆ. ಬೌದ್ಧಧರ್ಮದ ಮಾನವೀಯ ಅಂಶಗಳು ಇಂದು ಕೂಡ ಬದುಕಿನ ಜೀವಸತ್ವವಾಗಿ ಸ್ವೀಕರಿಸಬೇಕಾದ ಅಗತ್ಯವಿದೆ ಎಂದೆನಿಸುತ್ತದೆ.

ಡಾ|ಡಿ.ಆರ್.ನಾಗರಾಜರವರು ಡಾ|ಬಾಬಾಸಾಹೇಬ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಶತಮಾನಗಳಿಂದ ಅಂಟಿದ ಕೀಳರಿಮೆ ತೊರೆಯಲು, ಅಸ್ಪೃಶ್ಯನನ್ನು ಒಂದು ಉದಾತ್ತ ಸಂಸ್ಕೃತಿಯ ಘಟಕವೆಂದು ತನ್ನನ್ನು ತಾನು ಹಿರಿದಾಗಿ ತಿಳಿದುಕೊಳ್ಳಲು ಚರಿತ್ರೆಯಿಂದ ಪ್ರೇರಿತನಾಗಲು ಆಕರಗಳನ್ನು ಮೂಲಗಳನ್ನು ಶೋಧಿಸಿದರೆಂದು ಅವರು ಅವರ ಬೌದ್ಧಧರ್ಮ ಮತಾಂತರ ಪ್ರಕ್ರಿಯೆಗಳನ್ನು ವ್ಯಾಖ್ಯಾನಿಸುತ್ತಾರೆ. ಅವರು ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಅಂಬೇಡ್ಕರ್ ವಿಚಾರಧಾರೆ ಒಂದು ವಿಮರ್ಶಾತ್ಮಕ ಪೀಠಿಕೆ ಎಂಬ ಲೇಖನದಲ್ಲಿ ಅಂಬೇಡ್ಕರ್‌ರವರ ಪುಸ್ತಕವನ್ನು ಉಲ್ಲೇಖಿಸುತ್ತಾ ಸಮಾನತೆ ಮತ್ತು ಸಹೋದರತೆ ಎಂಬೆರಡು ಮಾನವೀಯ ಮೌಲ್ಯಗಳನ್ನು ಹಿಂದೂಧರ್ಮ ಎಲ್ಲ ಹಂತಗಳಲ್ಲಿ ಹತ್ತಿಕ್ಕುತ್ತದೆ. ಮಾನವ ಮಾನವನನ್ನು ಕಿತ್ತು ತಿನ್ನುವುದೇ ಹಿಂದೂ ಧಾರ್ಮಿಕತೆಯ ನಿಜವಾದ ಅನುಭವ. ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಯನ್ನು ತೆಗೆದು ಬಿಟ್ಟರೆ ಹಿಂದೂ ಧರ್ಮಕ್ಕೆ ಪ್ರತ್ಯೇಕವಾಗಿ ಅಸ್ತಿತ್ವವೇ ಇಲ್ಲ ಎಂಬುದು ಅಂಬೇಡ್ಕರ್‌ರವರ ವಾದ. ಈ ವಾದಕ್ಕೆ ಕೋಟ್ಯಾಂತರ ದಲಿತರ ನಿಜ ಜೀವನದ ನೋವಿನ ಅನುಭವದ ಹಿನ್ನೆಲೆಯಿತ್ತು. ಹಿಂದೂಧರ್ಮದ ಚೌಕಟ್ಟಿನೊಳಗೆ ಈ ಸಮಸ್ಯೆಗೆ ಪರಿಹಾರವನ್ನು ಕಾಣುವುದು ಅಂಬೇಡ್ಕರ್‌ರವರಿಗೆ ಶುದ್ಧ ಹುಚ್ಚುತನವಾಗಿ, ಪ್ರತಿಗಾಮಿ ಕ್ರಿಯೆಯಾಗಿ ಕಂಡಿರಬೇಕು.[23] ಹೀಗೆ

ಡಾ।ನಾಗರಾಜರವರು ಅಂಬೇಡ್ಕರ್‌ರವರ ಐತಿಹಾಸಿಕ ಆಯ್ಕೆಗೆ ಸ್ಪಷ್ಟ ಸಮರ್ಥನೀಯತೆಯನ್ನು ತೆರದಿಡುತ್ತಾರ. ಬೌದ್ಧಧರ್ಮವನ್ನೇ ಏಕೆ ಆಯ್ಕೆ ಮಾಡಿಕೊಂಡರು ಎಂಬುದರ ಸಮರ್ಥ ಹಿನ್ನೆಲೆಯನ್ನು ಡಾ।ಡಿ.ಆರ್. ನಾಗರಾಜ ಪ್ರಚುರಪಡಿಸುತ್ತಾರೆ. ಅಸ್ಪೃಶ್ಯರು ಕ್ರೈಸ್ತರಾದರೆ ಅವರಿಗೆ ಎಷ್ಟು ಶತಮಾನಗಳ ಪರಂಪರೆ ಇರಲು ಸಾಧ್ಯ? ಮುಸ್ಲಿಂರಾದರೂ ಅಷ್ಟೇ, ಸಿಖ್ಖರಾದರೂ ಅಷ್ಟೇ. ಸಂಸ್ಕೃತಿಯ ಎರಡನೆಯ ಕಲ್ಪನೆ ಎಂದರೆ, ಅದು ಚರಿತ್ರೆ, ಪರಂಪರೆ, ಅಂಬೇಡ್ಕರ್‌ರವರ ಉರಿಯುವ ಛಲ ಹೆಚ್ಚು ಆಳವಾದ ನೆಲೆಗೆ ತಲುಪುವ ಹಠ ಉಳ್ಳದ್ದು. ಭಾರತೀಯ ನಾಗರೀಕತೆಯ ಮೂಲಕ್ಕೆ ತಮ್ಮ ಹೋರಾಟವನ್ನು ಒಯ್ಯುವ ಹಠ ಅಂಬೇಡ್ಕರ್‌ರವರದ್ದು. ಹೀಗಾಗಿ ಅಸ್ಪೃಶ್ಯತೆಯ ಚರಿತ್ರೆ ಮತ್ತು ಬೌದ್ಧ ಧರ್ಮದ ನಡುವೆ ಹೊಸ ರೀತಿಯ ಸಂಬಂಧಗಳನು ಅಂಬೇಡ್ಕರ್ ಕಂಡರು. ಅಸ್ಪೃಶ್ಯ ಸಂಸ್ಕೃತಿ ಹೀನನಲ್ಲ. ಬದಲಾಗಿ ದೀರ್ಘವಾದ, ಉದಾತ್ತವಾದ ಹಿನ್ನೆಲೆ ಉಳ್ಳವನು ಎಂದು ವ್ಯಾಖ್ಯಾನಿಸುವ ಮೂಲಕ ವರ್ತಮಾನದ ಹೋರಾಟಕ್ಕೆ ಹೊಸ ನೆಲೆ ಕೊಡಲು, ಪ್ರಯತ್ನಿಸಿದರು[24] ಎಂದು ಅಭಿಪ್ರಾಯ ಪಡುತ್ತಾರೆ. ಈ ವಿಚಾರಗಳಲ್ಲಿ ಅಂಬೇಡ್ಕರ್‌ರವರು ಬೌದ್ಧ ಧರ್ಮ ಸ್ವೀಕರಿಸಿದ್ದು ಕೇವಲ ಧಾರ್ಮಿಕ ಹಿನ್ನೆಲೆಯಾಗಿರದೆ ದಲಿತರಿಗೆ ಭವಿಷ್ಯತ್ತಿನ ಹೋರಾಟಕ್ಕೆ ಒಂದು ನೆಲೆಗಟ್ಟು ಭದ್ರ ಬುನಾದಿ ನಿರ್ಮಿಸುವ ಕಳಕಳಿಯುಳ್ಳದ್ದು ಎಂಬುದು ಸ್ಪಷ್ಟವಾಗುತ್ತದೆ. ಇದರ ಜೊತೆಗೆ ಇನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಈ ಕೋಟ್ಯಾನುಕೋಟಿ ಶೋಷಿತರ ವಿಮೋಚನೆಗಾಗಿ ಸಮರಶೀಲತೆ ಒದಗಿಸುವುದು ಅಂಬೇಡ್ಕರ್‌ರವರ ಚಿಂತನೆ ಕೇಂದ್ರವಾಗಿತ್ತು ಎಂಬ ವಿಚಾರಗಳನ್ನು ಡಾ।ಡಿ.ಆರ್.ನಾಗರಾಜ ರವರು ಹೇಳುತ್ತಾರೆ. ಈ ಹೋರಾಟದ ಪ್ರತೀಕವಾಗಿ ದಲಿತರು ಬೌದ್ಧ ಧರ್ಮದೆಡೆಗೆ ಧಾವಿಸುತ್ತಿದ್ದಾರೆ, ಅಂಬೇಡ್ಕರ್‌ರವರು ಕಂಡುಕೊಂಡ ಈ ಮಾರ್ಗ ಇಂದು ಕೂಡ ಬಿಡುಗಡೆಗಾಗಿ ದಲಿತರು ಬೌದ್ಧಧರ್ಮದೊಂದಿಗೆ ಅನುಸಂಧಾನ ಮಾಡಿಕೊಂಡು ಬದುಕುತ್ತಿರುವುದು ಅವರ ಸಂಸ್ಕೃತಿಯ ಪ್ರತೀಕವೇ ಆಗಿದೆ.

ಶೋಷಿತ ವರ್ಗಕ್ಕೆ ಬೌದ್ಧಧರ್ಮ ಹಾಗೂ ಅಂಬೇಡ್ಕರ್ ಏಕೆ ಸದಾ ಪ್ರಸ್ತುತರಾಗಿರುತ್ತಾರೆ ಎಂದರೆ ಡಾ। ಅಂಬೇಡ್ಕರ್‌ರವರು ಪ್ರತಿಪಾದಿಸಿದ ಬೌದ್ಧಧರ್ಮದ ಸಾಂಸ್ಕೃತಿಕ ಐಡೆಂಟಿಟಿಯೇ ಇಂದು ಅಖಿಲ ಭಾರತ ಮಟ್ಟದಲ್ಲಿ ಮುಖ್ಯವಾಗಿರುವುದನ್ನು ಹಲವು ಅಧ್ಯಯನಗಳಲ್ಲಿ ದಾಖಲಿಸಿರುವುದನ್ನು ಕಾಣಬಹುದಾಗಿದೆ. ಕಳೆದ ಐವತ್ತು ವರ್ಷಗಳಿಂದ ದಲಿತರು ತಮಗೆ ದೊರೆತ ಶಿಕ್ಷಣ ಮತ್ತು ಪ್ರಜ್ಞೆಯಿಂದ ತಮ್ಮ ಸ್ಥಾನಮಾನದ ಬಗ್ಗೆ ಸಂವೇದನಾಶಿಲರಾಗಿರುವುದನ್ನು ಕಾಣುತ್ತೇವೆ. ದಲಿತರು, ತಮ್ಮ ಸಾಂಸ್ಕೃತಿಕ ಐಡೆಂಟಿಟಿಯನ್ನು ಸಾಧಿಸದಿದ್ದರೆ, ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ಸೇರಿಕೊಳ್ಳದೇ ಹೋದರೆ, ಈ ದೇಶಕ್ಕೇನೆ ದೊಡ್ಡ ಗಂಡಾಂತರವಿದೆ ಎನ್ನುವುದನ್ನು ದಲಿತ ಚಿಂತಕರು ಪ್ರತಿಪಾದಿಸುತ್ತ ಬಂದಿದ್ದಾರೆ. ಧರ್ಮವನ್ನು ತಮ್ಮ ಖಾಸಗಿ ಆಸ್ತಿ ಎಂಬಂತೆ ಶೋಷಣೆಯ ಸಾಧನವಾಗಿ ಬಳಸಿದ್ದನ್ನು ಸ್ವತಃ ಅಂಬೇಡ್ಕರ್‌ರವರೇ ಪ್ರಶ್ನಿಸುತ್ತ ಬಂದು ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವಗಳ ತಳಹದಿಯ ಮೇಲೆ ಉತ್ತಮ ಜೀವನಕ್ಕೆ ಕಾರಣವಾಗುವ ಒಂದು ವಿಶಿಷ್ಟ ಸ್ಥಾನದ ಗುರುತಿನ (Identity)[25] ಹುಡುಕಾಟದಲ್ಲಿದ್ದುದನ್ನು ಕಾಣುತ್ತೇವೆ. ಪುರೋಹಿತಶಾಹಿ ಪ್ರಣೀತ ಹಿಂದೂವ್ಯವಸ್ಥೆಯನ್ನು ಮೂಢನಂಬಿಕೆಗಳ ಆಗರವಾದ ಹಿಂದೂಧರ್ಮವನ್ನು ತ್ಯಜಿಸುವ ಅನಿವಾರ್ಯತೆ ಅವರ ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಮತ್ತು ಪ್ರಖರ ವೈಚಾರಿಕತೆಯ ಪಾತಳಿಯಲ್ಲಿ ರೂಪುಗೊಂಡಿರುವುದನ್ನು ನೋಡುತ್ತೇವೆ. ಅಂಬೇಡ್ಕರ್‌ರವರಿಗೆ ಧರ್ಮವೆಂಬುದು ಪರಿವರ್ತನೆಯ ಸಾಧನ, ಮನುಷ್ಯ ತನ್ನ ಸಾಮರ್ಥ್ಯಗಳನ್ನು ಎತ್ತರಿಸಿಕೊಂಡು ತನ್ನ ಮತ್ತು ತನ್ನ ಪರಿಸರದಲ್ಲಿ ಔನತ್ಯ ಸಾಧಿಸಲು ನೆರವಾಗುವ, ಸಾಮಾಜಿಕ ಪರಿವರ್ತನೆ ತರುವ ಕಾರ್ಯತಂತ್ರ ಅವರಿಗೆ ಧರ್ಮವೆಂಬುದು ಒಂದು ವ್ಯಕ್ತಿಯ ಖಾಸಗಿ

ವಿಷಯವಾಗಿರಲಿಲ್ಲ.[26] ಆದ್ದರಿಂದಲೇ ಅಂಬೇಡ್ಕರ್ ರವರು ಚಲನಶೀಲವಾದ ಪರಿವರ್ತನ ಶೀಲವಾದ ವ್ಯಕ್ತಿ ಔನತ್ಯದ ಮೂಲಕ ಸಮುದಾಯ ಔನತ್ಯ ಸಾಧ್ಯ ಎಂಬ ದೃಷ್ಟಿಕೋನ ಹೊಂದಿ ಆ ರೀತಿಯ ಸಾಧ್ಯತೆ ಬೌದ್ಧಧರ್ಮದಿಂದ ಮಾತ್ರ ಸಾಧ್ಯವೆಂಬ ಅಚಲ ನಂಬಿಕೆಯಿಂದ ಬೌದ್ಧಧರ್ಮವನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗಿದೆ.

ಇಲ್ಲಿ ಹಿಂದೂ, ಕ್ರೈಸ್ತ, ಇಸ್ಲಾಂ ಧರ್ಮಗಳಂತೆ ಮಧ್ಯಸ್ಥರುಗಳ ಹಾವಳಿ ಇಲ್ಲದಿರುವುದನ್ನು ಪ್ರತಿಯೊಬ್ಬರೂ ಬುದ್ಧತ್ವ ಪ್ರಾಪ್ತಿ ಮಾಡಿಕೊಳ್ಳುವ ಮುಕ್ತತೆಯನ್ನು, ಪ್ರಜ್ಞೆಗೆ ಯಾವಾಗಲೂ ಜಯವಾಗುತ್ತದೆಂಬ ವಿಶ್ವಾಸವನ್ನು ಹೊಂದಿ ದಲಿತರ ಸಾಂಸ್ಕೃತಿಕ ವಿಮೋಚನೆಯನ್ನು ಬೌದ್ಧಧರ್ಮದ ಮೂಲಕ ಸಾಧಿಸಲು ತೀರ್ಮಾನಿಸಿದರು. ಇದನ್ನೇ ಬಿ. ಬಸವಲಿಂಗಪ್ಪನವರು ಪ್ರತಿಪಾದಿಸುತ್ತ ಬುದ್ಧಧಮ್ಮ ಹೇಗೆ ಸಧಮ್ಮವಾಗಿದೆ. ಅದರ ಆಚರಣೆ ಮತ್ತು ತಿಳುವಳಿಕೆಯಲ್ಲಿ ಮೂಲಭೂತವಾದವಿಲ್ಲ ಮತ್ತು ಪ್ರಶ್ನಾತೀತ ಸಿದ್ಧಾಂತವಿಲ್ಲ, ಹುಟ್ಟಿನೊಡನೆ ಬರುವ ಅಸಮಾನತೆಯನ್ನು ಗುರುತಿಸುವುದಿಲ್ಲ, ಸಮಾನತೆಯನ್ನು ಎತ್ತಿ ಹಿಡಿಯುವ ಧಮ್ಮ[27] ಎಂದು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಕ್ಕೆ ಸ್ಪಷ್ಟರೂಪ ಕೊಡುವಂತೆ ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದಲ್ಲಿ ದಲಿತ ಚಳುವಳಿಯ ಎಲ್ಲ ಶಕ್ತಿಗಳು, ಸಂಘಟನೆಗಳು ದಲಿತರ, ಪೂರ್ಣ ಪ್ರಮಾಣದ ಸಾಂಸ್ಕೃತಿಕ ವಿಮೋಚನೆಗಾಗಿ ಬೌದ್ಧಧರ್ಮದ ಅನಿವಾರ್ಯತೆಯನ್ನು ಒಪ್ಪಿಕೊಂಡು ಡಾ। ಅಂಬೇಡ್ಕರ್‌ರವರ ದಲಿತ ವಿಮೋಚನಾ ಕಾರ್ಯತಂತ್ರವಾಗಿ ಬೌದ್ಧದೀಕ್ಷಾ ಕಾರ್ಯಕ್ರಮಗಳನ್ನು, ಬೌದ್ಧಧಮ್ಮ ಪ್ರಚಾರ ಕಾರ್ಯವನ್ನು ವ್ಯಾಪಕವಾಗಿ ಹಮ್ಮಿಕೊಳ್ಳುತ್ತಿರುವುದು ಚಾರಿತ್ರಿಕ ಪ್ರಯತ್ನ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಬೌದ್ಧಧರ್ಮದ ಅಗತ್ಯತೆಯನ್ನು, ಅನನ್ಯತೆಯನ್ನು ಸಾಬೀತುಪಡಿಸುತ್ತಿದೆ. ಬೌದ್ಧಧರ್ಮ ಮತ್ತು ಅಂಬೇಡ್ಕರ್ ಇವತ್ತಿನ ದಲಿತರಿಗೂ ಸಹಿತ ಐಡೆಂಟಿಟಿ ಹಾಗೂ ವಿಮೋಚನಾ ಸಂಕೇತಗಳು ಎಂದರೆ ತಪ್ಪಾಗಲಾರದು. ಅಂಬೇಡ್ಕರ್‌ರ ಬೌದ್ಧಧರ್ಮದ ತಿರುಳು ಇದು ಸಮಸ್ತ ಶೋಷಿತ ಸಮುದಾಯದ ವಿಮೋಚನೆ ಪ್ರೀತಿ ಮತ್ತು ಸಹಾನುಭೂತಿಗಳಿಂದ ಹುಟ್ಟಿದ ಸಮರಶೀಲತೆಯಿಂದ ಸಾಧ್ಯ ಎಂದು ಈ ಬಗೆಯ ನಿಲುವಿಗೆ ಈಗ ಇನ್ನಷ್ಟು ಪ್ರಾಮುಖ್ಯತೆ ದೊರಕಿರುವುದನ್ನು ಇಡೀ ಜಗತ್ತಿನಾದ್ಯಂತ ಕಾಣಲು ಸಾಧ್ಯ[28] ಎಂದು ಡಾ।ಡಿ.ಆರ್.ನಾಗರಾಜರವರು ಅಭಿಪ್ರಾಯಪಡುತ್ತಾರೆ.

ದಲಿತರ ಮಾನವ ಹಕ್ಕುಗಳ ಸಾಧನೆಗೆ ಬೌದ್ಧ ಧರ್ಮ ಒಂದು ಸಮರ್ಥ ಕಾರ್ಯತಂತ್ರವಾಗಿದೆ. ದಲಿತರಿಗೆ ಐಡೆಂಟಿಟಿಯಾಗಿ ಮಾರ್ಪಟ್ಟಿದೆ. ಬೌದ್ಧ ಧರ್ಮ ಅಂಬೇಡ್ಕರ್‌ರವರು ಆಲೋಚಿಸಿದ ಅಸಂಖ್ಯಾತ ಶೋಷಿತ ಸಮುದಾಯಗಳಿಗೆ ದಕ್ಕಿಸಿ ಕೊಟ್ಟ ಆ ಜನರ ಬಿಡುಗಡೆಯ ಕಾರ್ಯತಂತ್ರವಾಗಿದೆ. ಆ ಮೂಲಕ ಪ್ರಸ್ತುತ ಸಂದರ್ಭದಲ್ಲೂ ಬೌದ್ಧಧರ್ಮ ಭಾರತದಲ್ಲಿ ಕರ್ನಾಟಕದಲ್ಲಿ ದಲಿತರ ಮತಾಂತರದಿಂದಾಗಿ ಜೀವಂತವಾಗಿದೆ, ಚಲನಶೀಲವಾಗಿದೆ.

ಬುದ್ಧ ತೋರಿಸಿಕೊಟ್ಟ ಅನುಕಂಪ ಮತ್ತು ಮಾನವ ಕುಲದ ಭ್ರಾತೃತ್ವ ಸಂದೇಶವನ್ನು ಹೊತ್ತು ಈತನ ಅನುಯಾಯಿಗಳು ಅನೇಕ ದೇಶಗಳ ಎಲ್ಲೆಯನ್ನು ಮೀರಿ, ಸಹಸ್ರಾರು ಮೈಲಿಗಳನ್ನು ಕ್ರಮಿಸಿ ಅಲ್ಲಿನ ಜನತೆಯ ಮನಸ್ಸನ್ನು ಗೆದ್ದು ತಮ್ಮದನ್ನಾಗಿ ಮಾಡಿಕೊಳ್ಳಲು ಈ ನಾಡು ಕಾರಣವಾಯಿತು. ಆದರೆ ಭಾರತೀಯರಿಗೆ ಬುದ್ಧನು ಕೊಟ್ಟ ಅನುಕಂಪ, ಭ್ರಾತೃತ್ವ ಸಂದೇಶ ಇಂದು ಈ ನಾಡಿನ ಸ್ವತ್ತಾಗಿರದೆ ಪರದೇಶಗಳಲ್ಲಿ ನೆಲೆಸಿವೆ. ಇದು ಅಂಧಶ್ರದ್ಧೆಯ ಧರ್ಮಧುರಂದರು ಮಾಡಿದ ಕುತಂತ್ರ. ಈ ಕುತಂತ್ರವನ್ನು ಭೇದಿಸಿ ಡಾ।ಅಂಬೇಡ್ಕರ್ ರವರು ಬುದ್ಧನನ್ನು ಮರಳಿ ಭಾರತಕ್ಕೆ ಕರೆ ತಂದಿದ್ದಾರೆ. ಆ ಬೆಳಕಿನ ಕಿರಣ

ಭಾರತೀಯರ ಬದುಕು ಬೆಳಗುವಂತಾಗುವುದು ಇಂದಿನ ಯುವ ಪೀಳಿಗೆಯ ಪ್ರಯತ್ನದಲ್ಲಿದೆ. ಬುದ್ಧನ ಧರ್ಮದ ಬೆಳಕು ಇಂದು ಅತ್ಯಗತ್ಯವಾಗಿದೆ. "Be a light unto yourself ಬುದ್ಧ ಈ ಕೊನೆಯ ಸಂದೇಶ. ಇದರ ಅರ್ಥ ನಿನಗೆ ನೀನೇ ದೀಪ ಆಗು, ನಿನ್ನ ದಾರಿ ನೀನೇ ಕಂಡುಕೊ

ಬೌದ್ಧಧರ್ಮಕ್ಕೆ ಮತಾಂತರ ಹೊಂದುವ ಸಂದರ್ಭದಲ್ಲಿ ಡಾ।ಬಿ.ಆರ್.ಅಂಬೇಡ್ಕರ್ ಅವರು ಹಂಚಿಕೊಂಡ ಸ್ವಾಭಿಮಾನ, ಗಂಭಿರತೆ ಮತ್ತು ಮಾನವೀಯತೆ ಮೌಲ್ಯಗಳು ನಮಗೆ ಆದರ್ಶವಾಗಿರಬೇಕು. ಇಂದು ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ಬುದ್ಧಿವಂತ ಜನರು ಒಟ್ಟುಗೂಡಿ ಚಿಂತನೆ ಮಾಡುವ ಸಂದರ್ಭ ಬಂದಿದೆ. ಇಂಥ ಚಿಂತನೆ ಇಲ್ಲವೆಂದರೆ, ಕ್ರೂರವಾಗಿ ಕಾಣುವ ಈ ಹಿಂದೂ ವ್ಯವಸ್ಥೆಯಲ್ಲಿ ನಿಧಾನವಾಗಿ ದಲಿತರು ನಾಶವಾಗಬೇಕಾದೀತು.

The insperation behind Dr. Ambedkar's Concept of Budhism is still relavant in India. Similar is the plight of thousands of depressed classes and others having gained the illumininating path of Dr.Ambedkar's concept of Budhism.

5.2 ಬಸವ ವಿಚಾರಗಳ ಪ್ರಸ್ತುತತೆ :

ಬಸವಣ್ಣನವರು ಅಂದಿಗಿಂತ ಇಂದಿಗೆ ಹೆಚ್ಚು ಪ್ರಸ್ತುತ. ಅವರ ಉಪದೇಶ ಚಿರಂತನ ಮೌಲ್ಯಗಳಿಂದ ಕೂಡಿದೆ. ನಮ್ಮ ನಾಡಿನ ಅಪರಿಹಾರ್ಯವಾದ ನಾನಾ ಸಮಸ್ಯೆಗಳಿಗೆ ಅವರ ಸಂದೇಶವೇ ದಿವ್ಯ ಭೇಷಜ. ಮೊದಲೇ ಅವರ ಸಂದೇಶವನ್ನೊಪ್ಪಿಕೊಂಡು, ಆಚರಣೆಗೆ ತಂದಿದ್ದ ಪಕ್ಷದಲ್ಲಿ ಈ ದೇಶದಲ್ಲಿ ವಿದೇಶಿಯ ಮತಗಳ ಪ್ರಸಾರಕ್ಕೆ ಅವಕಾಶವಿರುತ್ತಿರಲಿಲ್ಲ.... ರಾಷ್ಟವನ್ನು ಕಿತ್ತು ತಿನ್ನುತ್ತಿರುವ ಸಾಮಾಜಿಕ ರೋಗ ರುಜಿನುಗಳು ಇರುತ್ತಿರಲಿಲ್ಲ...... ನಾಡಿನ ಅನೈಕ್ಯಕ್ಕೆ ಕಾರಣವಾಗಿರುವ ಜಾತೀಯತೆ ಇರುತ್ತಿರಲಿಲ್ಲ. ನಾನು ಹೇಳುವ ವಿಶ್ವಮಾನವ ತತ್ವ ಎಂದೋ ರೂಢಿಯಲ್ಲಿ ಬರುತ್ತಿತ್ತು.[29] ಕುವೆಂಪುರವರ ಈ ಮಾತು ನಿಖರ ಮತ್ತು ಸ್ಪಷ್ಟ. ಅವರು ಮುಂದುವರಿದು ಬಸವಣ್ಣ ಬರಿಯ ತಾತ್ವಿಕರಲ್ಲ, ವ್ಯಾಖ್ಯಾನಕಾರರಲ್ಲ, ಸಿದ್ಧಾಂತ ಲೋಲುಪರಲ್ಲ. ಅಂತರಂಗಶೋಧನೆ, ಸತ್ಯಾನ್ವೇಷಣೆ, ಸಕಲ ಜೀವಾಳಿಗೆ ಲೇಸನ್ನು ಸಾಧಿಸುವ ಹಂಬಲ. ಸ್ತ್ರೀಯರನ್ನೊಳಗೊಂಡು ದೀನದಲಿತರ ದುರ್ಬಲರ ಉದ್ಧಾರ, ಗೊಡ್ಡು ಕಂದಾಚಾರಗಳ ತಿರಸ್ಕಾರ, ಮತಧರ್ಮಗಳು ಸಾಮಾನ್ಯರ ಸ್ವತ್ತಾಗಬೇಕೆನ್ನುವ ಆಕಾಂಕ್ಷೆ ಜಾತಿವಿನಾಶ, ಅಸ್ಪೃಶ್ಯತಾ ನಿರ್ಮೂಲನಗಳ ಸಂಕಲ್ಪ ಈ ಒಂದಕ್ಕೊಂದು ಉದ್ದೇಶಗಳನ್ನು ನೆನೆದಾಗ ಮೈ ಜುಮ್ಮೆನ್ನುತ್ತದೆ. ಇವರೆಷ್ಟು ಪ್ರಾಚೀನರೋ ಅಷ್ಟೇ ಅರ್ವಾಚೀನರೂ ಅಹುದು ಎನಿಸುತ್ತದೆ. ಕುವೆಂಪುರವರ ಈ ಮಾತುಗಳನ್ನು ಅವಲೋಕಿಸಿದಾಗ ಬಸವಣ್ಣನ ಹಿರಿಮೆ ಹಾಗೂ ಪ್ರಸ್ತುತ ಸಂದರ್ಭಕ್ಕೂ ಕೂಡ ಅವರ ವಿಚಾರಗಳು ನವನವೀನವೆಂದೆನಿಸುತ್ತವೆ.

ಬಸವಣ್ಣನವರು ಸಾಮಾನ್ಯ ಜನತೆಯ ನಡುವೆ ಬೆಳೆದು, ಅವರ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಸವೆಸಿ, ಹುತಾತ್ಮರಾದವರು. ತಮ್ಮ ಉದಾತ್ತ ತತ್ವಗಳನ್ನು ಸಾಮಾನ್ಯರ ಭಾಷೆಯಲ್ಲಿಯೇ ಬೋಧಿಸಿದರು. ಎಲ್ಲರಿಗೂ ಎಟುಕುವಂತಹ ತತ್ವಗಳನ್ನು ಜೀವನ ವಿಜ್ಞಾನವನ್ನು ಬುದ್ಧನಂತೆ ಸಾಮಾನ್ಯರ ಭಾಷೆಯಲ್ಲಿ ವಿವರಿಸಿದರು. ತನ್ನ ಸುತ್ತಲಿನ ಜನ ಬೆಳಕು ಕಾಣಲೆಂದು, ಅನ್ನ ಕಾಣಲಿ ಎಂದು ಆಧುನಿಕ ಮಾನವತಾವಾದಿಯಂತೆ ಕ್ರಾಂತಿಕಾರಕ ಸುಧಾರಣೆಗಳನ್ನು ಕೈಗೊಂಡರು

ವಿಜ್ಞಾನ ಮತ್ತು ತಂತ್ರಜ್ಞಾನದಿಂದ ದೊರೆಯುತ್ತಿರುವ ಸೌಲಭ್ಯಗಳಿಂದಾಗಿ ಮನುಷ್ಯನು ಭೋಗಲೋಲುಪ್ತತೆಯಲ್ಲಿ ತೇಲಾಡುತ್ತಿದ್ದಾನೆ. ಜೊತೆ ಜೊತೆಯಲ್ಲಿಯೇ ಬಹು ಸಂಖ್ಯಾತ ಸಮುದಾಯವು ಕನಿಷ್ಠ ಆವಶ್ಯಕತೆಗಳಿಂದಲೂ ವಂಚಿತವಾಗಿದೆ. ಅಂತರ ಕಂದಕ ದಿನೇ ದಿನೇ ಹೆಚ್ಚಾಗುತ್ತಿದೆ. ಶ್ರಮದಿಂದ ಹಣ ಉತ್ಪಾದನೆ ಮಾಡುವ ಬದಲಿಗೆ, ಹಣದಿಂದ ಹಣ ಉತ್ಪಾದನೆಯ ದಿಕ್ಕಿನಲ್ಲಿ ಸಾಗುತ್ತಿದ್ದಾರೆ. ಸಾಕಷ್ಟು ಉತ್ಪಾದನೆಯಾಗುತ್ತಿದ್ದರೂ, ಸಮಾನವಾಗಿ ಹಂಚಿಕೆಯಾಗುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಬದುಕುತ್ತಿರುವ ನಮಗೆ ಹಿಂದೆಂದಿಗಿಂತಲೂ ಇಂದು ಬಸವಣ್ಣನವರು ಪ್ರತಿಪಾದಿಸಿದ ಮಾರ್ಗ ಪ್ರಸ್ತುತವಾಗಿದೆ. (ಬಸವಣ್ಣನವರು ದೇವರು ರಂಜಾನ್ ದರ್ಗಾ ಸಿ. ಚನ್ನಬಸವಣ್ಣ ಪ್ರಕಾಶಕರ ಮಾತು_

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬಸವಣ್ಣನವರ ತತ್ವಗಳಿಂದ ಪ್ರಭಾವಿತರಾಗಿ ಅಣ್ಣನವರ ಬಗೆಗೆ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ :

" It has not been possible for me to practice all the precepts of Basaveshwara which he taught 800 years ago, and which he also practiced. I have adopted a few of them. I am yet a seeker in this aspect and not accomplished one. Eradication of untouchability and dignity of labour were among his core precepts. One does not find even shades of castism in him. Had he lived during our times, he would have been a saint worthy of worship. If you, his followers, practice his precepts, you could uplift not just Bharat, but the world .

ಡಾ।ಚಂದ್ರಶೇಖರ ಕಂಬಾರರು ಒಂದು ಸಲ ಹೇಳಿದಂತೆ ವಚನಕಾರರು ದೇಸೀ ಭಾಷೆಯಲ್ಲಿ ದೇವರೊಡನೆ ಸಂವಾದ ನಡೆಸಿದ ಮೊದಲಿಗರು. ಅದುವರೆಗೆ ಕೇವಲ ಸಂಸ್ಕೃತದಲ್ಲಿ ಮಾತ್ರ ಧಾರ್ಮಿಕ ಹಾಗೂ ತಾತ್ವಿಕ ವಿಷಯಗಳನ್ನು ಚರ್ಚಿಸಲು ಸಾಧ್ಯ ಎಂಬ ನಂಬಿಕೆಯನ್ನು ಸುಳ್ಳಾಗಿಸಿ, ಕನ್ನಡಕ್ಕೆ ಹಿಂದೆಂದೂ ಇರದಂಥ ಸತ್ವವನ್ನು ತುಂಬಿ ಕನ್ನಡವನ್ನು ಕಟ್ಟಿದವರು ವಚನಕಾರರು. ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಚಳುವಳಿಯ ಗುರಿ ಮಾನವನ ಸಮಗ್ರ ಅಭಿವೃದ್ಧಿಯೇ ಆಗಿತ್ತು. ಇಂಥ ಅಪೂರ್ವ ಚಳುವಳಿಯ ನಾಯಕ ಬಸವಣ್ಣ. ಬಸವಣ್ಣನವರು ಕೆಲವರಿಗೆ ಭಕ್ತಿ ಭಂಡಾರಿಯಾಗಿ ಕಂಡರೆ, ಕೆಲವರಿಗೆ ವಿಶ್ವಜ್ಯೋತಿಯಾಗಿ, ಕೆಲವರಿಗೆ ಜಗತ್‌ಜ್ಯೋತಿಯಾಗಿ, ಇಂದಿನ ಬಂಡಾಯ ಸಾಹಿತಿಗಳಿಗೆ ಕನ್ನಡದ ಮೊದಲ ಬಂಡಾಯಗಾರ ಚಳುವಳಿಗಾರನಾಗಿ ಹಾಗೂ ಸಂಘಟನಕಾರನಾಗಿ ಕಂಡು ಬರುತ್ತಾನೆ. ಜಗತ್ತಿನ ಮೊದಲ ಸಮಾಜವಾದಿ, ಸ್ವತಂತ್ರ ವಿಚಾರವಾದಿಯಾದ ಬಸವಣ್ಣನವರು ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಹೊಸ ಕ್ರಾಂತಿ ಉಂಟು ಮಾಡಿದ ಕ್ರಾಂತಿ ಪುರುಷ, ಬಿಜ್ಜಳನ ಮಂತ್ರಿಯಾಗಿ, ಸಮಾಜ ಸುಧಾರಕರಾಗಿ, ಸ್ವಾತಂತ್ರ್ಯ-ಸಮಾನತೆ, ಸಹೋದರತ್ವಗಳ ವಿಶ್ವಮಾನವ ಪ್ರಜ್ಞೆಯ ಹರಿಕಾರರಾದ ಬಸವಣ್ಣನವರು ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿರುವುದರಿಂದ ಅವರ ತತ್ವ, ಚಿಂತನೆಗಳು, ಜೀವನ ಸಂದೇಶಗಳು ಎಲ್ಲ ಕಾಲಕ್ಕೂ ಪ್ರಸ್ತುತ.

ಬಸವಣ್ಣ ಲಿಂಗಾಯತ ವೀರಶೈವಧರ್ಮವನ್ನು ಸ್ಥಾಪಿಸಿ ಸಮಾಜೋಧಾರ್ಮಿಕ ಬದಲಾವಣೆ ಆರಂಭಿಸಿದ ಸುಧಾರಕ. ವ್ಯಕ್ತಿ, ಸಮಾಜ, ದೇವರುಗಳಿಗೆ ಹೊಸ ವ್ಯಾಖ್ಯಾನ ಬರೆದು ಪರ್ಯಾಯ

ಸಮಾಜವನ್ನು ಕಟ್ಟಿ ಶತಮಾನಗಳಿಂ
ಪರವಾಗಿ, ಧ್ವನಿಯೆತ್ತಿ ಅವರೆಲ್ಲರನ್ನೂ
ಹಾಡಿದರು. ಉತ್ತಮ ಪರ್ಯಾಯ
ಸಮಾಜದಲ್ಲಿರುವ ಪ್ರತಿಯೊಬ್ಬರೂ
ದಯವೇ ಧರ್ಮದ ಮೂಲ, ಆ
.ಕುಲವೊಂದೇ ತನ್ನ ತಾನರಿಯದವ
ಪುರುಷರು, 40 ಜನ ಸ್ತ್ರೀಯರು
ಕೆಳವರ್ಗದವರು ಇದ್ದರು ಇವರ

ರಕ್ತಪಾತಗಳಿಗೆ ಧರ್ಮವೇ ಕಾರಣವಾಗುತ್ತಿದೆ. ಶಾಂತಿ-ಸಹಬಾಳ್ವೆ ಸಮಂತೆಗಳನ್ನು ಬೆಳೆಸಬೇಕಾದ ಧರ್ಮ ಇಂದು ಜಗತ್ತಿನಲ್ಲಿ ಅತೀ ಹೆಚ್ಚು ನೆತ್ತರನ್ನೂ ಹರಿಸುತ್ತಿದೆ. ಲಕ್ಷಾಂತರ ಮುಗ್ಧರು ಬಲಿಯಾಗುತ್ತಿದ್ದಾರೆ. ಜಗತ್ತಿನ ಯಾವ ಧರ್ಮವೂ ಹಿಂಸೆಯನ್ನು ಬೋಧಿಸಲಿಲ್ಲ. ಧರ್ಮ ಹೇಳುವುದು ಬದುಕು ಬದುಕಲು ಬಿಡು. ಆದರೆ ಇಂದು ಧರ್ಮಾಂಧರು ಸಮಾಜದ ಶಾಂತಿ ಕದಡಿ ಧರ್ಮದ ಹೆಸರಿನಲ್ಲಿ ರಕ್ತ ಪಾತಕ್ಕೆ ಮುಂದಾಗಿರುವುದು ಇಂದಿನ ವಾಸ್ತವ. ದಯವಿಲ್ಲದ ಧರ್ಮವದಾವುದಯ್ಯ? ಎಂದು. ಬಸವಣ್ಣ ಪ್ರಶ್ನಿಸಿದ್ದು ಪ್ರಸ್ತುತ ಸಮಾಜಕ್ಕೂ ಎಚ್ಚರಿಕೆಯ ಮಾತಿನಂತಿದೆ.

ಜಾತಿ-ಮತಗಳು ಹೆಸರಿನಲ್ಲಿ ಸಮಾಜವನ್ನು ಒಡೆಯುವ ಪಟ್ಟಭದ್ರ ಜಾತಿವಾದಿಗಳಿಗೆ ಬಸವ ತತ್ವ ನಡೆವ ನೆಲ, ಕುಡಿಯುವ ಜಲ, ಸುಡುವಗ್ನಿ ಎಲ್ಲವೂ ಒಂದೇ ಆಗಿರಲು ಕುಲಗೋತ್ರ ಎತ್ತಣದು ಎಂಬ ಪ್ರಶ್ನೆ ಜಾತಿವಾದಿಗಳಿಗೆ ಚಾಟಿಯ ಏಟಿನಂತಿದೆ. ಜಾತಿ-ಮತಗಳ ಬಗ್ಗೆ ಅನಗತ್ಯ ವಿವಾದ ಸೃಷ್ಟಿಸಿ, ಸಮಾಜದಲ್ಲಿ ಕೋಮುದಳ್ಳುರಿಯುಂಟು ಮಾಡಿ, ಮಹಾತ್ಮರ, ರಾಷ್ಟ್ರನಾಯಕರ ವಿಗ್ರಹಗಳಿಗೆ ಹಾನಿಯುಂಟು ಮಾಡಿ, ಚಪ್ಪಲಿಹಾರ ತೊಡಿಸಿ, ಮದ್ಯ ಸುರಿಯುವ ಜನ ಬಸವ ತತ್ವದತ್ತ ಗಮನಹರಿಸಬೇಕಾಗಿದೆ. ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರವಾಗುವುದು ನೀತಿಯಿಂದಲೇ ಹೊರತು, ಜಾತಿಯಿಂದಲ್ಲ. ಸಂಸ್ಕಾರದಿಂದಲೇ ಹೊರತು ಸಂಸಾರದಿಂದಲ್ಲ ಎಂಬ ಸತ್ಯವನ್ನು ಇಂದಿನ ಸಮಾಜ ಅರಿಯಬೇಕಾಗಿದೆ. ಸಾಮ್ರಾಜ್ಯಶಾಹಿ ಬಳುವಳಿಯಾಗಿ ಬಂದ ಬಂಡವಾಳಶಾಹಿ ವ್ಯವಸ್ಥೆ ಬಡವ-ಶ್ರೀಮಂತ ಎಂಬ ಅಂತರ ಅಧಿಕವಾಗಿದೆ. ಬಡವ ಬಡವನಾಗಿಯೇ ಉಳಿದಿದ್ದಾನೆ. ಶ್ರೀಮಂತ ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ. ಶ್ರೀಮಂತರು ತಮ್ಮ ಸುತ್ತಲೂ ಪ್ರತಿಷ್ಠೆ ಹಾಗೂ ಅಹಂಕಾರದ ಬೇಲಿ ಬಿಗಿದುಕೊಂಡಿದ್ದಾರೆ. ಕಾಗೆಯೊಂದಗುಳ ಕಂಡರೆ ಕರೆಯದೇ ತನ್ನ ಬಳಗವೆಲ್ಲವನು? ಇಂದಿನ ಮಾನವ ಎಲ್ಲವೂ ತನಗಾಗಿ ತನ್ನವರಿಗಾಗಿ ಎಂದು ಹಂಬಲಿಸುವುದನ್ನು ಕಾಣುತ್ತೇವೆ. ಕಾಗೆಗಿರುವ ಬುದ್ಧಿ ಮನುಷ್ಯರಿಗಿಲ್ಲದಿರುವುದನ್ನು ಬಸವಣ್ಣ ಮರುಗುತ್ತಾನೆ. ಆದಕ್ಕಾಗಿ ಹಂಚಿ ತಿನ್ನುವ ಬುದ್ಧಿ ಮಾನವನಿಗೆ ಬಂದಂದೇ ಕರ್ಮಸಿದ್ಧಿ ಎಂದು ಬಸವತತ್ವದ ಮೂಲ ಆಶಯವನ್ನು ನಾವಿಂದು ಅರ್ಥಮಾಡಿ ಕೊಳ್ಳಬೇಕಾಗಿದೆ.

ಜಾಗತೀಕರಣದ ಪರಿಕಲ್ಪನೆ ಪ್ರಪಂಚವನ್ನೇ ಪುಟ್ಟದೊಂದು ಗ್ರಾಮವನ್ನಾಗಿಸಿದೆ. ಆದರೆ ಮಾನವರ ಮಧ್ಯದ ಕಂದರ ದಿನದಿನಕ್ಕೂ ಹೆಚ್ಚಾಗುತ್ತಲೇ ಇದೆ. ಸಾಮಾಜಿಕ ಸೌಜನ್ಯ ಅತಿಥಿ ಸತ್ಕಾರ ನಮ್ಮಂತೆ ಇರುವ ಇನ್ನೊಬ್ಬನನ್ನು ಗೌರವಾದರಗಳಿಂದ ನಡೆಸಿಕೊಳ್ಳುವ ಮನಸ್ಥಿತಿ ಇಲ್ಲ. ಆದಕ್ಕಾಗಿ ಬಸವಣ್ಣ ಏನು ಬಂದಿರಿಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ? ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೆ? ಎಂದು ಚುಚ್ಚಿ ಪ್ರಶ್ನಿಸುತ್ತಾನೆ. ಪ್ರಸ್ತುತ ನಮಗೆ ಬೇಕಾಗಿರುವುದು ಜನಗಳ ನಡುವೆ ಪರಸ್ಪರ ಅರ್ಥೈಸಿಕೊಳ್ಳುವಿಕೆ, ಸೌಹಾರ್ದತೆ, ಸಹಬಾಳ್ವೆ, ಶಾಂತಿ, ಸಮಾನತೆಯ ತತ್ವ ನಮಗಿಂದು ಬೇಕಾಗಿರುವುದು ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ ಎಂಬ ಬಸವ ತತ್ವ ಅನುಭವ ಮಂಟಪದ ಅಮೃತತತ್ವ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುತ್ತವೆ.

ಬಸವಣ್ಣ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಳು ಹಾಗೂ ಅವುಗಳಿಗೆ ಸೂಕ್ತ ಪರಿಹಾರಕ್ಕಾಗಿ ಜೀವನ ಪರ್ಯಂತ ಹೋರಾಟ ನಡೆಸಿದರು. ಮಾನವನ ಸರ್ವತೋಮುಖ ಅಬಿವೃದ್ಧಿಗೆ

ಶ್ರಮಿಸಿದರು. ಧರ್ಮದ ಮೂಲಕ ಮಾನವನ ಪ್ರಗತಿ ಸಾಧ್ಯ. ಆದಕ್ಕೆ ಅವರು ದಯವೇ ಧರ್ಮದ ಮೂಲ ವೆಂದಳಿದರು. ಧಾರ್ಮಿಕ ಚಿಂತನೆಯೊಂದಿಗೆ ಕಾಯಕಕ್ಕೆ ಪ್ರಾಶಸ್ತ್ಯ ನೀಡಿದರು. ದಾಸೋಹ ಪರಿಕಲ್ಪನೆಗೆ ಒತ್ತು ನೀಡಿದರು. ಸಮಾಜದಲ್ಲಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಸಿದ್ಧಾಂತ ರೂಢಿಯಲ್ಲಿ ತರಲು ಚಿಂತಿಸಿದ ಬಸವಣ್ಣ ಲಿಂಗಭೇದ, ವರ್ಣಭೇದ, ಪ್ರಾದೇಶಿಕ ಭೇದ, ಆರ್ಥಿಕ ತಾರತಮ್ಯಗಳನ್ನು ಇಲ್ಲವಾಗಿಸಲು ಪ್ರಯತ್ನಿಸಿದರು. ಮನುಷ್ಯನ ನಡೆ-ನುಡಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿತ್ತು ಬಸವನ ಕ್ರಾಂತಿಯಲ್ಲಿ ನಡೆ ಹಾಗೂ ನುಡಿಗಳ ಸಿದ್ಧಾಂತಕ್ಕೆ ಮಾದಾರ ಚೆನ್ನಯ್ಯನ ಈ ವಚನ ಸಾಕ್ಷಿ.

ನಡೆ-ನುಡಿ-ಸಿದ್ಧಾಂತವಾದಲ್ಲಿ, ಕುಲಹೊಲೆ ಸೂತಕವಿಲ್ಲ,
ನುಡಿ ಲೇಸು, ನಡೆಯಧಮವಾದಲ್ಲಿ
ಅದು ಬಿಡುಗಡೆಯಿಲ್ಲದ ಹೊಲೆ]
ಆಚಾರವೆ ಕುಲ, ಅನಾಚಾರವೆ ಹೊಲೆ
ಇಂತೀ ಉಭಯವ ತಿಳಿದರಿಯಬೇಕು

ಇಂತಹ ಮಾತು ನಮಗಿಂದು ಬೇಡವೆ? ಬಸವಣ್ಣನೊಂದಿಗಿದ್ದ ವಚನಕಾರರು, ಶರಣರು ಪುರೋಹಿತಶಾಹಿ, ಜಾತಿಪದ್ಧತಿ, ವರ್ಣಾಶ್ರಮ, ಧರ್ಮ, ಅಸ್ಪೃಶ್ಯತೆಯನ್ನು ಒಟ್ಟಿಗೆ ವಿರೋಧಿಸುವ ಧೈರ್ಯವನ್ನು ಪ್ರಕಟಪಡಿಸಿದರು. ಮಾನವೀಯ ಮೌಲ್ಯಗಳ ಸ್ಥಾಪನೆಗಾಗಿ ನಡೆಸಿದ ಮೊದಲ ಹೋರಾಟದ ಹಲವಾರು ಜನಪರ ನಿಲುವುಗಳು ಬಸವಣ್ಣ ಹಾಗೂ ಅಂದಿನ ಶರಣರ ಹೋರಾಟದ ನಿಲುವುಗಳೇ ಆಗಿದ್ದವು. ಅಂತಹ ಉದಾತ್ತ ತತ್ವಗಳು ನಮಗಿಂದು ಬೇಡವೇ? ಸಮಾಜದ ಚಲನಶೀಲತೆಗೆ, ಪ್ರಗತಿಗೆ ಅತ್ಯಗತ್ಯವೆಂದಿನಿಸುವುದಿಲ್ಲವೆ? ಈ ಪ್ರಶ್ನೆಗಳಿಗೆ ಉತ್ತರ ಹೌದೆಂದಾದರೆ ಬಸವತತ್ವ ಇಂದಿಗೂ ಪ್ರಸ್ತುತ. ಆದರೆ ವಿಮರ್ಶಿಸದೇ ಯಾವುದನ್ನು ಒಪ್ಪಿಕೊಳ್ಳುವ ಅಗತ್ಯವಿಲ್ಲ.

ವಿದ್ವಾಂಸರಾದ ಡಾ।ರಹಮತ್ ತರೀಕೆರೆಯವರು ಬಸವತತ್ವ :ಇತ್ತೀಚಿನ ಒಲವುಗಳು ಎಂಬ ಲೇಖನದಲ್ಲಿ ಬಸವಣ್ಣ ಹಾಗೂ ಬಸವ ತತ್ವ ಇವುಗಳನ್ನು ಕುರಿತು ಮಾಡಿರುವ ವ್ಯಾಖ್ಯಾನಗಳು ಪ್ರಸ್ತುತ ಸಂದರ್ಭದಲ್ಲಿ ಬಸವ ತತ್ವಗಳ ಕುರಿತು ಇರುವ ವಿವಿಧ ಆಯಾಮಗಳನ್ನು ಅನಾವರಣಗೊಳಿಸಿದ್ದಾರೆ. ಬಸವಣ್ಣ ಹಾಗೂ ಬಸವತತ್ವ ಎಂದರೆ ಏಕರೂಪಿ ಗ್ರಹಿಕೆಗೆ ಸಿಗುವುದಿಲ್ಲ. ಬಹುರೂಪಿ ಗ್ರಹಿಕೆ ಸಿಗುತ್ತವೆ ಎಂದಿದ್ದಾರೆ.[30] ಈ ಬಹುರೂಪಿ ಚಿತ್ರಗಳು ಸಿಗಲು ಕಾರಣ-ನಮ್ಮ ತಿಳುವಳಿಕೆಯು ಕೇವಲ ಅವನ ವಚನಗಳ ಶೈಕ್ಷಣಿಕ ಓದಿನಿಂದ ಬಂದಿದ್ದಲ್ಲ. ಸಮಾಜದೊಂದಿಗೆ ಸೆಣಸಾಡುತ್ತ, ಈ ಹೋರಾಟದಲ್ಲಿ ಬಸವಣ್ಣನನ್ನು ಬಳಸುತ್ತ ಪಡೆದುಕೊಂಡಿದ್ದು, ನಮ್ಮ ಸಮಾಜದಲ್ಲಿ ಜಾತಿಪದ್ಧತಿ ವೈದಿಕಶಾಹಿ ಅಸ್ಪೃಶ್ಯತೆ ಇವೆಲ್ಲ ಇರದಿದ್ದರೆ, ಬಸವಣ್ಣ ಈಗಿನಷ್ಟು ಮುಖ್ಯವಾಗುತ್ತಿದ್ದನೇ ಎಂಬ ಪ್ರಶ್ನೆ ಕೇಳಿಕೊಂಡರೆ, ಇದು ಗೊತ್ತಾಗುತ್ತದೆ. ಯಾವತ್ತೂ ಚರಿತ್ರೆ ವರ್ತಮಾನಕ್ಕೆ ಮುಖ್ಯವಾಗುವುದು ಚರಿತ್ರೆಯಾಗಿ ಅಲ್ಲ. ವರ್ತಮಾನವನ್ನು ಅರ್ಥ ಮಾಡಿಕೊಳ್ಳಲು, ವರ್ತಮಾನವನ್ನು ನಮಗೆ ಬೇಕಾದಂತೆ ರೂಪಿಸಿಕೊಂಡು ಬದುಕಲು ಎನ್ನುವ ಡಾ।ರಹಮತ್ ತರೀಕೇರೆಯವರ ಅಭಿಪ್ರಾಯ ಬಸವಣ್ಣನ ಪ್ರಸ್ತುತೆಯನ್ನು ಗಂಭೀರ ಚಿಂತನೆಗೆ ಎಡೆ ಮಾಡಿ ಕೊಡುತ್ತದೆ.

ಅವರೇ ಮುಂದುವರಿದು ಹೇಳಿರುವಂತೆ ಬಸವತತ್ವ ಎಂದರೇನು ಎಂದು ಕೇಳಿದರೆ, ಅಧಿಕಾರಸ್ಥ ಶಕ್ತಿಗಳ ವಿರುದ್ಧ, ಅಧಿಕಾರ ರಹಿತರ ಪರವಾಗಿ ಮಾಡಿದ ಚಿಂತನೆ ಮತ್ತು ಸಾಮೂಹಿಕ ಹೋರಾಟ ಎಂದು ಸರಳವಾಗಿ ಹೇಳಬಹುದು. ಈ ಹೋರಾಟ ಮತ್ತು ಚಿಂತನೆ ಕರ್ನಾಟಕದ ಚಾರಿತ್ರಿಕ ಸಂದರ್ಭದಲ್ಲಿ ಅತ್ಯಂತ

ಕ್ರಾಂತಿಕಾರಿಯಾಗಿತ್ತು. ಮಾನವೀಯವಾಗಿತ್ತು. ಅಭೂತಪೂರ್ವ ಪ್ರಯೋಗವಾಗಿತ್ತು. ತನ್ನ ಎಲ್ಲ ಮಿತಿಗಳೊಂದಿಗೆ ಅವರಲ್ಲಿ ಸಮಾಜವನ್ನು ಮುಂದಕ್ಕೆ ಒಯ್ಯುವ ಆದರ್ಶಗಳಿದ್ದವು. ಆದರೆ ಒಂದು ಮಾತನ್ನು ಹೇಳಬೇಕು. ಬಸವತತ್ವ ಎಂಬುದು ಎಷ್ಟೇ ಪ್ರಗತಿಪರವಾಗಿದ್ದರೂ ಅದು ವಿಮರ್ಶೆಗೆ ಅತೀತವಲ್ಲ. ನಮ್ಮ ತಲೆಮಾರಿನ ವಿಮರ್ಶೆಯಿಂದ ಭಿನ್ನಾಭಿಪ್ರಾಯಗಳಿಂದ ಬೆಳೆಯಬೇಕು.[31] ಈ ಮಾತು ಬಸವಣ್ಣ-ಬಸವತತ್ವ ಸಾವಿರ ವರ್ಷಗಳಿಂದಲೂ ಇನ್ನೂ ಜೀವಂತವಾಗಿರುವುದಕ್ಕೆ ಸಾಕ್ಷಿ. ಏಕೆಂದರೆ ಬಸವಣ್ಣನ ತತ್ವ ಕಾಡಿದಷ್ಟು ಬೇರೆ ವಿಚಾರಗಳು ಕನ್ನಡ ನಾಡಿನ ಜನತೆ ಚಿಂತಿಸುವಂತೆ ಮಾಡಿಲ್ಲ. ವೈಚಾರಿಕತೆ ಬಸವ ತತ್ವಗಳೊಂದಿಗೆ ಬೆಳೆದು ಬಂದಿದೆ ಎಂಬುದನ್ನು ಚರಿತ್ರೆಯಿಂದ ಗುರುತಿಸಬಹುದು.

ವಚನಕಾರರಲ್ಲಿ ಬಸವಣ್ಣನನ್ನು ಕುರಿತು ಇರುವ ಹೆಚ್ಚಿನ ಬರಹಗಳು ಬಸವ ತತ್ವವು ಇಂದಿಗೂ ಪ್ರಸ್ತುತವಾಗಿದೆ ಎಂದು ಮುಗಿಯುತ್ತವೆ. ಹಾಗೆ ಜಗತ್ತಿನ ಯಾವುದೇ ತತ್ವವು ಯಥಾವತ್ತಾಗಿ ಇಡೀಯಾಗಿ ಚರಿತ್ರೆಯ ಇನ್ನೊಂದು ಕಾಲಕ್ಕೆ ಪ್ರಸ್ತುತವಾಗುವುದಿಲ್ಲ. ನಾವು ಒಪ್ಪದೇ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಅನೇಕ ಸಂಗತಿಗಳಿರುತ್ತವೆ. ಹಾಗೆ ಭಿನ್ನಾಭಿಪ್ರಾಯವೆಂದರೆ ಅಗೌರವವಲ್ಲ. ಆ ತತ್ವದ ಜೊತೆಗೆ ಸಂವಾದ ಮತ್ತು ಅದನ್ನು ನಮ್ಮ ತಿದ್ದುಪಡಿಯೊಡನೆ ನಮ್ಮ ವರ್ತಮಾನವನ್ನು ಎದುರಿಸಲು ಪುನಾರಚಿಸಿಕೊಳ್ಳುವುದು. ಇದನ್ನು ಗತದ ಜತೆ, ಪರಂಪರೆಯ ಜತೆ ಅರ್ಥಪೂರ್ಣ ಅನುಸಂಧಾನ ಎಂದು ಕರೆಯುತ್ತೇನೆ. ಆದ್ದರಿಂದ ಯಾವಾಗಲೂ ಒಂದು ಐಡಿಯಾಲಜಿಯಲ್ಲೇ ಎಲ್ಲ ಶಕ್ತಿ ಇರುವುದಿಲ್ಲ. ಅದನ್ನು ಮುಂದಿನ ತಲೆಮಾರು ತನ್ನ ಅಗತ್ಯಕ್ಕೆ ಅನುಗುಣವಾಗಿ ತನ್ನ ಸ್ವಂತಿಕೆಯ ಧಾರೆಯೆರೆದು ಮುರಿದು ಕಟ್ಟಿಕೊಳ್ಳುವಲ್ಲಿ ಇರುತ್ತದೆ. ಎಂತಲೇ ಬಸವತತ್ವ ಎಂದರೆ ಅದು ಬಸವಣ್ಣನ ವಚನಗಳಲ್ಲಿ ಮಾತ್ರ ಇರುವುದಿಲ್ಲ. ಅದನ್ನು ಇವತ್ತಿನ ನಾವು ಕಟ್ಟಿಕೊಳ್ಳುವುದರಲ್ಲಿ ಇದೆ. 20ನೇ ಶತಮಾನದ ಕನ್ನಡ ಮನಸ್ಸು ಮಹಾ ವಿಮರ್ಶೆಯದು. ಅದು ಬಸವಣ್ಣನನ್ನು ಅವನ ತತ್ವವನ್ನು ತನ್ನ ಸಂಗಾತಿಯಾಗಿಸಿಕೊಂಡಿದ್ದರೆ ಪ್ರೀತಿ ವಿಮರ್ಶೆಯಿಂದಲೇ.[32] ಬಸವ ತತ್ವದ ಅಗತ್ಯ ಏಕೆ ಇದೆ? ಅದರ ಅಧ್ಯಯನದಿಂದ ಸಿಗುವುದಾದರೂ ಏನು? ಎಂಬ ಪ್ರಶ್ನೆಗಳಿಗೆ ನಮ್ಮ ಇಂದಿನ ಕೆಲವು ಜಟಿಲ ಸಮಸ್ಯೆಗಳು 12ನೇ ಶತಮಾನದಲ್ಲಿದ್ದ ಸ್ಥಿತಿಯಲ್ಲೇ ಇವೆ. ಅವುಗಳ ನಿವಾರಣೆಗೆ ಮಾರ್ಗೋಪಾಯ ಹುಡುಕುವ ಸಂದರ್ಭದಲ್ಲಿ ಬುದ್ಧ-ಬಸವ-ಅಂಬೇಡ್ಕರ್ ಪ್ರಸ್ತುತವಾಗುತ್ತ ಹೋಗುತ್ತಾರೆ. ಇಂತಹ ನೂರು ಜನ ಮಹನೀಯರ ಸುಧಾರಣೆಯ ಪ್ರಯತ್ನದ ಕೆಲಸ ಇಂದಿನ ಸಮಾಜದಲ್ಲಿ ಇನ್ನೂ ಬಾಕಿ ಇದೆ. ಅದರ ಪರಿಹಾರಕ್ಕೆ ಇವರ ಸಿದ್ಧಾಂತಗಳ ತತ್ವಗಳ ಮರು ವಿಮರ್ಶೆ ಹಾಗೂ ಅನ್ವಯಿಸಿಕೊಳ್ಳುವ ಜರೂರತ್ತ ಇದ್ದೇ ಇದೆ. ಇತಿಹಾಸದ ಅರಿವಿಲ್ಲದ ಮಾನವ ಇನ್ನೂ ಶೈಶವಾವಸ್ಥೆಯಲ್ಲಿದ್ದಂತೆ ಆ ಸ್ಥಿತಿಯಿಂದ ಮೇಲೆ ಬರಲು ಇತಿಹಾಸದ ಅರಿವು ಹಾಗೂ ಇತಿಹಾಸದಲ್ಲಿ ಒಡಮೂಡಿ ನಿಂತ ಚಿಂತಕರ ಹಲವು ವಿಚಾರಗಳು ದಾರಿದೀಪವಾಗಬಲ್ಲವು.

ಬಸವಣ್ಣನ ಪ್ರತಿಭಟನೆಯು ರೊಚ್ಚಿಗೆಬ್ಬಿಸುವಂತಹುದಲ್ಲ. ಬಸವಣ್ಣನವರ ಪ್ರತಿಭಟನೆಯಲ್ಲಿ ಉದ್ದೇಶ ಈ ಸಮಾಜ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಹೊಡೆದೋಡಿಸುವುದಾಗಿದ್ದರಿಂದ ಇಲ್ಲಿ ಯಾರಿಗೂ ಅಹಿತವಾಗುವಂತೆ ನುಡಿಯಿರಲು ಸಾಧ್ಯವಿಲ್ಲ. ಬಸವಣ್ಣನ ಸಿಟ್ಟು ಸೆಡುವು ಇರುವುದು ಮೊದಲು ತನ್ನ ಮೇಲೆ ನಂತರ ಸಮಾಜ ವ್ಯವಸ್ಥೆಯ ಮೇಲೆ ಇಂತಹ ಮಾನವೀಯ ಹೋರಾಟಗಾರನ ಪ್ರತಿಭಟನೆಯ ಗುಣ ಪ್ರಸ್ತುತ ಕಾಲಕ್ಕೆ ಅಗತ್ಯವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ಬೆಳವಣಿಗೆಯಾಗಿದೆ. ಆದರೆ ಮಾನವೀಯ ಮೌಲ್ಯಗಳು ಮಾತ್ರ ನಿರೀಕ್ಷಿಸಿದಂತೆ ಬೆಳೆದು ಬಂದಿಲ್ಲ. ಇಂದಿನ ಸಮಾಜದಲ್ಲಿ ಈರ್ಷೆ

ವೈಷಮ್ಯ - ಪ್ರತ್ಯೇಕತೆ ತಾಡವವಾಡುತ್ತಲಿವೆ. ಮನುಷ್ಯ ತನ್ನನ್ನು ತಾನರಿತ ಸಮಾಜ ವ್ಯವಸ್ಥೆಯಲ್ಲಿ ತನ್ನನ್ನು ಮನುಷ್ಯನಂತೆ ಗುರುತಿಸಿಕೊಂಡರೆ ಇಂತಹ ಸಮಸ್ಯೆಗಳೇಳುವುದಿಲ್ಲ. ಆದರೆ ಇಂದು ದೇಶವೇ ಉರಿಯತೊಡಗಿದೆ. ಇಂತಹ ಸಂದರ್ಭದಲ್ಲಿ ಈ ದೇಶದ ವಿಚಾರವಾದಿಗಳ ಚಿಂತಕರ ಆಲೋಚನೆಗಳು ತುಂಬಾ ಪ್ರಸ್ತುತವಾಗಿ ಕಾಣಿಸುತ್ತವೆ.

ದಯವೇ ಧರ್ಮದ ಮೂಲವೆಂದು ಹೇಳಿದ ಬಸವಣ್ಣ ಮಾನವೀಯತೆಯನ್ನು ವಿಸ್ತರಿಸಿದ. ಮನುಷ್ಯರ ನೋವನ್ನು ಮನುಷ್ಯರೇ ಅರ್ಥೈಸಿಕೊಳ್ಳಬೇಕಾದ ಸತ್ಯವನ್ನು ಸಾರಿ ಹೇಳಿದ. ಜಾತಿ, ವರ್ಗ, ಅಂತಸ್ತು, ದೇಶ, ಭಾಷೆ, ಲಿಂಗ ಮತ್ತು ವಯಸ್ಸು ಈ ಮುಂತಾದ ಭಿನ್ನತೆಯ ಗೋಡೆಗಳನ್ನು ಕಟ್ಟಿ ಮನುಷ್ಯ ಮನುಷ್ಯನನ್ನು ದ್ವೇಷಿಸುವುದು, ಸೇಡು ತೀರಿಸಿಕೊಳ್ಳುವುದು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಆದರೆ ಮನುಷ್ಯನಲ್ಲಿ ಮಾನವೀಯ ಮೌಲ್ಯಗಳು ಅಳಿದು ಹೋಗುತ್ತವೆ. ಈ ಸತ್ಯವನ್ನು ಬಸವಣ್ಣ ಅನೇಕ ಲೌಕಿಕ ಉದಾಹರಣೆಗಳ ಮುಖಾಂತರ ಸ್ಪಷ್ಟಪಡಿಸಿದ ಮನುಷ್ಯ ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುವ ಸ್ಥಿತಿಯನ್ನು ವಿಡಂಬಿಸಿದ. ಸಕಲ ಜೀವಾತ್ಮರಿಗೂ ಲೇಸನ್ನು, ಒಳಿತನ್ನು ಬಯಸುವ ಪರಿಯನ್ನು ವಿವರಿಸಿ ಹೇಳಿದ.

ಇವನಾರವ ಇವನಾರವ ಇವನಾರವನೆಂದೆನಿಸದಿಯ್ಯ ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ (ವಚನ 62) ಇಂತಹ ವಚನ ಇಂದಿನ ಸಾಮಾಜಿಕ ಸಂದರ್ಭಕ್ಕೆ ತೀರಾ ಅಗತ್ಯವಾಗಿವೆ. ಇಂತಹ ಅನೇಕ ವಚನಗಳ ಮೂಲಕ ಬಸವಣ್ಣ ಮನುಷ್ಯರಲ್ಲಿ ಮಾನವೀಯ ಪ್ರಜ್ಞೆ ಮೂಡಿಸಿದ. ಕೇವಲ ಆರ್ಥಿಕ-ಸಾಮಾಜಿಕ ಸಮಾನತೆ ಬಂದಾಕ್ಷಣ ಮನುಷ್ಯ ಎತ್ತರಕ್ಕೇರಲಾರ, ಮಾನವೀಯತೆ ಬೆಳೆದಾಗ ಮಾತ್ರ ಇದು ಸಾಧ್ಯ. ಇಂತಹ ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿ ಮನುಷ್ಯನಿಗೆ ಬೆಲೆ ಕೊಟ್ಟ ಬಸವಣ್ಣನ ವಿಚಾರಗಳು ಇಂದಿಗೂ ಅನುಕರಣೀಯ. ಬಸವಣ್ಣ ಪ್ರಮುಖವಾಗಿ ಮನಸ್ಸು ಕಟ್ಟುವ ಕೆಲಸವನ್ನು ಮಾಡಿದ. ಮಾನವೀಯತೆಯನ್ನು ಬೆಳೆಸುವುದೇ ನಿಜವಾದ ಹೋರಾಟವೆಂದು ತಿಳಿದುಕೊಂಡ. ಅಧಿಕಾರ ಅಂತಸ್ತುಗಳಿಗಿಂತ ಸಾಂಸ್ಕೃತಿಕವಾದ-ಸಾಮಾಜಿಕವಾದ ಸಮಾನತೆ ಒಡಮೂಡಿ ಬರುವುದು ಬಹು ದೊಡ್ಡದೆಂದು ಭಾವಿಸಿದ್ದ. ಬಸವಣ್ಣನ ಆಂದೋಲನ ಧಾರ್ಮಿಕ ಮೂಲ ಹೊಂದಿದ್ದರೂ ಕೂಡ ಸಾಮಾಜಿಕ ಆರ್ಥಿಕ ಸಮಾನತೆಗಾಗಿ ಶ್ರಮಿಸಿದ. ಆಧುನಿಕ ಸಮಾಜವಾದದ ಕಲ್ಪನೆಯಾದರೂ ಇದೇ ಅಲ್ಲವೆ?

ಸಮಾನತೆಯ ಆದರ್ಶವನ್ನು ಸಾಮಾಜಿಕ ಚಿಂತಕರು ಆರಂಭದಿಂದಲೂ ಪೋಷಿಸಿಕೊಂಡು ಬಂದಿದ್ದರೂ ಯಾವುದೇ ಸಮಾಜದ ಸದಸ್ಯರು ಎಂದಿಗೂ ಸರ್ವ ಸಮಾನರಾಗಿದ್ದುದಿಲ್ಲ. ಎಲ್ಲಾ ಸದಸ್ಯರುಗಳಿಗೆ ಸಮಾನತೆಯನ್ನು ನೀಡಿರುವ ಮತ್ತು ಸ್ತರವ್ಯವಸ್ಥೆಯೇ ಇಲ್ಲದ ಸಮಾಜವು ಕೇವಲ ಮಿಥ್ಯ; ಅದು ಮಾನವ ಇತಿಹಾಸದಲ್ಲಿ ಎಂದಿಗೂ ಕೈಗೊಡುವುದಿಲ್ಲ! ಎಂದು ಪಿ.ಎ.ಸೊರೊಕಿನ್ ಹೇಳಿರುವುದು ಅರ್ಥಪೂರ್ಣವಾಗಿಯೇ ಇದೆ. Unstratified Society with real equality of its members is a myth that has never been realised in the history of mankind. - P.A. Sorokin [33] ಸಮಾಜ ಶಾಸ್ತ್ರಜ್ಞರ ಈ ವ್ಯಾಖ್ಯೆ ಅಸಮಾನತೆ ನಿರಂತರ, ಆದರೆ ಅದಕ್ಕೆ ಮಾನವೀಯತೆಯ ಸ್ಪರ್ಶ ನೀಡಿ ಅದರ ಕಾಠಿಣ್ಯವನ್ನು ಕಡಿಮೆ ಮಾಡುವುದಕ್ಕೆ ಬುದ್ಧ, ಬಸವ, ಅಂಬೇಡ್ಕರ್‌ರಂತವರ ಚಿಂತನೆಗಳು

ಪರಿಹಾರವಾಗಬಲ್ಲವು. ನೀರಲ್ಲಿ ಮುಳುಗುತ್ತಿರುವ ಮನುಷ್ಯನಿಗೆ ಹುಲ್ಲುಕಡ್ಡಿ ಆಸರೆಯಾದಂತೆ ಇವರ ವಿಚಾರಗಳು ಸಮಾಜದ ಮುನ್ನಡೆಗೆ ಆಸರೆಯಾಗಬಲ್ಲವು.

ಬಸವಣ್ಣನವರ ಪ್ರಮುಖ ಉದ್ದೇಶ ಸಾಮಾಜಿಕ ಸುಧಾರಣೆ :

ಬಸವಣ್ಣನವರು ಪ್ರಮುಖವಾಗಿ ಆಲೋಚಿಸಿದ್ದು ಜಾತಿ ನಿರ್ಮೂಲನೆಗೆ ಪ್ರಾಶಸ್ತ್ಯ ನೀಡಿ, ಸಮಾಜ ಸುಧಾರಣೆಗೆ ಪ್ರಯತ್ನಿಸಿದರು. ಇದಕ್ಕಾಗಿ ವೀರಶೈವ ಅಥವಾ ಲಿಂಗಾಯತಮತ ವಿಕಾಸಪಡಿಸಿದರು. ಪ್ರಚಲಿತ ಸಾಮಾಜಿಕ ಅಸಮಾನತೆ ನಿವಾರಿಸಲು ಸರ್ವರಿಗೂ ಅವಕಾಶ ನೀಡಿದರು. ಸಮಾಜ ಸುಧಾರಣೆ ಅವರ ಹೆಗ್ಗುರಿಯಾಗಿತ್ತು. ವರ್ಗರಹಿತ ಹಾಗೂ ಜಾತಿರಹಿತ ಸಮಾಜ ಸ್ಥಾಪನೆಯ ಗುರಿಯನ್ನು ಹೊಂದಿದ ಆಂದೋಲನ ಅವರದಾಗಿತ್ತು. ಪುರೋಹಿತಶಾಹಿ, ಜಾತಿ ವರ್ಣ ಶ್ರೇಣಿಗಳ ವಿರುದ್ಧ ಬಂಡೆದ್ದು ನಿಂತರು. ಅಸ್ಪೃಶ್ಯತೆಯನ್ನು ಉಗ್ರವಾಗಿ ಖಂಡಿಸಿದರು. ಹುಟ್ಟಿಗಿಂತ ನಡತೆಗೆ ಪ್ರಾಮುಖ್ಯತೆ ನೀಡಿದರು. ಸಮಾಜದಲ್ಲಿ ಮೇಲು ಕೀಳು ಭೇದ ಸಲ್ಲದೆಂದು ಹೇಳಿದ ಅವರು ಶಿವನ ಭಕ್ತರು ಹುಟ್ಟಿನಿಂದ ಬ್ರಾಹ್ಮಣರಿರಲಿ ಅಂತ್ಯಜರಿರಲಿ ಎಲ್ಲರೂ ಸಮಾನರು ಎಂದು ಹೇಳಿದರು. ಆದಕ್ಕಾಗಿ ವೃತ್ತಿ ಸಮಾನತೆ, ವೃತ್ತಿ ಸ್ವಾತಂತ್ರ್ಯ ಶ್ರಮ ಗೌರವಗಳಿಗೆ ಹೆಚ್ಚು ಒತ್ತು ನೀಡಿದರು. ಶ್ರಮಗೌರವದ ತತ್ವಪ್ರಚಾರ ಮಾಡಿದರು. ಕಾಯಕವೇ ಕೈಲಾಸ ಎಂಬ ಘೋಷ ವಾಕ್ಯವನ್ನು ಪ್ರಚಾರಪಡಿಸಿದರು. ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರಂತೆ ಜಗದೊಳಗೆ ಎಂದು ಸಾರಿ ಹೇಳಿದರು.

ಪ್ರಸ್ತುತ ಲಿಂಗಾಯತ ಧರ್ಮ - ಲಿಂಗಾಯತರು :

ಕುಲ ಶ್ರೇಷ್ಠತೆಯನ್ನು ನಿರ್ಲಕ್ಷಿಸಿ ಕಾಯಕ ಜೀವಿಗಳಿಗೆ ಪ್ರಾಮುಖ್ಯತೆ ನೀಡಿ ಬಸವಣ್ಣನವರು ಬೆಳೆಸಿದ ಲಿಂಗಾಯತಧರ್ಮ ಒಂದು ಜೀವನ ಪದ್ಧತಿಯಾಗಿದ್ದು, ಅದು ಇಂದು ಜಾತಿ ಸೂಚಕವಾಗಿರುವುದು ದುರ್ದೈವದ ಸಂಗತಿ. ಲಿಂಗಾಯತರೆನಿಸಿಕೊಂಡವರೆಲ್ಲ ತಲೆತಗ್ಗಿಸಬೇಕಾಗಿದೆ. ಯಾವುದನ್ನು ಬಸವಣ್ಣ ನಾಶಮಾಡಬೇಕೆಂದನೋ ಅಂತಹ ಜಾತಿಯನ್ನೇ ಇಂದು ಪೋಷಿಸಲಾಗುತ್ತಿದೆ. ಬುದ್ಧನಾದ ಮೇಲೆ ಬಸವಣ್ಣನವರು ಜಾತಿಪದ್ಧತಿಯನ್ನು ವ್ಯವಸ್ಥಿತವಾಗಿ ನಿರ್ನಾಮ ಮಾಡಲು ಪ್ರಯತ್ನಪಟ್ಟರು. ಆದರೆ ವಿಪರ್ಯಾಸವೆಂದರೆ ಅವರು ಹೋದಮೇಲೆ ವೀರಶೈವಜಾತಿ ನಿರ್ಮಾಣವಾಯಿತು. ಇದು ಉಳಿದ ಜಾತಿಗಳಷ್ಟೇ ಅರ್ಥವಿಲ್ಲದ ಸಂಪ್ರದಾಯಗಳಿಂದ ಕೂಡಿದ ಬಿಗಿಯಾದ ಕರ್ನಾಟಕದ ಒಂದು ದೊಡ್ಡ ಜಾತಿಯಾಗಿದೆ.(ಡಾ;ಹೆಚ್.ನರಸಿಂಹಯ್ಯ - ಹೋರಾಟದಹಾದಿ, ಆತ್ಮಕಥೆ ಪುಟ 428) ಎನ್ನುವ ಡಾ.ಹೆಚ್ಚೆನ್‌ರವರ ಮಾತುಗಳನ್ನು ನಾವು ಸದಾ ಮನನ ಮಾಡಬೇಕಾಗಿದೆ.

ಇಂದಿನ ಕೆಲ ಲಿಂಗಾಯತ ಮಠಗಳಲ್ಲಿ ಬಸವಣ್ಣನ ಜಂಗಮ ಚಳುವಳಿ ಮಾಯವಾಗಿ, ಮಠ ಮಾನ್ಯಗಳ, ಉಳ್ಳವರ ಹಿಡಿತದಲ್ಲಿ ಸ್ಥಾವರವಾಗಿವೆ. ವರ್ತಮಾನದಲ್ಲಿ ವೈದಿಕ ಕರಾಳತೆ ಸ್ಥಿರಗೊಳ್ಳುತ್ತಿದೆಯೇ? ಎಂಬ ಸ್ಥಿತಿ ಇಂದು ನಮ್ಮ ಕಣ್ಣೆದುರಿಗೆ ನಿಚ್ಚಳವಾಗಿದೆ. ಪ್ರಸ್ತುತ ಸಮಾಜದಲ್ಲಿ ಊಳಿಗಮಾನ್ಯ ಪದ್ಧತಿ ಅಸ್ತಿತ್ವದಲ್ಲಿದ್ದು ವೈದಿಕಶಾಹಿಯ ಕರಾಳನೆರಳು ಮಠಗಳ ಮೇಲೆ ಆವರಿಸಿ ಮೂಢನಂಬಿಕೆಯ ಕೇಂದ್ರಗಳಾಗುತ್ತಿವೆ. ಮಠಗಳಿಗೆ ಇಂದು ಅಪಾರ ಹಣವು ಬಂದು ಸೇರುತ್ತಿದ್ದು ಢಾಳವಾಗಿ ಕಂಡು ಬರುತ್ತಿದೆ. ಒಂದು ಕಾಲಕ್ಕೆ ಕ್ರಾಂತಿ ಕಿಡಿಯನ್ನು ಹಾರಿಸಿದ ಶರಣ ಸಮಾಜ ಇಂದು ಅದೇ ವೈದಿಕ ಶಾಹಿಯ ಜಾತಿ,

ಅಸ್ಪೃಶ್ಯತೆ, ಹಿಂದೂತ್ವ, ಉಗ್ರಗ್ರಾಮಿತ್ವಗಳನ್ನೆಲ್ಲ ಸುತ್ತಿಕೊಂಡು ಪ್ರತಿಗಾಮಿ ಸಂಸ್ಥೆಗಳಾಗುತ್ತಿರುವುದು ನಮ್ಮ ಕಣ್ಣ ಮುಂದಿನ ಸತ್ಯ. ಯಾವ ಕರ್ಮವಾದದ ಸಂಸ್ಕೃತಿಯ ವಿರುದ್ಧ ಬಸವಣ್ಣನವರು ಬಂಡೆದ್ದರೋ! ಅಂತಹ ಸಂಸ್ಕೃತಿಯನ್ನು ಪೋಷಿಸುತ್ತಿರುವ ಮಠಗಳು ಮೌಢ್ಯದ ಕೇಂದ್ರಗಳಾಗುತ್ತಿವೆ.

ಪಟ್ಟಭದ್ರ ಹಿತಾಸಕ್ತಿಗಳ, ಪುರೋಹಿತಶಾಹಿಗಳ ಸಂಚು ಧರ್ಮದ ಗೋಡೆ ಕಟ್ಟಿ ಜನ ಸಾಮಾನ್ಯರ ಬದುಕನ್ನು ಅಸಹ್ಯವಾಗಿಸಿದುದನ್ನು ಕಂಡಾಗ, ತಿರಸ್ಕೃತರಾದಂತವರ ಬದುಕು ನೀಗಲಾರದೆ ಹೋದಂಥ ಸಂದರ್ಭದಲ್ಲಿ ಬಸವಣ್ಣನವರು ಧಾರ್ಮಿಕ, ರಾಜಕೀಯ, ಸಾಮಾಜಿಕ ಚಿಂತನೆಗಳನ್ನು ಜನರ ಕಣ್ಮುಂದಿರಿಸಿ ಪರಂಪರೆಯ ಸೋಗನ್ನು ಬಯಲುಗೊಳಿಸಿದರು. ಕಾಯಕವೇ ಕೈಲಾಸವೆನ್ನುವ ಮಾತಿನಂತೆ ದೈಹಿಕ ಮತ್ತು ಬೌದ್ಧಿಕ ಕ್ರಿಯೆಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾ ಮಾನಸಿಕವಾಗಿ ಕುಗ್ಗಿ ಹೋದ ಸಮುದಾಯವನ್ನು ಮೇಲೆತ್ತಲು ಶ್ರಮಿಸಿದರು. ಆ ಪರಿಶ್ರಮವೇ ಪ್ರತಿಭಟನೆಯ ರೂಪ ತಾಳಿತು. ಅಂಥ ಪ್ರತಿಭಟನೆಯ ಅಂಶಗಳು ಅವರ ವಚನಗಳಲ್ಲಿ ದೊರೆಯುತ್ತವೆ. ಇಂದು ಅವರು ಯಾವುದಕ್ಕಾಗಿ ಪ್ರತಿಭಟಿಸಿದರು ಎಂಬುದನ್ನು ಮರೆತು ಲಿಂಗಾಯತರ ಬಸವಣ್ಣನ ವಚನಗಳನ್ನು ಮಾತ್ರ ಆಗಾಗ ಉದಾಹರಿಸುತ್ತ, ಕುಂತರೇ ನಿಂತರೇ ಬಸವಾ! ಬಸವಾ! ಎಂದೆನ್ನುತ್ತ ಬಸವಣ್ಣನ ತತ್ವಗಳನ್ನೇ ಕೊಲ್ಲುತ್ತಿದ್ದಾರೆ.

ಮೂಢ ಸಂಪ್ರದಾಯವಾದಿಗಳಿಂದ ಬಸವ ತತ್ವಾಚರಣೆಗೆ ವಿರೋಧ ಬರುವುದು ಸಹಜವಾಗಿದೆ. ಇಂತಹ ವಿರೋಧವನ್ನು ಲೆಕ್ಕಿಸದೇ ವೀರರಾಗಿ ಬಸವ ತತ್ವಾಚರಣೆಯಲ್ಲಿ ತೊಡಗಬೇಕು... ಜಾತಿಪದ್ಧತಿ ನಿರ್ಮೂಲನೆಗೆಂದೇ ಬಸವಣ್ಣ ಲಿಂಗ ಕೊಟ್ಟರು. ಆದರೆ ಲಿಂಗ ಕಟ್ಟಿಕೊಂಡವರೆಲ್ಲ ಪಕ್ಕಾ ಜಾತಿ ವಾದಿಗಳಾಗುತ್ತಿರುವುದು ದುರಂತ. ಇಂತಹ ಜಾತಿವಾದಿಗಳು ಬಸವಣ್ಣನವರ ಹೆಸರು ಹೇಳಲು, ವಚನಗಳನ್ನು ನುಡಿಯಲು ಅರ್ಹತೆ ಇದೆಯೇ ಎಂಬ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಬಸವಣ್ಣನವರು ಸ್ಥಾಪಿಸಿದ ಲಿಂಗಾಯತಧರ್ಮ, ಸಮಾಜ ನಿರ್ಮಾಣವಾಯಿತು. ಆದರೆ ಪಟ್ಟಭದ್ರ ಜಾತಿವಾದಿಗಳ, ಪುರೋಹಿತಶಾಹಿಗಳ ಕಪಟ ಕಾರಸ್ಥಾನದಿಂದ ಕಲ್ಯಾಣಕ್ರಾಂತಿ ನಡೆದು ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆಯಾಗುವಂತಾಯಿತು. ಸಹಸ್ರಾರು ಶರಣ, ಶರಣೆಯರು ಬಲಿದಾನವಾದರು. ದಯೆ, ಪ್ರೀತಿ, ಮಾನವೀಯತೆ, ಸಮಾನತೆ, ಕಾಯಕ ಜೀವಿಗಳ ಕಲ್ಯಾಣರಾಜ್ಯ ನಿರ್ಮಿಸಿದ್ದು, ಬಸವಣ್ಣ ಗಡಿಪಾರುಗೊಂಡು ಕಪ್ಪಡಿಸಂಗಮಕ್ಕೆ ಬಂದು ಬಯಲಾಗಬೇಕಾಯಿತು ಎಂದು ಚಿತ್ರರಗಿಯ ಶ್ರೀವಿಜಯಮಹಾಂತಸ್ವಾಮಿಗಳು, ಇಲಕಲ್ ಇವರು ಕೂಡಲಸಂಗಮದ ಬಸವ ಸಭಾಭವನದಲ್ಲಿ ಬಸವಸಮಿತಿಯ-ಬಸವೇಶ್ವರ ಕ್ರಾಂತಿಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾಡಿದ ಭಾಷಣದ ಕೆಲವು ಮಾತುಗಳು[34] ಪ್ರಸ್ತುತ ಲಿಂಗಾಯತರ ಸ್ಥಿತಿಗತಿ ಹಾಗೂ ಲಿಂಗಾಯತರ ಎಡಬಿಡಂಗಿತನಗಳನ್ನು ವಿಮರ್ಶಿಸುತ್ತ ಬಸವಣ್ಣನವರ ಕ್ರಾಂತಿಚರಿತ್ರೆಯನ್ನು ಸಮಗ್ರವಾಗಿ ವ್ಯಾಖ್ಯಾನಿಸಿದ್ದಾರೆ. ಕೆಲವು ಮಠಾಧೀಶರಾದರೂ ಇಂದು ಬಸವತತ್ವದ ಆಚರಣೆ, ಆ ತತ್ವಗಳ ರೀತ್ಯ ಬದುಕು ಸಾಗಿಸುತ್ತಿರುವುದು ಸ್ವಾಗತಾರ್ಹ ಹಾಗೂ ಅನುಕರಣೀಯ. ಬಸವತತ್ವದ ನೈಜ ತತ್ವ ನಿಜ ಜೀವನದಲ್ಲಿ ಹಾಸು ಹೊಕ್ಕಾದರೆ ಅದರೆಡೆಗೆ ಒಲವಿಟ್ಟುಕೊಂಡವರು ಅದರ ಹತ್ತಿರಕ್ಕೆ ಬರಲು ಸಾಧ್ಯವಾದೀತು.

ಲಿಂಗಾಯತಧರ್ಮ ಹಿಂದೂಧರ್ಮದೊಳಗಣ ಪುರೋಹಿತಶಾಹಿಯ ವಿರುದ್ಧ ಸೆಟೆದು ನಿಂತ ಪಂಥ ಎನ್ನುವುದು ಹೆಚ್ಚು ಸೂಕ್ತ. ಸಂಪ್ರದಾಯವಾದೀ ವೀರಶೈವರು ಇದು ವಿಭಜನವಾದಿ ಮತ್ತು ಬ್ರಾಹ್ಮಣ

ವಿರೋಧಿ ಪಂಥ ಅಲ್ಲವೆಂದು ವಾದಿಸುವುದೂ ಇದೆ. ವೇದಗಳ ಪ್ರಾಮಣ್ಯವನ್ನು ಒಪ್ಪುವುದಿಲ್ಲವೆಂದ ಮಾತ್ರಕ್ಕೆ ವೀರಶೈವರು ಹಿಂದೂಗಳಲ್ಲ ಎಂದು ಹೇಳಲಾಗದು. ಇತ್ತೀಚಿನವರೆಗೂ ತಮ್ಮನ್ನು ಎಂದೂ ಹಿಂದೂಗಳಲ್ಲ ಎಂದು ಕರೆದುಕೊಳ್ಳುವ ವೀರಶೈವೊಂದು ದೊಡ್ಡ ಗುಂಪು ಇದೀಗ ತನ್ನನ್ನು ಹಿಂದೂ ಅಲ್ಲ ಆದರ ವೀರಶೈವ ಎಂದು ಗುರುತಿಸಿ ಮಾನ್ಯ ಮಾಡಬೇಕೆಂದು ಜನಗಣತಿಯ ಸಂದರ್ಭದಲ್ಲಿ ಕೇಳಿಕೊಂಡಿದೆ. ವೀರಶೈವರು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಿರುವುದರಿಂದ ತಮ್ಮನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಅಲ್ಪಸಂಖ್ಯಾತರಿಗಾಗಿ ನಿಗದಿಪಡಿಸಲಾಗಿರುವ ಎಲ್ಲಾ ಮೀಸಲಾತಿಯ ಸೌಲಭ್ಯಗಳನ್ನು ನೀಡಬೇಕೆಂದು ಅದು ಬೇಡಿಕೆ ಮುಂದಿಟ್ಟದೆ[35] ಇದರಂತೆಯೆ ಜಂಗಮ ಅಥವಾ ವೀರಮಹೇಶ್ವರರು ಅಂದರೆ ಲಿಂಗಾಯತರ ಗುರುಗಳೆನಿಸಿಕೊಂಡವರು ಬೇಡಜಂಗಮ ಪ್ರಮಾಣಪತ್ರ ನೀಡಿ ಮೀಸಲಾತಿ ಕೇಳುತ್ತಿರುವುದು. ಇವುಗಳೆಲ್ಲ ಪ್ರಸ್ತುತ ಲಿಂಗಾಯತರ ವಾಸ್ತವವನ್ನು ತೆರೆದಿಡುತ್ತವೆ. ಚಾರಿತ್ರಿಕವಾಗಿ ಈಜನ ವರ್ಗ ವ್ಯಾಪಾರ, ವ್ಯವಹಾರ, ಕೃಷಿಯಲ್ಲಿ ನಿರತವಾಗಿದ್ದು ಆರ್ಥಿಕವಾಗಿ ಬಲಯುತ ಸಮಾಜವಾಗಿದ್ದು, ರಾಜಕೀಯವಾಗಿಯೂ ಅತ್ಯಂತ ಗಮನಾರ್ಹ ಸಮುದಾಯವಾಗಿದ್ದು, ಯಾವುದರಲ್ಲಿ ಇವರು ಮೀಸಲಾತಿ ಕೋರುವಷ್ಟು ಅಲ್ಪ ಸಂಖ್ಯಾತರಲ್ಲ. ಸಂವಿಧಾನದ ಮೀಸಲಾತಿ ವ್ಯವಸ್ಥೆಯನ್ನೇ ಇಂತಹ ಪ್ರಯತ್ನಗಳು ತಲೆಕೆಳಗೆಮಾಡಿ ಅಸಮಾನತೆ ಸ್ಥಿರಗೊಳಿಸುವ ಪ್ರಯತ್ನವೆಂದರೆ ತಪ್ಪಾಗಲಾರದು.

ಬಸವಣ್ಣನವರು ಜಾತೀಯತೆ, ಮಡಿವಂತಿಕೆ, ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆಗಳ ವಿರುದ್ಧ ಸಿಡಿದೆದ್ದು, ವರ್ಗರಹಿತ ಜಾತಿರಹಿತ-ಸಮಾಜ ರಚನೆ ಅವರ ಗುರಿಯಾಗಿತ್ತು. ಆದರೆ ಈ ಆಂದೋಲನದಿಂದ ಸಾಮಾಜಿಕ ಅಸಮಾನತೆ ತೊಡೆದು ಹಾಕುವುದರ ಬದಲು ಹೊಸ ಗುಂಪುಗಳಾಗಿ ಇಂದು ಲಿಂಗಾಯತ ಸಮಾಜ ಒಡೆದು ಹೋಗಿರುವುದನ್ನು ಕಾಣಬಹುದಾಗಿದೆ. ಉದಾಃಬಣಜಿಗರು, ಶಿವಸಿಂಪಿಗರು, ಸಾದರು, ಪಂಚಾಚಾರ ಲಿಂಗಾಯತರು, ಕುಂಬಾರ ಲಿಂಗಾಯತರು, ಕ್ಷೌರಿಕ ಲಿಂಗಾಯತರು, ಹಂಡೆರಾಹುತ ಲಿಂಗಾಯತರು ಇತ್ಯಾದಿ ಇವರುಗಳಲ್ಲಿ ವೈವಾಹಿಕ ಸಂಬಂಧಗಳು ಅವರವರ ಜಾತಿಗಳಲ್ಲಿ ನಡೆಯುತ್ತವೆ. ಬಸವಣ್ಣನ ಲಿಂಗಾಯತಧರ್ಮ ಅನೇಕ ಜಾತಿ ಉಪಜಾತಿಗಳಾಗಿರುವುದು ವಿಪರ್ಯಾಸ.

Instread of abolition of social inequalities, the movement succeeded in adding a few more new castes and sub castes. For today Veerasaivism is functioning precisely on the basic of caste stratification Common to Brabanical Hinduism " – C. Parvathamma in her " Sociological Essays on Veerasaivism 1972. ಇಂದು ವೀರಶೈವಮತವು ಬ್ರಾಹ್ಮಣರ ಕಾಲದ ಹಿಂದೂ ಧರ್ಮಕ್ಕೆ ಸಾಮಾನ್ಯವಾಗಿದ್ದ ಜಾತಿ ಸ್ತರ ವ್ಯವಸ್ಥೆಯ ನೆಲೆಯಲ್ಲಿಯೇ ಆಚರಣೆಯಲ್ಲಿದೆ ಎನ್ನುತ್ತಾರೆ ಸಿ. ಪಾರ್ವತಮ್ಮ.[36] ಸಮಾಜ ಶಾಸ್ತ್ರಜ್ಞರ ಈ ವಿಮರ್ಶೆಗಳನ್ನು ಲಿಂಗಾಯತರು ಅರಿಯದೇ ಹೋದರೆ ಬಸವ ತತ್ವಗಳು ಕರ್ಮಠವಾಗಿ ಅದರ ಸುಧಾರಣೆಗಾಗಿಯೇ ಮತ್ತೊಂದು ಪ್ರತ್ಯೇಕ ಚಳುವಳಿಯನ್ನೇ ಮಾಡಬೇಕಾಗುತ್ತದೆ. ತನ್ನ ಆಂತರ್ಯದಲ್ಲಿಯೇ ಜಾತಿಯ ವೈಲಕ್ಷಣಗಳನ್ನು ಇಟ್ಟುಕೊಂಡಿರುವ ಲಿಂಗಾಯತಧರ್ಮ ಇನ್ನುಳಿದವರಿಗೆ ಹೇಗೆ ಮಾದರಿಯಾದೀತು. ಅದರ ಪರಿಷ್ಕರಣೆಯಾಗಲೇಬೇಕು. ಅದಕ್ಕೆ ಬೇರೆ ಏನನ್ನು ಮಾಡುವ ಅಗತ್ಯವಿಲ್ಲ. ಬಸವಣ್ಣನ ತತ್ವಗಳ ನೈಜತೆಯನ್ನು ಅರಿತು ವಾಸ್ತವ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಮೇಲು-ಕೀಳು ಎನ್ನದೇ, ಇವನಾರವ, ಇವನಾರವ ಎಂದಿನಿಸದಿರಯ್ಯ

ಇವ ನಮ್ಮವ ಇವ ನಮ್ಮವ ಎಂಬ ಸಮಷ್ಠಿ ಪ್ರಜ್ಞೆಯನ್ನು ಇಂದಿನ ಲಿಂಗಾಯತರು ಮೈಗೂಡಿಸಿಕೊಳ್ಳಬೇಕಾಗಿದೆ.

ತೊಡೆದು ಹಾಕಲಾಗದ ಜಾತಿವ್ಯವಸ್ಥೆ- ಬಲವಾಗುತ್ತಿರುವ ಜಾತಿಪ್ರಜ್ಞೆ :

ಜಾತೀಯತೆ ಮತ್ತು ಜಾತಿಪದ್ಧತಿಯ ವಿರುದ್ಧ ಸಿಡಿದು ನಿಂತ ವೀರಶೈವಮತದ ಅನುಯಾಯಿಗಳ ಸಮುದಾಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಜಾತಿವ್ಯವಸ್ಥೆಯ ಭಾಗವಾಗಿರುವುದಲ್ಲದೆ ಕೆಲವೊಂದು ಜಾತಿ ತತ್ವಗಳನ್ನೇ ಅವಲಂಬಿಸಿ ನಿಂತಿದೆ ಎನ್ನಬಹುದು. ವೀರಶೈವರಲ್ಲಿ ಸಾಂಪ್ರದಾಯಿಕ ವೃತ್ತಿ ಎನ್ನುವುದು ಇಲ್ಲವಾದರೂ ಅವರಲ್ಲಿ ಕೆಲವು ವೃತ್ತಿ ಸಮೂಹಗಳಿವೆ. ಉದಾ: ಬಣಜಿಗರು, ವ್ಯಾಪಾರಸ್ಥರು, ಶಿವ ಸಿಂಪಿಗರು, ದರ್ಜಿಗಳು, ಜಂಗಮರು ಅಥವಾ ಪುರೋಹಿತರು ಇತ್ಯಾದಿ. ಆಚಾರ ಮತ್ತು ರೂಢಿಗಳ ದೃಷ್ಟಿಯಿಂದಲೂ ವೀರಶೈವ ಮತವು ಕೆಲವು ಜಾತಿ ಉಪಜಾತಿಗಳನ್ನು ಸೃಷ್ಟಿಸಿದೆ ಎನ್ನಲಡ್ಡಿಯಿಲ್ಲ.

ಐತಿಹಾಸಿಕ ಕಾರಣಗಳಿಗಾಗಿ ವೀರಶೈವ ಅಥವಾ ಲಿಂಗಾಯತಮತವು ಬೇರೆ ಬೇರೆ ಜಾತಿಗಳಿಗೆ ಸೇರಿದವರನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಮತಾಂತರ ಮಾಡಿಕೊಂಡಿದ್ದರಿಂದಲೇ ಬಹಳ ಭರದಿಂದ, ಬೆಳೆಯಲು ಸಾಧ್ಯವಾಯಿತು. ಈ ವೈವಿಧ್ಯಮಯವಾದ ಜಾತಿಮೂಲದ ಮತಾಂತರಿತ ಸಮೂಹಗಳನ್ನು ಒಂದೂಗೂಡಿಸಿ ಸಮಾನತೆಯ ತತ್ವದ ಆಧಾರದ ಮೇಲೆ ಬೆಸೆಯುವಂತೆ ಮಾಡುವಲ್ಲಿ ವೀರಶೈವ ತತ್ವಜ್ಞಾನವು ಅಸಮರ್ಥವಾಯಿತು ಎಂದೇ ಹೇಳಬಹುದು. ಪರಿಣಾಮವಾಗಿ, ಪರಸ್ಪರ ಊಟೋಪಚಾರ ಮಾಡದ ಮತ್ತು ವಿವಾಹವಾಗದ ಜಾತಿ ಉಪಜಾತಿಗಳು ಲಿಂಗಾಯತರಲ್ಲಿ ಇಂದಿಗೂ ಉಳಿಯುವಂತಾಯಿತು. The heterogeneious origin of converted groups could not be unified by the Veerashaiva philosophy. In consequence today there are castes and sub castes among the Lingayats which do not interdine not intermarry with one another–C. Parvathamma[37] ಸಮಾಜ ಶಾಸ್ತ್ರಜ್ಞರ ಈ ವಿಮರ್ಶೆಯನ್ನು ಇಂದು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಏಕೆಂದರೆ ಪ್ರಗತಿಪರ ಬಸವತತ್ವ ಇಂದು ವಾಸ್ತವದಲ್ಲಿ ಆಚರಣೆಯಲ್ಲಿರದೇ ಅದು ಕೇವಲ ಪುಸ್ತಕದ ಸರಕಾಗಿದೆ, ಮಸ್ತಕದ ಜ್ಞಾನವಾಗಿ ವಾಸ್ತವಕ್ಕೆ ಬರಬೇಕಾಗಿದೆ.

ಬಸವಣ್ಣನವರ ಮೂಲ ಉದ್ದೇಶಕ್ಕೆ ವಿರುದ್ಧವಾಗಿ ಎಂಬಂತೆ ವೀರಶೈವರಲ್ಲಿ ಈಗ ಜಾತಿಪ್ರಜ್ಞೆ ಮತ್ತು ಜಾತಿಯ ಬಲದ ಪ್ರಜ್ಞೆ ಭರದಿಂದ ಬೆಳೆಯತೊಡಗಿದೆ. ಸ್ಥಳೀಯ ಲಿಂಗಾಯತರು ಸ್ಥಳೀಯ ಮಟ್ಟದಲ್ಲಿ ರಾಜಕೀಯ ಅಧಿಕಾರವನ್ನು ಪಡೆಯಲು ಎಲ್ಲಾ ಪ್ರಯತ್ನ ನಡೆಸುತ್ತಲೇ ಬಂದಿದ್ದಾರೆ. ಆರ್ಥಿಕವಾಗಿ ಪ್ರಬಲರಿರುವ ಲಿಂಗಾಯತರು ಸಂಸ್ಕಾರದ ದೃಷ್ಟಿಯಿಂದ ತಾವು ಕ್ಷತ್ರಿಯರಿಗೆ ಸಮಾನರೆಂದು ಹೇಳಿಕೊಳ್ಳುತ್ತಿದ್ದು, ರಾಜಕೀಯವಾಗಿ ಒಂದು ಶಕ್ತಿಯಾಗಿ ರೂಪುಗೊಂಡಿದ್ದಾರೆ. ಕರ್ನಾಟಕ ರಾಜ್ಯದ ಜನಸಂಖ್ಯೆಯ ಪ್ರತಿಶತ 30 ರಷ್ಟಿರುವ ಲಿಂಗಾಯತರು ಜನತೆಗೆ ರಾಜಕೀಯ ನೇತೃತ್ವವನ್ನು ನೀಡುವ ಹೋರಾಟದಲ್ಲಿ 1956 ರಿಂದಲೂ ತೊಡಗಿರುವುದನ್ನು ಗಮನಿಸರಬಹುದು. ಇತ್ತೀಚಿನ ವರ್ಷಗಳಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿರುವ ಲಿಂಗಾಯತ ಸಮುದಾಯವೂ ತನ್ನನ್ನು ಹಿಂದುಳಿದ ಸಮುದಾಯ ಎಂದು ಹೇಳಿಕೊಳ್ಳುತ್ತಿರುವುದು ವಿಚಿತ್ರವೂ ಮತ್ತು ವಿರೋಧಾಭಾಸ ಪೂರ್ಣವೂ ಆಗಿದೆ.

ಲಿಂಗಾಯತಧರ್ಮದ ಕೆಲವರು ಆದರಲ್ಲೂ ಜಂಗಮ ಎಂಬ ಹಣೆಪಟ್ಟಿ ಹಚ್ಚಿಕೊಂಡು ನಾವು ಗುರುಗಳು, ಸ್ವಾಮಿಗಳು ಅಥವಾ ಅಯ್ಯನವರು ಎಂದು ಕರೆದುಕೊಳ್ಳುವ ಹಾಗೂ ಲಿಂಗಾಯತಧರ್ಮದ ಜನರಲ್ಲಿ ತಮ್ಮ ಶ್ರೇಷ್ಠತೆಯನ್ನು ಹೊಂದಿದವರೇ ಇಂದು ಬೇಡಜಂಗಮ ಎಂಬ ಆಂಧ್ರ ಮೂಲದ ವೈಷ್ಣವ ಪಂಗಡದ ಹಂದಿ ಮಾಂಸಾಹಾರಿಗಳಾದ ತೆಲುಗು ಭಾಷಿಕರಾದ ಜನರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿರುವುದನ್ನು ದುರುಪಯೋಗಪಡಿಸಿಕೊಂಡು ನಾವು ಬೇಡುವ ಜಂಗಮರಾದ್ದರಿಂದ ನಮಗೂ ಜಂಗಮ ಎಂಬ ಜಾತಿಯ ಪ್ರಮಾಣಪತ್ರ ಕೊಡಬೇಕು ಹಾಗೂ ಪರಿಶಿಷ್ಟಜಾತಿಯವರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು ಎಂದು ಹೈಕೋರ್ಟನಿಂದ ಮಧ್ಯಂತರ ಆಜ್ಞೆಯೊಂದನ್ನು ದೊರಕಿಸಿಕೊಂಡು ಪರಿಶಿಷ್ಟಜಾತಿಯ ಜನರಿಗೆ ನ್ಯಾಯವಾಗಿ ದೊರಕಬೇಕಾದ ಮೀಸಲಾತಿಯ ಪಾಲಿನಲ್ಲಿ ಅನ್ಯಾಯವಾಗಿ ಕೈ ಹಾಕುತ್ತಿದ್ದಾರೆ.

ಮತ್ತೊಂದು ಕಡೆಗೆ ಜಂಗಮರಿಗಿಂತ ನಾವೇನು ಕಡಿಮೆಯೆಂದು ಲಿಂಗಾಯತರಲ್ಲಿಯೇ ಉನ್ನತ ಸ್ಥಾನಮಾನ ಹೊಂದಿರುವ ಪಂಚಮಸಾಲಿ ಜನ ನಮ್ಮನ್ನೂ ಹಿಂದುಳಿದ ಜಾತಿಯೆಂದು ಪರಿಗಣಿಸಬೇಕೆಂದು ಆಂದೋಲನ ಪ್ರಾರಂಭಿಸಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಲಿಂಗಾಯತರು ಎಂದು ಹೇಳಿಕೊಳ್ಳುವವರು ಯಾರೂ ಇಲ್ಲದೇ ಕೇವಲ ಜಾತಿಗಳೇ ಉಳಿದು, ಲಿಂಗಾಯತ ಎಂಬ ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಹಾಗೂ ಆವರ ಅನುಯಾಯಿಗಳಿಂದ ಹಿಂದೂ ಧರ್ಮದಿಂದ ಸಿಡಿದು ನಿಂತ ವಚನಕಾರರ ಚಳುವಳಿಯ ಫಲವಾಗಿ ಜನ್ಮ ತಳೆದ ಲಿಂಗಾಯತ ಧರ್ಮವೇ ಅಳಿದು ಹೋಗುವುದೇನೋ ಎಂಬ ಆತಂಕ, ವಿಷಾದ ಉಂಟಾಗುತ್ತದೆ.

ಇಂತಹ ಸಂದಿಗ್ಧ ಸಂದರ್ಭದಲ್ಲಿ ಲಿಂಗಾಯತಧರ್ಮದ ಬಗ್ಗೆ ಇಲ್ಲಿಯವರೆಗೂ ಉಳಿದುಕೊಂಡು ಬಂದಿರುವ ಕೆಲವು ಗೊಂದಲಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಲಿಂಗಾಯತ ಧರ್ಮೀಯರು ತಮ್ಮನ್ನು ವೀರಶೈವರು ಎಂದು ಕರೆದುಕೊಳ್ಳುವುದನ್ನು ಕಾಣುತ್ತೇವೆ. ವೀರಶೈವ ಹಾಗೂ ಲಿಂಗಾಯತ ಈ ಎರಡು ಶಬ್ದಗಳನ್ನು ಸಮಾನಾರ್ಥಕ ಪದಗಳಂತೆ ಬಳಸುತ್ತ ಬರಲಾಗಿದೆ. ಆದರೆ ಈ ಶಬ್ದಗಳ ಕುರಿತು ಅವುಗಳ ಚರಿತ್ರೆ ಕುರಿತು ಗಂಭೀರ ಚರ್ಚೆ ಚಿಂತನೆ ಮಾಡುವುದು ಒಳ್ಳೆಯದು. ಹಿಂದೂಧರ್ಮದ ವೈಷ್ಣವ, ಶೈವ ಪಂಥಗಳಂತೆಯೇ ವೀರಶೈವ ಶೈವಪಂಥದ ಉಪಶಾಖೆ ಸಂಸ್ಥಾಪಕರು ಪಂಚಾಚಾರ್ಯರು ಎಂಬ ನಂಬಿಕೆ ಬೆಳೆದು ಬಂದಿದೆ. 12ನೇ ಶತಮಾನದಲ್ಲಿ ಬಸವಣ್ಣ ಹಾಗೂ ಅವರೊಂದಿಗೆ ವಿವಿಧ ಜಾತಿಗೆ ಸೇರಿದ ಶಿವಶರಣ ನೇತೃತ್ವದಲ್ಲಿ ಒಂದು ಆಂದೋಲನ ಬೆಳೆದು ಬಂದ ಧರ್ಮ ಲಿಂಗಾಯತ ಈ ಐತಿಹಾಸಿಕ ಸತ್ಯವನ್ನು ಯಾರೂ ಅಲ್ಲಗಳೆಯಲಾರರು ಏಕೆಂದರೆ ಅದಕ್ಕೆ ಶಾಸನಗಳು, ಸಾಹಿತ್ಯಿಕ ಕೃತಿಗಳು, ವಚನಗಳು, ಸಾಕ್ಷಿಯಾಗಿವೆ. ಲಿಂಗಾಯತಧರ್ಮಕ್ಕೆ ಹಿಂದೂಧರ್ಮದ ಉಪಶಾಖೆಯಾದ ವೀರಶೈವಧರ್ಮದವರೂ ಸಹ ಬಹುಸಂಖ್ಯೆಯಲ್ಲಿ ಸೇರಿಕೊಂಡಿದ್ದರಿಂದ ಲಿಂಗಾಯತಧರ್ಮಕ್ಕೆ ವೀರಶೈವ ಪದದ ನಂಟು ಅಂದಿನಿಂದಲೂ ಅಂಟಿಕೊಂಡು ಬಂದಿದೆ. ಹೀಗಾಗಿ ಇವು ಸಮನಾರ್ಥಕ ಪದಗಳಲ್ಲ. ಆದರೆ ಬಳಕೆಯಿಂದಾಗಿ ಸಮಾನತೆ ಪಡೆದುಕೊಂಡಿವೆಯಷ್ಟೆ.

ಯಾವ ಪೂರ್ವಾಗ್ರಹ ಇಲ್ಲದೇ ವಿಚಾರಿಸಿದರೆ, ಲಿಂಗಾಯತಧರ್ಮ 12ನೇ ಶತಮಾನದಲ್ಲಿ ಜೈನರ ಜಡತ್ವ ಹಾಗೂ ಹಿಂದೂಗಳ ಧಾರ್ಮಿಕ ಸಾಮಾಜಿಕ ಹಾಗೂ ಆರ್ಥಿಕ ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ಸಿಡಿದೆದ್ದು ನಿಂತ ಶರಣರು ಹೊಸದೊಂದು ಸಿದ್ಧಾಂತವನ್ನು ಹುಟ್ಟು ಹಾಕಿದರು. ಅವರ ನಾಯಕ

ಬಸವಣ್ಣ ಶೋಷಣೆ, ದಬ್ಬಾಳಿಕೆ, ಅಸಮಾನತೆಗಳಿಗೆ ಅವಕಾಶವಿಲ್ಲದ ಹೊಸ ಧರ್ಮವೇ ಹೊರತು ಹಿಂದೂಧರ್ಮದ ಒಂದು ಜಾತಿ ಅಥವಾ ಉಪಶಾಖೆಯಲ್ಲ. ಶೈವಧರ್ಮದ ರೂಪಾಂತರವೂ ಆದಾಗಿರಲಿಲ್ಲ. ಲಿಂಗಾಯತ ಧರ್ಮದ ಮೂಲ ಧ್ಯೇಯೋದ್ದೇಶಗಳು ಹೀಗಿವೆ :

- ಜಾತಿರಹಿತ ಸಮಾಜವಾದಿ ಸಮಾಜ ನಿರ್ಮಾಣ
- ಮೂಢನಂಬಿಕೆಗಳ ಫಲವಾದ ಹಲವಾರು ದೇವರುಗಳ ಮತ್ತು ಮೂರ್ತಿಪೂಜೆ ನಿರಾಕರಣೆ ಹಾಗೂ ಏಕದೇವೋಪಾಸನೆ
- ಸ್ತ್ರೀಯರಿಗೆ ಸಮಾನ ಸ್ವಾತಂತ್ರ್ಯ
- ಪಂಚಸೂತಕಗಳ ನಿರಾಕರಣೆ
- ಪುರೋಹಿತ ಶಾಹಿಯ ತಿರಸ್ಕಾರ ನಿರ್ಮೂಲನೆ
- ಪ್ರತಿಯೊಂದು ವಿಚಾರವನ್ನು ವೈಜ್ಞಾನಿಕತೆಯ, ವಿಚಾರವಾದದ ಒರೆಗಲ್ಲಿಗೆ ಹಚ್ಚಿ ನೋಡುವಿಕೆ [38]

ಈ ಎಲ್ಲ ವಿಚಾರಗಳು ಲಿಂಗಾಯತಧರ್ಮ ಒಂದು ನೂತನ ಕ್ರಾಂತಿಕಾರಿ ಧರ್ಮವೇ ಹೊರತು ಹಿಂದೂ ಧರ್ಮಕ್ಕೂ ಲಿಂಗಾಯತ ಧರ್ಮಕ್ಕೂ ಯಾವುದೇ ರೀತಿಯ ಸಾಮ್ಯಗಳಿಲ್ಲವೆಂಬುದನ್ನು ಶರಣರ ವಚನ ಸಾಹಿತ್ಯದ ಆಧಾರದಿಂದ ನಾವು ಸ್ಪಷ್ಟವಾಗಿ ಕಾಣಬಹುದು. ಲಿಂಗಾಯತಧರ್ಮದ ಮೂಲ ನೆಲೆಗಟ್ಟು ಜಾತಿರಹಿತ ಸಮಾಜ ನಿರ್ಮಾಣವಾಗಿತ್ತು. ಅಂದಿನ ವಚನಕಾರರು ಜಾತೀಯತೆಯನ್ನು ತಿರಸ್ಕರಿಸಿದ್ದಾರೆ. ಜಾತಿಗೆ ಸ್ಥಾನವಿಲ್ಲ. ವೃತ್ತಿ ಕಸುಬುಗಳು ಜೀವನೋಪಾಯಕ್ಕೆ ವ್ಯವಸಾಯ, ವ್ಯವಹಾರ ಅಥವಾ ಉದ್ಯೋಗಗಳೇ ಹೊರತು ಜಾತಿಗಳಲ್ಲವೆಂದು ಈ ಧರ್ಮದ ಅನುಯಾಯಿಗಳು ಪ್ರಮಾಣಿಸಿದ್ದಾರೆ. ಅಂದು ಲಿಂಗಾಯತಧರ್ಮವನ್ನು ವೈಜ್ಞಾನಿಕ ಹಾಗೂ ತರ್ಕಬದ್ಧ ಧರ್ಮವಾಗಿ ನಿರೂಪಿಸಲಾಯಿತು. ಕಾಯಕಕ್ಕೆ ಪ್ರಾಶಸ್ತ್ಯ, ಯಾವುದೇ ಕೀಳರಿಮೆ ಇಲ್ಲ. ವೇದ, ಆಗಮ, ಶಾಸ್ತ್ರ, ಪುರಾಣಗಳ ನಿರಾಕರಣೆ, ಹಲವು ದೇವರ ನಿರಾಕರಣೆ, ಏಕದೇವೋಪಾಸನೆ, ಸ್ತ್ರೀ ಸಮಾನತೆ, ಪುರೋಹಿತರ ನಿರಾಕರಣೆ, ಇವು ಲಿಂಗಾಯತಧರ್ಮದ ಆಧಾರ ಸ್ತಂಭಗಳಾಗಿದ್ದವು.

ಬ್ರಾಹ್ಮಣ್ಯವೇ ಜೀವಾಳದ ಹಿಂದೂಧರ್ಮದ ಸಂಕೋಲೆಗಳಿಂದ ಬಿಡುಗಡೆಯಾಗುವುದೇ ತುಳಿತಕ್ಕೆ, ಶೋಷಣೆಗೆ, ಅವಮಾನಕ್ಕೆ ಗುರಿಯಾದ ಜನತೆಯ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಮೋಚನೆಯ ಮೊದಲ ಹೆಜ್ಜೆ. ಜಗತ್ತಿನ ಕೆಲವೇ ಶ್ರೇಷ್ಠ ಮಾನವೀಯ ಧರ್ಮಗಳಲ್ಲಿ ಒಂದಾದ ಲಿಂಗಾಯತಧರ್ಮ ವೈಜ್ಞಾನಿಕವೂ, ತಾರ್ಕಿಕವೂ ಆಗಿರುವುದು ಒಂದು ವೈಶಿಷ್ಟ್ಯ. ಇಂತಹುದರಲ್ಲಿ ಲಿಂಗಾಯತಧರ್ಮವನ್ನು ಹಿಂದೂಧರ್ಮದ ಬಾಲಂಗೋಚಿಯೆನ್ನುವಂತೆ ಪ್ರತಿಪಾದಿಸುವ ಸ್ವಾರ್ಥಿ ಹಾಗೂ ದುಷ್ಟ ಕೋಮುವಾದಿಗಳ ಧಾರ್ಮಿಕ ರಾಜಕಾರಣದ ಕುತಂತ್ರವನ್ನು ಬಯಲಿಗೆಳೆಯುವುದು. ಪ್ರತಿಯೊಬ್ಬ ಪ್ರಜ್ಞಾವಂತ ಲಿಂಗಾಯತನ ಪವಿತ್ರ ಕರ್ತವ್ಯವಾಗಿದೆ. ಹಿಂದೂಧರ್ಮದ ಹಾಗೂ ವೀರಶೈವ ಪಂಚಪೀಠಾಧೀಶರ ಪ್ರಭಾವದಿಂದ ಮಣ್ಣುಗೂಡುತ್ತಿರುವ ಲಿಂಗಾಯತಧರ್ಮದ ಅಥವಾ ಬಸವ ಚಳುವಳಿಯ ಮಾನವೀಯ ಆಶಯಗಳನ್ನು ಹಾಗೂ ಸಮಾನತೆಯ ಮೌಲ್ಯಗಳನ್ನು ಹಿಂದೂ ಸಾಮ್ರಾಜ್ಯಶಾಹಿಗಳ ಆಂತರಿಕ ದಾಳಿಯಿಂದ ರಕ್ಷಿಸುವುದು ಪ್ರತಿಯೊಬ್ಬ ಬಸವ ತತ್ವಾಭಿಮಾನಿಯ ತುರ್ತು ಅಗತ್ಯವಾಗಿದೆ.

ವರ್ಣಾಶ್ರಮ ಧರ್ಮದ ಆಧಾರದ ಮೇಲೆ ನಿಂತ ಹಿಂದೂಧರ್ಮದ ಸಂಕೋಲೆಗಳಿಂದ ಹೊರ ಬಂದು ಎಂಟು ನೂರ ಐವತ್ತುವರ್ಷಗಳ ಹಿಂದೆಯೇ ಕಾಯಕತತ್ವ ಹಾಗೂ ಸಮಾನತೆಯ ಮೌಲ್ಯಗಳ ಆಧಾರದ ಮೇಲೆ ವರ್ಣ ವ್ಯವಸ್ಥೆಯ ವಿರುದ್ಧ ತಿರುಗಿ ನಿಂತ ಶರಣ ವ್ಯವಸ್ಥೆಯ ಮಹೋನ್ನತ ಚಿಂತನೆಯ ಮತ್ತು ಮಾನವ ಕುಲವೊಂದೆ ಕಾಯಕವೇ ಕೈಲಾಸ ಎಂಬ ಸಂದೇಶಗಳನ್ನು ಜಗತ್ತಿಗೆ ಮತ್ತೊಮ್ಮೆ ಸಾರಿ ಹೇಳುವ ಚಾರಿತ್ರಿಕ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಈ ಜವಾಬ್ದಾರಿ ಬಿಟ್ಟು ಕರ್ನಾಟಕದ ಲಿಂಗಾಯತರು ಕೋಮುವಾದಿ ಪಕ್ಷದ ಹಿಂಬಾಲಕರಂತೆ ವರ್ತಿಸಿದರೆ ಬಸವ ತತ್ವಕ್ಕೆ ತಿಲಾಂಜಲಿ ಇಟ್ಟಂತೆಯೇ ಸರಿ. ಏಕೆಂದರೆ ಈ ಕೋಮುವಾದಿ ಪಕ್ಷ ಲಿಂಗಾಯತರಾದಿಯಾಗಿ ಎಲ್ಲ ಶೂದ್ರರನ್ನೂ, ದಲಿತರನ್ನೂ, ಹಿಂದುಳಿದವರನ್ನೂ, ಅಲ್ಪ ಸಂಖ್ಯಾತರನ್ನೂ ವ್ಯವಸ್ಥಿತವಾಗಿ ತಮ್ಮ ಕಾಲಡಿಯಲ್ಲಿಯೇ ಇಟ್ಟುಕೊಳ್ಳುವ ಹುನ್ನಾರ ಈಗ ಗುಟ್ಟಾಗಿ ಉಳಿದಿಲ್ಲ. ಇದನ್ನು ಲಿಂಗಾಯತರು ಬಹುಬೇಗ ತಿಳಿದರೆ ಒಳಿತು.

12ನೇಯ ಶತಮಾನದಲ್ಲಿ ಬಸವಾದಿ ಶರಣರು ರೂಪಿಸಿದ ನಾಲ್ಕು ಪ್ರಮುಖ ತತ್ವಗಳು ಭಕ್ತಿ, ಕಾಯಕ, ದಾಸೋಹ, ಮತ್ತು ಸಮಾನತೆ ಇವುಗಳನ್ನು ಅರಿತು ನಡೆದರೆ ಮಾತ್ರ ಲಿಂಗಾಯತರು ಬಸವಣ್ಣನಿಗೆ ಹಾಗೂ ಬಸವ ತತ್ವಕ್ಕೆ ಗೌರವ ಅರ್ಪಿಸಿದಂತೆ. ಸಾಮಾನ್ಯವಾಗಿ ಭಕ್ತಿ ಎಂದರೆ ದೇವರಲ್ಲಿ ತನ್ನನ್ನು ತಾನು ಸಮರ್ಪಿಸುವುದು ಎಂದರ್ಥ. ಆದರೆ ಬಸವಣ್ಣನವರು ಭಕ್ತಿಯನ್ನು ಒಂದು ದೊಡ್ಡ ಪರಿವರ್ತನೆಯ ಸಾಧನವನ್ನಾಗಿ ಮಾಡಿದರು. ಅವರಿಗೆ ವ್ಯಷ್ಠಿಯ ಅಂತರಂಗದ ಶುದ್ಧಿ ಮತ್ತು ಬೆಳವಣಿಗೆಯಷ್ಟೇ ಮುಖ್ಯವಾಗಿರಲಿಲ್ಲ. ಈ ಭಕ್ತಿಯ ಪರಿಕಲ್ಪನೆಯನ್ನು ಒಂದು ಸಮಷ್ಠಿಯ ಬೆಳವಣಿಗೆಯ ಸಾಧನವನ್ನಾಗಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ.ಸಮಾಜದಲ್ಲಿ ಮೇಲು-ಕೀಳುಗಳೆಂಬ ಭಾವನೆಗಳನ್ನು ತೊಡೆದು ಹಾಕಲು ಬಸವಣ್ಣನವರಿಗೆ ಭಕ್ತಿ ಸಾಧನವಾಯಿತು. ಇನ್ನೊಂದೆಡೆ ತಮ್ಮ ಭಿಕ್ಷಾ ಪಾತ್ರೆಯು ಮಾದಾರ ಚೆನ್ನಯ್ಯನ ಮನೆಯಲ್ಲಿ ಡೋಹರ ಕಕ್ಕಯ್ಯನ ಮನೆಯಲ್ಲಿ ಬೇಡಿ ತುಂಬಿತು ಎಂದು ಹೇಳುತ್ತಾರೆ. ಭಕ್ತರಲ್ಲಿ ಕುಲವನರಸಬಾರದೆಂದು ಕಟ್ಟಪ್ಪಣೆ ಮಾಡುತ್ತಾರೆ. ಒಂದು ವಿಶಾಲಾರ್ಥದಲ್ಲಿ ಬಸವಣ್ಣನವರ ಇಡೀ ಕ್ರಾಂತಿಯ ಕಟ್ಟಡ ನಿಂತಿರುವುದು ಭಕ್ತಿಯೆಂಬ ಭದ್ರ ಬುನಾದಿಯ ಮೇಲೆ.ಈ ಅರ್ಥದಲ್ಲಿ ಬಸವಣ್ಣನವರನ್ನು ಭಕ್ತಿ ಭಂಡಾರಿ ಎಂದು ಅರ್ಥಪೂರ್ಣವಾಗಿ ಕರೆಯಲಾಗಿದೆ.

ಕಾಯಕವೆಂದರೆ ಸಾಮಾನ್ಯ ಅರ್ಥದಲ್ಲಿ ಕೆಲಸ. ಆದರೆ ಬಸವಾದಿ ಶರಣರು ಕಾಯಕಕ್ಕೆ ವಿಶಿಷ್ಟ ವ್ಯಾಪಕ ಅರ್ಥವ್ಯಾಪ್ತಿಯನ್ನು ನೀಡಿದರು. ವ್ಯಕ್ತಿಯು ಬೇಡುವ ಕಾಡುವ ಭಕ್ತನಾಗಬಾರದು. ಬಸವಣ್ಣನವರ ದೃಷ್ಟಿಯಲ್ಲಿ ತನ್ನುದರ ಪೋಷಣೆಗಾಗಿ ಬೇಡುವುದು ಪಾಪ. ತಮ್ಮದೊಂದು ವಚನದಲ್ಲಿ: ಮಾಡುವ ನೀಡುವ ಭಕ್ತನ ಕಂಡರೆ ನಿಧಿನಿಧಾನ ಕಂಡಂತಾಯಿತು ಎಂದು ಹೇಳುವಾಗ ಭಕ್ತನು ಕಾಯಕಕ್ಕೆ ಹೆಚ್ಚಿನ ಸ್ಥಾನ ನೀಡಿದರು. ಆಯ್ದಕ್ಕಿ ಮಾರಯ್ಯನವರು ಕಾಯಕದಲ್ಲಿ ನಿರತನಾದರೆ ಲಿಂಗ ಪೂಜೆಯನ್ನು ಮರೆಯಬಹುದು, ಯಾಕೆಂದರೆ ಕಾಯಕವೇ ಕೈಲಾಸ ಎಂದು ಹೇಳುತ್ತಾರೆ. ನುಲಿಯಚಂದಯ್ಯನವರು ಕಾಯಕದಿಂದಲೇ ಮುಕ್ತಿ ಎಂದು ಹೇಳುತ್ತಾರೆ. ಬಸವಣ್ಣನವರು ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರನ್ನು ಕೂಡಲಸಂಗಯ್ಯನೆಂದು ಭಾವಿಸುವುದಾಗಿ ಹೇಳುತ್ತಾರೆ. ಒಟ್ಟಾರೆ ಕಾಯಕವು ಇಹಲೋಕದ ಆರ್ಥಿಕ ಸಂಪತ್ತಿಗೆ ಆಸ್ತಿಭಾರವಾಗುವುದಲ್ಲದೆ ಅಂತರಂಗ ಲೋಕದ ಬೆಳಕಾಗುತ್ತದೆ.

ಸಮಾಜದಲ್ಲಿ ಸಂಪತ್ತು ಉತ್ಪತ್ತಿಯಾಗಲು ಸತ್ಯ ಶುದ್ಧ ಕಾಯಕ ಬೇಕು. ಆದರೆ ಸಂಪತ್ತು ಕೇಂದ್ರೀಕೃತವಾದರೆ ಎಲ್ಲ ಬಗೆಯ ಅಸಮಾನತೆಗಳು ಹುಟ್ಟುತ್ತವೆ. ಆದ್ದರಿಂದ ಬಸವಾದಿ ಶರಣರು ದಾಸೋಹ ತತ್ವವನ್ನು ಆವಿಷ್ಕರಿಸಿ ಆಚರಣೆಯಲ್ಲಿ ತಂದರು. ಕಾಯಕ ಸಾರ್ಥಕವಾಗುವುದೇ ದಾಸೋಹದಲ್ಲಿ ಆದ್ದರಿಂದಲೇ ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಸಂಪತ್ತನ್ನು ಕೂಡಿಡುವ, ಮಣ್ಣಿನಲ್ಲಿ ಹೂತಿಡುವ, ಕಂಗಳಲ್ಲಿ ನೋಡಿ ಹಿಗ್ಗುವ ಮರುಳನ್ನು ಎಚ್ಚರಿಸಿ ಕೂಡಲ ಸಂಗನ ಶರಣರಿಗೊಡನೆ ಸಂಪತ್ತನ್ನು ಸವೆಸಬೇಕು ಎಂದು ಹೇಳುತ್ತಾರೆ.

ಬಸವಧರ್ಮದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಹಕ್ಕುಗಳು ಇವೆ. ಸುಮಾರು 30 ಜನ ವಚನಕಾರ್ತಿಯರು ಅನುಭವ ಮಂಟಪದಲ್ಲಿ ಚರ್ಚಿಸಲು ಸಮಾನ ಅವಕಾಶ ಹೊಂದಿದ್ದರು. ಶರಣರ ದೃಷ್ಟಿಯಲ್ಲಿ ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ, ಗಂಡೂ ಅಲ್ಲ. ಅಲ್ಲದೇ ಬಸವ ಧರ್ಮದಲ್ಲಿ ಕುಲಸೂತಕವಿಲ್ಲ. ಹಾರವ ಅಂತ್ಯಜ ಎಲ್ಲರೂ ಭಕ್ತರೇ, ಎಲ್ಲರೂ ಸಮಾನರೇ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ತಳವಾರ ಚಿಕ್ಕಯ್ಯ, ಹುಲ್ಲು ಸೋಮಯ್ಯ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ ಇತ್ಯಾದಿ ಶರಣರೆಲ್ಲರೂ ಬಸವಣ್ಣನವರಿಗೆ ಆದರ್ಶ ಪುರುಷರು. ಆರಾಧ್ಯರು, ಬಸವಣ್ಣನವರ ಚಳುವಳಿಯಲ್ಲಿ ಬಹುಸಂಖ್ಯಾತರು ಅಂದಿನ ಸಮಾಜದ ಕೆಳಜಾತಿಯ ಹಾಗೂ ಕೆಳವರ್ಗದ ಅಂದಿನ ಸಮಾಜದ ಕೆಳಜಾತಿಯ ಹಾಗೂ ಕೆಳವರ್ಗದ ಜನರು. ಶೂನ್ಯ ಪೀಠಾಧಿಪತಿ ಸ್ವತಃ ಅಲ್ಲಮ ಪ್ರಭುಗಳೇ ಹುಟ್ಟಿನಿಂದ ನಟುವ ಜನಾಂಗದವರು. ಸಾಧನೆ-ಸಿದ್ಧಿಗಳಿಂದ ಅತ್ಯಂತ ಉನ್ನತ ಸ್ಥಾನ ಪಡೆದವರು. ಅದಕ್ಕಾಗಿಯೇ ದಲಿತ ಕವಿ ಡಾ।ಸಿದ್ಧಲಿಂಗಯ್ಯನವರು ಅಸ್ಪೃಶ್ಯರು ಮತ್ತು ಕೆಳವರ್ಗದ ಜನರು ಮೊದಲ ಬಾರಿಗೆ ಧ್ವನಿಯೆತ್ತಿ ಮಾತನಾಡಿದ್ದು, ವಚನಕಾರರ ಕಾಲದಲ್ಲೇ ಎಂದು ಹೇಳುವ ಮಾತು ಸರಿಯಾದದ್ದೇ. ನಮ್ಮ ದೇಶದ ಸಂವಿಧಾನದ ಮೂಲತತ್ವಗಳು ಹಾಗೂ ಬಸವಾದಿ ಶರಣರು ಪ್ರತಿಪಾದಿಸಿದ ಆಚರಿಸಿದ ತತ್ವಗಳು ಒಂದೇಆಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಬಸವಣ್ಣನವರ ಭಕ್ತಿ, ಕಾಯಕ, ದಾಸೋಹ, ಸಮಾನತೆಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಷ್ಟು ನಾವು ಹೆಚ್ಚು ಹೆಚ್ಚು ಅವರಿಗೆ ಅವರ ತತ್ವಗಳಿಗೆ ಹತ್ತಿರವಾಗುತ್ತೇವೆ. ಹೆಚ್ಚು ಹೆಚ್ಚು ಮಾನವತೆಗೆ ಹತ್ತಿರವಾಗುತ್ತೇವೆ. ಅಂತಹ ಪ್ರಾಮಾಣಿಕ ಪ್ರಯತ್ನ ನಮ್ಮದಾದರೆ ಚಿಂತಕರ ಚಿಂತನೆಗಳು ಸಿದ್ಧಾಂತಗಳು ಸರ್ವದಾ ಕಾರ್ಯರೂಪಕ್ಕೆ ಬರಲು ಸಾಧ್ಯ. ಇಂತಹ ಉನ್ನತ ತತ್ವಗಳೇ ಬಸವತತ್ವ ಹಾಗೂ ಬಸವಣ್ಣ ಪ್ರಸ್ತುತಗೊಳ್ಳುವುದಕ್ಕೆ ಕಾರಣ. ಆದರೆ ಕರ್ನಾಟಕ ಇಂದಿನ ಆತನ ಅನುಯಾಯಿಗಳು ಆ ತತ್ವಗಳಿಂದ ವಿಮುಖರಾದರೆ ಬಸವತತ್ವ ಕಾರ್ಯರೂಪಕ್ಕೆ ಬರುವುದಾದರೂ ಹೇಗೆ? ಎಂಬುದನ್ನು ಇಂದು ಚಿಂತಿಸಿ ಅಳವಡಿಸಿಕೊಳ್ಳುವುದು ಆಗ ಅವರ ತತ್ವಗಳು ಕಾರ್ಯರೂಪಕ್ಕೆ, ವಾಸ್ತವಕ್ಕೆ, ಬದುಕಿಗೆ ಹತ್ತಿರವಾಗುತ್ತವೆ.

12ನೇ ಶತಮಾನದ ಬಸವಚಳುವಳಿ ಅನೇಕ ಮೌಲ್ಯಗಳನ್ನು, ಪ್ರಜ್ಞೆ ಮತ್ತು ಸರ್ವ ಸಮಾನತೆಯನ್ನು ಎತ್ತಿ ಹಿಡಿದ ಆದರ್ಶ ಆಂದೋಲನ. ಅದುವರೆಗೂ ಇಸ್ನಿಲ್ಲದಂತೆ ತುಳಿತಕ್ಕೊಳಗಾಗಿದ್ದ ತಳಸಮುದಾಯಗಳಲ್ಲಿ ಆತ್ಮ ಗೌರವವನ್ನು ಬಸವಣ್ಣ ಮೂಡಿಸಿದ್ದರು. ಪರ್ಯಾಯ ಸಮಾಜವೊಂದನ್ನು ನಿರ್ಮಿಸಲು ನಡೆಸಿದ ಪ್ರಯತ್ನಗಳು ಇಂದಿಗೂ ಅನುಕರಣೀಯ. ಬಸವಣ್ಣ ಈ ವ್ಯವಸ್ಥೆಯಲ್ಲಿ ಮೇಲು-ಕೀಳುಗಳಿಲ್ಲ. ವರ್ಗ, ವರ್ಣ, ಜಾತಿ, ಲಿಂಗ ಭೇದಗಳಿಲ್ಲದ್ದರಿಂದ ಆಧುನಿಕ ಕಾಲದಲ್ಲೂ ಅನುಸರಣೀಯವೆನಿಸುತ್ತದೆ. ಇಲ್ಲಿ ಕರ್ಮ ಸಿದ್ಧಾಂತವಿಲ್ಲ. ಕಾಯಕ ಸಿದ್ಧಾಂತವಿದೆ. ಪ್ರಜ್ಞಾಪ್ರಧಾನ ಸಮಾಜ

ಇದಾಗಿದೆ. ಇಂತಹ ವೈಚಾರಿಕ ಧರ್ಮ ಬಸವಧರ್ಮ-ಬೌದ್ಧಧರ್ಮದ ಮುಂದುವರಿದ ಭಾಗವೆಂದರೆ ಅತಿಶೋಕ್ತಿಯಾಗಲಾರದು. ಬುದ್ಧನ ಕರುಣೆ ಬಸವನ ದಯೆಯಲ್ಲಿ ಸಾಕಾರೊಂಡಂತಿದೆ. ಬುದ್ಧ, ಬಸವ, ಅಂಬೇಡ್ಕರ್‌ರವರು ಇಂತಹ ಹೊಸದನ್ನು ಕಟ್ಟುವ ಕನಸು ಕಂಡವರು. ಆ ಕನಸಿಗೆ ತಮ್ಮ ಬದುಕನ್ನು ಮುಡಿಪಾಗಿಟ್ಟು ಹೋರಾಡಿದರು.

ಇಂದಿನ ಲಿಂಗಾಯತರೆಂದು ಕರೆಯಿಸಿಕೊಳ್ಳುತ್ತಿರುವ ಜನಗಳೇ ಬ್ರಾಹ್ಮಣ್ಯಕ್ಕೆ ಅಂಟಿಕೊಳ್ಳುತ್ತಿದ್ದಾರೆ. ಮಡಿ ಮೈಲಿಗೆ, ಸ್ವರ್ಗ-ನರಕ, ಮುಟ್ಟು ತಟ್ಟು, ಮೇಲ್ಜಾತಿ, ಕೆಳಜಾತಿ, ಕರ್ಮ ಪ್ರಾರಬ್ಧ ಶುರುವಾಗಿವೆ. ರಾಹುಕಾಲ, ಗುಳಿಕಕಾಲವಂತೂ ನೋಡದವರೇ ಇಲ್ಲ ಎನ್ನುವಂತಾಗುತ್ತಿದೆ. ವಾಸ್ತುವಿಗಾಗಿಯಂತೂ ಬಹುತೇಕರೂ ಮುಗಿಬಿದ್ದಿದ್ದಾರೆ. ಇಂದಿನ ಲಿಂಗಾಯತ ಸಮುದಾಯ ತಮ್ಮ ಮೂಲವನ್ನು ಮರೆತು ತಮ್ಮ ಸಹೋದರ ಬಂಧುಗಳಾದ ದಲಿತರ ಮೇಲೆ ಬರ್ಬರವಾಗಿ ಮೇಲೆರಗುತ್ತಿದ್ದಾರೆ. ಅವರ ಅನ್ನ, ಬಟ್ಟೆ, ವಸತಿಗಳ ಮೇಲೂ ತಮ್ಮ ಕಾಕದೃಷ್ಟಿ ಬೀರತೊಡಗಿದ್ದಾರೆ. ಕೆಲವು ಕಡೆಗಳಲ್ಲಿ ಇಡೀ ಊರಿಗೇ ಊರೇ ಶೋಷಿತ ಸಮುದಾಯಕ್ಕೆ ಬಹಿಷ್ಕಾರ ಹಾಕುತ್ತಿದೆ. ಮತ್ತ ಹಲವೆಡೆ ಅವರಿಗೆ ಮಲ ತಿನ್ನಿಸುವ ಕೀಳು ಕೆಲಸಕ್ಕೂ ಅದು ಕೈಹಾಕುತ್ತಿದೆ. ಜೀವಂತವಾಗಿ ದಲಿತರ ದೇಹಗಳನ್ನು ಸುಡುವಷ್ಟು ನೀಚ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದೆ. ದಲಿತರ ಹಾಗೂ ತಮ್ಮ ನಡುವೆ ಸಮಾನಾಂತರವಾದ ಅಂತರವನ್ನು ಬಹು ಜಾಗೃತಿಯಿಂದ ಕಾಯ್ದುಕೊಂಡೇ ಬರತೊಡಗಿದೆ. ಅವರ ನಡುವೆ ಈಗ ಕಂದಕ ಉಂಟಾಗಿದೆ. ಒಬ್ಬರು ಮತ್ತೊಬ್ಬರನ್ನು ನೋಡಿದರೆ ಗುರುಗುಟ್ಟುವಂತಾಗಿದೆ. ಒಟ್ಟನಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವಷ್ಟು ಸೌಜನ್ಯವನ್ನು ಉಳಿಸಿಕೊಂಡಿಲ್ಲ..[39] ಇದನ್ನು ಅರಿಯದಿದ್ದರೆ ಲಿಂಗಾಯತ ಧರ್ಮಕ್ಕೆ ಭವಿಷ್ಯವಿಲ್ಲ. ಯಾವ ಕಾರಣಗಳಿಗಾಗಿ ಬಸವಣ್ಣ ಈ ಜಾತ್ಯಾತೀತ ತತ್ವ ಪ್ರತಿಪಾದನೆ ಮಾಡಿದ್ದರೋ ಅದೊಂದು ಜಾತಿಯಾಗಿ ಮಾರ್ಪಟ್ಟರೆ ಮೂಲ ಆಶಯವೇ ಮಣ್ಣು ಪಾಲಾಗುತ್ತದೆ. ಅಷ್ಟೇ ಅಲ್ಲ ಲಿಂಗಾಯತರಲ್ಲಿ ನವ ಬ್ರಾಹ್ಮಣಶಾಹಿತನ ಬೆಳೆದು ಬಂದು ಮತ್ತೆ ಹಳೆಯದಕ್ಕೆ ಜೋತು ಬೀಳುವ ಜೀತದ ಬದುಕು ಲಿಂಗಾಯತರದಾಗುವುದರಲ್ಲಿ ಅನುಮಾನವಿಲ್ಲ. ಹಿಂದೊಂದು ಕಾಲಕ್ಕೆ ಲಿಂಗವಂತರೇ ಆಗಿದ್ದ ದಲಿತ ಬಂಧುಗಳೂ ಈಗ ಪುನಃ ಬಸವಾದಿ ಶರಣರ ವಿಚಾರಗಳ ಹತ್ತಿರ ಬರುತ್ತಿದ್ದಾರೆ. ಅವರೊಂದಿಗೆ ಇನ್ನಾದರೂ ಸಹೋದರತೆಯಿಂದ ಗೌರವದಿಂದ ಸಮಾನತೆಯಿಂದ ಬಾಳಿದ್ದೇ ಆದರೆ ಬಸವಣ್ಣನಿಗೆ ನಾವುಗಳೆಲ್ಲ ಗೌರವಿಸಿದಂತೆ. ಆ ತತ್ವಗಳು ಸದಾ ಮಾನವರನ್ನು ಮೇಲೆತ್ತಬಲ್ಲವು.

ಬಸವ ತತ್ವ : ದಲಿತರು :

ಬಸವಚಳುವಳಿ ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಪ್ರೇರಣೆಯಾಗಿದೆ. ಬಸವಣ್ಣ ತನ್ನ ಚಳುವಳಿಯಲ್ಲಿ ಹೆಚ್ಚಾಗಿ ಕೆಳವರ್ಗದ ಜನರನ್ನೇ ತೊಡಗಿಸಿಕೊಂಡಿದ್ದರು ಇದು ದಲಿತ ಜನಾಂಗಕ್ಕೆ ನೈತಿಕ ಸ್ಥೈರ್ಯ ಒದಗಿಸಿತು. ಯಾವುದನ್ನು ಇಂದು ಸಬ್ಲಾಟನ್ ಸ್ಟಡಿ ಎಂದು ಚರಿತ್ರೆಯಲ್ಲಿ ವ್ಯಾಖ್ಯಾನಿಸಲಾಗುತ್ತದೆಯೋ ಆ ಕೆಲಸವನ್ನು ಬಸವಣ್ಣ 12ನೇ ಶತಮಾನದಲ್ಲಿ ಆರಂಭಿಸಿದ್ದ. ಅಲಕ್ಷಿತ ವರ್ಗವನ್ನು ಕೆಳವರ್ಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ರಾಂತಿ ಆರಂಭಿಸಿ ಅವರನ್ನು ಮೇಲೆತ್ತಲು ಪ್ರಯತ್ನಿಸಿದ. ತನ್ನನ್ನು ಕೆಳವರ್ಗದೊಂದಿಗೆ ಗುರುತಿಸಿಕೊಳ್ಳಲು ಪ್ರಯತ್ನಿಸಿದ ಆದರೊಂದಿಗೆ ದಲಿತ ಜನಾಂಗಕ್ಕೆ ಕರ್ನಾಟಕದ ಚರಿತ್ರೆಯಲ್ಲಿ ಅಷ್ಟೇ ಅಲ್ಲ. ಭಾರತದ ಚರಿತ್ರೆಯಲ್ಲಿ ವಿಶಿಷ್ಟವಾದುದಾಗಿತ್ತು. ಜಾತಿ ವಿನಾಶ ಚಳುವಳಿಯಲ್ಲಿ ಕೆಳವರ್ಗದ ಶರಣರು ಹಾಗೂ ಕೆಳವರ್ಗಕ್ಕೆ ಸೇರಿದ ಸ್ತ್ರೀಯರು ಸಹ ಈ ಚಳುವಳಿಯಲ್ಲಿ ಭಾಗವಹಿಸಿದ್ದು

ವಿಶೇಷವಾಗಿದೆ. ಆದುದರಿಂದಲೇ ಕರ್ನಾಟಕದಲ್ಲಿ ಇಂದಿಗೂ ಬಸವಣ್ಣನನ್ನು ಕೆಳವರ್ಗದ ಜನತೆ ಗೌರವಿಸುತ್ತದೆ. ಏಕೆಂದರೆ, ಬಸವಣ್ಣ ಶೋಷಿತರ ಕೊರಳ ಧ್ವನಿಯಾಗಿ ಹೊರಹೊಮ್ಮಿ ಅವರ ಕಣ್ಣಲ್ಲಿ ಆಶಾ ಕಿರಣವಾಗಿ ಮೂಡಿದ್ದಾನೆ[40] ಬಸವಣ್ಣ ಭಕ್ತಿ ಮಾರ್ಗ ಪ್ರತಿಪಾದಿಸಿದರು. ಜಾತಿ ಪದ್ಧತಿಯನ್ನು ಕಟುವಾಗಿ ವಿರೋಧಿಸಿದರು. ಕೀಳುಜಾತಿ, ಹೊಲಿಯ, ಮಾದಿಗ ಎಂಬ ಪ್ರಚಲಿತ ಸಮಾಜದ ವರ್ಗೀಕರಣಗಳನ್ನು ಅವರು ಒಪ್ಪಲಿಲ್ಲ. ಸಮಾನತೆಗೆ ಪ್ರಾಶಸ್ತ್ಯ ಕೊಟ್ಟರು.

ಚರಿತ್ರೆಯಲ್ಲಿ ಉಂಟಾದ ಪ್ರತಿಭಟನೆಗಳೆಲ್ಲ ಸಾಮಾನ್ಯವಾಗಿ ಧಾರ್ಮಿಕ ಸ್ವರೂಪವೇ ಆಗಿವೆ. ಯಾವ ಯಾವ ಪ್ರತಿಭಟನೆ ಧಾರ್ಮಿಕವಾಗಿ ಕಂಡು ಬಂದಿವೆಯೋ ಅವೆಲ್ಲ ಒಂದೊಂದು ಜಾತಿಯಾಗಿ ಮಾರ್ಪಟ್ಟಿವೆ. ಬಸವಣ್ಣನ ಪ್ರತಿಭಟನೆಯಿಂದ ಬೆಳೆದು ಬಂದ ವ್ಯವಸ್ಥೆ ಅವರು ಸ್ಥಾಪಿಸಿದ ಧರ್ಮ ವೈದಿಕಕ್ಕಿಂತ ಹೆಚ್ಚು ಜಡ್ಡುಗಟ್ಟಿ, ಜಾತಿ ಅಸ್ಪೃಶ್ಯತೆ, ಸ್ತ್ರೀಶೋಷಣೆ ಮುಂತಾದ ಎಲ್ಲಕ್ಕೂ ಆಶ್ರಯವಾಗಿದೆ. ಆ ಕಾರಣಕ್ಕೆ ಪ್ರತಿಭಟನೆ ನಿರಂತರವಾದಾಗಲೇ ವ್ಯವಸ್ಥೆ ಎಚ್ಚರಗೊಳ್ಳಲು ಪರಿವರ್ತನೆಗೊಳ್ಳಲು ಸಾಧ್ಯ ಎಂಬುದನ್ನು ಚರಿತ್ರೆ ಸಾಬೀತುಪಡಿಸುತ್ತಲೇ ಬರುತ್ತಿದೆ. ಸಂಘರ್ಷವಿದ್ದಾಗಲೇ ಸಮಾನತೆ ಬೆಳೆದು ಬರಲು ಸಾಧ್ಯ ಎನ್ನುವಂತಾಗಿದೆ.

ದಲಿತರ ಬದುಕಿನಲ್ಲಿ ಒಂದು ಉಸಿರಾಟ ಸಿಕ್ಕಿದ್ದು ಬಸವಣ್ಣನವರ ಕ್ರಾಂತಿಯಲ್ಲಿ ಕಲ್ಯಾಣದ ಅನುಭವ ಮಂಟಪದಲ್ಲಿ ಹೊಲೆಯ ಮಾದಿಗರೂ ಹೆಂಗಸರೂ ಸಮಾನತೆಯಿಂದ ಭಾಗವಹಿಸಿದರು. ಆದರೆ ಅಸ್ಪೃಶ್ಯನಾದ ಹರಳಯ್ಯನ ಮಗ ಬ್ರಾಹ್ಮಣನಾದ ಮಧುವರಸನ ಮಗಳ ವಿವಾಹ ಸಂದರ್ಭದಲ್ಲಿ ಕ್ರಾಂತಿ ವಿಫಲವಾಯಿತು. ಉಚ್ಚ ವರ್ಣೀಯರು ತಮ್ಮ ಜಾತಿ ಸ್ವಭಾವವನ್ನು ಹಾಗೇ ಇಟ್ಟುಕೊಂಡರು. ಮತ್ತೆ ಹತ್ತಾರು ಜಾತಿ ಉಪಜಾತಿಗಳು ಬೆಳೆದು ಬಂದು ಸಾಮಾಜಿಕ ಸ್ಥಾನಗಳನ್ನು ತಾವೇ ಇಟ್ಟುಕೊಂಡರು. ದಲಿತ ಸಮಾಜ ಭ್ರಷ್ಟನಾಗಿಯೇ ಉಳಿದ. ಆದ್ದರಿಂದಲೇ ಪ್ರಸ್ತುತ ಸಂದರ್ಭದಲ್ಲಿ ದಲಿತ ಚಳುವಳಿಗಳು ತೀವ್ರ ಸ್ವರೂಪ ಪಡೆದುಕೊಂಡಿವೆ. ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬದುಕಿನ ಅನ್ವೇಷಣೆಯೇ ದಲಿತ ಚಳುವಳಿಯ ಮೂಲ ಆಶಯ. ನಾಯಿ ನರಿಗಳಿಗಿಂತಲೂ ಕೀಳಾಗಿ ಬದುಕುತ್ತಿರುವ ದಲಿತರಿಗೆ ದಲಿತತ್ವ (Dalit Identity) ವನ್ನು ಹುಟ್ಟು ಹಾಕಲು ದಲಿತ ಚಳುವಳಿ ಮುಂದಾಗಿದೆ[41] ಎಂದು ದಯಾನಂದ ಮಾನೆಯವರು ತಮ್ಮ ಲೇಖನದಲ್ಲಿ ಸ್ಪಷ್ಟ ಪಡಿಸಿದ್ದಾರೆ. ಇಂದಿಗೂ ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳು ದಲಿತ ಚಳುವಳಿಗೆ ಸ್ಫೂರ್ತಿಯಾಗಿವೆ.

ಜಾತಿ, ಧರ್ಮ, ಲಿಂಗ ಮತ್ತು ವರ್ಗಗಳಲ್ಲಿ ಸಮಾನತೆಯನ್ನು ಕಾಯ್ದುಕೊಂಡು ದನಿ ಇಲ್ಲದೆ ದಮನಕ್ಕೆ ಒಳಗಾಗಿದ್ದ ದಲಿತರಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಕಲ್ಪನೆ ಮೂಡಿಸಿದ್ದು ಬಸವನ ಚಳುವಳಿ. ದಲಿತ ಚಳುವಳಿಯ ಇಂದಿನ ಉಚ್ಛ್ರಾಯ ಸ್ಥಿತಿಗೂ ಈ ಚಳುವಳಿಯೇ ಮೂಲ ಪ್ರೇರಣೆಯೆಂದರೆ ತಪ್ಪಾಗಲಾರದು[42] ಇಡೀ ಮಾನವ ಕುಲಕ್ಕೆ ಮಾನವೀಯತೆಯ ಪಾಠವನ್ನು ಹೇಳಿಕೊಟ್ಟವರು ಬಸವಣ್ಣ. ಕರ್ನಾಟಕದ ಸಂದರ್ಭದಲ್ಲಿ ದಲಿತ ಚಳುವಳಿಯ ಮೊದಲ ಕ್ರಾಂತಿಕಾರಿ, ಹೋರಾಟಗಾರ ಎಂಬುದನ್ನು 12ನೇ ಶತಮಾನದ ಸಮಾಜೋಧಾರ್ಮಿಕ ಚಳುವಳಿ ಸಾಬೀತು ಪಡಿಸಿದೆ.

ದಲಿತ ಎಂಬ ಪದ ಇತ್ತೀಚೆಗೆ ಬಂದುದಾಗಿದೆ. ದಲಿತ ಪದದ ಬಗೆಗೆ ಸ್ಪಷ್ಟವಾದ ವ್ಯಾಖ್ಯೆಗಳಿಲ್ಲ. ವಿಶಾಲ ಅರ್ಥದಲ್ಲಿ ದಲಿತರೆಂದರೆ ತುಳಿತಕ್ಕೊಳಗಾದವರು, ಶೋಷಿತರು, ಬಡವರು, ಅಸ್ಪೃಶ್ಯರು ಎಂದರ್ಥವಾಗುತ್ತದೆ. ಆದರೆ ಕರ್ನಾಟಕದ ಸಂದರ್ಭದಲ್ಲಿ ದಲಿತ ಪದಕ್ಕೆ ಸೀಮಿತವಾದ ಅರ್ಥವಿದೆ. ಅಸ್ಪೃಶ್ಯರನ್ನು ಮಾತ್ರ ಇಲ್ಲಿ ದಲಿತರೆಂದು ಗುರುತಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ ನಡೆದ ದಲಿತ ಪ್ಯಾಂಥರ್ಸ್ ಚಳುವಳಿಯಲ್ಲಿ ಎಲ್ಲ ಜಾತಿಯ ಶೋಷಿತರೂ ಸೇರಿದ್ದರು. ಆದರೆ ಕರ್ನಾಟಕದ ದಲಿತ ಸಂಘಟನೆಗಳಲ್ಲಿ ಅಸ್ಪೃಶ್ಯರು ಮಾತ್ರ ಇದ್ದಾರೆ. ಹೀಗಾಗಿ ಇಂದಿನ ದಲಿತ ಸಂಘಟನೆಗಳ ಹೋರಾಟಕ್ಕೂ ಹನ್ನೆರಡನೇ ಶತಮಾನದಲ್ಲಿ ನಡೆದ ವಚನ ಚಳುವಳಿಯ ಆಶಯಕ್ಕೂ ಸಂಘಟನಾತ್ಮಕ ನೆಲೆಯಲ್ಲಿ ವ್ಯತ್ಯಾಸವಿದೆ.[43]

ಇಂದಿನ ದಲಿತ ಚಳುವಳಿಗಳು ದಲಿತರಿಂದ ಪ್ರಾರಂಭವಾಗಿದ್ದರೆ, ಅಂದಿನ ದಲಿತ ಚಳುವಳಿ ದಲಿತೇತರ ವಚನಕಾರರಿಂದ ಪ್ರಾರಂಭವಾಗಿದೆ. ಅಂದಿನ ಶರಣರು ಬೇರೆ, ಬೇರೆ ವರ್ಗ-ವರ್ಣ-ಜಾತಿ-ಪಂಥ-ಪ್ರದೇಶಗಳಿಂದ ಬಂದವರಾಗಿದ್ದರೂ, ಮಹಿಳೆ-ಪುರುಷ ಎಂಬ ಲಿಂಗಭೇದವನ್ನು ತೊರೆದವರಾಗಿದ್ದರು. ಮೇಲು-ಕೀಳು ಎಂಬ ಜಾತಿ ಭೇದವನ್ನು ಮರೆತವರಾಗಿದ್ದರು. ಹೀಗಾಗಿ ದಲಿತರ ಜಾತಿ ಹೋರಾಟಕ್ಕಾಗಿ ಎಲ್ಲರೂ ಕೂಡಿಯೇ ಹೋರಾಡಿದರು. ವಚನ ಚಳುವಳಿಯಲ್ಲಿದ್ದ ದಲಿತರು-ಶೋಷಿತರು ಮಹಿಳೆಯರು ಕಾಯಕ ಜೀವಿಗಳು ಅವರ ಚಳುವಳಿಗೆ ಜಾತಿ ಭೇದವಿಲ್ಲ-ಲಿಂಗಭೇದವಿಲ್ಲ.

ಇಂದಿನ ಸಮಾಜ ವ್ಯವಸ್ಥೆ ಬೇರೆಯಾಗಿದೆ. ಹೀಗಾಗಿ ದಲಿತರು ಜಾತಿವ್ಯವಸ್ಥೆಯ ವಿರುದ್ಧ ಚಳುವಳಿ ಮಾಡುತ್ತಾರೆ. ಅಂದಿನ ಮಾದಾರ ಜನಾಂಗದ ಬಗೆಗೆ ಮಾದಾರ ಧೂಳಯ್ಯ ಹೋರಾಟ ಮಾಡಲಿಲ್ಲ. ಸ್ತ್ರೀ ಸಮಾನತೆಗೆ ಅಂದಿನ ವಚನಕಾರ್ತಿಯರು ಹೋರಾಡಲಿಲ್ಲ. ಇದೆಲ್ಲವನ್ನೂ ಮೈಮೇಲೆ ತೆಗೆದುಕೊಂಡು ಬಸವಣ್ಣ ಮೊದಲಾದ ಶರಣರು ಅಸಮಾನತೆಯ ವಿರುದ್ಧ ಹೋರಾಡಿದರು.

ದಲಿತರ ನೋವು-ಶೋಷಣೆಯನ್ನು ಕುರಿತಂತೆ ಅಸ್ಪೃಶ್ಯ ಜನಾಂಗದಿಂದ ಬಂದ ವಚನಕಾರರು ದನಿಯೆತ್ತಿದ್ದಾರೆ. ಜಾತಿ ಅಸಮಾನತೆ ಹಾಗೂ ವರ್ಣಾಶ್ರಮ ಧರ್ಮದ ಸಾಂಪ್ರದಾಯಿಕ ನೆಲೆಗಳ ಬಗೆಗೆ ಅಸ್ಪೃಶ್ಯ ಜನಾಂಗದವರಿಗಿಂತ ಹೆಚ್ಚಾಗಿ ಇತರ ವರ್ಗಗಳಿಂದ ಬಂದ ವಚನಕಾರರೇ ನೇರನುಡಿಗಳನ್ನಾಡಿದ್ದಾರೆ. ಹೀಗಾಗಿ ದಲಿತ ಸಂವೇದನೆಯೆಂಬುದು ಎಲ್ಲ ವಚನಕಾರರ ಮುಖ್ಯ ಅಭಿವ್ಯಕ್ತಿಯಾಗಿದೆ. ವಚನಚಳುವಳಿಯ ಪ್ರಮುಖ ಉದ್ದೇಶವೇ ಜಾತ್ಯಾತೀತ ಸಮಾಜ ರಚನೆಯಾದುದರಿಂದ, ಸಹಜವಾಗಿಯೇ ಪ್ರಮುಖ ವಚನಕಾರರೆಲ್ಲರೂ ವರ್ಣಾಶ್ರಮ ಪದ್ಧತಿಯನ್ನು, ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದಾರೆ. ಸಮಾಜ ವ್ಯವಸ್ಥೆಯಲ್ಲಿ ಉಚ್ಚ-ನೀಚ ಭಾವನೆಗಳನ್ನು ಹುಟ್ಟುಹಾಕಿದ್ದ ಜಾತಿವಾದವನ್ನು ಎಲ್ಲ ವಚನಕಾರರೂ ಪ್ರತಿಭಟಿಸಿದ್ದಾರೆ. ಕೆಳವರ್ಗಗಳಿಂದ ಬಂದ ಶ್ರಮಿಕಸಮುದಾಯವೇ, ವಚನಚಳುವಳಿಯ ಕೇಂದ್ರಬಿಂದುವಾಗಿರುವುದರಿಂದ ವಚನ ಸಂವೇದನೆಯೆಂದರೆ ಅದು ದಲಿತ ಸಂವೇದನೆಯೇ ಆಗಿದೆ.

ಬಸವಣ್ಣ ಹಾಗೂ ಬಸವ ತತ್ವ ದಲಿತ ಚಳುವಳಿಗೆ ಹತ್ತಿರವಾಗಿದೆ. ಆಪ್ತವಾಗಿದೆ ಎಂದರೆ ಬಸವಣ್ಣನ ವಚನಗಳಲ್ಲಿ ಅಭಿವ್ಯಕ್ತವಾಗಿರುವ ದಲಿತ ಸಂವೇದನೆ ಸಮಗ್ರ ದಲಿತರ ಬಿಡುಗಡೆಯ ದೃಷ್ಟಿಕೋನಗಳನ್ನು ಒಳಗೊಂಡಿದೆ. ಕುಲವನರಸುವವರನ್ನು ಕಂಡು ಬಸವಣ್ಣ ಖಾರವಾಗಿ ಪ್ರತಿಕ್ರಿಯಿಸಿದ್ದಾನೆ.

ಹೊಲೆಯೊಳಗೆ ಹುಟ್ಟಿ ಕುಲವನರಸುವೆ,
ಎಲವೊ, ಮಾತಂಗಿಯ ಮಗು ನೀನು
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋಲೆಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು[44]

ಈ ವಚನದಲ್ಲಿ ಹೊತ್ತು ತಂದು ಕೊಲ್ಲುವವರು ಯಾರು? ಸತ್ತದನೆಳೆಯುವವರು ಯಾರು? ಎಂಬಂತಹ ಪ್ರಶ್ನೆಗಳನ್ನು ಸ್ಪಷ್ಟಪಡಿಸಿದ ಬಸವಣ್ಣ ಕುಲದ ಮಾತನಾಡುವವರಿಗೆ ತೀವ್ರವಾಗಿ ಖಂಡಿಸಿದ್ದಾನೆ.

ತಾಯಿಯ ಉದರದಲ್ಲಿಯೆ ಎಲ್ಲರೂ ಜನಿಸುತ್ತಾರೆ. ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ಎಂಬಂತಹ ಮಹತ್ವದ ಪ್ರಶ್ನೆ ಎತ್ತುವುದರ ಮೂಲಕ ಜಾತಿ ಭೂತವನ್ನು ಬಸವಣ್ಣ ಬಿಡಿಸಿದ್ದಾನೆ. ಜಾತಿ ಹಿಡಿದು ಸೂತಕವನರಸುವುದೆಂದರೆ, ಜ್ಯೋತಿ ಹಿಡಿದು ಕತ್ತಲೆಯನರಸಿದಂತೆಂದು ಸ್ಪಷ್ಟೀಕರಿಸಿದ್ದಾನೆ .

ನೆಲನೊಂದೆ ; ಹೊಲಗೇರಿ ಶಿವಾಲಯಕ್ಕೆ,
ಜಲವೊಂದೆ : ಶೌಚಾಚಮನಕ್ಕೆ,
ಕುಲವೊಂದೆ ತನ್ನ ತಾನರಿದವಂಗೆ...[45]

ಒಂದೇ ನೆಲದಲ್ಲಿ ಹೊಲಗೇರಿಯೂ ಇದೆ, ಶಿವಾಲಯವೂ ಇದೆ. ಒಂದೇ ಜಲವನ್ನು ಸ್ನಾನಕ್ಕೂ ಬಳಸುತ್ತಾರೆ. ಪೂಜೆಗೂ ಬಳಸುತ್ತಾರೆ. ಹೀಗಿರುವಾಗ ಒಂದೇ ರೀತಿಯಾಗಿರುವ ಮನುಷ್ಯರಲ್ಲಿ ಏಕೆ ಭೇದ? ತನ್ನ ತಾನರಿತಾಗ ಕುಲವೊಂದೇಯಾಗುತ್ತದೆಂದು ಇಲ್ಲಿ ಬಸವಣ್ಣ ಹೇಳಿದ್ದಾನೆ.

ಬಸವಣ್ಣನ ಅನೇಕ ವಚನಗಳಲ್ಲಿ ಜಾತಿಯನ್ನು ಅಲ್ಲಗಳೆಯುವ, ಕುಲಮದವನ್ನು ವಿರೋಧಿಸುವ, ಮಡಿವಂತಿಕೆಯನ್ನು ತಿರಸ್ಕರಿಸುವ ವಿಚಾರಗಳು ಸ್ಪಷ್ಟವಾಗಿವೆ. ಉತ್ತಮ ಕುಲದಲ್ಲಿ ಹುಟ್ಟಿದನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ ಎಂದು ಹೇಳಿದ ಬಸವಣ್ಣ ಮೇಲು ಕೀಳು ಎಂದು ಭೇದ ಮಾಡುವವರಿಗೆ ನಿದರ್ಶನಗಳೊಂದಿಗೆ ವಿವರಿಸಿದ್ದಾನೆ. ಗೋತ್ರವಾವುದೆಂದರೆ ಮಾದಾರ ಚೆನ್ನಯ್ಯನ ಗೋತ್ರವೆಂದು ಹೇಳಿರಯ್ಯ ಎನ್ನುವ ಬಸವಣ್ಣ ದಲಿತ ಸಂವೇದನೆಯ ಸಾಕಾರ ಮೂರ್ತಿಯೇ ಆಗಿದ್ದಾನೆ. ಮಾದಾರ ಚೆನ್ನಯ್ಯನನ್ನು ಕುರಿತು ಅನೇಕ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ[46]

ಎಂದು ಹೇಳುತ್ತ ಜಾತಿ ವ್ಯವಸ್ಥೆಯ ಪೊಳ್ಳುತನವನ್ನು ತಿರಸ್ಕರಿಸಿದ್ದಾನೆ ಬಸವಣ್ಣ .

ಹಿರಿಯಯ್ಯ ಶ್ವಪಚಯ್ಯ
ಕಿರಿಯಯ್ಯ ಡೋಹರ ಕಕ್ಕಯ್ಯ
ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ

ಎಂದು ಹೇಳುವ ಬಸವಣ್ಣನ ಈ ವಚನಗಳಲ್ಲಿ ದಲಿತವರ್ಗದ ಶರಣರನ್ನು ತುಂಬಾ ಗೌರವದಿಂದ ಕಾಣಲಾಗಿದೆ.

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರ ಹೊಲದಲ್ಲಿ ಬೆರಣಿಗೆ ಹೋಗಿ ಸಂಗ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು[47]

ಎಂದು ಹೇಳುವ ಬಸವಣ್ಣನ ಈ ವಚನದಲ್ಲಿ ದಲಿತ ಕಾಳಜಿಯೆಂತಹದೆಂಬುದು ಸ್ಪಷ್ಟವಾಗುತ್ತದೆ. ತನ್ನನ್ನು ಕೆಳವರ್ಗದವರೊಂದಿಗೆ ಗುರುತಿಸಿಕೊಂಡು ಅವರನ್ನೇ ತಂದೆ-ತಾಯಿಗಳೆಂದು ಗೌರವಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಮಾಡಿದ ಬಸವಣ್ಣ ಹೋರಾಟ ಅನನ್ಯವಾದುದು.

ಶತಮಾನಗಳಿಂದ ತುಳಿತಕ್ಕೊಳಗಾಗಿದ್ದು ದಲಿತರು ಶೂದ್ರರು ಮಹಿಳೆಯರು ವಚನ ಚಳುವಳಿಯ ಸಂದರ್ಭದಲ್ಲಿ ಮನಬಿಚ್ಚಿ ಮಾತನಾಡಿದ್ದಾರೆ. ಅಸಮಾನತೆಯನ್ನು ಖಂಡಿಸಿದ್ದಾರೆ. ಜಾತೀಯತೆಯ ವಿರುದ್ಧ ಬಂಡೆದ್ದಿದ್ದಾರೆ. ಹನ್ನೆರಡನೆ ಶತಮಾನದ ಶರಣ ಚಳುವಳಿಯಲ್ಲ ಭಾಗವಹಿಸಿದ್ದ ಅನೇಕ ದಲಿತರು ಭಾರತೀಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮೊದಲಿಗರಾಗಿದ್ದಾರೆ. ಈ ಕಾರಣದಿಂದ ವಚನ ಚಳುವಳಿಗೂ ಕನ್ನಡ ಸಾಹಿತ್ಯಕ್ಕೂ ದಲಿತ ಚರಿತ್ರೆಗೂ ಮಹತ್ವದ ಸಂಬಂಧವಿದೆ.

ಚಾತುರ್ವರ್ಣ ವ್ಯವಸ್ಥೆಯನ್ನು ತಿರಸ್ಕರಿಸಿದ ಶರಣರು ಜನ ಸಂಸ್ಕೃತಿಗೆ ಪ್ರಾಮುಖ್ಯತೆ ನೀಡಿದರು. ವರ್ಣ ವ್ಯವಸ್ಥೆಯಲ್ಲಿ ಸ್ಥಾನವನ್ನೇ ಪಡೆಯದಿದ್ದ ದಲಿತರನ್ನು ಗೋತ್ರ ಪುರುಷರೆಂದು ಗೌರವಿಸಿದರು. ಅಪ್ಪ-ಬೊಪ್ಪಯೆಂದು ಅಪ್ಪಿಕೊಂಡರು. ಇಂತಹ ಸಂದರ್ಭ ಜಾಗತಿಕ ಇತಿಹಾಸದಲ್ಲಿಯೇ ವಿರಳವೆನ್ನಬಹುದಾಗಿದೆ. ಅಲ್ಲದೇ ದಲಿತ ಸಂವೇದನೆ ಎಲ್ಲ ವಚನಕಾರರ ಪ್ರಮುಖ ನೆಲೆಯಾಗಿದೆ.

ಸಮಗಾರ ಹರಳಯ್ಯನ ಮಗ, ಬ್ರಾಹ್ಮಣ ಮಧುವರಸನ ಮಗಳೊಂದಿಗೆ ಅಂತರ್ಜಾತೀಯ ವಿವಾಹವಾದಾಗ ಕಲ್ಯಾಣದಲ್ಲಿ ಅಲ್ಲೋಲ-ಕಲ್ಲೋಲವಾಗಿ ಹಿಂಸೆ ಉಲ್ಬಣಿಸಿ, ಮತೀಯ ಶಕ್ತಿಗಳು ಚಳುವಳಿಯನ್ನೇ ನಾಶಪಡಿಸಿದ್ದು ಈಗ ಇತಿಹಾಸ ಮಾತ್ರ. ವಸ್ತು ಸ್ಥಿತಿ ಹೀಗಿರುವಾಗ ದಲಿತ ಶರಣರನ್ನು ಕುರಿತು ಮೌಖಿಕವಾಗಿ ಉಳಿದುಕೊಂಡು ಬಂದಿರುವ ಆಚರಣೆ ಐತಿಹ್ಯಗಳಲ್ಲಿ ಮಹತ್ವದ ದಲಿತ ಸಂವೇದನೆಗಳು ದೊರೆಯುತ್ತವೆ. ಇಂತಹ ಅಮೂಲ್ಯ ಸಂವೇದನೆಗಳು ಭಾರತೀಯ ದಲಿತ ಸಂಸ್ಕೃತಿಯನ್ನು ಕಟ್ಟಿ ನಿಲ್ಲಿಸಲು ಸಹಾಯಕವಾಗುತ್ತವೆ. ವರ್ಣ ವ್ಯವಸ್ಥೆಯನ್ನು ಅಳಿಸಿ ಹಾಕಿದ ವಚನ ಚಳುವಳಿ, ಭಾರತೀಯ ಚರಿತ್ರೆಯಲ್ಲಿ ಅದುವರೆಗೆ ದಾಖಲಾಗದೇ ಇದ್ದ ದಲಿತರ ಬದುಕಿನ ಬಹುಮುಖಿ ಸಂಸ್ಕೃತಿಯನ್ನು ಮೇಲೆತ್ತಿದ್ದು ಬಹು ಮಹತ್ವದ ವಿಷಯವಾಗಿದೆ.

12ನೇ ಶತಮಾನದ ಶರಣ ಚಳುವಳಿ ಈ ಜಾತಿ-ಉಪಜಾತಿಗಳನ್ನು ಅಳಿಸಿಹಾಕಿ ಮಾನವ ಜಾತಿಯೊಂದೇ ಎಂದು ಸಾರಿತು. ಆದರೆ ಶರಣರ ನಂತರ ಮತ್ತೆ ಯಥಾ ಸ್ಥಿತಿ ಮುಂದುವರಿಯಿತು. ಮಠ ವ್ಯವಸ್ಥೆ, ಜಾತಿ ಉಪಜಾತಿಗಳಿಗೂ ಒಬ್ಬೊಬ್ಬ ಜಗದ್ಗುರುಳಿದ್ದಾರೆ. ಜಾತಿ ಸಂಘಟನೆಗಳು ಜಾತಿ ಸಮ್ಮೇಳನಗಳು ಇಂದು ಭರದಿಂದ ಸಾಗಿವೆ. ಹೀಗಾಗಿ ದಲಿತರು-ಶೂದ್ರರು ಮುಖ್ಯ ವಾಹಿನಿಯಲ್ಲಿ ಬರಲಾರದೇ ಮತ್ತೆ ಕಂಗಾಲಾಗಿದ್ದಾರೆ. ಧರ್ಮದಿಂದ, ದೇವರಿಂದ, ಜ್ಞಾನದಿಂದ,ವಿದ್ಯೆಯಿಂದ, ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿದ್ದಾರೆ. ಇದು ಶರಣರ ನಾಡಾದ ಕರ್ನಾಟಕದಲ್ಲೇ ನಡೆದಿರುವ ದುರಂತದ ವ್ಯಥೆ-ಕಥೆ. ಜಾತಿ

ಕುಲಗಳಾಗಿ ಒಡೆದು ಹೋಗಿರುವ ಭಾರತೀಯ ಸಮಾಜ ಇನ್ನೂ ತನ್ನ ಒಗ್ಗಟ್ಟನ್ನು ಸರ್ವ ಸಮಾನತೆಯನ್ನು ಸಾಧಿಸಿಕೊಳ್ಳಲು ಆಗದೆ ನಿಂತಿರುವುದು ಮಾತ್ರ ಕಟು ವಾಸ್ತವ. ಹಾಗಾಗಿ ಸಮಾನತೆಗಾಗಿ ಹಾರೈಸುವ, ಹಂಬಲಿಸುವ ಮನಸ್ಸುಗಳು ಈಗಲೂ ತಹತಹಿಸುತ್ತಲೇ ಇವೆ.

12ನೇ ಶತಮಾನದಲ್ಲಿ ಗೋತ್ರ-ಪುರುಷರಾಗಿ ಕಂಡ ದಲಿತರು, ಇಂದೇಕೆ ಲಿಂಗಾಯತ ಸಮುದಾಯದಿಂದ ದೂರವಾಗಿದ್ದಾರೆ? ಮಾತು ಮಾತಿಗೆ ಬಸವಣ್ಣನ ವಚನಗಳನ್ನು ಉಲ್ಲೇಖಿಸುವ ಇಂದಿನ ಲಿಂಗಾಯತರು ಎಷ್ಟು ಅಂತರ್ಜಾತಿ ವಿವಾಹ ನಡೆಸಲು ಕಾರಣರಾಗಿದ್ದಾರೆ? ಈ ಎರಡೂ ಪ್ರಶ್ನೆಗಳನ್ನು ಇಂದಿನ ದಲಿತರು ಹಾಗೂ ಲಿಂಗಾಯತರು ಕೂಡಿಯೇ ಕೇಳಿಕೊಂಡಾಗ ಹೊಸಚರ್ಚೆ ಪ್ರಾರಂಭವಾಗಲು ಸಾಧ್ಯವಾಗುತ್ತದೆ.[48] ಮಠ-ವ್ಯವಸ್ಥೆಯನ್ನು ನಿರಾಕರಿಸುವುದರ ಮೂಲಕ ಜಗದ್ಗುರುಗಳ ಮೆರವಣಿಗೆಯನ್ನು ನಿಲ್ಲಿಸುವುದರ ಮೂಲಕ ಅಂತರ್ಜಾತಿ ವಿವಾಹಗಳನ್ನು ಜಾರಿಗೆ ತರುವುದರ ಮೂಲಕ ಶರಣರ ವಿಚಾರಧಾರೆಯನ್ನು ಬಸವ ತತ್ವವನ್ನು ಮತ್ತ ಈ ನಾಡಿನಲ್ಲಿ ಹುಟ್ಟು ಹಾಕಲು ಸಾಧ್ಯವಿದೆ. ನಮ್ಮ ಪರಂಪರೆಯನ್ನು ವೈಭವೀಕರಿಸಿಕೊಂಡು ಬಸವಣ್ಣನವರ ವಿಚಾರಗಳನ್ನು ತತ್ವಗಳನ್ನು ಆಚರಣೆಗೆ ತರದಿದ್ದರೆ, ಬಸವಣ್ಣನವರ ಹೆಸರು ಹೇಳುವ ನೈತಿಕ ಹಕ್ಕನ್ನು ನಾವು ಕಳೆದುಕೊಳ್ಳುತ್ತೇವೆ. ಆದಕ್ಕಾಗಿ ಇಂದು ಚರಿತ್ರೆಯ ವೈಭವೀಕರಣವನ್ನು ಕೈ ಬಿಟ್ಟು ಹೊಸ ಚರಿತ್ರೆಯ ಪುನರ್‌ಸೃಷ್ಟಿಗೆ ದಲಿತರು ಮತ್ತು ದಲಿತೇತರರು ಎಲ್ಲರೂ ಕೂಡಿಯೇ ಹೋರಾಟ ಮಾಡಬೇಕಾದ ಅಗತ್ಯವಿದೆ. ಇತಿಹಾಸದ ಬೆಳಕಿನಲ್ಲಿ ವಾಸ್ತವದ ಸತ್ಯಗಳನ್ನು ಕಂಡುಕೊಳ್ಳಬೇಕಾಗಿದೆ. ಬಸವಣ್ಣ ಪ್ರಮುಖವಾಗಿ ಮನಸ್ಸು ಕಟ್ಟುವ ಕೆಲಸ ಮಾಡಿದ. ಮಾನವೀಯತೆಯನು ಬೆಳೆಸುವುದೇ ನಿಜವಾದ ಹೋರಾಟವೆಂದು ತಿಳಿದುಕೊಂಡ. ಅಧಿಕಾರ ಅಂತಸ್ತುಗಳಿಗಿಂತ ಸಾಂಸ್ಕೃತಿಕವಾದ ಸಾಮಾಜಿಕವಾದ ಸಮಾನತೆ ಬಹು ದೊಡ್ಡದೆಂದು ಭಾವಿಸಿದ. ಅದಕ್ಕಾಗಿ ಮನುಷ್ಯನಲ್ಲಿ ಅರಿವನ್ನುಂಟು ಮಾಡುವುದರ ಮೂಲಕ ಜಾಗೃತಿ ಮೂಡಿಸಿದ. ಅಂತಹ ಅರಿವು ಇಂದು ದಲಿತರಿಗೂ ದಲಿತೇತರರಿಗೂ ಅತ್ಯಗತ್ಯವೆಂಬುದನ್ನು ಅರಿಯಬೇಕಾಗಿದೆ. ಬಸವಣ್ಣನವರ ಹೋರಾಟ ಮುಂದೆ ನಡೆದ ಎಲ್ಲ ಪ್ರಗತಿ ಪರ ಹೋರಾಟಗಳಿಗೆ ಸ್ಫೂರ್ತಿಯ ನೆಲೆಯಾಗಿದೆ.

12ನೇ ಶತಮಾನದ ವಚನ ಚಳುವಳಿ ಮೇಲ್ನೋಟಕ್ಕೆ ಧಾರ್ಮಿಕ ಚಳುವಳಿಯಾಗಿ ಕಂಡರೂ ಇದು ಕಾಯಕ ಜೀವಿಗಳ ಹೋರಾಟವಾಗಿತ್ತು. ಕೆಳವರ್ಗದವರು ತಮ್ಮ ಉನ್ನತಿಗಾಗಿ ತಾವೇ ಕೈಕೊಂಡ ಆಂದೋಲನವಾಗಿತ್ತು. ಮಾನವ ಘನತೆ ಬೆಳೆದು ಬಂದಿತು. ಆದರೆ ಕಾಲಾಂತರದಲ್ಲಿ ಈ ಚಳುವಳಿ ಒಂದು ಧರ್ಮದ ಚೌಕಟ್ಟಿನಲ್ಲಿ ಸೇರಲು ಹವಣಿಸಿದಾಗ ತನ್ನ ಮೂಲ ಆಶಯಗಳನ್ನು ಮರೆಯಿತು. ಕಾಲಾಂತರದಲ್ಲಿ ಧಣಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ದಲಿತರನ್ನು ಈ ಧರ್ಮದಿಂದ ದೂರವಿಡಲಾಯಿತು. ಬಂಡಾಯದ ಮತ, ದಲಿತ ಕಾಯಕ ಜೀವಿಗಳ ಹೋರಾಟ ಎಂದು ಚಳುವಳಿಯನ್ನು ಕುರಿತು ಹೇಳಲಾಗಿದೆ. ಆದರೆ ಪ್ರಸ್ತುತ ವೀರಶೈವರು ದಲಿತ ಶಬ್ದದ ಬಗ್ಗೆ ಮಡಿ ಮನೋಭಾವ ಬೆಳೆಸಿಕೊಂಡಿದ್ದಾರೆ. ಬಸವತತ್ವದ ವಿರುದ್ಧವೇ ಈ ಮತ ರೂಪುಗೊಂಡಿದ್ದು, ಚರಿತ್ರೆಯ ದುರಂತ.

ಇಂದಿನ ಲಿಂಗಾಯತರು ಅಥವಾ ವೀರಶೈವರು ತಮ್ಮ ಅವೈದಿಕ ಪರಂಪರೆ ಹಾಗೂ ದಲಿತ ಮೂಲ ಮರೆತಿದ್ದಾರೆ. ಉಪಜಾತಿಗಳ ಶ್ರೇಣಿಯಲ್ಲಿ ಮೇಲಿದ್ದವರು ದಲಿತ ವಿರೋಧಿಗಳಾಗಿದ್ದಾರೆ. ಉಪಜಾತಿಗಳು ಸ್ವತಂತ್ರ ಅಸ್ತಿತ್ವಕ್ಕೆ ಹವಣಿಸುತ್ತಿವೆ. ವೀರಶೈವರಲ್ಲಿ ಇಂದು ಬಂಡಾಯ ಸ್ಥಗಿತಗೊಂಡಿದೆ.

ಇವರು ಬ್ರಾಹ್ಮಣೀಕರಣಗೊಂಡು ಆರ್ಥಿಕ, ಸಾಮಾಜಿಕ ಅವಕಾಶಕ್ಕಾಗಿ ಜಂಡಾಯುವನ್ನು ಸ್ಥಗಿತಗೊಳ್ಳಲು ಕಾರಣ. ಇಂದು ಆರ್ಥಿಕ ಪ್ರಗತಿ ಸಂಸ್ಕೃತದ ಅನುಕರಣೆ ತೀವ್ರಗೊಂಡಿದೆ. ಹೀಗಾಗಿ ಯಾವುದಕ್ಕಾಗಿ ಬಸವಣ್ಣ ಹೋರಾಟ ಮಾಡಿದ್ದನೋ ಅದರ ವಿರುದ್ಧ ಇಂದಿನವರು ಪುನಃ ಕರ್ಮಠರಾಗುತ್ತಿದ್ದಾರೆ. ಹಳೆಯದಕ್ಕೆ ಹಿಂತಿರುಗುತ್ತಿದ್ದಾರೆ. ಬಸವಣ್ಣನ ಪ್ರಗತಿ ಪರ ವಿಚಾರಗಳು ಇಂದಿನ ಬಸವಣ್ಣನ ಅನುಯಾಯಿಗಳಿಗೆ ಬೇಡವಾಗಿವೆ ಎಂಬ ಸ್ಥಿತಿ ನಿರ್ಮಾಣವಾಗಿದೆ.

5.3 ಅಂಬೇಡ್ಕರ್ ವಿಚಾರಗಳ ಪ್ರಸ್ತುತತೆ :

ಅಂಬೇಡ್ಕರ್ ಇಂದು ಏಕೆ ಪ್ರಸ್ತುತ? ಎಂಬ ಈ ಪ್ರಶ್ನೆಗೆ ಉತ್ತರಗಳು ನೂರಾರು. ಅಂಬೇಡ್ಕರ್‌ರವರನ್ನು ಆಳವಾಗಿ ಅಧ್ಯಯನ ಮಾಡಿದಂತೆಲ್ಲಾ ಅವರ ವಿಚಾರಗಳ ಆಳವನ್ನು ಅರಿತಾಗ ಅವರು ಕೇವಲ ಅಸ್ಪೃಶ್ಯರಿಗಾಗಿ ಮಾತ್ರ ಹೋರಾಡಲಿಲ್ಲ. ಇಡೀ ಮಾನವ ಜನಾಂಗದಲ್ಲಿ ಅರಿವನ್ನು ಮೂಡಿಸಲು ಹೋರಾಡಿದರು. ಎಲ್ಲೂ ಕೂಡಾ ಬ್ರಾಹ್ಮಣನನ್ನು ಟೀಕಿಸುವುದಿಲ್ಲ. ಬ್ರಾಹ್ಮಣ್ಯವನ್ನು ಟೀಕಿಸುತ್ತಾರೆ. ದಲಿತರಷ್ಟೇ ಅಲ್ಲದೇ ಇತರ ಎಲ್ಲರೂ ಜೀವನದ ನಿಷ್ಠುರವಾದ ಸತ್ಯವನ್ನು ಕಂಡುಕೊಳ್ಳಬೇಕೆಂದು ಎಲ್ಲರಿಗೂ ಪ್ರೇರೆಪಿಸುತ್ತಾರೆ.

ಎಲ್ಲಕ್ಕಿಂತಲೂ ಮುಖ್ಯವಾಗಿ ಎಲ್ಲೂ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ. ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಗಾದ ಜನಾಂಗದಿಂದ ಹುಟ್ಟಿ ಬಂದ ವ್ಯಕ್ತಿಗೆ, ಇಕ್ರುಲಾ, ಒದೀರ್ಲಾ, ನನ್ ಮಕ್ಕಳ ಚರ್ಮ ಎಬ್ರುಲಾ ಎನ್ನುವ ಸಿಟ್ಟು ಬರುವುದು ಸಹಜ. ಆ ಸಿಟ್ಟು ಸಮರ್ಥನೀಯ. ಆದರೆ ಅಂಬೇಡ್ಕರ್‌ರರು ಅಂತಹ ಸಿಟ್ಟನ್ನು ಪ್ರಚೋದಿಸುವುದಿಲ್ಲ. ಸಮಾನತೆಯನ್ನು ಸಂಘಟನೆಯ ಮೂಲಕ ಸಾಧಿಸಲು ಪ್ರೇರೇಪಿಸುತ್ತಾರೆ. ಆ ಸಮಾನತೆಯ ಮೂಲಕ ಸಾಮೂಹಿಕ ಸ್ವಾಸ್ಥ್ಯವನ್ನು ತರಲು ಸಾಧ್ಯವೆಂದು ನಿರೂಪಿಸುತ್ತಾರೆ. ಬಹುಶಃ ಇಂದೂ ಕೂಡ ದಲಿತ ಸಮುದಾಯ ಹಿಂಸೆಯ ಹಾದಿಯನ್ನು ಹಿಡಿಯದಿರಲು ಅಂಬೇಡ್ಕರ್‌ರವರು ಕಾರಣವೆಂದರೆ ತಪ್ಪಾಗಲಾರದು. ಮನ ಪರಿವರ್ತನೆಯ ಮೂಲಕ ಸಮಾಜದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದ ಸಮಾಜ ಶಾಸ್ತ್ರಜ್ಞರಾಗಿದ್ದರು. ಅವರ ಹೋರಾಟದ ಉದ್ದೇಶ ದಲಿತ ವಿಮೋಚನೆಯಷ್ಟೇ ಆಗಿರಲಿಲ್ಲ. ಅದಕ್ಕೂ ಮಿಗಿಲಾಗಿ ಸರ್ವರ ಹಿತ, ರಾಷ್ಟ್ರ ಹಿತ ಮುಖ್ಯವಾಗಿತ್ತು ಎನ್ನುವುದನ್ನು ಅವರ ಬದುಕಿನ ಹಲವು ಸಂದರ್ಭಗಳ ನಿರ್ಧಾರಗಳಿಂದ ಮನಗಾಣಬಹುದಾಗಿದೆ. ಹಿಂದೂ ಕೋಡ್ ಬಿಲ್ ತರಲು ಅವರು ಪ್ರಯತ್ನಿಸಿದ್ದು ಹಿಂದೂ ಸಮಾಜ ಸುಧಾರಿಸಲು ಮಾಡಿದ ಪ್ರಮುಖ ಪ್ರಯತ್ನವಾಗಿರುವುದನ್ನು ಮರೆಯಲು ಸಾಧ್ಯವೇ?

ಸಾವಿರಾರು ವರ್ಷಗಳಿಂದ ಮನುವಾದವೆಂಬ ವಿಷಮ ಸಾಮಾಜಿಕ ವಾತಾವರಣದಲ್ಲಿ ದಾರಿದ್ರ್ಯ, ದೌರ್ಜನ್ಯ, ಅಸ್ಪೃಶ್ಯತೆ, ಅಜ್ಞಾನ, ಅಸಮಾನತೆಯನ್ನೇ ಮೈ ತುಂಬಿಕೊಂಡಿರುವ ಭಾರತಕ್ಕೆ ಮುಕ್ತ ಸಾಂಸ್ಕೃತಿಕ ಸಾಮಾಜಿಕ ವಾತಾವರಣ ಬೆಳೆದು ಬರಬೇಕಿದೆ. ಅದು ಅಂಬೇಡ್ಕರ್ ವಿಚಾರಗಳಿಂದ ಸಾಧ್ಯ. ಅಂಬೇಡ್ಕರ್ ಈ ನಾಡಿನ ಶೋಷಿತರ ಧ್ವನಿ, ಗೌತಮಬುದ್ಧ, ಬಸವಣ್ಣನವರ ಸಾಮಾಜಿಕ ಚಳುವಳಿ ಮತ್ತು ಸಮಾನತೆಯ ಪರಿಕಲ್ಪನೆಯನ್ನು ಸಂವಿಧಾನ ರಚನೆಯ ಮೂಲಕ ಸಾಕಾರಗೊಳಿಸಿದ ಅಪ್ರತಿಮ ಸಾಧನೆ ಅವರದಾಗಿದೆ. ಸ್ವಾತಂತ್ರ್ಯ, ಸಮಾನತೆ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಿ ಸಾಕಾರ ರೂಪಕ್ಕೆ ತರಲು ಅಂಬೇಡ್ಕರ್‌ವಾದ ಪ್ರೇರಕವಾಗಬಲ್ಲದು. ಆಧುನಿಕ ಸವಾಲುಗಳನ್ನು ಎದುರಿಸಲು ಇವರ ವಿಚಾರಗಳು ಪೂರಕವಾಗಬಲ್ಲವು.

ಅಂಬೇಡ್ಕರ್ ಮಹಾಮಾನವತಾವಾದಿ, ಅಸದೃಶ ರಾಷ್ಟ್ರಪ್ರೇಮಿ, ಆಶಾವಾದಿ, ಶೋಷಿತರ, ಕಾರ್ಮಿಕರ, ಮಹಿಳೆಯರ ಕೃಷಿ ಕೂಲಿಗಳ, ಗುಡ್ಡಗಾಡು ಜನರ, ಹಿಂದುಳಿದವರ, ಅಲ್ಪಸಂಖ್ಯಾತರ, ಅಲೆಮಾರಿಗಳ, ಅಸ್ಪೃಶ್ಯರ, ವಿಮೋಚನೆಗೆ ಶ್ರಮಿಸಿದ ಪ್ರಗತಿಗಾಮಿಯಾಗಿದ್ದರು. ಶೋಷಣೆಯ ಶತ್ರು ಮಾನವೀಯತೆಯ ಮಿತ್ರ.

ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ನಡೆದ ವಾಗ್ವಾದವೊಂದರಲ್ಲಿ ನನ್ನ ಜನರಿಗೊಂದು ಮಾತೃಭೂಮಿ ಇಲ್ಲ: ಎಂದು ಹೇಳಿ ಅಂಬೇಡ್ಕರ್ ದಂಗುಬಡಿಸಿದ್ದರು. ಗಾಂಧೀಜಿ ಅವರು ಇದೇ ನಿಮ್ಮ ಜನ್ಮ ಭೂಮಿ ಎಂದು ಮನವರಿಕೆ ಮಾಡಿಕೊಡಲು ಯತ್ನಿಸಿದರು. ಗಾಂಧೀಜಿಯವರಿಗೆ ಅಂಬೇಡ್ಕರ್ ಅವರ ವಾದಗಳು, ಭಾರತೀಯ ಸಾಮಾಜಿಕ ಪರಿಸ್ಥಿತಿ, ಅನಕ್ಷರತೆ, ದಾರಿದ್ರ್ಯ ಹಾಗೂ ದಾಸ್ಯದ ಪರಿಚಯ ಚೆನ್ನಾಗಿಯೇ ಇತ್ತು. ಹಾಗೆಯೇ ಮೂರು ದುಂಡು ಮೇಜಿನ ಪರಿಷತ್ತುಗಳಲ್ಲಿ ಅಂಬೇಡ್ಕರ್‌ರವರು ತಮ್ಮ ಕಾಳಜಿಯನ್ನು ವಿದ್ವತ್ತನ್ನು ಜಗತ್ತಿಗೆ ಸಾಬೀತುಪಡಿಸಿದ್ದರು. ಇದನ್ನು ಗಾಂಧೀಜಿಯವರು ಪ್ರತ್ಯಕ್ಷವಾಗಿ ಕಂಡುಕೊಂಡಿದ್ದರು. ಅಸ್ಪೃಶ್ಯತೆ ಮತ್ತು ದಾಸ್ಯ ಭಾವಗಳ ಉಚ್ಚಾಟನೆ ಹಾಗೂ ಸಮಾನತೆ ಮತ್ತು ಸಹೋದರತ್ವ ಭಾವನೆಗಳ ನಿಜವಾದ ಅಳವಡಿಕೆಯಂತಹ ವಿಷಯಗಳಲ್ಲಿ ಇಬ್ಬರಿಗೂ ಅಂತರಾಳದ ಸಮಸಮವಾದ ಉತ್ಕಟ ಇಚ್ಛೆ ಒಂದೇ ಆಗಿತ್ತು. ವ್ಯತ್ಯಾಸವೆಂದರೆ ದಾಸ್ಯ ತೊಡೆದು ಹಾಕಿದ ಮೇಲೆ ಸ್ವಾತಂತ್ರ್ಯಕ್ಕಾಗಿ ಹೋರಾಡಬಹುದು ಎಂಬುದು ಅಂಬೇಡ್ಕರ್ ವಾದವಾದರೆ, ಸ್ವಾತಂತ್ರ್ಯ ಪಡೆದು ಬಿಟ್ಟರೆ ನಮ್ಮ ಸಮಸ್ಯೆಗಳನ್ನೆಲ್ಲಾ ನಾವು ಬಗೆಹರಿಸಿಕೊಳ್ಳಬಹುದು ಎಂಬ ಆಶಾವಾದ ದಿವ್ಯ ವ್ಯಕ್ತಿತ್ವ ಗಾಂಧೀಜಿ ಅವರ ಸ್ಪಷ್ಟ, ಸತ್ಯನಿಷ್ಟ ಅಭಿಪ್ರಾಯ. ಸ್ವಾತಂತ್ರ್ಯ ಪಡೆದು ಅರವತ್ತು ವರ್ಷ ಸಮೀಪಿಸುತ್ತಿದ್ದರು. ಇಂದು ದಾಸ್ಯ, ಜಾತೀಯತೆ ನೋಡಿದಾಗ ಡಾ।ಅಂಬೇಡ್ಕರ್ ಅವರ ಅಭಿಪ್ರಾಯ ಎಷ್ಟೊಂದು ಸತ್ಯ ಎಂಬುದು ನಿಚ್ಚಳವಾಗುತ್ತದೆ. ದೇಶವು ಸ್ವಾತಂತ್ರ್ಯವನ್ನು ಇಡೀ ಇಡೀಯಾಗಿ ಒಪ್ಪಿಕೊಂಡು ಬಳಸಿಕೊಳ್ಳುತ್ತಿದ್ದರೂ, ಸಮಾನತೆಯ ಪ್ರಶ್ನೆಯನ್ನು ಅರಗಿಸಿಕೊಳ್ಳಲೇ ಇಲ್ಲ. ಭ್ರಾತೃ ಭಾವವನ್ನು ತಿರಸ್ಕೃತ ದೃಷ್ಟಿಯಿಂದಲೇ ಕಾಣುತ್ತಿದ್ದೇವೆ. ಈ ಪರಿಸ್ಥಿತಿಯಲ್ಲಿ ಗಾಂಧೀ, ಅಂಬೇಡ್ಕರ್ ಅವರ ದೃಷ್ಟಿಕೋನಗಳನ್ನು ಸರಿ- ತಪ್ಪು ಎಂದು ಹೇಳುವ ಸಂದರ್ಭ ಒದಗಿಬಂದಿತೇ? ಸಾಮಾಜಿಕ ಪರಿವರ್ತನೆ ಎಷ್ಟೊಂದು ದೂರ ಉಳಿದಿದೆ? ಎಂಬುದೇ ಇಂದಿನ ಪ್ರಶ್ನೆ. ಅಂಬೇಡ್ಕರ್ ಆಶಯ ಕಾರ್ಯರೂಪಕ್ಕೆ ಬರಬೇಕಾದರೆ ಅವರಿಂದ ನಿರ್ಮಾಣವಾದ ಸಂವಿಧಾನವನ್ನು ನೈಜವಾಗಿ ಕೃತಿಯಲ್ಲಿ ಕಾರ್ಯರೂಪಕ್ಕೆ ತರುವುದು, ಅದರಲ್ಲಿ ಉಲ್ಲೇಖಿಸಿರುವ ವಿಧಿವಿಧಾನದಲ್ಲಿ ಸಮಾಜದ ಪುನರ್ ನಿರ್ಮಾಣಕ್ಕೆ ತೊಡಗುವಿಕೆಯಿಂದ ಮಾತ್ರ ಸಾಧ್ಯ.

ಡಾ।ಅಂಬೇಡ್ಕರ್ ಅವರು ಸದಾ ಕಾಲಕ್ಕೂ ಎಲ್ಲ ದೇಶಗಳಿಗೂ ಅನ್ವಯವಾಗುವಂತಹ ಒಂದು ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ. ಅದೆಂದರೆ ಸಂವಿಧಾನ ಒಂದು ಎಷ್ಟೇ ಉತ್ತಮವಾದುದಾದರೂ ಅದನ್ನು ಕಾರ್ಯಗತಗೊಳಿಸುವವರು ಕೆಟ್ಟ ಜನರಾಗಿದ್ದರೆ ಅದರ ಪರಿಣಾಮ ಕೆಟ್ಟದ್ದೇ ಆಗುವುದೆಂದೂ, ಹಾಗೂ ಸಂವಿಧಾನ ಎಷ್ಟೇ ಕೆಟ್ಟದ್ದಾಗಿದ್ದರೂ ಅದರ ಕಾರ್ಯಾಚರಣೆಗೊಳಿಸುವ ಜನ ಒಳ್ಳೆಯವರಾಗಿದ್ದರೆ ಅದರ ಪರಿಣಾಮ ಒಳ್ಳೆಯದೇ ಆಗುವುದೆಂದು ಹೇಳಲು ಯಾವ ಪ್ರವಾದಿಯೂ ಬೇಕಾಗಿಲ್ಲ ಎಂದಿರುವರು. ಇದು, ನಾವಿಂದು ಇರುವ ಸಾಮಾಜಿಕ ರಾಜಕೀಯ ಆರ್ಥಿಕ ಪರಿಸ್ಥಿತಿಯಲ್ಲಿ ಅಂತಃಕರಣಪೂರ್ವಕವಾಗಿ ಪರ್ಯಾಲೋಚಿಸಬೇಕಾದ ವಿಷಯ.

ಭಾರತ ಸಂವಿಧಾನ ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ದ್ಯೋತಕ. ಅಂಬೇಡ್ಕರ್ ಜೀವನದುದ್ದಕ್ಕೂ ಅವರು ಭಾರತದಲ್ಲಿ ಪ್ರಜಾಪ್ರಭುತ್ವದ ಆದರ್ಶದ ತಳಹದಿಯಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಆಚರಣೆಯುಳ್ಳ ಸಮಾಜ ಸ್ಥಾಪನೆಗಾಗಿ ಸತತ ಹೋರಾಡಿದರು. ಅವರ ಪ್ರಕಾರ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವಿಲ್ಲದ ರಾಜಕೀಯ ಸ್ವಾತಂತ್ರ್ಯ ನಿರರ್ಥಕ. ಇದನ್ನರಿಯದ ಭಾರತೀಯರು ಇಂದು ಕವಲುದಾರಿ ಯಲ್ಲಿದ್ದಾರೆ. ದೇಶದ ಸಮಗ್ರತೆ, ರಾಷ್ಟ್ರೀಯತೆ, ಐಕ್ಯತೆಗಳನ್ನು ಕಾಪಾಡಿಕೊಳ್ಳಲು ಇಂದು ಕೂಡ ಅಂಬೇಡ್ಕರ್‌ವಾದ ಪೂರಕವಾಗಬಲ್ಲದು. ಆ ಕಾರಣಕ್ಕೆ ಅಂಬೇಡ್ಕರ್ ವಿಚಾರಗಳನ್ನು ಅಂತಃಕರಣಪೂರ್ವಕ ವಾಗಿ ಪರ್ಯಾಲೋಚಿಸ ಬೇಕಾದ ವಿಷಯವಾಗಿದೆ.

"ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎಂದು ಹೇಳಿದ ಅಂಬೇಡ್ಕರ್‌ರವರ ಅಭಿಪ್ರಾಯ ರಾಜಕೀಯ ಪ್ರಗತಿಯಾಗುವುದಕ್ಕೆ ಮುನ್ನ, ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿ ಉಂಟಾಗುತ್ತಿರುವದನ್ನು ನಮ್ಮ ಚರಿತ್ರೆ ತೋರಿಸಿಕೊಟ್ಟಿದೆ. ಇತಿಹಾಸ ಮತ್ತು ಸಂಸ್ಕೃತಿಯನ್ನು ಕಳೆದುಕೊಂಡ ಜನಾಂಗವು ತನ್ನ ಎಲ್ಲಾ ಹಕ್ಕು ಮತ್ತು ಅಧಿಕಾರವನ್ನು ಕಳೆದುಕೊಳ್ಳುತ್ತದೆ ಎಂದು ಹೇಳಿದ ಅಂಬೇಡ್ಕರ್‌ರವರು ನಮ್ಮ ನಮ್ಮ ಚರಿತ್ರೆ ಸಂಸ್ಕೃತಿಗಳ ಅಧ್ಯಯನಕ್ಕೆ ಕರೆ ನೀಡಿದರು. ಆ ಮೂಲಕ ಅಸಮಾನತೆ ಹೊಡೆದೋಡಿಸಲು ಪ್ರಯತ್ನಿಸಿದವರು ಇತಿಹಾಸವನ್ನು ಬದಲಿಸಲು ಪ್ರಯತ್ನಿಸಿದವರು ಮತ್ತು ಅವರ ಕಾರ್ಯತಂತ್ರಗಳು ಸರ್ವ ಕಾಲಕ್ಕೂ ಪ್ರಸ್ತುತವಾಗುತ್ತವೆ. ಅಂಬೇಡ್ಕರ್‌ರವರ ರಾಜಕೀಯ ತತ್ವಗಳನ್ನು ರೂಢಿಸಿಕೊಂಡಲ್ಲಿ ಸಮಾನತೆಯನ್ನು ರೂಢಿಸಿಕೊಳ್ಳಬಹುದಾಗಿದೆ. ಆ ಮೂಲಕ ಸಾಮಾಜಿಕ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಬಹುದು. ಪ್ರಸ್ತುತ ಸಂದರ್ಭಕ್ಕೂ ಅಂಬೇಡ್ಕರ್‌ರವರ ತತ್ವಗಳು ಬಹು ಮಾನ್ಯವಾಗಿವೆ. ಅಂಬೇಡ್ಕರ್‌ರವರ ಸಾಮಾಜಿಕ ಹೋರಾಟದ ಸಾಧನೆ ಮತ್ತು ಇದರಿಂದ ಅಸ್ಪೃಶ್ಯರ ಬದುಕಿನಲ್ಲಾದ ಇತ್ಯಾತ್ಮಕ ಪರಿಣಾಮಗಳು ಸ್ವಾಭಿಮಾನದ ಬದುಕಿಗೆ ಸ್ಫೂರ್ತಿಯಾಗಿವೆ. ಅಂಬೇಡ್ಕರ್ ಹೆಮ್ಮೆ, ಸ್ವಾಭಿಮಾನ ಮತ್ತು ಘನತೆಯ ಸಂಕೇತವಾಗಿದ್ದಾರೆ.

ಸ್ವಾತಂತ್ರ್ಯ ಬಂದು, ಗಣತಂತ್ರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ನಮ್ಮ ದೇಶ ಅರ್ಧಶತಮಾನ ಕಳೆದಿದೆ. ಅಂದಿನ ನಮ್ಮ ಕನಸುಗಳು, ಆದರ್ಶಗಳು ಸಾಕಾರಗೊಳ್ಳುವ ದಿಕ್ಕಿನಲ್ಲಿ ನಮ್ಮ ನಡೆ ನಿರಾಶೆಯನ್ನುಂಟು ಮಾಡಿದೆ. ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯದ ಮೂಲಕ ಆರ್ಥಿಕ ಸಮಾನತೆಯನ್ನು ಸಾಧಿಸಬಹುದು-ಸಾಧಿಸುತ್ತೇವೆ ಎಂಬ ಅಂದಿನ ನಮ್ಮ ಅಚಲ ಕನಸಿಗೆ ಮಂಕು ಕವಿದಿದೆ. ಶಿಕ್ಷಣದ ಮೂಲಕ ನಾವು ಜಾತ್ಯಾತೀತ ಸಮಾಜ ನಿರ್ಮಾಣ ಮಾಡುತ್ತೇವೆ ಎಂಬ ನಮ್ಮ ಅಂದಿನ ಆದರ್ಶ, ವಾಸ್ತವದ ಕಹಿಯಲ್ಲಿ ನಲುಗಿ ಹೋಗಿದೆ. ಅಂದಿಗಿಂತ ಇಂದು ಜಾತಿ ಶಕ್ತಿ ಅಧಿಕವಾಗಿವೆ. ಅವುಗಳನ್ನು ಹೊರತುಪಡಿಸಿ ನಮ್ಮ ಜೀವನ ವ್ಯವಸ್ಥೆ ನಡೆಯಲಾರದೆಂಬ ಘಟ್ಟಕ್ಕೆ ಬಂದು ನಿಂತಿದ್ದೇವೆ. ಆರ್ಥಿಕ ಅಸಮಾನತೆ ಎದ್ದು ಕಾಣುವಷ್ಟು ಪ್ರಬಲವಾಗಿದೆ. ಬಡವ-ಬಲ್ಲಿದರ ನಡುವೆ ಕಂದಕ ಅಧಿಕವಾಗುತ್ತಿದೆ. ಆ ವರ್ಗ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಶ್ರೀಮಂತರಾಗುತ್ತಿದ್ದರೆ, ಮಧ್ಯಮ ವರ್ಗ ನಾಶವಾಗುತ್ತಿದೆ. ಬಹುಪಾಲು ಬಡವರ್ಗವಾಗಿ ರೂಪಾಂತರವಾಗುತ್ತಿದೆ. ಗಾಂಧೀಜಿಯವರ ಗ್ರಾಮ ಭಾರತ ಆತ್ಮ ಕಳೆದುಕೊಂಡ ಕಳೇಬರದಂತೆ ಗೋಚರಿಸುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿ ಮತ್ತು ಅವರ ಅನುಯಾಯಿಗಳು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿನ ಜಾತಿಪದ್ಧತಿ, ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಪಾಪಗಳ ವಿರುದ್ಧ ಅರಿವು ಮೂಡಿಸುವ ಅರ್ಥಪೂರ್ಣ ಹೋರಾಟ ಮಾಡಿದುದರ ಫಲ ಹಾಗೂ ಡಾ। ಅಂಬೇಡ್ಕರ್ ಅವರ ದಲಿತ ಪರವಾದ ಗಟ್ಟಿ ದನಿಯ ಸಿದ್ಧಾಂತದ ಫಲವಾಗಿ ಸಾಮಾಜಿಕ ಕೆಳಸ್ತರದಲ್ಲಿ ಮೂಡಿದ ಅಕ್ಷರ ಜ್ಞಾನ, ಈ ಅಕ್ಷರ ಜ್ಞಾನ ಭಾರತದ ಬಹುಸಂಖ್ಯಾತ ದಲಿತರಿಗೆ, ಸಾಮಾಜಿಕವಾಗಿ ಹಿಂದುಳಿದವರಿಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಅರ್ಥವ್ಯವಸ್ಥೆಯನ್ನು ಭಿನ್ನವಾಗಿ ಕಾಣುವ, ವಿಶ್ಲೇಷಿಸುವ ಶಕ್ತಿ ತಂದು ಕೊಟ್ಟಿತು. ಈ ಶಕ್ತಿ ಗಾಂಧೀಜಿಯವರನ್ನು ತಮ್ಮ ಏಳಿಗೆಗಾರ ಶಕ್ತಿಯೆಂದು ಒಪ್ಪಲು ಸಿದ್ಧವಿಲ್ಲದೆ ಹೋಯಿತು. ಈ ಜನಾಂಗಗಳಿಗೆ ಗಾಂಧೀಜಿಗಿಂತ ಅಂಬೇಡ್ಕರ್ ತಮ್ಮವನಂತೆ, ತಮಗಾಗಿ ಹೋರಾಡಿದ ಸಂತನಂತೆ ಕಂಡರು. ಈ ಜನಾಂಗಗಳಿಗೆ ಅಂಬೇಡ್ಕರ್ ಸಾಂಸ್ಕೃತಿಕ ನಾಯಕನಂತೆ, ಉದ್ಧಾರ ಮಾಡಲೆಂದೇ ಧರೆಗಿಳಿದ ಅವತಾರ ಪುರುಷನಂತೆ ಕಂಡರು. ಇಂದು ಭಾರತದ ಹಳ್ಳಿ-ಹಳ್ಳಿಗಳಲ್ಲಿ ಗಾಂಧೀಜಿ ಅವರಿಗಿಂತ ಅಂಬೇಡ್ಕರ್ ಹೆಚ್ಚು ಪ್ರಸ್ತುತವಾಗಿದ್ದಾರೆ. ದಲಿತರಿಗೆ ಅಥವಾ ಸಾಮಾಜಿಕ ಕೆಳಜಾತಿಯವರಿಗೆ ಅಂಬೇಡ್ಕರ್ ಸ್ವಾಭಿಮಾನದ ಸಂಕೇತವಾಗಿದ್ದಾರೆ. ತಮ್ಮ ಹಕ್ಕುಗಳನ್ನು ಸಾಧ್ಯವಾಗಿಸುವ ಶಕ್ತಿಯಾಗಿದ್ದಾರೆ. ಈ ಕಾರಣಕ್ಕಾಗಿ ಅಂಬೇಡ್ಕರ್ ಪ್ರತಿಯೊಬ್ಬ ದಲಿತರ ಮನೆಗೆ ಬಂದಿದ್ದಾರೆ. ಅವರ ಬದುಕಿಗೆ ಬೆಳಕಾಗಿದ್ದಾರೆ. ಅವರ ಸಮಸ್ಯೆಗಳಿಗೆ ಪರಿಹಾರದ ಸಂಕೇತವಾಗಿದ್ದಾರೆ. ಇಂದು ಹಳ್ಳಿಗಳಲ್ಲಿ ಜರುಗುವ ಶೋಷಣೆ, ದೌರ್ಜನ್ಯಗಳನ್ನು ಖಂಡಿಸಲು, ಹೋರಾಡಲು, ಅಂಬೇಡ್ಕರ್ ಸ್ವಾಭಿಮಾನದ ಸಂಕೇತವಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಪ್ರಸ್ತುತವಾಗುತ್ತಾರೆ.

ಅಂಬೇಡ್ಕರ್ ಶೋಷಿತರ ಹೋರಾಟದ ರೂವಾರಿ:

ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಎಲ್ಲಾ ಶೋಷಿತ, ನೊಂದ ಸಮುದಾಯಗಳ ಪರವಾದ ಧ್ವನಿ ಎತ್ತಿದವರು. ಅಸ್ಪೃಶ್ಯರಿಗೆ ಸಾರ್ವಜನಿಕ ಕೆರೆಯ ನೀರು ಬಳಕೆಯಿಂದ ಹಿಡಿದು ಪ್ರತ್ಯೇಕ ಮತದಾನದ ಹಕ್ಕುಗಳ ಅನುಷ್ಠಾನಕ್ಕಾಗಿ ಅವರು ಕೈಗೊಂಡ ಪ್ರತಿಭಟನಾತ್ಮಕ ಹೋರಾಟಗಳು ಅವಿಸ್ಮರಣೀಯ. ಅಂಬೇಡ್ಕರ್‌ರವರು ತಮ್ಮ ಬದುಕಿನುದ್ದಕ್ಕೂ ಇಷ್ಟೊಂದು ಹೋರಾಟ ಮಾಡಿದರು. ಅಸ್ಪೃಶ್ಯರ ಬದುಕಿನಲ್ಲಿ ಕೆಲ ಮಾರ್ಪಾಡುಗಳನ್ನು ಬಿಟ್ಟರೆ ಗಣನೀಯ ಉನ್ನತಿ-ಪ್ರಗತಿ ಸಾಧ್ಯವಾಗಿಲ್ಲ. ಜಾತೀಯತೆ, ಅಸ್ಪೃಶ್ಯತೆಗಳನ್ನು ಪೋಷಿಸಿಕೊಂಡು ಬಂದಿರುವ ಹಿಂದೂ ಧರ್ಮದ ಬದಲಿಗೆ ಬುದ್ಧನ ಧರ್ಮ ದಲಿತರ ಪ್ರಗತಿಗೆ ದಾರಿ ಎನ್ನುವುದನ್ನು ಅವರು ಮನಗಂಡು ಆ ಧರ್ಮದಲ್ಲಿ ದಲಿತರಿಗೆ ನೆಮ್ಮದಿ ಇದೆ ಎಂದು ಅವರು ತಿಳಿಸಿ ಕೊಟ್ಟರು. ತಮ್ಮ ಪ್ರತಿಭಟನಾತ್ಮಕ ಹೋರಾಟದ ಮೂಲಕ ಅಸ್ಪೃಶ್ಯರಿಗೆ ಸಾಮಾಜಿಕ ಸಮಾನತೆ ತಂದು ಕೊಡಲು ಹೋರಾಡಿದರು, ಕಾಳಾರಾಂ ದೇವಾಲಯ ಪ್ರವೇಶ ಚಳುವಳಿ, ಮಹಾಡ ನೀರಿಗಾಗಿ ಹೋರಾಟ ಇವುಗಳೆಲ್ಲ ಅಂಬೇಡ್ಕರ್‌ರವರ ಹೋರಾಟದ ಮೈಲುಗಲ್ಲುಗಳು ಭಾರತದ ಇತಿಹಾಸದಲ್ಲಿ ಮಾನವೀಯತೆಗಾಗಿ, ಸಮಾನ ಸ್ಥಾನಮಾನಗಳಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ ಅವರು ರಾಜಕೀಯವಾಗಿ ನಡೆಸಿದ ಅವಿಸ್ಮರಣೀಯ ಹೋರಾಟಗಳಾಗಿವೆ. ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ದೊರಕಿಸಲು ನಡೆದ ಹೋರಾಟ, ಗಾಂಧೀಜಿಯವರೊಂದಿಗೆ ಅವರು ಮಾಡಿಕೊಂಡ ಪೂನಾ ಒಪ್ಪಂದ ಇಂದಿಗೂ ಪ್ರಸ್ತುತ.

ನೈತಿಕ ತಳಹದಿಯ ಮೇಲೆಯೇ ಎಲ್ಲಾ ಧರ್ಮಗಳೂ ಸ್ಥಾಪನೆಗೊಂಡಿವೆ. ಅದರಲ್ಲೂ ಬೌದ್ಧ ಮತ್ತು ಬಸವಧರ್ಮದ ಮೂಲ ತತ್ವಗಳೂ ಒಂದೆ. ಬುದ್ಧನ ಪಂಚಶೀಲಗಳನ್ನೇ ಬಸವಣ್ಣ ಕಳಬೇಡ, ಕೊಲಬೇಡ.

ಹುಸಿಯ ನುಡಿಯಲು ಬೇಡ....ಎಂದು ಸಾರಿದ. ಅನೇಕ ಧರ್ಮಗಳನ್ನು ಅಭ್ಯಾಸ ಮಾಡಿದ ಅಂಬೇಡ್ಕರ್ ರವರು ಬೌದ್ಧಧರ್ಮದ ತತ್ವಗಳಲ್ಲಿ ತಮ್ಮ ಆತ್ಮೋನ್ನತಿಯನ್ನು ಕಂಡುಕೊಂಡರು. ಬುದ್ಧನ ಪಂಚಶೀಲಗಳನ್ನು ಪಾಲಿಸುವವನು ಉಳ್ಳವನಿರಲಿ, ಬಡವನೇ ಆಗಿರಲಿ, ವಿದ್ಯಾವಂತನಿರಲಿ - ಅವಿದ್ಯಾವಂತನಿರಲಿ, ಎಲ್ಲರೂ ಒಂದೇ. ಯಾರು ಆ ತತ್ವಗಳನ್ನು ಆಚರಣೆಯಲ್ಲಿ ತರುತ್ತಾರೋ ಅವರಿಗೆ ಆತ್ಮೋನ್ನತಿ. ಇಲ್ಲಿ ಸ್ವಪ್ರಯತ್ನಕ್ಕೆ ಹೆಚ್ಚು ಪ್ರಾಶಸ್ತ್ಯ. ಆ ಕಾರಣಕ್ಕಾಗಿ. ದಲಿತರ ಬಿಡುಗಡೆಯ ಮಾರ್ಗೋಪಾಯವಾಗಿ ಅಂಬೇಡ್ಕರ್ ರವರು ಬೌದ್ಧ ಧರ್ಮವನ್ನು ಆರಿಸಿಕೊಂಡರು. ಆ ಧರ್ಮ ದಲಿತರಿಗೆ ಸ್ಫೂರ್ತಿಯ, ಸ್ವಾಭಿಮಾನದ ಬದುಕಿನ ಸಂಕೇತವಾಗಿದೆ. ಅವರ ಬಿಡುಗಡೆ ಬೌದ್ಧದೆಡೆಗೆ ಲಕ್ಷಾಂತರ ಜನ ಮತಾಂತರಗೊಳ್ಳುತ್ತಿರುವುದೇ ಆ ಧರ್ಮದ ಶ್ರೇಷ್ಠತೆಯ ಸಂಕೇತ.

ಸ್ವಾತಂತ್ರ್ಯ ಸಿಕ್ಕು ನಮ್ಮ ದೇಶಕ್ಕೆ ಅನೇಕ ದಶಕಗಳು ಕಳೆದರೂ ಅಸ್ಪೃಶ್ಯತೆ ಮಾಯವಾಗಿಲ್ಲ. ನಮ್ಮ ಸಂವಿಧಾನದ 17 ನೇ ವಿಧಿ ಅಸ್ಪೃಶ್ಯತಾಚರಣೆಯನ್ನು ನಿಷೇಧಿಸುತ್ತದೆ. ಆದರೆ ಜಾತೀವಾದಿಗಳ ಮನದಲ್ಲಿ ಅಸ್ಪೃಶ್ಯತೆ ಇನ್ನೂ ಪಾಲಿಸಲ್ಪಡುತ್ತಿದೆ. ಹೀಗಾಗಿ ಅಸ್ಪೃಶ್ಯರ ಬದುಕು ನರಕವಾಗಿದೆ. ಅವರು ದೌರ್ಜನ್ಯಕ್ಕೆ, ದಬ್ಬಾಳಿಕೆಗೆ, ಬೆಂಕಿಗೆ ತುತ್ತಾಗುತ್ತಿದ್ದಾರೆ. ಇದರ ಅರಿವಿದ್ದರೂ ನಮ್ಮನ್ನಾಳುವ ಸರಕಾರಗಳೂ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಸಂವಿಧಾನದ ಆಶಯಗಳು ಮಣ್ಣುಪಾಲಾಗುತ್ತಿರುವುದು ಈ ದೇಶದಲ್ಲಿ ಸರ್ವೇಸಾಮಾನ್ಯ. ಸ್ವಾತಂತ್ರ್ಯ ಸಿಕ್ಕು ಆರು ದಶಕಗಳೇ ಕಳೆಯುತ್ತಿದ್ದರು. ಅಸ್ಪೃಶ್ಯರ ಬದುಕು ಸಾಮಾಜಿಕವಾಗಿ ಕೆಳಮಟ್ಟದಲ್ಲಿದೆ, ಹಳ್ಳಿಗಳಲ್ಲಿ ಜಾತೀಯತೆ ಪ್ರಬಲಗೊಳ್ಳುತ್ತಲೇ ಇದೆ. ಊರ ಹೊರಗಿನ ಕೇರಿಗಳು ಬೆಳೆಯುತ್ತಲೇ ಇವೆ. ರಾಜಕೀಯ ಕಾರಣಗಳಿಗಾಗಿ ಅಸ್ಪೃಶ್ಯರಲ್ಲಿಯೆ ವೈಷಮ್ಯ, ವೈರತ್ವ, ದ್ವೇಷಗಳನ್ನು ಬೆಳೆಸಲಾಗುತ್ತಿದೆ. ಶತಮಾನಗಳಿಂದ ಅಂಧಕಾರದಲ್ಲಿರುವ ದಲಿತರಿಗೆ ಅತ್ಯಂತ ಸಣ್ಣ ಆಮಿಷ ತೋರಿಸಿದರೂ ಅವರು ಅದಕ್ಕೆ ಒಳಗಾಗುವುದರಲ್ಲಿ ಆಶ್ಚರ್ಯವಿಲ್ಲ. ಅಂಬೇಡ್ಕರ್‌ರವರ ಹೋರಾಟದ ಹಣತೆ ಬತ್ತಿ ಹೋಗಿದೆ. ಅವರ ಬದುಕು ಬೆಳಕಾಗಬೇಕಾಗಿತ್ತು. ಆದರೆ ಅವರ ಹೋರಾಟದ ಬದುಕು, ಅವರ ನುಡಿಗಳು ಮತ್ತು ವಿಚಾರಗಳು ಇಂದು ದಲಿತರ ಬಾಳಿಗೆ ದಾರಿ ದೀಪವಾಗಿವೆ. ಆ ದೀಪ ಆರದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಶೋಷಿತ ಸಮುದಾಯಗಳ ಜವಾಬ್ದಾರಿಯಾಗಿದೆ. ಅಂಬೇಡ್ಕರ್ ಎಂದರೆ ದಲಿತರಿಗೆ ಪ್ರೇರಣೆ, ಧೈರ್ಯ, ಐಡೆಂಟಿಟಿ ಇತ್ಯಾದಿ.... ಹೀಗೆ ಹಲವು ಮೌಲ್ಯಗಳ ಸಂಕೇತವಾಗಿದ್ದಾರೆ ಅಂಬೇಡ್ಕರ್. ಬಹುಮುಖೀ ವ್ಯಕ್ತಿತ್ವದ ಅಂಬೇಡ್ಕರ್ ಹೆಮ್ಮೆ, ಸ್ವಾಭಿಮಾನ ಮತ್ತು ಘನತೆಯ ಸಂಕೇತ. ಇದೆಲ್ಲಕ್ಕಿಂತ ಅಂಬೇಡ್ಕರ್‌ರವರನ್ನು ಸಾಧನೆಯ ಸಂಕೇತ ಎಂದು ಕರೆದರೆ ಉತ್ಪ್ರೇಕ್ಷೆಯಾಗಲಾರದು. ಅಂಬೇಡ್ಕರ್ ಛಲದಿಂದ ಸಂಪಾದಿಸಿಕೊಂಡ ಶಿಕ್ಷಣವನ್ನು ಇಲ್ಲಿಯವರೆಗೂ ಅದನ್ನು ಸಮಗಟ್ಟವುದಕ್ಕೆ ಯಾರಿಗೂ ಸಾಧ್ಯವಿಲ್ಲ ಆ ಕಾರಣ ಸಾಧನೆಯ ಮೇರು ಪುರುಷ ಅಂಬೇಡ್ಕರ್.

ಆಧುನಿಕ ಭಾರತವನ್ನು ಅತ್ಯಂತ ಮಾನವೀಯ ಮೌಲ್ಯಗಳಿಂದ ಕಟ್ಟಲು ತಮ್ಮ ಕೊನೆತನಕ ಹೋರಾಡಿದ ಮಹಾತ್ಮರ ಪೈಕಿ ಡಾ। ಬಾಬಾ ಸಾಹೇಬ್ ಅಂಬೇಡ್ಕರ್ ತುಂಬ ವಿಭಿನ್ನವಾಗಿ ಕಾಣುತ್ತಾರೆ. ಡಾ। ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಮಾಜದ ತಳಪಾಯದಿಂದ ಬಂದು ಏಕಕಾಲಕ್ಕೆ ಇಡೀ ದೇಶದ ಎಲ್ಲ ನೊಂದವರನ್ನು ತಮ್ಮ ತಲೆ ಮೇಲೆ ಹೊತ್ತುಕೊಂಡು ಅವರಿಗಾಗಿಯೇ ತಮ್ಮ ಪ್ರಾಣವನ್ನು ಅರ್ಪಿಸಿಕೊಂಡವರು. ಅಂಬೇಡ್ಕರ್ ಅವರು ಆತ್ಯಂತಿಕ ಮಾನವತಾ ವಾದವನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. ಸಾಮಾಜಿಕ ನ್ಯಾಯವನ್ನು ತಮ್ಮ ವೈಚಾರಿಕತೆಯ ನರನಾಡಿಯಾಗಿಸಿಕೊಂಡಿದ್ದರು.

ದಲಿತರೆಲ್ಲರ ಅಸಮಾನ ಹಿಂಸೆ ಅಸಹಾಯಕತೆಯನ್ನೆಲ್ಲ ಸರ್ವೋದಯದ ವಿವೇಕಕ್ಕೆ ಬೇಕಾದ ಅನುಭವ ಸತ್ಯ ಎಂದು ತಿಳಿದಿದ್ದರು. ಸಮಾಜದ ಎಲ್ಲ ವಿಕಾರ ಶಕ್ತಿಗಳನ್ನು ಆಳದಿಂದ ಗ್ರಹಿಸಿ ಮನುಷ್ಯರಾದ ಎಲ್ಲರ ಮಿತಿಯನ್ನು ಅರಿತುಕೊಂಡಿದ್ದರು. ಡಾ। ಬಾಬಾ ಸಾಹೇಬ ಅಂಬೇಡ್ಕರ್ ಕೇವಲ ದಲಿತರ ಪರವಾದ ಹೋರಾಟಗಾರರಾಗಿಲಿಲ್ಲ. ಆಧುನಿಕ ಭಾರತವು ಕಂಡ ಅತ್ಯಂತ ಪ್ರಬುದ್ಧ ಮಾನವತಾವಾದಿ ಅವರು ಹಾಗೆಯೇ ಪ್ರಖರವಾದ ವೈಚಾರಿಕ ಮಾಂತ್ರಿಕರೂ ಅವರಾಗಿದ್ದರು. ಭಾರತೀಯ ಸಮಾಜದ ವರ್ಣವ್ಯವಸ್ಥೆಯ ರೋಗ ಮೂಲವನ್ನು ಅವರಷ್ಟು ಗಾಢವಾಗಿ ಶೋಧಿಸಿದ್ದು ಯಾರೂ ಇಲ್ಲ. ಒಮ್ಮೆಗೇ ಅವರು ಇಡೀ ಭಾರತದ ಒಟ್ಟು ವ್ಯವಸ್ಥೆಯನ್ನೇ ಬುಡಮೇಲು ಮಾಡಿ ಅದರ ತಳದಲ್ಲಿ ಮನುಷ್ಯರಾದ ಎಲ್ಲರಿಗೂ ಬೇಕಾದ ತಾಯ್ತನ ಮತ್ತು ಜ್ಞಾನದ ಆಧ್ಯಾತ್ಮವನ್ನು ಪ್ರತಿಪಾದಿಸಿದರು. ಅವರ ಚಿಂತನೆಗಳ ಮಾನವೀಯತೆಯ ದಾಹದಿಂದ ಇಡೀ ಸಮಾಜದ ಎಲ್ಲ ನೊಂದವರನ್ನು ಅಪ್ಪಿಕೊಳ್ಳುತ್ತವೆ.[49] ಎಂದು ಮೊಗಳ್ಳಿ ಗಣೇಶ್‌ರವರ ಅಭಿಪ್ರಾಯವನ್ನು ಮನನ ಮಾಡಿಕೊಂಡರೆ ಪ್ರಸ್ತುತಕ್ಕೆ ಯಾಕೆ ಅಂಬೇಡ್ಕರ್ ವಿಚಾರಗಳು ಮಹತ್ವದ್ದೆನಿಸುತ್ತವೆ. ಆ ವಿಚಾರಗಳ ಕಾರ್ಯತಂತ್ರವೇನು ಎಂಬ ಅರಿವು ಉಂಟಾಗುತ್ತದೆ. ಇಂದು ಶೋಷಿತರೆಲ್ಲರಿಗೂ ಆಶಾಕಿರಣ ಅಂಬೇಡ್ಕರ್ ವಿಚಾರಗಳು.

ಅಂಬೇಡ್ಕರ್ ಅವರ ರಾಜಕೀಯ ಚಿಂತನೆಯು ಬುದ್ಧ ತತ್ವವನ್ನು ಬಲವಾಗಿ ಪ್ರತಿಪಾದಿಸುತ್ತದೆ. ಬುದ್ಧನ ಜ್ಞಾನ, ನೀತಿ ಹಾಗೂ ಸ್ವಾತಂತ್ರ್ಯವನ್ನು ಎಲ್ಲರಿಗೂ ಸಾಧ್ಯವಾಗಿಸುವ ಪ್ರಜಾವ್ಯವಸ್ಥೆಯನ್ನು ಬಾಬಾ ಸಾಹೇಬರು ತಮ್ಮ ಬರಹಗಳ ಉದ್ದಗಲಕ್ಕೂ ನೆನಪಿಸುತ್ತಾರೆ.[50] ಹೀಗಾಗಿ ಇಂದು ಪ್ರಜಾಪ್ರಭುತ್ವದ ಅಡಿಯಲ್ಲಿ ಬದುಕುವ ನಮ್ಮೆಲ್ಲರಿಗೂ ಅವರ ವಿಚಾರಗಳು ಮಾರ್ಗಸೂಚಿಯಾಗಬಲ್ಲವು. ಅಷ್ಟೇ ಅಲ್ಲ ಪ್ರಸ್ತುತದ ಪರಿಸ್ಥಿತಿಯ ಸಂಕೀರ್ಣತೆಯಿಂದ ಕೂಡಿದ ಸಮಸ್ಯೆಗಳಿಗೆ ಪರಿಹಾರ ಕೂಡ ಸಿಗುತ್ತದೆ. ಅವರ ಬರಹ ಮತ್ತು ಭಾಷಣಗಳಲ್ಲಿ ಒಡಮೂಡಿದ ವಿಚಾರಗಳು ಹೋರಾಟಗಾರರಿಗೆ ಘೋಷವಾಕ್ಯಗಳಾಗಿವೆ. ಬುದ್ಧನ ವಿಚಾರಗಳ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸಲು ಯತ್ನಿಸಿದ ಅಂಬೇಡ್ಕರ್ ವಿಚಾರಗಳು ಸದಾ ಕಾಲ ಮರುಖ್ಯಾನಗೊಳ್ಳುತ್ತ ಪ್ರಸ್ತುತ ದಿನಮಾನಕ್ಕೂ ಹತ್ತಿರ ಹತ್ತಿರವಾಗುತ್ತವೆ.

ಬಾಬಾ ಸಾಹೇಬರು ಕೇವಲ ಮಿಂಚು ಗುಡುಗು ಅಷ್ಟೇ ಆಗಿರಲಿಲ್ಲ. ವೈಚಾರಿಕವಾದ ಮಳೆಯಾಗಿ ಮಹಾನದಿಯಾಗಿ ಮಾನವೀಯತೆಯ ಜಲ ಮೂಲಗಳನ್ನು ದೇಶದ ಉದ್ದಗಲಕ್ಕೂ ಚಾಚಿಕೊಂಡವರು. ಇಂತಹ ಮಹಾನದಿಯನ್ನು ಕಲುಷಿತಗೊಳಿಸಲು ಬಲ ಪಂಥೀಯರು ಸದಾ ಎಚ್ಚರವಾಗಿರುತ್ತಾರೆ. ಹೇಗಾದರೂ ಮಾಡಿ ಈ ನದಿಯ ಜಲದ ಕಣ್ಣನ್ನು ನಾಶಪಡಿಸಲು ಸಂಚು ರೂಪಿಸಿರುತ್ತಾರೆ. ಹಾಗಾಗಿಯೇ ಏನೋ ಇಂತಹ ಮಹಾನದಿಯ ಜೊತೆ ಪಯಣ ಮಾಡಲು ದಲಿತರು ಪುಟ್ಟ ಪುಟ್ಟ ಹಾಯಿ ದೋಣಿಗಳಲ್ಲಿ ಮಾತ್ರವೇ ಕನಸು ಕಾಣಲು ತೊಡಗಿ ಇವತ್ತು ಛಿದ್ರವಾಗಿ ಬಿಟ್ಟಿದ್ದಾರೆ. ದಲಿತ ಸಮುದಾಯಗಳು ಈ ಮಹಾ ನದಿಯ ಜೊತೆ ಪಯಣ ಮಾಡಲು ಸುಸಜ್ಜಿತವಾದ ಅತ್ಯಾಧುನಿಕವಾದ ಬೃಹತ್ ಹಡಗೊಂದರ ಆಗತ್ಯವಿದೆ. ಅಂತಹ ಮಹಾ ಹಡಗಿನಲ್ಲಿ ಹೋರಾಟದ ಪಯಣ ಮಾಡಿದರೆ ನಾವು ಸಮುದ್ರದ ಆಚೆ ದಿಗಂತವನ್ನು ತಲುಪಲು ಸಾಧ್ಯ.[51] ಮೊಗಳ್ಳಿ ಗಣೇಶ್ ರವರ ಈ ಮಾತಿನಲ್ಲಿ ಇಂದು ಬೃಹತ್ ಪ್ರಮಾಣದ ಕಾರ್ಯತಂತ್ರದೊಂದಿಗಿನ ಹೋರಾಟದಿಂದ ಮಾತ್ರ ದಲಿತರ ಬಿಡುಗಡೆ ಹಾಗೂ ಪ್ರಗತಿ ಸಾಧ್ಯವೆಂಬ ಎಚ್ಚರಿಕೆಯ ಮಾತು ಧ್ವನಿಸಿದೆ.

ಅಂಬೇಡ್ಕರ್ ವಿಚಾರಗಳ ಕುರಿತು ಚರ್ಚೆಯಲ್ಲೇ ಎಷ್ಟು ದಿನ ಕಾಲಹರಣ ಮಾಡುವುದು. ಈಗೇನಿದ್ದರೂ ಕ್ರಿಯಾತ್ಮಕವಾಗಿ ಅವರ ವಿಚಾರಗಳನ್ನು ಕಾರ್ಯರೂಪಕ್ಕೆ ತರುವುದರತ್ತ ಗಮನ ನೀಡಬೇಕಾಗಿದೆ. ಏಕೆಂದರೆ ಅಂಬೇಡ್ಕರ್‌ರವರ ವಿಚಾರಗಳಿಗಿಂತ ಅವರ ಆರಾಧನೆ-ಪೂಜೆ ಹೊಗಳಿಕೆಗೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿರುವುದು ಇವತ್ತಿನ ದುರಂತ. ಇಂದಿನ ದಲಿತ ಹೋರಾಟಗಳೆಲ್ಲವೂ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಂತೆ ತೋರುತ್ತಿವೆ. ಅಂಬೇಡ್ಕರ್‌ರವರನ್ನು ವ್ಯಾಖ್ಯಾನಿಸುತ್ತಿರುವುದು ಕೂಡ ಈ ರಾಜಿಯ ಭಾಗವಾಗಿಯೇ ತೋರುತ್ತಿದೆ. ದಲಿತ ಚಳುವಳಿ ಇಂದು ವಿಶ್ರಮಿಸಿಕೊಳ್ಳುವ ಸ್ಥಿತಿ ತಲುಪಿದೆ. ರಾಜಕೀಯ, ಸಾಮಾಜಿಕ ವಲಯದಲ್ಲಿ ನಿರಾಶೆಯ ಕಾರ್ಮೋಡವೇ ಕವಿದಿದೆ.

ಅಂಬೇಡ್ಕರ್‌ರವರು ಇಂದು ಕೆಲವರಿಗೆ ಒಂದು ನಿರ್ದಿಷ್ಟ ಜಾತಿಯ ನಾಯಕನಾಗಿ ಕಾಣಿಸಿದರೆ, ಮತ್ತೆ ಕೆಲವರಿಗೆ ಅವರು ದಲಿತರ ಆಧುನಿಕ ಬದುಕಿನ ಹೊಸ ಆಶಯಗಳ ಪ್ರತೀಕದಂತೆ ಗೋಚರಿಸುತ್ತಿದ್ದಾರೆ. ಮತ್ತೆ ಕೆಲ ಜನರಿಗೆ ಧಾರ್ಮಿಕ ಮುಖಂಡರಾಗಿ, ರಾಜಕೀಯ ನಾಯಕರಾಗಿ, ತೀವ್ರಗಾಮಿ ಕ್ರಾಂತಿಯಾಗಿ ಕಾಣುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಹಲವು ರೂಪಗಳಲ್ಲಿ ಅಂಬೇಡ್ಕರ್ ನಮ್ಮೊಳಗಿದ್ದಾರೆ. ವಿಚಿತ್ರವೆಂದರೆ ಬಹಳಷ್ಟು ದಲಿತ ಮುಖಂಡರು, ಅಂಬೇಡ್ಕರ್ ಅವರನ್ನು ತಮ್ಮ ಖಾಸಗಿ ಆಸ್ತಿ ಎಂದೇ ನಂಬಿದ್ದಾರೆ. ಕೆಲವರಿಗೆ ಅಂಬೇಡ್ಕರ್ ಹೆಸರೇ ಬದುಕಿಗೆ ಆಸರೆಯಾಗಿದೆ. ಅಂಬೇಡ್ಕರ್ ಹೆಸರಿನ ಮೂಲಕ ಧಂದೆ ನಡೆಸಬಹುದೆಂದೂ, ತಮ್ಮೆಲ್ಲ ಅಪರಾಧಗಳನ್ನು ಮುಚ್ಚಿಕೊಳ್ಳಬಹುದೆಂದು ಕೆಲವರು ಭಾವಿಸಿದ್ದಾರೆ. ಜಾತಿಯಿಂದ ದಲಿತರಲ್ಲದವರು ಅಂಬೇಡ್ಕರ್ ಕುರಿತು ಏನೇ ಮಾಡಿದರೂ ಅವರ ಉದ್ದೇಶಗಳನ್ನು ಸಂಶಯದಿಂದ ನೋಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ನಿರ್ದಿಷ್ಟ ಜಾತಿಯ ಜನರಿಗೆ ಮಾತ್ರ ಅಂಬೇಡ್ಕರ್ ಮೇಲೆ ಅಧಿಕಾರ ಇದೆ ಎಂಬುದನ್ನು ಪ್ರತಿಷ್ಠಾಪಿಸಲು ಅವರು ಹೆಣಗುತ್ತಾರೆ. ಅಂಬೇಡ್ಕರ್‌ಗೆ ಬೇಲಿ ಹಾಕಿ ತಮ್ಮ ವಶದಲ್ಲೇ ಇಟ್ಟುಕೊಳ್ಳಲು ಹವಣಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ (ಕೆಲವರನ್ನು ಹೊರತುಪಡಿಸಿ) ದಲಿತೇತರರಿಗೆ ಅಂಬೇಡ್ಕರ್ ಇಂದಿಗೂ ಅಸ್ಪಶ್ಯರೇ. ಅವರ ವಿಚಾರಗಳಂತೂ ತಮ್ಮ ಅಸ್ತಿತ್ವಕ್ಕೇ ಕೊಡಲಿಪೆಟ್ಟು ಹಾಕುತ್ತವೆ ಎಂದು ಬಲವಾಗಿ ನಂಬಿದ್ದಾರೆ. ಅಂಬೇಡ್ಕರ್ ಬರೆದ ಸಂವಿಧಾನವನ್ನು ಬಳಸಿಯೇ ಅವರು ದಲಿತರನ್ನು ಸುಡುತ್ತಿದ್ದಾರೆ. ಅವಕಾಶಗಳನ್ನು ತಿರಸ್ಕರಿಸುತ್ತಿದ್ದಾರೆ. ಪ್ರಶಸ್ತಿ, ಪ್ರತಿಮೆ, ಪಾರ್ಕುಗಳನ್ನು ಸ್ಥಾಪಿಸಿ ವಂಚಿಸುತ್ತಿದ್ದಾರೆ.[52] ಎಂಬ ಇಂದೂಧರ ಹೊನ್ನಾಪೂರವರ ಅಭಿಪ್ರಾಯಗಳು ಇಂದಿನ ಸಂದರ್ಭದ ವಸ್ತುಸ್ಥಿತಿಯನ್ನು ತೆರೆದಿಟ್ಟಂತೆ ಇದೆ.

ಈ ಕಾರಣಗಳಿಗಾಗಿ ಅಂಬೇಡ್ಕರ್‌ರವರನ್ನು ಕುರಿತು ಅಧ್ಯಯನಗಳು ಪ್ರಸ್ತುತವಾಗುತ್ತಿವೆ. ಅವರ ವಿಚಾರಗಳ ಪುನರಾವಲೋಕನ, ಅನ್ವೇಷಣೆ, ಅಧ್ಯಯನ, ಹಿಂದೆಂದಿಗಿಂತಲೂ ಇಂದು ಅಗತ್ಯವಾಗಿವೆ. ಕ್ರಾಂತಿಕಾರಿ ಅಂಬೇಡ್ಕರ್ ಮತ್ತು ಸುಧಾರಣವಾದಿ ಅಂಬೇಡ್ಕರ್ ನಡುವಿನ ಅಂತರವನ್ನು ನಾವು ಅರಿಯಬೇಕಾಗಿದೆ. ರಾಜನೀತಿಜ್ಞ ಅಂಬೇಡ್ಕರ್ ಮತ್ತು ಸಮಾಜ ಶಾಸ್ತ್ರಜ್ಞ ಅಂಬೇಡ್ಕರ್ ನಡುವಿನ ಸ್ಥಿತ್ಯಂತರಗಳನ್ನು ಅರಿತುಕೊಳ್ಳಬೇಕಾಗಿದೆ. ಹಾಗೆಯೇ ಆಧುನಿಕ ಅಂಬೇಡ್ಕರ್ ದಾರ್ಶನಿಕ ಅಂಬೇಡ್ಕರ್ ಆಗಿ ರೂಪಾಂತರಗೊಂಡ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ. ಬುದ್ಧ, ಬಸವರು ತಮ್ಮ ಹೋರಾಟಗಳೊಂದಿಗೆ ಯಾಕೆ ಅಧ್ಯಾತ್ಮವನ್ನು ಬೆಸೆದುಕೊಂಡಿದ್ದರು ಎಂಬುದರ ಬಗ್ಗೆ ಕೂಡ ನಾವು ಚಿಂತಿಸಬೇಕಾಗಿದೆ, ಆಲೋಚಿಸಬೇಕಾಗಿದೆ. ಸಾಮಾಜಿಕ ಬದುಕಿನ ಪರಿವರ್ತನೆಯ ಹರಿಕಾರರಾದ ಇವರೆಲ್ಲ ತಮ್ಮ ಹೋರಾಟಕ್ಕೆ ಅಧ್ಯಾತ್ಮದ ಚೌಕಟ್ಟನ್ನು ಯಾಕೆ ಹಾಕಿಕೊಂಡಿದ್ದರೆಂಬುದನ್ನು ನಾವು ಗಮನಿಸಬೇಕಾಗಿದೆ.

ಸೂಟು-ಬೂಟಿನ ಅಂಬೇಡ್ಕರ್ ಜೊತೆಗೆ ತಲೆ ಜೋಳಿಸಿಕೊಂಡು ಚೀವರ ತೊಟ್ಟ ಅಂಬೇಡ್ಕರ್ ಅವರನ್ನು ಬೆಸೆಯಬೇಕಾಗಿದೆ. ಆದಕ್ಕಾಗಿ ಅಂಬೇಡ್ಕರ್ ಕುರಿತಂತೆ ನಿರಂತರ ಚರ್ಚೆ, ಅಧ್ಯಯನ, ಸಂಶೋಧನೆ ಅಗತ್ಯವಾಗಿದೆ.

ಬುದ್ಧ-ಬಸವ-ಅಂಬೇಡ್ಕರ್‌ರವರು ತಮ್ಮ ಜೀವನದುದ್ದಕ್ಕೂ ಮಾಡಿದ ಪ್ರತಿಭಟನಾತ್ಮಕ ಹೋರಾಟ, ಸಿದ್ಧಾಂತಗಳು ನಮ್ಮ ಕಣ್ಣ ಮುಂದೆ ಅವು ಅರ್ಥ ಕಳೆದುಕೊಳ್ಳುವಂತೆ ಮಾಡುವ ಹುನ್ನಾರಗಳು ಪ್ರಯತ್ನಗಳು ಈ ಕಾಲಘಟ್ಟದಲ್ಲಿ ನಡೆಯುತ್ತಲಿವೆ. ಫ್ಯಾಸಿಸ್ಟ್ ಹಿಂದೂ ಮನಸ್ಸು, ದಲಿತರ ಮತ್ತು ದುರ್ಬಲ ವರ್ಗಗಳ ಮನಸ್ಸನ್ನು ಎಷ್ಟು ಭ್ರಷ್ಟಗೊಳಿಸಿವೆ ಎಂಬುದು ನಮ್ಮ ಕಣ್ಣ ಮುಂದಿದೆ. ಲಾಭಕೋರತನಕ್ಕೆ ಇಡೀ ಜಗತ್ತೇ ಮುಖ ಮಾಡಿ ನಿಂತಿರುವಾಗ ದಲಿತರೇಕೆ ಬೇರೆಯಾಗಿ ಆಲೋಚಿಸಬೇಕು ಅನ್ನುವವರೂ ಇದ್ದಾರೆ. ಆದರೆ ಈ ಲಾಭಕೋರರ ಸ್ಪರ್ಧೆಯಲ್ಲಿ ದಲಿತರು ಎಷ್ಟು ದೂರ ಸ್ಪರ್ಧಿಸಬಹುದೆಂಬ ಸತ್ಯ ಅವರಿಗೆ ಗೋಚರಿಸುತ್ತಿಲ್ಲ. ಉರಿಯುವ ದೀಪಕ್ಕೆ ಅರ್ಪಣೆ ಮಾಡಿಕೊಳ್ಳುವ ಪತಂಗದ ಸ್ಥಿತಿ ಇಂದು ದಲಿತರದ್ದಾಗಿದೆ ಎಂದು ಇಂದೂಧರ ಹೊನ್ನಾಪೂರ ಅಭಿಪ್ರಾಯ ಪಡುತ್ತಾರೆ.

ಅಂಬೇಡ್ಕರ್ ಕೇವಲ ವ್ಯಕ್ತಿಯಲ್ಲ. ವಿದ್ವಾಂಸರಲ್ಲ. ಬರೀ ಸಂವಿಧಾನ ಕತೃವೂ ಅಲ್ಲ. ಅವರು ನಮ್ಮ ಕಾಲಮಾನದ ಆದಮ್ಯ ಚೇತನ. ಹೋರಾಟಗಾರ, ಕ್ರಾಂತಿಕಾರಿ, ರಾಜನೀತಿಜ್ಞ, ಸಮಾಜ ಶಾಸ್ತ್ರಜ್ಞ, ಧಾರ್ಮಿಕ ಮುಖಂಡ, ದಾರ್ಶನಿಕ...... ಹೀಗೆ ಅಂಬೇಡ್ಕರ್ ರವರನ್ನು ವಿವಿಧ ಕೋನಗಳಿಂದ ಅರ್ಥೈಸಬಹುದಾಗಿದೆ. ಅಷ್ಟು ವಿಶಾಲ ಅವರ ಬದುಕು. ಬುದ್ಧ-ಬಸವರ ನಂತರ ಅಂಬೇಡ್ಕರ್ ಹೋರಾಟದ ದೀವಿಗೆಯನ್ನು ಪ್ರಜ್ವಲಿಸುವಂತೆ ಮಾಡಿದರು. ಈ ಕಾರಣಗಳಿಗಾಗಿ ಅವರ ವಿಚಾರ ದೀಪ ಸದಾ ಪ್ರಜ್ವಲಿಸಬೇಕಾದರೆ ಅಧ್ಯಯನ, ಅನ್ವೇಷಣೆ, ವಿಚಾರ ಮಂಥನ, ಸದಾ ಪ್ರಸ್ತುತ ಹಾಗೂ ಕಾರ್ಯರೂಪಕ್ಕಿಳಿಸುವುದು ಎಲ್ಲಕ್ಕೂ ತುರ್ತಿನ ಅಗತ್ಯವಾಗಿದೆ. ಯಾವ ಸಮಸ್ಯೆಗಳ ನಿವಾರಣೆಗೆ ಇವರು ಪ್ರಯತ್ನಿಸಿದ್ದರೋ ಅವು ಇನ್ನು ಉಳಿದುಕೊಂಡಿರುವುದರಿಂದ ಅವುಗಳನ್ನು ತೊಡೆದು ಹಾಕಲು ಇವರ ವಿಚಾರಗಳು ಸದಾ ಅನ್ವಯ ಯೋಗ್ಯವಾಗಿವೆ.

ಅಂಬೇಡ್ಕರ್ ಎಲ್ಲರಿಗೂ ಬೇಕು, ಅವರ ಸಿದ್ಧಾಂತ ಯಾರಿಗೂ ಬೇಡ, ಬುದ್ಧ ಎಲ್ಲರಿಗೂ ಬೇಕು, ಅವರ ಸತ್ಯ ನುಡಿಯ ತತ್ವ ಯಾರಿಗೂ ಬೇಡವಾಗಿದೆ. ಬಸವ ಬೇಕು, ಅವರ ಸಮಾನತೆಯ ವಿಚಾರಗಳು ಯಾರಿಗೂ ಬೇಡವಾಗಿದೆ. ಇಂದು ದ್ವಂದದಲ್ಲಿ ಬದುಕುವ ನಮಗೆ ಅವರ ತತ್ವ - ಸಿದ್ಧಾಂತ, ವಿಚಾರಗಳು ಅನುಷ್ಠಾನ ಯೋಗ್ಯವಾಗಿವೆ ಎಂಬ ಅರಿವು ಮೂಡಬೇಕಾಗಿದೆ. ಅಂಬೇಡ್ಕರ್‌ರ ಒಂದು ಹಂತದ ಚಿಂತನೆ-ಸಂಘಟನೆ-ಹೋರಾಟಗಳು ನಮ್ಮ ಸಂದರ್ಭಕ್ಕೆ ಪ್ರಸ್ತುತವಾಗಬಲ್ಲವು. ಕೃಷಿ ಕೂಲಿಗಳನ್ನು, ಸಣ್ಣ ರೈತರನ್ನು, ಕಾರ್ಮಿಕರನ್ನು, ಅಸ್ಪೃಶ್ಯರನ್ನು, ಮಹಿಳೆಯರನ್ನು ಸಂಘಟಿಸಿ ಕೋಟ್ ಮತ್ತು ಮಹರ್‌ವತನ್‌ಗಳ ರದ್ದತಿಗಾಗಿ ಹೋರಾಟ ಮಾಡಿದ ಮಹದ್, ನಾಸಿಕ್ ಸತ್ಯಾಗ್ರಹಗಳನ್ನು ನಡೆಸಿದ, ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲಿರಬೇಕೆಂದು ಪ್ರತಿಪಾದಿಸಿದ ಅಂಬೇಡ್ಕರ್ ನಮಗೆ ಹೆಚ್ಚು ಪ್ರಸ್ತುತರಾಗುತ್ತಾರೆ. ಸಮಾಜವಾದ, ಸಮಾನತೆಗಳನ್ನು ಪ್ರತಿಪಾದಿಸಿ, ಬಡತನ-ಶೋಷಣೆಗಳ ವಿರುದ್ಧ ನಿರಂತರ ಹೋರಾಟ ಅನಿವಾರ್ಯವೆಂದ ಅಂಬೇಡ್ಕರ್ ನಮಗೆ ಪ್ರಸ್ತುತರು.[53]

ಅಂಬೇಡ್ಕರ್, ಬೌದ್ಧಧರ್ಮ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗುತ್ತದೆಂದು ಹೇಳುತ್ತಿದ್ದರೂ, ಸಂಸದೀಯ ಪ್ರಜಾಸತ್ತೆಯ ಬಗ್ಗೆ ಇದ್ದ ಹಾಗೆಯೇ ಬೌದ್ಧಧರ್ಮ ಯಶಸ್ವಿಯಾಗುವ ಬಗ್ಗೆ ಕೂಡ ಅವರಲ್ಲಿ ಬಲವಾದ ಅನುಮಾನಗಳಿದ್ದವು. ಪ್ರಜಾಸತ್ತೆ ಯಶಸ್ವಿಯಾಗದಿದ್ದರೆ ಒಂದು ರೀತಿಯ ಕಮ್ಯುನಿಸಂ ಪರ್ಯಾಯವಾಗುತ್ತದೆ. ಹಾಗೆಯೇ ಮಾನವ ಸಮಾಜ ಮುಂದಿನ ಪೀಳಿಗೆಯ ಸಮಯಕ್ಕಾದರೂ ಬುದ್ಧನನ್ನಾಗಲೀ ಮಾರ್ಕ್ಸ್‌ನನ್ನಾಗಲೀ ಒಪ್ಪುವುದು ಅನಿವಾರ್ಯವೆಂದು ಹೇಳುತ್ತಿದ್ದರು.[64] (Kuber W.N. Dr. Ambedkar A critical study (New Delhi 1979 Page 218-219) ಈ ಮಾತುಗಳನ್ನು ಹೇಳಿ ಸುಮಾರು ನಾಲ್ಕು ದಶಕಗಳೇ ಸಂದಿವೆ. ಭಾರತೀಯ ಚರಿತ್ರೆ ಅಷ್ಟು ಹಾದಿ ಸವೆಸಿದೆ. ಅವರು ಜಾತಿ ವಿನಾಶ ಸಮಾಜವಾದಿ ಕ್ರಾಂತಿ ಬೌದ್ಧಧರ್ಮ ಮಾರ್ಕ್ಸ್‌ವಾದಗಳ ಬಗ್ಗೆ ಮಾತನಾಡುತ್ತಿದ್ದ ಚಾರಿತ್ರಿಕ ಘಟ್ಟದಲ್ಲಿ ಬಂಡವಾಳವದಿ, ನವ ಸಾಮ್ರಾಜ್ಯವಾದಿ ಶೋಷಣೆ ತೀವ್ರವಾಗಿರಲಿಲ್ಲ. ಶೋಷಿತರೆಲ್ಲಾ ಒಗ್ಗಟ್ಟಾಗಬೇಕೆಂಬ ಅರಿವು ಮೂಡಲು ಪ್ರಾರಂಭವಾಗಿತ್ತು. ಜಾತ್ಯಾಂಧತೆ ಅಸ್ಪೃಶ್ಯತೆ ತಾಂಡವವಾಡುತ್ತಿದ್ದವು.

ಅಂದು ತಾಂಡವವಾಡುತ್ತಿದ್ದ ಅಸ್ಪೃಶ್ಯತೆ ಪೂರ್ತಿ ಮಾಯವಾಗಿಲ್ಲ ನಿಜ. ಆದರೆ ಅದರ ತೀಕ್ಷ್ಣತೆ ಕೊಂಚವಾದರೂ ಕಡಿಮೆಯಾಗಿದೆ ಎನ್ನುವುದು ಒಪ್ಪಬೇಕಾದ ಮಾತು. ದಲಿತ ಶೋಷಿತರಲ್ಲಿ ಮೂಡುತ್ತಿರುವ ಎಚ್ಚರದಿಂದಾಗಿ ಅಂದು ನಮಗೆ ಸಂಘಟಿತ ರೂಪದಲ್ಲಿ ಕಾಣದಿದ್ದ ದಲಿತ, ಶೋಷಿತ, ಶೋಷಕರ ನಡುವಿನ ಹೋರಾಟಗಳು ಹೆಚ್ಚುತ್ತಿವೆ.

ಇಂಥ ಹೋರಾಟಗಳಿಗೆ ಬರಿ ಜಾತಿ ಬಣ್ಣ ಹಚ್ಚುವ ಪಿತೂರಿಕಾರರೂ ಹೇರಳವಾಗಿದ್ದಾರೆ. ಜಾತಿ ಗಲಭೆಯೆಂದು ಬಣ್ಣಿಸಲಾಗುವ ಯಾವುದೇ ಕರ್ಮಕಾಂಡದ ಹಿನ್ನೆಲೆಯನ್ನು ಆಳವಾಗಿ ಕೆದಕಿ ನೋಡಿದಾಗ ಅಲ್ಲಿ ಕಾಣುವುದು ಶ್ರೀಮಂತ ಜಾತಿವಾದಿಗಳು ಪಟ್ಟಭದ್ರರು ತಮ್ಮ ಹಿತರಕ್ಷಣೆಗಾಗಿ ನಡೆಸಿರುವ ಮಸಲತ್ತು (Bepin Chandra, Communalism in Modern India (New Delhi-1984) ಶೋಷಿತರೆಲ್ಲಾ ಒಗ್ಗೂಡಿ ಸಂಘಟಿತರಾಗುವವರೆಗೂ ಇವು ನಡೆಯುವಂಥವೇ. ಆದ್ದರಿಂದಲೇ ಶೋಷಣಾರಹಿತ ಸಮಾಜ ನಿರ್ಮಾಣದ ಬಗ್ಗೆ ಅಂಬೇಡ್ಕರ್ ಹೇಳಿದ ಮಾತು ಮತ್ತು ಹಾಕಿ ಕೊಟ್ಟ ಹಾದಿಗಳನ್ನು ನೆನೆಯುವುದು ಸೂಕ್ತವೆನಿಸುತ್ತದೆ.

ಶ್ರೀಮಂತರ ಸಿರಿತನ ದರಿದ್ರರ ಬಡತನದಿಂದಾಗಿದೆ. ಇದನ್ನು ನಿವಾರಿಸಬೇಕೆಂದರೆ ದುಡಿಯುವವರೆಲ್ಲಾ ಜಾತಿ ಮತಗಳನ್ನು ಧಿಕ್ಕರಿಸಿ ಸಂಘಟಿತರಾಗಬೇಕು. ಈ ಸಂಘಟನೆಯಿಂದ ಬಡವರನ್ನು ಪ್ರತಿನಿಧಿಸುವವರು ನಾಯಕರಾಗಿ ಬರಲು ಸಾಧ್ಯ. ಹಾಗಾದಾಗ ಎಲ್ಲರ ಅವಶ್ಯಕತೆಗಳನ್ನು ಪೂರೈಸಬಹುದು.[66] ಸಂಪತ್ತನ್ನು ಉತ್ಪಾದಿಸುವವರು ಹಸಿವೆಯಿಂದ ಸಾಯಬೇಕಾಗುವುದಿಲ್ಲ. (Keera Dhanjay – Ambedkar Life and mission – Page 300-301 1981)

ಅಂಬೇಡ್ಕರ್ ಅವರ ಜಾತಿ ವಿನಾಶದ ಬಗೆಗಿನ ಚಿಂತನೆ, ಸಂಘಟನೆ, ಹೋರಾಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳು ಆ ನಿಟ್ಟಿನಲ್ಲಿ ಹೇಗೆ ಪ್ರಸ್ತುತ ಮತ್ತು ಸಹಾಯಕ ಎನ್ನುವುದು ಬಹುಮಹತ್ವದ್ದು. ಜಾತಿವಿನಾಶದ ಬಗ್ಗೆ ಬರೆಯುತ್ತ ಅಂಬೇಡ್ಕರ್ ಯಾವುದೂ ಎಲ್ಲ ಕಾಲಕ್ಕೂ ಸಲ್ಲುವುದಿಲ್ಲ. ಯಾವುದೂ ಸನಾತನವಲ್ಲ. ಎಲ್ಲವೂ ಬದಲಾಗುತ್ತಿದೆ. ಬದಲಾವಣೆ ವ್ಯಕ್ತಿಗಳ ಮತ್ತು ಸಮಾಜ ಜೀವನದ ನಿಯಮ. (Ambedkar, B.R. Annihilation of Caste 1978 Page 105) ಈ ನಿಯಮಕ್ಕೆ

ಅಂಬೇಡ್ಕರ್‌ರೂ ಸೇರಿದಂತೆ ಯಾರೂ ಹೊರತಾಗಲಿಲ್ಲ. ಹೊರತಾಗಲು ಸಾಧ್ಯವೂ ಇಲ್ಲ. ಹೋರಾಟದ ಅನುಭವ ಹರಳುಗಟ್ಟಿದಂತೆ ಅವರೂ ಬದಲಾಗುತ್ತಾ, ಹೊಸದಿಕ್ಕುಗಳತ್ತ ಮುನ್ನಡೆದರು. ಅವರ ಹೋರಾಟದ ದಾರಿ, ಕಾರ್ಯ ಚಟುವಟಿಕೆಗಳು ಇಂದಿನವರ ಹೋರಾಟಗಳಿಗೆ ಸ್ಫೂರ್ತಿಯಾಗಬಲ್ಲವು.

ಅಂಬೇಡ್ಕರ್ ಚಿಂತನೆಯ ಪ್ರಸ್ತುತತೆ :

ಇಪ್ಪತ್ತನೆಯ ಶತಮಾನದ ಭಾರತದ ಯುಗಪುರುಷ ಯಾರು ಎಂದು ಯಾರಾದರೂ ಕೇಳಿದರೆ, ಯಾವುದೇ ಶಂಕೆ ಅನುಮಾನಗಳಿಲ್ಲದೆ ಒಂದು ಕಾಲಕ್ಕೆ ಜನರು ಒಕ್ಕೊರಲಿನಿಂದ ಗಾಂಧೀಜಿ ಎಂದು ಹೇಳುತ್ತಿದ್ದರು. ಆದರೆ ಇಂದು ಅಂತಹುದೇ ಪ್ರಶ್ನೆ ಕೇಳಿದರೆ ಉತ್ತರ ಸುಲಭವಲ್ಲ. ಭಾರತದ ವೈಚಾರಿಕ ಹಾಗೂ ರಾಜಕೀಯ ಪ್ರಣಾಳಿಕೆಯನ್ನು ಇಂದು ಪ್ರಬಲವಾಗಿ ಪ್ರಭಾವಿಸುತ್ತಿರುವುದು ಅಂಬೇಡ್ಕರ್ ಚಿಂತನೆಯ ವಿನಾಃ ಗಾಂಧೀಜಿ ಚಿಂತನೆಯಲ್ಲ. ಇಪ್ಪತ್ತನೆಯ ಶತಮಾನದ ಮೊದಲ 7-8 ದಶಕಗಳ ಕಾಲ ಸಮಾಜವು ಗಾಂಧೀಜಿಯವರನ್ನು ಹಾಗೂ ಅವರ ವಿಚಾರಗಳನ್ನು ಅಗ್ರ ಸ್ಥಾನದಲ್ಲಿ ಇಟ್ಟುಕೊಂಡಿತ್ತು. ಆದರೆ ಇಂದು ಅಂಬೇಡ್ಕರ್ ಚಿಂತನೆಯು ಗಾಂಧೀಜಿ ಚಿಂತನೆಯನ್ನು ಪಲ್ಲಟಗೊಳಿಸಿದಂತೆ ಕಾಣುತ್ತದೆ. ಗಾಂಧೀಜಿ ಅಂಬೇಡ್ಕರ್ ವಿಚಾರಗಳ ಮರು ಮೌಲ್ಯಮಾಪನ ಇಂದು ನಡೆಯುತ್ತಿದೆ. ಈ ಬಗೆಯ ಮರುಮೌಲ್ಯಮಾಪನದಲ್ಲಿ ಅಂಬೇಡ್ಕರ್ ಮುಂಚೂಣಿಗೆ ಬರುತ್ತಿದ್ದಾರೆ. ಅಂಬೇಡ್ಕರ್‌ರವರನ್ನು ಯುಗಪುರುಷರೆಂದು ಇಂದು ಸಮಾಜವು ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದೆ. ಅಂಬೇಡ್ಕರ್ ಚಿಂತನೆಯ ಪ್ರಸ್ತುತತೆಗೆ ಇದಕ್ಕಿಂತ ಹೆಚ್ಚು ಗಟ್ಟಿಯಾದ ರುಜುವಾತು ಬೇಕಾಗಿಲ್ಲ. ಇಂದು ನಮ್ಮ ಸಮಾಜದಲ್ಲಿ ಯಾವ ರಾಜಕೀಯ ಪಕ್ಷಗಳೂ ಬೇಕಾಗಿಲ್ಲ. ಇಂದು ನಮ್ಮ ಸಮಾಜದಲ್ಲಿ ಯಾವ ರಾಜಕೀಯ ಪಕ್ಷಗಳೂ ಅಂಬೇಡ್ಕರ್ ಅವರನ್ನು ನಿರ್ಲಕ್ಷಿಸುವ ಸ್ಥಿತಿಯಲ್ಲಿ ಇಲ್ಲ. ಬಲ ಪಂಥೀಯ ಪಕ್ಷಗಳೂ ಇಂದು ಅಂಬೇಡ್ಕರ್‌ರವರನ್ನು ಒಪ್ಪಿಕೊಳ್ಳುವ ಅನಿವಾರ್ಯತೆಯನ್ನು ಎದುರಿಸುತ್ತಿವೆ. ಅಂಬೇಡ್ಕರ್‌ವಾದಿಗಳ ನೆರವಿಲ್ಲದೆ ರಾಜ್ಯಗಳಲ್ಲಿ ಸರ್ಕಾರ ರಚಿಸುವುದು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಅಂಬೇಡ್ಕರ್ ಚಿಂತನೆ ಹಾಗೂ ಅಂಬೇಡ್ಕರ್‌ವಾದ ಇಂದು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ರೂಪುಗೊಂಡಿದೆ. ಅಂಬೇಡ್ಕರ್ ಕಾಲವಶವಾದ 50 ವರ್ಷಗಳ ನಂತರ ಅವರ ವಿಚಾರಗಳನ್ನು ಕುರಿತಂತೆ ಸಮಾಜವು ಮರು ಚಿಂತಿಸಲು ತೊಡಗಿದೆ. ಪ್ರಭುತ್ವದಲ್ಲಿ ಪಾಲು ಕೇಳುವ ಕಾಲ ಮುಗಿದು ಹೋಯಿತು. ಇಂದು ಅಂಬೇಡ್ಕರ್ ವಾದಿಗಳು ಪ್ರಭುತ್ವದ ಸೂತ್ರಧಾರಿಗಳಾಗಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಅಂಬೇಡ್ಕರ್ ವಿಚಾರಗಳು ಇಂದು ಚರ್ಚೆಗೆ ಒಳಗಾಗಿವೆ.[56] -ಹೀಗಾಗಿ ಅಂಬೇಡ್ಕರ್ ವಿಚಾರಗಳು ಇಂದು ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತಿವೆ ಎಂಬುದನ್ನು ಮನಗಾಣಬಹುದಾಗಿದೆ. ಇಂದು ದಲಿತರು ತಮ್ಮ ಹಕ್ಕುಗಳಿಗಾಗಿ ತಾವೇ ಹೋರಾಟ ಮಾಡುತ್ತಿದ್ದಾರೆ. ಇದು ಅಂಬೇಡ್ಕರ್‌ರವರ ದೊಡ್ಡ ಕೊಡುಗೆ. ದಲಿತರಲ್ಲಿ ಜಾಗೃತಿ ಅರಿವು ಮೂಡಿರುವುದು ಅಂಬೇಡ್ಕರ್‌ರವರಿಂದಲೇ.

ದಲಿತರು ಇಂದು ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮೌನವಾಗಿ ಸಹಿಸಿಕೊಳ್ಳುತ್ತಿಲ್ಲ. ಜಾತಿ ಸಂಬಂಧಿ ದೌರ್ಜನ್ಯವನ್ನು ಅವರು ಪ್ರತಿಭಟಿಸುತ್ತಿದ್ದಾರೆ. ಅವರು ಇಂದು ಅಸಹಾಯಕರಲ್ಲ. ಅವರಿಗೆ ಸಂವಿಧಾನಬದ್ಧವಾದ ರಕ್ಷಣೆ ಇದೆ.[57] ಮತ್ತೊಂದೆಡೆ ಅವರು ಸಂಘಟನೆಗಳ ಮೂಲಕ ಪ್ರಜ್ಞಾಪೂರ್ವಕವಾಗಿ ದೌರ್ಜನ್ಯಗಳನ್ನು ಪ್ರತಿಭಟಿಸುತ್ತಿದ್ದಾರೆ. ಈ ಬೆಳವಣಿಗೆಗೆ ಪ್ರೇರಣೆ ಎಂದರೆ ಅಂಬೇಡ್ಕರ್ ಹಾಗೂ ಅವರ ಹೋರಾಟದ ಸ್ಫೂರ್ತಿ. ತಮ್ಮ ಹಕ್ಕು ಅಧಿಕಾರಗಳಿಗೆ ದಲಿತರಿಗೆ ಹೋರಾಟ ನಡೆಸಲು ಸಾಧ್ಯವಾಗಿದ್ದು

ಸಂವಿಧಾನದ ರಕ್ಷಣೆ ದೊರೆತದ್ದು, ಮೀಸಲಾತಿ ಲಭ್ಯವಾದದ್ದು ಅಂಬೇಡ್ಕರ್‌ರವರಿಂದ ಸ್ವಾತಂತ್ರ್ಯಾನಂತರ ದಲಿತರಲ್ಲಿ ಉಂಟಾದ ಜಾಗೃತಿ, ಸಾಕ್ಷರತೆ, ಸಂಘಟನೆ, ಶಿಕ್ಷಣಗಳಿಂದಾಗಿ ಪ್ರತಿಭಟನಾತ್ಮಕ ಹೋರಾಟದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ಮೇಲಾಗುವ ಶೋಷಣೆ ದೌರ್ಜನ್ಯಗಳನ್ನು ಸಂಘಟನೆಯ ಮೂಲಕ ಎದುರಿಸುತ್ತಿದ್ದಾರೆ. ಸಾಹಿತ್ಯ ಮತ್ತು ವೈಚಾರಿಕ ನೆಲೆಯ ಮೂಲಕವೂ ಪ್ರತಿಭಟಿಸುತ್ತಿದ್ದಾರೆ. ದಲಿತ ಮಹಿಳೆಯರ ಮೇಲಾಗುವ ಲೈಂಗಿಕ ಶೋಷಣೆಯನ್ನು, ಗ್ರಾಮಗಳಲ್ಲಿ ದಲಿತರ ಮೇಲಾಗುವ ಹಲ್ಲೆ, ದೌರ್ಜನ್ಯಗಳನ್ನು ಎದುರಿಸಿ ಪ್ರತಿಭಟಿಸುವ ಶಕ್ತಿಜಾಗೃತಿ ಬಂದಿದ್ದು ಅಂಬೇಡ್ಕರ್‌ರವರಿಂದ ಅವರ ವೈಚಾರಿಕ ಹೋರಾಟದ ಬಲದಿಂದ. ಹೀಗಾಗಿ ಎಲ್ಲಿಯವರೆಗೆ ಶೋಷಣೆ ದೌರ್ಜನ್ಯಗಳು, ಅಸಮಾನತೆಗಳಿರುತ್ತವೆಯೋ ಅಲ್ಲಿಯವರೆಗೂ ಅಂಬೇಡ್ಕರ್‌ರವರು ಪ್ರಸ್ತುತವಾಗುತ್ತಲೇ ಇರುತ್ತಾರೆ. ಅವರ ಚಿಂತನೆ ಜಾಗೃತಿಯ ಸ್ಫೂರ್ತಿಯಾಗಿ ಹೋರಾಟದ ಶಕ್ತಿಯಾಗಿ ಸದಾ ಪ್ರಜ್ವಲಿಸುತ್ತಿರುತ್ತದೆ.

ಅಂಬೇಡ್ಕರ್ : ಚಿಂತನೆಯಿಂದ ಪ್ರತಿಮೆಯ ಕಡೆಗೆ

ಡಾ।ಬಿ.ಎಂ.ಪುಟ್ಟಯ್ಯನವರು ಸಂವಾದ ಏಪ್ರಿಲ್ 2006ರ ಸಂಚಿಕೆಯಲ್ಲಿ ಅಂಬೇಡ್ಕರ್: ಸ್ಫೂರ್ತಿಯಿಂದ ಪೂಜೆಯಕಡೆಗೆ ಎಂಬ ಲೇಖನದಲ್ಲಿ ಪ್ರಸ್ತುತ ಅಂಬೇಡ್ಕರ್ ಏನಾಗಿದ್ದಾರೆ? ಎಲ್ಲೆಲ್ಲಿ ಅಂಬೇಡ್ಕರ್? ಎಂಬುದನ್ನು ಮಾರ್ಮಿಕವಾಗಿ ತೆರೆದಿಟ್ಟಿದ್ದಾರೆ. ಈ ಅಂಬೇಡ್ಕರ್ ಎಲ್ಲೆಂದರೆ ಅಲ್ಲಿ ಬೇರೆ ಬೇರೆ ರೂಪಗಳಲ್ಲಿ, ವಿಭಿನ್ನ ಸಾಂಕೇತಿಕ ರೂಪಗಳಲ್ಲಿ ಕಾಣ ಸಿಗುತ್ತಾರೆ. ಅಂಬೇಡ್ಕರ್ ರಸ್ತೆ, ಅಂಬೇಡ್ಕರ್ ಸರ್ಕಲ್, ಅಂಬೇಡ್ಕರ್ ಭವನ, ಅಂಬೇಡ್ಕರ್ ಕಾಲೋನಿ, ಅಂಬೇಡ್ಕರ್ ನಗರ, ಅಂಬೇಡ್ಕರ್ ಯುವಕ ಸಂಘ, ಅಂಬೇಡ್ಕರ್ ಯುವತಿ ಮಂಡಳಿ, ಅಂಬೇಡ್ಕರ್ ಹೈಸ್ಕೂಲ್, ಅಂಬೇಡ್ಕರ್ ಕಾಲೇಜು, ಅಂಬೇಡ್ಕರ್ ಹಾಸ್ಟೇಲು, ಅಂಬೇಡ್ಕರ್ ವಿಶ್ವ ವಿದ್ಯಾಲಯ, ಅಂಬೇಡ್ಕರ್ ಸಂಶೋಧನ ಕೇಂದ್ರಗಳು, ಅಂಬೇಡ್ಕರ್ ಫೆಲೋಶಿಪ್‌ಗಳು, ಅಂಬೇಡ್ಕರ್ ಪ್ರಶಸ್ತಿಗಳು, ಅಂಬೇಡ್ಕರ್ ಸಾಹಿತ್ಯ, ಅಂಬೇಡ್ಕರ್ ಸ್ಪೆಷಲಿಸ್ಟ್ ಹೀಗೆ ಈ ಪಟ್ಟಿ ಬೆಳೆಯುತ್ತ ಹೋಗುತ್ತವೆ. ಹೀಗೆ ಅಂಬೇಡ್ಕರ್‌ರನ್ನು ಭೌತಿಕವಾಗಿ ಅಷ್ಟೇ ವ್ಯಾಪಕವಾಗಿ ಸಾಂಕೇತಿಕಗೊಳಿಸಲಾಗಿದೆ. ಇದರಲ್ಲಿ ಒಂದು ಕಡೆ ದಲಿತರ ಸ್ವಾಭಿಮಾನ ಹಾಗೂ ಅನನ್ಯತೆಯ ಆಯಾಮವಿದೆ. ಮತ್ತೊಂದು ಕಡೆ ಆಳುವ ವರ್ಗದ ಪಿತೂರಿ ಹಾಗೂ ಕುತಂತ್ರವಿದೆ .

ಒಂದು ಕಡೆ ಅಂಬೇಡ್ಕರ್ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತದೆ. ಮತ್ತೊಂದು ಕಡೆ ಆ ಪ್ರತಿಮೆಗಳಿಗೆ ಅವಮಾನ ಮಾಡಲಾಗುತ್ತದೆ. ಅಂಬೇಡ್ಕರ್ ಪ್ರತಿಮೆಸ್ಥಾಪಿಸಿ ಎಂದು ಹೋರಾಟ ಮಾಡುವವರೂ ದಲಿತರೆ, ಅದಕ್ಕೆ ಅಪಮಾನ ಮಾಡಿದ ಮೇಲೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿ ಎಂದು ಕೇಳುವವರೂ ದಲಿತರೇ. ಕಳೆದ 35 ವರ್ಷಗಳ ಅವಧಿಯಲ್ಲಿ ದಲಿತರು ಈ ವಿಷಯಗಳಿಗಾಗಿ ಮಾಡಿರುವ ಹೋರಾಟ, ಹೂಡಿರುವ ಶ್ರಮ, ಹಾಕಿರುವ ಪ್ರಯತ್ನ ಬಹಳ ದೊಡ್ಡದು. ಈಗಲೂ ಅಂಬೇಡ್ಕರ್ ಅವರನ್ನು ಸಾಂಕೇತಿಕವಾಗಿ ರಕ್ಷಿಸುವ ಅಥವಾ ಕಾಯುವ ಕಾಯಕದಲ್ಲಿ ದಲಿತರು ತೊಡಗಿದ್ದಾರೆ. ಶೋಷಕ ವ್ಯವಸ್ಥೆ ಅಂಬೇಡ್ಕರ್‌ರನ್ನು ಸಾಂಕೇತಿಕವಾಗಿ ಕಾಯುವ ಕೆಲಸವನ್ನು ದಲಿತರಿಗೆ ವಹಿಸಿ ಕೊಟ್ಟಿದೆ.[58] ಯಾವ ಮೂರ್ತಿ ಪೂಜೆಯನ್ನು ಪ್ರತಿಮೆಗಳನ್ನು ಅಂಬೇಡ್ಕರ್ ವಿರೋಧಿಸುತ್ತ ಬಂದಿದ್ದರೂ ಅವರನ್ನೇ ಪ್ರತಿಮೆ ಮಾಡಿ ಪೂಜಿಸುವ ಹಂತಕ್ಕೆ ನಾವಿಂದು ಬಂದಿದ್ದೇವೆ. ಪ್ರತಿಮೆಗಳಿಗೆ ಶೋಷಕರು ಅಪಮಾನ ಮಾಡಿದಲ್ಲಿ ಉಂಟಾಗುವ ಅಶಾಂತಿ, ಸಮಾಜದಲ್ಲಿ ಆದರಿಂದಾಗುವ ಅಮಾಯಕರ ಮೇಲಾಗುವ ದೌರ್ಜನ್ಯಗಳು, ಸೇಡಿನ ರೂಪತಾಳಿ ದಾಳಿ-

ಪ್ರತಿದಾಳಿಗಳು ನಡೆದು ಹಿಂಸೆ ತಾಂಡವವಾಡುತ್ತಿರುವುದು ಸದಾ ಕಂಡು ಬರುವ ಸಂಗತಿಯಾಗಿದೆ. ವಿಚಾರಗಳನ್ನು ಅಳವಡಿಸಿಕೊಳ್ಳದೇ. ಅವುಗಳನ್ನು ಅರಿತು ಬಾಳದೇ ಬರೀ ಪ್ರತಿಮೆಗಳನ್ನು ಪೂಜಿಸಿದರೆ, ಅವಮಾನ ಮಾಡಿದರೆ ಬರುವ ಭಾಗ್ಯವಾದರೂ ಏನು ಎಂಬ ಗೊಂದಲ ಮೂಡುವುದು ಸಹಜ.

ಮತ್ತೊಂದು ಕಡೆ ಕೆಲ ದಲಿತನಾಯಕರು, ಚಿಂತಕರು ಅಂಬೇಡ್ಕರ್‌ರವರ ವ್ಯಕ್ತಿತ್ವವನ್ನು ಗುಣಗಾನ ಮಾಡಿ ವೈಭವೀಕರಿಸಿ "ಆಧುನಿಕಮನು" ಎಂಬ ಹೊಗಳಿಕೆ ವಿಪರ್ಯಾಸವೆನಿಸುತ್ತದೆ. ಏಕೆಂದರೆ ಯಾವ ಮನುಸ್ಮೃತಿಯನ್ನು ಸುಟ್ಟು ಅದನ್ನು ಕಿತ್ತೆಸೆಯಲು ಅದರಿಂದಾದ ಶೋಷಣೆಗಳನ್ನು ಕಿತ್ತೆಸೆಯಲು ಅಂಬೇಡ್ಕರ್ ರವರನ್ನು ಆಧುನಿಕಮನು ಎಂದು ವ್ಯಾಖ್ಯಾನಿಸುವುದು ಅಭಾಸವೆನಿಸುತ್ತದೆ. ಇದು ಕೂಡಾ ಶೋಷಕರ ಪಿತೂರಿ ಎಂದು ಅನ್ನಿಸುವುದಿಲ್ಲವೇ? ದಲಿತರ ಮನೆಗಳಲ್ಲಿ ಅಂಬೇಡ್ಕರ್ ಫೋಟೊಗಳಿವೆ. ಪ್ರತಿಮೆಗಳಿವೆ. ಅವು ದಲಿತ ಸಮೂಹಕ್ಕೆ ಅಂಬೇಡ್ಕರ್ ಬಗೆಗೆ ಇರುವ ಸ್ವಾಭಿಮಾನದ ಅಭಿಮಾನದ ಸಂಕೇತಗಳಾಗಿವೆ. ಆದರೆ ಶೋಷಣೆ ಮಾಡುವ ಕೆಲವರು ಫೋಟೊಗಳಿಗೆ-ಪ್ರತಿಮೆಗಳಿಗೆ ಅಪಮಾನ ಮಾಡುವ ಅನೇಕ ಪ್ರಕರಣಗಳು ನಾಡಿನಲ್ಲಿ ಜರುಗಿವೆ. ವಿಕೃತ ಮನಸ್ಸಿನ ಶೋಷಕರಿಗೆ ಶಿಕ್ಷೆಯಾದ ಬಗ್ಗೆ ರಾಷ್ಟ್ರನಾಯಕರಿಗೆ ಅಪಮಾನವಾಗದಂತೆ ಕ್ರಮ ಕೈಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ್ದು ಹಾಗೂ ಸರ್ವರೂ ಆ ನಿಟ್ಟಿನಲ್ಲಿ ಆಲೋಚಿಸುವಂತಾದರೆ ಒಳಿತು.

ಇದಲ್ಲದೆ ಬೇರೆ ಬೇರೆ ಕಾರಣಗಳಿಗಾಗಿ ದಲಿತರ ಮೇಲಿನ ಸಿಟ್ಟಿನಿಂದ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಲಾಗಿದೆ. ಸಿರಗುಪ್ಪ (04.10.2002), ಮುದ್ದೇಬಿಹಾಳ (01.06.2002) ಕೊಪ್ಪಳ (01.04.2002.) ಕಮಲಾಪೂರ(02.02.2002) ಹಾಸನ(01.08.2002) ಹಗರಿಬೊಮ್ಮನಹಳ್ಳಿ (22.02.2002) ಮಂಡ್ಯ (28.03.2002) ಮೊದಲಾದ ಕಡೆಗಳಲ್ಲಿ ಈ ಘಟನೆಗಳು ನಡೆದವು. ಇದರಲ್ಲಿ ಕೊಪ್ಪಳದಲ್ಲಿ ನಡೆದ ಅಂಬೇಡ್ಕರ್ ಪ್ರತಿಮೆ ಭಗ್ನ ಪ್ರಕರಣವು (11.02.2002) ದಲಿತರಿಂದಲೇ ನಡೆದದ್ದು ಪೋಲೀಸ್ ಮಹಾನಿರ್ದೇಶಕ ಕೆಂಪಯ್ಯನವರು ಹೇಳಿದ್ದು ಪತ್ರಿಕೆಯಲ್ಲಿ ವರದಿಯಾಯಿತು. (ಕನ್ನಡಪ್ರಭ 16.02.2002) ಕೆಲವು ಕಿಡಿಗೇಡಿಗಳು ವೈಯಕ್ತಿಕ ದ್ವೇಷದಿಂದ ಮುಸ್ಲಿಂ ಮತ್ತು ದಲಿತರ ನಡುವೆ ಗಲಭೆ ಮಾಡಲು ಹವಣಿಸಿದರು. ಇಂತಹ ಘಟನೆಗಳ ಲಾಭ ಪಡೆಯುವುದು ಅವರ ಉದ್ದೇಶವಾಗಿತ್ತು.[59] ಬೆಂಗಳೂರಿನಲ್ಲಿ ಪ್ರತಿಮೆಯ ಮೇಲೆ ಮದ್ಯ ಸುರಿದು ಅವಮಾನ ಮಾಡಿದ ಪ್ರಕರಣ ಇವುಗಳನ್ನು ಅವಲೋಕಿಸಿದಾಗ ಪ್ರತಿಮೆಗಳು ಅಗತ್ಯವೇ? ಎಂದೆನಿಸುತ್ತದೆ. ಅಂತಹ ಮಹಾನ್ ವ್ಯಕ್ತಿಗಳ ಪ್ರತಿಮೆಗಳನ್ನು ಗೌರವಯುತವಾಗಿ ರಕ್ಷಿಸಿ ಮುಂದಿನ ಜನಾಂಗಕ್ಕೆ ಅವರು ಸ್ಫೂರ್ತಿ ಹಾಗೂ ಪ್ರೇರಕ ಸಂಕೇತವಾದರೆ ಒಳಿತು, ಅದರ ಬದಲು ತಮ್ಮ ವೈಯಕ್ತಿಕ ದ್ವೇಷ ಅಸೂಯೆಗಳಿಗೆ, ವಿಕೃತ ಮನಸ್ಸಿನ ವಿಕಾರಗಳಿಗೆ ಇಂತಹ ಪ್ರತಿಮೆಗಳು ಬಲಿಯಾದರೆ ಮತ್ತೊಂದು ಸಂಘರ್ಷದ ಪ್ರಕ್ಷುಬ್ಧ ವಾತಾವರಣ ರಾಷ್ಟ್ರದಲ್ಲಿ ನಿರ್ಮಾಣಗೊಳ್ಳುತ್ತದೆ. ದ್ವೇಷ ಸದಾ ಉಳಿದು ಅಮಾಯಕರು ಬಲಿಯಾಗುತ್ತಾರೆ. ಇಂತಹ ಪ್ರಕರಣಗಳಲ್ಲಿ ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗದೇ ಅಂತಹವರು ನುಣುಚಿಕೊಳ್ಳುತ್ತಾರೆ. ಯಾವುದೇ ರಾಷ್ಟ್ರನಾಯಕರ ಪ್ರತಿಮೆಗಳಾಗಿರಲಿ ಅವುಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಿ, ಕಟ್ಟುನಿಟ್ಟಾಗಿ ರಕ್ಷಣೆ ಮಾಡುವತ್ತ ಗಮನ ನೀಡಬೇಕು. ಪ್ರತಿಮೆಗಳು ಕೂಡ ಶೋಷಕರ ಅಸ್ತ್ರವಾದರೆ, ಶೋಷಣೆ ಎಂದು ಕೊನೆಗೊಂಡೀತು!

ಮೂರ್ತಿಪೂಜೆ ವಿರೋಧಿಸಿದ ಅಂಬೇಡ್ಕರ್‌ಗೆ ಈಗ ಎಲ್ಲ ದೇವರುಗಳಂತೆ ಪೂಜೆ ನಡೆಯುತ್ತಿದೆ. ಅಲ್ಲದೇ ಅವರನ್ನು ಒಂದು ಜಾತಿ, ಸಮುದಾಯಕ್ಕೆ ಸೀಮಿತಗೊಳಿಸಿ, ಅವರನ್ನು ದೇವರೆಂದು ಪೂಜಿಸಿ ಅನಕ್ಷರಸ್ಥ ದಲಿತರಿಗೆ ತಪ್ಪು ಸಂದೇಶ ರವಾನಿಸದಂತಾಗುತ್ತದೆ. ನೌಕರಸ್ಥ ದಲಿತರು, ಅಧಿಕಾರಸ್ಥ ದಲಿತರು ಹಾಗೂ ದಲಿತ ರಾಜಕಾರಣಿಗಳು ತಮ್ಮ ಶಕ್ತ್ಯಾನುಸಾರ ಅಂಬೇಡ್ಕರ್ ಹೆಸರಿನಲ್ಲಿ ಏನೆಲ್ಲ ಲಾಭ ಪಡೆದರು. ಮನೆಗಳಲ್ಲಿ ಮಾತ್ರ ಸತ್ಯನಾರಾಯಣ ವ್ರತ ಮಾಡಿಸಿದರು. ಆ ಕಡೆ ಕೇರಿಗಳಲ್ಲಿ ಹುಳು ಹಿಡಿದ ಮುಗ್ಗಲು ಅಕ್ಕಿ ತರಲು ಹಸಿರು ಕಾರ್ಡಿಗೂ ಪರದಾಡುವ ಪರಿಸ್ಥಿತಿ ಪಾತಾಳಕ್ಕೆ ಹೋಯಿತು. ಅಲ್ಲಿ ಅಂಬೇಡ್ಕರ್ ಹೆಸರಿನ ಪ್ರಶಸ್ತಿ, ಪೀಠ, ಸಂವಿಧಾನ ಯಾವುದೂ ಕೇರಿಯವರ ನೆರವಿಗೆ ಬರಲಿಲ್ಲ. ಹಾಗಿದ್ದರೆ ಈ ವರೆಗೆ ಅಂಬೇಡ್ಕರ್‌ರಿಂದ ಲಾಭ ಪಡೆದವರು ಯಾರು ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ.[80] ಎಂದು ಕಟುವಾಸ್ತವವನ್ನು ಡಾ। ಬಿ.ಎಂ. ಪುಟ್ಟಯ್ಯ ತಮ್ಮ ಲೇಖನದಲ್ಲಿ ತೆರೆದಿಡುತ್ತಾರೆ.

ಅವರು ಮುಂದುವರಿದು ದಲಿತ ನಾಯಕರಿಗೆ, ದಲಿತರಿಗೆ ಏಪ್ರಿಲ್ 14 ಮತ್ತು ಡಿಸೆಂಬರ್ 6 ಈ ಎರಡು ದಿನ ಮಾತ್ರ ಅಂಬೇಡ್ಕರ್ ಪೂರ್ತಿ ಪರಿಚಿತರು... ಒಂದು ಕಾಲಕ್ಕೆ ದಲಿತ ಹೋರಾಟ ಅಂಬೇಡ್ಕರ್ ರವರಿಂದ ಸ್ಫೂರ್ತಿ ಪಡೆದಿತ್ತು. ಇಂದು ಅನೇಕ ದಲಿತ ಹೋರಾಟಗಳಿಗೆ ಪರಿಪಕ್ವ ಸಿದ್ಧಾಂತ-ಸಿದ್ಧಿಸಿಲ್ಲ. ಅವರೆಲ್ಲ ಆಳುವ ವರ್ಗದ ಪರಿಭಾಷೆಯಲ್ಲಿ ಅಂಬೇಡ್ಕರ್ ಬಗ್ಗೆ ಮಾತಾಡುತ್ತಿದ್ದಾರೆ. ಶೋಷಕರ ಪ್ರಜ್ಞೆ, ದಲಿತರ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿದೆ. ಆಳುವ ವರ್ಗವು ಅಂಬೇಡ್ಕರ್‌ರವರನ್ನು ವಿಕೃತ ನಾಟಕದ ಮೂಲಕ ಪೂಜೆ ಮಾಡುತ್ತಿದ್ದಾರೆ. ಕಾಯಿ ಒಡೆಯುತ್ತಿದ್ದಾರೆ. ಆರತಿ ಬೆಳಗುತ್ತಿದ್ದಾರೆ.ಮಂಗಳಾರತಿಯನ್ನು ಮಾಡುತ್ತಿದ್ದಾರೆ. ಕೆಲವು ದಲಿತರು ಅಲ್ಲಿ ಒಳ ಮೀಸಲಾತಿ ಕೇಳುತ್ತಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಬರಗೂರು ರಾಮಚಂದ್ರಪ್ಪನವರು ಹೇಳುವಂತೆ ಅಂಬೇಡ್ಕರ್‌ರವರ ಅಮಲು ಬೇಡ, ಅರಿವು ಬೇಕಾಗಿದೆ ಆ ಅರಿವು ಆಂದೋಲನವಾಗಿ ಮಾರ್ಪಟ್ಟರೆ ಅಂಬೇಡ್ಕರ್‌ರವರಿಗೆ ನಾವು ಸಲ್ಲಿಸುವ ನಿಜಗೌರವವಾಗುತ್ತದೆ.

ಸಾಮ್ರಾಜ್ಯಶಾಹಿಯ ಜಾಗತೀಕರಣದಿಂದ ದಲಿತರ ಬದುಕು ಏನಾಗಿದೆ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ದಲಿತರೆಂದರೆ ಕೇವಲ ದಲಿತ ಸಾಹಿತಿಗಳಲ್ಲ, ದಲಿತ ನೌಕರರಲ್ಲ, ದಲಿತ ಅಧಿಕಾರಿಗಳಲ್ಲ, ದಲಿತ ರಾಜಕಾರಣಿಗಳಲ್ಲ. ದಲಿತರೆಂದರೆ ಹಸಿವು ಮತ್ತು ಅಪಮಾನಗಳ ಸಾಮಾಜಿಕ ವಾಸ್ತವದ ಮತ್ತೊಂದು ಹೆಸರು ದಲಿತರು. ಇದನ್ನು ಮುಚ್ಚಿಟ್ಟು ದಲಿತರನ್ನು ವ್ಯಾಖ್ಯಾನಿಸಲು ಬರುವುದಿಲ್ಲ. ವ್ಯಾಖ್ಯಾನಿಸಲೂ ಬಾರದು. ದಲಿತರನ್ನು ಸರಕಾರಿ ಭಾಷೆಯಲ್ಲಿ ಗ್ರಹಿಸುವುದನ್ನು ಮೊದಲು ಬಿಡಬೇಕು. ಹಸಿವು ಮತ್ತು ಅಪಮಾನ ಎಂಬುದಕ್ಕೆ ಸರಕಾರಿ ನಿಘಂಟಿನಲ್ಲಿ ಅರ್ಥಗಳಿಲ್ಲ. ಅಷ್ಟು ಮಾತ್ರವಲ್ಲ, ಶೋಷಣೆ ಎಂಬುದಕ್ಕೂ ಸರಕಾರಿ ನಿಘಂಟಿನಲ್ಲಿ ವಿವರಣೆ ಇಲ್ಲವೆಂದು ಡಾ।ಬಿ.ಎಂ. ಪುಟ್ಟಯ್ಯ ಅಭಿಪ್ರಾಯಪಡುತ್ತಾರೆ. ಇತ್ತೀಚಿನ ದಿನಗಳಲ್ಲಿ ದಲಿತ ಹೋರಾಟಕ್ಕೆ ದಲಿತರ ವಾಸ್ತವಪರಿಸ್ಥಿತಿಯನ್ನು ಒಟ್ಟಾಗಿ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಕಳೆದ ಹತ್ತಾರು ವರುಷಗಳಿಂದ ಇಡೀ ದಲಿತ ಸಮೂಹಕ್ಕೆ ಸಂಬಂಧಿಸಿದ ಯಾವ ಹಕ್ಕೊತ್ತಾಯವನ್ನೂ, ಯಾವ ಕಾರ್ಯಕ್ರಮವನ್ನೂ ದಲಿತ ಹೋರಾಟ ಕೈಗೆತ್ತಿಕೊಳ್ಳಲಾಗಿಲ್ಲ. ಎಲ್ಲಾ ದಲಿತರ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಅಂಬೇಡ್ಕರ್ ಆಲೋಚನೆಯ ಮೂಲಕ ಪ್ರವೇಶ ಮಾಡುವುದಾದರೆ ಅಂಬೇಡ್ಕರ್‌ರು ಈ ದೇಶದ ಗ್ರಾಮೀಣ ಪರಿಸ್ಥಿತಿಗಳ ಬಗ್ಗೆ, ಅಲ್ಲಿನ ದುಡಿಮೆಯ ಸಂಬಂಧಗಳ ಬಗ್ಗೆ ಮಾಡಿರುವ ಅಧ್ಯಯನಗಳನ್ನು, ಬರೆದಿರುವ ಬರಹಗಳನ್ನು ಮೊದಲು ಓದಬೇಕಾಗಿದೆ.

ಆ ನಿಟ್ಟಿನಲ್ಲಿ ಈಗ ಬದಲಾಗಿರುವ ದಲಿತರ ವಾಸ್ತವ ಪರಿಸ್ಥಿತಿಗಳನ್ನೂ, ಅವರ ಸಮಸ್ಯೆಗಳನ್ನೂ ಅಧ್ಯಯನಮಾಡಿ, ಸಮಕಾಲೀನ ಪರಿಸ್ಥಿತಿಯಲ್ಲಿ ದಲಿತರ ವಿಮೋಚನೆಗೆ ಹೊಸ ದಾರಿಗಳನ್ನು ತುಳಿಯಬೇಕಿದೆ.[61] ಎಂಬ ಡಾ।ಬಿ.ಎಂ.ಪುಟ್ಟಯ್ಯನವರ ಅಭಿಪ್ರಾಯ ಪ್ರಸ್ತುತ ಅಂಬೇಡ್ಕರ್ ಚಿಂತನೆಗಳ ವಾಸ್ತವದ ಚಿತ್ರಣವಾದ್ದರಿಂದ ನನ್ನ ಪ್ರಬಂಧದಲ್ಲಿ ಅವರ ವಿಚಾರಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿರುವೆ.

ಅಂಬೇಡ್ಕರ್ ಜೀವಂತವಿದ್ದಾಗ ಅನುಭವಿಸಿದ ಅಸ್ಪೃಶ್ಯತೆಗಿಂತ ಮರಣದ ನಂತರ ಅನುಭವಿಸುತ್ತಿರುವ ಅಸ್ಪೃಶ್ಯತೆ ಅತೀ ಅಮಾನವೀಯ ಹಾಗೂ ವಿಕೃತವಾದದ್ದು. ಯಾವುದೇ ದಲಿತರು ಮತ್ತು ಸವರ್ಣೀಯರ ನಡುವೆ ವಿವಾದ ಉಂಟಾದರೆ ಮೊದಲು ಬಲಿಯಾಗುವುದು ಅಂಬೇಡ್ಕರ್ ಪ್ರತಿಮೆ ಹಾಗೂ ಅಂಬೇಡ್ಕರ್ ಭಾವಚಿತ್ರ. ಆದರೊಂದಿಗೆ ದಲಿತರ ಮೇಲೆ ದೌರ್ಜನ್ಯಗಳು ಆರಂಭಗೊಳ್ಳುತ್ತವೆ. ನಮ್ಮ ದೇಶದಲ್ಲಿ ವಿಶೇಷವಾಗಿ ಚುನಾವಣೆಯ ಸಂದರ್ಭದಲ್ಲಿ ಹೆಚ್ಚು ಇಂತಹ ಅಮಾನವೀಯ ಪ್ರಕರಣಗಳು ಜರುಗುತ್ತವೆ. ಆಗ ಯಥಾ ಪ್ರಕಾರ ಶಾಂತಿಸಭೆ, ದಲಿತರ ವೋಟ ಬ್ಯಾಂಕಿನ ಮೇಲೆ ಕಣ್ಣಿಟ್ಟಿರುವ ರಾಜಕೀಯ ನಾಯಕರು ಯಥಾ ಪ್ರಕಾರ ಮೊಸಳೆ ಕಣ್ಣೀರು ಸುರಿಸಿ ಆದ ಅಪಮಾನಕ್ಕೆ ದಲಿತರಿಗೊಂದಿಷ್ಟು ಪರಿಹಾರ ನೀಡಿ ಕೈ ತೊಳೆದುಕೊಳ್ಳುತ್ತಿರುವುದು ವಾಸ್ತವ ಸತ್ಯವಾಗಿದೆ.

ಡಾ।ಅಂಬೇಡ್ಕರ್ ಈ ದೇಶಕ್ಕೆ ಪರಿಚಿತರಾದಂದಿನಿಂದ ಸಾಯುವ ಕೊನೆ ಕ್ಷಣದವರೆಗೂ ಈ ದೇಶದ ಮುಂದೆ, ವ್ಯವಸ್ಥೆಯ ಮುಂದೆ ಇಟ್ಟ ಬೇಡಿಕೆ ಮತ್ತು ಮಾಡಿದ ಒತ್ತಾಯ ಇದಿಷ್ಟೇ; ಸರ್ವಸಮಾನ, ಶೋಷಣೆ ರಹಿತ ಸುಂದರ ಮಾನವೀಯ ಸಮಾಜವನ್ನು ನಮಗೆ ಕೊಡಿ. ನಮ್ಮನ್ನು ನಿಮ್ಮಂತೆ ಬದುಕಲು ಬಿಡಿ. ಈ ದೇಶದಲ್ಲಿ ನಾಯಿ-ನರಿಗಳು, ಕೋತಿಗಳು, ಹಂದಿಗಳು, ಪಶು-ಪಕ್ಷಿಗಳು, ಗಿಡ-ಮರಗಳು, ಕಲ್ಲುಗಳ ಮತ್ತು ಚಿತ್ರಪಟಗಳು ಪೂಜಿಸಿಕೊಳ್ಳುತ್ತವೆ. ಆದರೆ ಇಲ್ಲೇ ತಮ್ಮೊಡನೆ ಹುಟ್ಟಿ ಬದುಕಿ, ಸೇವೆ ಮಾಡಿ ಇತರರಂತೆ ಎಲ್ಲಾ ದೈಹಿಕ ಮತ್ತು ಮಾನಸಿಕ ಅರ್ಹತೆ ಪಡೆದಿರುವ ನಿಮ್ಮ ಸಹಮಾನವರನ್ನು ಕೇವಲ ಕೀಳು ಜಾತಿಯ ಗರ್ಭದಿಂದ ಹುಟ್ಟಿದ ಒಂದೇ ಒಂದು ಮಾನವ ನಿರ್ಮಿತ ವಂಚನೆಯ ಕಾರಣಕ್ಕೆ ಅವರನ್ನು ಈ ಮೇಲೆ ತಿಳಿಸಿದ ಎಲ್ಲಕ್ಕಿಂತಲೂ ಕೀಳಾಗಿ, ಅಮಾನವೀಯವಾಗಿ ಕಾಣುವುದು ಮತ್ತು ಉಪಚರಿಸುವುದು ಇದು ಅನ್ಯಾಯವಲ್ಲವೇ? ಶೋಷಣೆಯಲ್ಲವೇ? ದಬ್ಬಾಳಿಕೆಯ ದೌರ್ಜನ್ಯವಲ್ಲವೇ? ಇದಕ್ಕೆ ಪರಿಹಾರವೇನು? ಎಂಬುದು ಅವರ ಪ್ರಶ್ನೆಯಾಗಿತ್ತು. ಈ ಎಲ್ಲಾ ಪ್ರಶ್ನೆಗೂ ಅವರೇ ಉತ್ತರವನ್ನು ಕೂಡಾ ಹೇಳಿ ಜಾಗೃತಿಯ ಚಳುವಳಿ ಕಟ್ಟಿದ ಪರಿಣಾಮ ಇಂದು ಅಸ್ಪೃಶ್ಯರು, ಶೂದ್ರರು, ಎಲ್ಲಾ ಜಾತಿ, ಧರ್ಮದ ಶೋಷಿತ ಸಮುದಾಯ ಆಧುನಿಕ ಭಾರತದಲ್ಲೇ ಉಸಿರಾಡುವಂತೆ ಆಗಿದ್ದು ನಿತ್ಯ ನಿತ್ಯ.

ದಲಿತ ಮೂಲಭೂತವಾದ :

ಆದರೆ ಇಂದು ನಮ್ಮ ಮುಂದೆ ಹೊಸದೊಂದು ಸಮಸ್ಯೆ ಎದುರಾಗುತ್ತಿದೆ. ಅದೇ ದಲಿತ ಮೂಲಭೂತವಾದ ಅಥವಾ ದಲಿತ ಫಂಡಮೆಂಟಲಿಸಮ್ ಈ ಅಂಟುಜಾಡ್ಯದ ಬಿತ್ತನೆ ಈಗಾಗಲೇ ಮರ, ಹೆಮ್ಮರ, ಅದರ ನೆರಳಿನಲ್ಲೇ ದಲಿತ ಮತ್ತು ಅಸ್ಪೃಶ್ಯ ಜನಾಂಗಗಳ ಕೆಲವೇ ಪ್ರಬಲ ಜಾತಿ ಜನಾಂಗದ ಜನತೆ ಸೆರೆಯಾಗುತ್ತಿದ್ದಾರೆ. ಕೆಲವು ದಲಿತ ಮೂಲಭೂತವಾದಿ ಸಂಘಟನೆಗಳು, ವಿಚಾರವಾದಿಗಳು, ಕೆಲವು ಜಾತಿ ಮೂಲಭೂತವಾದಿಗಳು ಈ ನವ ಶೋಷಣೆಯ ಸಿದ್ಧಾಂತದ ಪ್ರತಿಪಾದಕರಾಗಿದ್ದಾರೆ.[62]

ಪ್ರಸ್ತುತ ಭಾರತವನ್ನು ವಿಚ್ಛಿದ್ರಕಾರಿ, ಅಪಾಯಕಾರಿ ಮತ್ತು ಸಮಾನತೆಯ ವಿರೋಧಿ ದಿಕ್ಕಿಗೆ ಕೊಂಡೊಯ್ಯುತ್ತಿರುವ ಹಿಂದೂ ಮೂಲಭೂತವಾದ ಮತ್ತು ಮುಸ್ಲಿಂ ಮೂಲಭೂತವಾದ ಇವುಗಳಂತೆ ದಲಿತ ಮೂಲಭೂತವಾದ ಸಾಗುತ್ತಿರುವುದು ಭಾರತೀಯ ಸಮಾಜಕ್ಕೆ ದಲಿತರ ವಿಮೋಚನೆಗೆ ಗಂಡಾಂತರಕಾರಿ. ಇದರ ಉದ್ದೇಶಗಳಲ್ಲಿ ಮತ್ತು ಅದು ಮಾಡುತ್ತಿರುವ ಶೋಷಣೆ ಯಾವ ಮೂಲಭೂತವಾದಕ್ಕೂ ಕಡಿಮೆ ಇಲ್ಲ. ಈ ದೇಶದಲ್ಲಿ ಈಗಾಗಲೇ ಹಿಂದೂ ವೈದಿಕಶಾಹಿಯ ಅಡಿಗಲ್ಲಿನ ಮೇಲೆ ಹಿಂದುತ್ವ ರಾಷ್ಟ್ರ ನಿರ್ಮಾಣಕ್ಕಾಗಿ ಹಿಂದೂ ಮೂಲಭೂತ ವಾದಿಗಳು ಪ್ರಯತ್ನಿಸುತ್ತಿರುವುದು, ಹಾಗೆಯೇ ಇಸ್ಲಾಂ ಮೂಲಭೂತ ವಾದವು ಈ ದೇಶದಲ್ಲಿ ಸಾಕಷ್ಟು ನೆತ್ತರನ್ನು ಹರಿಸಿದೆ. ಈ ಮತಾಂತರದ ಮೂಲಭೂತ ವಾದಿಗಳು ಸಾವಿರಾರು ಅಮಾಯಕ ಸಾವಿಗೆ ಕಾರಣರಾಗಿದ್ದಾರೆ. ಧರ್ಮದ ಹೆಸರಿನಲ್ಲಿ ಆಗಿರುವ ರಕ್ತಪಾತದ ಕರಿನೆರಳು ನಮ್ಮ ಇತಿಹಾಸದುದ್ದಕ್ಕೂ ಸಾಗಿ ಬಂದಿದೆ. ಇಂತಹ ಹೊತ್ತಿನಲ್ಲಿ ಶೋಷಿತ ವರ್ಗದಿಂದಲೂ ಕೂಡಾ ಹೊಸ ಶೋಷಣೆಯು ಬೆಳೆದು ಬರುತ್ತಿದೆ. ಅದುವೇ ದಲಿತ ಮೂಲಭೂತವಾದ, ಇದು ಕೂಡಾ ದಲಿತರನ್ನು ಇಡೀ ಸಮಾಜದಿಂದ ಪ್ರತ್ಯೇಕಿಸಿ -ಅದು ಬಹು ಸಂಖ್ಯಾತ ಶೂದ್ರ, ಅತಿಶೂದ್ರ, ಅಸ್ಪೃಶ್ಯ ವರ್ಗಗಳ ನಡುವೆ ಸಾಮರಸ್ಯಕ್ಕೆ ಬದಲು ದ್ವೇಷದ ದಳ್ಳೂರಿಯನ್ನು ಬಿತ್ತುತ್ತಿದೆ. ದಲಿತರ ವಿಮೋಚನೆ ಹಾಗೂ ಸಮಾನತೆಯ ಕನಸನ್ನು ನುಚ್ಚುನೂರು ಮಾಡುತ್ತಿದೆ. ದಬ್ಬಾಳಿಕೆ ದೌರ್ಜನ್ಯಗಳಿಂದ ಸಮಾಜದ ಇತರ ಜನರನ್ನು ಹೆದರಿಸುತ್ತಿದೆ. ನಾವು ಶತಮಾನಗಳಿಂದ ಶೋಷಣೆ ದಬ್ಬಾಳಿಕೆಗೆ ಒಳಗಾಗಿದ್ದೇವೆ. ಅದಕ್ಕೆ ಪ್ರತಿಯಾಗಿ ಶೋಷಣೆ ಮಾಡಲು ನಮಗೂ ಅವಕಾಶ ಕೊಡಿ ಎಂಬ ಪ್ರತೀಕಾರದ ಸೇಡಿನ ರಾಜಕೀಯ ಮಾಡುತ್ತಿದೆ. ದಲಿತರಲ್ಲದ ಎಲ್ಲರನ್ನೂ ಅನುಮಾನದಿಂದ, ದ್ವೇಷದಿಂದ ಕಾಣುವುದರೊಂದಿಗೆ ಇತರ ಜಾತಿ ಜನ ವರ್ಗವನ್ನು ಶತ್ರುಗಳಂತೆ ಕಾಣಲಾಗುತ್ತಿದೆ. ಶೋಷಣೆಗೆ ಪ್ರತಿಯಾಗಿ ಶೋಷಣೆ, ದಬ್ಬಾಳಿಕೆ ದೌರ್ಜನ್ಯಕ್ಕೆ ಪ್ರತಿಯಾಗಿ ದಬ್ಬಾಳಿಕೆ ದೌರ್ಜನ್ಯ ಇವುಗಳಿಂದ ಸಾಧಿಸುವುದಾದರೂ ಏನನ್ನು? ಇದರಿಂದ ದಲಿತರ ವಿಮೋಚನೆ ಸಾಧ್ಯವೇ? ಸಮಾನತೆ ಸಾಧ್ಯವೇ? ಈ ಯಾವ ಪ್ರಶ್ನೆಗಳಿಗೂ ಉತ್ತರ ಕಂಡು ಬರುತ್ತಿಲ್ಲ.

ಈ ಮೂಲಭೂತ ವಾದಿಗಳಿಗೆ ಬೇರೆ ಯಾವ ಆದರ್ಶಗಳೂ, ಸಿದ್ಧಾಂತಗಳೂ ಮತ್ತು ಮಹನೀಯರೂ ಲೆಕ್ಕಕ್ಕಿಲ್ಲ. ಅವರೆಲ್ಲಾ ಅವರಿಗಿಂತ ತುಂಬಾ ಕೀಳು, ಎಲ್ಲೆಲ್ಲೂ ಭೀಮಗೀತೆ, ಭೀಮವಂದನೆ, ಭೀಮ ಸ್ವಾಗತ, ಭೀಮ ನಮಸ್ಕಾರ, ಭೀಮ ವೇದಿಕೆ, ಭೀಮನಾಡು, ಭೀಮರಕ್ತ, ಭೀಮ ವೃತ್ತ, ಭೀಮ ಬೀದಿ, ಭೀಮ..... ಎಲ್ಲವೂ ಭೀಮಮಯ. ಹೇಗಿದೆ ನೋಡಿ. ವ್ಯಕ್ತಿ ಪೂಜೆ, ಮತ್ತು ವ್ಯಕ್ತಿ ವೈಭವೀಕರಣವನ್ನು ಧಿಕ್ಕರಿಸಿ ವಿರೋಧಿಸಿದ ಭೀಮ ಅಂಬೇಡ್ಕರ್‌ರವರಿಗೆ ಬಂದ ದುರ್ಗತಿ. ಇದು ಈ ವ್ಯವಸ್ಥೆಯ ದುರಂತ ಮತ್ತು ದಲಿತರ ಅಂಧಕಾರ. ಬಹುಜನ ಎಂಬ ಪದವನ್ನು ಗುತ್ತಿಗೆ ಪಡೆದಂತೆ ಬಳಸುವ ಈ ದಲಿತ ಮೂಲಭೂತವಾದಿಗಳು ಬಹುಜನ ನಾಯಕರುಗಳನ್ನು ಸಿದ್ಧಾಂತವನ್ನು ಮತ್ತು ಬಹುಜನ ಭಾವನೆಗಳನ್ನು ಕೀಳಾಗಿ ಕಂಡು ಅಗೌರವ ತೋರುತ್ತಿರುವುದು ಅವರ ಗೋಸುಂಬೆತನದ ಒಳಸಿದ್ಧಾಂತಕ್ಕೆ ಸಾಕ್ಷಿ ಮತ್ತು ನಗ್ನಸತ್ಯ. ಅವರ ದೃಷ್ಟಿಯಲ್ಲಿ ಬಸವ, ಗಾಂಧಿ, ಮಾರ್ಕ್ಸ್, ವೀರಭಗತ್, ಲಿಂಕನ್, ತಾಯಿ ತೆರೆಸಾ.. ಅವರೆಲ್ಲಾ ಸವರ್ಣೀಯರು ಮೇಲ್ಜಾತಿಯ ಜನ.[83]

ಅಂಬೇಡ್ಕರ್ ವಾದದ ಸರಿ ತಪ್ಪುಗಳ ವಿಮರ್ಶೆ ಸೋಲು ಗೆಲುವುಗಳ ಚರ್ಚೆ, ಪ್ರಸ್ತುತ ಅಪ್ರಸ್ತುತತೆಯ ತರ್ಕ ಮತ್ತು ಅದರ ಇತಿ-ಮಿತಿಗಳ ಅವಲೋಕನ ಸಂಪೂರ್ಣ ನಿಷಿದ್ಧ. ಅದು ಮಹಾಪಾಪ

ಮತ್ತು ತಪ್ಪು. ಏಕೆಂದರೆ, ಅದು ದಲಿತ ಧರ್ಮ ಶಾಸ್ತ್ರ (ಮನು ಧರ್ಮಶಾಸ್ತ್ರದಂತೆ) ಅಂಬೇಡ್ಕರ್‌ರವರನ್ನು ಬಿಟ್ಟು ಬೇರೆ ಯಾವುದೇ ಮಹಾತ್ಮರನ್ನು ಮತ್ತು ಮಾನವೀಯರನ್ನು ಉಚ್ಛರಿಸಿದರೆ, ಹೊಗಳಿದರೆ ಅದು ತಪ್ಪು. ಅವರ ಬಗ್ಗೆ ದಲಿತರ ಮುಂದೆ ಅವರು ದಲಿತರಿಗಾಗಿ ಮತ್ತು ಸಮ ಸಮಾಜಕ್ಕಾಗಿ ಮಾಡಿದ ನಿಸ್ವಾರ್ಥ ಪ್ರಯತ್ನ ಮತ್ತು ಸಾಧನೆಗಳನ್ನು ಸ್ಮರಿಸಿದರೆ ಅಥವಾ ಅಂಬೇಡ್ಕರರಿಗೆ ಹೋಲಿಸಿ ಮಾಡಿದಲ್ಲಿ ಅದು ತಪ್ಪಾಗಿ ಬಿಡುತ್ತದೆ.[64] ಇಂದು ಅಂಬೇಡ್ಕರ್‌ರವರನ್ನು ಕುರಿತು ಅವರ ವಿಚಾರಗಳ ಕುರಿತು ಆಳವಾದ ಅಧ್ಯಯನ ವಿಮರ್ಶೆಗಳಿಂದ ಮಾತ್ರ ದಲಿತರ ವಿಮೋಚನೆ, ಸಮಾನತೆ ಸಾಧಿಸಲು ಸಾಧ್ಯವಾದೀತು. ಏಕೆಂದರೆ ಅಂಬೇಡ್ಕರ್‌ರವರ ಬರಹಗಳನ್ನು ಅವಲೋಕಿಸಿದಾಗ ಅಂಬೇಡ್ಕರ್‌ರವರ ಬರಹ-ಭಾಷಣಗಳ 14 ಸಂಪುಟಗಳು ಇಂಗ್ಲೀಷನಿಂದ ಭಾರತದ ಎಲ್ಲಾ ಭಾಷೆಗಳಿಗೆ ಭಾಷಾಂತರ ಹೊಂದಿವೆ. ಒಂದು ಅರ್ಥದಲ್ಲಿ ನವಭಾರತೀಯ ಚರಿತ್ರೆಗೆ ಮುನ್ನುಡಿ ಎಂತಿದೆ ಎಂದರೆ ತಪ್ಪಾಗಲಾರದು. ಆದರೆ ಈ ಕೃತಿಗಳನ್ನು ಸರಿಯಾಗಿ ಪರಾಮರ್ಶಿಸಿದ ಜನತೆಗೆ ಅವರು ಎಲ್ಲೂ ವ್ಯಕ್ತಿಗತವಾಗಿ ಒಂದು ಜಾತಿ-ಸಮುದಾಯವನ್ನು ನೇರವಾಗಿ ಟೀಕಿಸಿರುವುದು ಕಂಡುಬರುವುದಿಲ್ಲ. ಅದಕ್ಕೆ ಬದಲಾಗಿ ಹಿಂದೂ ದೇಶದ ಸಮಗ್ರ ಸಂಸ್ಕೃತಿಯನ್ನು ಅಧ್ಯಯನ ಮಾಡಿ ಅದರ ತಪ್ಪುಗಳನ್ನು ಎತ್ತಿ ಹಿಡಿದಿದ್ದಾರೆ. ಅವುಗಳ ನಿವಾರಣೆಗೆ ಪ್ರಯತ್ನಿಸಿದ್ದಾರೆ. ಅಲ್ಲದೇ ಹಿಂದೂ ಮೂಲಭೂತವಾದವನ್ನು ತಮ್ಮ ಜೀವನದುದ್ದಕ್ಕೂ ಅಂಬೇಡ್ಕರ್ ವಿರೋಧಿಸುತ್ತ ಬಂದರು. ಇಂದು ಅಂಬೇಡ್ಕರ್ ಹೆಸರಿನಲ್ಲಿ ದಲಿತ ಮೂಲಭೂತವಾದ ಬೆಳೆದು ಬರುತ್ತಿರುವುದು ದುರಂತ. ಅಷ್ಟೇ ಅಲ್ಲ ವ್ಯಕ್ತಿ ಪೂಜೆಯನ್ನು ವಿರೋಧಿಸಿದ ಅಂಬೇಡ್ಕರ್ ರವರನ್ನು ಪೂಜಿಸಿ ದೇವರನ್ನಾಗಿಸಿ ಅವರ ತತ್ವಗಳನ್ನು ಮತ್ತು ಹೋರಾಟದ ಇತಿಹಾಸವನ್ನು ಇದು ಮರೆಮಾಚಿಸುತ್ತದೆ. ಏಕೆಂದರೆ ಕಾಲಾಂತರದಲ್ಲಿ ವ್ಯಕ್ತಿ ದೇವರಾದ ಮೇಲೆ ವಿಚಾರಗಳು ಮೌಢ್ಯದ ಮರೆಯಲ್ಲಿ ಮಸುಕಾಗುತ್ತಿರುವ ಇತಿಹಾಸವೇ ನಮ್ಮ ಮುಂದಿದೆ.

ಈ ಮೂಲಭೂತವಾದ ಸಮಾಜದ ಸಮಸ್ತರ ಭಾವನೆಗಳಿಗೆ ಬೆಲೆ ಕೊಡದೆ ಇತರರನ್ನು ಕೀಳಾಗಿ ಅಸಮಾನತೆಯಿಂದ ನೋಡುವುದು, ಇತರರ ಭಾವನೆ, ಸಮಾನತೆಗೆ ಧಕ್ಕೆ ತಂದು ಅವರ ಬದುಕಿಗೆ ಅಭದ್ರತೆ ಮತ್ತು ಭಯ ಉಂಟು ಮಾಡಿ ತಾವು ಹೇಳಿದಂತೆ ಕೇಳಲು ಒತ್ತಾಯಿಸುವ ಈ ದಬ್ಬಾಳಿಕೆಯ ಫ್ಯಾಸಿಸ್ಟ್ ನೀತಿ ಎಷ್ಟು ದಿನ ಬದುಕಲು ಸಾಧ್ಯ. ಸ್ವಾಭಿಮಾನ, ಸಮಾನತೆ ಮತ್ತು ಸರ್ವಸಾಮರಸ್ಯಕ್ಕೆ ಬೆಂಕಿ ಇಡುವ ಈ ಸಿದ್ಧಾಂತ ಶೋಷಿತ ಸಮುದಾಯದ ಶೋಷಣೆಯೇ ಆಗಿದೆ. ಶೋಷಿತರಿಂದಲೇ ಮತ್ತೊಂದು ಶೋಷಣೆಯ ಬೀಜಾಂಕುರ ಇದೆಂದರೆ ತಪ್ಪಾಗಲಾರದು.

ಅಂಬೇಡ್ಕರ್‌ರವರನ್ನು ಇತರ ವರ್ಗಗಳಿಂದ ದೂರ ಮಾಡಿ, ಅವರ ವಿಚಾರಗಳಿರುವುದು ಕೇವಲ ದಲಿತರಿಗಾಗಿ ಎಂಬ ಭಾವನೆ ಬಿತ್ತುತ್ತಿರುವುದು ಕಂಡು ಬರುತ್ತಿದೆ. ಎಲ್ಲ ಜಾತಿಯ ಶೋಷಿತರ ಪರವಾಗಿ ಹೋರಾಡಿದವರು ಅಂಬೇಡ್ಕರ್, ಅವರನ್ನು ಮೂಲಭೂತ ವಾದಕ್ಕೆ ಬಲಿ ಮಾಡಿದರೆ ಈ ಸಮಾಜವನ್ನು, ರಾಷ್ಟ್ರವನ್ನು ಅಸಮಾನತೆ, ಶೋಷಣೆ ಮತ್ತು ಮೂಲಭೂತದೆಡೆಗೆ ಕೊಂಡೊಯ್ಯುವ, ಪ್ರೇರೆಪಿಸುವ ಯಾವುದೇ ಸಂಘಟನೆ ಅಥವಾ ಸಿದ್ಧಾಂತ ಐಕ್ಯ ಸಮಾಜಕ್ಕೆ ಪ್ರಗತಿಪರ ಹೋರಾಟಕ್ಕೆ ಗಂಡಾಂತರದ ಸವಾಲಾಗಿ ಪರಿಣಮಿಸುತ್ತದೆ ಏಕೆಂದರೆ ಈ ಮೂಲಭೂತ ವಾದಿಗಳು ಜಾತಿ ವಿನಾಶಕ್ಕೆ ಶ್ರಮಿಸಿದ, ಸಮಾನ ಸಮಾಜದ ಕನಸು ಕಂಡ ಮಾನವತಾವಾದಿ ಅಂಬೇಡ್ಕರ್‌ರ ಸಿದ್ಧಾಂತವನ್ನು ಪೂರ್ವಾಗ್ರಹ ಪೀಡಿತರಾಗಿ ಅರ್ಥೈಸಿ ಅದನ್ನು ಜಾತಿ ವಾದವೆಂಬಂತೆ ಬಿಂಬಿಸುವುದು ಅವರ ಹೆಸರು ಸಿದ್ಧಾಂತಕ್ಕೆ ಅಪಚಾರವೆಸಗಿದಂತೆ. ಇದು ಪ್ರಗತಿಪರ ವಿಚಾರಗಳಿಗೆ ಅಡ್ಡಿಪಡಿಸಿದಂತೆ.

ಅಂಬೇಡ್ಕರ್ ಆಕಾಶದೆತ್ತರದ ವ್ಯಕ್ತಿತ್ವವನ್ನು ಒಂದು ಜಾತಿಗೆ ಸೀಮಿತಗೊಳಿಸಿದರೆ ಅವರ ವ್ಯಕ್ತಿತ್ವವನ್ನು ಕುಬ್ಜಗೊಳಿಸಿದಂತೆ. ಅವರನ್ನು ದೇವರು ಎಂದು ಗುಡಿ ಕಟ್ಟಿ ಬಂಧಿಸಿ, ಅವರ ಹೆಸರಿನಲ್ಲಿ ವೈಯಕ್ತಿಕ ಪ್ರತಿಷ್ಠೆ ಮೆರೆದರೆ ಅಂಬೇಡ್ಕರ್‌ರವರ ಸಿದ್ಧಾಂತ ದ್ರೋಹಿಗಳು ಈ ಮೂಲಭೂತವಾದಿಗಳೇ ಆಗುತ್ತಾರೆ. ಈ ಅಪಾಯವನ್ನು ಅರಿಯದಿದ್ದರೆ, ಅಂಬೇಡ್ಕರ್‌ರವರ ಹೋರಾಟದ ರಥ ಸ್ಥಗಿತಗೊಳ್ಳುವ ಅಪಾಯ ದೂರವಿಲ್ಲ. ಆದಕ್ಕೆ ಅವರು ಈ ಹೋರಾಟದ ರಥವನ್ನು ಸಾಧ್ಯವಾದರೆ ಮುಂದಕ್ಕೆ ಎಳೆಯಿರಿ, ಇಲ್ಲವಾದರೆ ಅದನ್ನು ಇದ್ದಲ್ಲಿಯೇ ಬಿಡಲು ತಮ್ಮ ಅನುಯಾಯಿಗಳಿಗೆ ಜೀವಂತವಾಗಿರುವಾಗಲೇ ಎಚ್ಚರಿಸಿದ್ದರು. ಆದ್ದರಿಂದ ಜಾತಿ ವಿನಾಶ, ಅಸಮಾನತೆಯ ನಾಶ, ಸರ್ವಸಮಾನ ಸಮಾಜ ನಿರ್ಮಾಣ ಇದಕ್ಕೆ ಸರ್ವ ಜನರಲ್ಲೂ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪ್ರಜ್ಞಾಪೂರ್ವಕ ಹೋರಾಟದಿಂದ ಮಾತ್ರ ಸಾಧ್ಯವೆಂಬುದನ್ನು ನಾವು ಅಂಬೇಡ್ಕರ್‌ರವರ ವಿಚಾರಗಳಿಂದ ಅರಿಯುವುದು ಅಗತ್ಯ. ಒಂದು ಸಾರ್ವಜನಿಕ ಸತ್ಯವನ್ನು ಎಲ್ಲರೂ ತಿಳಿದಿರಬೇಕು; ಅದೆಂದರೆ, ಶೋಷಣೆಯ ವ್ಯವಸ್ಥೆಯ ಗರ್ಭದಿಂದಲೇ ಆ ಶೋಷಣೆಯ ವಿರುದ್ಧದ ಬೀಜ ಜೀವಾಂಕುರವಾಗುತ್ತದೆ. ಇದನ್ನೇ ಹಿಂದಿನ ಸೋವಿಯತ್ ರಷ್ಯಾದ ಸಮತಾವಾದಿ ಲೆನಿನ್ ಹೇಳಿದ್ದು. ಈ ಮಾತಿಗೆ ಈ ವಿಶ್ವದ ಇತಿಹಾಸವೇ ನಮಗೆ ಸಾಕ್ಷಿಯಾಗಿದೆ. ನಮ್ಮ ಮುಂದಿರುವ ಗುರಿ ಎಲ್ಲ ಜಾತಿಜನಾಂಗದಲ್ಲಿರುವ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳನ್ನು ಕಿತ್ತಸೆಯುವುದು. ಅದು ಬಿಟ್ಟು ಮತ್ತದೇ ಮೂಲಭೂತವಾದದ ಭೂತಕ್ಕೆ ಬಲಿಯಾದರೆ ಮಹಾನ್ ವ್ಯಕ್ತಿಗಳ ಪ್ರತಿಭಟನಾತ್ಮಕ ಹೋರಾಟದ ದಾರಿ ಕವಲಾಗಿ, ಶೋಷಣೆ ಮತ್ತು ಪ್ರತಿಭಟನೆ ಎರಡೂ ನಿರಂತರ ಎಂಬ ಸತ್ಯ ಸಾಬೀತಾದಂತೆ ಆಗುತ್ತದೆ.

ಅಂಬೇಡ್ಕರ್‌ರವರ ಪ್ರಕಾರ ದಲಿತತ್ವ ಎನ್ನುವುದು ಬದುಕಿನ ಸಾಂದರ್ಭಿಕ ಪರಿಸ್ಥಿತಿಗಳನ್ನು ಹೊಂದಿರುತ್ತದೆ. ಅದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಶೋಷಣೆ, ದಬ್ಬಾಳಿಕೆ ಹಾಗೂ ಪ್ರತ್ಯೇಕಿಸುವ ಯಜಮಾನಿ ಮೇಲ್ಜಾತಿಯ ಬ್ರಾಹ್ಮಿನಿಕಲ್ ಲಕ್ಷಣಗಳನ್ನು ಹೊಂದಿದೆ (ಬಹಿಷ್ಕೃತ ಭಾರತ್). ಹೀಗೆ ಅವರು ದಲಿತ ಪ್ರಜ್ಞೆಯನ್ನು ನಿರೂಪಿಸುತ್ತರಾದರೂ ಆ ಪರಿಕಲ್ಪನೆಯು ಸಂದರ್ಭಕ್ಕನುಗುಣವಾಗಿ ಬದಲಾಗುತ್ತಿರುತ್ತದೆ. ತದನಂತರದಲ್ಲಿ ಲಿಬರಲ್ ಪಾರ್ಲಿಮೆಂಟರಿ ವ್ಯವಸ್ಥೆಯ ಮಿತಿಗಳನ್ನು ಕಾಣುತ್ತಲೇ ಅವರು ಬೌದ್ಧ ಪರಂಪರೆಯ ಮೇಲೆ ದಲಿತ ಪ್ರಜ್ಞೆಯನ್ನು ನಿರೂಪಿಸುತ್ತಾರೆ. ಇದು ನಿಜವಾಗಿ ಶ್ರೇಷ್ಠವಾದ ವಿಮೋಚನಾ ತಂತ್ರವನ್ನು ಒಳಗೊಂಡಿದೆಯಾದರೂ, ಇಂದು ಅದು ಆಧುನಿಕ ಭಾರತದ ವಿದ್ಯಮಾನವಾಗಿ ಇನ್ನೂ ಆಗಿಲ್ಲ.

ಅಂಬೇಡ್ಕರ್‌ರವರ ಬದುಕು ಬರಹ ಹೋರಾಟಗಳಲ್ಲಿ ಸಮಾಜಿಕತೆ ಪ್ರಧಾನವಾಗಿರುವುದನ್ನು ಗುರುತಿಸಬಹುದಾಗಿದೆ. ಸಂವಿಧಾನವನ್ನು ರಾಷ್ಟ್ರಕ್ಕೆ ಅರ್ಪಿಸುವ ಸಂದರ್ಭದಲ್ಲಿ ಅವರು ಹೇಳಿದ ಮಾತಿನಲ್ಲಿ ಅವರ ವಿಚಾರ ಮತ್ತು ಹೋರಾಟಗಳ ಮುಖ್ಯ ಆಶಯವನ್ನು ಹಿಡಿದಿಡಬಹುದಾಗಿದೆ. ಅವರು ಹೇಳಿದ ಮಾತುಗಳಿವು. "On the 26th January 1950, we are going to enter into a life of contradictions. In politics, we will have equality and in social and economic life, we will have inequality." ಮುಂದುವರೆದು "We must remove this contraction at the earliest possible moment or else those who suffer from inequality will blow up the structure of political democracy which this assembly has so laboriously built up".

ಅಂಬೇಡ್ಕರ್ ಊಹಿಸಿದ್ದ ಅಪಾಯವೇನೂ ಭಾರತದಲ್ಲಿ ಸಂಭವಿಸಲಿಲ್ಲ. ಆದರೆ ಅವರು ಗುರುತಿಸಿದ ವೈರುಧ್ಯಗಳು ತೀವ್ರಗೊಳ್ಳುತ್ತಲೇ ನಡೆದಿವೆ. ಅಂಬೇಡ್ಕರ್‌ರವರೇ ಬೇರೊಂದು ಸಂದರ್ಭದಲ್ಲಿ ಹೇಳಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಎಲ್ಲಿ ಇರುವುದಿಲ್ಲವೋ ಅಲ್ಲಿ ರಾಜಕೀಯ ಪ್ರಜಾಪ್ರಭುತ್ವ ಸಾಧ್ಯವಿಲ್ಲ ಎಂಬ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. [ವಲೇರಿಯನ್ ರೋಡ್ರಿಗಸ್(ಸಂ) ಅವರ ಡಾ।ಬಿ.ಆರ್.ಅಂಬೇಡ್ಕರ್‌ರರ ಸಾರಭೂತ ಬರಹಗಳು- ಟಿ.ಆರ್.ಚಂದ್ರಶೇಖರ್ ಲೇಖನ. ಅಭಿವೃದ್ಧಿ ಅಧ್ಯಯನ ಸಂಪುಟ 2 ಸಂಚಿಕೆ-2 ಜನೇವರಿ-ಜೂನ್ 2003 ಪುಟ 74-75]

* * * * *

: ಅಡಿ ಟಿಪ್ಪಣಿಗಳು :

1) ಚಂದ್ರಶೇಖರ ಪಾಟೀಲ, ಬಸವಣ್ಣ ನನ್ನ ಪಾಲಿಗೊಂದು ಸಾಕ್ಷಿ ಪ್ರಜ್ಞೆ ಲೇಖನ ಬಸವ ಮಾರ್ಗ ಮಾಸಿಕ ಜೂನ್-ಜುಲೈ 2004 ಸಂಪುಟ 4 ಸಂಚಿಕೆ 2-3 — ಪುಟ 25

2) ಡಾ। ಕೆ.ಗೌರಮ್ಮ :ಕನ್ನಡ ಸಾಹಿತ್ಯ ಮತ್ತು ಬೌದ್ಧಧರ್ಮ -ಸಂ. 1 — ಪುಟ 7

3) ಡಾ. ಬಿ.ಆರ್.ಅಂಬೇಡ್ಕರ್ : ಬುದ್ಧ ಮತ್ತು ಬೌದ್ಧ ಧರ್ಮ : ಅನು-ಎ.ಡಿ. ಕೃಷ್ಣಯ್ಯ : — ಪುಟ 247

4) ಜವಾಹರಲಾಲ ನೆಹರು. : ಭಾರತ ದರ್ಶನ: ಅನು-ಸಂ. ವಾ. ಕೃಷ್ಣಮೂರ್ತಿರಾವ್ : — ಪುಟ 153

5) ಡಾ। ಮೂಡ್ನಾಕೂಡು ಚಿನ್ನಸ್ವಾಮಿಯವರ ಲೇಖನ : ಬೌದ್ಧಧರ್ಮ ಹಾಗೂ ಅದರ ಪ್ರಸ್ತುತತೆ - ಹೊಸತು ಪತ್ರಿಕೆ. ಮೇ 2006 — ಪುಟ 25

6) ಅದೇ ಲೇಖನ — ಪುಟ 26

7) ಡಾ । ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂ :11, ಭಾಗ-2 — ಪುಟ 481-82

8) ಅದೇ ಗ್ರಂಥ — ಪುಟ 482-83

9) ಡಾ। ಅಂಬೇಡ್ಕರ್ : ಬುದ್ಧ ಮಾರ್ಕ್ಸ್ ಗಾಂಧಿ. ಅನುವಾದ : ಮ.ನ. ಜವರಯ್ಯ — ಪುಟ 76

10) ಡಾ. ಕೆ.ಎಸ್. ಭಗವಾನರ ಲೇಖನದಿಂದ : ಬುದ್ಧನ ಅನನ್ಯತೆ ಸಂವಾದ ಸೆಪ್ಟೆಂಬರ್ 2003. — ಪುಟ 25-27

11) ಎ.ಡಿ. ಕೃಷ್ಣಯ್ಯ : ಬೌದ್ಧೀಯತೆ — ಪುಟ 53

12) ಸಿ.ಎಸ್. ದ್ವಾರಕಾನಾಥ ಲೇಖನ ಐತಿಹಾಸಿಕ ಧರ್ಮಾಂತರ ಅಗ್ನಿ ಪತ್ರಿಕೆ ಅಕ್ಟೋಬರ್ 16, 2003 ಸಂ : 5 ಸಂಚಿಕೆ 52 — ಪುಟ 11

13) ಅದ್ದೆ :ಅಭಿಪ್ರಾಯ ಸಂಗ್ರಹಣೆ : ಅಗ್ನಿ ಪತ್ರಿಕೆ ಅಕ್ಟೋಬರ್ 16, 2003 ಸಂಪುಟ 5 ಸಂಚಿಕೆ 52 — ಪುಟ 11

14) ಅಗ್ನಿ-ಸಂಪುಟ 6 ಸಂಚಿಕೆ 2,30, ಅಕ್ಟೋಬರ್ 2003 ತಕರಾರು ಕಾಲಂ — ಪುಟ 16

15) ಸ್ವಾಮಿ ಧರ್ಮತೀರ್ಥ :ಹಿಂದೂ ಸಾಮ್ರಾಜ್ಯಸಾಹಿಯ ಇತಿಹಾಸ ಅನು :ಕೆ.ಎಸ್. ಭಗವಾನ್ — ಪುಟ 98

16) Manohar Yadav, 1998 ' Career of Dalit Movement in Karnataka ' Journal of Social Economic Development Vol. No. 1, Jan – June, ISEC, Bangalore 1998 — Page 120

17) C.D. Naik, Ambedkar's Perspectives on Buddhism and other Religions Kalpaz Publications, Delhi — Page 154

18) K . Raghavendra Rao, Babasaheb Ambedkar : Makers in Indian Literature — Page 73

19) - do - — Page 73

20) ಡಿ.ಆರ್. ನಾಗರಾಜ್ : ಅಮೃತ ಮತ್ತ ಗರುಡ — ಪುಟ 16-17

21) Sanjay Chahande, 2005 Theorizing Dr. Ambedkar's Conversion in Proceedings Volume of First Internatinal Buddhist Conference, Mumbai

22) ಡಾ। ಡಿ.ಆರ್. ನಾಗರಾಜ್, ಸಂಸ್ಕೃತಿ ಕಥನ. ಸಂ: ಅಗ್ರಹಾರ ಕೃಷ್ಣಮೂರ್ತಿ — ಪುಟ 186

23) - ಆದೇ ಗ್ರಂಥ - — ಪುಟ 194

24) - ಆದೇ ಗ್ರಂಥ - — ಪುಟ 187

25) Rodrigues Valerian :Essential writings of B.R. Ambedkar – Oxford University Press, New Delhi – 2002 — Page 39

26) - ಆದೇ ಗ್ರಂಥ - — ಪುಟ 39

27) ಬಿ.ಬಸವಲಿಂಗಪ್ಪ:ಬುದ್ಧ ಮಾರ್ಗ ಡಾ। ಅಂಬೇಡ್ಕರ್‌ರವರ ಹೆಜ್ಜೆ ಗುರುತಿನಲ್ಲಿ — ಪುಟ 4

28) ಡಾ। ಡಿ.ಆರ್. ನಾಗರಾಜ್, ಸಂಸ್ಕೃತಿ ಕಥನ ಸಂ:ಅಗ್ರಹಾರ್ ಕೃಷ್ಣಮೂರ್ತಿ — ಪುಟ 189

29) ಬಸವಮಾರ್ಗ ಪತ್ರಿಕೆ. ದೇ.ಜ.ಗೌ. ಕುವೆಂಪು ಸಂದರ್ಶನ ಲೇಖನದಿಂದ — ಪುಟ 17

30) ಮಹೇಶ್ ತಿಪ್ಪಶೆಟ್ಟಿ (ಸಂ): ಬಸವ ತತ್ವ -ಇತ್ತೀಚಿನ ಒಲವುಗಳು: ಲೇಖನ ಬಸವ ತತ್ವ ಸಾಮಾಜಿಕ ಬದಲಾವಣೆ. — ಪುಟ 96

31) - ಆದೇ ಗ್ರಂಥ - — ಪುಟ 97

32) - ಆದೇ ಗ್ರಂಥ - — ಪುಟ 99

33) ಚ.ನ. ಶಂಕರ್‌ರಾವ್ : ಭಾರತೀಯ ಸಮಾಜ — ಪುಟ 172

34) ಶ್ರೀ ಚಿತ್ತರಗಿ ವಿಜಯ ಮಹಾಂತಸ್ವಾಮೀಜಿಯವರು :ಕನ್ನಡ ಪ್ರಭ - ಹುನಗುಂದ, ಜೂನ 2, 2005 ಕೂಡಲ ಸಂಗಮದಲ್ಲಿ ಜೂನ 1, 2005 ರಂದು ಮಾಡಿದ ಭಾಷಣದ ವರದಿ — ಪುಟ 3

35) ಚ.ನ. ಶಂಕರ್‌ರಾವ್ : ಭಾರತೀಯ ಸಮಾಜ — ಪುಟ 327

36) - ಆದೇ ಗ್ರಂಥ - — ಪುಟ 328

37) - ಆದೇ ಗ್ರಂಥ - — ಪುಟ 328

38) ವೀರಣ್ಣ ದೇಸಾಯಿ ಲೇಖನ-ಲಿಂಗಾಯತ ಧರ್ಮ X ಹಿಂದೂಧರ್ಮ ಲೇಖನ ಸಂಕ್ರಮಣ 263/ಜೂನ 1994 — ಪುಟ 37

39) ವಿಶ್ವರಾಧ್ಯ ಸತ್ಯಂಪೇಟೆ : ಸಂವಾದ ಸೆಪ್ಟೆಂಬರ್ 2003 ಪುಟ 10
ಲಿಂಗಾಯತ ಮಠಾಧೀಶರಿಗೊಂದು ಬಹಿರಂಗ ಪತ್ರ

40) ದಯಾನಂದ ಮಾನೆಯವರ ದಲಿತ ಚಳುವಳಿ - 1 ಲೇಖನದಿಂದ :ಚರಿತ್ರೆ :ಕ.ವಿ. ವಿಶ್ವಕೋಶ- 4 ಪುಟ 822

41) - ಅದೇ ಗ್ರಂಥ - ಪುಟ 821

42) ಡಾ॥ ಬಸವರಾಜ ಸಬರದವರ ಲೇಖನದಿಂದ: ಬಸವ ಚಳುವಳಿಯೊಳಗಿನ ದಲಿತ ಚಳುವಳಿ :ಸಂವಾದ ಡಿಸೆಂಬರ್ 2003 ಪುಟ 30

43) - ಅದೇ ಲೇಖನ- ಪುಟ 30

44) ಸಮಗ್ರ ವಚನ ಸಂಪುಟ 1 ಪು. 143 ವಚನ 536

45) ಸಮಗ್ರ ವಚನ ಸಂಪುಟ 1 ಪು. 229 ವಚನ 839

46) ಸಮಗ್ರ ವಚನ ಸಂಪುಟ 1 ಪು. 84 ವಚನ 349

47) ಸಮಗ್ರ ವಚನ ಸಂಪುಟ 1 ಪು. ವಚನ 346

48) ಡಾ। ಬಸವರಾಜ ಸಬರದವರ ಲೇಖನ : ಬಸವ ಚಳುವಳಿಯೊಳಗಿನ ದಲಿತ ಚಳುವಳಿ: ಸಂವಾದ ಡಿಸೆಂಬರ್ 2003 ಪುಟ 32

49) ಮೊಗಳ್ಳಿ ಗಣೇಶ್‌ರವರ ಲೇಖನ : ಮಹಾಬೋಧಿವೃಕ್ಷದ ನದಿ ಡಾ। ಬಾಬಾ ಸಾಹೇಬ ಅಂಬೇಡ್ಕರ್ :ಅಂಬೇಡ್ಕರ್‌ವಾದ ಜೂನ್ 2004: ಪುಟ 4

50) ಅಂಬೇಡ್ಕರ್ ವಾದ ಜೂನ 2004. ಅದೇ ಲೇಖನ ಪುಟ 14

51) ಅದೇ ಲೇಖನದಿಂದ ಪುಟ 14

52) ಇಂದೂಧರ ಹೊನ್ನಾಪುರರವರ ಸಂಪಾದಕೀಯ:ಅಂಬೇಡ್ಕರ್ ಅನ್ವೇಷಣೆಯಲ್ಲಿ ಸಂವಾದ ಏಪ್ರಿಲ್ 2006 ಪುಟ 5

53) ಡಾ। ಎಸ್.ಚಂದ್ರಶೇಖರ್ :ಅಂಬೇಡ್ಕರ್ ಮತ್ತು ಗಾಂಧಿ ಪುಟ 69

54) - ಅದೇ ಗ್ರಂಥ - ಪುಟ 70

55) - ಅದೇ ಗ್ರಂಥ - ಪುಟ 71

56) ಡಾ।ಟಿ.ಆರ್. ಚಂದ್ರಶೇಖರ ಲೇಖನ:ದಲಿತರ ಸಮಕಾಲೀನ ಸವಾಲುಗಳು ಮತ್ತು ಅಂಬೇಡ್ಕರ್ ಚಿಂತನೆಯ ಪ್ರಸ್ತುತತೆ (ಸಂ.-ದಲಿತ ಅಧ್ಯಯನ) ಪುಟ 192-193

57) ಡಾ। ಟಿ.ಆರ್.ಚಂದ್ರಶೇಖರ :ಸಂ.ದಲಿತ ಅಧ್ಯಯನ. ದಲಿತರ ಚಳುವಳಿಗಳು ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಇತರ ಚಳುವಳಿಗಳು,ಪ್ರೋ.ಲಕ್ಷ್ಮಣ ತೆಲಗಾವಿ. ಡಾ।ಬಿ.ಎಂ.ಪುಟ್ಟಣ್ಣಯ್ಯ ಟಿ.ಆರ್.ಚಂದ್ರಶೇಖರರವರಲೇಖನದಿಂದ ಪುಟ 396

58) ಡಾ। ಬಿ.ಎಂ.ಪುಟ್ಟಣ್ಣಯ್ಯನವರ ಲೇಖನ : ಅಂಬೇಡ್ಕರ್ : ಸ್ಫೂರ್ತಿಯಿಂದ ಪೂಜೆಯ ಕಡೆಗೆ -ಸಂವಾದ ಏಪ್ರಿಲ್ 2006 ಪುಟ 6

59) ಸಂ : ಡಾ। ಪಿ. ಮಹಾದೇವಯ್ಯ :ದಲಿತರು ಮತ್ತು ಪರ್ಯಾಯ ರಾಜಕಾರಣ ದಲಿತರು ಮತ್ತು ಪರ್ಯಾಯ ರಾಜಕಾರಣದ ಮುಂದಿರುವ ಸವಾಲುಗಳು, ಮಾಧವ ಪೆರಾಜೆಯವರ ಲೇಖನ ಪುಟ 154

60) ಡಾ. ಬಿ.ಎಂ.ಪುಟ್ಟಣ್ಣಯ್ಯ ನವರ ಲೇಖನ : ಅಂಬೇಡ್ಕರ್: ಸ್ಫೂರ್ತಿಯಿಂದ ಪೂಜೆಯ ಕಡೆಗೆ -ಸಂವಾದ ಏಪ್ರಿಲ್ 2006 ಪುಟ 8

61) ಅದೇ ಲೇಖನ ಪುಟ 9

62) ನಾರಾಯಣ ತಿರುಮಲಾಪುರ ರವರ ಲೇಖನ ದಲಿತ ಮೂಲಭೂತವಾದ : ಒಂದು ಚಿಂತನೆ ಶೋಷಿತ ಗರ್ಭದಿಂದ ನವಶೋಷಣೆಯ ಜೀವಾಂಕುರ :ಸಂವಾದ ವಿಶೇಷಾಂಕ :ಜನವರಿ 2004 ಪುಟ 112

63) ಅದೇ ಲೇಖನ ಪುಟ 114

64) ಅದೇ ಲೇಖನ ಪುಟ 114

# # # # #

ಅಧ್ಯಾಯ - 6

ಸಮಾರೋಪ ಹಾಗೂ ಮುನ್ನೋಟಗಳು

6.1 ಧಾರ್ಮಿಕ ಅನುಸಂಧಾನ ಬೌದ್ಧಧರ್ಮ ವೀರಶೈವಧರ್ಮ

6.2 ಬೌದ್ಧ ವೀರಶೈವರ ಸಾಮಾಜಿಕ ಸಾಮರಸ್ಯ.

6.3 ಸಮಾಜದ ಪ್ರಗತಿ ಸಾಮಾಜಿಕ-ಸಾಂಸ್ಕೃತಿಕ ಸವಾಲುಗಳು.

6.4 ಅಧ್ಯಯನದ ಮುನ್ನೋಟಗಳು ಮತ್ತು ಹೊಸ ಸಮನ್ವಯ ದೃಷ್ಟಿಕೋನದ ಅಗತ್ಯಗಳು.

ಅಧ್ಯಾಯ - ಆರು.

ಸಮಾರೋಪ ಹಾಗೂ ಮುನ್ನೋಟಗಳು

6.1 ಧಾರ್ಮಿಕ ಅನುಸಂಧಾನ ಬೌದ್ಧಧರ್ಮ : ವೀರಶೈವಧರ್ಮ

ಜಗತ್ತಿನ ಎಲ್ಲಾ ಧರ್ಮಗಳ ಮೂಲ ತತ್ವ ಸಮಾನತೆ ಮತ್ತು ಭ್ರಾತೃತ್ವ, ಮನುಷ್ಯನಿಗಾಗಿ ಧರ್ಮವಿದೆ. ಮನುಷ್ಯ ತನ್ನ ಒಳಿತಿಗಾಗಿ ಧರ್ಮವನ್ನು ಅವಲಂಬಿಸುತ್ತಾನೆ ಹಾಗೂ ಧಾರ್ಮಿಕಆಚರಣೆಗಳು ಬದ್ಧತೆಗಾಗಿ ಸೃಷ್ಟಿಸಿಕೊಂಡ ಅನುಸರಣಾ ವಿಧಾನಗಳು. ಆದರೆ, ಕೆಲವು ಧರ್ಮಗಳಲ್ಲಿ ಅವೇ ಪ್ರಧಾನವಾಗಿ ಮನುಷ್ಯನ ವಿಚಾರ ಸ್ವಾತಂತ್ರ್ಯಕ್ಕೆ ಕಂಟಕವಾಗಿ ಸಮಾಜವನ್ನು ಗೊಂದಲಕ್ಕೀಡು ಮಾಡಿವೆ. ಭಾರತದ ಸಂದರ್ಭದಲ್ಲಂತೂ ಧರ್ಮ ಅಸಂಖ್ಯಾತ ದೇವರುಗಳ ಹಿಡಿತದಲ್ಲಿ ಸಿಕ್ಕಿ ಅಯೋಮಯವಾಗಿದೆ. ಹಿಂದೂ ಎಂದು ಕರೆದುಕೊಂಡ ಜನ ಒಬ್ಬರಿಗೊಬ್ಬರು ಕೊಡು-ಕೊಳ್ಳದೆ ಒಂದಾಗದ ಪರಿಸ್ಥಿತಿ ವರ್ಣಾಶ್ರಮ ಮತ್ತು ಜಾತಿಪದ್ಧತಿಗಳಿಂದ ನಿರ್ಮಾಣವಾಗಿದೆ. ಒಟ್ಟಿಗೆ ಉಣು-ಉಡುವುದಿರಲಿ ತಾವು ಮೇಲು, ಇನ್ನೊಬ್ಬ ಕೀಳು ಎಂಬ ಕಲ್ಪಿತ ಶ್ರೇಣಿಕರಣದಿಂದ ಒಬ್ಬರು ಇನ್ನೊಬ್ಬರನ್ನು ಅವಮಾನಿಸುವುದು ನಿರಂತರವಾಗಿ ನಡೆದಿದೆ. ಇದು ಸ್ವಜಾತಿ ಪ್ರೇಮ, ಅನೈತಿಕತೆ, ಭ್ರಷ್ಟಾಚಾರ ಮಿಕ್ಕೆಲ್ಲಾ ಸಾಮಾಜಿಕ ರೋಗಗಳಿಗೆ ಎಡೆ ಮಾಡಿಕೊಟ್ಟಿದೆ ಹಾಗೂ ಈ ದೇಶವನ್ನು ಹಿಂದುಳಿದ ಸ್ಥಿತಿಯಲ್ಲೇ ನಿಲ್ಲಿಸಿದೆ. ಇಂತಹ ಸಂದಿಗ್ಧಸ್ಥಿತಿಯಲ್ಲಿ ಕೀಳು ಎನಿಸಿಕೊಂಡವರ ಗೋಳು ಹೇಳತೀರದಾಗಿದೆ. ಆದರಲ್ಲೂ ಅಸ್ಪೃಶ್ಯರ ಸ್ಥಿತಿ ಅವಮಾನ ಮತ್ತು ಹಸಿವುಗಳಿಂದ ಜರ್ಝರಿತವಾಗಿದೆ. ಇದಕ್ಕೆ ಪರಿಹಾರ ಬೌದ್ಧಧರ್ಮ ಹಾಗೂ ವೀರಶೈವಧರ್ಮಗಳ ಕಡೆಗೆ ಹೊರಡುವುದು.

ಬ್ರಾಹ್ಮಣವಾದದ ಕುತಂತ್ರದಿಂದಾಗಿ, ಬ್ರಾಹ್ಮಣಶಾಹಿಯನ್ನು ಪುರಸ್ಕರಿಸುವ ರಾಜರುಗಳು ಪ್ರಾಬಲ್ಯಕ್ಕೆ ಬಂದಿದ್ದರಿಂದ ಬೌದ್ಧಧರ್ಮ ಕ್ಷೀಣಾವಸ್ಥೆ ತಲುಪಿ ಮತ್ತೆ ಸಮಾಜದಲ್ಲಿ ಗೊಡ್ಡುಆಚರಣೆಗಳು, ಮೂಢನಂಬಿಕೆಗಳು ಬೆಳೆದು ಚಾತುರ್ವರ್ಣ ವ್ಯವಸ್ಥೆಯಲ್ಲಿ ದಲಿತರು ತಮ್ಮ ಮಾನವಹಕ್ಕುಗಳನ್ನು ಕಳೆದುಕೊಂಡು ಜೀವಿಸುವಂತಾಯಿತು. ಚಾತುರ್ವರ್ಣದ ಬುನಾದಿಯೇ ಕಾರಣವಾಗಿ ಮೇಲುಕೀಳೆಂಬ ತಾರತಮ್ಯ ಭಾವ ಸ್ಥಾಯಿಯಾಗಿ ಉಳಿಯಿತು. ಪ್ರತಿಶತ 85ರಷ್ಟಿರುವ ಶೂದ್ರರೆಂಬ ಬಹುಸಂಖ್ಯಾತ ಚಾತುರ್ವರ್ಣ ಸಂಜಾತರು ಮತ್ತೆ ಅಂಧಕಾರಕ್ಕೆ ಜಾರಿದರು. ಅವಿದ್ಯೆ, ಅವೈಚಾರಿಕತೆಯ ಮೃತ್ಯುಕೂಪದಲ್ಲಿಯೂ ಸಹ ಈ ವರ್ಣ ಮತ್ತೆಮತ್ತೆ ಒಡೆಯುತ್ತಾ ಮೇಲು ಕೀಳುಗಳನ್ನು ದೈವಾಜ್ಞೆಯೆಂಬಂತೆ ಸಮರ್ಥಿಸುತ್ತಾ, ಕಿಲಾಡಿ ಮೇಲ್ಜಾತಿ ಜನರ ಸೇವೆಗೈಯುತ್ತಾ ಇದ್ದು ಬಿಟ್ಟಿತು.[1]

12ನೇ ಶತಮಾನದಲ್ಲಿ ಬುದ್ಧ ಬೆಳಕನ್ನು ಅನುಸರಿಸಿಯೇ ಸಮಾನತೆಯನ್ನು ಜಪಿಸುತ್ತಾ ಮೂರ್ತಗೊಂಡ ಬಸವಣ್ಣನೆಂಬ ಸಮಾನತೆಯ ಹರಿಕಾರನನ್ನು ಸಹ ಇದೇ ಜಾತಿಪ್ರೇಮಿ ಮನುಷ್ಯ ವಿರೋಧಿ ಶಕ್ತಿಗಳು ಆಪೋಶನ ತೆಗೆದುಕೊಂಡವು. ಸುಮಾರು 8 ಶತಮಾನಗಳ ಕಾಲ ಬಸವಚಳುವಳಿಯ ಕುರುಹುಗಳನ್ನು ಹೂತು ಹಾಕಿದ್ದವು. ಈ ಸಂದರ್ಭದಲ್ಲಿ ಆಧುನಿಕ ಯುಗದ ಅವತಾರ ಪುರುಷನಂತೆ ಕಾಣಿಸಿಕೊಂಡವರು ಬಾಬಾಸಾಹೇಬ ಅಂಬೇಡ್ಕರ್. ಬುದ್ಧ, ಸಂತ, ಕಬೀರರ ಪ್ರಭಾವದಿಂದಾಗಿ ಸ್ಪಷ್ಟ

ಸಮಾಜದ ಕನಸು ಕಾಣುತ್ತಿದ್ದು, ಅಂಬೇಡ್ಕರ್ ದಲಿತ ವಿಮೋಚನೆಗಾಗಿ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ವಿಮೋಚನೆಗೆ ನೀಲನಕ್ಷೆಯನ್ನು ತಯಾರಿಸಿದರು.

ಡಾ. ಯು.ಆರ್. ಅನಂತಮೂರ್ತಿಯವರು ತುಮಕೂರಿನಲ್ಲಿ ನಡೆದ 69ನೇಯ ಸಮ್ಮೇಳನದ ಅಧ್ಯಕ್ಷರಾಗಿ ಇವತ್ತಿನ ಸಂದರ್ಭಕ್ಕೆ ಮೂರು ಹಸಿವುಗಳನ್ನು ಚರ್ಚಿಸಿದ್ದಾರೆ. ಸಮಾನತೆಯ ಹಸಿವು ಈ ವರೆಗಿನ ಎಲ್ಲ ಪ್ರತಿರೋಧವನ್ನು ಒಳಗೊಂಡು, ಬಂಡಾಯ ದಲಿತ ಇತ್ಯಾದಿ ಸಾಹಿತ್ಯ ಚಳುವಳಿಗಳಲ್ಲಿ ಕಾಣಿಸಿಕೊಂಡ ಹಸಿವು ಇದಾಗಿದೆ. ಎರಡನೆಯದಾಗಿ ಆಧ್ಯಾತ್ಮಿಕ ಹಸಿವು ವಚನಕಾರರು, ಬೇಂದ್ರೆ, ಕುವೆಂಪು, ಪು.ತಿ.ನ., ಶಿಶುನಾಳ ಶರೀಫರಾದಿಯಾಗಿ ಮಹದೇಶ್ವರ ಮಂಟೆಸ್ವಾಮಿ, ಜುಂಜಪ್ಪ ಕಾವ್ಯಗಳಲ್ಲಿ ಕನ್ನಡ ದೇಶೀ ಶಕ್ತಿಯಿಂದ ವಿಶ್ವಾತ್ಮಕವಾಗುವ ದರ್ಶನಗಳಾಗಿವೆ. ಮೂರನೆಯದಾಗಿ ಆಧುನಿಕವಾಗಬೇಕೆಂಬ ಹಸಿವು ಕಳೆದ ಶತಮಾನದ ಮೊದಲಿಗೆ ಮತ್ತು ಸ್ವಾತಂತ್ರ್ಯದ ನಂತರದಲ್ಲಿ ಸಮಾನವಾದ ಹಕ್ಕು ಬಾಧ್ಯತೆಗಳಿಗೆ ತೆರೆದುಕೊಂಡು ಮನಸ್ಸುಗಳು, ಇಂಗ್ಲೀಷ್ ಕಲಿಕೆಯಿಂದ ವೈಚಾರಿಕ, ವೈಜ್ಞಾನಿಕ ಮತ್ತು ತಂತ್ರಜ್ಞಾನದಿಂದ ವಿಶ್ವಾತ್ಮಕವಾಗುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡದ್ದು. ಈ ಹಸಿವುಗಳ ಜೊತೆಗೆ ಜಾಗತೀಕರಣದ ಪ್ರಕ್ರಿಯೆಯಲ್ಲಿ ಅಸ್ಮಿತೆಯನ್ನು ಪುನರ್ ಸ್ಥಾಪಿಸಿಕೊಳ್ಳುವ ಹೋರಾಟದಲ್ಲಿ ತೊಡಗಿದ್ದೇವೆ.[2] ಈ ನೆಲೆಯಲ್ಲಿ ಬುದ್ಧ, ಬಸವ, ಅಂಬೇಡ್ಕರ್ ವಿಚಾರಗಳು ಸಹಿತ ಈ ಮೂರು ಹಸಿವುಗಳನ್ನು ನೀಗಿಸುವಲ್ಲಿ ಸಹಕಾರಿಯಾಗಿವೆ. ಇಂತಹ ವೈಚಾರಿಕ ಕಾಲಘಟ್ಟದಲ್ಲಿ ಈ ಮಹನೀಯರು ಹೇಗೆ ಇಂದಿನ ಚಳುವಳಿಗಳಿಗೆ ಸ್ಫೂರ್ತಿಯಾಗಬಲ್ಲರು, ಶೋಷಿತರ ಇವತ್ತಿನ ಬೇಡಿಕೆಗಳೇನು? ಅವುಗಳಿಗೆ ಈ ಮೂವರು ನೀಡಿದ ಕೊಡುಗೆಗಳನ್ನು ವಿಶ್ಲೇಷಿಸುವುದು ಕೂಡ ಮಹತ್ವದ ಅಂಶವಾಗಿದೆ. ನಮ್ಮೆಲ್ಲ ಆಧುನಿಕ ಚಳುವಳಿಗಳಿಗೆ ಸ್ಫೂರ್ತಿಯಾಗಿ ಚೇತನವಾಗಿ ನಿಲ್ಲುವವರು ಬುದ್ಧ, ಬಸವ, ಅಂಬೇಡ್ಕರ್‌ರು. ಅವರ ವಿಚಾರಗಳು ಇಂದು ಕೂಡ ಕನ್ನಡದ ಬದುಕಿಗೆ ಬೆಳಕಾಗಿವೆ.

ಬುದ್ಧನ ದಾರ್ಶನಿಕತೆ ಬಹಳ ಮುಖ್ಯವಾಗಿ ಲೌಕಿಕವಾದಿಯಾದುದು. ಈ ನೆಲದ ಮೇಲೆ ನಿತ್ಯದಲ್ಲಿ ಜಾರಿಯಲ್ಲಿರುವ ಸಂಕಟ, ದುಃಖ, ಲೋಭ, ಮಾತ್ಸರ್ಯ ಮುಂತಾದವುಗಳನ್ನು ಮನುಷ್ಯ ತನ್ನ ಅಂತರಂಗ ಚಿಂತನೆಯ ಮುಖಾಂತರ ಸರಿಪಡಿಸಿಕೊಳ್ಳದ ಹೊರತು ಬದುಕಿನಲ್ಲಿ ಶಾಂತಿ ಹಾಗೂ ನೆಮ್ಮದಿಯನ್ನು ಪಡೆಯಲು ಸಾಧ್ಯವಿಲ್ಲ ಎಂಬ ಮನೋಸಂಸ್ಕಾರಮಾರ್ಗವನ್ನು ಅದು ಮುಖ್ಯವಾಗಿ ನಮ್ಮ ಮುಂದಿಟ್ಟಿದೆ. ಅಂತರಂಗ ಶುದ್ಧಿಯು ಬಹಿರಂಗ ಶುದ್ಧಿಯಾಗಿ ಪ್ರವಹಿಸಬೇಕೆಂಬ ಬಸವಣ್ಣನವರ ಚಿಂತನೆ ಬುದ್ಧನೂ ಪ್ರತಿಪಾದಿಸಿದ ಮಾರ್ಗದಲ್ಲಿ ಒಂದು ಮುಖ್ಯವಾದ ಅಂಶ. ಬುದ್ಧನ ದಾರ್ಶನಿಕ ಚಿಂತನೆಗಳು ಮಾನವ ಬದುಕಿನ ಅಂತರಂಗದಲ್ಲಿ ಎಂತಹ ಬೆಳಕಿನ ಹಣತೆಯನ್ನು ಹಚ್ಚಬಲ್ಲವು ಎಂಬುದು ಬಹಳ ಮಹತ್ವದ ಪ್ರಶ್ನೆ. ತಾನು ಬೌದ್ಧಮತಾವಲಂಬಿಯಾಗುವುದರ ಅವಶ್ಯಕತೆ ಕುರಿತು ಅಂಬೇಡ್ಕರ್ ಹೀಗೆ ಹೇಳಿದ್ದರೆಂಬ ಉಲ್ಲೇಖಗಳಿವೆ. ನಾನು ಬೇಕಾದರೆ ಧರ್ಮವೊಂದರ ಅನುಯಾಯಿಯಾಗದೇ ಜೀವಿಸಬಲ್ಲೆ. ಆದರೆ ಸಾಮಾನ್ಯ ಜನಸಮುದಾಯ ಮಾತ್ರ ಧರ್ಮವೊಂದರ ಆಶ್ರಯವಿಲ್ಲದೇ ಬದುಕಲಾಗುವುದಿಲ್ಲ. ಹೀಗಿರುವಾಗ ಅಂತಹ ದಮನಿತ ಜನಸಮುದಾಯಗಳಿಗೆ ಸಾಂತ್ವನ ನೀಡಬಲ್ಲ, ಬೆಳಕು ತೋರಿಸಬಲ್ಲ ಧರ್ಮವೊಂದನ್ನು ಅನುಸರಿಸುವಂತೆ ಸೂಚಿಸಲೇಬೇಕಾಗುತ್ತದೆ. ನನ್ನ ಪ್ರಕಾರ ಹಾಗೆ ಬೆಳಕು ತೋರಿಸಬಲ್ಲ ಧರ್ಮ ಬೌದ್ಧಧರ್ಮ. ಪ್ರಜ್ಞಾಪೂರ್ವಕವಾಗಿ ನಾನು ಈ ಆಯ್ಕೆ ಮಾಡುತ್ತಿದ್ದೇನೆ.[3] ಅತ್ಯಂತ ಪ್ರಖರ ವಿಚಾರವಾದಿಯಾಗಿದ್ದ ಅಂಬೇಡ್ಕರ್ ಅವರಿಂದ ಪ್ರಜ್ಞಾಪೂರ್ವಕವಾಗಿ ಆಯ್ಕೆಯಾದ ಬೌದ್ಧಧರ್ಮ ಹಾಗೆ

ಆಯ್ಕೆಗೊಳ್ಳುವುದಕ್ಕೆ ಮುಖ್ಯವಾದ ಕಾರಣ ಮಾನವ ಘನತೆಯನ್ನು ಎತ್ತಿ ಹಿಡಿದ ದಾರ್ಶನಿಕತೆಯಿಂದ ಕೂಡಿದ ಬುದ್ಧನ ಬೋಧೆ. ಆ ದಾರ್ಶನಿಕ ಬೆಳಕು ನಮ್ಮ ಕತ್ತಲನ್ನು ಬೆಳಗಬಲ್ಲದು ಎಂಬ ನಂಬುಗೆ.

ವೈದಿಕಶಾಹಿಯ ಕುತಂತ್ರದಿಂದಾಗಿ ಈ ದೇಶದಲ್ಲಿ ಬೌದ್ಧಧರ್ಮ ಕ್ಷೀಣಾವಸ್ಥೆ ತಲುಪಿ ಮತ್ತೆ ಸಮಾಜದಲ್ಲಿ ಗೊಡ್ಡುಆಚರಣೆಗಳು, ಮೂಢನಂಬಿಕೆಗಳು ಬೆಳೆದವು. ಮತ್ತೆ ದಲಿತರ ಬದುಕು ಶೋಚನೀಯವಾದ ಸಂದರ್ಭದಲ್ಲಿ, 12ನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಜಗತ್ತಿನಲ್ಲಿಯೇ ತುಂಬಾ ವಿಶಿಷ್ಟವೆನ್ನಬಹುದಾದ ಸಮಾಜೋಧಾರ್ಮಿಕ ಚಳುವಳಿಯನ್ನು ಬಸವಣ್ಣನವರು ಪ್ರಾರಂಭಿಸಿದರು. ದಯವೇ ಧರ್ಮದ ಮೂಲವಯ್ಯ ಎಂಬ ಸರಳೀಕರಿಸಿದ ಧರ್ಮದ ವ್ಯಾಖ್ಯಾನ. ಸಂಸ್ಕೃತ ಭೂಯಿಷ್ಟ ಮಂತ್ರಗಳನ್ನು ಬಾಯಿಪಾಠ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದ ಪುರೋಹಿತ ವರ್ಗಕ್ಕೆ ಅಪಥ್ಯವಾಯಿತು. ಬಸವಣ್ಣನವರು ಕಮ್ಯೂನಿಸಂಗೂ ವಿಭಿನ್ನವಾದ ಆರ್ಥಿಕ ಸಮಾನತೆಯ, ಆದರೆ; ಜಾತಿ ಅಸಮಾನತೆ ನಿವಾರಣೆಯೇ ಪ್ರಧಾನವಾದ ಕಾರ್ಯತಂತ್ರಗಳನ್ನು ರೂಢಿಸಿ ದಲಿತರಿಗೂ ಸಮಾನತೆ ಒದಗಿಸಲು ಚಳುವಳಿ ಆರಂಭಿಸಿದರು. ಕರ್ನಾಟಕ ಭಾರತ ಅಷ್ಟೇ ಏಕೆ ಜಾಗತಿಕ ಚರಿತ್ರೆಯಲ್ಲಿ ವಿನೂತನವಾದ ಧಾರ್ಮಿಕ, ಸಾಂಸ್ಕೃತಿಯ ವಿಮೋಚನೆಯ ಕಾರ್ಯತಂತ್ರವಾಗಿದೆ. ಅಂತರ್ಜಾತೀಯ ವಿವಾಹ, ಕಾಯಕ ಗೌರವ, ದಾಸೋಹ ಪರಿಕಲ್ಪನೆಗಳು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಶೋಷಿತರನ್ನು ಜಾತಿ ಆಧಾರಿತ ದಬ್ಬಾಳಿಕೆ, ಅಮಾನುಷತೆ, ಹಿಂಸೆಗಳಿಂದ ಮುಕ್ತಗೊಳಿಸುವುದಾಗಿತ್ತು. ಆದರೆ ದುರದೃಷ್ಟಾವಶಾತ್ 12ನೇ ಶತಮಾನದ ಈ ಶರಣರ ಸಮಾಜೋಧಾರ್ಮಿಕ ಚಳುವಳಿ ತನ್ನ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ವಿಫಲವಾಗಿ ಕುಟೀಲಶಾಹಿಗಳ ಕಾರ್ಯ ತಂತ್ರಕ್ಕೆ ಬಲಿಯಾಗಿ, ಬಸವಣ್ಣನವರ ಧೀಡೀರ್ ನಿರ್ಗಮನದಿಂದ ನಿರೀಕ್ಷಿತ ಉದ್ದೇಶಗಳ ಸಾಧನೆಗೆ ಹಿನ್ನೆಡೆಯಾಯಿತು. ಧರ್ಮ-ಧರ್ಮಗಳಲ್ಲೇ ತಿಕ್ಕಾಟ ಪ್ರಾರಂಭವಾಗಿ ದಲಿತರ ವಿಮೋಚನಾ ಪ್ರಕ್ರಿಯೆಗೆ, ಜನಸಾಮಾನ್ಯರ ತುಡಿತಗಳಿಗೆ ಸ್ಥಾನ ಇಲ್ಲದೇ ಹೋಯಿತು. ಶೈವ, ಜೈನ, ವೈದಿಕರ ಘರ್ಷಣೆಗಳು ಹೆಚ್ಚಾಗಿ ಜಾತಿವ್ಯವಸ್ಥೆ ಸ್ಥಿರಗೊಂಡಿತು.

ಬಸವಣ್ಣ ಬಯಸಿದ ಸಮಾಜದ ಕನಸು ನುಚ್ಚುನೂರಾಗಿ ಕಾಯಕಗಳು ಬರುಬರುತ್ತಾ ಜಾತಿಗಳಾಗಿ ಪರಿವರ್ತಿತವಾದುವು. ವೀರಶೈವರಿಂದಲೂ ಜಾತೀಯತೆಯ ಆಚರಣೆಗಳು ನಡೆದು ಕೆಳವರ್ಗದ ಜನ ಮತ್ತೆ ಕೆಳಗೆ ನೂಕಲ್ಪಟ್ಟರು. ಹೀಗಾಗಿಯೇ ಬಸವಣ್ಣ ಸ್ಥಾಪಿಸಿದ ಧರ್ಮ ಪುರೋಹಿತಶಾಹಿ ಪ್ರಣೀತವಾದ, ಮಠಮಾನ್ಯರ ಗದ್ದುಗೆ ಕೆಳಗೆ ತಳ್ಳಲ್ಪಟ್ಟಿದನ್ನು ಪ್ರತಿಭಟಿಸಿಯೇ ಮಾತೆ ಮಹಾದೇವಿಯವರ ನೇತೃತ್ವದಲ್ಲಿ, ಬಸವ ಧರ್ಮ ಪರಿಕಲ್ಪನೆಯ ಪ್ರಗತಿಪರ ಲಿಂಗಾಯತ ಧರ್ಮ ಪ್ರಚಲಿತಕ್ಕೆ ಬಂದಿದೆ. ಹೀಗೆ ಪ್ರಚಲಿತಕ್ಕೆ ಬಂದ ಬಸವಧರ್ಮದ ಪರಿಕಲ್ಪನೆಯೊಂದಿಗೆ ಇಂದು ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ ಮತ್ತು ತಮಿಳುನಾಡುಗಳಲ್ಲಿ ಸಂಘಟನೆಗಳನ್ನು ಹೊಂದಿ ಇಂದಿನ ಸಂದರ್ಭದಲ್ಲಿ ಭಾರತೀಯ ಧರ್ಮಗಳ ಮಹಾಸಂಘ[4] (Federation of Indian Religions) ಸ್ಥಾಪಿಸಿ ಬೌದ್ಧಧರ್ಮವನ್ನು ಒಳಗೊಂಡು ಬಸವಣ್ಣನವರು ಪ್ರತಿಪಾದಿಸಿದ ಜಾತಿ ರಹಿತ, ವರ್ಗರಹಿತ ಸಮಾನತೆಯ ತತ್ವಗಳನ್ನು ಪ್ರಚಾರ ಮಾಡುತ್ತಿರುವುದನ್ನು ಕಾಣುತ್ತೇವೆ. ಆ ಮೂಲಕ ಎಲ್ಲ ವರ್ಗಗಳ ಬೆಂಬಲದೊಂದಿಗೆ ಸಮಾನತೆಯ ಸ್ಥಾಪನೆಗೆ ಪ್ರಯತ್ನಿಸುತ್ತಿರುವ ಪ್ರಯತ್ನಗಳನ್ನು ಗಮನಿಸಬಹುದಾಗಿದೆ.

ಸಮಾನತೆ, ಕಾಯಕ, ಸಾಮಾಜಿಕ ಮೌಲ್ಯಗಳು, ಸತ್ಯ, ಪ್ರಾಮಾಣಿಕತೆ, ನೀತಿ, ಅಹಿಂಸೆ, ನಿಸ್ವಾರ್ಥ ಜೀವನ, ಸೇವಾಭಾವ ಇತ್ಯಾದಿ, ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕುವುದು, ಜಾಗತಿಕ ಸಮುದಾಯದ ಪರಿಕಲ್ಪನೆ, ಸಂಗ್ರಹ ಪ್ರವೃತ್ತಿ ನಿಷೇಧ, ಸೇವೆ, ಸುಧಾರಣೆ ಮುಂತಾದ ಕ್ಷೇಮಾಭಿವೃದ್ಧಿಯ ತತ್ವಗಳನ್ನು ಬಸವ ಚಳುವಳಿ ಸಾರಿ ಹೇಳಿತು. ಬಸವಧರ್ಮ ಮಾನವಧರ್ಮವನ್ನಷ್ಟೇ ಅಲ್ಲ, ಜೀವಧರ್ಮವನ್ನೇ ಮುಂದಿಟ್ಟುಕೊಂಡು ಜನಕಲ್ಯಾಣ, ಪ್ರಾಣಿಗಳ ಕ್ಷೇಮವನ್ನು ಸಾಧಿಸಲು ತಮ್ಮ ವಚನದಂತೆ ನಡೆದರು. ಅವರ ಸಮಾನ ಕಾರ್ಯವೂ ಮಾನವೀಯ ದಯೆಯ ತತ್ವದ ಮೇಲೆ ಆಧರಿಸಿದೆ. (Social Work is based on humanitarian philosophy) ಬಸವಣ್ಣನ ವಚನವೊಂದರಲ್ಲಿ ಹೇಳಿರುವಂತೆ ದಯವಿಲ್ಲದ ಧರ್ಮವಾವುದಯ್ಯ, ದಯವಿರಬೇಕು ಸಕಲ ಪ್ರಾಣಿಗಳಲ್ಲಿ, ದಯವೇ ಧರ್ಮದ ಮೂಲವಯ್ಯ.

6.2 ಬೌದ್ಧ-ವೀರಶೈವಧರ್ಮಗಳ ಸಮನ್ವಯ, ಸಾಮ್ಯ ವ್ಯತ್ಯಾಸಗಳು :

ಮಹತ್ವಪೂರ್ಣ ಧರ್ಮಗಳಾದ ಬೌದ್ಧಧರ್ಮ ಮತ್ತು ಲಿಂಗಾಯತ (ವೀರಶೈವ) ಧರ್ಮಗಳ ಉದಯಕ್ಕೆ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆ ಹೆಚ್ಚು ಕಡಿಮೆ ಒಂದೇ ರೀತಿಯಾದರೂ ಅವುಗಳ ಧಾರ್ಮಿಕ ಸಿದ್ಧಾಂತ ಮತ್ತು ಆಚರಣೆಯಲ್ಲಿ ಗಣನೀಯ ಸಾಮ್ಯವಿರುವಂತೆ ಗಣನೀಯ ವ್ಯತ್ಯಾಸವೂ ಇದೆ.

1. ವೇದ ವಿರೋಧ : ಬೌದ್ಧ ಮತ್ತು ವೀರಶೈವ ಧರ್ಮಗಳೆರಡೂ ವೇದ ವಿರೋಧಿ ಅಂದರೆ, ವೇದಗಳಲ್ಲಿನ ಕರ್ಮಕಾಂಡವನ್ನು ವಿರೋಧಿಸುವ ಧರ್ಮಗಳು. ಆದರೆ ಅವೆರಡೂ ವೇದಗಳಲ್ಲಿನ ಜ್ಞಾನಕಾಂಡದಿಂದ ಪ್ರಭಾವಿತವಾದ ಧರ್ಮಗಳು. ಬುದ್ಧನು ಉಪನಿಷತ್ತುಗಳಿಂದ ಅನೇಕ ಉದಾತ್ತತತ್ವಗಳನ್ನು ಎರವಲು ಪಡೆದಿದ್ದಾನೆ. ಸನಾತನಿಗಳು ಹೇಳಿದುದನ್ನೇ ನಾನು ಒತ್ತಿ ಹೇಳುತ್ತಿದ್ದೇನೆ; ಸನಾತನಿಗಳು ನಡೆದ ಮಾರ್ಗವನ್ನೇ ನಾನು ಬೋಧಿಸುತ್ತಿದ್ದೇನೆ. ಆ ಮಾರ್ಗವಾಗಿ ನಾನೂ ಹೋಗಿದ್ದೇನೆ....(ಸಂಯುತ್ತ ನಿಕಾಯ) ಎಂದು ಹೇಳಿ ಅವನು ತನ್ನ ಧರ್ಮ ಹಿಂದೂಧರ್ಮದಿಂದ ಭಿನ್ನವಲ್ಲವೆಂದು ಸಾರಿದ. ಅದೇ ರೀತಿ ವೀರಶೈವರೂ ಸಹ ಉಪನಿಷತ್ತುಗಳಿಂದ ಭಾರೀ ಪ್ರಮಾಣದಲ್ಲಿ ಪ್ರಭಾವಿತರಾಗಿದ್ದಾರೆ. ವಚನಕಾರರು ಅಷ್ಟಾವರಣ ಪರಿಕಲ್ಪನೆಯನ್ನು (ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ, ಸೂರ್ಯ ಮತ್ತು ಚಂದ್ರ) ಎಂಬ ಎಂಟು ತತ್ವಗಳು ಪರಶಿವನ ಶರೀರವಾಗಿದೆ ಎಂಬ ಕಲ್ಪನೆಯನ್ನು ಪ್ರಾಯಶಃ ಶ್ವೇತಾಶ್ವತರ ಉಪನಿಷತ್ತಿನಿಂದ ಪಡೆದಿರಬಹುದು. ಅದೇ ರೀತಿ ವೀರಶೈವರ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತ, ಮೋಕ್ಷ ಸಿದ್ಧಾಂತ, ಸೃಷ್ಟಿ ಸಿದ್ಧಾಂತ ಮುಂತಾದ ಸಿದ್ಧಾಂತಗಳೂ ಉಪನಿಷತ್ತುಗಳಲ್ಲಿ ಸಿಕ್ಕುತ್ತವೆ. ಬೌದ್ಧರೂ, ವೀರಶೈವರೂ ನಮ್ಮ ದುಃಖಕ್ಕೆ ನಮ್ಮ ಅನಾದಿಯಾದ ಅವಿದ್ಯೆಯೇ ಕಾರಣವೆಂದೂ ಅದನ್ನು ನಿರ್ಮೂಲನೆ ಮಾಡಲು ಅರಿವು ಅಥವಾ ಪ್ರಜ್ಞೆಯನ್ನು (ಜ್ಞಾನವನ್ನು) ಪಡೆಯಬೇಕೆಂದೂ ಹೇಳುತ್ತಾರೆ. ಹೀಗೆ ತಮ್ಮ ಧರ್ಮಗಳಿಗೆ ಆಧಾರ ಸ್ತಂಭಗಳೆನಿಸುವ ಸಿದ್ಧಾಂತಗಳಲ್ಲಿ ಕೆಲವನ್ನು ಇಬ್ಬರೂ ಉಪನಿಷತ್ತುಗಳಿಂದಲೇ ಪಡೆದಿದ್ದಾರೆ.

ಬುದ್ಧ ವೇದದ ಕರ್ಮಕಾಂಡವನ್ನು ಅಲ್ಲಗಳೆಯುವುದಲ್ಲದೆ, ಸ್ಪಷ್ಟ ಮಾತುಗಳಲ್ಲಿ ಖಂಡಿಸಿದ್ದಾನೆ. ಕಾಮ್ಯಫಲಗಳನ್ನು ಪಡೆಯಲು ನನ್ನ ಕುಲದವರು ಪರಂಪರಾಗತವಾಗಿ ಮಾಡಿಕೊಂಡು ಬಂದಿರುವ ಯಜ್ಞ ಯಾಗಾದಿಗಳನ್ನೇ ಧರ್ಮವೆಂದು ತಿಳಿದು ನಾನೂ ಮಾಡಬೇಕು ಎಂದರೆ. ಅಂಥ ಯಜ್ಞಯಾಗಾದಿಗಳನ್ನು

ನಾನು ಮಾಡುವುದಿಲ್ಲ. ಏಕೆಂದರೆ, ಬೇರೆ ಜೀವಿಗಳಿಗೆ ದುಃಖವನ್ನುಂಟು ಮಾಡಿ ಪಡೆದ ಸುಖ ನನಗೆ ಇಷ್ಟವಾಗುವುದಿಲ್ಲ (ಅಶ್ವಘೋಷನ ಬುದ್ಧಚರಿತ, 11ನೇಯ ಅಧ್ಯಾಯ ಪುಟ 64)ಎಂದು ಬುದ್ಧ ಸ್ಪಷ್ಟ ಮಾತುಗಳಲ್ಲಿ ಹೇಳಿರುವುದು ಗಮನಾರ್ಹ. ಬುದ್ಧನು ವೈದಿಕಧರ್ಮದಲ್ಲಿ (ಕರ್ಮಕಾಂಡದಲ್ಲಿ) ಉಕ್ತವಾಗಿರುವ ಸ್ವರ್ಗಕಲ್ಪನೆಯನ್ನು ಹೀಗಳೆದಿದ್ದಾನೆ. ಯಾರಾದರೂ ಬುದ್ಧನ ಧರ್ಮದಲ್ಲಿ ಸನ್ಯಾಸ ಜೀವನ ನಡೆಸುವುದು ಸ್ವರ್ಗಲೋಕದಲ್ಲಿ ಪುನರ್ಜನ್ಮ ಪಡೆಯುವುದಕ್ಕಾಗಿಯೇ ಎಂದು ಕೇಳಿದರೆ ನೀವು ನಾಚಿಕೆ ಪಡಬೇಕು ಮತ್ತು ಅದನ್ನು ತೀವ್ರವಾಗಿ ಪ್ರತಿಭಟಿಸಬೇಕು ಎಂದು ಭಿಕ್ಷುಗಳಿಗೆ ಹೇಳುತ್ತಿದ್ದ ಬುದ್ಧನ ಮಾತಿನಲ್ಲಿ ದೇವಲೋಕ, ಸ್ವರ್ಗಲೋಕಗಳ ಅಸ್ತಿತ್ವದ ಬಗೆಗೂ ಅದರಲ್ಲಿ ಪಡೆಯಬಹುದೆಂದು ನಂಬಲಾಗಿದ್ದ ಐಹಿಕ ಸುಖದ ಬಗೆಗೂ ತಿರಸ್ಕಾರ ಎದ್ದು ಕಾಣುತ್ತದೆ. ಬುದ್ಧನಿಗೆ ವೇದಗಳಲ್ಲಿ ಕಂಡ ಮತ್ತೊಂದು ಮುಖ್ಯ ನ್ಯೂನ್ಯತೆಯೆಂದರೆ, ಅವು ಜನರ ದುಃಖ ನಿವಾರಣೆ ಮಾಡಲು ತೋರಿಸಿದ ಅಲಕ್ಷ್ಯ. ಜನರ ದುಃಖವನ್ನು ನಿವಾರಿಸುವಂಥ ಧರ್ಮವನ್ನು ಸ್ಥಾಪಿಸಬೇಕೆಂಬುದು ಅವನ ಪ್ರಥಮ ಉದ್ದೇಶವಾಗಿತ್ತು. ಈ ನಿಟ್ಟಿನಲ್ಲಿ ಅವನು ಹಠಯೋಗ, ಮುಂತಾದ ಅನೇಕ ಪ್ರಯೋಗಗಳನ್ನು ಮಾಡಿ ಅವುಗಳಲ್ಲಿ ಫಲ ಕಾಣದೆ, ಕೊನೆಗೆ ತನ್ನ ಆರ್ಯ ಅಷ್ಟಾಂಗಿಕ ಮಾರ್ಗವನ್ನು ಕಂಡುಹಿಡಿದನು.

ಬಸವಣ್ಣನ ವೀರಶೈವಧರ್ಮದಲ್ಲೂ ವಚನಕಾರರಲ್ಲಿ ವೇದವಿರೋಧ, ಆಗಮಗಳವಿರೋಧ ಸ್ಪಷ್ಟವಾಗಿ ಕಂಡುಬರುತ್ತದೆ. ವಚನಗಳ ಕೆಲ ಸಾಲುಗಳನ್ನು ನಾವಿಲ್ಲಿ ಅವಲೋಕಿಸಬಹುದಾಗಿದೆ.

1) ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ... ಆಗಮದ ಮೂಗ ಕೊಯಿವೆ.

2) ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ! ವೇದಘನವೆಂಬೆನೆ? ಪ್ರಾಣಿವಧೆ ಹೇಳುತ್ತಿದೆ.

3) ವೇದಂಗಳು ತಮತಮಗೆ ದೆಸೆದೆಸೆಗೆ ಬಾಯ ಬಿಟ್ಟವಯ್ಯ.

4) ವೇದಶಾಸ್ತ್ರದವರ ಹಿರಿಯರೆನ್ನಿ... ಯಾಗನಟ್ಟುವಿಗ ಪ್ರಾಣರು!

5) ಆಗಮ ಅನೃತದ ನುಡಿ.

6) ಆಗಮುಗಳೆಂಬುವು ಋಷಿಮುನಿಗಳ ಮರುಳಾಟ...(ಇತ್ಯಾದಿ)

ಈ ಉಕ್ತಿಗಳು ವೇದಗಳನ್ನು ಧಿಕ್ಕರಿಸಲು ಕೆಲವು ಕಾರಣಗಳಿವೆ. ಅವು ಜಾತಿಭೇದ ಬ್ರಾಹ್ಮಣ ಪಾರಮ್ಯವನ್ನು ಪ್ರತಿಪಾದಿಸುತ್ತವೆ ಮತ್ತು ವರ್ಣ ಸಂಕರವನ್ನು ವಿರೋಧಿಸುತ್ತವೆ. ಜಾತಿಭೇದದ ಸಮರ್ಥನೆ ಮತ್ತು ವರ್ಣಸಂಕರ ವಿರೋಧ ಎರಡೂ ಅವೈಚಾರಿಕ, ಅಸಮರ್ಥನೀಯ. ವೇದಗಳು ಪ್ರಾಣಿಬಲಿಯನ್ನೊಳಗೊಂಡ ಯಜ್ಞಯಾಗಾದಿಗಳನ್ನು ಅನುಮೋದಿಸುತ್ತವೆ. ದೈವಕ್ಕೂ, ಭಕ್ತನಿಗೂ ಮಧ್ಯೆ ಪುರೋಹಿತ ಅವಶ್ಯಕವೆಂದು ಸಾರುತ್ತದೆ. ಲಿಂಗಭೇದ ಮಾಡಿ ಸ್ತ್ರೀಯರು ಧರ್ಮಾಚರಣೆಗೆ ಅನರ್ಹವೆಂದು ದೂರವಿಡುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ವೀರಶೈವರು ಆವ ಕುಲವಾದರೇನು, ಶಿವಲಿಂಗವಿದ್ದವನೆ ಕುಲಜನು ಎಂದು ಹೇಳಿ ಜಾತಿ ತಾರತಮ್ಯವನ್ನು ವಿರೋಧಿಸಿದರು; ಅಲ್ಲದೆ, ಬುದ್ಧನಂತೆ ಅವರೂ ಅನೇಕ ಜನರನ್ನು ಜಾತಿಭೇದವಿಲ್ಲದೆ ತಮ್ಮ ಧರ್ಮಕ್ಕೆ (ಲಿಂಗದೀಕ್ಷೆಯ ಮೂಲಕ) ಸೇರಿಸಿಕೊಂಡರು. ಪ್ರಾಣಿವಧೆಯನ್ನೊಳಗೊಳ್ಳುವ ಯಜ್ಞಯಾಗಾದಿಗಳ ಬದಲು ಸಾತ್ವಿಕವಾದ, ಎಲ್ಲರೂ ಸುಲಭವಾಗಿ ಮಾಡಬಹುದಾದ ಇಷ್ಟಲಿಂಗಪೂಜೆಯನ್ನು ಬೋಧಿಸಿದರು. ನಮಗೆ ಹಸಿವಾದಾಗ ನಾವೇ ಹೇಗೆ ಊಟ ಮಾಡಬೇಕೋ ಹಾಗೆಯೇ ನಮಗೆ ಭಕ್ತಿ ತೋರಿಸಬೇಕೆನಿಸಿದಾಗ ನಾವೇ ಇಷ್ಟಲಿಂಗ ಪೂಜೆ ಮಾಡಬೇಕು. ಅಷ್ಟೇ ಹೊರತು, ದೇವಸ್ಥಾನಕ್ಕೆ ಹೋಗಿ ಪೂಜಾರಿಯ ಕೈಯಿಂದ ಪೂಜೆ ಮಾಡಿಸಬಾರದು ಎಂದು ಹೇಳಿ

ಭಕ್ತರಾಗಬಯಸುವರಿಗೆಲ್ಲ ಇಷ್ಟಲಿಂಗ ಪ್ರಧಾನ ಮಾಡಿದರು. ಹೆಂಗಸರೂ ಇಷ್ಟಲಿಂಗ ಪೂಜೆ ಮಾಡಲು ಅವಕಾಶ ಮಾಡಿಕೊಟ್ಟರು. ಅಂದರೆ ಧರ್ಮಾಚರಣೆ ಕೆಲವರ ಗುತ್ತಿಗೆಯಲ್ಲ ಎಂದು ವಾದಿಸಿ ಎಲ್ಲರಿಗೂ ಆದರಲ್ಲಿ ಸಕ್ರಿಯವಾಗಿ ಅವಕಾಶ ಮಾಡಿಕೊಟ್ಟರು.

2. ಮಾನವತಾವಾದ : ಬೌದ್ಧಧರ್ಮವು ಒಂದು ತೀವ್ರ ಮಾನವತಾವಾದೀ ಧರ್ಮ. ಮಾನವತಾವಾದೀ ಧರ್ಮಗಳಲ್ಲಿ ಮಾನವ ಮುಖ್ಯವೇ ಹೊರತು ದೈವವಲ್ಲ. ದೈವವು ಮಾನವನನ್ನು ನಿಯಂತ್ರಿಸುವುದಾದರೆ, ಮಾನವನಿಗೆ ಸ್ವಾತಂತ್ರ್ಯವಿಲ್ಲ ಅಥವಾ ಕಡಿಮೆ ಸ್ವಾತಂತ್ರ್ಯವಿದೆ ಎಂದರ್ಥ. ಸ್ವಾತಂತ್ರ್ಯವಿಲ್ಲದ ಅಥವಾ ಕಡಿಮೆ ಸ್ವಾತಂತ್ರ್ಯವಿರುವ, ಮಾನವನು ಆಚರಿಸುವ ಧರ್ಮವನ್ನು ಧರ್ಮವೆಂದೇಕೆ ಕರೆಯಬೇಕು? ಬೌದ್ಧರು ನಿರೀಶ್ವರವಾದಿಗಳಾದುದರಿಂದ, ಅವರು ಯಾವ ಕಾರಣಕ್ಕೂ ದೈವವನ್ನು ಅವಲಂಬಿಸಬೇಕಾಗಿಲ್ಲ. ಅವರ ಪ್ರಕಾರ, ಮಾನವ ಸ್ವನಿಯಂತ್ರಕ; ಅವನು ದೈವಕ್ಕೆ ಶರಣಾಗಲೂ ಬೇಕಿಲ್ಲ. ಅವನಿಗೆ ಯಾವ ದೈವದಿಂದಲೂ ತನ್ನ ಸಾಧನೆಯ ಯಾವ ಹಂತದಲ್ಲೂ ಅನುಗ್ರಹ ಬೇಕಿಲ್ಲ. ಬೌದ್ಧರ ನಿರೀಶ್ವರವಾದ ಎಷ್ಟು ಗಟ್ಟಿಯಾಗಿದೆಯೆಂದರೆ, ನಮ್ಮ ನಮ್ಮ ಕರ್ಮಗಳಿಗೆ ತಕ್ಕಂಥ ಫಲಗಳನ್ನು ನೀಡಲೂ ಸಹ ದೈವ ಬೇಕಾಗಿಲ್ಲ ಎನ್ನುತ್ತಾರೆ ಅವರು. ಬೌದ್ಧರು ನಮ್ಮ ಅಧ್ಯಾತ್ಮ ಸಾಧನೆಗೆ ಗುರುವಿನ ಅವಶ್ಯಕತೆಯೂ ಇಲ್ಲ ಎನ್ನುತ್ತಾರೆ. ಅವರ ಪ್ರಕಾರ ಪ್ರತಿಯೊಬ್ಬನೂ ತನಗೆ ತಾನೇ ದಾರಿದೀಪ (ಆತ್ಮದೀಪೋಭವ) ಬುದ್ಧಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ ಎಂದು ಪ್ರತಿ ಬೌದ್ಧನೂ ಪ್ರತಿದಿನ ಪ್ರಾರ್ಥಿಸಿದರೂ ಆ ಪ್ರಾರ್ಥನೆಗೆ ಬುದ್ಧನೂ ಸಂಘವೂ ಧರ್ಮವೂ ನನ್ನನ್ನು ಕಾಪಾಡಲಿ, ನನಗೆ ಮಾರ್ಗದರ್ಶನ ಮತ್ತು ಅನುಗ್ರಹ ನೀಡಲು ಎಂಬ ಅರ್ಥವಿಲ್ಲ. ಸಾಧಕನು ಬುದ್ಧನಿಗೆ ಪೂಜ್ಯ ಭಾವನೆ ತೋರಿಸುತ್ತಾನೆ, ಅವನಿಗೆ ಬುದ್ಧ ಒಬ್ಬ ಆದರ್ಶ ಪುರುಷ ಅಷ್ಟೆ.

ಆದರೆ, ವೀರಶೈವರೂ ಈಶ್ವರವಾದಿಗಳಾದುದರಿಂದ ಅವರು ಈಶ್ವರನಿಂದ ಅನುಗ್ರಹವನ್ನು ಬಯಸುತ್ತಾರೆ. ಅವರೂ ಒಂದು ರೀತಿಯ ಮಾನವವಾದಿಗಳೇ. ಏಕೆಂದರೆ, ಅವರು ಎಲ್ಲ ಹೊರೆಯನ್ನು ದೈವದ ಮೇಲೆ ಹೊರಿಸದೆ, ಮಾನವನಿಗಿರುವ ಸ್ವಾತಂತ್ರ್ಯ ಮತ್ತು ಕರ್ತೃತ್ವ ಶಕ್ತಿಗಳ ಸದುಪಯೋಗ ಮಾಡಿಕೊಳ್ಳಬೇಕು ಎನ್ನುತ್ತಾರೆ. ವೀರಶೈವರು ಪರಶಿವನ ಭಕ್ತಿಪ್ರಿಯರು. ವೀರಶೈವರು ಗುರುವಿಗೆ ಅತಿಯಾದ ಮಹತ್ವ ನೀಡುತ್ತಾರೆ. ಮಡಿಕೆಯ ಮಾಡುವರೆ ಮಣ್ಣೇ ಮೊದಲು, ತೊಡಿಗೆಯ ಮಾಡುವರೆ ಹೊನ್ನೇ ಮೊದಲು, ಶಿವಪಥವನರಿವರೆ ಗುರುಪಥವ ಮೊದಲು(ಬ.ವ.70) ಎಂದು ಹೇಳುವ ಮೂಲಕ ಅವರು ಗುರುವಿಗೆ ಪ್ರಥಮ ಪ್ರಾಶಸ್ತ್ಯ ನೀಡಿದ್ದಾರೆ. ಗುರುವು ಈಗಾಗಲೇ ಶಿವಪಥದಲ್ಲಿ ಕ್ರಮಿಸಿ, ಉಳಿದವರ ಆಧ್ಯಾತ್ಮಿಕದಾರಿಗೆ ದೀಪವಾಗಬಲ್ಲ ಸಾಧಕನು ಎಷ್ಟೇ ಸ್ವ-ಪ್ರಯತ್ನ ಮಾಡಿದರೂ ಗುರುವಿನ ಮಾರ್ಗದರ್ಶನ ಮತ್ತು ಅನುಗ್ರಹವಿಲ್ಲದಿದ್ದರೆ ಅವನ ಪ್ರಯತ್ನ ವ್ಯರ್ಥವಾಗುತ್ತದೆ. ಸಾಧಕನು ಲಿಂಗಕ್ಕೆ ಶರಣಾಗುವ ಮೊದಲು ಗುರುವಿಗೆ ಶರಣಾಗಬೇಕು.

3. ಪ್ರಪಂಚ ಪರಿಕಲ್ಪನೆ : ಬೌದ್ಧರು ಪ್ರಪಂಚವನ್ನು ಬಣ್ಣಿಸುವಾಗ ಹೆಚ್ಚಾಗಿ ಕಪ್ಪು ಬಣ್ಣವನ್ನೇ ಬಳಸುತ್ತಾರೆ. ಪ್ರಪಂಚದಲ್ಲಿ ಎಲ್ಲೆಲ್ಲೂ ದುಃಖವಿದೆ (ಸರ್ವಂ ದುಃಖಮಯಂ ಜಗತ್) ಎಂದು ಒತ್ತಿ ಹೇಳುವ ಮೂಲಕ ಅವರು ಪ್ರಪಂಚದ ಯಾವ ಮೂಲೆಯೂ ಜೀವನ ಯೋಗ್ಯಸ್ಥಳವಲ್ಲ, ಎಂಬ ಸಿದ್ಧಾಂತವನ್ನು ಸಾರಲು ಪ್ರಯತ್ನಿಸಿದ್ದಾರೆ. ಮಾನವ ದೇಹದ ಮಿತಿಗಳು, ನಮ್ಮ ದೈನಂದಿನ ಜೀವನದಲ್ಲಿ ಎದುರಿಸುವ ಅಸೂಯೆ,

ದ್ರೋಹ, ವಂಚನೆ, ಕಳ್ಳತನ, ಕೊಲೆ, ಯುದ್ಧ ಮುಂತಾದ ಅನೈತಿಕ ಕೃತ್ಯಗಳು ವೈಯಕ್ತಿಕ ಜೀವನದಲ್ಲಿ ಘಟಿಸುವ ಸೋಲು, ನಿರಾಶೆ, ಕೋಪ ಮುಂತಾದ ತಾಪಗಳು, ಭೌತಿಕ ಪ್ರಪಂಚದಲ್ಲಿ ಕಾಣುವ ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗ ಮುಂತಾದ ಪ್ರಾಕೃತಿಕ ವಿಕೋಪಗಳು ಇವೆಲ್ಲವನ್ನೂ ಬೌದ್ಧರೂ ಚಿತ್ರಿಸಿದ್ದಾರೆ ಎಂದರೆ ಜಗತ್ತು ದುಃಖದಿಂದ ತುಂಬಿದೆ ಎಂಬುದು ಅವರ ಅಭಿಪ್ರಾಯ.

ಪ್ರಪಂಚವು ಕ್ಷಣಿಕ, ಯಾವೊಂದು ವಸ್ತುವೂ ಸ್ಥಿರವಲ್ಲ. ಯಾವುದೇ ವಸ್ತುವಿಗೆ ಹುಟ್ಟು, ಸ್ಥಿತಿ ಮತ್ತು ನಾಶ ಎಂಬ ಮೂರು ಅವಸ್ಥೆಗಳಿರುತ್ತವೆ. ಹುಟ್ಟಿದ ಒಂದು ಕ್ಷಣ ಇರುತ್ತದೆ, ಮರುಕ್ಷಣವೇ ನಾಶವಾಗುತ್ತದೆ. ಹೀಗೆ ಕ್ಷಣಿಕವಾದ ವಸ್ತುವಿಗಾಗಿ ಆಶಿಸುವುದು ಮೂರ್ಖತನ ಎಂದು ತೋರಿಸುವುದೇ ಕ್ಷಣಿಕವಾದದ ಉದ್ದೇಶ. ನಮಗೆ ಬದಲಾಗದ ಅವಿನಾಶಿಯಾದ ಶಾಶ್ವತವಾದ ಆತ್ಮವಿದೆ ಎಂಬ ಮಾತೂ ಸಹ ಅವರಿಗೆ ಸ್ವೀಕಾರಾರ್ಹವಲ್ಲ. ಪ್ರತಿಯೊಂದು ವಸ್ತುವೂ ಅನೇಕ ಘಟಕಗಳ ಒಂದು ಸಂಘಾತ ಉದಾಹರಣೆಗೆ ನಾವು ಯಾವುದನ್ನು ರಥ ಎಂದು ಕರೆಯುತ್ತೇವೆಯೋ ಅದು ಗಾಲಿ, ಇರ್ಚಿ, ನೊಗ, ಆಸನ, ಧ್ವಜಸ್ತಂಭ ಮುಂತಾದ ಬಾಗಗಳಿಂದಾದು. ಗಾಲಿ. ಇರ್ಚಿ, ನೊಗ ಇತ್ಯಾದಿಗಳು ಇವೆಯೇ ಹೊರತು ರಥ ಎಂಬ ಮತ್ತೊಂದು ವಸ್ತುವಿಲ್ಲ. ರಥ ಎಂಬುದು ಯಾವುದಕ್ಕೂ ಅನ್ವಯಿಸದ ಒಂದು ಶೂನ್ಯ ನಾಮ. ಆದರೆ ನಾವು ಇಲ್ಲದ ರಥಕ್ಕಾಗಿ ಆಶೆ ಪಟ್ಟು ನಮ್ಮ ಅವಿದ್ಯೆಯನ್ನು ಪ್ರದರ್ಶಿಸುತ್ತೇವೆ. ಅದೇ ರೀತಿ ಮನುಷ್ಯನು ವೇದನೆಗಳು, ಸಂಜ್ಞೆಗಳು, ಸಂಸ್ಕಾರಗಳು ಮುಂತಾದ ಅನೇಕ ಘಟಕಗಳಿಂದಾದ ಒಂದು ಸಂಘಾತ. ಇವುಗಳಲ್ಲಿ ಪ್ರತಿಯೊಂದು ಸತತ ಬದಲಾವಣೆಗೆ ಒಳಪಟ್ಟಿದೆ. ಅಲ್ಲದೆ ಶಾಶ್ವತವಾದ ಆತ್ಮ ಎಂಬುದಿಲ್ಲ. ಮಹಾಯಾನಬೌದ್ಧರು ವಾಸ್ತವವಾಗಿ ಪ್ರಪಂಚವೇ ಇಲ್ಲ. ಪ್ರಪಂಚವು ಕನಸಿನ ವಸ್ತುಗಳಂತೆ ಕೇವಲ ತೋರಿಕೆ; ಕನಸಿನ ವಸ್ತುಗಳಿಗೆ ಹಾತೊರೆಯುವುದು ಹೇಗೆ ಮೂರ್ಖತನದ ಲಕ್ಷಣವೋ ಹಾಗೆ ಇಲ್ಲದ ಪ್ರಪಂಚದ ವಸ್ತುಗಳಿಗೆ ಹಾತೊರೆಯುವುದೂ ಅವಿದ್ಯೆಯ ಲಕ್ಷಣ ಎನ್ನುತ್ತಾರೆ. ಒಟ್ಟಿನಲ್ಲಿ ಬೌದ್ಧರು ಪ್ರಪಂಚದ ಬಗೆಗೆ ಹೇಯ ಭಾವನೆ ಬರುವಂತೆ ವರ್ಣಿಸಿದ್ದಾರೆ.

ವೀರಶೈವರ ಪ್ರಕಾರ ಜಗತ್ತು ಭ್ರಮೆಯೂ ಅಲ್ಲ, ಹೇಯವೂ ಅಲ್ಲ, ಶಿವ ಜಗವಾಗಲೂ ಬಲ್ಲ, ಜಗವಾಗದಿರಲು ಬಲ್ಲ ಎಂದು ಹೇಳುವ ಮೂಲಕ ಅವರು ಶಿವ ಜಗವಾಗಿದ್ದಾನೆಂದ ಮೇಲೆ ಒಳ್ಳೆಯವನಾದ ಪರಶಿವ ಕೆಟ್ಟ ಜಗತ್ತಾಗಲು ಅಥವಾ ಬೇಕೆಂದೇ ಇಲ್ಲದ ಜಗತ್ತು ಇದೆಯೆಂಬ ಭ್ರಮೆ ಮೂಡಿಸಲು ಸಾಧ್ಯವಿಲ್ಲ ಎಂದು ಮಾರ್ಮಿಕವಾಗಿ ಸಾರಿದ್ದಾರೆ.

4. ನಿರ್ವಾಣ ಪರಿಕಲ್ಪನೆ : ಬೌದ್ಧರೂ ವೀರಶೈವರೂ ನಿರ್ವಾಣವನ್ನು ಅತ್ಯಂತ ಹೆಚ್ಚಿನ ಮೌಲ್ಯ ಎಂದು ಪರಿಗಣಿಸಿದರೂ ಅವರ ನಿರ್ವಾಣ ಪರಿಕಲ್ಪನೆಗಳಲ್ಲಿ ಅಗಾಧ ವ್ಯತ್ಯಾಸವಿದೆ. ಹೀನಯಾನ ಬೌದ್ಧರ ಪ್ರಕಾರ, ದುಃಖವು ನಿರ್ವಾಣ ಪಡೆದವರಿಗಷ್ಟೇ ಕೊನೆಗೊಳ್ಳುತ್ತದೆ. ಆದರೆ ಇಲ್ಲಿ ಒಂದು ಸಮಸ್ಯೆ ಉದ್ಭವಿಸುತ್ತದೆ. ನಿರ್ವಾಣವೆಂದರೆ ಕೇವಲ ದುಃಖವಿಲ್ಲದ ಒಂದು ಅವಸ್ಥೆಯೋ ಅಥವಾ ಇದರ ಜೊತೆಗೆ ಏನನ್ನಾದರೂ ಗಳಿಸಲಾಗುತ್ತದೆಯೋ? ಇದಕ್ಕೆ ಅವರು ಒಂದು ಸ್ಪಷ್ಟ ಉತ್ತರವನ್ನು ಕೊಡುವುದಿಲ್ಲ. ಬುದ್ಧನಂತೂ ಇಂಥ ಪ್ರಶ್ನೆಗಳನ್ನು ಚರ್ಚಿಸಲು ನಿರಾಕರಿಸಿದ. ಆದರೂ ಹೀನಯಾನ ಬೌದ್ಧರು ನಿರ್ವಾಣವನ್ನು ನಿಷೇಧಾತ್ಮಕ ಶಬ್ದಗಳಲ್ಲಿ ವರ್ಣಿಸುತ್ತಾರೆ. ಅಂದರೆ ಅವರ ಪ್ರಕಾರ ನಿರ್ವಾಣವು ಆಶೆಗಳಿಲ್ಲದ. ಕರ್ಮಗಳಿಲ್ಲದ, ಅವಿದ್ಯೆಯಿಲ್ಲದ, ದುಃಖವಿಲ್ಲದ ಒಂದು ಸ್ಥಿತಿ. ಇದನ್ನು ಸ್ಪಷಪಡಿಸಲು ಅವರು ಎಣ್ಣೆ, ಬತ್ತಿ ಶೀರಿ ಹೋದರೆ

ಹೇಗೆ ದೀಪ ಆರಿ ಹೋಗುತ್ತದೆಯೋ ಹಾಗೆ ಅವಿದ್ಯೆ, ಆಶೆ, ಕರ್ಮ, ದುಃಖ ಇತ್ಯಾದಿಗಳೂ ತೀರಿದರೆ, ನಮ್ಮ ಬಂಧನ ತೀರಿ ನಿರ್ವಾಣ ಉಂಟಾಗುತ್ತದೆ ಎನ್ನುತ್ತಾರೆ. ಅಥವಾ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಭವಬಂಧನ ಎಂಬ ಬೆಂಕಿ ಆರುವುದೇ ನಿರ್ವಾಣ. ಮಹಾಯಾನ ಬೌದ್ಧರೂ ಸಹ ನಿರ್ವಾಣವನ್ನು ಅನಿರ್ವಚನೀಯ, ಶೂನ್ಯ, ಅನುತ್ಪನ್ನ, ಅನಿರುದ್ಧ ಎಂದು ನಿಷೇಧಾತ್ಮಕ ಶಬ್ದಗಳಲ್ಲಿ ವರ್ಣಿಸಿದರೂ ಪರಮಶಾಂತಿ, ಪಾರಮಾರ್ಥಿಕ ಸತ್ಯ ಎಂದು ಭಾವನಾತ್ಮಕವಾಗಿಯೂ ವರ್ಣಿಸಿದ್ದಾರೆ.

ಬೌದ್ಧರ ನಿರೀಶ್ವರವಾದದ ನೆರಳು ಅವರ ನಿರ್ವಾಣ ಕಲ್ಪನೆಯ ಮೇಲೆ ಬಹಳ ಪರಿಣಾಮಕಾರಿಯಾಗಿ ಬಿದ್ದಿದೆ. ಹೀನಯಾನ ಮತ್ತು ಮಹಾಯಾನ ಬೌದ್ಧರಿಬ್ಬರ ಪ್ರಕಾರವೂ ನಿರ್ವಾಣ ಪಡೆದವನ ಆತ್ಮಬ್ರಹ್ಮ ವಾಗುವುದಿಲ್ಲ. ಬ್ರಹ್ಮನಲ್ಲಿ ಸೇರುವುದಿಲ್ಲ ಅಥವಾ ಅನಂತ ಕಾಲದವರೆಗೆ ಬ್ರಹ್ಮನ ಪಾದಸೇವೆ ಮಾಡುತ್ತ ಅವನ ಸಾನಿಧ್ಯದಲ್ಲಿರುವುದಿಲ್ಲ. ಒಟ್ಟಿನಲ್ಲಿ ನಿರ್ವಾಣ ಪರಿಕಲ್ಪನೆಯ ಜೊತೆಗೆ ಅವರು ಯಾವುದೇ ರೀತಿಯ ಪರಮಾತ್ಮನನ್ನು ಜೋಡಿಸುವುದಿಲ್ಲ.

ಲಿಂಗಾಯತರು ಜೀವಾತ್ಮವು (ಅಂಗವು) ಮೂಲದಲ್ಲಿ ಲಿಂಗದ ಭಾಗವಾಗಿತ್ತು, ಭವಾಂತರದಲ್ಲಿ ಮನುಷ್ಯನು ಅದನ್ನು ಮರೆತು ತಾನು ಲಿಂಗದಿಂದ ಪ್ರತ್ಯೇಕವೆಂದು ತಪ್ಪು ತಿಳಿದು ಸ್ವಾರ್ಥಕಾಮನೆಗಳಿಂದ ಕರ್ಮಗಳನ್ನು ಮಾಡುತ್ತ ಸಂಸ್ಕಾರದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ ಎಂದು ನಂಬುತ್ತಾರೆ. ಅಂಗವು ಮೊದಲಿನಂತೆ ಲಿಂಗದಲ್ಲಿ ಕೂಡಿಕೊಳ್ಳುವುದೇ (ಲಿಂಗಾಂಗ ಸಾಮರಸ್ಯವೇ) ಸಂಸಾರ ಬಂಧನದಿಂದ ಬಿಡುಗಡೆ ಹೊಂದುವ ಮಾರ್ಗ. ಪರಶಿವನ ಅಸ್ತಿತ್ವದಲ್ಲಿ ನಂಬಿಕೆ, ಅವನನ್ನು ಪೂಜಿಸುವುದು, ಪ್ರೀತಿಸುವುದು ಹಾಗೂ ಅವನಿಗಾಗಿ ತ್ಯಾಗ ಮಾಡುವುದು, ಕೊನೆಯಲ್ಲಿ ಅವನಿಗೆ ಶರಣಾಗುವುದು ಇವು ಲಿಂಗಾಂಗ ಸಾಮರಸ್ಯಕ್ಕೆ ಪೂರಕವಾದ ವಿವಿಧ ಹಂತಗಳು. ಪರಶಿವನ ಪರಿಕಲ್ಪನೆಯಿಲ್ಲದ ಜೀವನಕ್ಕೆ ಹೇಗೆ ಅರ್ಥವಿಲ್ಲವೋ ಹಾಗೆಯೇ ಜೀವನದ ಪರಮ ಧ್ಯೇಯಕ್ಕೂ ಅರ್ಥವಿಲ್ಲ ಎಂಬುದು ವೀರಶೈವರ ನಿಲುವು.

ಲಿಂಗಾಂಗ ಸಾಮರಸ್ಯವೂ ಎಲ್ಲ ದುಃಖಗಳ ಅಂತ್ಯವೂ ಅಲ್ಲದೆ ಆನಂದದಾಯಕ ಪದವೂ ಹೌದು. ವೀರಶೈವರೂ, ಬೌದ್ಧರೂ ಜೀವನ್ಮುಕ್ತಿಯ ಸಾಧ್ಯತೆಯನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಇಬ್ಬರೂ ಅರಿವೆಗೆ ಮಹತ್ವ ಕೊಟ್ಟರೂ ವೀರಶೈವರು ಭಕ್ತಿಗೆ ಮಹತ್ವ ಕೊಟ್ಟಂತೆ ಬೌದ್ಧರು ಕೊಡುವುದಿಲ್ಲ. ಅವರಲ್ಲಿ ಕೆಲವರು ಬುದ್ಧನನ್ನು ಪೂಜಿಸುತ್ತರಾದರೂ ಅವರ ಸಾಧನಾ ಪ್ರಣಾಳಿಕೆಯಲ್ಲಿ ಭಕ್ತಿಗೆ ಸ್ಥಾನವಿಲ್ಲ. ಮಹಾಯಾನ ಬೌದ್ಧರು ನಿರ್ವಾಣ ಪಡೆದವನ ದೃಷ್ಟಿಯಲ್ಲಿ ಪ್ರಪಂಚವು ಅಸತ್ಯ ಎನ್ನುತ್ತಾರೆ. ಆದರೆ ವೀರಶೈವರು ಲಿಂಗಾಂಗ ಸಾಮರಸ್ಯ ಪಡೆದವನಿಗೆ (ಜೀವನ್ಮುಕ್ತನಿಗೆ) ಪ್ರಪಂಚದ ಪ್ರತಿ ಕಣದಲ್ಲಿಯೂ ಪರಶಿವ ಕಾಣಿಸಿಕೊಳ್ಳುತ್ತಾನೆ ಎನ್ನುತ್ತಾರೆ. ಆದುದರಿಂದ ಅವನು ಇತರರನ್ನು ಪ್ರಪಂಚವನ್ನೂ ತುಚ್ಛವೆಂದು ಪರಿಗಣಿಸದೆ ಪರಶಿವನ ಭಾಗ(ಲಿಂಗ)ಗಳೆಂದು ಪರಿಗಣಿಸುತ್ತಾನೆ. ಈ ಕಾರಣದಿಂದಲೇ ಅವನು ಎಲ್ಲರಿಗೂ, ಅಲ್ಪ ಪ್ರಾಣಿಗಳಿಗೂ ಪ್ರೀತಿ ತೋರಿಸುತ್ತಾನೆ. ಅವನಿಗೆ ಪ್ರಪಂಚ ಪರಶಿವನ ವ್ಯಕ್ತರೂಪ, ಆದರೆ ಅದರಲ್ಲಿರುವ ಪರಶಿವ ಅವನಿಗೆ ಕಾಣಿಸಿದಂತೆ ಭವಬಂಧನ ದಲ್ಲಿರುವವರಿಗೆ ಕಾಣುವುದಿಲ್ಲ.

5. ಶೂನ್ಯ ಪರಿಕಲ್ಪನೆ : ವಿರಶೈವರೂ ಬೌದ್ಧಧರ್ಮದ ಎಲ್ಲ ಶಾಖೆಗಳೂ ಶೂನ್ಯ ಎಂಬ ಪದವನ್ನು ಬಳಸಿದರೂ ಆ ಬಳಕೆಯ ದಾರ್ಶನಿಕ ಮತ್ತು ಧಾರ್ಮಿಕ ಹಿನ್ನೆಲೆಗಳಲ್ಲಿ ವ್ಯತ್ಯಾಸವಿದೆ. ಬೌದ್ಧರು ಶೂನ್ಯ ಪದವನ್ನು ಈ ಕೆಳಗಿನ ಅರ್ಥಗಳಲ್ಲಿ ಬಳಸುತ್ತಾರೆ.

ಪ್ರಪಂಚವು ಹೀನಯಾನ ಬೌದ್ಧರ ಪ್ರಕಾರ ಸತ್ಯವಾದರೂ ಕ್ಷಣಿಕ. ಪ್ರತಿಯೊಂದು ವಸ್ತುವೂ ಒಂದು ಕ್ಷಣವಿದ್ದು, ಮರುಕ್ಷಣ ನಾಶವಾಗುತ್ತದೆ. ಅದು ನಾಶವಾಗುವ ಮೊದಲು ತನ್ನಂಥವೇ ವಸ್ತುವಿಗೆ ಜನ್ಮ ನೀಡುತ್ತದೆ. ಉದಾಹರಣೆಗೆ, ನಾವು ಕಾಣುವ ದೀಪದ ಜ್ವಾಲೆ ವಾಸ್ತವವಾಗಿ ಒಂದಲ್ಲ, ಅನೇಕ ಮೊದಲಿನ ಜ್ವಾಲೆ ತನ್ನನ್ನು ಹೋಲುವ ಮತ್ತೊಂದು ಜ್ವಾಲೆಯನ್ನು ಹುಟ್ಟಿಸಿ ತಾನು ನಾಶವಾಗುತ್ತದೆ ಇತ್ಯಾದಿ... ಎರಡನೆಯ ಮೂರನೆಯ ಇತ್ಯಾದಿ ಜ್ವಾಲೆಗಳನ್ನು ನೋಡಿದ ನಾವು ಅವೆಲ್ಲ ಬದಲಾಗದ ಮೊದಲನೆಯ ಜ್ವಾಲೆ ಎಂದು ಭ್ರಮಿಸುತ್ತೇವೆ. ವಾಸ್ತವವಾಗಿ, ನಾವು ಇದು ಮೊದಲನೆಯ ಜ್ವಾಲೆ ಎಂದು ನಿರ್ಧರಿಸುವುದರೊಳಗಾಗಿ, ಅಲ್ಲಿ ಮೊದಲಿನ ಆ ಜ್ವಾಲೆಯೇ ಇರುವುದಿಲ್ಲ. ಹಾಗೆಯೇ ಪ್ರಪಂಚವೂ ಆತ್ಮವೂ ಸಹ ಭಾವಶೂನ್ಯ.

ಮಹಾಯಾನ ಬೌದ್ಧರು ಅದರಲ್ಲೂ ಶೂನ್ಯವಾದಿಗಳು-ಪಾರಮಾರ್ಥಿಕ ಸತ್ಯವನ್ನು ಶೂನ್ಯ ಅಥವಾ ಶೂನ್ಯತಾ ಎಂದು ಕರೆಯುತ್ತಾರೆ. ಆದರೆ, ಅದಕ್ಕೆ ಯಾವ ಗುಣವೂ ಇಲ್ಲ. ಅದು ಇದೆ (ಅಸ್ತಿ) ಎಂದು ಸಹಾ ಹೇಳಲು ಬರುವುದಿಲ್ಲ. ಏಕೆಂದರೆ, ಅಸ್ತಿತ್ವದಲ್ಲಿರುವ ವಸ್ತುಗಳ ಮಿತಿ ಅದಕ್ಕಿಲ್ಲ. ಅದು ಇಲ್ಲ (ನಾಸ್ತಿ) ಎನ್ನಲೂ ಬರುವುದಿಲ್ಲ. ಅದಕ್ಕೆ ಅಸ್ತಿತ್ವ ಮತ್ತು ನಾಸ್ತಿತ್ವ ಎರಡೂ ವಿಶೇಷಣಗಳನ್ನು ಒಟ್ಟಿಗೆ ಆರೋಪಿಸಲಂತೂ ಬರುವುದಿಲ್ಲ. ಅಸ್ತಿತ್ವವೂ ಇಲ್ಲ. ನಾಸ್ತಿತ್ವವೂ ಇಲ್ಲ ಎನ್ನಲೂ ಸಾಧ್ಯವಿಲ್ಲ. ಹಾಗಾದರೆ ಅದು ಏನು? ಎಂದರೆ, ಬೌದ್ಧರು ಅದು ಅನಿರ್ವಚನೀಯ ಎನ್ನುತ್ತಾರೆ. ಉಪನಿಷತ್ಕಾರರೂ ಅದ್ವೈತ ವೇದಾಂತಗಳೂ ಪಾರಮಾರ್ಥಿಕ ಸತ್ಯವೂ ಕೊನೆಯ ಪಕ್ಷ ಬ್ರಹ್ಮನ ಅಥವಾ ಅಪರಿಮಿತ ಚಿತ್ ಎಂದರೆ, ಶೂನ್ಯವಾದಿಗಳೂ ಶೂನ್ಯ ಚಿತ್ತೋ ಅಲ್ಲವೋ ಗೊತ್ತಿಲ್ಲ ಎನ್ನುತ್ತಾರೆ. ನಮಗೆ ಇಂದ್ರಿಯಗಳ ಮೂಲಕ ಗೊತ್ತಾಗುವ ಎಲ್ಲ ವಸ್ತುಗಳನ್ನು ವರ್ಣಿಸಬಹುದು. ಆದರೆ ಶೂನ್ಯವೂ ಇತರ ವಸ್ತುಗಳಂತೆ ಒಂದು ವಸ್ತು ಎಂದು ಮಾತ್ರ ತಿಳಿಯಬಾರದು.

ವೀರಶೈವರೂ, ವಚನಕಾರರೂ ಪಾರಮಾರ್ಥಿಕ ಸತ್ಯವನ್ನು ಅಂದರೆ ಸೃಷ್ಟಿಪೂರ್ವ ಪರಶಿವನ ಸ್ಥಿತಿಯನ್ನು ಶೂನ್ಯ ಎಂದು ಕರೆದಿದ್ದರೂ ಅವರ ಶೂನ್ಯ ಪರಿಕಲ್ಪನೆ ಶೂನ್ಯವಾದಿಗಳ ಪರಿಕಲ್ಪನೆಗಿಂತ ಒಂದು ಮುಖ್ಯಅಂಶದಲ್ಲಿ ಭಿನ್ನ. ವಚನಕಾರರೂ ಸಹ ಗುಹೇಶ್ವರಾ, ಇದ್ದೆಯಲ್ಲಾ ಇಲ್ಲದಂತೆ! ಎಂದು ಅದರ ಅವರ್ಣನೀಯತೆಯನ್ನು ತೋರಿಸಿದ್ದರೂ, ಅದು ಕೊನೆಯ ಪಕ್ಷ ಅಪರಿಮಿತ ಚಿತ್ತೆಂಬುದನ್ನು ಗುರುತಿಸಿದ್ದಾರೆ. ಇದೇ ಚಿತ್ತು, ಮುಂದೆ ಜಗತ್ತಾಗಲು ನಿರ್ಧರಿಸಿ, ಆ ನಿರ್ಧಾರದಂತೆ ಜಗವಾಗುತ್ತದೆ. ಹೀಗೆ ವಚನಕಾರರ ಪ್ರಕಾರ ಪರಶಿವನೇ ಜಗತ್ತಾಗಿರುವುದರಿಂದ, ಜಗತ್ತು ಪರಶಿವನಷ್ಟೇ ಸತ್ಯವಾಗಿರುತ್ತದೆ. ಆದರೆ ಶೂನ್ಯವಾದಿಗಳ ಪ್ರಕಾರ, ಜಗತ್ತು ಮಿಥ್ಯ, ಸತ್ಯ, ಅನಿರ್ವಚನೀಯ.

6. ಸನ್ಯಾಸ ಪರಿಕಲ್ಪನೆ : ಚಾರ್ವಕರು ಹೇಳಿದಂತೆ ಇಂದ್ರೀಯ ಸುಖವಾಗಲಿ ಅಥವಾ ವೈದಿಕರು ನಂಬಿದಂತೆ ಸ್ವರ್ಗದಲ್ಲಿ ಪಡುವ ಇಂದ್ರೀಯ ಸುಖವಾಗಲಿ ಉನ್ನತ ಆದರ್ಶವಾಗಲಾರದು ಎಂಬುದನ್ನು ಖಚಿತಪಡಿಸಿಕೊಂಡಂತೆ. ಬುದ್ಧನು ಜೈನರು ಮಾಡಿದಂತೆ ದೇಹದಂಡನೆ ಮಾಡುವುದರಿಂದಲೂ ನಿರ್ವಾಣ ಸಿಕ್ಕುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು, ಇವೆರಡರ ಮಧ್ಯ ನಡೆಯಬೇಕೆಂದು ಬೋಧಿಸಿದ. ಆದರೆ ಅವನ ಮಧ್ಯಮಮಾರ್ಗವು ಮತ್ತು ಉಪನಿಷತ್ತುಗಳು ಬೋಧಿಸಿದ ವಾನಪ್ರಸ್ಥಾಶ್ರಮ ಮತ್ತು

ಸನ್ಯಾಸಾಶ್ರಮಗಳನ್ನು ಒಳಗೊಂಡುದುದು ಒಂದು ವಿಪರ್ಯಾಸವೇ ಸರಿ. ಇದರಿಂದಾಗಿ, ಬೌದ್ಧ ಮೋಕ್ಷಾರ್ಥಿಗಳು ಭಿಕ್ಷುಗಳಾಗಿ, ಸಮಾಜವಿಮುಖರಾಗಿ, ಕಾಡುಗಳಲ್ಲಿ ಗುಹೆಗಳಲ್ಲಿ ವಾಸಿಸುವಂತಾಯಿತು. ಮತ್ತು ಆಹಾರಕ್ಕಾಗಿ ಮಾತ್ರ ಸಮಾಜವನ್ನು ಆಶ್ರಯಿಸಬೇಕಾಯಿತು ಈ ವಿಚಾರದಲ್ಲಿ ವೀರಶೈವರು ಅದರಲ್ಲೂ ವಚನಕಾರರು ತೀರ ಭಿನ್ನ ಅಭಿಪ್ರಾಯ ತಳೆದಿದ್ದಾರೆ. ವಿಶಿಷ್ಟ ಪ್ರಸಾದ ಪರಿಕಲ್ಪನೆಯ ಮೂಲಕ ಅವರು ಕೇವಲ ಆಹಾರವಷ್ಟೇ ಅಲ್ಲ, ನಾವು ಮೂಸುವ ಗಂಧ, ಕುಡಿಯುವ ನೀರು, ಸೇವಿಸುವ ಗಾಳಿ, ತುಳಿಯುವ ನೆಲ, ಇವುಗಳನ್ನು ಗ್ರಹಿಸುವ ಇಂದ್ರಿಯಗಳು, ಅರಿಯುವ ಅಂತಃಕರಣಗಳು, ಕೆಲಸ ಮಾಡುವ ಕರ್ಮೇಂದ್ರೀಯಗಳು, ಅಷ್ಟೇ ಏಕೆ, ಇಡೀ ಪ್ರಪಂಚವೇ ಪರಶಿವನ ಪ್ರಸಾದ, ಎಂದು ಎಲ್ಲವನ್ನೂ ಪ್ರಸಾದೀಕರಿಸಿದ್ದಾರೆ. ಎಲ್ಲವೂ ಶಿವನ ಶಕ್ತಿಯ ರೂಪಾಂತರವೆಂದ ಮೇಲೆ ಎಲ್ಲವೂ ಪ್ರಸಾದದ ವಿವಿಧ ಪ್ರಕಾರಗಳಷ್ಟೇ ಹೊರತು, ಒಳ್ಳೆಯ-ಕೆಟ್ಟ ಎಂಬ ಎರಡು ರೀತಿಯ ಪ್ರಸಾದವಿಲ್ಲ, ಅಂದರೆ, ಇದು ಕೆಟ್ಟ ಪ್ರಸಾದ ಇದನ್ನು ಸೇವಿಸಬಾರದು, ಇದು ಒಳ್ಳೆಯ ಅಥವಾ ರುಚಿಕರ ಪ್ರಸಾದ, ಇದನ್ನು ಸೇವಿಸಬೇಕು ಎಂದು ಹೇಗೆ ಪ್ರಸಾದ ಭೇದ ಮಾಡದೇ ಎಲ್ಲವನ್ನೂ ಕೃತಜ್ಞತೆಯಿಂದ ಸ್ವೀಕರಿಸಬೇಕೋ, ಹಾಗೆಯೇ ಪ್ರಪಂಚದ ಎಲ್ಲ ವಸ್ತುಗಳನ್ನು ಪ್ರಸಾದವೆಂಬಂತೆ ಸಮಚಿತ್ತದಿಂದ ಸ್ವೀಕರಿಸಬೇಕು. ಪ್ರಸಾದವನ್ನು ಹೇಗೆ ತಿರಸ್ಕರಿಸಬಾರದೋ, ಹಾಗೆಯೇ ಪ್ರಪಂಚವನ್ನೂ ತಿರಸ್ಕರಿಸಬಾರದು. ದೇಹಧರ್ಮವನ್ನು ಧಿಕ್ಕರಿಸಿ ಸನ್ಯಾಸಿಗಳಾಗುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. "ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು" ಎಂಬ ಅರಿವು ಅವರಿಗಿತ್ತು. ಆದುದರಿಂದಲೇ ಅವರು "ಮಾಡುವುದು ಮಾಡಲೇಬೇಕು, ಕೂಡುವುದು ಕೂಡಲೇಬೇಕು" ಎಂದು (ಅಂದರೆ, ಪ್ರಸಾದ ಮನೋಭಾವನೆಯಿಂದ) ಎಲ್ಲವನ್ನೂ ಅನುಭವಿಸಿದರೆ, ಅದರಲ್ಲಿ ಭಕ್ತಿವೈರಾಗ್ಯವೂ ಇರುತ್ತದೆ. ಐಹಿಕವೂ ಇರುತ್ತದೆ. ಐಹಿಕತನಕ್ಕೆ ಭಕ್ತಿವೈರಾಗ್ಯವನ್ನು ಬಲಿ ಕೊಡುವುದಾಗಲಿ ಭಕ್ತಿವೈರಾಗ್ಯಕ್ಕೆ ಐಹಿಕ ಸುಖವನ್ನು ಬಲಿ ಕೊಡುವುದಾಗಲಿ ವೀರಶೈವರ ಸಿದ್ಧಾಂತವಲ್ಲ. ಅಲ್ಲದೆ, ಅವರ ಪ್ರಕಾರ, ನಾವು ಸಮಾಜದಲ್ಲಿದ್ದುಕೊಂಡೇ ಎಲ್ಲ ಅಹಿತಗಳನ್ನು ಪ್ರಸಾದವೆಂಬಂತೆ ಸ್ವೀಕರಿಸಬೇಕೇ ಹೊರತು, ಕಾಡಿಗೆ ಹೋಗಬಾರದು.

ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಹುದು
ಕಾರ್ಯವಲ್ಲ; ದುರುಳತನ
ಊರೊಳಗಿರ್ದರೆ ನರರ ಹಂಗು
ಅರಣ್ಯದೊಳಗಿರ್ದರೆ ತರುಗಳ ಹಂಗು
ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಂಬ
ಶರಣನೆ ಜಾಣ, ಸಕಳೇಶ್ವರಾ!

ಎಂಬ ವಚನಕಾರರ ಧೋರಣೆಯನ್ನು ನೋಡಿದರೆ, ಪಾರಮಾರ್ಥಿಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ನಾವು ಕಾಡಿಗೆ ಹೋಗುವ ಅಗತ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ರೀತಿ ಎಲ್ಲರೂ ಕಾಡಿಗೆ ಹೋದರೆ, ಸಮಾಜದ ಆರ್ಥಿಕ ಸ್ಥಿತಿ, ರಾಜಕೀಯ ಸ್ಥಿತಿ ಏನಾಗುತ್ತದೆ ಎಂಬುದನ್ನು ಪ್ರಾಯಶಃ ಯೋಚಿಸಿಯೇ ವೀರಶೈವರು, ಸಮಾಜದಲ್ಲೇ ಇರಬೇಕು, ಕಾಯಕ ಮಾಡಬೇಕು, ಒಳ್ಳೆಯದನ್ನು ಹೇಗೋ ಹಾಗೆ ಕೆಟ್ಟದ್ದನ್ನು ಪ್ರಸಾದವೆಂಬಂತೆ ಸ್ವೀಕರಿಸಬೇಕು ಎಂಬ ಸಿದ್ಧಾಂತ ರೂಪಿಸಿರಬೇಕು. ಹೀಗಾಗಿ ಐಹಿಕ ಮತ್ತು ಪಾರಮಾರ್ಥಿಕಗಳ ನಡುವೆ ಶರಣರು ಮಾಡಿದ ಸಮನ್ವಯವು ನಿಜವಾದ ಮಧ್ಯಮಮಾರ್ಗವಾಗಿದೆ.[5] ಪ್ರಾಚೀನಕಾಲದ ಬುದ್ಧ ಮತ್ತು ಮಧ್ಯಯುಗದ ಬಸವರಿಗೆ ಕಾಲದ ದೃಷ್ಟಿಯಿಂದ ಶತಮಾನಗಳ

ಅಂತರವಿದ್ದರೂ, ತಮ್ಮ ಮನೋಧರ್ಮದಲ್ಲಿ, ತಮ್ಮ ಕಾಲದಲ್ಲಿ ರೂಢಿಯಲ್ಲಿದ್ದ ಸಾಮಾಜಿಕಸ್ಥಿತಿಗಳ ಬಗೆಗೆ ಅವರು ಸ್ಪಂದಿಸಿದ ರೀತಿಯಲ್ಲಿ, ತಳೆದ ಕ್ರಾಂತಿಕಾರಕ ಭಾವನೆಗಳಲ್ಲಿ ಸಮಾನ ಲಕ್ಷಣಗಳುಳ್ಳವರಾಗಿದ್ದಾರೆ, ಇವರಿಬ್ಬರೂ ಸ್ವತಂತ್ರ ಆಲೋಚನಾಪರರು, ಸಮಾನತೆಯ ಹರಿಕಾರರು. ಅಂಬೇಡ್ಕರ್ ಇವರಿಬ್ಬರಿಗಿಂತಲೂ ಮಿಗಿಲಾದವರು ಸ್ವತಂತ್ರ ಆಲೋಚನಾ ವಿಧಾನವನ್ನೂ ವೈಜ್ಞಾನಿಕ ಒರೆಗಲ್ಲಿಗೆ ಹಚ್ಚಿ ಆಧುನಿಕ ದೃಷ್ಟಿಕೋನದಿಂದ ಪ್ರತಿಯೊಂದನ್ನು ಪರೀಕ್ಷಿಸಿ, ಆಧುನಿಕ ವಿಚಾರಗಳೊಂದಿಗೆ ಸರಿದೂಗಿಸಿಕೊಂಡು ಬುದ್ಧನ ತತ್ವ ಚಿಂತನೆಗಳಿಗೆ ಜಾಗತಿಕ ಮನ್ನಣೆ ಸಲ್ಲುವಂತೆ ಮಾಡಿದರು.

6.3 ಬುದ್ಧ, ಬಸವ, ಅಂಬೇಡ್ಕರ್‌ರವರ ಸಮನ್ವಯ :

ಕರ್ನಾಟಕದ ಕೆಲ ಮಠಗಳು, ಮಠಾಧೀಶರಾದರೂ ಬಸವ ತತ್ವಗಳ ಅಡಿಯಲ್ಲಿ ದಲಿತಪರ ಕಾಳಜಿಯನ್ನು, ನಿಲುವುಗಳನ್ನು ಹೊಂದಿರುವುದು ಸಮಾಧಾನ ಪಡುವ ಸಂಗತಿಯಾದರೂ ಈ ಪ್ರಯತ್ನಗಳಿಗೆ ವ್ಯಾಪಕತೆ ಮತ್ತು ದಲಿತ ವಿಮೋಚನೆಯ ಬಗ್ಗೆ ಸ್ಪಷ್ಟ ನಿಲುವು ಮತ್ತು ನಿರ್ದಿಷ್ಟ ಕಾರ್ಯಕ್ರಮ ಗಳಲ್ಲಿರುವುದನ್ನು ಕಾಣಬಹುದಾಗಿದೆ. ಕೆಲವು ಪ್ರಗತಿಪರ ಮಠಾಧೀಶರು "ದಲಿತವರ್ಗದವರನ್ನೇ ಮಠಗಳ ಪೀಠಾಧ್ಯಕ್ಷರನ್ನಾಗಿ ಮಾಡುವಲ್ಲಿ ಸಮಾನತೆಯ ತತ್ವಗಳ ಅನುಷ್ಠಾನ ಮತ್ತು ಪ್ರತಿಪಾದನೆ ಕಂಡು ಬರುತ್ತಿದೆಯಾದರೂ ಇದು ಒಟ್ಟು ದಲಿತರ ಸಾಂಸ್ಕೃತಿಕ, ಧಾರ್ಮಿಕ ಬದುಕಿಗೆ ಆಪ್ತತೆಯನ್ನು ಸೃಷ್ಟಿಸುವಲ್ಲಿ ಸಂಕೇತವಾಗಿ ಮಾತ್ರ ಕಾಣುತ್ತಿದೆ."[6] ಡಾ.ಬಿ.ಕೆ. ಸಂಘಸೇನಾವರ್ಧನರವರ ಈ ಅಭಿಪ್ರಾಯವನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಪ್ರಸ್ತುತ ವೀರಶೈವ ಧರ್ಮ ದಲಿತರಿಂದ ದೂರವಾಗುತ್ತಿರುವುದು ವಾಸ್ತವಸತ್ಯ. ಆದರೆ ಬೇರೆ ಧರ್ಮಗಳಿಗೆ ಹೋಲಿಸಿದಾಗ ಈ ಧರ್ಮವೇ ಸ್ವಲ್ಪವಾದರೂ ಸಹನೀಯ ಎಂದೆನಿಸದಿರದು.

ಬಸವಣ್ಣನವರ ಜನನವೇ ಮಹಾಘಟನೆ ಎಂದು ಪ್ರಮುಖ ಸಾಹಿತಿಗಳಾದ ದೇ.ಜವರೇಗೌಡ ಅವರು ಅಭಿಪ್ರಾಯಪಡುತ್ತಾರೆ. ಆದರೆ ಬಸವಣ್ಣನವರ ಸಂದೇಶಗಳು ಜಾಗತಿಕ ವ್ಯಾಪ್ತಿಯನ್ನು ಪಡೆಯಲಿಲ್ಲ. ಅವರ ಸಾಧನೆ ಸಿದ್ಧಿಗಳು, ಸಿದ್ಧಾಂತ ಸಂದೇಶಗಳು ಕನ್ನಡ ನಾಡಿನ ಗಡಿಯಿಂದಾಚೆ ಹೋಗಲಿಲ್ಲ. ಹೀಗಾಗಿ ಬುದ್ಧ ಕ್ರಿಸ್ತರಿಗೆ ದೊರೆತಂತೆ ಜಾಗತಿಕ ವ್ಯಾಪ್ತಿ ದೊರೆಯಲಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಆದರೆ, ಸ್ತ್ರೀ ದಲಿತೋದ್ಧಾರದ ಮೂಲಕ ಅವರು ಮಾನವಹಕ್ಕುಗಳ ಹರಿಕಾರರೆಂದು[7] ದೇ.ಜ.ಗೌ. ಬಸವಣ್ಣನವರ ಸಿದ್ಧಾಂತದ ಬಗ್ಗೆ ಮಹತ್ವದ ಅರ್ಥೈಸುವಿಕೆ ದಾಖಲಿಸಿದ್ದಾರೆ.

ಬಂಡಾಯ ಸಾಹಿತಿ ಡಾ. ಸರಜೂಕಾಟ್ಕರ್ ಅವರು ಬುದ್ಧ ಮತ್ತು ಬಸವರಿಬ್ಬರಿಗೂ ಮನುಷ್ಯನ ಅಸ್ತಿತ್ವ ಮಹತ್ವದ್ದಾಗಿತ್ತು. ಇಬ್ಬರೂ ಸಾಮಾಜಿಕ ಕ್ರಾಂತಿಕಾರರಾಗಿದ್ದರೂ, ಇಬ್ಬರೂ ಪ್ರಜಾಪ್ರಭುತ್ವ ವಾದಿಗಳಾಗಿದ್ದರು. ಇಬ್ಬರ ಆಸಕ್ತಿಯ ಕ್ಷೇತ್ರ ಮನುಷ್ಯನೇ ಆಗಿದ್ದು, ನಾನಾ ನಮೂನೆಯ ಶೋಷಣೆಗೆ ಒಳಗಾಗಿದ್ದ ಮನುಷ್ಯನನ್ನು ಸ್ವತಂತ್ರಗೊಳಿಸಿ ಅವನಿಗೆ ಅವನದ್ದೇ ಆದ ಗುರುತನ್ನು ನೀಡುವಲ್ಲಿ ಇಬ್ಬರೂ ಶ್ರಮಿಸಿದ್ದಾರೆ. ಇಬ್ಬರೂ ದೇವಭಾಷೆಯಾದ ಸಂಸ್ಕೃತವನ್ನು ಧಿಕ್ಕರಿಸಿ ಜನ ಸಾಮಾನ್ಯರ ಭಾಷೆಯನು ತಮ್ಮ ವಿಚಾರಗಳ ಮಂಡನೆಗೆ ಉಪಯೋಗಿಸಿದರು. ಬುದ್ಧ ಪಾಲಿ ಭಾಷೆಯಲ್ಲಿ ತನ್ನ ವಿಚಾರಗಳನ್ನು ಹೇಳಿದರೆ, ಬಸವಣ್ಣನವರು ಕನ್ನಡವನ್ನು ಉಪಯೋಗಿಸಿದ್ದರು. ಇದರಿಂದ ಇಬ್ಬರೂ ಜನ ಸಾಮಾನ್ಯರ ಹೃದಯಕ್ಕೆ ಹತ್ತಿರವಾದರು[8] ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರು ಅವರು ಮುಂದುವರೆದು ಅಂಬೇಡ್ಕರ್

ಬಸವಣ್ಣನವರ ಬಗ್ಗೆ ವಿವರಿಸುತ್ತ, ರಾಜಕೀಯ ಅಧಿಕಾರದ ಮೂಲಕ ಇಬ್ಬರೂ ಸಮಾನತೆಯನ್ನು ತರಲು ಪ್ರಯತ್ನಿಸಿದರೂ ಪ್ರಭುತ್ವಕ್ಕೆ ಎಂದೂ ತಲೆ ಬಾಗಲಿಲ್ಲ. ಬಸವಣ್ಣನವರು ರಾಜಕೀಯ ಅಧಿಕಾರವನ್ನು ತಮ್ಮ ಎಡಪಾದದಿಂದ ಒದ್ದರೆ ಅಂಬೇಡ್ಕರ್ ರವರು ಅದನ್ನು ತಮ್ಮ ಬಲಪಾದದಿಂದ ಒದ್ದಿದ್ದಾರೆ[9], ಎಂದು ಸರಜೂ ಕಾಟ್ಕರ್ ವಿಶ್ಲೇಷಿಸುತ್ತ ಅಂಬೇಡ್ಕರ್ ಬಸವಣ್ಣನವರು ಹಿಂದೂ ವೈದಿಕಧರ್ಮದ ವಿರುದ್ಧ ತೆಗೆದುಕೊಂಡ ನಿಲುವುಗಳನ್ನು ತುಲನಾತ್ಮಕವಾಗಿ ನೋಡುತ್ತಾ "ನಾನು ಹಿಂದೂವಾಗಿ ಹುಟ್ಟಿರುವೆ, ಆದರೆ ಹಿಂದೂವಾಗಿ ಸಾಯಲಾರೆ" ಎಂದು ಅಂಬೇಡ್ಕರ್ ಘೋಷಿಸಿದರು. ಹಾಗೆಯೇ ಮಾಡಿದರು ಕೂಡ. ಬಸವಣ್ಣನವರು ಬ್ರಾಹ್ಮಣರಾಗಿ ಹುಟ್ಟಿದರೂ ಅವರೂ ಕೂಡ ಅದನ್ನು ಕಳೆದುಕೊಂಡು ವೀರಶೈವರಾದರು. ಈ ಇಬ್ಬರೂ ಮಹನೀಯರ ನಡುವೆ ಕಾಲದ ಕಂದಕವಿದ್ದರೂ ಅವರ ವಿಚಾರಗಳು ತುಂಬ ಹತ್ತಿರ ಹತ್ತಿರವಾಗಿಯೇ ಹರಿಯುತ್ತವೆ ಎಂದು ಹೇಳುತ್ತಾರೆ.[10] ಬಸವಣ್ಣ ಮತ್ತು ಅಂಬೇಡ್ಕರ್‌ರವರ ಅಸ್ಪೃಶ್ಯತೆಯ ನಿವಾರಣೆಯ ಪ್ರಯತ್ನಗಳ ಕುರಿತು ಮಹತ್ವ ಸಂಶೋಧನೆ ಮಾಡಿರುವ ಡಾ.ಶಿವರುದ್ರ ಕಲ್ಲೋಳಿಕರ ತಳವರ್ಗದ ನೆಲೆಯ ವಿಶ್ಲೇಷಣೆ ಮಾಡುತ್ತ, ಸಾಮಾಜಿಕ ಜಡತೆಯನ್ನು ಅಸಮಾನತೆಯನ್ನು ಹೋಗಲಾಡಿಸಲು ಬಸವಣ್ಣ ಸುಸಂಬದ್ಧ ಸಂಘಟನೆಯನ್ನು ಕಟ್ಟಿ ಚಳುವಳಿ ರೂಪಿಸಲು, ಜಾತಿಯಿಂದ ಅಪಮಾನಿತರಾದ ಕೆಳವರ್ಗದ ಶೋಷಿತರನ್ನೇ ಮುಂಚೂಣಿಗೆ ತಂದು ನಿಲ್ಲಿಸಬೇಕಾಯಿತು. ಅಷ್ಟೇ ಸಂಪ್ರದಾಯಸ್ಥರ ಮತ್ತು ಮೇಲ್ಜಾತಿಗಳ ವಿರೋಧಗಳನ್ನು ಕಟ್ಟಿಕೊಳ್ಳಬೇಕಾಯಿತು. ಇದ್ಯಾವುದಕ್ಕೂ ಬಸವಣ್ಣ ಹಿಂಜರಿಯಲಿಲ್ಲ. ಅದಕ್ಕಾಗಿ ಕೆಳಜಾತಿಗಳಿಗೆ ಆತ್ಮಾಭಿಮಾನ (Sefl Respect) ತುಂಬಲು ಮುಂದಾದರು. ಅವರಲ್ಲಿನ ಕೀಳರಿಮೆಯನ್ನು ಕಂಡು, ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ದೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ? ಆನು ಹಾರುವನೆಂದಡೆ ಕೂಡಲಸಂಗಮ ನಗುವನಯ್ಯ ಎಂದೂ ಕೀಳು ಜಾತಿಗಳು ಕೀಳಲ್ಲ, ಕೆಳವರ್ಗದಲ್ಲಿ ಜನಿಸಿದ ಆ ಜನ ಬ್ರಾಹ್ಮಣರಿಗಿಂತಲೂ ಸುಜ್ಞಾನಿಗಳೂ, ಮಹನೀಯರೂ ಆಗಿದ್ದಾರೆಂಬುದು ಅಭಿಪ್ರಾಯ. ತನ್ನ ಬ್ರಾಹ್ಮಣನ ಸ್ಥಾನವನ್ನು ಕನಿಷ್ಠಕ್ಕೆ ತಂದು ನಿಲ್ಲಿಸಿ ಸಚ್ಚಾರಿತ್ರ್ಯದ ಕೆಳಜಾತಿಗಳನ್ನು ಉನ್ನತಕ್ಕೇರಿಸುವುದರಿಂದ ಮೈ ಚಳಿ ಬಿಟ್ಟು ಚಳುವಳಿಯಲ್ಲಿ ಪಾಲ್ಗೊಳ್ಳಲು ಮಾನಸಿಕ ಧೈರ್ಯವನ್ನು ಬಸವಣ್ಣ ತುಂಬಿದರು[11] ಎಂದು ದಾಖಲಿಸುತ್ತ ಬಸವಣ್ಣನವರು ಬುದ್ಧನ ಹಾಗೆ ಮನುಷ್ಯನ ಘನತೆಗೆ (Human Dignity) ಪ್ರಾಮುಖ್ಯತೆ ಕೊಟ್ಟ ಅಂಶವನ್ನು ಅಂಬೇಡ್ಕರ್‌ರವರಂತೆ ದಲಿತರಲ್ಲಿನ ಕೀಳರಿಮೆ ಮನೋಭಾವನೆಯನ್ನು ಹೋಗಲಾಡಿಸಲು ಮಾಡಿದ ಮಹಾತ್ಕಾರ್ಯವನ್ನು ವಿಶ್ಲೇಷಿಸಿದ್ದಾರೆ.

ಕರ್ನಾಟಕದ ವೀರಶೈವ ಜಾತಿಗಳು ದಲಿತರನ್ನು ನಿಜವಾದ ಬಸವಧರ್ಮದಿಂದ ಅಂತರದಲ್ಲಿಡಲು ಪ್ರಯತ್ನಿಸಿದರೂ ಕೂಡ ದಲಿತರು ಬಸವಣ್ಣನವರ ಸಮಾಜೋ ಧಾರ್ಮಿಕಕ್ರಾಂತಿಯ ಆಶಯಗಳನ್ನು ತಮ್ಮ ವಿಮೋಚನೆಗೆ ತಳಹದಿಯನ್ನಾಗಿ ಮಾಡಿಕೊಳ್ಳುವ ದಲಿತ ಶಕ್ತಿಗಳ ಯತ್ನಗಳೂ ಅಷ್ಟೇ ಪ್ರಖರವಾಗಿರುವುದನ್ನು ಕಾಣುತ್ತೇವೆ. ಏಳೆಂಟು ಶತಮಾನಗಳ ನಂತರ ಅಂಬೇಡ್ಕರ್‌ರವರು ದಲಿತರಲ್ಲಿ ಬೆಳೆಸಿದ ವೈಚಾರಿಕ ಚಿಂತನೆಯ ಆಳಗಳಿಂದಲೇ ಇಂತಹ ಪ್ರಯತ್ನಗಳಿಗೆ, ಬಸವಪರ ಧೋರಣೆಗಳಿಗೆ ಕಾರಣವಾಗಿರುವುದನ್ನು ಅಲ್ಲಗಳೆಯಲಾಗದು. ಕರ್ನಾಟಕದ ಮಟ್ಟಿಗೆ ಇದು ವಿಶಿಷ್ಟವಾದ ಆಯಾಮ ಕೂಡ. ಹಿಂದೂ ದೇವಸ್ಥಾನಗಳ ಹೊರಗಡೆ ಸ್ಥಾನ ಪಡೆದ "ನಂದಿ" ಮತ್ತು ಅಮವಾಸ್ಯೆಗಳಲ್ಲಿ ಪೂಜೆಸಲ್ಪಡುವ "ಮಣ್ಣಿನ ಎತ್ತುಗಳ" ಮೂಢ ಅಂಧಾನುಕರಣೆಗಳಿಗೆ ಬಸವಣ್ಣನವರನ್ನು ಸೀಮಿತಗೊಳಿಸಿ ಕನ್ನಡದ ಪಠ್ಯ ಪುಸ್ತಕಗಳಲ್ಲೂ

ಬಸವನ ರಥ ಎಳೆಸಿದ ವೈದಿಕರ ಹುನ್ನಾರಗಳನ್ನು ದಲಿತ ಬಂಡಾಯದ ಅನೇಕ ವಕ್ತಾರರು ಖಂಡಿಸುತ್ತಲೇ ಬಂದಿರುವುದನ್ನು ಕಾಣುತ್ತೇವೆ. ಮಹೇಶ ತಿಪ್ಪಶೆಟ್ಟಿಯವರು ಈ ಪ್ರಕ್ರಿಯೆಯನ್ನು ಗುರುತಿಸುತ್ತಾ ಬಂಡಾಯ ಸಾಹಿತಿಗಳ "ಎತ್ತಿನ ಮಿತ್"ದಿಂದ ಬಸವಣ್ಣನವರನ್ನು ಬಿಡುಗಡೆಗೊಳಿಸಿ ಹನ್ನೆರಡನೇ ಶತಮಾನವನ್ನು ವೈಚಾರಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ವಿವರಿಸುವ ಯತ್ನ ಮಾಡಿದ್ದಾರೆ[12] ಎಂದು ಹೇಳುತ್ತಾ ಇವತ್ತಿನ ವೀರಶೈವ ದಲಿತ ಮೂಲವನ್ನು ಮರೆತಿದೆ ವೀರಶೈವದ ಹಲವು ಮೇಲಿನ ಉಪಜಾತಿಗಳು ದಲಿತ ವಿರೋಧಿಗಳಾಗಿವೆ ಎಂದು ಅಭಿಪ್ರಾಯ ಪಡುತ್ತಾರೆ. ಅದೇ ರೀತಿ ಬೇಡಜಂಗಮ ಹಣೆಪಟ್ಟಿ ಬೇಡುವ ಲಿಂಗಾಯತರಿಗೂ ದಲಿತ ಉತ್ತರಾಧಿಕಾರಿ ಬೇಕಾಗಿಲ್ಲ[13] ಎಂದು ಪ್ರಚಲಿತ ವಿದ್ಯಮಾನಗಳ ಕುರಿತು ಗೊಂದಲಗಳ ಕುರಿತು, ಮಹತ್ವದ ವಿಶ್ಲೇಷಣೆ ನೀಡುತ್ತಾರೆ.

ಬಸವಣ್ಣನವರ ಚಲನಶೀಲ ಸ್ವರೂಪದ ಹಾಗೂ ದಲಿತ ವಿಮೋಚನೆಗೆ ಒಂದು ಉತ್ತಮ ಮಾದರಿಯಾಗಬಹುದಾಗಿದ್ದ "ಬಸವಧರ್ಮ ಮಠ-ಮಾನ್ಯರ ಕೈಯಲ್ಲಿ ಸಿಕ್ಕು ಸ್ಥಾವರವಾಗಿದೆ" ಈ ರೀತಿಯಾಗಿ ಬಸವಣ್ಣನವರ ತತ್ವಗಳನ್ನೂ ಸ್ಥಾವರ ಮಾಡಿದ ಕೆಲವು ಮಠಾಧೀಶರ ಕುರಿತು ಕರ್ನಾಟಕದ ಅನೇಕ ಸ್ವಾಮೀಜಿಗಳೇ ಕಟು ವಿಮರ್ಶೆ ಮಾಡಿರುವುದನ್ನು ನೋಡುತ್ತೇವೆ. ತಮ್ಮನ್ನು ಜಗದ್ಗುರು ಎಂದು ಕರೆಯಲು ನಿರಾಕರಿಸುವ ಈಗಲೂ ಹಾಗೆ ಬಳಸದಂತೆ ತಾಕೀತು ಮಾಡುವ ಮಾನವ ಧರ್ಮ ಪೀಠದ ಅಧ್ಯಕ್ಷರಾದ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು ಮಠಾಧೀಶರು ಸ್ಥಿತಿ ಪಾಲಕರೇ ವಿನಾಃ ಸ್ಥಿತಿ-ಪರಿವರ್ತಕರಲ್ಲ ಎಂದು ಅಭಿಪ್ರಾಯಪಡುತ್ತಾ ಜಾತೀಯ ಗುರುಗಳು "ಜಗದ್ಗುರುಗಳು" ಹೇಗಾಗುತ್ತಾರೆ, ಎಲ್ಲಿಯವರೆಗೆ ಜಾತಿಯ ಗುರುಗಳು, ಮಠದಗುರುಗಳು, ಮತದಗುರುಗಳು ಆಗಿರುತ್ತಾರೆಯೋ ಅಲ್ಲಿಯವರೆಗೂ ಜಗತ್ತಿನ ಗುರುಗಳಾಗಲಿಕ್ಕೆ ಬರುವುದಿಲ್ಲ. ಕಾಗದದಲ್ಲಿ ಜಗದ್ಗುರುಗಳಾಗುವುದಕ್ಕಿಂತ ಕೃತಿಯಲ್ಲಿ ಜಗದ್ಗುರುತ್ವವನ್ನು ತೋರಿಸಬೇಕು. ಆಸ್ತಿಗಾಗಿ ಸ್ವಾಮಿಗಳಾಗಬಾರದು. ಆದರ್ಶಕ್ಕಾಗಿ ಸ್ವಾಮಿಗಳಾಗಬೇಕು[14] ಎಂದು ಪ್ರಸ್ತುತ ಸಂದರ್ಭದ ಬಗ್ಗೆ ಕಟು ವಿಶ್ಲೇಷಣೆ ಹಾಗೂ ವಿಮರ್ಶೆ ಮಾಡಿದ್ದಾರೆ. ಆದರೆ ಬಸವಣ್ಣನವರ ಸಮಾನತೆಯ ತತ್ವಗಳನ್ನು ಆಶಯದಂತೆ ಚಲನಶೀಲಗೊಳಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆದಿರುವುದನ್ನು ಕಾಣುತ್ತೇವೆ. ಮೊದಲಿನಿಂದಲೂ ಪ್ರಗತಿಪರ ನಿಲುಗಳನ್ನು ಪ್ರತಿಪಾದಿಸುತ್ತ ಬಂದಿರುವ ಇಂಚಗೇರಿ ಸಂತ ಸಂಪ್ರದಾಯ, ದಲಿತವರ್ಗದ ಸನ್ಯಾಸಿಗಳನ್ನು ಉತ್ತರಾಧಿಕಾರಿ ಮಾಡಲು ಪ್ರಯತ್ನಿಸಿದ ಶ್ರೀ ಮಹಾಂತೇಶ ಮಠಾಧೀಶರು ಇಲಕಲ್, ತಮ್ಮ ಪ್ರಖರ ಪಾಂಡಿತ್ಯದಿಂದ ಉತ್ತರ ಕರ್ನಾಟಕದ ಜನಮಾನಸದಲ್ಲಿ ದಲಿತರ ಬದುಕಿನ ಅಭಿವೃದ್ಧಿ ಕುರಿತು ಮೇಲ್ಜಾತಿಗಳು ಸ್ಪಂದಿಸುವಂತೆ ಪ್ರಯತ್ನಿಸುತ್ತಿರುವ ಗದುಗಿನ ತೋಂಟದ ಶ್ರೀಗಳು ಬುದ್ಧ, ಬಸವಣ್ಣನವರ ವ್ಯಕ್ತಿ ಪರಿವರ್ತನಶೀಲ ಮಾದರಿಯನ್ನು ಅತ್ಯಂತ ಉನ್ನತಮಟ್ಟದಲ್ಲಿ ಅರ್ಥೈಸಿ ಬುದ್ಧ, ಝೇನ್‌ಬೌದ್ಧ ಪರಂಪರೆಯನ್ನು ಕನ್ನಡದ ಜನಮಾನಸದಲ್ಲಿ ತುಂಬಾ ಪರಿಣಾಮಕಾರಿಯಾಗಿ ನೆಲೆಗೊಳಿಸಲು ಪ್ರಯತ್ನಿಸುತ್ತಿರುವ ಪ್ರಖ್ಯಾತ ಪ್ರವಚನಕಾರರಾದ ಶ್ರೀ ಸಿದ್ಧೇಶ್ವರ ಸ್ವಾಮಿಜಿಯವರು ಪ್ರಮುಖರಾಗಿದ್ದಾರೆ. ಇವರಲ್ಲದೇ, ಇನ್ನೂ ಅನೇಕ ಪ್ರಗತಿಪರ ಸ್ವಾಮೀಜಿಗಳಿದ್ದಾರೆಂಬುದು ಗಮನಿಸಬೇಕಾದ ಮಹತ್ವದ ಅಂಶವಾಗಿದೆ.

ಬುದ್ಧನ ನಂತರ ವೈಚಾರಿಕತೆಯ ತಳಹದಿಯ, ಅಸ್ಪೃಶ್ಯರ, ಶೋಷಿತರ ಹಾಗೂ ಕನಿಷ್ಠವೆಂದು ಪರಿಗಣಿಸಲ್ಪಟ್ಟ ಕಾಯಕಜೀವಿಗಳ ವಿಮೋಚನೆಯ ತತ್ವಗಳನ್ನಾಧರಿಸಿದ ಮಾನವತೆಯನ್ನೇ ಮೂಲ ಕಳಕಳಿಯಾಗಿಟ್ಟು ಪ್ರತಿಪಾದಿಸಿ ಬಸವಧರ್ಮದ ಬೀಜಗಳು ಇಂದು ಕರ್ನಾಟಕದಲ್ಲಿ ಅಲ್ಲಲ್ಲಿ ಫಲ

ನೀಡುತ್ತಿರುವುದನ್ನು ಕಾಣುತ್ತೇವೆ. ಬಸವಣ್ಣನವರು ಪ್ರತಿಪಾದಿಸಿದ ದಯೆ, ಪ್ರೀತಿ, ಆರ್ಥಿಕ, ಭೌತಿಕ ಸೌಲಭ್ಯಗಳಲ್ಲಿ ಸರ್ವರಿಗೂ ಸಮಪಾಲು ದಕ್ಕಬೇಕು ಎಂಬ ಆಶಯದ ದಾಸೋಹ ಕಲ್ಪನೆ ಯಾವ ವೃತ್ತಿಯೂ ಕೀಳಲ್ಲವೆಂಬ ವಿನೂತನವಾದ ಕಾಯಕವೇ ಕೈಲಾಸ (Work is Worship) ಮೌಢ್ಯರಹಿತ ಅಷ್ಟಾವರಣ ಆಚರಣೆಗಳು, ಧರ್ಮವನ್ನು ಬೌದ್ಧಿಕ ಸ್ವಾತಂತ್ರ್ಯ (Intellectual Freedom)ಕ್ಕೆ ಸಾಧನ ಮಾಡುವ ಕಾರ್ಯತಂತ್ರಗಳು, ದೇಹವೇ ದೇವಾಲಯವೆಂಬ ಮೂರ್ತಿಭಂಜಕ ಪರಿಕಲ್ಪನೆಗಳು, ಬುದ್ಧನು ಪ್ರತಿಪಾದಿಸಿದ ಧಾರ್ಮಿಕ ಪರಿಕಲ್ಪನೆಗಳ ಮುಂದುವರಿಕೆಯಾಗಿಯೇ ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರಿಗೆ ಬುದ್ಧನ ಬೋಧನೆಗಳು ಪರಿಚಯವಾಗಿದ್ದರೆ, ಮುಂದೆ ಡಾ.ಅಂಬೇಡ್ಕರ್‌ರವರಿಗೆ ಬಸವಣ್ಣನವರ ಸಮಾಜೋ-ಧಾರ್ಮಿಕ ಪರಿವರ್ತನೆಯ ಕಾರ್ಯತಂತ್ರಗಳು ಪರಿಚಿತವಾಗಿದ್ದರೆ, ಈ ದೇಶದ ಭವಿಷ್ಯವೇ ಬೇರೆಯಾಗಿರುತ್ತಿತ್ತು. ಅಂತಹ ಧಾರ್ಮಿಕ ಅನುಸಂಧಾನ, ಸಾಮಾಜಿಕ, ಆರ್ಥಿಕ ಬದಲಾವಣೆಯ ಕಾರ್ಯತಂತ್ರಗಳು ಬುದ್ಧ, ಬಸವ ಮತ್ತು ಅಂಬೇಡ್ಕರ್ ರವರಲ್ಲಿ ಒಂದು ಸಮಾನ ಪಾತಳಿ ಮತ್ತು ಬಂಧ (Texture)ದಲ್ಲಿ ನಮ್ಮ ಮುಂದಿರುವುದು ಮಹತ್ವದ ಅಂಶವಾಗಿದೆ.[15]

ಬುದ್ಧನು ಅನುಸರಿಸಿದ ಪ್ರಖರ ಚಲನಶೀಲತೆಯ, ಚಾತುರ್ವರ್ಣ ವ್ಯವಸ್ಥೆಗೆ ಕೊಡಲಿ ಪೆಟ್ಟು ಹಾಕುವ, ಕ್ಷಿಪ್ರ ಬದಲಾವಣೆಗಳಿಗೆ ಕಾರಣವಾಗುವ ಕಾರ್ಯತಂತ್ರಗಳನ್ನೇ ಬಸವಣ್ಣನವರು ಮುಂದುವರೆಸಿದ್ದು ಕಂಡು ಬರುತ್ತದೆ. ಕೊಲೆಗಡುಕ ಅಂಗುಲಿಮಾಲನನ್ನು ತನ್ನ ಅಮಿತವಾದ ಪ್ರೀತಿಯಿಂದ ಬದಲಾಯಿಸಿದ ಬುದ್ಧನಂತೆ ಬಸವಣ್ಣನವರೂ ಕಳ್ಳತನ ಮಾಡಲು ಬಂದ ಭವಿಗಳನ್ನು ಶರಣರಾಗಿ ಪರಿವರ್ತಿಸಿದ ಮಾರ್ಗ ಒಂದೇ ಪಾತಳಿಯನ್ನು ಸೂಚಿಸುತ್ತದೆ. ಅದೇ ರೀತಿ ವೇಶ್ಯೆಯರಿಗೂ ಸಂಘದಲ್ಲಿ ಬಂದು ಸಾಧಕರಾಗುವಂತೆ ಮಾಡಿದ ಬುದ್ಧನಂತೆ ಬಸವಣ್ಣನವರು ನೆಪಕ್ಕಾಗಿ ಲಿಂಗಧಾರಣೆ ಮಾಡಿ ಪಂಕ್ತಿಯಲ್ಲಿ ಕುಳಿತ ಸುಳ್ಳು ವೇಷದ ಶರಣರಿಗೆ ಅನ್ನದಾಸೋಹದಲ್ಲಿ ಅವಕಾಶ ಕೊಟ್ಟು ಅದರಲ್ಲಿ ಸಮಾನತೆ ಇರಬೇಕು, ಭೋಜನ ಪಂಕ್ತಿಯಲ್ಲಿ ಕುಲವನರಸಬಾರದು, ಪರಿಕಲ್ಪನೆಗಳಲ್ಲಿ ವಿಶಿಷ್ಟ ಸಾಮ್ಯತೆ ಇರುವುದನ್ನು ಕಾಣುತ್ತೇವೆ. ಪ್ರಜಾಪ್ರಭುತ್ವ ಮಾದರಿಯ ಸಾಮಾಜಿಕವ್ಯವಸ್ಥೆ ಇಂತಹ ಕಾರ್ಯತಂತ್ರಗಳಿಂದ ಯಶಸ್ವಿಯಾಗುವ ಸ್ಪಷ್ಟಸೂಚನೆಗಳನ್ನು, ಪಾಠಗಳನ್ನು ನೀಡುತ್ತದೆ. ಅದೇ ಕಾಲಕ್ಕೆ ಧರ್ಮವೇ ಪ್ರಭುತ್ವ ಹೊಂದಿದ ಮತಾಂಧತೆಯ ಕಪಿಮುಷ್ಠಿಗೆ ಸಿಲುಕಿದ ರಾಷ್ಟ್ರಗಳಲ್ಲಿ ಇಂತಹ ಪ್ರಕ್ರಿಯೆಗಳನ್ನು ಕಾನೂನಿನ ಕ್ರಮಗಳಿಂದಲೇ, ದಬ್ಬಾಳಿಕೆಯಿಂದಲೇ ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲವೆಂಬ ಸಂದೇಶವನ್ನು ನೀಡುತ್ತದೆ. ಬಸವ, ಬುದ್ಧರ ಮಾನವೀಯ ನೆಲೆ ಆಧಾರಿತ ಇಂತಹ ಪರಿವರ್ತನೆಯ ಪ್ರಕ್ರಿಯೆ ಕುರಿತು ಡಾ.ಶಿವಮೂರ್ತಿ ಶರಣರು ಇತ್ತೀಚೆಗೆ ಮಹತ್ವದ ಅಭಿಪ್ರಾಯ ಮಂಡಿಸಿದ್ದಾರೆ. ಸೂಳೆ ಸಂಕವ್ವೆಯೆಂಬ ವಚನಾಕಾರ್ತಿ ಅನುಭವಮಂಟಪದಲ್ಲಿ ವಚನ ರಚಿಸಿದ ಉದಾಹರಣೆ, ಹೆಂಡದ ಮಾದಯ್ಯನೆಂಬ ವ್ಯಕ್ತಿ ತಾನು ಶರಣನಾಗಿ ಜೀವನ ನಡೆಸಿದ[16] ಎಂದು ಹೇಳುತ್ತ ಎಲ್ಲಕ್ಕಿಂತ ಮುಖ್ಯವಾಗಿ ಶೂನ್ಯ ಪೀಠವೊಂದನ್ನು ರಚಿಸಿ, ಅನುಭವಮಂಟಪವೆಂಬ ಪ್ರಥಮ ಧಾರ್ಮಿಕ-ಸಂಸತ್ (First Religious Parliament)ನ್ನು ನಿರ್ಮಿಸಿದರು.[17] ಎಂದು ಹೇಳಿದ್ದಾರೆ. ಪ್ರಜೆಗಳಿಗೆ ಹತ್ತಿರವಾದ, ಮತಾಂಧತೆಗೆ ಅವಕಾಶ ನೀಡದ, ಬರೆಯುವ, ಮಾತನಾಡುವ, ಬದುಕಿನ ಎಲ್ಲಾ ಮಾನವಹಕ್ಕುಗಳನ್ನು ಸ್ವಾತಂತ್ರ್ಯಗಳನ್ನು ಧರ್ಮ ಒದಗಿಸಬೇಕು. ನಾನು ಹೇಳಬೇಕು, ನೀನು ಕೇಳಬೇಕು ಎಂಬ ನೀತಿ ಇರಕೂಡದು, ಮುದ್ರಿತ ರೂಪದಲ್ಲಿದ್ದುದಷ್ಟೇ ಧರ್ಮವಲ್ಲ, ಹೊಸ ವಿಚಾರಗಳಿಗೆ, ಸಮಕಾಲೀನ ಸಂದರ್ಭಗಳಿಗೆ ಅವಕಾಶ ನೀಡುವುದರ ಮೂಲಕ ಒಂದು ಧರ್ಮ ತಾನು ಸಮಕಾಲೀನ ಎಂಬುದನ್ನು

ತೋರಿಸಿ ಕೊಡಬೇಕಾಗುತ್ತದೆ[18] ಎಂದು ಧರ್ಮದ ಸಮಕಾಲೀನ ಜವಾಬ್ದಾರಿಗಳನ್ನು ಕುರಿತು ಹೇಳುತ್ತಾರೆ. ಈ ಆಶಯಗಳಿಗೆ ಬೌದ್ಧಧರ್ಮದ ಬೋಧನೆಗಳು, ಬಸವಣ್ಣನವರು ಅನುಸರಿಸಿದ ವಿಧಾನಗಳ ತಳಹದಿ ಇರುವುದನ್ನು ಕಾಣುತ್ತೇವೆ. ಪೂರ್ಣಪ್ರಮಾಣದ ಶೋಷಿತರ ವಿಮೋಚನೆ, ಮಾನವ ಅಭಿವೃದ್ಧಿಯ ಪರಿಕಲ್ಪನೆಗಳು (Human Development Concepts) ಬುದ್ಧ ಬಸವಣ್ಣನವರಲ್ಲಿ ಸಮ್ಮಿಳಿತಗೊಂಡಿರುವುದನ್ನು ಕಾಣುತ್ತೇವೆ. ಅಂಬೇಡ್ಕರ್ ರವರು ಅನುಸರಿಸಿದ ಮಾರ್ಗ ಈ ನೆಲೆಯದ್ದೇ ಆಗಿರುತ್ತದೆ. ಬೌದ್ಧಿಕ ಪಠ್ಯವಾಗಿದ್ದ ಗ್ರಂಥಸ್ಥವಾಗಿದ್ದ ಧಾರ್ಮಿಕ, ಸಾಂಸ್ಕೃತಿಕ ಮಾದರಿಗಳನ್ನು ಪರಿಷ್ಕರಿಸಿ, ಸರಳೀಕರಿಸಿ ಬಸವಣ್ಣನವರಂತೆ ಶೋಷಿತರ ಮಾನವ ಅಭಿವೃದ್ಧಿಗೆ, ಅರಳುವಿಕೆಗೆ ದರ್ಶನ ಮತ್ತು ಪಥಗಳೆರಡನ್ನು ರೂಪಿಸಿದ ರೀತಿ ಜಾಗತಿಕ ಚರಿತ್ರೆಯ ಪುಟಗಳಲ್ಲಿ ವಿಶಿಷ್ಟವಾಗಿರುತ್ತದೆ. ಪ್ರೊಟೆಸ್ಟಂಟ್ ತತ್ವಗಳ ಹಿನ್ನೆಲೆಯಲ್ಲಿ ವರ್ಣ ದ್ವೇಷದ ದಳ್ಳೂರಿಗೆ (Racial Discrimination) ಬಲಿಯಾದ ಕಪ್ಪುವರ್ಣೀಯ ಆಫ್ರಿಕನ್ ಜನಾಂಗವನ್ನು ಶೋಷಣೆಯಿಂದ ವಿಮೋಚನೆಗೊಳಿಸುವ ಕಾರ್ಯಕ್ಕಿಂತಲೂ, ದಲಿತ ವಿಮೋಚನೆಯ ಈ ಕಾರ್ಯ ವಿಭಿನ್ನ ಮಾದರಿಯದು ಎಂಬುದನ್ನು ಗಮನಿಸಬೇಕಾಗುತ್ತದೆ.

ಕರ್ನಾಟಕದ ಮಟ್ಟಿಗೆ ದಲಿತ ವಿಮೋಚನೆಯ ಪರಿಕಲ್ಪನೆಗಳನ್ನು, ಅಸ್ಪೃಶ್ಯರ, ಶೋಷಿತರ ಮಾನವ ಹಕ್ಕುಗಳ ವಿಶ್ಲೇಷಣೆಗಳನ್ನು ಬಸವಣ್ಣನವರ ದಲಿತ ವಿಮೋಚನಾ ಮಾದರಿ ಹೊರತುಪಡಿಸಿ ಚರ್ಚಿಸಲು ಸಾಧ್ಯವೇ ಇಲ್ಲ. ಕರ್ನಾಟಕದ ದಲಿತ ಚಳುವಳಿಯ ಮುಂಚೂಣೆಯ ಸಂಘಟನೆಯಾದ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಯಾವತ್ತಿನಿಂದಲೂ ದಲಿತ ವಿಮೋಚನೆಯನ್ನು ಬುದ್ಧ, ಬಸವ ಮತ್ತು ಅಂಬೇಡ್ಕರ್ ರವರ ಸಿದ್ಧಾಂತಗಳ ಸಮನ್ವಯದ ನೆಲೆಯಲ್ಲೇ ಪ್ರತಿಪಾದಿಸುತ್ತ ಬಂದಿದೆ. ಅದರ ಪ್ರಭಾವಳಿಯ ನಾಯಕರು, ಸಮಾಜ ಕಾರ್ಯಕರ್ತರು, ದಲಿತ ಬುದ್ಧಿಜೀವಿಗಳು, ಸಾಹಿತಿಗಳು, ಬಸವಣ್ಣನವರ ಹಾಗೂ ಇತರ ಶರಣರ ವಚನಗಳನ್ನು ಉದ್ಧರಿಸದೇ ಮಾತು ಮುಗಿಸುವುದಿಲ್ಲ. ದಲಿತರ ಮನೆಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ಇಂದು ಲಕ್ಷ್ಮೀ, ಪಾರ್ವತಿ, ಶಿವನ ಫೋಟೋಗಳು ಮಾಯವಾಗಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಫುಲೆ ಮುಂತಾದ ಸಾಮಾಜಿಕ ಕ್ರಾಂತಿಕಾರಿಗಳ ಭಾವ ಚಿತ್ರಗಳನ್ನು ಅಭಿಮಾನದಿಂದ, ಪ್ರಜ್ಞೆಯ ನೆಲೆಯಲ್ಲಿ ಇಟ್ಟುಕೊಂಡಿರುವುದನ್ನು ಕಾಣುತ್ತೇವೆ. ದಲಿತ ಚಳುವಳಿಯ ಕರಪತ್ರಗಳಲ್ಲಿ ಇಂತಹ ಮಹಾತ್ಮರ ಭಾವಚಿತ್ರಗಳನ್ನು ಮೇಲ್ಭಾಗದಲ್ಲಿ ಸತತವಾಗಿ ಬಳಸಿರುವುದನ್ನು ನೋಡಿದರೆ ಸಂಘಟನೆಗಳ ನಿಲುವುಗಳು ಎದ್ದು ಕಾಣುತ್ತೇವೆ. ಅಂಬೇಡ್ಕರ್‌ರವರ ಜಯಂತಿ, ವಿಚಾರ ಸಂಕೀರ್ಣಗಳು ಮುಂತಾದ ಸಂದರ್ಭದಲ್ಲಿ ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್‌ರವರ ಭಾವಚಿತ್ರಗಳಿಗೆ ಪುಷ್ಪಗೌರವ ಸಲ್ಲಿಸಿಯೇ ಕಾರ್ಯಕ್ರಮಗಳನ್ನು ಸಂಘಟಿಸುವುದನ್ನು ನೋಡಬಹುದಾಗಿದೆ. ಹೀಗೆ ಭಾವನಾತ್ಮಕವಾಗಿ ವೈಚಾರಿಕವಾಗಿ ಎರಡೂ ಆಯಾಮಗಳಲ್ಲಿ ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್‌ರವರ ವಿಮೋಚನಾ ಸಿದ್ಧಾಂತಗಳನ್ನು ಕರ್ನಾಟಕ ದಲಿತ ಸಮುದಾಯ ಒಪ್ಪಿಕೊಂಡಿರುವುದು ಸ್ಪಷ್ಟವಾಗಿದೆ. ಅದೇ ಕಾಲಕ್ಕೆ ಅಂಬೇಡ್ಕರ್ ರವರ ಧಾರ್ಮಿಕ, ಸಾಂಸ್ಕೃತಿಕ ವಿಮೋಚನಾ ಮಾದರಿಗೆ ಹಾಗೂ ಬೌದ್ಧಧರ್ಮವನ್ನು ತಮ್ಮ ಧಾರ್ಮಿಕ, ಸಾಂಸ್ಕೃತಿಕ ಐಡೆಂಟಿಟಿಯಾಗಿ ಹೊಂದುವ ಯತ್ನಗಳು ಪುರೋಹಿತಶಾಹಿತ್ವಕ್ಕೆ ಅವಕಾಶ ನೀಡದ, ಧಾರ್ಮಿಕ ಏಜೆಂಟರಿಗೆ ಆಸ್ಪದ ಇಲ್ಲದ, ಜಾತಿಪದ್ಧತಿಗೆ ಮನ್ನಣೆ ಇಲ್ಲದ, ಬೌದ್ಧಧರ್ಮದತ್ತ ಒತ್ತು ಕೊಟ್ಟಿರುವುದಕ್ಕೆ ಪುರಾವೆ ಒದಗಿಸುತ್ತವೆ ಎಂದು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಡಾ.ಬಿ.ಕೆ.ಸಂಘಸೇನಾವರ್ಧನ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಅಂಬೇಡ್ಕರ್‌ರವರ ಸಮಾಜವಾದಿ, ಜಾತ್ಯಾತೀತ ಹಂಬಲ ಸಂವಿಧಾನದಲ್ಲಿ, ಅವರ

ಚಿಂತನೆಯಲ್ಲಿ ಪ್ರತಿಫಲನಗೊಂಡಿದೆ. ಭಾರತೀಯ ಕಾಲಮಾನದ ಅಪೂರ್ವ ಚಿಂತಕರಲ್ಲಿ ಅಂಬೇಡ್ಕರ್ ಒಬ್ಬರು[20] ಎಂದು ಡಾ.ಎಲ್. ಹನುಮಂತಯ್ಯನವರು ವಿಶ್ಲೇಷಿಸುತ್ತಾರೆ.

ಬುದ್ಧ ಪ್ರಾರಂಭಿಸಿದ ಚಳುವಳಿ ಒಂದು ಮೌನ ಚಳುವಳಿ ಎಂದೇ ಪರಿಗಣಿಸಬೇಕು. ಅವನು ಎದುರುಗೊಂಡ ಒಬ್ಬೊಬ್ಬರನ್ನು ತಾಳ್ಮೆಯಿಂದ ಮೊದಲು ಕೇಳುತ್ತಾನೆ. ಆಮೇಲೆ ತನ್ನ ವಾದವನ್ನು ಮುಂದಿಡುತ್ತಾನೆ. ಪಾರಭೌತಿಕ ವಿಷಯಗಳನ್ನು ಆಶ್ರಯಿಸಿ ತನ್ನ ವಾದವನ್ನು ಮಂಡಿಸಲಾರ ಮತ್ತು ಬಲವಂತ ಹೇರಲಾರ. ಅವನು ಹೇಳುವುದೆಲ್ಲವೂ ಅರಿವಿಗೆ ಗೋಚರವಾಗುವ ಸತ್ಯಗಳು. ಆದ್ದರಿಂದ ಎಲ್ಲರೂ ವಾದ ಮುಗಿಯುವುದರೊಳಗೆ ಬುದ್ಧನ ಉಪಾಸಕರಾಗಿ ಬಿಡುತ್ತಿದ್ದರು. ಮಾನವ ಇತಿಹಾಸದಲ್ಲಿ ಈ ಚಳುವಳಿ ತನ್ನ ಅಂತಿಮ ಸ್ವರೂಪದಲ್ಲಿ ಧರ್ಮವಾಗಿ ದಕ್ಷಿಣ ಮತ್ತು ಈಶಾನ್ಯ ದೇಶಗಳಲ್ಲಿ ನೆಲೆಗೊಂಡಿರುವುದು ಸ್ತುತ್ಯಾರ್ಹ. ಬುದ್ಧನ ತರುವಾಯ ಕಾಣಿಸುವ ಸಾಮಾಜಿಕ ಚಳುವಳಿ, ಬಸವ ಚಳುವಳಿ. ಅದು ಕರ್ನಾಟಕದ ಮಟ್ಟಿಗೆ ಸೀಮಿತವಾಗಿದ್ದರೂ ಅಷ್ಟೇ ಬೃಹತ್ತಾದ ಮತ್ತು ಹಿಂದೂ ಸಾಂಸ್ಥಿಕ ಬೇರುಗಳನ್ನು ಅಲುಗಾಡಿಸಲು ಯತ್ನಿಸಿದ ಚಳುವಳಿಯಾದ್ದರಿಂದ ಬಹು ಮುಖ್ಯವೆನಿಸುತ್ತದೆ. ಏಕದೇವೋಪಾಸನೆ, ಕರ್ಮಸಿದ್ಧಾಂತ ಮತ್ತು ಪುನರ್ಜನ್ಮದ ಮರುಚಿಂತನೆ, ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ನಿವಾರಣೆ, ಸಮಾನತೆ ಮತ್ತು ದಯೆಯ ಮೂಲ ಬಸವ ಚಳುವಳಿಯ ಮುಖ್ಯ ಆಯಾಮಗಳಾಗಿದ್ದವು. ಬುದ್ಧ ಬಸವರಿಬ್ಬರೂ ಸಮಾನತೆಯ ಹರಿಕಾರರು, ಸಾಮಾಜಿಕ ಪರಿವರ್ತನೆಗೆ ಅವರು ಬೋಧಿಸಿದ ಧರ್ಮ ಒಂದು ಸಿದ್ಧಾಂತವಾಗಿ ಚಾರಿತ್ರಿಕ ದಾಖಲೆಯಾಗಿದೆ. ಹಾಗೆಯೇ ಭಾರತೀಯ ಸಾಮಾಜಿಕ ಚಿಂತಕರಲ್ಲಿ ಬುದ್ಧನ ನಂತರ ಬಸವಣ್ಣ ಮತ್ತು ಅಂಬೇಡ್ಕರ್ ಅವರಿಗೆ ವಿಶೇಷ ಸ್ಥಾನವಿದೆ. ಈ ಇಬ್ಬರೂ ಕರ್ನಾಟಕದ ಸಂದರ್ಭದಲ್ಲಿ ಜನ ಸಮುದಾಯಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದಾರೆ. ಬಸವಣ್ಣ ಮತ್ತು ಅಂಬೇಡ್ಕರ್ ನಡುವೆ ಸಾಕಷ್ಟು ವಿಷಯಗಳಲ್ಲಿ ಅಂತರವಿದೆ. ಬಸವಣ್ಣ ಹುಟ್ಟಿದ್ದು ಬ್ರಾಹ್ಮಣ ಜಾತಿಯಲ್ಲಿ, ಆದರೆ ಚಿಕ್ಕಂದಿನಲ್ಲಿಯೇ ಜನಿವಾರ ಹರಿದು ಹಾಕಿ, ಬ್ರಾಹ್ಮಣತ್ವದ ವಿರುದ್ಧ ಹೋರಾಡಿ, ಕೆಳಜಾತಿ ಜನಗಳ ಏಳ್ಗೆಗಾಗಿ ಶ್ರಮಿಸಿದ. ಅಂಬೇಡ್ಕರ್ ಹುಟ್ಟಿದ್ದು ಮಹಾರ್ ಎಂಬ ಅಸ್ಪೃಶ್ಯ ಜಾತಿಯಲ್ಲಿ ಅಂಬೇಡ್ಕರ್ ಹೋರಾಟ ಕೂಡ ಶೋಷಿತರ ವಿಮೋಚನೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿತ್ತು. ಇವರು ಹುಟ್ಟಿ ಬೆಳೆದ ಸಾಮಾಜಿಕ ಪರಿಸರಗಳು ಭಿನ್ನವಾಗಿದ್ದರೂ, ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಟ ಮಾಡಿದುದು ಐತಿಹಾಸಿಕವಾಗಿ ಮಹತ್ವ ಪಡೆದಿದೆ. ಕಾಲದ ಅಂತರ, ಚಿಂತನೆಗಳಲ್ಲಿ ಕೆಲಮಟ್ಟಿನ ಸಾಮ್ಯತೆ -ಭಿನ್ನತೆಗಳಿದ್ದರೂ ಸಮಕಾಲೀನ ಸಂದರ್ಭದಲ್ಲಿ ಮಾನವ ಬದುಕು ಹೆಚ್ಚು ಹೆಚ್ಚು ಜಟಿಲವೂ, ಸಂಕೀರ್ಣವೂ ಆಗುತ್ತಿದ್ದು, ಸಮಾಜ ಸುಧಾರಣೆಗಾಗಿ ಬಸವಣ್ಣ ಮತ್ತು ಅಂಬೇಡ್ಕರ್ ಅವರ ಚಿಂತನೆಗಳಿಂದ ಬೇಕಾದ ಮಾರ್ಗಸೂಚಿಗಳನ್ನು ಕಂಡುಕೊಳ್ಳಬಹುದಾಗಿದೆ.

ಬಸವಣ್ಣ ಮತ್ತು ಅಂಬೇಡ್ಕರ್‌ರವರು ಬೇರೆ ಬೇರೆ ಕಾಲಮಾನಗಳಲ್ಲಿ ಬದುಕಿದರೂ ಮುಖ್ಯವಾಗಿ ಶೋಷಿತರ ಏಳ್ಗೆಗಾಗಿ ಅವರು ಶ್ರಮಿಸಿದರು. ಬಸವಣ್ಣನ ಚಿಂತನೆಗಳಲ್ಲಿ ಮುಖ್ಯವಾಗಿ ಪ್ರತಿಪಾದನೆಗೊಂಡಿದ್ದು, ಬ್ರಾಹ್ಮಣ್ಯದ ನಿರಾಕರಣೆ, ಸ್ಥಾವರಗಳ ಅಳಿವು, ವ್ಯಕ್ತಿ ಸುಧಾರಣೆ, ಕಾಯಕ, ಮತ್ತು ದಾಸೋಹ ತತ್ವಗಳು, ಸಮಾಜವಾದದ ಕಡೆಗೆ ಮುಖ ಮಾಡಿದ್ದವು. ಅಂಬೇಡ್ಕರ್ ಅವರು ಆಧುನಿಕ ಕಾಲದಲ್ಲಿದ್ದುದರಿಂದ ಇವೆಲ್ಲವನ್ನೂ ಕಾನೂನಿನ ಮೂಲಕ ಸಾಧಿಸಲು ಪ್ರಯತ್ನಿಸಿದರೂ ಅವರು ಸಂವಿಧಾನದಲ್ಲಿ ಶೋಷಿತರಿಗೆ ಪರಿಹಾರ ಆಶಾದಾಯಕವಾಗಿತ್ತು. ಆದರೆ ಇಂದು ಮೀಸಲಾತಿ ಸೌಲಭ್ಯವೂ ಜಾತಿ ವ್ಯವಸ್ಥೆಯನ್ನು

ಹೋಗಲಾಡಿಸಲು ಬಳಕೆಯಾಗದೆ, ಅದರ ಸ್ಥಿರೀಕರಣಕ್ಕೆ ಅನುಕೂಲ ಕಲ್ಪಿಸಿದೆ. ದೇವರ ಕಲ್ಪನೆಯನ್ನು ಬಸವಣ್ಣ ಆಲಯಗಳಿಂದ ಬಯಲಿಗೆ ತಂದರೆ, ಇಂದು ಬಸವಣ್ಣನನ್ನೇ ಆಲಯಗಳಲ್ಲಿ ಸ್ಥಾಪಿಸಿ, ಸ್ಥಾವರಗಳನ್ನು ಬೆಳೆಸಲಾಗಿದೆ. ಅಂಬೇಡ್ಕರ್‌ರವರು ಕೊನೆಯಲ್ಲಿ ಬೌದ್ಧಧರ್ಮ ಸ್ವೀಕರಿಸಿದರು ನಿಜ. ಆ ಧರ್ಮದ ಪ್ರಕಾರ ಮೂರ್ತಿ ಪೂಜೆ ಮಾಡುವ ಹಾಗಿಲ್ಲ. ಆದರೆ ಅಂಬೇಡ್ಕರ್ ಅವರ ದೊಡ್ಡ ದೊಡ್ಡ ಮೂರ್ತಿಗಳನ್ನು ಸ್ಥಾಪಿಸಲಾಗುತ್ತಿದೆ. ಕಿಡಿಗೇಡಿ ಜನ ಮೂರ್ತಿ, ಗುಡಿ-ಗುಂಡಾರಗಳನ್ನು ಒಡೆಯುವ ಮೂಲಕ, ಅಪಮಾನ ಮಾಡುವ ಮೂಲಕ ಸಾರ್ವಜನಿಕ ಬದುಕನ್ನು ಆತಂಕದೆಡೆಗೆ ನೂಕುತ್ತಿದ್ದಾರೆ. ಇವುಗಳಿಂದ ಬಿಡುಗಡೆಗೊಳ್ಳಲು ಸಾಧ್ಯವೇ?

ಅಲ್ಲದೇ ಇಂದು ಜಾತಿ ಸಂಘಟನೆಗಳು ತಲೆ ಎತ್ತುತ್ತಿದ್ದು ಈ ಜಾತಿ ಸಂಘಟನೆಗಳು ಮಹಾನ್ ವ್ಯಕ್ತಿಗಳನ್ನು ತಮ್ಮ ನಾಯಕರನ್ನಾಗಿ ಗುರುತಿಸಿಕೊಂಡು ಬೆಳೆಯುತ್ತಿರುವುದು ದುರಂತವೇ ಸರಿ. ಈ ಜಾತಿ ಸಂಘಟನೆಗಳು ಒಗ್ಗೂಡುತ್ತಿರುವುದು ವೈಚಾರಿಕ ವಿಸ್ತಾರಕ್ಕಂತೂ ಅಲ್ಲ. ಅದಕ್ಕಾಗಿಯೇ ಪ್ರತಿ ಜಾತಿಸಂಘಟನೆಗಳು ಒಬ್ಬೊಬ್ಬ ಸುಧಾರಕನನ್ನು ಮುಂದಿರಿಸಿಕೊಂಡು ವ್ಯಕ್ತಿ ಪೂಜೆ ಮಾಡುವುದರಲ್ಲಿ ತೊಡಗಿವೆ. ಅವರವರ ಹೆಸರಿನಲ್ಲಿ ಒಂದೊಂದು ಪೀಠಗಳನ್ನು ಸ್ಥಾಪಿಸಿ ವರ್ಣಾಶ್ರಮ ಪದ್ಧತಿಯ ಯಾವ ಅಂಶವನ್ನು ಪ್ರತಿಭಟಿಸಲಾಗುತ್ತಿತ್ತೋ ಅದೇ ಆಚರಣೆಯನ್ನು ಮುಂದುವರಿಸಲಾಗುತ್ತಿದೆ. ಉದಾಹರಣೆಗೆ ಜಾತಿಯನ್ನು ಪ್ರತಿಭಟಿಸಿ ಉದಯವಾದ ವೀರಶೈವರು ಬಸವಪೀಠವನ್ನು, ಕುರುಬರು ಕನಕಪೀಠವನ್ನು, ಕೋಲಿಕಬ್ಬಿಲಗರು ನಿಜಶರಣ ಅಂಬಿಗರ ಚೌಡಯ್ಯನವರ ಪೀಠವನ್ನು, ಮಾದಿಗರು ಡೋಹರ ಕಕ್ಕಯ್ಯನವರಪೀಠವನ್ನು ಸ್ಥಾಪಿಸುತ್ತ ನಡೆದಿದ್ದಾರೆ. ಇದು ಮುಂದುವರೆದರೆ ಇನ್ನೂ ಕೆಲವು ದಿನಗಳಲ್ಲಿ ಅಂಬೇಡ್ಕರ್‌ರವರ ಹೆಸರಿನಲ್ಲಿಯೂ ಒಂದು ಪೀಠವೋ (ಮಠವೋ) ಸ್ಥಾಪನೆಯಾಗಬಹುದು. ಏಕೆಂದರೆ ಮೂರ್ತಿ ಪೂಜಾ ವಿರೋಧಿಯಾಗಿದ್ದ ಅಂಬೇಡ್ಕರ್‌ರವರ ಮೂರ್ತಿಗಳೇ ಈಗಾಗಲೇ ಸಾವಿರಾರು ಸಂಖ್ಯೆಯಲ್ಲಿ ಪ್ರತಿ ಊರಿನಲ್ಲೂ ಸ್ಥಾಪಿಸಲ್ಪಡುತ್ತಿವೆ. ಈ ಜಾತಿ ಸಂಘಟನೆಗಳು ಯಾವುದೋ ಉದ್ದೇಶವಿಟ್ಟುಕೊಂಡು ಬೆಳೆದು ಬಂದರೂ, ಮುಂದೆ ಅವುಗಳ ಗುರಿ ಮೀಸಲಾತಿಗಾಗಿ ಒತ್ತಾಯಿಸುವುದು, ಮಠ-ಪೀಠಗಳನ್ನು ಸ್ಥಾಪಿಸಿ ಅದಕ್ಕೆ ಸ್ಥಿರಾಸ್ತಿ ಸಂಪತ್ತನ್ನು ಸಂಗ್ರಹಿಸುವುದು. ಆ ಮೂಲಕ ಆಯಾ ಜಾತಿಯ ನಾಯಕರ ಬೇನಾಮಿ ಆಸ್ತಿ ಮತ್ತು ಸಂಪತ್ತನ್ನು ರಕ್ಷಿಸುವುದು. ತಮ್ಮ ಜಾತಿಯವರೇ ಚುನಾವಣೆಯಲ್ಲಿ ಆಯ್ಕೆಯಾಗಲು ಬೇಕಾದ ಆರ್ಥಿಕ-ಸಾಮಾಜಿಕ ಸಹಾಯ ನೀಡುವುದು. ಈ ಎಲ್ಲ ಬೆಳವಣಿಗೆ ದೇಶಕ್ಕೆ ಅಪಾಯಕಾರಿ ಯಾಗುವುದರಲ್ಲಿ ಅನುಮಾನವಲ್ಲ.

ನಾಡೋಜ ಪ್ರೊ. ನಿಸಾರ್ ಅಹ್ಮದ್‌ರು ಹೇಳಿರುವಂತೆ ಜಾಗತೀಕರಣ, ಉದಾರೀಕರಣ, ಧರ್ಮಾಂಧತೆ, ವಿನಾಶಕ ಕೇಡುಗಳು ಜನಜೀವನವನ್ನು ಅಮರಿಕೊಳ್ಳುತ್ತಿರುವುದು ಬಹುಜನರ ಗಮನಕ್ಕಾಗಲೀ, ಆಲೋಚನೆಗಾಗಲೀ ಪಕ್ಕಾಗದಿರುವುದು ಶೋಚನೀಯ ಎಂದು ಹೇಳುತ್ತಾ ಮುಂದುವರಿದು, ನಾವು ಪ್ರಜಾಪ್ರಭುತ್ವವನ್ನು ಸಮುಚಿತವಾಗಿಯೇ ಅಂಗೀಕರಿಸಿದ್ದೇವೆ. ಜೊತೆಗೆ ಧರ್ಮ ನಿರಪೇಕ್ಷತೆಯನ್ನು ಸಂವಿಧಾನ ವಿಧೇಯವಾಗಿ ಒಪ್ಪಿಕೊಂಡಿದ್ದೇವೆ. ಹೀಗಿರುವಾಗ ಹಳ್ಳಿ ನಗರವೆನ್ನದೆ, ಜಾತಿಮತ ಧರ್ಮ ಸಾಮಾಜಿಕ ರೀತಿ ರಿವಾಜುಗಳೆನ್ನದೆ ನಾವೆಲ್ಲರೂ ಭೇದ ಭಾವರಹಿತ ಸಮಾನರು ಎಂಬ ಉದಾತ್ತ ತತ್ವವನ್ನು ಸಮ್ಮತಿಸಿದ್ದೇವೆ. ಆದರೆ ವಾಸ್ತವದಲ್ಲಿ ಇದಕ್ಕೆ ತಿಲಾಂಜಲಿ ನೀಡಿದ್ದೇವೆ. ಮನುಷ್ಯರ ನಡುವಣ ಅಮಾನವೀಯ ಮತ್ತು ಶೋಷಣೆಯ ಪರಿ ಜಗತ್ತಿನೆದುರು ನಮ್ಮನ್ನು ತಲೆ ತಗ್ಗಿಸುವಂತೆ ಮಾಡಿದೆ. ಪ್ರಜಾತಂತ್ರವಿರುವ ಅತ್ಯಂತ

ಬೃಹದ್ದೇಶ ನಮ್ಮದೆಂಬ ಹೆಮ್ಮೆ ಎಂದೋ ಮಣ್ಣು ಮುಕ್ಕಿದೆ.... ಜಗತ್ತು ವೈಜ್ಞಾನಿಕ ಹಾಗೂ ವೈಚಾರಿಕವಾಗಿ ಮುಂದೋಡುತ್ತಿರುವ ಇವೊತ್ತಿನ ಕಾಲದಲ್ಲೂ ಮನುಷ್ಯರು ತಮ್ಮ ಸಹ ಜೀವಿಗಳಾದ ಇತರ ಮನುಷ್ಯರನ್ನು, ಅದರಲ್ಲೂ ದಲಿತ ವರ್ಗವನ್ನು ದಮನಿಸಿ ಅಪಮಾನಿಸುತ್ತಿರುವ, ಸವಲತ್ತು ಹಕ್ಕುಗಳಿಂದ ವಂಚಿಸುತ್ತಿರುವ ರೀತಿ ಎಂತಹವರನ್ನು ಅವಕ್ಕಾಗಿಸುತ್ತದೆ. ಕ್ರೋಧದಿಂದ ಕುದಿಯುವಂತೆ ಮಾಡುತ್ತದೆ.[21] ಹೀಗಾಗಿ ನಮಗಿಂದು ಬುದ್ಧ, ಬಸವ ಮತ್ತು ಅಂಬೇಡ್ಕರ್‌ರವರ ಮಾದರಿಗಳು ಪ್ರಸ್ತುತವಾಗಬಲ್ಲವು ಎಂಬುದನ್ನು ಜನತೆ ಬಹುಬೇಗ ಅರಿಯಬೇಕಾಗಿದೆ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಕೂಡ ಪ್ರೀತಿಯ ಹಣತೆಯನ್ನು ಬತ್ತಿಸಹೊರಟಿರುವ ಶಕ್ತಿಗಳ ವಿರುದ್ಧ ಧ್ವನಿ ಇರಲಿ ಎಂಬ ಆಶಯ ವ್ಯಕ್ತಪಡಿಸಿದ್ದಾರೆ.... ಮಾಹಿತಿ ತಂತ್ರಜ್ಞಾನದಲ್ಲಿ ಅನೂಹ್ಯವಾದ ಪ್ರಗತಿ ಸಾಧಿಸಿದ್ದರೂ ನಮ್ಮ ಜನರ ಮನಸ್ಸು ಇನ್ನೂ ಅವೈಚಾರಿಕತೆಯಲ್ಲಿ ಮತ್ತು ಹೊಸ ಮೂಢನಂಬಿಕೆಗಳಲ್ಲಿ ಸ್ಥಗಿತಗೊಳ್ಳುತ್ತಿದೆ. ದಿನದಿಂದ ದಿನಕ್ಕೆ ದೇವರು ಮತ್ತು ಧರ್ಮದ ಹೆಸರಿನಲ್ಲಿ ವಿಜೃಂಭಿಸುತ್ತಿರುವ ಕೋಮುವಾದದ ಅನಾಹುತಗಳು ಮತ್ತು ಜಾಗತಿಕ ಭಯೋತ್ಪಾದನೆ ಜತೆಗೆ ವಿಸ್ತರಿಸಿಕೊಳ್ಳುತ್ತಿರುವ ಸಂಬಂಧದ ಅಪಾಯಗಳು ಆತಂಕಕಾರಿಯಾಗಿದೆ. ಬಹುಕಾಲದಿಂದ ಕಾಪಾಡಿಕೊಂಡು ಬಂದ ಧಾರ್ಮಿಕ ಸಾಮರಸ್ಯದ ಆಕೃತಿಗಳು ಧಾರ್ಮಿಕ ಮೂಲಭೂತವಾದಿಗಳಿಂದ ಚೂರುಚೂರಾಗುತ್ತಿರುವುದನ್ನು ಅಸಹಾಯಕತೆಯಿಂದ ನೋಡಬೇಕಾಗಿದೆ. ದೇಶದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಅದರ ಗುಣಗಳು ಮತ್ತು ದೋಷಗಳೊಂದಿಗೆ ನಿಚ್ಚಳವಾದ ವೈಚಾರಿಕತೆ ನೆರವಿನಿಂದ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ಹಸಿವಿನಿಂದ ಸಾಯುವಂತೆ ಮಾಡುವುದು ರಕ್ತಪಾತದಷ್ಟೇ ಕ್ರೂರವಾದದ್ದು ಧರ್ಮದ ಮುಖವಾಡ ಹೊತ್ತು ಜನತೆಯ ನಡುವಿನ ಪ್ರೀತಿಯ ಹಣತೆಯನ್ನು ಬತ್ತಿಸ ಹೊರಟಿರುವ ಶಕ್ತಿಗಳ ವಿರುದ್ಧ ನಮ್ಮ ಧ್ವನಿ ಇರಲಿ[22] ಎಲ್ಲ ಮಹನೀಯರ ಆಶಯ ದುಷ್ಟ ಶಕ್ತಿಗಳ ದಮನ, ವೈಚಾರಿಕತೆಯ ಪ್ರಸಾರ, ಅಸಮಾನತೆ ಹೋಗಲಾಡಿಸಿ, ಜಾತೀಯತೆ ಹೊಡೆದೋಡಿಸಿ ಉತ್ತಮ ಸಮಾಜ ನಿರ್ಮಾಣದ ಆಶಯ ವ್ಯಕ್ತವಾಗುತ್ತಿದೆ. ಆದರೆ ಜನಗಳ ಸ್ಮರಣಶಕ್ತಿ ತೀರಾ ಕಡಿಮೆ ಎನಿಸುತ್ತದೆ. ಏಕೆಂದರೆ ಉದಾತ್ತ ವಿಚಾರಗಳನ್ನು ಬಹುಬೇಗ ಮರೆತು, ಅವರ ಆಶಯಗಳು ಕಾರ್ಯರೂಪಕ್ಕೆ ಬರದಿರುವುದು ಈ ದೇಶದ ದುರಂತ. ಅಂತಹ ದುರಂತ ತಪ್ಪಿಸಬೇಕಾಗಿರುವ ಜವಾಬ್ದಾರಿ ವಿದ್ಯಾವಂತ ಜನರು ಹಾಗೂ ಜನ ನಾಯಕರ ಕರ್ತವ್ಯವಾಗಿದೆ. ಇಲ್ಲವಾದರೆ ಬುದ್ಧ, ಬಸವ, ಅಂಬೇಡ್ಕರ್‌ರವರ ಪ್ರತಿರೋಧ, ಪ್ರತಿಭಟನೆಯ ಚಳುವಳಿ ಸದಾ ನಿರಂತರೆಯನ್ನು ಬಯಸುತ್ತದೆ.

6.4 ಅಧ್ಯಯನದ ಮುನ್ನೋಟಗಳು ಮತ್ತು ಹೊಸ ಸಮನ್ವಯ ದೃಷ್ಟಿಕೋನದ ಅಗತ್ಯಗಳು :

ಸಾಮಾಜಿಕ ಸುಧಾರಣೆಯ ಚರಿತ್ರೆಯಲ್ಲಿ ಬುದ್ಧ ಬಸವ, ಅಂಬೇಡ್ಕರ್‌ರವರ ಹೋರಾಟ ಅವಿಸ್ಮರಣೀಯ. ಈ ಮೂರು ಜನ ಮಹನೀಯರು ಭಾರತದ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಉದಯಿಸಿ ಬಂದಿರುವುದು ವಿಶೇಷ. ಒಂದು ಗುರಿ, ಮಹೋನ್ನತ ಉದ್ದೇಶಗಳನ್ನಿಟ್ಟುಕೊಂಡು ಜನರ ಬಾಳಿಗೆ ಬೆಳಕಾದ ಈ ಮಹನೀಯರ ಬದುಕು, ಸಿದ್ಧಾಂತ, ಸದಾಸ್ಮರಣೀಯವಾದವುಗಳು. ಏಕೆಂದರೆ ಮಾನವಹಕ್ಕುಗಳಿಗಾಗಿ ಹೋರಾಟ ತೀವ್ರಗೊಂಡ ಸಂದರ್ಭವಿದು. ಹಾಗೆಯೇ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಸಂದರ್ಭದಲ್ಲಿ ಮೀಸಲಾತಿಗಿಂತ ಆರ್ಥಿಕ ಸ್ವಾವಲಂಬನೆಯ ಮಾರ್ಗಗಳು ಹೆಚ್ಚು ಸೂಕ್ತವೆಂದು ಅನೇಕ ಜನ ಸಂಶೋಧಕರು ತಮ್ಮ ಅಧ್ಯಯನಗಳಿಂದ ದೃಢಪಡಿಸಿದ್ದಾರೆ. ಹಾಗೆಯೇ ಶೋಷಿತ ವರ್ಗಗಳಿಗೆ ಸರಿಸಮನಾದ ಪ್ರಾತಿನಿಧ್ಯ, ಸಾಂವಿಧಾನಿಕ ಸೌಕರ್ಯಗಳ ಪ್ರತಿಪಾದನೆ, ರಾಜಕೀಯ, ಆರ್ಥಿಕ,

ಸಾಂಸ್ಕೃತಿಕ ಸಂಪನ್ಮೂಲಗಳು ಸರ್ವರಿಗೂ ಲಭ್ಯವಾಗುವಂತಹ ವ್ಯವಸ್ಥೆ ರೂಪಿಸಿಕೊಂಡಾಗ ಈ ಮಹಸೀಯರ ಆಶಯಗಳಿಗೆ ಸಿದ್ಧಾಂತಗಳಿಗೆ ಮಾನ್ಯತೆ ನೀಡಿದಂತಾಗುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಲಕ್ಷಾಂತರ ಜನ ಮತಾಂತರಗೊಳ್ಳುತ್ತಿರುವುದು ನಮ್ಮ ಮುಂದಿದೆ. ಯಾಕೆ ಮತಾಂತರಗಳು ಹೆಚ್ಚುತ್ತಿವೆ? ಯಾರು ಮತಾಂತರಕ್ಕೆ ಒಳಗಾಗುತ್ತಿದ್ದಾರೆ? ಇವುಗಳನ್ನು ಅವಲೋಕಿಸಿ ನೋಡಿದಾಗ ದಲಿತರು ಹೆಚ್ಚು ಹೆಚ್ಚು ಮತಾಂತರಗೊಳ್ಳುತ್ತಿರುವ ಸತ್ಯ ಅರಿವಾಗುತ್ತಿದೆ. ಸಾಂಸ್ಕೃತಿಕ ದಬ್ಬಾಳಿಕೆಗೆ ಒಳಗಾಗುತ್ತಿರುವ ಕೆಲ ಸಮುದಾಯಗಳು ಹಾಗೆಯೇ ಸಾಂವಿಧಾನಿಕ ಅಭಿವೃದ್ಧಿ ಕಾರ್ಯಕ್ರಮಗಳು ನಿರೀಕ್ಷಿತ ಫಲ ಕಾಣದೇ ಇರುವುದು ಮೀಸಲಾತಿ ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವುದು, ಶಿಕ್ಷಣ, ಆರೋಗ್ಯ, ಉತ್ತಮ ಜೀವನಮಟ್ಟ ಸರ್ವರಿಗೂ ಸಮರ್ಪಕವಾಗಿ ಲಭ್ಯವಾಗದಿರುವುದು, ಮತಾಂತರಗೊಳ್ಳಲು ಪ್ರಮುಖ ಕಾರಣವಾಗುತ್ತಿವೆ. ಅಷ್ಟೇ ಅಲ್ಲ, ಸಾಮಾಜಿಕ-ಧಾರ್ಮಿಕ ರಂಗದಲ್ಲಿ ದಲಿತರ ಪೂರ್ಣ ಪ್ರಮಾಣದ ವಿಮೋಚನೆ, ಬಿಡುಗಡೆ ಸಾಧ್ಯವಾಗದೇ ಇರುವುದು, ಸ್ವಾಭಿಮಾನದ ಜೀವನ ನಿರ್ವಹಣೆಗೆ ಸಮರ್ಪಕ ವಾತಾವರಣ ನಿರ್ಮಾಣವಾಗದೇ ಇರುವ ಈ ಕಾಲಘಟ್ಟದಲ್ಲಿ ದಲಿತರು ಸಮಾನತೆ ಸಾರುವ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದಾರೆ. ಹಾಗೆಯೇ ಉತ್ತರಭಾರತದ ಜಾಟರು, ಇನ್ನಿತರ ಕೆಲ ಶೂದ್ರರು ವೀರಶೈವಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇದೆಲ್ಲಕ್ಕೂ ಕಾರಣಗಳು ನಮ್ಮ ಸಾಮಾಜಿಕ ಧಾರ್ಮಿಕ ರಂಗದಲ್ಲಿ ಇನ್ನೂ ಗೋಚರಗೊಳ್ಳುತ್ತಲೇ ಇವೆ. ಕೆಲವು ಕಾರಣಗಳು ಅವುಗಳ ನಿವಾರಣೆಗೆ ಮತಾಂತರದೆಡೆಗೆ ಜನ ಗಮನ ಹರಿಸುತ್ತಿದ್ದಾರೆ.

ಅಂಬೇಡ್ಕರ್‌ರವರು ತಮ್ಮ ತಾಂತ್ರಿಕ ಅರ್ಥಶಾಸ್ತ್ರ ಬರವಣಿಗೆಗಳಲ್ಲಿ ಆರ್ಥಿಕ ವಸಾಹತುಶಾಹಿಯನ್ನು ಕುರಿತು ಪ್ರಸ್ತಾಪಿಸಿದ್ದಾರೆ. ತಮ್ಮ ರಾಜಕೀಯ ಬರಹಗಳಲ್ಲಿ ಅವರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಸಮಾನತೆಗಳ ಪರಿಣಾಮವಾಗಿ ರಾಜಕೀಯ ಉದಾರವಾದವು ಗೊಂದಲಕ್ಕೀಡಾಗಿರುವುದರ ಬಗ್ಗೆ ಒತ್ತಿ ಹೇಳಿದ್ದಾರೆ. ಜಾತಿಯ ಉಗಮವನ್ನು ಕುರಿತು ಅವರ ವಿಶ್ಲೇಷಣೆಯು ಅಧಿಕಾರಯುಕ್ತವಾಗಿದೆ. ಇವರು ಉದಾರವಾದಿಗಳಾಗಿದ್ದರೂ, ಭಾರತೀಯ ಸ್ಥಿತಿ-ಗತಿಗಳಲ್ಲಿ ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆಯು, ಇಲ್ಲಿಯ ಅಸಮಾನತೆ ಹಾಗೋ ಶೋಷಣೆಯನ್ನು ನಿವಾರಿಸುವಲ್ಲಿ ಸಕಾರಾತ್ಮವಾಗಿ ಹಸ್ತಕ್ಷೇಪ ಮಾಡಬೇಕಾಗುತ್ತದೆ ಎಂದು ಅರಿತಿದ್ದರು. ಭಾರತ ರಾಷ್ಟ್ರದ ಗುಣಧರ್ಮ ಕುರಿತಾದ ಮಹತ್ವದ ವಿಷಯದ ಬಗ್ಗೆ ಅವರು ಸಮರ್ಪಕವೂ, ಸರಿಯಾದುದು ಆದ ನಿಲುಮೆಯನ್ನು ತಾಳಿದ್ದರು. ಅದೆಂದರೆ, ಯಾವ ರಾಷ್ಟವು ತನ್ನ ಒಂದು ದೊಡ್ಡ ಜನ ಸಂಖ್ಯೆಯನ್ನು ಅರೆ ಮಾನವ ರೀತಿಯಲ್ಲಿ ನಡೆಸಿಕೊಳ್ಳುತ್ತದೆಯೋ ಅದು ನಿಜವಾದ ರಾಷ್ಟವಾಗಲಾರದು. ಅಂತೆಯೇ, ಯಾವ ಜನಸಂಖ್ಯೆ ವಿವಿಧ ಅನ್ಯಾಯಗಳಿಗೆ ತುತ್ತಾಗಿರುತ್ತದೆಯೋ ಅದು ಆ ರಾಷ್ಟ್ರದ ಒಂದು ಭಾಗವೆಂದು ಪ್ರಾಮಾಣಿಕವಾಗಿ ಭಾವಿಸಲಾರರು ಎಂದು, ಭಾರತದ ವಿವಿಧ ಅಂಶಗಳಾದ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಕುರಿತು ಅಂಬೇಡ್ಕರ್‌ರವರು ತಾವು ಬರೆದಾಗ ನೀಡಿರುವ ವಿಶ್ಲೇಷಣೆಯು ಇಂದಿಗೂ ಅಷ್ಟೇ ಔಚಿತ್ಯವಾಗಿದೆ. ಭಾರತವೂ ಆಧುನಿಕ ಔದ್ಯಮಿಕ ರಾಷ್ಟ್ರವಾಗಿ ರೂಪುಗೊಳ್ಳಬೇಕಾದರೆ ಅವರ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಗಾಂಧೀಜಿಯವರ ಹಾಗೆಯೇ ಅಂಬೇಡ್ಕರ್ ಆದರ್ಶವಾದಿ ಹಾಗೂ ವಾಸ್ತವವಾದಿಯೂ ಆಗಿದ್ದರು. ಆದರೆ ಆಧುನಿಕತೆಯನ್ನು ತಿರಸ್ಕರಿಸಲಿಲ್ಲ, ಗ್ರಾಮಕ್ಕೆ ಮರಳಿ ಎಂದು ಬೋಧಿಸಲಿಲ್ಲ, ಹಾಗೆ ನೋಡಿದರೆ, ಭಾರತೀಯ ಗ್ರಾಮವು ಹಿಂದುಳಿದಿದ್ದು, ಅದು ಅಸಮಾನತೆಗಳು ಹಾಗೂ ಶೋಷಣೆಗಳ ಆಗರವಾಗಿರುವುದರ ಬಗ್ಗೆ

ತೀವ್ರವಾಗಿ ಟೀಕಿಸಿದ್ದರು. ಇದಲ್ಲದೇ ಇವುಗಳು ಪ್ರತಿಗಾಮಿ ಶಕ್ತಿಗಳಿಂದ ಕೂಡಿದವುಗಳಾಗಿದ್ದವು. ಇವುಗಳನ್ನು ಕ್ರಾಂತಿಕಾರಿಗೊಳಿಸಬೇಕೆಂದು ಅಭಿಪ್ರಾಯ ಪಟ್ಟಿದ್ದರು. ಭಾರತೀಯ ನಾಯಕ ರತ್ನಗಳಾದ ಗಾಂಧಿ ಹಾಗೂ ನೆಹರು ಇವರೊಡನೆಯೇ ಅಂಬೇಡ್ಕರ್ ಕೂಡ ಆಧುನಿಕ ಭಾರತದ ಸಂಸ್ಥಾಪಕ ಪಿತೃ ಎಂದು ಭಾರತೀಯ ಇತಿಹಾಸವು ದಾಖಲಿಸಿರುವುದು ಯಥೋಚಿತವಾಗಿದೆ. ಇವರನ್ನು ದಲಿತ ನಾಯಕರು ಎಂದು ಮಾತ್ರ ಗುರುತಿಸದೇ. ಇವರು ಪ್ರಜಾನಾಯಕರು ರಾಷ್ಟ್ರೀಯ ನಾಯಕರು ಆಗಿದ್ದರು ಎಂಬುದನ್ನು ಮನಗಾಣಬೇಕಾಗಿದೆ.

ಮಹಾನ್ ಮೇಧಾವಿಗಳೂ, ಭಾರತದ ಸಂವಿಧಾನ ಶಿಲ್ಪಿಗಳೂ ಆದ ಡಾ।ಅಂಬೇಡ್ಕರ್ ಅವರು ಸಾಮಾಜಿಕ ಪ್ರಜಾಪ್ರಭುತ್ವದ ಬಗೆಗಿನ ವಿಚಾರಧಾರೆ ತುಂಬ ಮನನೀಯವಾದದ್ದು, ಎಲ್ಲ ಕಾಲಕ್ಕೂ ಪ್ರಸ್ತುತವಾದದ್ದು. ರಾಜಕೀಯ ಪ್ರಜಾಪ್ರಭುತ್ವವು ಬಹುಕಾಲ ಉಳಿಯಬೇಕಾದರೆ ಅದಕ್ಕೆ ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿ ಇರಬೇಕೆಂಬುದು ಅವರ ಖಚಿತ ಅಭಿಪ್ರಾಯ. ಸಾಮಾಜಿಕ ಪ್ರಭುತ್ವ ಎಂದರೆ ಅದೊಂದು ಜೀವನ ಪದ್ಧತಿ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವೆಂಬ ತತ್ವಗಳನ್ನು ಒಪ್ಪುವ ಪದ್ಧತಿ. ಈ ಮೂರು ಬೇರ್ಪಡಿಸಲಾಗದವು. ಸಮಾನತೆ ಇಲ್ಲದ ಸ್ವಾತಂತ್ರ್ಯ ಬಹುಸಂಖ್ಯಾತರ ಮೇಲೆ ಕೆಲವೇ ಕೆಲವರ ದಬ್ಬಾಳಿಕೆಯಾಗಿ ಪರಿಣಮಿಸುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆ ಸ್ಫೂರ್ತಿಯ ಚಿಲುಮೆಯನ್ನು ಬತ್ತಿಸುತ್ತದೆ. ಸೋದರತ್ವವಿಲ್ಲದ ಸ್ವಾತಂತ್ರ್ಯ, ಸಮಾನತೆಗಳು ಸಹಜವಾಗಿ ಯಶಸ್ವಿಯಾಗುವುದಿಲ್ಲ. ಭ್ರಾತೃತ್ವ ಭಾರತೀಯರೆಲ್ಲರೂ ಒಂದೇ, ಸೋದರರು ಎಂಬ ಭಾವನೆ ಇಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯಗಳು ಕೇವಲ ಬಣ್ಣ ಬಳಿದಂತೆ ಬೇರೇನೂ ಅಲ್ಲ ಎಲ್ಲ ಮಾನವರ ಸಮಾನತೆಯಲ್ಲಿ ಅಚಲ ವಿಶ್ವಾಸವನ್ನಿಟ್ಟಿದ್ದ ಡಾ. ಅಂಬೇಡ್ಕರ್ ಅವರ ಸಂದೇಶ: ಒಂದೇ ಮಾನವ ಕುಲ, ಒಂದೇ ಮೌಲ್ಯ, ಸಮಾನತೆ ಮತ್ತು ಜಾತಿರಹಿತ ಸಮಾಜ .

ಬುದ್ಧ, ಬಸವ, ಅಂಬೇಡ್ಕರ್ ಈ ಮೂವರು ಮಹಾ ಪುರುಷರು ಸಮಾನ ಮನಸ್ಕರಾಗಿದ್ದರು, ಸಮಾನ ಸಾಮ್ಯಗಳನ್ನು ಹೊಂದಿದ್ದರು.

1) ಈ ಮೂವರು ಮಹನೀಯರು ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳ ಆಧಾರದ ಮೇಲೆ ನವ ಸಮಾಜವೊಂದನ್ನು ಸ್ಥಾಪಿಸಲು ತಮ್ಮ ಬದುಕನ್ನೇ ಮುಡುಪಾಗಿಟ್ಟರು.
2) ಯಾವುದೇ ಆದರ್ಶ ಸಮಾಜಕ್ಕೆ ನೈತಿಕತೆಯೇ ತಳಹದಿಯಾಗಿರಬೇಕೆಂದು ಸಾರಿ ಹೇಳಿದರು.
3) ಶೋಷಿತರ, ದೀನದಲಿತರ, ಬಡವರ ಕಲ್ಯಾಣಕ್ಕಾಗಿ ಹೋರಾಡಿದರು.
4) ಸ್ವಾರ್ಥವಿಲ್ಲದೇ, ಅಧಿಕಾರಲಾಲಸೆ ಇಲ್ಲದೇ, ಕೀರ್ತಿಯ ಆಶೆ ಇಲ್ಲದೇ ಮಾನವ ಕುಲದ ಕಲ್ಯಾಣಕ್ಕಾಗಿ ತಮ್ಮ ಬದುಕನ್ನು ಮೀಸಲಾಗಿಟ್ಟರು.
5) ಮಹಿಳೆಯ ವಿಮೋಚನೆಗಾಗಿ ಶ್ರಮಿಸಿದರು.
6) ಈ ಮೂವರು ಅಸಂಖ್ಯಾತ ಜನರ ಹೃದಯಗಳನ್ನು ಗೆದ್ದವರು.

"ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" -ಕುವೆಂಪು. "ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ...ಬಲ್ಲಿರಾ..."-ಕನಕದಾಸರು. "ಇವನಾರವ, ಇವನಾರವ ಎಂದೆಣಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆಣಿಸಯ್ಯ" -ಬಸವಣ್ಣನ ವಾಕ್ಯಗಳು

ಜಾತಿ, ಕೋಮುವಾದದ ವಿರದ್ಧ ಮಾನವೀಯತೆಯ ಸಂದೇಶ ಸಾರುತ್ತಿವೆ. ಹಾಗೆಯೇ "ಕಾರ್ಮಿಕವರ್ಗಕ್ಕೆ ಜಾತಿ, ಭಾಷೆ, ಧರ್ಮದ ಭೇದವಿಲ್ಲ. ಅದರದ್ದು ದುಡಿಯುವ ಜಾತಿ, ಭಾಷೆ, ಧರ್ಮವಷ್ಟೇ" ಎಂದು ಕಾಮ್ರೇಡ್ ಸೂರಿಯ ಹೇಳಿಕೆ. "ಜಗತ್ತಿನ ಯಾವುದೇ ಮೂಲೆಯಲ್ಲಿ ಅನ್ಯಾಯ ದಬ್ಬಾಳಿಕೆ ವಿರುದ್ಧ ಸಿಡಿದೆದ್ದಾಗ ನೀನು ಆಗ ನನ್ನ ಸಂಗಾತಿ" ಎಂಬ ಚೆಗುವಾರರ ವಾಕ್ಯ "ಸಾಗುತಿರಲಿ ಸಮತೆಯ ಹಾದಿಯಲಿ, ಕತ್ತಲ ಸೀಳುತ್ತ ಬೆಳಕನ್ನು ಹುಡುಕುತ್ತಾ ಸಾಗುತಿರಲಿ ಸಮರ" ಕುವೆಂಪುರವರ ಮಾತು, ಕಾರ್ಲ್‌ಮಾರ್ಕ್ಸ್‌ರವರ ವಿಶ್ವದ ಕಾರ್ಮಿಕರೆ ಒಂದಾಗಿ ನಿಮಗೆ ಕಳೆದುಕೊಳ್ಳಲು ಸಂಕೋಲೆಗಳಲ್ಲದೆ ಬೇರೆನಿಲ್ಲ. ಗಳಿಸಲು ಜಗತ್ತೇ ಇದೆ. ಹಾಗೂ ತತ್ವ ಶಾಸ್ತ್ರಜ್ಞರು ಜಗತ್ತನ್ನು ಅರ್ಥೈಸಿದ್ದಾರೆ. ಆದರೆ ಅದನ್ನು ಬದಲಾಯಿಸುವುದೇ ಪ್ರಮುಖ ಪ್ರಶ್ನೆ ಎಂಬ ಮಾತು, ಇವು ಕೇವಲ ಗೋಡೆ ಬರಹಗಳಾಗದಿರಲಿ, ವ್ಯವಸ್ಥೆ ಮಾರ್ಪಾಡಾಗಲಿ ಎಂಬ ಆಶಯವನ್ನು ಎಡಪಂಥೀಯ ಚಿಂತಕರು, ಸಮತಾವಾದಿ ಆಲೋಚನೆಯುಳ್ಳವರ ಅನಿಸಿಕೆಗಳು. ಇಂತಹ ಉದಾತ್ತ ವಿಚಾರಗಳನ್ನೇ ಬುದ್ಧ, ಬಸವ, ಅಂಬೇಡ್ಕರ್‌ರು ಹೊಂದಿದ್ದರು. ಅವರ ವಿಚಾರಗಳಲ್ಲಿ ಈ ಅಂಶಗಳು ಪ್ರತಿಧ್ವನಿಸಿವೆ.

ಆದರೆ ಪ್ರಸ್ತುತ ಸಂದರ್ಭವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜಾತೀಯತೆ, ಕೋಮುವಾದ, ವಿಭಿನ್ನ ರೂಪದಲ್ಲಿ ಈ ದೇಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಹಿಂದೂ ಸಮಾಜೋತ್ಸವ ಎಂಬ ಕೋಮು ದ್ವೇಷದ ಕುಲುಮೆಯಲ್ಲಿ ದೇಶ ಕುದಿಯುತ್ತಿದೆ.ಈಗ ಎಲ್ಲೆಲ್ಲೂ ಹಿಂದೂ ಸಮಾಜೋತ್ಸವಗಳು ಜರುಗುತ್ತಿವೆ. ಇವುಗಳಿಂದ ಅಲ್ಲಿಯ ಬ್ಯಾನರ್-ಭಾಷಣಗಳಿಂದಾಗಿ ಕೋಮು ಗಲಭೆ ಹೊತ್ತಿ ಉರಿದಿವೆ. ಜನರ ಐಕ್ಯತೆ ಒಡೆದಿದೆ. ದ್ವೇಷ ದಳ್ಳೂರಿಯಾಗಿದೆ. ಕೋಮು ದ್ವೇಷದೊಂದಿಗೆ ರಾಜಕೀಯ ಬೆಳೆ ಬೆಳೆಸುವ ಪ್ರಯತ್ನಗಳು ನಡೆದಿವೆ. ಈ ಸಮಾಜೋತ್ಸವಗಳ ಅಜೆಂಡಾ, ಹಿಡನ್ ಅಜೆಂಡಾ, ಇಡೀ ಸಮಾಜ ದೇಶ ರಕ್ಷಣೆಯ ಫೋಜು ನೀಡುವ ಈ ಸಮಾವೇಶಗಳಲ್ಲಿ ದೇಶದ ಬಡತನ, ದಾರಿದ್ರ್ಯ, ನಿರುದ್ಯೋಗ, ಅನಕ್ಷರತೆ, ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಅವನತಿಗಳ ಪ್ರಸ್ತಾಪವಾಗುವುದಿಲ್ಲ. ದೇಶದ ಮೇಲೆರಗುತ್ತಿರುವ ವಿಶ್ವಬ್ಯಾಂಕ್‌ನಂತಹ ವಿದೇಶಿ ಹಣಕಾಸು ಸಂಸ್ಥೆಗಳು ಬಹು ರಾಷ್ಟ್ರೀಯ ಕಂಪನಿಗಳ ದಾಳಿಗಳ ಬಗ್ಗೆ ಸಾಮ್ರಾಜ್ಯಶಾಹಿ ಪಿತೂರಿಗಳ ಬಗೆಗೆ ಚಕಾರವೂ ಹೊರಡುವುದಿಲ್ಲ. ಇನ್ನೂ ರೈತರ ಆತ್ಮಹತ್ಯೆ, ಕೂಲಿಕಾರರ ಹಸಿವು, ಕಾರ್ಮಿಕರ ಕಂಗಾಲುತನಗಳು ಚರ್ಚೆಗೆ ಬರುವುದಿಲ್ಲ? ಸಂಘ ಪರಿವಾರದ ಲೆಕ್ಕದಲ್ಲಿ ಇವರು ಈ ದೇಶದವರಲ್ಲವೆ? ಅಥವಾ ಇವರು ಹಿಂದೂಗಳಲ್ಲವೇ? ಇಂತಹ ಮಾತುಗಳನ್ನಾಡುವವರು ಸೆಕ್ಯೂಲರ್‌ವಾದಿಗಳು ಇದನ್ನೂ ಪ್ರಶ್ನಿಸುವವರ ವಿರುದ್ಧ ಸಂಘ ಪರಿವಾರದವರು ಸಿಡಿದುಬೀಳುತ್ತಾರೆ. ಭಾರತ ಹಿಂದುಗಳದ್ದು ಮಾತ್ರ, ಉಳಿದವರು ಇರಬೇಕಿಲ್ಲ, ಹಾಗೇನಾದರೂ ಇರುವುದಾದರೆ, ಎರಡನೇ ದರ್ಜೆಯವರಾಗಿ ಅಡಿಯಾಳಾಗಿರಬೇಕೆ ಹೊರತು ಬೇರಲ್ಲ ಎಂದು ಹೇಳಿ ದಲಿತರು, ಶೂದ್ರರು, ಅಲ್ಪಸಂಖ್ಯಾತರು, ಕಮ್ಯೂನಿಸ್ಟ್‌ರು, ಜಾತ್ಯಾತೀತರ ವಿರುದ್ಧ ವಿಷ ದ್ವೇಷಕಾರಿದ ಫ್ಯಾಶಿಸ್ಟ್ ಗುರು ಗೋಲ್ವಾಲ್ಕರ್‌ರ ಸಂದೇಶ ಸಮಾಜೋತ್ಸವದಲ್ಲಿ ಸಾರುತ್ತಿದೆ. ಬಹುಭಾಷೆ, ದೇಶ, ಜನಾಂಗಗಳನ್ನು ಒಪ್ಪುವ ಸಮರ್ಥಿಸುವ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಸಂವಿಧಾನದ ವಿರುದ್ಧವೇ ಇಷ್ಟೆಲ್ಲಾ ದಾಳಿ ನಡೆಸಲಾಗುತ್ತಿದೆ. ಉಗ್ರ ಖಂಡನೀಯ ವಿಚಾರವೆಂದರೆ: ಇಂತಹ ವಿಭಜಕ ಮತೀಯ ದ್ವೇಷ ಕಾರುವ ಸಮಾವೇಶಕ್ಕೆ ಫ್ಯಾಶಿಸ್ಟ್ ಗೋಲ್ವಾಲ್ಕರ್ ಜೊತೆಗೆ ನಾಡಿನ ಹಿರಿಯ ಹೆಮ್ಮೆಯ ಚೇತನಗಳಾದ ಬುದ್ಧ, ಬಸವ, ಕನಕದಾಸರು, ಡಾ। ಅಂಬೇಡ್ಕರ್, ಭಗತ್‌ಸಿಂಗ್, ರಾಷ್ಟ್ರಕವಿ ಕುವೆಂಪುರವರ ಭಾವಚಿತ್ರಗಳನ್ನು ಫ್ಯಾಶಿಸ್ಟ್‌ರ ಜೊತೆ ಹಾಕಿದ್ದಾರೆ.

ಅಲ್ಲದೇ ಕೆಲವು ಲಿಂಗಾಯತ, ಒಕ್ಕಲಿಗ ಮಠಾಧೀಶರನ್ನು ಸೆಳೆಯುತ್ತಿರುವುದು, ಜನರ ಮನಸ್ಸನ್ನು ಸೆಳೆಯುವ ಕುತಂತ್ರ. ಇದರ ಹುನ್ನಾರಗಳನ್ನು ಜನತೆ ಅರಿಯಬೇಕು ಹಾಗೂ ಪ್ರತಿಭಟಿಸಬೇಕು. ಇಲ್ಲವಾದರೆ ಪ್ರಗತಿ ಪರ ಚಿಂತಕರ ಸಿದ್ಧಾಂತ, ಭಾವಚಿತ್ರಗಳನ್ನು ಕೋಮುವಾದಿಗಳು ಕಬಳಿಸುವ ದಿನಗಳು ದೂರವಿಲ್ಲ. ಆದಕ್ಕಾಗಿ ಕೋಮು ದಳ್ಳೂರಿಗೆ ಎರಚಿ ತಣ್ಣೀರು ಎಂಬ ಎಚ್ಚರದೊಂದಿಗೆ ಸಿದ್ಧಾಂತವಿಲ್ಲದ ಕೋಮುವಾದಿಗಳ ನಾಟಕವನ್ನು ಜನರು ಜನಪರ ಸಿದ್ಧಾಂತಗಳನ್ನು ಜನಾಂದೋಲನವಾಗಿ ಬೆಳೆಸಬೇಕಾದ ಸಂದರ್ಭ ಇದಾಗಿದೆ.

ಈ ಅಧ್ಯಯನದಲ್ಲಿ ಪ್ರಸ್ತಾಪಿಸಲೇಬೇಕಾದ ಮತ್ತೊಂದು ವಿಷಯ ಪ್ರತಿಮೆಗಳು: ಪ್ರತಿಮೆಗಳನ್ನು ಭಗ್ನಗೊಳಿಸುವುದು ಇತ್ತೀಚೆಗೆ ಸಾಮೂಹಿಕ ಸನ್ನಿಯಾಗುತ್ತಿದೆ. ಇದು ಸಾರ್ವಜನಿಕರಲ್ಲಿ ಅತಂತ್ರ, ತಲ್ಲಣ ಉಂಟು ಮಾಡುತ್ತಿದೆ. ಯಾವುದಾದರೂ ಊರಲ್ಲಿ ಪ್ರತಿಮೆ ಭಗ್ನವಾಯಿತು ಎಂದಾಕ್ಷಣ ದೊಂಬಿ, ಗಲಭೆ, ಸಾವು, ನೋವು ಮಾಮೂಲಾಗುತ್ತಿವೆ. ಅಂಬೇಡ್ಕರ್ ಪ್ರತಿಮೆ ಭಗ್ನಗೊಂಡಾಗ ದಲಿತರು ಬೀದಿಗಿಳಿಯುವುದು ಸಾಮಾನ್ಯ. ಆದರೆ ಈ ಭಗ್ನತೆಯ ಹಿಂದಿರುವ ವ್ಯಕ್ತಿಗಳಾರು? ಉದ್ದೇಶವೇನು? ಸತ್ಯವೇನು? ಎಂಬುದನ್ನು ಅರಿಯಬೇಕಾದ ಅನಿವಾರ್ಯ ಪರಿಸ್ಥಿತಿ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಏಕೆಂದರೆ ದಲಿತರ ಹೋರಾಟ ಮುಖ್ಯವಾಗಿ ಅನ್ನ ಮತ್ತು ಆತ್ಮಗೌರವಕ್ಕೆ ಸಂಬಂಧಿಸಿದ್ದು. ಹೀಗಾಗಿ ದಲಿತ ಹೋರಾಟಗಳು ಭೂಮಿ, ಉದ್ಯೋಗ, ಶಿಕ್ಷಣ, ವಸತಿ ಮುಂತಾದ ಜೀವನಾವಶ್ಯಕ ಸಂಗತಿಗಳನ್ನು ಕುರಿತು ಎಷ್ಟು ತೀವ್ರವಾಗಿರುತ್ತವೋ ಅಷ್ಟೇ ತೀವ್ರವಾಗಿ ಸ್ವಾತಂತ್ರ್ಯ, ಸಮಾನತೆ, ಆತ್ಮಗೌರವಕ್ಕಾಗಿಯೂ ಆಗ್ರಹಿಸುತ್ತವೆ. ದಲಿತಸಂಘಟನೆಗಳು ಹುಟ್ಟಿಕೊಂಡಿದ್ದೇ ಸ್ವಾವಲಂಬಿಯಾದ ಘನತೆಯ ಬಾಳಿಗಾಗಿ ಹಕ್ಕೊತ್ತಾಯ ಮಂಡಿಸಲು. ಆದರೆ ಇಂದು, ಎಲ್ಲ ಚಳುವಳಿ ಹೋರಾಟಗಳಲ್ಲಿ ಆಗುವ ಹಾಗೆ ಈ ಮೂಲಭೂತ ಸಂಗತಿಯು ಮರೆಯಾಗದಿದ್ದರೂ ಮಸುಕಾಗಿದೆ. 1970-80ರ ದಶಕದಲ್ಲಿ ಹುಟ್ಟಿಕೊಂಡ ದಲಿತಚಳುವಳಿ, ರೈತಚಳುವಳಿ, ಕನ್ನಡಚಳುವಳಿಗಳೆಲ್ಲ ಇಂದು ದುರ್ಬಲಗೊಂಡಿವೆ. ನಾಯಕರ ಪ್ರತಿಷ್ಠೆ, ಸ್ವಹಿತ, ರಾಜಕೀಯ ಅಧಿಕಾರಾಕಾಂಕ್ಷೆ, ವ್ಯಕ್ತಿಗತ ಹಿತ ಮುಖ್ಯವಾಗಿ ಸಂಘಟನೆಗಳು ಛಿದ್ರ ಛಿದ್ರಗೊಂಡಿವೆ. ಇದು ದಲಿತ ಚಳುವಳಿಗೂ ತಟ್ಟಿದೆ. ಈಚೆಗೆ ಕಾನ್ಪೂರದಲ್ಲಿ, ಬೀದರ ಜಿಲ್ಲೆಯಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ದುಷ್ಕರ್ಮಿಗಳನ್ನು ಭಗ್ನಗೊಳಿಸಿದರು. ದಲಿತರ ಮೇಲಿನ ದೌರ್ಜನ್ಯದಷ್ಟೇ ಇದು ಸಾಮಾನ್ಯವಾಗುತ್ತಿದೆ. ದಲಿತರಿಂದು ಜಾಗೃತಗೊಂಡು, ಮೀಸಲಾತಿ, ಸಂವಿಧಾನದ ರಕ್ಷಣೆಯಿಂದ ಬಲಗೊಳ್ಳುತ್ತಿರುವುದು, ಆರ್ಥಿಕ ರಾಜಕೀಯ ಶಕ್ತಿಯಾಗುತ್ತಿರುವುದು ಮುಂದುವರಿದ ಕೆಲ ಮೇಲ್ಜಾತಿಯ ಜನಗಳ ಅಸಹನೆಗೆ ಕಾರಣವಾಗಿ ಅಂಬೇಡ್ಕರ್ ಪ್ರತಿಮೆ ವಿರೂಪಗೊಳಿಸುವ ಪ್ರಸಂಗಗಳು ಹೆಚ್ಚುತ್ತಿವೆ. ಈ ಅನರ್ಥಕಾರಿ, ಅವಿವೇಕತನದ, ಅನರ್ಥಕಾರಿಗಳಾದ ಕಿಡಿಗೇಡಿಗಳ ಹೀನಕೃತ್ಯಕ್ಕೆ ಸಾರ್ವಜನಿಕರು ತಲ್ಲಣಗೊಳ್ಳುತ್ತಿದ್ದಾರೆ. ಇದು ಆತಂಕಕಾರಿ ಬೆಳವಣಿಗೆ ಎಂದರೆ ತಪ್ಪಾಗಲಾರದು.

ದಲಿತರು ತಮ್ಮ ಮೇಲೆ ದೌರ್ಜನ್ಯಗಳಾದಾಗ ಪ್ರತಿಭಟಿಸುವುದಕ್ಕಿಂತ ಹೆಚ್ಚು ತೀವ್ರವಾಗಿ ಡಾ।ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದಾಗ ಪ್ರತಿಭಟಿಸುತ್ತಾರೆ. ಯಾಕೆ? ಇತ್ತೀಚೆಗೆ ಡಾ। ಅಂಬೇಡ್ಕರ್ ಪ್ರತಿಮೆಗೆ ಯಾಕೆ ಅವಮಾನ ಮಾಡುವ ಪ್ರಕರಣಗಳು ಹೆಚ್ಚುತ್ತಿವೆ? ಡಾ।ಭೀಮರಾವ್ ರಾಮ್‌ಜೀ ಅಂಬೇಡ್ಕರ್ ನಿಧನರಾಗಿ ಇದೇ ಡಿಸೆಂಬರ್ 6 ರಂದು 50 ವರ್ಷಗಳಾದವು. ಶತಶತಮಾನಗಳಿಂದ ಹಿಂದೂಸಮಾಜ ಪೋಷಿಸಿಕೊಂಡು ಬಂದಿರುವ ಮನುಷ್ಯ ಮನುಷ್ಯರೊಳಗೆ ತಾರತಮ್ಯ ಮಾಡುವ ಜಾತಿ ಪದ್ಧತಿ, ಜಾತಿ ಅಸ್ಪೃಶ್ಯತೆ, ಜಾತಿ ದಮನದ ಕ್ರೌರ್ಯವನ್ನು ಅನುಭವಿಸುತ್ತ ಬಂದಿರುವ

ಭಾರತದ ಕೋಟಿಗಟ್ಟಲೇ ದಲಿತರಲ್ಲಿ ಸ್ವಾಭಿಮಾನದ ಕಿಚ್ಚನ್ನು ಹಚ್ಚಿದ ಡಾ।ಬಾಬಾಸಾಹೆಬ್ ಅಂಬೇಡ್ಕರ್ ಅವರಲ್ಲಿ ದಲಿತರು ಇಲ್ಲದ ದೇವರನ್ನು ಕಂಡಿದ್ದು ಆಶ್ಚರ್ಯಪಡುವ ವಿಷಯವೇನಲ್ಲ. ಹಾಗೆ ನೋಡಿದರೆ ಡಾ। ಅಂಬೇಡ್ಕರ್ ದಲಿತರ ನಾಯಕರು ಮಾತ್ರವಲ್ಲ. ಅವರು ಅತ್ಯಂತ ಎತ್ತರದ ರಾಷ್ಟ್ರೀಯ ನಾಯಕರಲ್ಲಿ ಒಬ್ಬರು. ಇಡೀ ವಿಶ್ವಕ್ಕೆ ಸಮಾನತೆಯ ಸಂದೇಶವನ್ನು ನೀಡಿದವರು. ಒಬ್ಬ ಮಹಾನ್ ಹೋರಾಟಗಾರ, ಭಾರತದ ಸಂವಿಧಾನ ಶಿಲ್ಪಿ ಎಂದು ಒಂದು ಕಡೆ ಗೌರವಿಸಲ್ಪಡುತ್ತಿರುವ ಡಾ। ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ದೇಶದ ವಿವಿಧ ಭಾಗಗಳಲ್ಲಿ ಅವಮಾನ ಮಾಡುವ ಪ್ರಕರಣಗಳು ಹೆಚ್ಚುತ್ತಿರುವುದು ಅತ್ಯಂತ ಕಳವಳಕಾರಿ ಬೆಳವಣಿಗೆಯಾಗಿದೆ. ದೇಶವು ಗೌರವಿಸುವ ಮಹಾನುಭಾವದ ಪ್ರತಿಮೆಗಳಿಗೆ ಹೀಗೆ ಅವಮಾನ ಮಾಡುವ ಪ್ರವೃತ್ತಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿರುವ ರಾಷ್ಟ್ರೀಯ ನಾಯಕರ ಪ್ರತಿಮೆಗಳನ್ನು ತೆಗೆದು ಹಾಕುವುದೇ ಒಳ್ಳೆಯದು ಎಂಬ ಚರ್ಚೆ ಇಂದು ಕೇಳಿ ಬರಲಾರಂಭಿಸಿದೆ.

ಅಸ್ಪೃಶ್ಯತೆ, ಅಸಮಾನತೆಯನ್ನು ಸ್ವತಃ ಅನುಭವಿಸಿದವರಿಗೆ ಆಗುವ ನೋವು, ಅವಮಾನ, ಹಿಂಸೆ ಅದು ಬೇರೆಯವರಿಗೆ ಅರ್ಥವಾಗಲು ಸಾಧ್ಯವಿಲ್ಲ ಎಂಬ ಮಾತಿನಲ್ಲಿ ಸಾಕಷ್ಟು ಸತ್ಯಾಂಶವಿದೆ. ಹೀಗಾಗಿ ದಲಿತರು ಇಂದು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯದ ವಿರುದ್ಧ, ವಿಶೇಷವಾಗಿ ಡಾ। ಅಂಬೇಡ್ಕರ್ ಅವರ ಪ್ರತಿಮೆಗೆ ಅವಮಾನ ಮಾಡುವ ಪ್ರವೃತ್ತಿಯ ವಿರುದ್ಧ ಉಗ್ರವಾಗಿ ಪ್ರತಿಭಟಿಸಲು ಮುಂದಾಗುತ್ತಿರುವದನ್ನು ಸಮಾಜದ ಇತರ ವಿಭಾಗಗಳು ಸಾಕಷ್ಟು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಿಲ್ಲ. ಇತ್ತೀಚೆಗೆ ಉತ್ತರ ಪ್ರದೇಶದ ಕಾನ್ಪೂರದಲ್ಲಿ ಡಾ।ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಲಾದ ಪ್ರಕರಣವನ್ನು ಪ್ರತಿಭಟಿಸಿ ಮಹಾರಾಷ್ಟ್ರದಲ್ಲಿ ನಡೆಸಲಾದ ಹಿಂಸಾಚಾರವಾಗಲಿ ಅನಂತರ ಕರ್ನಾಟಕದ ಬೀದರ್‌ನಲ್ಲಿ ಇಂಥ ಪ್ರಕರಣ ಮರುಕಳಿಸಿ ಸಾರ್ವಜನಿಕ ಆಸ್ತಿ ಪಾಸ್ತಿಯನ್ನು ನಾಶ ಮಾಡಿದ್ದಾಗಲಿ ಸಮರ್ಥಿಸಲಾಗದ ಬೆಳವಣಿಗೆಗಳು. ಇಂತಹ ಘಟನೆಗಳಿಂದಾಗಿ ದಲಿತರ ನ್ಯಾಯ ಸಮ್ಮತ ಹೋರಾಟಕ್ಕೆ ದೊರೆಯಬೇಕಾದ ಸಾರ್ವಜನಿಕ ಸಹಾನುಭೂತಿಗೆ ಧಕ್ಕೆಯಾಗುತ್ತದೆ. ಆದರೆ ಇಂತಹ ಉಗ್ರ ಪ್ರತಿಭಟನೆಗಳ ಹಿಂದೆ ಶತಮಾನಗಳಿಂದ ಹತ್ತಿಕ್ಕಲ್ಪಟ್ಟ ಒಂದು ವಿಭಾಗದ ಸಹನೆಯ ಕಟ್ಟೆ ಒಡೆದು ಸ್ಫೋಟಗೊಳ್ಳುತ್ತಿದೆ ಎಂಬುದನ್ನು ಸಮಾಜ ಗುರುತಿಸಬೇಕಾಗಿದೆ. ಆತ್ಮಗೌರವಕ್ಕಾಗಿ, ಸ್ವಾಭಿಮಾನದ ಬದುಕಿಗಾಗಿ ಚಡಪಡಿಸುತ್ತಿರುವ ಆ ವಿಭಾಗವು ಡಾ।ಅಂಬೇಡ್ಕರ್ ಅವರನ್ನು ತಮ್ಮ ಏಕೈಕ ವಿಮೋಚಕನಾಗಿ ಕಾಣುತ್ತಿರುವುದರಿಂದ ಅವರ ಪ್ರತಿಮೆಗೆ ಆಗುತ್ತಿರುವ ಅವಮಾನವನ್ನು ಅವರಿಂದ ಎಳ್ಳಷ್ಟೂ ಸಹಿಸಲಾಗುತ್ತಿಲ್ಲ. ಡಾ। ಅಂಬೇಡ್ಕರ್ ಅವರೊಂದಿಗೆ ಅವರ ಭಾವನಾತ್ಮಕ ಸಂಬಂಧ ಅಷ್ಟೊಂದು ಗಾಢವಾಗಿದೆ. ಇದನ್ನು ಅರ್ಥ ಮಾಡಿಕೊಂಡಾಗ ಮಾತ್ರ ಡಾ।ಅಂಬೇಡ್ಕರ್ ಅವರ ಬಗ್ಗೆ ಇಂದು ದಲಿತರು ವ್ಯಕ್ತಪಡಿಸುವ ಅಭಿಮಾನವನ್ನು ಅರ್ಥ ಮಾಡಿಕೊಳ್ಳಬಹುದು.[23]

ಇಂದು ದಲಿತ ಚಳುವಳಿಗಳು ಉಗ್ರಸ್ವರೂಪ ತಾಳುತ್ತಿರುವುದಕ್ಕೆ ಅವರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳೂ ಒಂದು ಪ್ರಮುಖ ಕಾರಣವಾಗಿದೆ. ಅಸ್ಪೃಶ್ಯತೆಯನ್ನು ಆಚರಿಸುವುದು ಒಂದು ಅಪರಾಧವೆಂದು ನಮ್ಮ ಸಂವಿಧಾನದಲ್ಲಿ ಘೋಷಿಸಲಾಗಿದ್ದರೂ ಅದು ಭಾರತದ ಹಳ್ಳಿಗಳಲ್ಲಿ ಇಂದಿಗೂ ಜೀವಂತವಾಗಿದೆ. ದಲಿತರಿಗೆ ಪ್ರತ್ಯೇಕ ಕೇರಿಗಳ ವಾಸ, ಸಾರ್ವಜನಿಕ ಕೆರೆ, ಬಾವಿಗಳಿಗೆ, ಕ್ಷೌರದ ಅಂಗಡಿಗಳಿಗೆ, ದೇವಸ್ಥಾನಗಳಿಗೆ ಪ್ರವೇಶವಿಲ್ಲ. ಹೊಟೇಲುಗಳಲ್ಲಿ ಪ್ರತ್ಯೇಕ ಸ್ಥಳ, ಪ್ರತ್ಯೇಕ ಗ್ಲಾಸ ಪದ್ಧತಿ ಇನ್ನೂ ಹಾಗೆಯೇ ಮುಂದುವರೆದಿದೆ. ಆ ಆಚರಣೆಗಳನ್ನು ಪ್ರಶ್ನಿಸಿದರೆ ದಲಿತರನ್ನು ಸಾಮೂಹಿಕ ಬಹಿಷ್ಕಾರಕ್ಕೆ

ಒಳಪಡಿಸಿಪೀಡಿಸಲಾಗುತ್ತದೆ. ಕೆಲವು ಕಡೆ ಮಲಹೊರುವ ಅಮಾನವೀಯ ಪದ್ಧತಿ ಇನ್ನೂ ಜಾರಿಯಲ್ಲಿದೆ. ದಲಿತಮಹಿಳೆಯರ ಮೇಲೆ ಅತ್ಯಾಚಾರ, ದಲಿತರ ಮನೆಗಳಿಗೆ ಬೆಂಕಿ ಹಚ್ಚುವುದು, ಹಲ್ಲೆ ಮಾಡಿ ಕೊಲ್ಲುವುದು ಮುಂತಾದ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ನಗರ ಪ್ರದೇಶಗಳಲ್ಲಿಯೂ ಅಸ್ಪೃಶ್ಯತೆ ಜೀವಂತವಾಗಿದೆ. ದಲಿತಕುಟುಂಬಗಳಿಗೆ ಬಾಡಿಗೆಗೆ ಮನೆ ನೀಡಲು ನಿರಾಕರಿಸಲಾಗುತ್ತದೆ.

ಇಂತಹ ಸಂದರ್ಭಗಳಲ್ಲಿ ದೇಶದ ಕಾನೂನುವ್ಯವಸ್ಥೆ ದಲಿತರ ನೆರವಿಗೆ ಬರದೇ ಅಪರಾಧಿಗಳ ಬೆಂಬಲಕ್ಕೆ ನಿಲ್ಲುತ್ತಿರುವುದು ಸಾಮಾನ್ಯವಾಗತೊಡಗಿದೆ. ಸಂವಿಧಾನದ ಆಶಯಗಳು ಕಾರ್ಯರೂಪಕ್ಕೆ ಬರುತ್ತಿಲ್ಲ. ದಲಿತ ಸಮುದಾಯಗಳು ಇಂದು ಸಮಾಜದಲ್ಲಿ ಹೆಚ್ಚೆಚ್ಚು ಅಭದ್ರತೆಗೆ ಒಳಗಾಗುತ್ತಿವೆ. ದಲಿತರಲ್ಲಿ ಈ ಸಮಯದಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಸಮಾಜ ಮಾಡಬೇಕಾಗಿದೆ. ದಲಿತರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದು ಪ್ರಜಾಪ್ರಭುತ್ವದ ಪರಿಣಾಮಕಾರಿ ಅನುಷ್ಠಾನದ ಭಾಗವಾಗಿದೆ ಎಂದು ಎಲ್ಲರೂ ಒಪ್ಪಿಕೊಳ್ಳುವಂತಾಗಬೇಕು. ಅವರು ಬಯಸುತ್ತಿರುವ ಸಮಾನತೆ, ಸಹೋದರತೆ ನಮ್ಮ ಸಂವಿಧಾನದ ಆಶಯಗಳೇ ಆಗಿವೆ. ನಮ್ಮ ಆಳುವ ವರ್ಗಗಳಿಗೆ ಪ್ರಜಾಪ್ರಭುತ್ವವೇ ಭೂತವಾಗಿ ಕಾಡತೊಡಗಿದೆ. ಪ್ರಜಾಪ್ರಭುತ್ವಕ್ಕೆ ಅಪಾಯ ಬರುವುದು ಆಳುವ ವರ್ಗಗಳಿಂದಲೇ ಹೊರತು ದಲಿತರಿಂದಲ್ಲ, ದುಡಿಯುವ ಶ್ರಮಿಕರಿಂದಲ್ಲ, ನೈಜ ಪ್ರಜಾಪ್ರಭುತ್ವಕ್ಕಾಗಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಶೋಷಿತರು ಹೋರಾಟ ಮಾಡಲು ಇಂದಿಗೂ ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್ ಸ್ಫೂರ್ತಿಯಾಗಬಲ್ಲರು. ಅವರ ಪ್ರತಿಭಟನಾ ಸಿದ್ಧಾಂತಗಳೇ ಇಂದಿಗೂ ಶೋಷಿತ ವರ್ಗಕ್ಕೆ ಮಾದರಿಗಳು ಹಾಗೂ ಹೋರಾಟದ ಅಸ್ತ್ರಗಳು.

"ಧರ್ಮ ಒಂದು ಅಫೀಮು" ಎಂಬುದು ಕಾರ್ಲ್‌ಮಾರ್ಕ್ಸ್ ಅವರ ಅಭಿಪ್ರಾಯವಾದರೆ "ಧರ್ಮ ಒಂದು ಸಾಮಾಜಿಕ ಸತ್ಯ.....ಯಾವುದೇ ಒಬ್ಬ ವ್ಯಕ್ತಿಗೆ ಧರ್ಮ ಅವಶ್ಯಕ" ಎಂಬುದು ಡಾ।ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಅಭಿಪ್ರಾಯ. ಧರ್ಮ ತಿರಸ್ಕರಣೀಯವಾದದ್ದಲ್ಲ. ಆದರೆ ಅದು ಪರಿಷ್ಕರಣೀಯವಾದದ್ದು,

ಈ ವಿಷಯದಲ್ಲಿ ಮಾರ್ಕ್ಸ್‌ವಾದಕ್ಕೂ ಅಂಬೇಡ್ಕರ್ ಅವರಿಗೂ ಅಜಗಜಾಂತರ ವ್ಯತ್ಯಾಸವಿದೆ. ಕಮ್ಯುನಿಷ್ಟರಿಗೆ ಧರ್ಮ ತಿರಸ್ಕರಣೀಯವಾಗಿದೆ. ಅವರ ಧರ್ಮ ದ್ವೇಷ ಎಷ್ಟೊಂದು ಆಳವಾಗಿದೆ ಎಂದರೆ ಯಾವ ಧರ್ಮಗಳು ಕಮ್ಯೂನಿಸಂಗೆ ಸಹಕಾರಿಯಾಗಿವೆ, ಯಾವವು ಅಲ್ಲ ಎಂಬುದನ್ನು ಕೂಡ ವಿವೇಚಿಸಲೂ ಅವರಿಗಾಗುವುದಿಲ್ಲ ಎಂದು ಅಭಿಪ್ರಾಯ ಪಡುವ ಅಂಬೇಡ್ಕರ್ ಅವರು ಬಲಾಧಾರಿತ ಸರಕಾರ ಮತ್ತು ನೀತಿಯಾಧಾರಿತ ಸರಕಾರಗಳ ನಡುವೆ ಮನುಷ್ಯ ಆಯ್ಕೆ ಮಾಡಬೇಕಾಗಿದೆ.... ಬಲ ಪ್ರಯೋಗವನ್ನು ವಜಾ ಮಾಡಿದರೆ ಆಗ ರಾಜ್ಯವನ್ನು ಉಳಿಸುವ ಏಕೈಕ ಶಕ್ತಿ ಎಂದರೆ ಧರ್ಮ.. ಧರ್ಮ ರಾಜ್ಯದ ಕಾವಲುಗಾರ ತಾನೇ ಆಗುವಂತೆ ಪ್ರತಿಯೊಬ್ಬ ಮುನಷ್ಯನನ್ನೂ ನೈತಿಕವಾಗಿ ತರಬೇತುಗೊಳಿಸಬೇಕೆಂಬುದೇ ಬುದ್ಧನ ಆಶೆಯಾಗಿತ್ತು ಎಂದು ಎಚ್ಚರಿಸುತ್ತಾರೆ.[24] ಧರ್ಮವನ್ನು ದ್ವೇಷದಿಂದ ತಿರಸ್ಕರಿಸಿ ಮನುಷ್ಯನನ್ನು ಕೇವಲ ಆರ್ಥಿಕ, ರಾಜಕೀಯ ಪ್ರಾಣಿಯನ್ನಾಗಿ ಪರಿಗಣಿಸುವ ಎಡಪಂಥವಾಗಲೀ, ಸಂಪ್ರದಾಯವೇ ಧರ್ಮ ದೇವರು ಎಂದು ವೈಭವೀಕರಿಸುತ್ತ, ಟೀಕೆಟಿಪ್ಪಣಿಗಳನ್ನು ಸಹಿಸದೇ, ಆತ್ಮಾವಲೋಕನಕ್ಕೆ ಮುಂದಾಗದೆ ಮನುಷ್ಯನನ್ನು ಮತಾಂಧನನ್ನಾಗಿ, ಭಯೋತ್ಪಾದಕನನ್ನಾಗಿ ರೂಪಿಸುವ ಬಲಪಂಥವಾಗಲೀ ಎಂದೂ ಮನುಷ್ಯತ್ವದ ಅನಂತ ಸಾಧ್ಯತೆಗಳನ್ನಾಗಲೀ, ಸಮಾಜದ ರಾಷ್ಟ್ರದ, ವಿಶ್ವದ ಕಲ್ಯಾಣವನ್ನಾಗಲೀ ಸಾಧಿಸಲಾರರು. ಹಾಗಾಗಿ ನಮಗಿಂದು ಎಡಪಂಥ ಬಲಪಂಥಗಳಿಗಿಂತಲೂ ಬುದ್ಧ, ಬಸವಣ್ಣ, ಅಂಬೇಡ್ಕರ್ ಪಥ ಅತ್ಯಂತ ಅಗತ್ಯವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಪ್ರತಿಭಟನಾನೆಲೆಗಳ ಕುರಿತು ಅಧ್ಯಯನವಾಗಿದ್ದರೂ ಕೂಡ ಸಮಕಾಲೀನ ಸಂದರ್ಭದಲ್ಲಿ ಬುದ್ಧ ಹಾಗೂ ಬುದ್ಧತತ್ವ ಏನಾಗಿದೆ? ಬೌದ್ಧಧರ್ಮದೆಡೆಗೆ ದಲಿತರೇಕೆ ಒಲವು ತೋರಿಸುತ್ತಿದ್ದಾರೆ. ದಲಿತರು ಮತಾಂತರವಾಗಲು ಬೌದ್ಧಧರ್ಮದ ತತ್ವಗಳು ಕಾರಣವೇ? ಅಥವಾ ಅಂಬೇಡ್ಕರ್ ಪ್ರಭಾವದಿಂದ ಮತಾಂತರಗೊಳ್ಳುತ್ತಿದ್ದಾರೆಯೇ? ಎನ್ನುವ ಕೆಲವು ಪ್ರಶ್ನೆಗಳಿಗೆ ವಿಶ್ಲೇಷಣೆ ಈ ಪ್ರಬಂಧದಲ್ಲಿದೆ. ಹಾಗೆಯೇ ಇಂದು ವೀರಶೈವ ಧರ್ಮ, ಬಸವಣ್ಣ, ಬಸವಣ್ಣ ತತ್ವಗಳು ಏನಾಗಿವೆ? ಜಾತಿವ್ಯವಸ್ಥೆ ಹೇಗಿದೆ? ಮಠಮಾನ್ಯಗಳ ಕೊಡುಗೆಗಳೇನು? ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದರೊಂದಿಗೆ ಅಂಬೇಡ್ಕರ್ ವಿಚಾರಗಳು ಏನಾಗಿವೆ? ಅಂಬೇಡ್ಕರ್‌ರವರ ಸಿದ್ಧಾಂತಗಳಿಗಿಂತ ಪ್ರತಿಮೆಗಳಿಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ ಏಕೆ? ದಲಿತರಲ್ಲಿ ಕೂಡ ಅಂಬೇಡ್ಕರ್ ವಿಚಾರಗಳಿಗಿಂತ ಆಚರಣೆ ಮುಖ್ಯವಾಗುತ್ತಿದೆ ಏಕೆ? ಡಾ॥ಅಂಬೇಡ್ಕರ್‌ರವರು ಈ ರಾಷ್ಟ್ರಕ್ಕೆ ಜಾತ್ಯಾತೀತ ಸಂವಿಧಾನ ರಚಿಸಿಕೊಟ್ಟು ಸಂವಿಧಾನ ಶಿಲ್ಪಿಯಾದವರನ್ನು ಪರಿಶಿಷ್ಟ ಜಾತಿಯ ಒಂದು ವರ್ಗದ ಪ್ರತಿನಿಧಿಯಾಗಿ ಏಕೆ ಗುರುತಿಸಲಾಯಿತು? ಪ್ರಸ್ತುತ ಸಂದರ್ಭದಲ್ಲಿ ದಲಿತಹೋರಾಟಗಳು ಮೀಸಲಾತಿಯನ್ನೇ ಗುರಿಯಾಗಿಟ್ಟುಕೊಂಡು ಹೊಲೆಯ ಮಾದಿಗರಲ್ಲಿ ಒಂದು ವರ್ಗದವರಿಗೆ ಅಂಬೇಡ್ಕರ್ ಬೇಡವಾದ? ಇದಕ್ಕೆ ರಾಜಕೀಯ ಕಾರಣಗಳೇನು? ಈ ನಿಟ್ಟಿನಲ್ಲಿ ಇನ್ನೂ ಹಲವಾರು ಕ್ಷೇತ್ರ, ಉಪಕ್ಷೇತ್ರಗಳಲ್ಲಿ ಸಂಶೋಧನೆಗಳು ನಡೆಯಬೇಕಾದ ಅವಶ್ಯಕತೆ ಇದೆ. ಹಾಗೆಯೇ ಜನರ ಧರ್ಮದ ಚರಿತ್ರೆ ಎಂದರೆ ಅವರ ಬದುಕಿನ ಚರಿತ್ರೆಯು ಆಗಿರುತ್ತದೆ. ಆದರ ಮೇಲೆ ಸಮಕಾಲೀನ ಸಂದರ್ಭದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಭಾವ ಇದ್ದೇ ಇರುತ್ತದೆ. ಅವುಗಳನ್ನೂ ಕೂಡ ಗಂಭೀರವಾಗಿ ಪರಿಗಣಿಸಿ ಅಧ್ಯಯನ ಕೈಕೊಳ್ಳಬೇಕಾದ ಅಗತ್ಯವಿದೆ. ಜಾತ್ಯಾತೀತ ಪ್ರಜಾಪ್ರಭುತ್ವ ರಾಷ್ಟ್ರ ಇದಾಗಿರುವುದರಿಂದ ಪ್ರತಿಯೊಂದು ಧರ್ಮಗಳ ಪರ್ಯಾಯ ಸಾಂಸ್ಕೃತಿಕ ಅಧ್ಯಯನಗಳು ಸಬಾಲ್ಟನ್ ಮಾದರಿಯಲ್ಲಿ ನಡೆಯಬೇಕಾಗಿರುವವು. ಈ ಸಂದರ್ಭದ ಅವಶ್ಯಕತೆಯಾಗಿದೆ. ಅಂತಹ ಕೆಲವು ಅಧ್ಯಯನದ ಕ್ಷೇತ್ರಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

1) ಸಮಾನತೆಯ ಹರಿಕಾರರು :ಬುದ್ಧ, ಬಸವ, ಅಂಬೇಡ್ಕರ್
2) ಬೌದ್ಧಸಂಘ, ಅನುಭವ ಮಂಟಪ- ಸಂವಿಧಾನ
3) ಕನ್ನಡ ಸಾಹಿತ್ಯ ಮತ್ತು ಬೌದ್ಧಧರ್ಮ-ವೀರಶೈವಧರ್ಮ
4) ದಲಿತರ ಸಾಂಸ್ಕೃತಿಕ ವೇದಿಕೆಗಳಾಗಿ- ಬೌದ್ಧವಿಹಾರಗಳು-ಅನುಭವ ಮಂಟಪ
5) ಬೌದ್ಧಸಂಘ-ಅನುಭವ ಮಂಟಪ ಮತ್ತು ದಲಿತ ವಿಮೋಚನೆ
6) ಕರ್ನಾಟಕದಲ್ಲಿ ಮತಾಂತರ ಚಳುವಳಿ
7) ಬೌದ್ಧ-ವೀರಶೈವಧರ್ಮಗಳ ಆರ್ಥಿಕತೆ-ಕಾಯಕ ತತ್ವ
8) ಮಹಿಳಾ ವಿಮೋಚನೆಯ ಕಾರ್ಯತಂತ್ರವಾಗಿ ಬೌದ್ಧ-ವೀರಶೈವಧರ್ಮಗಳು
9) ತ್ರಿಪೀಠಕಗಳು, ವಚನಗಳು, ಅಂಬೇಡ್ಕರ್ ವಿಚಾರಗಳು
10)ಊಳಿಗಮಾನ್ಯ ವ್ಯವಸ್ಥೆ, ಬುದ್ಧ, ಬಸವ, ಅಂಬೇಡ್ಕರ್
11)ಜಾತಿವ್ಯವಸ್ಥೆಯ ಪ್ರಚಲಿತ ಸಮಸ್ಯೆಗಳು-ಬೌದ್ಧ-ವೀರಶೈವ-ಧರ್ಮಗಳು
12)ದಲಿತಚಳುವಳಿ ಮತ್ತು ಬೌದ್ಧ ವೀರಶೈವಧರ್ಮಗಳು
13)ಸಮತಾವಾದ ನೆಲೆಯಲ್ಲಿ :ಬುದ್ಧ, ಬಸವ, ಅಂಬೇಡ್ಕರ್
14)ಕಾರ್ಲ್‌ಮಾರ್ಕ್ಸ್ ವಿಚಾರಗಳು: ಬುದ್ಧ, ಬಸವ, ಅಂಬೇಡ್ಕರ್
15)ಸಾಮಾಜಿಕ ನ್ಯಾಯ-ಬುದ್ಧ, ಬಸವ, ಅಂಬೇಡ್ಕರ್

ಹೀಗೆ ಹಲವಾರು ಆಯಾಮಗಳಲ್ಲಿ ಆಳವಾದ ಅಧ್ಯಯನಗಳು ನಡೆಯಬೇಕಾಗಿದೆ.

* * * * *

ಅಡಿ ಟಿಪ್ಪಣಿಗಳು

1)	ಡಾ. ಮೂಡ್ನಾಕೂಡು ಚಿನ್ನಸ್ವಾಮಿ- ಬುದ್ಧನೆಡೆಗೆ..... ಮರಳಿ ಮನೆಗೆ ಲೇಖನ : ಸುಧಾ, 7 ಡಿಸೆಂಬರ್ 2006	ಪುಟ 57-58
2)	ಸತ್ಯನಾರಾಯಣರಾವ ಅಣತಿ ಕನ್ನಡವೇ ಸತ್ಯ ಕನ್ನಡವೇ ನಿತ್ಯ ಲೇಖನ ಪ್ರಜಾವಾಣಿ, ಗುರುವಾರ 21ನೇ ಡಿಸೆಂಬರ್ 2006 ಸಹ್ಯಾದ್ರಿ ಸಂಭ್ರಮ ಪುರವಣಿ ಭಾಗದಿಂದ ಆಯ್ದುಕೊಳ್ಳಲಾಗಿದೆ.	ಆಯ್ದ ಭಾಗ
3)	ಡಾ.ಬಂಜಗೆರೆ ಜಯಪ್ರಕಾಶ -ಬುದ್ಧನ ದಾರ್ಶನಿಕ ಬೆಳಕು ನಮ್ಮ ಅಜ್ಞಾನ ನೀಗಬಲ್ಲದು. ಲೇಖನ ಕನ್ನಡ ಪ್ರಭ, 23 ಡಿಸೆಂಬರ್ 2006	ಪುಟ 6
4)	ದೆಹಲಿ ವಾರ್ತೆ : 24-10-2005	ಆಯ್ದ ಭಾಗ
5)	ಡಾ. ಎನ್.ಜಿ. ಮಹಾದೇವಪ್ಪ ಲಿಂಗಾಯತ-ಬೌದ್ಧ ಲೇಖನ ಭಾಗದಿಂದ ಆಯ್ದುಕೊಳ್ಳಲಾಗಿದೆ-ಸಮನ್ವಯ ಗುರು ಪಟ್ಟಾಧಿಕಾರ ಅಭಿನಂದನ ಗ್ರಂಥ. ಹಿಪ್ಪರಗಿ 2003	ಪುಟ 145, 56
6)	ಡಾ। ಬಿ.ಕೆ. ಸಂಘಸೇನಾವರ್ಧನ ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯರಿಕಲ್ಪನೆಗಳ ನೆಲೆಯಲ್ಲಿ) ಮಹಾಪ್ರಬಂಡ (ಅಪ್ರಕಟಿತ)	ಪುಟ 252
7)	ಸರಜೂಕಾಟ್ಕರ್ ,2003 : ಬಸವ ಮತ್ತು	ಪುಟ 5, 6, 13
8)	- ಅದೇ ಗ್ರಂಥ -	ಪುಟ 22, 23
9)	- ಅದೇ ಗ್ರಂಥ -	ಪುಟ 94
10)	- ಅದೇ ಗ್ರಂಥ -	ಪುಟ 96
11)	ಮಹೇಶ ತಿಪ್ಪಶೆಟ್ಟಿ-ಬಸವತತ್ವ ಸಾಮಾಜಿಕ ಬದಲಾವಣೆ : ಶಿವರುದ್ರ ಕಲ್ಲೋಳಿಕರರವರ ಲೇಖನ ಬಸವ ತತ್ವ ತಳವರ್ಗದ ದೃಷ್ಟಿಯಲ್ಲಿ	ಪುಟ 106
12)	- ಅದೇ ಗ್ರಂಥ -	ಪುಟ 5
13)	- ಅದೇ ಗ್ರಂಥ -	ಪುಟ 5
14)	ವೀರಭದ್ರ ಚನ್ನಮಲ್ಲಸ್ವಾಮೀಜಿ ಚಿಂತನ ಚೇತನ,	ಪುಟ 49
15)	ಡಾ। ಬಿ.ಕೆ. ಸಂಘಸೇನಾ ವರ್ಧನ: ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ) ಪಿ.ಹೆಚ್.ಡಿ. ಪ್ರಬಂಧ (ಅಪ್ರಕಟಿತ)	ಪುಟ 255

16) ಡಾ। ಶಿವಮೂರ್ತಿ ಶರಣರು : ಧರ್ಮ ಮತ್ತು ಪ್ರಜಾಪ್ರಭುತ್ವ ಸಂವಾದ ಸಂಪುಟ 3 ಸಂಚಿಕೆ 5, 2005 — ಪುಟ 14

17) - ಅದೇ ಗ್ರಂಥ - — ಪುಟ 15

18) - ಅದೇ ಗ್ರಂಥ - — ಪುಟ 15

19) ಡಾ. ಬಿ.ಕೆ. ಸಂಘಸೇನಾ ವರ್ಧನ : ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ) ಪಿ.ಹೆಚ್.ಡಿ. ಪ್ರಬಂಧ,(ಅಪ್ರಕಟಿತ) — ಪುಟ 256

20) ಡಾ। ಹನುಮಂತಯ್ಯ ಎಲ್.: ಜಾತ್ಯಾತೀತ ಸಮಾಜವಾದಕ್ಕೆ ಹಂಬಲಿಸಿದ ಅಂಬೇಡ್ಕರ್, 2000 ಪ್ರಜಾವಾಣಿ ಸಾಪ್ತಾಹಿಕ ಲೇಖನ — ಆಯ್ದ ಭಾಗ

21) ನಾಡೋಜ ಪ್ರೊ. ನಿಸಾರ್ ಅಹ್ಮದ್ 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶಿವಮೊಗ್ಗ ಡಿಸೆಂಬರ್ 20 ರಿಂದ 23, 2006 ಅಧ್ಯಕ್ಷೀಯ ಭಾಷಣದಲ್ಲಿಯ ಅಭಿಪ್ರಾಯ — ಆಯ್ದ ಭಾಗ

22) ರಾಷ್ಟ್ರಕವಿ ಜಿ.ಎಸ್.ಎಸ್. ಐಕ್ಯ ರಂಗ, ಸಂ : 29 ಸಂಚಿಕೆ 1 ಜನೇವರಿ 07, 2007 — ಪುಟ 3

23) ನಿತ್ಯಾನಂದ ಸ್ವಾಮಿ: ಅಂಬೇಡ್ಕರ್ ಪ್ರತಿಮೆ ಅವಮಾನ ಪ್ರಕರಣಗಳು ಹೆಚ್ಚುತ್ತಿವೆ ಏಕೆ? ಲೇಖನ:ಐಕ್ಯ ರಂಗ:ಸಂ-28 ಸಂಚಿಕೆ 52 ಡಿಸೆಂಬರ್ 24, 2006 — ಪುಟ 9

24) ಡಾ. ಬಿ.ವಿ. ವಸಂತಕುಮಾರ್ : ಜಾತಿಗಳ ನಾಶವೇ ನಿಜವಾದ ಸಂಘಟನೆ ಲೇಖನ ವಿಜಯಕರ್ನಾಟಕ 3 ಜನೇವರಿ 2007 — ಪುಟ 6

# # # # #

ಅನುಬಂಧ - I

ಆಕರಗ್ರಂಥ ಸೂಚಿ

I. ಕನ್ನಡ ಗ್ರಂಥಗಳು.

II. ಲೇಖನಗಳು.

III. ಆಂಗ್ಲ ಗ್ರಂಥಗಳು.

IV. ಆಂಗ್ಲ ಸಂಶೋಧನಾ ಲೇಖನಗಳು.

V. ಜರ್ನಲ್ಸ್

VI. ಮಾಸಪತ್ರಿಕೆಗಳು.

VII. ದಿನಪತ್ರಿಕೆಗಳು.

VIII. ವಾರಪತ್ರಗಳು.

ಆಕರ ಗ್ರಂಥಗಳು.

1) ರೊಮಿಲಾ ಥಾಪರ್(ಮೂಲ) ಎಂ.ಆರ್.ರಕ್ಷಿತ್(ಅನು) : ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಸಮಾಜದ ಧರ್ಮ ನಿರಪೇಕ್ಷೀಕರಣ
ವಿಸ್ತಾರ, ಬೆಂಗಳೂರು 1999

2) ಡಾ.ಎಂ. ಪ್ರಭಾಕರ ಜೋಶಿ : ಭಾರತೀಯ ತತ್ವಶಾಸ್ತ್ರ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ-2002

3) ಆದಿತ್ಯ ನಾರಾಯಣ : ಚರಿತ್ರೆಯ ವಿಕೃತೀಕರಣ
ಭಾರತದ ಬಹುಮುಖೀ ಸಂಸ್ಕೃತಿಯ ಐಕ್ಯತೆಗೆ ಧಕ್ಕೆ
ನವಕರ್ನಾಟಕ ಪ್ರಕಾಶನ, ಬೆಂಗಳೂರು 2004

4) ಡಾ.ಎನ್. ಚಿನ್ನಸ್ವಾಮಿ ಸೋಸಲೆ : ದಲಿತರ ಮೇಲೆ ದೌರ್ಜನ್ಯ ಒಂದು ನೋಟ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2006

5) ಪ್ರೊ. ಸಿ.ಕೆ. ಮಹೇಶ್ : ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ
ಮಾತಂಗ ಪರಿವಾರ, ಬಾಪೂಜಿ ವಿದ್ಯಾರ್ಥಿ ನಿಲಯ, ಬೆಂಗಳೂರು-2000

6) ಡಾ. ಕೆ. ವೆಂಕಟೇಶ (ಸಂ) : ಅಂಬೇಡ್ಕರ್ ಒಂದು ಮರುವ್ಯಾಖ್ಯಾನ
ಸಂಸ್ಕೃತಿ ಪ್ರಕಾಶನ, ಬಳ್ಳಾರಿ 2005

7) ಡಾ. ಬಾಬುರಾವ್ ಮುಡಬಿ : ಮಹಿಳಾ ಸಬಲೀಕರಣ ಅಂಬೇಡ್ಕರ್ ದೃಷ್ಟಿಕೋನ
ಲಕ್ಷ್ಮೀ ಪ್ರಕಾಶನ, ಬೆಂಗಳೂರು 2005

8) ಡಾ. ಮೊಗಳ್ಳಿ ಗಣೇಶ್ : ದಲಿತ ಕಥನ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2006

9) ಡಾ. ಪಿ. ಮಹಾದೇವಯ್ಯ (ಸಂ) : ದಲಿತರು ಮತ್ತು ಪರ್ಯಾಯ ರಾಜಕಾರಣ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2005

10) ಡಾ. ಟಿ.ಆರ್. ಚಂದ್ರಶೇಖರ್ (ಸಂ) : ದಲಿತ ಅಧ್ಯಯನ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2005

11) ಡಾ. ವಿರೂಪಾಕ್ಷಿ ಪೂಜಾರಹಳ್ಳಿ (ಸಂ) : ದಲಿತರು ಮತ್ತು ಚರಿತ್ರೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2005

12) ವೀರಭದ್ರ ಚನ್ನಮಲ್ಲಸ್ವಾಮೀಜಿ : ಹಿಂದೂ ಧರ್ಮ ಪರಿಷ್ಕಾರವಾಗಬೇಕು
ಮಾನವಧರ್ಮ ಪ್ರಕಾಶನ, ಬೆಂಗಳೂರು-2005

13) ವೀರಭದ್ರ ಚನ್ನಮಲ್ಲಸ್ವಾಮೀಜಿ : ಮತಾಂಧತೆ ಮಾನವೀಯತೆ
ಮಾನವ ಧರ್ಮ ಪ್ರಕಾಶನ, ಬೆಂಗಳೂರು-2004

14) ವೀರಭದ್ರ ಚನ್ನಮಲ್ಲಸ್ವಾಮೀಜಿ : ಪಂಚಾಚಾರ್ಯರ ಪೂರ್ವಗ್ರಹಗಳು
ಮಾನವಧರ್ಮ ಪ್ರಕಾಶನ, ಬೆಂಗಳೂರು-2003

15) ವೀರಭದ್ರ ಚನ್ನಮಲ್ಲಸ್ವಾಮೀಜಿ : ಮಠಾಧೀಶರ ಮರ್ಮ
ಅನು ಪ್ರಕಾಶನ, ಬೆಂಗಳೂರು-2003

16) ವೀರಭದ್ರ ಚನ್ನಮಲ್ಲಸ್ವಾಮೀಜಿ : ಸುಳ್ಳು ಸೃಷ್ಟಿಗಳು
ಮಾನವಧರ್ಮ ಪ್ರಕಾಶನ, ಬೆಂಗಳೂರು-2000

17) ವೀರಭದ್ರ ಚನ್ನಮಲ್ಲಸ್ವಾಮೀಜಿ : ಚಿಂತನ ಚೇತನ
ಮಾನವಧರ್ಮ ಪ್ರಕಾಶನ, ಬೆಂಗಳೂರು-2000

18) ಮಂಗಳೂರು ವಿಜಯ (ಸಂ) : ಸಂಘರ್ಷ : ಅಂಬೇಡ್ಕರ್ ಜೀವನ ಸಾಧನೆ
ಸಂಬುದ್ಧ ಪ್ರಕಾಶನ, ಬೆಂಗಳೂರು-1995

19) ಎಂ.ಸಿ. ರಾಜ್ : ದಲಿತತತ್ವ ದಲಿತ ಧರ್ಮ ಗ್ರಂಥ
ಅಂಬೇಡ್ಕರ್ ಸಂಪನ್ಮೂಲಕೇಂದ್ರ ತುಮಕೂರು 2002

20) ಕಾಂಚ ಐಲಯ್ಯ ಮತ್ತು ಇತರರು : ಅಂಬೇಡ್ಕರ್ ಮೇಲೆ ಆಕ್ರಮಣ
ಡಾ. ಅಂಬೇಡ್ಕರ್‌ರವರ ಬಗ್ಗೆ ತಿರುಚಿ ಬರೆದ ಅರುಣ
ಶೌರಿ ಕೃತಿ ವರ್ಶಿಪಿಂಗ್ ಫಾಲ್ಸ್ ಗಾಡ್ಸ್ ಕುರಿತು
ಪ್ರತಿಕ್ರಿಯೆಗಳು ಸಂಬುದ್ಧ ಪ್ರಕಾಶನ, ಬೆಂಗಳೂರು1997

21) ರೋಮಿಲಾಥಾಪರ್ (ಮೂಲ) ಸದಾನಂದ ಕನವಳ್ಳಿ (ಅನು) : ಭಾರತದ ಇತಿಹಾಸ ಸಂಪುಟ-1
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮೈಸೂರು-1980

22) ಬಾರಾಗೋಪಾಲ (ಮೂಲ) ಎಚ್.ಎಸ್. ಶ್ರೀಮತಿ (ಅನು) : ಪ್ರಾಚೀನ ಭಾರತದ ಚರಿತ್ರೆ
ಡಿ.ಡಿ. ಕೊಸಾಂಬಿಯವರ ಚಿಂತನೆಗಳು
ಬೆಳ್ಳಿ ಚುಕ್ಕಿ ಪುಸ್ತಕಾಲಯ, ಬೆಂಗಳೂರು-1998

23) ಡಾ. ಆರ್. ಓಬಳೇಶಘಟ್ಟಿ : ಬುದ್ಧನ ಧಮ್ಮ ಹಾಗೂ ಇತರ ಧರ್ಮಗಳ ಒಂದು
ವಿವೇಚನೆ, ಶಿವಗಂಗಾ ಪ್ರಕಾಶನ, ತೋರಣಘಟ್ಟ,
ಸಕಲೇಶಪುರ-2002

24) ಎಂ. ವೆಂಕಟಸ್ವಾಮಿ : ಅಸ್ಪೃಶ್ಯರು
ನವಕರ್ನಾಟಕ ಪ್ರಕಾಶನ, ಬೆಂಗಳೂರು-2003

25) ಮೂಡ್ನಾಕೂಡು ಚಿನ್ನಸ್ವಾಮಿ : ಮಾತು ಮಂಥನ
ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು-2004

26) ಪ್ರೊ. ಒಡೆಯರ್ ಡಿ. ಹೆಗ್ಗಡೆ : ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಆರ್ಥಿಕ ವಿಚಾರಧಾರೆ, ಭಾರತಿ ಪ್ರಕಾಶನ, ಮೈಸೂರು-2001

27) ಡಾ. ಟಿ.ಎಂ. ಭಾಸ್ಕರ್ : ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾವಿರದ ಸ್ಲೋಗನ್ಸ್, ಮರುಗ ಪ್ರಕಾಶನ, ಗುಲ್ಬರ್ಗಾ 1999

28) ಡಾ. ಎಂ. ಚಿದಾನಂದ ಮೂರ್ತಿ : ವೀರಶೈವ ಧರ್ಮ : ಭಾರತೀಯ ಸಂಸ್ಕೃತಿ
ಮಿಂಚು ಪ್ರಕಾಶನ, ಬೆಂಗಳೂರು-2000

29) ಚೆನ್ನಬಸವಪ್ಪ ಬೆಟ್ಟದೂರು : ಸಲ್ಲಲಿತ ಸನ್ಮಾರ್ಗ
ಲೋಹಿಯಾ ಪ್ರಕಾಶನ ಬಳ್ಳಾರಿ-2003

30) ಡಾ. ಅಮರೇಶ ನುಗಡೋಣಿ (ಸಂ) : ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2004

31) ಡಾ. ಮೃತ್ಯುಂಜಯ ರುಮಾಲೆ (ಸಂ) : ಬಸವ ಸಾಹಿತ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು-2004

32) ದಾಸನೂರು ಕೂಸಣ್ಣ : ಡಾ. ಬಿ.ಆರ್. ಅಂಬೇಡ್ಕರ್ ಸಾಮಾಜಿಕ ಚಿಂತನೆ
ಮಾತಂಗ ಪ್ರಕಾಶನ, ಮೈಸೂರು 2001

33) ಪ್ರೊ. ಜಿ.ಹೆಚ್. ನಾಯಕ : ದಲಿತ ಹೋರಾಟ : ಗಂಭೀರ ಸವಾಲುಗಳು
ದಲಿತ ಸಂಘರ್ಷ ಸಮಿತಿ ಪ್ರಕಾಶನ, ಬೆಂಗಳೂರು-2004

34) ಡಾ. ಪ್ರಹ್ಲಾದ ಅಗಸನಕಟ್ಟೆ : ದಲಿತ ಬಂಡಾಯ ಕಾವ್ಯ ಮತ್ತು ವಿಚಾರ ವಾದಗಳು (ಸಂಶೋಧನಾ ಪ್ರಬಂಧ)ಹರ್ಷ ಪ್ರಕಾಶನ, ಹುಬ್ಬಳ್ಳಿ 2004

35) ಡಾ. ಟಿ.ಜಿ. ಸಿದ್ದಪ್ಪರಾಧ್ಯ : ಅಣ್ಣನ ಆದರ್ಶ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,ಮೈಸೂರು2003

36) ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ವೀರಶೈವ ದೀಪ್ತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ರಿ) ಮೈಸೂರು-1999

37) ಗೂ. ರು. ಚನ್ನಬಸಪ್ಪ (ಸಂ) : ಶರಣ ತತ್ವ ಚಿಂತನ
ಅಖಿಲ ಭಾರತ - ಶರಣ ಸಾಹಿತ್ಯ ಪರಿಷತ್ (ರಿ) ಮೈಸೂರು-1998

38) ಡಾ. ಕೆ. ಗೌರಮ್ಮ : ಕನ್ನಡ ಸಾಹಿತ್ಯ ಮತ್ತು ಬೌದ್ಧ ಧರ್ಮ (ಸಂಶೋಧನಾ ಪ್ರಬಂಧ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು 1998

39) ಡಾ. ಸೂರ್ಯಕಾಂತ ಎಸ್. ಸುಜ್ಯಾತ್ : ಕನ್ನಡದಲ್ಲಿ ಬುದ್ಧ ಮತ್ತು ಬಸವಣ್ಣ ಒಂದು ತೌಲನಿಕ ಅಧ್ಯಯನ ಸಂಶೋಧನಾ ಪ್ರಬಂಧ, ಕನ್ನಡ0 ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವ ವಿದ್ಯಾಲಯ, ಗುಲ್ಬರ್ಗಾ-1996

40) ಡಾ. ಬಿ.ಕೆ. ಸಂಘಸೇನಾ ವರ್ಧನ : ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ (ದಲಿತ ವಿಮೋಚನೆಯ ಪರಿಕಲ್ಪನೆಗಳ ನೆಲೆಯಲ್ಲಿ) ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - 2006 ಸಂಶೋಧನಾ ಪ್ರಬಂಧ

41) ಸ್ವಾಮಿ ಧರ್ಮತೀರ್ಥ (ಮೂಲ) ಕೆ.ಎಸ್. ಭಗವಾನ್ (ಅನು) : ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ ಮಹಿಮ ಪ್ರಕಾಶನ, ಮೈಸೂರು-1990

42) ತಾಳ್ತಜೆ ವಸಂತಕುಮಾರ : ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ ವಿನಯ ಪ್ರಕಾಶನ, ಬೆಂಗಳೂರು-1973

43) ವೈ. ಬಿ. ನಂದನ : ಭಗವಾನ ಬುದ್ಧ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲ, ಹಂಪಿ-2001

44) ಇ.ಎಂ.ಎಸ್.ನಂಬೂದರಿಪ್ಪಾಡ್ (ಮೂ : ಬಿ. ಮಾಧನ (ಅನು) : ಭಾರತದ ಚರಿತ್ರೆಯ ಸಿಂಹಾವಲೋಕನ ಭಾರತೀ ಪ್ರಕಾಶನ, ಮೈಸೂರು-1988

45) ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ ಎಂ. : ಕರ್ನಾಟಕ ಇತಿಹಾಸ ದರ್ಶನ ಕರ್ನಾಟಕ ಸಹಕಾರಿ ಪ್ರಕಾಶನ ಬೆಂಗಳೂರು-1970

46) ತಿಪ್ಪೇರುದ್ರಸ್ವಾಮಿ ಹೆಚ್. : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಿ.ವಿ.ಕೆ. ಮೂರ್ತಿ ಮೈಸೂರು-1968

47) ಬಸವನಾಳ ಶಿ.ಶಿ. : ವೀರಶೈವದ ಹುಟ್ಟು ಮತ್ತು ಬೆಳವಣಿಗೆ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ-1945

48) ಹಿರೇಮಲ್ಲೂರ, ಈಶ್ವರನ್ : ವೀರಶೈವ ಸಮಾಜ ಧರ್ಮ ಸಂಸ್ಕೃತಿ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು-1982

49) ಟಿ. ವಿಜಯ್ ಪೊಣಚ್ಚ (ಸಂ) : ಚರಿತ್ರೆ ವಿಶ್ವಕೋಶ 4 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2001

50) ರಹಮತ್ ತರೀಕೆರೆ (ಸಂ) : ಧರ್ಮ ವಿಶ್ವಕೋಶ 3
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - 2000

51) ಎಲ್. ಬಸವರಾಜು : ಬಸವೇಶ್ವರ ವಚನ ಸಂಗ್ರಹ
ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು 1952

52) ಡಾ। ವರದರಾಜ ಹುಯಿಲಗೋಳ : ಭಾರತದ ಗ್ಯಾಸೆಟಿಯರ್ (ಭಾರತದ ದೇಶ ಕೋಶ)
ಇತಿಹಾಸ ಮತ್ತು ಸಂಸ್ಕೃತಿ ಸಂಪುಟ 2 ಕನ್ನಡ ಮತ್ತು
ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು-1987

53) ನಿರಂಜನ (ಸಂ) : ಮನುಕುಲದ ಕಥೆ
ಜ್ಞಾನ ಗಂಗೋತ್ರಿ ಸಂಪುಟ-1 ಕಿರಿಯರ ವಿಶ್ವಕೋಶ
ಕರ್ನಾಟಕ ಕಸಹಕಾರೀ ಪ್ರಕಾಶನ ಮಂದಿರ
ಬೆಂಗಳೂರು-1970

54) ನಿರಂಜನ (ಸಂ) : ಭಾರತದ ಕಥೆ : ಜ್ಞಾನ ಗಂಗೋತ್ರಿ, ಸಂಪುಟ-7
ಕಿರಿಯರ ವಿಶ್ವಕೋಶ :ಕರ್ನಾಟಕ ಸಹಕಾರೀ ಪ್ರಕಾಶನ
ಮಂದಿರ ಬೆಂಗಳೂರು 1974

55) ಬಿ.ಡಿ. ಜತ್ತಿ (ಸಂ) : ಬಸವೇಶ್ವರರ ಸಮಕಾಲೀನರು
ಬಸವ ಸಮಿತಿ ಬೆಂಗಳೂರು-1976

56) ಡಾ. ಬಿ.ಸಿ. ಜವಳಿ : ಬಸವಣ್ಣನವರ ಯೋಜನೆಗಳು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

57) ಮಹೇಶ ತಿಪ್ಪಶೆಟ್ಟಿ (ಸಂ) : ಬಸವ ತತ್ವ : ಸಾಮಾಜಿಕ ಬದಲಾವಣೆ
ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ-2003

58) ಡಾ. ಮೊಗಳ್ಳಿ ಗಣೇಶ್ : ದಲಿತರು ಮತ್ತು ಜಾಗರೀಕರಣ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-1999

59) ಡಾ. ಬಿ.ಎಸ್. ಚಂದ್ರಶೇಖರ್ : ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು
ಕನ್ನಡ ವಿಶ್ವ ವಿದ್ಯಾಲಯ, ಹಂಪಿ - 2001

60) ಡಾ । ಎಂ. ಚಿದಾನಂದಮೂರ್ತಿ : ಸಂಶೋಧನೆ
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-1924

61) ಡಾ.ಬಿ.ಬಿ. ಹೆಂಡಿ : ಬಸವೇಶ್ವರ :ಶ್ರೀ ಬಸವೇಶ್ವರ ಪೀಠ,
ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ-1984

62) ವಿ. ಸೀತಾರಾಮಯ್ಯ ಹಾಗೂ ಪ್ರೊ.ಜಿ. ವೆಂಕಟಸುಬ್ಬಯ್ಯ : ಬಸವೇಶ್ವರ :
ಪಿ.ಬಿ.ಹೆಚ್. ಪ್ರಕಾಶನ :ಬೆಂಗಳೂರು-1988

63) ಡಾ. ಎಂ. ಚಿದಾನಂದ ಮೂರ್ತಿ : ವಚನ ಸಾಹಿತ್ಯ ಸಂ.: 5 ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-2000

64) ಡಾ. ಹಾ.ಮಾ. ನಾಯಕ (ಸಂ) : ಬಸವ ಪುರುಷ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು-1974

65) ಡಾ. ಸಿದ್ದಯ್ಯ ಪುರಾಣಿಕ : ಬಸವಣ್ಣನವರ ಜೀವನ ಹಾಗೂ ಸಂದೇಶ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1977

66) ಡಾ । ಮೊಗಳ್ಳಿ ಗಣೇಶ್ : ದಲಿತ ಚಿಂತನೆ ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ-2002

67) ಎಸ್. ಜಿ. ಸರ್‌ದೇಸಾಯಿ ಅನು : ಗೌರೀಶ ಕಾಯ್ಕಿಣಿ : ಭಾರತೀಯ ತತ್ವ ಜ್ಞಾನ :ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ :ನವಕರ್ನಾಟಕ ಪ್ರಕಾಶನ 1982

68) ಸಿದ್ದಯ್ಯ ಪುರಾಣಿ : ಬಸವ ಮತ್ತು ದಲಿತೋದಯ ಬಸವ ಸಮಿತಿ, ಬೆಂಗಳೂರು-1991

69) ಎಲ್. ಹನುಮಂತಯ್ಯ : ಅಂಬೇಡ್ಕರ್ ಮತ್ತು ಸಮಕಾಲೀನತೆ ವಾಹಿನಿ ಪ್ರಕಾಶನ, ಬೆಂಗಳೂರು-1993

70) ಡಾ. ಬಸವರಾಜ ಸಬರದ : ವಚನ ಚಳುವಳಿ ಪಲ್ಲವಿ ಪ್ರಕಾಶನ, ಗುಲಬರ್ಗಾ-1992

71 ಡಾ. ಅರವಿಂದ ಮಾಲಗಿತ್ತಿ : ದಲಿತ ಮಾರ್ಗ :ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು - 2002

72) ಡಾ. ಮ.ನ. ಜವರಯ್ಯ : ಬಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್ ಸಿದ್ಧಾರ್ಥ ಗ್ರಂಥ ಮಾಲೆ ಮೈಸೂರು-2002

73) ಡಾ. ಮ.ನ. ಜವರಯ್ಯ : ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ ಸಿದ್ಧಾರ್ಥ ಗ್ರಂಥ ಮಾಲೆ ಮೈಸೂರು-1997

74) ಡಾ. ಮ.ನ. ಜವರಯ್ಯ : ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ ಸಿದ್ಧಾರ್ಥ ಗ್ರಂಥ ಮಾಲೆ, ಮೈಸೂರು-1995

75) ರಂಜಾನ್ ದರ್ಗಾ : ಬಸವ ಪ್ರಜ್ಞೆ ಲೋಹಿಯಾ ಪ್ರಕಾಶನ ಬಳ್ಳಾರಿ 2002

76) ಕುಮಾರ ಕಕ್ಕಯ್ಯ ಪೋಳ : ಚಾತುರ್ವರ್ಣ ಧರ್ಮ ದರ್ಶನ ಲೋಹಿಯಾ ಪ್ರಕಾಶನ ಬಳ್ಳಾರಿ 2001

77) ಹೆಚ್. ಗಂಗಾಧರನ್ : ಬುದ್ಧ ಭಗವಾನ್ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು -1970

78) ಎ.ಡಿ. ಕೃಷ್ಣಯ್ಯ : ಬೌದ್ಧೀಯತೆ : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-1997

79) ಪ್ರೊ. ಟಿ. ಯಲ್ಲಪ್ಪ ಭೂತಯ್ಯ : ದಾರ್ಶನಿಕರು ಮತ್ತು ದಲಿತರು ಆದಿ ಭಾರತ ಸಾಹಿತ್ಯ ಪ್ರಕಾಶನ: ಮೈಸೂರು- 2000

80) ಡಾ. ಮ.ನ. ಜವರಯ್ಯ : ಕನ್ನಡ ಸಾಹಿತ್ಯದಲ್ಲಿ ಶಿವರಾಮ ಕೃಷ್ಣ ಅಂಬೇಡ್ಕರ್ ಸಿದ್ಧಾರ್ಥ ಗ್ರಂಥ ಮಾಲೆ, ಮೈಸೂರು-2004

81) ಡಾ. ಮ.ನ. ಜವರಯ್ಯ : ಅಂಬೇಡ್ಕರ್ ವಿದ್ಯಾರ್ಥಿ ಜೀವನ ಚರಿತ್ರೆ ಸಿದ್ಧಾರ್ಥ ಗ್ರಂಥ ಮಾಲೆ, ಮೈಸೂರು-1995

82) ಶ್ಯಾಮಾಚರಣ ದುಬೆ ಅನು: ಆರ್.ಎಲ್. ಅನಂತರಾಮಯ್ಯ : ಭಾರತೀಯ ಸಮಾಜ ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ

83) ಡಾ. ಅರವಿಂದ ಮಾಲಗಿತ್ತಿ (ಸಂ) : ಡಾ. ಅಂಬೇಡ್ಕರ್ ವಿಚಾರಧಾರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 1991

84) ದೇ.ಜವರೇಗೌಡ : ಬಸವೇಶ್ವರ ಕಾರ್ಲ್‌ಮಾರ್ಕ್ಸ್ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1998

85) ವಸಂತ ಮಾಧವ್ (ಮೂಲ) ಬಿ.ಎ. ಸನದಿ (ಅನು) : ಡಾ. ಬಾಬಾಸಾಹೇಬ್ ಅಂಬೇಡ್ಕರ್ ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ1991

86) ಎಸ್.ಎಸ್. ಹಿರೇಮಠ : ದಲಿತ ಸಂಸ್ಕೃತಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-2001

87) ಡಾ. ತಾಳ್ತಜೆ ವಸಂತ ಕುಮಾರ : ಮುತ್ತಿನ ಸತ್ತಿಗೆ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, 2001

88) ಡಾ. ಬಸವರಾಜ ಸಬರದ : ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು 1992

89) ಜವಾಹರಲಾಲ್ ನೆಹರೂ (ಮೂಲ) ಸಂತೆ ಬೆನ್ನೂರು ಕೃಷ್ಣಮೂರ್ತಿರಾವ್ (ಅನು) : ಭಾರತ ದರ್ಶನ ಕಾವ್ಯಾಲಯ ಪ್ರಕಾಶನ ಮೈಸೂರು 1945

90) ಭಗವತ್ ಶರಣ ಉಪಾಧ್ಯಾಯ : ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ
ನವಕರ್ನಾಟಕ ಪ್ರಕಾಶನ : ಬೆಂಗಳೂರು 2004

91) ಮೂಡ್ನಾಕೂಡು ಚಿನ್ನಸ್ವಾಮಿ : ನೊಂದವರ ನೋವು
ಲೋಹಿಯಾ ಪ್ರಕಾಶನ :ಬಳ್ಳಾರಿ 2002

92) ಡಾ. ಸರಜೂ ಕಾಟ್ಕರ್ : ಶರಣ ಬಂಡಾಯ
ಲೋಹಿಯಾ ಪ್ರಕಾಶನ ಬಳ್ಳಾರಿ 2003

93) ಪ್ರೊ. ಲಕ್ಷ್ಮಣ ತೆಲಗಾವಿ : ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ 1999

94) ಆನಂದ ಕೆ. ಕುಮಾರಸ್ವಾಮಿ (ಮೂಲ) : ಗೌತಮ ಬುದ್ಧ
ಐ.ಬಿ. ಹಾರ್ನರ್
ಜಿ. ಸಚ್ಚಿದಾನಂದ (ಅನು)
ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ನ್ಯೂ ದೆಹಲಿ-196

95) ಡಾ. ಹೆಚ್. ಎಸ್. ಗೋಪಾಲರಾವ್ : ಇತಿಹಾಸದ ಅಧ್ಯಯನ ಅಂದು ಇಂದು
ನವಕರ್ನಾಟಕ ಪ್ರಕಾಶನ 1997

96) ಡಾ. ಎನ್. ಚಿನ್ನಸ್ವಾಮಿ ಸೋಸಲೆ : ನಮ್ಮ ಗ್ರಾಮಗಳು ಅಂದು ಇಂದು
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ, 2004

97) ಕೆ.ಎಸ್. ಭಗವಾನ್ : ಶಂಕರಾಚಾರ್ಯ ಮತ್ತು ಪ್ರತಿಗಾಮಿತನ
ಮಹಿಮಾ ಪ್ರಕಾಶನ, ಮೈಸೂರು, 2003

98) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ : ದೀಘನಿಕಾಯ ಸಂಪುಟ-1
ಎಚ್.ವಿ. ಶ್ರೀರಂಗರಾಜ್ (ಅನು)
ಬುದ್ಧ ವಚನ ಟ್ರಸ್ಟ್ ಬೆಂಗಳೂರು 1982

99) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ : ದೀಘನಿಕಾಯ ಸಂಪುಟ -2
ಎಚ್.ವಿ. ಶ್ರೀ ರಂಗರಾಜ್ (ಅನು)
ಬುದ್ಧ ವಚನ ಟ್ರಸ್ಟ್. ಬೆಂಗಳೂರು 1983

100) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ : ದೀಘನಿಕಾಯ ಸಂಪುಟ 3
ಎಚ್.ವಿ. ಶ್ರೀ ರಂಗರಾಜ್ (ಅನು)
ಬುದ್ಧ ವಚನ ಟ್ರಸ್ಟ್.ಬೆಂಗಳೂರು1984

101) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ : ದೀಘನಿಕಾಯ ಸಂಪುಟ -1
ಎಚ್.ವಿ. ಶ್ರೀ ರಂಗರಾಜ್ (ಅನು)
ಬುದ್ಧ ವಚನ ಟ್ರಸ್ಟ್. ಬೆಂಗಳೂರು 1984

102) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ : ಮಜ್ಜಿಮ ನಿಕಾಯ ಸಂಪುಟ-1
ಶ್ರೀ. ಹೆಚ್. ಎಸ್. ಶಿವಪ್ರಕಾಶ (ಅನು)
ಶ್ರೀ ಜೆ. ಶ್ರೀನಿವಾಸ ಮೂರ್ತಿ (ಅನು)
ಶ್ರೀ ಬಿ.ವಿ. ರಾಜಾರಾಂ (ಅನು)
ಬುದ್ಧ ವಚನ ಟ್ರಸ್ಟ್
ಬೆಂಗಳೂರು 1985

103) ಪೂಜ್ಯ ಶ್ರೀ ಆಚಾರ್ಯ ಬುದ್ಧ ರಕ್ಷಿತ ಡಾ. ಬಿ.ಎನ್. ಚಂದ್ರಯ್ಯ (ಅನು) : ಬುದ್ದಕ - ನಿಕಾಯ -ಜಾತಕ ಮತ್ತು ಜಾತಕ ಕಥೆಗಳು ಸಂಪುಟ-2
ಬುದ್ಧ ವಚನ ಟ್ರಸ್ಟ್ ಬೆಂಗಳೂರು 1987

104) ಡಾ. ಬಸವರಾಜ ಸಬರದ : ಬಸವಣ್ಣ ಮತ್ತು ಪ್ರಸ್ತುತ ಸಾಮಾಜಿಕ ಸಂದರ್ಭ
ಪ್ರಸಾರಾಂಗ ಗುಲಬರ್ಗಾ
ವಿಶ್ವವಿದ್ಯಾಲಯ ಗುಲಬರ್ಗಾ 1991

105) ಡಾ. ಕೆ. ಆರ್. ದುರ್ಗಾದಾಸ : ಡಾ. ಬಾಬಾ ಸಾಹೇಬ ಅಂಬೇಡ್ಕರ್
ಪ್ರಸಾರಾಂಗ, ಗುಲಬರ್ಗಾ
ವಿಶ್ವವಿದ್ಯಾಲ, ಗುಲಬರ್ಗಾ 1994

106) ಮ.ನ. ಜವರಯ್ಯ : ಅಂಬೇಡ್ಕರ್ ವಿಚಾರ ಸಾಹಿತ್ಯ
ಸಮಗ್ರ ಅಧ್ಯಯನ (ಸಂಶೋಧನಾ ಮಹಾ ಪ್ರಬಂಧ)
ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು1991

107) ಜಗಜೀವನ್‌ರಾಮ್ (ಮೂಲ) ರಾ. ಹು. (ಅನು) : ಜಾತಿ ವ್ಯವಸ್ಥೆ ಸವಾಲುಗಳು
ಅನುಭವ ಪ್ರಕಾಶನ, ಗುಲಬರ್ಗಾ 1999

108) ನಾಗರಾಜ್ ಡಿ.ಆರ್. : ಅಮೃತ ಮತ್ತು ಗರುಡ
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ 1998

109) ಎಂ.ಸಿ. ರಾಜ್ : ದಲಿತತ್ವ ದಲಿತ ಧರ್ಮಗ್ರಂಥ
ಅಂಬೇಡ್ಕರ್ ಸಂಪನ್ಮೂಲ ಕೇಂದ್ರ, ತುಮಕೂರು 2002

110 ಡಾ.ಬಿ.ಆರ್.ಅಂಬೇಡ್ಕರ್ ಪ್ರ.ಸಂ.ಡಾ.ರಾಜಶೇಖರಯ್ಯ. : ಡಾ. ಬಾಬಾಸಾಹೇಬ ಅಂಬೇಡ್ಕರ್
ಬರಹಗಳು ಮತ್ತು ಭಾಷಣಗಳು ಸಂಪುಟ-1
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು 1990

111 ಡಾ.ಬಿ.ಆರ್.ಅಂಬೇಡ್ಕರ್ ಪ್ರ.ಸಂ.ಡಾ.ರಾಜಶೇಖರಯ್ಯ. : ಡಾ. ಬಾಬಾಸಾಹೇಬ ಅಂಬೇಡ್ಕರ್
ಬರಹಗಳು ಮತ್ತು ಭಾಷಣಗಳು ಸಂಪುಟ-5
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು 1996

112 ಡಾ.ಬಿ.ಆರ್.ಅಂಬೇಡ್ಕರ್ ಪ್ರ.ಸಂ.ಡಾ.ರಾಜಶೇಖರಯ್ಯ. : ಡಾ. ಬಾಬಾ ಸಾಹೇಬ ಅಂಬೇಡ್ಕರ್
ಬರಹಗಳು ಮತ್ತು ಭಾಷಣಗಳು ಸಂಪುಟ-9
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು 1990

113) ನಂದನ ವೈ. ಬಿ. : ನಾವೇಕೆ ಬೌದ್ಧರಾಗಬೇಕು !!! ಬುದ್ಧ ಜ್ಯೋತಿ
ಪ್ರಕಾಶನ ನೆರಗಾತನಹಳ್ಳಿ, ಮೈಸೂರು ಜಿಲ್ಲೆ 2002

114) ಅಗ್ರಹಾರ ಕೃಷ್ಣಮೂರ್ತಿ (ಸಂ) : ಡಾ. ಡಿ.ಆರ್. ನಾಗರಾಜ್, ಸಂಸ್ಕೃತಿ ಕಥನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2002

115) ಆರ್. ವಿ. ಭಂಡಾರಿ : ವರ್ಣದಿಂದ ವರ್ಗದ ಕಡೆಗೆ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2003

116) ರಹಮತ್ ತರೀಕೆರೆ : ಪ್ರತಿ ಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು1993

117) ಬರಗೂರ ರಾಮಚಂದ್ರಪ್ಪ : ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ ಅಂಕಿತ ಪ್ರಕಾಶನ, ಬೆಂಗಳೂರು 2001

118) ಡಾ.ಬಿ.ಆರ್.ಅಂಬೇಡ್ಕರ್ ಪ್ರ.ಸಂ.ಡಾ.ರಾಜಶೇಖರಯ್ಯ. : ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ 2 ಭಾಗ 2 ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು 1993

119) ಬಸವಲಿಂಗಪ್ಪ ಬಿ. : ಬುದ್ಧ ಮಾರ್ಗ, ಡಾ. ಅಂಬೇಡ್ಕರ್ ರವರ ಹೆಜ್ಜೆ ಗುರುತಿನಲ್ಲಿ, ಕರ್ನಾಟಕ ಬುದ್ಧ ಧಮ್ಮ ಸಮಿತಿ, ಬೆಂಗಳೂರು 1990

120) ನಾರದ ಥೇರ (ಮೂಲ) ಎಸ್. ನರಸಿಂಹಯ್ಯ (ಅನು) : ಬೋಧಿ ಪೂರ್ಣಿಮಾ ಬೌದ್ಧ ಧರ್ಮದ ಒಂದು ಸಂಕ್ಷಿಪ್ತ ಪರಿಚಯ, ಮಹಾಬೋಧಿ ಸೊಸೈಟಿ, ಬುದ್ಧ ವಚನ ಟ್ರಸ್ಟ್, ಬೆಂಗಳೂರು 2000

121) ಅಂಬೇಡ್ಕರ್ ಬಿ.ಆರ್. (ಮೂಲ) ಎಂ. ಗೋಪಿನಾಥ (ಅನು) : ಬುದ್ಧ ಮಾರ್ಗದಿ ನಡೆಯೋಣ ವಿಮೋಚನೆ ಪಡೆಯೋ ದಲಿತ ಸಾಹಿತ್ಯ ಸಂಘಟನೆ, ಬೆಂಗಳೂರು 1998

122) ಶ್ರೀಧರನ್ ಓ. : ಡಾ. ಅಂಬೇಡ್ಕರ್ ಚಿಂತನೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಹುಜನ ಸಮಾಜ ಪಕ್ಷ. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ-1997

123) ತಾಳ್ತಜೆ ವಸಂತ ಕುಮಾರ : ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ ವಿನಯ ಪ್ರಕಾಶನ, ಬೆಂಗಳೂರು 1988

124) ನಂದನ ವೈ. ಬಿ. : ಬೌದ್ಧ ನಿತ್ಯಾಚರಣೆಗಳು, ಬುದ್ಧ ವಚನ ಟ್ರಸ್ಟ್ ಮಹಾಬೋಧಿ ಸೊಸೈಟಿ, ಬೆಂಗಳೂರು 2000

125) ನಂದನ ವೈ. ಬಿ. : ಬೌದ್ಧ ಆಚರಣೆಗಳು ಮಹಾಬೋಧಿ ಸೊಸೈಟಿ, ಬೆಂಗಳೂರು 2003

126) ಶಂಕರಪ್ಪ ಕೆ.ಎಂ. : ಬುದ್ಧ ಬರಲಿ ನಮ್ಮ ಊರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಮೈಸೂರು ಶಾಖೆ -1999

127) ಮುನಿ ವೆಂಕಟಪ್ಪ (ಸಂ) : ದಲಿತ ಚಳುವಳಿ ಒಂದು ಅವಲೋಕನ ವಿಚಾರವಾದಿ ಪ್ರಕಾಶನ 1998

128) ಕುಮಾರ ಕಕ್ಕಯ್ಯ ಪೋಳ : ಬಸವಧರ್ಮ ಯಾರ ಸೊತ್ತು ? ಕುಮಾರ ಕಕ್ಕಯ್ಯ ಪೋಳ ಪ್ರಕಾಶನ ಬಿಜಾಪೂರ-2001

129) ಸರಜೂ ಕಾಟ್ಕರ್ : ಬಸವ ಮತ್ತು, ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ -2003

130) ಸುಬ್ಬಾರಾವ್ ವೈ. : ಧಮ್ಮ ಪದ (ಅಧ್ಯಾತ್ಮ ಗ್ರಂಥಾವಳಿ, ಅವೈದಿಕ ಗ್ರಂಥಗಳು-1) ಬೆಂಗಳೂರು 1935

131) ಚಿದಾನಂದಮೂರ್ತಿ ಎಂ. : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು 1966

132) ಚಂದ್ರಶೇಖರ್ ಎಸ್. : ಕರ್ನಾಟಕ ಚರಿತ್ರೆ ಸಂಪುಟ -7 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-1998

133) ನಂದನ ವೈ. ಬಿ. : ಬುದ್ಧ ಶಾಸನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ- 2003

134) ಎಂ.ಎಂ. ಕಲಬುರ್ಗಿ (ಸಂ) : ಬಸವಣ್ಣನವರ ಟೀಕಿನ ವಚನಗಳು ಸಂಪುಟ-1 ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1979

135) ಎಂ. ಎಂ. ಕಲಬುರ್ಗಿ (ಸಂ) : ಬಸವಣ್ಣನವರ ಟೀಕಿನ ವಚನಗಳು ಸಂಪುಟ-2 ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 1981

136) ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ (ಸಂ) : ತತ್ವಶಾಸ್ತ್ರ ಪ್ರಾಚ್ಯ ಮತ್ತು ಪಾಶ್ಚಾತ್ಯ ಮೊದಲನೆ ಸಂಪು ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು 1970

137) ಶಿವರಾಮಯ್ಯ : ಸಾಹಿತ್ಯ ಮತ್ತು ಚರಿತ್ರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 1993

138) ಡಾ. ಎ.ವಿ. ವೆಂಕಟರತ್ನಂ, ಡಾ. ಎಂ.ಬಿ. ಪದ್ಮ : ಇತಿಹಾಸ ಸಂಶೋಧನಾ ಮಾರ್ಗ ಬಾಪ್ಕೊ ಪ್ರಕಾಶನ ಬೆಂಗಳೂರು 1985

139) ಡಾ. ಶಿವಾನಂದ ಗುಬ್ಬಣ್ಣನವರ : ಲಿಂಗಾಯತ ಸಂಸ್ಕಾರಗಳು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ1984

140) ಎಂ.ಆರ್. ಶ್ರೀನಿವಾಸಮೂರ್ತಿ : ಸಾಹಿತ್ಯಲೋಕ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವ ವಿದ್ಯಾಲಯ 1978

141) ಎಂ. ನಂಜಮ್ಮಣ್ಣಿ : ಭಾರತೀಯ ಸಾಮಾಜಿಕ ಸಂಸ್ಥೆಗಳು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ1982

142) ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ವಚನ ಸಾಹಿತ್ಯ ವೈಚಾರಿಕ ಅಧ್ಯಯನ ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ 1977

143) ನಂದನ ವೈ. ಬಿ. : ಬೌದ್ಧ ಧರ್ಮಶಾಸ್ತ್ರ ಪರಿಚಯ, ಬುದ್ಧ ವಚನ ಟ್ರಸ್ಟ್ ಮಹಾಬೋಧಿ ಸೊಸೈಟಿ, ಬೆಂಗಳೂರು 2003

144) ರಹಮತ್ ತರೀಕೆರೆ : ಮರದೊಳಗಣ ಕಿಚ್ಚು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 1996

145) ಧಮ್ಮ ರಕ್ಷಿತ (ಎಂ. ಮರಿಸ್ವಾಮಿ) : ಬೆಳಕಿನ ಧಮ್ಮ, ರೂಪ ಪ್ರಕಾಶನ ಮೈಸೂರು 2003

146) ಡಾ. ಮ.ನ. ಜವರಯ್ಯ : ಡಾ. ಅಂಬೇಡ್ಕರ್ ವಿರಚಿತ : ಬುದ್ಧ ಮಾರ್ಕ್ಸ್ ಗಾಂಧೀ ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು 1999

147) ಡಾ. ಟಿ, ಎಂ. ಭಾಸ್ಕರ್ : ಬುದ್ಧನ ಸಂಘ ಪರಿಕಲ್ಪನೆ ಮುರುಗ ಪ್ರಕಾಶನ, ಗುಲಬರ್ಗಾ 2002

148) ಡಾ. ಬಾ.ರಾ. ಗೋಪಾಲ : ಇತಿಹಾಸ ಶಾಸ್ತ್ರ ಮತ್ತು ಸಿದ್ಧಾಂತ: ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು1996

149) ಆರ್. ಎಸ್. ಶರ್ಮಾ (ಮೂಲ) ಎನ್.ಪಿ.ಶಂಕರನಾರಾಯಣರಾವ್(ಅನು) : ಪ್ರಾಚೀನ ಭಾರತ ನವಕರ್ನಾಟಕ ಪ್ರಕಾಶನ ಬೆಂಗಳೂರು 2002

150) ಆರ್.ಎಸ್. ಶರ್ಮಾ (ಮೂಲ) ಡಾ. ಜೆ.ಶ್ರೀನಿವಾಸಮೂರ್ತಿ ಡಾ.ಆರ್.ಶೋಭ, ಡಾ.ಎಸ್.ಗುರುದತ್ತ, ಡಾ.ಜಿ. ರಾಮಕೃಷ್ಣ (ಅನುವಾದಕರು) : ಪ್ರಾಚೀನ ಭಾರತದಲ್ಲಿ ಶೂದ್ರರು ನವಕರ್ನಾಟಕ ಪ್ರಕಾಶನ ಬೆಂಗಳೂರು - 2004

151) ಎಸ್.ಆರ್. ಭಟ್ಟ : ಪ್ರಾಚೀನ ಭಾರತದಲ್ಲಿ ಜನ ಜೀವನ ನವಕರ್ನಾಟಕ ಪ್ರಕಾಶನ] ಬೆಂಗಳೂರು 1997

152) ಶ್ರೀ ಸಿದ್ದರಾಜ ಪೂಜಾರಿ, ಶ್ರೀ ಜಯಂತ ಕಾಡದೇವರ (ಸಂ) : ಸಮನ್ವಯಿ ಗುರುಪಟ್ಟಾಧಿಕಾರ ಅಭಿನಂದನ ಗ್ರಂಥ. ಹಿಪ್ಪರಗಿ.2003

ಲೇಖನಗಳು

1) ಚಂದ್ರಶೇಖರ ಪಾಟೀಲ : ಬಸವಣ್ಣ ನನ್ನ ಪಾಲಿಗೊಂದು ಸಾಕ್ಷಿ ಪ್ರಜ್ಞೆ ಬಸವ ಮಾರ್ಗ ಮಾಸಿಕ ಜೂನ-ಜುಲೈ 2004 ಸಂಪುಟ 4 ಸಂಚಿಕೆ 2-3 ಷಹಾಪೂರ 2004

2) ಶಿವಾನಂದ ಎಸ್. : ವರ್ಣವ್ಯವಸ್ಥೆಯ ಕರಾಳ ಮುಖಗಳು ಸಂಕ್ರಮಣ ಸಾಹಿತ್ಯ ಸಂಪುಟ-3 ಸಂಕ್ರಮಣ ಪ್ರಕಾಶನ, ಧಾರವಾಡ 1976

3) ಕಿವುಡನವರ ಜಗದೀಶ : ಅಂಬೇಡ್ಕರ್ ಮತ್ತು ದಲಿತ ಚಳುವಳಿ ಸ್ವಾಭಿಮಾನ ಶಿಲ್ಪ ಸ್ಮರಣ ಸಂಚಿಕೆ ಬಿ. ಬಸವಲಿಂಗಪ್ಪನವರ ಮೂರ್ತಿ ಪ್ರತಿಷ್ಠಾಪನಾ ಸಮಿತಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ 2002

4) ನಾಡಕರ್ಣಿ ಎಂ.ಬಿ. : ಜಾತಿ ಪದ್ಧತಿಯು ಹಿಂದೂಧರ್ಮದ ಸ್ವಭಾವ ಜನ್ಯ ಭಾಗ್ಯವೇ? ಹೊಸತು ಜನವರಿ 2004

5) ಸರ್ದೇಸಾಯಿ ಎಸ್. ಜಿ. : ಹಿಂದೂತ್ವದ ಕೆಲವು ವಿ(ಶಿಷ್ಟ)ಚಿತ್ರ ಲಕ್ಷಣಗಳು ಹೊಸತು ಜನವರಿ 2004

6) ಚಂದ್ರಶೇಖರ ಪಾಟೀಲ : ಮತಾಂತರ ಮತ್ತು ಮೇರಾ ಭಾರತ ಮಹಾನ್ ಸಂಕ್ರಮಣ ಸಂಪುಟ-34 ಸಂಚಿಕೆ-6,1999

7) ಕೃಷ್ಣಪ್ಪ ಬಿ. : ಮಾನವತಾವಾದಿ ಅಂಬೇಡ್ಕರ್ ಅಂಬೇಡ್ಕರ್ ವಾದ ಅಕ್ಟೋಬರ್ 2003 ಬೆಂಗಳೂರು 2003

8) ಡಾ.ಮೂಡ್ನಾಕೂಡು ಚಿನ್ನಸ್ವಾಮಿ : ಬುದ್ಧನೆಡೆಗೆ .... ಮರಳಿ ಮನೆಗೆ ಸುಧಾ, 7 ಡಿಸೆಂಬರ್ 2006 ಪುಟ 57 ಬೆಂಗಳೂರು 2006

9) ಡಾ.ಕೆ.ಆರ್.ದುರ್ಗಾದಾಸ : ವ್ಯವಸ್ಥೆಯೊಂದಿಗೆ ರಾಜಿಯಾಗದ ಪರಿವರ್ತನೆಯ ಹರಿಕಾರರು ಬಸವಮಾರ್ಗ ಮಾಸಿಕ-ಸೆಪ್ಟೆಂಬರ್ 2003 ಸಂ.3 ಸಂ.5 ಪುಟ 20.

10) ರಂಜಾನ್ ದರ್ಗಾ : ಜಡಸಂಸ್ಕೃತಿಯ ವಿರುದ್ಧ ಚೈತನ್ಯ ಸಂಸ್ಕೃತಿ :ಸಂಕ್ರಮಣ 315-316, ಸಂ.33 ಸಂ.11,12. ನವೆಂಬರ್-ಡಿಸೆಂಬರ್ 1998 ಪುಟ 31.

11) ಮಹೇಶ ತಿಪ್ಪಶೆಟ್ಟಿ : ಬಂಡಾಯದ ಮೂಲಕ ರೂಪಗೊಂಡ ಲಿಂಗಾಯತರು ಬ್ರಾಹ್ಮಣೀಕರಣದಿಂದ ಸ್ಥಗಿತಗೊಂಡ ವೀರಶೈವರು-ಬಸವಮಾರ್ಗ ನವೆಂಬರ್-2006 ಸಂ.6,ಸಂ.6, ಪುಟ26

12) ಡಾ.ಮೀನಾಕ್ಷಿ ಬಾಳಿ : ಅರಿಭಯಂಕರ ಪುರೋಹಿತ ಕ್ಷುದ್ರಾಗ್ನಿ : ಅಗ್ನಿ ಸೆಪ್ಟೆಂಬರ್ 7 2006, ಪುಟ 17.

13) ಪ್ರೋ.ಯು.ಎನ್.ಸಂಗನಾಳಮಠ : ಸದ್ಗುಣ ಜೀವನದ ಮಾರ್ಗ ಬೌದ್ಧಮಾರ್ಗ : ಸಂಯುಕ್ತ ಕರ್ನಾಟಕ 16-10-2006 ಪುಟ 3.

14) ಡಾ.ಮೂಡ್ನಾಕೂಡು ಚಿನ್ನಸ್ವಾಮಿ : ಅಂಬೇಡ್ಕರ್ ಮತ್ತು ಮತಾಂತರ :ಅಗ್ನಿ ಪತ್ರಿಕೆ. ಅಕ್ಟೋಬರ್ 19 2006 ಸಂ.9, ಸಂ.1, ಪುಟ 12-13

15) ಸದಾಶಿವ ಮರ್ಜಿ : ದಲಿತರ ಮೇಲೆ ದೌರ್ಜನ್ಯ ಒಂದು ಸಮೀಕ್ಷೆ. ಸಂಕ್ರಮಣ-198 ಸಂ.24 ಸಂ.2, ಫೆಬ್ರುವರಿ1998 ಪುಟ25

16) ಪೋಲಂಕಿ ರಾಮಮೂರ್ತಿ : ದಲಿತ ಸಾಹಿತ್ಯ - ಸಿಟ್ಟಿಗೆ ಹಕ್ಕಿದೆ :ಸಂಕ್ರಮಣ 186, ಸಂ.23 ಸಂ.2 ಫೆಬ್ರುವರಿ 1988 ಪುಟ 47

17) ನಿತ್ಯಾನಂದ ಬಿ. ಶೆಟ್ಟಿ : ಜಾತಿಸಂಘಗಳು: ಹುಟ್ಟು ಬೆಳವಣಿಗೆ, ಆಶಯ, ಇತ್ಯಾದಿ ಸಂಕ್ರಮಣ 301, ಸಂ.32, ಸಂ.9, ಸೆಪ್ಟೆಂಬರ್ 1997 ಪುಟ 51

18) ವಿಷ್ಣುನಾಯಕ : ಶಿವಶರಣೆಯರ ವಚನಗಳಲ್ಲಿ ಪ್ರತಿಭಟನೆಯ ಧ್ವನಿ: ಸಂಕ್ರಮಣ-312, ಸಂ.33,ಸಂ.8. ಆಗಸ್ಟ್ 1998 ಪುಟ 9

19) ದಯಾನಂದ ಮಾನೆ ಶಿವರುದ್ರ ಕಲ್ಲೋಳಿಕರ : ಮಹಾರಾಷ್ಟ್ರದ ದಲಿತ ಪ್ಯಾಂಥರ ಚಳುವಳಿ-ಸಂಕ್ರಮಣ 236 ಸಂ.27 ಸಂ.4, ಏಪ್ರಿಲ್ 1992 ಪುಟ 9.

20) ಕೆ.ಎಸ್.ಭಗವಾನ್ : ಶರಣರ ದೃಷ್ಟಿಯಲ್ಲಿ ಜಾತಿ-ವರ್ಗ ವಿನಾಶ :ಸಂಕ್ರಮಣ 297-298 ಸಂ.32ಸಂ.5-7, ಮೇ-ಜೂನ್1997 ಪುಟ17

21) ಲಿಂಗಣ್ಣ ಸತ್ಯಂಪೇಟೆ : ವಿಪ್ರಸತ್ತೆ-ರಾಜಸತ್ತೆ ಎರಡರ ವಿರುದ್ಧವೂ ಸಮರ ಸಾರಿದ್ದ ಬಂಡಾಯದ ಬಸವಣ್ಣ- ಬಸವಮಾರ್ಗ ಸಂ.2, ಸಂ.2, ಜೂನ್ 2002 ಪುಟ 6

22) ಮೂಡ್ನಾಕೂಡು ಚಿನ್ನಸ್ವಾಮಿ : ಬುದ್ಧ-ಬಸವರು ಆರಂಭಿಸಿದ ಒಂದು ಕೊಡ ಹಾಲಿನ ಸಮರ ಬಸವಮಾರ್ಗ ಸಂ.3, ಸಂ.5, ಸೆಪ್ಟೆಂಬರ್ 2003 ಪುಟ.8

23) ಸುಜನಾ : ಬಸವಣ್ಣನವರ ಪ್ರಸ್ತುತತೆ: ಸಂಕ್ರಮಣ 304, ಸಂ.32, ಸಂ.12, ಡಿಸೆಂಬರ್ 1997 ಪುಟ 36

24) ರಂಜಾನ್ ದರ್ಗಾ : ಬಸವಣ್ಣನವರ ಪರ್ಯಾಯ ಸಮಾಜ, ಸಂವಾದ ಫೆಬ್ರುವರಿ 2004 ಸಂ.2, ಸಂ.4, ಪುಟ 12.

25) ರೆವ್ಹರೆಂಡ್ ಚನ್ನಪ್ಪ ಉತ್ತಂಗಿ : ಬಸವಣ್ಣನೂ ಅಸ್ಪೃಶ್ಯರ ಉದ್ಧಾರವೂ. ಸಂವಾದ ಆಗಸ್ಟ್ 2004 ಸಂ.2, ಸಂ.10, ಪುಟ 26-29

26) ಡಾ.ಮೂಡ್ನಾಕೂಡು ಚಿನ್ನಸ್ವಾಮಿ : ಬೌದ್ಧಧರ್ಮ ಹಾಗೂ ಅದರ ಪ್ರಸ್ತುತತೆ- ಹೊಸತು ಮೇ 2006 ಸಂ.7 ಸಂ.10 ಪುಟ 25

27) ಡಾ.ಬಸವರಾಜ ಸಬರದ : ಬಸವ ಚಳುವಳಿಯೊಳಗಿನ ದಲಿತ ಚಳುವಳಿ. ಸಂವಾದ ಡಿಸೆಂಬರ್ 2003 ಸಂ.2, ಸಂ.2, ಪುಟ 30

28) ಸಿ.ಎಚ್.ಜಾಕೋಬ್‌ಲೋಬೊ : ಮಹಾನ್ ಪ್ರಜಾಪ್ರಭುತ್ವವಾದಿ ಡಾ.ಅಂಬೇಡ್ಕರ್. ಹೊಸತು ಏಪ್ರಿಲ್ 2006 ಸಂ.7, ಸಂ.9 ಪುಟ 47.

29) ಡಾ.ಎಚ್. ಚಂದ್ರಶೇಖರ : ಬಸವಣ್ಣ : ಮೊದಲ ಬಂಡಾಯಗಾರ. ಪ್ರಜಾವಾಣಿ ಜೂನ್ 23, 2006

30) ಆನಂದ್ ತೇಲ್‌ತುಂಬ್ಡೆ ಅನು:ಕೆ.ವಿದ್ಯಾ : ಸಮಕಾಲೀನ ಕಣ್ಣಲ್ಲಿ ಅಂಬೇಡ್ಕರ್‌ರ ಆರ್ಥಿಕ ಚಿಂತನೆಗಳು. ಸಂವಾದ ಅಕ್ಟೋಬರ್ 2006 ಸಂ.2, ಸಂ.12. ಪುಟ 28

31) ಎಲಿನೊರ್ ಝೆಲಿಯಟ್ ಅನು:ಬಿ.ಯು.ಸುಮಾ : ಅಂಬೇಡ್ಕರ್ ಎಂದರೆ : ಸಂವಾದ ಏಪ್ರಿಲ್ 2005 ಸಂ.3, ಸಂ.6 ಪುಟ 14

32) ಸರಜೂ ಕಾಟ್ಕರ್ : ಅಂಬೇಡ್ಕರ್ ಮತ್ತು ಧರ್ಮಾಂತರ: ಅಂಬೇಡ್ಕರ್ ವಾದ. ಜೂನ್2004 ಸಂ.1, ಸಂ.1. ಪುಟ 18.

33) ಮೊಗಳ್ಳಿ ಗಣೇಶ : ಮಹಾಬೋಧಿವೃಕ್ಷದ ನದಿ ಡಾ.ಬಾಬಾಸಾಹೇಬ ಅಂಬೇಡ್ಕರ್: ಅಂಬೇಡ್ಕರ್ ವಾದ. ಜೂನ್2004 ಸಂ.1,ಸಂ.1. ಪುಟ4

34) ರಂಜಾನ್ ದರ್ಗಾ : ಬುದ್ಧ ಕಂಡ ಬದುಕು: ಅಂಬೇಡ್ಕರ್ ವಾದ. ಜೂನ್2004 ಸಂ.1, ಸಂ.1. ಪುಟ 12.

35) ಪ್ರೋ.ಬಿ.ನಂ.ಚಂದ್ರಯ್ಯ : ಬೌದ್ಧಧರ್ಮ ವಿಶ್ವಧರ್ಮ: ಸುಧಾ 26 ಮೇ 2005 ಸಂ.41, ಸಂ.21, ಪುಟ 15.

36) ಡಾ.ಟಿ.ಆರ್.ಚಂದ್ರಶೇಖರ : ಅಲಕ್ಷಿತರ ಪದತನದಿಂದ ಅಭಿವೃದ್ಧಿಯ ಆರಂಭ: ಸಂವಾದ ಜನೇವರಿ 2004 ಸಂ.2, ಸಂ.3, ಪುಟ.18.

37) ಬಿ.ವಿ.ವೀರಭದ್ರಪ್ಪ : ಅಂಬೇಡ್ಕರ್ ಚಿಂತನೆ ನೆಲೆಯಲ್ಲಿ:ಧರ್ಮ, ಶಿಕ್ಷಣ, ಮೀಸಲಾತಿ ಇತ್ಯಾದಿ. ಸಂವಾದ ನವೆಂಬರ್2003 ಸಂ.2.ಸಂ.1.ಪುಟ22

38) ಮಲ್ಲಿಗೆಹಳ್ಳಿ ನರೇಂದ್ರಕುಮಾರ : ಬುದ್ಧ ಕೆಲವು ನೋಟಗಳು, ಹೊಸತು ಸೆಪ್ಟೆಂಬರ್ 2005 ಪುಟ 32

39) ಡಾ.ಆನಂದ ತೇಲ್‌ತುಂಬ್ಡೆ : ನೈಜ ಅಂಬೇಡ್ಕರ್‌ರ ಅನ್ವೇಷಣೆಯಲ್ಲಿ.: ಸಂವಾದ ಏಪ್ರಿಲ್ 2006 ಸಂ.4, ಸಂ.6, ಪುಟ 12.

40) ಮಹೇಶ ತಿಪ್ಪಶೆಟ್ಟಿ : ಮಹಿಳಾ ಸಬಲೀಕರಣ: ಅಂಬೇಡ್ಕರ್ - ಸಂವಾದ ಏಪ್ರಿಲ್ 2006 ಸಂ.4, ಸಂ.6 ಪುಟ 17

41) ಡಾ.ಟಿ.ಆರ್.ಚಂದ್ರಶೇಖರ : ಅಸ್ಪೃಶ್ಯತೆಯ ಸೂಕ್ಷ್ಮ ನೆಲೆಗಳು. ಸಂವಾದ ಮೇ 2006 ಸಂ.4 ಸಂ. 7, ಪುಟ 16

42) ಡಾ.ಎಂ.ಎಸ್.ಮಂಜುಳ : ಮಹಿಳೆಯರ ವಿಮೋಚನೆಗೆ ಹೋರಾಡಿದ ಡಾ.ಬಿ.ಆರ್.ಅಂಬೇಡ್ಕರ್ :ಹೊಸತು 2004, ಪುಟ 60

43) ಮೊಗಳ್ಳಿ ಗಣೇಶ : ದಲಿತತ್ವ ಮತ್ತು ಬುದ್ಧತ್ವದ ಸಾಂಸ್ಕೃತಿಕ ರಾಜಕಾರಣ ಸಂವಾದ ನವೆಂಬರ್ 2005 ಸಂ.8,ಸಂ.1, ಪುಟ 18.

44) ಶ್ರೀ.ಶ.ಉಡುಪ : ಮಾರ್ಕ್ಸ್ ಮತ್ತು ಬುದ್ಧ : ಸಂವಾದ ಏಪ್ರಿಲ್ 2004 ಸಂ.2 ಸಂ.6 ಪುಟ 40.

REFERANCE BOOKS

1) Dr. P.B. Desai : Basaveshwara and his times
K.R.I. Karnataka University
Dharwad – 1968

2) B. Virupakshappa : Basava and his teachings
Basava Samiti, Bangalore – 1994

3) Ahir, D.C. : Dr. Ambedkar and the Indian Constitution ,
Buddha Vihara, Lucknow, 1973

4) Ahir D.C. : Dr. Ambedkar on Buddhism,
Siddhartha Publications,Bombay – 1982

5) Ahir D.C. : The Buddha and the Future of his Religion
In Mahabedi, Calcutta – 1950

6) Ambedkar B.R. : The Buddha and his Dhamma Bombay
Siddhartha Publications – 1957

7) Baisantry D.K. : Ambedkar,The Total Revolutionary,New Delhi
Segment Book Distributions – 1991

8) Rhys Davids T.W. and C.A. : Dialogues of Buddha
(Part – II Digha Nikaya)
London Pali Text Society

9) Nandimath S.C. : The Handbook of Veerasaivism
L.E. Association, Dharwad 1941

10) Sakhare M.R. : History and Philosophy of Lingayat Religion,
Karnataka University Dharwad 1980

11) Dhananjay Keer : Dr. Ambedkar Life and Mission
Popular Prakasan Bombay 1981

12) Jatava, D.R. : The Social Philosophy of B.R. Ambedkar,
Phoenix Publishing House, Agra 1965

13) Jatava D.R. : The Buddha & Karlmarxa
Phoenix Publishing House Agra, 1968

14) Vasant Moon : Buddha Dharma Pradeep
Sugata Prakashana Nagapur 1960

15) Singa, Sanghasen (ed) : Ambedkar and Buddhist Conversion and its Impact, Delhi Eastern Book Linkers 1990

16) W.N. Kuber : B.R. Ambedkar
Publication Division, Govt. of India, 1987

17) Bapat P.B. : 2500 Years of Buddhism Publication
Division, Govt. of India, New Delhi 1997

18) Hiremath R.C. : Buddhism in Karnataka
D.K. Print World Ltd. New Delhi 1994

19) Kancha Ilaiah : God As a Political Philosoper ;
Buddha's Challenge to Brahmanism, Samya
Publisher, Kolkota 2000

20) Ray Regivald A : Buddhist Saints in India
(Study in Buddhist Values and oreintation)
Oxford, New Delhi 1994

21) Rowena Robinson (ed) : Sociology of Religion in India
Themes in Indian Sociology
Vol. 3, Sage, New Delhi 2004

22) Asghar Ali Engineer (ed) : Religion and Liberation
Ajanta Publications, Delhi 1989

23) Narain A.K. Ahir, D.C. : Dr. Ambedkar Buddhism and Social Change
B.R. Publishing, Corporation Delhi 1994

24) Kenadi L. : Revival of Buddhism in modern India :
The role of Ambedkar and the Dalailama XIV
Ashish Publishers, Delhi 1995

25) Manoranjan Moharty (ed) : Class, Caste, Gender, Readings in India
Government and Politics Sage Publications
New Delhi 2004

26) Rajashekhar V.T. : Dalit Movement in Karnataka,
The Christian Literature Society Madras 1978

27) Rhys Davids : Buddist India, Susil Gupta
(India)Ltd. Culcutta 1903

28) Manohar Yadava : Socio-Economic Survey of Scheduled Castes
and Scheduled Tribes in Karnataka :A critical
Analysis. Institute for Social and Economic
Change, Bangalore 2003

29) C.D. Naik : Ambedkar's Perspectives on Buddhism and
other Religions Kalpaz Publications,Delhi 2004

30) Dr.B.R.Ambedkar. : The Buddha and his Dhamma in Dr.
Babasaheb Ambedkar writings and speeches,
Vol. II Department of Education, Bombay

31) B.R. Ambedkar : Converion as Emancipation Critical Quest,
New Delhi 2004

32) Walter Fernandes : The Emerging Dalit Identity, The Re-Assertion of the Subalterns, Indian Social Institute, New Delhi 1996

33) Dr.B.R.Ambedkar. : Dr. Babasaheb Ambedkar Writings and speeches Vol –17 Part Three Dr. Babasaheb Ambedkar Source material Publication Committee, Higher Education Department, Mumbai 2003

34) Omvedt Gail : Dalits and Democratic Revolutions (Dr.B.R. Ambedkar and the Dalit Movement in Colonial India) Sage Publications New Delhi 1994

35) Ahir D.C. : Buddhism and Ambedkar, Ajay Prahagan, New Delhi 1968

36) Ambedkar B.R. : Waiting for A Visa, Siddharth Publications Bombay 1990

37) WilkinsonT.S. & Thomas M (ed) : Ambedkar and the New – Buddhist Movement : The Christian Institute for the Study of Religion and Society, Bangalore, The Christian literature society, Madras 1972

38) Rodrigues Velarian : Essential Writings of B.R. Ambedkar Oxford University Press, New Delhi 2002

39) Kasinath K. Kavalekar : Non Brahmin Movement in Southern India (1873-1949) Shivaji University, Kolhapur 1979

40) Sangha Rakshita : Ambedkar and Buddhism, Windhorse Publications, Glasagow, 1986

41) Basavalingappa B. : The Emancipation of Scheduled Castes, The Ambedkar Path, Karnataka Buddha Dhamma Samiti, Bangalore 1991

42) Hari Narake and Others (ec : Dr. Babasaheb Ambedkar writings and speeces Vol. 17, Part Three Govt. of Maharashtra, Mumbai 2003

43) V.D. Mahajan : Ancient India S.Chand & Company Ltd.New Delhi - 1960

ARTICLES

1) Rodrigues Valerian 2000 : " Dalits and Cultural Identity Ambedkar's prenaricatins on the question of culture " Social Action No. 50(1)

2) Pinto, Ambrose, 2002 : " Dalits, Conversions and Dignity " Radical Humanist 65(10), February, P. 28-31

3) Burra Nanda 1996 : " Buddhism, Conversion and Identity " in M.N. Srinivas (ed) Caste, its twentieth Century Avatar Viking (Penguin), New Delhi

4) Kosambi D.D. 1986 : "The Decline of Buddhism in India " in R.P. Nene : Excercises in the Dialectical Method Pune

5) Inada, Kenneth K. 1982 : " The Buddhist Perspective on Human Rights " in Human Rights in Religious Traditions (ed) Arlene Swidler Piligrim Press, New York.

6) Manohar Yadava 1998 : " Carrer of Dalit Movement in Karnataka in Journal of Social Economic Development Vol. No. 1, Jan – June, ISEC, Bangalore 1998

7) Sanjay Chahande, 2005 : Theorizing Dr. Ambedkar's conversion in Proceedings Volume of First Internatinal Buddiist Conference, Mumbai

8) Vardhan B.K. S. 1992 : " Contributions of Dr. B.R. Ambedkar to Ind Education " in Proceedings Volume of Sout Indian History Congress, XIIth Session, Dharwad

9) Bhikku Shantibadhra 1966 : " Bodhisatva Ambedkar " in Wilkinson T.S. & Thomas M.M. (ed) : Ambedkar and Neo Buddhist Movement.Th Christian Literature Society, Madras 1972

10) Neera Burra, 1996 : "Buddhism Conversion and Identity " : A Ca study of village Mohars in M.N. Srinivas (ed Caste, its Twentieth Century Avatar Viking (Panguin) New Delhi.

1. JOURNALS

1. Journal of Buddhist Ethics (www. jbe.ac.uk)
2. Journal of Asian and African studies
3. The Journal of the Mythic Society Bangalore
4. Social Action
5. Journal of Asian studies
6. Journal of Social and Economic Development

2. ಮಾಸ ಪತ್ರಿಕೆಗಳು :

1	ಸಂಕ್ರಮಣ	11	ಅಂಬೇಡ್ಕರ್ ವಾಹಿನಿ
2	ಸಂವಾದ	12	ಸಂಘರ್ಷ
3	ಬುದ್ಧ ಧಮ್ಮ	13	ಸಂಬುದ್ಧ
4	ರುಜುವಾತು	14	ಸಮಾಜ ಪರಿವರ್ತನ
5	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ	15	ಬುದ್ಧಯಾನ (ಮರಾಠಿ)
6	ಬಸವಮಾರ್ಗ	16	Dharma World
7	ಬಸವ ಪಥ	17	Dhamma
8	ಸಮಾಜವಾದೀ ಮುಕ್ತ ಮಾತುಕತೆ	18	Dalit Voice
9	ಜನಪದ	19	ಹೊಸತು
10	ಅಂಬೇಡ್ಕರ್ ವಾದ	20	ಯುವ ಕರ್ನಾಟಕ

3. ದಿನ ಪತ್ರಿಕೆಗಳು

1. ಪ್ರಜಾವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ಸಂಯುಕ್ತ ಕರ್ನಾಟಕ
5. The Hindu

4. ವಾರ ಪತ್ರಿಕೆಗಳು

1. ಸುಧಾ
2. ತರಂಗ
3. ಅಗ್ನಿ
4. ಲಂಕೇಶ್ ಪತ್ರಿಕೆ (ಹಳೆಯ ಆವೃತ್ತಿಗಳು)
5. The Outlook